ಶಿವಗಂಗೆ



ಹೆಚ್. ಎಸ್. ಚಂಪಾವತಿ

ಶಿವಗಂಗಾ

ಹೆಚ್. ಎಸ್. ಚಂಪಾವತಿ

ನಿಖಿ ಪ್ರಕಾಶನ
ಬೆಂಗಳೂರು - 560 067

SHIVAGANGA - "A Novel in Kannada written by Smt. H. S. Champavathi & published by Nikhi Prakashana, No. 1291, Opp. A.N.R. Farm, Kadugodi Post, Bangalore - 560 067.

Pages : 280+XIV

First Impression : 1997

Price : Rs. 100/-

ಮುಖಪುಟ : ಸರಸ್ವತಿ ಮ.

ಮುದ್ರಣ :

ಇಳಾ ಪ್ರಿಂಟರ್ಸ್

153, 4ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು - 560 018

ದೂರವಾಣಿ : 623159

ಮುನ್ನುಡಿ

ಒಬ್ಬ ಓದುಗಳ ಕೆಲವು ಅನಿಸಿಕೆಗಳು:-

ಗೆಳತಿ ಚಂಪಾವತಿ 'ಶಿವಗಂಗಾ' ಕುರಿತು ನನಗೆ ಅನ್ನಿಸಿದ್ದನ್ನು ಬರೆದೇ ಕೊಡುವಂತೆ ಪ್ರೀತಿಯಿಂದ ಆಗ್ರಹಿಸುತ್ತಿದ್ದಾರೆ. ಕೃತಿಯೊಂದು ಓದುಗರಲ್ಲಿ ಎಂಥ ತರಂಗಗಳನ್ನು ಎಬ್ಬಿಸೀತು ಎಂಬುದು ತುಂಬ ಖಾಸಗಿಯ ಅನುಭವ. ಆದರೆ ಮೊದಲೇ ತೆರದ ಮನಸ್ಸುಗಳಿಗೆ, ಮಿಡಿಯಬಲ್ಲ ಎದೆಗಳಿಗೆ ಏನನ್ನೂ ಹೇಳಿಕೊಳ್ಳಬಹುದು. ನನ್ನ ಈ ಅನಿಸಿಕೆಗಳು 'ಇದಕ್ಕೆ ಇಷ್ಟೇ ಅರ್ಥ' ಅಥವಾ 'ಹೀಗೇ ನೋಡಿ' ಎಂಬ ಅಧಿಕಾರದ ನಿರ್ವಚನೆ ಅಲ್ಲ. ಇಂಥದೇ ಅಥವಾ ಇದಕ್ಕಿಂತ ಭಿನ್ನವಾದ ಹಲವು ಅರ್ಥಗಳು ಈ ಕೃತಿಯಲ್ಲಿ ಕಾಣಲು ಸಾಧ್ಯವಾಗಲಿ ಎಂಬುದೇ ಹಾರೈಕೆ.

ಇದು ಕೆಲವು ವರ್ಷಗಳ ಹಿಂದಿನ ಸಂಗತಿ. ಮಡಿಕೇರಿಯಲ್ಲಿ ಲೇಖಕಿಯರಿಗಾಗಿ, ಲೇಖಕಿಯರೇ ನಡೆಸಿದ ಒಂದು ಕಮ್ಮಟ. ಮುಖ್ಯವಾಗಿ ಸ್ತ್ರೀವಾದದ ಸಿದ್ಧಾಂತ ಮತ್ತು ಮಹಿಳಾ ಬರಹವನ್ನು ಕುರಿತ ಚರ್ಚೆ ಸಾಗಿತ್ತು. ಚರ್ಚೆಯ ಹೊತ್ತಿನಲ್ಲಿ ಚಂಪಾವತಿ ಒಂದು ಪ್ರಶ್ನೆ ಎತ್ತಿದ್ದರು. "ಸ್ತ್ರೀವಾದವನ್ನ ಬರೀ ಪುಸ್ತಕ ಸಿದ್ಧಾಂತ ಅಂದುಕೊಳ್ಳದೆ, ಬದುಕಿನ ವಿಧಾನವನ್ನು ಬದಲಾಯಿಸಲು ಒತ್ತಾಯಿಸೋ ಹೋರಾಟದ ಕ್ರಮ ಅಂತ ತಿಳಕೊಂಡಿರೋರು, ಮಹಿಳಾ ಹೋರಾಟ ರಾಜಕೀಯದಲ್ಲಿ ಗಾಢವಾಗಿ ತೊಡಗಿಕೊಂಡಿರೋರು, ಲೇಖಕಿಯರೂ ಆಗಿದ್ದಾಗ, ಆ ವಾಸ್ತವ ಹೋರಾಟದ ಅನುಭವಾನ ದಿಟ್ಟವಾಗಿ, ಪ್ರಾಮಾಣಿಕವಾಗಿ ಕೃತಿಗಳಲ್ಲಿ ಅಭಿವ್ಯಕ್ತಿಸಿದ ಉದಾಹರಣೆಗಳು ಕನ್ನಡದಲ್ಲಿ ಏಕೆ ಇಲ್ಲ? ಅಂಥ ಕೃತಿಗಳು ಬಂದಾಗ ನಿಮ್ಮ ಚರ್ಚೆಗಳು ಅರ್ಥಪೂರ್ಣವಾದೀತಲ್ಲವೆ?" ಎನ್ನುವುದು ಸ್ವಲ್ಪ ಹೆಚ್ಚು ಕಡಿಮೆ ಅಂದು ಅವರು ಕೇಳಿದ ಪ್ರಶ್ನೆಯ ಸಾರಾಂಶ. ಈ ಪ್ರಶ್ನೆಗೆ ಸರಳ ಉತ್ತರ ನನಗೆ ಸಾಧ್ಯವೆನಿಸಿರಲಿಲ್ಲ.

ಕರ್ನಾಟಕದಲ್ಲಿ ಸ್ತ್ರೀ ಸಂಘಟನೆಯ ಹೋರಾಟ ಸಿದ್ಧಾಂತವನ್ನು ಕಾರ್ಯರೂಪಕ್ಕೆ ಇಳಿಸುತ್ತಿರುವ ಸಾಮಾಜಿಕ ಕಾರ್ಯಕರ್ತೆಯರು ಹಳ್ಳಿ, ಪಟ್ಟಣ, ನಗರಗಳಲ್ಲಿ ಬಿಡಿ ಬಿಡಿ ಗುಂಪುಗಳಲ್ಲಿ ಕಂಡುಬರುತ್ತಾರೆ. ಇವರ ಸಂಖ್ಯೆ ಐದೋ, ಹತ್ತೋ, ನೂರೋ ಇದ್ದೀತು. ನಗರಗಳಲ್ಲಿ ಇಂಥ ಸಂಘಟನೆಗಳು ಕೇಂದ್ರಿತವಾಗಿರುವಾಗ ವರದಕ್ಷಿಣೆ, ವಧೂದಹನಗಳಂಥ ಅಪ್ಪಟ ಭಾರತೀಯ

ಮಣ್ಣಿನ ಸ್ತ್ರೀ ಸಮಸ್ಯೆಗಳನ್ನೂ, ಅತ್ಯಾಚಾರ, ವಿಚ್ಛೇದನೆ, ಬಹುಪತ್ನಿತ್ವದಂಥ ಸಮಸ್ಯೆಗಳನ್ನಷ್ಟೇ ಅಲ್ಲದೆ ಈ ಮಣ್ಣಿನಲ್ಲಿ ಹಾಸಿ ಹೊದ್ದುಕೊಳ್ಳುವಷ್ಟು ಬದುಕಿನ ಪ್ರತಿ ನೇಯ್ಗೆಯಲ್ಲಿ ಸೇರಿಕೊಂಡಿರುವ ಲಿಂಗತಾರತಮ್ಯದ ಅಸಂಖ್ಯಾತ ಮಾದರಿಗಳಿಂದ ಹುಟ್ಟಿರುವ ಸಂಕಟಗಳ ಪರಿಹಾರ ವಿಧಾನಗಳನ್ನು ಅರಸುತ್ತಿರಬಹುದು, ಅಥವಾ ಹಳ್ಳಿಗಳಲ್ಲಿ ಸರ್ಕಾರೇತರ ಸ್ವಾಯತ್ತರೀತಿ ಸಂಘಟಿತವಾಗಿರುವ ಮಹಿಳೆಯರು ಕೂಲಿಕಾರ, ದುಡಿವ ಹೆಣ್ಣು ಮಕ್ಕಳನ್ನು ನೂರಾರು ಸಂಖ್ಯೆಯಲ್ಲಿ ಸಂಘಟಿಸುವ ವಾಸ್ತವವಿದೆ. ಇವರಲ್ಲಿ ಬಹಳಷ್ಟು ಕಾರ್ಯಕರ್ತೆಯರಿಗೆ ಸಾಹಿತ್ಯ ರಚನೆಗೆ ಪುರಸೊತ್ತು, ಅವಕಾಶಗಳೇನೂ ಇಲ್ಲದಿರಬಹುದು. ಒಂದು ವೇಳೆ ಇವೆಲ್ಲ ಅವಕಾಶಗಳಿದ್ದಾಗಲೂ, ಚಂಪಾವತಿ ಕೇಳಿದಂತೆ ಇಡಿಯಾಗಿ ತಮ್ಮನ್ನು ತೊಡಗಿಸಿಕೊಂಡು ಗಳಿಸಿದ ಅನುಭವವನ್ನು ತಪಸ್ಸಿನಂತೆ, ಧ್ಯಾನದಂತೆ ಒಲವಿನಿಂದ ಕೃತಿಯಲ್ಲಿ ಅಭಿವ್ಯಕ್ತಿಸಲು ನಮ್ಮ ಲೇಖಕಿಯರಿಗೆ ಸಾಧ್ಯವಾಗಬಹುದೆ? ತಮ್ಮೊಳಗಿನ ನಿಗೂಢ ನಿಜಗಳನ್ನು ತಮಗೆ ತೀರಾ ಸತ್ಯವೆನಿಸಿದ್ದನ್ನು, ಆಪ್ತವಾದದ್ದನ್ನೂ ತುಂಬ ಪ್ರಾಮಾಣಿಕತೆಯಿಂದ ಒಮ್ಮಿಂದೊಮ್ಮೆ ತೆರೆದಿಡಲಾಗದಂತೆ ಅವರ ಸಾಮಾಜಿಕ ಇಮೇಜುಗಳು, ಪರಿಸರವೂ ಅಡ್ಡಿಯಾಗಿಲ್ಲವೆ? ಒಂದು ವೇಳೆ ಈ ಬರಹಗಾರ್ತಿಯರೆಲ್ಲ ತಮ್ಮ ನಿಜಾತಿನಿಜಗಳನ್ನು ನಿರ್ಬಿಢೆಯಿಂದ ತೆರೆದಿಟ್ಟಲ್ಲಿ, ಮರಾಠಿ ಜನ, ಮರಾಠಿ ಲೇಖಕಿಯರ ಅಂಥ ಬರಹಗಳನ್ನು ಗಂಭೀರವಾಗಿ ಸ್ವೀಕರಿಸಿದಂತೆ ಕನ್ನಡ ಜನ ತಯಾರಾಗಿದ್ದಾರೆಯೆ? ಎಂಬೆಲ್ಲ ಅನುಮಾನಗಳಿವೆ. ಆದ್ದರಿಂದ ಚಂಪಾಗೆ "ಹೌದು ನೋಡಿ, ಇನ್ನು ಮುಂದೆ ನಿಮ್ಮಂಥೋರು ಅಂಥ ಪ್ರಯತ್ನ ಮಾಡಬೇಕು" ಎಂದು ಏನೋ ಹೇಳಿ ನುಣುಚಿಕೊಂಡಿದ್ದೆ ಎಂದು ನೆನಪು.

ಆದರೆ ಮುಂದೊಂದು ದಿನ ಈಕೆ ಮುನ್ನೂರು ಪುಟಗಳ ಮೂರು ಸಂಪುಟಗಳಲ್ಲಿ ಬೈಂಡು ಮಾಡಿಸಿದ್ದ, ಸುಂದರ ಕೈ ಬರಹದಲ್ಲಿದ್ದ 'ಶಿವಗಂಗಾ' ಕಾದಂಬರಿಯನ್ನು ತಂದುಬಿಟ್ಟು ಓದಿ, ಅನಿಸಿಕೆ ಹೇಳಲೇಬೇಕೆಂದು ಆಗ್ರಹ ಮಾಡುತ್ತಾರೆಂದು ನಾನು ಎಣಿಸಿರಲಿಲ್ಲ. ಈ ಕಾದಂಬರಿಯನ್ನು ನನ್ನ ಕೈಯಲ್ಲಿ ಇರಿಸುವಾಗ ತಮ್ಮ ಹೃದಯವನ್ನೇ ತೆರೆದಿಡುವ ಹಾಗೆ ಚಂಪಾ ಭಾವವಶರಾಗಿದ್ದರು. ಸೋದರಿ ಭಾವದಿಂದ ಅವರು ನನ್ನಲ್ಲಿ ವಿಶ್ವಾಸವಿಟ್ಟು, ಈ ಕೃತಿಯನ್ನು ಓದಿಸಿ ಖುಷಿ ತಂದುಕೊಟ್ಟಿದ್ದಕ್ಕೆ ಖಂಡಿತಾ ಬೆಲೆ ಕಟ್ಟಲಾರೆ. ಆದರೆ ನನಗೆ ಸಂತೋಷ ಕೊಟ್ಟ, ಕೆಲವಾದರೂ ಅಂಶಗಳನ್ನು ಹಂಚಲು ಯತ್ನಿಸುತ್ತೇನೆ.

ವೈಯಕ್ತಿಕವಾದ ಮಾನವ ಭಾವನೆ, ಅನುಭವಗಳನ್ನು, ಮನುಷ್ಯ ಸಂಬಂಧಗಳನ್ನು ಆಪ್ತವಾಗಿ ತೆರೆದಿಡುವಾಗಲೂ ಅವೆಲ್ಲದರ ತಳದಲ್ಲಿ ಬೇರೂರಿರುವ ವ್ಯವಸ್ಥೆಯ ಶಕ್ತಿಗಳನ್ನು 'ಶಿವಗಂಗಾ' ಗುರುತಿಸಲು ಯತ್ನಿಸುತ್ತದೆ. ಹಲವಾರು ಹೆಣ್ಣುಗಳ "ಬದುಕಿನ ಹೋರಾಟ"ಕ್ಕೂ, ಅವರ "ಹೋರಾಟದ ಬದುಕಿ"ಗೂ ಗಾಢವಾದ ಬೆಸುಗೆಯೊಂದು ಇಲ್ಲಿ ಸೃಷ್ಟಿಯಾಗುತ್ತದೆ. ಕನ್ನಡದಲ್ಲಿ ಸ್ತ್ರೀ ಸಮಸ್ಯೆಗಳನ್ನು, ಸ್ತ್ರೀ-ಸ್ವಾತಂತ್ರ್ಯ ಇಲ್ಲವೆ ಸಮಾನತೆಯ ಪ್ರಶ್ನೆಗಳನ್ನು ಜಿಜ್ಞಾಸೆಗೆ ಒಡ್ಡಿರುವಂಥ ಲೇಖಕಿಯರೂ, ಲೇಖಕರೂ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಪುರುಷ ಪ್ರಪಂಚದ ಯಾವುದೋ ಮೂಲೆಯಲ್ಲಿ ಮೌನವಾಗುಳಿದ, ಕತ್ತಲು ತುಂಬಿದ, ಮಸುಕಾಗಿ

ಉಳಿಸಲ್ಪಟ್ಟ ಸ್ತ್ರೀ-ಪ್ರಪಂಚದ ಮೇಲೆ ಬೆಳಕು ಚೆಲ್ಲಿ ಅದನ್ನು ಮೌಲಿಕಗೊಳಿಸುತ್ತಿರುವ ಲೇಖಕಿಯರೂ ವಿರಳವಾಗಿಯಾದರೂ ಇದ್ದಾರೆ. ಆದರೆ ಸ್ತ್ರೀಯರು ಸ್ವಾತಂತ್ರ್ಯ, ಸಮಾನತೆಗಾಗಿ ನಡೆಸುತ್ತಿರುವ ಹೋರಾಟಗಳನ್ನು ಎಲ್ಲೋ ದೂರ ನಿಂತು ನೋಡುವವರಿಗೆ, ಅಥವಾ ಪೂರ್ವ ನಿಶ್ಚಿತ ಸಿನಿಕತೆಯಿಂದಲೇ ಕಣ್ಣು ಹಾಯಿಸುವವರಿಗೆ ಕಾಣಬಹುದಾದದ್ದು ತಿರುಚಲ್ಪಟ್ಟ, ಕುರೂಪಕ್ಕೊಳಗಾದ ವಿಡಂಬನೆಗೆ ವಸ್ತುಮಾತ್ರವಾಗಬಹುದಾದ ಅಂಶಗಳಷ್ಟೇ. ಆದರೆ ತನ್ಮಯತೆಯಿಂದ ಒಳಹೊಕ್ಕು ಆ ಪ್ರಕ್ರಿಯೆಯ ಒಂದು ಭಾಗವಾಗಿ ಸಮಕಾಲೀನ ಮಹಿಳಾ ಚಳುವಳಿಯನ್ನು ಒಳಗಿನಿಂದ ಕಾಣಿಸುತ್ತಲೇ ಅದರ ಸಾಫಲ್ಯ, ವಿಫಲತೆ ಅಥವಾ ನಿಜರೂಪವನ್ನು ಶೋಧಿಸಲು ಯತ್ನಿಸುವ ಕಥಾತ್ಮಕ ಯತ್ನ ಇದೇ ಮೊದಲಿದೆನ್ನಬೇಕು. “ಶಿವಗಂಗಾ” ಹೀಗೆ ಒಂದು ನಿಟ್ಟಿನಲ್ಲಿ ಸಮಕಾಲೀನ ಮಹಿಳಾ ಆಂದೋಲನದ ಚಾರಿತ್ರಿಕ ಅರ್ಥಶೋಧನೆಯ ಯತ್ನವಾಗಿದೆ.

ಆದರೆ ಈ ಚರಿತ್ರೆಯೊಂದರ ವರದಿಯಷ್ಟೇ ಅದರ ಉದ್ದೇಶವಲ್ಲ. ಸಮಕಾಲೀನ ಬದುಕಿನ ನಾನಾ ಸ್ತರಗಳ, ನಾನಾ ಸ್ವಭಾವಗಳ ಹೆಣ್ಣುಗಳ, ಗಂಡುಗಳ, ಸ್ವಭಾವಗಳ ವಿವಿಧ ಮುಖಗಳನ್ನು ತುಂಬ ವಾಸ್ತವವೆನ್ನಬಹುದಾದ ವಿವರಗಳಲ್ಲಿ ಹಿಡಿದುಕೊಡುವುದಕ್ಕೂ ಅದು ಯತ್ನಿಸುವುದರಿಂದ ಕಾದಂಬರಿಗೆ ಒಂದು ದೃಢವಾದ ಆಶಯವು ಸಿದ್ಧವಾಗುತ್ತದೆ. ಚಂಪಾವತಿ ಬದುಕನ್ನು ನೋಡುವುದು ಪ್ರೀತಿಯಿಂದ, ಆಪ್ತವಾಗಿ. ಅದರಲ್ಲಿ ಸಿನಿಕತನವಿಲ್ಲ, ಹತಾಶೆಯಿಲ್ಲ. ಪ್ರಮುಖವಾದ ರಾಜಕೀಯ ಸಿದ್ಧಾಂತಗಳು, ವಿವಿಧ ರಾಜಕೀಯ ಚಳವಳಿಗಳ ಬೌದ್ಧಿಕ ವಿಚಾರಗಳು, ತರ್ಕಗಳು ಇಲ್ಲಿದ್ದರೂ ಅವು ಆಡಂಬರಕ್ಕಾಗಿ ಇಲ್ಲವೆ ಸೋಗಿಗಾಗಿ ತಂದು ಸೇರಿಸಿದಂತಿರದೆ, ಅವು ಕೃತಿಯ ಒಟ್ಟು ಆಶಯದ ಅವಿಭಾಜ್ಯ ಅಂಗವಾಗಿರಬೇಕು ಎಂಬ ಎಚ್ಚರ ಕಾಣಿಸುತ್ತದೆ. ಬದಲಾವಣೆಯ ಸಾಧ್ಯತೆಯ ಬಗ್ಗೆ ವಿಶ್ವಾಸವಿದೆ, ಘೋಷಣೆ ಯಾವುದೂ ಇಲ್ಲದೆ, ಪರಿವರ್ತನೆಯ ಅವಶ್ಯಕತೆಯನ್ನು ಧ್ವನಿಸುವ ಪ್ರಯತ್ನವಿದೆ.

ಕಾದಂಬರಿ ಆರಂಭವಾಗುವುದು ಕೇಂದ್ರ ವ್ಯಕ್ತಿ ಗಂಗಾಳ ಬದುಕಿನ ತುಂಬ ಬಿಕ್ಕಟ್ಟಿನ ಒಂದು ಸಂದರ್ಭದಿಂದ. ಬಯಸಿದ್ದ ಓದು, ಆಶಿಸಿದ್ದಂಥ ಕೆಲಸ, ವಿಪುಲ ಪರಿಶ್ರಮದಿಂದ ಗಳಿಸಿಕೊಂಡ ಅನುಭವ ಪ್ರಬುದ್ಧತೆ, ಪ್ರೀತಿಸಿದ, ಪ್ರೀತಿಸಬಲ್ಲ ಸಂಗಾತಿ, ಅಕ್ಕರೆಯ ಮಗಳು, ಬೆಚ್ಚಗೊಂದು ಸೂರು, ಹೀಗೆ ಎಲ್ಲ ಗಳಿಸಿಕೊಂಡು ಇನ್ನೇನು ಸ್ವರ್ಗಕ್ಕೆ ಕಿಚ್ಚು ಹಚ್ಚಲಡ್ಡಿಯಿಲ್ಲ ಎನ್ನುವಂಥ ಸಂತೃಪ್ತ ಸ್ಥಿತಿಯಲ್ಲಿರುವಾಗಲೆ ತರುಣನೊಬ್ಬನ ಸ್ನೇಹದ ಸೆಳೆತ ಗಂಗಾಳ ಬದುಕಿನ ಬುಡವನ್ನೆ ಅಲುಗಾಡಿಸತೊಡಗುತ್ತದೆ. ಗಂಗಾ-ರಮೇಶರ ಸಂಬಂಧದಲ್ಲಿ, ದಾಂಪತ್ಯ ವಿಶ್ವಾಸದಲ್ಲಿ ಮೂಡಿದ ಬಿಕ್ಕಟ್ಟಿನ ಸ್ಥಿತಿಯಲ್ಲಿ ಅದುವರೆಗೂ ತಾನು ನಂಬಿದ್ದ ಪ್ರೀತಿ, ವಿಶ್ವಾಸ, ಸ್ವಾತಂತ್ರ್ಯದ ಮೌಲ್ಯಗಳಿಗೆ, ತಾನು ಸಾಧಿಸಿದ್ದೇನೆಂದು ನೆಮ್ಮಿಕೊಂಡಿದ್ದ ಸಮಾನತೆ ಕಲ್ಪನೆಗೆ ತಳ ಕುಸಿದ ಅನುಭವ ಗಂಗಾಗೆ ಆಗತೊಡಗುತ್ತದೆ. ನಿಲ್ಲಲು ತಳವಿಲ್ಲದ, ಈ ಮನಸ್ಥಿತಿಯಲ್ಲಿ ತಾನು ಬದುಕಲ್ಲಿ ಆಯ್ದಾಯ್ದು ತುಂಬಿಕೊಂಡಿದ್ದ, ಎಲ್ಲೋ ಕಲಸು ಮೇಲೋಗರದಂತಿದ್ದ, ತನ್ನವೇ ಅನುಭವಗಳನ್ನೆಲ್ಲ ಒಗ್ಗೂಡಿಸಿ, ಅರ್ಥ ಹುಡುಕತೊಡಗುತ್ತಾಳೆ ಆಕೆ. ಅದುವರೆಗೆ ತಾನು ಹಾದು

ಬಂದ ಬದುಕಿನ ಮಜಲುಗಳನ್ನು, ಅಲ್ಲಿ ಹರಡಿದ್ದ ಭಾವನೆಗಳನ್ನು, ಕಟ್ಟಿಕೊಂಡಿದ್ದ ಸಂಬಂಧಗಳನ್ನು ಮತ್ತೆ ಜೀವಂತವಾಗಿಸಿ, ನೆನಪಿಗೆ ತಂದುಕೊಳ್ಳುತ್ತಾ, ಅವುಗಳನ್ನು ತನ್ನ ವರ್ತಮಾನದ ನೆಲೆಯಿಂದ ಬೆಲೆ ಕಟ್ಟಲು ಯತ್ನಿಸುತ್ತಾಳೆ. ಇನ್ನೂ ಮುಂದಕ್ಕೆ ಬದುಕಲು ದಾರಿ ಉಳಿದೀತೇ ಎಂಬುದನ್ನು ಕಂಡುಕೊಳ್ಳಲು ಈ ರೀತಿಯ ಹಿಮ್ಮುಖವಾದ ಚಲನೆ, ಹಾಗೂ ತನ್ನ ಇದುವರೆಗಿನ ಬದುಕಿಗೆ ಅರ್ಥವಿತ್ತೆ ಎಂದು ಕಂಡುಕೊಳ್ಳಲೇಬೇಕಾದ್ದು ಅವಳಿಗೆ ಅನಿವಾರ್ಯ. ಹೀಗೆ ಕ್ರಮವಾಗಿ ಅವಳ ಗತಿಸಿದ ಜೀವನ ಬಿಚ್ಚಿಕೊಳ್ಳತೊಡಗುತ್ತದೆ. ಈ ಪ್ರಕ್ರಿಯೆಗೆ ಚಂಪಾವತಿಯವರು ಕೇವಲ ಫ್ಲ್ಯಾಷ್ ಬ್ಯಾಕ್ ಇಲ್ಲವೇ ಪ್ರಜ್ಞಾ ಪ್ರವಾಹ ತಂತ್ರವನ್ನು ಬಳಸದೆ, 'ಕಥಾನಾಯಕತನ'ದ ಮೇಲ್ತನದ ನೆಲೆಯಿಂದ ಸುತ್ತಲಿನ ಬದುಕನ್ನು ಪರಕೀಯವಾಗಿಸಿಯೂ ನೋಡದೆ, ತಮ್ಮದೇ ವಿಶಿಷ್ಟ ವಿಧಾನವೊಂದಕ್ಕೆ ಯತ್ನಿಸುತ್ತಾರೆ. ತೀರ ಸಾಮಾನ್ಯ ಜನರ ಬದುಕಿನ ವಾಸ್ತವಾಂಶಗಳನ್ನೂ ತನ್ನದನ್ನೂ ಬೆಸೆದುಕೊಳ್ಳುತ್ತಲೇ ಬೆಲೆ ಕಟ್ಟುವ, ಸಮಷ್ಟಿ ಮೂಲವಾದ ಆತ್ಮ ನಿರೀಕ್ಷಣೆಗೆ ಅವರು ಕೈ ಹಾಕಿದ್ದಾರೆ.

ನಿದರ್ಶನವಾಗಿ ಹೇಳುವುದಾದರೆ, ಎಳೆಯ ಹುಡುಗಿಯ ಅರಳುಗಣ್ಣುಗಳು ಅಪ್ಪ-ಅಮ್ಮರ ಬದುಕಿನ ಬಿರಿತವನ್ನು ಕಾಣುವುದಾಗಿರಬಹುದು, ಕಿಶೋರತನದ ಅಣ್ಣನ ಲೈಂಗಿಕ ಕುತೂಹಲಕ್ಕೆ ತಾನು ವಸ್ತುವಾದದ್ದನ್ನು ಗ್ರಹಿಸುವುದಾಗಿರಬಹುದು ಇಲ್ಲವೆ ಮೊದಲ ಮುಟ್ಟು, ಮೊದಲ ಪ್ರೇಮ, ಸಂಭೋಗದ, ದಾಂಪತ್ಯದ, ಗರ್ಭಿಣಿತ್ವದ ಇಲ್ಲವೆ ಹೆರಿಗೆಯ ಅನುಭವಗಳೇ ಆಗಿರಬಹುದು - ಇವೆಲ್ಲವೂ ಗಂಗಾಳ ವ್ಯಕ್ತಿ ವಿಶಿಷ್ಟವಾದ ಸೂಕ್ಷ್ಮ ಸಂವೇದನೆಯೊಂದಿಗೆ ಇಲ್ಲಿ ದಾಖಲುಗೊಳ್ಳುತ್ತವೆ. ಇಂಥ ಹೆಣ್ತನದ ಅನುಭವಗಳನ್ನು ಇಷ್ಟು ಸೂಕ್ಷ್ಮ ರೀತಿಯಲ್ಲಿ ಪ್ರಜ್ಞೆಯ ನೆಲೆಗೆ ಅನಾವರಣಗೊಳಿಸಿಕೊಡುವ ಯತ್ನವು ಈ ಲೇಖಕಿಯಲ್ಲಿ ಕಂಡುಬರುವುದು ಮುಖ್ಯ ಎಂಬುದಕ್ಕಿಂತ ಕಥಾತ್ಮಕ ಅಭಿವ್ಯಕ್ತಿಯೊಳಕ್ಕೆ ಚಂಪಾ ಇಂಥ ಅನುಭವಗಳ ಪ್ರವೇಶ ಮಾಡಿಸಿರುವುದು ಮುಖ್ಯ ಸಂಗತಿ. ಹಾಗಿದ್ದರೂ ತೀರಾ ವ್ಯಕ್ತಿಗತ ಎನ್ನಿಸುವಂಥ ಈ ಅನುಭವಗಳನ್ನು ತನ್ನೊಳಗೆ ಗುರುತಿಸಿಕೊಳ್ಳುವಾಗ ಕೂಡ ಗಂಗಾ ಇವು ಇತರ ಹೆಣ್ಣುಗಳೆಲ್ಲರದ್ದೂ ಆದೀತೆಂಬ ಸಾಧ್ಯತೆಯನ್ನು ಮಾಯ ಮಾಡಲಾರಳು. ಇವು ದಕ್ಕಲಾರದವರಿಗಾಗಿ ಮರುಕ, ತನ್ನದೇನೂ ಅತಿಮಾನವ ಸಂದರ್ಭವಲ್ಲ ಎಂಬ ವಾಸ್ತವದ ತೀವ್ರ ಅರಿವು ಅವಳಿಂದ ದೂರವಾಗುವುದಿಲ್ಲ. ತನ್ಮಯತೆ/ ಭಾವತೀವ್ರತೆಗಳಿಂದಲೇ ಇಡೀ ಬರಹಕ್ಕೆ ಉತ್ಕಟ ವೈಯಕ್ತಿಕತೆಯ ಛಾಪು ಕೊಡಲು ಯತ್ನಿಸುವ ಲೇಖಕಿಯರದಕ್ಕಿಂತ ತೀರಾ ಭಿನ್ನವಾದದ್ದು ಚಂಪಾವತಿಯವರ ಶೈಲಿ. ಯಾವುದೇ ದೇಹಜಾತ ಅನುಭವವನ್ನು ಕೀಳೆಂದು ಧಿಕ್ಕರಿಸಿ ಬಿಡುವ, ಅಥವಾ ಆದರ್ಶಕ್ಕೆ ಮಾರಕವೆಂದು ಗೌಣವಾಗಿಸುವ, ನೀತಿ ಕಲ್ಪನೆಯಿಂದ ಮೂಗು ಮುರಿಯುವ, ಅಥವಾ ಹೆಣ್ಣಿನ ಬಿಡುಗಡೆ ಎಂಬುದು ಎಲ್ಲೋ ಮೆದುಳಿನೊಳಗಷ್ಟೇ ಕೂತಿದೆ ಎಂದು ನಂಬುವ ಸರಳತೆಗಳಿಂದ ಪಾರಾಗಿರುವ ಲೇಖಕಿ, ಈ ವೈಯಕ್ತಿಕವನ್ನು ಸಾರ್ವತ್ರಿಕಗೊಳಿಸಲು ಅನುಸರಿಸಿರುವ ವಸ್ತುನಿಷ್ಠ, ಸಂತುಲಿತ ಮನೋಭಾವ, ಅವರ ಬರಹಕ್ಕೆ ಸಂಕೀರ್ಣತೆ, ಪ್ರಬುದ್ಧತೆಗಳನ್ನು ನೀಡುತ್ತದೆನ್ನಬಹುದು.

ಕರ್ನಾಟಕದಲ್ಲಿ ಮಹಿಳಾ ಚಳವಳಿ ಅಂಕುರಿಸಿದ ಕ್ರಮವನ್ನು 'ಶಿವಗಂಗಾ' ಸುಂದರವಾಗಿ ದಾಖಲಿಸುತ್ತದೆ. ಹೊನ್ನೇಕೆರೆ ಒಂದು ಸಣ್ಣ ಹಳ್ಳಿ. ಈ ಹಳ್ಳಿಯಲ್ಲಿ ಹುಟ್ಟಿ ಬೆಳೆವ ಕೆಳ ಮಧ್ಯಮ ವರ್ಗದ ಹುಡುಗಿಯರು ಗಂಗಾ, ಪಾರ್ವತಿ, ಕಮಲೆ, ಲಕ್ಷ್ಮಿ ಮತ್ತಿತರರು. ಗೆಳತಿಯರು ಒಂದೆಡೆ ಕಲೆತು ಮನೆಯ ಸಂಬಂಧಗಳನ್ನು, ತಮ್ಮ ಅನುಭವಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳತೊಡಗುತ್ತಾರೆ. ಅಪ್ಪ, ಅಮ್ಮಂದಿರು, ಅಣ್ಣ-ತಮ್ಮಂದಿರ ಜೊತೆ, ತಮ್ಮ ಜೊತೆ ನಡೆದುಕೊಳ್ಳುವ ಬಗೆಗಳಲ್ಲಿ, ಸ್ವತಃ ಅಪ್ಪಂದಿರು ಅಮ್ಮಂದಿರನ್ನು ನಡೆಸಿಕೊಳ್ಳುವ ಬಗೆಗಳಲ್ಲಿ, ಇಲ್ಲವೆ ಸೋದರರು ತಮ್ಮೊಂದಿಗೆ ವರ್ತಿಸುವ ರೀತಿಗಳಲ್ಲಿ ಎಲ್ಲೋ ಒಂದು ರೀತಿಯ ಅವಹೇಳನೆಯ ಅಂಶ, ತಾವು ಹುಡುಗಿಯರಾದ್ದಕ್ಕಾಗಿಯೇ ಅನುಭವಿಸುತ್ತಿದ್ದೇವೆಂಬುದು ಅವರಿಗೆ ಕಾಣಿಸತೊಡಗುತ್ತದೆ. ಅಷ್ಟೆ ಅಲ್ಲ, ಈ ಬಗೆಯ ಸಂಕಟಗಳು ತಮ್ಮೊಬ್ಬರದೇ ಅಲ್ಲ, ತಮ್ಮಂಥ ಹುಡುಗಿಯರಿಗೆಲ್ಲ ಒಂದಲ್ಲ ಒಂದು ರೀತಿ ಇದೇ ರೀತಿಯ ಸಂಕಟಗಳಿವೆ ಎಂಬುದು ಅವರ ಅರಿವಿಗೆ ಬರುತ್ತಾ ಹೋಗುತ್ತದೆ. ಪ್ರತಿ ವಾರ ನಿಯಮಿತವಾಗಿ ಒಂದೆಡೆ ಕಲೆತು ಸಭೆ ನಡೆಸುವುದು, ಸ್ತ್ರೀಯರ ಸಮಸ್ಯೆ ಬಗೆಗಿನ ವಿಷಯಗಳನ್ನು, ಲೇಖನಗಳನ್ನು ಓದಿ ಚರ್ಚಿಸುವುದು, ತಮ್ಮದೇ ಕೈಬರಹದ ಪತ್ರಿಕೆ ರೂಪಿಸಿದ್ದು ಹೀಗೆ ಕ್ರಮ ಕ್ರಮವಾಗಿ ಅವರ ಚಟುವಟಿಕೆಗಳು ಬೆಳೆಯತೊಡಗಿದಾಗ, ಇಂಥ ಚಟುವಟಿಕೆಗಳ ಮೂಲಕ ತಮಗೆ ಅರಿವಿಲ್ಲದೆಯೇ ಒಂದು ರಾಜಕೀಯ ಕಾರ್ಯಾಚರಣೆಯನ್ನು ಅವರು ನಡೆಸುತ್ತಿರುತ್ತಾರೆ.

ಜಗತ್ತಿನಲ್ಲಿ ಎಲ್ಲಾ ಕಡೆಯೂ ಮಹಿಳೆಯರ ಹೋರಾಟ ಮತ್ತು ಸಂಘಟನೆಗಳು ಹುಟ್ಟಿಕೊಂಡದ್ದು ಬಹುಶಃ ಹೀಗೇ, ಸೋದರಿ ಭಾವದಲ್ಲಿ, ಈ ಕಷ್ಟಗಳು ಎಲ್ಲ ಸ್ತ್ರೀಯರದ್ದೂ ಹೌದು ಎಂಬ ಅರಿವಿನಲ್ಲಿ. ಭಾರತದ ಬಹುಮುಖಿ ಸಂಸ್ಕೃತಿಯಲ್ಲಿ ಹೆಂಗಸರು ಹೆಂಗಸರ ಜೊತೆಗೇ ಪ್ರತ್ಯೇಕ ಪ್ರಪಂಚ ಸೃಷ್ಟಿಸಿಕೊಂಡಿರುವುದು, ಕಷ್ಟ ಬಂದಾಗ ಒಬ್ಬರು ಮತ್ತೊಬ್ಬರಲ್ಲಿ ತೋಡಿಕೊಳ್ಳುತ್ತ ಅತ್ತು ಹಗುರವಾಗಿಬಿಡುವುದು ನಿತ್ಯ ನೋಟ. ಆದರೆ ಕಷ್ಟಕ್ಕೆ ಒಂದು ಮೂಲಕಾರಣವಿದ್ದೀತು ಎಂಬ ಅರಿವಿನಿಂದ ಪ್ರಜ್ಞಾಪೂರ್ವಕವಾಗಿ ಪರರೊಂದಿಗೆ ತಮ್ಮನ್ನು ಗುರುತಿಸಿಕೊಂಡು ಪರಿಹಾರಕ್ಕೆ ಒಟ್ಟಾಗಿ ಸೋದ್ದೇಶವಾಗಿ ಯತ್ನಿಸುವುದು ಮಾತ್ರ ಈ ನೆಲದಲ್ಲಿ ಅಪರೂಪದ ಸಂಗತಿ. ಇದಕ್ಕೆ ಮುಖ್ಯ ಕಾರಣ ಶ್ರೇಣೀಕೃತ ವ್ಯವಸ್ಥೆ, ಇಲ್ಲಿರುವ ಜಾತಿ, ಮತ, ವರ್ಗ, ಪಂಗಡಗಳ ಪಿತೃ ಕೇಂದ್ರಿತ ಗೋಡೆಗಳು ಸ್ತ್ರೀಯರನ್ನು ಬೇರೆಯಾಗಿಯೇ ಉಳಿಸಿಡುವಂಥವು, ಅವರು ತಮ್ಮ ಕಷ್ಟಗಳನ್ನು ಪ್ರತ್ಯೇಕವೆಂದೇ ನಂಬುವಂತೆ ಮಾಡಿರುವಂಥವೂ ಆಗಿವೆ. ಈ ಅಧಿಪತ್ಯದ ಗೋಡೆಗಳು ಶಿಥಿಲಗೊಳ್ಳುವುದಕ್ಕೂ, ಪ್ರಜ್ಞಾಪೂರ್ವಕವಾಗಿ ಸ್ತ್ರೀಯರು ಪರಸ್ಪರರ ನೆರವಿಗೆ ಮುಂದಾಗುವುದಕ್ಕೂ ಸಂಬಂಧವಿದೆ. ಕಪ್ಪು ಹೆಣ್ಣು ಪಾರ್ವತಿಯನ್ನು ಮನೆಯವರು ಹೆಚ್ಚು ಓದಿಸದೆ, ಅವಳ ಬಣ್ಣದಿಂದಾಗಿ ಮದುವೆಯೂ ಆಗದೆ ಬದುಕು ದುರ್ಭರವಾದಾಗ, ಕಾಣದ ನಗರದಲ್ಲಿ ಕೆಲಸ ಹುಡುಕಿಕೊಳ್ಳಲು ಆಕೆ ಮನೆ ಬಿಡಲು, ಅವಳಂಥದೇ ಪರಿಸರದ ಲಕ್ಷ್ಮಿ ನೆರವಾಗುವ ರೀತಿ ಈ ವಿಚಾರಕ್ಕೆ ಒಂದು ನಿದರ್ಶನ.

ಗಂಗಾಗೆ ಎಳವೆಯಿಂದಲೇ ಚಿಂತನಶೀಲತೆ, ಅವಳ ಸ್ವಭಾವವೇ ಆಗಿದೆ. ತನ್ನನ್ನೂ, ಸುತ್ತಲಿನ ಬದುಕನ್ನೂ ಕುರಿತು ಅವಳು ಕೇಳಿಕೊಳ್ಳುವ ಪ್ರಶ್ನೆಗಳು, ಮುಖ್ಯವಾಗಿ ತನ್ನ ತಾಯಿಯ ಬದುಕಿನ ದುರಂತವೇ ಆಕೆಗೆ ತನ್ನ ಬದುಕು ಹಾಗಾಗಗೊಡಬಾರದೆಂಬ ಛಲವನ್ನು ಹುಟ್ಟಿಸುತ್ತದೆ. ಹೆಚ್ಚು ಓದಬೇಕೆನ್ನುವ ಹಂಬಲಕ್ಕೆ ಮನೆಜನ ಅಡ್ಡಿಯಾದಾಗ, ಕಾಲೇಜು ಸೇರಲಿಕ್ಕಾಗಿ ಮನೆಯನ್ನೇ ಬಿಟ್ಟು ಓಡಿದವಳು, ತನ್ನ ಕಲಿಕೆ, ಉದ್ಯೋಗದ ವೈಯಕ್ತಿಕ ಪ್ರಗತಿಯನ್ನು ಛಲದಿಂದ, ಪರಿಶ್ರಮದಿಂದ ಸಾಧಿಸುತ್ತಾಳೆ. ನಗರದ 'ಸ್ತ್ರೀ ಮುಕ್ತಿ' ಸಂಘಟನೆಯಲ್ಲಿ ಅವಳು ಸೇರಲು ಕಾರಣವಾದದ್ದು ಬಾಲ್ಯದ ಗೆಳತಿ ಪಾರ್ವತಿಯೇ. ಇವರಿಬ್ಬರ ನಡುವಿನ ಸ್ನೇಹದ ಕೊಂಡಿ, ಗಂಗಾಳ ಬದುಕಿನ ಉದ್ದಕ್ಕೂ ಉಳಿದುಕೊಳ್ಳುತ್ತದೆ. ಸ್ತ್ರೀ ಸಮಸ್ಯೆಗಳ ವಿರುದ್ಧದ ಹೋರಾಟವಿರಲಿ, ಅಲ್ಲಿನ ಸ್ತ್ರೀ-ಪುರುಷರ ಜೊತೆಗಿನ ಸಂಬಂಧಗಳಿರಲಿ, ಯಾವುದೂ ಸಮಷ್ಟಿಯ ಅರಿವಿನೊಂದಿಗೇ ದಾಖಲಾಗುತ್ತದೆ. ಹಲವು ಬುದ್ಧಿಜೀವಿಗಳು, ಕ್ರಾಂತಿಕಾರಿಗಳು, ವಿವಿಧ ಮನೋಧರ್ಮದವರ ಒಡನಾಟ ಸಂಪರ್ಕಗಳಲ್ಲಿ ನೇರವಾಗಿ ದಿಟ್ಟವಾಗಿ ತನ್ನನ್ನು ಒಡ್ಡಿಕೊಳ್ಳುತ್ತಲೇ ಪ್ರಬುದ್ಧಳಾಗುವ ಹುಡುಕಾಟ ಗಂಗಾಳದ್ದು. ಹೀಗೆ ತೆತ್ತುಕೊಳ್ಳುವ ಸಂಬಂಧಗಳು ಲೈಂಗಿಕವಿರಬಹುದು, ಸ್ನೇಹದ್ದಿರಬಹುದು, ವಿಶ್ವಾಸ, ಅನುಕಂಪ, ಅಕ್ಕರೆಗಳದ್ದಿರಬಹುದು, ಆದರೆ ಗಂಗಾಳ ದೃಷ್ಟಿಯಲ್ಲಿ ತನ್ನ ಸಂಪರ್ಕಕ್ಕೆ ಬಂದ ಗಂಡಸರನ್ನೆಲ್ಲ ಕೇವಲ ಲೈಂಗಿಕ ಸಾಧನಗಳಾಗಿಸಿಕೊಳ್ಳುವ ಹಪಾಹಪಿಯಾಗಲಿ, ಹತಾಶೆಯಾಗಲಿ ಇಲ್ಲ. ಹೆಣ್ಣು-ಗಂಡುಗಳ ಸಂಬಂಧದ ಲೈಂಗಿಕ, ಲೈಂಗಿಕೇತರ ಸ್ತರಗಳನ್ನು (ಕೌಟುಂಬಿಕವಾಗಿ ಹೇರಿಕೊಂಡಿರುವಂಥವನ್ನು) ಆಕೆ ಶೋಧಿಸಿಕೊಳ್ಳ ಹೊರಡುವುದರಲ್ಲಿ ಆಳವಾದ ಪ್ರೀತಿಯ ಅರಕೆಯ ಹಂಬಲವಿದೆ. ಮೊದಲ ಪ್ರೇಮಿ ರವಿಯೊಂದಿಗೆ ಬೆಳೆದು ಮುರಿದ ಕೋಮಲ ಸಂಬಂಧದ ನೆರಳು ಹರಡಿದೆ. ಮಹಿಳೆಯರು ವಿಶೇಷವಾಗಿ ಬಡವರು, ಕೆಳಸ್ತರದವರು, ವೇಶ್ಯೆಯರು ಅನುಭವಿಸುವ ಅನ್ಯಾಯ, ದೌರ್ಜನ್ಯಗಳ ಭೀಕರ ಮುಖಗಳ ತೀರಾ ಹತ್ತಿರದ ಪರಿಚಯ, ಅಂಥವರಿಗಾಗಿ ಕೋರ್ಟಿಗೆ, ಪೋಲೀಸು ಸ್ಟೇಷನ್ನಿಗೆ ಅಲೆಯುವ ಸಂದರ್ಭಗಳಲ್ಲಿ ಅವಳಿಗಾಗುತ್ತದೆ. ಇಲ್ಲಿ ಗಮನಿಸಲೇಬೇಕಾದ ಸಂಗತಿಯೊಂದು ಇದೆ. ಮಹಿಳಾ ಹೋರಾಟದಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡಂತೆಲ್ಲ ಗಂಗಾಳ ಅಂತಃಕರಣ ವಿಕಾಸಗೊಳ್ಳುತ್ತ ಹೋಗುತ್ತದೆ. ಯಾವ ಅಪ್ಪ, ಅಣ್ಣನ ಕಹಿ ಸಂಬಂಧ, ಅನುಭವಗಳಿಂದ ದೂರವಾಗಲು ಅವಳು ಸದಾ ಹವಣಿಸುತ್ತಿದ್ದಳೋ ಅಂಥವರನ್ನೇ ಅನುಕಂಪ, ಸೈರಣೆಗಳಿಂದ ಕಾಣುವಷ್ಟು ಅವಳ ಅರಿವು ವಿಸ್ತರಿಸುತ್ತದೆ. ಇದು ಕೇವಲ 'ಸ್ತ್ರೀ ಸಹಜ ಕ್ಷಮೆ' ಎಂಬುದಲ್ಲ. ಅಥವಾ ಸ್ತ್ರೀ ವಾದಿ ಪುರುಷ ದ್ವೇಷಿಯೆಂಬುದೂ ಅಲ್ಲ ಎನ್ನುವುದನ್ನು ಮನನ ಮಾಡಿಸುತ್ತದೆ.

ಗಂಗಾಳ ಬದುಕಿನ ಉದ್ದಕ್ಕೂ ಕಾಡಿಸುವ ಎರಡು ಮುಖ್ಯ ಸಂಬಂಧಗಳು ತಾಯಿಯದು ಮತ್ತು ರವಿಯದು. ತಾಯಿಯ ವ್ಯಕ್ತಿತ್ವ, ಬದುಕನ್ನು ಅವಳು ಸ್ವೀಕರಿಸಿದ ರೀತಿ, ಅವಳ ದುರಂತಗಳು ಸದಾ ಗಂಗಾಳನ್ನು ಕಾಡುತ್ತವೆ. ಆದರೆ ಗಂಗಾಳೇ ಸ್ವತಃ ತಾಯಿಯಾದಾಗ, ಜಾತಿ, ಮತ, ಸಂಪ್ರದಾಯವನ್ನೆಲ್ಲ ಬಿಟ್ಟಿದ್ದ ಈಕೆಯನ್ನು ತಾಯಿ ದೂರವಿಡಲಾರಳು. ತೀರಾ ಸಂಪ್ರದಾಯಸ್ಥ

ತಾಯಿ ತನ್ನೆಲ್ಲ ಪಟ್ಟನ್ನು ಕಳಚಿಕೊಂಡು ಮಗಳಲ್ಲಿಗೆ ಧಾವಿಸುತ್ತಾಳೆ. ನಿರ್ವ್ಯಾಜ ಅಂತಃಕರಣದಿಂದ ಮಗಳ ಬಾಣಂತನ, ಸೇವೆ ಕೈಗೊಳ್ಳುತ್ತಾಳೆ. ಗಂಗಾ-ತಾಯಿ, ತಾಯಿ-ಮೊಮ್ಮಗಳ ಸಂಬಂಧಗಳ ಕೊಂಡಿಗಳ ಮೂಲಕ ತಾಯಿಯೊಂದಿಗಿದ್ದ ಗಂಗಾಳ ಭಾವನೆಗಳು ನೇರ್ಪಾಗುತ್ತವೆ. ಈ ಅಂಶವನ್ನು ಚಂಪಾವತಿ ನಿರೂಪಿಸುವ ಬಗೆ ಇದನ್ನು ಈ ಕಾದಂಬರಿಯ ತುಂಬ ಆರ್ದ್ರತೆಯುಕ್ಕಿಸುವ ಭಾಗಗಳಲ್ಲಿ ಒಂದನ್ನಾಗಿಸಿದೆ.

ರವಿಯಲ್ಲಿ ನಿರೀಕ್ಷಿಸಿ, ದಕ್ಕದೆ ಹೋಗಿದ್ದದ್ದು ಪಿತೃ ಸಹಜ ರಕ್ಷಕ ಭಾವ, ಮಾತೃ ಸಹಜ ಅಂತಃಕರಣ ಹಾಗೂ ಗೆಳೆಯನಲ್ಲಿ ಸಾಧ್ಯವಾಗಬಹುದಾದ ಸಖ್ಯ - ಈ ಮೂರೂ ಮೇಳವಿಸಿರುವಂಥ ಒಬ್ಬ ಸಂಗಾತಿ. ಬದುಕಲ್ಲಿ ಬಹುಕಾಲ, ಬಹು ವಿಧ ವ್ಯಕ್ತಿಗಳೊಂದಿಗೆ ತೊಡಗಿಕೊಳ್ಳುತ್ತಲೇ ಈ ಹುಡುಕಾಟ ಕೈ ಬಿಡದ ಗಂಗಾ ಕೊನೆಗೆ ವಿದೇಶವೊಂದರಲ್ಲಿ ಕಲಿಯುತ್ತಿದ್ದ ಹೊತ್ತಲ್ಲಿ ತನದೇ ದೇಶದ ರಮೇಶನಲ್ಲಿ ತನ್ನ ಸಂಗಾತಿಯನ್ನು ಕಂಡುಕೊಳ್ಳುತ್ತಾಳೆ. ಈ ಸಂಬಂಧದ ವಾಸ್ತವ ಅವಳ ಬದುಕಿಡೀ ಜಿಜ್ಞಾಸೆಯೇ ಆಗಿ ಮುಂದುವರೆಯುತ್ತದೆ.

'ಶಿವಗಂಗಾ' ಹೆಸರು ಸೂಚಿಸುವಂತೆ ಒಂದು ವಿಶಿಷ್ಟ ರೀತಿಯ ಸಂಯೋಜನೆ ಪಡೆದ ಅನುಭವ ಪ್ರವಾಹ. ಇದರಲ್ಲಿ ಬರುವ ಹೆಣ್ಣು-ಗಂಡುಗಳಲ್ಲಿ ಪ್ರವಾಹದ ಜೊತೆಗೆ ಸಾಗುವವರು, ಅವರ ವಿರುದ್ಧ ಈಜ ಬಯಸುವವರು, ಈಜು ಬಲ್ಲವರು, ಬಾರದೆ ಮುಳುಗುವವರೂ ಇದ್ದಾರೆ. ಮಹಿಳಾ ಸಮಸ್ಯೆಗಳಿಗೆ ಒಟ್ಟಾಗಿ ಪರಿಹಾರ ಹುಡುಕುವ ಕಾಯಕದಲ್ಲಿ ಒಂದಾದ ಸ್ತ್ರೀಯರೆಲ್ಲರು 'ಹತಾಶ ವ್ಯಕ್ತಿ'ಗಳೇನಲ್ಲ. ನಿಜ. ಬದುಕಲ್ಲಿ ಕೇವಲ ಕಹಿಯನ್ನೇ ಉಂಡವರು, ನಂಬಿದ್ದ ಜನರ ಪ್ರೀತಿಯ ಸಂಬಂಧಗಳಲ್ಲಿ ವಂಚಿತರಾದವರೂ ಇವರಲ್ಲಿ ಇರಬಹುದು. ಆದರೆ ಇವರ ಮಗ್ಗುಲಲ್ಲೇ ಬದುಕಿನ ಎಲ್ಲ ಸುಖ, ಸಂತೋಷಗಳನ್ನು ಅನುಭವಿಸಬಲ್ಲವರು, ಜೀವನದ ಎಲ್ಲ ಸವಲತ್ತುಗಳನ್ನು ಪಡೆದುಕೊಂಡಿದ್ದೂ ನಂಬಿದ ಧ್ಯೇಯಕ್ಕಾಗಿ ಕೆಲವನ್ನು ಬಿಟ್ಟುಕೊಡಬಲ್ಲ ಪ್ರಾಮಾಣಿಕ ಕಾರ್ಯಕರ್ತೆಯರೂ ಇಲ್ಲಿದ್ದಾರೆ.

ಸಂಘಟನೆಯೊಂದನ್ನು ಕಟ್ಟುವಾಗ ನೆರವಿಗೆ ಬರುವ ಜನರೆಲ್ಲ ಎಲ್ಲ ಕಾಲಕ್ಕೂ ಎಲ್ಲ ಸ್ಥಿತಿಗಳಲ್ಲೂ ಮೊದಲಿದ್ದ ಆದರ್ಶ, ಧ್ಯೇಯಗಳಿಗೆ ಬದ್ಧರೇ ಆಗಿರುವ ಖಾತ್ರಿಯಿಲ್ಲ. ಅವರ ನಡುವಿನ ವಿರೋಧಗಳು, ಅವರೊಳಗೇ ಇರುವ ವೈರುಧ್ಯಗಳು, ಮನುಷ್ಯ ಸಹಜವಾದ ಕ್ಷುದ್ರತನ, ಲೋಭ, ಹಪಾಹಪಿ, ಆತ್ಮವಂಚನೆ, ವಂಚನೆಗಳೆಲ್ಲದರಿಂದ ಮುಕ್ತರಾಗಿಲ್ಲದ ಸ್ಥಿತಿಗಳೂ ಇವೆ. ಒಬ್ಬಂಟಿಯಾಗಿ ಬದುಕಿಗೆ, ಸಂಘಟನಾತ್ಮಕ ಪ್ರಕ್ರಿಯೆಗೆ ತನ್ನನ್ನು ಒಡ್ಡಿಕೊಳ್ಳುವ ಹೆಣ್ಣೊಬ್ಬಳಿಗೆ ಎದುರಾಗಬಹುದಾದ ಸಂದಿಗ್ಧತೆ, ಸಂಶಯ, ಪ್ರಲೋಭನೆ, ವಿವಂಚನೆಗಳ ಜೊತೆಯಲ್ಲೇ ಗಂಗಾಗೆ ಅನೇಕ ಇತ್ಯಾತ್ಮಕ ಅನುಭವಗಳೂ ದಕ್ಕುತ್ತವೆ. ಇದಕ್ಕೆ ಬದುಕಿನಲ್ಲಿ ಒಂದು ರೀತಿಯ 'ರಿಸ್ಕ್' ತೆಗೆದುಕೊಳ್ಳಬಲ್ಲ ಧೈರ್ಯ, ಆಯ್ಕೆ ಮತ್ತು ಸ್ವತಃ ನಿರ್ಧರಿಸಬಲ್ಲ ಸಾಮರ್ಥ್ಯ ಅಗತ್ಯವೆನ್ನುವುದನ್ನು ಕಾದಂಬರಿ ಸಾಕ್ಷಾತ್ಕರಿಸಲು ಯತ್ನಿಸುತ್ತದೆ.

ಒಬ್ಬ ಆಧುನಿಕ, ಸಂವೇದನಾಶೀಲ ಹೆಣ್ಣಿನ ಆತ್ಮಕಥನ, ಬದುಕಿನ ಶೋಧನೆಯನ್ನೂ ಒಂದು ಪ್ರಚಲಿತ ಚಳುವಳಿಯ ವಾಸ್ತವ ಸ್ವರೂಪದ ಆಳ ಅಗಲಗಳನ್ನೂ ಒಟ್ಟಾಗೆ ಬೆಸೆದಿರುವ 'ಶಿವಗಂಗಾ' ಕಾದಂಬರಿ ತಬ್ಬಿಕೊಳ್ಳಲು ಯತ್ನಿಸುವ ಬದುಕಿನ ದ್ರವ್ಯ ತುಂಬ ದೊಡ್ಡದು. ಎಲ್ಲ ಮನುಷ್ಯರೊಳಗಿನ ಪ್ರೇಮದ ಹಂಬಲ, ಸ್ವಾತಂತ್ರ್ಯ, ಸಮಾನ ಬದುಕಿನ ಅವಕಾಶದ ಹಂಬಲ, ಜೀವನಕ್ಕೆ ಅಭಿಮುಖವಾದ ಜೀವನ ದರ್ಶನಗಳಿಂದ ಒಂದು ವಿಶಿಷ್ಟ ತಾತ್ವಿಕ ನೆಲೆಗಟ್ಟು ಈ ಕೃತಿಗೆ ದೊರೆತಿದೆ. ಒಂದು ಪ್ರಜ್ಞೆಗೆ ದಕ್ಕುವ, ದಕ್ಕಬಹುದಾದ ಅನುಭವ ಮತ್ತು ಅರಿವಿನ ಪರಿಮಿತಿಯಲ್ಲಿ ಈ ಬಹುರೂಪಿ ಜೀವನ ಪ್ರವಾಹದ ಸೆಳೆತಗಳನ್ನು ಹಿಡಿದಿಡುವ ಚಂಪಾ ಅವರ ಯತ್ನ ಎಷ್ಟು ಯಶಸ್ವಿ ಎಂಬುದನ್ನು ವಿಮರ್ಶಕರು ಹೇಳಿಯಾರು. ಈ ಸಾಹಸಕ್ಕೆ ಕೈ ಹಾಕಿದ್ದೂ ಮಹತ್ವದ್ದೆಂದು ನನಗೆ ತೋರುತ್ತದೆ. ಇದಕ್ಕಾಗಿ, ಚಂಪಾಗೆ ಮನದುಂಬಿ ಅಭಿನಂದಿಸುತ್ತೇನೆ.

- ಬಿ. ಎನ್. ಸುಮಿತ್ರಾಬಾಯಿ

ಲೇಖಕಿಯ ಮಾತು

•1984ರವರೆಗೆ ಕಥೆ/ಕವನ ಬರೆದು ಅಲ್ಲಿ-ಇಲ್ಲಿ ಪ್ರಕಟಿಸುತ್ತಿದ್ದ ನನಗೆ ಒಮ್ಮಿಂದೊಮ್ಮೆಲೇ ನನ್ನ ಬರವಣಿಗೆಯ ಬಗ್ಗೆಯೇ ಒಂದು ರೀತಿಯ ಅತೃಪ್ತಿ ಮೂಡತೊಡಗಿತ್ತು. ಬರೆದ ಕಥೆ/ಕವನಗಳು ಮನಸ್ಸಿನಾಳದಲ್ಲಿರುವುದನ್ನು ಹೇಳುತ್ತಿಲ್ಲವೇನೋ ಎಂಬ ಆತಂಕ ಕಾಡತೊಡಗಿದ್ದು - ಒಂದು ಕಡೆಯಾದರೆ, ಸಣ್ಣ ಕತೆಯ ಹಂದರದಲ್ಲಿ ಅನುಭವ ದ್ರವ್ಯದ ವಿವಿಧ ಮುಖಗಳು, ಆಶಯಗಳು ಹಾಗೂ ವೈರುಧ್ಯಗಳನ್ನು ಒಟ್ಟಾರೆಯಾಗಿ ಹಿಡಿದಿಡುವುದು ನನ್ನ ಮಟ್ಟಿಗೆ ಅಸಾಧ್ಯವಾಗಿ ಕಾಣುತ್ತಿದೆ ಎಂಬ ಭಾವನೆ ಬಲವಾಗಿ ಕಾಡತೊಡಗಿದಾಗ ಸಣ್ಣ ಕತೆ ಬರೆಯುವುದನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಆದರೆ ಬರೆಯಲೇಬೇಕೆಂಬ ಎದೆಯಾಳದ ತುಡಿತದಲ್ಲಿ ಡೈರಿಯ ಪುಟಗಳನ್ನು ತುಂಬಿಸುತ್ತಾ ಹೋದೆ. 1985ರಿಂದ 1996ರವರೆಗೆ ಬರೆಯಲೇಬೇಕೆನ್ನುವ ಒತ್ತಡವನ್ನು ಹತ್ತಿಕ್ಕಲಾರದೇ ನಿರಂತರವಾಗಿ ಬರೆಯುತ್ತಾ ಬಂದು ಕೊನೆಗೊಂದು ಆಕೃತಿಯನ್ನು ಪಡೆದ ಕೃತಿ 'ಶಿವಗಂಗಾ'. ಆತಂಕ, ಭಯ, ದುಃಖ, ದುಮ್ಮಾನ, ಸಂಕೋಚ, ಸಂತೋಷ ಇವೆಲ್ಲವುಗಳ ಹಂತದಲ್ಲಿಯೇ ಈ ಕೃತಿಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

95-96ರ ಪ್ರಾರಂಭದಲ್ಲಿಯೇ ಬರೆದು ಮುಗಿಸಿದ ಈ ಕೃತಿಯನ್ನು ನನ್ನ ಬಳಿಯೇ ಇಟ್ಟುಕೊಂಡಿದ್ದೆ. 'ಮಾನಸ' ಪತ್ರಿಕೆಯ ಹಲವು ಗೆಳತಿಯರಿಗೆ ಓದಲು ಇತ್ತೆ. 'ಮಾನಸ'ದ ಗೆಳತಿಯರಿಂದ ಸಿಕ್ಕ ಉತ್ತೇಜನವೇ ಈ ಕೃತಿಯ ಪ್ರಕಟಣೆಯ ಬಗ್ಗೆ ನನ್ನಲ್ಲಿ ಹುಮ್ಮಸ್ಸನ್ನು ತುಂಬಿದ್ದು. ಗೆಳತಿ ಸರಸ್ವತಿ ದು. ಈ ಕೃತಿಯ ಪ್ರಕಟಣೆಗೆ ಜೀವ ತುಂಬಿದಾಕೆ ಎಂದರೂ ತಪ್ಪಾಗಲಾರದು. ಆಕೆಯ ಜೀವನೋತ್ಸಾಹದ ಮಾತುಗಳು ನನ್ನಲ್ಲಿ ಜೀವಂತಿಕೆ ಉಳಿಸಿ,. ಬೆಳೆಸಿ ಈ ಕೃತಿಯ ಪ್ರಕಟಣೆಗೆ ಮುಂದುವರಿಯುವಂತೆ ಮಾಡಿದ್ದು ಎಂಬುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಜೊತೆಗೆ ಕೃತಿಯನ್ನು ಓದಿ ಮುಖಪುಟ ಚಿತ್ರಿಸಿದ್ದಾಳೆ. ಆಕೆಯ ಆತ್ಮೀಯತೆಗೆ ಬೆಲೆ ಕಟ್ಟುವ ಮಾತುಗಳು ನನ್ನಲ್ಲಿಲ್ಲ.

ಆದಾಗ್ಯೂ ಕಳವಳ. ಪ್ರಕಟಿಸಲು ಧೈರ್ಯ ಸಾಲದೇ ಇಂದಿನ ಸ್ತ್ರೀವಾದಿ ಚಿಂತಕಿಯರಲ್ಲಿ ಪ್ರಮುಖರು ಎನಿಸಿದ ಸುಮಿತ್ರಾಬಾಯಿ ಬಿ. ಎನ್. ರವರ ಹತ್ತಿರ 660 ಪುಟಗಳ ಹಸ್ತಪ್ರತಿಯನ್ನು ಹೊತ್ತುಕೊಂಡು ಹೋದೆ. ಓದಿ ಮುಗಿಸಿದಾಕ್ಷಣ ಅವರು ಬರೆದ ಪತ್ರ ನನ್ನಲ್ಲಿ ಭರವಸೆ

ಹುಟ್ಟಿಸಿದ್ದಲ್ಲದೇ ಕೃತಿಯಲ್ಲಿ ಅನೇಕ ಬದಲಾವಣೆಗಳನ್ನು ಮಾಡುವುದಕ್ಕೂ ಸಹಾಯವೆಸಗಿತು. 'ಶಿವಗಂಗಾ' ಕೃತಿಗೆ ನೀವೇ ಮುನ್ನುಡಿ ಬರೆಯಬೇಕು ಎಂದು ಸುಮಿತ್ರಾಬಾಯಿಯವರನ್ನೇ ಕೇಳಿದಾಗ ಪತ್ರವನ್ನೇ ಬೇಕಾದರೆ ಬಳಸಿಕೊಳ್ಳಿ ಎಂದು ಅವರು ಪ್ರೀತ್ಯಾದರಗಳಿಂದ ನುಡಿದರು. ಆದರೆ ನನ್ನ ಮರೆಗುಳಿತನದಲ್ಲಿ ಎಷ್ಟೆಷ್ಟೋ ವಸ್ತುಗಳನ್ನು ಕಳೆದುಕೊಂಡ ನಾನು ಆ ಅಮೂಲ್ಯ ಪತ್ರವನ್ನೂ ಸಹ ಕಳೆದುಕೊಂಡ ನಾನು ನಂತರ ಬಹಳ ಒದ್ದಾಡಿದೆ. ಮತ್ತೆ 'ಹೀಗೆ ಆಗಿದೆ, ನೀವು ಮುನ್ನುಡಿ ಬರೆಯಿರಿ' ಎಂದಾಗ ಅದೇ ಪ್ರೀತಿ-ವಿಶ್ವಾಸದಿಂದ ಬರೆದು ಕೊಟ್ಟಿರುತ್ತಾರೆ. ಜೊತೆಗೆ ಸ್ತ್ರೀವಾದಿ ಚಿಂತನೆಗಳನ್ನು ಬೆಳೆಸುವ ಹಂತದಲ್ಲಿನ ಜವಾಬ್ದಾರಿ, ಅರಿವುಗಳ ಬಗ್ಗೆಯೂ ಚರ್ಚಿಸಿ ಸಲಹೆ-ಸಹಕಾರ ನೀಡಿರುತ್ತಾರೆ. ಅವರನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ.

ಇಳಾ ವಿಜಯಾರವರ ಬಳಿ 'ಮೇಡಂ, ಇಂತಹ ಕೆಲಸಕ್ಕಾಗಿ ನಿಮ್ಮಲ್ಲಿಗೆ ಬಂದಿದ್ದೇವೆ' ಎಂದರೆ ಯಾವತ್ತೂ ಅವರು ನಮ್ಮನ್ನು ನಿರಾಸೆಗೊಳಿಸಿದುದೇ ಇಲ್ಲ. ಕೃತಿಗೆ ಸಂಬಂಧಿಸಿದಂತೆ ಮಾತನಾಡುವಾಗ ತಮ್ಮ ಅಮೂಲ್ಯ ಸಮಯವನ್ನು ನನ್ನೊಡನೆ ಕಳೆದಿದ್ದಾರೆ. ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಅನೇಕಾನೇಕ ಸಲಹೆ-ಸಹಕಾರವನ್ನು ಆತ್ಮೀಯತೆಯಿಂದ ನೀಡಿದ್ದಾರೆ. ಅವರ ಮನಸ್ಸಿನ ವೈಶಾಲ್ಯತೆಯನ್ನು ಪ್ರೀತಿಯಿಂದ ನೆನೆಯುತ್ತೇನೆ.

ಟೇಕಲ್‌ನಲ್ಲಿ ಪ್ರಿನ್ಸಿಪಾಲರಾಗಿರುವ ಗೆಳೆಯ ಲಿಂಗರಾಜು ಎಚ್. ಡಿ.ಯವರು ಬೃಹತ್ತಾದ ಹಸ್ತಪ್ರತಿಯನ್ನು ಓದಿ ಮುಗಿಸಿದಾಗ ನೀಡಿರುವ ಪ್ರೋತ್ಸಾಹ, ಉತ್ತೇಜನಗಳನ್ನು ನಾನು ಮರೆಯಲಾರೆ. ಕಷ್ಟ ಕಾಲದಲ್ಲಿರುವಾಗ 'ಎಲ್ಲಿಯೋ ಒಳಿತಿರುತ್ತದೆ, ಜೀವನ ದೊಡ್ಡದಾಗಿದೆ, ನಾವು ನಂಬಿದ್ದ ಧ್ಯೇಯಗಳಿಗೆ ಪ್ರಾಮಾಣಿಕರಾಗಿದ್ದರೆ ಅಷ್ಟೇ ಸಾಕು' ಎನ್ನುವಂತಹ ಮಾತುಗಳಿಂದ ಅನೇಕ ಸಂದರ್ಭಗಳಲ್ಲಿ ಧೈರ್ಯ ತುಂಬುತ್ತಾ ಕೃತಿಯ ಪ್ರಕಟಣೆಗೆ ಪ್ರೋತ್ಸಾಹಿಸಿದ್ದಾರೆ. ಇವರ ವಿಶ್ವಾಸವನ್ನೂ ಸಲಹೆ, ಸಹಕಾರಗಳನ್ನು ಸಹ ಕೃತಜ್ಞತೆಯಿಂದ ನೆನೆಯುತ್ತೇನೆ.

ಮನುಷ್ಯರ ಸಣ್ಣತನ, ಕ್ಷುದ್ರತೆಗಳಿಂದ ಹೊರತಾಗಿ ಚಳುವಳಿ ಮುಖ್ಯ, ಚಳುವಳಿಗಾಗಿ ದುಡಿಯಬೇಕು, ನಿರ್ವಂಚನೆಯಿಂದ ಸಂಬಂಧಗಳಲ್ಲಿ, ಚಳುವಳಿಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು, ನಮ್ಮ ವೈರುಧ್ಯಗಳನ್ನು ಒಪ್ಪಿಕೊಳ್ಳುವಲ್ಲಿ ಹಿಂಜರಿಯಬಾರದು ಎಂಬುದನ್ನು ಪ್ರಾಮಾಣಿಕವಾಗಿ ನಂಬಿ ನಡೆಯುವ ಗೆಳತಿ ನೀಲಾಂಜನ, ಮಹಿಳಾ ಚಳುವಳಿಯಲ್ಲಿ ಅನೇಕಾನೇಕರಿಗೆ ಪರಿಚಯ. ಬೆಳಿಗ್ಗೆ, ಸಂಜೆ, ಮಧ್ಯರಾತ್ರಿಯೆನ್ನದೇ ಇಡಿಯ ಕೃತಿಯ ಇಂಗ್ಲೀಷ್ ಅನುವಾದವನ್ನು ಕೇಳಿಸಿಕೊಂಡಿದ್ದಾಳೆ. ಹೀಗೆ ಓದುತ್ತಾ ಓದುತ್ತಾ ನಾವು ಹಂಚಿಕೊಂಡ ಅಂತರಂಗದ ಹಾಗೂ ಮಹಿಳಾ ಚಳುವಳಿಯ ವಿಚಾರಗಳು ನನಗೊಂದು ಅಮೂಲ್ಯ ಅನುಭವವಾಗಿತ್ತು. ಕೃತಿಯ ಅನುವಾದ ಕೇಳಿಸಿಕೊಂಡದ್ದು, ವಿಚಾರಗಳನ್ನು ಹಂಚಿಕೊಂಡಿದ್ದು, ಹಾಗೂ ಅನೇಕಾನೇಕ ಗಂಭೀರ ಪ್ರಶ್ನೆಗಳನ್ನು ಎತ್ತಿದ್ದು - ಇದೆಲ್ಲ ನನ್ನಲ್ಲಿ ಉಂಟು ಮಾಡಿರುವ ಸಂತೋಷಕ್ಕೆ ನಾನು ಬೆಲೆ ಕಟ್ಟಲಾರೆ.

ವೈಚಾರಿಕ ನೆಲೆಗಳಲ್ಲಿಯೇ ಬದುಕನ್ನು ಶೋಧಿಸುವ ಗೆಳತಿ ಗಾಯತ್ರಿ ವಿ, 'ಶಿವಗಂಗಾ'ದ ಮೊದಲ ಭಾಗವನ್ನು ಓದಿ ಮುಗಿಸಿದಾಗಲೇ ಅನೇಕಾನೇಕ ಗೆಳತಿಯರಲ್ಲಿ 'ನಮ್ಮ ಚಂಪಾ ಕಾದಂಬರಿ ಬರೆದಿದ್ದಾರೆ, ನೀವೆಲ್ಲ ಖಂಡಿತಾ ಓದಬೇಕಾದದ್ದು' ಎಂದು ಹೇಳುತ್ತಾ ನನ್ನಲ್ಲಿ ಭರವಸೆ ಹುಟ್ಟುವಂತೆ ಮಾಡಿದ್ದಾರೆ. ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬದುಕಿನ ಎಲ್ಲಾ ವೈರುದ್ಧ್ಯಗಳ ನಡುವೆಯೂ ಸಂಗಾತಿ ಶಂಕರ್ ಕೃತಿಗೆ ಸಂಬಂಧಿಸಿದಂತೆ ಒಟ್ಟಾರೆಯಾಗಿ ಪ್ರೋತ್ಸಾಹಿಸುತ್ತಾ ಬಂದಿದ್ದಾನೆ. ಪ್ರಕಟಣೆಗೆ ಓಡಾಡಲು ಸಹಕರಿಸಿದ್ದಾನೆ. ಮಗಳು ಕುತೂಹಲ, ಆಸಕ್ತಿ ತೋರಿಸುತ್ತಾ ಬದುಕಿನ ಬಗ್ಗೆ ಭರವಸೆ ಹುಟ್ಟು ಹಾಕಿದ್ದಾಳೆ. ಇವರಿಬ್ಬರನ್ನೂ ಅಕ್ಕರೆಯಿಂದ ನೆನೆಯುತ್ತೇನೆ.

ಬದುಕಿಗೆ ಚಿಕ್ಕಂದಿನಿಂದಲೂ ಅಂಟಿಕೊಂಡು ಬಂದಿರುವ ಜೀವ ಅಕ್ಕ ರಾಜಿ. ಭಿನ್ನಾಭಿಪ್ರಾಯಗಳ ನಡುವೆಯೂ ಬದುಕಿನ ಲಯಗಳಲ್ಲಿ ಆತ್ಮೀಯತೆಯ ತಂತು ಮೀಟುತ್ತಲೇ ಇರುವ, ಬದುಕಿನ ಬೇರುಗಳಲ್ಲಿ ಶಾಶ್ವತವಾಗಿ ಅಂಟಿಕೊಂಡಿರುವ ನಂಟಿನ ಆದರ, ಪ್ರೀತಿ, ವಿಶ್ವಾಸಗಳನ್ನು ಸಹ ಈ ಸಂದರ್ಭದಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಕೃತಿಯ - ಸಂದರ್ಭದಲ್ಲಿ ಎಷ್ಟೆಷ್ಟೋ ಜನ ಸಹಕರಿಸಿದ್ದಾರೆ. ಓದಿ ಸಲಹೆಗಳನ್ನಿತ್ತಿದ್ದಾರೆ, ಪ್ರೀತಿ, ವಿಶ್ವಾಸ ತೋರಿಸಿದ್ದಾರೆ. ಸತ್ಯನಾರಾಯಣ್, ಮಧುಮತಿ ಬಿ. ಎಸ್., ಮಂಜುಳ..... ಹೀಗೆಯೇ ಎಷ್ಟೋ ಜನರು ಆದರ ತೋರಿಸಿದ್ದಾರೆ. ಹೆಸರಿಸದಿದ್ದರೂ ಎಲ್ಲರನ್ನೂ ಕೃತಜ್ಞತೆಯಿಂದ ನೆನೆಯುತ್ತೇನೆ.

ಪ್ರಕಟಣೆಗಾಗಿ ಗುರೂರವರನ್ನು ಕೇಳಿದಾಗ ವಿಶ್ವಾಸದಿಂದ ತಕ್ಷಣಕ್ಕೆ ಒಪ್ಪಿ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿಸಿಕೊಟ್ಟಿರುತ್ತಾರೆ. ಇಳಾ ಪ್ರಿಂಟರ್ಸ್‌ನ ಎಲ್ಲರನ್ನೂ ಕೃತಜ್ಞತೆಯಿಂದ ನೆನೆಯುತ್ತೇನೆ.

ಚಂಪಾವತಿ ಎಚ್. ಎಸ್.

ಭಾಗ - ೧

I initiated him into the world of love and he initiated me back into the world of writing.

ಆ ಹುಡುಗನ ಬಗ್ಗೆ ತನಗೆ ತುಂಬಿದ್ದ ಪ್ರೀತಿಯನ್ನೆಲ್ಲ ಗಂಗಾ ಮೇಲಿನ ಸಾಲಿನಲ್ಲಿ ಹಿಡಿದಿಡಲು ಪ್ರಯತ್ನಪಟ್ಟಳು. ಆಕೆಗೆ ಕಣ್ಣಲ್ಲಿ ನೀರೂರಿತು. ಇದಕ್ಕೆ ತಾನು ತೆತ್ತ ಬೆಲೆ ಎಂತಹದು? ಪ್ರೀತಿ ತುಂಬಿದ, ಮಾಧುರ್ಯ ತುಂಬಿದ್ದ ತನ್ನ ಸಂಸಾರ ನುಚ್ಚು ನೂರಾದದ್ದು. ಗಂಡ, ತಾನು, ಮಗು ಮೂವರ ಮಧ್ಯೆ ಇದ್ದ ಸುಂದರತೆ ಮಾಯವಾಗಿ ಆ ಜಾಗದಲ್ಲಿ ರುದ್ರತೆ, ಮೌನ, ಅನುಮಾನ ತಾಂಡವವಾಡಿದ್ದು. ಇದೆಲ್ಲ ನಡೆಧದ್ದು ಹೇಗೆ?

ಸುಂದರ ಅಕ್ಷರಗಳ ಎದೆಯಲ್ಲಿ ಬರೆದು, ಕಣ್ಣಲ್ಲಿ ಬರೆದು ಮರೆಯಾದ ಹುಡುಗ ಎಲ್ಲಿ? ಎಲ್ಲವೂ ನೀಟಾಗಿ, ನೈಸ್ ಆಗಿ ಇರಬೇಕೆಂದು ಬಯಸುತ್ತಿದ್ದ ಆ ಹುಡುಗನ ಬದುಕು ಛಿದ್ರವಾದದ್ದು ಹೇಗೆ? ಕಾನ್ವೆಂಟಿಗೆ ಹೋಗುವ ಹುಡುಗರ ತರಹ ಶುಭ್ರವಾಗಿ ಸ್ನಾನ ಮಾಡಿ, ನೀಟಾಗಿ ಡ್ರೆಸ್ ಮಾಡಿ, ಶೂಸ್ ಮುಟ್ಟಿದರೂ ಕೈ ಕೊಳೆಯೆಂದು ಉಜ್ಜಿ ಉಜ್ಜಿ ತೊಳೆದುಕೊಂಡು ಕುಣಿದು, ಕುಣಿದು ಓಡುತ್ತಾ, ದೊಡ್ಡದಾಗಿ ಮಾತನಾಡುತ್ತಾ, ನಗುತ್ತಾ ಖುಷಿಯಾಗಿ ಇರುತ್ತಿದ್ದ ಈ ಹುಡುಗನ ಚೈತನ್ಯವನ್ನು ಕೊಂದದ್ದು ಯಾವುದು?

ಸಾಕಷ್ಟು ಮನೆಗೆ ದೀಪದ ವ್ಯವಸ್ಥೆ ಪ್ರೀತಿಯಿಂದ ಮಾಡಿದ ಆ ಹುಡುಗ ತನ್ನ ಮನೆಯ ದೀಪಕ್ಕೆ ಹೆದರಿ, ದೀಪ ಆರಿಸಿ ಕತ್ತಲಲ್ಲಿ ಒಬ್ಬನೇ ಕುಳಿತು, ಒಂಟಿಯಾಗಿ ಕುಡಿದು ಸಾಯಲೇಬೇಕೆಂಬ ಯೋಚನೆಯನ್ನು ಬದಿಗೆ ಒತ್ತಿ ಒತ್ತಿ ಬದುಕಲು ಯಾವುದಾದರೂ ಆಸೆಯ ಕೊಂಬೆಯನ್ನು ಹಿಡಿಯಲು ಪ್ರಯತ್ನಿಸಿದ್ದಾದರೂ ಏಕೆ?

ಎಲ್ಲಿರುವನು ಇಂದು?

ತಲೆ ಕೆದರಿ ಕೊಳಕಾದ ಡ್ರೆಸ್‌ನಲ್ಲಿ ಯಾವ ರಸ್ತೆಯಲ್ಲಿ ಓಡಾಡಿಕೊಂಡಿರುವನೋ? ಯಾರನ್ನು ಹಳಿದು, ಹಳಿದು ಸಮಾಧಾನ ಮಾಡಿಕೊಂಡಿರುವನೋ? ಎಲ್ಲರಿಗೂ ಒಳ್ಳೆಯವನಾಗಲು, ಯಾರಿಗೆ ನೋವು ಉಂಟುಮಾಡಿದರೂ ಒದ್ದಾಡಿಕೊಂಡು ಸಾಯುವ ಈ ಹುಡುಗ ಇಂದು ತನ್ನ ಮನಸ್ಸಿಗಾದ ಆಘಾತದ ನೋವನ್ನು ಯಾರ ಮುಂದೆ ಹೇಳಿಕೊಂಡು ಅತ್ತಿರುವನೋ? ಯಾರಿಗೂ ಹೇಳಲಾಗದೇ ಇಡೀ ಪ್ರಪಂಚದಲ್ಲಿ ತಾನು ಒಬ್ಬಂಟಿ ಅಂದುಕೊಂಡು ತಾಯಿಯನ್ನು ಹುಡುಕಿಕೊಂಡು ಹೋಗಿ ಅತ್ತಿರಬಹುದೇ? ತಾಯಿಯೊಬ್ಬಳ ಬಿಟ್ಟರೆ ಇಡೀ ಪ್ರಪಂಚದಲ್ಲಿ ತನಗೆ ಯಾರೂ ಇಲ್ಲ ಅನ್ನಿಸಿರಬಹುದೇ? ಪ್ರೀತಿ, ಪ್ರೇಮಕ್ಕೆ ಹಂಬಲಿಸಿ, ಹಂಬಲಿಸಿ ಕೊರಗಿ ಅದು ಗಂಗಾನಲ್ಲಿ ಸಿಕ್ಕಾಗ, ಸಿಕ್ಕಾಗಿದ್ದ ಬೆಚ್ಚನೆಯ ಭಾವನೆಗಳು ಎಲ್ಲಿ ಹರಿದು ಹಂಚಿ ಹೋದವು ಎಂದು ಹೆದರಿ ಕಂಗಾಲಾಗಿರಬಹುದೇ? ಬದುಕಿನಲ್ಲಿ ಇಷ್ಟೊಂದು ನೋವು/ನಿರಾಸೆ ತಂದೊಡ್ಡುವ ಜೊತೆಗೆ ಮರೆಯಲಾರದ ದುರಂತ ತಂದೊಡ್ಡುವ ಬದುಕಿಗೆ, ಪ್ರೇಮಕ್ಕೆ ತನ್ನನ್ನು ಒಡ್ಡಿಕೊಳ್ಳುವ ಅಗತ್ಯವಾದರೂ

ಇತ್ತೆ? ಎಂದು ಯಾವ ಬಂಡೆಗೆ ತಲೆ ಚಚ್ಚಿಕೊಂಡಿರಬಹುದು? ಇಷ್ಟೆಲ್ಲ ನೋವುಗಳ ನಡುವೆ ಗಂಗಾಳ ಬದುಕು ಎಲ್ಲಿ ಛಿದ್ರ ಛಿದ್ರವಾಗಿ ಹೋಗುವುದೋ ಎಂದು ಹೆದರಿ ಎಲ್ಲಿಯೋ ದೇವಸ್ಥಾನದಲ್ಲಿ ಕುಳಿತು, 'ದೇವರೇ, ನನ್ನನ್ನು ಬಲಿ ತೆಗೆದುಕೊಂಡರೂ ಸರಿ, ಗಂಗಾಳ ಬದುಕು ಛಿದ್ರವಾಗದಂತೆ ಮಾಡು, ಆಕೆಯ ಬದುಕಿನ ಸುಂದರತೆ ಮಾಯವಾಗದಿರಲಿ, ನನ್ನನ್ನು ಮುದ್ದಿಸಿದ ಮಾತ್ರಕ್ಕೆ ಆಕೆಯ ಜೀವನ ನರಕವಾಗದಿರಲಿ, ಆಕೆ ನನಗೆ ಬದುಕಿನ ಬಗ್ಗೆ ಚೈತನ್ಯ ಕೊಟ್ಟಿದ್ದು ಬರಿಯ ಮುದ್ದಿಸುವಿಕೆಯಲ್ಲಿ ಅಲ್ಲ, ಕಾಯುವಿಕೆಯ, ವಿಶ್ವಾಸದ ಮಾತುಗಳ, ತಿಂದ್ಯಾ, ಉಂಡ್ಯಾ ಎನ್ನುವ ತಾಯಿ ಹೃದಯದ ಪ್ರೀತಿಯಲ್ಲಿ, ಒಂಟಿಯಾಗಿದೀನಿ ಅಂತ ಏನು ಕೊರಗುತ್ತೀಯ ಎದ್ದೇಳು ಎನ್ನುವ ಅಕ್ಕನ ರೀತಿಯ ಗದರುವಿಕೆಯಲ್ಲಿ, ವ್ಯಕ್ತಿತ್ವದ ಒಳಗೆಲ್ಲೋ ಅಡಗಿದ ಕೀಳರಿಮೆ ಓಡಿಸಲು ಪ್ರಿಯತಮೆಯಾಗಿ ಮುದ್ದಿಸಿ ಹೀಗೇ ಗಂಗಾ ಏನೇನೋ ಆಗಿ ತನ್ನ ಜೀವನದಲ್ಲಿ ಭರವಸೆ ಇತ್ತಿದ್ದಾಳೆ. ಆಕೆ ನನ್ನೊಳಗೆ, ನನ್ನ ವ್ಯಕ್ತಿತ್ವದೊಳಗೆ ತೊಡಗಿಸಲು ಪ್ರಯತ್ನಪಟ್ಟಿದ್ದು ಬರಿಯ ಪ್ರಿಯತಮೆಯ ಮುಖವನ್ನಲ್ಲ, ದೇವರೇ ಕ್ಷಮಿಸು, ಈಗ ಇಡಿಯ ಪ್ರಪಂಚಕ್ಕೆ ಗೊತ್ತಿರುವ ಸತ್ಯ ಆಕೆ ನನ್ನನ್ನು ಮುದ್ದಿಸಿದಳು ಎಂಬುದು ಮಾತ್ರ. ದೇವರೇ ಅದು ತಪ್ಪಾಗಿದ್ದರೆ ಕ್ಷಮಿಸು. ಗಂಗಾಳ ಬಾಳು ಛಿದ್ರವಾಗದಿರಲಿ, ಗಂಗಾ ಒಡೆದು ಚೂರಾಗದಿರಲಿ. ಆಕೆ ಹಾಗೂ ಅವರ ನಡುವೆ ಸಂಶಯದ ಗಾಳಿ ನಂದಿ ಹೋಗಲಿ, ಮಗು ಮಿತಾಳಿಗೆ ತಂದೆ ಮತ್ತು ತಾಯಿಯ ಪ್ರೀತಿ ದೂರಾಗದಿರಲಿ, ದೇವರೇ ನನ್ನನ್ನೇ ಬಲಿಯಾಗಿ ಕೇಳು. ನನ್ನಲ್ಲಿ ಭರವಸೆ ತುಂಬಿ ಪ್ರೀತಿ, ವಿಶ್ವಾಸ, ಪ್ರೇಮ ಕಲಿಸಿದ ಗೆಳತಿಯ ಬಾಳು ಇಡಿಯಾಗಿರಲಿ" ಎಂದು ಹೇಳುತ್ತಿರಬಹುದೇ?

ಇದೆಲ್ಲ ಬರೆಯುವಾಗ ಗಂಗಾ ಜೋರಾಗಿಯೇ ಅಳತೊಡಗಿದಳು. ಮಗು ಮಿತಾ ಹೋಂ ವರ್ಕ್ ಮಾಡುವುದನ್ನು ಬಿಟ್ಟು ತಾಯಿಯನ್ನೇ ನೋಡತೊಡಗಿದಳು. ತಾಯಿ ಅಳುತ್ತಿದ್ದಾಳೆ. ಜೋರಾಗಿ ಬಿಕ್ಕಳಿಸುತ್ತಿದ್ದಾಳೆ. ಬಾಗಿಲು ಭದ್ರಪಡಿಸಿಕೊಂಡು ಅಳುತ್ತಿದ್ದಾಳೆ. ಮಿತಾ ಬರೆಯುವುದನ್ನು ನಿಲ್ಲಿಸಿ ತಾಯಿಯ ಹತ್ತಿರ ಬಂದಳು. ತಾಯಿಯ ಕಣ್ಣೀರು ಒರೆಸಿ, 'ಅಮ್ಮಾ ಅಳಬೇಡ' ಎಂದಳು. 'ನಿಂಗೆ ಕುಡಿಯೋಕೆ ನೀರು ತರ್ತೀನಿ' ಅಂತ ಕುಡಿಯೋಕೆ ನೀರು ತಂದಳು. 'ಬೇಡ' ಅಂದಾಗ 'ಕುಡಿ, ಕುಡಿ' ಎಂದು ಒತ್ತಾಯ ಮಾಡಿ ಬಲವಂತದಿಂದ ತುಟಿಗೆ ತಂದಳು. ಮಗಳ ಕೈಯಲ್ಲಿ ತಣ್ಣೀರು ತಣ್ಣಗೆ ಎನಿಸಿತು. ಹೃದಯದಲ್ಲಿ ಉರಿಯುತ್ತಿದ್ದ ಉರಿ ಸ್ವಲ್ಪ ಶಾಂತವಾದಂತೆ ಅನ್ನಿಸಿತು. ಕಣ್ಣೀರು ಬರೆಯುತ್ತಿದ್ದ ಹಾಳೆಗಳ ಮೇಲೆ ಬಿದ್ದು ಅಕ್ಷರಗಳು ಒಂದೊಂದಾಗಿ ಅಳಿಸಿ ಹೋಗತೊಡಗಿದಾಗ ಗಂಗಾ ಬರೆಯುವುದನ್ನು ನಿಲ್ಲಿಸಿದಳು. ಕಣ್ಣೀರು ಅಕ್ಷರಗಳ ಸುಲಭವಾಗಿ ಅಳಿಸುತ್ತಿದೆ. ಆದರೆ ಗಂಡ ರಮೇಶನ ಸಂಶಯದ ಭಾವನೆಗಳನ್ನ ಅಳಿಸಿ ಹಾಕುವುದು ಯಾವುದು? ಏಳೆಂಟು ವರ್ಷಗಳಲ್ಲಿ ತಮ್ಮಿಬ್ಬರ ಮಧ್ಯೆ ಇದ್ದ ವಿಶ್ವಾಸವನ್ನು ಮತ್ತೆ ಕಟ್ಟುವುದು ಯಾವುದು?

ಗಂಗಾ ಆ ದಿನ ಹೊಸ ಸೆಲ್ವರ್ ಕಮೀಜ್ ಧರಿಸಿದ್ದಳು. ಗಂಡ ಪ್ರೀತಿಯಿಂದ ತಂದದ್ದು. ಸಣ್ಣ ಸಣ್ಣ ಮಾತಿಗೆ ನೊಂದು ಕರಗುವ ಗಂಡನಿಗೆ ಗಂಗಾ ಒತ್ತಾಯಪೂರ್ವಕವಾಗಿ ಒಂದು ಜೊತೆ ಬಟ್ಟೆ ಕೊಡಿಸಿದ್ದಳು. ಅದು ಆತನ ಮನಸ್ಸಿನಲ್ಲಿ ನಿಂತು ಹೋಗಿತ್ತು. ಗಂಗಾ ಮನೆ ಕಟ್ಟಿಸುವಾಗ ಆಕೆ ಮಾತ್ರವಲ್ಲ, ಆಕೆಯ ಗಂಡನನ್ನೂ ಹೊಟ್ಟೆ ಕಟ್ಟುವಂತೆ ಮಾಡಿದ್ದಳು, ಬಟ್ಟೆ ತೊಡದಂತೆ ಮಾಡಿದ್ದಳು. ಮನೆಯ ಬಗ್ಗೆ ಮಾತನಾಡುವಾಗಲೆಲ್ಲಾ ಗಂಡ ಪ್ರೀತಿಯಿಂದ ಹೇಳುತ್ತಾನೆ, 'ಗಂಗಾನಿಂದಲೇ ನಾವು ಮನೆ ಕಟ್ಟಿದ್ದು. ಇದರ ಎಲ್ಲಾ ರಿಸ್ಕ್ ತೆಗೆದುಕೊಂಡವಳು ಅವಳೇ'. ಗಂಡನ ಪ್ರೀತಿಯನ್ನೆಲ್ಲ ಗಂಗಾ ಆ ಮಾತಿನಲ್ಲಿ ಕಂಡಿದ್ದಳು. 'ಈ ಮನೆಯಲ್ಲಿ ನಾನು ಏನನ್ನೂ ಕೇಳಲ್ವಮ್ಮ, ಇದು ನಿನಗೆ, ನಿನ್ನ

ಮಗಳಿಗೆ, ಅಂದರೆ ನನ್ನ ಮಗಳಿಗೆ ಮಾತ್ರ ದಕ್ಕಬೇಕು'. ಹೀಗೆ ಗಂಡ ಪ್ರೀತಿಯಿಂದ ಮಾತನಾಡಿದಾಗಲೆಲ್ಲ ಅವನ ಒಳ್ಳೆಯ ಮನಸ್ಸನ್ನು ಗಂಗಾ ಗುರುತಿಸಿದ್ದಳು. ಚಿಕ್ಕ ಮಾತೆಂದರೆ, ಮನಸ್ಸಿಗೆ ಸ್ವಲ್ಪ ನೋವು ಮಾಡಿದರೆ ಅಷ್ಟು ದೂರ ಕೋಪ ಮಾಡಿಕೊಂಡು ಹೋಗಲಾರ. ಹೆಜ್ಜೆ ಕಿತ್ತಿಡಲಾರ. ಕೆಲಸಕ್ಕೆ ಹೋಗುವುದನ್ನು ಬಿಟ್ಟು ಮನೆಗೆ ಓಡೋಡಿ ಬರುತ್ತಾನೆ. 'ಗಂಗಾ ನನಗೆ ಕೆಲಸಕ್ಕೆ ಹೋಗೋಕೆ ಆಗಲ್ಲ, ಬಾ, ಒಂದು ಸಿನಿಮಾಕ್ಕೆ ಹೋಗೋಣ, ಪುಟ್ಟಿ ಹೀಗೆ ನನ್ನ ಮನಸ್ಸನ್ನು ಗಾಯ ಮಾಡಿದರೆ ನಾನು ಕೆಲಸಕ್ಕೆ ಹೋಗ್ತಿನಾ? ಹೋದ್ರೂ ನಾನು ಕೆಲಸ ಮಾಡ್ತೀನಾ? ಬಾ ಪುಟ್ಟಿ' - ಎಂದು ಮುದ್ದಿಸಿ ಮನಸ್ಸಿನ ನೋವನ್ನೆಲ್ಲ ಹೋಗಿಸಿ ಬಿಡುತ್ತಾನೆ. ಇಂತಹ ಸಂದರ್ಭದಲ್ಲಿಯೇ ಬಟ್ಟೆಗಳ ಬಗ್ಗೆ ನೋವು ಮಾಡಿಕೊಂಡು ಮಾತನಾಡಿದ ಗಂಡನಿಗೆ ಗಂಗಾ ಒತ್ತಾಯಪೂರ್ವಕವಾಗಿ ಬಟ್ಟೆ ತೆಗೆದುಕೊಳ್ಳುವಂತೆ ಮಾಡಿದ್ದಳು. ಅದು ಆತನ ಮನಸ್ಸಿನಲ್ಲಿ ಹೊಕ್ಕು ಹೋಗಿತ್ತು. ಗಂಗಾಳಿಗೂ ಬಟ್ಟೆಯಿಲ್ಲ, ಆದ್ರೂ ಪ್ರೀತಿಯಿಂದ ತನ್ನನ್ನು ಗಮನಿಸುತ್ತಾಳೆ. ಇದೆಲ್ಲ ಅನ್ನಿಸಿದಾಗ ಆತ ಹೈದರಾಬಾದಿಗೆ ಹೋದಾಗ ಹೇಗಾದರೂ ಗಂಗಾಳಿಗೆ ಬಟ್ಟೆ ಒಯ್ಯಬೇಕು. ಒಂದು ನೂರು ರೂಪಾಯಿ ಉಳಿಸಿಯಾದರೂ ಒಯ್ಯಬೇಕು. ಆಕೆ ಖುಷಿಯಾಗುತ್ತಾಳೆ. ಆ ಖುಷಿಯಲ್ಲಿ ಸಿಗುವ ಸೌಂದರ್ಯ ಎಲ್ಲಿ ಸಿಕ್ಕುತ್ತೆ? ಹೀಗೆ ಸೂಕ್ಷ್ಮ ಮನಸ್ಸಿನ ಗಂಡ ಆಕೆಗಾಗಿ ಸಲ್ವಾರ್ ಕಮೀಜ್ ತಂದದ್ದು. ಆಕೆ ಇಷ್ಟಪಡುವ ಪುಸ್ತಕ 'A Room of one's own' ಪ್ರೀತಿಯಿಂದ ತಂದುಕೊಟ್ಟದ್ದು.

ಏಳೆಂಟು ವರುಷದಲ್ಲಿ ಗಂಡ ಪ್ರತಿಫಲ ಬಯಸದೇ ಪ್ರೀತಿಸಿದುದರ ಅರಿವು ಗಂಗಾಳಿಗಿದೆ. ಹಾಗಾಗಿ ಆತ ರಾತ್ರಿ ಬರದೇ ಇದ್ದಾಗ ಕಣ್ಣಲ್ಲಿ ಎಣ್ಣೆ ಬಿಟ್ಟುಕೊಂಡು ಕಾದಿದ್ದಳು. ಎಲ್ಲಿ ಯಾವ ಭಯಂಕರ ವಾಹನ ಗಂಡನ ಬಲಿ ತೆಗೆದುಕೊಂಡು ಸಾಯಿಸಿಬಿಟ್ಟಿತೋ? ಯಾವ ಭಯಂಕರ ಮೂಲೆಯಲ್ಲಿ ಸಾವು ಮೆಟ್ಟಿಲೇರಿ ಬಂದು ತನ್ನನ್ನು ಒಂಟಿ ಮಾಡಿ ಬಿಡುತ್ತದೋ ಎಂದು ಕಾದು ಕುಳಿತು ಆತ ಬಂದಾಗ, 'ಏನು ನಿನಗೆ? ನನ್ನ tension ಅರ್ಥ ಆಗುತ್ತಾ? ನಿನಗೋಸ್ಕರ ನಾನು ಹೇಗೆ ನನ್ನ ಹೃದಯವನ್ನು ಕೈಯಲ್ಲಿ ಹಿಡಿದುಕೊಂಡು ಕೂರಬೇಕು, ನೋಡು'. ಆಗೆಲ್ಲ ಗಂಡ ನಕ್ಕು ಉಡಾಫೆಯಿಂದ ಮಾತನಾಡಿದವನಲ್ಲ. 'Sorry Ganga, I know you will be waiting, please putti, sorry' ಎಂದು ಸಾವಿರಾರು ಬಾರಿ ಹೇಳುತ್ತಾ, 'ನೀನು ಬೆಳಿಗ್ಗೆ ನಿಧಾನಕ್ಕೆ ಏಳು, ನಾನು ನೀರು ಕಾಯಿಸಿ ಇಟ್ಟಿರ್ತಿನಿ, ಇಡ್ಲೀನಾ ತಿಂಡಿ, ಇಡ್ಲಿ ನಾನೇ ಮಾಡ್ತೀನಿ, ನೀನು ಸ್ನಾನ ಮಾಡಿ, Fresh ಆಗಿ ಕಾಲೇಜಿಗೆ ಹೋಗಮ್ಮ', ಎನ್ನುತ್ತಾ 'ಈಗ ಕ್ಷಮಿಸಿಬಿಡು' - ಎನ್ನುತ್ತಾನೆ. ಗಂಡ ಏಳೆಂಟು ವರುಷದಲ್ಲಿ ಉಡಾಫೆಯಿಂದ ಮಾತನಾಡಿದ್ದಾಗಲೀ, ನೋಯಿಸಿದ್ದಾಗಲೀ ಗಂಗಾಗೆ ಜ್ಞಾಪಕ ಇಲ್ಲ. 'ನನ್ನ ಹೆಂಡ್ತಿ ಫೆಮಿನಿಸ್ಟ್, ಹಾಗಾಗಿ ನಾನು ಹೆಂಗಸರ ಬಗ್ಗೆ ಸೂಕ್ಷ್ಮವಾಗಿರೋದನ್ನ ಅವಳಿಂದ ಕಲ್ತಿದೀನಿ' ಅಂತ ಅವನ ಮಹಿಳಾ ಸಹೋದ್ಯೋಗಿಗಳೊಡನೆ ಸಹ ಸೂಕ್ಷ್ಮವಾಗಿ ವರ್ತಿಸಿದ್ದು ಆಕೆಗೆ ಗೊತ್ತು. ಬಹಳ ಸಂದರ್ಭದಲ್ಲಿ ರಮೇಶನ ಗುಡ್ ಸೆಲ್ಫ್ ಕೆಲಸ ಮಾಡುವುದು ಗಂಗಾಗೆ ಅರಿವಿದೆ. ಆತನಲ್ಲಿನ ಬ್ಯಾಡ್ ಸೆಲ್ಫ್ ಕೆಲಸ ಮಾಡುವಾಗ, ಕೆಟ್ಟ ಯೋಚನೆಗಳು ಮನಸ್ಸಿಗೆ ಬಂದಾಗ ಆತ ಒಂಟಿಯಾಗಿರುತ್ತಾನೆ. ಹೃದಯಕ್ಕೆ ಹತ್ತಾರು ಪ್ರಶ್ನೆ ಹಾಕಿಕೊಳ್ಳುತ್ತಾನೆ. ಒಂಟಿಯಾಗಿ ಸುತ್ತಿಕೊಂಡು ಬಂದು ತಾನೆಲ್ಲಿ ತಪ್ಪು ಮಾಡಿದೆ ಎಂದು ತನ್ನನ್ನೇ ತಡಕಾಡಿಕೊಳ್ಳುತ್ತಾನೆ. ಇಂತಹ ವ್ಯಕ್ತಿತ್ವದಿಂದಾಗಿಯೇ ಸಾಮಾನ್ಯ ಪರಿಸರದಲ್ಲಿ ಸಾಮಾನ್ಯ ಹುಡುಗನಾಗಿ ಬೆಳೆದ ಈತ ಬಹಳ ಸೂಕ್ಷ್ಮ ಮನಸ್ಸಿನವನು ಎಂದು ಗಂಗಾಗೆ ಅನಿಸಿತ್ತು. ಅಕ್ಕ-ತಂಗಿಯರ ಜೊತೆ ಒಡನಾಟ, ಅಮ್ಮನ-ಬೆಚ್ಚನೆಯ ಹೃದಯ, ಅಪ್ಪನ ಕಾಠಿಣ್ಯತೆಯಲ್ಲಿ

ಸಂರಕ್ಷಿತವಾಗಿ ಬೆಳೆದ ಈತನ ಮನಸ್ಸು ಬಹುಭಾಗ ಹೆಣ್ಣಿನ ಮನಸ್ಸಿನ ಸೂಕ್ಷ್ಮತೆಗಳನ್ನು ಒಳಗೊಂಡಿತ್ತು ಎಂಬ ಅರಿವು ಗಂಗಾಳಿಗಿತ್ತು. ಹೀಗಾಗಿ ಗಂಗಾಳಿಗೆ ಈತನು ಪ್ರೀತಿಯಲ್ಲಿ ತಂದೆಯಾಗಿ ಕೇರ್ ಮಾಡಿದ ಹಾಗೆ, ಮಗುವಿನ ಹಾಗೆ ಕೇರ್ ಮಾಡಿದ ಹಾಗೆ ಎನಿಸಿತ್ತು. ಹುಡುಕಿದರೂ ಈತ ಮನಸ್ಸು ನೋಯಿಸಿ ಮಾತನಾಡಿದ ಘಟನೆಗಳು ವಿರಳ. ಕೂಗಿ, ರೇಗಿ ಮಾತನಾಡಿದ ದಿನಗಳು ವಿರಳ. ಗಂಗಾ ಅದೂ ಇದೂ ಎಂದು ಸಾಹಿತ್ಯದ ಅಥವಾ ಇನ್ನ್ಯಾವುದೋ ಮಹಿಳಾ ಸಮಸ್ಯೆಯ ಕುರಿತು ಚರ್ಚೆಗೋ, ಸೆಮಿನಾರ್‌ಗೋ ಹೋದಾಗ ಈತ ಪ್ರೀತಿಯಿಂದ ಮನೆಯಲ್ಲಿದ್ದುಕೊಂಡು ಮಗು ಮಿತಾಳನ್ನು ನೋಡಿಕೊಂಡದ್ದುಂಟು. ಬೆಳಿಗ್ಗೆ ಆಕೆಯ ಎಬ್ಬಿಸಿ, ಟೇಪ್ ರೆಕಾರ್ಡರ್ ಹಾಡು ಕೇಳಿಸುತ್ತಾ, ನಕ್ಕು ನಲಿದು ಡ್ಯಾನ್ಸ್ ಮಾಡುತ್ತಾ ಹಾಡಿ ಕುಣಿಯುತ್ತಿದ್ದುದುಂಟು.

ಹೀಗಿರುವ ಗಂಗಾ-ರಮೇಶರ ಸಂಬಂಧದಲ್ಲಿ ಸಂಶಯದ ತರಗೆಲೆ ಬೀಸಿದ್ದು ಹೇಗೆ? ಕಣ್ಣೀರಿಗೆ ಕಣ್ಣೀರಾಗಿ ಕರಗುವ ಗಂಡ ರಮೇಶನ ಮನಸ್ಸು ಕಲ್ಲಾದದ್ದು ಹೇಗೆ? ಗಂಗಾಳ ಮನಸ್ಸಿಗೆ ಚಿಕ್ಕ ನೋವಾದರೂ ಅತ್ತು ಬಿಡುವ ರಮೇಶನ ಒಳಗಿನ ಹೆಣ್ಣು ಮನಸ್ಸು ಇದ್ದಕ್ಕಿದ್ದ ಹಾಗೆ Malenessನ್ನು ಪಡೆದುಕೊಂಡದ್ದು ಹೇಗೆ? ಗಂಗಾಳನ್ನು ತನ್ನ ಜೀವದೊಳಗೆ ಜೀವವಾಗಿ ಬೆರೆಸಿಕೊಂಡಿದ್ದ ರಮೇಶನಿಗೆ ಗಂಗಾ ತನ್ನಿಂದ ಬೇರೆಯಾದ ಒಂದು ವ್ಯಕ್ತಿತ್ವ ಅಂತ ಭ್ರಮಿಸಬೇಕಾದ ಸ್ಥಿತಿ ಹೇಗೆ ಬಂತು?

ಗಂಗಾ ಅಂದುಕೊಳ್ಳುತ್ತಾಳೆ, 'What is that balance that we all talk about?' ತಾನು balanced person ಅಂದುಕೊಂಡದ್ದು ಎಷ್ಟು ತಪ್ಪಾಯಿತು? ತನ್ನ - ರಮೇಶನ ಮಧ್ಯದ ಸಂಬಂಧದಲ್ಲಿನ balanceನ್ನು imbalance ಮಾಡಿದ್ದು ಯಾವುದು? ತಾನು secured ಅಂದುಕೊಂಡು ಬೀಗಿದ್ದೆಲ್ಲ ಒಂದು ಭ್ರಮೆಯೇ? ಗಂಗಾಳಿಗೆ ಅನಿಸುತ್ತದೆ, ನಾವು ಯಾವುದು balanced, secured position ಅಂತ ಅಂದುಕೊಂಡಿರುತ್ತೇವೆಯೋ ಅಂತಹವುಗಳು ಯಾವುದೋ ಒಂದು ಸೂಕ್ಷ್ಮ ಸನ್ನಿವೇಶದಲ್ಲಿ ಒರೆಗೆ ಹಚ್ಚಿ ನೋಡಿದಾಗ ನಮ್ಮ ಅಂತರಂಗಗಳು ನಮಗೆ ನಿಜವಾದ ಉತ್ತರವನ್ನು ಕೊಡಲು ಸಮರ್ಥವಾಗಿರುವುದಿಲ್ಲವೋ ಏನೋ?

* * * * *

ಇರುಳ ಕಾರ್ಗತ್ತಲಿನಲಿ
ಬೋರೆನ್ನುವ ಮಳೆ ಗಾಳಿಯಲಿ
ಬೆಚ್ಚಗೆ ಕುಳಿತ ಹೆಣ್ಣಿಗೆ
ಕಳೆದ ದಿನಗಳ ನೆನಪು.
ಕೈ ತುಂಬ ಸಂಬಳ
ಸಣ್ಣ ಮಾತಿಗೆ ನೊಂದು ಕರಗುವ ಗಂಡ
ಮನದಾಸೆಗೆ ಮುತ್ತಿಕ್ಕುವ ಮುದ್ದು ಮಗಳ
ನಡುವೆಯೇ
ಅದೇನೋ ಕಾಡುತ್ತದೆ
ಮನಸ್ಸಿನ ಒಂಟಿತನ
ದೆವ್ವ ಹೊಕ್ಕ ಮನೆಯಂತೆ ಬಿಕೋ ಎನ್ನುತ್ತದೆ.

ಬೇಕೆನಿಸಿದ್ದು ಕೈಯಲ್ಲಿದ್ದರೂ
ಕಾಡುವ ಸಂಗತಿಗಳು ನೂರಾರು!

ಹೀಗೆ ಗಂಗಾಗೆ ಒಂಟಿತನ ಕಾಡಿದ ದಿನಗಳವು. ಕೆಲಸ, ಮಗು, ಮನೆ. ಯಾಂತ್ರಿಕ ಜೀವನ. ದಿನ ಕಳೆದ ಹಾಗೆ ಮೂವತ್ತೆರಡರ ವಯಸ್ಸಿಗಾಗಲೇ ವಯಸ್ಸಾದ ಹಾಗೆ ಭಾವನೆ ಬಂದು ಬರಿಯ ಮುಪ್ಪು, ಸಾವುಗಳನ್ನು ಎದುರು ನೋಡುತ್ತಾ ಕೂರುವುದಾಗಿ ಬಿಡುತ್ತದೇನೋ ಎನ್ನಿಸತೊಡಗಿದೆ. ಕೆಲಸದಲ್ಲಿ ಹೆಚ್ಚು ಮಮತೆ ಬೆಳೆಸಿಕೊಂಡ ರಮೇಶನಿಗೆ ಗಂಗಾಳ ಬದುಕಿನ ಒಂಟಿತನ, ಯಾಂತ್ರಿಕತೆ ಅರ್ಥವಾದರೂ ಯಾವ ರೀತಿಯ ಬದಲಾವಣೆ ತರುವುದೆಂದು ಯೋಚಿಸಿ ಸುಮ್ಮನಾಗಿದ್ದ. ಆಧುನಿಕ ಬದುಕು ಎಷ್ಟೊಂದು ಕ್ರೂರ ಎಂದು ಗಂಗಾ ಆಲೋಚಿಸುತ್ತಾಳೆ. ಎಲ್ಲಿಯೂ ಆಯ್ಕೆಗಳಿರುವುದಿಲ್ಲ. ಹೊಟ್ಟೆಪಾಡಿಗೆ ಕೆಲಸ ಬೇಕೆಂದರೆ ಕೆಲಸದ ಎಲ್ಲಾ ವಿರೋಧಾಭಾಸ ಒಪ್ಪಿಕೊಂಡು ಕಮಿಟ್ ಮಾಡಿಕೊಳ್ಳಬೇಕು. ಕೆಲಸದ ಬಗ್ಗೆ ಹೆಚ್ಚು ಮಮತೆ, ಪ್ರೀತಿ ಬೆಳೆಸಿಕೊಂಡ ರಮೇಶ ಕೆಲಸಕ್ಕೆ ಕಮಿಟ್ ಆಗುವುದಕ್ಕಾಗಿ ಮನೆಯಿಂದ ಹೊರಗೆ ಹೆಚ್ಚಾಗಿ ದಿನಗಳನ್ನು ಕಳೆಯುತ್ತಾ ಹೋದ ಹಾಗೆ ಗಂಗಾಳಿಗೆ ಬದುಕಿನಲ್ಲಿ ಒಂಟಿತನ, ಯಾಂತ್ರಿಕತೆ ಇನ್ನಷ್ಟು ಹೆಚ್ಚಾದಂತೆ ಭಾಸವಾಗತೊಡಗಿತ್ತು. ಬೆಳಿಗ್ಗೆ 5.30ರಿಂದ ರಾತ್ರಿ 8ಘಂಟೆಯವರೆಗೆ ಒಂದು ರೀತಿಯ ಜಡತ್ವದ ಕೆಲಸಗಳು. ಬಿಡುವಲ್ಲಿ ಗಂಗಾ ಹಾಗೂ ಆಕೆಯ ಗೆಳತಿಯರು ತರುತ್ತಿದ್ದ ಮಹಿಳಾ ಪತ್ರಿಕೆಯೊಂದಕ್ಕೆ ಹಣ, ಮುಖ್ಯವಾಗಿ ಲೇಖನವನ್ನು ಹೊಂದಿಸುವ ಜಂಜಾಟದ ಕೆಲಸಗಳು. ಅದೂ ಅರ್ಥಪೂರ್ಣ ಎಂದೇ ಗಂಗಾಗೆ ಅನಿಸಿದ್ದು. ಆದಾಗ್ಯೂ ಒರಗಿ ಕುಳಿತುಕೊಂಡು ತಮ್ಮಷ್ಟಕ್ಕೆ ತಾವೇ ಯೋಚಿಸಲಾಗದ ಬದುಕಿನ ಓಟ, ನಾಗಾಲೋಟ ಆಕೆಯ ಬದುಕಿನಲ್ಲಿ ನಿರಾಸೆ, ನಿರುದ್ವೇಗಗಳನ್ನು ಹುಟ್ಟು ಹಾಕುತ್ತಾ ಹೋಯಿತು. ಮನಸ್ಸಿನಾಳದ್ದನ್ನು ಏನೋ ಬರೆಯಲು ಕುಳಿತರೆ ಬದುಕಿನ ಜಡತ್ವದ ಹಾಗೆ ಭಾವನೆಗಳೂ ಜಡಗಟ್ಟಿ ಹೋಗಿವೆಯೇನೋ ಎಂಬ ದಿಗಿಲು. ಬರವಣಿಗೆಯ ಬಗ್ಗೆ ಬಹಳ ಆಸೆ ಇಟ್ಟುಕೊಂಡ ಗಂಗಾಗ, ಸಂಸಾರದ ಬಂಧನಕ್ಕಿಂತ ಮುಂಚೆ ಭಾವನೆಗಳ ತಾಕಲಾಟದಲ್ಲಿ ಬರೆಯುವ ಶಕ್ತಿ ಇದ್ದ ಗಂಗಾಗೆ ಈಗ ಕುಳಿತರೆ ಪೆನ್ನು ಓಡುವುದಿಲ್ಲ. ಅಕ್ಷರಗಳು ಹೃದಯದಿಂದ ಮೂಡುವುದಿಲ್ಲ ಎನಿಸಿದಾಗ ಒಂದು ತರಹದ ನಿರಾಸೆಯೂ ಆಗತೊಡಗಿತ್ತು. ಮಗಳು ಮಿತಾಳನ್ನು ಬೆಳೆಸುವುದಕ್ಕೆ ಏನಿಲ್ಲಾಂದರೂ ಆಕೆಯ ಬದುಕಿನ ಐದು ವರ್ಷಗಳು ಕಳೆದಿವೆ. ಈಗ ಮಿತ ತನ್ನ ವಲಯವೊಂದನ್ನು ಸೃಷ್ಟಿಸಿಕೊಳ್ಳತೊಡಗಿದ್ದಾಳೆ. ಗಂಗಾಗೆ ಅಂಟಿಕೊಂಡರೂ ಆಕೆಯದೇ ಆದ ವ್ಯಕ್ತಿತ್ವವೊಂದು ಮೂಡತೊಡಗಿದೆ. ಎಳೆಯ ಮಗುವಿನ ತರಹ ಗಂಗಾಳಿಗೇ ಅಂಟಿಕೊಂಡೇನೂ ಇರುವುದಿಲ್ಲ. ಆಕೆಯ ಶಾಲೆ, ಫ್ರೆಂಡ್ಸ್, ಹೋಂ ವರ್ಕ್, ಆಟ ಇತ್ಯಾದಿಗಳಲ್ಲಿ ಆಕೆಯ ಬದುಕಿಗೆ ಆಕೆಯದೇ ಒಂದು ಚಿತ್ರ ಕೊಟ್ಟುಕೊಂಡಿದ್ದಾಳೆ. ಮಗುವಿಗೆ ಅದರದೇ ವ್ಯಕ್ತಿತ್ವ ಮೂಡತೊಡಗಿದಾಗ ಆಕೆಯೇ ಒಂದು Unique Personality ಎಂದು ಗಂಗಾಗೆ ಅನ್ನಿಸತೊಡಗಿದೆ. ಆಕೆಯ ಪಾಲಿನ ಕೆಲಸಗಳನ್ನು ಕರ್ತವ್ಯ, ಪ್ರೀತಿಯಿಂದ ಮಾಡುತ್ತಾಳೆ. ಆದರೆ ಆಕೆಯ ಬದುಕನ್ನು ರೂಪಿಸುವುದೇ ಗಂಗಾಳ ಬದುಕಿನ ಆಶಯವಾಗಿ ಉಳಿದಿಲ್ಲ. ಓದಿಸುವ, ತಿನ್ನಿಸುವ, ಊಟ, ಸ್ನಾನ ಇತ್ಯಾದಿ ಮಗುವಿನ ಕೆಲಸಗಳನ್ನು ಪ್ರೀತಿಯಿಂದ, ಕೆಲವು ಸಲ ಕರ್ತವ್ಯದಿಂದ ಮಾಡಿದ್ದಾಳೆ ಅಷ್ಟೇ. ಯಾರದೇ ಬದುಕನ್ನು ಯಾರೂ ನಿರ್ಧರಿಸಲಾರರು ಎಂಬ ನಿಷ್ಠುರ ಸತ್ಯದ ಅರಿವಿದ್ದ ಗಂಗಾ ಮಗು ಮಿತ ಬೆಳೆಯುತ್ತ ಹೋದ ಹಾಗೆ ಅವಳ ಸ್ವಾತಂತ್ರ್ಯ, ಸ್ವಂತಿಕೆಯನ್ನು ಗೌರವಿಸಬೇಕೆಂಬುದನ್ನು ಪ್ರಜ್ಞಾಪೂರ್ವಕವಾಗಿ ಪಾಲಿಸತೊಡಗಿದ್ದಳು. ಮಗು ತನಗೆ ಸಮಾಧಾನ ಮಾಡಿದ ಸಂದರ್ಭದಲ್ಲಿ ಆಕೆ ಎಳೆಯ ಮಗು ಎಂದು ಗಂಗಾಗೆ ಅನ್ನಿಸುವುದೇ ಇಲ್ಲ.

ಬರಿಯ ತನ್ನ ಜೀವದ ಕುಡಿ ಮಾತ್ರ ಎನ್ನಿಸುವುದಿಲ್ಲ. ಬದಲು ತನಗೆ ಒಬ್ಬ ಪುಟಾಣಿ ಗೆಳತಿಯ ತರಹ ಅನ್ನಿಸುತ್ತಾಳೆ. ಇಂತಹ ಸಂದರ್ಭದಲ್ಲಿ ಗಂಗಾ ಮೈ ಮರೆತು ಚಿಕ್ಕ ಹುಡುಗಿಯಂತೆ ಮಗು ಮಿತಾಳ ಜೊತೆ ಆಡಿದ್ದೂ ಉಂಟು, ಕುಣಿದದ್ದೂ ಉಂಟು. ಆದರೂ ಅವೆಲ್ಲ ಆಕೆಯ ಜೀವನದ ಕೆಲವು ಸಂತೋಷದ ಕ್ಷಣಗಳಷ್ಟೇ. ಕಾಲೇಜಿನಲ್ಲಿ ಪಾಠ ಮಾಡಿ ಉಸ್ಸೆಂದು ಮನೆಗೆ ಬಂದು ಪ್ಲ್ಯಾನಿಂಗ್ ಮಾಡಬೇಕು. ಬೆಳಿಗ್ಗೆಗೆ ತಿಂಡಿ, ಮಗುವಿನ ಡಬ್ಬ, ಮಗುವಿನ ಯೂನಿಫಾರಂ ಇತ್ಯಾದಿ, ಇತ್ಯಾದಿ, ನಾಳೆಯ ಬಗ್ಗೆ ಯೋಚಿಸದೇ ರಾತ್ರಿ ಮಲಗುವ ಹಾಗೆಯೇ ಇಲ್ಲ. ಆಕೆಯೂ ತನ್ನ ಕಾಲೇಜಿಗೆ - ಅಂದರೆ ದೂರದಲ್ಲಿರುವ ಕಾಲೇಜಿಗೆ ಸರಿಯಾದ ಸಮಯಕ್ಕೆ ತಲುಪಬೇಕೆಂದರೆ ಆರು ಘಂಟೆಗೇ ಮನೆ ಬಿಡಬೇಕು. ಗಡಿಬಿಡಿಯಲ್ಲಿ ಊಟ-ತಿಂಡಿ ತಯಾರಿಸಿ ಹೊರಟರೆ ಬಸ್ಸುಗಳಲ್ಲಿ ಗಲಾಟೆ, ಲೇಡೀಸ್ ಸೀಟ್ ಯಾಕೆ ಬಿಡಬೇಕು? ಇತ್ಯಾದಿ. ಗಂಡ, ಹೆಂಡತಿ ಒಟ್ಟಿಗೆ ಕುಳಿತುಕೊಳ್ಳಬಾರದೇ/ ಕುಟುಂಬದವರು ಒಟ್ಟಿಗೆ ಕುಳಿತರೆ ಏನು ಹೊಟ್ಟೆ ಉರಿ?

'ಕುಟುಂಬ' - ಎನ್ನುವುದು ಎಷ್ಟು tricky ಪ್ರಶ್ನೆ ಎಂದು ಗಂಗಾ ಯೋಚಿಸುತ್ತಾಳೆ. ಯಾವ ಸಂದರ್ಭದಲ್ಲಿ ಹೇಗೆ ಬೇಕಾದರೂ ಬಳಸಬಹುದು. ಮನೆಗೆಲಸ ಮಾಡುವಾಗ ದುಡಿಯುವ ಹೆಂಡತಿಯೊಡನೆ ನಾವು ಒಂದೇ ಕುಟುಂಬದವರು, ಒಟ್ಟಿಗೇ ಕೆಲಸ ಮಾಡಿಕೊಂಡು ಹೋಗೋಣ ಎಂದು ಹೇಳದ ಗಂಡು ಮನಸ್ಸುಗಳು ಬಸ್ಸಿನಲ್ಲಿ ಸೀಟಿಗೆ ಮಾತ್ರ ಗಂಡ-ಹೆಂಡತಿ ಕುಳಿತು ಒಟ್ಟಿಗೆ ಪ್ರಯಾಣಿಸಬಾರದೇ ಎನ್ನುತ್ತಾರೆ.

ಇದೆಲ್ಲ ಗಂಗಾ ರಮೇಶನಲ್ಲಿ ಹೇಳಿದಾಗ, "ಪುಟ್ಟಿ, ಸಮಾಜದ ಮೌಲ್ಯಗಳನ್ನ ಒಮ್ಮಿಂದೊಮ್ಮೆಲೇ ಅಳಿಸೋಕೆ ಆಗುತ್ತಾ? ನನ್ನ ಕೇಳು, ಯಾಕೆ ಮಾಡಿಲ್ಲ ಅನ್ನು, ನಿನ್ನ ವಾದಗಳನ್ನು ಹೇಳು. ಅರ್ಥ ಮಾಡಿಕೊಂಡು ನಿನ್ನ ಮೇಲಿನ ಪ್ರೀತಿಗೆ ಅಂತ ಮಾಡ್ತೀನಿ. ಆದ್ರೆ ಬೆಳಿಗ್ಗೆ ಎದ್ದು ಗಲಾಟೆ ಯಾಕೆ ಮಾಡಿಕೊಂಡು ಹೋಗ್ತೀಯ. ಬಸ್ಸಲ್ಲಿ ಮನಸ್ಸನ್ನು ಕೆಡಿಸಿಕೊಂಡು ಯಾಕೆ ಕಾಲೇಜಿಗೆ ಹೋಗ್ತೀಯಾ?' ಎನ್ನುತ್ತಾನೆ. ಸರಿ, ರಮೇಶ ಮನೆಯಲ್ಲಿ ಇದ್ದಾಗ ಮಾಡುತ್ತಾನೆ. ಆದರೆ ಆತ ಕೆಲಸದ ವಿಚಾರದಲ್ಲಿ ಟೂರ್ ಹೋಗುವುದೇ ಜಾಸ್ತಿ. ಅದು ಕೆಲಸ. ಇಬ್ಬರೂ ಮಾತನಾಡಲಾರರು. ಆದರೂ ತಾನು ಹದಿನೈದು, ಇಪ್ಪತ್ತು ದಿನ ಕುಟುಂಬ ಬಿಟ್ಟು ಆಚೆ ಇರಬೇಕಾದ ಕೆಲಸ ಮಾಡುವುದಾಗಿದ್ದರೆ ಮಾಡುವುದಕ್ಕೆ ತನಗೆ ಸಾಧ್ಯವಾಗುತ್ತಿತ್ತೇ ಎಂದು ಗಂಗಾ ಆಲೋಚಿಸುತ್ತಾಳೆ. ಬಹುಶಃ ಅದು ಅಸಾಧ್ಯದ ಮಾತೇ ಆಗಿರುತ್ತಿತ್ತು. ಆಧುನಿಕ ಬದುಕಿನ ವಿಪರ್ಯಾಸಗಳು ಎಂತೆಂತಹ ಸಂಕಟ ತಂದೊಡ್ಡುತ್ತವೆ ಎಂದು ಯೋಚಿಸಿದಾಗಲೆಲ್ಲಾ ಗಂಗಾಗೆ ದುಃಖ ಎನಿಸಿದೆ. ಎಷ್ಟು ಅಸಹಾಯಕರಾಗಿ ಬಿಡುತ್ತೇವೆ? ಏನನ್ನೂ ಪ್ರಶ್ನಿಸಲಾಗದಂತಹ ದುರಂತಗಳು. ಮೌಲ್ಯಕ್ಕೆ ಹೋರಾಡಲಾಗದಂತಹ ಪರಿಸ್ಥಿತಿಗಳು. ಎಲ್ಲೆಲ್ಲಿಯೋ ಒಪ್ಪಂದವನ್ನು ಹುಟ್ಟು ಹಾಕಿ ಬದುಕಿನಲ್ಲಿ ಸಿಕ್ಕಿದ್ದನ್ನು ಮಾತ್ರ ದೋಚಿಕೊಂಡು ಬಿಡಬೇಕು ಎನ್ನುವ ಆಸೆಬುರುಕತನಗಳು. ಗಂಗಾಗೆ ಬದುಕಿನಲ್ಲಿ ಪ್ರೀತಿಸುವ ಗಂಡ, ಮುದ್ದಾದ ಮಗಳಿದ್ದರೂ ಒಂಟಿತನ ಕಾಡಿದ್ದು ಇಂತಹ ಕ್ಷಣಗಳಲ್ಲಿಯೇ. ಜೊತೆಗೆ ಸಾವಿನ ಭಯ. ಕತ್ತಿಯಂಚಿನ ರೀತಿಯ ಸಾವು. ಯಾವಾಗ ಮೆಟ್ಟಿಲೇರಿ ಯಾರನ್ನು ಬಲಿ ತೆಗೆದುಕೊಳ್ಳುತ್ತದೆಯೋ? ಸದ್ದಿಲ್ಲದೇ ಸತ್ತ ತಾಯಿ, ಚಿಕ್ಕ ವಯಸ್ಸಿನ ಗೆಳತಿ/ಗೆಳೆಯರು ಈ ದಿನ ಇಲ್ಲ ಎನಿಸಿದಾಗ ಆಕೆಗೆ ಭಯವಾಗುತ್ತದೆ. ಬಾಲ್ಯದ ಗೆಳತಿಯೋರ್ವಳು ಬಾಣಂತನದಲ್ಲಿ, ಮತ್ತೋರ್ವಳು ಸೀಮೆಎಣ್ಣೆಯಲ್ಲಿ ಬೆಂದು ಹೋದಳು ಎಂಬ ಸುದ್ದಿ ಆಕೆಯ ಮನಸ್ಸಿನೊಳಗೆ ಮಾಯದ ನೋವುಗಳಾಗಿ ಕೆಲಸ ಮಾಡಿವೆ. ಹೆಜ್ಜೆ ಹೆಜ್ಜೆಗೂ ಸಾವಿನ ಭಯ. ಗಂಡ ರಮೇಶ ಮನೆಗೆ ಬರುತ್ತೇನೆಂದು

ಮನೆಗೆ ಬರದಿದ್ದರೆ ಇಂತಹದೇ ಭಯ. ಆಧುನಿಕ ಬದುಕಿನ ವಿಪರ್ಯಾಸಗಳಲ್ಲಿ ಬದುಕಿನ ಒಂಟಿತನ ಗಂಗಾಗೆ ತೀವ್ರವಾಗುತ್ತಾ ಹೋದದ್ದು ಸಾವಿನ ಭಯದಲ್ಲಿಯೂ ಇರಬಹುದು. ಹೊರ ಪ್ರಪಂಚದ ನಿತ್ಯದ ಆಗು-ಹೋಗುಗಳಲ್ಲಿ ಮನಸ್ಸಿನ ಭಾವನೆಗಳನ್ನು ಗೆಲ್ಲಲು ಹೇಗೆ ಸಾಧ್ಯ? ಗಂಗಾಗೆ ಮನಸ್ಸೇ ಒಂದು ದೊಡ್ಡ ಪ್ರಪಂಚವಾಗಿ ಕಾಣುತ್ತಿತ್ತು. ಅಲ್ಲಿ ನಡೆಯುವ ತುಮುಲ, ದ್ವಂದ್ವ, ಘರ್ಷಣೆಗಳು ಹೊರಗಿನ ಪ್ರಪಂಚದ ಜೊತೆ ತಾಕಲಾಟಕ್ಕೆ ಬರುವುದಿಲ್ಲ. ಮನಸ್ಸಿನ ಪ್ರಪಂಚವನ್ನು ತಾಕಲಾಡಿಕೊಂಡು ಬದುಕುವ ಜನ ಅದೇ ಪ್ರಪಂಚದಲ್ಲಿ ವಾಸ್ತವಿಕತೆಯ ಅರಿವಿಲ್ಲದೇ ಸುಖವಾಗಿ ಬದುಕುತ್ತಾರೆ. ಗಂಗಾಗೆ ಬದುಕಲ್ಲಿ ಬೇಕಾದದ್ದು ಚೈತನ್ಯ. ಬದುಕುವ ಆಸೆಗೆ ಬರವಣಿಗೆಯ ಚೈತನ್ಯ. ಸಾವಿಗಾಗಿ ಮಾತ್ರ ಕಾದು ಕೂತ ಮನಸ್ಸಿಗೆ ಬದುಕಿಕೊಳ್ಳಲು ಬೇಕಾದ ಚೈತನ್ಯ, ಜಡತ್ವದ ಮನಸ್ಸಿಗೆ ಬೇಕಾದ ಚೈತನ್ಯ.

ಮನೆಗೇ ಅಂಟಿಕೊಳ್ಳಬೇಕಾದ ಕೆಲವಾರು ಜವಾಬ್ದಾರಿಗಳಿಂದಾಗಿ ಹೊರಗಿನ ಸಾಂಸ್ಕೃತಿಕ ವಾತಾವರಣದಲ್ಲಿ ತನ್ನನ್ನು ಗುರುತಿಸಿಕೊಳ್ಳಲು ಬೇಕಾದ ಸಮಯ, ಸಂಯಮಗಳು ತನಗಿಲ್ಲವೆಂಬ ನೋವೂ ಗಂಗಾಳಿಗಿತ್ತು. ಅಥವಾ ತನ್ನನ್ನು ಗುರುತಿಸಿಕೊಳ್ಳಲು ಬೇಕಾದ ಒಂದು ಸಂಸ್ಕೃತಿ ಹೊರಗಡೆ ಇದೆಯಾ ಎಂಬುದೂ ಅವಳಿಗೆ ಅನೇಕ ಬಾರಿ ಅನ್ನಿಸಿದ ವಿಚಾರ. ಅಥವಾ ಹೊರಗಡೆಯ ಸಾಂಸ್ಕೃತಿಕ ವಾತಾವರಣದಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳಲು ಬೇಕಾದ ತಾಳ್ಮೆ, ಸಂಯಮ ತನ್ನ ಮನಸ್ಸಿಗೇ ಇಲ್ಲವೇ ಎಂದು ಆಕೆಯ ಮನಸ್ಸಿನ ಬಗ್ಗೆಯೇ ಆಕೆಗೆ ಅನುಮಾನ. ಇಂತಹ ಕ್ಷಣಗಳಲ್ಲಿ ಹಲವಾರು ಬಾರಿ ಆಕೆ ಟಿ. ಎಸ್. ಎಲಿಯಟ್‌ನ ಕೆಲವು ಸಾಲುಗಳನ್ನು ಜ್ಞಾಪಿಸಿಕೊಳ್ಳುತ್ತಿದ್ದುದುಂಟು.

Between idea and reality
Between motion and act
falls the shadow.
Between conception and creation
Between emotion and response
Falls the shadow

ಇವೇ ಸರಿಯಾದ ಸಾಲುಗಳೇ ಎಂದೊಮ್ಮೆ ಗಂಗಾ ಯೋಚಿಸುತ್ತಾಳೆ. ತಾನು ಪ್ರೀತಿಸಿದ ಕಾವ್ಯದ ಸಾಲುಗಳೂ ನೆನಪಿನಲ್ಲಿರದ ಜಡತ್ವ ತನ್ನದಾಗಿದೆ ಎನಿಸಿದಾಗ ಆಕೆಗೆ ಗಾಬರಿಯಾಗುತ್ತದೆ.

*   *   *   *

ಮಧು ಗಂಗಾಳ ಜೀವನದಲ್ಲಿ ಪ್ರವೇಶಿಸಿದ್ದು ಈ ಸಂದರ್ಭದಲ್ಲಿ. ಮಧು ಗಂಗಾಳಿಗಿಂತ ಏಳೆಂಟು ವರ್ಷಕ್ಕೆ ಚಿಕ್ಕವನಿರಬೇಕು. ಅವಳು ಉಪನ್ಯಾಸಕಿಯಾದ ಮೊದಲ ದಿನಗಳಲ್ಲಿ ಯಾವುದೋ ಊರಿನಲ್ಲಿ ಆಕೆಯ ವಿದ್ಯಾರ್ಥಿಯಾಗಿದ್ದೆ ಎಂದು ಆತನೇ ಹೇಳಿಕೊಂಡಿದ್ದ, ಆಕೆಗೆ ಅದು ನೆನಪು ಕೂಡಾ ಇಲ್ಲ. ಗಂಗಾ ಕೆಲಸ ಮಾಡುವ ಊರಿನಲ್ಲಿಯೇ ಈತ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬ ಓವರ್‌ಸೀಯರ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದ. ಮೀಟರ್ ರೀಡರ್ ಕೆಲಸಕ್ಕೆ ಹಾಜರಾಗದಿದ್ದಾಗ ಆ ಕೆಲಸಕ್ಕೂ ಕೆಲವೊಮ್ಮೆ ಬರುತ್ತಿದ್ದನು. ಗಂಗಾಗೆ ಆತನ ಪರಿಚಯವಾದದ್ದು ಹೀಗೆಯೇ ಆಕಸ್ಮಿಕ. ತಮ್ಮ ಮನೆಗೆ ಮೀಟರ್ ರೀಡಿಂಗಿಗೆಂದು ಬಂದಾಗ ಆಕೆ ಮಾತನಾಡಿಸಿದ್ದಳು. ಹಾಗೆಯೇ ಮತ್ತೊಮ್ಮೆ

ಪೋಸ್ಟ್ ಆಫೀಸಿನಲ್ಲಿ. ದೂರದ ಊರಿನಿಂದ ಬಂದು ಬೆಂಗಳೂರಿನಲ್ಲಿದ್ದ ಈ ಹುಡುಗನಿಗೆ ಗಂಗಾ ತಮ್ಮ ಊರ ಕಡೆಯವರೆಂಬ ಅಭಿಮಾನ ಒಂದು ಕಡೆಯಾದರೆ, ತನಗೆ ಕಲಿಸದ ವ್ಯಕ್ತಿ ಎಂಬ ಅಭಿಮಾನ ಇನ್ನೊಂದು ಕಡೆಗೆ. ಹೀಗಾಗಿ ಆಕೆ ಸಿಕ್ಕಾಗಲೆಲ್ಲಾ ಮಧು ಹೃದಯಪೂರ್ವಕವಾಗಿ ಮಾತನಾಡುತ್ತಿದ್ದ.

ಗಂಗಾ ಆಗ ತಾನೆ ತಾವು ಕಟ್ಟಿಸಿದ ಹೊಸ ಮನೆಗೆ ಕರೆಂಟ್ ಹಾಕಿಸುವುದಕ್ಕೆಂದು ಓಡಾಡುತ್ತಿದ್ದಳು. ಕತ್ತಲಲ್ಲಿ ಹೊಸ ಮನೆಗೆ ಹೋಗಿ ಬೆಳಕಿಲ್ಲದೇ ರಾತ್ರಿಯೆಲ್ಲ ಓಡಾಡಿಕೊಂಡಿರುವುದೆಂದರೆ ಕೆಲಸಕ್ಕೆ ಹೋಗುವುದು ಹೇಗೆ? ಓದುವುದು ಹೇಗೆ?, ಇತ್ಯಾದಿಗಳು ಕಾಡಿದಾಗ ಗಂಗಾ ಮನೆಗೆ ಹೇಗಾದರೂ ಕರೆಂಟ್ ಹಾಕಿಸಲೇಬೇಕೆಂದು ಓಡಾಡುತ್ತಿದ್ದಳು. ಮಧುನ ಹತ್ತಿರ ಈ ವಿಚಾರ ಪ್ರಸ್ತಾಪಿಸಿದಾಗ ಆತ ಹೇಗಾದರೂ ಸಹಾಯ ಮಾಡುವೆನೆಂದು ಆಶ್ವಾಸನೆ ಇತ್ತಿದ್ದ. ಯಾರಾದರೂ ಕಾಂಟ್ರ್ಯಾಕ್ಟರ್ ಪರಿಚಯಿಸಿಕೊಡುವೆನೆಂದು ಹೇಳಿದ್ದ. ಗಂಗಾ ಇದನ್ನು ರಮೇಶನಲ್ಲಿಯೂ ಹೇಳಿದ್ದಳು. ತನ್ನ ವಿದ್ಯಾರ್ಥಿ, ಒಳ್ಳೆಯ ಹುಡುಗ. ಭಾವನೆಗಳ ಲಯದಲ್ಲಿ ಬದುಕ ಹಿಡಿಯಬಯಸುವವನು. ಕಲಿಸಿದ ಮೇಡಂ ಎಂತಲೋ, ಊರ ಕಡೆಯವರೆಂದೋ ಅಭಿಮಾನ ಆತನಿಗೆ. ಈ ಹುಡುಗ ಹೊಸ ಮನೆಗೆ ದೀಪದ ವ್ಯವಸ್ಥೆ ಮಾಡಲು ಸಹಾಯಿಸುತ್ತಾನೆ ಎಂದು ಪ್ರೀತಿಯಿಂದಲೇ ರಮೇಶನ ಬಳಿಯೂ ಹಂಚಿಕೊಂಡಿದ್ದಳು. ರಮೇಶನಿಗೆ ಕೆಲಸದ ಒತ್ತಡದಲ್ಲಿ ಬಿಡುವಿಲ್ಲದ ಕಾರಣದಿಂದಾಗಿ ಗಂಗಾ ವ್ಯಾವಹಾರಿಕವಾಗಿಯೂ ಮಧುವಿನೊಡನೆ ಹೆಚ್ಚು ಹೆಚ್ಚು ಓಡಾಡಬೇಕಾದ ಸಂದರ್ಭ ಒದಗಿ ಬಂತು. ಹಲವು ಬಾರಿ ಆಕೆ ಅವನನ್ನು ಭೇಟಿಯಾಗತೊಡಗಿದ್ದಳು. ಕಾಂಟ್ರ್ಯಾಕ್ಟರ್, ಎ.ಇ. ಹೀಗೆ ಹಲವಾರು ಜನರನ್ನು ಭೇಟಿಯಾಗಲು ಈಕೆ ಮಧುವಿನೊಟ್ಟಿಗೇ ಹೋಗುತ್ತಿದ್ದುದುಂಟು. ಹೋದ ಕಡೆಯಲ್ಲೆಲ್ಲ ಆತ ಅಭಿಮಾನದಿಂದ 'ನನ್ನ ಮೇಡಂ'. - ಎನ್ನುವನು. 'ಕುಳಿತುಕೊಳ್ಳಿ' - ಎಂದು ಆತನೇ ಕುರ್ಚಿ ತೋರಿಸುವನು. ವಿಧೇಯ ವಿದ್ಯಾರ್ಥಿಯಂತೆ ತನ್ನ ಮುಂದೆ ಕೈ ಕಟ್ಟಿ ನಿಲ್ಲುವನು. ಹೆಚ್ಚು ಬಿಸಿಲಾದರೆ 'ನೀವು ಮನೆಗೆ ಹೋಗಿ ಮೇಡಂ, ನಾನು ವಿಚಾರಿಸಿಕೊಂಡು ಬರುತ್ತೇನೆ' ಎಂದು ಒತ್ತಾಯ ಮಾಡುವನು. ಹೀಗೆ ಈ ಹುಡುಗನಲ್ಲಿ ವ್ಯಾವಹಾರಿಕ ಸಂಬಂಧ ರೂಢಿಸಿಕೊಳ್ಳತೊಡಗಿದ ಗಂಗಾಳಿಗೆ ಯಾಂತ್ರಿಕ ಬದುಕಿನಲ್ಲಿ ಒಂದು ಆತ್ಮೀಯತೆಯ ತಂತು ಇವನು ಎನ್ನಿಸತೊಡಗಿತು.

ಕಪ್ಪೆ ಚಿಪ್ಪಿನಂತಿದ್ದ ಮಧುವಿನ ವ್ಯಕ್ತಿತ್ವದ ಮುಖಗಳು ಗಂಗಾಗೆ ಒಂದೊಂದಾಗಿ ಪರಿಚಯವಾಗತೊಡಗಿದ್ದವು. ಕಪ್ಪಾದ ಮುಖದ ಈ ಹುಡುಗನ ಮುಖ ವಿಗ್ರಹ ಕಡೆದಂತೆ ನೀಟಾಗಿ ಕಡೆಯಲ್ಪಟ್ಟಿದೆ ಎಂದು ಅನೇಕ ಬಾರಿ ಗಂಗಾಗೆ ಅನಿಸಿತ್ತು. ನೀಟಾದ ಮೂಗು, ಆಕರ್ಷಕ ಕಣ್ಣುಗಳು, ಯಾವಾಗಲೂ ಟ್ರಿಮ್ ಅನ್ನಿಸುವಂತೆ ಡ್ರೆಸ್ ಮಾಡುವುದು, ದಿನಕ್ಕೆರಡು ಬಾರಿ ಸ್ನಾನ, ಮಲಗುವ ಜಾಗದಲ್ಲಿ ಇರುವೆ ಬರದಿರಲೆಂದು ನಾಲ್ಕಾರು ಬಾರಿ ಒರೆಸಿ ಮಲಗುವುದು, ಅಕ್ಷರಗಳನ್ನು ಮುತ್ತಿನಂತೆ ಬರೆದು, ಫೈಲ್‌ಗಳನ್ನು ನೀಟಾಗಿ ಇಡುವಂತೆ, ಎಸ್ಟಿಮೇಟ್‌ಗಳನ್ನು ನೀಟಾಗಿ ಬರೆಯುವಂತೆ ನೀಟಾಗಿ ಬದುಕಬೇಕೆನ್ನುವ ಹುಡುಗ. ನೀಟ್, ಕ್ಲೀನ್‌ಲಿನೆಸ್ ಇಂತಹವುಗಳೇ ಇವನ ಜೀವನದ ಆದರ್ಶವೇನೋ ಎಂದು ಗಂಗಾಗೆ ಕೆಲವು ಸಾರಿ ಅನುಮಾನ ಬಂದಿತ್ತು.

ಈತನ ಬದುಕಿನ ಒಂಟಿತನದ ಪರಿಚಯ ಗಂಗಾಗೆ ನಿಧಾನವಾಗಿ ಆಗತೊಡಗಿತ್ತು. ಒಬ್ಬಂಟಿಯಾಗಿರಲಾರದೇ ಈತ ಯಾರ್ಯಾರನ್ನೋ ಹಚ್ಚಿಕೊಂಡು ಓಡಾಡುತ್ತಿದ್ದ. ಕಂಡ ಕಂಡವರಿಗೆಲ್ಲ ದುಡ್ಡು ಕೊಡುವುದು, ಆ ಮೂಲಕ ಅವರಲ್ಲಿ ಆತ್ಮೀಯತೆ ಹುಡುಕುವುದು. ಈತ ಆತ್ಮೀಯತೆಗಾಗಿ

ಹುಡುಕಾಡಿರದ ಸ್ಥಳಗಳೇ ಇಲ್ಲವೇನೋ ಎಂದು ಗಂಗಾಗೆ ಒಮ್ಮೊಮ್ಮೆ ಅನಿಸುತ್ತಿತ್ತು. ಸಂಕೋಚ, ನಾಚಿಕೆ, ಸೂಕ್ಷ್ಮತೆಗಳಲ್ಲಿ ರಮೇಶನ್ನ ಹೆಚ್ಚು - ಕಡಿಮೆ ಹೋಲುತ್ತಿದ್ದ ಈತ ಜನರೊಡನೆ ಮಾತ್ರ ನಗು ನಗುತ್ತಾ ಕಲೆಯುತ್ತಿದ್ದ. ಈತನ ಹತ್ತಿರ ಸಹಾಯ ಬಯಸಿ ಬಂದವರಿಗೆ ಕಾಸಿಲ್ಲ ಎಂದವನಲ್ಲ ಮಧು. ಹೀಗಾಗಿ ಮಧು ಬಹಳ ಸಾಲ ಮಾಡಿಕೊಂಡಿದ್ದಾನೆ ಎಂದು ಗಂಗಾಗೆ ಗೊತ್ತಾಗತೊಡಗಿತ್ತು. ಯಾರ್‍ಯಾರಿಗೋ ಐದು ಸಾವಿರ, ಹತ್ತು ಸಾವಿರ ಗಟ್ಟಲೆ ಹಣ ಕೊಡಿಸುವುದು, ಅದಕ್ಕೆ ಬಡ್ಡಿ ಅವರು ಕಟ್ಟದಿದ್ದಾಗ ತಾನೇ ಬಡ್ಡಿ ಕಟ್ಟುತ್ತಾ ಹೋಗುವುದು. 'ಮಧು, ನಿಮಗೆ ಯಾರು ಹೇಗೆ ಎಂದೇ ಗೊತ್ತಾಗುವುದಿಲ್ಲ ಅಲ್ಲವೇ? ಹೀಗೇಕೆ ಎಲ್ಲಾ ಭಾರವನ್ನೂ ನಿಮ್ಮ ತಲೆಯ ಮೇಲೇ ಹಾಕಿಕೊಳ್ಳುತ್ತೀರಿ? ಕೊನೆಗೆ ನೀವು ಬ್ರೋಕ್ ಆದಾಗ ಯಾರೂ ನಿಮಗೆ ಸಹಾಯ ಮಾಡಲಾರರು. ಹಣದ ವಿಚಾರದಲ್ಲಿ ನೀವು ಬಹಳ ಕೇರ್‌ಲೆಸ್' ಎಂದು ಗಂಗಾ ಬಹಳ ಸಲ ಬುದ್ಧಿ ಹೇಳಲು ಪ್ರಯತ್ನಿಸಿದ್ದಳು.

ಆತನ ಸಾಲದ ಬಗ್ಗೆ ಗಂಗಾಗೆ ಗೊತ್ತಾಗತೊಡಗಿದಾಗ ಮಧು ಬಹಳ ಸಲ ಬೇಜಾರು ಪಟ್ಟು ಕೊಂಡಿದ್ದ. 'ನನ್ನ ಯಾವ ತೊಂದರೆಯೂ ಯಾರಿಗೂ ಗೊತ್ತಾಗಬಾರದೆಂದು ನಾನು ಇಷ್ಟಪಡುತ್ತೇನೆ ಮೇಡಂ, ಆದರೆ ನೀವು ಬಹಳ ಜಾಣರು, ನನ್ನ ಸಮಸ್ಯೆಗಳು, ತೊಂದರೆಗಳನ್ನು ಪತ್ತೆ ಹಚ್ಚಿ ಬಿಡುತ್ತೀರಿ, ಹಾಗಾಗಿ ನಿಮ್ಮಿಂದ ದೂರ ಇರುವುದೇ ವಾಸಿ' ಎಂದು ಮಧು ದೊಡ್ಡದಾಗಿ ನಕ್ಕು ಹೇಳುತ್ತಿದ್ದ.

ಕೊನೆ ಕೊನೆಗೆ ಮಧು ಹಣದ ತೊಂದರೆಯಲ್ಲಿ ಎಷ್ಟು ಸಿಕ್ಕಿಬಿದ್ದನೆಂದರೆ ಊಟ ಮಾಡಲಿಕ್ಕೂ ಒದ್ದಾಡುವಷ್ಟು. ಆಗೆಲ್ಲ ಗಂಗಾನ ಹತ್ತಿರ, 'ಮೇಡಂ ನೀವು ಮಾತ್ರ ನೋಡಿ ನನಗೆ ಆಗಾಗ್ಗೆ ಎಚ್ಚರಿಕೆ ಕೊಟ್ಟಿರೋರು. ಉಳಿದವರೆಲ್ಲ ನನ್ನ ಹತ್ತಿರ ಹಣ ಇಸಿದುಕೊಂಡರಷ್ಟೇ!'. ಹೀಗೆ ಈ ಹುಡುಗ ಒಂದೊಂದೇ ಹೆಜ್ಜೆ ಹತ್ತಿರವಾಗತೊಡಗಿದ್ದ. ಗಂಗಾ ಆಗಾಗ್ಗೆ ಆತನನ್ನು ಹೆದರಿಸುತ್ತಿದ್ದಳು. 'ನೀವು ಹೀಗೇ ದುಡ್ಡು ಖರ್ಚು ಮಾಡುತ್ತಾ ಹೋದರೆ ನಿಮ್ಮ ತಂದೆಗೆ ಕಾಗದ ಬರೆಯುತ್ತೇನೆ' ಎಂದು. ಕಾಗದ ಕೂಡಾ ಬರೆದಿದ್ದಳು ಗಂಗಾ. ಒಂಟಿತನ ಸಹಿಸಿಕೊಳ್ಳಲಾರದೇ ಆತ್ಮೀಯತೆಯ ತಂತು ಹುಡುಕುವ ಈ ಹುಡುಗ ಎಲ್ಲರಲ್ಲೂ ಪ್ರೀತಿ-ವಿಶ್ವಾಸ ಹುಡುಕಲು ಪ್ರಯತ್ನಿಸುತ್ತಾನೆ, ಪ್ರೀತಿ-ವಿಶ್ವಾಸಕ್ಕೆ ಈತ ಬಹುಬೇಗ ಮರುಳಾಗುತ್ತಾನೆ, ಅದಕ್ಕಾಗಿ ಈ ಹುಡುಗ ಏನು ಮಾಡಲು ಕೂಡಾ ತಯಾರಾಗುತ್ತಾನೆ ಎಂಬುದು ಗಂಗಾಗೆ ಅರ್ಥವಾಗಿತ್ತು. ಈ ಗುಣದ ಜೊತೆಗೆ ಈ ಹುಡುಗನಲ್ಲಿದ್ದ ಮುಗ್ಧತೆ, ಪ್ರತಿ ಹೆಜ್ಜೆಯಲ್ಲೂ ಮಧು ರಮೇಶನ ಪ್ರತಿಬಿಂಬ ಎಂದು ಹತ್ತು ಹಲವಾರು ಬಾರಿ ಗಂಗಾಗೆ ಅನ್ನಿಸಿದ್ದುಂಟು. ಒಂದು ಬಯ್ದರೆ, ಮನಸ್ಸಿಗೆ ನೋವಾಗುವಂತೆ ಮಾತನಾಡಿದರೆ ರಮೇಶನ ತರಹವೇ ಹೆಜ್ಜೆ ಕಿತ್ತಿಡಲಾರ, 'ಏನು ಮೇಡಂ, ಹೀಗೆ ನೀವು ಮನಸ್ಸಿಗೆ ನೋವಾಗುವ ಹಾಗೆ ಮಾತನಾಡಿದರೆ, ಬಯ್ದರೆ ರಾತ್ರಿಯೆಲ್ಲ ನಾನು ನಿದ್ದೆ ಮಾಡಲಾರೆ, ನೀವು ತೋರಿಸುವ ಪ್ರೀತಿ-ವಿಶ್ವಾಸಕ್ಕೆ ನಾನೆಷ್ಟು ಋಣಿಯಾಗಿರಬೇಕು. ಅಂತಹದುದರಲ್ಲಿ ನಿಮ್ಮನ್ನು ನೋಯಿಸಿದೆನೆಂದರೆ ನಾನು ನಿದ್ದೆಯನ್ನೇ ಮಾಡಲಾರೆ'. ಆಗೆಲ್ಲ ಗಂಗಾಗೆ ಇದೇನು ಈತ ರಮೇಶನ ತದ್ರೂಪಾನೇ ಇದಾನೆ ಎಂದುಕೊಳ್ಳುವಳು. ರಮೇಶನೊಟ್ಟಿಗಿರುವ ಬೆಚ್ಚಗಿನ ಭಾವನೆಗಳನ್ನು ಮಧು ಕೂಡಾ ಭರಿಸುತ್ತಿದ್ದ.

ಕೊನೆ ಕೊನೆಗೆ ಮನೆಗೆ ಕರೆಂಟ್ ಸಿಗುವುದು ತೀರಾ ಕಷ್ಟವಾಗತೊಡಗಿದಾಗ ಮಧುವೇ ಗಂಗಾಳಿಗಿಂತ ಹೆಚ್ಚಾಗಿ ಬೇಸರ ಮಾಡಿಕೊಳ್ಳತೊಡಗಿದ್ದನು. ತಾನು ಅಲ್ಲಿಯೇ ಇದ್ದುಕೊಂಡು ತನಗೆ ಅತ್ಯಂತ ಆತ್ಮೀಯರಾದ, ತಂದೆ-ತಾಯಿಯರಿಂದ ದೂರವಾಗಿರುವ ಕೊರತೆ ನೀಗಿಸುವ ಮೇಡಂ ಮನೆಗೆ

ಕರೆಂಟ್ ಕೊಡಿಸಲು ತನಗೆ ಸಾಧ್ಯವಾಗಲಿಲ್ಲ ಎಂಬುದು ಅವನಿಗೆ ಕೊರಗಾಗಿಯೇ ಕಾಡತೊಡಗಿತ್ತು. ಹಣದ ಬಗ್ಗೆ ಅಷ್ಟೊಂದು ಜವಾಬ್ದಾರಿಯುತವಾಗಿರುವ ಗಂಗಾ ತಪ್ಪು ತಿಳಿಯಬಾರದೆಂದು ಆತ ಕರೆಂಟಿಗೆ ಸಂಬಂಧಪಟ್ಟ ಹಣಕಾಸಿನ ಪ್ರತಿಯೊಂದು ವಿವರವನ್ನು ಕೊಡುತ್ತಿದ್ದ. ಪ್ರತಿಯೊಂದರ ಲೆಕ್ಕಪತ್ರವನ್ನೂ ತೋರಿಸುತ್ತಿದ್ದ. ರಮೇಶನಿಗೆ ಬಿಡುವಿದ್ದಾಗ 'ಬನ್ನಿ ಸಾರ್ ನೀವೂ' ಎಂದು ಕರೆಯುತ್ತಿದ್ದ. ಯಾಕೆಂದರೆ ಹಣದ ವಿಚಾರದಲ್ಲಿ ತಾನು ಸ್ವಚ್ಛ ಎಂಬುದು ಅವರಿಗೆ ಅರ್ಥವಾಗಲಿ ಎಂದು. ಈತನ ಮುಗ್ಧತೆ ಗಂಗಾಗೆ ಇನ್ನೂ ಹೆಚ್ಚು ಅರ್ಥವಾಗಿದ್ದು ತನ್ನ ತಾಯಿಯ ಬಗ್ಗೆ ಕುರಿತು ಮಧು ಆಡುತ್ತಿದ್ದ ಮಾತುಗಳಿಂದ. ಈತನೂ ಕೂಡಾ ರಮೇಶನ ಹಾಗೆ ಬಹಳ ಸಂರಕ್ಷಿತವಾಗಿ ಮನೆಯಲ್ಲಿ ಬೆಳೆಯಲ್ಪಟ್ಟವನೇನೋ ಎಂದು ಗಂಗಾಗೆ ಬಹಳ ಸಾರಿ ಅನ್ನಿಸಿತ್ತು. ತಾಯಿಯನ್ನು ನೋಡಲು ಊರಿಗೆ ಹೊರಟ ಮಧು ಒಂದು ಸಾರಿ ಗಂಗಾನ ಹತ್ತಿರ ಹೇಳುತ್ತಿದ್ದ, 'ಊರು ಬಂತೆಂದರೆ ನಾನು ಎಲ್ಲವನ್ನೂ ಮರೆಯುತ್ತೇನೆ. ನನ್ನ ತಾಯಿ, ಆಕೆಯ ತೊಡೆಯ ಮೇಲೆ ತಲೆ ಇಟ್ಟು ಮಲಗಿಕೊಂಡರೆ ನನಗೆ ಬೆಂಗಳೂರಿನ ಏಕಾಂಗಿತನದ ಕ್ರೂರತೆಗಳೆಲ್ಲ ಮರೆತು ಹೋಗುತ್ತವೆ. ಅಮ್ಮ 'ಅಪ್ಪೀ, ನಿನಗೆ ಏನೂ ಗೊತ್ತಾಗೋಲ್ಲ, ಹುಷಾರಾಗಿರಪ್ಪಿ' ಎಂದಾಗಲೆಲ್ಲಾ ಲೋಕದಲ್ಲಿ ಇನ್ನಾವ ಸುಖ ಬೇಕೆನಿಸುತ್ತದೆ' ಎನ್ನುತ್ತಾನೆ ಹೀಗೆಲ್ಲ ಮಾತನಾಡುವಾಗ ಮಧು ರಮೇಶನ ಜ್ಞಾಪಕವನ್ನೇ ತರುತ್ತಾನೆ. ಇಷ್ಟೇ ಪ್ರೀತಿಯಿಂದ ರಮೇಶನೂ ಮಾತನಾಡುತ್ತಾನೆ. ತಾಯಿ ಸತ್ತ ಜ್ಞಾಪಕ ಬಂದಾಗ ಇದೆಲ್ಲ ನೆನಸಿಕೊಂಡರೆ ಗಂಗಾಗೆ ಕಣ್ಣಲ್ಲಿ ನೀರೂರುತ್ತದೆ. 'ತಾನೂ ಹೀಗೆಯೇ ಊರಿಗೆ ಓಡುತ್ತಿರಲಿಲ್ಲವೇ?' ಊರು ಹತ್ತಿರ ಹತ್ತಿರ ಬಂದಾಗ, ಓಡುವ ಮರ/ಗಿಡದಲ್ಲಿ ತಾಯಿ/ಮನೆಯನ್ನೆಲ್ಲ ಕಾಣುತ್ತಿರಲಿಲ್ಲವೇ?" ಕೆಲಸ, ಕೆಲಸ ಎಂದು ತನ್ನಿಂದ ದೂರ ಆಗುತ್ತಿರುವ ರಮೇಶನ ಸ್ಥಾನದಲ್ಲಿ ಗಂಗಾಗೆ ಆತ್ಮೀಯತೆಯ ತಂತು ಸಿಕ್ಕಿದ್ದು ಮಧುವಿನಲ್ಲಿ. ಆತನ ಮುಗ್ಧತೆಯಲ್ಲಿ ಕಳೆದು ಹೋದ ತಾಯಿ, ಹಾಗೂ ತಾನು ಕಳೆದುಕೊಳ್ಳುತ್ತಿರುವ ರಮೇಶನ ಸೆಲ್ಫ್‌ವೊಂದು ಸಿಗುತ್ತಿದೆ ಎನಿಸಿದಾಗ ಮಧುನ ಸಂಬಂಧ ಗಂಗಾಗೆ ಬೆಚ್ಚಗೆ ಎನ್ನಿಸತೊಡಗಿತ್ತು. ಈ ಹುಡುಗ ತನ್ನ ತಮ್ಮನಾಗಿ ತನ್ನ ಮನೆಯಲ್ಲಿಯೇ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಗಂಗಾ ಸಾಕಷ್ಟು ಬಾರಿ ಫೀಲ್ ಮಾಡಿದ್ದಳು. ಆಗೆಲ್ಲ ಮಧು ಹೇಳುತ್ತಿದ್ದ, 'ಒಂದು ದೊಡ್ಡ ಹೋಮ ಅಥವಾ ಸಮಾರಂಭ ಮಾಡಿ ನನ್ನನ್ನು ನಿಮ್ಮ ತಮ್ಮ ಎಂದು ಸ್ವೀಕರಿಸಿ, ಆಗ ನಿಜವಾಗಿ ನಿಮ್ಮ ತಮ್ಮ ಎಂದು ಫೀಲ್ ಮಾಡಲು ನನಗೂ, ನಿಮಗೂ ಸಾಧ್ಯವಾಗುತ್ತದೆ'. ಎಷ್ಟೋ ಬಾರಿ ಹಾಸ್ಯ ಮಾಡಿ ಮಧು ನಕ್ಕಿದ್ದಾನೆ.

ವಿಶ್ವಾಸದ ಜೊತೆಗೆ ಪ್ರೀತಿ-ಪ್ರೇಮದಂತಹ ವಿಚಾರಗಳಿಗೂ ಈತ ಹಂಬಲಿಸತೊಡಗಿದ್ದನು. ಈ ವಿಚಾರಕ್ಕೆ ಬಂದಾಗ ಮನಸ್ಸಿನೊಳಗೆ ತಾನು ಪ್ರೀತಿಸದಿರುವ ಹುಡುಗಿಯರೇ ಇಲ್ಲ ಎಂದು ಮಧು ಆಗಾಗ್ಗೆ ನಗುತ್ತಿದ್ದ. ನಿಜ ಹೇಳಬೇಕೆಂದರೆ ಆತನೊಳಗಿನ ಭಾವನೆಗಳು ಆತನಿಗೇ ಅರ್ಥವಾಗದಷ್ಟು ಮುಗ್ಧ ವ್ಯಕ್ತಿ ಮಧು ಎಂದು ಗಂಗಾಗೆ ಆಗಾಗ್ಗೆ ಅನ್ನಿಸತೊಡಗಿತ್ತು. ಯಾರು ಸ್ವಲ್ಪ ಸ್ವಾಭಾವಿಕವಾಗಿ ಪ್ರೀತಿ-ವಿಶ್ವಾಸ ತೋರಿಸಿದರೂ ಅವರಿಗೇ ಅಂಟಿಕೊಂಡುಬಿಡುವ, ನಿರ್ಮಲವಾಗಿ ಅವರು ತನ್ನ ಹೃದಯಕ್ಕೆ ಹತ್ತಿರದವರು ಎಂದು ಭಾವಿಸಿಬಿಡುವ ಮಧು ಈ ಗುಣದಿಂದಾಗಿ ಬಹಳ ಪೆಟ್ಟು ತಿನ್ನುತ್ತಾನೆಂದು ಗಂಗಾಗೆ ಅನ್ನಿಸಿತ್ತು.

ಕರೆಂಟ್ ಸಿಗುವುದು ತೀರಾ ಕಷ್ಟವಾಗತೊಡಗಿದಾಗ ಮಧು ಆಫೀಸಿನಲ್ಲಿ ರಿಸ್ಕ್ ತೆಗೆದುಕೊಂಡು 2 ತಿಂಗಳ ಕಾಲ ತಾತ್ಕಾಲಿಕವಾಗಿ ಕರೆಂಟ್ ವ್ಯವಸ್ಥೆ ಮಾಡಿದ್ದ. ಇದು ಅವನ ಆಫೀಸಿನಲ್ಲಿ ಮಧು

ತೆಗೆದುಕೊಂಡ ರಿಸ್ಕ್ ಎಂಬುದು ಗಂಗಾಳಿಗೆ ಗೊತ್ತಿತ್ತು. 'ನಿಮ್ಮ ಮನೆಗೆ ನಾನು ಕರೆಂಟ್ ಕೊಡಿಸಿಲ್ಲ ಎಂದರೆ ಯಾರು ಕೊಡುಸ್ತಾರೆ? ನಾನು ಅಲ್ಲಿದ್ದು ಏನು ಪ್ರಯೋಜನ? ನಿಮ್ಮ ಮನೇನಾ ನಾನು ಬೇರೆಯವರ ಮನೆ ಅಂತ ಅಂದ್ಕೊಂಡೇ ಇಲ್ಲ ಮೇಡಂ' ಎಂದು ಮಧು ಬಹಳ ಸಾರಿ ಹೇಳಿದಾಗ ಗಂಗಾಗೆ ಆತನ ಬಗ್ಗೆ ಪ್ರೀತಿಯೆನಿಸುತ್ತದೆ. ಏನು ಹುಚ್ಚು ಈ ಹುಡುಗನಿಗೆ, ಏನನ್ನು ಪ್ರತಿಫಲವಾಗಿ ಬಯಸುತ್ತಾನೆ ಈತ ಎಂದು ಕೆಲವು ಬಾರಿ ಗಂಗಾಗೆ ಅನ್ನಿಸುತ್ತದೆ. ಮಧುನ ಪ್ರೀತಿ-ವಿಶ್ವಾಸದ ಮುಂದೆ ತಾವು ಅವನಿಗೆ ಕೊಟ್ಟದ್ದು ಅಲ್ಪ ಎಂದೇ ಗಂಗಾಗೆ ಯಾವಾಗಲೂ ಅನ್ನಿಸುತ್ತಿತ್ತು. ವ್ಯಕ್ತಿತ್ವದಲ್ಲಿ ರಮೇಶ್ ಇನ್‌ಟ್ರಾವರ್ಟ್ ಆದರೆ ಮಧು ಬಾಹ್ಯ ಮತ್ತು ಆಂತರಿಕ ಚಲನೆಗಳ ಮಧ್ಯದ ವ್ಯಕ್ತಿತ್ವವನ್ನು ಹೊಂದಿದ್ದ. ಮಧು ಕರೆಂಟ್ ವಿಚಾರಕ್ಕೆ ಸಂಬಂಧಿಸಿ ಮನೆಗೆ ಬಂದಾಗಲೆಲ್ಲಾ ರಮೇಶ್ ಮನೆಯಲ್ಲಿದ್ದರೆ, ಆತನಿಗೆ ಬಿಡುವಿದ್ದರೆ ರಮೇಶನೂ ಮಧು ಜೊತೆ ಕುಳಿತು ಮಾತನಾಡುತ್ತಿದ್ದ. ಪ್ರೀತಿಯಿಂದ ಊಟ ಬಡಿಸುತ್ತಿದ್ದ. ಆದರೆ ರಮೇಶ ಯಾರಲ್ಲಿಯೂ ಅಷ್ಟು ಮನ ಬಿಚ್ಚಿ ಬೆರೆಯುತ್ತಿದ್ದುದೇ ಕಡಿಮೆ. ಕೆಲಸದ ವಲಯದಲ್ಲಿ ಪ್ರೀತಿ/ಸ್ನೇಹ ವಿಶ್ವಾಸದಿಂದ ವರ್ತಿಸುತ್ತಿದ್ದ ರಮೇಶ ಹೊರಗಡೆ ವ್ಯಕ್ತಿಗಳೊಂದಿಗೆ ಬೆರೆಯುತ್ತಿದ್ದುದೇ ಕಡಿಮೆ. ಆಗೆಲ್ಲಾ ಗಂಗಾಗೆ ಮನಸ್ಸಿಗೆ ಕಿರಿ ಕಿರಿಯಾಗುತ್ತಿತ್ತು. ಸಹಾಯ ಮಾಡಿದವರ್‍ಯಾರೇ ಆಗಲಿ ರಮೇಶ ಒಂದು ರೀತಿಯ ಬಿಗುವಿನಿಂದಲೇ ಪ್ರೀತಿ ತೋರಿಸುತ್ತಿದ್ದ ವ್ಯಕ್ತಿ. ಮಧುನ ಜೊತೆಯಲ್ಲಿ ಗಂಗಾಗೆ ಇದ್ದಷ್ಟು ಮಟ್ಟಿಗಿನ ಆತ್ಮೀಯತೆ ರಮೇಶನಿಗೆ ಬೆಳೆಯಲೇ ಇಲ್ಲ, ಅಷ್ಟರ ಮಟ್ಟಿಗೆ ಆತ್ಮೀಯತೆ ತೋರಿಸುವುದೂ ರಮೇಶನಿಗೆ ಇಷ್ಟವಿಲ್ಲದ ವಿಚಾರ ಎಂಬುದು ಗಂಗಾಗೆ ಅರಿವಿದ್ದ ವಿಚಾರ. ಯಾವಾಗಲೂ ಕೆಲಸ, ಕೆಲಸ ಎಂದು ಅನೇಕ ಜನರ ನಡುವೆ ಬೆರೆಯುವ ರಮೇಶನಿಗೆ - ತಾನು ಮನೆಗೆ ಬಂದಾಗ ಮನೆಯಲ್ಲಿ ಇತರರಾರು ಇರಬಾರದು, ತನಗೆ ತೊಂದರೆಯಾಗಬಾರದು ಎನ್ನುವಂತಹ ಯೋಚನೆಗಳು ಅವನಲ್ಲಿರುವುದನ್ನು ಗಂಗಾ ಗುರುತಿಸಿದ್ದಳು. ಹಾಗಾಗಿ ರಮೇಶ ಮನೆಗೆ ಬರುವ ಸಂದರ್ಭದಲ್ಲಿ ಆಕೆ ಯಾರನ್ನೂ ಮನೆಯಲ್ಲಿರಿ ಎಂದು ಒತ್ತಾಯಿಸುತ್ತಿರಲಿಲ್ಲ. ರಮೇಶ್ ಅಂತಹ ಸಂದರ್ಭದಲ್ಲಿ ತಾನಷ್ಟೇ ಬೇಸರಪಟ್ಟುಕೊಳ್ಳದೇ ತನ್ನ ಬಿಗುವಿನಿಂದಾಗಿ ಬಂದವರಿಗೂ ಗಲಿಬಿಲಿಗೊಳಿಸುತ್ತಿದ್ದ. ಗಂಗಾ ಇಂತಹ ಸಮಯದಲ್ಲಿ ತನ್ನನ್ನು ಆಕ್‌ವರ್ಡ್ ಸ್ಥಾನದಲ್ಲಿ ರಮೇಶ ನಿಲ್ಲಿಸಿಬಿಡುತ್ತಾನೆ ಎಂದು ಭಾವಿಸುತ್ತಿದ್ದಳು. ರಮೇಶನ ಇಂತಹ ಬೇಸರಗಳನ್ನರಿತ ಗಂಗಾ ಪರಿಚಯಸ್ಥರನ್ನು ರಮೇಶನ ಇರುವಿನಲ್ಲಿ ದೂರ ಸರಿಸಿ ಬಿಡುತ್ತಿದ್ದಳು. ಇದನ್ನು ಮಧುವಿಗೂ ಅನ್ವಯಿಸಿದ್ದಳು. ಕೆಲವೊಂದು ಬಾರಿ ರಮೇಶ ಗಂಗಾಳ ಒತ್ತಾಯಕ್ಕೋ ಅಥವಾ ಆತನಿಗೇ ಪ್ರೀತಿಯೆನಿಸಿ ಮಧುವಿನ ಜೊತೆ ಬೆರೆಯುತ್ತಿದ್ದುದುಂಟು. ಆದರೆ ಗಂಗಾ ಮಧುವಿನ ಬಗ್ಗೆ ಬೆಳೆಸಿಕೊಂಡ ಆತ್ಮೀಯತೆಯನ್ನು ರಮೇಶ ಮಧುವಿನ ಬಗ್ಗೆ ಬೆಳೆಸಿಕೊಳ್ಳಲೇ ಇಲ್ಲ. ಈ ಆತ್ಮೀಯತೆಯ ತಂತು ಕೆಲಸದ ಬಿಡುವಿನ ಸಮಯದಲ್ಲಿ ಗಂಗಾ ಮಧುವನ್ನು ಹುಡುಕಿಕೊಂಡು ಹೋಗುವಂತೆ ಮಾಡುತ್ತಿದ್ದುದು. ಮಧು ಆತನ ಆಫೀಸಿನ ಕತೆಗಳನ್ನೋ, ಆತನ ತಾಯಿಯ ಬಗ್ಗೆಗಿನ ಪ್ರೀತಿಯನ್ನೋ, ಇಲ್ಲವೇ ಆತನ ಆಫೀಸಿನ ಲಂಚದ ಕತೆಗಳನ್ನೋ ಹೇಳುವನು. ವಿನೋದವಾಗಿ ಮಾತನಾಡುವನು. ತನ್ನ ಜೀವನದ ಯಾಂತ್ರಿಕತೆ, ಜಡತ್ವ ಇಂತಹವುಗಳ ಮಧ್ಯೆ ಮಧುವಿನ ಆತ್ಮೀಯತೆಯಿಂದಾಗಿ ಮರುಭೂಮಿಯಲ್ಲಿ ಜಲ ಸಿಕ್ಕಂತೆನಿಸಿ ಗಂಗಾ ಜೀವನದಲ್ಲಿನ ಉತ್ಸಾಹವನ್ನು ಮತ್ತೆ ಪಡೆಯತೊಡಗಿದ್ದಳು.

* * * * *

ಮನೆಗೆ ಕರೆಂಟ್ ಬರುವ ಸ್ವಲ್ಪ ದಿನಗಳ ಮುಂಚೆ ಗಂಗಾಗೆ ಎಲ್ಲರಲ್ಲೂ ಕಣ್ಣೀರು ಸುರಿಸುವ ಪರಿಸ್ಥಿತಿ ಬಂತು. ಈ ನಡುವೆ ಇದ್ದಕ್ಕಿದ್ದ ಹಾಗೆ ಮಧುಗೆ ಮಂಗಳೂರಿಗೆ ವರ್ಗವಾಯಿತು. ಒಂದು ದಿನ ಪೇಪರ್ ಹಿಡಿದು ಮಧು ಮನೆಗೆ ಬಂದ. ಗಂಗಾ 'ಏನು ಡಾಕ್ಟರ್ ಹತ್ತಿರ ಹೋಗಿ ಬಂದಿರಾ ಮಧು' ಎಂದಳು. ಊಟ, ತಿಂಡಿ ಸರಿಯಾಗಿ ಇಲ್ಲದೇ ಹೊಟ್ಟೆ ನೋವಿನಿಂದ ನರಳುವ ಮಧುಗೆ ಗಂಗಾ ಪ್ರತಿ ನಿತ್ಯವೂ ಬಯ್ಯುತ್ತಿದ್ದಳು. 'ಗಂಡಸರಿಗೆ ಮನೆ ಅನ್ನುವಂತಹ ಒಂದು ಕಲ್ಪನೆಯೇ ಇರುವುದಿಲ್ಲ. ಒಂದು ಹಿಡಿ ಅಕ್ಕಿ ಬೇಯಿಸಿ, ಮೊಸರಲ್ಲಿ ತಿಂದರೆ ದರಿದ್ರ ಹೊಟ್ಟೆ ನೋವು ಯಾಕೆ ಬರುತ್ತೆ?' ಹೀಗೆಲ್ಲ ಬಯ್ದು ಮಧುವಿನ ಮನೆಗೆ ಹಾಲು ಹಾಕಿಸುವ ವ್ಯವಸ್ಥೆಯನ್ನು ಗಂಗಾ ಮಾಡಿದ್ದಳು. ಆದರೂ ಈ ಹುಡುಗರು ಮನೆಗೆಲಸಕ್ಕೆ ಹೇಗೆ ಒಗ್ಗುವುದಿಲ್ಲ ಎಂದು ಅವನನ್ನು ನೋಡಿದಾಗಲೆಲ್ಲಾ ಗಂಗಾಗೆ ಅನ್ನಿಸುತ್ತಿತ್ತು. ಹಾಗಾಗಿಯೇ ಆ ದಿನ ಹೊಟ್ಟೆ ನೋವೆಂದು ನರಳುತ್ತಿದ್ದ ಮಧುವನ್ನು 'ಡಾಕ್ಟರಲ್ಲಿ ಹೋಗಿ ಬಂದಿರಾ' ಎಂದು ವಿಚಾರಿಸಿದಳು. ಮಧು ಸುಮ್ಮನೇ ಇದ್ದ. ಏನನ್ನೂ ಮಾತನಾಡಲಿಲ್ಲ. ಕೊನೆಗೆ ಹೇಳಿದ, 'ಈ ಊರಿನಿಂದಲೇ ನನ್ನನ್ನು ಕಳಿಸುತ್ತಾ ಇದ್ದಾರೆ ಮೇಡಂ, ಡಾಕ್ಟರ್ ಹತ್ತಿರ ಏನು ಹೋಗೋದು' ಎಂದ. ಗಂಗಾಗೆ ಇದ್ದಕ್ಕಿದ್ದ ಹಾಗೆಯೇ ಶಾಕ್ ಆಯಿತು. ತಾನು ಏನೆಲ್ಲ ಪ್ರಯತ್ನ ಪಟ್ಟರೂ ತನಗೆ ವರ್ಗಾವಣೆ ಆಗಲಿಲ್ಲ. ಮಧು ಗಂಗಾಗೆ ಹೇಳಿಯೇ ಒಂದು ತುಣುಕು ಕಾಗದದಲ್ಲಿ ಅರ್ಜಿ ಬರೆದು ಬಿಸಾಕಿದ್ದ. ಇಷ್ಟು ಸುಲಭವಾಗಿ ಹೇಗೆ ಈತನಿಗೆ ವರ್ಗಾವಣೆ ಆಯಿತು? ಗಂಗಾ ಮಾತನಾಡಲಿಲ್ಲ. ಆಕೆಗೆ ಕಣ್ಣಲ್ಲಿ ನೀರು ತುಂಬಿಕೊಂಡಿತು. ಮಧು ಹೋಗಿಬಿಡುತ್ತಾನೆ. ರಮೇಶನಿಲ್ಲದ ಕ್ಷಣಗಳನ್ನೆಲ್ಲ ಆತ್ಮೀಯತೆಯಿಂದ, ಮಮತೆಯಿಂದ ಮಾತನಾಡಿ, ಕೆಲಸ ಮಾಡಿ ತುಂಬಿಕೊಡುತ್ತಿದ್ದ ಮಧು ಹೋಗಿಬಿಡುತ್ತಾನೆ. ಖಾಲಿ ಖಾಲಿಯಾದ ಸಾಯಂಕಾಲಗಳಿಗೆ ಚೈತನ್ಯ ತುಂಬುತ್ತಿದ್ದ ಮಧು ಹೋಗಿಬಿಡುತ್ತಾನೆ. ಇದೆಲ್ಲ ನೆನಪಿಗೆ ಬಂದಾಗ ಗಂಗಾ ಕಂಡೂ ಕಾಣದಂತೆ ಚಿಮ್ಮುತ್ತಿದ್ದ ಕಣ್ಣೀರನ್ನು ಒರೆಸಿಕೊಂಡಳು. 'Oh come on Madhu, ಇವೆಲ್ಲ ಕಾಮನ್, ಜೀವನ ಒಂಥರ ಪ್ರಯಾಣದ ತರಹ, ಈ ಪ್ರಯಾಣದಲ್ಲಿ ನೀವು ಇಷ್ಟು ದಿನ ನನ್ನ ಜೊತೆ ಆತ್ಮೀಯತೆಯಿಂದ ಇದ್ರಿ, ಇವತ್ತು ಹೊರಟು ಹೋಗ್ತೀರಿ. ಹಾಗೆಯೇ ಜೀವನದ, ಆತ್ಮೀಯತೆಯ ತಂತುಗಳನ್ನ ಯಾರ್‍ಯಾರೋ ಮೀಟುತ್ತಾರೆ, ಹೋಗುತ್ತಾರೆ. ಅದೆಲ್ಲ ಹಚ್ಕೊಂಡ್ರೆ ಹೇಗೆ?' ಅವಳು ನಗುತ್ತಾಳೆ. ಮಧುವಿನ ಮ್ಲಾನವದನವನ್ನು ನೋಡಿ, ಇನ್ನೇನು ದುಮುಕಿಬಿಡುವ ಕಣ್ಣೀರು ನೋಡಿ ಗಂಗಾ ಈ ಮಾತನ್ನಾಡಿದ್ದಳು. ಹೆಚ್ಚು ಹೆಚ್ಚು ಅದರ ಬಗ್ಗೆಯೇ ಮಾತನಾಡುತ್ತಾ ಹೋದರೆ ಎಲ್ಲಿ ಯಾರ ಭಾವನೆಗೆ ಪೆಟ್ಟು ಮಾಡಿಬಿಡುತ್ತೇವೋ ಎಂದು ಯಾರೂ ಮಾತನಾಡಲಿಲ್ಲ. ಕೊನೆಗೆ ಗಂಗಾ ಹೇಳಿದಳು, 'ನೋಡಿ ಮಧು ನೀವು ಹೋದರೆ ಯಾರ ಹತ್ತಿರ ನಾನು ಕರೆಂಟ್‌ಗೆ ಓಡಾಡೋದು? ನೀವು ಹೋಗುವುದರೊಳಗೆ ಆ ವ್ಯವಸ್ಥೆ ಮಾಡಿಕೊಟ್ಟು ಹೋಗ್ತೀರಲ್ಲ'. ಹೀಗೆನ್ನುವಾಗ ಗಂಗಾ ತಮಗಿದ್ದ ಅಸಹಾಯಕತೆಯನ್ನೆಲ್ಲ ಮಧುವಿನ ಮುಂದೆ ಬಿಚ್ಚಿಟ್ಟಿದ್ದಳು. ಕುರ್ಚಿಯ ಮೇಲೆ ಕುಳಿತು ಮಧು ಹೇಳಿದ, "ಮೇಡಂ ನನ್ನನ್ನು ಅಷ್ಟೊಂದು ಸ್ವಾರ್ಥಿ ಅಂದುಕೊಂಡಿರಾ? ನಿಮ್ಮ ಮನೆಗೆ ಕರೆಂಟ್ ವ್ಯವಸ್ಥೆ ಮಾಡಿಸಿಕೊಡೋ ತನಕ ನಾನು ರಿಲೀವ್ ಮಾಡಿಸಿಕೊಳ್ಳುವುದೇ ಇಲ್ಲ, ಯೋಚನೆ ಮಾಡಬೇಡಿ, ಹಾಗೆ ಒಂದು ಪಕ್ಷ ನಾನು ರಿಲೀವ್ ಆದ್ರೆ ಮಂಗಳೂರಿಗೆ ಹೋಗಿ ರಜ ಹಾಕಿ ಬಂದಾದರೂ ನಿಮ್ಮ ಮನೆಗೆ ದೀಪದ ವ್ಯವಸ್ಥೆ ಮಾಡಿ ಕೊಟ್ಟು ಹೋಗ್ತೀನಿ" - ಹೀಗೆ ಮಧು ಗಂಗಾಗೆ ಸಮಾಧಾನ ಮಾಡಿದ್ದನು.

ಆ ದಿನಗಳಲ್ಲಿ ಮಧು ರಿಲೀವ್ ಮಾಡಿಸಿಕೊಂಡು ಹೋಗಬೇಕೆನ್ನುವುದಕ್ಕಿಂತ ತಮ್ಮ ಮನೆಯ ಕರೆಂಟ್‌ಗಾಗಿ ರಜೆ ಹಾಕಿ ಓಡಾಡಿದ ರೀತಿ ನೋಡಿ ಗಂಗಾಗೆ ಬೇಸರವೆನಿಸಿತ್ತು. ಆತ ಯಾರು? ತಾನು

ಯಾರು? ತನಗಾಗಿ ಮಧು ಅಷ್ಟೇಕೆ ದುಡಿಯುತ್ತಾನೆ? ತಮ್ಮ ಮನೆಯ ಕರೆಂಟ್‌ಗಾಗಿ ಹಾಕುವ ಎನರ್ಜಿಯನ್ನು ಆತನ ವರ್ಗಾವಣೆಯ ವಿಚಾರದಲ್ಲಿ ಹಾಕಿದ್ದರೆ ಆತ ಮಂಗಳೂರಿಗಿಂತ ತನ್ನ ಸ್ವಂತ ಊರಿಗೇ ಹೋಗಿಬಿಡಬಹುದಿತ್ತೇನೋ? ಮಧುವಿಗೆ ಮಂಗಳೂರಿಗೆ ವರ್ಗವಾದ ದಿನದಿಂದ ಗಂಗಾ ಕೂಡ ಅವನೊಟ್ಟಿಗೆ ಹೋಗಿ ಎಲ್ಲಾ ಆಫೀಸರ್ಸ್ ಕಾಣತೊಡಗಿದ್ದಳು. ಈ ಕರೆಂಟ್‌ಗೋಸ್ಕರ ಕೊಡಬೇಕಾಗಿ ಬಂದ ಲಂಚದ ಬಗ್ಗೆ ಮಧುವಿಗೆ ತುಂಬಾ ಅಸಮಧಾನವಿತ್ತು. ಕಾಂಟ್ರ್ಯಾಕ್ಟರ್ ಹತ್ತಿರ 'ನಿಮಗೆ ಎಷ್ಟು ಜನರನ್ನು ನಾನು ಪರಿಚಯಿಸಿ ಕೊಟ್ಟಿಲ್ಲ. ಎಷ್ಟೋ ದುಡ್ಡು ತೆಗೆದುಕೊಂಡಿದ್ದೀರಿ. ಮೇಡಂ ವಿಚಾರದಲ್ಲಿ ಮಾತ್ರ ನೀವು ಇಷ್ಟು ನಿರ್ದಯಿಗಳಾಗಬಾರದು. ಅವರ ಮನೆ ಕರೆಂಟ್‌ಗೆ ಎನ್.ಓ.ಸಿ. ಕೊಡಿಸುವ ಬಗ್ಗೆ ನೀವು ಇಷ್ಟೊಂದು ಹಣ ಕೇಳಬಾರದು' ಎಂದು ಹೇಳುತ್ತಾನೆ. ಆತ ಗಂಗಾಳಿಗೇ ಮುಜುಗರವೆನಿಸುವಷ್ಟರ ಮಟ್ಟಿಗೆ ಬೆಗ್ ಮಾಡುತ್ತಾನೆ. ಆ ಕಾಂಟ್ರ್ಯಾಕ್ಟರ್ ಹತ್ತಿರ ಕೆಲಸ ಆಗುವುದಿಲ್ಲವೆನಿಸಿದಾಗ ಅವನ ಆಫೀಸ್ ವಲಯದಲ್ಲಿಯೇ ಇನ್ಯಾರನ್ನೋ ಪರಿಚಯ ಮಾಡಿಕೊಟ್ಟ. ಕಾಂಟ್ರ್ಯಾಕ್ಟರ್‌ಗಿಂತ ಕಡಿಮೆ ಮೊತ್ತದ ಲಂಚಕ್ಕೆ ಅವರು ಎನ್.ಓ.ಸಿ. ಕೊಡಿಸುತ್ತಾರೆ ಎಂದು ಅವರ ಹತ್ತಿರವೇ ಹೆಚ್ಚು ಹೆಚ್ಚು ಕಾಲ ಕಳೆಯತೊಡಗಿದ್ದ. ಇಷ್ಟೆಲ್ಲ ಓಡಾಡಿ, ಹಣ ಖರ್ಚು ಮಾಡಿದ ನಂತರವೇ ಗಂಗಾಳ ಮನೆಗೆ ಕರೆಂಟ್ ಬಂದದ್ದು. ಗಂಗಾ/ರಮೇಶರಿಗಿಂತ ಹತ್ತು ಪಟ್ಟು ಖುಷಿಪಟ್ಟವನು ಮಧು. ಬಹುಶಃ ತನಗೆ ಆತ್ಮೀಯರಾದವರಿಗೊಬ್ಬರಿಗೆ ಅತ್ಯಂತ ಕಷ್ಟದ ಕಾಲದಲ್ಲಿ ನೆರವಾದೆ ಎನ್ನುವ ಧನ್ಯಭಾವವೊಂದು ಅವನಲ್ಲಿ ಮೂಡಿದ ಹಾಗೆ ಇತ್ತು.

ಆನಂತರದ ದಿನಗಳಲ್ಲಿ ಮಧು ಮಂಗಳೂರಿಗೆ ಹೋಗುವುದಕ್ಕೆ ರಿಲೀವ್ ಮಾಡಿಸಿಕೊಳ್ಳಲು ಗಂಭೀರವಾಗಿ ಪ್ರಯತ್ನಿಸತೊಡಗಿದ್ದ. ಇನ್ನೆಂಟು, ಹತ್ತು ದಿನಗಳಲ್ಲಿ ಆತ ಮಂಗಳೂರಿಗೆ ಹೋಗಿಬಿಡುತ್ತಾನೆಂಬ ಅರಿವು ಅವನ ಆಫೀಸಿನವರಿಗಿತ್ತು. ಅವರೆಲ್ಲ ಈತನನ್ನು ಪ್ರಶ್ನಿಸುತ್ತಿದ್ದರು, 'ಮಂಗಳೂರಿಗೆ ಹೋಗಿ ಏನು ಮಾಡುತ್ತೀಯ?'ಅಲ್ಲಿಯ ಸಮುದ್ರದ ಬೀಚ್‌ನಲ್ಲಿ ಸಾಯಬೇಕು ಅಷ್ಟೇ! ಅದಕ್ಕಿಂತ ಇಲ್ಲಿರುವುದೇ ವಾಸಿ ಅಲ್ಲವೇ?'. ಮಧು ಇದ್ಯಾವುದನ್ನೂ ತಲೆಗೆ ಹಚ್ಚಿಕೊಳ್ಳದೇ ಮಂಗಳೂರಿಗೆ ಹೋಗಲು ಗಂಭೀರವಾಗಿ ಪ್ರಯತ್ನಿಸತೊಡಗಿದ್ದ.

ಈ ನಡುವೆ ಮಧು ಅಧಿಕವಾಗಿ ಗಂಗಾಳನ್ನು ಭೇಟಿಯಾಗುತ್ತಿದ್ದ. ಮಂಗಳೂರಿಗೆ ಹೋಗಿ ಬಿಡುತ್ತೇನೆ ಎಂಬ ನೋವು ಮಧುವನ್ನು ಸಾಕಷ್ಟು ಕಾಡುತ್ತಿತ್ತು. ಇಲ್ಲಿ ಬಿಡುವಾದಾಗಲೆಲ್ಲ ಮೇಡಂ ಸಿಕ್ಕುತ್ತಾರೆ. ಒಬ್ಬನೇ ಕುಳಿತಿದ್ದರೆ ಧಕ್ಕೆಂದು ಮನೆಗೆ ಬಂದು 'ಏಳಿ ಮಧು, ಕುಳಿತುಕೊಂಡು ಏನು ತಪಸ್ಸು ಮಾಡುತ್ತಿದ್ದೀರಾ? ನಿಮಗೆ ಹೇಳೋರು ಕೇಳೋರು ಯಾರೂ ಇಲ್ಲ, ಏನು ಒಂದು ತುತ್ತು ಅನ್ನ ಬೇಯಿಸಿಕೊಂಡು ಮೊಸರಲ್ಲಿ ತಿನ್ನೋಕೆ ನಿಮಗೇನು ಧಾಡಿ' ಎನ್ನುತ್ತಾಳೆ. ಈ ಒಂದು ವರುಷದಲ್ಲಿ ಬೆಂಗಳೂರಿನ ಯಾಂತ್ರಿಕತೆ, ಕ್ರೂರತೆ, ಮುಖವಾಡದ ಬದುಕಿನಲ್ಲಿ - ಪ್ರೀತಿ, ವಿಶ್ವಾಸ ಮಧು ಕಂಡದ್ದೇ ಗಂಗಾಳಲ್ಲಿ. ಹಾಗೆ ಮಧುಗೆ ಬೇರೆ ಆತ್ಮೀಯರೇನೂ ಇಲ್ಲ ಎಂದೇನೂ ಅಲ್ಲ. ಸಾಕಷ್ಟು ಗೆಳೆಯರು. ಸಂಜೆಯಾದರೆ 'ಏನಮ್ಮಾ ಬಾರ್‌ಗೆ ಬರ್ತೀಯ' ಎನ್ನುವ ಗೆಳೆಯರು; ದುಡ್ಡು ಕಾಸಿಗೆ ಜೇಬಿಗೇ ಕೈ ಹಾಕಿ 'ನೀನ್ ಬಿಡಮ್ಮ ಲಕ್ಷಾಧೀಶ' ಎನ್ನುವವರು; "ಇಸ್ಪೀಟಾಟದಲ್ಲಿ ನೀನು ನಿಸ್ಸೀಮ ಕಣೋ' ಎಂದು ಗಂಟೆಗಟ್ಟಲೇ ಆಡುವ ಗೆಳೆಯರು. ಆದರೂ ಕಾಯಿಲೆಯಾದಾಗ, ಮನಸ್ಸಿಗೆ ತೀರಾ ಒಂಟಿ ಎನಿಸಿದಾಗ, ಮನದ ಆಳದಲ್ಲಿ ಬೇಸರ ಕಾಡಿದಾಗ, ಬೆಂಗಳೂರಿನ ಯಾಂತ್ರಿಕತೆಯ ಕ್ರೂರತೆಯೆಲ್ಲಾ ತನ್ನ ಮೇಲೆ

ಎರಗಿದಾಗ ಆತನಿಗೆ ಬೆಚ್ಚಗೆ ಎನಿಸುತ್ತಿದ್ದುದು ಗಂಗಾಳ ಸಂಬಂಧದಲ್ಲಿ ಮಾತ್ರ. ಗಂಟೆಗಟ್ಟಲೆ ಮಧು ತನ್ನ ಸಮಯವನ್ನು ಗಂಗಾಳ ಮನೆಯಲ್ಲಿ ಕಳೆಯುತ್ತಿದ್ದ. ಆಕೆ ಕೊಡುವ ಪುಸ್ತಕಗಳನ್ನು ಓದಿ ಚರ್ಚೆ ಮಾಡುತ್ತಿದ್ದ. ತನ್ನ ಮುದ್ದಾದ ಅಕ್ಷರಗಳಿಂದ ಪತ್ರಿಕೆಯ ಬರಹ ಇತ್ಯಾದಿಗಳೇನಾದರೂ ಇದ್ದರೆ ಕಾಪಿ ಮಾಡಿಕೊಡುತ್ತಿದ್ದ. ಗಂಗಾಳಿಂದಾಗಿ ಮಧು ತಾನು ಮಹಿಳೆಯರ ಬಗ್ಗೆ ಯೋಚಿಸುವುದು ಬರಿಯ ಗಂಡು ಮನಸ್ಸಿನಿಂದ ಎಂದು ಅರಿಯತೊಡಗಿದ್ದ. 'ತಾನು ಮದುವೆಯಾದರೆ ಕೆಲಸದಲ್ಲಿ ಇಲ್ಲದೇ ಇರುವ ಹುಡುಗಿಯರನ್ನು ಮಾತ್ರ' ಎಂದು ಮಧು ಹೇಳಿದಾಗಲೆಲ್ಲಾ ಗಂಗಾ ತಮಾಷೆ ಮಾಡುತ್ತಿದ್ದಳು. 'ಯಾಕೆ ನಿಮಗೆ ಹೆಣ್ಣು ಎಂದರೆ ವ್ಯಕ್ತಿಯೇ ಅಲ್ಲ, ನಿಮಗೆ ಕೆಲಸ ಮುಗಿಸಿ ಬಂದಾಗ ನೋಡಲಿಕ್ಕೆ, ಕೆಲಸ ಮಾಡಲಿಕ್ಕೆ, ಮುದ್ದಿಸಲಿಕ್ಕೆ ಒಬ್ಬ ವ್ಯಕ್ತಿ ಬೇಕು. ಅದು ಮದುವೆ, ಹೆಣ್ಣಿನ ಬಂಧನದಲ್ಲಿ ಮಾತ್ರ ಅಲ್ಲವೇ?' ಎಂದು ಗಂಗಾ ತಮಾಷೆ ಮಾಡುವಳು. 'ಬದುಕಿನಲ್ಲಿ ನೀವಿನ್ನೂ ಚಿಕ್ಕವರು, ಬಹಳಷ್ಟು ಕಲಿಯಬೇಕು' ಎಂದು ವಿನೋದ ಮಾಡಿ ನಗುವಳು. ಗಂಗಾಳ ಸಾನಿಧ್ಯದಲ್ಲಿ ತಾನು ಬಹಳಷ್ಟು ಕಲಿಯುತ್ತಿದ್ದೇನೆ ಎಂದು ಮಧುಗೆ ಅನ್ನಿಸತೊಡಗಿತ್ತು. ಕೆಲಸ ಮುಗಿಸಿ ಬಿಡುವಾದಾಗಲೆಲ್ಲಾ ಮಧು ಗಂಗಾಳನ್ನು ಹುಡುಕಿಕೊಂಡು ಬರುತ್ತಿದ್ದ. ಮೊದ ಮೊದಲು ಕಾರಣಗಳಿಲ್ಲದೇ ಮನೆಗೆ ಬರಲು ಹಿಂಜರಿಯುತ್ತಿದ್ದ ಮಧು ಮಂಗಳೂರಿಗೆ ಹೋಗಿಬಿಡುತ್ತೇನೆ ಎನ್ನುವ ಸಂದರ್ಭದಲ್ಲಿ ಮನಸ್ಸು ಬಿಚ್ಚಿ ಮಾತನಾಡತೊಡಗಿದ್ದ. 'ಮೇಡಂ ನಿಮ್ಮ ಮನೆಗೆ ಬರಲು ಯಾವ ಕೆಲಸವೂ ಇಲ್ಲ, ಕಾರಣವೂ ಇಲ್ಲ, ಆದರೂ ಬರುತ್ತೇನೆ. ನಾನು ಮಂಗಳೂರಿಗೆ ಹೋಗಿಬಿಡುತ್ತೇನೆ ಎಂಬ ಭಯ ನನ್ನನ್ನು ಆವರಿಸತೊಡಗಿದೆ. ಅಲ್ಲಿಗೆ ಹೋದರೆ ನಿಮ್ಮಂತಹ ಆತ್ಮೀಯರನ್ನು ಎಲ್ಲಿ ಹುಡುಕಲಿ? ಕೆಲಸ ಮುಗಿದ ಕ್ಷಣಗಳಲ್ಲಿನ ನನ್ನ ಏಕಾಂಗಿತನ, ಒಂಟಿತನದ ಭಾವನೆಗಳನ್ನು ನಿಮ್ಮ ಸಂಬಂಧದಲ್ಲಿ ಹೋಗಲಾಡಿಸಿಕೊಳ್ಳುತ್ತೇನೆ. ಆದರೆ ಮಂಗಳೂರಿಗೆ ಹೋದರೆ ಅಲ್ಲಿ ಬೀಚ್‌ಗಳಲ್ಲಿ ಒಂಟಿಯಾಗಿ, ಅನಾಥನಾಗಿ ತಿರುಗಾಡಬೇಕಷ್ಟೇ.' ಹೀಗೆ ಮಧು ಕಾರಣವಿಲ್ಲದೇ, ಕೆಲಸವಿಲ್ಲದೇ ಗಂಗಾಳ ಮನೆಗೆ ಬರತೊಡಗಿದ ದಿನಗಳಲ್ಲಿ ಅವನು ಮಂಗಳೂರಿಗೆ ಹೋಗಿಬಿಡುತ್ತಾನೆಂಬುದು ಗಂಗಾ 'ಹಾಗೂ ಮಧುವಿನ ಮನಸ್ಸಿನಲ್ಲಿ ಬಲವಾಗಿ ಮೂಡತೊಡಗಿತ್ತು.

ಮಧು ಇನ್ನೇನು ತಾನು ಹೋಗಿಯೇಬಿಡುತ್ತೇನೆ ಎನ್ನುವ ದಿನದ ನಿರೀಕ್ಷೆಯಲ್ಲಿ ಒಂದು ದಿನ ಇದ್ದಕ್ಕಿದ್ದ ಹಾಗೆಯೇ 'ಮೇಡಂ ಕೊನೆಗೆ ನಾನು ನನ್ನ ಮನಸ್ಸಿನಲ್ಲಿ ಏನಿದೆ ಅಂತ ನಿಮಗೆ ಹೇಳದೆಯೇ ಇಲ್ಲಿಂದ ಹೊರಟು ಹೋಗ್ತೀನಿ ಅಂತ ಕಾಣುತ್ತೆ' ಅಂದ. ಗಂಗಾ ಅರ್ಥೈಸಿಕೊಳ್ಳಲು ಪ್ರಯತ್ನಿಸಿದಳು. 'ಏನು ಮಧು ಮನಸ್ಸಿನಲ್ಲಿರುವುದು, ಏನು ಹೇಳಿ' ಎಂದು ಹಲವಾರು ಬಾರಿ ಮಧುವನ್ನು ಗೋಳಿಟ್ಟುಕೊಂಡಳು. ಮಧು ಬಾಯಿ ಬಿಡಲಿಲ್ಲ. 'ಇಲ್ಲ ಮೇಡಂ ಈಗ ಬೇಡ, ನಾನು ಮಂಗಳೂರಿಗೆ ಹೋದ ಮೇಲೆ ಪತ್ರಿಸುತ್ತೇನೆ. ಬಹುಶಃ ಅದರಲ್ಲಿ ನಾನು ಬರೆಯುತ್ತೇನೆ' ಎಂದ. ಗಂಗಾ ಮತ್ತೆ ಮತ್ತೆ ಕೇಳುವುದು ಬೇಡವೆಂದು ಸುಮ್ಮನಾದಳು.

ಮಧು ಮಂಗಳೂರಿಗೆ ಹೋಗಿಬಿಡುತ್ತಾನೆ ಎಂಬ ಅರಿವು ಗಂಗಾಳಲ್ಲಿ ಭಯ/ಆತಂಕ ಎರಡನ್ನೂ ಹುಟ್ಟುಹಾಕುತ್ತದೆ. ತನ್ನ ಜಡತ್ವವನ್ನೂ, ತನ್ನ ಯಾಂತ್ರಿಕತೆಯನ್ನು ಮೀರಿಸಿ ತನ್ನ ಬದುಕಿಗೆ ಚಾಲನೆ ನೀಡುತ್ತಿದ್ದ ಮಧು ಹೊರಟು ಹೋಗಿಬಿಡುತ್ತಾನೆ. ಹೀಗೇ ಒಂದು ದಿನ ಗಂಗಾ ಮಧುವನ್ನು ಅರಸಿ ಅವನ ಮನೆಗೆ ಹೋದಳು.

ಫುಟಾಣಿ ಮನೆ. ಮಧು ಕುಳಿತಿದ್ದ. ಆಕೆಗೇ ಆತ ಕಾಯುತ್ತಿದ್ದ. ಒಬ್ಬರಿಗಾಗಿ ಒಬ್ಬರು ಕಾಯುವ, ತುಡಿಯುವ ಈ ಕ್ರಿಯೆಯಲ್ಲಿ ಯಾವ ಆತ್ಮೀಯತೆಯ ತಂತು ಅಡಗಿತ್ತೋ? ಮಧು ಯಾಕೆ ಹೊರಟು ಹೋಗುತ್ತಾನೆ? ದೇವರೇ ನನ್ನಿಂದ ಯಾಕೆ ಎಲ್ಲವನ್ನೂ ಕಸಿದುಕೊಂಡು ಹೋಗುತ್ತೀಯ? ಮಧು ಕುರ್ಚಿಯ ಮೇಲೆ ಗದ್ದಕ್ಕೆ ಕೈ ಕೊಟ್ಟು ಕುಳಿತಿದ್ದ. 'ಬನ್ನಿ ಮೇಡಂ' ಎಂದು ತಕ್ಷಣ ಎದ್ದು ಕರೆದ. ಗಂಗಾ ಕುಳಿತುಕೊಂಡಳು. ನಿಧಾನವಾಗಿ ಮಧುವಿನ ಹತ್ತಿರ ಮಾತನಾಡುತ್ತಾ 'ಮಧು ಬಹುಶಃ ನಾನು ಇಷ್ಟು ದಿನ ಹಂಚಿಕೊಳ್ಳದ ನನ್ನ ಬದುಕಿನ ಭಾಗವನ್ನು ನಿಮ್ಮ ಹತ್ತಿರ ಹಂಚಿಕೊಳ್ಳೋಣ ಎಂದು ಬಂದಿದ್ದೇನೆ' ಎಂದಳು.

ಮಧುಗೆ ಆಶ್ಚರ್ಯವಾಯಿತು. ಅಂದರೆ ಇವರು ಇಷ್ಟೊಂದು ನಿಗೂಢ ಎಂದು ಇಷ್ಟು ದಿನ ತನಗೆ ಅನ್ನಿಸಿರಲೇ ಇಲ್ಲ. ಗಂಗಾಗೆ ಬಿಚ್ಚಿಕೊಳ್ಳುವ ಎಷ್ಟು ಮುಖಗಳಿವೆ? ಮೇಡಂ ತನ್ನ ಹತ್ತಿರ ಹಂಚಿಕೊಂಡಿರಲಾರದ ಬದುಕಿನ ಭಾಗಗಳೇನಿರಬಹುದು? ಮಧು ಕಂಡ ಹಾಗೆ ರಮೇಶ್/ಗಂಗಾರ ಮಧ್ಯದ ಸಂಬಂಧ ಮಾಧುರ್ಯದಿಂದ ತುಂಬಿತ್ತು, ಸೌಂದರ್ಯದಿಂದ ಕೂಡಿತ್ತು. ರಮೇಶ ರಾತ್ರಿ ಬರದಿರುವ ದಿನಗಳಲ್ಲಿ ಗಂಗಾ ಗಾಭರಿಯಾಗಿರುವುದನ್ನು ಮಧು ಕಂಡಿದ್ದ. ಎಷ್ಟೋ ರಾತ್ರಿಯ ಹತ್ತು ಘಂಟೆಯ ವೇಳೆಗೆ ಮಿತಾಳೊಡನೆ ಗಂಗಾ ಗಾಭರಿಯಾಗಿ ಮಧುವಿನ ಮನೆಗೆ ಬಂದದ್ದುಂಟು. 'ಮಧು ನಿಮ್ಮ ಆಫೀಸಿನಿಂದ ಫೋನ್ ಮಾಡ್ತೀರಾ? ರಮೇಶ ಇಷ್ಟು ಹೊತ್ತಾದರೂ ಮನೆಗೆ ಬಂದಿಲ್ಲ ನನಗೆ ಭಯ' ಎಂದು ಬಡಬಡಿಸಿ ಮಾತನಾಡಿದುದುಂಟು. 'ಯಾಕೆ ಮೇಡಂ ಇಷ್ಟು ಗಾಬರಿಯಾಗ್ತೀರಾ, ಬರ್ತ್ತಾರೆ, ಎಲ್ಲೋ ಬಸ್ ಲೇಟ್ ಆಗಿರಬಹುದು. ಸಮಾಧಾನಿಸಿಕೊಳ್ಳಿ', ಗಂಗಾಳ ಕಣ್ಣಲ್ಲಿ ತುಂಬಿಕೊಂಡಿರುವ ನೀರನ್ನು ನೋಡಿ ಸಮಾಧಾನದ ಮಾತುಗಳನ್ನಾಡುತ್ತಿದ್ದ ಮಧು. ಇಂತಹ ಸನ್ನಿವೇಶಗಳನ್ನು ಮಧು ಗಂಗಾ-ರಮೇಶರ ಸಂಬಂಧದಲ್ಲಿ ಸಾಕಷ್ಟು ಬಾರಿ ಕಂಡಿದ್ದ. ಆಗೆಲ್ಲಾ ಹೃದಯದ ಒಳಗೆಲ್ಲೋ ಅವನಿಗೆ ಅವನ ಜೀವನದ ಕೊರಗು ಅರ್ಥವಾಗಿತ್ತು. ಗಂಗಾ ರಮೇಶನನ್ನು ಎಷ್ಟೊಂದು ಅಗಾಧವಾಗಿ ಪ್ರೀತಿಸುತ್ತಾರೆ. ಆತ ಸ್ವಲ್ಪ ಲೇಟಾಗಿ ಬಂದರೆ ಆ ಸಮಯದಲ್ಲಿ ಹೇಗೆ ಒದ್ದಾಡುತ್ತಾರೆ? ಗಂಗಾಳ ಒದ್ದಾಟ ನೋಡಿದಾಗಲೆಲ್ಲಾ ಮಧು ಕೇಳುತ್ತಿದ್ದ, 'ಏಕೆ ಹೀಗೆ ಒದ್ದಾಡುತ್ತೀರಿ, ಬರದೇ ಎಲ್ಲಿಗೆ ಹೋಗುತ್ತಾರೆ? ಬರ್ತ್ತಾರೆ ಬಿಡಿ' ಎಂದಾಗಲೆಲ್ಲಾ ಗಂಗಾ ಹೇಳುತ್ತಿದ್ದಳು, 'ಮಧು ನಿಮಗೆ ಗೊತ್ತಿಲ್ಲ, ಸಾವಿನ ಭಯ ಚಿಕ್ಕ ವಯಸ್ಸಿನಿಂದಲೂ ನನಗೆ ಅಂಟಿಕೊಂಡುಬಿಟ್ಟಿದೆ. ಯಾವ ಭಯಾನಕ ವಾಹನದ ಕಣ್ಣುಗಳು ನನ್ನ ರಮೇಶನನ್ನು ಆಹುತಿ ತೆಗೆದುಕೊಳ್ಳಲು ಕಾದಿವೆಯೋ ಎಂದೆನಿಸಿದಾಗಲೆಲ್ಲಾ ಕುಳಿತಲ್ಲೇ ಬಿಕ್ಕಿ ಬಿಕ್ಕಿ ಅಳುತ್ತೇನೆ. ಈ ಪ್ರಪಂಚದಲ್ಲಿ ನಾನೆಷ್ಟು ಒಂಟಿ, ಅನಾಥೆ ಎನಿಸತೊಡಗುತ್ತದೆ. ಬೆಂಗಳೂರಿನ ಯಾವ ಮೂಲೆಯಲ್ಲಿ ಯಾವ ಭಯಂಕರ ವಾಹನ ಅವನ ಮೇಲೆ ಎರಗಿದೆಯೋ ಎಂಬ ದಿಗ್ಭ್ರಮೆ. ರಮೇಶ ಬರುವುದು ಸ್ವಲ್ಪ ತಡವಾದರೆ ನಾನೇನು ಮಾಡುತ್ತಿರುತ್ತೇನೆ ಎಂಬುದು ನನಗೇ ತಿಳಿದಿರುವುದಿಲ್ಲ ಮಧು, ಮನೆಯ ಹೊರಗೆ ಕಲ್ಲು ಬೆಂಚಿನ ಮೇಲೆ ಕುಳಿತು ಆಕಾಶ ತುಂಬಿರುವ ಚುಕ್ಕೆಗಳ ಎಣಿಸುತ್ತೇನೆ. ಸತ್ತಿರುವ ತಾಯಿಯ ನೆನೆಸಿಕೊಳ್ಳುತ್ತೇನೆ. ಆಕೆಯ ತಣ್ಣಗಿನ ದೇಹವನ್ನು ಮುಟ್ಟಿವೆ ಈ ಕೈಗಳು. ಸಾವಿನ ಕ್ರೂರತೆಯ ಅಂಚು-ಇಂಚುಗಳನ್ನು ನಾನು ತಾಯಿಯ ಸಾವಿನಲ್ಲಿ ಕಂಡಿದ್ದೇನೆ ಮಧು. ಹಾಗಾಗಿ ಈಗ ನನಗೆ ಜೀವಕ್ಕೆ ಜೀವವಾಗಿರುವ ವ್ಯಕ್ತಿಯೆಂದರೆ ರಮೇಶ. ಅವನು ಇಲ್ಲವೆಂದರೆ ಇಲ್ಲಿ ನನ್ನ ಅಸ್ತಿತ್ವಕ್ಕೆ ಬೆಲೆಯೇ ಇಲ್ಲವೇನೋ ಎನ್ನುವಷ್ಟು' ಹೀಗೆಲ್ಲ ಮಾತನಾಡುವಾಗ ಗಂಗಾಳ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತದೆ. ಮಧುಗೆ ಕಾಣಿಸಬಾರದು ಎಂಬಂತೆ ಗಡಿಬಿಡಿಯಿಂದ ಆಕೆ ಕಣ್ಣೀರು

ಒರೆಸಿಕೊಳ್ಳುತ್ತಾಳೆ. ಗಂಗಾಳ ಬಾಯಿಂದ ಈ ಮಾತುಗಳನ್ನು ಮಧು ಬಹಳಷ್ಟು ಸಲ ಕೇಳಿದ್ದಾನೆ. ಆತ ರಮೇಶನನ್ನು ಹೆಚ್ಚು ಇಷ್ಟಪಡುತ್ತಿದ್ದುದೂ ಗಂಗಾಳ ಮೂಲಕವಾಗಿಯೇ. ಮೊದ ಮೊದಲು ಸಮಾಧಾನ ಮಾಡಲು ಪ್ರಯತ್ನಿಸುತ್ತಿದ್ದ ಮಧು ಕೊನೆ ಕೊನೆಗೆ ಸಮಾಧಾನಿಸುವ ಪ್ರಯತ್ನವನ್ನೇ ಬಿಟ್ಟುಬಿಟ್ಟಿದ್ದ. ಗಂಗಾ ರಮೇಶನಿಗೆ ಫೋನ್ ಮಾಡಿ ಎಂದು ಕೇಳಿದಾಗಲೆಲ್ಲಾ ಪ್ರೀತಿಯಿಂದಲೇ ಫೋನ್ ಮಾಡಿ ಬರುತ್ತಿದ್ದ. ಕೆಲವು ಸಲ ರಮೇಶ್ ಕೂಡಾ ಈ ಬಗ್ಗೆ ತಮಾಷೆ ಮಾಡುತ್ತಿದ್ದುದುಂಟು. 'ಮಧು, ಗಂಗಾ ನಿಮ್ಮನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾಳೆ ಎಂಬುದು ನಿಮಗೆ ಅರ್ಥವೇ ಆಗುವುದಿಲ್ಲ' ಎಂದು. ಆಗೆಲ್ಲಾ ಮಧು ನಕ್ಕುಬಿಡುತ್ತಿದ್ದ. 'ಇರ್ಲಿ ಬಿಡಿ ಸಾರ್, ನೀವು ಬರುವುದರ ಬಗ್ಗೆ, ನಿಮ್ಮ ಇರುವಿಕೆಯ ಬಗ್ಗೆ ಅವರಿಗೆ ಅಷ್ಟೊಂದು ಕಾಳಜಿ ಇದೆ ಎಂದರೆ ನೀವು ಹೆಮ್ಮೆ ಪಡಬೇಕು' ಎನ್ನುತ್ತಿದ್ದ. ಹೀಗೆ ಮಧು ಗಂಗಾಳಿಂದಾಗಿ, ರಮೇಶ ಗಂಗಾಳೊಳಗೆ ಅಡಗಿದ ವ್ಯಕ್ತಿಯಾದುದರಿಂದ, ಅವರು ತನಗೆ ಅತ್ಯಂತ ಹತ್ತಿರದವರು, ಆತ್ಮೀಯರು ಎಂದೇ ಭಾವಿಸಿ ಪ್ರೀತಿಸತೊಡಗಿದ್ದ. ಆದರೆ ಮಧುವಿನ ಜೊತೆ ರಮೇಶ ಕಳೆಯುತ್ತಿದ್ದ ಆತ್ಮೀಯ ಕ್ಷಣಗಳು ಅತ್ಯಂತ ಕಡಿಮೆ. ಮಧುವಿನ ಆತ್ಮೀಯತೆಯ, ವಿಶ್ವಾಸದ ತುಡಿತಗಳನ್ನು ರಮೇಶ ಅರ್ಥ ಮಾಡಿಕೊಳ್ಳಲೇ ಇಲ್ಲ ಎಂಬ ನೋವು ಗಂಗಾಳಲ್ಲಿ ತೀವ್ರವಾಗಿ ಮನೆ ಮಾಡಿತ್ತು.

ಈಗ ಗಂಗಾ ಮತ್ತೆ ನಿಗೂಢ ಎನಿಸತೊಡಗಿತು ಮಧುವಿಗೆ. ಅವರು ಹೇಳಲಾರದೇ ಬಚ್ಚಿಟ್ಟುಕೊಂಡದ್ದು ಏನನ್ನು? ಏನನ್ನು ಹೇಳುತ್ತಾರೆ ಮೇಡಂ? ಹೀಗೇ ಎಷ್ಟೆಷ್ಟೋ ಘಟನೆಗಳ ಮೂಲಕ ತನ್ನನ್ನು ತಿದ್ದಿದ್ದಾರೆ, ಮೇಡಂ ತನ್ನ ಭಾವನೆಗಳನ್ನು ರೂಪಿಸಿಕೊಳ್ಳಲು ಸಹಕರಿಸಿದ್ದಾರೆ. ಈ ದಿನ ಏನು ಹೇಳುತ್ತಾರೆ? ಮಧುವಿನ ಮನಸ್ಸಿನಲ್ಲಿ ಯಾವುದೋ ಸಂತೋಷದ ಲಯವೊಂದು ಹಾದುಹೋಯಿತು. ಏನು ಸಂತೋಷ ಎಂದು ಆತ ಹೇಳಲಾರ. ಯಾವಾಗಲೂ ಬಯ್ದೋ, ನಕ್ಕೋ, ರೇಗಿಸಿಯೋ ಮಾತನಾಡುತ್ತಿದ್ದ ಮೇಡಂ ಇಂದು ಏನನ್ನೋ ಹಂಚಿಕೊಳ್ಳಲು ಬಂದಿದ್ದಾರೆ. ಹಂಚಿಕೊಂಡಿರದ ಬದುಕಿನ ಭಾಗವನ್ನು ನಿನ್ನೊಡನೆ ಹಂಚಿಕೊಳ್ಳಲು ಬಂದಿದ್ದೇನೆ ಮಧು ಎಂದು ಮನಬಿಚ್ಚಿ ಹೇಳುತ್ತಿದ್ದಾರೆ. ಇವರ ಜೀವನದೊಳಗೂ ನಿಗೂಢಗಳಿವೆಯೇ? ಮಧು ಮೈಯೆಲ್ಲಾ ಕಿವಿಯಾಗಿಸಿ ಕುಳಿತುಕೊಂಡ. ಗಂಗಾ ಒಂದೊಂದೇ ಮಾತನ್ನು ನಿಧಾನವಾಗಿ, ಮಧು ಕೇಳಿಸಿಕೊಳ್ಳಲಿ ಎಂಬ ರೀತಿಯಲ್ಲಿ ಒಂದೊಂದೇ, ಒಂದೊಂದೇ ಮಾತನ್ನು ಅವನೊಡನೆ ಹಂಚಿಕೊಳ್ಳತೊಡಗುತ್ತಾಳೆ.

* * * * *

ಭಾಗ - ೨

Row row row your boat
gently down the stream
merrily merrily merrily
life is but a dream

ಸೂರ್ಯನೇ ಇಲ್ಲದ ದೇಶದಲ್ಲಿ ಗಂಗಾಳ ಮೈಗೆ ಬಿಸಿಲು ಹೊಡೆಯತೊಡಗಿದೆ. ಸಮುದ್ರದ ಮೊರೆತದಲ್ಲಿ ತೇಲಿ ಬರುತ್ತಿರುವಂತೆ ಸೂರ್ಯ ತನ್ನ ಒಂದೊಂದೇ ಕಿರಣಗಳನ್ನು ಚಾಚುತ್ತಿದ್ದಾನೆ. ಸಾಯಂಕಾಲ 6.30ರ ಸಮಯದಲ್ಲಿ ಶಿವಮೊಗ್ಗೆಯ ತನ್ನ ಹಳ್ಳಿಯ ಮನೆಯಲ್ಲಿ ಸೂರ್ಯ ಎಳೆಬಿಸಿಲು ಚೆಲ್ಲುವ ರೀತಿಯಂತೆ ಕಾಣುತ್ತದೆ. ಈ ಸ್ಥಳದ ಪ್ರಶಾಂತತೆಯೊಂದೇ ಇಲ್ಲಿಯ ಜೀವನ ಎಂದು ಕಾಣುತ್ತದೆ. ಹುಲಿಯಂತಹ ನಾಯಿ ಹಿಡಿದ ಜನರು ಸಮುದ್ರದ ಅಲೆಗಳೊಂದಿಗೆ ಸ್ಪರ್ಧೆ ನಡೆಸುತ್ತಿದ್ದಾರೆ. ಕೈ, ಕೈ ಹಿಡಿದ ಹುಡುಗ, ಹುಡುಗಿಯರು ಯಾವ ಭಾವನೆಗಳೂ ಇಲ್ಲದಂತೆ ಸಾಗುತ್ತಿದ್ದಾರೆ. ಭಾರತೀಯ ಹುಡುಗ-ಹುಡುಗಿಯರ ಮುಖದಲ್ಲಿ ಕಾಣುವ ಉತ್ಸಾಹ-ಉನ್ಮಾದಗಳು ಇವರಲ್ಲಿ ಕಾಣುವುದಿಲ್ಲ. ಎಲ್ಲಾ ಶಾಂತವಾಗಿ ನಡೆದುಬಿಡುತ್ತದೆ. ಸಮುದ್ರದ ಮೊರೆತ ಕೂಡಾ ಈ ಸ್ಥಳದ, ಈ ಜನರ ಬದುಕಿನ ಶಾಂತತೆ, ಗಂಭೀರತೆಯನ್ನು ಕದಡುವುದಿಲ್ಲ.

ಶಾಂತವಾಗಿ ಕಾಣುವ ಈ ಜನರ ಬದುಕಿನ ಒಳಗಡೆ ಕಾಡಬಹುದಾದ ಸಂಗತಿಗಳೇನಿರಬಹುದು ಎಂಬುದು ಗಂಗಾಗೆ ಕುತೂಹಲವಾಗಿ ಕಾಣುತ್ತದೆ. ಸಾವು......? ಒಂಟಿತನ.....? ಸುಖದ ಸುಪ್ಪತ್ತಿಗೆಯ ಬರಡುತನ. ಎಲ್ಲವೂ ನೀಟಾಗಿ, ಶಾಂತವಾಗಿ ನಡೆಯುತ್ತದೆ. ಘಂಟೆಗೆ ಸರಿಯಾಗಿ ಅಂಗಡಿಗಳು ತೆಗೆಯುತ್ತವೆ, ಮುಚ್ಚುತ್ತವೆ, ಟ್ರ್ಯಾಮ್‌ಗಳು ಬರುತ್ತವೆ, ಹೋಗುತ್ತವೆ. ಕಾರುಗಳಲ್ಲಿ ಜನ ಬರುತ್ತಾರೆ, ಹೋಗುತ್ತಾರೆ. ಬ್ಯಾಂಕ್‌ಗಳಲ್ಲಿ, ಪೋಸ್ಟ್ ಆಫೀಸ್‌ಗಳಲ್ಲಿ ಜನ ಕಾಯುವುದಿಲ್ಲ. ತಾವಾಗಿಯೇ ತೆರೆದುಕೊಳ್ಳುವ ಬಾಗಿಲುಗಳೊಳಗೆ ನಿಧಾನವಾಗಿ ಚಲಿಸುವ ಜನ ಗಲಾಟೆ, ಗದ್ದಲಗಳಿಲ್ಲದೇ ಕೆಲಸ ಮುಗಿಸಿ ಬರುತ್ತಾರೆ. ದಾರಿಯಲ್ಲಿ ಎಲ್ಲೆಂದರಲ್ಲಿ ಭಿಕ್ಷುಕರಿಲ್ಲ, ನಿಮ್ಮನ್ನು ಧೃತಿಗೆಡಿಸುವ ಮುಗ್ಧ ಕಣ್ಣುಗಳಿಲ್ಲ. ತಲೆಯೆತ್ತಿದಲ್ಲಿ ಸೌಧಗಳು, ನೀಟಾದ ರಸ್ತೆಗಳು, ನಗು ಮುಖದಿಂದ ಸ್ವಾಗತಿಸುವ, ಮೃದುವಾಗಿ ಮಾತನಾಡುವ ಜನರು. ಗದ್ದಲಗಳಿಲ್ಲ, ಗಲಾಟೆಗಳಿಲ್ಲ, ಜನ ಓಡುವುದಿಲ್ಲ, ಓಡುವ ಜಗತ್ತಿನಂತೆ ಈ ಬದುಕು ಕಾಣುವುದೂ ಇಲ್ಲ.

ನಗೆ ಮುಖದ, ಮೃದು ಧ್ವನಿಯ ಈ ಡಚ್ ಸುಂದರಿಯ ಒಡಲಲ್ಲಿ ಇನ್ನಾವ ನಿಗೂಢ ಗಳಡಗಿವೆಯೋ ಗಂಗಾಳಿಗೆ ಗೊತ್ತಿಲ್ಲ. ಶಾಂತವಾಗಿ ಕಾಣುವ ಡಚ್ ಸುಂದರಿ ಘೋರವಾಗಿರಬಹುದು. ವಿಷ ತುಂಬಿಕೊಂಡಿರಬಹುದು. ಅಗೋಚರವಾಗಿರಬಹುದು.

ಗಂಗಾಗೇನೋ ಮೃದು ನಗೆಯ ಸ್ವಾಗತವೇ ಸಿಕ್ಕಿದೆ. ಮಲ್ಲಿಗೆಯಂತೆ ಜನ ಮಾತನಾಡಿಸಿದ್ದಾರೆ. ನಕ್ಕಿದ್ದಾರೆ. ಬೆನ್ನು ತಟ್ಟಿ ದಾರಿ ತೋರಿಸಿದ್ದಾರೆ. ಸದ್ಯಕ್ಕೆ ಹಣದ ಸ್ತರಗಳಲ್ಲೇ ಗಂಗಾಳ ಬದುಕು ನಡೆಯುತ್ತಿದೆ. ಹಣವಿಲ್ಲದಿದ್ದರೆ ಡಚ್ ಸುಂದರಿಯ ನಾಡಿಯ ಹಿಡಿತ ಹಿಡಿಯುವುದು ಕಷ್ಟವಾಗ ಬಹುದೆಂಬುದು ಗಂಗಾಗೂ ತಿಳಿದಿದೆ. ಅಲ್ಲಿಯ ಜನಕ್ಕೆ ಪುರುಸೊತ್ತಿಲ್ಲ. ನಿಂತು ಕ್ಷಣ ನೀವು ಮಾತನಾಡಿಸಿದರೆ ಕೇಳುತ್ತಾರೆ, ನಗುತ್ತಾರೆ, ಮಲ್ಲಿಗೆಯಂತೆ ಮೃದು ಧ್ವನಿಯಲ್ಲಿ ಮಾತನಾಡುತ್ತಾರೆ. ನಂತರ ನಡೆದುಬಿಡುತ್ತಾರೆ - ಸಂಬಂಧವೇ ಇಲ್ಲದ ಹಾಗೆ. ಹಣ ಇಲ್ಲದ ಮಂದಿಗೆ ಈ ಸುಂದರಿ ಮುಖ ತಿರುಗಿಸಬಹುದು, ವಿಷ ಕಾರಬಹುದು, ಒಡಲುರಿ ಹೆಚ್ಚಿಸಬಹುದು.

ಯಾವ ರಾಷ್ಟ್ರಗಳ ಕೊಳ್ಳೆ ಹೊಡೆದ ಸಂಪತ್ತು ಈ ದೇಶದ ನಾಗರಿಕತೆಯಲ್ಲಿ ಹರಿಯುತ್ತದೆಯೋ ಗಂಗಾಗೆ ಗೊತ್ತಿಲ್ಲ. ಈ ಸಮುದ್ರದ ಅಲೆಗಳ ಮೊರೆತದ ಹಾಗೆ, ಈ ದೇಶದ ನಾಡಿಯ ನಾಗರಿಕತೆಯ ಕೆಳಗೂ ಅಲೆಗಳ ಶಬ್ದ ಹೊಡೆದಿರಬಹುದು, ಗಲಾಟೆ ಗದ್ದಲಗಳಿದ್ದಿರಬಹುದು. ಸೂರ್ಯನ ಕೆಂಪು ಕಿರಣಗಳು ಅಲೆಗಳನ್ನೆಲ್ಲ ಕೆಂಪಾಗಿಸುತ್ತವೆ. ಹಾಗೆಯೇ ಈ ಡಚ್ ಜನರು ಸೂರ್ಯನನ್ನು ಹಿಡಿಯುವ ಆತುರದಲ್ಲಿ ಭಾರತದಲ್ಲೇಕೆ, ಇತರ ಖಂಡಗಳ ಪಾಪದ ಜನರ ರಕ್ತ ಹರಿಸಿರಬಹುದು. ಇತರ ಖಂಡಗಳಲ್ಲಿ ಅಂಗಲಾಚುವ ಭಿಕ್ಷುಕರ ಬವಣೆಗೆ ಕಾರಣರಾಗಿರಬಹುದು. ಈ ರಕ್ತ ಚೆಲ್ಲಿದ ಪಾಪಕ್ಕೋ ಏನೋ ಎಂಬಂತೆ ಇಲ್ಲಿ ಸೂರ್ಯ ಆಗೊಮ್ಮೆ-ಈಗೊಮ್ಮೆ ಮಾತ್ರ ಕಾಣಿಸಿಕೊಳ್ಳುತ್ತಾನೆ. ಸಾಯಂಕಾಲ ನಾಚಿಕೆಯಿಂದೆಂಬಂತೆ ನಿಧಾನವಾಗಿ ತನ್ನ ಮುಖ ತೂರಿಸುತ್ತಾನೆ. ಡಚ್ ಸುಂದರಿಯ ಒಡಲಲ್ಲಿ ಹಕ್ಕಿಗಳು, ಹೂವುಗಳು ಗಂಗಾಳಿಗೆ ಕಾಣಿಸಲಿಲ್ಲ. ಕೂಗಿ, ನಕ್ಕು ಸ್ವಾಗತಿಸಲಿಲ್ಲ. ಅಂಗಡಿಯಲ್ಲಿ ಮಾರಲ್ಪಡುತ್ತಿದ್ದುದು ಗಂಗಾಳಿಗೆ ಕಾಣಿಸಿದೆ. ದಾರಿಯಲ್ಲೆಲ್ಲಾ ಮುದುಕ ಮುದುಕಿಯರು ಬಗಲಲ್ಲಿ ಕೈ ಹಾಕಿ ನಡೆಯುವುದನ್ನು ಗಂಗಾ ದಿನಾ ಕಾಣುತ್ತಾಳೆ. ಗಂಗಾಳ ತಂದೆ-ತಾಯಿ ಶಿವಮೊಗ್ಗೆಯ ಹಳ್ಳಿಯೊಂದರಲ್ಲೇ ಬದುಕ ಸವೆಸಿದವರು. ದಾರಿಯಲ್ಲಿ ತಾಯಿ ಯಾವತ್ತೂ ಸೀರೆ ಸೆರಗು ಹೊದ್ದು ಒಂದೊಂದೇ ಹೆಜ್ಜೆ ತಂದೆಯ ಹಿಂದೆ ಇಟ್ಟು ನಡೆಯುತ್ತಿದ್ದವಳು. ಇಲ್ಲಿ ದಾರಿಯಲ್ಲಿ ಯಾವಾಗಲೂ ಗಂಗಾ ಗಂಡು-ಹೆಣ್ಣುಗಳ ಓಡಾಟವನ್ನೇ ಹೆಚ್ಚಾಗಿ ಕಂಡದ್ದಿದೆ. ಭಾರತದಲ್ಲಿಯ ರೀತಿ ಬರಿಯ ಗಂಡುಗಳದೇ ಓಡಾಟ ಎಂದು ಆಕೆಗೆ ಅನ್ನಿಸಿರಲಿಲ್ಲ.

ಹುಡುಗ-ಹುಡುಗಿಯರು ಎದುರಿಗೆದುರಿಗೇ ಪ್ರೀತಿ ಮಾಡುತ್ತಾರೆ. ಸಮುದ್ರದ ಅಲೆಗಳಲ್ಲಿ ಮೈ ಚಾಚಿ ನಿಂತ ಹುಡುಗ-ಹುಡುಗಿಯರು ಗಂಗಾಳ ಮುಂದೆಯೇ ಅಪ್ಪಿಕೊಳ್ಳುತ್ತಿದ್ದಾರೆ, ತುಟಿಗಳಿಗೆ ಮುತ್ತಿಟ್ಟುಕೊಳ್ಳುತ್ತಿದ್ದಾರೆ. ಒಬ್ಬರಿಗೊಬ್ಬರು ಅವಚಿಕೊಂಡು ಸಮುದ್ರದ ಮೊರೆತಕ್ಕೆ ಮೈಯೊಡ್ಡಿದ್ದಾರೆ. ಕಾಮದಲ್ಲಿ ಈ ಜನರು ತೃಪ್ತರೋ, ಅತೃಪ್ತರೋ ಗಂಗಾಳಿಗೆ ಗೊತ್ತಿಲ್ಲ. ನಿಗೂಢಗಳಿಲ್ಲದ ಇವರ ಬದುಕು ಇವರಲ್ಲಿ ಏನನ್ನು ಹುಟ್ಟುಹಾಕುತ್ತದೆಯೋ? - ಒಂಟಿತನವನ್ನೋ, ಸಾವಿನ ಭೀಕರತೆಯನ್ನೋ ಅಥವಾ ತಮ್ಮಷ್ಟಕ್ಕೇ ತಾವಿರುವ ಪ್ರವೃತ್ತಿಯನ್ನೋ ಹುಟ್ಟುಹಾಕಿರಬಹುದು ಎಂದು ಗಂಗಾಳಿಗೆ ಅನ್ನಿಸುತ್ತದೆ. ಸಾಯಂಕಾಲ 7.30 ಆದರೂ ಕತ್ತಲಿನ ಛಾಯೆಯೇ ಮೂಡುತ್ತಿಲ್ಲ. ಕತ್ತಲೆಂದರೆ ಭಾರತೀಯ ಹೆಂಗಸರಿಗೆ ಭಯ. ಆದರೆ ಅಲ್ಲಿಯಷ್ಟು ಭಯ ಭೀತಿಯಿಂದ ಮನೆ ಸೇರಬೇಕೆಂಬ ಆತುರ ಇಲ್ಲಿ ಇಲ್ಲ. ಬೆಚ್ಚನೆಯ ಸ್ವೆಟರ್‌ಗಳಲ್ಲಿ, ತೋಳ-ತೆಕ್ಕೆಗಳಲ್ಲಿ ಇಲ್ಲಿ ಗಂಡು-ಹೆಣ್ಣು ಸಾಗುತ್ತಾರೆ. ಹುಲಿಯಂತಹ ನಾಯಿಗಳನ್ನು ಹಿಡಿದು ಸಾಗುತ್ತಾರೆ. ಸಮುದ್ರದ ಮೊರೆತಕ್ಕೆ ಕಿವಿಗೊಟ್ಟು ಕುಳಿತ ಗಂಗಾಗೆ ಈ ಸಮುದ್ರದ ಅಲೆಗಳ ಮೊರೆತ ತನ್ನ ನಾಡಿಯ ಯಾವ ಮಿಡಿತವನ್ನೂ ಹಿಡಿಯುತ್ತಿಲ್ಲ ಎನಿಸುತ್ತದೆ.

ಗಾಳಿ ನುಗ್ಗಿಕೊಂಡು ಬರುತ್ತಿದೆ. ಮುಂದೆ ಅಡಿ ಇಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಸಮುದ್ರದ ಅಲೆಗಳ ಹೊಡೆತ, ಗಾಳಿಯ ಅಬ್ಬರ ಎರಡೂ ಜೊತೆ ಜೊತೆಯಲ್ಲಿಯೇ ಸ್ಪರ್ಧೆ ನಡೆಸುತ್ತಿರುವಂತೆ ಕಾಣುತ್ತದೆ. ಗಾಳಿ ಹಿಂದಕ್ಕೆ ನೂಕಿದರೂ ಸಮುದ್ರದ ಬಳಿಯೇ ಕುಳಿತು ಸಮಯ ಕಳೆಯುವ ಹುಚ್ಚು ಕಡಿಮೆಯಾಗುತ್ತಿಲ್ಲ. ಗಾಳಿಯ ಒತ್ತಡ ಜಾಸ್ತಿಯಾಗುತ್ತಿರುವಂತೆ ಕಾರುಗಳಲ್ಲಿ ದೌಡಾಯಿಸುವ ಜನರನ್ನು ಗಂಗಾ ಕಂಡಿದ್ದಾಳೆ. ಅಲ್ಲಿಯೇ ಇದ್ದುಕೊಂಡು ಅಲೆಗಳ ಜೊತೆ ಸ್ಪರ್ಧಿಸುವವರನ್ನೂ ಕಂಡಿದ್ದಾಳೆ. ಈ ಜನರು ಹಣ-ಕಾಮದಂತಹ ವಿಚಾರಗಳಲ್ಲಿ ಸಂತೃಪ್ತರಾಗಿರುವುದಕ್ಕೋ ಏನೋ ಸಾಹಸಕ್ಕೆ ಮೈಯೊಡ್ಡಿಕೊಳ್ಳುತ್ತಾರೆ. ಅಬ್ಬರಿಸುವ ತೆರೆಯ ಮಧ್ಯೆ ಮೂವರು ಹುಡುಗರು ಗಾಳಿಪಟವಿರುವಂತಹ ಏಣಿಯಂತಹ ಏನದರ ಮೇಲೋ ಸಮುದ್ರದ ಅಲೆಗಳ ಜೊತೆ ಕುಣಿಯುತ್ತಿದ್ದಾರೆ. ಕುದುರೆಯ ಹಗ್ಗ ಹಿಡಿದು ನಿಂತಿರುವ ಮನುಷ್ಯ ಅಲೆಗಳ ಜೊತೆ ಓಡುತ್ತಿದ್ದಾನೆ. ಈ ಜನರ ಬದುಕಿನಲ್ಲಿ, ನಿತ್ಯ ಬದುಕಿನಲ್ಲಿ - ಹಣ, ಕಾಮಕ್ಕಿಂತ ಹೆಚ್ಚಾದ ಬೇರೆ ಬೇರೆ ಭಾಗಗಳಿವೆ, ಆಯಾಮಗಳಿವೆ ಎಂದು ಗಂಗಾಗೆ ಅನಿಸುತ್ತದೆ. ಈ ದೇಶದಲ್ಲಿ ಸೂರ್ಯನೇ ಒಂದು ಅಪರೂಪದ ಸಂಗತಿಯಾಗಿ ಕಾಣುತ್ತಾನೆ. ಭಾರತದಲ್ಲಿ ನೆತ್ತಿ ಸುಡುವ, ಬೆವರು ಹರಿಸುವ, ಕಂಗಾಲಾಗಿರುವ ಸೂರ್ಯ ಇಲ್ಲಿ ಸಾಯಂಕಾಲ ಏಳು ಘಂಟೆಯ ಸಮಯದಲ್ಲಿ ಪುರುಸೊತ್ತು ಸಿಕ್ಕವನಂತೆ ಈಚೆ ಬರುತ್ತಾನೆ. ಸಮುದ್ರದ ಅಲೆಗಳ ಮೇಲೆ ತನ್ನ ಕಿರಣ ಚೆಲ್ಲುತ್ತಾನೆ, ಅದೋ ಸೂರ್ಯ ಎನ್ನುವಷ್ಟರಲ್ಲಿ ಕಾಣೆಯಾಗಿಬಿಡುತ್ತಾನೆ. ಹೀಗೆಯೇ ಈ ಜನರ ಬದುಕಿನಲ್ಲಿ ಸೂರ್ಯ ಕಣ್ಣು-ಮುಚ್ಚಾಲೆ ಆಟ ಆಡುತ್ತಾನೆ. ಯಾವ ಪಾಪದ ಫಲ ಅನುಭವಿಸುತ್ತಿರುವರೋ ಈ ಜನ ಎಂದೆನಿಸುತ್ತದೆ ಗಂಗಾಗೆ. ಸೂರ್ಯನನ್ನು ಕಾಣುವುದಕ್ಕೋ ಎಂಬಂತೆ ನಿತ್ಯ ಸಾಯಂಕಾಲ ಸಮುದ್ರದ ದಂಡೆಗೆ ಬರುತ್ತಾರೋ ಏನೋ? ಭಾರತೀಯರು ಸಾಯಂಕಾಲ ದೇವರನ್ನು ನೋಡಲು ಗುಡಿಗೆ ಹೋಗುವ ಹಾಗೆ. ರಾತ್ರಿ 7.30ರ ಸಮಯದಲ್ಲಿ ಬಿಸಿಲು ನಿಚ್ಚಳವಾಗಿ ಹೊಡೆಯುತ್ತದೆ. ಡಚ್ ದೇಶ ಏನಾದರೂ ಹೊಳೆಯುತ್ತದೆ ಎನ್ನಿಸಿದರೆ ಅದು ಸಾಯಂಕಾಲದ ಸಮಯದಲ್ಲಿ ಮಾತ್ರ. ಗಾಳಿಯ ಜೊತೆಗೆ ಸೂರ್ಯನ ಶಾಖ ಕೂಡಾ ಮುಖಕ್ಕೆ ಹೊಡೆಯುತ್ತಿದೆ. ಈ ದೇಶದಲ್ಲಿ ಗಂಗಾ ಚಂದ್ರನನ್ನು ಕಂಡದ್ದೇ ಇಲ್ಲ. ಚಂದ್ರನಿಲ್ಲದ ದೇಶದಲ್ಲಿ ಸೂರ್ಯನಿಗೂ ಕೆಲಸವಿಲ್ಲವೆಂದು ಕಾಣುತ್ತದೆ. ಅವರಿಬ್ಬರೂ ಅವಳಿ-ಜವಳಿಗಳ ಹಾಗೆ ಭಾರತದಲ್ಲಿ ಒಬ್ಬರಿಗೊಬ್ಬರು ಅನುವು ಮಾಡಿಕೊಂಡು ಬದುಕುತ್ತಾರೆ. ಇಲ್ಲಿ ಸೂರ್ಯ ಮುಖ ತೋರಿಸುವುದೇ ಸಾಯಂಕಾಲ. ಚಂದ್ರನನ್ನು ಎಲ್ಲಿ ಹುಡುಕಬೇಕೋ ಗಂಗಾಳಿಗೆ ತಿಳಿದಿಲ್ಲ. ಭಾರತದಲ್ಲಿರುವಂತೆ ಅಮಾವಾಸ್ಯೆಯ ಕತ್ತಲಿಲ್ಲ, ಹುಣ್ಣಿಮೆಯ ಬೆಳದಿಂಗಳಿಲ್ಲ. ಭಾರತೀಯರು ಸೂರ್ಯ-ಚಂದ್ರರಂತೆ ಉತ್ತುಂಗಗಳಲ್ಲಿ ಬದುಕುತ್ತಾರೆ ಎಂದು ಗಂಗಾಳಿಗೆ ಅನ್ನಿಸಿದ್ದಿದೆ. ಡಚ್ ಜನರು ಭಾರತೀಯರಂತೆ ಜೋರಾಗಿ ಅಳುವುದನ್ನು ಗಂಗಾ ಕಂಡಿಲ್ಲ. ಅಳುವುದಕ್ಕೆ ಗೊತ್ತಿರದ ಈ ಜನಕ್ಕೆ ನಗುವಿನ ತೀವ್ರತೆ ಎಷ್ಟಿದೆಯೋ ಎಂಬುದೂ ಆಕೆಗೆ ತಿಳಿದಿಲ್ಲ. ಭಾರತೀಯ ಹಳ್ಳಿ-ಪಟ್ಟಣಗಳಲ್ಲಿ ಸಿನೆಮಾ-ರೋಮಾಂಚನಗಳು ಅವರ ಬದುಕಿನ ನಾಡಿಯನ್ನು ಹಿಡಿದಿವೆ. ಆದರೆ ಅದ್ಯಾವುದೂ ಈ ಜನರ ನಾಡಿ ಹಿಡಿದಿಲ್ಲ. ಸಿನೇಮಾ ಪೋಸ್ಟರ್ ಗಂಗಾ ಕಂಡದ್ದೇ ಕಡಿಮೆ. ಅಲೆಗಳಿಗೆ ಮಾತ್ರ ಉಬ್ಬರವಿದೆ - ತೀವ್ರವಾಗುವ, ವಿಮುಖವಾಗುವ ಶಕ್ತಿಯಿದೆ. ಡಚ್ ಜನರ ಭಾವನೆಯ ತೀವ್ರತೆಯ ಉತ್ತುಂಗಗಳ, ಪಾತಾಳದ ಶಿಖರಗಳ ಬಿಂದು ಎಲ್ಲಿದೆಯೋ ಎಂದು ಆಕೆಗೆ ಸಾಕಷ್ಟು ಬಾರಿ ಕುತೂಹಲ ಕಾಡಿದ್ದುಂಟು.

* * * * *

ಸಿರಾಕ್ಸ್ ಗಂಗಾಳ ಬಗ್ಗೆ ಆಸಕ್ತಿ ತೋರಿಸುತ್ತಿದ್ದ. ಆಫ್ರಿಕಾದ ಹುಡುಗರ ಬಗ್ಗೆ ಗಂಗಾಗೆ ಹೃದಯದೊಳಗೆಲ್ಲೋ ಅಪಾರವಾದ ಪ್ರೀತಿ. ಮುಕ್ತವಾದ ಪ್ರೀತಿಗೆ ತೆರೆದುಕೊಳ್ಳುವಂತೆ ಈ ಹುಡುಗರು ಮುಕ್ತವಾದ ಬದುಕಿಗೂ ತೆರೆದುಕೊಳ್ಳುತ್ತಾರೆ ಎನಿಸುತ್ತಿದೆ. ಸಿರಾಕ್ಸ್ ಬಗ್ಗೆ ಗಂಗಾಗೆ ಏನೆನಿಸಿತ್ತು? ಇದ್ದರೆ ಅವನ ಜೊತೆ ನಾಲ್ಕು ದಿನ ಹಾಯಾಗಿ ಇದ್ದುಬಿಡಬಹುದು. ನಾಲ್ಕಾರು ಕಡೆ ಸುತ್ತಬಹುದು. ಡೆನ್‌ಹಾಗ್‌ನಲ್ಲಿನ ಒಂಟಿತನ ಕಳೆದುಕೊಳ್ಳಬಹುದು. ಬೇಡ ಎನಿಸಿತ್ತು ಆಕೆಗೆ. ಬೆಂಗಳೂರಿನಲ್ಲಿದ್ದ ಅಲೆಮಾರೀ ಬದುಕೇ ಸಾಕೆನಿಸಿತ್ತು. ಅಲ್ಲಿನ ತನ್ನ ಸಂಬಂಧಗಳ ಅನುಭವಗಳನ್ನೇ ಅರಗಿಸಿಕೊಳ್ಳುವುದು, ಜೀರ್ಣಿಸಿಕೊಳ್ಳುವುದು ಆಕೆಗೆ ಬೇಕಿತ್ತು. ಸಿರಾಕ್ಸ್‌ನಲ್ಲಿನ ಒಲುಮೆಯ ಹಿನ್ನೆಲೆ ಏನು? ನಾಲ್ಕು ದಿನ ಹಾಯಾಗಿ ಸುತ್ತುವ ಆಸೆಯಿರಬಹುದು, ಯಾವುದೇ ಬಿಳಿಯ ಯುರೋಪಿಯನ್ ಹುಡುಗಿ ಅವನ ಜೊತೆ ಸುತ್ತದಿರಬಹುದು.

ಅದೊಂದು ಪಾರ್ಟಿ. ಅತ್ಯಾಧುನಿಕ ಮೇಲ್ವರ್ಗದ ಬದುಕಿನ ಭಾರತೀಯರಲ್ಲಿ ನಡೆಯಬಹುದಾದಂತಹ ಪಾರ್ಟಿ. ಕುತೂಹಲಕ್ಕಾಗಿ ಆ ಪಾರ್ಟಿಗೆ ಹೊರಟು ನಿಂತಿದ್ದಳು ಗಂಗಾ. ಸಿರಾಕ್ಸ್ ಮತ್ತೆ ಮತ್ತೆ ಆಸಕ್ತಿ ತೋರಿಸುತ್ತಾನೆ. ಟ್ರ್ಯಾಮ್ ಒಳಗೆ ಕುಳಿತಾಗ ಗಂಗಾ ಸಿರಾಕ್ಸ್‌ಗೆ ಹೇಳಿದಳು, 'ಈ ತರಹೆಯ ಪಾರ್ಟಿಗಳು ನನಗೆ ಇಷ್ಟವಾಗುವುದಿಲ್ಲ, ಆದರೂ ಬರುತ್ತೇನೆ. ಕೇವಲ ಕುತೂಹಲಕ್ಕೆ. ಹಲವಾರು ದೇಶಗಳ ಜನರ ನಡವಳಿಕೆ ನೋಡುವುದಕ್ಕೆ ಮಾತ್ರ'. ಗಂಗಾಗೆ ಸಿರಾಕ್ಸ್ ಬಗ್ಗೆ ಬಹಳಷ್ಟು ನಿರಾಸೆ ಆಗುತ್ತದೆ. ಇಥಿಯೋಪಿಯಾದಿಂದ ಬಂದ ಈ ಹುಡುಗನಿಗೆ ಇಥಿಯೋಪಿಯಾದ ಹಸಿವೆ, ತತ್ತರಿಸುವ ರಾಜಕೀಯ, ರಷ್ಯಾ, ಅಮೇರಿಕಾದ ನೇರ ಸಂಘರ್ಷಕ್ಕೆ ಒಳಗಾಗುತ್ತಿರುವುದರ ಎಲ್ಲಾ ತರಹೆಯ ನೋವುಗಳು ಈ ಹುಡುಗನನ್ನು ನೋಯಿಸಿರಬಹುದು, ಮುದುಡಿಸಿರಬಹುದು ಎಂಬುದೆಲ್ಲಾ ಗಂಗಾಗೆ ಸುಳ್ಳೆನಿಸುತ್ತದೆ. ಸಿರಾಕ್ಸ್ ಇತರರಂತೆ ಯುರೋಪಿಯನ್ ಸಂಸ್ಕೃತಿಯಲ್ಲಿ ತನ್ನನ್ನು ತಕ್ಷಣವಾಗಿ ಗುರುತಿಸಿಕೊಳ್ಳುತ್ತಾನೆ. ಹೀಗೆ ಗುರುತಿಸಿಕೊಳ್ಳದಿರುವುದು ಕೀಳರಿಮೆ ಎಂದುಕೊಳ್ಳುತ್ತಾನೆ. ಪಾರ್ಟಿಯು ಅತ್ಯಾಧುನಿಕವಾದ ಕೋಣೆಯೊಳಗೆ ವ್ಯವಸ್ಥಿಸಲ್ಪಟ್ಟಿದೆ. ಕೋಣೆಯೊಳಗೆ ಅಡಿಯಿಡಲು ಹಿಂದೆ-ಮುಂದೆ ನೋಡುತ್ತಿದ್ದ ಗಂಗಾಳ ಸೊಂಟದ ಸುತ್ತ ಸಿರಾಕ್ಸ್ ಕೈ ಚಾಚಿದಾಗ ಗಂಗಾ ಹಿಂದೆ ಸರಿದಿದ್ದಳು. ಹೆಣ್ಣು-ಗಂಡಿನ ಬಗ್ಗೆ ಇಂಡಿಯಾದ ಹುಡುಗಿಯರು ಬೆಚ್ಚಿಬಿಡುತ್ತಾರೆ ಎಂಬ ಮುಟ್ಟು-ಮೈಲಿಗೆಯ ಹುಡುಗಿಯಾಗಿ ಗಂಗಾ ಉಳಿದಿಲ್ಲ. ಗಂಗಾ ಹಿಂದೆ ಸರಿದ ರೀತಿ ಸಿರಾಕ್ಸ್‌ನಲ್ಲಿ ನೋವನ್ನುಂಟು ಮಾಡಿರಬೇಕು. ಸಿರಾಕ್ಸ್‌ನ ಆಸಕ್ತಿ ಗಂಗಾ ತನ್ನನ್ನು ತಕ್ಷಣಕ್ಕೆ ಒಪ್ಪಿಕೊಳ್ಳಬಹುದು ಎನ್ನುವುದರ ಮೇಲಿರಬಹುದು. ಆಕೆ ಭಾರತದಲ್ಲಿ ಕಾಲೇಜೊಂದರಲ್ಲಿ ಅಧ್ಯಾಪಕಿ ಎನ್ನುವುದರ ಮೇಲಿರಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಡೆನ್‌ಹಾಗ್‌ನಲ್ಲಿ ಓದು ಮುಗಿಸುವವರೆಗೆ ಸುತ್ತಲು, ಪ್ರೀತಿ ಮಾಡಲು ಹುಡುಗಿಯೋರ್ವಳು ಬೇಕಿರಬಹುದು. ಗಂಗಾ ಅವನನ್ನು ಉದ್ದೇಶಪೂರ್ವಕವಾಗಿ ದೂರ ಸರಿಸುತ್ತಾಳೆ. ಆತನ ಜೊತೆ ಮಾತನಾಡುವುದು ಬೆಚ್ಚಗೆ ಎನಿಸಿದರೂ ದೈಹಿಕ ಸಂಪರ್ಕದ ಕಲ್ಪನೆಯೇ ಆಕೆಯಲ್ಲಿ ಆ ಸಂಬಂಧದ ಬೆಚ್ಚನೆಯ ಅಂಶವನ್ನು ಮುರಿದುಹಾಕುತ್ತದೆ. ಇದ್ದಕ್ಕಿದ್ದ ಹಾಗೆ ಸಿರಾಕ್ಸ್ ತುಂಬ ಎಳಸು ಎನಿಸುತ್ತದೆ. ಈ ವಯಸ್ಸಿನಲ್ಲಿಯೇ ಇನ್ನೊಬ್ಬರನ್ನು ಎಳಸು ಎನ್ನುವ ಸ್ಥಿತಿಗೆ ತಾನು ಬರಬಾರದಿತ್ತು ಎಂದು ಗಂಗಾ ಅಂದುಕೊಳ್ಳುತ್ತಾಳೆ.

ಇಥಿಯೋಪಿಯಾದ ಹೊಸ ವರ್ಷದ ಸಂದರ್ಭದಲ್ಲಿ ಸಿರಾಕ್ಸ್ ಒಂದು ಪಾರ್ಟಿ ಕೊಟ್ಟಿದ್ದ. ಈ ಪಾರ್ಟಿ ಬೆಂಗಳೂರಿನ ಪಾರ್ಟಿಗಳಿಗಿಂತ ಭಿನ್ನ ಎಂದು ಗಂಗಾಗೆ ಅನ್ನಿಸಿರಲಿಲ್ಲ. ಎಲ್ಲಾ ಕಡೆ ಒಂದೇ

ರೀತಿಯ ಪ್ರಶ್ನೆಗಳು. ಹೆಣ್ಣು-ಗಂಡಿಗೆ ಕುರಿತದ್ದು, ಸಂಬಂಧಗಳಿಗೆ ಕುರಿತದ್ದು, ಕುಟುಂಬದ ಪ್ರಶ್ನೆಗೆ ಸೇರಿದ್ದು. ಗಂಗಾಳ ಜೊತೆಯಿದ್ದ ಥೈಲ್ಯಾಂಡ್, ಫಿಲಿಫೈನ್ಸ್ ಹುಡುಗಿಯರು ಬಿಯರ್ ಕುಡಿದ ಮತ್ತಿಗೇ ಸ್ವಲ್ಪ ಬಿಗುವಿನಿಂದ ಈಚೆ ಬಂದು ಗಂಗಾಳನ್ನು ಕೇಳುತ್ತಾರೆ, 'ಯಾಕೆ, ನೀನು ಯಾವಾಗಲೂ ಮದುವೆಯಲ್ಲಿ ನಂಬಿಕೆ ಇಲ್ಲ ಎನ್ನುತ್ತೀ'?. ಗಂಗಾ ಸ್ವಾಭಾವಿಕವಾಗಿಯೇ ಹೇಳುತ್ತಾಳೆ :

'ನನಗೆ ಗೊತ್ತಿಲ್ಲ, 17-18 ವರುಷದಲ್ಲಿ ನಾನು ಒಬ್ಬ ಹುಡುಗನನ್ನು ಪ್ರೀತಿಸಿದೆ, ಅದೂ ತೀರಾ ಮುಗ್ಧವಾಗಿ. ಆದರೆ ಅದು ಸೆಂಟಿಮೆಂಟಲ್ ಆಗಿತ್ತು, ರೊಮ್ಯಾಂಟಿಕ್ ಆಗಿತ್ತು ಎಂದು ನನಗೆನ್ನಿಸುವುದಿಲ್ಲ. ಬಹಳ ಪ್ರಜ್ಞಾಪೂರ್ವಕವಾಗಿಯೇ ಮಾಡಿದ ಆಯ್ಕೆ ಅದು. ಆದರೆ ಆ ಹುಡುಗನ ಬಗ್ಗೆ ನಂಬಿಕೆಯೇ ಹೋಯಿತು. ಜೊತೆಗೆ ಎರೆಡು ವರ್ಷದ ಅನುಭವ ಮದುವೆಯ ಬಗ್ಗೆ ನಂಬಿಕೆಯನ್ನೇ ಕಳೆಯಿತು. ಒಬ್ಬರಿಗೆ ಅಂಟಿಕೊಂಡು ಬದುಕುವ ಕಲ್ಪನೆಯೇ ನನ್ನಿಂದ ಸಾಧ್ಯವಿಲ್ಲ ಎನ್ನಿಸತೊಡಗಿದೆ'. ಹೀಗೆ ಗಂಗಾ ಮಾತನಾಡುವಾಗ ಆ ಬಿಳಿಯ, ಕೆಂಪಗಿನ ಹುಡುಗಿಯರು ಆಶ್ಚರ್ಯಪಡುತ್ತಾರೆ. ಗಂಗಾ ಬಹಳ ಕೂಲ್ ಆಗಿ ಮಾತನಾಡುತ್ತಾಳೆ. ತಾನೇನೂ ಕಳೆದುಕೊಂಡಿಲ್ಲ, ತನಗೆ ಮದುವೆ, ಕುಟುಂಬ ಅಷ್ಟೊಂದು ಭದ್ರತೆ ನೀಡುವ ಸಂಸ್ಥೆ ಅಲ್ಲವೆಂಬಂತೆ ಮಾತನಾಡುತ್ತಾಳೆ. ಭಾರತದಿಂದ ಬಂದ ಮಧ್ಯಮವರ್ಗದ ಹುಡುಗಿಯೋರ್ವಳು ಹೀಗೆ ಮಾತನಾಡುವುದು ಅವರಲ್ಲಿ ಆಶ್ಚರ್ಯ ಹುಟ್ಟು ಹಾಕುತ್ತದೆ. ಸಿರಾಕ್ಸ್ ಆಕೆಯ ಹಿಂದೆ-ಮುಂದೆ ಸುತ್ತುವುದು ಆ ಹುಡುಗಿಯರಿಗೂ ಗೊತ್ತು. ಗಂಗಾ ಆತನಿಗೆ ಬೆನ್ನು ತಿರುಗಿಸಿದಾಗಲೆಲ್ಲಾ ಅವರೆಂದುಕೊಂಡದ್ದೇ ಬೇರೆ. ಭಾರತೀಯ ಹುಡುಗಿಯರು ಮುಜುಗರದವರು. ಅದರಲ್ಲೂ ಹಳ್ಳಿಯೊಂದರಿಂದ ಬಂದ ಗಂಗಾ ಅಂತೂ ಈ ಹೊರಗಿನ ಪ್ರಪಂಚ ಕಂಡವಳೇ ಅಲ್ಲದವಳಿರಬೇಕು. ಹಾಗಾಗಿ ಮಡಿ-ಮೈಲಿಗೆಯ ಭಾವನೆಯಿಂದ ಆಕೆ ಆತನನ್ನು ದೂರವಿಡುತ್ತಾಳೆ ಎಂಬುದೇ ಅವರ ಭಾವನೆಯಾಗಿತ್ತು. ಆ ಹುಡುಗಿಯರು ಯುರೋಪನ್ನು ಕಣ್ಣಾರಳಿಸಿ ನೋಡಿದ ಹಾಗೆ ಗಂಗಾ ನೋಡಲೇ ಇಲ್ಲ. ಮಾರ್ಕೆಟ್‌ಗೆ, ಪರ್‌ಚೇಸಿಂಗ್ ಎಂದು ಅವರು ಕರೆದರೆ ಗಂಗಾ ತಪ್ಪಿಸಿಕೊಂಡುಬಿಡುತ್ತಾಳೆ. ಆಕೆ ಸಮುದ್ರದ ಬಳಿ ಒಬ್ಬಳೇ ಹೋಗಿ ಕೂರುತ್ತಾಳೆ. ತಾನು ಓದುವ ಇನ್‌ಸ್ಟಿಟ್ಯೂಟ್‌ನಲ್ಲೂ ಆಕೆ ಬೆರೆಯುವುದೇ ಕೆಲವೇ ಹುಡುಗಿಯರೊಟ್ಟಿಗೆ. ಆಕೆಗೆ ಆತ್ಮೀಯರೆಂದರೆ ಶ್ರೀಲಂಕಾದ ಕುಮುದಿನಿ ಹಾಗೂ ಮಲೇಶಿಯಾದ ಕಮಲಮ್. ಅವರ ಟ್ರೇಡ್ ಯೂನಿಯನ್‌ನ ಅನುಭವಗಳು ಆಕೆಯನ್ನು ಪುಲಕಿತಗೊಳಿಸಿವೆ. ಬಿಡುವಾದಾಗಲೆಲ್ಲಾ ಅವರೊಟ್ಟಿಗೆ ಕುಳಿತು ಮಾತನಾಡುತ್ತಾಳೆ. ಬಿಟ್ಟರೆ ಪುಸ್ತಕ ಪ್ರಪಂಚ. ಬಿಡುವಿದ್ದರೆ ಸಮುದ್ರದ ಬಳಿ ಒಂಟಿಯಾಗಿ ಕೂತು ಬರೆಯುತ್ತಾಳೆ. ಯುರೋಪಿನ ನಿಯಾನ್ ದೀಪಗಳ ಸಂಪತ್ತು ಆಕೆಯನ್ನು ಮರಳು ಗೊಳಿಸುವುದಿಲ್ಲ. ಕಷ್ಟಪಟ್ಟುಕೊಂಡು ಚಮಚದಲ್ಲಿ ತಿನ್ನುವವಳೂ ಅವಳಲ್ಲ. ಎಷ್ಟೇ ಆಧುನಿಕವಾಗಿದ್ದ ಪಾರ್ಟಿಗೆ ಹೋದರೂ ನೇರವಾಗಿ ಚಮಚ ಎತ್ತಿ ಇಟ್ಟು ಕೈಯಲ್ಲಿಯೇ ತಿನ್ನುತ್ತಾಳೆ. ತಿಂದ ತೃಪ್ತಿಯಾದಗೂ ತನಗೆ ಬೇಡವೇ ಎನ್ನುತ್ತಾಳೆ. ಥೈಲ್ಯಾಂಡ್ ಹುಡುಗಿ ಇದ್ದಕ್ಕಿದ್ದ ಹಾಗೆ ಕೇಳುತ್ತಾಳೆ, 'ಸರಿ ಗಂಗಾ, ಅಷ್ಟೊಂದು ಕೂಲ್ ಆಗಿ ಇರ್ತೀಯಲ್ಲ, ಆ ದಿನ ಚಂದ್ರನನ್ನು ಆಕಾಶದಲ್ಲೆಲ್ಲೋ ಕಂಡಾಗ ನೀನು ಖುಷಿಯಿಂದ ಕುಣಿದದ್ದು ಏಕೆ?' ಗಂಗಾ ಹೇಳುತ್ತಾಳೆ, ''ಚಂದ್ರನನ್ನು ಕಂಡರೆ ನನಗೆ ಇಷ್ಟ, ಆತ ಭಾರತದ ನೆನಪು ಕೊಡುತ್ತಾನೆ. ನನ್ನೊಳಗಿರುವ ಎಲ್ಲಾ ಮೃದು ಭಾವನೆಗಳನ್ನೂ, ನನ್ನ ಬಾಲ್ಯದ ನೆನಪನ್ನೂ ಕೊಡುತ್ತಾನೆ.' ಹೀಗೆನ್ನುವಾಗ ಗಂಗಾ ಹೃದಯ ತುಂಬಿಕೊಂಡು ಮಾತನಾಡಿದಂತೆ ಅವರಿಗೆ ಅನಿಸುತ್ತದೆ. ಮೂರೂ ಹೊತ್ತು ಏನನ್ನೋ ಕೊಳ್ಳುವ, ಅಡಿಗೆ ಮಾಡುವ ಸಂಭ್ರಮದಲ್ಲೇ ಕಾಲ

ಕಳೆಯುವ ಈ ಹುಡುಗಿಯರು ಭಾರತದ ಸಂಪ್ರದಾಯಸ್ಥ ಹೆಂಗಸರಿಗಿಂತ ಭಿನ್ನ ಎಂದೇನೂ ಗಂಗಾಳಿಗೆ ಅನ್ನಿಸುವುದಿಲ್ಲ. ಭಾರತೀಯ ಹೆಂಗಸರು ಹೊರಗೆ ಸುತ್ತುವುದಿಲ್ಲ, ಅವರಿಗೆ ಏನೂ ಗೊತ್ತಿರುವುದಿಲ್ಲ, ಆದರೆ ಈ ಹುಡುಗಿಯರು ಹೊರಗೆ ಸುತ್ತುತ್ತಾರೆ, ಪ್ರಪಂಚ ಗೊತ್ತಿರುತ್ತದೆ ಅಷ್ಟೇ. ಇಂಡಿಯಾದ ಇನ್ನೊಬ್ಬ ಗೆಳತಿ ಇಂದುಮತಿ ಬಾಂಬೆಯವಳು. ತಾನು ಓದುತ್ತಿರುವ ಇನ್‌ಸ್ಟಿಟ್ಯೂಟ್‌ನಲ್ಲಿಯೇ ಓದುತ್ತಾಳೆ. ಹೊರಗೆ, ಒಳಗೆ ಉತ್ಸಾಹದಿಂದ ಸುತ್ತುತ್ತಾಳೆ. ಜನರನ್ನು ಮೇಲೆ ಬಿದ್ದು ಮಾತನಾಡಿಸುತ್ತಾಳೆ. ಜನರಿಗೆ ಹತ್ತಿರವಾಗಲು ಬಯಸುತ್ತಾಳೆ. ಗಂಗಾಗೆ ಯಾವುದೂ ಬೇಡವಾಗುತ್ತಿದೆ. ಹೊರಗಿನ ಪ್ರಪಂಚದಲ್ಲಿ ಕಲಿಯುವುದಕ್ಕಿಂತಲೂ ಹೆಚ್ಚಾಗಿ ತನ್ನೊಳಗೆ ತಾನಿರುವುದನ್ನು, ತನ್ನ ಮನಸ್ಸಿಗೇ ಎದುರಾಗಿ ಅರಗಿಸಿಕೊಳ್ಳಬೇಕಾದುದು, ಕಲಿಯಬೇಕಾದುದು ಸಾಕಷ್ಟಿದೆ ಎಂದು ಗಂಗಾಗೆ ತೀವ್ರವಾಗಿ ಅನ್ನಿಸತೊಡಗುತ್ತದೆ.

* * * * *

ಬಿಳಿಯರ ಸಂಸ್ಕೃತಿಯನ್ನು ಅರಗಿಸಿಕೊಳ್ಳಲು, ಅರ್ಥ ಮಾಡಿಕೊಳ್ಳಲು ಗಂಗಾ ಒಬ್ಬಂಟಿಯಾಗಿ ಸಮುದ್ರದ ದಂಡೆಯಲ್ಲಿ ಕುಳಿತು ಕಾಲ ಕಳೆಯುತ್ತಿದ್ದುದೇ ಜಾಸ್ತಿ. ಕುಳಿತು ಘಂಟೆಗಟ್ಟಲೇ ಬರೆಯುತ್ತಿರುವ ಗಂಗಾಳನ್ನು ಕುತೂಹಲದಿಂದ ಗಮನಿಸುತ್ತಿದ್ದ ಡಚ್ ಮುದುಕನೊಬ್ಬ ಡಚ್‌ನಲ್ಲಿ ಏನೋ ಕೇಳುತ್ತಾನೆ. 'ಏನು ಬರೆಯುತ್ತಿದ್ದೀಯ?' - ಎಂದಿರಬೇಕು. ಅವನ ಹಾವ-ಭಾವ ನೋಡಿದರೆ ಗಂಗಾ ಬರೆಯುತ್ತಿರುವುದರ ಬಗ್ಗೆ ಆತನಿಗೆ ಏನೋ ಕುತೂಹಲ ಕಾಡಿರಬೇಕು ಎನಿಸುತ್ತದೆ ಗಂಗಾಗೆ. 'ಡಚ್ ಭಾಷೆ ಅರ್ಥವಾಗುವುದಿಲ್ಲ' - ಎಂದು ಇಂಗ್ಲೀಷಿನಲ್ಲಿ ಹೇಳುತ್ತಾಳೆ. ಆತ ಡಚ್‌ನಲ್ಲಿಯೇ ಮುಂದುವರೆಸುತ್ತಾನೆ. ಈ ಡಚ್ ಜನರೇ ಹೀಗೆ. ಅರ್ಥವಾಗುವುದಿಲ್ಲವೆಂದರೂ ಬಿಡರು. ಮುಂದುವರೆಸುತ್ತಲೇ ಇರುತ್ತಾರೆ. ಇಂಗ್ಲೀಷ್ ಬರುವುದಿಲ್ಲ ಎನ್ನುವುದನ್ನು ಅವರು ಫೀಲ್ ಮಾಡುವುದೇ ಇಲ್ಲ. ಈ ಮುದುಕನೂ ಹಾಗೆಯೇ. ಗಂಗಾ ಅರ್ಥವಾಗದೇ ಅವನನ್ನೇ ಮಿಕಿ-ಮಿಕಿ ನೋಡುತ್ತಾಳೆ. ಆತನ ಹರುಕು-ಮುರುಕು ಇಂಗ್ಲೀಷಿನಲ್ಲಿ ಕೊನೆಗೆ 'ಯಾವ ದೇಶಧವಳು?' ಎನ್ನುತ್ತಾನೆ. ಗಂಗಾ 'ಇಂಡಿಯಾ' ಎನ್ನುತ್ತಾಳೆ. 'ಓ ಇಂಡಿಯಾ' - ಎಂದು ಹುಲಿಯಂತಹ ನಾಯಿ ಹಿಡಿದ ಮುದುಕ ಭುಜ ಹಾರಿಸಿದಾಗ 'ಯಾಕೆ' - ಎಂದು ಗಂಗಾ ಕೇಳುತ್ತಾಳೆ. 'ಇಂಡಿಯಾ' ಎಂದರೆ ಈ ದೇಶದ ಜನರ ಮನಸ್ಸಿಗೆ ಮೊದಲು ಬರುವುದು ಅಸಹ್ಯ, ಅಲ್ಲಿನ ಬಡತನ ಇತ್ಯಾದಿಗಳಿಗಾಗಿ ಮುದುಕ ಭುಜ ಹಾರಿಸಿರಬೇಕು ಎಂದು ಅನ್ನಿಸಿ ಗಂಗಾ 'ಯಾಕೆ?' ಎಂದು ಮತ್ತೆ ನೋವಿನಿಂದ ಕೇಳುತ್ತಾಳೆ. 'ಅಲ್ಲಿ ಬಹಳ Warm ಅಲ್ವಾ' ಎನ್ನುತ್ತಾನೆ ಈ ದೇಶದ ಪ್ರತಿಯೊಬ್ಬರಿಗೂ ಸೂರ್ಯನದೇ ಚಿಂತೆ. ಇವರ ಜೀವನದ ಕೇಂದ್ರಬಿಂದುವೇ ಸೂರ್ಯನಾಗಿ ಬಿಟ್ಟಿದ್ದಾನಲ್ಲ ಎಂದು ಗಂಗಾ ಆಶ್ಚರ್ಯಪಡುತ್ತಾಳೆ. ಸೂರ್ಯನಿರದ ಡೆನ್‌ಹಾಗ್‌ನಲ್ಲಿ ಅಮೋಘವಾಗಿ ಮೊರೆಯುವ ಸಮುದ್ರ ಬಿಟ್ಟರೆ ಮತ್ತೊಬ್ಬ ಸಂಗಾತಿ ತನಗಿದ್ದಾರೆಂದು ಗಂಗಾಗೆ ಅನ್ನಿಸಿರಲೇ ಇಲ್ಲ.

ಜನ ಬೀದಿ ಬೀದಿಗಳಲ್ಲೇ, ಬೀಚ್‌ಗಳಲ್ಲೇ ಉರುಳಿಕೊಳ್ಳುವುದು ಗಂಗಾಗೆ ಏನೂ ಅನ್ನಿಸುವುದಿಲ್ಲ. ಅವರು ಮುತ್ತಿಟ್ಟುಕೊಳ್ಳುವುದು, ತಬ್ಬಿಕೊಳ್ಳುವುದು ಗಂಗಾಳಲ್ಲಿ ಯಾವ ಭಾವನೆಗಳನ್ನೂ ಹುಟ್ಟು ಹಾಕುವುದಿಲ್ಲ. ಯಾಕೋ ದೈಹಿಕ ಸಂಬಂಧವನ್ನೇ ತಿರಸ್ಕರಿಸುವ ಮಟ್ಟಕ್ಕೆ ಮನಸ್ಸು ಬಲವಾಗಿ ಪ್ರತಿಕ್ರಿಯಿಸುತ್ತದೆ ಎನಿಸುತ್ತದೆ. ಭಾರತೀಯ ಹುಡುಗಿ ಮದುವೆಯಾಗದೇ ಇರುವಾಗ ಇರಬೇಕಾದ ಕುತೂಹಲ, ಪುಲಕಗಳು ಗಂಗಾಳಲ್ಲಿ ಉಳಿದಿಲ್ಲ. ಮನಸ್ಸು ಹೆಚ್ಚು ಜಡವಾಗಿ ಹೋಗುತ್ತಿದೆ. ಗಂಗಾಗೆ

ತಾನು ಬದುಕಿದ ಮೂರು-ನಾಲ್ಕು ವರ್ಷಗಳ ಬದುಕನ್ನೇ ಜೀರ್ಣಿಸಿಕೊಳ್ಳುವುದು ಬೇಕಿತ್ತು. ಆಕೆಯ ಬದುಕಿನ ಪ್ರತಿ ಮೂಲೆಗೂ ಧ್ವನಿ ಕೊಡುವುದು ಬೇಕಿತ್ತು. ಸಂಬಂಧಗಳಲ್ಲಿನ ಸಾಂಸ್ಕೃತಿಕ, ವೈಯಕ್ತಿಕ ಆಯಾಮಗಳನ್ನು ಅರಿತುಕೊಳ್ಳುವುದು ಆಕೆಗೆ ಬೇಕಿತ್ತು. ಸಿರಾಕ್ಸ್‌ನಂತೆ ಹಿಂದೆ-ಮುಂದೆ ಸುತ್ತುವ ಉತ್ಸಾಹ ಆಕೆಯಲ್ಲಿ ಉಳಿದಿಲ್ಲ. ಡ್ಯಾನ್ಸ್‌ನಲ್ಲಿ ಕುಣಿದು ಬೆವರು ಸುರಿದಾಗ ಆಗಬಹುದಾದ ಸಂತೋಷ ಆಕೆಯಲ್ಲಿ ಇಲ್ಲ. ಗಂಗಾಳಿಗೆ ತನ್ನ ಮೈ-ಮನಸ್ಸು ಎರಡೂ ಜಡಗಟ್ಟಿ ಹೋಗುತ್ತಿದೆಯೇನೋ ಎನಿಸುತ್ತದೆ. ಇದನ್ನೆಲ್ಲ ಕುಳಿತು ಅರ್ಥ ಮಾಡಿಕೊಳ್ಳುವುದು, ತನ್ನೊಳಗೇ ಜೀರ್ಣಿಸಿಕೊಳ್ಳುವುದು ಆಕೆಗೆ ಬೇಕಿತ್ತು.

ಸಾಯಂಕಾಲದ 7.30ರ ಸಮಯವಿರಬಹುದು. ಸೂರ್ಯ ಕಾಣುತ್ತಿಲ್ಲ. ಸೂರ್ಯನ ಕಿರಣಗಳೂ ಇಲ್ಲ. ಆಕಾಶದಲ್ಲಿ ಯಾವುದೋ ಬಣ್ಣಗಳು ಮಾತ್ರ ಕಾಣಿಸುತ್ತವೆ. ಆ ಮೂರು-ನಾಲ್ಕು ಬಣ್ಣಗಳಲ್ಲಿ, ಅದರ ಪ್ರತಿಬಿಂಬದಲ್ಲಿ ಸಮುದ್ರದ ತೆರೆಗಳು ಹೊಳೆಯುತ್ತಿವೆ. ರಂಗು-ರಂಗಾಗಿ ಕಾಣುತ್ತಿವೆ. ಅದೇ ಜನಗಳು, ನಿನ್ನೆ ಬಂದವರಲ್ಲದಿರಬಹುದು. ನಾಯಿಗಳ ಜೊತೆ ಓಡುತ್ತಾರೆ, ಗಂಡು-ಹೆಣ್ಣು ಪ್ರೀತಿ ಮಾಡುತ್ತಾರೆ, ಕೈ-ಕೈ ಹಿಡಿದೇ ಓಡಾಡುತ್ತಾರೆ. ಎಲ್ಲ ತುಂಬ ಸಹಜವಾಗಿ ಕಾಣುತ್ತದೆ. ಭಾರತದ ಜನಕ್ಕೆ ರಾತ್ರಿ ಹತ್ತರ ತನಕ ಬಿಡುವೇ ಇರುವುದಿಲ್ಲ. ಬದುಕೇ ದುಸ್ತರವಾಗಿಬಿಟ್ಟಿರುತ್ತದೆ. ಹೆಂಗಸರು ರಾತ್ರಿ ಏಳು ಘಂಟೆಯಾಗುತ್ತಿದ್ದ ಹಾಗೆ ಭಾರತದಲ್ಲಿ ಮನೆಯೊಳಗೆ ಸೇರಿಬಿಡುತ್ತಾರೆ. ಅವರು ಸಮುದ್ರ ಕಂಡವರಲ್ಲ, ಬೀಚ್ ಕಂಡವರಲ್ಲ, ಸಾರ್ವಜನಿಕವಾಗಿ ಪ್ರೀತಿ ಮಾಡಿದವರಲ್ಲ. ಒಳಗೇ ದುಡಿಯುತ್ತಾರೆ - ಮಕ್ಕಳಿಗಾಗಿ, ಗಂಡನಿಗಾಗಿ, ಸಾಯಂಕಾಲವೋ, ಬೆಳಿಗ್ಗೆಯೋ ಎರಡೂ ಒಂದೇ ಅವರಿಗೆ. ಗಂಡಸರನ್ನು, ಮಕ್ಕಳನ್ನು ತೃಪ್ತಿಯಾಗಿಸಲು ಹಗಲಿರುಳೂ ದುಡಿಯುತ್ತಾರೆ. ಇಲ್ಲಿಯ ಹೆಂಗಸರೂ ಅಷ್ಟೇ. ಆದರೆ ಸಮುದ್ರ ಕಾಣುತ್ತಾರೆ, ಪ್ರೀತಿ ಮಾಡುತ್ತಾರೆ, ಸೂರ್ಯನನ್ನು ಕಾಣಲು ಹಂಬಲಿಸಿ ಆಚೀಚೆ ಓಡಾಡುತ್ತಾರೆ.

ಇದ್ದಕ್ಕಿದ್ದ ಹಾಗೆಯೇ ಸೂರ್ಯ ಪೂರ್ವದಲ್ಲಿ ಹುಟ್ಟುತ್ತಾನೆ, ಪಶ್ಚಿಮದಲ್ಲಿ ಮುಳುಗುತ್ತಾನೆ ಎಂದು ಸಣ್ಣವಳಿರುವಾಗ ಬಾಯಿ ಪಾಠ ಮಾಡಿದ ಸಾಲು ಗಂಗಾಗೆ ಜ್ಞಾಪಕಕ್ಕೆ ಬರುತ್ತದೆ. ಸೂರ್ಯ ನಮ್ಮಲ್ಲಿ ಪ್ರಖರವಾಗಿ ಬೆಳಗುತ್ತಾನೆ, ಇಲ್ಲಿ ಮಂಕಾಗಿಬಿಡುತ್ತಾನೆ. ಅಲ್ಲಿ ಹುಟ್ಟಿ ಇಲ್ಲಿಗೆ ಬರುವ ವೇಳೆಗೆ ಸೂರ್ಯನಿಗೆ ಸುಸ್ತಾಗುತ್ತಿರಬೇಕು ಎನ್ನಿಸಿದಾಗ ಗಂಗಾ ತನ್ನೊಳಗೇ ನಗುತ್ತಾಳೆ.

ಇದ್ದಕ್ಕಿದ್ದ ಹಾಗೆ ಅಲೆಗಳ ಹೊಡೆತ ಜಾಸ್ತಿಯಾದಾಗ ಸಮುದ್ರದ ಕಲ್ಲು ಬೆಂಚಿನ ಮೇಲೆ ಗಂಗಾ ಮುದುರಿ ಕುಳಿತುಕೊಳ್ಳುತ್ತಾಳೆ. ಮುದುರಿಕೊಂಡೇ ಬರೆಯುತ್ತಾ ಮಧ್ಯೆ ಮಧ್ಯೆ ಸಮುದ್ರದ ಅಲೆಗಳ ವಿಚಿತ್ರ ಹೊಡೆತ ನಿರೀಕ್ಷಿಸುತ್ತಾಳೆ. ಒಬ್ಬ ಬಿಳಿಯ ಹುಡುಗ, ಸುಂದರ ಮೈಕಟ್ಟಿನ ಹುಡುಗ ಗಂಗಾಳ ಪಕ್ಕಕ್ಕೆ ಬಂದು ಕೂರುತ್ತಾನೆ. ಅತಿ ಸಮೀಪಕ್ಕೆ ಕೂತುಕೊಂಡಿದ್ದರಿಂದ ಗಂಗಾ ಸ್ವಲ್ಪ ದೂರ ಸರಿಯುತ್ತಾಳೆ. ಆತ 'ಏನು ಬರೆಯುತ್ತಿದ್ದೀಯ?', ಎಂದು ಡಚ್‌ನಲ್ಲಿ ಕೇಳುತ್ತಾನೆ. ಗಂಗಾ 'ಡಚ್ ಬರುವುದಿಲ್ಲ, ಇಂಗ್ಲೀಷ್‌ನಲ್ಲಿ ಮಾತನಾಡು' ಎನ್ನುತ್ತಾಳೆ. 'ಏನು ಬರೆಯುತ್ತಿದ್ದೀಯ?' ಎಂದು ಇಂಗ್ಲೀಷಿನಲ್ಲಿ ಕೇಳುತ್ತಾನೆ. ಆಕೆ 'ಹೀಗೇ ಒಂದು ಕಥೆ' ಎನ್ನುತ್ತಾಳೆ. 'ನಾನು ಓದಲಾ?' - ಎನ್ನುತ್ತಾನೆ. 'ನೀನು ಓದಲಾರೆ, ಅದು ನನ್ನ ಭಾಷೆಯಲ್ಲಿ ಇದೆ' ಎನ್ನುತ್ತಾಳೆ. ಸುಮ್ಮನೇ ಕೂರಲು ಗಂಗಾಗೆ ಮುಜುಗರವೆನಿಸುತ್ತದೆ. 'ಏನು ಕೆಲಸ ಮಾಡುತ್ತಿದ್ದೀಯ?' ಎಂದು ಗಂಗಾ ಕೇಳುತ್ತಾಳೆ. 'ಪೋಸ್ಟ್ ಆಫೀಸಿನಲ್ಲಿ' - ಎನ್ನುತ್ತಾನೆ. ಕೊನೆಗೆ ಗಂಗಾ ಏನು ಮಾತನಾಡಬೇಕು ಎಂದು ತಿಳಿಯದೇ 'ನನ್ನನ್ನು ಕ್ಷಮಿಸು, ನಾನು ಬರೆಯುತ್ತಿದ್ದೇನೆ' ಎನ್ನುತ್ತಾಳೆ. ಆತ 'ಸರಿ ಬಿಡಿ' ಎಂದು ದೂರ ಸರಿಯುತ್ತಾನೆ.

ಕೊನೆಗೆ 'ನೀವು ಯಾವಾಗ ಫ್ರೀ ಆಗಿ ಇರುತ್ತೀರಾ' ಎನ್ನುತ್ತಾನೆ. ಆಕೆಗೆ ಆತನ ಉದ್ದೇಶ ಅರ್ಥವಾಗುತ್ತದೆ. 'ನಾನು ಯಾವಾಗಲೂ ಬ್ಯುಸಿ. ತೊಂದರೆ ಮಾಡದೇ ದಯವಿಟ್ಟು ಹೋಗು' ಎನ್ನುತ್ತಾಳೆ. ಆತ ಎದ್ದು ಹೋಗುತ್ತಾನೆ. ಗಂಗಾಗೆ ಅನಿಸುತ್ತಿದೆ - ಈತನ ಹಿಂದೆ ಯಾವ ಬಿಳಿಯ ಹುಡುಗಿಯೂ ಸುತ್ತದಿರಬಹುದು, ಅಥವಾ ಹುಡುಗಿಯ ಜೊತೆ ಸುತ್ತುವುದಕ್ಕೆ ಬೇಕಾಗಿರುವಷ್ಟು ಹಣ ಆತನಲ್ಲಿ ಇಲ್ಲದಿರಬಹುದು. ಅಥವಾ ತಕ್ಷಣಕ್ಕೆ ಮಲಗಲು ಒಬ್ಬ ಹುಡುಗಿ ಬೇಕಾಗಿರಬಹುದು. ಈ ಡಚ್ ಸುಂದರಿಯ ಒಡಲಲ್ಲೂ ಕೆಳಗಿನ ಸ್ತರಗಳಿವೆ ಎಂಬುದು ಗಂಗಾಳ ಗ್ರಹಿಕೆಗೆ ಬರುತ್ತದೆ. ಕೂಲಿಕಾರರಿದ್ದಾರೆ, ಚಳಿಯಲ್ಲಿಯೂ ಸ್ವೆಟರ್ ಇಲ್ಲದೇ ನಡುಗಿಕೊಂಡು ಹೋಗುವವರಿದ್ದಾರೆ, ಕೊಳಕು ಬಟ್ಟೆಯ ತೊಡುವವರಿದ್ದಾರೆ. ಸೆಕ್ಸ್‌ಗಾಗಿ ಹಂಬಲಿಸುವ ದುಡ್ಡು-ಕಾಸು ಸಾಕಷ್ಟಿರದ ಒಂಟಿ ಹುಡುಗರೂ ಇದ್ದಾರೆ. ಸಂಜೆ ಬೀಚ್‌ಗಳಲ್ಲಿ ದುಡ್ಡಿಲ್ಲದೆಯೋ, ಹುಡುಗಿಯರು ಸಿಗದೆಯೋ ಅಥವಾ ನಿಜವಾದ ಪ್ರೇಮಕ್ಕೆ ಹಂಬಲಿಸಿಯೋ ಈ ಬಿಳಿಯ ಹುಡುಗರು ತಿರುಗುತ್ತಿರುತ್ತಾರೆ. ಹೀಗೆ ಡಚ್ ಸುಂದರಿಯ ಒಡಲಲ್ಲೂ ಕೆಳಗಿನ ಸ್ತರಗಳಿವೆ. ಅವು ತಳದಲ್ಲೆಲ್ಲೋ ಮಿಡಿಯುತ್ತವೆ, ಆದರೆ ಎದ್ದು ಕಾಣುವ ನಾಗರಿಕತೆಯ ಸೌಜನ್ಯ ಅವನ್ನೆಲ್ಲ ಮುಚ್ಚಿಹಾಕಿ ಬಿಡುತ್ತದೆಯೇನೋ ಎಂದೆನಿಸುತ್ತದೆ ಆಕೆಗೆ.

ಮತ್ತೊಮ್ಮೆ ಹೀಗೆಯೇ ಸಮುದ್ರ ತೀರದಲ್ಲಿ ಗಂಗಾ ಬರೆಯುತ್ತಾ ಕುಳಿತಾಗ ಒಬ್ಬ ಪಾಕಿಸ್ತಾನಿ ಹುಡುಗ ಹತ್ತಿರ ಬಂದು 'ನೀನು ಪಾಕಿಸ್ತಾನದವಳಾ?' ಎನ್ನುತ್ತಾನೆ. ಗಂಗಾ 'ಇಂಡಿಯಾ' ಎನ್ನುತ್ತಾಳೆ. ಆತ ತಮ್ಮ ನೆರೆಯ ದೇಶದವರು ಎಂಬ ಪ್ರೀತಿಗೋ ಅಥವಾ ತಮ್ಮೊಡನೆ ತಮ್ಮ ಚರಿತ್ರೆಯಲ್ಲಿ ಪಾಲ್ಗೊಂಡವರು ಎಂಬ ಆತ್ಮೀಯತೆಗೋ ಗಂಗಾ ಆತನನ್ನು 'ಕುಳಿತುಕೋ' - ಎಂದು ಕರೆಯುತ್ತಾಳೆ. ಆತ ತೀರಾ ಮೈಗೆ ತಾಕಿಸುವಂತೆಯೇ ಕುಳಿತುಕೊಂಡಾಗ ಗಂಡಸರು ಎಲ್ಲಿಯೂ ಗಂಡಸರೇ ಎನಿಸುತ್ತದೆ. 'ಒಂದು ಟ್ರ್ಯಾವೆಲ್ ಏಜೆನ್ಸಿನಲ್ಲಿ ಕೆಲಸ ಮಾಡುತ್ತೇನೆ' - ಎಂದು ಆತ ನುಡಿಯುತ್ತಾನೆ. 'ಪಾಕಿಸ್ತಾನಕ್ಕೆ ವಾಪಸ್ಸು ಹೋಗಬೇಕು ಎನ್ನಿಸುವುದಿಲ್ಲವೇ?' - ಎಂದರೆ, 'ಪಾಕಿಸ್ತಾನದಲ್ಲಿ, ಇಂಡಿಯಾದಲ್ಲಿ ಬದುಕು ಬಹಳ ಕಷ್ಟ, ಹೋಗಲಾರೆ', ಎನ್ನುತ್ತಾನೆ. ಪಾಕಿಸ್ತಾನದ ರಾಜಕೀಯದ ಬಗ್ಗೆ ಗಂಗಾ ಕುತೂಹಲದಿಂದ ಕೇಳಿದರೆ ಆತ ಯಾವುದೇ ಆಸಕ್ತಿಯನ್ನೂ ತೋರಿಸುವುದಿಲ್ಲ. 'ಕಾಫಿಗೆ ಬರ್ತ್ತೀಯ?' ಎಂದು ಗಂಗಾಳನ್ನು ಕೇಳುತ್ತಾನೆ. ಹುಡುಗಿಯರಾಗಿದ್ದರೆ 'ಹೂ' ಎನ್ನಬಹುದಿತ್ತು ಎಂದು ಯೋಚಿಸುತ್ತಾಳೆ ಗಂಗಾ. ಬಿಳಿಯ ಹುಡುಗನ ಉದ್ದೇಶ, ಇವನ ಉದ್ದೇಶ ಎರಡೂ ಒಂದೇ. 'ನನಗೆ ಬಿಡುವಿಲ್ಲ, ಬರೆಯಬೇಕು' ಎನ್ನುತ್ತಾಳೆ. 'ನಾಳೆ ಸಿಗುತ್ತೀಯ?' ಎನ್ನುತ್ತಾನೆ. 'ನಿನ್ನ ಜೊತೆ ಎಂದಿಗೂ ನನಗೆ ಅಪಾಯಿಂಟ್‌ಮೆಂಟ್ ಕೊಡಲು ಸಾಧ್ಯವಾಗುವುದಿಲ್ಲ' ಎನ್ನುತ್ತಾಳೆ. ಡಚ್ ರಾಷ್ಟ್ರ ಹೀಗೆ ಯಾರ್‍ಯಾರನ್ನೋ ಒಡಲೊಳಗೆ ಹುದುಗಿಸಿಕೊಂಡಿದೆ ಎನಿಸುತ್ತದೆ.

ತನ್ನ ಅನುಭವಗಳನ್ನು ತನ್ನ ವಲಯದಲ್ಲಿಯೇ ಇಟ್ಟು ಬರೆಯುವುದು ಹೇಗೆ ಎಂದು ಗಂಗಾ ಯೋಚಿಸುತ್ತಾಳೆ. ತನ್ನ ಬರವಣಿಗೆಯ Termsನ್ನ ತಾನೇ dictate ಮಾಡಿಕೊಳ್ಳಬೇಕು ಎನಿಸುತ್ತದೆ. ಕುಡಿತ, ಸಿಗರೇಟ್, ದೈಹಿಕ ಸಂಬಂಧ ಇಂತಹ ಮುಕ್ತ ವಿಚಾರಗಳು ಯುರೋಪ್‌ನಲ್ಲಿ ಆಕೆಯನ್ನು ಯಾವ ಸಂಘರ್ಷಕ್ಕೂ ತೊಡಗಿಸುವುದಿಲ್ಲ. ರಾಜಕೀಯ ದೃಷ್ಟಿಯಿಂದ ಮಾತ್ರ ತಾನು ಅನೇಕ ದೇಶಗಳಿಗೆ ಹತ್ತಿರವಾಗಿದ್ದೇನೆ ಎಂದು ಆಕೆಗೆ ಅನಿಸುತ್ತದೆ. ಆಕೆಗೆ ತನ್ನ ಬರವಣಿಗೆಯನ್ನು ಈ ರಾಜಕೀಯ ಸಂಘರ್ಷದ ನಡುವೆ ಇಟ್ಟು ಬರೆಯಬೇಕು ಎನಿಸುತ್ತದೆ. ವೈಯಕ್ತಿಕವಾದ ಹೆಣ್ಣು-ಗಂಡಿನ ಸಂಬಂಧವನ್ನು ಈ ವಿಶಾಲವಾದ ರಾಜಕೀಯ ಹರವಿನಲ್ಲಿ ಇಟ್ಟು ಬರೆಯಲಿಕ್ಕಾದೀತೇ ಎಂದು ಗಂಗಾ ಯೋಚಿಸುತ್ತಾಳೆ.

ಬೆಂಗಳೂರಿನಿಂದ ಬಂದ ಹುಡುಗನೋರ್ವನನ್ನು ಡೆನ್‌ಹಾಗ್‌ನಲ್ಲಿ ತಾನು ಓದುತ್ತಿರುವ ಇನ್‌ಸ್ಟಿಟ್ಯೂಟ್‌ನಲ್ಲಿಯೇ ಗಂಗಾ ಕಂಡಿದ್ದಾಳೆ. ಆತನನ್ನು ಪಾರ್ಟಿಯಲ್ಲಿಯೂ ಗಮನಿಸಿದ್ದಳು. ಆತನ ಮುಖ, ಕಣ್ಣುಗಳಲ್ಲಿ ಏನೋ ಆಕರ್ಷಣೆ ಕಂಡಿತ್ತು. ಆ ಹುಡುಗನ ಮುಖಕ್ಕೂ ಗಂಗಾಳಿಗೆ ಭಾರತದಲ್ಲಿ ಅಂದರೆ ಬೆಂಗಳೂರಿನಲ್ಲಿ ತನ್ನ ಪೇಪರ್ಸ್ ಟೈಪ್ ಮಾಡಿಕೊಡುತ್ತಿದ್ದ ಯಾವುದೋ ಅಂಗಡಿಯ ಹುಡುಗನ ಮುಖಕ್ಕೂ ಹೋಲಿಕೆ ಎದ್ದು ಕಾಣುತ್ತಿದೆ ಎಂದು ಆಕೆಗೆ ಅನ್ನಿಸಿತ್ತು. ಆ ಹುಡುಗ ಬೆಂಗಳೂರಿನವನು ಎಂದು ತಿಳಿದಾಗ ಗಂಗಾಗೆ ಸಂತೋಷದ ಜೊತೆಗೆ ಸಂಭ್ರಮವೂ ಮೂಡಿತ್ತು. ಗಂಗಾಳಿಗೆ ಆತನ ಬಗ್ಗೆ ಆಸಕ್ತಿ ಇದ್ದಷ್ಟೇ ರಮೇಶನಿಗೂ ಈಕೆಯ ಬಗ್ಗೆ ಲವಲವಿಕೆ ಇತ್ತು. ಪಾರ್ಟಿಯೊಂದರಲ್ಲಿ ರಮೇಶ ಹೆಚ್ಚು ಹೊತ್ತು ಕುಳಿತುಕೊಳ್ಳಲಾರದೇ ಎದ್ದು ಹೋಗಿದ್ದನ್ನು ಗಂಗಾ ಗಮನಿಸಿದ್ದಳು. ಸಿರಾಕ್ಸ್ ಜೊತೆ ಗಂಗಾ ನಗು-ನಗುತ್ತಾ ಮಾತನಾಡಿದಾಗಲೆಲ್ಲಾ ರಮೇಶ ಕಸಿವಿಸಿಗೊಳ್ಳುತ್ತಿದ್ದ. ರಮೇಶ ಆಸಕ್ತಿಯಿಂದ, ಉತ್ಸಾಹದಿಂದ ಮಾತನಾಡಿಸಿದಾಗಲೆಲ್ಲಾ ಗಂಗಾಗೆ ಯೋಚನೆಯಾಗುತ್ತಿತ್ತು. ಹಳ್ಳಿಯ ಹುಡುಗಿಯೋರ್ವಳ ಸಂಕೋಚ, ದುಮ್ಮಾನ ಹೊಂದಿರುವ, ಮುಗ್ಧ ಹುಡುಗಿಯಂತಿರುವ ರಮೇಶನ ಸಂಬಂಧವನ್ನು ಆತ್ಮೀಯ ಸಂಬಂಧವಾಗಿ, ಪಾಸಿಟೀವ್ ಆಗಿ ಯೋಚಿಸಿದರೆ ಹೇಗೆ? ಎಂದು ಗಂಗಾ ಒಮ್ಮೊಮ್ಮೆ ತನ್ನನ್ನೇ ಕೇಳಿಕೊಳ್ಳುತ್ತಾಳೆ. ನಾಲ್ಕು ವರ್ಷಗಳ ಅಲೆಮಾರಿ ಬದುಕು ಏನನ್ನು ಕಲಿಸಿ ಕೊಟ್ಟಿತ್ತು? ಹಾಗೆಯೇ ಯಾರಿಗೆ ಅಂಟಿಕೊಂಡು ಬದುಕಲೂ ಭಯ. ಅಲೆಮಾರಿ ಜೀವನದ ಭಯವೂ ಕೂಡಾ ಯಾರಿಗೆ ಅಂಟಿಕೊಂಡು ಬದುಕಲೂ ಪ್ರೋತ್ಸಾಹಿಸುವುದಿಲ್ಲ. 'ಹೀಗೇಕೆ? ದೇವರೇ, ನನಗೇಕೆ ಹೀಗೆ ಅನಿಸುತ್ತದೆ?' ಗಂಗಾ ಅನೇಕ ಬಾರಿ ಈ ಪ್ರಶ್ನೆಯನ್ನು ತನಗೆ ತಾನೇ ಹೇಳಿಕೊಳ್ಳುತ್ತಾಳೆ. ಯಾರು ಹತ್ತಿರವಾದರೂ ದೂರವಿರಬೇಕು ಎನಿಸುತ್ತದೆ, ದೂರವಿದ್ದಾಗ ಹತ್ತಿರವಿರಬೇಕು ಎನಿಸುತ್ತದೆ.

ಥೈಲ್ಯಾಂಡ್, ಫಿಲಿಫೈನ್ಸ್ ಹುಡುಗಿಯರು ಕೇಳಿದ್ದು ಗಂಗಾಗೆ ಜ್ಞಾಪಕಕ್ಕೆ ಬರುತ್ತದೆ.

'ಗಂಗಾ ನಿನಗೇಕೆ ಮದುವೆಯಲ್ಲಿ ನಂಬಿಕೆ ಇಲ್ಲ?'

ಹದಿನಾರು, ಹದಿನೇಳು ವರ್ಷಗಳಲ್ಲಿ ಮದುವೆಯ ಬಗ್ಗೆಗಿನ ನಂಬಿಕೆಗೇ ಪೆಟ್ಟು ಬಿದ್ದಿತ್ತು. ಒಬ್ಬರಿಗೊಬ್ಬರು ಅಂಟಿಕೊಂಡು ಬದುಕುವ ಕಲ್ಪನೆಯನ್ನೇ ಅದು ನುಚ್ಚು ನೂರು ಮಾಡಿತ್ತು. ಹಾಗೆ ನುಚ್ಚು ನೂರಾದ ಕಲ್ಪನೆಯೇ ಗಂಗಾಳನ್ನು ಅಲೆಮಾರಿ ಬದುಕಿಗೆ ತಳ್ಳಿದ್ದು. ಮೂರು-ನಾಲ್ಕು ವರ್ಷಗಳ ಕಾಲ ಗಂಗಾ ಜಿಪ್ಸಿಯ ಬದುಕನ್ನು ಆಯ್ಕೆ ಮಾಡಿಕೊಂಡು. ಬದುಕಿದ್ದಾಳೆ. ಆಹಾರ, ಬಟ್ಟೆಯ ಅವಶ್ಯಕತೆಯಂತೆ ಕಾಮದ ಸಂಬಂಧ ಎಂಬ ಸರಳ ರೇಖೆಯ ಮೇಲೆ ಬದುಕನ್ನಿಟ್ಟು ನೋಡಲು ಗಂಗಾ ಪ್ರಯತ್ನಿಸಿದ್ದಳು. ಆದರೆ ಅದು ಪಗಡೆಯಾಟ ಎಂದು ಗಂಗಾಗೆ ಅರಿವಾದಾಗ ಅಂಟಿಕೊಂಡು ಬದುಕುವ ಅಲೆಮಾರಿಯಾಗಿರುವ ಎರಡೂ ಬದುಕುಗಳೂ ಆಕೆಯ ನಂಬಿಕೆಯ ಬೇರನ್ನೇ ಅಲುಗಾಡಿಸಿದ್ದವು. ಎಲ್ಲಿ ಸುಖ ಇದೆ? ಎಂಬುದು ಯಾವುದೇ ವೈಚಾರಿಕ ಚೌಕಟ್ಟಿಗೆ ಸಿಗದೇ ಹೋಯಿತು. ಸುಖ, ಶಾಂತಿ, ಚೈತನ್ಯ ಎನ್ನುವಂತಹ ಕಲ್ಪನೆಗಳೇ ಗಂಗಾಗೆ ವಿಚಿತ್ರ ಎನಿಸತೊಡಗಿದ್ದವು.

ಮುಗ್ಧವಾಗಿ, ಭಾರತೀಯ ಹಳ್ಳಿ ಹುಡುಗಿಯೋರ್ವಳ ರೀತಿ ರಮೇಶ ತನ್ನಲ್ಲಿ ತೋರಿಸುವ ಆಸಕ್ತಿ, ಉತ್ಸಾಹ ನೋಡಿದಾಗಲೆಲ್ಲಾ ಗಂಗಾ ಅಂದುಕೊಳ್ಳುವುದುಂಟು. ಮತ್ತೆ ಅಂಟಿಕೊಂಡು ಬದುಕಲು ಸಾಧ್ಯವಾದರೆ ನಿರ್ಧರಿಸಬೇಕು. ಆದರೂ ಆಕೆಗೆ ಭಯ. ಹುಡುಗರಲ್ಲಿ, ಬಹುತೇಕ ಹುಡುಗರಲ್ಲಿ ಒಂದು ರೀತಿ 'ಮದರ್ ಫಿಕ್ಸೇಷನ್' ಆಕೆಗೆ ಕಂಡದ್ದಿದೆ. ಇದರಿಂದಾಗಿ ಅವರು ತಮ್ಮ ಹೆಂಡತಿ

ಯರನ್ನಾಗಲೀ, ಗರ್ಲ್ ಫ್ರೆಂಡ್ಸ್‌ನ್ನಾಗಲೀ 'ಅಡಲ್ಟ್' ಸಂಬಂಧದಲ್ಲಿ ನೋಡುವುದೇ ಇಲ್ಲ. ಅವರನ್ನು ತಮ್ಮ ತಾಯಂದಿರಂತೆ ಕಾಣುತ್ತಾರೆ. ಹೆಂಡಂದಿರು ಗಂಡಂದಿರಿಗೆ ತಾಯಿಯಾಗುತ್ತಾರೆ, ಮಕ್ಕಳಿಗೆ ಹೆಂಡತಿಯರಾಗುತ್ತಾರೆ. ಯಾವ ಸಂಬಂಧದಲ್ಲಿ ಏನಾಗಬೇಕೋ ಅದಾಗುವುದಿಲ್ಲ. ಹೀಗೆಲ್ಲ ಅನ್ನಿಸಿದಾಗ ಅಂಟಿಕೊಂಡು ಬದುಕಲು ಗಂಗಾಗೆ ಭಯವಾಗುತ್ತದೆ. ಎಲ್ಲಾ ಸಂಬಂಧಗಳಲ್ಲಿ ತಾನು ಹುಡುಕುತ್ತಿದ್ದುದು ಈ 'ಅಡಲ್ಟ್' ಸಂಬಂಧವನ್ನಿರಬಹುದೇ ಎಂದು ಗಂಗಾ ಯೋಚಿಸುತ್ತಾಳೆ. ಬಹುಶಃ ಹೀಗಾಗಿಯೇ ತನ್ನ ಯಾವುದೇ ಸಂಬಂಧದಲ್ಲೂ ಮನಸ್ಸು-ದೇಹ ಪ್ರತಿಕ್ರಿಯಿಸದೇ ಹೋಗಿರಬಹುದೇ? ಎಂಬ ಸಂಶಯ ಗಂಗಾಗೆ ಬರುತ್ತದೆ. ಇದೆಲ್ಲದರಿಂದ ತಾನೊಬ್ಬ ಭಾವನೆಯಿಲ್ಲದ ಹೆಂಗಸಾಗುತ್ತಿರಬೇಕೇನೋ ಎಂಬುದೂ ಕೂಡಾ ಗಂಗಾಳನ್ನು ನಿಗೂಢವಾಗಿ ಕಾಡುತ್ತದೆ.

ಭಾಗ - ೩

ಗಂಗಾಳ ಬದುಕಿನಲ್ಲಿ ಗಂಡು-ಹೆಣ್ಣಿನ ಸಂಬಂಧದ ಬಗ್ಗೆ ಆಳವಾದ ಯೋಚನೆಗಳು ಪ್ರಾರಂಭವಾದದ್ದು ಆಕೆಯ ಚಿಕ್ಕ ವಯಸ್ಸಿನಲ್ಲಿಯೇ. ಆಕೆ ಕಂಡ ಹಾಗೆ ಆಕೆಯ ತಂದೆ-ತಾಯಿಯ ಸಂಬಂಧ ನರಕಮಯವಾದದ್ದು. ನೆನಪಿನಾಳಕ್ಕೆ ಜಾರಿ ನೆನಪಿಸಿಕೊಂಡರೆ ಅಪ್ಪ, ಅಮ್ಮ ಪ್ರೀತಿಯಿಂದ ಮಾತನಾಡಿದ್ದಾಗಲೀ, ಓಡಾಡಿದ್ದಾಗಲೀ ಆಕೆ ಕಂಡವಳಲ್ಲ. ನಿತ್ಯ ರಗಳೆಯ ಬದುಕು. ಏನೇನೋ ಗೋಜಲು, ಗೋಜಲುಗಳು. ರಾತ್ರಿ ಊಟದ ಸಂದರ್ಭದಲ್ಲಿ, ಬೆಳಗ್ಗೆ ತಿಂಡಿಯ ಸಮಯದಲ್ಲಿ ಅಪ್ಪ ಕೋಪದಿಂದ ತಟ್ಟೆ ಬೀಸುವುದು, ತಾಯಿಯ ಮುಖದಲ್ಲಿ ಮೂಗಿನಿಂದಲೋ, ಬಾಯಿಯಿಂದಲೋ ರಕ್ತ ಸುರಿಯುವುದು. ಹೀಗೆ ಗಂಗಾಳಿಗೆ ಬಾಲ್ಯದ ದಿನಗಳನ್ನು ನೆನಸಿಕೊಂಡರೆ ನೆನಪಿಗೆ ಬರುವುದೆಲ್ಲಾ ತಟ್ಟೆ, ಲೋಟ ಬಿಸಾಕುವ ದೃಶ್ಯ, ತಾಯಿಯ ರೋಧನ, ತಂದೆಯ ಬೈಗುಳ, ಸಿಟ್ಟು ಮಾಡಿಕೊಂಡು ಮನೆ ಬಿಟ್ಟು ಹೋಗುವ ತಾಯಿ. ನೆನಸಿಕೊಂಡಾಗಲೆಲ್ಲಾ ಗಂಗಾಳ ಮೈಯಲ್ಲಿ ನಡುಕ ಉಂಟಾಗುತ್ತದೆ.

ಗಂಗಾ ಓದಲೆಂದು ತನ್ನ ಊರು ಹೊನ್ನೇಕೆರೆಯಿಂದ ಶಿವಮೊಗ್ಗೆಗೆ ಬಂದಾಗ ಮನೆಯಿಂದ ಬಿಡುಗಡೆ ಸಿಕ್ಕಂತೆನಿಸಿ ನಿಟ್ಟುಸಿರುಬಿಟ್ಟಿದ್ದಳು. ಬಾಲ್ಯದ ಭಾರದ ನೆನಪುಗಳು ಆಕೆಯನ್ನು ಜಗ್ಗಿಸಿದ್ದವು. ಆಕೆಯ ಹಾಸ್ಟೆಲ್ ಸಮೀಪವೇ ಇದ್ದ ಮಾಲಾ ಎಂಬ ಹುಡುಗಿಯ ಪರಿಚಯವಾದಾಗಲಂತೂ ಆಕೆಗೆ ನಿಧಿಯೇ ಸಿಕ್ಕ ಹಾಗೆ ಆಗಿತ್ತು. ಹಾಸ್ಟೆಲ್‌ಗೆ ಆಕೆಯ ಮನೆ ಸಮೀಪವಾದ್ದರಿಂದ ಗಂಗಾ ನಿತ್ಯ ಸಂಜೆ ಅವರ ಮನೆಗೆ ಹೋಗುತ್ತಿದ್ದುದುಂಟು. ಮಾಲಾಳ ಮನೆಯಲ್ಲಿ ಸಂಜೆ ಸಾಕಷ್ಟು ಜನ ಸೇರುತ್ತಿದ್ದರು. ಹೀಗೆಯೇ ಚರ್ಚೆ. ಅದು ಭಾರತದಲ್ಲಿ ಎಮರ್ಜೆನ್ಸಿ ಕಾಲವಾದ್ದರಿಂದ ರಾಜಕೀಯದ ಚರ್ಚೆಗಳು ಬಿರುಸಾಗಿ ನಡೆಯುತ್ತಿದ್ದವು. ಮಾಲಾಳ ಮನೆಗೆ ಬಂದವರು ಹೆಚ್ಚು-ಹೆಚ್ಚಾಗಿ ಹಿಂದೂ ಧರ್ಮದ ಬಗ್ಗೆಯೇ ಮಾತನಾಡುತ್ತಿದ್ದರು. ಅದರ ವೈಭವವನ್ನು ವರ್ಣಿಸಿ ಹೇಳುತ್ತಿದ್ದರು. ಗಂಗಾ ಮೊದ ಮೊದಲ ದಿನಗಳಲ್ಲಂತೂ ಸಾಕಷ್ಟು ಪ್ರಭಾವಿತಳಾಗಿದ್ದಳು. ದೇಶಕ್ಕಾಗಿ ನಮ್ಮನ್ನು ಮುಡುಪಾಗಿ ಇಟ್ಟುಕೊಳ್ಳಬೇಕು, ನಮ್ಮ ದೇಶ ಹಿಂದೂ ದೇಶ, ಹಿಂದೂಗಳೇ ಈ ರಾಷ್ಟ್ರದ ಉದ್ಧಾರಕರು, ಇಲ್ಲಿರುವವರೆಲ್ಲ ಹಿಂದೂಗಳ ಧರ್ಮಪಾಲನೆ ಮಾಡಲಿ, ಮುಸ್ಲಿಂರಾಗಲೀ, ಕ್ರಿಶ್ಚಿಯರ್ನರಾಗಲೀ ಹಿಂದೂ ಧರ್ಮದ ಧಾರ್ಮಿಕ ವಿಧಿ ವಿಧಾನ ಬೆಂಬಲಿಸಿ ಅದರ ಜೊತೆ ಗುರುತಿಸಿಕೊಳ್ಳಲಿ - ಹೀಗೆ ಮಾಲಾಳ ಮನೆಯಲ್ಲಿ ನಡೆಯುವ ಚರ್ಚೆಯಿಂದಾಗಿ ಗಂಗಾ ಯಾವಾಗಲೂ ಉದ್ವಿಗ್ನಳಾಗಿಯೇ ಇರುತ್ತಿದ್ದಳು. ಮಾಲಾ ತಾನು ಕಂಡಿರದ ಪ್ರಪಂಚವೊಂದರ ನಿಗೂಢ ಮಹಿಳೆ ಎಂದು ಗಂಗಾಗೆ ಅನಿಸುತ್ತಿತ್ತು. ತನ್ನ ಪುಟ್ಟ ಹಳ್ಳಿ ಹೊನ್ನೇಕೆರೆಯಲ್ಲಿ ನಡೆದ ರಾಜಕೀಯ ಮೀಟಿಂಗ್‌ವೊಂದಕ್ಕೆ ಗಂಗಾ ಮಾಲಾಳನ್ನು ಆಹ್ವಾನಿಸಿದ್ದಳು. ಹಲವಾರು ಹೆಂಗಸರೂ, ಮಕ್ಕಳು ಸೇರಿದ್ದ ಈ ಸಭೆಯಲ್ಲಿ ಮಾಲಾ ಉದ್ವೇಗದಿಂದ, ಉತ್ಸಾಹದಿಂದ, ರಾಜಕಾರಣಿಗಳಿಗಿಂತ

ಹೆಚ್ಚು ಭಾವೋದ್ವೇಗದಿಂದ ಮಾತನಾಡಿದ್ದಳು. 'ಮಾಲಾ' ಗಂಗಾಳ ಮನಸ್ಸಿನಲ್ಲಿ ಬಹಳಷ್ಟು ದಿನ ಒಂದು ಆದರ್ಶ ಚಿತ್ರವಾಗಿಯೇ ಉಳಿದುಕೊಂಡಿದ್ದಳು.

ಈ ಸಂದರ್ಭದಲ್ಲಿಯೇ ಗಂಗಾಗೆ ರವಿ ಪರಿಚಯವಾದದ್ದು. ಸಾಹಿತ್ಯ, ನಾಟಕದಲ್ಲಿ ಉತ್ಸಾಹವಿದ್ದ ಗಂಗಾ ಅದೇ ತರಹದ ಒಂದು ಗುಂಪಿಗೆ ಪರಿಚಯವಾದಳು. ರವಿ ಆ ಗುಂಪಿಗೆ ಹೀರೋ ಎಂಬಂತೆ ಕಾಣುತ್ತಿದ್ದನು. ಬಹಳಷ್ಟು ಹುಡುಗಿಯರು ಅವನ ಬೌದ್ಧಿಕತೆಯ ಬಗ್ಗೆ ಮಾತನಾಡುತ್ತಿದ್ದರು. ಗಂಗಾ ಆ ಗುಂಪಿನಲ್ಲಿ ನಿಧಾನವಾಗಿ ಬೆರೆಯತೊಡಗಿದ್ದಳು. ಸಾಹಿತ್ಯದ ಚರ್ಚೆಯಲ್ಲಿ ಭಾಗವಹಿಸತೊಡಗಿದ್ದಳು. ಈ ಗುಂಪಿನಲ್ಲಿ ಬೆರೆಯತೊಡಗಿದಾಗಲೇ ಗಂಗಾಗೆ ಮಾರ್ಕ್ಸಿಸಂನ ಪರಿಚಯವಾಗತೊಡಗಿದ್ದು. ಡಯಲೆಕ್ಟಿಕಲ್ ಮೆಟೀರಿಯಲಿಸಂ ಬಗ್ಗೆ, ಏಲಿಯನೇಷನ್ ಬಗ್ಗೆ, ಕ್ರೈಸಿಸ್‌ಗಳ ಬಗ್ಗೆ, ಬಂಡವಾಳಶಾಹಿತ್ವದ ಮುಖದ ಹೊಳವುಗಳು ಗ್ರಹಿಕೆಗೆ ಬರತೊಡಗಿದಾಗ ಮಾಲಾಳ ಪ್ರಪಂಚದ ಬೌದ್ಧಿಕತೆಗೆ ವಿರುದ್ಧವಾದ, ಜೊತೆಗೆ ಆಳವಾದ ಮತ್ತೊಂದು ಜ್ಞಾನದ ಪರಿಧಿಯಿದೆ ಎಂದು ಗಂಗಾಗೆ ಅರ್ಥವಾಗತೊಡಗಿದ್ದು. ಈ ಜ್ಞಾನದ ವಲಯದಲ್ಲಿ ಹಿಂದೂ / ಹಿಂದೂ ಧರ್ಮಗಳೇ ಆದ್ಯ ದೇವತೆಗಳಾಗಿ ಉಳಿಯುವುದಿಲ್ಲ. ಪ್ರತಿಯೊಬ್ಬ ಮಾನವನ ಬದುಕಿನ ಹರವನ್ನು, ಸಾಮಾಜಿಕ ಚಲನೆಯನ್ನು ಅರ್ಥೈಸಿಕೊಳ್ಳುವಲ್ಲಿ ಮಾಲಾಳ ಪ್ರಪಂಚದ ಸಾಮರ್ಥ್ಯ ಕಡಿಮೆ ಎಂದೇ ಗಂಗಾಗೆ ಅನ್ನಿಸತೊಡಗಿತು. ಸಾಮಾಜಿಕ ಚಲನೆಯ ಒಂದು ವೈಜ್ಞಾನಿಕ, ವೈಚಾರಿಕ ಚೌಕಟ್ಟು ಸ್ವಲ್ಪ ಸ್ವಲ್ಪ ಗಂಗಾಗೆ ಅರ್ಥವಾಗತೊಡಗಿದ್ದೇ ಮಾರ್ಕ್ಸ್‌ವಾದದ ಪರಿಧಿಯಿಂದ. ಆ ಸಂದರ್ಭದಲ್ಲಿ ಗಂಗಾ ಕಂಡಿದ್ದ ಮಾರ್ಕ್ಸಿಸ್ಟರು ಯಾವುದೇ ಕ್ರಿಯಾತ್ಮಕ ಸಂಘಟನೆಗಳಲ್ಲಿ ತೊಡಗಿದವರಲ್ಲ. ಬೌದ್ಧಿಕ ಚರ್ಚೆಗೆ ಸೀಮಿತವಾದ ಒಂದು ಅಕ್ಯಾಡಮಿಕ್ ವಲಯ. ಇದರಲ್ಲಿ ಕೆಲವರು ಬರಹಗಳನ್ನು ಬರೆದು ಪ್ರಕಟಿಸುವರಾಗಿದ್ದರೆ, ಇನ್ನು ಕೆಲವರು ನಾಟಕ/ಸಾಹಿತ್ಯ ಚರ್ಚೆಯಲ್ಲಿ ಪಾಲ್ಗೊಂಡವರು. ಈ ಸಂದರ್ಭದಲ್ಲಿ ಗಂಗಾ ಮುಖಾಮುಖಿಯಾದದ್ದು ಆಕೆಯ ಗ್ರಹಿಕೆಗೇ. ಸುಮಾರು ಎಂಟನೆಯ ತರಗತಿಯಿಂದ ಆಕೆಯ ಓದು ಆಕೆಯಲ್ಲಿ ಬಿತ್ತಿದ್ದ ಆದರ್ಶಗಳು ಭಿನ್ನವಾದವು. ಆ ಗ್ರಹಿಕೆಯಲ್ಲಿನ ಆದರ್ಶದಲ್ಲಿ ಗಂಗಾ ಹಿಂದೂ ಧರ್ಮದ ವಲಯದಲ್ಲಿ ತನ್ನನ್ನು ಗುರುತಿಸಿಕೊಂಡಿದ್ದಳು. ಆದರೆ ಡಯಲೆಕ್ಟಿಕಲ್ ಮೆಟೀರಿಯಲಿಸಂ ಆಕೆಗೆ ನೀಡಿದ ಜಾಗತಿಕ ಗ್ರಹಿಕೆಯೇ ಬೇರೆ. ಇದ್ದಕ್ಕಿದ್ದ ಹಾಗೆ ಗಂಗಾಗೆ ತನ್ನ ಗ್ರಹಿಕೆಯ ಬಗ್ಗೆಯೇ ಪ್ರಶ್ನೆಗಳು ಉದ್ಭವಿಸತೊಡಗಿದ್ದವು. ತನ್ನ ಗ್ರಹಿಕೆಯ ಹಿನ್ನೆಲೆ ಯಾವುದು? ತಾಯಿ-ತಂದೆ ಜಗಳವಾಡುತ್ತಿದ್ದುದರಿಂದ, ಬಾಲ್ಯದ ಕಹಿ, ಕಹಿ ನೆನಪುಗಳಲ್ಲಿ ಹುಟ್ಟಿದ ಅನಾಥ ಪ್ರಜ್ಞೆ, ಅದಕ್ಕೆ ವಿರೋಧವಾಗಿ ತನ್ನೊಳಗೇ ಬೆಳೆದು ಬಂದ ವಿರೋಧೀ ಮನೋಭಾವಗಳು, ಇವೆರಡರಲ್ಲಿ ಮೂಡಿ ಬಂದ ಆದರ್ಶ, ಹೊಸ ಪ್ರಜ್ಞೆ ಇಂತವುಗಳಿಂದ ಗಂಗಾ ಮಾನಸಿಕವಾಗಿ ಸಂಘರ್ಷಕ್ಕೆ ಒಳಗಾದ ಕಾಲ ಅದು. ಇದರ ಸೂತ್ರಧಾರ ರವಿ ಎಂದರೂ ತಪ್ಪಾಗಲಾರದೇನೋ! ರವಿ ಬರಿಯ ಸಾಹಿತ್ಯವನ್ನಲ್ಲ, ಯಾವಾಗಲೂ ಮಾರ್ಕ್ಸಿಸಂ ಕುರಿತು ಓದುತ್ತಿದ್ದ, ಚರ್ಚಿಸುತ್ತಿದ್ದ. ಗಂಗಾಳಿಗೆ ಅರ್ಥವಾಗದುದನ್ನು ಏನೋ ಆಕೆಗೆ ಹೇಳುತ್ತಿದ್ದ. ಮಾಲಾಳ ಸ್ಥಾನದಲ್ಲಿ ಗಂಗಾ ಕ್ರಮೇಣವಾಗಿ ರವಿಯನ್ನಿಟ್ಟು ಪೂಜಿಸತೊಡಗಿದ್ದಳು. ಈಗ ಆದರ್ಶ ವ್ಯಕ್ತಿಯಾಗಿ ಗಂಗಾಳ ಮನಸ್ಸಿಗೆ ಲಗ್ಗೆ ಹಾಕಿದವನು ರವಿ. ಬದುಕಿಗೆ ಚಾಲನೆ ನೀಡುವ ವ್ಯಕ್ತಿಯಾಗಿ ರವಿ ಆಕೆಯ ಕಣ್ಣಿಗೆ ಕಾಣಿಸತೊಡಗಿದ್ದ.

ಇಷ್ಟು ಉನ್ನತ ಆದರ್ಶದಲ್ಲಿಟ್ಟು ನೋಡಿದ ರವಿಯ ವ್ಯಕ್ತಿತ್ವ ಟೊಳ್ಳು ಎಂದು ಅರ್ಥವಾಗತೊಡಗಿದಾಗ ಗಂಗಾಗೆ ಗಾಭರಿಯ ಜೊತೆಗೆ ಭಯವೂ ಆಗಿತ್ತು. ರವಿಯ ಸಂಬಂಧದಲ್ಲಿ ವೈಚಾರಿಕ

ನೆಲೆಗಟ್ಟಿನಲ್ಲಿ ನಿಂತು ಪ್ರೀತಿಯ ಲಯವನ್ನು ಹಿಡಿಯಲು ಗಂಗಾ ಪ್ರಯತ್ನಿಸಿದ್ದಳು. ಪುಸ್ತಕ ಪ್ರಪಂಚದಲ್ಲಿ ಕಂಡ ಆದರ್ಶಗಳೇ ಆಕೆಯ-ರವಿಯ ಪ್ರೇಮದ ಮೂಲ ಸೆಲೆಗಳಾಗಿದ್ದವು. ಹೀಗೆಲ್ಲ ಯೋಚಿಸುವಾಗ ಗಂಗಾಳಲ್ಲಿ ಒಂದು ರೀತಿಯ ಹೆಮ್ಮೆ ತಲೆ ಎತ್ತತೊಡಗಿತ್ತು. ಆದರೆ ಆದದ್ದೇ ಬೇರೆ. ಶಿವಮೊಗ್ಗೆಗೆ ಬಂದ ಪ್ರಥಮ ದಿನಗಳಲ್ಲಿ ಗಂಗಾ ವೈಚಾರಿಕ ಚೌಕಟ್ಟಿನಲ್ಲಿ ಬದುಕನ್ನು ಇಟ್ಟು ನೋಡುವ ಸಾಮರ್ಥ್ಯ ಹೊಂದಿದವಳಾಗಿರಲಿಲ್ಲ. ಸಾಹಿತ್ಯದ ಜೊತೆಗೆ ತಾತ್ವಿಕ ವಿಚಾರಗಳಿಗೆ ಸ್ಪಂದಿಸತೊಡಗಿದಂತೆ ಆಕೆಯ ಗ್ರಹಿಕೆಯಲ್ಲಿ ವೈಶಾಲ್ಯ ಮೂಡುತ್ತಾ ಹೋಯಿತು. ಆಕೆಯ ಗೆಳೆಯರ/ಗೆಳತಿಯರ ವಲಯವೂ ಹೆಚ್ಚುತ್ತಾ ಹೋದ ಹಾಗೆ ಗಂಗಾಳಿಗೆ ಬದುಕಲ್ಲಿ ಅವಳ ಬಗ್ಗೆ ಅವಳಿಗೇ ಒಂದು ರೀತಿಯ ಭರವಸೆ ಮೂಡ ತೊಡಗಿತ್ತು. ರವಿಯ ಜೊತೆ ಅತ್ಯಂತ ಆತ್ಮೀಯ ಸಂಬಂಧ ಬೆಳೆಸಿಕೊಂಡ ಗಂಗಾ ಅವನ ಬಗ್ಗೆ ಅಪಾರ ಪ್ರೀತಿ, ಒಲವು ಬೆಳೆಸಿಕೊಂಡಿದ್ದಳು. ಹೇಗೆ? ಯಾವಾಗ? ರವಿಯನ್ನು ಮದುವೆಯಾಗುತ್ತೇನೆ ಎಂದು ಆಕೆ ಸ್ಪಷ್ಟವಾಗಿ ಯೋಚಿಸಿರದಿದ್ದರೂ, ರವಿಯೇ ತನ್ನ ಬಾಳ ಸಂಗಾತಿಯಾಗುತ್ತಾನೆ ಎನ್ನುವಂತಹ ಅಸ್ಪಷ್ಟ ಕಲ್ಪನೆಗಳು ಆಕೆಯಲ್ಲಿದ್ದವು. ಆದರೆ ರವಿ ಬಯಸಿದ್ದು ಆತ್ಮವಿಶ್ವಾಸ ಹೊಂದಿದ ಗಂಗಾಳನ್ನಲ್ಲ. ಏನೂ ಗೊತ್ತಿಲ್ಲದೇ 'ಓ ಬದುಕನ್ನು ಹೀಗೂ ಗ್ರಹಿಸಬಹುದಾ?' ಎಂದು ಎಲ್ಲದಕ್ಕೂ ಕಣ್ಣರಳಿಸಿ ನೋಡುತ್ತಿದ್ದ ಗಂಗಾಳನ್ನು. ಕ್ರಮೇಣವಾಗಿ ಭರವಸೆಯಲ್ಲಿ, ಆತ್ಮವಿಶ್ವಾಸದಲ್ಲಿ ಬೆಳೆಯತೊಡಗಿದ ಗಂಗಾಳ ವ್ಯಕ್ತಿತ್ವ ಆತನಲ್ಲಿ ಭಯ, ಪುಕ್ಕಲುತನ ಹುಟ್ಟಿಸುತ್ತಾ ಹೋದ ಹಾಗೆ, ಗಂಗಾಳಿಗೆ ತಾನು ದೊಡ್ಡ ವ್ಯಕ್ತಿ ಎಂದು ತೋರಿಸುವ ಹಮ್ಮು ಆತನಲ್ಲಿ ಹೆಚ್ಚಾಗತೊಡಗಿತ್ತು. ಇದಕ್ಕಾಗಿ ರವಿ ತೀರಾ ಕೆಳದರ್ಜೆಯ ತಂತ್ರಗಳನ್ನು ಬಳಸಿಕೊಳ್ಳತೊಡಗಿದಾಗ ಗಂಗಾಗೆ ಶಾಕ್ ಆಗತೊಡಗಿತ್ತು. ಅವನ ವ್ಯಕ್ತಿತ್ವದ ಬಗ್ಗೆಯೇ ಅನುಮಾನಗಳು ತಲೆ ಎತ್ತತೊಡಗಿದ್ದವು. ತಾನು ನಂಬಿಕೊಂಡ ಆದರ್ಶಗಳೇ, ಮೂಲ ಸೆಲೆಗಳೇ ತಪ್ಪೇನೋ ಅನ್ನಿಸತೊಡಗಿತ್ತು. ಯಾರೋ ದೊಡ್ಡ ದೊಡ್ಡ ಗೆಳೆಯರ ಹೆಸರುಗಳನ್ನು ಹೇಳುವುದು, ಊಟಿಯಲ್ಲಿರುವ ಗೆಳತಿಯ ಹೆಸರು ಹೇಳುವುದು, ಆಕೆ ಓದಿಕೊಂಡಿರುವ ಫಿಲಾಸಫಿಯ ಬಗ್ಗೆ ಗಂಗಾಳಲ್ಲಿ ಆಶ್ಚರ್ಯ ಉಂಟಾಗುವಂತೆ ಹೇಳುವುದು - ಇತ್ಯಾದಿಗಳು ಅಸ್ತಿತ್ವದಲ್ಲಿಯೇ ಇಲ್ಲ. ತನ್ನ ಆತ್ಮ ವಿಶ್ವಾಸದ ಜೊತೆ ಸ್ಪರ್ಧಿಸಲಾರದೇ ರವಿ ಹುಟ್ಟುಹಾಕುತ್ತಿರುವ ಭ್ರಮೆಯ ಜಗತ್ತು ಎಂದು ಗಂಗಾಳಿಗೆ ತಿಳಿದಾಗ ರವಿ ಎಂತಹ ಟೊಳ್ಳು ವ್ಯಕ್ತಿ ಎಂಬುದು ಗಂಗಾಳಿಗೆ ಅರ್ಥವಾಗತೊಡಗಿತ್ತು. ಉನ್ನತ ಮಟ್ಟದ ಆದರ್ಶದ ಭ್ರಮೆಯಲ್ಲಿ ತಾನು ಪ್ರೀತಿಸಿದ್ದು ರವಿಯಂತಹ ಟೊಳ್ಳು ವ್ಯಕ್ತಿಯನ್ನು ಎನ್ನಿಸಿದಾಗ ಗಂಗಾಗೆ ಬೇಸರದ ಜೊತೆಗೆ ಭಯವೂ ಉಂಟಾಗಿತ್ತು. ಇದೆಲ್ಲಾ ಇನ್ನೂ ಸ್ಪಷ್ಟವಾದದ್ದು ರವಿ ತನಗೇ ಗೊತ್ತಿಲ್ಲದ ಹಾಗೆ ತನ್ನ ಗೆಳತಿಗೆ ಪ್ರೇಮ-ಪತ್ರ ಬರೆದಾಗ. ಗೆಳತಿ ಬಂದು ಗಂಗಾಳ ಹತ್ತಿರ ಪತ್ರ ತೋರಿಸಿದ್ದಳು. ನೀನು ನಂಬಿರುವ ವ್ಯಕ್ತಿಗೆ ಇನ್ನೊಂದು ಮುಖವಿದೆ ಎಂದಿದ್ದಳು. ಪ್ರೀತಿ-ಪ್ರೇಮ ಎಂದು ಅವನ ಜೊತೆ ಸುತ್ತುವ ಮೊದಲು ಯೋಚಿಸು ಎಂದಿದ್ದಳು. ಆಗಲೇ ಗಂಗಾ ಪ್ರೀತಿ-ಪ್ರೇಮದ ಇನ್ನೊಂದು ಮುಖಕ್ಕೆ ಮುಖಾ-ಮುಖಿಯಾದದ್ದು. 'ಮದುವೆ' - ಎನ್ನುವಂತಹ ಸಂಸ್ಥೆ ಇಂತಹ ವ್ಯಕ್ತಿಗಳಿಂದಾಗಿ ಇನ್ನೂ ಎಷ್ಟು ಕಪಟ ಸಂಬಂಧದ ಸಂಸ್ಥೆಯಾಗಬಹುದು ಎನ್ನಿಸಿದಾಗ ಗಂಗಾ ಭಯದಿಂದ ನಡುಗಿದ್ದಳು. ಗಂಗಾಳ ಜೀವನದಲ್ಲಿ ಈ ಪೆಟ್ಟು ದೊಡ್ಡ ಶಾಕ್ ಆಗಿ ಪರಿಣಮಿಸಿತ್ತು. ಅಂಟಿಕೊಂಡು ಬದುಕುವುದು ಎಂಬ ಕಲ್ಪನೆಯನ್ನು ಬೇರು ಸಹಿತ ಕಿತ್ತು ಹಾಕಿದ್ದೇ ರವಿಯ ಸಂಬಂಧ. ಸುಧಾರಿಸಿಕೊಳ್ಳಲು ಗಂಗಾ ಬಹಳ ಕಾಲವನ್ನೇ ತೆಗೆದುಕೊಂಡಳು. ಮನಸ್ಸಿಗೆ ಸಮಾಧಾನವಾದ ಸಂದರ್ಭವೊಂದರಲ್ಲಿ ಈ ಎಲ್ಲದನ್ನು ಕುರಿತು ಗಂಗಾ ರವಿಯಲ್ಲಿ ಬಿಚ್ಚಿ ಮಾತನಾಡಿದಳು. ತನ್ನ ಆತ್ಮವಿಶ್ವಾಸ ಕೆಡವಲು ಆತ ಬಳಸುತ್ತಿರುವ ತಂತ್ರಗಳನ್ನು

ಬಿಚ್ಚಿ ಬಿಚ್ಚಿ ಅವನಿಗೇ ವಿವರಿಸಿ ಹೇಳಿದಳು. ಇವೆಲ್ಲ ಗಂಗಾಗೆ ಅರ್ಥವಾಗಿದೆ ಎನ್ನಿಸಿದಾಗ ರವಿ ಪಶ್ಚಾತ್ತಾಪ ಪಟ್ಟುಕೊಂಡು ಕ್ಷಮೆ ಕೇಳಿದ್ದ. ಗಂಗಾ ಮತ್ತೆ ತನ್ನನ್ನು ನಂಬುವುದಾದಲ್ಲಿ ತನ್ನ ಇಡಿಯ ವ್ಯಕ್ತಿತ್ವವನ್ನು ಬದಲಾಯಿಸಿಕೊಂಡು ಆಕೆಯ ಜೊತೆ ಬದುಕುವುದಾಗಿ ಭರವಸೆ ಇತ್ತಿದ್ದ. ರವಿಯಿಂದ ಆದಂತಹ ಶಾಕ್‌ನಿಂದ ಚೇತರಿಸಿಕೊಳ್ಳತೊಡಗಿದ್ದ ಗಂಗಾ ಆಗಲೇ ತಮ್ಮಿಬ್ಬರ ನಡುವೆ ಮಾನಸಿಕವಾಗಿ ಇರುವಂತಹ ಅಂತರವನ್ನು ಗುರುತಿಸಿದ್ದಳು. ರವಿ ನಂಬದಿರುವುದನ್ನಷ್ಟೇ ಅಲ್ಲ, ಅಂಟಿಕೊಂಡು ಬದುಕುವ ಕಲ್ಪನೆಯನ್ನೂ ಗಂಗಾಳಲ್ಲಿ ನುಚ್ಚುನೂರು ಮಾಡಿ ಗಂಗಾಳ ಬದುಕಿನಿಂದ ದೂರ ಸರಿದಿದ್ದ.

* * * *

ಕಾಮದ ಪ್ರಪಂಚ ಬಾಲ್ಯದಲ್ಲಿ ಕಣ್ಣಿಗೆ ಸುಂದರವಾಗಿ ಕಾಣಿಸಿದ್ದರೆ, ಮನದಲ್ಲಿ ಚಿಕ್ಕ ವಯಸ್ಸಿನಲ್ಲಿ ಸುಂದರವಾಗಿ ಮೂಡಿದ್ದರೆ, ವಾಸ್ತವದಲ್ಲಿ ಕಠೋರತೆಯ ಮಧ್ಯವೂ ಆ ಸುಂದರತೆ ಮಾಸದೆಯೇ ಉಳಿದಿರುತ್ತದೆ. ಹಾಗಾಗದೇ ಕ್ರೂರ ಮುಖದಿಂದ ನಿಮ್ಮ ಬಾಲ್ಯ ಕಾಮದ ಬದುಕಿಗೆ ಮುಖಾ ಮುಖಿಯಾಗಿದ್ದರೆ ವಾಸ್ತವದಲ್ಲಿ ಸುಂದರವಾದ ಲೈಂಗಿಕ ಬದುಕಿನ ನಡುವೆಯೂ ಆಳದಲ್ಲಿ ಯಾವುದೋ ಆಳವಾದ ನೋವುಗಳು ಬೇರೂರಿರುತ್ತವೆ. ರವಿಯ ಸಂಬಂಧಕ್ಕೆ ಒಟ್ಟಾರೆಯಾಗಿ ಗುಡ್ ಬೈ ಹೇಳುವ ಸ್ಥಿತಿ ಬಂದಾಗ ಗಂಗಾಗೆ ಈ ಬಗ್ಗೆ ಬೆಚ್ಚುವಂತಾಗಿತ್ತು. ತನ್ನ ದೇಹದಲ್ಲಿ ಮಗುವೊಂದು ಬೆಳೆದು ತಾನು ತಾಯಿಯಾಗಿಬಿಡುತ್ತೇನೆ ಇಂತಹ ಅಸ್ಪಷ್ಟ ಹೆದರಿಕೆಗಳಲ್ಲಿ, ಭಯಗಳಲ್ಲಿ ಗಂಗಾ ರವಿಯೊಡನೆ ದೈಹಿಕವಾಗಿ ಮುಕ್ತವಾಗಿ ಬೆರೆತವಳೇ ಅಲ್ಲ. ಆದರೂ ಸಂಬಂಧ ಕಡಿದು ಹೋದಾಗ ಅವನನ್ನು ಮುದ್ದಿಸಿದ, ಟಚ್ ಮಾಡಿ ಅನುಭವಿಸಿದ ಆತ್ಮೀಯ ಕ್ಷಣಗಳ ಬಗ್ಗೆಯೂ ಗಂಗಾಳಿಗೆ ಆತಂಕ, ದುಗುಡ, ಯಾವುದೋ ನೋವು. ಬಾಲ್ಯದಲ್ಲಿ ಆಳವಾಗಿ ಬೇರೂರಿದ ನೋವಿನ ನೆನಪುಗಳು.

ಬಾಲ್ಯದಲ್ಲಿ ಗಂಗಾಳ ಅಣ್ಣ ಗಂಗಾಳನ್ನು ಬಳಸಿಕೊಂಡುದುಂಟು. ಯಾವಳೋ ಎಮ್ಮ ಕಕ್ಕಸ್ಸು ಮಾಡುವುದನ್ನು ನೋಡಲಿಕ್ಕೆ ಕದ್ದು ಕರೆದೊಯ್ದುದುಂಟು. 'ಒಂದು ಮಜಾ ತೋರುಸ್ತೀನಿ ಬಾ' ಅಂತ ಕಕ್ಕಸ್ಸಿಗೆ ಕೂತ ಎಮ್ಮನಿಗೆ ಕಾಣಿಸದಂತೆ ಅಡಗಿಕೊಂಡು ಗಂಗಾಳಿಗೆ ತೋರಿಸಿದುದುಂಟು. ಗಂಗಾ ಕಂಡದ್ದಾದರೂ ಏನನ್ನು? ದಪ್ಪನೆಯ ಆ ಯಮ್ಮನ ಹೊಟ್ಟೆಯ ಕೆಳಗೆ ಕಪ್ಪಾದ ಗುಹೆ ಕಂಡ ಹಾಗೆ ಅನಿಸಿ ಬೆಚ್ಚಿ ಬಿದ್ದ ಗಂಗಾ ಅಣ್ಣನ ಕೈಯಿಂದ ತಪ್ಪಿಸಿಕೊಂಡು ಓಡಿ ಹೋದುದುಂಟು.

ಅಣ್ಣನ ಕುತೂಹಲದ ಅಂಶಗಳು ಇಷ್ಟಕ್ಕೇ ನಿಂತಿದ್ದರೆ ಗಂಗಾಳ ಬದುಕಿನ ಆಪ್ಯಾಯಮಾನತೆಗೆ ಯಾವುದೇ ಕುಂದು ಬರುತ್ತಿರಲಿಲ್ಲ. ಅದು ಇಷ್ಟಕ್ಕೇ ನಿಂತಿರಲಿಲ್ಲ. ಕಣ್ಣಿಗೆ ಕುತೂಹಲ, ಮೈಗೆ ತವಕ. ನಿಗೂಢವನ್ನೇನೋ ತೋರಿಸುತ್ತೇನೆಂದು ಕರೆದ ಅಣ್ಣ ಕತ್ತಲಲ್ಲಿ ಕೈಯಾಡಿಸಿ, ಒಂಟಿಯಾಗಿದ್ದಲ್ಲಿ ಕಚ್ಚು, ಕಚ್ಚು ಎಂದು ಚಡ್ಡಿಯಿಂದ ಈಚೆ ತೆಗೆದ ತೂಗಾಡುವ ದಪ್ಪನೆಯ ಉದ್ದನೆಯ ಚರ್ಮದಲ್ಲಿ ಕೆಂಪು, ಕೆಂಪಾದುದನ್ನು ಏನನ್ನೋ ತೋರಿಸುತ್ತಾ ಕಚ್ಚಿಸಿ, ಕಚ್ಚಿಸಿ ಕೊನೆಗೆ ಹೋಗಿ ಬಾಯಿ ತೊಳೆದುಕೋ ಎಂದು ಹೆದರಿಸಿ ಏನೇನೋ ಮಾಡಿಸುತ್ತಿದ್ದ ನೆನಪುಗಳು ಗಂಗಾಳನ್ನು ಕಾಡುತ್ತವೆ. ರವಿಯ ಸಂಬಂಧ, ಅಪ್ಪ-ಅಮ್ಮನಿಗೆ ವಿರುದ್ಧವಾದ, ಅಣ್ಣನ ಕೆಟ್ಟ ಕುತೂಹಲಕ್ಕೆ, ಕ್ರೂರವಾದ ಅನುಭವಕ್ಕೆ ಭಿನ್ನವಾದ ಮೃದುವಾದ ಸಂಬಂಧವನ್ನು ಹುಟ್ಟುಹಾಕುವುದು ಗಂಗಾಳಿಗೆ ಬೇಕಿತ್ತು. ಮನಸ್ಸು, ದೇಹ ಎರಡರ ನಡುವೆಯೂ ಆತ್ಮೀಯತೆಯ ತಂತು ಬೆಸೆಯುವ ಸಂಬಂಧ ರವಿಯ ಸಂಬಂಧವಾಗಬಹುದೆಂದು ಆಕೆ

ಎಣಿಸಿದ್ದು ಆಕೆಗೇ ಸುಳ್ಳು ಎನಿಸಿದಾಗ ಯಾಕೋ ಸಾಹಿತ್ಯದಲ್ಲಿ ತಾನು ಕಂಡ ಬದುಕು ಜೀವನದಲ್ಲಿ ಇರುವುದಿಲ್ಲವೇನೋ ಎಂದು ಆಕೆಗೆ ಬಲವಾಗಿ ಅನ್ನಿಸತೊಡಗಿತ್ತು. ಸಾಹಿತ್ಯದಲ್ಲಿ ತಾನು ಕಂಡ ಗಂಡು-ಹೆಣ್ಣಿನ ಪರಿಪೂರ್ಣತೆಯ ಸಂಬಂಧ, ಕ್ರಾಂತಿಕಾರಿ ಸಂಬಂಧ, ಲೈಂಗಿಕ ಸಂಬಂಧವ ಸುಂದರತೆಗಳು ಅಷ್ಟೇ ಪರಿಪೂರ್ಣವಾಗಿ ದಕ್ಕಲಾರವು ಎನ್ನುವ ಸತ್ಯ ಸ್ವಲ್ಪ ಸ್ವಲ್ಪ ಮಟ್ಟಿಗೆ ಆಕೆಯಲ್ಲಿ, ಆಕೆಯ ಗ್ರಹಿಕೆಗೆ ಬರಲಾರಂಭಿಸಿದ್ದು ಈ ಹಂತದಲ್ಲಿಯೇ. ಯಾವುದೋ ಉನ್ನತ ಮಟ್ಟದ ಆದರ್ಶದಲ್ಲಿಟ್ಟು ಪ್ರೀತಿಸಿದ್ದ ರವಿಯ ವ್ಯಕ್ತಿತ್ವ ತಂತ್ರಗಳನ್ನು ಬಳಸುವ ಒಂದು ಟೊಳ್ಳು ವ್ಯಕ್ತಿತ್ವ ಎನಿಸಿದಾಗ ಕ್ರೂಡ್ ಆಗಿದ್ದ ಆಕೆಯ ಅಣ್ಣ, ಆತನ ಗೆಳೆಯರ ವ್ಯಕ್ತಿತ್ವಕ್ಕಿಂತ ಈತ ಏನು ಭಿನ್ನ? ಎಂದು ಗಂಗಾಗೆ ಅನ್ನಿಸತೊಡಗಿತ್ತು.

ಒಂಟಿಯಾಗಿ ಮಲಗಿ ನಿದ್ದೆ ಮಾಡುತ್ತಿದ್ದಾಗಲೊಮ್ಮೆ ಅಣ್ಣನ ಕೈಗಳು ತನ್ನ ಮೇಲೆ ಹರಿದಾಡಿದ್ದು ಗಂಗಾಗೆ ಜ್ಞಾಪಕಕ್ಕೆ ಬರುತ್ತದೆ. ಅಣ್ಣನ ಚಡ್ಡಿಯಿಂದ ಈಚೆ ಬಂದ ಅಲುಗಾಡುವ ವಸ್ತುವೊಂದನ್ನು ತನ್ನ ಚಡ್ಡಿಯವೊಳಗೆ ತೂರಿಸಿ ಅದನ್ನು ಸವರುತ್ತಾ ಕೊನೆಗೆ ಸಿಂಬಳ ಸಿಂಬಳವೆಲ್ಲ ತೊಡೆಗೆ ಹತ್ತಿದಂತಾಗಿ ಗಂಗಾ ಗುಬ್ಬಚ್ಚಿ ಮರಿಯಾಗಿ ಹೆದರಿ ಓಡಿ ಅಡಿಗೆ ಮನೆಯಲ್ಲಿ ಅಮ್ಮನನ್ನು ಅಪ್ಪಿಕೊಂಡಿದ್ದಳು. ಬಿಕ್ಕಿ ಬಿಕ್ಕಿ ಅತ್ತಿದ್ದಳು. ಅಣ್ಣ ಮಲಗಲು ಬಿಡುವುದಿಲ್ಲ. ಅದೇನೇನೋ ಮಾಡುತ್ತಾನೆ. ನೋಡು ಇಲ್ಲಿ, ಎಂತಹದೋ ಸಿಂಬಳ, ಸಿಂಬಳ, ಅಮ್ಮ ಅಣ್ಣನಿಗೆ ಗದರುತ್ತಾಳೆ. ತನಗೂ ಗದರುತ್ತಾಳೆ. ನನ್ನ ಹತ್ತಿರವೇ ಮಲಗು ಎನ್ನುತ್ತಾಳೆ.

ಗಂಗಾ ರವಿಯ ಸಂಬಂಧದಲ್ಲಿ ಆಶಿಸಿದ್ದೇನು? ಅಪ್ಪನ ರಕ್ತ ಸುರಿಯುವ ಮುಖವನ್ನು ಆಕೆಯ ಎದೆಯಾಂತರಾಳದಿಂದ ತೊಡೆದು ಹಾಕುವುದು ಬೇಕಿತ್ತು. ಗುಬ್ಬಚ್ಚಿ ಮರಿಯಾಗಿ ಅಣ್ಣನ, ಅಣ್ಣನ ಗೆಳೆಯರ ಕೆಟ್ಟ ಕುತೂಹಲಗಳಿಗೆ ಒಳಗಾಗಿದ್ದನ್ನು ಮನಸ್ಸಿನಿಂದ ಕಿತ್ತು ಹಾಕುವುದು ಗಂಗಾಗೆ ಬೇಕಿತ್ತು. ಆದರ್ಶದ ಅಮಲಿನಲ್ಲಿ ಉನ್ನತ ಮಟ್ಟದಲ್ಲಿಟ್ಟು ಬೆಳೆಸಿಕೊಂಡ ರವಿಯ ಸಂಬಂಧ ಬೇರಿಲ್ಲದ ಸಂಬಂಧ ಎನಿಸಿದಾಗ ಪ್ರಪಾತಕ್ಕೆ ಬಿದ್ದ ಅನುಭವ. ಪ್ರೀತಿ/ಪ್ರೇಮದ ಆದರ್ಶಗಳು, ಪುಸ್ತಕ ಪ್ರಪಂಚದಲ್ಲಿ ಕಂಡ ಸತ್ಯಗಳು ನಿಜ ಜೀವನದಲ್ಲಿ ಇಲ್ಲ ಎನಿಸಿದಾಗ ಗಂಗಾ ಯಾವ ಆಸರೆಯ ಕೊಂಬೆ ಹಿಡಿದು ಬದುಕಲಿ ಎಂದು ಪರಿತಪಿಸಿದ್ದಳು. ಬದುಕಿನ ಆಸರೆಗೆ ಯಾವುದಾದರೂ ನಂಬಿಕೆ ಬೇಕಿತ್ತು. ಬೇರಿನ ಆಸರೆ ಬೇಕಿತ್ತು. ಕೊಚ್ಚಿ ಹೋದ ಪ್ರೇಮ/ಪ್ರೀತಿಗಳ ಆದರ್ಶಗಳ ಜಾಗದಲ್ಲಿ ಮತ್ತ್ಯಾವುದೋ ಆಸರೆಗೆ ಜೋತು ಬೀಳುವ ಅಗತ್ಯ ಗಂಗಾಳಿಗಿತ್ತು.

* * * * * *

ಗಂಗಾ ರವಿಯಿಂದ ದೂರ ಸರಿಯುವ ಸಂದರ್ಭದಲ್ಲಿಯೇ ಗಂಗಾ ಹಾಗೂ ಆಕೆಯ ಗೆಳತಿಯರು ಹೊನ್ನೇಕೆರೆಯಲ್ಲಿ ಪುಟಾಣಿ ಸಂಘವೊಂದನ್ನು ಸ್ಥಾಪಿಸಿದ್ದು. ಗಂಗಾಳ ಬದುಕಿನಲ್ಲಿ ಮಾತ್ರವಲ್ಲ, ಹೊನ್ನೇಕೆರೆಯಲ್ಲಿ ಇದ್ದ ಆಕೆಯ ವಯಸ್ಸಿನ, ಸ್ವಲ್ಪ ಹಿರಿಯ ಹುಡುಗಿಯರು, ಹಾಗೂ ಆಕೆಗಿಂತ ಸ್ವಲ್ಪ ಕಿರಿಯ ಹುಡುಗಿಯರ ಬಾಳಿನಲ್ಲಿ ಏನೋ ಅಲೆ ಬೀಸಿದಂತಹ ಸಂದರ್ಭ ಅದು. ಈ ಸಮಯದಲ್ಲಿಯೇ ಗಂಗಾ ಮತ್ತೆ ಹಿಂದಿನದೆಲ್ಲವನ್ನೂ ಮೆಲುಕು ಹಾಕುತ್ತಾಳೆ. ಗಂಗಾ ಎಸ್.ಎಸ್.ಎಲ್.ಸಿ.ನಲ್ಲಿ ಫಸ್ಟ್ ಕ್ಲಾಸ್ ಬಂದರೂ ಆಕೆಯ ಅಪ್ಪ ಮುಂದೆ ಓದುವುದು ಬೇಡವೇ ಬೇಡವೆಂದು ಪಟ್ಟು ಹಿಡಿದರು. ಮನೆಯಲ್ಲಿ ಉಪವಾಸ ಮಾಡಿ ಓಡಿ ಹೋಗಿ ಓದು

ಮುಂದುವರಿಸುವುದಕ್ಕೆಂದು ಹಾಸ್ಟೆಲ್ ಸೇರಿದ ಗಂಗಾ-ಅರ್ಥಾತ್ ಶಿವಗಂಗಾಗೆ ಅಪ್ಪ ಛೀಮಾರಿ ಹಾಕಿದ್ದರು. ಅಪ್ಪ-ಮಗಳು ಓದಲಿ, ಮದುವೆಯಾಗಿ ತಾ ಕಂಡ ಸುಖವಾದರೂ ಏನು ಎಂದು ಸುಮ್ಮನಾಗಿ ನಿರ್ಲಿಪ್ತತೆಯಿಂದ ಇದ್ದುಬಿಟ್ಟಿದ್ದಳು. ಆದರೆ ಅಪ್ಪ ಹಾಗೆ ಸುಮ್ಮನಾಗಿರಲಿಲ್ಲ. ಕಾಲು ಮುರಿದು ತಂದು ಮನೆಯಲ್ಲಿ ಕುಕ್ಕರುಬಡಿಯುತ್ತೇನೆ ಎಂದು ಹಾರಾಡಿದ್ದ. 'ಏನು ಫಸ್ಟ್ ಕ್ಲಾಸ್ ಬಂದೊಡನೆಯೇ ಮನೆಯ ಮರ್ಯಾದೆ ಹರಾಜು ಹಾಕಿ ಓದಲು ಓಡಿ ಹೋಗಬೇಕಿತ್ತೇ?' ಎಂಬುದೇ ಆತನ ಸಮಸ್ಯೆ. ಅಪ್ಪನಲ್ಲಿಯೇ ಇನ್ನೂರು ರೂಪಾಯಿ ಇಸಿದುಕೊಂಡು ಗಂಗಾ ಕಾಲೇಜು ಸೇರಿಯಾಗಿತ್ತು. ಅಪ್ಪ ಗಂಗಾಳನ್ನು ಹುಡುಕಿಕೊಂಡು ಶಿವಮೊಗ್ಗೆಗೆ ಬಂದಾಗ ಗಂಗಾ ಕಾಲೇಜು ಆವರಣದಲ್ಲಿಯೇ ಅಪ್ಪನಿಗೆ ಸಿಕ್ಕಿದ್ದು. ಅಪ್ಪನಿಗೆ ಗಂಗಾಳನ್ನು ನೋಡಿದೊಡನೆ ಶಿವಮೊಗ್ಗೆಯ ಮಳೆಯ ಕೆಸರೆಲ್ಲಾ ಆತನ ಮುಖದಲ್ಲಿ ರಾಚಿಕೊಂಡಂತೆ ಕಾಣಿಸತೊಡಗಿತ್ತು. ಗಂಗಾ ಯಾವುದೋ ಬೋಳು ತಲೆಯ, ಅರೆಬರೆ ವಯಸ್ಸಿನ ಒಬ್ಬ ಮನುಷ್ಯನೊಡನೆ ಮಾತನಾಡುತ್ತಾ ನಿಂತಿದ್ದಳು. ಇದನ್ನು ಕಂಡಾಗ ಗಂಗಾನ ಅಪ್ಪನ ಕಣ್ಣುಂಡೆಗಳು ಕೆಂಪು ಕಿಡಿ ಕಾರತೊಡಗಿದ್ದವು. 'ಮಿಂಡ್ರಿ, ಇಲ್ಲಿ ಲಲ್ಲೆ ಹೊಡಿಯಾಕೆ ಬಂದವ್ಳೆ, ಹೊನ್ನೇಕೆರೆ ಊರಾಗ ಲಲ್ಲೆ ಹೊಡಿಯಾಕೆ ಈಕೆಗೆ ಯಾರು ಇದ್ರು?' ಅಂತ ಮನಸ್ಸಿನ ಬಯ್ಗಳನ್ನೆಲ್ಲ ಹೆಜ್ಜೆ, ಪಾದ, ನಡಿಗೆ, ಮುಖದಲ್ಲಿ ತುಂಬಿಕೊಂಡ ಅಪ್ಪ ಗಂಗಾಳ ಮುಂದೆ ಧಡಕ್ಕನೇ ನಿಂತಾಗ ಅಷ್ಟೇ ದಬಕ್ಕೆಂದು ಗಂಗಾ ಹಿಂದೆ ಸರಿದಿದ್ದಳು. 'ನಮ್ಮಪ್ಪ' - ಅಂತ ಆ ಯಪ್ಪನಿಗೆ ಹೇಳಿದ್ಲು. 'ಇವರು ನಮ್ಮ ಮಾಸ್ತರ್' ಅಂತ ಅಪ್ಪನಿಗೆ ಹೇಳಿದ್ಲು. 'ಮಾಸ್ತರ್' - ಅಂತ ಕೇಳಿದ ಮೇಲೆ ಗಂಗಾಳ ಅಪ್ಪನಿಗೆ ಸ್ವಲ್ಪ ಸಮಾಧಾನವಾಯಿತು. ಆಕೆಯ ಮಾಸ್ತರ್ ಹತ್ರ ಗಂಗಾಳ ಅಪ್ಪ ಹೇಳಿದ್ರು, ''ನೋಡ್ರಿ, ಇಕಿ ಹಿಂಗ ಯಾರಿಗೂ ಹೇಳದಂಗ ಮನಿ ಬಿಟ್ಟು ಬಂದಾಳ. ನಮ್ಮ ಜಾತಿ, ಪಾತ್ಯಾಗ, ನಮ್ಮ ಜನದಾಗ ತಲೀ ತಗ್ಗಸಂಗ ಮಾಡಿ ಬಿಟ್ಯಾಳ್ರಿ' ಹೀಗೇಳುತ್ತ ಅಪ್ಪ ಕಚ್ಚೆ ಪಂಚೆಯ ತುದಿಯಿಂದ ತನ್ನ ಕಣ್ಣೀರು ಒರೆಸಿಕೊಳ್ಳತೊಡಗಿದ. ಆ ಮಾಸ್ತರು 'ಅಂತಹದೇನೂ ಆಗಿಲ್ಲ, ಬರ್ರೀ ನನ್ನ ಜೊತೆ' ಎಂದು ಸ್ಟಾಫ್ ರೂಂಗೆ ಕರೆದೊಯ್ದರು. ಅಪ್ಪ ಸ್ಟಾಫ್ ರೂಂನಲ್ಲಿ ಗೋಳೋ ಎಂದು ಅಳತೊಡಗಿದ. ಗಂಗಾಳ ಲೆಕ್ಚರರೆಲ್ಲ ಸಮಾಧಾನ ಮಾಡಿದರು. 'ನಿಮ್ಮ ಹುಡುಗಿ ಜಾಣೆ ಇದಾಳೆ. ಏನೋ ಓದಬೇಕು ಎಂಬ ಆಸೆಗೆ ಮನೆ ಬಿಟ್ಟು ಬಂದಿದಾಳೆ ಅಷ್ಟೇ. ನೀವು ತಿಳಿದುಕೊಳ್ಳೋ ಹಾಗೆ ಆಕೆ ಕೆಟ್ಟ ದಾರಿಯಲ್ಲಿ ಹೋಗಲ್ಲ ಬಿಡಿ' ಅಂತ ಎಲ್ಲರೂ ಸಮಾಧಾನ ಮಾಡಿದ ಮೇಲೆ ಒಂದು ತಾಸು ಕಿಸಿ ಕಿಸಿ ಅಂತ ಏನೇನೋ ಮಾತನಾಡಿದ ಅಪ್ಪನ ಸಿಟ್ಟು ಕ್ರಮೇಣವಾಗಿ ಕಡಿಮೆಯಾಗಿ 'ಏನೋ ನೀವಂತೀರಿ ಅಂತ ಸಮಾಧಾನದಿಂದ ಬಿಟ್ಟುಹೋಗ್ತೀನಿ' ಅಂತ ಅಪ್ಪ ಗಂಗಾಳಿಗೆ ಹಾಸ್ಟೆಲ್‌ನಲ್ಲಿ ವ್ಯವಸ್ಥೆ ಮಾಡಿ ಹೋಗಿದ್ದ.

ಹೀಗೇ ಅಪ್ಪನ ಹಿಡಿತದಿಂದ ತಪ್ಪಿಸಿಕೊಂಡ ಗಂಗಾ ಭಾನುವಾರ ಹಾಗೂ ಇತರೇ ರಜಾ ದಿನಗಳಲ್ಲಿ ಮನೆಗೆ ಓಡಿ ಬರುತ್ತಿದ್ದಳು. ಹೊನ್ನೇಕೆರೆಯಲ್ಲಿ ಗೆಳತಿಯರನ್ನು ಹುಡುಕಿಕೊಂಡು ಅಲೆಯುತ್ತಿದ್ದಳು. ಗಂಗಾ ಓಡಿ ಹೋಗಿದ್ದಾಳೆ ಎಂದು ಹೇಳುತ್ತಿದ್ದ ಬಾಯಿಗೆಲ್ಲ ಈಗ ಬೀಗ ಬಿದ್ದಂತಾಗಿತ್ತು. 'ಏನೋ ಫಸ್ಟ್‌ಕ್ಲಾಸ್ ಹುಡುಗಿ, ಆಸೆ ಬಿದ್ದು ಓದಾಕ ಹೋಗ್ಯಾಳ, ಭಲೇ ಶ್ಯಾಣ್ಯಾ ಐತಿ' ಅಂತ ಜಾತಿ, ಪಾತ್ಯಾವರೆಲ್ಲ ಮಾತಾಡಾಕ ಪ್ರಾರಂಭಿಸಿದ ಮೇಲೆ ಅಪ್ಪನಿಗೂ ಸಮಾಧಾನವಾಗಿತ್ತು.

ಗಂಗಾ ಹೀಗೆ ಮನೆಯಲ್ಲಿ ಧಿಕ್ಕರಿಸಿ ಓದಲು ಹೋಗಿ ಒಂದೆರಡು ವರ್ಷ ಕಳೆದ ಮೇಲೆ ಗಂಗಾಳಂತಹ ನಾಲ್ಕಾರು ಹುಡುಗಿಯರಿಗೆ ಬಲ ಬಂದಂತೆ ಅನಿಸಿತ್ತು. ನಂತರದ ವರ್ಷದಲ್ಲಿ ಹೀಂಗೆ

ಒಂದಿನ ಹೆದರ್‍ಕಂಡ, ಹೆದರ್‍ಕಂಡ ಅವರೆಲ್ಲ ಗಂಗಾನ ಹುಡುಕಿಕೊಂಡು ಬಂದ್ರು. ಗಂಗಾಳ ಮನೆಯಲ್ಲಿ ಕೂತು ಮಾತನಾಡಾಕ ಸರಿಯಾಗಲ್ಲ ಅಂತ ಏನೋ ನೆವ ಹೇಳಿ ಊರ ಹೊರಗೆ ವಾಕಿಂಗ್ ಹೊರಟ್ರು. ರವಿಯ ಸಂಬಂಧದಲ್ಲಿ ಬಿರುಕು ಉಂಟಾಗುತ್ತಿದ್ದ ಸಮಯ. ಗಂಗಾ ಅದಾಗಲೇ ಎರಡನೇ ವರ್ಷದ ಬಿ.ಎ.ಕ್ಕೆ ಕಾಲಿಟ್ಟಿದ್ದಳು. ಶಿವಮೊಗ್ಗೆಯಲ್ಲಿ ಎರಡು, ಮೂರು ವರ್ಷ ಕಳೆದ ಗಂಗಾಗೆ ಪ್ರಪಂಚದ ಗ್ರಹಿಕೆ ಅಪ್ಪ-ಅಮ್ಮನ ಗ್ರಹಿಕೆ ಮಾತ್ರವಾಗಿ ಉಳಿದಿರಲಿಲ್ಲ. ರವಿಯ ಸಂಬಂಧದಿಂದ ಪ್ರಪಾತಕ್ಕೆ ಬೀಳುವ ಅನುಭವವಾಗತೊಡಗಿದಾಗ ಗಂಗಾ ಬಯಸಿದ್ದ ಗೆಳೆತನವನ್ನು ಹುಡುಗಿಯರಲ್ಲಿ ಕಾಣಬಯಸಿದ್ದಳು. ಹೊನ್ನೇಕೆರೆಯ ಗೆಳತಿಯರು ಈ ಹಂತದಲ್ಲಿ ಆತ್ಮೀಯರು ಎನ್ನಿಸತೊಡಗಿತ್ತು. ಹೀಗೆ ಗೆಳತಿಯರೊಟ್ಟಿಗೆ ಮಾತನಾಡುತ್ತಾ, ಮಾತನಾಡುತ್ತಾ ಅವರೆಲ್ಲರಿಗೆ ಒಂದು ಯೋಚನೆ ಬಂತು. ಹೀಗೇ ಹದಿನೈದು ದಿನಕ್ಕೊಮ್ಮೆಯೋ, ತಿಂಗಳಿಗೊಮ್ಮೆಯೋ ಒಟ್ಟಿಗೆ ಸೇರೋಣ ಎಂದು ಅವರೆಲ್ಲ ಮಾತನಾಡಿಕೊಂಡರು. ಎಲ್ಲರೂ ಒಪ್ಪಿಕೊಂಡು ತಮಗೆ ಬಿಡುವಾಗುವ ಸಮಯವನ್ನು ಕುರಿತು ಚರ್ಚಿಸಿದ್ದರು. ಗಂಗಾ ಹೊನ್ನೇಕೆರೆಗೆ ಬಂದಾಗಲೆಲ್ಲಾ ಆ ಗೆಳತಿಯರನ್ನು ಹುಡುಕಿಕೊಂಡು ಹೋಗುತ್ತಿದ್ದಳು. ಕೆರೆ ಏರಿ ಮ್ಯಾಲ ಕೂತು ಮಾತನಾಡಿದ್ರೆ ಊರವರ ಕಣ್ಣಿಗೆ ಬೀಳ್ತೀವಿ ಅಂತ ಬ್ಯಾಣದಲ್ಲಿ ಕೂತು ಮಾತಾಡ್ತಾ ಇದ್ದರು. ಗಂಗಾ ಶಿವಮೊಗ್ಗೆಯಲ್ಲಿನ ಕತೆಗಳನ್ನು ಕುರಿತು ಅವರಿಗೆ ಹೇಳ್ತಾ ಇದ್ಲು. ಹಿಂದೂ ಧರ್ಮದ ಆದರ್ಶ ತುಂಬಿಕೊಂಡ ಮಾಲಾಳ ಬಗ್ಗೆ, ಮಾರ್ಕ್ಸ್ ವಾದದ ಡೈಯಲೆಕ್ಟಿಕಲ್ ಮೆಟೀರಿಯಲಿಸಂ ಬಗ್ಗೆ, ರವಿಯ ಹಾಗೂ ಆತನ ಸಂಬಂಧದ ಬಗ್ಗೆ, ಆತನಲ್ಲಿರುವ ಟೊಳ್ಳು ವ್ಯಕ್ತಿತ್ವದ ಬಗ್ಗೆ. ತನ್ನ ಮಾರ್ಕ್ಸಿಸ್ಟ್ ಲೆಕ್ಚರ್‌ರೊಬ್ಬರು ಕಲಿಸುತ್ತಿರುವ ನಾಟಕದಲ್ಲಿ ತಾನು ಪಾತ್ರ ಮಾಡುತ್ತಿರುವ ಬಗ್ಗೆ - ಹೀಗೆಯೇ ಗಂಗಾ ಅನೇಕ ಕತೆಗಳನ್ನು ಹೇಳುವಳು. ಈ ಹುಡುಗಿಯರೂ ತಮ್ಮ ಮನೆಯಲ್ಲಿನ ಕತೆಗಳ ಹೇಳುವರು. ಹೀಗೆಯೇ ಈ ಎಲ್ಲಾ ಹುಡುಗಿಯರು ಅಲ್ಲಿ, ಇಲ್ಲಿ, ಬ್ಯಾಣ, ಬೆಟ್ಟ, ಕೆರೆ, ಸಂದು, ಗೊಂದುಗಳಲ್ಲಿ, ಹಿತ್ತಲಲ್ಲಿ, ಕೊಟ್ಟಿಗೆ ಮನೆಯಲ್ಲಿ ಕೂತು ಮಾತನಾಡುತ್ತಿದ್ದರು. ಗಂಗಾ ಹೇಳುವುದೆಲ್ಲ ಈ ಗೆಳತಿಯರಿಗೆ ರೋಚಕವಾಗಿ, ರಂಜಕವಾಗಿ ಕಾಣುತ್ತಿತ್ತು. ಹೊನ್ನೇಕೆರೆಯ ಕತೆಗಳಿಗಿಂತ ಈ ಕತೆಗಳು ಭಿನ್ನವಾಗಿದ್ದವು. ಹಾಸ್ಟೆಲ್ ಹುಡುಗಿಯರು ಮೊದ ಮೊದಲು ಈಕೆಯನ್ನು ರ್‍ಯಾಗಿಂಗ್ ಮಾಡುವವರಂತೆ, 'ಹಳ್ಳೀ ಗುಗ್ಗು ಹವಾಯಿ ನೋಡ್ರಿ, ಪ್ರೋಲ್ಯಾದಾಗಿನ ಗುಂಡಿ ನೋಡ್ರಿ, ತಲೀ ಮ್ಯಾಲಿನ ಹೂವ ನೋಡ್ರಿ', ಅಂತ ಗಂಗಾನ ಭಾಷೆಯನ್ನೇ ಬಳಸಿ ಈಕೆಗೆ ನಕಲಿ ಮಾಡುವರಂತೆ. ಗಂಗಾ ತಾನೇನು ಇದಕ್ಕೆಲ್ಲ ಮಾತನಾಡಲಿಲ್ಲ, ಸಮಾಧಾನದಿಂದ ನಕ್ಕೆ ಎನ್ನುತ್ತಾಳೆ. ಕೊನೆ ಕೊನೆಗೆ ಆ ಹುಡುಗಿಯರು ನಾವು ಒಂದು ಸ್ಥಳದಲ್ಲಿ ಕುಳಿತು ಒಂದು ಪುಸ್ತಕವನ್ನು ಓದುವುದು, ಇಲ್ಲ ಇನ್ನೇನಾದರೂ ನಮ್ಮ ಅನುಭವಗಳನ್ನೇ ಬರೆದು ಓದೋಣ ಎಂದು ಸಲಹೆ ಇತ್ತಾಗ ಎಲ್ಲರೂ ಸೇರಿ ಗ್ರಾಮ ಪಂಚಾಯತಿಯ ಆವರಣ ಹುಡುಕಿಕೊಂಡರು. ಅದು ಸಾರ್ವಜನಿಕ ಸ್ಥಳವಾದ್ದರಿಂದ ಮೊದ ಮೊದಲು ಎಲ್ಲರಿಗೂ ಸಂಕೋಚವಾಗುತ್ತಿತ್ತು. ಕೊನೆಗೆ ತಮ್ಮ ಮೀಟಿಂಗ್‌ಗೆಂದೇ ಈ ಹುಡುಗಿಯರು ಗ್ರಾಮ ಪಂಚಾಯಿತಿಯಲ್ಲಿ ವಿಚಾರಿಸಿ ಒಂದು ಪ್ರತ್ಯೇಕ ಕೊಠಡಿಯನ್ನು ಪಡೆದುಕೊಂಡರು. ಗಂಗಾ, ಲಕ್ಷ್ಮಿ, ಕಮಲಳನ್ನು ಬಿಟ್ಟರೆ ಅವರೆಲ್ಲ ಈ ರೀತಿಯ ಸಾರ್ವಜನಿಕ ಸ್ಥಳದಲ್ಲಿ ಮೀಟಿಂಗ್ ಮಾಡುತ್ತಿದ್ದುದು ಅದೇ ಮೊದಲ ಸಲ. ಈ ಮೀಟಿಂಗ್‌ನಲ್ಲಿ ಮಾತು ಪ್ರಾರಂಭಿಸಿದ್ದು ಅನುರಾಧ. ಈಕೆ ಬಂದದ್ದು ಶೆಟ್ಟರ ಕಮ್ಯೂನಿಟಿಯಿಂದ. ತಂದೆ ಪಂಚಾಯಿತಿ ಛೇರ್‌ಮನ್. ಎಲೆಕ್ಷನ್‌ನಲ್ಲಿ ಗೆದ್ದು ಒಮ್ಮೆ ಎಂ.ಎಲ್.ಎ. ಆದವರು. ಆ ದವಲತ್ತು ಕಾಯಲು ಆ ಮನೆಯ ಹುಡುಗಿಯರ ಮೇಲೆ ನಿರ್ಬಂಧಗಳು. ದರ್ಬಾರಿನ ಮನೆ, ದರ್ಬಾರಿನ ತಂದೆ. ಹೆಣ್ಣು

ಮಕ್ಕಳು ಹೇಗೆ ಎಂದರೆ ಹಾಗೆ ಹೊಸ್ತಿಲು ದಾಟಿ ಹೋಗುವುದು, ಹೇಗೆ ಅಂದರೆ ಹಾಗೆ, ಎಲ್ಲಿ ಅಂದರೆ ಅಲ್ಲಿ ತಿರುಗುವುದು ಅಕ್ಷಮ್ಯ ಅಪರಾಧ, ಮರ್ಯಾದೆಗೆ ನಿಷಿದ್ಧ. ಹಾಗಾಗಿ ಕಟ್ಟು ನಿಟ್ಟು, ಬಿಗಿ ಜಾಸ್ತಿ. ಅನುರಾಧಾಗೆ ಹಾಗೂ ಆಕೆಯ ಅಕ್ಕಂದಿರಿಗೆ ಓದಬೇಕೆಂಬಾಸೆ. ಚಿಕ್ಕ ವಯಸ್ಸಿನಲ್ಲಿ ಗಂಡು ಮಕ್ಕಳಂತೆ ಸ್ವತಂತ್ರವಾಗಿ, ಮುದ್ದು ಮುದ್ದಾಗಿ ಬೆಳೆದ ಅನುರಾಧಾಗೆ ಎಲ್ಲಾ ಸಮಸ್ಯೆಗಳೂ ಪ್ರಾರಂಭವಾದದ್ದು ಆಕೆ ಒಂಭತ್ತನೇ ತರಗತಿಯ ವಿದ್ಯಾರ್ಥಿನಿಯಾದಾಗ. ಆಕೆಯ ಅಮ್ಮ ಹೇಳುತ್ತಿದ್ದರು, 'ನೀನು ಇನ್ನು ದೊಡ್ಡವಳಾಗುತ್ತಿದ್ದೀಯ, ಎಲ್ಲೆಂದರೆ ಅಲ್ಲಿಗೆ ಹೋಗಬಾರದು, ಸ್ಕೂಲ್ ಆದ ಮೇಲೆ ಸೀದಾ ಮನೆಗೆ ಬರಬೇಕು. ಸಿನೆಮಾ ಗಿನೆಮಾ ಅಂತ ಹುಡುಗಿಯರ ಜೊತೆ ಸುತ್ತಬಾರದು' - ಹೀಗೆಲ್ಲಅಮ್ಮನ ಕಟ್ಟು ನಿಟ್ಟಳೆಗಳಿಗೆ ಅನುರಾಧ ಮಾತನಾಡುತ್ತಿದ್ದುದೇ ಕಡಿಮೆ. ಆಕೆಯ ಮೂವರು ಅಕ್ಕಂದಿರು ಇದನ್ನು ಸಹಜವೆಂಬಂತೆ ಸ್ವೀಕರಿಸಿದರು. ಆದರೆ ಅನುರಾಧಾಳಿಗೆ ಇದಕ್ಕೆ ತನ್ನನ್ನು ಒಗ್ಗಿಸಿಕೊಳ್ಳಲಾಗಲಿಲ್ಲ. ದೊಡ್ಡವರಾಗುವುದೆಂದರೆ, ಋತುಮತಿಯಾಗುವುದೆಂದರೆ ಏನು ಎಂಬ ಕುತೂಹಲಕ್ಕೆ ಈಕೆ ಅಕ್ಕಂದಿರು ಆಚೆ ಕೂತಾಗ ಗಮನಿಸಿ ನೋಡಿದ್ದಳು. ಮೂರು ದಿನ ಆಚೆ ಕೂರುವುದೆಂದರೆ, ಕೂರುವುದಕ್ಕೆ ಏನಾಗಿರುತ್ತದೆ? ಹಾಗೆಂದು ಅಕ್ಕಂದಿರನ್ನು ಕೇಳಿದಾಗ 'ನೀನು ದೊಡ್ಡವಳಾದ ಮೇಲೆ ಗೊತ್ತಾಗುತ್ತೆ ಸುಮ್ಮನಿರು' ಎಂದು ಹೆದರಿಸಿ ಸುಮ್ಮನಾಗಿಸಿಬಿಡುತ್ತಿದ್ದುದುಂಟು. ಅನುರಾಧ, ಜಯ ಎಂಬ ಗೆಳತಿಯ ಬಳಿ ಈ ಬಗ್ಗೆ ಕೇಳಿದಾಗ 'ಏನೋಮ್ಮ, ನನ್ನಕ್ಕನ ಲಂಗವೆಲ್ಲ ರಕ್ತವಾದಂತೆ ಕಂಡಾಗ ಅವಳು ದೊಡ್ಡವಳಾದಳು ಎಂದು ನಮ್ಮ ಮನೆಯವರೆಲ್ಲ ಹೇಳಿದರು' ಎಂದಿದ್ದಳು. ರಕ್ತ ಎಲ್ಲಿಯದು? ಎಂದು ಅನುರಾಧ ಯೋಚಿಸಿದ್ದುಂಟು. ಆದರೆ ಹೊಟ್ಟೇ ನೋವು ಇಂತಹದರ ಬಗ್ಗೆ ಅನುರಾಧಾಗೆ ಗೊತ್ತೇ ಇರಲಿಲ್ಲ. ಒಂದು ದಿನ ಬೆಳಿಗ್ಗೆ ಎದ್ದಾಗ ತನ್ನ ಕಾಚವೆಲ್ಲ ಹಸಿ ಹಸಿಯಾಗಿ, ಉಚ್ಚೆ ಮಾಡುವ ಜಾಗದಿಂದ ರಕ್ತ ಒಸರಿದಾಗ ಇದೇ ದೊಡ್ಡವಳಾಗುವುದಿರಬೇಕು ಅನ್ನಿಸಿತಂತೆ. ಸ್ಕೂಲ್ ತಪ್ಪಿಬಿಡುತ್ತದೆಯೆಂದು ಆಕೆ ಯಾರಿಗೂ ಹೇಳಲೇ ಇಲ್ಲ. ಅಕ್ಕಂದಿರು ಕಾಚದ ಒಳಗೆ ಬಟ್ಟೆ ಉಪಯೋಗಿಸುವುದನ್ನು ನೋಡಿದಾಗ ಆಶ್ಚರ್ಯಪಡುತ್ತಿದ್ದ ಅನುರಾಧ ಹಾಗೆಯೇ ಬಟ್ಟೆ ಉಪಯೋಗಿಸಿ ಆ ದಿನ ಮ್ಯಾನೇಜ್ ಮಾಡಿದಳು. ಮರುದಿನ ಖೊ ಖೋ ಆಟ ಇತ್ತು. ತಪ್ಪಿಸಿಕೊಳ್ಳಲು ಮನಸ್ಸಿಲ್ಲದೇ ಅಂದೂ ಹೇಳಲಿಲ್ಲ. ಕದ್ದು ರಾತ್ರಿಯ ವೇಳೆಯಲ್ಲಿ ರಕ್ತ-ಸಿಕ್ತ ಬಟ್ಟೆ ತಿಕ್ಕುವುದು, ಮಂಚದ ಕೆಳಗೆಲ್ಲೋ ಒಣಗಿಸುವುದು, ಅಥವಾ ಯಾರಿಗೂ ಕಾಣಿಸದ ಹಾಗೆ ಬಿಸಾಕಿಬಿಡುವುದು. ಹೀಗೆ ಅಭ್ಯಾಸವಾದ - ಆಕೆ ಮನೆಯಲ್ಲಿ ಹೇಳ ಹೋಗದೇ ದಿನಗಳನ್ನು ತಳ್ಳಿದಳು. ಮುಟ್ಟಾದಾಗ ಮೂರು ದಿನ ಆಚೆ ಕೂರುವುದು, ಆನಂತರ ಊರವರನ್ನೆಲ್ಲ ಕರೆದು ಆರತಿ ಮಾಡುವುದು - ಇಂತಹದರಿಂದ ತಪ್ಪಿಸಿಕೊಳ್ಳಲು ತಾನು ಹೀಗೆ ಮಾಡಿದುದಾಗಿ ಅನುರಾಧ ನುಡಿಯುತ್ತಾಳೆ.

'ಮತ್ತೆ ನಿಮ್ಮ ಮನೆಯವರಿಗೆ ಹೇಗೆ ಗೊತ್ತಾಯಿತು?' ಮತ್ತೇನನ್ನೋ ಹೇಳಲು ತವಕಿಸುತ್ತಿದ್ದ ಪಾರ್ವತಿ ಕೇಳಿದಳು.

'ಹೀಗೇ ಒಮ್ಮೆ ರಾತ್ರಿ ಬಟ್ಟೆ ತಿಕ್ಕುತ್ತಿರುವಾಗ ಅಕ್ಕನಿಗೆ ತಿಳಿಯಿತು. ಆಕೆ 'ಅಮ್ಮನಲ್ಲಿ ಹೇಳಬೇಡ' ಎಂದಳು. ಅಪ್ಪ/ಅಮ್ಮನ ಕ್ರೂರ ಸ್ವಭಾವದ ಅರಿವಿದ್ದ ಅಕ್ಕ 'ಸುಮ್ಮನೇ ನಾಳೆ ಆಚೆ ಕೂರು, ನಾನು ಹೇಳುತ್ತೇನೆ' ಅಂದಳು. ಹಾಗೆ ನಾಲ್ಕು ತಿಂಗಳ ನಂತರ ತಾನೊಂದು ದಿನ ಸಾಂಪ್ರದಾಯಕವಾಗಿ ಹೊರಗೆ ಕೂರಬೇಕಾಯಿತು' ಎಂದಳು ಅನು.

ಜಯ ತನ್ನ ಅನುಭವವನ್ನು ಹಂಚಿಕೊಂಡಳು. ಬೆಳಿಗ್ಗೆ ಎದ್ದು ಟಾಯ್‌ಲೆಟ್‌ಗೆ ಹೋದಾಗ ಯೋನಿಯಲ್ಲಿ ರಕ್ತ ಸುರಿಯುವುದು ನೋಡಿದಾಗ ಆಕೆಗೆ ಅರ್ಥವಾಯಿತಂತೆ. ಲಿಂಗಾಯಿತರ ಹುಡುಗಿ ಈಕೆ. ದೇವರ ಪೂಜೆ ಮಾಡುವುದು ನಿತ್ಯ ಈಕೆಯದೇ ಕೆಲಸ. ಸುಮ್ಮನೇ ಸ್ನಾನ ಮಾಡಿ ದೇವರ ಪೂಜೆ ಮಾಡಿದಳು. ದೇವರ ಫೋಟೋಗೆ ನೀರು ಚಿಮುಕಿಸಿ ತೊಳೆಯುವಾಗ ಒಂದು ಕ್ಷಣ ಮನಸ್ಸಿಗೆ ಗೊಂದಲವಾಗಿದ್ದನ್ನು ಜಯ ನೆನಸಿಕೊಂಡಳು. ಮೈಲಿಗೆಯಾಗಿಬಿಡುತ್ತದೆಯೇನೋ ಎನ್ನುವ ಭಯ. ಅಜ್ಜಿ/ತಾಯಂದಿರೆಲ್ಲಾ ಮೂರು ದಿನ ದೇವರ ಮುಟ್ಟುವುದಿರಲಿ, ದೇವರ ಮನೆಗೂ ಕಾಲಿಡುತ್ತಿರಲಿಲ್ಲ. ದೇವರ ಕೋಣೆಯೊಂದು ಬಿಟ್ಟು ಅಡಿಗೆ ಮನೆ, ಆಚೆ-ಈಚೆ ಎಲ್ಲಾ ಕಡೆ ಓಡಾಡುವರು. ಅನುರಾಧಾಳ ಮನೆಯ ತರಹ ಮುಟ್ಟಾದ ಮೂರು ದಿನ ಇವರೇನೂ ಆಚೆ ಕೂರುತ್ತಿರಲಿಲ್ಲ. ಕೊನೆಗೆ ದೇವರಿಗೆ ಮನಸ್ಸಿನಲ್ಲಿಯೇ ಹೇಳಿಕೊಂಡಿದ್ದನ್ನು ಜಯ ನೆನಪಿಸಿಕೊಳ್ಳುತ್ತಾಳೆ. 'ದೇವರೇ ನಾನು ಸ್ಕೂಲಿಗೆ ಹೋಗಬೇಕು. ನಾಳೆ ನಿನ್ನನ್ನು ಮುಟ್ಟುವುದಿಲ್ಲ. ಈ ದಿನ ಮಾತ್ರ ಹೋಗಿ ಬಂದುಬಿಡುತ್ತೇನೆ, ಕ್ಷಮಿಸು ದೇವರೇ' ಎಂದು ದೇವರಿಗೆ ಗಂಟೆ ಹೊಡೆದು ಸ್ಕೂಲಿಗೆ ಹೋಗಿ ಬಂದಳಂತೆ.

'ದೇವರ ಹೆದರಿಕೆಗೇ ಮರುದಿನ ನೀನು ಮನೆಯಲ್ಲಿ ಹೇಳಿದೆಯಾ?' ಕಮಲ ಕೇಳಿದಳು.

'ದೇವರ ಹೆದರಿಕೆ ಅಂತ ಅಲ್ಲ. ಆದರೆ ದೇವರನ್ನು ಮುಟ್ಟಿ ಪೂಜೆ ಮಾಡುವಾಗ ಆ ಭಾವನೆ ಬರುತ್ತಿತ್ತು. ನಮ್ಮ ಮನೇಲಿ ಪ್ರೈವಸಿ ಕಡಿಮೆ. ಅನು ರೀತಿ ಕದ್ದು, ಮುಚ್ಚಿ, ಬಟ್ಟೆ ತಿಕ್ಕುವುದೂ ಕೂಡಾ ನಮ್ಮ ಮನೆಯಲ್ಲಿ ಸಾಧ್ಯವಿಲ್ಲ. ಹೆದರಿಕೆಗೆ ಯಾರಿಗೂ ಕಾಣದ ಹಾಗೆ ಒಂದು ಬಟ್ಟೆ ಕಾಚದ ಒಳಗೆ ಹಾಕಿಕೊಂಡು ಹೋದೆ. ಆದರೆ ಸ್ಕೂಲಿನಲ್ಲಿ ಬೆಂಚಿನ ಮೇಲೆ, ಕೊನೆಗೆ ಮನೆಗೆ ಬಂದಾಗ ಮನೆಯ ನೆಲದ ಮೇಲೆ, ನನ್ನ ಮೊಣಕಾಲಿಂದ ರಕ್ತ ನಿಧಾನವಾಗಿ ಹರಿದು ಕಾಲೆಲ್ಲಾ ರಕ್ತಮಯವಾಗಿ, ರಕ್ತದ ಕಲೆಗಳು ನೆಲದ ಮೇಲೆಲ್ಲಾ ಬಿದ್ದಾಗ ಹೇಳದೇ ವಿಧಿಯೇ ಇರಲಿಲ್ಲ. ಆವಾಗಲೇ ಈಕೆ ದೊಡ್ಡವಳಾದದ್ದು ಎಂದು ಮನೆಯವರೆಲ್ಲ ಎಣಿಸಿದರು' ಎಂದು ಜಯಾ ಜೋರಾಗಿ ನಕ್ಕು ಹೇಳಿದಳು.

ಕಮಲ ತಾನು ದೊಡ್ಡವಳಾದಾಗ ಮಹಿಷಾಸುರನನ್ನು ಕೊಲ್ಲುವ ಪಾತ್ರ ಹಾಕಿದ್ದನ್ನು ಜ್ಞಾಪಿಸಿಕೊಂಡಳು. ತಾನು ಭರ್ಜಿ ಹಿಡಿದು ನಿಂತಿರುವ ಹಳೆಯ ಫೋಟೋ ಒಂದನ್ನು ತೋರಿಸುತ್ತೇನೆ ಎಂದಳು.

ಎಸ್.ಎಸ್.ಎಲ್.ಸಿ. ಪಾಸಾಗಿ ಮನೆಯಲ್ಲಿಯೇ ಉಳಿದಿದ್ದ ಪಾರಿ, ಅರ್ಥಾತ್ ಪಾರ್ವತಿ ಮಾತನಾಡಲು ಪ್ರಾರಂಭಿಸಿದಳು.

'ನಾನು ಮನೆಯಲ್ಲಿ ಎಲ್ಲಾ ಕೆಲಸ, ಅಡಿಗೆ, ಪಾತ್ರೆ, ಬಟ್ಟೆ ಇತ್ಯಾದಿ ಮಾಡಿಕೊಂಡೂ ಸಹ ಎಸ್.ಎಸ್.ಎಲ್.ಸಿ.ನಲ್ಲಿ ಪ್ರಥಮ ಬಾರಿಗೇ ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾದೆ. ಆದರೆ ನಮ್ಮ ಮನೇನಲ್ಲಿ ಕಾಲೇಜಿಗೆ ಕಳುಹಿಸದೇ ಮನೇಲೇ ಕೊಳೆ ಹಾಕ್ತಾ ಇದಾರೆ. ಅನುರಾಧಾಳ ರೀತಿ ಕರೆಸ್‌ಪಾಂಡೆನ್ಸ್ ಆದರೂ ಮಾಡಬಹುದಿತ್ತು. ಆದರೆ ನಮ್ಮ ಮನೇಲಿ ಯಾವುದಕ್ಕೂ ದುಡ್ಡು ಕೊಡೋಲ್ಲ. ಮನೆಯಲ್ಲಿ ಓದುವ ವಿಚಾರ ಬಂದಾಗ ದೊಡ್ಡವಳಾಗಿ ಎರಡು ವರ್ಷ ಆಯ್ತು, ಮದುವೆ ಮಾಡಬೇಕು ಅಂತಾರೆ. ಹಾಗಂತ ಯಾರೂ ನನ್ನ ಮದುವೆಯಾಗೋಕೂ ಬರಲ್ಲ. ಮದುವೆಯಾಗದಿದ್ದರೆ ಅದು ನನ್ನ ತಪ್ಪಾ? ಬೆಳಿಗ್ಗೆ ಎದ್ರೆ ಎಮ್ಮೆ, ಕರ, ಸಗಣಿ, ಅಡಿಗೆ, ಬಟ್ಟೆ, ಮುಸುರೆ ಅಂತ ಸಾಯಂಕಾಲದವರೆಗೂ ಕೆಲಸ

ಮಾಡ್ತೀನಿ. ಈ ದಿನವೂ ಅಷ್ಟೇ. ಇಲ್ಲಿ ಈ ಮೀಟಿಂಗ್‌ಗೆ ಬರ್ಬೇಕು ಅಂತ ಸಾಯಂಕಾಲವೇ ಎಲ್ಲಾ ಕೆಲಸಾನೂ ಮಾಡಿಟ್ಟು ಬಂದಿದೀನಿ. ಕಾಫಿಗೆ ಸಕ್ಕರೆ-ನೀರು ಬೆರೆಸಿಟ್ಟು ಕೂಡಾ ಬಂದಿದೀನಿ. ನಾನು ಯಾವಾಗಲೂ ಶಾಲೆಯಿಂದ ಬಂದ ತಕ್ಷಣ ತಮ್ಮಂದಿರಿಗೆ, ತಂಗಿಯರಿಗೆ ತಿಂಡಿ ಮಾಡೋದು, ಅಡಿಗೆ ಮಾಡೋದು ಎಲ್ಲಾ ಮಾಡಿದೀನಿ. ಈಗ ಪಿ.ಯು.ಸಿ.ಗೆ ಬೇರೆ ಊರಿಗೆ ಕಳಿಸಿದ್ರೆ ಮನೇಲಿ ಅಡಿಗೆ ಮಾಡುವವರು ಯಾರು? ಅಂತ ನಮ್ಮ ಮನೇಲಿ ಪ್ರಶ್ನೆ. ಮದುವೆ ಮಾಡಬೇಕು, ಮಾಡಬೇಕು ಅಂತ ದಿನಗಳನ್ನ ತಳ್ತಾರೆ'.

ಪಾರ್ವತಿ ಕಣ್ಣಲ್ಲಿ ನೀರು ಹಾಕಿಕೊಂಡಳು. ಅಲ್ಲಿ ಇರುವವರಿಗೆಲ್ಲ ಪಾರಿಯ ಪರಿಸ್ಥಿತಿ ಗೊತ್ತು. ರೋಗಿಷ್ಠ ತಾಯಿ, ಗೌಡಿಕೆ ಮಾಡಿಕೊಂಡು ಓಡಾಡೋ ಅಪ್ಪ, ಇಬ್ಬರು ತಂಗಿ, ಇಬ್ಬರು ತಮ್ಮ. ಪೇಟೆಯಲ್ಲಿ ಎಲ್ಲಿಯೋ ಓದುತ್ತಿರುವ ಅಣ್ಣ. ಮನೆಯ ಜವಾಬ್ದಾರಿ ಹೆಚ್ಚು-ಕಡಿಮೆ ಪಾರ್ವತಿಯ ಮೇಲೇ ಇತ್ತು. ನಾಲ್ಕು ಸಲ ಡುಂಕಿ ಹೊಡೆದ ಅಣ್ಣನನ್ನು ಪಾರ್ವತಿ ಜ್ಞಾಪಿಸಿಕೊಳ್ಳುತ್ತಾಳೆ. ನನ್ನ ಹಣೆಯಲ್ಲಿ ಬರೆದದ್ದೇ ಇದು ಎನ್ನುತ್ತಾಳೆ. ನೋಡಲು ಕಪ್ಪಾಗಿದ್ದ ಪಾರ್ವತಿಯನ್ನು ನೋಡಲು ಬಂದವರು ಹುಡುಗಿ ಕಪ್ಪು ಎನ್ನುತ್ತಾರಂತೆ. ಅದೂ ಕೂಡಾ ತನ್ನ ತಪ್ಪೇ ಎನ್ನುತ್ತಾಳೆ ಪಾರ್ವತಿ. ತಾನು ಹೇಗಾದರೂ ಮಾಡಿ ಓದಲೇಬೇಕು ಎಂದು ಆಕೆ ನುಡಿಯುತ್ತಾಳೆ. ಓದಬೇಕೆಂಬ ಆಸೆಯ ಜೊತೆಗೆ ಮನೆಯ ವಾತಾವರಣದಿಂದ ತಪ್ಪಿಸಿಕೊಳ್ಳಬೇಕೆಂಬುದು ಪಾರ್ವತಿಯ ಆಶಯವಾಗಿತ್ತು.

ಗಂಗಾಗೆ ಇಲ್ಲಿ ಒಂದು ವಿಶೇಷ ರೀತಿಯ ಮರ್ಯಾದೆ ಇತ್ತು. ಎಸ್.ಎಸ್.ಎಲ್.ಸಿ.ನಲ್ಲಿ ಈಕೆ ಫಸ್ಟ್ ಕ್ಲಾಸ್ ಬಂದಾಗ ಮನೆಯಿಂದ ಓಡಿಹೋಗಿ ಕಾಲೇಜ್ ಸೇರಿದ್ದಳು. ಪಾರಿಯಷ್ಟು ಕಷ್ಟದ ಬದುಕು ಗಂಗಾಳದಲ್ಲ. ಅಮ್ಮ ಗಟ್ಟಿಯಾಗಿ ದುಡಿಯುವ ಹೆಂಗಸೇ. ಇದ್ದ ಒಬ್ಬ ಅಣ್ಣ ಮದುವೆಯಾಗಿ ಮನೆಯಲ್ಲಿಯೇ ಇದ್ದಾನೆ. ಮನೆಯಲ್ಲಿ ಅಪ್ಪನಿಗಿಂತ ಅಣ್ಣನ ದರ್ಬಾರೇ ಜಾಸ್ತಿ. ಈ ಅಣ್ಣನ ದರಬಾರಿನಲ್ಲಿಯೇ ಗಂಗಾಳನ್ನು ಕಾಲೇಜಿಗೆ ಕಳಿಸುವುದು ಬೇಡ ಎಂದು ತೀರ್ಮಾನಿಸಲಾಗಿತ್ತು. ಗಂಗಾ ಯಾರ ಮಾತೂ ಕೇಳಲಿಲ್ಲ. ರಾತ್ರಿ ಬಸ್ಸು ಹಿಡಿದು ಶಿವಮೊಗ್ಗೆಗೆ ಹೋದಳು. ಗೊತ್ತಿರುವ ಶಿಕ್ಷಕಿಯೊಬ್ಬರು ಈಕೆಗೆ ಸಹಾಯ ಮಾಡಿದ್ದರು. ಕಾಲೇಜಿನ ಫೀಸ್ ಕೂಡಾ ಕೊಟ್ಟಿದ್ದರು. ನಂತರ ಗಂಗಾ ಊರಿಗೆ ಕಾಗದ ಬರೆದಾಗ ಗಂಗಾಳ ಅಪ್ಪ ಕಾಲೇಜಿಗೆ ಹುಡುಕಿಕೊಂಡು ಬಂದದ್ದು.

ಪಾರಿ ನಿಟ್ಟುಸಿರುಬಿಟ್ಟಳು.

'ನಿನಗೆ ಸಹಾಯ ಮಾಡೋಕೆ ಅಂತ ಒಬ್ರು ಇದ್ರು. ಅದು ನಿನ್ನ ಅದೃಷ್ಟ. ಬಚಾವು. ನಾನೇಸಾದ್ರೂ ಸೀದಾ ಶಿವಮೊಗ್ಗೆಗೆ ಬಸ್ಸು ಹತ್ತಿ ಹೋದ್ರೆ ಶಿವಮೊಗ್ಗಾದ ತುಂಗಭದ್ರಾ ನದಿಗೆ ಹಾರಿಕೊಳ್ಳಬೇಕು ಅಷ್ಟೇ'.

ಆ ದಿನದ ಸಭೆ ಪಾರಿಯ ಕಣ್ಣೀರಲ್ಲಿ ಕೊನೆಗೊಂಡಿತು. ಈ ಸಭೆ ಹಲವಾರು ಕಾರಣಗಳಿಂದ ಅಲ್ಲಿದ್ದವರಿಗೆಲ್ಲ ಇಷ್ಟವಾಗಿತ್ತು. ಏನೋ ತಮಗನಿಸಿದ್ದನ್ನ ಮುಕ್ತವಾಗಿ ಇಲ್ಲಿ ಹಂಚಿಕೊಳ್ಳಬಹುದು ಎನಿಸಿದ್ದರಿಂದ ಅವರಲ್ಲಿಯೇ ಒಂದು ತೀರ್ಮಾನವಾಯಿತು. ಹೀಗೆ ತಮಗನಿಸಿದ್ದನ್ನು ಕೂತು ಬರೆಯುವುದು, ಹೀಗೆ ಬರೆದ ಅನುಭವಗಳನ್ನು ಇಲ್ಲಿ ಕೂತು ವಾರಕ್ಕೊಂದು ಸಲ ಒಬ್ಬೊಬ್ಬರಂತೆ ಓದುವುದು. ಹೀಗೆ ಪ್ರತಿವಾರ ಕೂಡಾ ಅವರವರ ಅನುಭವ ಬರೆದು ಇನ್ನೊಬ್ಬರೊಟ್ಟಿಗೆ

ಹಂಚಿಕೊಳ್ಳುವುದು ಎಂದು ಎಲ್ಲರೂ ನಿರ್ಧರಿಸಿದರು. ಈ ಯೋಚನೆಯಿಂದ ಎಲ್ಲರಿಗೂ ಖುಷಿಯಾಯಿತು. ಮನೆಗಳಲ್ಲಿ ಮನೆಗೆಲಸ, ಎಮ್ಮೆ, ಗಂಜಲ, ಗಲಾಟೆ ಲೋಕದಿಂದ ಭಿನ್ನ ಲೋಕವೊಂದಕ್ಕೆ ತೆರೆದುಕೊಳ್ಳುವ ಉತ್ಸಾಹ, ಸಡಗರ ಎಲ್ಲಾ ಗೆಳತಿಯರಲ್ಲೂ ಕಂಡುಬಂದಿತು.

ಹೀಗೆ ಇವರು ವಾರಕ್ಕೊಮ್ಮೆ ಗ್ರಾಮ ಪಂಚಾಯಿತಿಯ ಕೊಠಡಿಯೊಂದರಲ್ಲಿ ಕುಳಿತು ಮಾಡನಾಡುತ್ತಿದ್ದುದು ಹೊನ್ನೇಕೆರೆಯಂತಹ ಊರಲ್ಲಿ ಎಲ್ಲರಿಗೂ ಸ್ವಲ್ಪ ಹರಟೆಯ ವಿಚಾರವೇ ಆಗಿತ್ತು. ಇವರೆಲ್ಲ ಒಟ್ಟಿಗೆ ರಸ್ತೆಯಲ್ಲಿ ನಡೆದು ಹೋಗುತ್ತಿದ್ದರೆ 'ಹೊರಟತಪಾ ಗೆಳತಿಯರ ಬಳಗ' ಎಂದು ತಮಾಷೆ ಮಾಡಿ ನಕ್ಕವರೆಷ್ಟೋ ಮಂದಿ. ಹೀಗೆ ತಮಾಷೆ ಮಾಡಿ, ಮಾಡಿ ಅವರು ಹೆಸರಿಡದ ಈ ಸಭೆಗಳು ಗೆಳತಿಯರ ಬಳಗದ ಸಭೆಗಳು ಎಂಬುದಾಗಿ ಕರೆಯಲ್ಪಡುತ್ತಿದ್ದರಿಂದ ಕೊನೆಗೆ ಆ ಹತ್ತು ಹನ್ನೆರಡು ಹುಡುಗಿಯರು ತಮ್ಮನ್ನು ಗೆಳತಿಯರ ಬಳಗದವರು ಎಂದೇ ಗುರುತಿಸಿಕೊಳ್ಳತೊಡಗಿದ್ದರು. ತಾವೆಲ್ಲ ಒಂದು ಸಂಘಟನೆ ಎಂದೂ, ಆ ಸಂಘಟನೆಗೆ 'ಗೆಳತಿಯರ ಬಳಗ' ಎಂದೂ ಅವರೆಲ್ಲ ಒಂದು ದಿನ ಕುಳಿತು, ಚರ್ಚಿಸಿ ನಿರ್ಧರಿಸಿದರು. ಅದೇ ಹೆಸರಿನಿಂದ ತಮಾಷೆ ಮಾಡುತ್ತಿದ್ದವರ ಬಾಯಿಗೆಲ್ಲ ಬೀಗ ಹಾಕಿದಂತಾಗಿತ್ತು.

ಈ ತರಹೆಯ ಸಭೆಗಳನ್ನು ಈ ಗೆಳತಿಯರು ಕ್ರಮವಾಗಿ ಎರೆಡು ವರ್ಷಗಳವರೆಗೆ ನಡೆಸಿದರು. ರವಿಯ ಸಂಬಂಧ ಕಳೆದುಕೊಂಡು ಮಾನಸಿಕವಾಗಿ ಸ್ವಲ್ಪ ಆಘಾತಕ್ಕೆ ಒಳಗಾಗಿ ಚೈತನ್ಯವೊಂದನ್ನು ಹುಡುಕುತ್ತಿದ್ದ ಗಂಗಾಗೆ ಈ ಬಳಗದಿಂದ ಸ್ವಲ್ಪ ಸಮಾಧಾನ ಸಿಕ್ಕ ಹಾಗೆ ಅನಿಸಿತ್ತು. ಏನೋ ಆದರ್ಶಗಳು, ಉದ್ದೇಶಗಳು, ಜೊತೆಗೆ ಮನಸ್ಸಿಗೆ ನೆಮ್ಮದಿ. ಗಂಗಾ ಶಿವಮೊಗ್ಗೆಯಲ್ಲಿ ರಜೆ ಬಿಟ್ಟಾಗಲೆಲ್ಲಾ ಹೊನ್ನೇಕೆರೆಗೆ ಬರುತ್ತಿದ್ದಳು. ಇದೇ ರೀತಿಯ ಹಲವಾರು ಗೆಳತಿಯರು ಶಿವಮೊಗ್ಗೆಯಲ್ಲಿ ಗಂಗಾಳ ಜೊತೆ ಇದ್ದುದುಂಟು. ಆದರೂ ಹೊನ್ನೇಕೆರೆಯ ಹುಡುಗಿಯರ ತೀವ್ರತೆಗಳಾಗಲೀ, ನೋವುಗಳಾಗಲೀ ಅವರಲ್ಲಿ ಇರಲಿಲ್ಲವೆಂದೇ ಗಂಗಾಳ ಅನ್ನಿಸಿಕೆ. ಹೊನ್ನೇಕೆರೆಯ ಹುಡುಗಿಯರ ಅನುಭವಗಳಲ್ಲಿ ಗಂಗಾಳಿಗೆ ತನ್ನನ್ನು ಕಂಡುಕೊಳ್ಳುವುದು, ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವುದು ಸಾಧ್ಯವಾಗಿತ್ತು. ಹೀಗೆಯೇ ಕ್ರಮವಾಗಿ ಅವರವರ ಅನುಭವಗಳನ್ನು ಬರೆದು ಓದುತ್ತಿದ್ದುದರಿಂದ ಆ ಹುಡುಗಿಯರ ಸಭೆಗಳಿಗೆ ಸಂಘಟನೆಯ ಸ್ವರೂಪವೂ ನಿಧಾನವಾಗಿ ಮೂಡಿ ಬರತೊಡಗಿತ್ತು. ಪ್ರಥಮ ಸಲದ ಸಭೆಯಲ್ಲಿ ಪಾರ್ವತಿ ತನ್ನ ಬದುಕನ್ನು ಸುಂದರವಾಗಿ ಬರೆದು ಓದಿದ್ದಳು. ಆಕೆಯ ಬರವಣಿಗೆಯ, ಅಭಿವ್ಯಕ್ತಿಯ ಬಗ್ಗೆಯೇ ಅಲ್ಲಿದ್ದವರು ಆಶ್ಚರ್ಯ ಪಡುವಂತಾಗಿತ್ತು. ಹೃದಯದ ಆಳದ ನೋವಿನ ಧ್ವನಿಗಳನ್ನು ಹಿಡಿದಿಟ್ಟ ಆಕೆಯ ಭಾವೋದ್ವೇಗ ಲಕ್ಷ್ಮಿ, ಅನುರಾಧ, ಗಂಗಾರ ಕಣ್ಣಲ್ಲಿ ನೀರು ತರಿಸಿತ್ತು. ಕಮಲೆ ಎವೆಯಿಕ್ಕದೇ ಒಂದು ಕ್ಷಣ ಪಾರ್ವತಿಯನ್ನೇ ದಿಟ್ಟಿಸಿ ನೋಡುತ್ತಿದ್ದಳು. ಪಾರ್ವತಿ ಬರೆದ ಪ್ರಾಮಾಣಿಕ ಬರವಣಿಗೆಯೇ ನಂತರದ ಬರವಣಿಗೆಗಳಿಗೆ ಸ್ಫೂರ್ತಿಯಾದದ್ದು. ನಂತರ ಇತರೇ ಹುಡುಗಿಯರೂ ಕಾಲೇಜಿಗೆ ಕಳಿಸಲು ಮನೆಯಲ್ಲಿ ಆಗುವ ತಕರಾರಿನ ಬಗ್ಗೆ, ದೊಡ್ಡವರಾಗುವ ನಾಚಿಕೆ, ಸಂಕೋಚ, ದುಮ್ಮಾನಗಳ ಬಗ್ಗೆ; ಆನಂತರದ ಜೀವನದಲ್ಲಿ ಉಂಟಾಗುವ ಅಡೆ-ತಡೆಗಳ ಬಗ್ಗೆ, ಮುಟ್ಟಾದಾಗ ಮೂರು ದಿನ ಆಚೆ ಕೂರುವ ಬಗ್ಗೆ; ನೋಡಲು ಬರುವ ಹುಡುಗರು, ಅವರ ತಂದೆ-ತಾಯಿಗಳು, ಅವರು ಕೇಳುವ ಪ್ರಶ್ನೆಗಳ ಬಗ್ಗೆ ಹೀಗೇ ಪ್ರತಿ ವಾರವೂ ಮುಕ್ತವಾದ ಬರವಣಿಗೆಯ ಜೊತೆಗೆ ಮುಕ್ತವಾಗಿ ಮಾತನಾಡುವ ವಾತಾವರಣವೂ ಕೂಡಾ ಗೆಳತಿಯರ ಬಳಗದಲ್ಲಿ ಸೃಷ್ಟಿಯಾಗಿತ್ತು. ಇಂತಹ ಅನುಭವಗಳ ಮಂಡನೆ ನಿಧಾನವಾಗಿ ಚರ್ಚೆಗೆ

ಎಡೆ ಮಾಡಿಕೊಡತೊಡಗಿತ್ತು. ಯಾಕೆ ಹೀಗೆ? ಸಮಾಜ, ಜನ ತಮ್ಮನ್ನು ಯಾಕೆ ಹೀಗೆ ನಡೆಸಿಕೊಳ್ಳುತ್ತಾರೆ? ಇದರ ಹಿಂದಿರುವ ಮೌಲ್ಯಗಳೇನು? - ಇಂತಹ ಪ್ರಶ್ನೆಗಳ ಹಿನ್ನೆಲೆಯಲ್ಲಿ ಒಬ್ಬೊಬ್ಬರ ಮನಸ್ಸೂ ಕಾರಣಗಳನ್ನು ಹುಡುಕತೊಡಗಿತ್ತು, ವೈಚಾರಿಕತೆಯ ಕಡೆಗೆ ವಾಲತೊಡಗಿತ್ತು. ಮನೆಗೆಲಸ ಮಾಡೋಕೆ ಅಂತ, ಮಕ್ಕಳನ್ನ ಬೆಳೆಸೋಕೆ ಅಂತ ಹೆಂಗಸರನ್ನ ಹೇಗೆ ಚಿಕ್ಕ ವಯಸ್ಸಿನಿಂದಲೇ ಒಗ್ಗಿಸುತ್ತಾರೆ, ಬೆಳೆಸುತ್ತಾರೆ ಎಂಬುದನ್ನು ಚರ್ಚಿಸುವಾಗ ಗಂಗಾಗೆ ತಾನು ಓದುತ್ತಿರುವ ಪುಸ್ತಕದ ಜ್ಞಾಪಕವಾಗುತ್ತದೆ. ಆಕೆ ಹೇಳಿದಳು, 'ನಾನು ಒಂದು ಪುಸ್ತಕ ಓದ್ತಾ ಇದೀನಿ. ಫ್ರೆಂಚ್ ಲೇಖಕಿ ಸಿಮನ್ ದಿ ಬುವಾರ ಪುಸ್ತಕ ಅದು 'ದಿ ಸೆಕೆಂಡ್ ಸೆಕ್ಸ್' ಅಂತ ಅದರ ಹೆಸರು. ಅದರಲ್ಲಿ ನಾವೆಲ್ಲ ಇಲ್ಲಿ ಹಂಚಿಕೊಳ್ತೀವಲ್ಲ ಅಂತಹ ಅನುಭವಗಳನ್ನು ಒಂದು ವೈಚಾರಿಕ ಚೌಕಟ್ಟಿನಲ್ಲಿಟ್ಟು ವಿವರಣೆ ಕೊಡ್ತಾರೆ. ಆ ಪುಸ್ತಕದ ಒಂದು ಲೇಖನವನ್ನು ಅನುವಾದ ಮಾಡಿ ಮುಂದಿನ ಸಭೆಯಲ್ಲಿ ಓದ್ತೀನಿ' ಎಲ್ಲರೂ ಸರಿ ಎಂದರು. ಗಂಗಾ ಲೇಖನವೊಂದನ್ನು ಅನುವಾದ ಮಾಡಿ ಓದಿದಾಗ ಬಹಳ ಜನ ಹುಡುಗಿಯರು ಈ ಲೇಖನಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದರು. ಅಲ್ಲಿದ್ದ ಹತ್ತು-ಹನ್ನೆರಡು ಜನ ಹುಡುಗಿಯರಿಗೂ ಈ ರೀತಿಯ ಸಭೆಗಳು ಒಂದು ರೀತಿಯ ಮನೋರಂಜನೆಯನ್ನೂ ಒದಗಿಸುತ್ತಿದ್ದವು. ಟಿ.ವಿ. ಗೊತ್ತಿರದ ಕಾಲ ಅದು. ಗಂಗಾ ಹಾಗೂ ಇತರ ಗೆಳತಿಯರು ಗ್ರಾಮ ಪಂಚಾಯಿತಿಯ ಕೊಠಡಿ ಹುಡುಕಿದಾಗ ನಾಲ್ಕೈದು ಜನ ಮಾತ್ರ ಇದ್ದರು. ಈಗ ಎರಡು ವರ್ಷದ ಹಂತದಲ್ಲಿ ಹತ್ತರಿಂದ ಹನ್ನೆರಡು ಹುಡುಗಿಯರು ಕ್ರಮಬದ್ಧವಾಗಿ ಸಭೆಗಳಿಗೆ ಬರುತ್ತಿದ್ದರು. ಮತ್ತೆ ಎರಡು ತಿಂಗಳಲ್ಲಿ ಇನ್ನೈದು ಜನ. ಹೀಗೆ ಸುಮಾರು ಇಪ್ಪತ್ತು ಹುಡುಗಿಯರು ಈ ಸಂಘಟನೆಗೆ ನಿಧಾನವಾಗಿ ಒಂದು ರೂಪ-ರೇಷೆ ಕೊಡಲು ಪ್ರಯತ್ನಿಸತೊಡಗಿದ್ದರು. ಮೊದ ಮೊದಲು ಪೇಪರ್ ಬರೆದು ಓದುತ್ತಿದ್ದವರು ನಂತರ ಹೊರಗಡೆ ಎಲ್ಲಿಯಾದರೂ ಮಾತನಾಡುವುದಕ್ಕೆ ತಮ್ಮೊಳಗೇ ಇರುವ ಸಂಕೋಚ ಕಡಿಮೆಯಾಗಲೆಂದು ಕೆಲವು ಸಮಸ್ಯೆಗಳ ಬಗ್ಗೆ ಚೀಟಿ ಬರೆದು ಹಾಕಿ, ನಂತರ ಯಾರಿಗೆ ಯಾವ ಸಾಮಾಜಿಕ ಸಮಸ್ಯೆಯ ಬಗ್ಗೆ ಚೀಟಿ ಬರುತ್ತದೋ ಅದರ ಬಗ್ಗೆ ಮಾತನಾಡಬೇಕು ಎನ್ನುವ ಕಾರ್ಯಕ್ರಮ ಹಮ್ಮಿಕೊಂಡರು. ತಮ್ಮ ಅನುಭವಗಳ ಬಗ್ಗೆ ಹಾಡು ಕಟ್ಟಿ ಹಾಡುವ ಮೂಲಕ ತಮ್ಮ ಮನೋರಂಜನೆಗೆ ಕಳೆ ಕಟ್ಟಿದರು. ನಾಚಿಕೆಯ ಮುದ್ದೆಗಳಾಗಿ ಕುಳಿತುಕೊಳ್ಳುವ ತಮ್ಮ ದೇಹಗಳ ಚಲನೆಗಾಗಿ ತಾವು ಕಟ್ಟಿದ ಹಾಡುಗಳನ್ನೇ ನೃತ್ಯ ರೂಪದಲ್ಲಿ, ನಾಟಕದ ರೂಪದಲ್ಲಿ ಮಾಡತೊಡಗಿದರು. ಗಂಗಾ ಆ ಸಂಘಟನೆಯಲ್ಲಿ ನಾಲ್ಕು ವರುಷಗಳ ತನಕ ಗಂಭೀರವಾಗಿ ತನ್ನನ್ನೇ ತೊಡಗಿಸಿಕೊಂಡಿದ್ದಳು. ತಮ್ಮೆಲ್ಲ ಅನುಭವಗಳನ್ನು ಬೆಸೆದು ತಯಾರಿಸಿದ ನಾಟಕವೊಂದನ್ನು ಈ ಹುಡುಗಿಯರು ಬರೆದು ಇಟ್ಟುಕೊಂಡಿದ್ದರು. ತಾವು ಬರೆದ ಲೇಖನಗಳನ್ನೆಲ್ಲ ಸೇರಿಸಿ ಹಸ್ತ ಪ್ರತಿಯೊಂದನ್ನು ತಯಾರಿಸಿ 'ವಿವರ್ತ' ಎಂಬ ಹೆಸರನ್ನು ಅದಕ್ಕಿಟ್ಟರು. ಹೊನ್ನೇಕೆರೆಯಲ್ಲಿ ಒಂದು ಸಾರ್ವಜನಿಕ ಕಾರ್ಯಕ್ರಮ ಕೊಡುವ ಉದ್ದೇಶ ಇಟ್ಟುಕೊಂಡು ಮನೆ ಮನೆಗೆ ಓಡಾಡಿ ದುಡ್ಡು ಸಂಗ್ರಹ ಮಾಡಿ, ಕರ ಪತ್ರ ಹಂಚಿ, ಒಂದು ಪುಟ್ಟ ಸಾರ್ವಜನಿಕ ಕಾರ್ಯಕ್ರಮ ನೀಡಿದರು. ಇವರು ನೀಡಿದ ಮೊದಲ ಸಾರ್ವಜನಿಕ ಕಾರ್ಯಕ್ರಮ ಅದಾಗಿತ್ತು. ಹಸ್ತ ಪ್ರತಿ 'ವಿವರ್ತ' ಬಿಡುಗಡೆ ಮಾಡುವುದು ಹಾಗೂ ನಾಟಕ, ಹಾಡು ಇತ್ಯಾದಿಗಳನ್ನು ಒಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮ 'ಇದಾಗಿತ್ತು. ಎಲ್ಲರಲ್ಲಿಯೂ ತಮ್ಮ ಬದುಕಿಗೂ ಒಂದು ಗೊತ್ತು-ಗುರಿ ಇದೆಯೆನ್ನುವಂತಹ ಹುಮ್ಮಸ್ಸು, ಉತ್ಸಾಹವನ್ನು ಈ ಕಾರ್ಯಕ್ರಮ ತುಂಬಿಕೊಟ್ಟಿತ್ತು. ನಾಲ್ಕು ವರ್ಷಗಳಲ್ಲಿ ಗಂಗಾಳ ಜೀವಂತಿಕೆಯನ್ನು ಕಾಯ್ದಿಟ್ಟುದುದೇ ಈ ಸಂಘಟನೆ. ಹೊನ್ನೇಕೆರೆಯಂತಹ ಪುಟ್ಟ ಊರಿನಲ್ಲಿ ಈ ಗೆಳತಿಯರ ಬಳಗದ

ಬಗ್ಗೆ ಬಹಳ ಟೀಕೆಗಳಿದ್ದವು. ಮೊದ ಮೊದಲು ಖಾಸಗಿಯಾಗಿ ನಾಲ್ಕಾರು ಹುಡುಗಿಯರ ಅನುಭವಗಳ ಕೇಂದ್ರವಾಗಿ ಉಳಿದ ಈ ಗುಂಪು ಸಂಘಟನೆಯಾಗಿ ಬೆಳೆದಿತ್ತು. ಈ ಬಳಗದ ಚಟುವಟಿಕೆಗಳು ಅನೇಕ ಹೆಂಗಸರಲ್ಲಿ, ಪುಂಡ ಹುಡುಗರಲ್ಲಿ, ಸಂಪ್ರದಾಯಸ್ಥರಲ್ಲಿ ಹರಟೆಗೆ ವಸ್ತುಗಳಾಗಿದ್ದವು. ಮದುವೆ ವಯಸ್ಸಿನ ಹುಡುಗಿಯರು ಹೀಗೆ ನಾಟಕ, ಹಾಡು, ಪ್ರದರ್ಶನ ಎಂದು ಹೋಗುವುದು, ಊರೆಲ್ಲ ಸುತ್ತುವುದು, ಎಲ್ಲೆಲ್ಲಿಯೋ ಗಂಡಸರು ಓಡಾಡುವ ಸ್ಥಳಗಳಲ್ಲಿ ಕುಳಿತು ಮೀಟಿಂಗ್ ಮಾಡುವುದು ಇತ್ಯಾದಿಗಳೆಲ್ಲ ಅವರಲ್ಲಿ ಅಸೂಯೆಯ ಜೊತೆಗೆ ರೋಷವನ್ನೂ ಹುಟ್ಟುಹಾಕಿದ್ದವು. ಬೆಳೆಯುತ್ತಿರುವ ಹುಡುಗಿಯರಿಗೆ ಈ ಬಳಗ ಆಕರ್ಷಣೀಯವಾಗಿ ಕಂಡರೆ ಆಗಲೇ ಸಾಂಪ್ರದಾಯಿಕ ಚಿತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡ ಹೆಂಗಸರಿಗೆ ಈ ಚಟುವಟಿಕೆಗಳು ಅನಗತ್ಯವಾಗಿದ್ದವು. ಹಾಗಾಗಿ ಈ ಬಳಗದ ಬಗ್ಗೆ ಬಹಳಷ್ಟು ಕಟು ಟೀಕೆಗಳು ಕೇಳಿಬರುತ್ತಿದ್ದವು. 'ಇಷ್ಟೆಲ್ಲ ಮಾತನಾಡುವ ಹುಡುಗಿಯರು ವರದಕ್ಷಿಣೆ ಕೊಡದೇ ಮದುವೆಯಾಗುತ್ತಾರೆಯೇ ನೋಡೋಣ' ಎಂಬ ಕುಹಕಗಳೂ ಕೇಳಿಬರುತ್ತಿದ್ದವು. 'ಏನು ಉದ್ಧಾರ ಮಾಡುತ್ತಾರೋ ನೋಡಿಯೇ ಬಿಡೋಣ' ಎಂಬ ಸವಾಲುಗಳೂ ಕೇಳಿಬಂದವು. 'ಹೀಗೆ ಸಂಘ-ಸಂಸ್ಥೆ' ಅಂತ ಬೀದಿ ಬೀದಿ ಸುತ್ತೋಕೆ, ಹುಡುಗರ ಜೊತೆ ಸುತ್ತೋಕೆ, ಮಾತನಾಡೋಕೆ ಇವರದೆಲ್ಲ ಹುನ್ನಾರ ಎಂಬ ಆಕ್ಷೇಪಣೆಗಳೂ ಬಂದವು. ಆದಾಗ್ಯೂ ನಾಲ್ಕೈದು ವರ್ಷಗಳ ಕಾಲ ಹೊನ್ನೇಕೆರೆಯ ಸುಮಾರು ಇಪ್ಪತ್ತು ಜನ ಹುಡುಗಿಯರು ಈ ಸಂಘಟನೆಯಲ್ಲಿ ಉತ್ಸಾಹದಿಂದ ಪಾಲುಗೊಂಡಿದ್ದಂತೂ ನಿಜ. ನಾಲ್ಕು ವರ್ಷಗಳ ಕಾಲ ಈ ಸಂಘಟನೆಯಲ್ಲಿ ತೊಡಗಿಕೊಂಡ ಗಂಗಾಳಿಗಂತೂ ಈ ಅನುಭವ ಚೈತನ್ಯದ ಚಿಲುಮೆಯಾಗಿ ಕಂಡಿತ್ತು. ಕ್ರಾಂತಿ ಎಂದರೆ ಕತ್ತಿ ಹಿಡಿದು ಯಾರದೋ ತಲೆ ಒಡೆದು ರಕ್ತ ಬಸಿಯುವ ಕಾರ್ಯಕ್ರಮವಲ್ಲ ಎಂಬುದು ಗಂಗಾಳಿಗೆ ಈಗಾಗಲೇ ನಿಧಾನವಾಗಿ ಅರ್ಥವಾಗತೊಡಗಿತ್ತು. ನಿತ್ಯದ ಬದುಕಿನ ಬವಣೆಯಲ್ಲಿ ತನಗೆ ಬೇಕಿದ್ದ ಬದುಕನ್ನು ಆಯ್ಕೆ ಮಾಡಿಕೊಳ್ಳಲು ಬೇಕಾದ ಮಾನಸಿಕ ಸಿದ್ಧತೆಯೊಂದು ತೀರಾ ಅಗತ್ಯ ಎಂದು ಗಂಗಾಳಿಗೆ ಅನ್ನಿಸತೊಡಗಿತ್ತು. ಹೊನ್ನೇಕೆರೆಯಂತಹ ಊರಲ್ಲಿ ನಡೆಯುತ್ತಿರುವ ಇಂತಹ ಸಣ್ಣ-ಪುಟ್ಟ ಪ್ರಯತ್ನಗಳು ಸಾರ್ವತ್ರಿಕವಾಗುವುದು ಅಗತ್ಯ ಎನ್ನುವ ಅರಿವೂ ಕೂಡಾ ಅವಳಲ್ಲಿ ಮೂಡತೊಡಗಿತ್ತು. ಆದರೆ ಕಾಲಾಂತರದಲ್ಲಿ ಈ ಸಂಘದ ಅನೇಕ ಹುಡುಗಿಯರು ಮನೆಯವರ ಒತ್ತಾಯಕ್ಕೆ ಕಟ್ಟುಬಿದ್ದು ಮೂವತ್ತರಿಂದ ಅರವತ್ತು, ಎಪ್ಪತ್ತು ಸಾವಿರದವರೆಗೂ ವರದಕ್ಷಿಣೆ ತೆತ್ತು ಬೇರೆಯ ಊರುಗಳಿಗೆ ಸೊಸೆಯಂದಿರಾಗಿ ತೆರಳಿದಾಗ, ಗಂಗಾನಂತಹ ಕೆಲವಾರು ಹುಡುಗಿಯರು ಆದರ್ಶದ ಬೆನ್ನು ಹತ್ತಿ ಮುಂದಿನ ವಿದ್ಯಾಭ್ಯಾಸಕ್ಕೆಂದೋ ಅಥವಾ ಆರ್ಥಿಕ ಸ್ವಾತಂತ್ರ್ಯ ಬಯಸಿ, ಕೆಲಸ ಹುಡುಕಿ ಬೆಂಗಳೂರು, ಮೈಸೂರು, ಶಿವಮೊಗ್ಗೆಯಂತಹ ಊರುಗಳಿಗೆ ಹರಿದು ಹಂಚಿಹೋದಾಗ ಗೆಳತಿಯರ ಬಳಗದ ಕಾರ್ಯಕ್ರಮಗಳು ಸ್ಥಗಿತಗೊಂಡವು. ಗಂಗಾ ಎಂ.ಎ. ಮಾಡುವುದಕ್ಕೆಂದು ಮೈಸೂರಿಗೆ ಹೊರಟು ಹೋದಳು. ಹೊನ್ನೇಕೆರೆಯ ಹಲವಾರು ಹುಡುಗಿಯರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದ ಗೆಳತಿಯರ ಬಳಗ ಗತಿಸಿಹೋದ ಇತಿಹಾಸದಲ್ಲಿ ದಾಖಲೂ ಆಗದೇ ಮಾಸಿ ಹೋಯಿತು.

* * * * *

ಗಂಗಾ ಎಂ.ಎ. ಮುಗಿಸಿ ಕೆಲಸಕ್ಕೆ ಅರ್ಜಿ ಹಾಕಲು ಪ್ರಾರಂಭಿಸುವ ವೇಳೆಗೆ ವೈಚಾರಿಕ ಮಟ್ಟದಲ್ಲಿ ಮಾತ್ರವಲ್ಲ, ವೈಯಕ್ತಿಕ ಜೀವನದಲ್ಲೂ ಸಾಕಷ್ಟು ನಿರ್ಧಾರಗಳನ್ನು ಕೈಗೊಂಡಿದ್ದಳು. ಎಂ.ಎ. ಮಾಡುತ್ತಿದ್ದ

ಎರೆಡು ವರ್ಷದಲ್ಲಿ ರವಿಯನ್ನು ಅನೇಕ ಬಾರಿ ಆಕೆ ಕಂಡದ್ದುಂಟು. ಮೈಸೂರಿನಲ್ಲಿಯೇ ಫಿಲಾಸಫಿ ಮಾಡುತ್ತಿದ್ದ ರವಿ ಆಗಾಗ್ಗೆ ಈಕೆಯನ್ನು ಭೆಟ್ಟಿಯಾಗಲು ಇಚ್ಛಿಸಿದ್ದುಂಟು. ಗಂಗಾ ಅವನನ್ನು ಸೌಜನ್ಯಯುತವಾಗಿ ಮಾತನಾಡಿಸುತ್ತಿದ್ದಳು, ಆತ ಕಾಫಿಗೆ ಕರೆದರೆ ಹೋಗುತ್ತಿದ್ದಳು. ತಾನು ಓದುತ್ತಿರುವ ಪುಸ್ತಕದ ಬಗ್ಗೆ, ಸಾಹಿತ್ಯದ ಬಗ್ಗೆ, ಜೊತೆಗೆ ತನ್ನ ತರಗತಿಗಳಲ್ಲಿ -ನಡೆಯುವ ಚರ್ಚೆಯ ಬಗ್ಗೆ ಮಾತನಾಡುತ್ತಿದ್ದಳು. ಅಷ್ಟೇ ಅವಳ ಮಾತು-ಕತೆ. ಆನಂತರ ಸೌಜನ್ಯದ ಗಡಿ ದಾಟುತ್ತಿರಲಿಲ್ಲ. ಮಾತೆಲ್ಲ ಮುಗಿದ ಮೇಲೆ, ಕಾಫಿಯ ಬಿಲ್ ಕೊಟ್ಟು ಕ್ಯಾಂಟೀನಿನಿಂದ ಆಚೆ ಹೋಗುವಾಗ ಏನೂ ಸಂಬಂಧವಿಲ್ಲದ ಹಾಗೆ ಬೈ ಎನ್ನುತ್ತಾ ತಿರುಗಿ ಕೂಡಾ ನೋಡದೇ ಹೋಗಿಬಿಡುತ್ತಿದ್ದಳು. ಶಿವಮೊಗ್ಗೆಯಲ್ಲಿ ರವಿಯ ಜೊತೆ ಸಂಬಂಧ ಮುರಿದಾಗ ಇದ್ದ ಕೋಪವೆಲ್ಲ ಹೋಗಿ ಆ ಜಾಗದಲ್ಲಿ ಮಮತೆ, ಕರುಣೆಗಳು ಅವಳಲ್ಲಿ ಮನೆ ಮಾಡಿದ್ದವು. ಜೀವನದ ಒಂದೊಂದು ಆಘಾತ ಅಥವಾ ದುರಂತವೂ - ಬದುಕಿನ ಗ್ರಹಿಕೆಯ ಮೆಟ್ಟಿಲನ್ನ, ಬದುಕಿನ ಉನ್ನತಿ ತಲುಪಲು ಇರುವ ಮೆಟ್ಟಿಲೆಂಬುದು ಆಕೆಗೆ ಅರ್ಥವಾಗಿತ್ತು. ಹಾಗಾಗಿ ರವಿಗೆ ಮುಖ ತಿರುಗಿಸುವ, ಮಾತನಾಡಿಸದೇ ಇರುವಂತಹ ಕಿರಿಕಿರಿಗಳೇನೂ ಆಕೆಗೆ ಆಗುತ್ತಿರಲಿಲ್ಲ.

ಮೈಸೂರಿನಲ್ಲಿರುವಾಗ ಗಂಗಾಗೆ ಕಾದಿದ್ದ ಮತ್ತೊಂದು ಆಘಾತವೆಂದರೆ ಆಕೆಯ ಹಲ್ಲಿನಲ್ಲಿ ಉಂಟಾದ ನ್ಯೂನತೆ. ಗಂಗಾಳ ತಾಯಿಯ ಕುಟುಂಬದಲ್ಲಿ 25-30 ವರುಷಕ್ಕೇ ಹಲ್ಲುಗಳೆಲ್ಲ ಉದುರಿ ಮತ್ತೆ ಹೊಸದಾಗಿ ಹಲ್ಲು ಹಾಕಿಸಿಕೊಂಡ ತನ್ನ ತಾಯಿಯ ತಮ್ಮಂದಿರನ್ನು ಗಂಗಾ ಕಂಡಿದ್ದಳು, ತಾಯಿಯ ಅಕ್ಕನ ಮಕ್ಕಳನ್ನು ಕಂಡಿದ್ದಳು. ಚಿಕ್ಕ ವಯಸ್ಸಿನಲ್ಲಿ ಅವರು ತೆಗೆದುಹಾಕುತ್ತಿದ್ದ ಹಲ್ಲುಗಳನ್ನು ಕುತೂಹಲದಿಂದ ಕಣ್ಣು ಬಿಟ್ಟು ನೋಡುತ್ತಿದ್ದ ಗಂಗಾಗೆ, ತಮಾಷೆ, ತಮಾಷೆಯಾಗಿ ನಗುತ್ತಿದ್ದ ಗಂಗಾಗೆ ತನ್ನ ಒಂದೊಂದೂ ಹಲ್ಲೂ ಕೂಡಾ ತನ್ನ ಮುಂದೆಯೇ ಪ್ರಶ್ನಾರ್ಥಕವಾಗಿ ನಿಲ್ಲಬಹುದೆಂಬ ಕಲ್ಪನೆ ಕೂಡ ಇರಲಿಲ್ಲ. ಬಿ.ಎ. ಫೈನಲ್‌ನಲ್ಲಿ ಇರುವಾಗಲೇ ಹಲ್ಲುಗಳ ನೋವು, ದವಡೆಯ ಹಲ್ಲೊಂದು ಅಲುಗುವ ಅನುಭವ ಆದಾಗಲೆಲ್ಲಾ ಗಂಗಾಗೆ ಬಹಳ ಸಂಕಟವಾಗುತ್ತಿತ್ತು. ಆಕೆಯ ಸೌಂದರ್ಯದ ಬಗ್ಗೆ ಆಕೆಯ ಮನದ ಮೂಲೆಯಲ್ಲಿ ಎಲ್ಲಿಯೋ ಒಂದು 'Ego' ಮನೆ ಮಾಡಿತ್ತು. ಮುದ್ದು ಮುದ್ದಾದ ದುಂಡು ಮುಖ, ಅದಕ್ಕೆ ಸರಿಯಾಗಿ ದಪ್ಪಗೆ ಗುಂಡಗೆ ಇದ್ದ ಆಕೆಯ ಸೌಂದರ್ಯದ ಬಗ್ಗೆ ಆಕೆಗೇ ಹೆಮ್ಮೆ ಇತ್ತು. ಜೊತೆಗೆ ಸಂಬಂಧಿಕರು, ಗೆಳತಿಯರು ಹೇಳುವ ಹೊಗಳಿಕೆಗಳು. ಆಕೆ ಪಿ.ಯು.ಸಿ.ಯಲ್ಲಿ ಇದ್ದಾಗಲೊಮ್ಮೆ ಪಡೆಯುತ್ತಿದ್ದ 'ಪ್ರೇಮ-ಪತ್ರಗಳು, ಆಕೆಯ ಉಪನ್ಯಾಸಕರೊಬ್ಬರು ಆಕೆಯಲ್ಲಿ ತೋರಿಸಿದ ಆಸಕ್ತಿ, ಕಾಳಜಿಗಳು ಆಕೆಯನ್ನು ಪುಲಕಿತಗೊಳಿಸಿದ್ದವು. ಆಕೆಯ ಸೌಂದರ್ಯದ ಪ್ರಜ್ಞೆಯ ಹುಚ್ಚಿಗೆ ಪೂರಕವಾಗಿದ್ದವು. ರವಿ ಗಂಗಾಳೊಟ್ಟಿಗೆ ಅಷ್ಟು ಬೇಗ ಪ್ರೀತಿ ಬೆಳೆಸಲು ಅವಳ ಸೌಂದರ್ಯವೂ ಕಾರಣವಿದ್ದಿರಬಹುದು. ಮುದ್ದು ಮುದ್ದಾಗಿದ್ದ ಗಂಗಾ ತನ್ನ ಹಾಗೆಯೇ ಇರುವಳೆಂದು ತಾಯಿಗೂ ಆಕೆಯ ಮೇಲೆ ಅಗಾಧ ಪ್ರೀತಿ. ಅಪ್ಪನ ಹೊಡೆತದಿಂದಾಗಿ ಒಂದೊಂದೇ ಹಲ್ಲು ಕಳೆದುಕೊಂಡು ರಕ್ತ ಬಸಿದುಕೊಂಡಿರುತ್ತಿದ್ದ ತಾಯಿಯ ಸೌಂದರ್ಯ ಇದ್ದಕ್ಕಿದ್ದ ಹಾಗೆ ಮಾಯವಾಗಿದ್ದನ್ನು ಗಂಗಾ ಕಂಡಿದ್ದಳು. ತಾಯಿಯ ತುಂಬಿಕೊಂಡ ಮುಖ ಇದ್ದಕ್ಕಿದ್ದ ಹಾಗೆ ಬತ್ತಿ ಹೋಗಿದ್ದುದು, ಕಣ್ಣುಗಳಲ್ಲಿ ಕಾಂತಿ ಇಂಗಿ ಹೋದುದು, ಕೊನೆಗೆ ತಾಯಿಗೆ ಹುಚ್ಚು ಹಿಡಿದದ್ದು ಇವೆಲ್ಲ ಬಾಲ್ಯದಿಂದ ಗಂಗಾ ಕಂಡ ಸಂಗತಿಗಳು. ರವಿಯ ಸಂಬಂಧದಲ್ಲಿ ಬಿರುಕು ಉಂಟಾದಾಗ ಶಿವಮೊಗ್ಗೆಯ ಪಾರ್ಕೊಂದರ ಬಳಿ ಕುಳಿತು ಗಂಗಾ ಬರೆಯುವುದಕ್ಕೆ ಪ್ರಾರಂಭಿಸಿದ್ದಳು. ಬರೆಯುವುದರ ಮೂಲಕವಷ್ಟೇ ತನ್ನ ಒಳಗಿನ ದುಗುಡವನ್ನು ಜೀರ್ಣಿಸಿಕೊಳ್ಳಲಿಕ್ಕೆ ಸಾಧ್ಯ ಎಂದು ಆಕೆಗೆ ಅನ್ನಿಸತೊಡಗಿತ್ತು. ಹೀಗೆ ಬರೆಯಲು ಕುಳಿತಾಗ ತನ್ನ-

ರವಿಯ ಸಂಬಂಧದ ಬಿರುಕನ್ನೇ ಕತೆಯ ರೂಪದಲ್ಲಿ ಕಲೆಯಾಗಿಸಿ ಅದನ್ನು ಜೀರ್ಣಿಸಿಕೊಳ್ಳಲು ಪ್ರಯತ್ನಿಸುತ್ತೇನೆ ಎಂದು ಎಣಿಸಿದ್ದಳು. ಎಷ್ಟೋ ಘಂಟೆಗಳ ಕಾಲ ಮೈ ಮೇಲೆ ಗರ ಬಡಿದವರಂತೆ, ಹೋಗಿ ಬರುವವರ ಎಚ್ಚರವೂ ಮನಸ್ಸಿಗೆ ಬಾರದಂತೆ ಇರುವ ಸ್ಥಿತಿಯಲ್ಲಿ ಬರೆದಿದ್ದಳು. ಮರುದಿನ ಪ್ರಜ್ಞಾ ಸ್ಥಿತಿಯಲ್ಲಿ ಕುಳಿತು ಹಿಂದಿನ ದಿನ ಬರೆದುದನ್ನು ಓದಿದರೆ ಆಕೆ ಅಂದುಕೊಂಡಿದ್ದನ್ನು ಆಕೆ ಬರೆದೇ ಇರಲಿಲ್ಲ. ಆಕೆ ಮನೆ ಬಿಟ್ಟು ಆಗಲೇ ಮೂರು ವರುಷವಾಗಿತ್ತು. ರವಿಯ-ತನ್ನ ಸಂಬಂಧದ ಬಿರುಕಿನ ಬಗ್ಗೆ, ತನ್ನ ಮನಸ್ಸಿನ ಉದ್ವೇಗಗಳ ಕುರಿತು ಬರೆಯುತ್ತೇನೆ ಎಂದು ಎಣಿಸಿದ್ದ ಗಂಗಾ ಬರೆದುದೆಲ್ಲಾ ತಾಯಿಯ ಬದುಕಿನ ಬಗ್ಗೆ. ಒಳಗೆಲ್ಲೋ ಬಾಲ್ಯದಲ್ಲಿ ಹೆಪ್ಪುಗಟ್ಟಿದ್ದು ನೀರಾಗಿ ಕರಗಿದ್ದು ತಾಯಿಯ ಬದುಕು. ಬರೆಯುತ್ತಾ ಹೋದ ಹಾಗೆಲ್ಲ ತಾಯಿಯ ಬದುಕೇ ಹಾಳೆಯ ಪುಟಗಳನ್ನು ತುಂಬುತ್ತಾ ಹೋದದ್ದು. ಸುಂದರಿಯಾಗಿದ್ದ ತಾಯಿಯಲ್ಲಿದ್ದ ಒಣ ಹಮ್ಮು, ಹೆಮ್ಮೆ ಜಂಬಗಳಲ್ಲಿ, ಛಲ, ಅಭಿಮಾನದಲ್ಲಿ ಕಪ್ಪಗಿದ್ದ ತಂದೆಯನ್ನು ತಾಯಿ ತಿರಸ್ಕರಿಸಿದ್ದು, ಆತನನ್ನು ಕಾಲ ಕಸದಂತೆ ಕಡೆಗಾಣಿಸಿದ್ದು, ಆದರೂ ತಂದೆ ಹಟ ಬಿಡದೇ ಆಕೆಯನ್ನೇ ಮದುವೆಯಾದದ್ದು. ಇಂತಹ ಸಂಗತಿಗಳನ್ನು ಗಂಗಾ ಚಿಕ್ಕವಳಿರುವಾಗ ತಾಯಿಯ ಬಾಯಿಯಿಂದಲೇ ಕೇಳಿ ತಿಳಿದಿದ್ದಳು. ತಾಯಿ ಎಲ್ಲದಕ್ಕೂ ಹಟ ಮಾಡುತ್ತಿದ್ದುದನ್ನು ಗಂಗಾ ಕಂಡಿದ್ದಳು. ಆಕೆಯ ಹಟದ ಸ್ವಭಾವಕ್ಕಾಗಿಯೇ ತಂದೆ ಆಕೆಯನ್ನು ಹೊಡೆಯುತ್ತಿದ್ದುದುಂಟು. ಎರಡು ಮಕ್ಕಳಾದ ಮೇಲೆಯೂ ತಾಯಿ ಹಟ, ಛಲಗಳನ್ನು ಬಿಟ್ಟಿರಲಿಲ್ಲ. ತಂದೆ ಆಕೆಯನ್ನು ಮಣಿಸಲು ಪ್ರಯತ್ನಿಸುತ್ತಿದ್ದುದೇ ಹೊಡೆತಗಳ ಮೂಲಕ. ತಾಯಿ ಆಗೆಲ್ಲ ಗೋಳೋ ಎನ್ನುತ್ತಿದ್ದಳು. ಬೇರೆ ಯಾರನ್ನಾದರೂ ಮದುವೆಯಾಗಿದ್ದರೆ, ಅಥವಾ ತನ್ನನ್ನು ಓದಿಸಿದ್ದರೆ ಈ ಮೂಳನ ಮನೆಯಲ್ಲಿ ಯಾಕೆ ದುಡಿಯಬೇಕಿತ್ತು? ಎಂದು ಯಾವಾಗಲೂ ತಂದೆಯನ್ನು ಬಯ್ಯುತ್ತಿದ್ದಳು. ತಾಯಿಯ ಅಂತರಂಗದ ಒಳಗೆಲ್ಲೋ ತಾನು ಸುಂದರಿ, ತನ್ನನ್ನು ಇನ್ಯಾರಾದರೂ ಶ್ರೀಮಂತರು ಮದುವೆ ಮಾಡಿಕೊಳ್ಳುತ್ತಿದ್ದರು ಎನ್ನುವ ಹಮ್ಮು ಮನೆಮಾಡಿದ್ದನ್ನು ಗಂಗಾ ಗಮನಿಸಿದ್ದಳು. ತಾನು ಮದುವೆಯಾದದ್ದು ಶ್ರೀಮಂತಿಕೆ ಇಲ್ಲದ, ಸೌಂದರ್ಯವಿಲ್ಲದ ಭಿಕಾರಿಯೊಡನೆ ಎಂದೆನಿಸಿದಾಗಲೆಲ್ಲಾ ಆಕೆಯಲ್ಲಿನ ಕಿಚ್ಚು ಹೆಚ್ಚಾಗುತ್ತಿತ್ತು. ಹಾಗಾಗಿ ಆಕೆಯಲ್ಲಿ ಯಾವಾಗಲೂ ಹಟ, ರೋಷ. ನಿತ್ಯದ ಬದುಕಿನಲ್ಲಿ ಅವ್ವ ಅಪ್ಪನ ಬದುಕನ್ನು ಮಾತ್ರವಲ್ಲ, ಎಲ್ಲಾ ಮಕ್ಕಳ ಬದುಕನ್ನೂ ರವರವ ಎನ್ನುವಂತೆ ಮಾಡುತ್ತಿದ್ದಳು. ಸುಖ, ಶಾಂತಿಗಳಿಗಾಗಿ ಆಕೆ ಒಪ್ಪಂದ ಮಾಡಿಕೊಳ್ಳಲು ತಯಾರಿರಲಿಲ್ಲ. ನೆಮ್ಮದಿಗಾಗಿಯೂ ಸಹ ತನ್ನ ಒಣ ಹೆಮ್ಮೆ-ಹಮ್ಮುಗಳನ್ನು ಬಿಟ್ಟುಕೊಡಲು ಆಕೆ ತಯಾರಿರಲಿಲ್ಲ. ಹೀಗಾಗಿ ತಾಯಿಯನ್ನು ನಿತ್ಯದ ಘಟನೆಗಳಲ್ಲಿ ಅಪ್ಪ ಮಣಿಸಲು ಪ್ರಯತ್ನಿಸುತ್ತಿದ್ದುದು ಹೊಡೆಯುವುದರ ಮೂಲಕ. ಹೀಗೆ ಹೊಡೆದಾಗಲೆಲ್ಲಾ ತಾಯಿಯ ಹಲ್ಲುಗಳಿಗೆ ಪೆಟ್ಟು ಬಿದ್ದು ತಾಯಿಯ ಒಂದೊಂದೇ ಹಲ್ಲು ಉದುರಿ ಬಿದ್ದುದು ಗಂಗಾಗೆ ಜ್ಞಾಪಕವಾಗುತ್ತದೆ. ತಾಯಿ ಏನಾಗಬೇಕೆಂದು ಎಣಿಸಿದ್ದಳು? ಆಕೆಯ ಬದುಕಿನ ಕಲ್ಪನೆ ಏನಿತ್ತೋ? ಕೊನೆಯವರೆಗೂ ತಂದೆಯ ಜೊತೆ ಆಕೆ ಪ್ರೀತಿಯಿಂದ ಬದುಕಿ ಬಾಳಲಿಲ್ಲ. ಹೊಡೆತದಿಂದಾಗಿ ಹಲ್ಲುಗಳು ಉದುರಿ ಬಿದ್ದಾಗಲೆಲ್ಲಾ ರಕ್ತ ಸುರಿಯುವ ಬಾಯಿಯಿಂದ ತಾಯಿ ಕೂಗುತ್ತಾ, ರೋಧಿಸುತ್ತಾ ಬೋರಲು ಬಿದ್ದು ಅಳುತ್ತಿದ್ದುದು ಗಂಗಾಗೆ ಜ್ಞಾಪಕವಿದೆ. ತಾಯಿಯ ಒಂದೊಂದು ಹಲ್ಲೂ ಕೂಡಾ ಆಕೆಯ ಬದುಕಿನ ಬೇರನ್ನು ಅಲ್ಲಾಡಿಸಿರಬೇಕು. ಮತ್ತೆ ಮತ್ತೆ ಆಕೆಯಲ್ಲಿ ರೋಷ/ದ್ವೇಷದ ಕಿಡಿ ಹುಟ್ಟು ಹಾಕಿರಬೇಕು. ಮುದ್ದು ಮುದ್ದಾಗಿ ತುಂಬಿಕೊಂಡಿದ್ದ ತಾಯಿಯ ಮುಖ ತಂದೆಯ ಹೊಡೆತದಿಂದಾಗಿ ಬಚ್ಚಾಗುತ್ತಾ ಹೋಯಿತು. ಕಣ್ಣುಗಳು ಕಾಂತಿಯನ್ನು ಕಳೆದುಕೊಳ್ಳಲು

ತೊಡಗಿದ ಹಾಗೆ ಇದ್ದಕ್ಕಿದ್ದ ಹಾಗೆ ತಾಯಿಗೆ ಒಮ್ಮೆ ಹುಚ್ಚು ಹಿಡಿಯಿತು. ಅಪ್ಪನಿಗೆ ದಿಗ್ಭ್ರಮೆ. ಹೊಡೆತಗಳಿಂದ ತಾಯಿಯ ಮಣಿಸಲು ಪ್ರಯತ್ನಿಸುತ್ತಿದ್ದ ತಂದೆ ತಾಯಿಯ ಹುಚ್ಚಿನಲ್ಲಿ ತಾನೇ ಮಣಿದು ಹೋದ. ಚಿಕ್ಕ ಚಿಕ್ಕ ಮಕ್ಕಳು, ಹುಚ್ಚು ಹಿಡಿದ ಹೆಂಡತಿ - ಇದ್ದಕ್ಕಿದ್ದ ಹಾಗೆ ತಂದೆ ರಾತ್ರಿಯ ಹೊತ್ತಿನಲ್ಲಿ ತಲೆಯ ಮೇಲೆ ತಣ್ಣೀರು ಹಾಕಿಕೊಂಡು ಸ್ನಾನ ಮಾಡಿ ದೇವರ ಪೂಜೆ ಮಾಡತೊಡಗಿದ್ದ. ತಂದೆ-ತನ್ನ ಗಂಡಸಿನ 'Ego' ಕಳೆದುಕೊಂಡಿದ್ದು, ಹೊಡೆತಗಳಿಂದ ಆಕೆಯನ್ನು ಮಣಿಸಬೇಕೆಂಬ ಗರ್ವ ಕಳೆದುಕೊಂಡಿದ್ದೇ ತಾಯಿಯ ಹುಚ್ಚಿನ ಸ್ಥಿತಿಯಲ್ಲಿ. ಹುಚ್ಚಿನ ಸ್ಥಿತಿಯಲ್ಲಿ ತಾಯಿ ಯಾರನ್ನೂ ಗುರುತಿಸುತ್ತಿರಲಿಲ್ಲ. ಹನ್ನೆರಡು ವರ್ಷದ ಗಂಗಾ ಹತ್ತಿರ ಹೋದರೆ ದೂಡಿ 'ನಿನ್ನ ಸಾಯಿಸಿಬಿಡುತ್ತೇನೆ' ಎಂದು ಕೂಗುತ್ತಿದ್ದಳು. ಮೈ ಮೇಲಿನ ಬಟ್ಟೆ ಕಿತ್ತೆಸೆದು ಬೆತ್ತಲೆಯಾಗಿ ಓಡಿಬಿಡುತ್ತಿದ್ದಳು. ಕೊನೆ ಕೊನೆಗೆ ಆಕೆಯ ಕಾಲಿಗೆ, ಕೈಗೆ ಕಬ್ಬಿಣದ ಬಳೆ ತೊಡಿಸಿ ಕೊಠಡಿಯಲ್ಲಿ ಕೂಡಿ ಹಾಕಿ ಬಿಡುತ್ತಿದ್ದರು.

ತಾಯಿಯ ಹುಚ್ಚಿನ ಬಗ್ಗೆ ಗಂಗಾ ಬರೆಯುತ್ತಾ ಹೋದಾಗಲೆಲ್ಲಾ ಆಕೆಯ ಒಂದೊಂದು ಹಲ್ಲು ಆಕೆಯಲ್ಲಿ ಮೂಡಿಸಿದ ದೈನ್ಯತೆ, ರೋಷ, ದ್ವೇಷದ ಜೊತೆಗೆ ಆಕೆಯ ಬದುಕಿನ ಬೇರುಗಳು ಅಲ್ಲಾಡಿ ಹುಚ್ಚಿನಂತಹ ಉನ್ಮಾದ ಲೋಕಕ್ಕೆ ಆಕೆಯನ್ನು ತಳ್ಳಿದುದರ ಬಗ್ಗೆ ಬರೆಯುವಳು. ಆ ಉನ್ಮಾದದ ಲೋಕದಲ್ಲಿ ತಾಯಿ ತಾನು ಬಯಸಿದ್ದ ಬದುಕನ್ನು ಕಾಣಬಯಸಿದ್ದಳೋ ಏನೋ? ಅದೊಂದು ಆಕೆಯ ವಿಚಿತ್ರ ಲೋಕ. ಅಪ್ಪನಂತವನು ಅಲ್ಲಿ ಆಕೆಯನ್ನು ಗೈಡ್ ಮಾಡಲಾರ. ಆಕೆಯನ್ನು ಅಲ್ಲಿ ಯಾರೂ ಧಿಕ್ಕರಿಸಲಾರರು. ಆಕೆಯ ಬದುಕಿಗೆ ಆಕೆಯೇ ನಾಯಕಿ. ಆಕೆ ಕಾಣಬಯಸಿದ್ದೆಲ್ಲ ಕಾಣಸಿಗುತ್ತದೆ ಆಕೆಗೆ. ಅಲ್ಲಿ ಯಾರೂ ಆಕೆಗೆ ಡಿಕ್ಟೇಟ್ ಮಾಡಲಾರರು. ಆ ಉನ್ಮಾದ ಸ್ಥಿತಿಯಿಂದ ಆಕೆ ಲೌಕಿಕ ಜಗತ್ತಿನ ವ್ಯಾಪಾರ ತಿರಸ್ಕರಿಸಬಯಸಿದ್ದಳು. ಹೊಡೆತದಿಂದ ಮಣಿಸಲು ಪ್ರಯತ್ನಿಸುತ್ತಿದ್ದ ತಂದೆಯ ಮೇಲೆ ಹೀಗೆ ಸೇಡು ತೀರಿಸಿಕೊಳ್ಳಲು ಪ್ರಯತ್ನಪಟ್ಟಿದ್ದಳು. ಕೈಗಳನ್ನು ಉಜ್ಜುತ್ತಾ, ದಿಗಂತದ ಕಡೆಗೆ, ಶೂನ್ಯದ ಕಡೆ ದಿಟ್ಟಿಸುತ್ತಾ ಏನೋ ಕಳಕೊಂಡಿದ್ದನ್ನು ಚಂದ್ರನಲ್ಲಿ, ನಕ್ಷತ್ರಗಳಲ್ಲಿ ಪಡೆಯುವಳಂತೆ ಹವಣಿಸುತ್ತಿದ್ದಳು. ತಾಯಿಯ ಬಗ್ಗೆ ಬರೆಯುತ್ತಾ ಹೋದಹಾಗೆಲ್ಲ ತಾಯಿಯ ಒಂದೊಂದೂ ಹಲ್ಲೂ ಆಕೆಯಲ್ಲಿ ಬಿತ್ತಿದ ನೋವಿನ ಬಗ್ಗೆ, ರೋಷದ ಬಗ್ಗೆ, ಅಸೂಯೆಯ ಬಗ್ಗೆ ಗಂಗಾ ಯೋಚಿಸುತ್ತಾ ಹೋಗುತ್ತಾಳೆ. ತಾಯಿಯ ಸುಂದರ ಮುಖ ಅಪ್ಪನಿಂದಾಗಿ ಬಚ್ಚಾಗುತ್ತಾ ಹೋದ ಹಾಗೆ ತನ್ನ ಸೌಂದರ್ಯ ನಾಶ ಮಾಡಿದ, ತನ್ನನ್ನು ಅಧೋಗತಿಗೆ ತಳ್ಳಿದ ಅಪ್ಪನ ಬಗ್ಗೆ ಸೇಡು ತೀರಿಸಿಕೊಳ್ಳಲು ಹವಣಿಸಿ, ಸೋತು ಸೋತು ಕೊನೆಗೆ ತಾಯಿ ಅದನ್ನೆಲ್ಲ ತನ್ನ ಹುಚ್ಚಿನಲ್ಲಿ ವಿರೋಧಿಸಲು ಪ್ರಯತ್ನಪಟ್ಟಳೋ ಏನೋ?

ಗಂಗಾಳ ಬದುಕಿನಲ್ಲಿ ತಾಯಿಯ ಬದುಕು ಪರೋಕ್ಷವಾಗಿ ಆಟ ಆಡಿತ್ತು. ಯಾವಾಗಲೂ ಜಗಳವಾಡಿಯೇ ಕಾಲ ಕಳೆಯುತ್ತಿದ್ದ ತಾಯಿ-ತಂದೆ ಗಂಗಾಳ ಬಗ್ಗೆಯಾಗಲೀ, ಆಕೆಯ ಅಣ್ಣನ ಬಗ್ಗೆಯಾಗಲೀ ಸ್ವಲ್ಪವೂ ಕಾಳಜಿ ವಹಿಸಿರಲಿಲ್ಲ. ರವಿಯ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡ ನಂತರದ ಸಂದರ್ಭದಲ್ಲಿ ತನ್ನ ಒಸಡಿನಲ್ಲಿ ಒಂದು ರೀತಿಯ ಶಿಥಿಲತೆ ಉಂಟಾಗುತ್ತಿದ್ದುದನ್ನು ಗಂಗಾ ಗಮನಿಸಿದ್ದಳು. ಮನೆಯಲ್ಲಿ ಈ ವಿಚಾರವನ್ನು ಯಾರೊಡನೆಯೂ ಹಂಚಿಕೊಳ್ಳಬೇಕೆಂದು ಆಕೆಗೆ ಅನ್ನಿಸಲೇ ಇಲ್ಲ. ಮೈಸೂರಿನಲ್ಲಿ ಇದ್ದಾಗ ಆಕೆಯ ಅನೇಕ ಹಲ್ಲುಗಳು ಅಲುಗಾಡುವ ಅನುಭವವಾಗತೊಡಗಿದಾಗ ಹೊನ್ನೇಕೆರೆಯ ಗೆಳತಿಯೋರ್ವಳನ್ನು ಆಕೆ ಹುಡುಕಿಕೊಂಡು ಹೋಗಿದ್ದಳು. ಗೆಳತಿಯಲ್ಲಿ ತನ್ನ

ಸಮಸ್ಯೆಯನ್ನು ಹೇಳಿಕೊಳ್ಳುವಾಗ ಆಕೆಯ ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಬದುಕಿನಲ್ಲಿ ಆಕೆಯ ಬಗ್ಗೆ ಆಕೆಗೆ ಭರವಸೆ, ವಿಶ್ವಾಸ ಹುಟ್ಟುಹಾಕುವಲ್ಲಿ ಸೌಂದರ್ಯವೂ ಮುಖ್ಯ ಪಾತ್ರವನ್ನೇ ವಹಿಸಿದ್ದಿತು. ಇದ್ದಕ್ಕಿದ್ದ ಹಾಗೆ ತಾಯಿಯ ಬದುಕೆಲ್ಲಾ ಗಂಗಾಳ ಕಣ್ಣಿಗೆ ಕಟ್ಟಿದಂತಾಗಿತ್ತು. ಹೊನ್ನೇಕೆರೆಯ ಗೆಳತಿ ಕಮಲ ಅಲ್ಲಿಯೇ ಬಿ.ಎಡ್. ಮಾಡುತ್ತಿದ್ದ ಹುಡುಗಿ. ಆಕೆಯೊಡನೆ ಡಾಕ್ಟರ್ ಒಬ್ಬರನ್ನು ಹುಡುಕಿಕೊಂಡು ಹೋದಳು. ಕ್ಯಾಲ್ಸಿಯಂನ ಕೊರತೆಯ ಬಗ್ಗೆ ಮಾತನಾಡಿದ ಡಾಕ್ಟರ್ ಆಕೆಯ ವಸಡು, ಹಲ್ಲುಗಳು ಸಡಿಲವಾಗಿರುವ ಬಗ್ಗೆ ಹೇಳಿ, ಆ ಹಲ್ಲು ಕಿತ್ತಿಸಿ ಬೇರೆ ಹಲ್ಲು ಹಾಕಿಸಿಕೊಳ್ಳುವ ಬಗ್ಗೆ ಹೇಳಿದರು. ಹಾಗೆ ಮಾಡದೆ ವಿಧಿಯೇ ಇರಲಿಲ್ಲ. ಈ ಹಂತ ಗಂಗಾಳ ಜೀವನದ ಅತ್ಯಂತ ಭೀಕರ ಸಮಯವಾಗಿತ್ತು. ಮೂರು ಗಾಲಿಯ ಕುರ್ಚಿಯ ಮೇಲೆ ಕುಳಿತುಕೊಂಡು ಒಂದೊಂದು ಹಲ್ಲು ಕಳೆದುಕೊಂಡಾಗಲೂ ತಾಯಿಯ ತಾರುಣ್ಯದ ಬದುಕು ಕಣ್ಣಿಗೆ ಕಟ್ಟಿದಂತಾಗಿತ್ತು. ತಾಯಿ ಒಂದೊಂದು ಹಲ್ಲು ಕಳೆದುಕೊಂಡಾಗಲೂ ಆಕೆಯ ಸೌಂದರ್ಯದ ಪ್ರಜ್ಞೆ ಒಡೆದು ಚೂರು ಚೂರಾಗಿತ್ತು. ಗಂಗಾಳ ಒಂದೊಂದು ಹಲ್ಲೂ ಆಕೆಯ ಬದುಕಿನ ಬೇರನ್ನು ಅಲುಗಾಡಿಸುತ್ತಾ ಹೋಯಿತು. ಒಂದೊಂದು ಹಲ್ಲಿನ ಬೇರು ಅಲುಗಾಡಿದ ಹಾಗೆ ಆಕೆಯ ಆತ್ಮವಿಶ್ವಾಸದ ಬೇರುಗಳೂ ಅಲುಗಾಡತೊಡಗಿದ್ದವು. ತಾಯಿಯ ದೈನ್ಯತೆಯ ಕನ್ನಡಿಯಲ್ಲಿ ಗಂಗಾ ತನ್ನ ಬದುಕಿನ ಮುಖವನ್ನು ನೋಡಿಕೊಳ್ಳಲು ಪ್ರಯತ್ನಿಸಿದ್ದಳು. ತಾಯಿಯ ಗೋಸ್ಟ್ ತನ್ನ ಜೀವನದಲ್ಲಿ ಹೇಗೆ ಆಟವಾಡಿಬಿಟ್ಟಿತಲ್ಲಾ ಎಂದೆನಿಸುವಾಗಲೆಲ್ಲಾ ಗಂಗಾಗೆ ನೋವೆನಿಸುತ್ತಿತ್ತು. ಹಲ್ಲಿನ ಬೇರು ಎಷ್ಟು ಅನಾಯಾಸವಾಗಿ ಕಿತ್ತು ಬಂತು? ಹಾಗೆಯೇ ಬದುಕಿನ ಬೇರುಗಳೂ ಸಹ. ರವಿಯ ಸಂಬಂಧ ಕಿತ್ತುಕೊಂಡದ್ದು ಇಷ್ಟೇ ಸುಲಭವಾಗಿ! ಬದುಕಿನ ನಶ್ವರತೆಯ ಬಗ್ಗೆ ಗಂಗಾಳಿಗೆ ಅಧಿಕವಾಗಿ ಕಾಡತೊಡಗಿದ್ದು ಈ ಒಂದು ಸಂದರ್ಭದಲ್ಲಿಯೇ.

ಆಕೆಯ ಜೀವನದಲ್ಲಿ ಅಸ್ಪಷ್ಟವಾಗಿದ್ದ ನಶ್ವರತೆಗೆ ಸ್ಪಷ್ಟ ಚಿತ್ರಣ ಸಿಕ್ಕಿದ್ದು ಆಕೆಯ ಹಲ್ಲಿನ ಬೇರಿನಲ್ಲಿ. ಮೂರು ಗಾಲಿಯ ಮೇಲೆ ಕೂರಿಸಿ ಕನ್ನಡಕದ ಮನುಷ್ಯ ಈಕೆಯ ಬಾಯಿಂದ ಹಲ್ಲುಗಳನ್ನು ಸಲೀಸಾಗಿ ಈಚೆ ಎಳೆದಾಗ ಅವು ನಶ್ವರತೆಯನ್ನು ಪ್ರಚುರಪಡಿಸಿದ್ದವು. ಈ ನಶ್ವರತೆಯ ಮಧ್ಯ ಬದುಕಿನ ಬೇರುಗಳನ್ನು ಕಂಡುಕೊಳ್ಳಲು ಗಂಗಾ ಪ್ರಯತ್ನಿಸುತ್ತಿದ್ದಳು. ಬದುಕನ್ನು ಅರ್ಥಪೂರ್ಣ ಮಾಡಿಕೊಳ್ಳಲು ಬಯಸುತ್ತಿದ್ದಳು. ಮಾನಸಿಕವಾಗಿ ನಶ್ವರತೆಗೆ, ಸಾವಿಗೆ, ಛಿದ್ರ ಛಿದ್ರವಾಗಿ ಹೋಗುವ ದೇಹದ ಕಲ್ಪನೆಗೆ ಮನಸ್ಸು ಹತ್ತಿರವಾಗುತ್ತಿದ್ದ ಹಾಗೆ ಅದನ್ನೆಲ್ಲ ವಿರೋಧಿಸುವ ಚೈತನ್ಯವೊಂದು ಆಕೆಗೆ ಬೇಕಿತ್ತು. ಇಪ್ಪತ್ತೆರಡು ವರ್ಷಕ್ಕೆ ಸಾವಿಗೆ ಹತ್ತಿರವಾಗುತ್ತಿರುವ ದೇಹ, ಮನಸ್ಸಿಗೆ ಬದುಕುವ, ಪೂರ್ಣವಾಗಿ ಬದುಕುವ ಚೈತನ್ಯವೊಂದು ಬೇಕಿತ್ತು. ಗಂಗಾ ರವಿಯ ಸಂಬಂಧದಲ್ಲಿ ಕಂಡ ನಶ್ವರತೆಯ ಬೇರೊಂದನ್ನು ಈಗ ತನ್ನ ದೇಹದಲ್ಲಿಯೇ ಕಂಡುಕೊಂಡಿದ್ದಳು. ಬದುಕಿಗೆ ಆಸೆಗಣ್ಣುಗಳಿಂದ, ಬೆರಗುಗಣ್ಣುಗಳಿಂದ ಮಿಡಿಯುವ ಮುಗ್ಧತೆ ತನ್ನಲ್ಲಿ ಹೊರಟು ಹೋಗಿದೆ ಎನ್ನಿಸಿದಾಗಲೆಲ್ಲಾ ಗಂಗಾಗೆ ಸಂಕಟವಾಗುತ್ತಿತ್ತು. ಮನಸ್ಸು ಸಾವಿಗೆ ಹತ್ತಿರ ಹತ್ತಿರವಾದಂತೆ ಅನ್ನಿಸತೊಡಗಿತ್ತು. ಕಳೆದುಹೋದ ಮುಗ್ಧತೆಯನ್ನು ಆಕೆ ಪಡೆಯಬೇಕಿತ್ತು. ಅಂಟಿಲ್ಲದೇ ಕಳಚಿಕೊಂಡ ಹಲ್ಲುಗಳ ಬುಡದಲ್ಲಿಯೇ ಅಂಟಿಕೊಂಡು ಬದುಕುವ ನಂಬಿಕೆಯನ್ನು ಪಡೆಯಬೇಕಿತ್ತು. ಬಿರುಕು ಬಿಟ್ಟ ರವಿಯ ಸಂಬಂಧದಲ್ಲಿ ಕಳಚಿ ಮರೆಯಾಗಿ ಹೋದ ಪ್ರೀತಿಸುವ ಶಕ್ತಿಗಾಗಿ ತಡಕಾಡಬೇಕಿತ್ತು. ಹಲ್ಲಿನ ಬೇರುಗಳ ಬುಡದಲ್ಲಿ, ರವಿಯ ಸಂಬಂಧದ ಬಿರುಕಿನ ಅಡಿಯಲ್ಲಿ ಕಂಡ ನಶ್ವರತೆ ಮೀರಿಸುವ ಚೈತನ್ಯಪೂರ್ಣ ಬದುಕೊಂದು ಆಕೆಗೆ ಬೇಕಿತ್ತು.

ಹೊನ್ನೇಕೆರೆಯ ಹುಡುಗಿಯರ, ಗೆಳತಿಯರ ಬಳಗದ ಸಂಬಂಧಗಳಲ್ಲಿ ಗಂಗಾಗೆ ಒಂದು ಆಂತರಿಕ ಚೈತನ್ಯ ಮೂಡಿ ಬಂದಿತ್ತು. ಈ ಆಂತರಿಕ ಚೈತನ್ಯದಲ್ಲಿ, ಅಲ್ಲಿನ ಚರ್ಚೆಗಳ ಎಳೆಯಲ್ಲಿ ತನ್ನ ಬದುಕಿನ ಲಯದ ವೈಚಾರಿಕತೆಯನ್ನು ಗಂಗಾ ಕಂಡುಕೊಂಡಿದ್ದಳು.

ಎಂ.ಎ. ಮುಗಿಸಿ ಗಂಗಾ ತನ್ನ ಕಾಲ ಮೇಲೆ ತಾನು ನಿಲ್ಲಲು ಪ್ರಯತ್ನಿಸುವ ವೇಳೆಗೆ ಗಂಗಾಳ ಜೀವನದಲ್ಲಿ ಅನೇಕ ನಿರ್ಧಾರಗಳು ಗಟ್ಟಿಯಾಗಿ ಮೂಡಿದ್ದವು. ಆಗ ಆಕೆಗೆ 22 ವರ್ಷ. ಪ್ರೀತಿ-ಪ್ರೇಮದ ಭಾವನೆಗಳು ತನ್ನಲ್ಲಿ ಕಳೆದೇ ಹೋಗಿವೆ ಎಂದು ಆಕೆಗೆ ಅನ್ನಿಸತೊಡಗಿತ್ತು. ಮದುವೆಯ ಸಂಬಂಧ ತನ್ನನ್ನು ಪಕ್ಕಾ ಗೃಹಿಣಿಯನ್ನಾಗಿಸಿಬಿಡುತ್ತವೆ ಎಂಬ ಹೆದರಿಕೆ ಆಕೆಯಲ್ಲಿ ಗಟ್ಟಿಯಾಗಿ ಮನೆಮಾಡಿಕೊಂಡಿತ್ತು. ಗಂಗಾಗೆ ಯಾವ ಪ್ರಭಾವ, ಯಾರದೇ ಕೈ ಕಾಲು ಹಿಡಿಯದೇ ಸುಲಭವಾಗಿ ಕೆಲಸ ಸಿಕ್ಕಾಗ ದೀರ್ಘವಾಗಿ ನಿಟ್ಟುಸಿರುಬಿಟ್ಟಿದ್ದಳು. ಆಕೆ ಬಯಸಿದ್ದೇ ಕೆಲಸ ಅದು. ಕಾಲೇಜೊಂದರಲ್ಲಿ ಉಪನ್ಯಾಸಕಿಯಾಗಿ ಹೊಸದೊಂದು ಬದುಕನ್ನು ಆರಂಭಿಸುವ ಆದರ್ಶ ಹೊತ್ತು ಗಂಗಾ ಬೆಂಗಳೂರಿಗೆ ಕಾಲಿಟ್ಟಳು. ಬಾಲ್ಯದಲ್ಲಿ ಯಾವಾಗಲೂ ಕಂಡಿರದ ನಗರ. ಬೆಂಗಳೂರನ್ನು ಒಂದು ಕ್ಷಣ ಕಣ್ಣರಳಿಸಿ ನೋಡಿದ್ದಳು ಗಂಗಾ. ಹೊನ್ನೇಕೆರೆಯಲ್ಲಿ ಮೂಡಿದ್ದ ಕ್ರಾಂತಿಯ ಕನಸುಗಳು ಮಡಿಲಲ್ಲಿ ಇನ್ನೂ ಮರಿಯಾಗಿಯೇ ಇದ್ದು ಪುಕ್ಕ, ರೆಕ್ಕೆ ಬಿಚ್ಚಿ ಹಾರಲು ಬಯಸುತ್ತಿದ್ದವು. ಕ್ರಾಂತಿಯ ಕನಸುಗಳು, ಆದರ್ಶಗಳು, ಆರ್ಥಿಕ ಸ್ವಾತಂತ್ರ್ಯದ ಉತ್ಸಾಹ, ಜೊತೆಗೆ ರಂಗು ರಂಗಾಗಿ ಕಣ್ಣಿಗೆ ಕಂಡ ಬೆಂಗಳೂರು ನಗರ. ಗಂಗಾಳ ಬದುಕಿನ ಲಯಗಳಲ್ಲಿ ಉತ್ಸಾಹದ ಚಿಲುಮೆಯೇ ತುಂಬಿಕೊಂಡಂತೆ ಅನ್ನಿಸತೊಡಗಿತ್ತು. ಟಿ.ವಿ., ವೀಡಿಯೋಗಳು ಆಗಿನ್ನೂ ಕಣ್ಣು ಬಿಡದಿದ್ದ ಕಾಲ. ರಂಗಮಂದಿರಗಳು ಜೀವಂತಿಕೆಯಿಂದ ತುಂಬಿಕೊಂಡಿದ್ದವು. ಸಾಹಿತ್ಯದ ಉಸಿರಿಡಿದು ಬದುಕುವ ಕವಿಗಳು/ವಿಮರ್ಶಕರು/ಲೇಖಕಿಯರು/ಲೇಖಕರು, ಪತ್ರಕರ್ತರು. ಗಂಗಾಳ ಬದುಕಿನಲ್ಲಿ ಬೆಂಗಳೂರು ಆಕೆಯ ಕನಸುಗಳಿಗೆ ಜೀವ ತುಂಬುವ ನಗರವಾಗಿ ಕಂಡಿತ್ತು. ಮಹಡಿ ಬಸ್ಸುಗಳನ್ನೇ ಕಣ್ತೆರೆದು ಹಾ ಎಂದು ನೋಡುವ ಮನಸ್ಥಿತಿಯಲ್ಲಿದ್ದ ಗಂಗಾ ಬೆಂಗಳೂರು ಮಹಾನಗರದ ಮಧ್ಯೆ ತನ್ನ ಜೀವಂತಿಕೆಯ ಕೇಂದ್ರ ಬಿಂದುವೊಂದನ್ನು ಕಂಡುಕೊಳ್ಳಬೇಕಿತ್ತು. ತನ್ನನ್ನು ಈ ನಗರದ ಮಧ್ಯೆ ಲವಲವಿಕೆಯಿಂದ ಇಡುವ ಗೆಳತಿ/ಗೆಳೆಯರಿಗಾಗಿ ಹುಡುಕಬೇಕಿತ್ತು. ಉಪನ್ಯಾಸಕಿಯಾಗಿ ಆಕೆಯ ಉದ್ಯೋಗದ ವಲಯದಲ್ಲಿಯೂ ಪರಿಶ್ರಮ ಹಾಕಿ ಅರ್ಥಪೂರ್ಣವಾಗಿಸಿಕೊಂಡು ಬದುಕಬೇಕಿತ್ತು. ರವಿಯ ಬಗ್ಗೆ ಇದ್ದ ಕೋಪ, ಅಸಹನೆಗಳೆಲ್ಲ ತಣ್ಣಗಾಗುತ್ತಾ ಹೋದ ಹಾಗೆ ಬದುಕಿನ ಅರ್ಥಕ್ಕೆ ಗಂಡು-ಹೆಣ್ಣಿನ ಸಂಬಂಧ ಮೀರಿದ ವೈಚಾರಿಕತೆಗೆ, ಬದುಕಿಗೆ ಗಂಗಾ ಹುಡುಕಾಡತೊಡಗಿದ್ದಳು. ತಾರುಣ್ಯದ ಕನಸುಗಳು ಆಕೆಯ ಹೃದಯದಿಂದ, ಕಣ್ಣಿಂದ ಅಳಿಸಿ ಹೋಗಿದ್ದವು ಎಂದಲ್ಲ. ಆದರೆ ಗಂಡು-ಹೆಣ್ಣಿನ ಸಂಬಂಧವೇ ಪರಮ ಸತ್ಯ ಎನ್ನುವ ನಂಬಿಕೆ ಗಂಗಾಳಿಂದ ದೂರವಾಗಿತ್ತು. ತನ್ನನ್ನು ಪರಿಪೂರ್ಣವಾಗಿ ತೊಡಗಿಸಿಕೊಳ್ಳಬಹುದಾದ ಚಟುವಟಿಕೆಗಳ ಕೇಂದ್ರ ಬಿಂದುವಿಗಾಗಿ ಗಂಗಾ ಹುಡುಕಾಡತೊಡಗಿದ್ದಳು.

'ಪ್ರಪಂಚ ದುಂಡಗಿದೆ, ಎಲ್ಲಿ ಹೋದ್ರೂ ನೀನು ಸಿಕ್ತೀಯ', ಎರಡು ವರ್ಷಗಳಿಂದ ಕಣ್ಣು ತಪ್ಪಿಸಿದ್ರೆ ನನ್ನಿಂದ ತಪ್ಪಿಸಿಕೊಳ್ಳೋಕೆ ಆಗುತ್ತಾ?'. ರಪ್ ಎಂದು ಬೆನ್ನ ಮೇಲೆ ಬಿದ್ದ ಹೊಡೆತದ ಜೊತೆಗೆ ಈ ಮಾತುಗಳನ್ನು ಕೇಳಿದಾಗ ಗಂಗಾ ದಂಗಾಗಿದ್ದಳು. ಮೆಜೆಸ್ಟಿಕ್‌ನ ನಡುವಲಯದಲ್ಲಿ, ಬೆಂಗಳೂರಿನ ನಗರೀಕರಣವೆಲ್ಲ ಕೇಂದ್ರೀಕೃತವಾದ ಈ ಸ್ಥಳದಲ್ಲಿ-ಯಾರು ಇಷ್ಟೊಂದು ಆತ್ಮೀಯವಾಗಿ, ಕರುಳಿನ

ಜೊತೆ ಸಂಬಂಧ ಹೊಂದಿರುವವರ ತರಹ ಮಾತನಾಡುವವರು? ಹೊನ್ನೇಕೆರೆಯ ಗೆಳತಿಯರ ಆತ್ಮೀಯತೆ ಕೂಗಿ ಕರೆದಂತಿತ್ತು. ಗಂಗಾ ತನ್ನ ಕಣ್ಣನ್ನೇ ನಂಬಲಿಲ್ಲ. ಪಾರ್ವತಿ! ಹೌದು, ಅದೇ ಹೊನ್ನೇಕೆರೆಯ ಪಾರ್ವತಿ. ಗೆಳತಿಯರ ಬಳಗದಲ್ಲಿ ಕೂತು ಕಣ್ಣೀರು ಹರಿಸಿದ್ದ ಪಾರ್ವತಿ; ಮೂರ್‍ನಾಲ್ಕು ವರ್ಷಗಳ ಕಾಲ ಗೆಳತಿಯರ ಬಳಗದೊಡನೆ ಇದ್ದ ಹುಡುಗಿ ಪಾರ್ವತಿ. ಈಗ ಪಾರ್ವತಿ ಹೊನ್ನೇಕೆರೆಯ ಹುಡುಗಿಯಾಗಿ ಉಳಿದಿರಲಿಲ್ಲ. ಅದು ಕೇವಲ ಉಡುಗೆ-ತೊಡುಗೆಗಳಲ್ಲಿ ಮಾತ್ರ. ಆದರೆ ಮಾತು-ಕತೆಗಳಲ್ಲಿ ಅದೇ ಆತ್ಮೀಯತೆ, ಅದೇ ತುಡಿತ, ಅದೇ ಸೌಂದರ್ಯ, ಅದೇ ಹೃದಯದ ಮಾತು. ಗಂಗಾಗೆ ಹೃದಯ ತುಂಬಿ ಬಂತು. ಬಡತನದ ಬವಣೆಯಲ್ಲಿದ್ದು, ಮನೆಗೆಲಸಗಳನ್ನೆಲ್ಲ ಅಂಟಿಸಿಕೊಂಡು, ಎಮ್ಮೆ, ಮುಸುರೆ, ಕಸ ಇತ್ಯಾದಿಗಳ ಜಗತ್ತಿನಲ್ಲಿ ಎಸ್. ಎಸ್.ಎಲ್.ಸಿ. ಪಾಸಾಗಿಯೂ ಓದು ಮುಂದುವರಿಸಲಾಗದೇ ಒದ್ದಾಡುತ್ತಿದ್ದ ಪಾರ್ವತಿಯನ್ನು ತಾನು ಬೆಂಗಳೂರಿನಲ್ಲಿ ಕಾಣುತ್ತಿರುವುದು ಭ್ರಮೆಯೇ ಎಂದು ಒಂದು ಕ್ಷಣ ಗಂಗಾಗೆ ದಿಗ್ಭ್ರಮೆಯಾಯಿತು. ಗೆಳತಿಯರ ಬಳಗದಲ್ಲಿ ಪೇಪರ್ ಓದಿ ಕಣ್ಣೀರು ಸುರಿಸಿದ ಹುಡುಗಿ. ಜೊತೆಗೆ, 'ನಿನಗೆ ಶಿವಮೊಗ್ಗದಲ್ಲಿ ಓದೋಕೆ ಸಹಾಯ ಮಾಡೋಕೆ ಅಂತ ಒಬ್ರು ಇದ್ರು, ನೀನು ಹೋದೆ, ನಾನಾಗಿದ್ರೆ ತುಂಗಾ ನದೀಗೆ ಹಾರಿಕೊಳ್ಳಬೇಕಿತ್ತು ಅಷ್ಟೇ' ಎಂದ ಹುಡುಗಿ ಪಾರ್ವತಿ ಇಂದು ಬೆಂಗಳೂರಿನ ಮಧ್ಯದಲ್ಲಿ ನಿಂತು 'ಪ್ರಪಂಚ ದುಂಡಾಗಿದೆ, ನೀನು ಸಿಕ್ಕುಬಿಟ್ಟೆ' ಎನ್ನುತ್ತಿದ್ದಾಳೆ. ಹಿಂಜರಿದು ಮಾತನಾಡುತ್ತಿದ್ದ ಪಾರ್ವತಿಯಲ್ಲಿ ಈಗ ಹಿಂಜರಿಕೆ ಕಾಣುತ್ತಿರಲಿಲ್ಲ. ಬದಲಾಗಿ ಆಕೆಯಲ್ಲಿ ಆತ್ಮವಿಶ್ವಾಸ ತುಂಬಿ ತುಳುಕುವ ರೀತಿ ಕಂಡುಬಂತು. ತಾನು ಕಪ್ಪು ಎಂದು ಎಲ್ಲರೂ ಜರಿಯುತ್ತಾರೆ. ತಾನು ಕಪ್ಪಿದ್ದರೆ ಅದು ತನ್ನ ತಪ್ಪೇ ಎನ್ನುತ್ತಿದ್ದ ಪಾರ್ವತಿಯ ಮುಖದಲ್ಲಿ ಹಿಂದೆ ಇದ್ದ ದೈನ್ಯತೆ, ಅಸಹಾಯಕತೆ ಈಗ ಕಂಡು ಬರುತ್ತಿರಲಿಲ್ಲ. 'ಗಂಗಾ ನೀನು ಗಟ್ಟಿ, ಓದಲಿಕ್ಕೆ ಅಂತ ಮನೆಬಿಟ್ಟು ಓಡಿ ಹೋದೆ, ಆದರೆ ನಮ್ಮನ್ನು ನೋಡು' ಎಂದು ಗೋಗರೆಯುತ್ತಿದ್ದ ಪಾರ್ವತಿ ಈಕೆಯೇ ಎಂದು ಗಂಗಾಗೆ ಆಶ್ಚರ್ಯವಾಯಿತು. ನೀಟಾಗಿ ಕೆಂಪು ಸೀರೆಯೊಂದನ್ನು ಉಟ್ಟಿದ್ದ ಪಾರ್ವತಿ ತಲೆಗೆ ಹೊನ್ನೇಕೆರೆಯಲ್ಲಿ ಹೂ ಮುಡಿಯುವ ಹಾಗೆಯೇ ಹೂ ಮುಡಿದಿದ್ದಳು. ಸ್ಲೀವ್ ಲೆಸ್ ಬ್ಲೌಸ್ ಧರಿಸಿದ್ದರಿಂದ ರಟ್ಟೆಗಳು ತುಂಬಿಕೊಂಡ ಹಾಗೆ ಕಂಡು ಬರುತ್ತಿದ್ದವು. ಉಡುಗೆ-ತೊಡುಗೆಗಳಲ್ಲಿ ನೀಟಾಗಿ ಕಾಣಿಸುತ್ತಿದ್ದ ಪಾರ್ವತಿಯನ್ನು ಗಂಗಾ ದಿಟ್ಟಿಸಿ ನೋಡಿದಳು. ಸ್ಲೀವ್ ಲೆಸ್ ಬ್ಲೌಸ್ ಪಾರ್ವತಿಗೆ ಒಪ್ಪುತ್ತಿತ್ತು. ದುಂಡಗಿನ ಕುಂಕುಮ, ಒಳ್ಳೆಯ ಜಡೆ, ಕೆಂಪಾದ ಸೀರೆಯಲ್ಲಿ ಪಾರ್ವತಿ ಸುಂದರವಾಗಿಯೇ ಕಾಣುತ್ತಿದ್ದಳು. ಈಕೆ ಕಪ್ಪು ಎಂದು ಈಕೆಯ ಮದುವೆ ಬಹಳ ಸಲ ಮುಂದೆ ಹೋದದ್ದು, ಅಂತಹ ಆಘಾತಗಳಾದಾಗಲೆಲ್ಲಾ ಪಾರ್ವತಿ ವೇದನೆಪಟ್ಟು, ಅತ್ತದ್ದು, ಹೀಗೆ ತನ್ನನ್ನು ಬಂದವರಿಗೆಲ್ಲ ತೋರಿಸಿ ಅಪಮಾನಗೊಳಿಸುವ ಬದಲು ತನ್ನನ್ನು ಕಾಲೇಜಿಗೆ ಕಳಿಸಿದ್ದರೆ ಹೋಗುತ್ತಿರಲಿಲ್ಲವೇ ಎಂದು ಪಾರ್ವತಿ ಪರಿತಪಿಸುತ್ತಿದ್ದುದು, ಸಂಘದಲ್ಲಿ ಈಕೆ ಅತ್ತದ್ದು ಎಲ್ಲವೂ ಗಂಗಾಳ ನೆನಪಿಗೆ ಬರುತ್ತದೆ. ಗೆಳತಿಯರ ಬಳಗ ಮುಚ್ಚಿ ಹೋಗಿ ಈಗಾಗಲೇ ಎರಡು-ಮೂರು ವರ್ಷವಾಗಿ ಹೋಗಿತ್ತು. ಗಂಗಾಳಿಗೆ ಈ 2-3 ವರ್ಷಗಳಲ್ಲಿ ಹೊನ್ನೇಕೆರೆಯ ಹುಡುಗಿಯರ ಯಾವ ಸಮಾಚಾರಗಳೂ ತಿಳಿದಿರಲಿಲ್ಲ. ಮೈಸೂರಿನಲ್ಲಿಯೇ ಇದ್ದ ಕಮಲಳೊಂದಿಗೆ ಮಾತ್ರ ಗಂಗಾಗೆ ನಿಕಟ ಸಂಪರ್ಕವಿತ್ತು. ಮೈಸೂರಿನಲ್ಲಿ ಎಂ.ಎ. ಮಾಡಲು ತೊಡಗಿದ ಮೇಲೆ ಗಂಗಾ ಹೊನ್ನೇಕೆರೆಗೆ ಹೋದದ್ದೇ ಕಡಿಮೆ. ಉಪನ್ಯಾಸಕಿಯಾಗಿ ಕೆಲಸಕ್ಕೆ ಸೇರಿದರೆ ಮಾತ್ರ ತನ್ನ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂದು ಗಂಗಾಗೆ ಅನ್ನಿಸಿದ್ದರಿಂದ ಆಕೆ ಆ ಎರಡು ವರ್ಷವೂ ತನ್ನನ್ನು ತೀವ್ರವಾಗಿ ಓದಿನಲ್ಲಿ ತೊಡಗಿಸಿಕೊಂಡಿದ್ದಳು. ಹಾಗೆ ತೊಡಗಿಸಿಕೊಂಡಿರುವ ಓದು ಆಕೆಗೆ ತಕ್ಷಣವೇ

ಪ್ರತಿಫಲವನ್ನೂ ನೀಡಿತ್ತು. ಉತ್ತೀರ್ಣಳಾದೊಡನೇ ಯಾರ ಕೈ ಕಾಲು ಹಿಡಿಯದೇ ಆಕೆಗೆ ಬೆಂಗಳೂರಿನಲ್ಲಿ ಕಾಲೇಜೊಂದರಲ್ಲಿ ಕೆಲಸ ಸಿಕ್ಕಿತ್ತು. ಹಾಗಾಗಿ ಹೊನ್ನೇಕೆರೆಯ ಬಗ್ಗೆಯಾಗಲೀ, ಅಲ್ಲಿನ ಗೆಳತಿಯರ ಬಗ್ಗೆಗಾಗಲೀ ತಲೆ ಕೆಡಿಸಿಕೊಳ್ಳುವುದಕ್ಕೆ ಆಕೆಗೆ ಸಮಯವೇ ಇರಲಿಲ್ಲ. ಕೆಲಸ ಸಿಕ್ಕ ತಕ್ಷಣ ಬೆಂಗಳೂರಿಗೆ ಬಂದು ಹಾಸ್ಟೆಲ್‌ಗೆ ಸೇರಿದ್ದಳು. ಪಾರ್ವತಿಯನ್ನು ಬೆಂಗಳೂರಿನಲ್ಲಿ ಕಂಡಾಗ ಗಂಗಾಗೆ ನಿಧಿ ಕಂಡ ಹಾಗೆ ಆಯಿತು. ತಮ್ಮೀರ್ವರ ಬದುಕನ್ನು ಹೊಸೆಯುವ ಎಳೆಯೊಂದನ್ನು ಅವರು ಹೊನ್ನೇಕೆರೆಯಲ್ಲಿಯೇ ರೂಢಿಸಿಕೊಂಡಿದ್ದರು. ಹೊನ್ನೇಕೆರೆಯಲ್ಲಿ ನಿರಂತರವಾಗಿ ಮೂರ್ನಾಲ್ಕು ವರ್ಷಗಳ ಕಾಲ ವಾರ, ವಾರವೂ ಭೆಟ್ಟಿಯಾಗುತ್ತಿದ್ದರು. ತಮ್ಮ ಬದುಕಿನ ಸಿಹಿ-ಕಹಿಗಳನ್ನು ಒಟ್ಟಾಗಿ ಹಂಚಿಕೊಂಡಿದ್ದರು. ಹಂಚಿಕೊಂಡ ಬದುಕಿನ ಲಯಗಳು ಮರೆತು ಹೋಗುವ ಮುನ್ನವೇ ಗಂಗಾ ಪಾರ್ವತಿಯನ್ನು ಬೆಂಗಳೂರಿನಲ್ಲಿ ಭೆಟ್ಟಿಯಾಗಿದ್ದಳು. ಪಾರ್ವತಿಯ ಮಾತಿನ ಭರದಲ್ಲಿಯೇ ಆಕೆಯ ಬೆಚ್ಚಗಿನ ಹೃದಯವನ್ನು ಆತ್ಮೀಯತೆಯನ್ನು ಗಂಗಾ ಅರ್ಥೈಸಿಕೊಂಡಿದ್ದಳು.

ಆ ನಂತರ ಗಂಗಾ/ಪಾರ್ವತಿ ಇಬ್ಬರೂ ಊಟಕ್ಕೆಂದು ಒಂದು ಹೋಟೆಲ್‌ಗೆ ಹೋದರು. ಪಾರ್ವತಿ ಗಂಗಾಳಿಗೆ 'ಬಾ ನಿನಗೆ ಒಳ್ಳೆಯ ಊಟ ಕೊಡಿಸುತ್ತೇನೆ' ಎಂದು ಹೋಟೆಲ್‌ಗೆ ಕರೆದೊಯ್ದಳು. ಬೆಂಗಳೂರನ್ನು ಈಗ ತಾನೆ ಕಣ್ತೆರೆದು ನೋಡುತ್ತಿದ್ದ ಗಂಗಾಗೆ ಸಂಕೋಚ ಇನ್ನೂ ಮರೆಯಾಗಿರಲಿಲ್ಲ. ಪಾರ್ವತಿ ಬೆಂಗಳೂರಿನ ಬದುಕಿಗಾಗಲೇ ಒಗ್ಗಿದ್ದಳು. ಹೋಟೆಲ್ ಒಳಗೆ ಹೋಗುವ/ಬರುವ ಕ್ರಿಯೆಗಳಲ್ಲಿ ಆಕೆಗೆ ಯಾವುದೇ ಸಂಕೋಚ ಕಾಡುತ್ತಿರಲಿಲ್ಲ. ಆಕೆ ನಿಸ್ಸಂಕೋಚವಾಗಿ ನಡೆಯುತ್ತಿದ್ದಳು. ನಿಸ್ಸಂಕೋಚವಾಗಿ ಮಾತನಾಡುತ್ತಿದ್ದಳು. ಹೃದಯಪೂರ್ವಕವಾಗಿ ನಗುತ್ತಿದ್ದಳು. ಹೊನ್ನೇಕೆರೆಯಲ್ಲಿ ಪಾರ್ವತಿಯ ದೈನ್ಯತೆಯ ಒಳಗಿದ್ದ ಆಕೆಯ ವ್ಯಕ್ತಿತ್ವದ ಮಜಲನ್ನು ಗಂಗಾ ಬೆಂಗಳೂರಿನಲ್ಲಿ ಕಾಣುವಂತಾಗಿತ್ತು.

ಪಾರ್ವತಿ, ಗಂಗಾ ಕುಳಿತ ಹೋಟೆಲ್ ಆಧುನಿಕತೆಯಿಂದ ಸಜ್ಜಾಗಿತ್ತು. ಸುಮಧುರವಾದ ಪಾಶ್ಚಾತ್ಯ ಸಂಗೀತ ಕೇಳಿಸುತ್ತಿದ್ದ ಹಾಗೆಯೇ ಸರ್ವರ್ ಬಂದು ಏನು ಬೇಕೆಂದು ವಿಚಾರಿಸತೊಡಗಿದ. ಪಾರ್ವತಿ ಮೆನು ಪುಸ್ತಕವನ್ನು ತಿರುವಿ ತಿರುವಿ ನೋಡುತ್ತಿದ್ದಳು. ನೋಡುತ್ತಲೇ 'ಫುಲ್ ಮೀಲ್ಸ್' ಎಂದಳು. ಗಂಗಾಗೆ ಈ ಲೋಕವೆಲ್ಲ ವಿಚಿತ್ರವಾಗಿ ಕಾಣತೊಡಗಿತ್ತು. ಮೈಸೂರಿನಂತಹ ದೊಡ್ಡ ಊರಿನಲ್ಲಿ ಆಕೆ ಇದ್ದುದೇನೋ ಅಹುದು. ಆದರೂ ಆಕೆಯ ಪ್ರಪಂಚ ಹಾಸ್ಟೆಲ್/ಕಾಲೇಜ್/ಗಂಗೋತ್ರಿಯ ವಾತಾವರಣಕ್ಕೆ ಮಾತ್ರ ಮೀಸಲಾಗಿತ್ತು. ಓದಿ ಕೆಲಸಕ್ಕೆ ಸೇರಲೇಬೇಕು ಎಂಬ ಛಲದಿಂದ ಪರಿಶ್ರಮ ಪಡುತ್ತಿದ್ದುದರಿಂದ ಆಕೆ ಇನ್ನಾವುದನ್ನೂ ಗಮನಿಸಿಯೂ ಇರಲಿಲ್ಲ. ತನ್ನ ಓದಿನಲ್ಲಿ ಮಾತ್ರ ತನ್ನ ಭವಿಷ್ಯ ಅಡಗಿದೆ ಎಂಬುದನ್ನು ಗಂಗಾ ಬಲವಾಗಿ ನಂಬಿದ್ದಳು. ಆ ನಂಬಿಕೆಯೇ ಆಕೆಯನ್ನು ಕಾಯ್ದಿತ್ತು. ಆ ನಂಬಿಕೆಗೋಸ್ಕರವೇ ಎರಡು ವರ್ಷಗಳ ಕಾಲ ತನ್ನ ಜೀವವನ್ನೇ ಮುಡುಪಾಗಿ ಇಟ್ಟವರ ತರಹ ಶ್ರದ್ಧೆಯಿಂದ ಅಭ್ಯಸಿಸುತ್ತಿದ್ದಳು. ಹಾಗಾಗಿ ಮೈಸೂರಿನ ಹೊರಗಿನ ಚಂದ ಅಂದಗಳಿಗೆ ಗಂಗಾ ಮನಸೋತಿರಲಿಲ್ಲ. ಹೊನ್ನೇಕೆರೆಯ ಕಮಲ ಬಿ.ಎಡ್. ಮಾಡುತ್ತಿದ್ದುದರಿಂದ ಆಕೆಯನ್ನು ಮಾತ್ರ ಆಗೀಗ ಹುಡುಕಿಕೊಂಡು ಹೋದುದುಂಟು. ತನ್ನ ಹಳ್ಳಿನ ಬಗ್ಗೆಗಿನ ನೋವನ್ನು ಆ ಗೆಳತಿಯಲ್ಲಿ ಹಂಚಿಕೊಂಡು ಅತ್ತುದುಂಟು. ಆದರೂ ಓದಿದ ಒತ್ತಡದಲ್ಲಿ ಅವರು ಭೇಟಿಯಾಗುತ್ತಿದ್ದುದೇ ಕಡಿಮೆ. ಒಟ್ಟಾಗಿ ಸಮಯ ಕಳೆಯುತ್ತಿದ್ದುದೇ ಕಡಿಮೆ. ಸುಸಜ್ಜಿತ ಹೋಟೆಲ್‌ಗಳ ರಂಗನ್ನಾಗಲೀ, ನಿಯಾನ್ ದೀಪಗಳ

ನಡುವಿನ ಸಂಪತ್ತನ್ನಾಗಲೀ ಗಂಗಾ ಕಂಡವಳೇ ಅಲ್ಲ. ಅದಕ್ಕೆ ದುಡ್ಡಿನ ಅಡಚಣೆಯೂ ಮುಖ್ಯ ಕಾರಣವಾಗಿತ್ತು. ಈಗ ಅವಳು ದುಡಿಯಲು ಪ್ರಾರಂಭಿಸಿದ್ದಳು. ಅವಳ ಮೊದಲ ತಿಂಗಳ ಸಂಬಳವನ್ನೂ ಕೂಡಾ ಆಕೆಯಿನ್ನು ಕೈಗೆ ತೆಗೆದುಕೊಂಡಿರಲಿಲ್ಲ. ಹಾಗಾಗಿ ಸ್ವತಂತ್ರವಾಗಿ ತಿರುಗುವ/ತಿನ್ನುವ ವಿಚಾರಗಳು ಅವಳ ತಲೆಯಲ್ಲಿ ಬಂದಿರಲೇ ಇಲ್ಲ. ಪಾರ್ವತಿಯ ಬದುಕು ಈಗಾಗಲೇ ದುಡಿಮೆಯ, ಆರ್ಥಿಕ ಸ್ವಾತಂತ್ರ್ಯದ ಅಭಿರುಚಿಯನ್ನು ಕಂಡುಕೊಂಡ ಹಾಗೆ ಇತ್ತು. ಸುಸಜ್ಜಿತವಾದ ಆ ಹೋಟೆಲ್‌ನ ಒಳಗೆ ಗಂಗಾ ಮುಜುಗರದಿಂದ ನಡೆದರೆ ಪಾರ್ವತಿ ಸಲೀಸಾಗಿ ಒಳ ನಡೆದು ಹೋದಳು. ಗಂಗಾಳಲ್ಲಿದ್ದ ಮುಜುಗರ ಪಾರ್ವತಿಯಲ್ಲಿ ಇರಲಿಲ್ಲ. ಆಕೆ ನೇರವಾಗಿ ಒಳ ಹೋಗಿ ಸಹಜವೆಂಬಂತೆ ಕುಳಿತು ಕೊಂಡಳು. ಸರ್ವರ್‌ಗೆ ಸಹಜವೆಂಬಂತೆ ಆರ್ಡರ್ ಮಾಡಿದಳು. ಪಾರ್ವತಿ ಗಂಗಾಳನ್ನು ಆ ಹೋಟೆಲ್‌ಗೆ ಉದ್ದೇಶಪೂರ್ವಕವಾಗಿಯೇ ಕರೆದುಕೊಂಡು ಹೋಗಿದ್ದಳು. ಗಂಗಾಳಿಗೆ ಪಾರ್ವತಿಯಲ್ಲಿ ಎಷ್ಟು ಆತ್ಮೀಯತೆಯಿತ್ತೋ ಅಷ್ಟೇ ಆತ್ಮೀಯತೆ ಪಾರ್ವತಿಗೂ ಗಂಗಾಳಲ್ಲಿ ಇತ್ತು. ಬೆಂಗಳೂರು ನಗರದಲ್ಲಿ ಈಗಾಗಲೇ ಮೂರು ವರ್ಷ ಬದುಕು ರೂಢಿಸಿಕೊಂಡು ಬದುಕಿದುದರಿಂದ ಪಾರ್ವತಿಗೆ ಈಗಾಗಲೇ ಬೆಂಗಳೂರಿನ ಏಕಾಂಗಿತನ, ಬರಡುತನಗಳು ಅರ್ಥವಾಗತೊಡಗಿತ್ತು. ಗಂಗಾಳನ್ನು ಮೆಜೆಸ್ಟಿಕ್‌ನಲ್ಲಿ ಕಂಡಾಗ ಪಾರ್ವತಿಗೆ ನಿಧಿ ಕಂಡ ಹಾಗೆ ಆಗಿತ್ತು. ಆಕೆಯ ಅಂತರಂಗವನ್ನು ಹಂಚಿಕೊಳ್ಳುವ ಗೆಳತಿಯೋರ್ವಳು ಬೆಂಗಳೂರು ನಗರದಲ್ಲಿ ಆಕೆಗೆ ಬೇಕಿತ್ತು.

ಪಾರ್ವತಿ ಊಟಕ್ಕಾಗಿ ಕಾಯುತ್ತಾ ತನ್ನ ಜೀವನವನ್ನು ಗಂಗಾಳೊಡನೆ ಹಂಚಿಕೊಳ್ಳತೊಡಗಿದಳು. ಆಕೆಯನ್ನು ನೋಡಬಂದವರೆಲ್ಲ ಆಕೆ ಕಪ್ಪು ಎಂದು ತಿರಸ್ಕರಿಸಿ ಹೋಗುತ್ತಿದ್ದುದು ಗಂಗಾಗೂ ತಿಳಿದ ವಿಚಾರವಾಗಿತ್ತು. ಅದೇ ವಿಚಾರವಾಗಿ ಪಾರ್ವತಿಯ ಮನೆಯಲ್ಲಿ ಪದೇ ಪದೇ ಕಿರಿ ಕಿರಿ. ಪ್ರತಿ ಸಾರಿ ಯಾವನಾದರೂ ನೋಡಲು ಬಂದಾಗ ಬಗ್ಗಿ ಏಳುವ, ಶೃಂಗಾರ ಮಾಡಿಕೊಳ್ಳುವ, ಅವನ ಮುಂದೆ ಕುಳಿತುಕೊಳ್ಳುವ ಕ್ರಿಯೆಗಳಿಂದ ಬೇಸತ್ತ ಪಾರ್ವತಿಗೆ ಗೆಳತಿಯರ ಬಳಗದ ಚಟುವಟಿಕೆಗಳು ಜೀವಂತಿಕೆಯ ಕೇಂದ್ರ ಬಿಂದುವಾಗಿದ್ದವು. ಗಂಗಾ ಶಿವಮೊಗ್ಗೆಯಲ್ಲಿದ್ದಾಗಲೂ ಪಾರ್ವತಿ ತಮ್ಮ ಸಂಘಟನೆಯ ಕಾರ್ಯ ಚಟುವಟಿಕೆಗಳಲ್ಲಿಯೇ ಕಾಲ ಕಳೆಯತೊಡಗಿದ್ದಳು. ಆನಂತರ 'ಗೆಳತಿಯರ ಬಳಗದ' ಒಬ್ಬೊಬ್ಬರೇ ಸದಸ್ಯರು ಮದುವೆಯಾಗಿಯೋ ಅಥವಾ ಓದಲೆಂದೋ ಹೊನ್ನೇಕೆರೆ ಬಿಟ್ಟು ಹೋದಾಗ ಪಾರ್ವತಿಗೆ ಹುಚ್ಚು ಹಿಡಿಯುವಂತಾಯಿತು. ಇಂತಹ ಸಂದರ್ಭದಲ್ಲಿಯೇ ಆಕೆಯನ್ನು ನೋಡಲೆಂದು ಒಬ್ಬಾತ ಮನೆಗೆ ಬಂದಾಗ ಅವನ ಮುಂದೆಯೇ ಕೂಗಾಡಿದ್ದಳು. ದೈನ್ಯದಿಂದ ನನ್ನ ಅಪ್ಪ, ಅಮ್ಮ ನಿಮ್ಮ ಕಾಲು ಹಿಡಿಯಬಹುದು. ಇರುವ ಮಗಳೊಬ್ಬಳ ಮದುವೆ ಹೇಗೋ ಆಗಿಬಿಡಲಿ ಎಂದು ಅವರ ಆಸೆ ಇರಬಹುದು. ಆದರೆ ನನ್ನ ಮದುವೆಯಾಗಲಿ ಎಂಬ ಉದ್ದೇಶದಿಂದ ನಾನು ಯಾರ ಕಾಲು ಹಿಡಿಯುವುದಾಗಲೀ, ವರದಕ್ಷಿಣೆಗಾಗಲೀ ತನ್ನನ್ನು ಮಾರಿಕೊಳ್ಳುವುದಾಗಲೀ ಸಾಧ್ಯವೇ ಇಲ್ಲ ಎಂದು ಆಕೆ ಅವರೆಲ್ಲರ ಮುಂದೆ ರೇಗಾಡಿದ್ದಳು. ಬಹುಶಃ ಆ ಸಂಬಂಧ ಆಗುತ್ತಿತ್ತೇನೋ ಎಂದು ಪಾರ್ವತಿಯ ಅಪ್ಪ-ಅಮ್ಮನ ಆಸೆ. ಆದರೆ ಪಾರ್ವತಿ ಹೀಗೆ ಕೂಗಾಡಿ/ರೇಗಾಡಿದ್ದರಿಂದ ಆ ಸಂಬಂಧ ಮುರಿದೇ ಹೋಯಿತು ಎಂದು ಮನೆಯವರೆಲ್ಲರ ಭಾವನೆ. ಅಪ್ಪ/ಅಮ್ಮ ಅವಳಿಗೆ ಕಟುವಾಗಿ ಬಯ್ದಿದ್ದರು. ಅಣ್ಣ ಹಿಡಿದುಕೊಂಡು ಹೊಡೆದಿದ್ದ. ಈಗಾಗಲೇ 20 ವರ್ಷದ ಮುದಿಗ್ಯಾಣ ನೀನು. ಹೀಗೇ ಇದ್ದರೆ ಮದುವೆ ಕಾಣಲ್ಲ ನೀನು ಎಂದಿದ್ದ. ನಿನ್ನಿಂದ ಈ ಮನೆಯಲ್ಲಿ ಯಾರಿಗೆ ಸುಖ ಇದೆ ಎಂದು ಕೂಗಾಡಿದ್ದ. ಅಮ್ಮ ಪಾರ್ವತಿಯೊಡನೆ ಮಾತು-ಕತೆಯನ್ನೇ ಬಿಟ್ಟುಬಿಟ್ಟಿದ್ದರು. ಒಂದು ವಾರದವರೆಗೆ ಮನೆಯಲ್ಲಿ

ರವ ರವ ವಾತಾವರಣ. ಯಾರೂ ಮಾತನಾಡಿಸುತ್ತಲೇ ಇರಲಿಲ್ಲ. ಬೇಕಾದರೆ ಪಾರ್ವತಿಯೇ ಎದ್ದು ಹೋಗಿ ತಿನ್ನಬೇಕು. ಆಕೆ ತನ್ನ ಪಾಲಿನ ಕೆಲಸ ಮಾಡಿಕೊಂಡು ನಂತರ ಏನೋ ಇದ್ದುದನ್ನು ತೆಗೆದುಕೊಂಡು ತಿನ್ನುವಳು. ಗೆಳತಿಯರ ಬಳಗದವರ್ಯಾರೂ ಮನೆ ಕಡೆ ಬರಲಿಲ್ಲವಾದ್ದರಿಂದ ಯಾರೊಬ್ಬರೂ ಸಿಗುವ ಹಾಗೆ ಇರಲಿಲ್ಲ. ಸಂಘ, ಸಂಸ್ಥೆ ಅಂತ ಹೊರಗೆ ಕಾಲಿಟ್ಟರೆ ಕಾಲು ಮುರಿದು ಹಾಕುತ್ತೇವೆ ಎಂದು ಅಪ್ಪ/ಅಣ್ಣ ಇಬ್ಬರೂ ಹೆದರಿಸಿದ್ದರು. 'ನೀನು ಅಲ್ಲಿ ಕೂತು ಬರೆದೂ ಬರೆದೂ ಮಾತಾಡೀನೇ ಈ ಸ್ಥಿತಿಗೆ ಬಂದದ್ದು. ಮದುವೆ ಬೇಡ ಅಂತ ಹಟ ಹಿಡಿದದ್ದು. ನೀನು ಅಲ್ಲಿಗೆ ಹೆಜ್ಜೆ ಇಡಕೂಡದು' ಎಂದು ಕಟ್ಟಾಜ್ಞೆ ಮಾಡಿದ್ದರು. ಇದೆಲ್ಲ ಸಹಿಸಿಕೊಂಡ ಪಾರ್ವತಿಗೆ ಇನ್ನೇನೂ ತನ್ನ ಜೀವನದಲ್ಲಿ ಅರ್ಥವಿಲ್ಲವೇನೋ ಎನ್ನಿಸತೊಡಗಿ ಸಾಯುವ ಯೋಚನೆ ಕೂಡಾ ಮಾಡಿದ್ದಳು. ಮನಸ್ಸಿನ ದುಗುಡ ಕಡಿಮೆಯಾದಾಗ 'ಓದಲಿಕ್ಕಾದರೂ ಕಳಿಸಿ' ಎಂದು ಪಾರ್ವತಿ ಒಂದೇ ಸಮನೆ ಹಟ ಹಿಡಿದು ಕುಳಿತುಬಿಟ್ಟಳು. ಅದಕ್ಕೆ ಅಣ್ಣ 'ಇಷ್ಟು ಓದೀನೇ ಇಷ್ಟು ಹಾರಾಡ್ತೀಯ, ಇನ್ನು ಬಿ.ಎ.ನೋ, ಎಂ.ಎ.ನೋ ಮಾಡಿ ಯಾವುದಾದರೂ ಕೆಲಸಕ್ಕೆ ಸೇರಿದರೆ ನಿನ್ನ ತಲೆ ಮೇಲೇ ನಿಲ್ಲುತ್ತಾ?' ಎಂದು ಬಾಯಿ ಮುಚ್ಚಿಸಿಬಿಟ್ಟಿದ್ದನು. ಆಕೆಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಓದೋಣವೆಂದರೆ ಮನೆಯವರು ಬಿಡುವುದಿಲ್ಲ. ಮದುವೆಯಾದರೆ ಈ ನರಕ ತಪ್ಪುತ್ತದೆಯೋ ಎನ್ನುವುದಕ್ಕೆ ಮದುವೆಗೆ ಆಕೆಯ ಬಣ್ಣವೇ ಅಡ್ಡ ಬರುತ್ತದೆ. ಈ ಸಂದರ್ಭದಲ್ಲಿ ಸೌಂದರ್ಯದ ಕಲ್ಪನೆ, ಕಪ್ಪು ಬಣ್ಣದ ಬಗ್ಗೆ ಲೋಹಿಯಾರವರ ಲೇಖನವೊಂದನ್ನು ಓದಿದ್ದಳು. ಸೌಂದರ್ಯಕ್ಕೆ ಬಣ್ಣವಿರುತ್ತದೆಯೇ ಎಂದು ವಿಶ್ಲೇಷಿಸಿ ಬರೆದ ಲೇಖನ. ಬಣ್ಣ/ಜಾತಿ/ಇಂಗ್ಲೀಷ್ ಈ ಮೂರು ವಿಚಾರಗಳು ಭಾರತೀಯರ ಜೀವನದಲ್ಲಿ ಎಷ್ಟು ಆಟವಾಡಿ ಬಿಡುತ್ತವೆ ಎಂದು ಲೋಹಿಯಾರವರ ಲೇಖನವನ್ನು ಓದಿದಾಗ ತೀವ್ರವಾಗಿ ಅನ್ನಿಸಿ ಆಕೆಯಲ್ಲಿಯೇ ಒಂದು ರೀತಿಯ ಧೈರ್ಯ, ಭರವಸೆಗಳು ಮೂಡಿಬಂದಿದ್ದವು. ತನ್ನ ಅನುಭವಗಳನ್ನೇ ಕತೆ ಮಾಡಿ ಬರೆಯೋಣವೆಂದು ಕುಳಿತುಕೊಂಡಳು. ಅದೇ ವಿವರಗಳು. ಆಕೆ ಕಪ್ಪು ಎಂದು ಮನೆಯವರೆಲ್ಲ ಆಕೆಯಲ್ಲಿ ಹುಟ್ಟಿಸಿದ ಕೀಳರಿಮೆಗಳು. ಮದುವೆ ಮಾರ್ಕೆಟ್‌ನಲ್ಲಿ ಆಕೆಯ ಬಣ್ಣ ಮಾರಾಟಕ್ಕಿಳಿದುದು, ಈ ಮೂಲಕ ಮನೆಯಲ್ಲಿ, ಆಕೆಯ ಮನದಲ್ಲಿ ಉಂಟಾಗುವ ಹಿಂಸೆಗಳು, ಸಾಯುವ ಯೋಚನೆಗಳು ಇತ್ಯಾದಿಗಳ ಸುತ್ತವೇ ಒಂದು ಕತೆ ಬರೆದಿದ್ದಳು. 'ಗೆಳತಿಯರ ಬಳಗ'ದಲ್ಲಿ ಓದಬೇಕೆಂಬುದು ಅವಳ ತೀರ್ಮಾನವಾಗಿತ್ತು. ಆದರೆ ಅಲ್ಲಿಗೆ ಹೋಗಲು ಅಪ್ಪ, ಅಣ್ಣನ ಅಡ್ಡಿ. ಕೊನೆಗೆ ಯಾರದೋ ಮೂಲಕ ಯಾವುದೇ ಪತ್ರಿಕೆಗೆ ಪೋಸ್ಟ್ ಮಾಡಿಸಿದ್ದಳು. ಆ ಕತೆ ಸಂಪಾದಕರ ಮೆಚ್ಚುಗೆ ಪಡೆದು ಪತ್ರಿಕೆಯಲ್ಲಿ ಪ್ರಕಟವಾಗಿ ಬಂದಾಗ ಪಾರ್ವತಿ ತನ್ನ ಕಣ್ಣನ್ನು ತಾನೇ ನಂಬಿರಲಿಲ್ಲ. ಆಕೆಯ ಬದುಕಲ್ಲಿ ಹೊಸ ಆಸೆ, ಭರವಸೆ ಮೂಡಿದ್ದು ಆ ಸಂದರ್ಭದಲ್ಲಿಯೇ. ಪಾರ್ವತಿಯ ಕತೆಯನ್ನು ಓದಿದವರೊಬ್ಬರು ಹೊನ್ನೇಕೆರೆಗೆ ಬಂದಾಗ ಆಕೆಯನ್ನು ಮಾತನಾಡಿಸಲು ಅವರ ಮನೆಗೆ ಹೋಗಿದ್ದರು. ಆಗ ಮನೆಯಲ್ಲಿ ರಾದ್ಧಾಂತವೋ ರಾದ್ಧಾಂತ. ಯಾರು ಹೀಗೆ ಹುಡುಕಿಕೊಂಡು ಬಂದುದು? ಆಕೆಯನ್ನು ಹುಡುಕಿಕೊಂಡು ಯಾಕೆ ಮನೆಗೆ ಬರಬೇಕಿತ್ತು? ಇಷ್ಟು ದಿನ ಮರ್ಯಾದೆ ಕಳೆದುದು ಸಾಲದೇ? ಈಗ ಕತೆಯಲ್ಲಿ ಬರೆದು ಮನೆಯ ಮರ್ಯಾದೆ ಬೀದಿಗೆ ಸಾರಬೇಕಿತ್ತೇ? ಇನ್ನೂ ಎಷ್ಟೂಂತ ಈಕೆಯನ್ನು ಸಹಿಸಿಕೊಂಡು ಇರುವುದು? ಬಹುಶಃ ಈ ರಾದ್ಧಾಂತ ಆ ವ್ಯಕ್ತಿ ಹೋದ ಮೇಲೆ ಆಗಿದ್ದಿದ್ದರೆ ಪರವಾಗಿಲ್ಲವಾಗಿತ್ತೋ ಏನೋ? ಪಾರ್ವತಿ ಅದನ್ನೆಲ್ಲ ಜೀರ್ಣಿಸಿಕೊಂಡು ಬಿಡುತ್ತಿದ್ದಳು. ಆದರೆ ಎಲ್ಲಾ ರಾದ್ಧಾಂತ ನಡೆದುದು ಆ ವ್ಯಕ್ತಿಯ ಮುಂದೆಯೇ. ಆದ್ದರಿಂದ ಪಾರ್ವತಿ ಬಹಳವಾಗಿ ನೊಂದುಕೊಂಡಿದ್ದಳು. ಆ ನಂತರ ಆ ವ್ಯಕ್ತಿ ಧಿಡೀರನೆ

ಎದ್ದು ಹೊರಟು ನಿಂತು 'ನನ್ನ ಹೆಸರು ವೆಂಕಟೇಶ್ ಅಂತ. ನಿಮಗೆ ಯಾವ ತರಹದ ಸಹಾಯ ಬೇಕಿದ್ರೂ ಕಾಗದ ಬರೀರಿ, ಇದರಲ್ಲಿ ಅಡ್ರೆಸ್ ಇದೆ' ಎಂದು ಮ್ಯಾಗಜೈನ್ ಒಂದನ್ನು ಬಿಟ್ಟು ಹೊರಟು ಹೋಗಿದ್ದರು. ಆಕೆ ಇಡೀ ದಿನವೆಲ್ಲ ಕೂತು ಅತ್ತಿದ್ದಳು. ಸಾಯುವ ಯೋಚನೆ, ಸಾಯಬಾರದು ಎನ್ನುವ ಹಟ. ವೆಂಕಟೇಶ್ ಬಂದು ಹೋದ ಮೇಲೆ ಪಾರ್ವತಿ ದಿನವೆಲ್ಲ ಸುಮ್ಮನೇ ಕೂರುವಳು. ಯಾರು ಮಾತನಾಡಿಸಿದರೂ ಮಾತನಾಡುತ್ತಿರಲಿಲ್ಲ. ಯಾರಾದ್ರೂ ಮಾತನಾಡಿಸುವುದಕ್ಕೆ ಬಂದರೆ ಹುಚ್ಚಿಯಂತೆ ರೇಗುವಳು 'ನನ್ನ ಕೊಂದುಬಿಡ್ರಿ' ಅಂತ ಜೋರಾಗಿ ಕಿರುಚುವಳು. ಹೀಗೆಲ್ಲ ಆಗತೊಡಗಿದಾಗ ಮನೆಯವರೆಲ್ಲ ಸ್ವಲ್ಪ ಹೆದರಿದ್ದರು. ಅವಳನ್ನು ನೋಡುವುದಕ್ಕೆಂದು ಯಾರನ್ನೂ ಕರೆತರುತ್ತಿರಲಿಲ್ಲ. ಬರುಬರುತ್ತಾ ಮನೆಯಲ್ಲಿ ಆಕೆಯ ಮದುವೆಯ ಮಾತು ಕತೆಯೇ ನಿಂತುಹೋಯಿತು. ಈ ನಡುವೆ ಪಾರ್ವತಿ ವೆಂಕಟೇಶನಿಗೆ ಒಂದು ಪತ್ರ ಬರೆದು ಹಾಕಿದಳು. 'ದಯವಿಟ್ಟು ಬೆಂಗಳೂರಿನಲ್ಲಿ ಎಲ್ಲಿಯಾದರೂ ಒಂದು ಕೆಲಸ ನೋಡಿ' ಎಂದು. ಪಾರ್ವತಿ ಇದು ಒಂದು ಪ್ರಯತ್ನ ಎಂದಷ್ಟೇ ತಿಳಿದಿದ್ದು. ಈ ಬಗ್ಗೆ ಆಕೆಗೇನೂ ಭರವಸೆ ಇರಲಿಲ್ಲ. ಬರಿಯ ಎಸ್. ಎಸ್. ಎಲ್. ಸಿ. ಆದ ತನಗೆ ಏನು ಕೆಲಸ ಸಿಕ್ಕು ಬಿಡುತ್ತದೆ ಎಂದುಕೊಂಡಿದ್ದಳು. ಹಾಗಾಗಿ ಕಾಗದ ಬರೆದು, ಬರೆದದ್ದನ್ನು ತಾನೇ ಮರೆತು ಬಿಟ್ಟಿದ್ದೆ ಎನ್ನುತ್ತಾಳೆ ಪಾರ್ವತಿ. ಇಷ್ಟೆಲ್ಲ ಮಾತನಾಡುವಾಗ ಪಾರ್ವತಿಯ ಕಣ್ಣಲ್ಲಿ ನೀರು ಧುಮುಕುತ್ತಿತ್ತು. ಆಕೆ ಹೇಳಿದಳು, 'ಗಂಗಾ ನನಗೆ ಈಗ ಅನ್ನುತ್ತೆ ಬದುಕಲ್ಲಿ ಕೆಲವು ಕ್ಷಣಗಳಲ್ಲಿ ರಿಸ್ಕ್ ತೆಗೆದುಕೊಳ್ಳದಿದ್ದರೆ ಬೇರೆಯವರು ಹೇಳಿದ ತರಹ ಬದುಕನ್ನ ರೂಢಿಸಿಕೊಳ್ಳಬೇಕು. ಆ ಸಂದರ್ಭದಲ್ಲಿ ನನಗೆ ಏನು ಅನ್ನಿಸಿತ್ತೋ. ವೆಂಕಟೇಶ್ ಕಾಗದದಲ್ಲಿ ನಿಮಗೆ ಕೆಲಸ ಸಿಕ್ಕಿದೆ, ಬೆಂಗಳೂರಿಗೆ ಬನ್ನಿ ಅಂತ ಬರೆದಾಗ ಮನದೊಳಗೇ ಬಹಳಷ್ಟು ಹೆದರಿಕೆ. ಯಾವತ್ತೋ ಒಂದು ದಿನ ನೋಡಿದ ವ್ಯಕ್ತಿಯೊಬ್ಬನ ಮಾತನ್ನು ನಂಬಿಕೊಂಡು ಮನೆ ಬಿಟ್ಟು ಬೆಂಗಳೂರಿಗೆ ಹೋಗುವುದೇ? ಬೆಂಗಳೂರ್ ಎಂದರೆ ವಿಚಿತ್ರ ಭಯ. ಯಾವ ಯಾವ ರೀತಿಯ ಜನರೋ? ಹೋಗುವುದಾ? ಆ ಕಾಗದ ಯಾರಿಗೂ ಕಾಣದ ಹಾಗೆ ಮನೆಯಲ್ಲಿಯೇ ಬಚ್ಚಿಟ್ಟಿದ್ದೆ. ಹೊನ್ನೇಕೆರೆಯಂತಹ ಹಳ್ಳಿಯೊಂದನ್ನು ಬಿಟ್ಟು ಬೇರೆಯ ಊರನ್ನೇ ಕಂಡವಳಲ್ಲ ನಾನು. ಅಂತಹದರಲ್ಲಿ ಒಂದು ದಿನ ನೋಡಿದ ವ್ಯಕ್ತಿಯ ಮಾತನ್ನು ನಂಬಿಕೊಂಡು ಬೆಂಗಳೂರು ನಗರಕ್ಕೆ ಹೋಗುವುದೇ? ಇಂತಹ ಗೊಂದಲಗಳಲ್ಲಿಯೇ ಹದಿನೈದು ದಿನ ತಳ್ಳಿದೆ. ಗಂಗಾ ಆ ಸಂದರ್ಭದಲ್ಲಿ ನಿನ್ನನ್ನು ಬಹಳವಾಗಿ ನೆನಸಿಕೊಂಡೆ. ನೀನು ಓದೋಕೆ ಅಂತ ರಿಸ್ಕ್ ತೆಗೆದುಕೊಂಡು ಹೋಗದಿದ್ದರೆ ಓದೋಕೆ ಆಗ್ತಾ ಇತ್ತಾ? ನಿನ್ನ ಬಗ್ಗೆ ಆಡಿಕೊಂಡ ಜನರೆಲ್ಲ ಆ ನಂತರ ಹೇಗೆ ಸುಮ್ಮನಾಗಿಬಿಟ್ಟರು? ನಾವು 'ಗೆಳತಿಯರ ಬಳಗ'ದಲ್ಲಿ ಓದುತ್ತಾ ಇದ್ದುದೆಲ್ಲ ಜ್ಞಾಪಕಕ್ಕೆ ಬಂತು. ಆದದ್ದಾಗ್ಲಿ ಅಂತ ಯೋಚನೆ ಮಾಡ್ದೆ. ಹೋಗಿಬಿಡುವುದು ಅಂತ ತೀರ್ಮಾನ ಮಾಡ್ದೆ. ಲಕ್ಷ್ಮಿ ನಿನಗೆ ಗೊತ್ತಲ್ಲ, ತಪ್ಪದೇ ಗೆಳತಿಯರ ಬಳಗಕ್ಕೆ ಬರ್ತಾ ಇದ್ದಲ್ಲ, ಅವಳನ್ನ ಭೇಟಿ ಮಾಡಿ ಇದೆಲ್ಲ ಹೇಳ್ದೆ. ಹೇಗಾದರೂ ಮಾಡಿ ಸಹಾಯ ಮಾಡು ಎಂದೆ. ಆಕೆ ಹಿಂದೆ ಮುಂದೆ ನೋಡದೇ ಸರಿ ಎಂದ್ಲು. ಆಕೆಯ ಹತ್ತಿರವೇ ಇದ್ದ ಚೈನೊಂದನ್ನು ನನಗೆ ಕೊಡೋಕೆ ಬಂದ್ಲು. ನಾನು ಬೇಡ ಅಂದೆ. ಅದಕ್ಕೆ ಸರಿ, ಇನ್ನೂರು ರೂಪಾಯಿ ನಾನೇ ಹೊಂದಿಸಿ ತರುತ್ತೇನೆ ಅಂತ ಲಕ್ಷ್ಮಿ ಹೇಳಿದಳು. ಯಾರಿಗೂ ಹೇಳದೇ ಒಂದು ಮಧ್ಯಾಹ್ನದ ಬಸ್ಸು ಹತ್ತುವುದೆಂದು ನಿರ್ಧರಿಸಿದೆವು. ಲಕ್ಷ್ಮಿ ಅವರ ಮನೆಯಲ್ಲಿ ಗಾಬರಿಯಾಗದಿರುವ ಸೂಚನೆ ಕೊಟ್ಟು ಬರುತ್ತೇನೆ ಎಂದಳು. ನಮ್ಮ ಯೋಚನೆ ಏನಾಗಿತ್ತು ಅಂದರೆ ಬೆಂಗಳೂರಿಗೆ ಬರುವುದು, ವೆಂಕಟೇಶ್ ಕೊಟ್ಟ ಅಡ್ರೆಸ್‌ಗೆ ಹೋಗಿ ನೋಡುವುದು, ಅಲ್ಲಿ ಕೆಲಸ ಸಿಕ್ಕಿತು

ಅಂದ್ರೆ, ಆ ವಾತಾವರಣ ಇಷ್ಟ ಆಯ್ತು ಅಂದ್ರೆ ಪಾರ್ವತಿ ಕೆಲಸಕ್ಕೆ ಸೇರಿ ಬೆಂಗಳೂರಿನಲ್ಲಿಯೇ ನಿಲ್ಲುವುದು, ಲಕ್ಷ್ಮಿ ವಾಪಸ್ಸು ಹೊನ್ನೇಕೆರೆಗೆ ಹೊರಟು ಬಿಡುವುದು. ಹಾಗೆ ಆಗದಿದ್ದ ಪಕ್ಷದಲ್ಲಿ ಲಕ್ಷ್ಮಿಯ ದೂರದ ಸಂಬಂಧಿಯೊಬ್ಬರ ಮನೆಯಲ್ಲಿ ಉಳಿದು ಮರುದಿನ ಹೊನ್ನೇಕೆರೆಗೆ ವಾಪಸ್ಸು ಬರುವುದು. ಗಂಗಾ, ನಾನು ಲಕ್ಷ್ಮೀಗೆ ಎಷ್ಟು ಋಣಿಯಾಗಿದ್ದರೂ ಸಾಲದು. ಆ ಕ್ಷಣದಲ್ಲಿ ಆಕೆ ಧೈರ್ಯ ತುಂಬಿರದಿದ್ದರೆ, ಹಣ ಕಾಸಿನಿಂದ ಹಿಡಿದು ಎಲ್ಲಾ ಜವಾಬ್ದಾರಿನೂ ಆಕೆಯ ತಲೆಯ ಮೇಲೆ ಹಾಕಿಕೊಳ್ಳದಿದ್ದರೆ ನಾನು ಬೆಂಗಳೂರಿಗೆ ಬಂದಿರುತ್ತಲೇ ಇರಲಿಲ್ಲ, ಇಂದು ನಿನ್ನನ್ನು ಭೇಟಿಯಾಗಿ ಕೂಡಾ ಇರುತ್ತಿರಲಿಲ್ಲ. 'ಗೆಳತಿಯರ ಬಳಗ' ನನಗೆ ಎಷ್ಟೊಂದು ಅರ್ಥಪೂರ್ಣವಾಗಿತ್ತು ಎಂದು ನಾನು ಕಂಡುಕೊಂಡದ್ದೇ ಲಕ್ಷ್ಮಿಯ ಸಂಬಂಧದಲ್ಲಿ. ಇಡಿಯ ಐದು ವರ್ಷ ನಮ್ಮೆಲ್ಲರ ಒಡನಾಟ ಒಬ್ಬರಿಗಾಗಿ ಒಬ್ಬರು ತುಡಿಯುವುದನ್ನಾದರೂ ಕಲಿಸಿಕೊಟ್ಟಿತ್ತು. ಗೆಳತಿಯರ ಬಳಗ ಇಲ್ಲದಿದ್ದರೆ ನಾನು ಲಕ್ಷ್ಮಿಯೊಡನೆ ಅಷ್ಟು ಬೆರೆಯಲು ಸಾಧ್ಯವೇ ಇರುತ್ತಿರಲಿಲ್ಲ. ಲಕ್ಷ್ಮಿಯ ಎದುರು ಪ್ರಶ್ನೆಗಳೊಂದಿಗೆ ನಿಂತಾಗ ಆಕೆಗೆ ಎಲ್ಲವನ್ನೂ ನಾನು ಬಿಡಿಸಿ ಹೇಳಬೇಕಾಗಿರಲಿಲ್ಲ. ಆ ಐದು ವರ್ಷಗಳಲ್ಲಿ ಹೋರಾಟದ ಬದುಕೊಂದಕ್ಕೆ ನಾವು ಮಾನಸಿಕವಾಗಿ ಸಿದ್ಧವಾಗಿದ್ದೆವೋ ಏನೋ? ಲಕ್ಷ್ಮಿ ನನ್ನನ್ನು ಅನುಮಾನಿಸಲಿಲ್ಲ, ಅವಿಶ್ವಾಸ ತೋರಿಸಲಿಲ್ಲ. ಬದಲಾಗಿ ನನ್ನ ಜೊತೆ ಬಸ್ಸು ಹತ್ತಿದಳು. ಕಾಣದಿರುವ ಬದುಕಿಗೆ ಹೆಜ್ಜೆ ಇಡಲು ಆಸರೆಯಾಗಿ ನಿಂತಳು.

ಹೀಗೇ ಧೈರ್ಯದಿಂದ ಯಾರಿಗೂ ಹೇಳದ ಹಾಗೆ, ಕಾಣಿಸದ ಹಾಗೆ ಹೊನ್ನೇಕೆರೆಯಿಂದ ನಾವಿಬ್ಬರೂ ಬಸ್ಸು ಹತ್ತಿದೆವು. ಶಿವಮೊಗ್ಗೆಯಲ್ಲಿ ಬೇರೆ ಬಸ್ಸು ಹಿಡಿದು ಬೆಂಗಳೂರಿಗೆ ಬಂದೆವು. ಬೆಂಗಳೂರು ತಲುಪುವವರೆಗೆ ಎದೆಯಲ್ಲಿ ಡವ, ಡವ. ಯಾರೂ ಮಾತನಾಡಲಿಲ್ಲ'.

ಇಷ್ಟೆಲ್ಲ ದೀರ್ಘವಾಗಿ ಮಾತನಾಡುತ್ತಿದ್ದ ಪಾರ್ವತಿಯ ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಇಬ್ಬರದೂ ಊಟ ಹಾಗೆಯೇ ಇತ್ತು. ಪಾರ್ವತಿ ಗಂಗಾಗೆ 'ಊಟ ಮಾಡು' ಎಂದಳು. ನಂತರ ಊಟ ಮಾಡುತ್ತಲೇ ಮುಂದುವರೆಸಿದಳು.

ಇಬ್ಬರೂ ಬೆಂಗಳೂರು ತಲುಪಿದಾಕ್ಷಣ ಆಟೋ ಮಾಡಿ ವೆಂಕಟೇಶ್ ಕೊಟ್ಟ ಅಡ್ರೆಸ್‌ಗೆ ಹೋದರು. ಆಫೀಸಿನಲ್ಲಿಯೇ ತಂಗಿದ್ದ ವೆಂಕಟೇಶ್ ಸಿಕ್ಕಾಗ ಇಬ್ಬರಿಗೂ ಖುಷಿ. ಹತ್ತು ಘಂಟೆಯ ವೇಳೆಗೆ ಎಲ್ಲರು ಬರುತ್ತಾರೆ, ನೀವು ಆವಾಗ ಮಾತನಾಡಬಹುದು ಎಂದು ವೆಂಕಟೇಶ ಹೇಳಿದ್ದ. ಪಾರ್ವತಿ, ಲಕ್ಷ್ಮಿ ಎಲ್ಲಿಗೂ ಹೋಗದೇ ಹತ್ತು ಘಂಟೆಯವರೆಗೆ ಉಸಿರಿಡಿದು ಅಲ್ಲಿಯೇ ಕಾದು ಕುಳಿತಿದ್ದರು. ನಂತರ ಎಷ್ಟೋ ಜನ ಬಂದಿದ್ದರು. ಪಾರ್ವತಿಯ ಹೊನ್ನೇಕೆರೆಯ ಅನುಭವಗಳನ್ನು ಕೇಳಿದರು. ಆಕೆ ಬರೆಯುವ ತನ್ನ ಹವ್ಯಾಸದ ಬಗ್ಗೆ, ಗೆಳತಿಯರ ಬಳಗದಲ್ಲಿ ತಾವು ಮಾಡುತ್ತಿದ್ದ ಚಟುವಟಿಕೆಗಳ ಬಗ್ಗೆ, ತನ್ನ ವೈಯಕ್ತಿಕ ಬದುಕಿನ ಬಗ್ಗೆ ಹಂಚಿಕೊಂಡಿದ್ದಳು. ಹೀಗೇ ಎಲ್ಲಾ ಮಾತನಾಡಿಯಾದ ಮೇಲೆ ಹೆಂಗಸರ ಪ್ರಶ್ನೆಗಳ ಕುರಿತೇ ಆಕೆಗೆ ಕೆಲಸ ಮಾಡಲು ಸಾಧ್ಯವೇ ಎಂದು ವಿಚಾರಿಸಿದ್ದರು. ಪಾರ್ವತಿ ತಕ್ಷಣ ಒಪ್ಪಿಕೊಂಡಿದ್ದಳು. ಒಟ್ಟು ಅಭಿವೃದ್ಧಿಗೋಸ್ಕರ ಕೆಲಸ ಮಾಡುವ ಸಂಸ್ಥೆ, ವಿದೇಶೀ ಹಣದ ನೆರವಿರುವ ಸಂಸ್ಥೆ - ಇಷ್ಟೊಂದು ಮಾತ್ರ ಪಾರ್ವತಿಯ ಗ್ರಹಿಕೆಗೆ ಬಂದ ಅಂಶ. ಅಷ್ಟು ಬಿಟ್ಟರೆ ಆ ಸಂಸ್ಥೆಯ ಚಟುವಟಿಕೆ, ಸಾಂಸ್ಥಿಕ ಸ್ವರೂಪ ಯಾವುದರ ಬಗ್ಗೆಯೂ ಆಕೆಗೆ ತಿಳಿದಿರಲಿಲ್ಲ. ಅಲ್ಲಿರುವವರೆಲ್ಲ ಹೆಚ್ಚು ಕಡಿಮೆ ಇಂಗ್ಲೀಷ್ ಬಲ್ಲವರೇ. ಎಲ್ಲರೂ ಇಂಗ್ಲೀಷಿನಲ್ಲಿಯೇ ಮಾತನಾಡುವವರು. ಅವರು ಮೊದ

ಮೊದಲು ಇಂಗ್ಲೀಷಿನಲ್ಲಿ ಮಾತನಾಡಿದಾಗ ಪಾರ್ವತಿಗೆ ಭಯದ ಜೊತೆಗೆ ಕಣ್ ಕಣ್ ಬಿಡುವ ಹಾಗೆ ಆಗುತ್ತಿತ್ತು. ಹಾ, ಹೂ ಎಂದು ಸುಮ್ಮನಾಗಿಬಿಡುವಳು. ನಂತರ ಹೇಗೆ ಹೇಗೋ ಕನ್ನಡದಲ್ಲಿ ಅವರೇ ಮಾತನಾಡಿಸಿದ್ದರು. ಅಂದು ಆಫೀಸಿನಲ್ಲಿಯೇ ಊಟ/ತಿಂಡಿ ಕೊಟ್ಟಿದ್ದರು. ಲಕ್ಷ್ಮೀ ಕೂಡಾ ಅಲ್ಲಿಯೇ ಇದ್ದಳು. ನಂತರ ಅವರಿಬ್ಬರೂ ಲಕ್ಷ್ಮಿಯ ಸಂಬಂಧಿಕರ ಮನೆ ಹುಡುಕಿ ಹೋಗಿದ್ದರು. ಪಾರ್ವತಿಗೆ ಕೆಲಸ ಸಿಕ್ಕಾಗಿ, ಆಕೆಗೆ ಮನೆ ಮಾಡಲು ಅಡ್ವಾನ್ಸ್ ಸಿಕ್ಕಾದ ಮೇಲೆ ಲಕ್ಷ್ಮಿ ಪಾರ್ವತಿಯಿಂದ ಬೀಳ್ಕೊಟ್ಟು ಹೊನ್ನೇಕೆರೆಗೆ ಹೊರಟು ಹೋಗಿದ್ದಳು. ಲಕ್ಷ್ಮಿಯನ್ನು ಕಳಿಸುವಾಗ ತಾವಿಬ್ಬರು ಬಿಕ್ಕಿ ಬಿಕ್ಕಿ ಅತ್ತದ್ದನ್ನು ಪಾರ್ವತಿ ನೆನಸಿಕೊಂಡು ಭಾವೋನ್ಮುಖಳಾದಳು.

'ಬದುಕಲ್ಲಿ ರಿಸ್ಕ್ ತೆಗೆದುಕೊಳ್ಳುವಾಗ ಉಂಟಾಗುವ ಭಾವೋದ್ವೇಗ ಎಷ್ಟು ತೀವ್ರತರನಾದದ್ದಲ್ಲವೇ ಗಂಗಾ'. ಎಂದಳು ಪಾರ್ವತಿ. ಹೀಗೆ ಭಾವೋದ್ವೇಗದ ಕ್ಷಣಗಳನ್ನೆಲ್ಲ ಮೀರಿ ತಾನು ಅಂದು ಹೊನ್ನೇಕೆರೆ ತೊರೆದು ಬರದಿದ್ದರೆ ಅಥವಾ ಲಕ್ಷ್ಮೀಯಂತಹ ಗೆಳತಿ ತನ್ನ ಆತಂಕಕ್ಕೆ ಆಸರೆಯಾಗಿ ನಿಲ್ಲದಿದ್ದರೆ ತಾನು ಏನಾಗಿಬಿಡುತ್ತಿದ್ದೆನೋ ಎನ್ನುತ್ತಾಳೆ. 'ಅಂದು ಲಕ್ಷ್ಮೀ ಜೊತೆಗಿರದಿದ್ದರೆ ಇಷ್ಟು ಭರವಸೆಯುಳ್ಳ ಪಾರ್ವತಿಯನ್ನು ನೀನು ಕಾಣುತ್ತಿರಲಿಲ್ಲ ಗಂಗಾ' ಎಂದಳು. ಗಂಗಾಗೆ ಆಶ್ಚರ್ಯವಾಯಿತು. ತಾವೆಲ್ಲರೂ 'ಗೆಳತಿಯರ ಬಳಗ'ದ ಅಡಿಯಲ್ಲಿ ಒಟ್ಟಿಗೆ ಬಂದದ್ದು ಸ್ಪಾಂಟೇನಿಯಸ್ ಆಗಿ, ಒತ್ತಡಗಳ ಬದುಕಿನ ಮೂಲಕವಾಗಿ. ಆ ಐದು ವರ್ಷದ ಚಟುವಟಿಕೆಗಳು, ಆ ಹಂತದ ಮಾನಸಿಕ ಸಿದ್ಧತೆಗಳು ಹೀಗೆ ನೆರವಾಯಿತಲ್ಲ ಎನ್ನುವ ಭಾವ ಗಂಗಾಳಲ್ಲಿ ಹರಿದು ಹೋಯಿತು. ಈ ಎರಡು-ಮೂರು ವರ್ಷದ ಅಂತರದಲ್ಲಿ, ಆಕೆಗೆ ಸಿಕ್ಕ ಆರ್ಥಿಕ ಸ್ವಾತಂತ್ರ್ಯದಲ್ಲಿ ಪಾರ್ವತಿ ಎಷ್ಟೆಲ್ಲ ಮಾನಸಿಕವಾಗಿ ಬೆಳೆದು ಬಿಟ್ಟಿದ್ದಾಳಲ್ಲ ಎಂಬ ಆಶ್ಚರ್ಯದ ಜೊತೆಗೆ ಗಂಗಾಗೆ ಸಂತೋಷವೂ ಆಯಿತು. ಪಾರ್ವತಿ ಸಂಜೆ ಕಾಲೇಜಿನಲ್ಲಿ ಈಗ ಓದುತ್ತಿರುವುದಾಗಿ ತಿಳಿಸಿದಳು. ಈಗ ಪ್ರಥಮ ಬಿ.ಎ. ಓದುತ್ತಿದ್ದ ಪಾರ್ವತಿ ಓದಬೇಕೆಂದಿದ್ದ ತನ್ನ ಆಸೆಗಳು ಈಗ ಪೂರೈಸುತ್ತಿವೆ ಎಂದಳು. ಆಕೆ ಹೇಳಿದಳು, 'ಗಂಗಾ ನೀನು ಕಾಲೇಜು ಓದಲಿಕ್ಕೆಂದು ಊರು ಬಿಟ್ಟು ಹೋಗಿದ್ದೆಯಲ್ಲ ಆಗ ನಿನ್ನಲ್ಲಿ ಇದ್ದಿರಬಹುದಾದ ತುಮುಲಗಳನ್ನೆಲ್ಲ ನಾನು ಆ ನಂತರದ ದಿನಗಳಲ್ಲಿ ಯೋಚಿಸುತ್ತಿದ್ದೆ. ಗಂಗಾ ನಿನ್ನ ಬದುಕೂ ಕೂಡಾ ಎಲ್ಲಿಯೋ ನನಗೆ ಸ್ಫೂರ್ತಿಯಾಗಿರಬಹುದು' ಗಂಗಾಗೆ ಎದೆ ತುಂಬಿ ಬಂತು. ಗಂಗಾ ಹೇಳಿದಳು, 'ಹೊನ್ನೇಕೆರೆ ಬಿಟ್ಟು ಬರುವುದಕ್ಕೆ ನನ್ನ ಬದುಕು ನಿನಗೆ ಸ್ಫೂರ್ತಿಯಾಗಿರಬಹುದು ಪಾರ್ವತಿ, ಆದರೆ ಈಗ ನಿನ್ನಲ್ಲೇ ಆ ಸ್ಫೂರ್ತಿಯನ್ನು ನಾನು ಹುಡುಕಬೇಕು. ಈಗಾಗಲೇ ಬೆಂಗಳೂರಿನ ಜೀವನಕ್ಕೆ ಹೊಂದಿಕೊಂಡವಳು ನೀನು. ಈಗ ತಾನೆ ಈ ನಗರಕ್ಕೆ ನಾನು ಕಾಲಿಡುತ್ತಿದ್ದೇನೆ. ಈ ನಗರದಲ್ಲಿ ಬದುಕನ್ನು ಬಂಧಿಸಿಕೊಳ್ಳಲು ಕೇಂದ್ರ ಬಿಂದುವೊಂದಕ್ಕಾಗಿ ನಾನು ಹುಡುಕಾಡುತ್ತಿದ್ದೆ. ನನ್ನನ್ನು ತೊಡಗಿಸಿಕೊಳ್ಳುವ ಕೇಂದ್ರ ಬಿಂದುವಿಗಾಗಿ, ಚಟುವಟಿಕೆಗಳಿಗಾಗಿ ನಾನು ಹುಡುಕಾಡುತ್ತಿದ್ದೆ. ಪಾರ್ವತಿ ಈಗ ನನ್ನ ಬದುಕಿನ ಸ್ಫೂರ್ತಿಯನ್ನು ನಿನ್ನಲ್ಲೇ ನಾನು ಹುಡುಕಬೇಕಿದೆ'.

ಹೀಗೆ ಗಂಗಾ/ಪಾರ್ವತಿ ಇಬ್ಬರೂ ಆಕಸ್ಮಿಕವಾಗಿ ಭೇಟಿಯಾದುದು ಅವರ ಜೀವನಕ್ಕೆ ಚೇತನವೊದಗಿದಂತಾಗಿತ್ತು. ಪಾರ್ವತಿ ಅವರ ಆಫೀಸಿನ ಹತ್ತಿರವೇ ಒಂದು ಮನೆ ಮಾಡಿದ್ದಳು. ಮೊದಲು ಆಕೆಯೂ ಹಾಸ್ಟೆಲ್‌ನಲ್ಲಿಯೇ ಇದ್ದಳು. ನಂತರದ ದಿನಗಳಲ್ಲಿ ಹಾಸ್ಟೆಲ್ ವ್ಯವಸ್ಥೆ ಸರಿ ಹೊಂದದ ಕಾರಣ ಆಫೀಸ್ ಹತ್ತಿರವೇ ಮನೆ ಮಾಡಿಕೊಂಡಳಂತೆ. ಮೊದ ಮೊದಲು ಒಬ್ಬಳೇ ಬೆಂಗಳೂರಿನಂತಹ

ನಗರದಲ್ಲಿ ಇರುವುದಕ್ಕೆ ಭಯವಾಗುತ್ತಿತ್ತು. ಆದರೆ ಈಗ ಏನಿಲ್ಲ ಎಂದು ನಕ್ಕಳು. ಊಟ ಮುಗಿದಾದ ಮೇಲೆ ಪಾರ್ವತಿ ಕಾಫಿಗೆ ಆರ್ಡರ್ ಮಾಡಿದಳು. ಕಾಫಿ ಕುಡಿದು ಏಳುವಾಗ 'ಗಂಗಾ ಈಗ ಜೊತೆಯಾಗಿ ನಿನ್ನ ಹಾಸ್ಟೆಲ್‌ಗೆ ಹೋಗೋಣ. ಈ ದಿನ ನಿನ್ನ ಸಾಮಾನೆಲ್ಲ ಪ್ಯಾಕ್ ಮಾಡಿಕೊಂಡು ನಾಳೆ ಬೆಳಿಗ್ಗೆ ನನ್ನ ಮನೆಗೆ ಹೊರಟು ಹೋಗೋಣ. ಇನ್ನು ಮೇಲೆ ನಮ್ಮಿಬ್ಬರ ಮನೆ ಅದು'. ಗಂಗಾಗೆ ಮಾತನಾಡುವುದಕ್ಕೂ ಪಾರ್ವತಿ ಅವಕಾಶ ಕೊಡಲಿಲ್ಲ. ಹೀಗೇ ಹೊನ್ನೇಕೆರೆಯ ಇಬ್ಬರು ಹುಡುಗಿಯರು ಬೆಂಗಳೂರಿನ ಮಹಾನಗರದಲ್ಲಿ ಒಬ್ಬರಿಗೊಬ್ಬರು ಅನುವಾಗಿ ಆದರ್ಶದ ಬದುಕಿನ ಹೊಂಗನಸುಗಳನ್ನು ಹೆಣೆಯತೊಡಗಿದ್ದರು.

* * * * *

ಮತ್ತೆ ಕ್ರಾಂತಿಯ ಕನಸುಗಳು. ಪಾರ್ವತಿ ಬೆಂಗಳೂರಿನಲ್ಲಿ ಸಿಕ್ಕಿದುದರಿಂದ ಗಂಗಾಳ ಮನಸ್ಸಿಗೆ, ದೇಹಕ್ಕೆ ಹೊನ್ನೇಕೆರೆಯಲ್ಲಿ ಇದ್ದ ಬಲವನ್ನೇ ತುಂಬಿತ್ತು. ಬದುಕಿನಲ್ಲಿ ಈಗ ಗಂಗಾಗೆ ಎಲ್ಲಾ ಇತ್ತು. ಬಯಸಿದ ಕೆಲಸ, ಕೈಯಲ್ಲಿ ದುಡ್ಡು, ಆತ್ಮೀಯತೆಗೆ ತುಡಿಯುವ ಹತ್ತಿರದ ಜೀವ ಪಾರ್ವತಿ. ಗಂಗಾಳೇನೂ ಈಕೆಯಲ್ಲಿ ಮಾತನಾಡಿ, ಬೆರೆತು ಸ್ನೇಹ ಸಂಬಂಧ ಬೆಳೆಸಿಕೊಳ್ಳಬೇಕಿರಲಿಲ್ಲ. ಹೊನ್ನೇಕೆರೆಯಲ್ಲಿಯೇ ಇವರ ಸ್ನೇಹ ಸಂಬಂಧ ಬೇರು ಬಿಟ್ಟಿತ್ತು. ಆ ಬೇರುಗಳೇ ಬೆಂಗಳೂರಿನಲ್ಲಿ ಕವಲೊಡೆಯತೊಡಗಿದ್ದವು ಕೂಡಾ. ಪಾರ್ವತಿ ಕೆಲಸ ಮಾಡುತ್ತಿದ್ದುದು ಅಭಿವೃದ್ಧಿ ಚಟುವಟಿಕೆಯ ಸಂಸ್ಥೆಯೊಂದರಲ್ಲಿ. ಹೊನ್ನೇಕೆರೆಯ ಸಂಘಟನೆಯ ಒಂದು ದೊಡ್ಡ ಭಾಗವಾಗಿದ್ದಂತೆ ಈ ಸಂಸ್ಥೆ ಗಂಗಾಳ ಕಣ್ಣಿಗೆ ಕಾಣಿಸಿದ್ದುಂಟು. ಹೊನ್ನೇಕೆರೆ ಒಂದು ಪುಟಾಣಿ ಹಳ್ಳಿ, ಬೆಂಗಳೂರು ಒಂದು ದೊಡ್ಡ ನಗರ. ತಾವೆಲ್ಲರೂ ಅಲ್ಲಿ ಒಟ್ಟಿಗೇ ಕುಳಿತು ಮಾತನಾಡುತ್ತಿದ್ದೆವು. ಇಲ್ಲಿಯೂ ಅಂತಹ ವಿಚಾರಗಳೇ. ಹೊನ್ನೇಕೆರೆಯಲ್ಲಿ ರಾಜಕೀಯವನ್ನು ಹತ್ತಿರದಿಂದ ಕಾಣದಿದ್ದ ಪಾರ್ವತಿ-ಗಂಗಾಗೆ ಬೆಂಗಳೂರಿನಲ್ಲಿ ರಾಜಕೀಯದ ಹಲವಾರು ಮುಖಗಳು ಹತ್ತಿರದಿಂದ ಕಾಣಿಸತೊಡಗಿದ್ದವು. ಪಾರ್ವತಿ ಈಗ ಬಿ.ಎ. ಕೊನೆಯ ವರ್ಷದಲ್ಲಿ ಓದತೊಡಗಿದ್ದಳು. ಆಕೆಯ ಬಿಡುವಿನ ಸಮಯದಲ್ಲಿ ಓದುತ್ತಾ ಸಮಯ ಕಳೆಯುವುದೇ ಆಕೆಯ ಹವ್ಯಾಸ. ಈಗ ನಾಲ್ಕು-ಐದು ವರ್ಷಗಳ ಅವಧಿಯಲ್ಲಿ ಬೆಂಗಳೂರಿನಲ್ಲಿ ಸಾಕಷ್ಟು ಕ್ರಿಯಾಶೀಲಳಾಗಿ ಕೆಲಸ ಮಾಡುತ್ತಿದ್ದ ಪಾರ್ವತಿಯ ಬೌದ್ಧಿಕ ಮಟ್ಟ, ವೈಚಾರಿಕ ಮಟ್ಟ ಸಾಕಷ್ಟು ಬೆಳೆದಿತ್ತು. ಮಹಿಳೆಯರ ಪ್ರಶ್ನೆಗಳನ್ನು ರಾಜಕೀಯ ಚೌಕಟ್ಟಿನಲ್ಲಿಟ್ಟು ವಾದ ಮಾಡುವ, ಚರ್ಚೆ ಮಾಡುವ, ಚರ್ಚೆ ಮಾಡುತ್ತಲೇ ಅತ್ತು ಬಿಡುವ ಪಾರ್ವತಿಯನ್ನು ಕಂಡಾಗಲೆಲ್ಲಾ ಗಂಗಾಗೆ ಪ್ರೀತಿಯೆನಿಸುತ್ತಿತ್ತು. ಇಷ್ಟು ವರ್ಷಗಳ ಅವಧಿಯಲ್ಲಿ ಇಂಗ್ಲೀಷ್ ಮಾತನಾಡುವುದನ್ನು ಕೂಡಾ ಪಾರ್ವತಿ ಚೆನ್ನಾಗಿ ಅಭ್ಯಾಸ ಮಾಡಿದ್ದಳು. ಬೆಂಗಳೂರಿಗೆ ಹೊಸದಾಗಿ ಬಂದ ಗಂಗಾ ಇನ್ನೂ ತನ್ನ ಸುತ್ತ-ಮುತ್ತ ಕಣ್ಣು ಬಿಡುತ್ತಿರುವಾಗಲೇ ಗಂಗಾಳನ್ನು ಬೆಂಗಳೂರಿನ ಹಲವಾರು ಮುಖಗಳಿಗೆ ಒಗ್ಗಿಸಿದವಳು ಪಾರ್ವತಿಯೇ. ಉಡುಗೆ-ತೊಡುಗೆಗಳಲ್ಲಿ ಪಾರ್ವತಿಯ ವ್ಯಕ್ತಿತ್ವಕ್ಕೆ ಬೆಂಗಳೂರಿನ ಗಾಳಿ ಬೀಸಿದ್ದರೂ ಆಕೆಯ ಮನಸ್ಸಿನಲ್ಲಿ ಅದೇ ಹೊನ್ನೇಕೆರೆಯ ಮುಗ್ಧತೆ, ಉತ್ಸಾಹ, ಆತ್ಮೀಯತೆ. ತನ್ನ ಬದುಕಿನ ನೋವಿಗೆ ಈಗ ಪಾರ್ವತಿ ರಾಜಕೀಯದ ಚೌಕಟ್ಟಿನಲ್ಲಿ ಒಂದು ರೂಪ ಕೊಡಲು ಪ್ರಯತ್ನಿಸುತ್ತಿದ್ದಳು. ಈಕೆ ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದುದೇ ಮಹಿಳೆಯರಿಗಾಗಿ. ಅನೇಕ ರೀತಿಯಲ್ಲಿ ನೊಂದ ಮಹಿಳೆಯರಿಗೆ ಈಕೆ ಬೆಚ್ಚಗಿನ ಸಂಬಂಧವಾಗಿದ್ದಳು. ಹೊನ್ನೇಕೆರೆಯಲ್ಲಿನ ಆಕೆಯ ವೈಯಕ್ತಿಕ ಅನುಭವಗಳು ಪಾರ್ವತಿಯನ್ನು ನೊಂದ

ಮಹಿಳೆಯರ ಸಂಬಂಧಗಳಲ್ಲಿ ಬೆಚ್ಚಗಿಡುವಂತೆ ಮಾಡುತ್ತಿತ್ತು. ತಾವು ಹೊನ್ನೇಕೆರೆಯಲ್ಲಿ ಹತ್ತಾರು ಹುಡುಗಿಯರು ಸೇರಿ ಒಂದು ಸಂಘಟನೆಯಡಿಯಲ್ಲಿ ಬಂದುದು, ಹಾಗೂ ತಾವು ಹಸ್ತಪ್ರತಿಯಲ್ಲಿ ಪತ್ರಿಕೆ ತಂದುದು, ವಾರ ವಾರ ಸಭೆ ಸೇರಿ ಮಾತನಾಡುತ್ತಿದ್ದುದು, ನಾಟಕ ಮಾಡಿದುದು ಇಂತಹ ಚಟುವಟಿಕೆಗಳ ಹಿಂದೆಯೇ ಒಂದು ರಾಜಕೀಯ ಕಲ್ಪನೆ ತಮಗೆ ಗೊತ್ತಿಲ್ಲದ ಹಾಗೆ ಇತ್ತು ಎಂದು ಆಗಾಗ್ಗೆ ಪಾರ್ವತಿ ನುಡಿಯುತ್ತಿದ್ದಳು. ಅಲ್ಲಿ ಮಹಿಳಾ ಪ್ರಶ್ನೆ, ಅದರಲ್ಲಿರುವ ರಾಜಕೀಯ ಪ್ರಶ್ನೆಗಳು ಇಂತಹವುಗಳೇನೂ ಗೊತ್ತಿರಲಿಲ್ಲ. ಆದರೂ ಅಲ್ಲಿ ತಾವೆಲ್ಲ ಒಂದು ಹಂತದಲ್ಲಿ ಒಟ್ಟಾಗಿ ಸೇರಿದ್ದೆವು, ಆದರೆ ಇಲ್ಲಿ ಸಂಘಟನೆ ಎಂಬುದಕ್ಕೇ ರಾಜಕೀಯ ಅರ್ಥ ಇದೆಯಲ್ಲವೇ ಎಂದು ಪಾರ್ವತಿ ಗಂಗಾಳೊಟ್ಟಿಗೆ ನುಡಿವಳು. ಹೊನ್ನೇಕೆರೆಯಲ್ಲಿ ಸ್ಪಾಂಟೇನಿಯಸ್ ಆಗಿ ತಮ್ಮ ಬದುಕನ್ನು ಒಟ್ಟಿಗೆ ಕುಳಿತುಕೊಂಡು ಹಂಚಿಕೊಂಡು ಒಂದು ಅರ್ಥ ಕಂಡುಕೊಳ್ಳಲು ಪ್ರಯತ್ನಿಸಿದ್ದುಂಟು. ಇಲ್ಲಿ ತಾತ್ವಿಕ ನೆಲೆಯಲ್ಲಿಯೇ ಸಂಘಟನೆಗೆ, ಹಂಚಿಕೊಳ್ಳುವಿಕೆಗೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅರ್ಥ ಸಿಗುತ್ತದೆ. ಗಂಗಾಳಿಗೆ ಕಾಲೇಜಿನಲ್ಲಿ ಕೆಲಸದ ಅವಧಿ ಕಡಿಮೆ ಇತ್ತು. ಹಾಗಾಗಿ ಕೆಲಸ ಮುಗಿದಾಕ್ಷಣ ಗಂಗಾ ಪಾರ್ವತಿಯನ್ನು ಹುಡುಕಿಕೊಂಡು ಅವರ ಆಫೀಸಿಗೆ ಹೋಗುವಳು. ಪಟಾ ಪಟಾ ಅಂತ ಇಂಗ್ಲೀಷಿನಲ್ಲಿ ಮಾತನಾಡಿಸಿದರೆ ಗಂಗಾಗೆ ಪಾರ್ವತಿಯ ಹಾಗೆ ಮೊದ ಮೊದಲು ದಿಗಿಲಾಗುತ್ತಿತ್ತು. ಅಷ್ಟೊಂದು ಸರಾಗವಾಗಿ, ಪಟ ಪಟನೇ ಮಾತಾಡಿ ಅಭ್ಯಾಸವಿರದ ಗಂಗಾ ಪಾರ್ವತಿಯ ಮುಖ ನೋಡುವಳು. ಪಾರ್ವತಿ ಇಂತಹ ಸಂದರ್ಭಗಳನ್ನು ಹಗುರಗೊಳಿಸಿಬಿಡುತ್ತಿದ್ದಳು. ಫೋನ್‌ನಲ್ಲಿ ನಿರ್ಭೀತಿಯಿಂದ ಇಂಗ್ಲೀಷ್‌ನಲ್ಲಿ ಮಾತನಾಡುವ ಪಾರ್ವತಿಯನ್ನು ಕಂಡರೆ ಗಂಗಾಗೆ ಅವ್ಯಕ್ತ ಭಯ. ಫೋನ್, ಕಮೋಡ್ ತರಹ ಟಾಯ್‌ಲೆಟ್, ಲಿಫ್ಟ್ ಇಂತಹವುಗಳನ್ನು ಹೊನ್ನೇಕೆರೆಯಲ್ಲಿ ಪಾರ್ವತಿಯಾಗಲೀ, ಗಂಗಾಳಾಗಲೀ ಕಂಡವರಲ್ಲ. ಮೈಸೂರಿನಲ್ಲಿ ಗಂಗಾಳ ಗಮನವೆಲ್ಲ ಎಂ.ಎ. ಮುಗಿಸಿ ಅಧ್ಯಾಪಕಿಯಾಗುವುದರಲ್ಲೇ ಇತ್ತು. ಹಾಗಾಗಿ ಆಕೆ ತಾನಾಯಿತು, ತನ್ನ ಓದಾಯಿತು ಎಂಬಂತೆ ಇದ್ದುಬಿಡುತ್ತಿದ್ದಳು. ಓದಿ ಕೆಲಸಕ್ಕೆ ಸೇರದಿದ್ದರೆ ತನ್ನ ಜೀವನಕ್ಕೆ ಆಯ್ಕೆಗಳಿರುವುದಿಲ್ಲ ಎಂಬುದು ಆಕೆಗೆ ಅರ್ಥವಾಗಿತ್ತು. ಹಟ ಮಾಡಿಯೇ ತಾನು ಓದಲು ಬಂದದ್ದು. ಎಲ್ಲೂ ಫೇಲಾಗದೇ ಫಸ್ಟ್ ಕ್ಲಾಸ್ ಅಥವಾ ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾಗುತ್ತಿರುವುದಕ್ಕೆ ಅಪ್ಪ, ಅಣ್ಣ ಹೇಗೋ ಒಪ್ಪಿಕೊಂಡು ದುಡ್ಡು ಕಳಿಸುತ್ತಿದ್ದಾರೆ. ಒಮ್ಮೆ ವಿದ್ಯಾಭ್ಯಾಸದಲ್ಲಿ ಎಡವಿದರೂ ತನ್ನ ಸ್ಥಿತಿ ದುಸ್ತರವಾಗುತ್ತದೆ ಎಂಬುದು ಆಕೆಗೆ ಅರಿವಿತ್ತು. ಹಾಗಾಗಿ ಎಂ.ಎ. ಮಾಡುವಾಗ ಎರಡು ವರ್ಷ ಗಂಗಾ ಬಹಳ ಎಚ್ಚರಿಕೆ ವಹಿಸಿದ್ದಳು. ಹಾಸ್ಟೆಲ್‌ನ ಕೋಣೆಯೊಳಗೆ ಕೂತು ಮೂರೂ ಹೊತ್ತು ಓದುವಳು. ಫೋನ್, ಲಿಫ್ಟ್ ಇಂತಹ ಸಂಗತಿಗಳೂ ಕೂಡಾ ಆಕೆಗೆ ಅಪರಿಚಿತ ಜಗತ್ತಾಗಿದ್ದವು. ಪಾರ್ವತಿಯ ಸಾನಿಧ್ಯದಲ್ಲಿ ಗಂಗಾ ಇಂತಹ ಗೊಂದಲ, ಗಡಿಬಿಡಿಯ ಬದುಕಿಗೆ ನಿಧಾನವಾಗಿ ಹೊಂದಿಕೊಳ್ಳತೊಡಗಿದ್ದಳು. ಆದರೂ ಪಾರ್ವತಿ ಕೆಲಸ ಮಾಡುತ್ತಿದ್ದ ಸಂಸ್ಥೆಯ ರಾಜಕೀಯ ಪರಿಕಲ್ಪನೆಯ ಚಿತ್ರಣವೇ ಆಕೆಯ ಗ್ರಹಿಕೆಗೆ ಬರುತ್ತಿರಲಿಲ್ಲ. ಪಾರ್ವತಿಯನ್ನು ಕೆಲಸಕ್ಕೆ ಸೇರಿಸಿದ ವೆಂಕಟೇಶ್ ಕೂಡಾ ಅಲ್ಲಿಯೇ ಕೆಲಸ ಮಾಡುತ್ತಿದ್ದ. ಇದು ಒಂದು ರೀತಿಯ ಜಡತ್ವದ ಸರ್ಕಾರಿ ಸಂಸ್ಥೆಯ ರೀತಿಯದಂತೂ ಅಲ್ಲ ಎಂದು ಆಕೆಗೆ ಮೊದ ಮೊದಲು ಅನ್ನಿಸುತ್ತಿತ್ತು. ಆ ಸಂಸ್ಥೆಯ ಲೋಕವೇ ಗಂಗಾಗೆ ಪ್ರಥಮ ದಿನಗಳಲ್ಲಿ ವಿಚಿತ್ರವಾಗಿ ಕಾಣುತ್ತಿತ್ತು. ಹತ್ತಾರು ಬಗೆಯ ಜನರನ್ನು ಆಕೆ ಈ ಸಂಸ್ಥೆಯಲ್ಲಿ ಕಂಡಿದ್ದಳು. ಕನ್ನಡವೇ ಬಾರದ ಹಲವಾರು ಕ್ರಿಶ್ಚಿಯನ್ನರು, ಇಂಗ್ಲೀಷ್-ಕನ್ನಡ ಬಳಸಬಲ್ಲ ಅನೇಕ ಸೃಜನಶೀಲ ಬರಹಗಾರರು, ಕನ್ನಡ ಮಾತನಾಡದ ಕಲಾವಿದರು, ಇಂಗ್ಲೀಷ್ ಭಾಷೆಯ

ಸೋಂಕೂ ಇರದ, ಕನ್ನಡ ಬರೆಯಲೂ ಬಾರದಿರುವ ಸದಾ ಕ್ರಿಯೆಗಳಲ್ಲಿಯೇ ತೊಡಗಿರುವ ಕಾರ್ಯಕರ್ತರು ಹೀಗೆ ಅನೇಕ ಜನರು ಅಲ್ಲಿ ಕೆಲಸ ಮಾಡುವುದನ್ನು ಗಂಗಾ ಕಂಡಿದ್ದಳು. ಈ ಲೋಕವೇ ವಿಚಿತ್ರವಾಗಿ ಕಾಣಿಸುತ್ತಿತ್ತು. ಒಂದು ಬಗೆಯ ಸೃಜನಾತ್ಮಕತೆಯ ಕೇಂದ್ರ ಬಿಂದುವೇನೋ ಇದು ಎನ್ನಿಸತೊಡಗಿತ್ತು. ಆದರೂ ಅವರ ರಾಜಕೀಯ ನಿಲುವನ್ನು ಗ್ರಹಿಸಲು ಗಂಗಾಗೆ ಪ್ರಯತ್ನಿಸಿದಷ್ಟೂ ಅರ್ಥವಾಗುತ್ತಿರಲಿಲ್ಲ. ರವಿಯ ಜೊತೆಗಿದ್ದ ಸಂದರ್ಭದಲ್ಲಿ ಹಾಗೂ ಶಿವಮೊಗ್ಗೆಯ ವಾತಾವರಣದಲ್ಲಿ ಆಕೆ ಹಲವಾರು ಮಾರ್ಕ್ಸಿಸ್ಟ್‌ರನ್ನು ಕಂಡಿದ್ದಳು. ಆಕೆ ಕಂಡಿದ್ದ ಮಾರ್ಕ್ಸಿಷ್ಟರು ಕ್ರಿಯೆಗಳಲ್ಲಿ ತೊಡಗಿಕೊಂಡ ಮಾರ್ಕ್ಸಿಸ್ಟರಲ್ಲ. ಬೌದ್ಧಿಕ ಚರ್ಚೆಯಲ್ಲಿ ಪಾಲ್ಗೊಂಡವರು ಮಾತ್ರ. ಈ ನಿಲುವಿನಿಂದ ನಾಟಕ ಮಾಡಿಸಿದ ಮಾರ್ಕ್ಸಿಸ್ಟರನ್ನು ಈಕೆ ಕಂಡಿದ್ದಳು. ಈಕೆಯೂ ಕೆಲವು ನಾಟಕದಲ್ಲಿ ಪಾತ್ರ ವಹಿಸಿದ್ದಳೂ ಕೂಡಾ. ಇದರ ಹೊರತಾಗಿ ಸಂಘಟನೆಗಳಲ್ಲಿ ತೊಡಗಿದವರನ್ನು, ಜನರನ್ನು ಸಂಘಟಿಸುವ ಕ್ರಿಯಾಶೀಲ ಮಾರ್ಕ್ಸ್‌ವಾದಿಗಳನ್ನು ಹತ್ತಿರದಿಂದ ಕಂಡವಳಲ್ಲ. ಈಗ ಪಾರ್ವತಿ ಕೆಲಸ ಮಾಡುತ್ತಿದ್ದ ಸಂಸ್ಥೆ ಈ ರೀತಿಯ ಐಡಿಯಲಿಸಂನ್ನು ವಾಸ್ತವಿಕತೆಗೆ ತರಬೇಕೆಂಬ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದ ಸಂಸ್ಥೆಯೆಂದು ಪಾರ್ವತಿ ಗಂಗಾಗೆ ಹೇಳುತ್ತಿದ್ದಳು. ಆದರೂ ಗಂಗಾಗೆ ಆ ರಾಜಕೀಯ ನಾಡಿಯನ್ನು ಅವರ ಕ್ರಿಯೆಗಳಲ್ಲಿ ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಆ ಸಂಸ್ಥೆಯಲ್ಲಿ ನಾನಾ ರೀತಿಯ ಚಟುವಟಿಕೆಗಳು ನಡೆಯುತ್ತಿದ್ದವು ಅಥವಾ ನಡೆಯುವಂತೆ ಕಾಣುತ್ತಿದ್ದವು. ಅಲ್ಲಿ ಇರುವವರೆಲ್ಲ ಬ್ಯುಸಿಯಾಗಿರುವಂತೆ ಕಾಣುತ್ತಿದ್ದರು ಅಥವಾ ಬ್ಯುಸಿಯಾಗಿರುತ್ತಿದ್ದರು. ವರದಕ್ಷಿಣೆಯ ಹಿಂಸೆಯಿಂದ ಬಳಲುವ ಹೆಣ್ಣುಗಳಾದಿಯಾಗಿ, ಫ್ಯಾಕ್ಟರಿಯಲ್ಲಿ ಆರ್ಥಿಕ ಅಭದ್ರತೆಯಿಂದ ನರಳುವ, ಯೂನಿಯನ್ ಮಾಡಲು ಓಡಾಡುವ ಮಹಿಳೆಯರ ಸಮಸ್ಯೆಗಳು ಗಂಗಾಗೆ ಇಲ್ಲಿ ಅರ್ಥವಾಗತೊಡಗಿದ್ದವು. ಸುಟ್ಟು ಗಾಯಗೊಂಡ ಕಾರ್ಮಿಕರು ಕೂತುಕೊಂಡು ಮಾತಾಡುವುದನ್ನು ಗಂಗಾ ಗಮನಿಸಿದ್ದಳು. ನೊಂದ ಹೆಣ್ಣು ಮಕ್ಕಳು, ಅವರ ಜೊತೆಗೆ ದೈನ್ಯವೇ ಮೂರ್ತಿವೆತ್ತಿದಂತಿದ್ದ ಅವರ ತಂದೆ/ತಾಯಿ ಅಥವಾ ಅಣ್ಣಂದಿರು, ಸಂಘಟನೆಗಳಲ್ಲಿ ತೊಡಗಿದ ಕಾರ್ಮಿಕರು ಇಂತಹ ಅನೇಕರನ್ನು ಇಲ್ಲಿ ಕಂಡಾಗಲೆಲ್ಲಾ ಈ ಸಂಸ್ಥೆಯ ರಾಜಕೀಯದ ಆಶಯವನ್ನು ಗ್ರಹಿಸಲು ಗಂಗಾ ಪ್ರಯತ್ನಿಸುತ್ತಿದ್ದಳು. ಇಲ್ಲಿ ನಡೆಯುವ ಚರ್ಚೆಗಳಲ್ಲಿ ರಾಷ್ಟ್ರದ ಹೆಸರುವಾಸಿ ಕಾರ್ಮಿಕ ನಾಯಕರು ಪಾಲುಗೊಳ್ಳುವುದನ್ನು ಕಂಡಿದ್ದಳು, ಬೆಳ್ಳಿ ತೆರೆಯಲ್ಲಿ ಪ್ರಮುಖರಾದ ಚಿತ್ರ ನಿರ್ದೇಶಕರನ್ನು ಕಂಡಿದ್ದಳು, ಮಾನವ ಹಕ್ಕುಗಳಿಗಾಗಿ ಹೋರಾಡುವ ಹೋರಾಟಗಾರರನ್ನೂ ಕಂಡಿದ್ದಳು. ಪಾರ್ವತಿ ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಹೆಚ್ಚು ಕ್ರಿಯಾತ್ಮಕವಾಗಿ ಇಂತಹ ಚಟುವಟಿಕೆಗಳಲ್ಲಿ, ಕ್ರಿಯೆಗಳಲ್ಲಿ ಭಾಗವಹಿಸುತ್ತಿದ್ದಳು. ಅವಳ ಭಾಗವಹಿಸುವ ವೈಖರಿ ಕೆಲವೊಮ್ಮೆ ಗಂಗಾಳನ್ನೇ ತಬ್ಬಿಬ್ಬಾಗಿಸುವಂತಿತ್ತು. ಮೊದ ಮೊದಲು ಇಂಗ್ಲೀಷ್‌ನಲ್ಲಿ ನಡೆಯುವ ಚರ್ಚೆಯಲ್ಲಿ ಹಿಂಜರಿಕೆ ತೋರುತ್ತಿದ್ದ ಪಾರ್ವತಿ ಈಗ ಹತ್ತು ಜನರ ನಡುವೆ ಕುಳಿತು ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದಳು. ಅಷ್ಟೊಂದು ಜನರ ನಡುವೆ, ಇಂಗ್ಲೀಷ್ ಬಲ್ಲವರ ನಡುವೆ ಆಕೆಯ ಬ್ರೋಕನ್ ಇಂಗ್ಲೀಷ್ ಆಕೆಯಲ್ಲಿ ಯಾವ ಕೀಳರಿಮೆಯನ್ನೂ ಹುಟ್ಟಿಸುತ್ತಿರಲಿಲ್ಲ. ದಿನಕ್ಕೆ ಹತ್ತಾರು ನೊಂದ ಮಹಿಳೆಯರ ಜೊತೆ ಕೂತು ಮಾತನಾಡುವ, ಕಾರ್ಮಿಕ ಮಹಿಳೆಯರ ಜೊತೆ ಆಲೋಚಿಸುವ, ಎಲ್ಲರಿಗೂ ಬೇಕಾಗುವ ಸಾಂತ್ವನ ನೀಡುವ ಒಂದು ಶಕ್ತಿ ಪಾರ್ವತಿಯಲ್ಲಿ ಮನೆ ಮಾಡಿತ್ತು. ಗಂಗಾ ಅಲ್ಲಿಗೆ ಬರುವ ಮೊದಲಿನ ಎರಡು ವರ್ಷಗಳಲ್ಲಿಯೇ ಪಾರ್ವತಿ ಆ ಸಂಸ್ಥೆಯಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದಾಳೆಂಬುದು ಗಂಗಾಗೆ ಅರ್ಥವಾಗಿತ್ತು. ಹೇಳುವುದನ್ನು ಕೆಲವು ಸಲ ಹಟ ಹಿಡಿದು ಹೇಳುವ, ಎತ್ತರದ ಧ್ವನಿಯಲ್ಲಿ ಮಾತನಾಡುವ, ವಾದಗಳಿಂದ ವಿಚಾರ

ಮಂಡಿಸುತ್ತಿದ್ದ ಆಕೆಯ ರೀತಿಯಿಂದಾಗಿ ನಾಲ್ವರ ನಡುವೆ ಪಾರ್ವತಿಯ ವ್ಯಕ್ತಿತ್ವದ ಛಾಪು ಎದ್ದು ಕಾಣಿಸುತ್ತಿತ್ತು. ಇಷ್ಟೆಲ್ಲ ಬೌದ್ಧಿಕ ಚರ್ಚೆ, ಕಾರ್ಯಚಟುವಟಿಕೆಗಳ ನಡುವೆಯೂ ಈ ಸಂಸ್ಥೆಯ ರಾಜಕೀಯ ನಿಲುವನ್ನು ಗ್ರಹಿಸಲು ಗಂಗಾಗೆ ಸಾಧ್ಯವಾಗಿರಲಿಲ್ಲ. 3-4 ವರ್ಷಗಳ ಅಂತರದಲ್ಲಿ ಪಾರ್ವತಿ ಆ ಸಂಸ್ಥೆಯ ಬಗ್ಗೆ ಅಪಾರವಾದ ಒಲವು, ಆದರ ಬೆಳೆಸಿಕೊಂಡಿದ್ದಳು. ಆಕೆಯ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕರಾದ ಪ್ರತಿಯೊಬ್ಬರಿಗೂ ಆಕೆ ಋಣಿಯಾಗಿದ್ದಳು. ಆ ಸಂಸ್ಥೆಯಲ್ಲಿ ಮುಖ್ಯವಾಗಿ ಅಂದರೆ ಸಂಸ್ಥೆಯ ಹುಟ್ಟಿಗೆ ಕಾರಣಕರ್ತರಾದವರಲ್ಲಿ ಒಬ್ಬರಾದ ಮಹಿಳೆ ರನೇ ಪಾಂಡಿಯನ್. ಕುಳ್ಳಗಿದ್ದರೂ ಮುದ್ದು ಮುದ್ದಾಗಿ ತುಂಬಿಕೊಂಡಿದ್ದ ಮುಖ, ಸಾಧಾರಣ ಮೈಕಟ್ಟಿನ ಈ ಹೆಂಗುಸು ಗಾಂಭೀರ್ಯವನ್ನೆಲ್ಲ ತಮ್ಮ ಮುಖದಲ್ಲಿಯೇ ತುಂಬಿಕೊಂಡಂತೆ ಕಾಣಿಸುತ್ತಿದ್ದರು. ನೀಟಾದ ಇಸ್ತ್ರಿ ಮಾಡಿದ ಕಾಟನ್ ಸೀರೆಗಳು, ನೀಟಾದ ನೆರಿಗೆಗಳು, ಕಣ್ಣಲ್ಲಿಯೇ ಎಲ್ಲವನ್ನೂ ಅರ್ಥೈಸಿಕೊಂಡುಬಿಡುವಂತೆ ಕಾಣುವ ತೀಕ್ಷ್ಣವಾದ ಚಿಕ್ಕ ಕಣ್ಣುಗಳು, ಮೃದುವಾದ ಬಿಳಿಯ ಕೈಗಳು, ಹಣೆಯಲ್ಲಿ ಅಗಲವಾದ ಕುಂಕುಮ. ಆಕೆಯ ನಡಿಗೆಯೇ ಒಂದು ಗತ್ತಿನ ರೀತಿ ಎಂಬಂತೆ ಗಂಗಾಗೆ ಕಾಣಿಸುತ್ತಿತ್ತು. ಯಾವಾಗಲೂ ನಗು ಮುಖ, ಸಂಸ್ಥೆಯೊಳಗೆ ಕಾಲಿಟ್ಟಾಕ್ಷಣ ಪ್ರತಿಯೊಬ್ಬರನ್ನು ಚುರುಕಾಗಿ, ಚುಟುಕಾಗಿ ಮಾತನಾಡಿಸುವ ರೀತಿ, ಕನ್ನಡ ಬಾರದ ಈಕೆಯ ಮಾತಿನಲ್ಲಿನ ಸೌಜನ್ಯ, ಮೃದುವಾಗಿ, ನವಿರಾಗಿ, ಮಲ್ಲಿಗೆಯಂತೆ ಮಾತನಾಡುವ ರೀತಿ ಗಂಗಾಳನ್ನು ಮೊದಲು ಮೊದಲು ದಿನಗಳಲ್ಲಿ ಅವಕ್ಕಾಗಿಸಿತ್ತು. ಇಂತಹ ಒಂದು ಗ್ರಹಿಕೆಯನ್ನು ಪಾರ್ವತಿಯೂ ಗಂಗಾಳಲ್ಲಿ ಹಂಚಿಕೊಂಡಿದ್ದಳು. ಹಲವಾರು ಕಾರ್ಖಾನೆಗಳ ಮುಂದೆ ಪ್ರತಿಭಟನೆಯ ಸಂದರ್ಭದಲ್ಲಿ, ಹತ್ತು ಘಂಟೆಯ ನಂತರ ಗೋಡೆಗಳಿಗೆ ಪೋಸ್ಟರ್ ಅಂಟಿಸುವಾಗ, ಹಾಸ್ಟೆಲ್‌ಗಳ ಮ್ಯಾನೇಜ್‌ಮೆಂಟ್ ವಿರೋಧಿಸಿ ಧರಣಿ ಮಾಡುವಾಗ, ಇಂತಹ ಯಾವುದೇ ಚಟುವಟಿಕೆಗಳಿಗೆ ಬಂಧಿಸಲ್ಪಟ್ಟಾಗ ಪೋಲೀಸ್ ಸ್ಟೇಷನ್‌ನಲ್ಲಿ ಹೀಗೆ ಹತ್ತು ಹಲವಾರು ಕ್ರಿಯೆಯಲ್ಲಿ ಗಂಗಾ ರನೆಯವರನ್ನು ಕಂಡಿದ್ದಳು. ಪೋಲೀಸರ ಜೊತೆಯ ಸಂಘರ್ಷಗಳಲ್ಲಿ ಎತ್ತರದ ಧ್ವನಿಯಲ್ಲಿ ಮಾತಾಡಿ ಸಬ್ ಇನ್ಸ್‌ಪೆಕ್ಟರ್‌ಗಳನ್ನೇ ದಂಗಾಗಿಸಿದ್ದನ್ನು ಕಂಡಿದ್ದಳು. ಇಂತಹ ಸಂದರ್ಭದಲ್ಲಿ ತಾನು ಓದಿದ ಯಾವುದೋ ಪುಸ್ತಕದ ಕ್ರಾಂತಿಕಾರಿ ನಾಯಕಿಯಾಗಿ ರನೆ ಗಂಗಾಳ ಕಣ್ಣಿಗೆ ಕಾಣಿಸಿದ್ದುಂಟು, ಅಥವಾ ಕ್ರಾಂತಿಕಾರಿ ಸಿನೆಮಾವೊಂದರ ನಾಯಕಿಯಾಗಿ, ಎಲ್ಲವೂ ಕಲಾ ಜಗತ್ತಿನಲ್ಲಿ ನಡೆಯುತ್ತಿರುವಂತೆ ಗಂಗಾಗೆ ಭಾಸವಾಗುತ್ತಿತ್ತು. ಕ್ರಾಂತಿಯ ಬಗ್ಗೆ, ಕ್ರಾಂತಿಕಾರರ ಬಗ್ಗೆ ಅಮೂರ್ತವಾಗಿ ಉಳಿದಿದ್ದ ಗಂಗಾಳ ಭಾವನೆಗಳು ಈ ಸಂಸ್ಥೆಯಲ್ಲಿನ ಒಡನಾಟದಲ್ಲಿ ಮೂರ್ತ ರೂಪ ಪಡೆಯುತ್ತಿರುವಂತೆ ಪ್ರಥಮ ದಿನಗಳಲ್ಲಿ ಆಕೆಗೆ ಭಾಸವಾಗುತ್ತಿತ್ತು. ಪೋಲೀಸರೊಡನೆ ರನೆ ಮಾತನಾಡುವಾಗಲೆಲ್ಲಾ ಅವರಲ್ಲಿರುತ್ತಿದ್ದ ಅಧಿಕಾರವಾಣಿ, ಸ್ಪಷ್ಟತೆ, ಗತ್ತು ಕಂಡಾಗಲೆಲ್ಲಾ ಗಂಗಾಳ ಅರಿವಿಗೆ ಈ ವ್ಯಕ್ತಿ ನಿಲುಕುತ್ತಲೇ ಇರಲಿಲ್ಲ. ಗಂಗಾಳ ಎದೆಯೊಳಗೆಲ್ಲೋ ಅಡಗಿದ ಆದರ್ಶದ ಪ್ರತಿಮೆಯನ್ನು ಗಂಗಾ ಅವಳಿಗರಿವಿಲ್ಲದಂತೆಯೇ ಅವರಲ್ಲಿ ಕಂಡುಕೊಂಡು ಅವರನ್ನು ಆರಾಧಿಸ ತೊಡಗಿದ್ದಳು. ಸಾಹಿತ್ಯ ಬರೆಯುವ, ಅಥವಾ ಹುಸಿ ರಾಜಕಾರಣಿಗಳಾಗಿರುವ ಮಹಿಳೆಯರನ್ನು ಈಕೆ ಕಂಡಿದ್ದಳೇ ಹೊರತು, ಪೋಲೀಸರ ಎದುರಿಗೆ ನಿಂತು ದಬಾಯಿಸುವ, ಅಧಿಕಾರ ವರ್ಗದವರ ಜೊತೆ ಟೇಬಲ್ ಗುದ್ದಿ, ಮುಖವನ್ನೆಲ್ಲಾ ಕೆಂಪಾಗಿಸಿಕೊಂಡು ಮಾತನಾಡುವ ಮಹಿಳೆಯರನ್ನು ಗಂಗಾ ಕಂಡವಳಲ್ಲ. ಮುಗ್ಧೆಯಾಗಿದ್ದು ಆರ್. ಎಸ್. ಎಸ್.ನತ್ತ ಒಲವು ಮೂಡಿಸಿಕೊಂಡ ಒಂದು ವರ್ಷದ ಅವಧಿಯಲ್ಲಿ ಮಾಲಾ ಇವಳ ಆದರ್ಶದ ವ್ಯಕ್ತಿಯಾಗಿ ಹೃದಯದಲ್ಲಿ ನಿಂತಿದ್ದಳು. ಆದರೆ ಅದು ಬದುಕಿಗೆ ಇನ್ನೂ ಹೆಜ್ಜೆ ಇಡುತ್ತಿದ್ದಾಗ. ಈಗ ರನೆಯವರನ್ನು ಕಾಣುವ ವೇಳೆಗಾಗಲೇ ಗಂಗಾಳ ಬದುಕಿನಲ್ಲಿ ಸಾಕಷ್ಟು

ಏರಿಳಿತಗಳು ನಡೆದು ಹೋಗಿದ್ದವು. ಭಾವೋದ್ವೇಗದ ವ್ಯಕ್ತಿಯಾಗಿ ಗಂಗಾ ಉಳಿದಿರಲಿಲ್ಲ. ಮನುಷ್ಯರನ್ನು ಅನುಮಾನದಿಂದಲೇ ನಂಬಬೇಕೆಂಬ ಸತ್ಯವನ್ನು ರವಿಯಿಂದಾಗಿ ಕಲಿತಿದ್ದ ಗಂಗಾ ಪಾರ್ವತಿಯ ಹೊರತಾಗಿ ಬೆಂಗಳೂರಿನ ಯಾವ ಸಂಬಂಧವನ್ನೂ ಬೆಚ್ಚನೆಯ ಸಂಬಂಧ ಎಂದು ಫೀಲ್ ಮಾಡುತ್ತಿರಲಿಲ್ಲ. ರೆನೆಯವರ ವ್ಯಕ್ತಿತ್ವದಲ್ಲಿ ಏನೇನನ್ನೋ ಕಲ್ಪಿಸಿಕೊಳ್ಳುವ ಗಂಗಾ ಒಮ್ಮೊಮ್ಮೆ ತಾನು ಅವರನ್ನು ಗ್ರಹಿಸುವುದಕ್ಕಿಂತಾ ಭಿನ್ನವಾಗಿ ಅವರೇನೋ ಇರಬಹುದೇನೋ ಎಂದು ಎಣಿಸುತ್ತಿದ್ದಳು. ಹಗಲಲ್ಲಿ ತಾನು ಕಾಣುವ ಇವರು ರಾತ್ರಿಗಳಲ್ಲಿ ಇನ್ನಾವುದೇ ಕ್ರಾಂತಿಕಾರಿ ಚಟುವಟಿಕೆ ಮಾಡುವವರಿರಬಹುದೇ ಎಂದು ಎಣಿಸುವಳು, ಇವರ ಇಷ್ಟು ಶಕ್ತಿ, ಸಾಮರ್ಥ್ಯಕ್ಕೆ ಪ್ರೇರಕವಾಗಿರುವ ಒಂದು ದೊಡ್ಡ ಗುಂಪು ಇವರ ಹಿಂದೆ ಇರಬಹುದೇ ಎಂದು ಯೋಚಿಸುವಳು. ಹೀಗೆಯೇ ಏನೇನೋ ಆಕೆಯ ಕಲ್ಪನೆಗೆ ನಿಲುಕದ ಹಲವಾರು ಸಾಧ್ಯತೆಗಳ ಬೆಗ್ಗೆ ಗಂಗಾ ಯೋಚಿಸುವಳು. ಆಕೆಯ ಯೋಚನೆಗಳಿಗೆ ತಲೆ ಬುಡವೇ ಇರುತ್ತಿರಲಿಲ್ಲ. ಹತ್ತು ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳುವ ಇವರ ವೈಚಾರಿಕತೆಯ ಹಿಂದಿರುವ ರಾಜಕೀಯ ಲಯವೇನು ಎಂಬುದೇ ಗಂಗಾಗೆ ಸತತವಾಗಿ ಕೊರೆಯುತ್ತಿದ್ದ ಪ್ರಶ್ನೆ. ಅನೇಕ ಬಾರಿ ಇವರ ರಾಜಕೀಯ ವಿಷನ್ ಕುರಿತು ಗಂಗಾ ಪಾರ್ವತಿಯಲ್ಲಿ ವಿಚಾರಿಸಿದ್ದುಂಟು. ಸಾಂಪ್ರದಾಯಿಕ ಮಾರ್ಕ್ಸ್‌ವಾದಿ ಪಾರ್ಟಿಗಳಿಗೆ ಉತ್ತರವಾಗಿ ಹುಟ್ಟಿದ ಸಂಸ್ಥೆಗಳು ಅನೇಕ. ಅದರಲ್ಲಿ ಇದೂ ಒಂದು ಎಂಬುದು ಆಕೆಯ ಉತ್ತರ. ಸಾಂಪ್ರದಾಯಿಕ ಮಾರ್ಕ್ಸ್‌ವಾದಿಗಳ ತರಹ ಇವರು ರಿಜಿಡ್ ಆಗಿ ಮಾನವೀಯ ಸಂಬಂಧಗಳನ್ನಾಗಲೀ ಅಥವಾ ಸಮಸ್ಯೆಗಳನ್ನಾಗಲೀ ನೋಡುವುದಿಲ್ಲ ಎಂದು ಪಾರ್ವತಿ ಅನೇಕ ಉದಾಹರಣೆಗಳ ಮೂಲಕ ಗಂಗಾಗೆ ಹೇಳುವಳು. ಆದರೂ ಗಂಗಾಗೆ ಸಮಾಧಾನವಾಗುತ್ತಿರಲಿಲ್ಲ. ಏನೇನೋ ಪ್ರಶ್ನೆಗಳು ಆಕೆಗೆ ಎದುರಾಗುತ್ತಿದ್ದವು.

ಸಾಂಪ್ರದಾಯಿಕ ಮಾರ್ಕ್ಸ್‌ವಾದಿಗಳಿಗೆ ಒಂದು ಸಂಘಟನೆಯ ಕಲ್ಪನೆ ಇದೆ. ಲೀಡರ್-ಕೇಡರ್ ಅಂತ ಅಲ್ಲಿ ಇರಬಹುದು. ಯಾವುದೇ ಸಂಘಟನೆಗೆ ಒಂದು ಶಿಸ್ತು ಅಗತ್ಯ ಆಗುವುದಿಲ್ಲವೇ? ಇಂತಹ ಸಂಸ್ಥೆಗಳಲ್ಲಿ ಲೀಡರ್ ಎಂದು ಕರೆದುಕೊಳ್ಳುವವರಿಲ್ಲದಿರಬಹುದು. ಆದರೆ ಕೆಲವು ಸವಲತ್ತುಗಳಿಂದಾಗಿ ಕೆಲವರು ಹೆಸರಿಸದೆಯೇ ಲೀಡರ್ ಆಗಿಬಿಟ್ಟಿರುತ್ತಾರೆ. ಜೊತೆಗೆ ಪಾರ್ಟಿಯ ಕಲ್ಪನೆಗಳಿರದ ಇಂತಹ ಸಂಸ್ಥೆಗಳು ರಾಜಕೀಯಕ್ಕೆ ಉತ್ತರವಾಗಿ ಬೆಳೆಯಲು ಸಾಧ್ಯವೇ? ಪಾರ್ಟಿಯ ಕಲ್ಪನೆಯಿಲ್ಲದೇ ಸಂಘಟನೆ ಕಟ್ಟಲು ಸಾಧ್ಯವೇ? ಇವರು ಇತರ ದೇಶಗಳಿಂದ ಹಣ ಪಡೆದುಕೊಂಡು ಇಂತಹ ಚಟುವಟಿಕೆ ಮಾಡಲು ಸಾಧ್ಯ. ಸ್ವದೇಶೀ ಹಣವನ್ನೇ ಎತ್ತಿ ಗಾಂಧಿಯ ತರಹ ಸರಳವಾಗಿ ಸಂಘಟನೆ ಕಟ್ಟಲು, ಚಳುವಳಿ ಮಾಡಲು ಇಂತಹವರಿಗೆ ಸಾಧ್ಯವಾಗುತ್ತದೆಯೇ? ಸಾವಿರಾರು ಜನರನ್ನು ಸಂಘಟನೆಯ ಒಳಗೆ ತರಲು ಸಾಧ್ಯವಾಗುತ್ತದೆಯೇ? ಇಂತಹ ಸಂಸ್ಥೆಯೊಳಗೆ ಕೆಲಸ ಮಾಡುವ ಎಲ್ಲರಿಗೂ ಸಂಘಟನೆಯ ಬಗ್ಗೆ ಕಮಿಟ್‌ಮೆಂಟ್ ಇರುತ್ತದೆಯೇ? ಆ ಕಮಿಟ್‌ಮೆಂಟ್ ಇರುವವರು ಇಲ್ಲ ಎಂದಲ್ಲ. ಕೊನೆ ಕೊನೆಗೆ ಅಲ್ಲಿ ದೊರೆಯುವ ಸವಲತ್ತುಗಳ ಮೇಲೆಯೇ ಅಲ್ಲಿ ದುಡಿಯುವವರ ಕಣ್ಣು ಉಳಿಯುವುದಿಲ್ಲವೇ? ಇವರಲ್ಲಿ ಅವರ ಕಮಿಟ್‌ಮೆಂಟ್ ಎಷ್ಟು? ಸಿಗುವ ಸವಲತ್ತುಗಳ ಮೇಲೆ ಕಣ್ಣೆಷ್ಟು? ಇಂತಹ ಅನೇಕ ಪ್ರಶ್ನೆಗಳು ನಿಧಾನವಾಗಿ ಗಂಗಾಳ ತಲೆಯಲ್ಲಿ ಉದ್ಭವಿಸತೊಡಗಿದ್ದವು. ಗಾಂಧಿಯ ಸರಳತನದ ರಾಜಕೀಯದಲ್ಲಿ ವೈಯಕ್ತಿಕ ಹಂತದ ಪ್ರಶ್ನೆಗಳು ಅನೇಕವಿದ್ದವು. ಕ್ಯಾಪಿಟಲಿಸಂನ ಬೇರುಗಳನ್ನು ಲೈಂಗಿಕತೆ, ಹಿಂಸೆ, ಹಣದ ಮೂಲದಲ್ಲಿ ಕಂಡಿದ್ದ ಗಾಂಧಿಗೆ ರಾಜಕೀಯ ವ್ಯಕ್ತಿಯ ವೈಯಕ್ತಿಕ ಹಂತದಲ್ಲಿಯೇ ಪ್ರಾರಂಭವಾಗಿ ಇತರರಿಗೆ ಹರಡಬೇಕಿತ್ತು. ಗಾಂಧಿ ರಾಜಕಾರಣ ನಂಬುವ ವ್ಯಕ್ತಿಗೆ ಮೂಲತಃ ತನ್ನನ್ನೇ

ಪ್ರಶ್ನೆ ಮಾಡಿಕೊಳ್ಳುವ ಅಗತ್ಯ ಸಾಕಷ್ಟಿತ್ತು. ಆತನ ಸರಳ ಬದುಕಿನಲ್ಲಿ ಆತ ರಾಜಕೀಯಕ್ಕೆ ಇಳಿಯಬೇಕಿತ್ತು. ವ್ಯಕ್ತಿಯೊಬ್ಬನಿಂದ ಗಾಂಧಿಯ ರಾಜಕಾರಣ ಮುಖ್ಯವಾಗಿ ಬಯಸುತ್ತಿದ್ದುದು ತ್ಯಾಗ, ಶ್ರದ್ಧೆ, ಕಾರ್ಪಣ್ಯ ಎದುರಿಸುವ ಮನೋಭಾವ. ಲೈಂಗಿಕತೆ, ಹಿಂಸೆ, ಹಣದ ಮೂಲದಲ್ಲಿನ 'ಕ್ಯಾಪಿಟಲಿಸಂ'ನ ಮುಖಗಳನ್ನು ಕಿತ್ತೆಸೆಯಲು ವೈಯಕ್ತಿಕವಾಗಿ ಪ್ರಯತ್ನಿಸುವುದು ಗಾಂಧಿ ರಾಜಕಾರಣದ ಮುಖ್ಯ ಗುರಿಯಾಗುತ್ತಿತ್ತು. ಇಂತಹ ಸರಳತೆಯನ್ನು ಈ ಸಂಸ್ಥೆಗಳಲ್ಲಿ ಗಂಗಾ ಕಂಡವಳಲ್ಲ. ಒಂದು ರೀತಿಯ ಪಾಷ್ ಆಗಿರುವಂತಹ ಸಂಸ್ಕೃತಿಯೇ ಇಲ್ಲೆಲ್ಲಾ ಎದ್ದು ಕಾಣುತ್ತಿತ್ತು. ಇಲ್ಲಿಯ ಬಹುತೇಕ ಮಂದಿ ಬಳಸುವ ಅದ್ಭುತವಾದ ಇಂಗ್ಲೀಷೇ ಇವರನ್ನು ಸಾಮಾನ್ಯ ಜನರಿಂದ ಬೇರ್ಪಡಿಸಲು ಸಾಕು ಎನ್ನುವಂತಹ ಅಭಿಪ್ರಾಯ ಗಂಗಾಳಲ್ಲಿ ಮೂಡುತ್ತದೆ. ಸಂಘಟನೆಯ ಕಲ್ಪನೆಯೇ ಇಲ್ಲದೇ ಹರಿದು ಹಂಚಿ ಹೋಗುತ್ತಿರುವ ಹಲವಾರು ಚಟುವಟಿಕೆಗಳಿಂದ ಗುರುತರವಾದ ಸಾಮಾಜಿಕ ಬದಲಾವಣೆ ಸಾಧ್ಯವೇ ಎನ್ನುವ ಪ್ರಶ್ನೆಗಳು ಆಗಾಗ್ಗೆ ಗಂಗಾಳನ್ನು ಕಾಡುತ್ತಿದ್ದವು. ಆದಾಗ್ಯೂ ಆ ಸಂಸ್ಥೆಯಲ್ಲಿರುವವರು ಬೆಳಗಾದರೆ ಕ್ರಾಂತಿಯೇನೋ ಎನ್ನುವ ಹಾಗೆ ಬೆಳಿಗ್ಗೆಯಿಂದ ಸಂಜೆಯವರೆಗೆ ದುಡಿಯುವುದನ್ನು ಗಂಗಾ ಕಂಡಿದ್ದಳು. ರಾತ್ರಿ ಹನ್ನೊಂದು ಘಂಟೆಯವರೆಗೆ ಸ್ವತಃ ರೆನೆಯವರೇ ಕೆಲಸ ಮಾಡುವುದನ್ನು ಗಂಗಾ ಕಂಡಿದ್ದಳು.

ಮಹಿಳಾ ಪ್ರಶ್ನೆಯನ್ನು ಇವರು ಅರ್ಥೈಸುವ ಬಗೆಯನ್ನು ಪಾರ್ವತಿ ಆಗಾಗ್ಗೆ ಗಂಗಾಳಿಗೆ ವಿವರಿಸುತ್ತಿದ್ದಳು. ಮಹಿಳೆಯರಿಗೆ ಸಂಬಂಧಪಟ್ಟ ಸಭೆಗಳಿಗೆ ಗಂಗಾ ತಪ್ಪದೇ ಹೋಗುತ್ತಿದ್ದರಿಂದಲೂ ಕೂಡಾ ಅವಳಿಗೆ ಅರ್ಥವಾಗತೊಡಗಿತ್ತು. ರಾಜಕೀಯ ಪಕ್ಷಗಳಾಗಲೀ ಅಥವಾ ಮಾರ್ಕ್ಸ್‌ವಾದಿ ಸಂಘಟನೆಗಳು ಅಥವಾ ಪಕ್ಷಗಳು ಮಹಿಳಾ ವಿಂಗ್‌ಗಳನ್ನು ಹೊಂದಿವೆ. ಮಹಿಳೆಯರಿಗೇ ವಿಶಿಷ್ಟವಾಗಿರ ತಕ್ಕಂತಹ ಸಮಸ್ಯೆಗಳನ್ನು ಈ ಪಕ್ಷಗಳು ಕೈಗೇ ಎತ್ತಿಕೊಳ್ಳುವುದಿಲ್ಲ. ಈ ರೀತಿಯ ವಿಶಿಷ್ಟ ಸಮಸ್ಯೆಗಳನ್ನು ಕುರಿತು ಒಟ್ಟಾಗಿ ಹಂಚಿಕೊಳ್ಳಲು, ಯೋಚಿಸಲು, ಈ ಬಗ್ಗೆ ಕ್ರಿಯಾಶೀಲರಾಗಲು, ತೀರ್ಮಾನಿಸಲು, ಪ್ರತ್ಯೇಕವಾದ ಮಹಿಳಾ ಗುಂಪುಗಳಿಗೆ ಮಾತ್ರ ಸಾಧ್ಯ. ಇಂತಹ ಸ್ವಾಯತ್ತತೆಯನ್ನು ಬಯಸಿಯೇ ಇಡಿಯ ರಾಷ್ಟ್ರದಲ್ಲಿ ಸುಮಾರು 70ರ ದಶಕದ ವೇಳೆಗೆ ಅನೇಕ ಮಹಿಳಾ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿವೆ. ಹಾಗಾಗಿ ಈ ಸಂಸ್ಥೆಯಲ್ಲಿ ಸಹ ಪ್ರತ್ಯೇಕವಾಗಿ ಮಹಿಳೆಯರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವ 'ಸ್ತ್ರೀಮುಕ್ತಿ' ಸಂಘಟನೆ ಅಸ್ತಿತ್ವಕ್ಕೆ ಬಂದದ್ದು. ಗಂಗಾ ನಿಧಾನವಾಗಿ ಇವುಗಳನ್ನೆಲ್ಲ ಅರ್ಥೈಸಿಕೊಳ್ಳ ತೊಡಗಿದ್ದಳು.

ಈ ತರಹೆಯ ಚರ್ಚೆಗಳು ಬಂದಾಗ ಪಾರ್ವತಿ/ಗಂಗಾ ಗಂಭೀರವಾದ ಮಾತು-ಕತೆಗೆ ಇಳಿಯುವರು. ಇಂತಹ ಯಾವುದೇ ರಾಜಕೀಯ ದಾರ್ಶನಿಕತೆಯ ಅರಿವಿಲ್ಲದೆಯೇ ತಾವು ಹೊನ್ನೇಕೆರೆಯಲ್ಲಿ ಹದಿನೈದರಿಂದ ಇಪ್ಪತ್ತು ಜನ ಹುಡುಗಿಯರು ಐದು ವರ್ಷ ಒಟ್ಟಾಗಿ ಇಂತಹ ಪ್ರಶ್ನೆಗಳ ಬಗ್ಗೆಯೇ ಕುರಿತು ಮಾತನಾಡಲಿಲ್ಲವೇ? ಕಾರ್ಯೋನ್ಮುಖರಾಗಿರಲಿಲ್ಲವೇ? ಇಲ್ಲಿ ರಾಜಕೀಯ ಪರಿಧಿಯಲ್ಲಿ ನಡೆಯುವ ಚರ್ಚೆಗಳ ಅಂಶಗಳು ತಮಗೆ ಗೊತ್ತಿಲ್ಲದೇ ತಮ್ಮಲ್ಲಿ ಅಡಕವಾಗಿರಲಿಲ್ಲವೇ? ಐದು ವರ್ಷಗಳ ಕಾಲದಲ್ಲಿ ವರ್ಷಕ್ಕೊಂದು ಬಾರಿ ಕೈಯಲ್ಲಿಯೇ ಬರೆದ ಲೇಖನಗಳ ಹಸ್ತಪ್ರತಿ 'ವಿವರ್ತ' ತಮ್ಮೆಲ್ಲರ ಒಳಗೆ ಅಡಕವಾಗಿರುವ ರಾಜಕೀಯ ದರ್ಶನದ ಪ್ರತಿಫಲನವಾಗಿರಲಿಲ್ಲವೇ? ತಾವುಗಳು ಸೇರಿ ಹಲವಾರು ಬಾರಿ ಚಿಕ್ಕ ಪುಟ್ಟ ಸಭೆಗಳಲ್ಲಿ ಮಾಡಿದ ಚಿಕ್ಕ-ಪುಟ್ಟ ನಾಟಕಗಳು ತಮ್ಮ ಒಳಗೇ ಹುದುಗಿದ್ದ ರಾಜಕೀಯ ಅಭಿವ್ಯಕ್ತಿಯ ಮಾಧ್ಯಮಗಳಾಗಿರಲಿಲ್ಲವೇ? ಹೀಗೆ ಗಂಗಾ/ಪಾರ್ವತಿ ಪಾರ್ವತಿಯ ಸಂಸ್ಥೆಯ ಚಟುವಟಿಕೆಗಳ

ಲಯಗಳಲ್ಲಿ ತಮ್ಮ ಹೊನ್ನೇಕೆರೆಯ ಅನುಭವಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದುಂಟು. ತಮ್ಮೊಳಗೇ ಅಡಕವಾಗಿರುವ ರಾಜಕೀಯ ಅಭಿವ್ಯಕ್ತಿಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದುಂಟು. ಆ ಸಂಸ್ಥೆಯ ಬಗ್ಗೆ ಏನೇ ಪ್ರಶ್ನೆಗಳಿದ್ದರೂ ಗಂಗಾ ತನ್ನ ಬಿಡುವಿನ ಬಹುಪಾಲು ಸಮಯವನ್ನು ಪಾರ್ವತಿಯ ಜೊತೆ, ಅಲ್ಲಿ ನಡೆಯುವ ಚಟುವಟಿಕೆಗಳ ಜೊತೆ ತನ್ನನ್ನು ಗುರುತಿಸಿಕೊಂಡುದುಂಟು. ಆದರೂ ರಾಜಕೀಯ ದಾರ್ಶನಿಕತೆಯೊಂದನ್ನು ನೀಡುವ ಸಾಮರ್ಥ್ಯ ಈ ಸಂಸ್ಥೆಗಿದೆಯಾ ಎಂಬ ಕೊರಗು ಗಂಗಾಳನ್ನು ಸತತವಾಗಿ ಕಾಡುತ್ತಿತ್ತು. ಗಂಗಾ ಇಲ್ಲಿ ನೂರೆಂಟು ಬಗೆಯ ಮಹಿಳೆಯರನ್ನು ಕಂಡುದುಂಟು. ಸುಟ್ಟು ಗಾಯಗೊಂಡ ಅನೇಕ ಹೆಂಗಸರನ್ನು ಸಾಯುವ ಘಳಿಗೆಯಲ್ಲಿ ಆಕೆ ನೋಡಿದ್ದಳು. ತುಟಿ ಬಿಡಲಾರದೇ ತುಟಿ ಬಿಟ್ಟು ಎರಡೆರಡು ಶಬ್ದಗಳನ್ನು ಆಡಿದ್ದನ್ನು ಮೈ ಅದುರಿಸಿಕೊಂಡೇ ಕೇಳಿಸಿಕೊಂಡಿದ್ದಳು. ಸಾಯುತ್ತಿರುವ ಅಮ್ಮಂದಿರನ್ನು ಈ ಲೋಕಕ್ಕೆ ಕರೆಯುವ ಕಂದಮ್ಮಗಳನ್ನು ನೋಡಿದಾಗಲೆಲ್ಲಾ ಈಕೆಗೆ ಹೊಟ್ಟೆ ಕಿವಿಚಿದಂತಾಗುತ್ತಿತ್ತು. ಫ್ಯಾಕ್ಟರಿಗಳಲ್ಲಿ ದುಡಿಯುವ ಹೆಂಗಸರು ಇದ್ದಕ್ಕಿದ್ದಂತೆಯೇ ಕೆಲಸ ಕಳೆದುಕೊಂಡು ರಸ್ತೆಗಳಲ್ಲಿ ಭಿಕಾರಿಗಳಾಗಿ ನಿಂತುಕೊಂಡದ್ದನ್ನು ಗಂಗಾ ಕಂಡಿದ್ದಾಳೆ. ನೂರಾರು ಹೆಂಗಸರು ಫ್ಯಾಕ್ಟರಿಯ ಮುಂದೆ, ಮ್ಯಾನೇಜ್‌ಮೆಂಟಿನ ಮುಂದೆ ಧರಣಿ/ಮುಷ್ಕರ ಮಾಡಿದಾಗ 'ಸ್ತ್ರೀ-ಮುಕ್ತಿ' ಸಂಘಟನೆಯೊಂದಿಗೆ ಈಕೆಯೂ ಪಾಲುದಾರಳಾಗಿದ್ದಾಳೆ, ಪೋಲೀಸರ ಅತಿಥಿಯೂ ಆಗಿದ್ದಾಳೆ. ಹಾಸ್ಟೆಲ್‌ಗಳಲ್ಲಿರುವ ಕೆಟ್ಟ ಸವಲತ್ತುಗಳ ಬಗ್ಗೆ ವಿರೋಧಿಸಿ ಮಾಡಿದ ಪಂಜು ಮೆರವಣಿಗೆಯಲ್ಲಿ ಗಂಗಾ ಉತ್ಸಾಹದಿಂದ ಓಡಾಡಿದ್ದಳು. ಅಂತರ್‌ರಾಷ್ಟ್ರೀಯ ಮಹಿಳಾ ದಿನದಂದು ರಾತ್ರಿಯೆಲ್ಲಾ ಪೋಸ್ಟರ್ ಹಚ್ಚುವ ಕೆಲಸಕ್ಕೂ ಗಂಗಾ ತಿರುಗಾಡಿದ್ದುಂಟು. ಫ್ಯಾಕ್ಟರಿಯ ಮಾಲೀಕರ ವಿರುದ್ಧ, ರಾಜಕೀಯ ವ್ಯಕ್ತಿಗಳ ವಿರುದ್ಧ ಈ ಪೋಸ್ಟರ್ ಹಚ್ಚುವುದಕ್ಕೆಂದು ಈ ಸಂಸ್ಥೆಯ ಮಹಿಳೆಯರೊಟ್ಟಿಗೆ ಗಂಗಾ ಹೋದುದುಂಟು, ನಾಲ್ಕೈದು ಬಾರಿ ಪೋಲೀಸ್ ಸ್ಟೇಷನ್ ಮೆಟ್ಟಲು ಹತ್ತಿ ಪೋಲೀಸರಿಂದ ಹೊಡೆತ ತಿಂದುದೂ ಉಂಟು. ಗಂಗಾ/ಪಾರ್ವತಿ ಇಂತಹ ಕೆಲಸಗಳನ್ನೆಲ್ಲ ಒಟ್ಟೊಟ್ಟಿಗೇ ಮಾಡುತ್ತಿದ್ದರು. ಆದರೂ ಗಂಗಾಳಿಗನ್ನಿಸುತ್ತಿದ್ದುದು ಇಷ್ಟು, ಇಂತಹ ಚಟುವಟಿಕೆಗಳಿಗೆ ಓಡಾಡುವುದಕ್ಕೆ ಇಲ್ಲಿ ಹಣ ಇತ್ತು, ಸವಲತ್ತುಗಳಿದ್ದವು, ಹಾಗೆಯೇ ಕೆಲಸ ಮಾಡಬೇಕೆಂಬ ಬದ್ಧತೆ ಇದ್ದವರೂ ಇದ್ದರು. ಎಷ್ಟು ಜನರಿಗೆ ಇಂತಹ ಸಂಸ್ಥೆಗಳು ಸವಲತ್ತು ಒದಗಿಸಲು ಸಾಧ್ಯ? ಎಲ್ಲೆಂದರಲ್ಲಿ ಟಕ್ ಎಂದು ಆಟೋದಲ್ಲಿ ಹೋಗಿಬಿಡುವ, ಎಲ್ಲಿಗೆಂದರಲ್ಲಿ ಫೋನಾಯಿಸಿಬಿಡುವ, ಎಲ್ಲೆಂದರಲ್ಲಿ ಒಟ್ಟಿಗೆ ಸೇರುವಂತಹ ಕ್ರಿಯೆಗಳು ಹಣದ ಲಯದಲ್ಲಿಯೇ ಸಾಗಬೇಕು. ಸವಲತ್ತುಗಳಿದ್ದಾಗ ನಡೆಯುತ್ತವೆ. ಹಣ ಅಥವಾ ಇಂತಹ ಸವಲತ್ತುಗಳು ಇಲ್ಲದೇ ಹೋದಾಗ?

ಗಂಗಾಗೆ ಇಂತಹ ಅನುಮಾನಗಳು ಅಧಿಕವಾಗಿ ಕೊರೆಯತೊಡಗಿದ್ದವು. ಹಣದ ಸ್ತರವಿಲ್ಲದಿದ್ದರೆ ನಮ್ಮ ಬದ್ಧತೆಗಳೆಷ್ಟು ಎಂದು ಪ್ರಶ್ನಿಸಿಕೊಳ್ಳಬೇಕಾದ ಸಂದರ್ಭ. ಇಂತಹ ಅನುಮಾನಗಳೊಂದಿಗೇ ಗಂಗಾ ಇಲ್ಲಿ ಕೆಲಸ ಮಾಡುವವಳು. ಬೆಂಗಳೂರ್ ನಗರದ ಅಂಚು-ಇಂಚುಗಳನ್ನು ಪಾರ್ವತಿಯಂತೆ ಗಂಗಾಳೂ ನಿಧಾನವಾಗಿ ಅರಿಯತೊಡಗಿದ್ದಳು. ಬೆಂಗಳೂರಿನ ಬದುಕು ಹಣದ ಸ್ತರದಲ್ಲಿ ಮಾತ್ರ ನಡೆಯಲು ಸಾಧ್ಯ ಎನ್ನುವಂತಹ ಕಟು ಸತ್ಯವೂ ಗಂಗಾಳಿಗೆ ನಿಧಾನವಾಗಿ ಅರಿವಾಗುತ್ತಾ ಬಂದಿತ್ತು. ಗಾಂಧಿ ರಾಜಕಾರಣದಂತೆ ಇವು ಸಂಯಮದ, ಕಷ್ಟ-ಕಾರ್ಪಣ್ಯದ ಕ್ರಿಯೆಗಳಲ್ಲವೇನೋ ಎಂಬ ಅನುಮಾನ ಆಕೆಯಲ್ಲಿ ಆಳವಾಗಿ ಬೇರೂರತೊಡಗಿತ್ತು.

* * * * *

ಬೆಂಗಳೂರಿನಲ್ಲಿ ಬದುಕಿನ ಅರ್ಥಪೂರ್ಣತೆಗೆ ಕೇಂದ್ರ ಬಿಂದುವನ್ನು ಹುಡುಕುತ್ತಿದ್ದ ಗಂಗಾ ಹೀಗೆ ಪಾರ್ವತಿಯ ಸ್ನೇಹದಲ್ಲಿ, ಆಕೆ ಕೆಲಸ ಮಾಡುವ ಸಂಸ್ಥೆಯ ಮಹಿಳೆಯರ ಕಾರ್ಯಚಟುವಟಿಕೆಗಳಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡ ನಂತರದ ವರುಷಗಳಲ್ಲಿ ಪಾರ್ವತಿಯ ಹಾಗೆ ಬೆಂಗಳೂರಿನ ಬದುಕಿಗೆ ಒಂದೊಂದೇ ಹೆಜ್ಜೆ ಇಟ್ಟುಕೊಂಡು ಹೊಂದಿಕೊಳ್ಳತೊಡಗಿದ್ದಳು. ಬರವಣಿಗೆಯ ಬಗ್ಗೆ, ಸಾಹಿತ್ಯದ ಬಗ್ಗೆ ಮೊದಲಿನಿಂದಲೂ ಆಳವಾದ, ಅಪಾರವಾದ ಆಸಕ್ತಿ ಬೆಳೆಸಿಕೊಂಡ ಗಂಗಾ ನಿಧಾನವಾಗಿ ಸಾಹಿತ್ಯ ಕ್ಷೇತ್ರದತ್ತ ಒಲವು ತೋರಿಸತೊಡಗಿದಳು. ಸಾಂಸ್ಕೃತಿಕ ವಾತಾವರಣದಲ್ಲಿ ಟಿ.ವಿ., ವೀಡಿಯೋ ಕೈ ಚಾಚಿರದ ಕಾಲ. ನಾಟಕ/ಸಿನಿಮಾಗಳೇ ಪ್ರಾಧಾನ್ಯತೆ ಪಡೆದ ಸಂದರ್ಭ. ಗಂಗಾ ಒಂದು ನಾಟಕ ಓದಿದಳು. ಹೆಣ್ಣಿನ ಪಾತ್ರದ ಚಿತ್ರಣ ಇಷ್ಟವಾಯಿತು. ಮಹಾಭಾರತದ ಕುಂತಿ/ಗಾಂಧಾರಿ/ದ್ರೌಪದಿಯರ ಒಳಮುಖದ ವಿಶ್ಲೇಷಣೆಯ ನಾಟಕ. ಆಕೆಗೆ ಆ ಪಾತ್ರಗಳ ಚಿತ್ರಣ ಇಷ್ಟವಾಯಿತು. ಹಾಗಾಗಿ ಆ ಲೇಖಕನಿಗೆ ಒಂದು ಪತ್ರ ಬರೆದಳು. ಸೌಜನ್ಯಯುತವಾಗಿ. ನಿಮ್ಮ ಕುಂತಿಯ ಪಾತ್ರದ ಚಿತ್ರಣ ಇಷ್ಟವಾಯಿತು ಎಂದು ಇಷ್ಟೇ. ಓದಿದ್ದಕ್ಕೆಲ್ಲ ಸಂವೇದಿಸುವ ಸಂವೇದನಾ ಶಕ್ತಿಯ ಒಂದು ಅಭಿವ್ಯಕ್ತಿಯಾಗಿ ಗಂಗಾ ಹೀಗೆ ಬರೆದಿದ್ದಳು. ಅದೇ ಲೇಖಕ/ಪತ್ರಿಕೋದ್ಯಮಿಯನ್ನು ಗಂಗಾ ಯಾವುದೋ ನಾಟಕದ ಸಂದರ್ಭದಲ್ಲಿ ಭೇಟಿಯಾದಳು. 'ಓಹ್ ನೀವೇನಾ'! ಎಂದ ಆತ. ಗಂಗಾ ಪುಟ್ಟ ಹುಡುಗಿಯಂತೆ ತಲೆಯಲ್ಲಾಡಿಸಿದಳು. ಬೆಂಗಳೂರು ಮಹಾನ್ ಮಹಾನ್ ವ್ಯಕ್ತಿಗಳನ್ನು ಒಳಗೊಂಡಿದೆಯೇನೋ? ಎಲ್ಲಾ ವ್ಯಕ್ತಿಗಳಲ್ಲಿ ಒಂದು ರೀತಿಯ ನಿಗೂಢತೆ ಇದೆಯೇನೋ ಎನ್ನುವ ಅಂಶ ರನ್ನೆಯವರನ್ನು ನೋಡಿದಾಗಿನಿಂದ ಆಕೆಯ ತಲೆಯಲ್ಲಿ ಹೊಕ್ಕು ಹೋಗಿತ್ತು. 'ನನ್ನ ಪತ್ರ ಸಿಕ್ತಾ, ನಿಮ್ಮ ಕುಂತಿಯ ಪಾತ್ರದ ಚಿತ್ರಣ ಇಷ್ಟವಾಯ್ತು' ಅಂತ ಮತ್ತೆ ಹೇಳಿದ್ಲು. ಆಕೆ ಜಡೆ ಅಲ್ಲಾಡಿಸಿದ ರೀತಿಯಲ್ಲಿ ಗಂಗಾ ಮುಗ್ಧೆ ಎನಿಸಿರಬೇಕು ಆತನಿಗೆ. ಆತನ ಮನಸ್ಸಿನೊಳಗೊಂದು ರೋಚಕತೆ ಹರಿದು ಮಾಯವಾದದ್ದು ಅವನ ಮುಖ ಭಾವದಿಂದ ಗಂಗಾಳಿಗೆ ಅರ್ಥವಾಯಿತು. ಆತ ಹತ್ತಿರ ಬಂದು 'ಇನ್ನೊಂದು ನಾಟಕ ಕೊಡ್ತೀನಿ, ಓದ್ತೀರಾ' ಅಂದ. 'ಅದಕ್ಕೇನು ಕೊಡಿ' ಅಂದ್ಲು ಗಂಗಾ. ಗಂಗಾ ನಾಟಕ ಇಸಿದುಕೊಂಡು ಹೊರಡುವಾಗ ಆತ 'ನಿಮ್ಮನ್ನೇ ಪಾರ್ಕ್‌ನಲ್ಲಿ ಕಾಯ್ತಾ ಇರ್ತೀನಿ' ಅಂತ ಡೇಟ್, ಟೈಮ್ ಹೇಳಿದ. ಗಂಗಾ ಸರಿ ಅಂದು ಹೊರಟು ಬಂದಿದ್ದಳು.

ನಾಟಕ ಓದಿ ಮುಗಿಸಿ ಆತ ಹೇಳಿದ ದಿನ ಹೋದಾಗ ಆತ ಕಾಯುತ್ತಾ ಇದ್ದ. 'ಸರಿಯಾದ ಸಮಯಕ್ಕೆ ಬಂದ್ರಿ' ಅಂದ. ಅವನ ಡ್ರೆಸ್‌ನಲ್ಲಿ ಸ್ವಲ್ಪ ವಿಶೇಷತೆ ಇತ್ತು. ಮೊದಲು ದಿನದ ಹಾಗೆ ಮೊದಲು ಕೆದರಿಕೊಂಡಿರಲಿಲ್ಲ.

'Why don't we talk over a cup of tea' ಅಂದ. ಗಂಗಾ ಈ ವರುಷಗಳಲ್ಲಿ ರಾತ್ರಿ ಪೋಸ್ಟರ್ ಹಚ್ಚಿ ಬಂದಾಗ, ಎಲ್ಲಿಯೋ ರಾತ್ರಿ ಹನ್ನೊಂದು ಘಂಟೆಯ ಮೀಟಿಂಗ್‌ಗಳ ನಂತರ ಪಾರ್ವತಿಯ ಸಂಸ್ಥೆಯ ಗೆಳೆಯರ ಜೊತೆ ಬಿಯರ್ ಕುಡಿಯುವುದನ್ನು ಕಲಿತಿದ್ದಳು. ಸಂಪ್ರದಾಯಸ್ಥ ಕುಟುಂಬದಿಂದ ಬಂದ ಗಂಗಾ/ಪಾರ್ವತಿಯರಿಗೆ ಇದು ಮೊದ ಮೊದಲು ಏನೋ ರೋಚಕವಾಗಿ ಕಾಣುತ್ತಿತ್ತು. ಹೆಣ್ಣಿನ ಬಗ್ಗೆಗಿನ ಸಂಪ್ರದಾಯಗಳ ವಿರೋಧದಲ್ಲಿ ಇದನ್ನೂ ಒಂದು ಸಾಧನವಾಗಿ ಗಂಗಾ ಭಾವಿಸಿದ್ದಳು. ಇಂತಹ ಸಂದರ್ಭದಲ್ಲಿಯೇ ಈಕೆ ಈ ವ್ಯಕ್ತಿ ಬಾಲುವನ್ನು ಭೇಟಿಯಾದುದು. ಗಂಗಾ ಸಲೀಸಾಗಿ 'Why not over a cup of beer'? ಅಂದ್ಲು. ಬಾಲುವಿಗೆ ಆಶ್ಚರ್ಯ ಆಯಿತು.

ನೋಡಿದರೆ ಹಳ್ಳಿಯ ಹುಡುಗಿಯ ಚಹರೆಗಳೇ ಇವೆ. ಒಂದು ಜಡೆ, ಮ್ಯಾಕ್ಸಿ ಹಾಕಿದ್ದಾಳೆ. ಆಕೆಯನ್ನು ಆತ 'ಬಜಾರಿ' ಎಂದು ಮನಸ್ಸಲ್ಲಿಯೇ ಅಂದುಕೊಂಡಿರಬೇಕು. ಕೊನೆಗೆ 'done' ಎಂದ ಬಾಲು.

ಅಲ್ಲಿಯವರೆಗೆ ಕೊಠಡಿಯಲ್ಲಿ ಕುಳಿತು, ಅಥವಾ ಗೆಳತಿ/ಗೆಳೆಯರ ಮನೆಗಳಲ್ಲಿ ಕುಳಿತು ಗಂಗಾ ಬಿಯರ್ ಕುಡಿದುದುಂಟು. ಅವರೊಂದಿಗೆ ಮಹಿಳಾ ಪ್ರಶ್ನೆಗಳ ಬಗ್ಗೆ, ಆಸ್ತಿಯ ಕಲ್ಪನೆಯ ಬಗ್ಗೆ ಚರ್ಚೆಗೆ ಇಳಿದುದುಂಟು. ಆದರೆ ಯಾರ ಜೊತೆಗೂ ಹೋಟೆಲ್‌ಗೆ ಹೋಗಿ ಬಿಯರ್ ಕುಡಿದವಳಲ್ಲ. ಪಾರ್ವತಿ/ಗಂಗಾ ಒಟ್ಟಿಗೆ ಹೋದ ಸಂದರ್ಭಗಳಲ್ಲಿಯೂ ಹೋಟೆಲ್‌ನಲ್ಲಿ ಇಬ್ಬರೇ ಕುಳಿತು ಬಿಯರ್ ಕುಡಿದುದಿಲ್ಲ. ಈಗ ಗಂಗಾಗೆ ಹೇಳಿಯಾದ ಮೇಲೆ ಸಂಕೋಚ ಪ್ರಾರಂಭವಾಯಿತು. ರವಿಯೊಟ್ಟಿಗೆ ಎಷ್ಟೋ ಸಲ ಘಂಟೆಗಟ್ಟಲೇ ಹೋಟೆಲ್‌ಗಳಲ್ಲಿ ಕುಳಿತು ಹರಟಿದುದುಂಟು, ಮಾತನಾಡಿದುದುಂಟು. ರವಿಯ ಸಂಬಂಧ ಮುರಿದು ಹೋದ ಮೇಲೂ ಸಹ ಗಂಗಾ ಮೈಸೂರಿನಲ್ಲಿ ರವಿಯೊಟ್ಟಿಗೆ ಕುಳಿತು ಮಾತನಾಡಿದುದುಂಟು. ಆದರೆ ಅವೆಲ್ಲ ಯಾವುದೋ ವಿಷಯಗಳ ಕುರಿತಾಗಿ. ಆ ನಂತರ ರವಿಯನ್ನು ಬಿಟ್ಟು ಏನೂ ಸಂಬಂಧವಿಲ್ಲದವರ ಹಾಗೆ ನಡೆದು ಹೋಗಿಬಿಡುತ್ತಿದ್ದುದುಂಟು. ಬಾಲು ಯಾವುದೋ ಸುಸಜ್ಜಿತವಾದ ಹೋಟೆಲ್‌ಗೆ ಕರೆದೊಯ್ದು, ಬಿಯರ್ ಕುಡಿಯುವುದಕ್ಕೆ ಮೂಲೆಯೊಂದನ್ನು ಹುಡುಕಿದ. ಗಂಗಾ ಆತನ ನಾಟಕದ ಮಿತಿಗಳ ಬಗ್ಗೆ ತನಗನ್ನಿಸಿದ್ದನ್ನು ಹೇಳುತ್ತಾ ಹೋದಳು. ಅಕ್ಷರಗಳು ಕೆಟ್ಟದಾಗಿರುವ ಕಾರಣ ಓದಲೂ ಕೆಲವು ಸಲ ಕಷ್ಟವಾಗುತ್ತದೆ ಎಂದಳು.

'ನೋಡಿ, ಅದಕ್ಕೇ ಅನ್ಕೊಂಡೆ. ನಿಮ್ಮ ಪತ್ರದಲ್ಲಿ ನಿಮ್ಮ ಅಕ್ಷರಗಳು ನಿಮ್ಮಷ್ಟೇ ಮುದ್ದಾಗಿವೆ, ನೀವು ಮನಸ್ಸು ಮಾಡಿದ್ರೆ ಈ ನಾಟಕ ಕಾಪಿ ಮಾಡಿಕೊಡಬಹುದು'.

ಗಂಗಾಗೆ ನಿಧಾನವಾಗಿಯೇ ಸಿಟ್ಟು ಬರತೊಡಗಿತ್ತು. ಅದನ್ನು ಆಕೆ ತೋರಿಸಿಕೊಳ್ಳಲಿಲ್ಲ. ಬಿಯರ್ ಕಪ್‌ನ್ನು ಬಿಗಿಯಾಗಿ ಹಿಡಿದು ಆನಂತರ ಹೇಳಿದಳು,

"ಕಾಪಿ ಮಾಡೋದೇನು, ಕಾಫಿ ಮಾಡಿ ಕುಡಿಯೋದಕ್ಕೂ ನನಗೆ ಬೋರ್, ನನಗೆ ನಂದೇ ಸಾಕಷ್ಟು ಕೆಲಸ ಇದೆ; ಹಾಗಾಗಿ ನಾನು ಇನ್ನೊಬ್ಬರಿಗಾಗಿ ಕುಳಿತುಕೊಂಡು ಕಾಪಿ ಮಾಡೋದನ್ನ ಇಷ್ಟ ಪಡೋಲ್ಲ. ನಾನು ಬರೆಯುವ ಲೇಖನಗಳನ್ನ ಇನ್ನೊಬ್ಬರು ಕಾಪಿ ಮಾಡಿ ಕೊಡೋದನ್ನ ಕೂಡಾ ನಾನು ಇಷ್ಟ ಪಡೋಲ್ಲ". ಗಂಗಾ ಹೀಗೇ ಏನೇನೋ ಹೇಳುತ್ತಾ ಹೋದಳು.

'ಹೋಗಲಿ ಬಿಡಿ, ಇದು ನಿಮಗೆ ಸ್ವಾಭಿಮಾನದ ಪ್ರಶ್ನೆ' ಎಂದ ಆತ. ಕೊನೆಗೆ ಗಂಗಾ 'ಇದು ಸ್ವಾಭಿಮಾನದ ಪ್ರಶ್ನೆ ಅಲ್ಲ, ನನಗೆ ನನ್ನದೇ ನೂರೆಂಟು ಕೆಲಸಗಳು ಇರುತ್ತೆ. ಆ ಕೆಲಸಗಳ ಮಾಡಿಕೊಳ್ಳೋಕೇ ನನಗೆ ಸಮಯ ಸಿಗಲ್ಲ. ಅಂತಹದರಲ್ಲಿ ನಿಮಗೆ ಹೇಗೆ ಕಾಪಿ ಮಾಡಿ ಕೊಡಲಿ? It is just a matter of time' ಎಂದಳು.

ಬಾಲು ಆಕೆಯ ತಂದೆ-ತಾಯಿಯ ಬಗ್ಗೆ ವಿಚಾರಿಸತೊಡಗಿದ. ಗಂಗಾ ಕೊನೆಗೆ 'ನಿಮಗೆ ಮೂರು ಮಕ್ಕಳಿರಬೇಕಲ್ವಾ?' ಎಂದಳು. ಆತನಿಗೆ ದಿಗ್ಭ್ರಮೆಯಾಯಿತು. ಒಂದು ಕ್ಷಣ ಅವಾಕ್ಕಾಗಿ ಬಿಯರ್ ಕುಡಿಯುವುದನ್ನು ನಿಲ್ಲಿಸಿ ಅವಳನ್ನೇ ನೋಡತೊಡಗಿದ.

ಕೊನೆಗೆ 'ನಿಮಗೆ ಹೇಗೆ ಗೊತ್ತಾಯ್ತು?' ಎಂದ.

'ಗೊತ್ತಾಗ್ದೇ ಇರೋದು ಏನಿದೆ ಅದರಲ್ಲಿ?' ಅಂದ್ಲು ಗಂಗಾ.

'ನಿಮ್ಮ ಹೆಂಡತಿ ಕೆಲಸ ಮಾಡಲ್ವಾ?'

'ಇಲ್ಲ' - ಎಂದ ಬಾಲು ಆತನ ಹೆಂಡತಿಯ ಬಗ್ಗೆ ಹೇಳಲು ಪ್ರಾರಂಭಿಸಿದ. 'ಅವಳು ನನ್ನ ಅರ್ಥ ಮಾಡಿಕೊಳ್ಳೋದಿಲ್ಲ. ಏನಾದ್ರೂ ಸಾಹಿತ್ಯದ ಚರ್ಚೆ ಪ್ರಾರಂಭಿಸಿದ್ರೆ ಅವಳು ಎದ್ದು ಹೋಗ್ತಾಳೆ. ಮೊನ್ನೆ ಹೀಗೇ ಒಂದು ರಾಜಕೀಯದ ಚರ್ಚೆನ ನಮ್ಮ ಮನೇನಲ್ಲಿ ಏರ್ಪಡಿಸಿದ್ದೆ. ನನ್ನ ಹೆಂಡತೀನಾ ಒತ್ತಾಯಪೂರ್ವಕವಾಗಿ ಕೂರಿಸಿದ್ದಕ್ಕೆ ಆಕೆ ನಿದ್ದೆ ಮಾಡ್ತಾ ಇದ್ಲು'.

ಗಂಗಾ ಏನೂ ಮಾತನಾಡದೇ ಎದ್ದು 'ಹೋಗೋಣ್ವಾ' ಅಂದ್ಲು.

* * * * *

ಹೀಗೆ ಅನೇಕ ಬಾರಿ ಗಂಗಾ ಬಾಲುವನ್ನು ಭೇಟಿಯಾದುದುಂಟು. ಏನೋ ಓದುವುದು, ಚರ್ಚಿಸುವುದು, ನಿಮ್ಮ ಲೇಖನಗಳ ಕೊಡಿ ಎಂದು ಆತ ಕೇಳುವುದು, ನಾಲ್ಕು ಘಂಟೆಗೋ, ಐದು ಘಂಟೆಗೋ ಕಾಯುತ್ತೇನೆ ಎನ್ನುವುದು, ಬರದಿದ್ದರೆ ಫೈನ್ ಎನ್ನುವುದು. 'ಏನು ಫೈನ್' ಎಂದು ಗಂಗಾ ಮುಗ್ಧತೆ ನಟಿಸಿ ಕೇಳಿದರೆ 'ಒಂದು ಬಾಟಲ್ ಬಿಯರ್' - ಎನ್ನುವುದು. ಗಂಗಾ ಈ ಸಂಬಂಧದಲ್ಲಿ ಆತ್ಮೀಯತೆಯ ತಂತುಗಳನ್ನ, ಬೆಚ್ಚನೆಯ ಹೃದಯವನ್ನು ಹುಡುಕುತ್ತಾ ಹೋದಳು. ಮನುಷ್ಯರನ್ನು ನಂಬಲೇಬಾರದೆಂದು ರವಿ ಕಲಿಸಿದ ಸತ್ಯದ ಒಡಲಿನಲ್ಲಿಯೇ ಗಂಗಾ ನಿಧಾನವಾಗಿ ಬಾಲುವಿನ ಸಂಬಂಧಕ್ಕೆ ತೆರೆದುಕೊಳ್ಳುತ್ತಾ ಹೋದಳು. ರವಿಯ ಸಂಬಂಧದಿಂದ ಆದ ಆಘಾತದಿಂದ ಚೇತರಿಸಿಕೊಳ್ಳಲಿಕ್ಕೆ, ತಾರುಣ್ಯದ ಆಸೆಯ ಅಭಿವ್ಯಕ್ತಿಗಳಿಗೆ ಗಂಗಾ ಈಗ ಒಂದು ರೀತಿಯ ಅಲೆಮಾರಿ ಬದುಕನ್ನೇ ಆಶಿಸಿದ್ದಳು. ಬಾಲುವಿನ ಮಾತಿನಲ್ಲಿ ಆತ್ಮೀಯತೆ ಇರುತ್ತಿತ್ತು. ಮನಸ್ಸಿಗೆ ಹಿತವೆನಿಸುವ ಮಧುರತೆ ಇತ್ತು, ಸಲಿಗೆ ಇತ್ತು. ಲೇಟಾದಾಗ 'ಏನಮ್ಮ ಇಷ್ಟೊತ್ತು' ಎನ್ನುವ ಧ್ವನಿಯಲ್ಲಿ ಕಾತರತೆ ಇತ್ತು. ಆತ ತನ್ನ ಸಂಬಂಧದಲ್ಲಿ ಸಲಿಗೆ ತೆಗೆದುಕೊಳ್ಳುತ್ತಿದ್ದಾನೆ ಎಂದು ಅರಿವಾದಾಗಲೂ ಆ ಸಲಿಗೆಯನ್ನು ಅಂತರಂಗದ ಮಧ್ಯೆ ನಡೆಯುವ ಗೊಂದಲದ ನಡುವೆಯೂ ಒಪ್ಪಿಕೊಳ್ಳುತ್ತಾ ಹೋದಳು. ಅಲೆಮಾರಿ ಬದುಕಿನಲ್ಲಿ ಬದುಕು ದಕ್ಕಿದಷ್ಟು ಎನ್ನುವ ನಿರ್ಲಿಪ್ತ ಭಾವವೊಂದು ಭಾವನೆಗಳ ತಳದಲ್ಲಿ ಬೇರುಬಿಟ್ಟಿತ್ತು. ಯಾರೊಟ್ಟಿಗಾದರೂ ಬದುಕುವ ಬದುಕಿನ ಚೈತನ್ಯವನ್ನು ರವಿ ಕಿತ್ತು ಹಾಕಿದ ಮೇಲೆ ಆ ಸ್ಥಳದಲ್ಲಿ ಬೇರೊಂದು ನಂಬಿಕೆ ಬೇಕಿತ್ತು. ರವಿ ಪರಿಚಯವಾದ ಹೊಸತರಲ್ಲಿ ಗಂಗಾಗೆ ರವಿಯ ಪ್ರಪಂಚವೇ ಒಂದು absolute ಆದ ಪ್ರಪಂಚವಾಗಿತ್ತು. ಆ ಮುಗ್ಧ ಪ್ರಪಂಚದಲ್ಲಿ ಆಕೆಗೆ ಕಾಣಿಸುತ್ತಿದ್ದುದು ಆಕೆ ಹಾಗೂ ರವಿ ಮಾತ್ರ. ಆದರೆ ಬಾಲುವಿನ ಪರಿಚಯ/ಸಲಿಗೆ ಒಪ್ಪಿಕೊಳ್ಳುವ ವೇಳೆಗೆ ಆ ಮುಗ್ಧ ಪ್ರಪಂಚದ ಮುಗ್ಧ ಹುಡುಗಿಯಾಗಿಯೇನೂ ಗಂಗಾ ಉಳಿದಿರಲಿಲ್ಲ. ಬಾಲುವಿನ ಸಂಬಂಧದಲ್ಲಿನ ಸಲಿಗೆಯನ್ನು ಒಪ್ಪಿಕೊಂಡುದುದು ಪ್ರಜ್ಞಾಪೂರ್ವಕವಾಗಿ ಹಾಗೂ ತನ್ನದೇ ಆದ ಆಯ್ಕೆಯಿಂದಾಗಿ. ಬೆಂಗಳೂರಿನಲ್ಲಿ ಬಾಲುವಿನ ಇರವು ಮಾತ್ರ ಅವಳಿಗೆ ಇಡಿಯ ಪ್ರಪಂಚವಾಗಿರಲಿಲ್ಲ. ಶಿವಮೊಗ್ಗೆಯಲ್ಲಿ ರವಿಯ ಪರಿಚಯದ ಪ್ರಥಮ ದಿನಗಳಲ್ಲಿ, ಆತನನ್ನು ಆಕೆ ತೀವ್ರವಾಗಿ ಪ್ರೀತಿಸುತ್ತಿದ್ದ ದಿನಗಳಲ್ಲಿ ಆ ಊರು, ಆ ಕಾಲೇಜು ಇವೆಲ್ಲದರ ನಡುವೆ ಆಕೆಯ ಜೀವನದ ಕೇಂದ್ರ ಬಿಂದುವೇ ರವಿ ಆಗಿದ್ದ. ಬೆಂಗಳೂರಿನಲ್ಲಿ ಗಂಗಾಳ ಬದುಕಿಗೆ ಬಾಲು ಕೇಂದ್ರ ಬಿಂದುವಾಗಲು ಸಾಧ್ಯವೇ ಇರಲಿಲ್ಲ. ತೀವ್ರವಾಗಿ ತೊಡಗಿಕೊಂಡ

ಪಾರ್ವತಿಯ ಸಂಬಂಧ, 'ಸ್ತ್ರೀ ಮುಕ್ತಿ'ಯ ಮಹಿಳಾ ಚಟುವಟಿಕೆಗಳು, ಆಕೆಯ ಕಾಲೇಜ್ ವಿದ್ಯಾರ್ಥಿಗಳು, 'ಸ್ತ್ರೀ ಮುಕ್ತಿ'ಯ ಸ್ನೇಹಿತೆಯರು, ಆಕೆಯ ಬರಹಗಳು ಹೀಗೆ ಅನೇಕ ಸಂಗತಿಗಳಿದ್ದವು. ಹಾಗಾಗಿ ಬಾಲುವಿನ ಸಂಬಂಧವನ್ನು ತನ್ನ ಜೀವನದ ಒಂದು ಭಾಗವನ್ನಾಗಿ ಮಾತ್ರ ಗಂಗಾ ಪರಿಗಣಿಸಿದ್ದಳು. ಅನೇಕ ಬಾರಿ ಬಾಲುವಿನ ಜೊತೆ ಮಾತನಾಡುವಾಗಲೆಲ್ಲಾ ಆತನ ಕಣ್ಣು/ಕಿವಿಗಳು ಎಲ್ಲಿರುತ್ತವೆಯೆಂದು ಗಂಗಾಗೆ ಅರ್ಥವಾಗುತ್ತಿರಲಿಲ್ಲವೆಂದಲ್ಲ. ಅರ್ಥವಾಗದ ಹಾಗೆಯೇ ಇದ್ದುಬಿಡುವುದು ಉತ್ತಮ ಎಂದು ಆಕೆ ಅಂದುಕೊಳ್ಳುತ್ತಿದ್ದಳು. ಹೀಗೇ ಬಾಲುವಿನ ಸಂಬಂಧ ಅತ್ಯಂತ ಹತ್ತಿರಕ್ಕೆ ಸರಿದ ಕ್ಷಣಗಳು ಗಂಗಾಗೆ ನೆನಪಿನಲ್ಲಿವೆ.

'ಆಟೋದಲ್ಲಿ ನಿಮ್ಮನ್ನ ಬಿಟ್ಟು ಕೊಡುತ್ತೇನೆ ಬನ್ನಿ'

'ಇಲ್ಲ, ನಾನು ಬಸ್ಸಿಗೇ ಹೋಗುತ್ತೇನೆ'

'ಪರವಾಗಿಲ್ಲ ಬನ್ನಿ, ದುಡ್ಡಿನ ಮುಖ ನೋಡುತ್ತೀರಾ?'

'ದುಡ್ಡಿನ ಮುಖ ಅಲ್ಲ, ಅವಶ್ಯಕತೆ ಇಲ್ಲದಾಗ ಯಾಕೆ ಆಟೋಕ್ಕೆ ದುಡ್ಡು ಹಾಕಬೇಕೂಂತ. ಬಸ್ಸಿನಲ್ಲಿ ಹೋಗುವಷ್ಟು ಟೈಮ್ ಇದೆ ನನಗೆ'. ಒತ್ತಾಯಕ್ಕೆ ಆಟೋ ಹತ್ತಿದಾಗ ಆತ ತೀರಾ ಪಕ್ಕಕ್ಕೆ ಸರಿದು, ಹತ್ತಿರಕ್ಕೆ ಸರಿದಾಗಲೂ ಅರಿವಾದರೂ ಗಂಗಾ ಅರಿವಾಗದಂತೆ ಇದ್ದುಬಿಡುತ್ತಾಳೆ.

'ಸ್ನೇಹಿತೆಯಾಗಿರಮ್ಮ, ಶತ್ರುವಾಗಬೇಡ' - ಅನ್ನುತ್ತಾನೆ

ಆತನ ಸಲಿಗೆ/ಸರಸಗಳು ಗಂಗಾಗೆ ಅರ್ಥವಾಗುತ್ತವೆ. ಆ ಕ್ಷಣಕ್ಕೆ ಹಿತವೆನ್ನಿಸುವ ಮಾತುಗಳೂ ಹಾಗೂ ಟಚ್. ಆಕೆ ದೂರ ಸರಿಯುವುದಿಲ್ಲ. 'ನೋಡಿ ಬಿಡೋಣ' - ಎಂದೇನೋ ಆಕೆಯ ಮನಸ್ಸಿಗೆ ಅನ್ನಿಸುತ್ತದೆ. ಅಥವಾ ಗಾಬರಿಯಾಗುವವರಂತೆ ಕೈ ಹಿಂದೆ ತೆಗೆದುಕೊಳ್ಳುವುದು, ಸಿಟ್ಟು ಮಾಡಿಕೊಳ್ಳುವುದು ಆಕೆಯ ವ್ಯಕ್ತಿತ್ವಕ್ಕೆ ಸವಾಲು ಎನ್ನಿಸಿರಬೇಕು. ಈ ಮನುಷ್ಯ ಏನು ಎನ್ನುವ ವಿಚಿತ್ರ ಕುತೂಹಲ ಆ ಕ್ಷಣಕ್ಕೆ ಗಂಗಾಳ ಮನಸ್ಸಿನಲ್ಲಿ ಮೂಡಿರಬೇಕು. ಮುತ್ತಿಡಲು ಆತ ಮುಖವನ್ನು ಎಳೆದಾಗ ಒಂದು ಕ್ಷಣ ಇಷ್ಟವಾಗದೇ ತನ್ನ ಮುಖವನ್ನು ಎಳೆದುಕೊಳ್ಳಲು ಪ್ರಯತ್ನಿಸುತ್ತಾಳೆ. ತನ್ನಲ್ಲಿ ಕೀಳರಿಮೆ ಹುಟ್ಟಿಸುವ ತನ್ನ ಹಲ್ಲಿನ ಬಗ್ಗೆ ಆತನಲ್ಲಿ ಹೇಳಿಕೊಂಡು ಬಿಡಬೇಕು ಎನಿಸುತ್ತದೆ. ಆದರೆ ಎಲ್ಲಿಯದೋ ಅಭಿಮಾನ. ಅವನಿಗೇ ಅರ್ಥವಾಗಲಿ ಎಂದು ಮುಖ ಎಳೆದುಕೊಳ್ಳದೇ ಸುಮ್ಮನಾಗಿಬಿಡುತ್ತಾಳೆ. ಆತ ಎರಡು ಮೂರು ಬಾರಿ ಮುದ್ದಿಸಿದಾಗ ಕೂಡಾ ಗಂಗಾ ತಪ್ಪಿಸಿಕೊಳ್ಳುವ ಪ್ರಯತ್ನವನ್ನೇನೂ ಮಾಡುವುದಿಲ್ಲ. ಅಲೆಮಾರಿ ಬದುಕಿನ ಮೆಟ್ಟಿಲುಗಳ ಮೇಲೆ ಹೆಜ್ಜೆ ಇಡುತ್ತಿದ್ದೇನೆ ಎಂದುಕೊಳ್ಳುತ್ತಾಳೆ. ಕಾಮವನ್ನು ಬದುಕಿನಲ್ಲಿ ಸರಳ ರೇಖೆಯ ಮೇಲೆ ಇಟ್ಟು, ನೋಡಲು ಒಪ್ಪಿಕೊಂಡಳೋ, ವ್ಯಕ್ತಿತ್ವದ ಅಭಿಮಾನದ ಗರ್ವದಲ್ಲಿ ಒಪ್ಪಿಕೊಂಡಳೋ, ಅಥವಾ ಸಾರ್ವಜನಿಕವಾಗಿ ಹೆಸರಿರುವ ವ್ಯಕ್ತಿಯ ಜೊತೆ ತನಗೆ ಸಂಬಂಧವಿದೆ ಎನ್ನುವ ಲಾಲಸೆಯಲ್ಲಿ ಒಪ್ಪಿಕೊಂಡಳೋ ಇವೆಲ್ಲ ಆಕೆಗೇ ಗೊಂದಲ. ಆ ಕ್ಷಣದಲ್ಲಿ ಗಂಗಾಗೆ ಅನ್ನಿಸಿದ್ದು, ಕಾಡಿದ್ದು ಇಷ್ಟು ಮಾತ್ರ - ಬದುಕಿನಲ್ಲಿ ದಕ್ಕಿದ್ದನ್ನೆ ದಕ್ಕಿಸಿಕೊಳ್ಳಬೇಕು ಎನ್ನುವ ನಿರ್ಲಿಪ್ತ ಧೋರಣೆ. ಆದರೂ ಆ ಕ್ಷಣದಲ್ಲಿ ಗಂಗಾಗೆ ಬಾಲುವಿನ ಬಗ್ಗೆ ಅಪಾರ ಕರುಣೆಯೂ ಬಂದಿತ್ತು. 'ಸ್ನೇಹಿತೆಯಾಗಿರಮ್ಮ, ಶತ್ರುವಾಗಬೇಡ' ಎನ್ನುತ್ತಲೇ ತಲೆಯ ಮೇಲೆ ಕೈಯಿಟ್ಟು ಕಾಮದ ಸಂಬಂಧಗಳಿಗೆ

ಹುಡುಗಿಯರನ್ನು ಎಳೆದು ಬಿಡುವ ಬಾಲುವಿನಂತಹ ಸಂಬಂಧಗಳಿಗೆ ಬದುಕಿನಲ್ಲಿ ಇಡಿಯಾಗಿ ತನ್ನಂತಹ ಸಂಬಂಧವನ್ನು ಒಳಗೊಳ್ಳುವ ಶಕ್ತಿಯಾದರೂ ಇದೆಯೇ? ಜೀವನದ ಹಲವಾರು ಆಯಾಮಗಳಿಗೆ ತನ್ನ ಸಂಬಂಧದ ಮೂಲಕ ಬಾಲು ಗಂಗಾಳನ್ನು ಒಳಗೊಳ್ಳಲು ಸಾಧ್ಯವಾಗುತ್ತದೆಯೇ ಎಂಬ ಪ್ರಶ್ನೆ ಗಂಗಾಳಿಗೆ ಕೊರೆಯದೆಯೂ ಇರಲಿಲ್ಲ. ಜೀವನದ ತೀವ್ರಗತಿಯಲ್ಲಿ ಸಾಗುವ ತನ್ನಂತಹ ರಭಸದ ಹುಡುಗಿಯ ಸಂಬಂಧವನ್ನು ಉಳಿಸಿಕೊಳ್ಳುವ ಶಕ್ತಿಯಾದರೂ ಆತನಿಗಿದೆಯೇ? ಹೀಗೆ ಪರಿಚಯದ ಪ್ರಾರಂಭದಲ್ಲಿಯೇ ಸರಳವಾಗಿ ಹುಡುಗಿಯರನ್ನು ಕಾಮದ ಸಂಬಂಧಕ್ಕೆ ಎಳೆಯುವ ಬಾಲುವಿನ ವ್ಯಕ್ತಿತ್ವವನ್ನು ಅದೇ ಎಳೆಯ ಮೂಲಕ ಶೋಧಿಸುವ ಕುತೂಹಲ ಕೂಡಾ ಗಂಗಾಳಲ್ಲಿ ಆ ಕ್ಷಣಕ್ಕೆ ಮನೆ ಮಾಡಿದ್ದಿರಬಹುದು.

ಗಂಗಾ ಈತನ ಕೈ ಹಿಡಿದು ಸಲೀಸಾಗಿ ಓಡಾಡಿದ್ದುಂಟು. ಅಲಸೂರು ಕೆರೆಯ ಬಳಿ ಕುಳಿತು ಆತನ ಬದುಕಿನ ಕನಸುಗಳನ್ನು ಕೇಳಿಸಿಕೊಂಡದ್ದುಂಟು. ಆತನ ನಾಟಕಗಳಿಗೆ ತಾನು ಸ್ಫೂರ್ತಿಯಾಗ ಬೇಕೆಂದೂ, ಇಬ್ಬರೂ ಒಂದುಗೂಡಿ ನಾಟಕ ನಿರ್ದೇಶಿಸೋಣ ಎಂಬ ಅನೇಕ ಮಾತುಗಳನ್ನು ಗಂಗಾ ಬಾಲುವಿನ ಬಾಯಿಯಿಂದ ಕೇಳಿದ್ದಳು. ಕೆರೆಯ ಏರಿಯ ಮೇಲೆ ಕೆಲವೊಮ್ಮೆ ಅವನು ತನ್ನಷ್ಟಕ್ಕೆ ತಾನೇ ಮಾತನಾಡುತ್ತಿದ್ದ. ಕಾಮದ ಕತೆಗಳನ್ನು ಹೇಳಿ ಗಂಗಾಳನ್ನು ರಂಜಿಸಲು ಅಥವಾ ಆಕೆಯಲ್ಲಿ ಆ ಭಾವನೆಗಳನ್ನು ಉಕ್ಕಿಸಲು ಪ್ರಯತ್ನಿಸುತ್ತಿದ್ದ. ಆತನ ಮಾತುಗಳಿಗೆ ಗಂಗಾ ಮನಸೊಳಗೇ ಹಲವಾರು ಬಾರಿ ನಕ್ಕದ್ದುಂಟು. ಆತನ ಮಾತುಗಳು ಆ ಕ್ಷಣಕ್ಕೆ ತನ್ನನ್ನು ರಂಜಿಸಲು, ರೋಮ್ಯಾಂಟಿಕ್ ಮೂಡ್‌ಗೆ ತರಲು ಮೂಡಿ ಬಂದವುಗಳೇನೋ ಎಂದು ಆಕೆಗೆ ನಿಧಾನವಾಗಿ ಅನ್ನಿಸುತ್ತಿತ್ತು. ಇಂತಹ ಸಂದರ್ಭದಲ್ಲಿಯೇ ಬಾಲು ಒಂದು ಬಾರಿ 'ನನ್ನನ್ನು ನಿನ್ನ ಮನೆಗೆ ಕರೆದುಕೊಂಡು ಹೋಗು' ಎಂದು ಬಾಯಿ ಬಿಟ್ಟು ಕೇಳಿದ್ದುಂಟು, ಒತ್ತಾಯಿಸಿದ್ದುಂಟು. ಬಹಳ ದಿನಗಳವರೆಗೆ ಗಂಗಾ ಈ ಮಾತನ್ನು ತಳ್ಳಿ ಹಾಕುತ್ತಲೇ ಬಂದಿದ್ದಳು. 'ನಿನ್ನ ಜೊತೆ ಮಲಗಬೇಕೆನ್ನಿಸಿದಾಗ ನೋಡೋಣ' ಎಂದು ತಮಾಷೆ ಮಾಡಿ ನಕ್ಕುಬಿಡುವಳು. ತಾನು ಈ ಬದುಕಿಗೆ, ಅಲೆಮಾರಿ ಬದುಕನ್ನು ಒಪ್ಪಿಕೊಳ್ಳುತ್ತಿರುವುದೇ ಒಂದು ವಿಚಾರಧಾರೆಯ ಮೂಲಕ. ಅಂಟಿಕೊಂಡು ಬದುಕುವ ಬದುಕಲ್ಲಿ, ಇರುವ ಸಾಂಸ್ಕೃತಿಕ ವಾತಾವರಣದಲ್ಲಿ ಮನೆಗೇ ಅಂಟಿಕೊಂಡು, ಕೌಟುಂಬಿಕ ಚೌಕಟ್ಟಿನೊಳಗೇ ಜೀವನ ಸವೆಸಬೇಕಾಗುತ್ತದೆಯೇನೋ ಎನ್ನುವ ಭಯ ನಿರಂತರವಾಗಿ ಆಕೆಯನ್ನು ಕಾಡುತ್ತದೆ. ಹಾಗೆ ಅಂಟಿಕೊಂಡು ಬದುಕುವ ಕಲ್ಪನೆಯನ್ನೇ ರವಿ ಬುಡ ಸಮೇತ ಕಿತ್ತು ಬಿಸಾಕಿದ್ದ. ಯಾರನ್ನೂ ನಂಬದಿರುವ ಮನಸ್ಸಿನಿಂದಲೇ ಗಂಗಾ ಬಾಲುವನ್ನು ನಂಬಿದ್ದಳು ಅಥವಾ ನಂಬಿದ್ದಂತೆ ನಟಿಸಿದ್ದಳು. ಅಂಟಿಕೊಳ್ಳುವ ಮನಸ್ಸಿಲ್ಲದೆಯೇ ಬಾಲುವಿನ ಸಂಬಂಧಕ್ಕೆ ಅಂಟಿಕೊಂಡಿರುವಂತೆ ಕಾಣಿಸುತ್ತಿದ್ದಳು. ಬಾಲು ಮದುವೆಯಾದವ, ಎಷ್ಟರ ಮಟ್ಟಿಗೆ ವ್ಯಕ್ತಿತ್ವದ ಇಂಟಗ್ರಿಟಿಯ ಪ್ರಶ್ನೆ ಇಲ್ಲಿ ಸಾಧ್ಯ ಇತ್ತು? ಕಾಮದ ಮೂಲಕ ಬದುಕನ್ನು ಶೋಧಿಸಲೋ ಅಥವಾ ಕಾಮದ ಲಾಲಸೆಗೆ ಅಥವಾ ನಿಗೂಢತೆಗೋ ಆ ವೃತ್ತಕ್ಕೆ ಹುಡುಗಿಯರನ್ನು ಎಳೆಯುವವ. ಆದರೆ ಹಾಗೆ ಒಳಗೊಂಡವರ ಬದುಕನ್ನು ಎಷ್ಟರ ಮಟ್ಟಿಗೆ ಕೆಲವು ಆಶಯಗಳಲ್ಲಿ ತೊಡಗಿಸುವ ಸಾಮರ್ಥ್ಯ ಆತನಿಗಿದೆ ಎಂಬುದರ ಬಗ್ಗೆ ಗಂಗಾಳಿಗೆ ಅನುಮಾನ. ಈ ಗೊಂದಲ/ಅನುಮಾನಗಳಲ್ಲೇ ಗಂಗಾ ಸಂಬಂಧದ ಆತ್ಮೀಯತೆಗೆ/ಸುಖಕ್ಕೆ ಕೈಚಾಚಿದ್ದುಂಟು. ಆದರೆ ಗಂಗಾಗೆ ಈ ಬದುಕನ್ನು ಒಂದು ಸಾರ್ವಜನಿಕ ಮೌಲ್ಯದ ಹಂತದಲ್ಲಿಯೇ ಸ್ವೀಕರಿಸಿ ಬದುಕಬೇಕು ಎನಿಸುತ್ತಿತ್ತು. ಬಂಧನಗಳಿಲ್ಲದ ಈ ಅಲೆಮಾರಿ ಜೀವನ ಈ ಸಂಸ್ಕೃತಿ ತನಗಿತ್ತ ಬಳುವಳಿ. ಅಥವಾ ಈ ಸಂಸ್ಕೃತಿಯಲ್ಲಿ ತಾನು ಆರಿಸಿಕೊಂಡ ಆಯ್ಕೆ. ರಾಜಾರೋಷವಾಗಿ ಬದುಕುವ ದಿಟ್ಟತನವನ್ನು ಆಕೆಯಲ್ಲಿಯೇ ಆಕೆ ಬಯಸಿದ್ದಳು. ತೆರೆಮರೆಯಲ್ಲಿ

ಹೀಗೆ ಬದುಕುವುದೇನೂ ಆಕೆಗೆ ಬೇಕಿರಲಿಲ್ಲ. ಸಂಬಂಧ ಇದೆಯಾ ಅಂದರೆ ಇದೆ ಎನ್ನುವುದಷ್ಟೇ ಸತ್ಯ. ಅದರಾಚೆ ಏನೂ ಇರುವುದಿಲ್ಲ. ಗಂಗಾಳ ವೈಚಾರಿಕ ಪ್ರಜ್ಞೆಯ ನೆಲೆಯೂ ಇದಕ್ಕೆ ಕಾರಣವಾಗಿತ್ತು. ಮಾರ್ಕ್ಸ್‌ವಾದಿಗಳ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ, ಮಾರ್ಕ್ಸ್‌ವಾದದ ಬಗ್ಗೆ ಹೆಚ್ಚು ಹೆಚ್ಚು ಒಲವು ಬೆಳೆಸಿಕೊಳ್ಳುತ್ತಾ ಹೋದ ಹಾಗೆ ಹೆಣ್ಣು ಆಸ್ತಿ, ಒಬ್ಬರ ಸೊತ್ತು, ಎನ್ನುವಂತಹ ಕಲ್ಪನೆಗಳನ್ನು ತನ್ನ ಜೀವನದ ನೆಲೆಯಿಂದಲೇ ಪ್ರಶ್ನಿಸಬೇಕು ಎನ್ನುವ ಹಟ ಬೆಳೆಯತೊಡಗಿತ್ತು, ಒಂಟಿಯಾಗಿ ನಿಂತು ಬದುಕನ್ನು ಎದುರಿಸಬೇಕು ಎನ್ನುವ ಛಲ ಮನದಲ್ಲಿ ಮನೆಮಾಡಿಕೊಳ್ಳತೊಡಗಿತ್ತು. ಕಮುವಿನ ಬರಹಗಳಲ್ಲಿ ಒಂದಿಷ್ಟು ದಿನ ತೀವ್ರವಾಗಿ ತೊಡಗಿಸಿಕೊಂಡು ಓದುತ್ತಿದ್ದ ಗಂಗಾಗೆ ಸಾವಿನ ಭೀಕರತೆಯ ಪ್ರಜ್ಞೆಯೂ ಹೃದಯದಲ್ಲಿ ಹೆಪ್ಪಾಗಿ ಕಟ್ಟಿಕೊಂಡಿತ್ತು. 19-20 ವರುಷಗಳಲ್ಲಿ ಅಂಟಿಲ್ಲದೇ ಕಳಚಿಕೊಂಡ ಹಲ್ಲುಗಳ ಬೇರಿನಡಿಯಲ್ಲಿ ಹುಟ್ಟಿಕೊಂಡ ನಶ್ವರತೆಯ ಭಾವ ಸಾವಿನ ಪ್ರಜ್ಞೆಯನ್ನು ಆಕೆಯ ಒಡಲಲ್ಲಿ ಹುಟ್ಟುಹಾಕಿತ್ತು. ಕಮುವಿನ ಬರಹಗಳಲ್ಲಿ ತೊಡಗಿಸಿಕೊಳ್ಳುತ್ತಾ ಹೋದ ಹಾಗೆ ಆಕೆಗೆ ನಿಗೂಢವಾಗಿ ಕಾಡಿದ್ದು ಸಾವೇ. ಛಿದ್ರ ಛಿದ್ರವಾಗಿ ಹೋಗುವ ದೇಹದ ಕಲ್ಪನೆ ಆಕೆಯ ಇಡಿಯ ವ್ಯಕ್ತಿತ್ವವನ್ನು ಅಲುಗಾಡಿಸಿಬಿಟ್ಟಿತ್ತು. ಸಾವಿನ ಮುಖದಲ್ಲಿ ಉಂಟಾಗುವ ಶೂನ್ಯ, ಯಾವುದು ಭದ್ರ ಎಂದು ನಂಬಿಕೊಂಡಿರುತ್ತೇವೆಯೋ ಎಲ್ಲವೂ ಕಳಚಿಕೊಂಡು ಹೋಗುತ್ತವೆ. ಮೂರು ಗಾಲಿಯ ಕುರ್ಚಿಯ ಮೇಲೆ ಕುಳಿತು ಬೇರೇ ಇಲ್ಲದಂತೆ ಕಳಚಿಕೊಂಡು ಬಂದ ಹಲ್ಲುಗಳಲ್ಲಿ ನಶ್ವರತೆಯ, ಸಾವಿನ ಭೀಕರ ಸತ್ಯ ಗಂಗಾಳ ಎದೆಯೊಳಗೆ ಗೋಚರಿಸಿದ್ದು. ಗಂಗಾ ಇಂತಹ ವಿಚಾರಗಳನ್ನು ಬಾಲುವಿನಲ್ಲಿ ಹೇಳುತ್ತಿದ್ದುದುಂಟು. ಅಲೆಮಾರಿ ಬದುಕು ತನಗೀಗ ಒಂದು ಆಯ್ಕೆಯಾಗಿ ಕಂಡಿದೆ ಎಂದಿದ್ದಳು. ರಾಜಾರೋಷವಾಗಿ ಬದುಕುವ ಗಟ್ಟಿತನದ ಛಲ ತನ್ನಲ್ಲಿ ಬರಬೇಕು ಎನ್ನುತ್ತಿದ್ದಳು. ಕೌಟುಂಬಿಕ ಬದುಕು ತನ್ನನ್ನು ಪೂರ್ತಿಯಾಗಿ ಸಾಯಿಸಿಬಿಡುತ್ತದೆಯೇನೋ ಎಂಬ ಹೆದರಿಕೆ ತನ್ನಲ್ಲಿ ಮನೆ ಮಾಡಿಕೊಂಡಿದೆ ಎನ್ನುವಳು. ಹಾಗಾಗಿ ತನ್ನ ಅಲೆಮಾರಿ ಬದುಕು ತೆರೆದ ಪುಟವಾಗಿಯೇ ಇರಬೇಕು ಎಂದು ಆಶಿಸುತ್ತಿದ್ದಳು. ಗಂಗಾ ಹೀಗೆಲ್ಲ ಮಾತನಾಡುವಾಗ ಪುಟ್ಟ ಹಳ್ಳಿಯೊಂದರಿಂದ ಬಂದ ಗಂಗಾಳ ಗಟ್ಟಿತನದ ಮಾತುಗಳ ಬಗ್ಗೆ ಆತನಿಗೆ ಆಶ್ಚರ್ಯ ಎನಿಸುತ್ತದೆ. ಅವನಿಗೇ ಅರ್ಥವಾಗದ ಗೌರವದ ಭಾವನೆಯೂ ಆತನಲ್ಲಿ ಹಾಯ್ದು ಹೋಗುತ್ತದೆ. ಆದರೂ ಉಡಾಫೆಯಿಂದ 'ನೀನು ಬಿಡಮ್ಮ, ಇಡೀ ಪ್ರಪಂಚವನ್ನೇ ಮುಳುಗಿಸಿ ಬಿಡ್ತೀಯ' ಎಂದು ನಕ್ಕುಬಿಡುತ್ತಾನೆ.

ಇಂತಹ ಸಂದರ್ಭದಲ್ಲಿಯೇ ಪಾರ್ವತಿ ಕೆಲಸದ ಮೇಲೆ ಟೂರ್ ಹೋದಾಗ ಬಾಲುವನ್ನು ಗಂಗಾ ತನ್ನ ಮನೆಗೆ ಕರೆದೊಯ್ದಿದ್ದಳು. ಬಾಲು ಯಾವಾಗಲೂ ರಂಜಕವಾಗಿ, ರೋಚಕವಾಗಿ ಮಾತನಾಡುವುದನ್ನು ಕಂಡಾಗಲೆಲ್ಲಾ ಈತ ತನ್ನ ಸಂಬಂಧದಲ್ಲಿ ತೊಡಗಿಕೊಳ್ಳಲು ಪ್ರಯತ್ನಿಸಿದ್ದು ಬರಿಯ ಕಾಮದ ಉದ್ದೇಶಕ್ಕಾಗಿಯೇ ಎಂಬ ಅನುಮಾನ ಆಕೆಗೆ ಯಾವಾಗಲೂ ಬರುತ್ತಿತ್ತು. ಬಾಲು ಇಂತಹ ಸಂಬಂಧಗಳಲ್ಲಿ ಏನನ್ನು ಹುಡುಕ ಬಯಸುತ್ತಾನೆ? ಅಂತರಾಳದಲ್ಲಿ ಹುಡುಕಿದರೆ ಬಾಲುವಿನಂತಹ ವ್ಯಕ್ತಿ ತನ್ನಂತಹ ಸಂಬಂಧವನ್ನು ಬೆಚ್ಚಗೆ ಎಂದು ಫೀಲ್ ಮಾಡುವುದಿಲ್ಲ ಎಂದು ಗಂಗಾಗೆ ಅನ್ನಿಸುತ್ತಿತ್ತು. ಬಾಲುಗೆ ತನ್ನ ಸಂಬಂಧ ಬೆಚ್ಚಗಿನ ಸಂಬಂಧ ಅಂತ ಯಾವಾಗ ಅನ್ನಿಸುತ್ತಿತ್ತು ಎಂದರೆ - ಗಂಗಾ ಆ ರೀತಿ ಅಲೆಮಾರಿ ಬದುಕಿನ ಬಗ್ಗೆ ಮಾತನಾಡದೇ ಅವನಿಗೇ ಅಂಟಿಕೊಳ್ಳುವ ಬಗ್ಗೆ ಮಾತನಾಡಿದ್ದರೆ, ಆತನೇ ತನ್ನೆಲ್ಲ ಚಟುವಟಿಕೆಯ ಕೇಂದ್ರ ಬಿಂದುವಾಗಿದ್ದರೆ, ಜೀವನದ ಕೊನೆಯವರೆಗೆ ಅವನಿಗೇ ಅಂಟಿಕೊಂಡು ಬದುಕುವಂತಾಗಿದ್ದರೆ ಅವನ ಪ್ರತಿಷ್ಠೆಯ ಹೆಚ್ಚಿಸುವ ಅಂಶವಾಗಿ, ಅವನಿಗೆ ಬೆಚ್ಚನೆಯ

ಸಂಬಂಧವಾಗಿ ಉಳಿದುಕೊಳ್ಳುತ್ತಿದ್ದಳು. ಅವಳ ಆರ್ಥಿಕ ಸ್ವಾತಂತ್ರ್ಯದಲ್ಲಿ ಆಕೆ ಆತನ ಮೇಲೆ ಅವಲಂಬಿತಳಾಗಿ ಕೂಡಾ ಉಳಿಯಬೇಕಿರಲಿಲ್ಲ. ಆದರೆ ಆಕೆ ಈ ರೀತಿಯ ಭಾವೋದ್ವೇಗ ಬೆಳೆಸಿಕೊಂಡೂ ಇರಲಿಲ್ಲ, ಹಾಗೆ ಮಾತನಾಡಿಯೂ ಇರಲಿಲ್ಲ. ರವಿಯ ಬಗ್ಗೆ ಮಾತನಾಡುವಾಗ ಕಳಚಿಹೋದ, ಸಶಿಸಿ ಹೋದ ಅಂಟಿಕೊಂಡು ಬದುಕುವ ಕಲ್ಪನೆಯ ಬಗ್ಗೆ ಮಾತನಾಡುವಳು. ಪಾರ್ವತಿಯ ಆಫೀಸಿನ ವೆಂಕಟೇಶ್ ತನ್ನ ಬಗ್ಗೆ ತೋರುವ ಹುಮ್ಮಸ್ಸು/ಆಸ್ಥೆಯ ಬಗ್ಗೆಯೂ ಬಾಲುವಿನಲ್ಲಿ ಹೇಳುವಳು. ಬಾಲುವಿಗೆ ಇದ್ದಕ್ಕಿದ್ದ ಹಾಗೆ ಗಂಗಾಳ ಬಗ್ಗೆ ತನಗೇನೂ moral responsibility ಇರಬೇಕಾದುದಿಲ್ಲ ಎನ್ನಿಸಿರಬೇಕು. ಅಲೆಮಾರಿ ಜೀವನ ಬಯಸುವ ಈಕೆಗೆ ತಾನಾದರೂ ಯಾಕೆ ಕಮಿಟ್ ಆಗಬೇಕು ಎನ್ನಿಸಿರಬೇಕು. ಈ ಸಂಬಂಧ ಅಂಟಿಕೊಳ್ಳುವ ಸಂಬಂಧವಾಗಿದ್ದರೆ ತಾನು ಯೋಚಿಸಬೇಕಾಗಿತ್ತು ಎಂದು ಆತನಿಗೆ ಅನ್ನಿಸಿರಬೇಕು. ಆಕೆ ತನ್ನವಳು, ತಾನು ರಕ್ಷಿಸಬೇಕಾದವಳು ಎಂಬ ಪ್ರಶ್ನೆ ಇದ್ದಿದ್ದರೆ ಹೊಣೆಗಾರಿಕೆಯ ಪ್ರಶ್ನೆ ಬರುತ್ತಿತ್ತು. ಆದರೆ ಈ ಗಂಗಾ ವಿಚಿತ್ರ ಎಂದು ಬಾಲು ಮನಸ್ಸಿನಲ್ಲಿಯೇ ಅನೇಕ ಬಾರಿ ಅಂದುಕೊಳ್ಳುತ್ತಾನೆ.

ಇಷ್ಟೊಂದು ರೋಮಾಂಚಕವಾಗಿ ಮಾತನಾಡುವ, ಮೈ ಪುಳಕವೆನಿಸುವಂತೆ ಪೋಲಿ, ಪೋಲಿಯಾಗಿ ಮಾತನಾಡುವ ಬಾಲು ತಾನು ಮನೆಗೆ ಕರೆದೊಯ್ದಾಗ ಸಂಭೋಗದ ಸುಖ ಹೇಳಿಕೊಡದೇ ಸೋತದ್ದು ಹೇಗೆ? ಗಂಗಾಗೆ ಆ ಕ್ಷಣದಲ್ಲಿ ಆಶ್ಚರ್ಯವಾಗಿತ್ತು. ಮೈಯರಳಿಸಿ ಬೆತ್ತಲೆಯಾಗಿ ನಿಂತ ಹುಡುಗಿ ಯೋರ್ವಳ ಮುಂದೆ ಅಸಹಾಯಕನಾಗಿ ಆ ಕ್ಷಣದಲ್ಲಿ ತೊಳಲಾಡುವ ಆತನನ್ನು ಕಂಡಾಗ ಗಂಗಾಗೆ ಆತನ ಬಗ್ಗೆ ಕರುಣೆ ಎನಿಸಿತ್ತು. 'ಹೋಗಲಿ ಬಿಡು, ಪರವಾಗಿಲ್ಲ' ಎಂದು ತನ್ನ ಬಿಸಿಯಾದ ಮೈಯಿಂದ ಗಂಗಾ ತಣ್ಣನೆಯ ಮಾತನ್ನಾಡಿದ್ದಳು. ಯಾಕೋ ಆತ ಪೋಲಿ ಪೋಲಿಯಾಗಿ, ರೋಚಕವಾಗಿ ಮಾತನಾಡುವುದು ಆಕೆಯ ನೆನಪಿಗೆ ಬಂತು. ಕಾಮದಲ್ಲಿ ರಸಿಕ ಎಂದು ತೋರಿಸಿ ಅದರಿಂದ ಹುಡುಗಿಯರಿಗೆ ಮತ್ತು ಬರಿಸುವ Strategyಯೇನು ಎಂದು ಗಂಗಾಗೆ ಅನುಮಾನ ಬಂದುದೂ ಉಂಟು. 'I am sorry' - ಎಂದು ಸಂಕಟದ ಧ್ವನಿಯಲ್ಲಿ ಮಾತನಾಡುವ ಅವನ ಹೃದಯವನ್ನೆ, ಮನಸ್ಸನ್ನ ಅವನ ತಲೆ ಸವರಿ ಸಮಾಧಾನ ಮಾಡಬೇಕು ಎಂದು ಗಂಗಾಗೆ ಅನಿಸುತ್ತದೆ. ಮಡಿಲಲ್ಲಿಟ್ಟುಕೊಂಡು ಮಗುವಿನ ಹಾಗೆ ನಿದ್ದೆ ಮಾಡಿಸಿಬಿಡಬೇಕು ಎನಿಸುತ್ತದೆ.

ಬಾಲು ಗಂಗಾಳ ಜೊತೆಗಿನ ತನ್ನ ಸಂಬಂಧವನ್ನು ಕಡಿದುಕೊಂಡ ಬಗೆಯಾದರೂ ಹೇಗೆ? ಗಂಗಾ ವೆಂಕಟೇಶ್‌ನ ಬಗ್ಗೆ ಹೆಚ್ಚು ಉತ್ಸಾಹದಿಂದ ಮಾತನಾಡಿದರೆ ಆಗದು. ಆಕೆ ಅವನ ಬಗ್ಗೆ ಪ್ರೀತಿ/ಒಲವು ಮೂಡಿಸಿಕೊಳ್ಳುತ್ತಿದ್ದಾಳೆ ಎಂಬ ಅನುಮಾನಗಳಲ್ಲಿ ಆಕೆಯನ್ನು ನೋಡುವ ಹಂಬಲಗಳೇ ಆತನಲ್ಲಿ ಉಳಿಯಲಿಲ್ಲ. ಒಬ್ಬ ವ್ಯಕ್ತಿ ತನ್ನವಳಾದಾಗ ಮಾತ್ರ ಅಲ್ಲಿ ನೈತಿಕ ಮೌಲ್ಯಗಳಿರುತ್ತವೆಯೇನೋ ಎಂಬ ಅನುಮಾನ ಆತನ ಬಗ್ಗೆ ಯೋಚಿಸುವಾಗಲೆಲ್ಲಾ ಗಂಗಾಳಿಗೆ ಅನ್ನಿಸುತ್ತಿತ್ತು. ಮೊದ ಮೊದಲು ದಿನಗಳಲ್ಲಿ ಗಂಗಾ ತನ್ನವಳಾಗಿಯೇ ಉಳಿದು, ತನ್ನ ಸ್ವ-ಪ್ರತಿಷ್ಠೆಗೆ ಪೂರಕವಾಗಬಹುದೆಂದು ಎಣಿಸಿದ್ದ ಬಾಲುವಿಗೆ ಗಂಗಾಳ ಅಲೆಮಾರಿ ಬದುಕು ಹೆದರಿಕೆ ಹುಟ್ಟಿಸಿರಬಹುದು. ಬೆತ್ತಲೆಯಾಗಿ ನಿಂತ ಹುಡುಗಿಗೆ ಆ ಕ್ಷಣದಲ್ಲಿ ಸುಖ ಕೊಡದೇ ಸೋತು ಹೋದದ್ದು ತನ್ನ ಗಂಡಸುತನಕ್ಕೆ ಆದ ಅವಮಾನವೆಂದು ಆತ ಭಾವಿಸಿರಬಹುದು. ಬಾಲು ತನ್ನ ಸಂಬಂಧವನ್ನು ಎಷ್ಟು ಸುಲಭವಾಗಿ ಕಡಿದುಹಾಕಿಬಿಟ್ಟನಲ್ಲ ಎಂದು ಯೋಚಿಸುವಾಗ ಗಂಗಾಳಿಗೆ ನೋವೆನಿಸುತ್ತದೆ. ಅದೆಲ್ಲ ತೀರಾ ಸುಲಭವಾಗಿ,

ಬರುತ್ತೇನೆ, ಇಂತಹ ಕಡೆ ಕಾಯಿ ಎನ್ನುವುದು, ಬರದೇ ಹೋಗುವುದು. ಅವನ ಬರುವಿಕೆಯನ್ನು ಸುಪ್ತ ಮನಸ್ಸಿನಲ್ಲಿ ಗಂಗಾ ಕೂಡಾ ಇಷ್ಟಪಡುತ್ತಿರಲಿಲ್ಲವಾದರೂ ಆತ ಬರದೇ ಹೋದಾಗ ನೋವಾಗುತ್ತಿತ್ತು. ಬೆಂಗಳೂರಿನ ನಿರ್ಜನ ಬಸ್ ಸ್ಟಾಪ್‌ಗಳಲ್ಲಿ ಘಂಟೆಗಟ್ಟಲೇ ಈಕೆ ಕಾದುದುಂಟು. ಇದು ತನ್ನ ವ್ಯಕ್ತಿತ್ವಕ್ಕಾಗುತ್ತಿರುವ ಅವಮಾನ ಎಂದು ಗಂಗಾಗೆ ಹತ್ತು-ಹಲವಾರು ಬಾರಿ ಅನ್ನಿಸಿದ್ದುಂಟು. ಹೀಗೆ ಕಾಯ್ದು ವಾಪಸ್ಸು ಹೋಗುವಾಗಲೆಲ್ಲಾ ಗಂಗಾ ಬಾಲುವಿನ ಸಂಬಂಧಕ್ಕೆ ಗುಡ್ ಬೈ ಹೇಳಲು ನಿರ್ಧರಿಸತೊಡಗಿದ್ದಳು. ಹೀಗೆ ಸಂಬಂಧವನ್ನು ಮುರಿದುಕೊಳ್ಳುವಾಗ ಗಂಗಾಗೆ ಅನ್ನಿಸಿದುದೆಂದರೆ ಬಾಲು ಅಂತಹವರಿಗೆ ಹೆಣ್ಣು ಗಂಡಿನ ಸಂಬಂಧದಲ್ಲಿ ಬೆತ್ತಲಾಗುವುದು ಮಾತ್ರ ಸಂಬಂಧದ ಅಂತಿಮ ಕನಸಾಗಿ ಉಳಿದುಕೊಂಡುಬಿಟ್ಟಿರುತ್ತದೆಯೇ? ಆ ಸಂಬಂಧಕ್ಕೆ ಇನ್ಯಾವುದೇ ಆಯಾಮಗಳೇ ಇರುವುದಿಲ್ಲವೇ? ಬಾಲುವಿನ ಮೇಲೆ ಬರುವ ಕೋಪವನ್ನು ಗೆದಿಯುವುದೆಂದರೆ ತನ್ನನ್ನು ತಾನೇ ಗೆದ್ದಂತೆ ಎಂದು ಗಂಗಾ ಯೋಚಿಸುತ್ತಿದ್ದಳು. ಆತ ಎಂದಾದರೂ ಸಿಕ್ಕಾಗ ನಕ್ಕು ಮಾತಾಡಿ, ಚರಿತ್ರೆಯ ಬಗ್ಗೆ ಮಾತನಾಡಬೇಡ, ಹಿಂದಿನದೆಲ್ಲವನ್ನು ಮರೆಯಲು ಸಾಧ್ಯವಾಗಿದ್ದರೆ, ಅಥವಾ ಹಿಂದಿನ ಚರಿತ್ರೆಯ ನಡುವೆಯೇ ಆತ್ಮೀಯತೆಯ ತಂತು ಒಂದು ಉಳಿದಿದ್ದರೆ 'ಏನಮ್ಮಾ ಹೇಗಿದೀಯ ಅಂತ ಶ್ರದ್ಧೆಯಿಂದ ಕೇಳು' ಎಂದು ಹೇಳಿ ಹಗುರವಾಗಿ ಇದ್ದು ಬಿಡಬೇಕು ಅನ್ನಿಸುತ್ತಿತ್ತು. ಅಥವಾ ಸಿಕ್ಕಾಗ ನಕ್ಕು ಭುಜದ ಮೇಲೆ ಹೊಡೆದು ಮಾತಾಡಿಸಿ ತನ್ನ ಅಂತರಂಗವನ್ನು ತಾನೇ ಗೆಲ್ಲಬೇಕು ಎಂದು ಆ ಸಂದರ್ಭದಲ್ಲಿ ಗಂಗಾಗೆ ತೀವ್ರವಾಗಿ ಅನ್ನಿಸಿತ್ತು.

ಗಂಗಾ ಬಹಳ ಸಲ ಕುಳಿತು ಬಾಲುವಿನ ಬಗ್ಗೆ ಯೋಚಿಸುತ್ತಾಳೆ. ನವ್ಯ ಸಾಹಿತ್ಯದ ಹಿನ್ನೆಲೆಯಲ್ಲಿ ಬದುಕಿಗೆ ತುಡಿಯುವ ಮನಸ್ಸನ್ನು ಬೆಳೆಸಿಕೊಂಡ ಬಾಲು ಹೆಣ್ಣು-ಗಂಡಿನ ಸಂಬಂಧದಲ್ಲಿ ಶೋಧಿಸುತ್ತಿದ್ದುದು ರೋಚಕತೆಯನ್ನು ಮಾತ್ರವೇ? ಬಹಳ ಜನರೊಡನೆ ಸಂಬಂಧವಿದೆ ಎನ್ನುವ ಸತ್ಯವೇ ತಮ್ಮ ಪ್ರತಿಷ್ಠೆ ಬೆಳೆಸುತ್ತದೆ ಎನ್ನುವುದಕ್ಕಾಗಿಯೇ? ಬಾಲು ತನ್ನ ಸಂಬಂಧದಲ್ಲಿ ಕಂಡುಕೊಂಡ ಸತ್ಯವಾದರೂ ಏನು? ಇಂತಹ ಸಂಬಂಧ ಬೆಳೆಸಿಕೊಳ್ಳಲಿಕ್ಕಾಗಿಯೇ ಕೆಲವು ತಂತ್ರಗಳನ್ನು ಬಳಸುವ ಬಾಲುನಂಥವರು ಕಾಮ ಸಂಬಂಧದಲ್ಲಿ ಸಂಬಂಧದ ಅರ್ಥ, ರೋಚಕತೆ ಇನ್ನೇನೋ ಹುಡುಕುತ್ತಾರೆ. ಅಲ್ಲಿನ ಸೋಲು/ಗೆಲುವುಗಳೇ ಇವರ ಗಂಡು-ಹೆಣ್ಣಿನ ಸಂಬಂಧದ ನಿರ್ಧರಿತ ಅಂಶವಾಗಿಬಿಡುತ್ತದೆ. ಅಥವಾ ಸಾರ್ವಜನಿಕ ಬದುಕಿನಲ್ಲಿನ ಅಂತಸ್ತು/ಪ್ರತಿಷ್ಠೆಗಳಲ್ಲಿ ಉಂಟಾಗುವ ನಿರಾಸೆಗಳನ್ನು ಈ ರೀತಿಯ ಅತ್ಯಂತ ವೈಯಕ್ತಿಕ ಸಂಬಂಧಗಳ ಪ್ರತಿಷ್ಠೆಗಳಿಂದ ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೋ? ಗಂಗಾ ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ರವಿಯ ಸಂಬಂಧ ಉಂಟುಮಾಡಿದ ಆಘಾತವನ್ನು ಈ ಸಂಬಂಧ ಉಂಟುಮಾಡಿಯೂ ಇರಲಿಲ್ಲ. ಆದರೆ ಅಂಟಿಕೊಳ್ಳದೆಯೇ ಇರುವ ಬದುಕಿನಲ್ಲಿ ನೈತಿಕ ಮೌಲ್ಯ-ಒಂದು ಮೌಲ್ಯವಾಗಿ ಉಳಿಯಲು ಸಾಧ್ಯವೇ ಎಂಬ ಅನುಮಾನ ಗಂಗಾಳ ಮನದಲ್ಲಿ ಒಡಮೂಡಿದ್ದೇ ಬಾಲುವಿನ ಸಂಬಂಧದಲ್ಲಿ.

* * * * *

ದಿನ ಕಳೆದಂತೆ ಸ್ತ್ರೀಮುಕ್ತಿ ಸಂಘಟನೆಯೊಡನೆ ಗಂಗಾಳಿಗೆ ನಿಕಟ ಸಂಪರ್ಕವೇರ್ಪಡತೊಡಗಿತ್ತು. ಪಾರ್ವತಿ/ಗಂಗಾ ಒಟ್ಟೊಟ್ಟಿಗೇ ಇದ್ದುದರಿಂದ ಜೊತೆ ಜೊತೆಗೆ ಆಸಕ್ತಿಯಿಂದಲೇ ಕೆಲಸ ಮಾಡುವುದು, ಭಾಗವಹಿಸುವುದು ಕೆಲವೊಮ್ಮೆ ಅನಿವಾರ್ಯವಾಗಿಬಿಡುತ್ತಿತ್ತು. ಒಂದು ದಿನ ಮಹಿಳೆಯರೇ ಕೆಲಸ

ಮಾಡುತ್ತಿದ್ದ ಫ್ಯಾಕ್ಟರಿಯ ಸಮಸ್ಯೆಯೊಂದನ್ನು ಈ ಸಂಸ್ಥೆಗೆ ತರಲಾಗಿತ್ತು. ಯೂನಿಯರ್ಮ ಮಾಡಲು ಸಂಘಟನೆಗೆ ಪ್ರಯತ್ನಿಸುತ್ತಿದ್ದ ಕೆಲವಾರು ಕಾರ್ಮಿಕ ಮಹಿಳೆಯರನ್ನು ಇದ್ದಕ್ಕಿದ್ದ ಹಾಗೆ ಮ್ಯಾನೇಜ್‌ಮೆಂಟ್‌ನವರು ಸಸ್ಪೆಂಡ್ ಮಾಡಿದ್ದರು. ಸಸ್ಪೆಂಡ್ ಆದ ಹುಡುಗಿಯರು ಈ ಸಮಸ್ಯೆಯನ್ನು ಮಹಿಳಾ ಸಂಘಕ್ಕೆ ತಂದಿದ್ದರು. ನಲವತ್ತರಿಂದ ಅರವತ್ತು ಹೆಂಗಸರು ಅಲ್ಲಿ ದುಡಿಯುತ್ತಿದ್ದರು. ಕೆಲಸ ಮಾಡುತ್ತಿದ್ದವರೆಲ್ಲ ಆರ್ಥಿಕವಾಗಿ, ಸಾಮಾಜಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದವರೇ. ಎಲೆಕ್ಟ್ರಾನಿಕ್ಸ್‌ನ ಬಿಡಿ ಭಾಗಗಳನ್ನು ಜೋಡಿಸುವ ಅಸೆಂಬಲ್ ಯೂನಿಟ್ ಅದು. ಅಲ್ಲಿ ಇರುವವರಿಗೆ ಯಾವ ಸವಲತ್ತುಗಳನ್ನೂ ನೀಡುತ್ತಿರಲಿಲ್ಲ. ಕೊಡುತ್ತಿದ್ದ ಸಂಬಳವೂ 300ರೂನಿಂದ 400ರೂಗಳು ಮಾತ್ರ. ಎಷ್ಟೋ ದುಡ್ಡಿಗೆ ಸಹಿ ಮಾಡಿಸಿಕೊಂಡು ಎಷ್ಟೋ ದುಡ್ಡನ್ನು ಕೊಡುತ್ತಿದ್ದರು. ಮದುವೆಯಾದ ತಕ್ಷಣ ಆ ಕೆಲಸಗಳಿಗೂ ಕತ್ತರಿ ಬೀಳುತ್ತಿತ್ತು. ಇದರ ವಿರುದ್ಧ ಧ್ವನಿ ಎತ್ತಿ ಯೂನಿಯರ್ಮ ಮಾಡಲು ಪ್ರಯತ್ನಿಸಿ ಓಡಾಡಿದ ಮೂರು-ನಾಲ್ಕು ಜನ ಹುಡುಗಿಯರನ್ನು ಸಸ್ಪೆಂಡ್ ಮಾಡಲಾಯಿತು. 'ಸ್ತ್ರೀ-ಮುಕ್ತಿ' - ಸಂಘಟನೆ ಹಲವಾರು ಕಾರ್ಮಿಕ ಸಂಘಗಳ ಜೊತೆ ಸೇರಿಯೇ ಈ ಸಮಸ್ಯೆಗಾಗಿ ಹೋರಾಡುವುದಕ್ಕೆ ನಿರ್ಧರಿಸಿತು. ಹಾಗಾಗಿ ಫ್ಯಾಕ್ಟರಿಯ ಎಲ್ಲಾ ಮಹಿಳೆಯರನ್ನೂ ಒಟ್ಟುಗೂಡಿಸಿ ಒಂದು ಮೀಟಿಂಗ್ ಮಾಡಲಾಯಿತು. ಅವರೆಲ್ಲ ಒಪ್ಪಿದ ಮೇಲೆ ಹಲವು ಕಾರ್ಮಿಕ ಸಂಘಗಳ ಜೊತೆ ಜೊತೆ ಸೇರಿ ಈ ಸಮಸ್ಯೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಎಲ್ಲರೂ ಒಪ್ಪಿದ ಮೇಲೆ ಈ ಬಗ್ಗೆ ಚರ್ಚಿಸಲಾಯಿತು. ಲೇಬರ್ ಕಮೀಷನರ್ ಆಫೀಸಿನಿಂದ ಹಿಡಿದು ಆ ಫ್ಯಾಕ್ಟರಿಯ ಅಧಿಕಾರಶಾಹಿ ವರ್ಗದವರನ್ನು ಭೇಟಿಯಾಗುವ ಪ್ರಯತ್ನವನ್ನು 'ಸ್ತ್ರೀ ಮುಕ್ತಿ' - ಸಂಘಟನೆ ಮಾಡಿತು. ಅಧಿಕಾರಿಶಾಹಿ ವರ್ಗದಲ್ಲಿದ್ದವರು ಹೆಚ್ಚು ಮಂದಿ ಮಹಿಳೆಯರೇ. ಅವರ ಕಾರ್ಖಾನೆಗಳ ಮುಂದೆ, ಕೊನೆಗೆ ಮನೆಯ ಮುಂದೆ ಕಾದರೂ ಅದರ ಮುಖ್ಯಸ್ಥೆಯರನ್ನು ಭೇಟಿಯಾಗುವುದೇ ಕಷ್ಟಸಾಧ್ಯವಾಗಿತ್ತು. ಮನೆಯ ಗೇಟ್ ಕೂಡಾ ಆಕೆ ತೆಗೆಯಲಿಲ್ಲ. ಇವರು ಬಹಳಷ್ಟು ಹೊತ್ತು ಕಾದರೂ, ಪ್ರತಿಭಟನೆ ಸೂಚಿಸಿದರೂ, ಅವರ ವಿರುದ್ಧ ಘೋಷಣೆಗಳನ್ನು ಕೂಗಿದರೂ ಆ ಹೆಂಗಸು ಹೊರಗೇ ಬಂದಿರಲಿಲ್ಲ. ಸುಮಾರು ಮೂವತ್ತು ಜನ ಹೆಂಗಸರೂ, ಒಂದು ಹತ್ತು ಜನ ಗಂಡಸರೂ ಇದ್ದರು. ಕಾದು ಕಾದು ಅಂದು ವಾಪಸ್ಸು ಬಂದದ್ದಾಯಿತು. ಅಧಿಕಾರಿಶಾಹಿ ವರ್ಗದ ಮಹಿಳೆಯರನ್ನು ಭೇಟಿಯಾಗಲು ಸಾಧ್ಯವಾಗದೇ ಹೋದಾಗ ಲೇಬರ್ ಕಮೀಷನರ್ ಆಫೀಸಿಗೆ ಒಟ್ಟಿಗೆ ಹೋಗಲಾಗಿತ್ತು. ಲೇಬರ್ ಕಮೀಷನರ್ ತಮ್ಮ ಅಸಹಾಯಕತೆ ತೋರಿಸಿ ಕೈಚೆಲ್ಲಿಬಿಟ್ಟಿದ್ದರು. ಕಾನೂನಿನ ಚೌಕಟ್ಟಿನ ಒಳಗೇ ಬಾರದಂತಹ ನಿಯಮಗಳನ್ನೇ ಆ ಕಾರ್ಖಾನೆ ಹಮ್ಮಿಕೊಂಡಿತ್ತು. ಮಹಿಳೆಯರಿಗಾಗಿ-ಮಹಿಳಾ ಅಧಿಕಾರಶಾಹಿ ವರ್ಗದವರೇ ಪ್ರಾರಂಭಿಸಿದ ಆ ಅಸೆಂಬಲ್ ಯೂನಿಟ್ ಮಹಿಳೆಯರ ಕರ ಕುಶಲತೆಗಳನ್ನು ಬಳಸಿಕೊಳ್ಳುತ್ತಲೇ ಅವರನ್ನು ಬಾಯಿ ಬಿಟ್ಟು ಪ್ರತಿಭಟನೆ ಮಾಡದಂತಹ, ಬಹುಕಾಲ ಸಂಸ್ಥೆಯಲ್ಲಿಯೇ ಉಳಿಯದಂತಹ ತಂತ್ರಗಳನ್ನೇ ಬಳಸಿಕೊಳ್ಳತೊಡಗಿತ್ತು. ಕೆಲಸಕ್ಕಾಗಿ ಅಪಾಯಿಂಟ್‌ಮೆಂಟ್ ಆರ್ಡರ್ಸ್ ಕೊಡದಿರುವುದು, ಎಷ್ಟೋ ಹಣಕ್ಕೆ ಸಹಿ ಹಾಕಿಸಿಕೊಂಡು ಕಡಿಮೆ ಹಣ ಕೊಡುವುದು, ಖಾಯಂ ಮಾಡದೇ ಇದ್ದುಬಿಡುವುದು, ಮದುವೆಯಾದರೆ ಕೆಲಸದಿಂದ ವಜಾ ಮಾಡಿಬಿಡುವುದು, ಪ್ರತಿಭಟನೆಯ ಧ್ವನಿ ಎತ್ತಿದರೆ ಕೆಲಸದಿಂದ ತೆಗೆದುಹಾಕಿಬಿಡುವುದು ಇತ್ಯಾದಿ. ಎಷ್ಟೇ ಸಲ ಕುಳಿತು ಮಾತನಾಡಿದರೂ ಲೇಬರ್ ಕಮೀಷನರ್ ಈ ಬಗ್ಗೆ ಏನೂ ಮಾಡದೇ ಹೋದರು. ಅಧಿಕಾರಿಶಾಹಿ ವರ್ಗದವರು ಫ್ಯಾಕ್ಟರಿಯನ್ನೇ ಮುಚ್ಚಿಬಿಡುವ ಗೊಡ್ಡು ಬೆದರಿಕೆ ಹಾಕತೊಡಗಿದರು. ಅವರತ್ತು ಜನ ಕಾರ್ಮಿಕ ಮಹಿಳೆಯರನ್ನೂ ಬೀದಿಯಲ್ಲಿ ನಿಲ್ಲಿಸಿಬಿಡುವುದಾಗಿ,

ಯಾವ ಕಾನೂನು ಏನು ಮಾಡಿಬಿಡುವುದಾಗಿ ನೋಡುತ್ತೇವೆ ಎಂದು ಲೇಬರ್ ಕಮೀಷನರ್ ಮುಂದೆಯೇ ಹೇಳಿದ್ದರು. ಲೇಬರ್ ಕಮೀಷನರ್ ಏನೂ ನಿರ್ಧಾರ ತೆಗೆದುಕೊಳ್ಳದೇಹೋದರು. ಕೊನೆಗೆ ಈ ಸಮಸ್ಯೆ ಬಗೆ ಹರಿಯುವವರೆಗೆ, ಈಗ ಸಸ್ಪೆಂಡ್ ಆದ ಕಾರ್ಮಿಕರನ್ನು ವಾಪಸ್ಸು ಕೆಲಸಕ್ಕೆ ತೆಗೆದುಕೊಳ್ಳುವವರೆಗೆ ಧರಣಿ ಮಾಡುವುದೆಂದು 'ಸ್ತ್ರೀ ಮುಕ್ತಿ' ಸಂಘಟನೆಯಲ್ಲಿ ನಿರ್ಧರಿಸಲಾಯಿತು. ಸರದಿಯಂತೆ 'ಸ್ತ್ರೀ ಮುಕ್ತಿ' ಸಂಘಟನೆಯ 10 ಸದಸ್ಯನಿಯರು ಇಪ್ಪತ್ತು, ಮೂವತ್ತು ಮಹಿಳೆಯರೊಡನೆ ಲೇಬರ್ ಕಮಿಷನರ್ ಆಫೀಸ್‌ನ ಮುಂದೆ ಧರಣಿ ಕೂರುತ್ತಿದ್ದರು. ಗಂಗಾ ಈ ಸಮಸ್ಯೆಯಲ್ಲಿ ತನ್ನನ್ನೇ ತೊಡಗಿಸಿಕೊಂಡು ಕೆಲಸ ಮಾಡತೊಡಗಿದ್ದಳು. ನಿತ್ಯ ಕಾಲೇಜ್ ಮುಗಿಸಿದ ಮೇಲೆ ಗಂಗಾ ಈ ಲೇಬರ್ ಕಮಿಷನರ್ ಆಫೀಸಿಗೆ ಬರುತ್ತಿದ್ದಳು. ಎಷ್ಟೋ ಹೊತ್ತಿನವರೆಗೆ ಅಲ್ಲಿಯೇ ಕೂತಿರುತ್ತಿದ್ದಳು. ಮಹಿಳಾ ಸಂಘಟನೆಗಳು ಹೀಗೆ ಸಮಸ್ಯೆಗಳ ಸುತ್ತ ಮಹಿಳೆಯರನ್ನೇ ಸಂಘಟನೆ ಮಾಡುತ್ತಿದ್ದ ಘಟನೆಗಳು ಕಡಿಮೆ. ಲೇಬರ್ ಕಮೀಷನ್ನರಿಗೆ, ಪೋಲೀಸರಿಗೆ ಬರಿಯ ಗಂಡಸರ ಮುಂದಾಳತ್ವದಲ್ಲಿ ಬರುವ ಹೆಂಗಸರನ್ನು ಸುಧಾರಿಸಿ ಅಭ್ಯಾಸವಿತ್ತೇ ಹೊರತು ಬರಿಯ ಹೆಣ್ಣು ಮಕ್ಕಳನ್ನೇ ಎದುರಿಸಿ ಅಲ್ಲ. ಹೀಗೆ ಹೆಂಗಸರು ಬೆಳಿಗ್ಗೆಯಿಂದ ಸಂಜೆಯವರೆಗೆ ಧರಣಿ ಕೂತಿದ್ದನ್ನು ನೋಡಿ ಅಭ್ಯಾಸವಿರದ ಕಾಲ. ಧರಣೆಗೆ ಕೂತ ಹೆಂಗಸರನ್ನು ನಿಭಾಯಿಸಲು ಬರುತ್ತಿದ್ದವರೆಲ್ಲಾ ಗಂಡು ಪೋಲೀಸರೇ. ಪ್ರತಿಭಟಿಸಿ ಕೂಗುತ್ತಿದ್ದ ಮಹಿಳೆಯರನ್ನೆಲ್ಲ ಎದ್ದು ಹೋಗಿ, ಎದ್ದು ಹೋಗಿ ಎಂದು ಗದರುತ್ತಿದ್ದ ಪೋಲೀಸರು ಇವರು ಜಗ್ಗುವವರಲ್ಲ ಎಂದೆನಿಸಿದೊಡನೆಯೇ ಇವರನ್ನು ಲೇಬರ್ ಕಮಿಷನರ್ ಆಫೀಸಿನ ಮುಂದುಗಡೆ ಬಂಧಿಸಿ ಕೆಳಗೆ ಕರೆದು ತಂದು ಬಿಟ್ಟುಬಿಡುತ್ತಿದ್ದರು. ರೆನೆ ಕೂಡಾ ಹಲವಾರು ಬಾರಿ ಧರಣೆಯಲ್ಲಿ ಕೂತಿದ್ದರು. 'ಸ್ತ್ರೀ-ಮುಕ್ತಿ' ಸಂಘಟನೆಯ ಪಾರ್ವತಿ, ಸರೂ, ಅನೂ, ರಾಗಿಣಿ, ಸುಜಾತ, ಶಿಲ್ಪ, ಮೇರಿ, ಡಾಮಿನಾ ಎಲ್ಲರೂ ಈ ಧರಣೆಯಲ್ಲಿ ಸರದಿಯಂತೆ ಭಾಗವಹಿಸುತ್ತಿದ್ದರು. ಮೇಲಿನಿಂದ ಪೋಲೀಸರು ಕೆಳಗೆ ತಂದು ಬಿಡುತ್ತಿದ್ದುದು ಗಂಗಾಗೆ ತಮಾಷೆಯಾಗಿ ಕಾಣುತ್ತಿತ್ತು. ಮೇಲೆ ಬಂಧಿಸುವಾಗ ಬಿಗಿಯಾಗಿ ಕಾಣುತ್ತಿದ್ದ ಪೋಲೀಸರು ಕೆಳಗೆ ಬಂದೊಡನೆ 'ಹೋಗ್ರಮ್ಮಾ, ಹೋಗಿ, ಯಾಕೆ ನಮ್ಮ ತಲೆ ತಿನ್ನುತ್ತೀರಾ? ಹೋಗಿ ಏನಾದ್ರೂ ಮನೇ ಕೆಲಸ ಮಾಡಬಾರದಾ' ಎನ್ನುತ್ತಿದ್ದರು. ಹೀಗೆ ಹಲವಾರು ದಿನಗಳ ಕಾಲ ಸುಮಾರು ಒಂದು ತಿಂಗಳ ಕಾಲ ಇದನ್ನೇ ಮುಂದುವರಿಸಿದರು. ಕಮೀಷನರ್ ಹಲವಾರು ಬಾರಿ ಕುಳಿತು ಅಧಿಕಾರಶಾಹಿ ವರ್ಗದವರ ಜೊತೆ ಮಾತನಾಡಿದ್ದೂ ಆಯಿತು. ಅಧಿಕಾರಿ ವರ್ಗದ ಮಹಿಳೆಯರು ಕಾರ್ಖಾನೆ ಮುಚ್ಚುವುದಾಗಿ, 'ಅಸೆಂಬಲ್ ಯೂನಿಟ್'ನಿಂದಲೇ ತಮ್ಮ ಜೀವನವಲ್ಲವೆಂದು ಪಟ್ಟು ಹಿಡಿದುಬಿಟ್ಟರು. ಪೋಲೀಸರು ಕಾರ್ಮಿಕ ಮಹಿಳೆಯರ ಮೇಲೆ, 'ಸ್ತ್ರೀ-ಮುಕ್ತಿ' ಸಂಘಟನೆಯವರ ಮೇಲೆ ಹರಿಹಾಯತೊಡಗಿದರು. 'ಸ್ತ್ರೀ-ಮುಕ್ತಿ' - ಸಂಘಟನೆಯವರೆಲ್ಲ ಮತ್ತೆ ಕಾರ್ಮಿಕ ಮಹಿಳೆಯರೊಡನೆ ಕುಳಿತು ಯೋಚಿಸತೊಡಗಿದರು. ಸಂಬಳವೇ ಇಲ್ಲದ ದಿಕ್ಕುಗಾಣದಾದ ಮಹಿಳೆಯರಿಗೆ ಕೆಲವು ಬ್ಯಾಂಕ್‌ಗಳಿಂದ ಸಾಲ ಕೊಡಿಸುವ ವ್ಯವಸ್ಥೆಯನ್ನು 'ಸ್ತ್ರೀ ಮುಕ್ತಿ' ಸಂಘಟನೆಯವರೇ ಮಾಡಿದರು. ಮತ್ತೆ ಈ ಬಗ್ಗೆ ಕುಳಿತು ಚರ್ಚಿಸುವಾಗ ಇದರ ಬಗ್ಗೆ ಸಾರ್ವಜನಿಕರ ಗಮನ ಸೆಳೆಯುವ ತಂತ್ರಗಳತ್ತ ಗಮನ ಹರಿಸಲಾಯಿತು. ಈ ಫ್ಯಾಕ್ಟರಿಯ ವಿಷಯವನ್ನೇ ಕುರಿತು ಬೀದಿ ಬೀದಿಗಳಲ್ಲಿ ನಾಟಕ ಮಾಡಿ ಈ ಬಗ್ಗೆ ಸಾರ್ವಜನಿಕರ, ರಾಜಕಾರಣಿಗಳ ಗಮನ ಸೆಳೆಯುವುದು ಎಂದು ತೀರ್ಮಾನಿಸಲಾಯಿತು. ಈ ಹೋರಾಟವನ್ನು ಹೀಗೆಯೇ ಮುಂದುವರಿಸಬೇಕು ಎಂಬ ಉತ್ಸಾಹ ಸ್ತ್ರೀ ಮುಕ್ತಿ ಸಂಘಟನೆಯಲ್ಲಿತ್ತು. ಆದರೆ ಕಾರ್ಮಿಕ ಮಹಿಳೆಯರಲ್ಲಿ ಅರ್ಧ ಭಾಗದಷ್ಟು ಮಹಿಳೆಯರಲ್ಲಿ ಆಗಲೇ ನಿರಾಸೆ, ನಿರುದ್ವೇಗಗಳು

ಮೂಡತೊಡಗಿದ್ದವು. ಸಿಗುವ 300 ಹಾಗೂ 400ರೂಗಳಿಗೂ ಕತ್ತರಿ ಬಿದ್ದಿದ್ದರಿಂದ ಅವರ ಹೊಟ್ಟೇಪಾಡೇ ಮುಖ್ಯ ಪ್ರಶ್ನೆಯಾಗಿತ್ತು. ಇಂತಹ ಸಂದರ್ಭಗಳಲ್ಲಿ ಸಾಲ ಕೊಡಿಸುವುದು ಇತ್ಯಾದಿಗಳು ಒಂದು ಸಾಧ್ಯತೆಯಾಗಿ ಕಂಡಿದ್ದಾಗ್ಯೂ ಅವುಗಳೇ ಅವರನ್ನು ಸಸ್ಟೈನ್ ಮಾಡುವಂತಿರಲಿಲ್ಲ. ಕೆಲವರು ಆಗಲೇ ಬೇರೆ ಬೇರೆ ಕಡೆಗಳಲ್ಲಿ ಕೆಲಸ ಹುಡುಕಲು ಪ್ರಾರಂಭಿಸಿದ್ದರು. ಈ ಬಗ್ಗೆ ನಾಟಕದ ಕಾರ್ಯಕ್ರಮ ಹಮ್ಮಿಕೊಂಡಾಗ ಗಂಗಾ ಇದರಲ್ಲಿ ಸಾಕಷ್ಟು ಕ್ರಿಯಾಶೀಲವಾಗಿಯೇ ಭಾಗವಹಿಸಿದ್ದಳು. ನಾಟಕದ ಹಸ್ತ ಪ್ರತಿ ತಯಾರಿಸುವುದರಿಂದ ಹಿಡಿದು ನಾಟಕಗಳನ್ನು ಬೀದಿ ಬೀದಿಗಳಲ್ಲಿ ಆಡುವವರೆಗೂ ಪಾರ್ವತಿ/ ಗಂಗಾ/ಸರೂ/ಸುಜಾತ - ಹಾಗೆಯೇ ಪಾರ್ವತಿಯ ಸಂಸ್ಥೆಗಳಲ್ಲಿ ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದ ಗಂಡಸರೂ ಭಾಗವಹಿಸಿದ್ದರು. ಕಾರ್ಮಿಕರಿಗೆ ಸಹಾಯವಾಗುವಂತಿದ್ದರೆ ತಕ್ಷಣಕ್ಕೆ ಎಂತದಕ್ಕೂ ಸಿದ್ಧನಾಗುವ ಕಮಿಟ್‌ಮೆಂಟ್ ಹೊಂದಿದ್ದ ಜಗನ್ನಾಥ್ ಈ ನಾಟಕದಲ್ಲಿ ಬಹಳ ಉತ್ಸಾಹದಿಂದ ಓಡಾಡಿದ್ದ. ಗಂಗಾಗೆ ನಾಟಕಗಳಲ್ಲಿ ಭಾಗವಹಿಸಿ ಅಭ್ಯಾಸವಿತ್ತು. ಶಿವಮೊಗ್ಗೆಯಲ್ಲಿ ಮಾರ್ಕ್ಸಿಸ್ಟ್ ಲೆಕ್ಚರರ್‌ರೊಬ್ಬರು ಮಾಡಿಸಿದ ಹಲವಾರು ನಾಟಕಗಳಲ್ಲಿ ಈಕೆ ಭಾಗವಹಿಸಿದ್ದುಂಟು. ಹೊನ್ನೇಕೆರೆಯಲ್ಲಿ ಇದ್ದಾಗ ಗೆಳತಿಯರ ಬಳಗದಲ್ಲಿ ಗೆಳತಿಯರು ಸಮಸ್ಯೆಗಳ ಸುತ್ತ ನಾಟಕ ಮಾಡಿದ್ದುಂಟು. ಈಗ ಕೆಲಸ ಮಾಡುತ್ತಿದ್ದ ಕಾಲೇಜಿನಲ್ಲಿಯೂ ಸಣ್ಣ ಸಣ್ಣ ಹೆಣ್ಣು ಮಕ್ಕಳು ದುಡಿಯುವ ಪ್ರಶ್ನೆಗಳಿಂದ ಹಿಡಿದು ವರದಕ್ಷಿಣೆ, ಇತ್ಯಾದಿಗಳ ಬಗ್ಗೆ ಗಂಗಾ ತನ್ನ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ನಾಟಕ ಮಾಡಿಸು ತ್ತಿದ್ದುದುಂಟು. ಈ ಮೂಲಕ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿಯನ್ನೇ ಅರ್ಥಪೂರ್ಣವಾಗಿಸಿಕೊಳ್ಳಲು ಗಂಗಾ ಪ್ರಯತ್ನಿಸಿದ್ದುಂಟು. ಈ ರೀತಿಯ ಅನುಭವಗಳಿದ್ದದ್ದರಿಂದ ಈ ಕಾರ್ಖಾನೆಗೆ ಸಂಬಂಧಪಟ್ಟ ನಾಟಕದಲ್ಲಿ ಗಂಗಾ ತನ್ನನ್ನು ತೊಡಗಿಸಿಕೊಂಡಿದ್ದಳು. ಫ್ಯಾಕ್ಟರಿಯ ಘಟನೆಯ ಸುತ್ತವೇ ನಾಟಕ ಹಾಗೂ ಹಾಡುಗಳನ್ನು ಹೆಣೆಯಲಾಗಿತ್ತು. ಗಂಗಾ ಕಾಲೇಜು ಮುಗಿದ ಮೇಲೆ ಪೂರ್ಣ ಸಮಯವನ್ನು 'ಸ್ತ್ರೀ-ಮುಕ್ತಿ' ಸಂಘಟನೆಯ ಜೊತೆಯೇ ಕಳೆಯತೊಡಗಿದ್ದಳು. ಯೂನಿಯನ್‌ಗಳಲ್ಲಿ ಕೆಲಸ ಮಾಡಿದ, ಕಾರ್ಮಿಕ ಶ್ರಮದ ಬಗ್ಗೆಯೇ ಕಾಳಜಿ ಹೊಂದಿದ್ದ ಜಗನ್ನಾಥನ ಉತ್ಸಾಹ, ಶ್ರಮ, ಸಂಬಂಧಗಳಲ್ಲಿನ ಅವನ ಹೆಂಗರುಳು-ಇಂತಹವುಗಳನ್ನು ಕಂಡರೆ ಗಂಗಾಗೆ ಆತನ ಬಗ್ಗೆ ಗೌರವ, ಆದರಗಳು ಮೂಡುತ್ತಿದ್ದವು. ಈ ನಾಟಕದ ಇಡಿಯ ಹಂತದಲ್ಲಿ ಗಂಗಾ 'ಸ್ತ್ರೀ ಮುಕ್ತಿ' - ಸಂಘಟನೆಯ ಹಲವಾರು ಗೆಳತಿಯರ ಸಂಬಂಧಗಳಿಗೆ ನಿಧಾನವಾಗಿ ಬಿಚ್ಚಿಕೊಳ್ಳತೊಡಗಿದ್ದಳು, ಮುಖಾಮುಖಿಯಾಗತೊಡಗಿದ್ದಳು.

ಪಾರ್ವತಿಯ ಸ್ನೇಹದೊಳಗೆ ಮಾತ್ರ ಬೆಚ್ಚನೆಯ ಭಾವನೆಯನ್ನು ಹೊಂದಿರುತ್ತಿದ್ದ ಗಂಗಾ ಈಗ ಬೆಂಗಳೂರಿನ ಗೆಳತಿಯರ ಸ್ನೇಹ ಹಸ್ತಕ್ಕೆ ಕೈ ಚಾಚತೊಡಗಿದ್ದಳು. ಯಾವಾಗಲೂ ತನ್ನೊಳಗೇ ತಾನಿರಲು ಪ್ರಯತ್ನಿಸುತ್ತಿದ್ದ ಗಂಗಾಳ ವ್ಯಕ್ತಿತ್ವದಲ್ಲಿ ಬೆಂಗಳೂರಿನಂತಹ ಸಂಬಂಧಗಳು ಆಳವಾಗಿ ಬೇರೂರುತ್ತವೆ ಎಂದು ಅವಳೇ ಎಣಿಸಿದವಳಲ್ಲ. ಕಾರ್ಖಾನೆಯ ಸುತ್ತ ಹೆಣೆದ ಈ ನಾಟಕದ ಇಡಿಯ ಸಂದರ್ಭದಲ್ಲಿ ಹೊನ್ನೇಕೆರೆಯ ಬೆಚ್ಚಗಿನ ಆತ್ಮೀಯತೆ ತೋರಬಲ್ಲ ಕೆಲವು ಕನ್ನಡ ಬರುವ, ಮಾತನಾಡುವ ಸ್ನೇಹಿತೆಯರು ಗಂಗಾಳಿಗೆ ಹತ್ತಿರವಾಗತೊಡಗಿದ್ದರು. ಕನ್ನಡ ಬಾರದ ರಾಗಿಣಿ ಕನ್ನಡ ನಿರರ್ಗಳವಾಗಿ ಮಾತನಾಡುವುದನ್ನು ಕಲಿತು ನಾಟಕದಲ್ಲಿ ಭಾಗಿಯಾಗಬೇಕು ಎಂದು ಹಂಬಲಿಸುತ್ತಿದ್ದಳು. ಡಾಮಿನಾ ನಾಟಕದ ಸಾಮಾನುಗಳನ್ನು ಜೋಡಿಸುವುದಕ್ಕೆ, ಇತರರನ್ನು ಸಂಪರ್ಕಿಸುವುದಕ್ಕೆ ಉತ್ಸಾಹ ತೋರಿಸಿ ಓಡಾಡುತ್ತಿದ್ದಳು. ಆಕೆ ಕೆಲಸ ಮಾಡುತ್ತಿದ್ದ ಕಡೆಯಲ್ಲಿಯೇ ಯೂನಿಯನ್‌ನಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಲು ಪ್ರಯತ್ನಿಸುತ್ತಿದ್ದ ಸುಜಾತ ನಾಟಕದ ಸಂದರ್ಭದಲ್ಲಿ ಗಂಗಾಳಿಗೆ ಹೆಚ್ಚು ಹೆಚ್ಚು ಪರಿಚಯವಾಗಿದ್ದಳು. ನಿತ್ಯದ

ಭೇಟಿಯಿಂದಾಗಿ, ತೊಡಗಿಕೊಳ್ಳುತ್ತಿರುವ ಉದ್ದೇಶದಿಂದಾಗಿ ಅವರೆಲ್ಲರ ನಡುವೆ ಒಂದು ಆತ್ಮೀಯ ಬಾಂಧವ್ಯ ಏರ್ಪಡತೊಡಗಿತ್ತು. ಸರೂ ಮುಜುಗರವಿಲ್ಲದೇ ಮಾತನಾಡುವ ರೀತಿ ಗಂಗಾಳಿಗೆ ಇಷ್ಟವಾಗುತ್ತಿತ್ತು. 'ನನಗನ್ನಿಸುವುದು ಇಷ್ಟು, ನಾನು ಇದನ್ನೇ ಮಾಡುವುದು' ಎನ್ನುವ, ತನಗೆ ಅನ್ನಿಸುವುದು ಏನು ಎನ್ನುವುದನ್ನು ಹೃದಯಕ್ಕೇ ಕೈ ಚಾಚಿ ತಡಕಾಡುವ ಹುಡುಗಿ ಸರೂ. 'ನಾನು ಏನಿದ್ದರೂ ಭಾವನೆಗಳ ತಳಹದಿಯಲ್ಲಿ ಸಂಬಂಧಗಳಲ್ಲಿ ಬೆಚ್ಚಗಿನ ಲಯಗಳನ್ನು ಹುಡುಕುತ್ತೇನೆ' ಎನ್ನುವ ಸರೂ ಮಾತನಾಡುತ್ತಿದ್ದ ರೀತಿ ಗಂಗಾಗೆ ಇಷ್ಟವಾಗುತ್ತಿತ್ತು. ಆಕೆಯ ಮಾತಿನಲ್ಲಿ ಸಂಕೋಚದ ಲಯಗಳಿರಲಿಲ್ಲ. ಕೆಲವು ಸಲ ಹೆಂಗಸರು ತಮಗೆ ತಾವೇ ಸಮಸ್ಯೆಗಳನ್ನು ಸೃಷ್ಟಿಸಿಕೊಂಡು ಒದ್ದಾಡುತ್ತಾರೆ ಎನ್ನುವ ಈಕೆ ಅಂತಹ ಹೆಂಗಸರನ್ನು ಕಂಡಾಗಲೆಲ್ಲಾ 'ಬದುಕಿನಲ್ಲಿ ಸುಖವಾಗಿದ್ರೆ, ಸಮಸ್ಯೆಗಳನ್ನು ಸೃಷ್ಟಿ ಮಾಡಿಕೊಳ್ಳದೇ ಇದ್ರೆ ಇವರಿಗೆ ತಿಕದಾಗೆ ಮೆಣಸಿನಕಾಯಿ ಇಟ್ಟ ಹಾಗೆ ಆಗುತ್ತೋ ಏನೋ' ಎನ್ನುವಳು. ವರದಕ್ಷಿಣೆಯ ಸಮಸ್ಯೆಯಲ್ಲಿ ನೊಂದು ದೀನರಾಗಿ ಬರುವ ಹೆಂಗಸರು, ಅವರ ಕಂದಮ್ಮಗಳನ್ನು ಕಂಡಾಗ 'ಬೇವರ್ಸಿ ನನ್ ಮಕ್ಕಳು! ಏನೋ ಇಷ್ಟು ಉದ್ದುದ್ದ ಕೆಳಗೆ ನೇತಾಡ್ತದೆ ಅಂದ ಮಾತ್ರಕ್ಕೆ ಇಡೀ ಪ್ರಪಂಚಾನೆ ಕೊಂಡುಕೊಳ್ಳುವ ಹಾಗೆ ಆಡ್ತಾ ಈ ಪರದೇಶಿಗಳನ್ನ ಬೀದಿ ಬೀದಿ ಸುತ್ತೋ ಹಾಗೆ ಮಾಡಿರೋದನ್ನ ನೋಡು' ಹೀಗೆ ಹೇಳುತ್ತಲೇ ಹೃದಯದ ಒಳಗೇ ಹೆಪ್ಪುಗಟ್ಟಿ ಬಿಡುವ ನೋವನ್ನು ಹೊರಗೆಡವುತ್ತಾಳೆ. ಬಸ್‌ನಲ್ಲಿ ಬರುವಾಗ ಸೊಂಟ ತಾಗಿಸಿಕೊಂಡು ನಿಂತಿದ್ದ ಪಡ್ಡೆ ಹುಡುಗನ್ನ ಕಂಡು ಬಸ್ ಇಳಿದ ಮೇಲೆ 'ಸೂಳೇ ಮಗನೇ' ಅಂತ ಚಪ್ಪಲಿ ಹಿಡಿದಿದ್ದ ಆಕೆ 'ಅಯ್ಯೋ ಸೂಳೇ ಮಗನೇ ಅನ್ನೋದನ್ನ ಬಿಟ್ಟು ಬೇರೆ ಪದಾನೇ ಬರ್ಲಿಲ್ವೇ, ಬಯ್ಯೋಕು ಶಬ್ದಗಳನ್ನ ಹುಡುಕಬೇಕು' ಎಂದು ಆಮೇಲೆ ಹೇಳುತ್ತಿದ್ದುದುಂಟು. ಹೀಗೆ ಸರೂ ಭಾಷೆ-ಭಾವನೆಯಲ್ಲಿ ಹೊನ್ನೇಕೆರೆ ಹುಡುಗಿಯರ ತರಹ, ಹೆಚ್ಚಾಗಿ ಮಣ್ಣಿನ ವಾಸನೆಯ ಲಯದಲ್ಲಿಯೇ ಬದುಕನ್ನು ಅರಸುತ್ತಿದ್ದುದರಿಂದ ಗಂಗಾಗೆ ಈಕೆಯ ಬಗ್ಗೆ ಬೆಚ್ಚಗಿನ ಭಾವ. ಎತ್ತರದ, ದೊಡ್ಡ ಮುಖದ ಸರೂ ಸೀರೆ ಉಟ್ಟರೆ, ದೊಡ್ಡದಾಗಿ ಕುಂಕುಮ ಇಟ್ಟರೆ ಚಿಕ್ಕವಳಾದರೂ ದೊಡ್ಡ ಹೆಂಗಸಿನ ತರಹ ಕಾಣುತ್ತಿದ್ದಳು. ಭಾವನಾತ್ಮಕ ಲಯದಲ್ಲಿ ಬದುಕಿನ ಸತ್ಯ ಹುಡುಕುವ ಈಕೆ ಭಾವನೆಗಳ ನಂಬಿ ಬದುಕುವುದೇ ಪ್ರಾಮಾಣಿಕತೆ ಎಂದು ನಂಬಿದ್ದವಳು. 'ನಾನು ನನ್ನ ಮನಸ್ಸಿಗೆ ವಿರುದ್ಧವಾಗಿ ನಡೆದಿಲ್ಲ, ಇದು ನನ್ನ ಮನಸ್ಸಿನ ಸತ್ಯ, ಇದು ನನ್ನ ಭಾವನೆಯ ಸತ್ಯ' ಎಂದು ಸರಳವಾಗಿ ಎಲ್ಲರನ್ನೂ, ಎಲ್ಲವನ್ನೂ ನಂಬಿಬಿಡುವ, ಹೃದಯಕ್ಕೆ ಹತ್ತಿರದವರು ಎಂದು ನಂಬಿಬಿಡುವ, ನಂಬಿಕೆಯೇ ಸಂಬಂಧಗಳಿಗೆ ಆಧಾರ ಎನ್ನುವ ಸರೂ ಈ ಗುಣಗಳಿಂದಾಗಿಯೇ ಜೀವನದಲ್ಲಿ ಪೆಟ್ಟು ತಿಂದುಬಿಡುತ್ತಾಳೆ ಎಂದು ಗಂಗಾಗೆ ಆಗೀಗ ಅನ್ನಿಸಿದ್ದುಂಟು. ಕಾರ್ಖಾನೆಯ ಸುತ್ತ ಹೆಣೆದ ನಾಟಕದ ಸಂದರ್ಭದಲ್ಲಿಯೇ ಗಂಗಾಗೆ ಸರೂನ ವ್ಯಕ್ತಿತ್ವದ ಪರಿಚಯವಾಗುತ್ತಾ ಹೋದುದು. ಸರೂ ಬೆಂಗಳೂರಿನಲ್ಲಿಯೇ ಬೆಳೆದ ಹುಡುಗಿಯಾದರೂ ಆಕೆಯ ವ್ಯಕ್ತಿತ್ವದಲ್ಲಿ ಹಳ್ಳಿಯ ಸೊಗಡು ಇತ್ತು, ಭಾಷೆಯಲ್ಲಿ, ಭಾವದಲ್ಲಿ ಇದು ವ್ಯಕ್ತವಾಗುತ್ತಿತ್ತು. ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ಜನ ಮಹಿಳೆಯರು ನಾಟಕದ ರಿಹರ್ಸಲ್‌ಗೆಂದು, ನಾಟಕ ಮಾಡುವ ಬೀದಿಗಳಲ್ಲಿ, ಬೇರೆ ಬೇರೆ ಪ್ರದೇಶಗಳಲ್ಲಿ ಸ್ಕೂಲ್, ಕಾಲೇಜ್‌ಗಳಲ್ಲಿ, ಸಾರ್ವಜನಿಕ ಮೀಟಿಂಗ್‌ಗಳಲ್ಲಿ ಒಟ್ಟಾಗಿ ಪ್ರತಿ ನಿತ್ಯ ಸೇರುತ್ತಿದ್ದರು. 'ಸ್ತ್ರೀ ಮುಕ್ತಿ' - ಸಂಘಟನೆಯ ಸುಮಾರು ಏಳು-ಎಂಟು ಸದಸ್ಯರು ಇದರಲ್ಲಿ ಸಂಘಟಿಸುವ ಕೆಲಸದಿಂದ ಹಿಡಿದು ಎಲ್ಲಾ ತರಹದ ಕೆಲಸಗಳಿಗೂ ಓಡಾಡುತ್ತಿದ್ದರು. ಜಗನ್ನಾಥ ಎಲ್ಲರಿಗಿಂತ ಹೆಚ್ಚು

ಉತ್ಸಾಹಶಾಲಿಯಾಗಿ, ತಮಾಷೆ ಮಾಡಿಕೊಂಡು, ನಗಿಸಿಕೊಂಡು, ಹೆದರಿಸಿಕೊಂಡು, ರೇಗಿಸಿಕೊಂಡು ಓಡಾಡುತ್ತಿದ್ದ, ಎಲ್ಲರಲ್ಲಿ ಉತ್ಸಾಹ ತುಂಬುತ್ತಿದ್ದ. ಬೆಂಗಳೂರಿನ ಮೆಜೆಸ್ಟಿಕ್‌ನಂತಹ ಜನ ತುಂಬಿದ ಪ್ರದೇಶದಲ್ಲಿ ಈ ನಾಟಕ ಮಾಡುವಾಗ ಗಂಗಾಗೆ ತಾನು ಬೆಂಗಳೂರಿಗೆ ಕಾಲಿಟ್ಟ ದಿನಗಳು, ಪಾರ್ವತಿ ಮೆಜೆಸ್ಟಿಕ್‌ನಲ್ಲಿ ಭೇಟಿಯಾದುದು, ತಾವಿಬ್ಬರೂ ಹೋಟೆಲ್‌ಗೆ ಹೋಗಿ ಕುಳಿತು ಮಾತನಾಡಿದುದು ಎಲ್ಲವೂ ನೆನಪಿಗೆ ಬರತೊಡಗಿದ್ದವು. ಮೆಜೆಸ್ಟಿಕ್‌ನಂತಹ ಜನಭರಿತ ಪ್ರದೇಶದಿಂದ ಹಿಡಿದು ಹಲವಾರು ಕಾರ್ಖಾನೆಗಳ ಮುಂದೆ ಅವರೆಲ್ಲ ಈ ನಾಟಕವನ್ನು ಪ್ರದರ್ಶಿಸಿದ್ದರು. ಬೆಂಗಳೂರಿನ ಅಕ್ಕ-ಪಕ್ಕದ ಹಳ್ಳಿಗಳಲ್ಲಿಯೂ ಕೂಡಾ ಈ ನಾಟಕವನ್ನು ಆಡಿದ್ದುಂಟು. ಫ್ಯಾಕ್ಟರಿಯವರು ಬಳಸುತ್ತಿದ್ದ ಗೌನ್‌ಗಳನ್ನೇ ಈ ನಾಟಕದಲ್ಲಿಯೂ ಬಳಸುತ್ತಿದ್ದುದರಿಂದ ಬಹಳ ಜನ ಇವರನ್ನು ಆ ಕಾರ್ಖಾನೆಯ ಕಾರ್ಮಿಕರೇ ಎಂದು ವಿಚಾರಿಸುತ್ತಿದ್ದರು. ಈ ಸಮಸ್ಯೆಯ ಬಗ್ಗೆ ಸಾರ್ವಜನಿಕರಲ್ಲಿ ಒಂದಷ್ಟು ಅರಿವನ್ನು ಹುಟ್ಟಿ ಹಾಕುವಲ್ಲಿ ಈ ನಾಟಕ ರೂಪ ಬಳಸಿಕೊಂಡು 'ಸ್ತ್ರೀ ಮುಕ್ತಿ' - ಸಂಘಟನೆಯವರು ಒಂದು ಮಟ್ಟಿಗೆ ಸಫಲವಾಗಿದ್ದೇನೂ ನಿಜ. ಬೀದಿ ಬೀದಿಗಳಲ್ಲಿ ಮಹಿಳೆಯರು ಕೆಲವೇ ಪುರುಷರೊಟ್ಟಿಗೆ ಸೇರಿ ಮಾಡುತ್ತಿದ್ದ ಈ ನಾಟಕ ಕೆಲವರಿಗೆ ರಂಜನೆಗೆ, ಕೆಲವರಿಗೆ ರೋಚಕವಾಗಿ, ಕೆಲವರಿಗೆ ಹಾಸ್ಯಾಸ್ಪದವಾಗಿ, ಕೆಲವರಿಗೆ ಗಂಭೀರವಾಗಿ ಕಾಣಿಸತೊಡಗಿತ್ತು. ಸಾರ್ವಜನಿಕರಲ್ಲಿ ಹಲವಾರು ರೀತಿಯ ಪ್ರತಿಕ್ರಿಯೆಯನ್ನು ಈ ನಾಟಕ ಉಂಟುಮಾಡಿದ್ದರೂ ಅಧಿಕಾರಶಾಹಿ ವರ್ಗದವರು ಮಾತ್ರ ಮತ್ತಷ್ಟು ರೋಷಗೊಂಡದ್ದು ನಿಜ. ಈ ರೀತಿಯ ಪ್ರಚಾರದಿಂದಾಗಿ ಅವರು ಕಾರ್ಮಿಕರ ಮೇಲೆ ಆಕ್ರೋಶಗೊಂಡಿದ್ದರು, 'ಸ್ತ್ರೀ ಮುಕ್ತಿ' ಸಂಘಟನೆಗೆ ಫೋನಾಯಿಸಿ ಬೆದರಿಕೆಯನ್ನೊಡ್ಡಿದ್ದರು. ಲೇಬರ್ ಕಮಿಷನರ್ ತಟಸ್ಥರಾದಾಗ ಒಂದು ದಿನ ಒತ್ತಾಯಪೂರ್ವಕವಾಗಿ ಸಸ್ಪೆಂಡ್ ಮಾಡಲ್ಪಟ್ಟ ಮಹಿಳೆಯರೊಂದಿಗೆ ಇತರ ಮಹಿಳಾ ಕಾರ್ಮಿಕರು ಕಾರ್ಖಾನೆಯ ಒಳಗೆ ನುಗ್ಗಲು ಪ್ರಯತ್ನಿಸಿದಾಗ ಮ್ಯಾನೇಜ್‌ಮೆಂಟ್ ಕಡೆಯವರು ಪೋಲೀಸರಿಂದ ಅವರಿಗೆ ಹೊಡೆಸಿದರು. ಅನೇಕ ಮಹಿಳಾ ಕಾರ್ಮಿಕರಿಗೆ ಪೆಟ್ಟುಗಳಾಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಇದೆಲ್ಲ ಆದ ಮೇಲೆ ವಿಧಾನ ಸಭೆಯಲ್ಲಿ ಈ ಬಗ್ಗೆ ಗಲಾಟೆಗಳಾಗಿದ್ದು ನಿಜ, ಬಿಸಿ ಬಿಸಿ ಚರ್ಚೆಗಳಾಗಿದ್ದು ನಿಜ. ಇದ್ದಕ್ಕಿದ್ದ ಹಾಗೆ ಮ್ಯಾನೇಜ್‌ಮೆಂಟ್‌ನವರು ಕಾರ್ಖಾನೆಯನ್ನೇ ಮುಚ್ಚಿಬಿಟ್ಟರು. ಎಲ್ಲೆಲ್ಲಿಂದಲೋ ಬಂದ ಐವತ್ತರಿಂದ ಅರವತ್ತು ಮಹಿಳೆಯರನ್ನು ಬೀದಿಯಲ್ಲಿ ನಿಲ್ಲಿಸಿಬಿಟ್ಟರು. ಬಂಡವಾಳಶಾಹಿತ್ವದ ಕ್ರೂರ ಮುಖ ಗಂಗಾಗೆ ಅರ್ಥವಾಗಿದ್ದೇ ಇಲ್ಲಿ. ಪೋಲೀಸ್, ಮ್ಯಾನೇಜ್‌ಮೆಂಟ್, ಲೇಬರ್ ಕಮಿಷನರ್, ಈ ವ್ಯವಸ್ಥೆಯ ಗೋಜಲು ಗೋಜಲುಗಳ, ಸಿಕ್ಕು ಸಿಕ್ಕುಗಳ ಮಧ್ಯೆ ಹೆಣೆದುಕೊಂಡ ಮಹಿಳೆಯರು ಬೀದಿಯಲ್ಲಿ ನಿಂತ ದೃಶ್ಯ ಗಂಗಾಳ ಕಣ್ಣಿಗೆ ಕಟ್ಟಿದಂತೆಯೇ ಇತ್ತು. ರನೆ ಮಾತನಾಡುವ ಬಂಡವಾಳ ಶಾಹಿತ್ವದ ಚಿತ್ರಣದ ಸ್ಪಷ್ಟ ರೂಪುಗಳು ಗಂಗಾಳಿಗೆ ಅರ್ಥವಾಗತೊಡಗಿದ್ದೇ ಈ ಸಮಸ್ಯೆಯ ಜಟಿಲತೆಯಲ್ಲಿ. ಸುಮಾರು ತಿಂಗಳುಗಳ ಕಾಲ ಈ ಮಹಿಳೆಯರು ಕೆಲಸಕ್ಕೆಂದು ಅಲೆಯುತ್ತಿದ್ದರು, ಕೋರ್ಟು, ಕಛೇರಿ ಎಂದು ಅಲೆಯುತ್ತಿದ್ದರು. ಮಹಿಳೆಯರನ್ನು ಮ್ಯಾನೇಜ್‌ಮೆಂಟ್, ಪೋಲೀಸ್, ಕಾನೂನು, ಸರ್ಕಾರ ಎಲ್ಲವೂ ಹೇಗೆ ಚೀಪ್ ಲೇಬರ್ ಫೋರ್ಸ್ ಆಗಿ, ಸರ್‌ಪ್ಲಸ್ ಲೇಬರ್ ಫೋರ್ಸ್ ಆಗಿ ಬಳಸಿಕೊಳ್ಳುತ್ತವೆ ಎಂಬುದರ ವ್ಯವಸ್ಥೆಯ ಸಿಕ್ಕು ಸಿಕ್ಕಾದ ನೋಟದ ಗ್ರಹಿಕೆ ಗಂಗಾಳನ್ನು ನಡುಗಿಸಿತ್ತು.

ಇಂತಹ ಸಮಸ್ಯೆ ತಲೆ ತುಂಬಿ ಕೊರೆಯುತ್ತಿರುವಾಗಲೊಮ್ಮೆ, ಗಂಗಾ ಹೊನ್ನೇಕೆರೆಗೆ ಹೋಗಿದ್ದಳು. 'ಗೆಳತಿಯರ ಬಳಗದಲ್ಲಿ' ಇರುವ ಗೆಳತಿಯರನ್ನು ಹುಡುಕಿಕೊಂಡು ಹೋಗಿ ಮಾತನಾಡಿಸಿಕೊಂಡು

ಬಂದಿದ್ದಳು. 'ಗೆಳತಿಯ ಬಳಗದ' ಕೆಲವು ಹುಡುಗಿಯರು ಹಾಗೂ ಹೊನ್ನೇಕೆರೆಯ ಅನೇಕ ಪರಿಚಯಸ್ಥ ಹುಡುಗಿಯರು ಹೊನ್ನೇಕೆರೆಯ ಅಕ್ಕ-ಪಕ್ಕದ ಹಳ್ಳಿಗಳಲ್ಲಿ ಅಂಗನವಾಡಿ ಕೆಲಸಗಾರ್ತಿಯರಾಗಿ ಕೆಲಸ ಮಾಡುತ್ತಿದ್ದರು. ಕಾರ್ಖಾನೆಯ ಸಮಸ್ಯೆಯ ಆಳದಲ್ಲಿ ಸಿಕ್ಕು ಸಿಕ್ಕಾದ ನೋಟ ಕಂಡಿದ್ದ ಗಂಗಾಗೆ ಅಂಗನವಾಡಿ ಮಹಿಳೆಯರ ಕೆಲಸದ ಬಗ್ಗೆ ಆಸಕ್ತಿ ಮೂಡಿತ್ತು. ಗೆಳತಿಯೋರ್ವಳ ಜೊತೆ ಹತ್ತಾರು ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದ್ದ ಅಂಗನವಾಡಿ ಕಾರ್ಯಕರ್ತೆಯರನ್ನು ನೋಡಲು ಗಂಗಾ ಹೋಗಿದ್ದಳು. ಹೊನ್ನೇಕೆರೆಯ ಶಿಶುವಿಹಾರದಲ್ಲಿ ಕೆಲಸ ಮಾಡುತ್ತಿದ್ದ ಜಯಂತಿ ಹೇಳಿದಳು, ''ಅಯ್ಯೋ ಇದು ಒಂದು ಕೆಲಸಾನಾ? ಸೂಪರ್‌ವೈಸರಿಂದ ಹಿಡಿದು ಮೇಲಾಧಿಕಾರಿಗಳವರೆಗೆ ಒಂದೇ ರಾಗ. ಮೇಲಾಧಿಕಾರಿಗಳು ಬಂದರು. 'ಕತೆ' ಎಂದು ಬೋರ್ಡ್ ಮೇಲೆ ಬರೆ ಎಂದರು. 'ಕತೆ' ಎಂದು ಬರೆದರೆ 'ಕತ್ತೆ' ಎಂದು ಒತ್ತು ಕೊಟ್ಟು ಬರೆದು ಅದು 'ನೀನೇ' ಎಂದರು. ಇದನ್ನು ಹೇಳುವಾಗ ಆ ಗೆಳತಿ ಅಳುತ್ತಿದ್ದಳು. ಗಂಗಾಳಿಗೆ 'ಛೇ' ಅನ್ನಿಸಿತು. ದುಡಿಮೆಗಾರರಾಗಿರುವುದೇ 200/300 ರೂಪಾಯಿಗೆ. ಹೀಗೇ ಎಷ್ಟೋ ಕತೆಗಳನ್ನೆ ಈ ಅಂಗನವಾಡಿ ಕಾರ್ಯಕರ್ತೆಯರ ಬಾಯಿಯಿಂದ ಗಂಗಾ ಕೇಳಿದ್ದಳು. ದೂರದ ಊರಿನಿಂದ ಸಾಮಾನು ಮೂಟೆ ಸಾಗಿಸಿಕೊಂಡು ಬರುವುದು, ಆಹಾರದ ಸರಬರಾಜಿನಲ್ಲಿಯೇ ಕಡಿಮೆ ಕೊಟ್ಟು ನಂತರ ಕಾರ್ಯಕರ್ತೆಯರು ದಂಡ ತೆರುವಂತೆ ಮಾಡುವುದು, ಸೌದೆಗಾಗಿ ಅವರ-ಇವರ ಮನೆ ಅಲೆಯುವಂತೆ ಮಾಡುವುದು. ಗ್ರಾಮ ಪಂಚಾಯಿತಿಗಳವರು ಅನಾವಶ್ಯಕವಾಗಿ ಎಲ್ಲದರಲ್ಲಿ ಮೂಗು ತೂರಿಸುವುದು- ಇತ್ಯಾದಿ. ಸಾಮಾನು ಸಾಗಿಸುವಾಗ ರಶ್ ಇದ್ದ ಬಸ್ಸು - ಅದರಲ್ಲಿ ಟಾಪ್ ಮೇಲೆ ಕುಳಿತು ಸಾಮಾನು ಸಾಗಿಸಿಕೊಂಡು ಬಂದದ್ದನ್ನು ಒಬ್ಬ ಕಾರ್ಯಕರ್ತೆ ನುಡಿದಿದ್ದಳು. ಗಂಗಾಗೆ ಒಂದು ಯೋಚನೆ ಬಂತು. ಹೇಗೂ ಸ್ವಲ್ಪ ದಿನ ಹೊನ್ನೇಕೆರೆಯಲ್ಲಿ ಇರಲು ರಜ ಹಾಕಿ ಹೋಗಿದ್ದಳವಳು. ಸುತ್ತ-ಮುತ್ತಲೂ ಇರುವ ಅಂಗನವಾಡಿ ಕಾರ್ಯಕರ್ತೆಯರನ್ನು ಸೇರಿಸಿ ಸ್ಥಳೀಯವಾದ ಒಂದು ಸಂಘಟನೆ ಮಾಡಿಕೊಂಡರೆ ಇರುವ ಸಣ್ಣ ಪುಟ್ಟ ವಿಚಾರಗಳಿಗಾದರೂ ಒಟ್ಟಿಗೆ ಧ್ವನಿ ಎತ್ತಲು ಅವಕಾಶವಾಗುತ್ತದೆ. ಗೆಳತಿಯರ ಬಳಗದಲ್ಲಿ ಇದ್ದ ಕೆಲವರೂ ಕಾರ್ಯಕರ್ತೆಯರಾಗಿದ್ದರಿಂದ ಹತ್ತು-ಹನ್ನೆರಡು ಹಳ್ಳಿಗಳ ಅಂಗನವಾಡಿ ಕಾರ್ಯಕರ್ತೆಯರನ್ನು ಒಟ್ಟಿಗೆ ಸೇರಿಸುವುದೇನೂ ಕಷ್ಟದ ವಿಚಾರವಾಗಿರಲಿಲ್ಲ. ಒಟ್ಟಾಗಿ ಸೇರಿ ಚರ್ಚಿಸುವುದು, ತಮ್ಮ ಅಹವಾಲುಗಳನ್ನು ಸಂಘದ ಮೂಲಕ ಮೇಲಾಧಿಕಾರಿಗೆ ತಿಳಿಸುವುದು. ಸಾಮಾನು- ಮೂಟೆಯನ್ನು ಅಂಗನವಾಡಿ ಸೆಂಟರ್‌ಗಳಿಗೇ ತಲುಪಿಸಿ ಎಂದು ಕೇಳುವುದು, ವೈಯಕ್ತಿಕವಾಗಿ ಯಾರಿಗೇ ಅವಮಾನವಾದರೂ ಒಟ್ಟಿಗೇ ಪ್ರತಿಭಟಿಸುವುದು. ಇಂತಹದನ್ನೆಲ್ಲ ಅವರೊಟ್ಟಿಗೆ ಕುಳಿತು ಮಾತನಾಡಿದಾಗ ಅವರಿಗೇ ಅದರ ಬಗ್ಗೆ ಹೆಚ್ಚು ಆಸಕ್ತಿಗಳು ಇದ್ದುದು ಗಂಗಾಗೆ ಕಂಡು ಬಂತು. ಮೊದಲನೇ ಹೆಜ್ಜೆಯಾಗಿ ಅವರು ತಮ್ಮೆಲ್ಲ ಅಹವಾಲು ಬರೆದು ಮೇಲಾಧಿಕಾರಿಗಳಿಗೆ ಕೊಡುವುದೆಂದು ನಿರ್ಧಾರವಾಯಿತು. ಅವರಲ್ಲಿಯೇ ಕೆಲವರು ಅದನ್ನು ಮೇಲಾಧಿಕಾರಿಗಳಿಗೆ ಮುಖತಃ ಭೇಟಿ ಮಾಡಿ ಕೊಡುವುದೂ ಎಂಬುದು ಕೂಡಾ ನಿರ್ಧರಿತವಾಯಿತು. ಗಂಗಾ ಈ ಎಲ್ಲಾ ವಿವರಗಳನ್ನೊಳಗೊಂಡ ಲೇಖನವೊಂದನ್ನು ಪೇಪರ್‌ಗೆ ಬರೆಯುವುದಾಗಿ ನಿರ್ಧರಿಸಿದಳು. ಈ ಸಂಘಟನೆಯವರು ಅಹವಾಲು ಪತ್ರವನ್ನು ಮೇಲಾಧಿಕಾರಿಗಳಿಗೆ ತಲುಪಿಸುವವರೆಗೆ ಮಾತ್ರ ಗಂಗಾ ಹೊನ್ನೇಕೆರೆಯಲ್ಲಿ ಇದ್ದಳು. ನಂತರ ರಜೆ ಮುಗಿದುದರಿಂದ ಬೆಂಗಳೂರಿಗೆ ಹೊರಟು ಬಂದಿದ್ದಳು. ನಂತರ ರಜೆ ಇರುವಾಗಲೆಲ್ಲಾ ಗಂಗಾ ಹೊನ್ನೇಕೆರೆಗೆ ಹೋಗುತ್ತಿದ್ದುದುಂಟು. ಅವರಿಗೆ ನಿರಂತರವಾಗಿ ಪತ್ರ ಬರೆಯುತ್ತಿದ್ದುದುಂಟು. ಸಂಘಟನೆಯ ಹೆಸರಲ್ಲಿ ಪ್ರತಿಭಟಿಸುತ್ತಿದ್ದುದರಿಂದ ಶಿಕ್ಷಕಿಯರನ್ನು ವೈಯಕ್ತಿಕವಾಗಿ ಅವಮಾನಗೊಳಿಸುವುದು ಕಡಿಮೆ

ಯಾಗಿದೆಯೆಂದೂ, ಸಾಮಾನು ಮೂಟೆಯನ್ನು ಆಗೀಗ ಅವರೇ ಅಂಗನವಾಡಿ ಸೆಂಟರ್‌ಗೆ ತಂದು ಹಾಕುತ್ತಾರೆ ಎಂದು ಅವರು ತಿಳಿಸಿದಾಗ ಗಂಗಾ ಸಂತೋಷಪಟ್ಟಿದ್ದಳು. ಸಂಘಟನೆಯ ರಾಜಕೀಯ ಅರ್ಥ ಆಕೆಗೆ ಈಗೀಗ ಸ್ಪಷ್ಟವಾಗಿ ಆಗತೊಡಗಿತ್ತು. ಹೊನ್ನೇಕೆರೆಯಂತಹ ಪುಟ್ಟ ಊರಿನಲ್ಲಿ ಇಂತಹ ಸಂಘಟನೆಗಳು ಎಷ್ಟೊಂದು ಅರ್ಥಪೂರ್ಣ ಎಂದೂ ಗಂಗಾಗೆ ಅನ್ನಿಸತೊಡಗಿತ್ತು. ಗಂಗಾಳ ಮನಸ್ಸಿನಲ್ಲಿ ಅಸ್ಪಷ್ಟವಾಗಿದ್ದ ಬಂಡವಾಳಶಾಹಿತ್ವ, ಅದರ ಚಲನೆಯ ಸಿದ್ಧಾಂತದ ಬಗೆಗಿನ ಕಲ್ಪನೆಗಳು ಅವಳ ಬದುಕಿನಲ್ಲಿ ಸ್ಪಷ್ಟವಾಗತೊಡಗಿದ್ದೇ ಇಂತಹ ಘಟನೆಗಳ, ಸಂದರ್ಭಗಳ ಮೂಲಕವಾಗಿ.

* * * * *

ಗಂಗಾ ವೆಂಕಟೇಶನಲ್ಲಿ ಒಲವು ಮೂಡಿಸಿಕೊಳ್ಳುತ್ತಿದ್ದುದು, ಅಥವಾ ವೆಂಕಟೇಶ ಗಂಗಾಳ ಬಗ್ಗೆ ಆಸಕ್ತಿ ತೋರಿಸಿದ್ದು ಇಂತಹ ಚಟುವಟಿಕೆಗಳಲ್ಲಿ ಗಂಗಾ ತನ್ನನ್ನು ಸ್ಪಷ್ಟವಾಗಿ ತೊಡಗಿಸಿಕೊಳ್ಳತೊಡಗಿದಾಗ. ರಾತ್ರಿ ಮೀಟಿಂಗ್ ಅಥವಾ ಪೋಸ್ಟರ್ ಅಂಟಿಸುವುದು ಅಥವಾ ಪೋಲೀಸ್ ಸ್ಟೇಷನ್ ಅತಿಥಿಗಳಾಗಿ ಸರಿ ರಾತ್ರಿಗಳಲ್ಲಿ ವಾಪಸ್ಸು ಬರುವಾಗ ಗಂಗಾ/ಪಾರ್ವತಿ ವೆಂಕಟೇಶನ ಜೊತೆಯಲ್ಲಿಯೇ ನಡೆದೋ ಅಥವಾ ಆಟೋದಲ್ಲಿಯೋ ಮನೆಗೆ ಹೋಗುತ್ತಿದ್ದುದುಂಟು. ಕ್ರಾಂತಿಕಾರಿ ಪಾತ್ರದ ಪ್ರತಿನಿಧಿಯಾಗಿ ವೆಂಕಟೇಶ ವಾಸ್ತವದಲ್ಲಿ ಗಂಗಾಗೆ ಕಾಣಿಸುತ್ತಿದ್ದ. 'ರೋಚಕತೆ' ಈತನ ಬದುಕಿನ ಭಾಗವೇ? ಎಂದು ಗಂಗಾಗೆ ಬಹಳ ಸಾರಿ ಅನ್ನಿಸುತ್ತಿತ್ತು. ಯಾಕೆಂದರೆ ವೆಂಕಟೇಶ್ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದ ಕ್ರಿಯೆಗಳೆಲ್ಲ ಒಂದು ರೀತಿಯ ಸಾಹಸಮಯ ಕ್ರಿಯೆಗಳಾಗಿ ಗಂಗಾಳ ಕಣ್ಣಿಗೆ ಕಾಣಿಸಿದ್ದವು. 'ತನಗೆ ಏನೆನಿಸುತ್ತದೆ ಎನ್ನುವುದಕ್ಕೆ ತಾನು ನಿಜವಾಗಿ ಬದುಕುತ್ತೇನೆ' - ಎನ್ನುವ ವೆಂಕಟೇಶ್ ತನ್ನ ಬದುಕಿನ ವಿಧಾನದ ಬಗ್ಗೆ ಹೇಳುತ್ತಿದ್ದ. 'ತನಗೇನೆನಿಸುತ್ತದೆ' - ಎಂಬ ಅವನ ಭಾವನೆಗಳಲ್ಲಿ 'ರೋಚಕತೆ' ಹಾಗೂ 'ಸಾಹಸ'ಗಳೇ ಮುಖ್ಯವಾಗಿ ಗಂಗಾಳಿಗೆ ಕಾಣಿಸಿದ್ದುಂಟು. ಸರೂ ಕೂಡಾ 'ತನ್ನ ಭಾವನೆಗಳ ಲಯದಲ್ಲಿಯೇ ತಾನು ಬದುಕುತ್ತೇನೆ' ಎಂದು ಹೇಳಿದುದನ್ನು ಗಂಗಾ ಕಂಡಿದ್ದಳು. ಆದರೆ 'ಸಾಹಸ' 'ರೋಚಕತೆ' - ಇವುಗಳೇ ಸರೂಳ ವ್ಯಕ್ತಿತ್ವದ ಕೋರ್ ಆಗಿರಲಿಲ್ಲ. ಪೋಲೀಸ್ ಜೊತೆಗಿನ ಸಂಘರ್ಷಣೆಯಲ್ಲಿ ಗಂಗಾ ವೆಂಕಟೇಶನನ್ನು ಹಲವಾರು ಬಾರಿ ಕಂಡುದುಂಟು. ವ್ಯವಸ್ಥೆಯನ್ನು ಒರಟುತನ, ಮೊಂಡುತನದಿಂದ ವಿರೋಧಿಸಿಯೇ ಅಲ್ಲಿ ಅವನನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನವನ್ನು ವೆಂಕಟೇಶ್ ಮಾಡುತ್ತಿದ್ದ. ಹುಡುಗಿಯರ ಜೊತೆಗೆ ವೆಂಕಟೇಶನಿಗಿರುವ ಸಂಬಂಧವನ್ನು ಹತ್ತಿರದಿಂದ, ದೂರದಿಂದ ವೀಕ್ಷಿಸಿದ ಗಂಗಾಗೆ 'ರೋಚಕತೆ', 'ಸಾಹಸ' ಇವನ ಬದುಕಿನ ಭಾಗಗಳಾಗಿ ಕಾಣಿಸಿದ್ದುಂಟು. ಈತನಿಗೆ ಆ ಕ್ಷಣದಲ್ಲಿ ತನಗೇನೆನಿಸುತ್ತದೆ ಎಂಬುದಷ್ಟೇ ಮಹತ್ವ ಅನ್ನಿಸುತ್ತದೆ. ಆ ಕ್ಷಣಗಳ ಮೇಲೆ ನಿಂತ ಭಾವನೆಗಳು, ಕ್ಷಣಗಳು ಸರಿದ ಹಾಗೆ ಭಾವನೆಗಳೂ ಕ್ರಮೇಣವಾಗಿ ಮಾಸಿ ಹೋಗುತ್ತವೆ. ತೀವ್ರವಾಗಿ ಅನ್ನಿಸುವ ಭಾವನೆಗಳಿಗೆ ಆ ಕ್ಷಣಗಳಲ್ಲಿ ತೀವ್ರವಾಗಿಯೇ ಹೋರಾಡುತ್ತಾನೇನೋ ನಿಜ. ಆ ಕ್ಷಣದಲ್ಲಿ ತಾನು ತನ್ನ ಮನಸ್ಸಿಗೆ ಪ್ರಾಮಾಣಿಕವಾಗಿ ವರ್ತಿಸುತ್ತಿದ್ದೇನೆ, ಹೋರಾಡುತ್ತಿದ್ದೇನೆ ಎನ್ನುವ ನಂಬಿಕೆ. ತಾನು ನಂಬಿದ್ದೇ, ತನಗನಿಸಿದ್ದೇ ಸತ್ಯ ಎನ್ನುವ ಮೊಂಡು ಹಟ, ಮೊಂಡು ಹಟದಲ್ಲಿರುವ ಒರಟುತನ. ಒರಟುತನದ ಹಿಂದೆ ಇಡಿಯ ವ್ಯವಸ್ಥೆಯ ಬಗ್ಗೆ ವೆಂಕಟೇಶನಿಗಿದ್ದ ಆಕ್ರೋಶ, ಕೋಪ, ರೋಷಗಳೇ ಗಂಗಾಳಿಗೆ ಇಷ್ಟವಾದದ್ದು. ಕೈಬೆರಳು ತೋರಿಸುತ್ತಾ, ಆಕ್ರೋಶದಿಂದ ಮಾತನಾಡುತ್ತಲೇ ಇಡಿಯ ಗುಂಪಿನ ಮೇಲೆ ತನ್ನ ಛಾಪನ್ನು ಮೂಡಿಸುತ್ತಿದ್ದ ವೆಂಕಟೇಶ ಗಂಗಾಳ ತಾರುಣ್ಯದ ಕಣ್ಣುಗಳಿಗೆ ಕ್ರಾಂತಿಯ

ಕನಸುಗಾರನಾಗಿಯೇ ಕಂಡಿದ್ದ, ಕ್ರಾಂತಿಯ ಸಾಹಸಿಗನಾಗಿ ಕಂಡಿದ್ದ, ಆದರ, ಗೌರವಗಳಿಗೆ ಆದರ್ಶ ಪಾತ್ರವಾಗಿ ಕಂಡಿದ್ದ. ಹೀಗೆಯೇ ಅವನ ಸಂಬಂಧಕ್ಕೆ ಹತ್ತಿರ ಹತ್ತಿರ ಸರಿಯುತ್ತಾ ಹೋದ ಹಾಗೆ ಗಂಗಾಳಲ್ಲಿ ಮನೆಮಾಡಿದ್ದ ಹಲವಾರು ಅಭಿಪ್ರಾಯಗಳು ಬದಲಾಗತೊಡಗಿದ್ದವು. ಕ್ರಾಂತಿಯ ಕನಸುಗಳಿಗೆ ಬೇಕಾದ ಶಿಸ್ತು/ಸಂಯಮ/ಸ್ವಚ್ಛತೆ ಈತನ ವೈಯಕ್ತಿಕ ಹಾಗೂ ರಾಜಕೀಯ ಬದುಕಿನಲ್ಲಿ ಇಲ್ಲವೇನೋ ಎಂಬ ಅನುಮಾನಗಳು ಆಕೆಯಲ್ಲಿ ತಲೆದೋರಲಾರಂಭಿಸಿದ್ದವು. ವೈಯಕ್ತಿಕ ಸಂಬಂಧಗಳಲ್ಲಿ, ಹೊರಗಿನ ಸಾರ್ವಜನಿಕ, ರಾಜಕೀಯ ಬದುಕಿನಲ್ಲಿ ತುಡಿಯುವ, ಸ್ಪಂದಿಸುವ ಈತನ ಮನಸ್ಸಿನ ಲಯಗಳು ಒಂದೇ ರೀತಿಯವುಗಳೇನೋ ಎಂದು ಈಕೆಗೆ ಅನ್ನಿಸುತ್ತಿತ್ತು. ಆ ಕ್ಷಣದ ರೋಚಕತೆ, ಆ ಕ್ಷಣದ ಉನ್ಮಾದ, ಆ ಕ್ಷಣದ ಸಾಹಸ. ಇಂತಹ ರೋಚಕತೆ, ಉನ್ಮಾದ, ಸಾಹಸ ಯಾವುದೇ ವಿಷಯ ಅಥವಾ ಸಂಬಂಧವನ್ನು ಈತನ ಮನಸ್ಸಿನಲ್ಲಿ ಬಹಳ ದಿನ ಹಿಡಿದಿಡಲಾರವು ಎಂದು ಗಂಗಾ ಯೋಚಿಸುತ್ತಿದ್ದಳು. ಸಂಬಂಧಗಳು ಈತನಿಗೆ ನಾಲ್ಕಾರು ದಿನ, ನಾಲ್ಕಾರು ತಿಂಗಳು ಅಥವಾ ನಾಲ್ಕಾರು ವರ್ಷ ಅಷ್ಟೇ. ಯಾವುದಕ್ಕೂ ಅಂಟಿಕೊಂಡು ಬದುಕಿನ ಬೇರುಗಳ ಶೋಧಿಸಲಾರ. ತೀವ್ರತೆಗಳು ಇವನ ಬದುಕಿನಲ್ಲಿ ಇರುತ್ತಿದ್ದುದು ಅತ್ಯಲ್ಪ ಕಾಲ ಮಾತ್ರ. ಇದು ರಾಜಕೀಯ ವಿಚಾರದಲ್ಲಿ ಇರಬಹುದು ಅಥವಾ ವೈಯಕ್ತಿಕವಾದ ಸಂಬಂಧದ ವಿಚಾರದಲ್ಲಿ ಇರಬಹುದು. ಮನಸ್ಸಿನಲ್ಲಿ ಭಾವನೆಗಳ ಕೊರತೆ ಉಂಟಾದಾಗ, ಕಾಲಾನುಕ್ರಮದಲ್ಲಿ ಭಾವನೆಗಳ ತೀವ್ರತೆ ಕಡಿಮೆಯಾಗುತ್ತಾ ಹೋಗುವಾಗ 'ಈಗ ತನ್ನ ಮನಸ್ಸಿನಲ್ಲಿ ಆ ಭಾವನೆಗಳು ಸುಳಿಯುತ್ತಿಲ್ಲ. ಆ ರೋಚಕತೆ ಉಳಿದಿಲ್ಲ, ತೀವ್ರತೆ ಉಳಿದಿಲ್ಲ, ಹಾಗನ್ನಿಸಿರುವುದನ್ನು ತಾನು ಹೇಳುತ್ತಿರುವುದು ತನ್ನ ಮನಸ್ಸಿನ ಪ್ರಾಮಾಣಿಕತೆ ಅಲ್ಲವೇ?'. ಬಿಳಿಲುಗಳಲ್ಲಿ ಜೋಕಾಲಿಯಾಡುವ ಮನಸ್ಸು, ಬೇರುಗಳ ಅಗೆದು ಶೋಧಿಸುವ ಮನಸ್ಸು ವೆಂಕಟೇಶನದ್ದಲ್ಲ ಎಂದು ಗಂಗಾಗೆ ಕ್ರಮೇಣ ಮನದಟ್ಟಾಗತೊಡಗಿತ್ತು. ತಾನೆಣಿಸಿದ ಆತ್ಮೀಯತೆ ವೆಂಕಟೇಶನಲ್ಲಿ ಗಂಗಾಗೆ ಬೆಳೆಯಲೇ ಇಲ್ಲ. ಎಲ್ಲೂ ಅಂಟಿಕೊಂಡು ಬದುಕಲಾರದ ಆತ ತನ್ನ ಹಾಗೆಯೇ ಅಲೆಮಾರಿಯೇನೋ ಎಂದೂ ಆಕೆಗೆ ಅನ್ನಿಸುತ್ತಿತ್ತು. ಹುಡುಗಿಯರ ಸಂಬಂಧದಲ್ಲಿ ಆತ ಹುಡುಕುತ್ತಿದ್ದ ರೋಚಕತೆಯ/ನಿಗೂಢತೆಯ ಅಂಶಗಳು ಗಂಗಾಳ ಕಣ್ಣಿಗೆ ರಾಚಿದಂತೆ ಕಾಣಿಸುತ್ತಿದ್ದವು. ಆ ಕ್ಷಣದ ಭಾವನೆಗಳಿಗೆ, ಉದ್ವೇಗಗಳಿಗೆ, ಉನ್ಮಾದಗಳಿಗೆ ಒತ್ತು ಕೊಡುವ ವೆಂಕಟೇಶ ಮೂಲದಲ್ಲಿ ಭಾವೋದ್ವೇಗ ವ್ಯಕ್ತಿಯಂತೂ ಆಗಿರಲಿಲ್ಲ. ಮೂಲಭೂತವಾಗಿ ಭಾವೋದ್ವೇಗಳಾಗಿರುವಂತಹ ಸರೂಳಂತಹ ವ್ಯಕ್ತಿತ್ವಕ್ಕೆ ಆ ಭಾವೋದ್ವೇಗದ ಮೂಲ ಬೇರುಗಳನ್ನು ಜೀವನದ ಇಡಿಯ ಭಾಗಗಳಿಗೆ ಹಬ್ಬಿಸಿ ಹರಡುವ ಮಹಾಶಕ್ತಿ ಇರುತ್ತದೆ, ಎಲ್ಲಾ ರೀತಿಯ ಸಂಬಂಧಗಳಲ್ಲಿ, ಎಲ್ಲಾ ಕಾಲಗಳಲ್ಲಿ ತನ್ನ ಕೈ ಚಾಚುವ ಶಕ್ತಿ ಹೊಂದಿರುತ್ತದೆ. ಆದರೆ ವೆಂಕಟೇಶನ ಭಾವನೆಗಳು ಜೀವನದಾಳಕ್ಕೆ ನುಗ್ಗಿ ಬೇರು ಬಿಡುವುದು ಅಲ್ಲಲ್ಲಿ, ಆ ಕ್ಷಣಕ್ಕೆ, ಆ ದಿನಕ್ಕೆ, ತಿಂಗಳುಗಳಿಗೆ ಮಾತ್ರ. ಹೀಗೇ ವೆಂಕಟೇಶ್ ಹತ್ತಿರ/ದೂರ, ಹತ್ತಿರ/ದೂರ ಎಂದು ಬಹಳ ಸಲ ಅನ್ನಿಸತೊಡಗಿತ್ತು. ವೆಂಕಟೇಶನ ಬದುಕಿನ ಕನ್ನಡಿಯಲ್ಲಿ ಗಂಗಾ ತನ್ನ ಬದುಕಿನ ಮುಖವನ್ನಿಟ್ಟುಕೊಂಡು ನೋಡುವಳು. ಈತನ ಹೆಂಡತಿಯಾಗಿ ಅಂಟಿಕೊಂಡು ಬದುಕಲು ಯಾರಿಗಾದರೂ ಸಾಧ್ಯವಾಗುತ್ತದಾ? ಎಂದೂ ಕೂಡಾ ಯೋಚಿಸುವಳು. ಈತನ ಹೆಂಡತಿ ರೋಜಾಳ ಬಗ್ಗೆ ಯೋಚಿಸುವಳು. ವೆಂಕಟೇಶ್ ಹೆಣ್ಣಿನ ಸಂಬಂಧಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ರೀತಿಗಳ ಬಗ್ಗೆ ಗಂಗಾ ಯೋಚಿಸುತ್ತಿದ್ದಳು. ವೆಂಕಟೇಶನಲ್ಲಿ ಸ್ವಲ್ಪ ಆಸಕ್ತಿ ತೋರಿಸಿ, ಒಲಿದು ಬರುವ ಹುಡುಗಿಯರು ಹೇಳುವ ವೈಯಕ್ತಿಕ ಕತೆಗಳನ್ನು ನೀಟಾಗಿ, ಸರಾಗವಾಗಿ, ಸಹಜವೆಂಬಂತೆ ಗಂಟೆಗಟ್ಟಲೆ ಕುಳಿತು ಅವನು ಕೇಳುತ್ತಿದ್ದ. ಇವನ ಸುತ್ತ ಇದ್ದ

ಹುಡುಗಿಯರು ಮಹಿಳಾ ಪ್ರಶ್ನೆಗಳಿಗೆ, ಮಹಿಳಾ ಹಕ್ಕುಗಳಿಗೆ, ಸಂಘಟನೆಗಳಿಗೆ ಆಗ ತಾನೆ ಹೊಸದಾಗಿ ತೆರೆದುಕೊಳ್ಳತೊಡಗಿದ್ದರಿಂದ ವೈಯಕ್ತಿಕ ಬದುಕಿನಲ್ಲಿ ಒಂದು ರೀತಿಯ ಸಂಘರ್ಷಗಳಿಗೆ, ವಿರೋಧಗಳಿಗೆ, ಕ್ಲುಪ್ತತೆಗೆ ಒಳಗಾದಂತಹ ಸ್ಥಿತಿ ಅದು. ಹೆಣ್ಣು-ಗಂಡಿನ ಸಂಬಂಧಗಳಲ್ಲಿ ಹುಡುಕಾಟ, ಶೋಧನೆ ಇಂತಹವುಗಳೂ ಕೂಡಾ ಮನೆ ಮಾಡಿಕೊಂಡ ಸಂದರ್ಭ. ವೆಂಕಟೇಶನ ಸುತ್ತ ಇದ್ದ ಹುಡುಗಿಯರ ಬದುಕಿನಲ್ಲಿ ತಂದೆ/ತಾಯಿಯರಿಂದಲೋ, ಅಥವಾ ಅವರ ಪ್ರಿಯಕರರಿಂದಲೋ ಅಥವಾ ಅಣ್ಣಂದಿರಿಂದಲೋ ಅಥವಾ ಅರ್ಥ ಮಾಡಿಕೊಳ್ಳದ ಗಂಡಂದಿರಿಂದಲೋ ಉಂಟಾದ ತುಮುಲಗಳನ್ನು ವೆಂಕಟೇಶನಲ್ಲಿ ಹಂಚಿಕೊಳ್ಳುವರು. ತಾಸುಗಟ್ಟಲೆ ತಾಳ್ಮೆಯಿಂದ ಇದನ್ನೆಲ್ಲ ಕೇಳುವ, ಆ ಕ್ಷಣಗಳಲ್ಲಿ ಹೆಂಗರುಳಿನಿಂದಲೇ ಇಂತಹವುಗಳಿಗೆ ಸಂವೇದಿಸುವ ವೆಂಕಟೇಶ್ ಬಹಳಷ್ಟು ಜನರಿಗೆ ಆತ್ಮೀಯ ಎನ್ನಿಸಿ ಬಿಡುತ್ತಿದ್ದ. ಗಂಗಾಗೆ ಹೇಳಿಕೊಳ್ಳಲು ಏನೂ ಇಲ್ಲ ಅನ್ನಿಸಿದ್ದರಿಂದಲೋ ಅಥವಾ ತನ್ನಲ್ಲಿಯೇ ತಾನು ತನ್ನ ಬದುಕನ್ನು ಜೀರ್ಣಿಸಿಕೊಳ್ಳಬೇಕು ಎಂದು ಅನ್ನಿಸಿದ್ದರಿಂದಲೋ ವೆಂಕಟೇಶನಲ್ಲಿ ಆಕೆ ಏನೂ ಹೇಳಿಕೊಳ್ಳದಿದ್ದರೂ ಸಹ, ಕೇಳಿಸಿಕೊಳ್ಳುವ, ಸಂವೇದಿಸುವ ಅವನ ಅಗಾಧ ತಾಳ್ಮೆಯನ್ನು ಕಂಡಾಗ ಅದೊಂದು ಅವನ ವಿಶೇಷ ಗುಣವೇನೋ ಎಂದು ಮೊದ ಮೊದಲು ಅನ್ನಿಸುತ್ತಿತ್ತು. ಆದರೆ ಕ್ರಮೇಣವಾಗಿ ಸಂಬಂಧ ರೂಢಿಸಿಕೊಳ್ಳುವಲ್ಲಿ ಪ್ರಜ್ಞಾಪೂರ್ವಕವಾಗಿ ಬಳಸುತ್ತಿದ್ದ ತಂತ್ರವೇನೋ ಎಂಬ ಅನುಮಾನಗಳೂ ಕೂಡಾ ಆಕೆಯಲ್ಲಿ ತಲೆದೋರದಿರಲಿಲ್ಲ. ಸಂಬಂಧಗಳನ್ನು ರೂಢಿಸಿಕೊಳ್ಳುವ ಹಂತದಲ್ಲಿ ಇಡಿಯ ದಿನಗಳನ್ನೂ ಸಹ ವೆಂಕಟೇಶ ಅವರಿಗಾಗಿ ನೀಡಿಬಿಡುತ್ತಿದ್ದ. ಗಂಟೆಗಟ್ಟಲೆ ಕೂತುಕೊಂಡು ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ. ಅವರದೇ ಆದ ಲಯಗಳಲ್ಲಿ ಸಂವೇದಿಸುತ್ತಿದ್ದ. ಹೀಗೆ ಅವರವರ ಭಾವನೆಗಳ, ವ್ಯಕ್ತಿತ್ವದ ಲಯಗಳಲ್ಲಿಯೇ ಆ ಕ್ಷಣಗಳಲ್ಲಿ ಕರಗಿಬಿಡುವ ವೆಂಕಟೇಶ್ ಅವರಿಗೆ ಅತಿ ಹತ್ತಿರದವ, ಆತ್ಮೀಯ ಎನಿಸಿಬಿಡುತ್ತಿದ್ದ. ಗಂಗಾಗೆ ವಿಚಿತ್ರ ಎನಿಸುತ್ತಿತ್ತು. ಎಷ್ಟೊಂದು ಬದುಕಿನ ಲಯಗಳಲ್ಲಿ ಈ ವ್ಯಕ್ತಿಗೆ ವ್ಯವಹರಿಸಲು ಸಾಧ್ಯ? ಅವನ ಬದುಕಿಗೊಂದು ಲಯ ಇರುವುದಿಲ್ಲವೇ? ಇನ್ನೊಬ್ಬರ ಬದುಕಿನ ಲಯಗಳಿಗೆ ಆಯಾ ಕ್ಷಣಕ್ಕೆ ಕರಗಿ ಹೋಗಿಬಿಡುವ ವೆಂಕಟೇಶನಿಗೆ ತನ್ನ ಬದುಕಿನ ಲಯ ಮುಖ್ಯ ಅನ್ನಿಸುವುದಿಲ್ಲವೇ? ಯಾರ ಬದುಕಿನ ಲಯಗಳು ಹೇಗೋ ಆ ಲಯಗಳ ಮೂಲಕವಾಗಿಯೇ ಬದುಕನ್ನ, ಸಂಬಂಧಗಳನ್ನ ರೂಢಿಸಿಕೊಳ್ಳುತ್ತಿದ್ದ ವೆಂಕಟೇಶನ ರೀತಿ/ರಿವಾಜುಗಳು ಕ್ರಮೇಣ ಗಂಗಾಳಿಗೆ ವ್ಯವಹಾರವಾಗಿ ಕಾಣಿಸತೊಡಗಿದ್ದುಂಟು. ಇದು ನನ್ನ ಪ್ರಾಮಾಣಿಕ ಬದುಕು, ನಾನು ಬದುಕುವ ರೀತಿಯೇ ಒಂದು ಮೌಲ್ಯ ಎಂದು ವೆಂಕಟೇಶ್ ಪ್ರತಿಪಾದಿಸುತ್ತಿದ್ದ. ಇಂತಹ ತೆರೆದ ಬದುಕಿಗಾಗಿಯೇ ಗಂಗಾ ಅವನನ್ನು ಇಷ್ಟಪಟ್ಟದ್ದೂ ಉಂಟು, ಆದರೂ ಮೂಲದಲ್ಲಿ ಈತ ಬೇರೇನೋ ವ್ಯಕ್ತಿತ್ವದವನು ಎಂದು ಗಂಗಾಗೆ ಅನ್ನಿಸುತ್ತಿತ್ತು. ಹಲವಾರು ಸಂಬಂಧಗಳಲ್ಲಿ ಏಕ ಕಾಲದಲ್ಲಿ ತೊಡಗಿಕೊಳ್ಳುವ ಇವನ ರೀತಿ-ರಿವಾಜುಗಳು ಗಂಗಾಗೆ 'ವ್ಯವಹಾರ' ಎನ್ನಿಸುತ್ತಿದ್ದುದುಂಟು, 'ತಂತ್ರ' ಎನ್ನಿಸುತ್ತಿದ್ದುದುಂಟು. ಇವನ ಸಂಬಂಧಕ್ಕೆ ಒಲಿದು ಬಂದು ಹತ್ತಿರಾದವರು ಎಷ್ಟೋ ಹುಡುಗಿಯರು. ತಮ್ಮ ವೈಯಕ್ತಿಕ ಸಂಬಂಧಗಳ ಅನೇಕ ವೀಕ್‌ನೆಸ್‌ಗಳನ್ನು ಇವನ ಬಳಿ ಹೇಳಿಕೊಳ್ಳುವರು. ಆ ವೀಕ್‌ನೆಸ್‌ಗಳ ಅಡಿಪಾಯದ ಮೇಲೆಯೇ ವೆಂಕಟೇಶನ ಸಂಬಂಧ ಇತರರೊಂದಿಗೆ ಪ್ರಾರಂಭ ವಾಗುತ್ತಿದ್ದುದುಂಟು. ಅದು ಅವನ ವ್ಯಕ್ತಿತ್ವದ ಕೋರ್ ಎಂಬಂತೆ ಗಂಗಾಳಿಗೆ ಕಾಣಿಸಿದ್ದುದುಂಟು. ತನ್ನ ಗೆಳತಿಯರು ಹೇಳುವ ಅವರ ಇತರೇ ಗೆಳೆಯರ, ತಂದೆ-ತಾಯಿಗಳ, ಅಣ್ಣಂದಿರ ಅಥವಾ ಗಂಡಂದಿರ ದೌರ್ಬಲ್ಯಗಳ ಬಲೆಯಲ್ಲಿಯೇ ತನ್ನ ಸಂಬಂಧ ನೇಯುವ ವೆಂಕಟೇಶ್ ತನ್ನ ವ್ಯಕ್ತಿತ್ವದ ಲಯಗಳಲ್ಲಿ

ಯಾರೊಟ್ಟಿಗೂ ಸಂಬಂಧ ಬೆಳೆಸಿಕೊಳ್ಳಲೇ ಇಲ್ಲ ಎಂಬುದು ಗಂಗಾಳಿಗೆ ಅವನ ದುರಂತವಾಗಿ ಕಂಡಿತ್ತು. ಗಂಗಾಗೆ ಅವನ ಜೊತೆಗಿದ್ದ ಸಂಬಂಧ ತೊಡಗಿಸಿಕೊಂಡರೂ ತೊಡಗಿಸಿಕೊಳ್ಳದ ಹಾಗೆ, ಅಂಟಿಕೊಂಡರೂ ಅಂಟಿಕೊಳ್ಳದ ಹಾಗೆ. ಇವನ ಜೊತೆಗಿನ ಬದುಕು, ಸಂಬಂಧ ಕಣ್ಣು ಮುಚ್ಚಾಲೆಯಾಟದ ಬದುಕು ಎಂಬುದು ಗಂಗಾಳಿಗೆ ನಿಧಾನವಾಗಿ, ಕ್ರಮೇಣವಾಗಿ ಅರ್ಥವಾಗತೊಡಗಿತ್ತು. ಗಂಗಾ ಆತನಲ್ಲಿ ಏನನ್ನೋ ಹೇಳಿಕೊಳ್ಳುವುದರ ಮೂಲಕವಾಗಲೀ, ಯಾರದೇ ದೌರ್ಬಲ್ಯ ಬಿಚ್ಚಿಡುವುದರ ಮೂಲಕವಾಗಿಯಾಗಲೀ ಹತ್ತಿರವಾಗಿರಲಿಲ್ಲ. ಸ್ನೇಹಿತರ ಅಥವಾ ಇನ್ಯಾರದೋ ದೌರ್ಬಲ್ಯಗಳ ಸಮಾಧಿಯ ಮೇಲೆ ಕಟ್ಟುವ ಸಂಬಂಧದಲ್ಲಿ ಹೂ ಅರಳುವುದಿಲ್ಲ ಎನ್ನುವ ಸತ್ಯ ಆಕೆಗೆ ಅರ್ಥವಾಗಿತ್ತು. ಆಕೆಯ ಅಲೆಮಾರಿ ಬದುಕಿನಲ್ಲಿ ಒಂದು ಬಿಂದುವಾಗಿ ಮಾತ್ರ ಆತ ಆಕೆಗೆ ಕಾಣಿಸಿಕೊಂಡಿದ್ದನು. ಈತನ ಜೊತೆಗಿನ ಲೈಂಗಿಕ ಸಂಬಂಧದಲ್ಲೂ ಕೂಡಾ ಗಂಗಾ ಯಾವ ಸುಖವನ್ನೂ ಕಂಡದ್ದಿಲ್ಲ. ಇದು ವೆಂಕಟೇಶನಲ್ಲಿ ಹೇಳಿದ್ದಳು, ಅವನಿಗೆ ಗೊತ್ತಿತ್ತು ಕೂಡಾ. 'ನಿನ್ನ ದೇಹ/ಮನಸ್ಸು ಎರಡೂ ಕೂಡಾ ನನ್ನ ಸಂಬಂಧದಲ್ಲಿ ಪ್ರತಿಕ್ರಿಯಿಸಲೇ ಇಲ್ಲ. ಲೈಂಗಿಕ ಕ್ರಿಯೆಯಲ್ಲಿನ ಸಂಪೂರ್ಣ ಸುಖದ ಕಲ್ಪನೆಗಳೇ ತಿಳಿಯದ ಚಿಕ್ಕ ಹುಡುಗಿ ನೀನು. ನಿನ್ನ ದೇಹದ ಲಯಗಳೇ ನಿನಗೆ ಅರ್ಥವಾಗುವುದಿಲ್ಲ. ಅಥವಾ ನಿನ್ನ ದೇಹದ ಮೇಲೆ ನಿನ್ನ ಮನಸ್ಸೇ ಹೆಚ್ಚು ಅಧಿಪತ್ಯ ನಡೆಸಿರುತ್ತದೆ. ನಿನ್ನ ಮನಸ್ಸಿನಲ್ಲಿನ ಏನೇನೋ ಗೊಂದಲಗಳಲ್ಲಿ ನಿನ್ನ ದೇಹ ತಣ್ಣಗೆ ಇರುತ್ತದೆ. ನಿನ್ನ ದೇಹ/ಮನಸ್ಸುಗಳ ಪರಿಪೂರ್ಣ ಲಯಗಳು ನಿನಗೆ ಅರ್ಥವಾಗುವಂತಹ, ದ್ವಂದ್ವಗಳಿಲ್ಲದೇ ನಿನ್ನನ್ನು ನೀನೇ ತೊಡಗಿಸಿಕೊಳ್ಳಬಲ್ಲ ಹುಡುಗನ ಸಂಬಂಧ ನಿನಗೆ ಸಿಗಬೇಕು ಅಷ್ಟೇ!' ಇಂತಹ ಮಾತುಗಳನ್ನು ವಿಶ್ವಾಸದಿಂದಲೇ, ಪ್ರೀತಿಯಿಂದಲೇ ಹೇಳುವ ವೆಂಕಟೇಶನ ಬಗ್ಗೆ ಗಂಗಾಗೆ ಆದರ ಹುಟ್ಟುತ್ತಿತ್ತು, ಗೌರವ ಹುಟ್ಟುತ್ತಿತ್ತು. ಲೈಂಗಿಕತೆಯ ಸಂತೋಷದ ಲಯಗಳೇನು ಎಂಬುದು ಗಂಗಾಗೆ ಖಂಡಿತವಾಗಿಯೂ ಅರ್ಥವಾಗಿರಲಿಲ್ಲ. ಇದನ್ನು ವೆಂಕಟೇಶ ಬಾಯಿಬಿಟ್ಟು ಕೂಡಾ ಹೇಳಿದ್ದ. ನಿನ್ನ ಮನಸ್ಸಿನ ಹಾಗೆ ನಿನ್ನ ದೇಹವೂ ಪ್ರತಿಕ್ರಿಯಿಸದೇ ಹೋಗುತ್ತದೆ ಎಂದು. ಗಂಗಾ ಈತನಿಗೆ ಅಂಟಿಕೊಂಡಿರಲಿಲ್ಲ. ಬೆಂಗಳೂರಿನ ಬದುಕಿನಲ್ಲಿ ಈತ ಕೂಡಾ ಗಂಗಾಳ ಜೀವನದ ಕೇಂದ್ರ ಬಿಂದುವಾಗಿರಲಿಲ್ಲ. ವೆಂಕಟೇಶನ ಬಗ್ಗೆ ಗಂಗಾ ತನ್ನ ದಿನಚರಿಯಲ್ಲಿ ಹಲವಾರು ದಿನ ಹಲವಾರು ಸಾಲುಗಳನ್ನು ಬರೆಯುತ್ತಾ ಹೋಗುತ್ತಿದ್ದಳು. ಈಕೆ ಬರೆದ ಮೊದಲ ಸಾಲು ವೆಂಕಟೇಶನ ಬದುಕನ್ನು ನೋಡಿದರೆ ಕಮುವಿನ 'The Fall' ಕಾದಂಬರಿಯ ನಾಯಕನ ನೆನಪಾಗುತ್ತದೆ ಎಂದು. ವೆಂಕಟೇಶನ ಬದುಕಿನಲ್ಲಿ ಕೂಡಾ ಎಲ್ಲೋ ಒಂದು ರೀತಿಯ 'ಕನ್‌ಫೆಷನ್ ಟೆಕ್ನಿಕ್' ಇದೆ ಎಂದು ಈಕೆಗೆ ಅನ್ನಿಸುತ್ತಿತ್ತು. ತಾನು ಮಾಡುತ್ತಿರುವುದು ತಪ್ಪೇನೋ ಎಂದು ಅಂಜಿಕೆ ಅಂಜಿಕೆಯಿಂದಲೇ ಇನ್ನೊಬ್ಬರ ಹತ್ತಿರ ಹೇಳಿಕೊಳ್ಳುವುದು, ಹೇಳಿಕೊಳ್ಳುತ್ತಿರುವಾಗಲೇ ತಾನು ಮಾಡುತ್ತಿರುವ ತಪ್ಪು ತನ್ನೊಬ್ಬನದಲ್ಲ, ಇಡಿಯ ಸಮುದಾಯದ ಬದುಕೇ ಇದು ಎಂದು ಸಮರ್ಥಿಸಿಕೊಳ್ಳುವುದು. ಸಂಬಂಧದ ಪ್ರಾರಂಭಿಕ ಹಂತದಲ್ಲಿ ಭಾವನೆಗಳ ರೋಚಕತೆಯ ಮೇಲೆ ತೀವ್ರವಾಗಿ ಸ್ಪಂದಿಸುತ್ತಾ ಹೋಗುವುದು, ರೋಚಕತೆಯ ನಿಗೂಢತೆ ಕಳೆದು ಹೋಗುತ್ತಿದೆ ಎನ್ನಿಸಿದಾಗ ಅಂಟಿಕೊಳ್ಳ ಬಯಸುವ ಹುಡುಗಿಯರಿಗೆ ಭಾವೋದ್ವೇಗದ ವ್ಯಕ್ತಿಯೆಂದೋ, ಸೆಂಟಿಮೆಂಟಲ್ ಎಂದೋ, ಪೊಸೆಸೀವ್ ಎಂದೋ ಹೇಳಿ ಮಾಡುವುದಕ್ಕೆ ಇನ್ನೆಷ್ಟೋ ಕ್ರಾಂತಿಯ ಕೆಲಸಗಳಿರುತ್ತವೆ ಎಂದು ಅವರನ್ನು ಪೆಚ್ಚಾಗಿಸುವುದು. ಗೆಳತಿಯರ ಜೊತೆಗಿನ ಇತರೇ ಗೆಳೆಯರ ದೌರ್ಬಲ್ಯಗಳಲ್ಲಿ ತನ್ನ ವ್ಯಕ್ತಿತ್ವದ ಹಿರಿಮೆ ಸ್ಥಾಪಿಸಲು ಪ್ರಯತ್ನಿಸುವುದು. ಇಂತಹವುಗಳನ್ನು ವೆಂಕಟೇಶನಿಗೆ ಹೇಳಬೇಕು ಎಂದು ಗಂಗಾಗೆ ಅನ್ನಿಸುತ್ತಿತ್ತು. ಯಾವ ಎಳೆಯೂ ಇಲ್ಲದೇ, ಯಾವ

ಆಸಕ್ತಿಗಳೂ ಇಲ್ಲದೇ ಭಾವನೆಗಳ ರೋಚಕತೆಯ ಮೇಲೆ ಹಲವಾರು ಸಂಬಂಧಗಳಲ್ಲಿ ತೊಡಗಿಸಿಕೊಳ್ಳುವ ನಿನ್ನ ವ್ಯಕ್ತಿತ್ವ ಖಂಡಿತವಾಗಿಯೂ ನಿನ್ನನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನವೇ ಹೊರತು, ಇತರರ ಸಂಬಂಧಗಳಲ್ಲಿ ಬೇರು ಬಿಡುವ, ಹೂವಾಗುವ ರೀತಿಯದಲ್ಲ ಎಂದು ಆತನಿಗೆ ಸ್ಪಷ್ಟ ಮಾಡಬೇಕು ಎನಿಸುತ್ತಿತ್ತು. ಹೀಗೆ ಇರುವ ನಿನ್ನ ವ್ಯಕ್ತಿತ್ವವೇ ನಿನ್ನ ಅವನತಿಗೂ ಕಾರಣವಾಗಿಬಿಡುತ್ತದೆ ಎಂದು ಗಂಗಾ ವೆಂಕಟೇಶನಿಗೊಂದು ಉದ್ದವಾದ ಪತ್ರ ಬರೆದು ತಿಳಿಸಿದ್ದಳು. ಮಾತಿನಲ್ಲಿ ಪ್ರತಿ ವಾದಗಳನ್ನು ಹೂಡಿ, ಧ್ವನಿ ಎತ್ತರಿಸಿ ಮಾತಾಡುವ, ಕೈ ಬೆರಳಲ್ಲೇ ಇನ್ನೊಬ್ಬರನ್ನು ಸುಮ್ಮನಾಗಿಸಿಬಿಡುವ, ಮೊಂಡು ಮೊಂಡಾಗಿ ಗೆಲ್ಲಲು ಪ್ರಯತ್ನಿಸಿಬಿಡುವ ವೆಂಕಟೇಶನಿಗೆ ಬರವಣಿಗೆಯಲ್ಲಿ ಮಾತ್ರ ತಾನು ಇಂತಹದನ್ನೆಲ್ಲ ಸ್ಪಷ್ಟವಾಗಿ ಹೇಳಬಹುದೇನೋ ಅನ್ನಿಸಿ ಗಂಗಾ ಬರೆದು ಅವನಿಗೆ ಪೋಸ್ಟ್ ಮಾಡಿದ್ದಳು. ನಂತರ ವೆಂಕಟೇಶ್ ಸಿಕ್ಕಾಗಲೊಮ್ಮೆ ತಲೆಯ ಮೇಲೆ ಹೊಡೆದು ಅದೇ ಸಹಜ ಆತ್ಮೀಯತೆಯಿಂದಲೇ ಹೇಳಿದ್ದ, 'ನಿನಗೆ ತಲೆ ಜಾಸ್ತಿ ಕೆಲಸ ಮಾಡುತ್ತೇ ಹೊರತು ಭಾವನೆಗಳಲ್ಲ. ಹಾಗಾಗಿಯೇ ನೀನೊಬ್ಬ ಅನ್‌ಫೀಲಿಂಗ್ ಹೆಂಗಸಾಗಿರುವುದು. ಬಹುಶಃ ಈ ಕಾರಣದಿಂದಲೇ ನಿನ್ನ ದೇಹ ಕೂಡಾ ಪ್ರತಿಕ್ರಿಯಿಸದೇ ಇರಬಹುದು. ಇಡಿಯ ಜಗತ್ತಿನ ಬಗ್ಗೆ ನೀನು ಮಾತನಾಡಬೇಡ. ನಿನ್ನ ಬಗ್ಗೆ ನೀನು ಮಾತನಾಡುವುದನ್ನು ಕಲಿ' ಇತ್ಯಾದಿ. ಗಂಗಾ ಸುಮ್ಮನಾಗಿಬಿಟ್ಟಿದ್ದಳು.

ಗಂಗಾ ಅದೊಂದು ದಿನ ವೆಂಕಟೇಶನ ಮನೆಗೆ ಪಾರ್ಟಿಗೆಂದು ಹೋಗಿದ್ದಳು. ಪಾರ್ವತಿಯೂ ಜೊತೆಗಿದ್ದಳು. ವೆಂಕಟೇಶನ ಮಾರ್ಕ್ಸಿಸ್ಟ್ ಗೆಳೆಯನೊಬ್ಬ ಅವರ ಮನೆಗೆ ಬಂದಿದ್ದ. ಗಂಗಾಗೆ ಆತನ ಪರಿಚಯವಿತ್ತು. ಹೀಗೇ ಹಲವಾರು ರಾಜಕೀಯ ಸಭೆಗಳಲ್ಲಿ, ಸಾಹಿತ್ಯದ ಸಭೆಗಳ ಸಂದರ್ಭದಲ್ಲಿ ಗಂಗಾ ಇಂದ್ರಜಿತ್‌ನನ್ನು ಕಂಡಿದ್ದಳು. ಬಹುದಿನಗಳ ನಂತರದ ಅಂತರದಲ್ಲಿ ಇಂದ್ರಜಿತ್ ವೆಂಕಟೇಶನ ಮನೆಗೆ ಬಂದಿದ್ದ. ವೆಂಕಟೇಶನ ಹೆಂಡತಿ ರೋಜಾ ಎಲ್ಲರಿಗೂ ನೀಟಾಗಿ ಅಡಿಗೆ ಮಾಡಿದ್ದಳು. ಗಂಗಾ ತಾನು ತನ್ನ ತಾಯಿಯ ಬಗ್ಗೆ ಬರೆದ ಕತೆ ಪ್ರಕಟವಾದಾಗ ಅದನ್ನು ಓದಿ ಅಭಿಪ್ರಾಯ ತಿಳಿಸುವಂತೆ ಇಂದ್ರಜಿತ್‌ನನ್ನು ಕೇಳಿದ್ದಳು. ಸಾಹಿತ್ಯ ರಂಗದಲ್ಲಿ ಹಾಗೆಯೇ ರಾಜಕೀಯ ರಂಗದಲ್ಲೂ ಹೆಸರು ಮಾಡಿದ ಇಂದ್ರಜಿತ್ ಉಡಾಫೆ ವ್ಯಕ್ತಿತ್ವದವನು ಎಂದು ತಿಳಿದಿದ್ದರೂ ಆತನ ಬೌದ್ಧಿಕ ಮಟ್ಟದ ಬಗ್ಗೆ, ಬದುಕಿನಲ್ಲಿ ರಾಜಕೀಯ ಆಯಾಮಗಳ, ವೈಚಾರಿಕ ಲಯಗಳ ಗ್ರಹಿಸುವ ಸೂಕ್ಷ್ಮತೆಯ ಬಗ್ಗೆ, ಮಾತಿನ ಎಳೆಗಳ ಹಿಡಿದು ಖಚಿತವಾಗಿ, ನಿಖರವಾಗಿ, ಸ್ಪಷ್ಟ ರೀತಿಗಳಲ್ಲಿ ಆತ ವಾದಿಸುವ ಬಗ್ಗೆ ಗಂಗಾಗೆ ಗೌರವವಿತ್ತು. ಉಡಾಫೆ ಉಡಾಫೆಯಾಗಿ ಮಾತನಾಡುತ್ತಲೇ ಬದುಕಿನ ಬಗ್ಗೆಗಿನ ಅದ್ಭುತ ಗ್ರಹಿಕೆಯನ್ನು, ಅದರ ಹಿಂದಿರುವ ರಾಜಕೀಯ ಆಯಾಮವನ್ನು, ಅವೆಲ್ಲವನ್ನೂ ಒಟ್ಟಾಗಿ ಹಿಡಿದಿಡಬಲ್ಲ ವೈಚಾರಿಕ ದೃಷ್ಟಿಕೋನವೊಂದನ್ನು ನಿರೂಪಿಸುವ ಇಂದ್ರಜಿತ್‌ನ ರೀತಿಗೆ ಗಂಗಾ ಅವನನ್ನು ಗೌರವಿಸುತ್ತಿದ್ದಳು. ವೆಂಕಟೇಶ್, ಇಂದ್ರಜಿತ್ ಇಬ್ಬರನ್ನೂ ಒಂದು ಕ್ಷಣ ಮನಸ್ಸಿನಲ್ಲಿಯೇ ಹೋಲಿಸಿ ನೋಡಿದ್ದಳು ಗಂಗಾ. ವೆಂಕಟೇಶ ಸೀದಾ-ಸಾದಾ. ತನ್ನ ಬದುಕು ಹೀಗೆ, ಯಾರು ಬೇಕಾದರೂ ಓದಿಕೊಳ್ಳಲಿ ಎಂದು ಪುಸ್ತಕದ ರೀತಿ ತನ್ನ ಬದುಕನ್ನು ಬಿಚ್ಚಿ ಇಡುವ ಸ್ವಭಾವ. ಯಾರು ಬೇಕಾದರೂ ಓದಿ ನೋಡಿಬಿಡಬಹುದು. ವೆಂಕಟೇಶ್ ಹೀಗೀಗೆ ಎಂದು ತಮಗನ್ನಿಸಿದ ರೀತಿಯಲ್ಲಿ ಅವನನ್ನು ಅರ್ಥೈಸಿಕೊಳ್ಳಬಹುದು. ಬದುಕನ್ನು ನಿಮ್ಮ ಮುಂದೆ ಬೆತ್ತಲಾಗಿ ಬಿಚ್ಚಿಡುವ ಹಂತದಲ್ಲಿಯೇ ತಾನು ನಂಬಿದ್ದೇ ಸತ್ಯ ಎಂದು ಮೊಂಡು ಹಟ ಹಿಡಿದು ಬದುಕನ್ನೂ ಬೇಕಾದರೂ ಆ ಕ್ಷಣಕ್ಕೆ ಛಿದ್ರ ಛಿದ್ರ ಮಾಡಿಕೊಂಡು ಬಿಡುವ ವ್ಯಕ್ತಿ. ಛಿದ್ರತೆಗಳಲ್ಲಿಯೇ ಕ್ಯಾಪಿಟಲಿಸಂ ಮುಖಗಳನ್ನು, ಹಿಂಸೆಗಳನ್ನೂ, ತಾನೂ ಅದರಲ್ಲಿ ಭಾಗಿಯಾಗಿರುವ

ಅನಿವಾರ್ಯತೆಗಳನ್ನು ಮಾತನಾಡುತ್ತಲೇ ಹಿಂಸೆಯ ಬೇರುಗಳನ್ನು ಬಿಚ್ಚಿಡುವ ವ್ಯಕ್ತಿ. ಬದುಕಿನಲ್ಲಿ ಕಣ್ಣು-ಮುಚ್ಚಾಲೆ ಆಡಬೇಕೆಂದೇ ಇರುವ ಸ್ವಭಾವ ಇವನದಲ್ಲ. ಇತರರು ಅವನ ಬದುಕನ್ನು ಕಣ್ಣು-ಮುಚ್ಚಾಲೆ ಆಟವೆಂದು ಬಗೆದರೆ ಆತ ವಿರೋಧಿಸುವುದೂ ಇಲ್ಲ, ಬದಲಾವಣೆಯಾಗುವುದೂ ಇಲ್ಲ. ಸಂಬಂಧಗಳನ್ನು ನಿಗೂಢವಾಗಿಸಿಕೊಂಡು ಮೆರೆಯುವ ಹಮ್ಮು ವೆಂಕಟೇಶನದಲ್ಲ. ಆದರೆ ಸಂಬಂಧಗಳಲ್ಲಿ ತನ್ನ ಬದುಕು ತೆರೆದಿಟ್ಟ ಪುಸ್ತಕ ಎನ್ನುವ ಹಂತದಲ್ಲಿ ವೆಂಕಟೇಶನಲ್ಲಿ ಹಮ್ಮು/ಹೆಮ್ಮೆ ಎರೆಡೂ ಇತ್ತು. ಆದರೆ ಈತ ಕರೆದು ತಂದ ಮಾರ್ಕ್ಸಿಸ್ಟ್ ಇಂದ್ರಜಿತ್ ಹಾಗಲ್ಲ. ಸಂಬಂಧಗಳನ್ನು ವಿಶೇಷವಾಗಿ ಹುಡುಗಿಯರ ಜೊತೆಗಿನ ಸಂಬಂಧಗಳನ್ನು ನಿಗೂಢವಾಗಿ ಕಾಯ್ದುಕೊಂಡು ಬದುಕಿನ ಇಂಟೆಗ್ರಿಟಿ ಕಾಯ್ದುಕೊಳ್ಳಬೇಕೆನ್ನುವ ವ್ಯಕ್ತಿ. ಎಲ್ಲಿಯೂ ಸಿಕ್ಕಿಹಾಕಿಕೊಳ್ಳದೇ, ಬದುಕನ್ನು ಛಿದ್ರ ಛಿದ್ರ ಮಾಡಿಕೊಳ್ಳದೇ ನಾಜೂಕಾಗಿ ಇರಬೇಕೆಂದು ಬಯಸುವ ವ್ಯಕ್ತಿ. ಉಡಾಫೆತನಗಳ ನಡುವೆಯೂ ಬದುಕನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಇಟ್ಟು, ರಾಜಕೀಯ ಆಯಾಮಗಳ ನಡುವೆ ಇಟ್ಟು ಗ್ರಹಿಸುವ ಸೂಕ್ಷ್ಮ ಒಳನೋಟಗಳು ಈತನಿಗಿತ್ತು. ಈ ಎಲ್ಲಾ ಆಯಾಮಗಳನ್ನು ಶೋಧಿಸಲು ಬೇಕಾದ ದಾಷ್ಟತೆ ಈತನಲ್ಲಿ ಇತ್ತು. ಗಂಗಾ ಪ್ರಕಟವಾದ ತನ್ನ ನೀಳ್ಗತೆಯೊಂದನ್ನು ಇಂದ್ರಜಿತ್‌ಗೆ ನೀಡಿ ತುಂಬಾ ದಿನಗಳಾಗಿತ್ತು. ಈಗ ಸಮಯವಿದ್ದುದರಿಂದ ಇಂದ್ರಜಿತ್ ಗಂಗಾಳ ಕತೆ ಓದಿದ್ದನ್ನು ಜ್ಞಾಪಿಸಿಕೊಂಡು ಅದರ ಬಗ್ಗೆ ತನ್ನ ಅಭಿಪ್ರಾಯ ಹೇಳತೊಡಗಿದ್ದ. ಯಾವುದೋ ಸಾಮಾನ್ಯ ಸಾರಾಯಿ ಕುಡಿದ ಮತ್ತು ಮಾತುಗಳಲ್ಲಿ ರಂಗು ರಂಗಾಗಿ ಧ್ವನಿಸತೊಡಗಿತ್ತು. ಆಕೆಯ ಕತೆಯ ಬಗ್ಗೆ ಇಂದ್ರಜಿತ್‌ನ ಒಟ್ಟು ಅಭಿಪ್ರಾಯ ಇಷ್ಟು - ಕತೆಯಲ್ಲಿ ಬರುವ ಮುಖ್ಯ ಪಾತ್ರ ಹುಚ್ಚಿಯ ಪಾತ್ರ. ಮಹಿಳಾ ಚಳುವಳಿ ಹುಟ್ಟು ಹಾಕ್ತಾ ಇರೋ ದುರಂತ ಇದು ಎಂದೇ ಇಂದ್ರಜಿತ್ ಮಾತನಾಡಲು ಪ್ರಾರಂಭಿಸಿದ್ದು. ಅಂದರೆ ಆ ಹುಚ್ಚು-ಅದರ ಚೌಕಟ್ಟು, ಶೋಷಣೆಯ ಪರಿಕಲ್ಪನೆಗೆ historical materialನ basis ಇದೆಯೇ?. Historical materialismನ ಚೌಕಟ್ಟಿನಲ್ಲಿ ಇಂತಹ ಪ್ರಶ್ನೆಗಳನ್ನು ಹೇಗೆ ಅರ್ಥೈಸಿಕೊಳ್ಳಬೇಕು? Thesis-anti-thesis-synthesisನ ಚೌಕಟ್ಟಿನ ಪರಿಕಲ್ಪನೆಯಲ್ಲಿ ಇಂತಹ ಸಮಸ್ಯೆಗಳು ಹೇಗೆ ವಿವರಣೆ ಪಡೆದುಕೊಳ್ಳುತ್ತವೆ? ಜೊತೆಗೆ ಹುಚ್ಚು, ಅತ್ಯಾಚಾರ ಇಂತಹ ಕ್ರೂರ ಮುಖಗಳ ಹಿನ್ನೆಲೆಯಲ್ಲಿಯೇ ಯಾಕೆ ಸ್ತ್ರೀಯರ ಬದುಕನ್ನ, ಹೆಣ್ಣು-ಗಂಡಿನ ಸಂಬಂಧಗಳನ್ನು ಬಿಚ್ಚಿ ಇಡಬೇಕು ಇತ್ಯಾದಿ. Historical Materialismನ ಹಿನ್ನೆಲೆಯಲ್ಲಿ ಸಮಸ್ಯೆಗಳ ಮುಖಗಳು ತೆರೆದುಕೊಳ್ಳುತ್ತಾ ಹೋಗಬೇಕು. ಬದುಕಿನ ಲಯಗಳನ್ನು ಗುರುತಿಸುತ್ತಾ ಹೋಗಬೇಕು. ಇಂತಹ ಪ್ರಯತ್ನಗಳು ಗಂಗಾಳ ಕತೆಯಲ್ಲಿ ಕಾಣುವುದಿಲ್ಲ. ನೆತ್ತಿಗೇರಿಸುವ ಕಳ್ಳು ಎದುರಿಗಿದ್ದರೂ ಗಂಗಾ, ಪಾರ್ವತಿ, ರೋಜಾ ಕುಡಿಯುತ್ತಿದ್ದುದು ಬಿಯರ್ ಮಾತ್ರ. ಇಂದ್ರಜಿತ್‌ನ ಮಾತು ಕೇಳಿಸಿಕೊಳ್ಳುತ್ತಲೇ ಗಂಗಾಗೆ ಯಾಕೋ ಬಿಯರ್ ಕುಡಿದುದೇ ನೆತ್ತಿಗೇರಿದ ಹಾಗೆ ಆಗತೊಡಗಿತ್ತು. ಇಂದ್ರಜಿತ್‌ನ ಮುಂದಿನ ಮಾತುಗಳನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಗಂಗಾ ಇರಲಿಲ್ಲ. ಎಲ್ಲಿಯೋ ಯಾರೋ ಆಕೆಯನ್ನು ಕುತ್ತಿಗೆ ಹಿಚುಕಿ ಪ್ರಪಾತಕ್ಕೆ ತಳ್ಳಿದ ಹಾಗೆ ಅನ್ನಿಸತೊಡಗಿತ್ತು. ಯಾವುದು ತನ್ನ ತಾಯಿಯ ಶೋಷಣೆಯ ಇತಿಹಾಸದ ಮೆಟೀರಿಯಲ್ ಬೇಸಿಸ್? ತನ್ನ ತಾಯಿಯ ಹುಚ್ಚು ನಿಜ ಅಲ್ಲವೇ? ತನ್ನ ಇಡಿಯ ಜೀವನದ ಬೇರುಗಳನ್ನೇ ಅಲುಗಾಡಿಸಿದ ತನ್ನ ತಾಯಿಯ ಹುಚ್ಚಿನ Material basis ಏನು? ಆಕೆಯ ದುರಂತದ ಹಿನ್ನೆಲೆಯಲ್ಲಿಯೇ ತನ್ನ ಅಲೆಮಾರಿ ಬದುಕಿನ ಮೆಟ್ಟಿಲುಗಳು ರೂಪುಗೊಂಡಿರಲಿಲ್ಲವೇ? ಕತೆಯಲ್ಲಿ ಪಾರ್ಕಿನ ನಿರ್ಜನ ಮೂಲೆಯಲ್ಲಿ ಅತ್ಯಾಚಾರಕ್ಕೊಳಗಾದ ಚಿಕ್ಕ ಹುಡುಗಿಯ ಪಾತ್ರವೊಂದು ಬರುತ್ತದೆ. ಅದನ್ನು ತಾನು ಕಂಡಿರಲಿಲ್ಲವೇ? ಚಿಕ್ಕ ಹುಡುಗಿಯಾಗಿರುವಾಗ

ಅಣ್ಣ, ಅಣ್ಣನ ಗೆಳೆಯರೇ ಪಶುಗಳಾಗಿ ವರ್ತಿಸಿರಲಿಲ್ಲವೇ? Historical Materialismನ ಒಳಗಡೆ ಬರುವ ಅನುಭವದ ಲಯಗಳಲ್ಲವೇ ಇವು? ಇಂದ್ರಜಿತ್ ಮಾತನಾಡುತ್ತಿದ್ದುದು ಗಂಗಾಳ ಕತೆಯಲ್ಲಿನ ಕಲೆಗಾರಿಕೆ ಕುರಿತು ಅಲ್ಲ. ಕಲೆಗಾರಿಕೆಯ ಕುಸುರಿತನದ ಬಗ್ಗೆಯೂ ಅಲ್ಲ. ರೋಷ ಕಾರಿಕೊಂಡು ಇದು ಸರಿ/ಇದು ತಪ್ಪು ಎನ್ನುವ ಸಮೀಕರಣದಲ್ಲಿ ಕತೆ ಬರೆಯುವ ಮನಸ್ಸನ್ನು ಗಂಗಾ ಹೊಂದಿದವಳಲ್ಲ ಎಂಬುದೂ ಅವನೇ ಹೇಳುವ ಮಾತು. ಇಂದ್ರಜಿತ್ ಮುಖ್ಯವಾಗಿ ಮಾತನಾಡುತ್ತಿದ್ದುದು ಕತೆಯ ವಸ್ತುವಿನ ಬಗ್ಗೆ. ಆತ್ಮಹತ್ಯೆ, ಅತ್ಯಾಚಾರ, ಹುಚ್ಚು ಈ ಮೂರು ಮುಖ್ಯ ವಸ್ತುಗಳಲ್ಲಿ ತಿರುಗಾಡುವ ಇಡಿಯ ಕತೆಯ ಬಗ್ಗೆ. ಈ ದುರಂತದ ಮೆಟ್ಟಿಲುಗಳಲ್ಲಿ ಮುಗ್ಧತೆ ಚೂರು ಚೂರಾಗುವ ಹಂತದ ಬಗ್ಗೆ. ಕತೆಯ ವಸ್ತು, ಬದುಕಿನ ವಿಕೃತ ರೂಪಗಳನ್ನೇ ತೋರಿಸುವುದಿಲ್ಲವೇ ಎನ್ನುವುದರ ಬಗ್ಗೆ. ಗಂಗಾ ಮಾತನಾಡಲಿಲ್ಲ. ಜೀವ-ಜೀವದಲ್ಲಿ ಬೆಸೆದುಕೊಂಡು ಮೂಡಿ ಬಂದ ಪಾತ್ರಗಳಲ್ಲವೇ? ಚರ್ಚೆ ಗಂಗಾಳ ಕತೆಯಿಂದ ಮಹಿಳಾ ಚಳುವಳಿಯತ್ತ ತಿರುಗಿತ್ತು, ಹಾಗೆಯೇ ಮುಂದುವರಿಯತೊಡಗಿತ್ತು. ಮಹಿಳೆಯರ ಜೀವನದ ಹಿಂಸೆಯ ಭಾಗಗಳಲ್ಲವೇ ಇವು-ಎಂದು ಪಾರ್ವತಿ ಕೂಡಾ ವಾದಿಸುತ್ತಿದ್ದಳು. 'Personal is Political' ಎಂಬ ಹಿನ್ನೆಲೆಯಲ್ಲಿಯೇ ಮಹಿಳಾ ಗುಂಪುಗಳು, ಸ್ವಾಯತ್ತತೆಯ ಪರಿಕಲ್ಪನೆಯಿಂದ ಮಾರ್ಕ್ಸಿಸ್ಟ್ ಹಾಗೂ ಇತರ ರಾಜಕೀಯ ಪಕ್ಷಗಳಿಂದ ಹೊರಬಂದು ಪ್ರತ್ಯೇಕ ಮಹಿಳಾ ಗುಂಪುಗಳನ್ನು ಸ್ಥಾಪಿಸುದುದನ್ನು ಕುರಿತು ಪಾರ್ವತಿ ಮಾತನಾಡುತ್ತಿದ್ದಳು. 'ವೈಯಕ್ತಿಕ' - ಎಂದು ನೀವು ಆಚೆ ತಳ್ಳಿಬಿಡುವ ಮಹಿಳಾ ಸಮಸ್ಯೆಗಳು ಚಾರಿತ್ರಿಕ ಹಿನ್ನೆಲೆಯಲ್ಲಿ ಕೇವಲ ವೈಯಕ್ತಿಕ ಎಂದು ಮೂಲೆಗುಂಪಾಗಿರುವುದು ಇಡಿಯ ಸ್ತ್ರೀ ಸಮುದಾಯದ ಜೀವನದ ಪ್ರಶ್ನೆಯಲ್ಲವೇ ಎಂದು ಪಾರ್ವತಿ ಪ್ರಶ್ನಿಸುತ್ತಿದ್ದಳು. ಈ ವೈಯಕ್ತಿಕ ಎಂದು ಕರೆಯುವುದನ್ನು ರಾಜಕೀಯ ಆಯಾಮದಲ್ಲಿ ಗುರುತಿಸುವುದಕ್ಕೆ, ಚರ್ಚಿಸುವುದಕ್ಕೆ, ಹಂಚಿಕೊಳ್ಳುವುದಕ್ಕೆ ಪ್ರತ್ಯೇಕ ಮಹಿಳಾ ಗುಂಪುಗಳಿಗೆ ಸಾಧ್ಯ, ಹಾಗಾಗಿ ಮಹಿಳಾ ಸಂಸ್ಥೆಗಳು, ಸ್ವಾಯತ್ತತೆಯ ಪರಿಕಲ್ಪನೆಯ ಮಹಿಳಾ ಸಂಸ್ಥೆಗಳು ಚರಿತ್ರೆಯ ಅನಿವಾರ್ಯ ಸತ್ಯವಲ್ಲವೇ ಎಂದು ಪಾರ್ವತಿ ಗಂಭೀರವಾಗಿ ನುಡಿಯುತ್ತಿದ್ದಳು. ವೈಯಕ್ತಿಕ ಎನ್ನುವುದನ್ನು ಹಂಚಿಕೊಳ್ಳಲು ಮುಕ್ತ ವಾತಾವರಣವೊಂದು ಮಹಿಳಾ ಸಂಘಟನೆಗಳಲ್ಲಿ ರೂಪುಗೊಳ್ಳತೊಡಗಿದೆ, ಹೀಗೇ ಏನನ್ನೋ ಭಾವೋದ್ವೇಗದಿಂದ ಪಾರ್ವತಿ ನುಡಿಯುತ್ತಿದ್ದಳು. ಇದ್ದಕ್ಕಿದ್ದ ಹಾಗೆ ರೋಜಾ ಮಧ್ಯ ಬಾಯಿ ಹಾಕಿದಳು. ಗಂಗಾ ಹಾಗೂ ವೆಂಕಟೇಶನ ಸಂಬಂಧದ ಬಗ್ಗೆ ನೇರವಾಗಿ ಆಕೆ ಮಾತು ಎತ್ತಿದಳು. ಗಂಗಾ ಮಾಡುತ್ತಿರುವುದು ಸರಿಯೇ? ಎಂಬ ಗಾಢವಾದ ಪ್ರಶ್ನೆಯೊಂದನ್ನು ಎತ್ತಿ ಕಣ್ಣಲ್ಲಿ ನೀರು ಹಾಕಿಕೊಂಡೇ ರೇಗಾಡತೊಡಗಿದ್ದಳು. ವೆಂಕಟೇಶನ ಹತ್ತಾರು ಸಂಬಂಧಗಳು ರೋಜಾಗೆ ಗೊತ್ತಿರುವವೇ. ಎದು ಗೆದುರಿಗೇ ಬಿಚ್ಚಿಟ್ಟ ಸಂಬಂಧಗಳು. ಇದು ಸರಿಯೇ? ತಾನು ಅಂಟಿಕೊಂಡು ಬದುಕುವುದಿಲ್ಲವೇ? ವೆಂಕಟೇಶ ಹೀಗೆ ಅಲೆಮಾರಿ ಬದುಕು ಬದುಕುತ್ತಾ ಹೋದರೆ ತನ್ನ ಹಾಗೂ ಮಗು ಅಮಲುವಿನ ಗತಿಯೇನು? ಮೂರು ಹೊತ್ತೂ ಸುತ್ತಾಡಿಕೊಂಡೇ ಇದ್ದರೆ ಮನೆ ಜವಾಬ್ದಾರಿ ಹೊರುವವರು ಯಾರು? ಕ್ರಾಂತಿಗರ್ಧ ಸಮಯ, ಸಂಬಂಧಗಳಿಗೆ ಅರ್ಧ ಸಮಯ. ಕಟ್ಟಿಕೊಂಡವಳಿಗೇನು ಸಮಯ/ ಸಂದರ್ಭಗಳಿಲ್ಲವೇ? ಸಂಸಾರದ ಜವಾಬ್ದಾರಿ ಹೊರುವವರು ಯಾರು? ಮೊತ್ತದಲ್ಲಿ ಹಣ ಕೊಡೋದು ಅಂದ್ರೆ ಸಂಸಾರದ ಜವಾಬ್ದಾರಿ ಹೊತ್ತ ಹಾಗೆಯೇ? ಮಹಿಳಾ ಸ್ವಾತಂತ್ರ್ಯ, ಚಳವಳಿ ತನಗೆ ನೀಡುತ್ತಿರುವುದಾದರೂ ಏನನ್ನು? ರೋಜಾ ಕೆಲವೊಮ್ಮೆ ಸಿಟ್ಟಿನಿಂದ, ಉದ್ವೇಗದಿಂದ, ಅಳುತ್ತಾ ಮಾತನಾಡುತ್ತಿದ್ದಳು. ಗಂಗಾಳ ಕಿವಿಗೆ ಅಪ್ಪಳಿಸಿದ ಹಾಗೆ ಕೇಳಿಸಿದರೂ ಬಿಯರ್‌ನ ಮತ್ತಿಗೇ ಅಸ್ಪಷ್ಟವಾಗಿ

ಕೇಳಿಸುತ್ತಿದ್ದವು. ಬಿಯರ್‌ನಲ್ಲದೇ ತಾನು ಮತ್ತೇನನ್ನೋ ಕುಡಿದಿರಬೇಕು ಎಂದು ಗಂಗಾಗೆ ಅನ್ನಿಸತೊಡಗಿತ್ತು. ಆ ಮಬ್ಬಿನಲ್ಲಿ ರೋಜಾಳ ಅಳು ರೋದನವಾಗಿ ಆಕೆಯ ಕಿವಿಗೆ ಅಪ್ಪಳಿಸುತ್ತಿತ್ತು. ವೆಂಕಟೇಶ ಮತ್ತೆ ರೋಜಾ ಇಬ್ಬರೂ ಕಿತ್ತಾಡತೊಡಗಿದರು. ಇಂದ್ರಜಿತ್ ಜಾಗ ಖಾಲಿ ಮಾಡಿದ. ಗಂಗಾ ಎಷ್ಟು ಸಮಯ ಅಲ್ಲಿದ್ದಳೋ ಆಕೆಗೇ ತಿಳಿಯದು. ಆಕೆ ತೂರಾಡಿಕೊಂಡೇ ಮನೆಗೆ ಬಂದಿರಬೇಕು. ರಾತ್ರಿಯೆಲ್ಲಾ ಗಂಗಾ ನಿದ್ದೆ ಮಾಡಲಿಲ್ಲ. ಅತ್ತಿಂದಿತ್ತ ಮಬ್ಬಿನಲ್ಲಿಯೇ ಹೊರಳಾಡತೊಡಗಿದ್ದಳು. ಮನಸ್ಸಿನ ಪೂರ್ತಿ ಅಂಟಿಕೊಂಡುದು ರೋಜಾಳ ರೋದನ. ಆ ರೋದನದ ಹಿನ್ನೆಲೆಯಲ್ಲಿ ಮನಸ್ಸಿಗೆ ಇನ್ನೇನೇನೋ ವೇದನೆಗಳು. ತಾನಿರುವ ಸಾಂಸ್ಕೃತಿಕ ಘಟ್ಟ ಅಂಟಿಕೊಳ್ಳುವ/ಅಂಟಿಕೊಳ್ಳದೇ ಇರುವ ಎರಡೂ ಬದುಕಿಗೂ ತನ್ನನ್ನು ಬಿಡುವುದಿಲ್ಲ. ತನ್ನ ಬದುಕನ್ನು ಎಲ್ಲಿ ಸಮತೋಲನ ಮಾಡಿಕೊಳ್ಳಬೇಕು? ರೋಜಾಳ ಪ್ರಶ್ನೆಗಳಿಗೆ ತನ್ನ ಉತ್ತರ ಏನು? ನನ್ನ ನಂಬಿಕೆ ಇದು. ತನ್ನದು ಅಲೆಮಾರಿ ಬದುಕು. ಅಂಟಿಕೊಂಡು ಬದುಕುವ ಕಲ್ಪನೆಯೇ ತನ್ನಲ್ಲಿ ನಾಶವಾಗಿ, ಹುಡಿ ಹುಡಿಯಾಗಿ ಹೋಗಿದೆ. ಅಂಟಿಕೊಂಡು ಬದುಕುವ ಕಲ್ಪನೆಯನ್ನು ರವಿ ಚಿಕ್ಕ ವಯಸ್ಸಿನಲ್ಲಿಯೇ ಕಿತ್ತು ಹಾಕಿದ್ದಾನೆ. ಚಿಕ್ಕ ವಯಸ್ಸಿನಲ್ಲಿಯೇ ಅಲುಗಾಡಿದ ಹಲ್ಲಿನ ಬೇರುಗಳು ಬದುಕಿನ ನಶ್ವರತೆಯ ಕಲ್ಪನೆಯನ್ನು, ಬಿದ್ದು ಹೋಗುವ ದೇಹದ ಕಲ್ಪನೆಯನ್ನು ಎದೆಯಾಂತರಾಳದಲ್ಲಿ ಶಾಶ್ವತವಾಗಿ ಹುಟ್ಟು ಹಾಕಿವೆ. ತನ್ನ ಅಲೆಮಾರಿ ಜೀವನದಲ್ಲಿ ವೆಂಕಟೇಶ ಒಬ್ಬ ಪಯಣಿಗ ಮಾತ್ರ. ಇದು ತನ್ನ ನಂಬಿಕೆ, ತನ್ನ ಬದುಕು ಎಂದಷ್ಟೇ ಆಕೆ ರೋಜಾಳ ಬಳಿ ಹೇಳಬಲ್ಲಳೇ ಹೊರತು ಅದೇ ನಿಜ, ಅದೇ ಸತ್ಯ ಎಂದು ಸಾಧಿಸಲಾರಳು. ನಾನು ನಂಬಿದ್ದೇ ಸತ್ಯ ಎಂದು ವೆಂಕಟೇಶ್ ಮೊಂಡು ಹಟ ಹಿಡಿಯುವ ಹಾಗೆ ಗಂಗಾ ಹಟ ಹಿಡಿಯಲಾರಳು. 'ನನ್ನ ನಂಬಿಕೆ', 'ನನ್ನ ಬದುಕು', 'ನಾನು ನಂಬಿದ ಸತ್ಯ' ಎನ್ನಬಲ್ಲಳೇ ಹೊರತು ಅವುಗಳೇ ಪರಮ ಸತ್ಯ ಎನ್ನುವ ಮೊಂಡಾಟ ಆಕೆಯಲ್ಲಿ ಮೂಡಲಾರದು.

ಚಲನಶೀಲವಾಗಿರುವ ಸಾಂಸ್ಕೃತಿಕ ಘಟ್ಟಗಳ ಕ್ರೈಸಿಸ್‌ನಲ್ಲಿ ಉಂಟಾಗುವ ದ್ವಂದ್ವ/ಅನುಮಾನಗಳ ಅಗಾಧ ಪರಿಚಯ ಗಂಗಾಳಿಗಾದದ್ದೇ ರೋಜಾ ಮುಖಾಮುಖಿಯಾದ ಘಟನೆಯಿಂದ.

ವೆಂಕಟೇಶನ ಇಡಿಯ ಸಂಬಂಧದಲ್ಲಿ ವೆಂಕಟೇಶನೇ ಹೇಳುವ ಹಾಗೆ ತಲೆ ಹಾಕಿದ್ದೇ ಬೌದ್ಧಿಕತೆ. ನಮ್ಮಿಬ್ಬರ ಮಧ್ಯೆ ಅಂತಹ ತೀವ್ರವಾದ ತುಡಿತಗಳು ಉಂಟಾಗದಿರುವುದಕ್ಕೆ ಇದೇ ಕಾರಣವೆಂದು ವೆಂಕಟೇಶ ಯಾವಾಗಲೂ ಹೇಳುತ್ತಿದ್ದ. ಚರ್ಚೆಗೆ, ಬೌದ್ಧಿಕತೆಗೇ ಸೀಮಿತವಾದ ತಮ್ಮ ಸಂಬಂಧದಲ್ಲಿ ಭಾವನೆಗಳು ತಮ್ಮ ಸ್ಥಾನವನ್ನೇ ಕಳೆದುಕೊಂಡುಬಿಟ್ಟಿವೆ ಎಂದು ಅವನು ಮಾಡುತ್ತಿದ್ದ ತಮಾಷೆಗೆ ಗಂಗಾ ನಕ್ಕುಬಿಡುತ್ತಿದ್ದಳು. ನಿನ್ನ ಭಾವನೆಗಳನ್ನು ನಿನ್ನ ವ್ಯಕ್ತಿತ್ವದ ಒಳಗೆಲ್ಲೋ ಹುದುಗಿಸಿಬಿಟ್ಟಿರುವೆ. ನಿನ್ನ ವ್ಯಕ್ತಿತ್ವ ನಿನ್ನ ಭಾವನೆಗಳಿಂದ ದೂರ ಇರುತ್ತದೆ ಅದೇ ನಿನ್ನ ದುರಂತ ಎಂದು ವೆಂಕಟೇಶ ಆರೋಪಿಸುತ್ತಿದ್ದ. ಜಗತ್ತಿನ ಬಗ್ಗೆ ಮೂರೂ ಹೊತ್ತು ಮಾತಾಡ್ತಾ ಇರ್ತೀಯಲ್ಲ, ನಿನ್ನಲ್ಲಿ ಅಥವಾ ನಿನಗೆ ವೈಯಕ್ತಿಕ ಎಂಬುದೇ ಇಲ್ಲವಾ ಅಂತ ಅವನು ಸಿಡಿಮಿಡಿಗೊಳ್ಳುವುದನ್ನೂ ಗಂಗಾ ಕಂಡಿದ್ದಳು. ಐಷಾರಾಮದ ಬದುಕಿನ ಸಾಧ್ಯತೆಗಳ ಒಲವೇ ವೆಂಕಟೇಶನ ಬದುಕಿಗೆ ಮುಳುವಾಗುತ್ತಿದೆಯೆಂದು ಗಂಗಾ ಬಹಳಷ್ಟು ಸಲ ತಲ್ಲಣಿಸಿ ಹೋಗಿದ್ದಳು. ರೆನೆಯಂತವರು ಹುಟ್ಟು ಹಾಕಿದ ಅಭಿವೃದ್ಧಿ ಸಂಸ್ಥೆಗಳು ಐಷಾರಾಮದ ಬದುಕಿನ ಸಾಧ್ಯತೆಗಳನ್ನು ತೆರೆಯುತ್ತಾ ಹೋದ ಹಾಗೆ ರೂಪಾಯಿಯ ಬದುಕಿನಲ್ಲಿ-ಎಂಟಾಣೆಗೆ ತಿಂದು, ಎಂಟಾಣೆಗೆ ಪತ್ರಿಕೆ ಕೊಂಡು ಓದುತ್ತಿದ್ದ ವೆಂಕಟೇಶನ ವ್ಯಕ್ತಿತ್ವದ ಕೋಪ, ರೋಷ, ಆವೇಶಗಳೆಲ್ಲ ಕರಗಿ ನೀರಾಗಿ

ಹೋಗುತ್ತಿದ್ದವೆಂದು ಗಂಗಾಗೆ ಅನ್ನಿಸತೊಡಗಿತ್ತು. ಖಾಕಿ ಗುಂಡುಗಳ ಬಗ್ಗೆ ವೆಂಕಟೇಶ್ ಬರೆದ ಕವನದ ಸಾಲುಗಳೇ ಗಂಗಾಳಿಗೆ ಅವನ ಬಗ್ಗೆ ಆರಾಧನಾಭಾವ ಹುಟ್ಟು ಹಾಕಿದ್ದು. ಆದರೆ ವಿದೇಶೀ ಹಣದ ನೆರವಿನ ಅಭಿವೃದ್ಧಿ ಚಟುವಟಿಕೆಗಳಲ್ಲಿ ಕ್ರಾಂತಿಯ ಕನಸುಗಳು ಹೊಸ ಹೊಸ ಮುಖ ಧರಿಸುತ್ತವೆ ಎಂಬ ಬಲವಾದ ಭಾವನೆಯೊಂದು ಆಕೆಯಲ್ಲಿ ಬೆಳೆಯತೊಡಗಿತ್ತು. ಆಟೋಗಳಲ್ಲಿಯೇ ಓಡಾಡಿ ಕ್ರಾಂತಿಯ ಬಗ್ಗೆ ಮಾತನಾಡುತ್ತಾ ನಡೆಯುವ ಈ ಜನ-ಜನ ಸಾಮಾನ್ಯರಿಂದ ಕಟ್ಟಬೇಕಾದ ಚಳುವಳಿಯಿಂದ ದೂರವಾಗತೊಡಗುತ್ತಾರೇನೋ ಎಂಬ ಅನುಮಾನ ಪ್ರಾರಂಭವಾಗತೊಡಗಿತ್ತು. ವೆಂಕಟೇಶನ ನೈಜ ಭಾವನೆಗಳು ಎಲ್ಲಿಯೋ ಕಳೆದು ಹೋಗಿಬಿಡುತ್ತಿರುವ ಹಾಗೆ, ಹಲವಾರು ಸಾಧ್ಯತೆಗಳಿಗೆ ತೆರೆದುಕೊಳ್ಳಬಹುದಾದ ಸೃಜನಶೀಲ ಮನಸ್ಸು ಸತ್ತು ಹೋಗುತ್ತಿರುವ ಹಾಗೆ ಆಕೆಗೆ ಅನ್ನಿಸತೊಡಗಿತ್ತು. ವೆಂಕಟೇಶನ ಬಗ್ಗೆಗಿನ ಆರಾಧನಾ ಭಾವ ಬಹಳ ದಿನ ಉಳಿದಿರಲಿಲ್ಲ. ಪ್ರೀತಿಯ ಎಳೆಗಳು ನಿಧಾನವಾಗಿ ಕಳಚಿಕೊಳ್ಳತೊಡಗಿದ್ದವು. ಈ ಸಂದರ್ಭದಲ್ಲಿ ರೋಜಾ ಗಂಗಾಗೆ ಮುಖಾಮುಖಿಯಾಗಿ ತನ್ನ ಬದುಕಿನ ಪ್ರಶ್ನೆಗಳನ್ನು ಎತ್ತಿದ್ದಳು. ಇತರರ ಪ್ರಶ್ನೆಗಳಿಗೆ ಸೂಕ್ಷ್ಮವಾಗಿ ಪ್ರತಿಕ್ರಿಯಿಸುತ್ತಾ ಹೋಗುವಾಗ, ಅವರ ಪ್ರಶ್ನೆಗಳಿಗೆ ಉತ್ತರ ಹುಡುಕುವಾಗ ನಮ್ಮ ಪ್ರಶ್ನೆಗಳನ್ನು ಆಚೆ ತಳ್ಳಬೇಕಾಗುತ್ತದೆ ಹಾಗೂ ಪ್ರಶ್ನೆಗಳು ತಳಕು ಹಾಕಿಕೊಂಡಿರುವ ಸಮಾಜದ ಮೌಲ್ಯಗಳಲ್ಲಿಯೇ ಅವುಗಳಿಗೆ ಉತ್ತರ ಕಂಡುಹಿಡಿಯಲು ಪ್ರಯತ್ನ ಮಾಡಬೇಕಾಗುತ್ತದೆ ಎಂಬುದು ಗಂಗಾಗೆ ಅನ್ನಿಸತೊಡಗಿತ್ತು. ಇದ್ದಕ್ಕಿದ್ದ ಹಾಗೆ ವೆಂಕಟೇಶನ ಸಂಬಂಧ ಪೂರ್ತಿಯಾಗಿ ಕಡಿದುಕೊಂಡುಬಿಡಬೇಕು ಎನ್ನುವ ಬಲವಾದ ಅನ್ನಿಸಿಕೆ ಆಕೆಯಲ್ಲಿ ಮೂಡಿತ್ತು. ವೆಂಕಟೇಶನ ವ್ಯಕ್ತಿತ್ವದ ಜೊತೆ ಮುಖಾಮುಖಿಯಾದಾಗ ಗಂಗಾ ತನ್ನ ಬದುಕನ್ನು ಅರ್ಥ ಮಾಡಿಕೊಳ್ಳುವ ಹಂತದಲ್ಲಿ ಮಾತ್ರ ಯೋಚಿಸಿದ್ದಳು. ಈಗ ಆಕೆಯ ಬದುಕು, ಬದುಕಿನ ಪ್ರಶ್ನೆಗಳು ವೆಂಕಟೇಶ್-ರೋಜಾರ ಬದುಕಿನ ಪ್ರಶ್ನೆಗಳ ಜೊತೆ ಮುಖಾಮುಖಿಯಾಗತೊಡಗಿದ್ದವು. ಸಂಸಾರದ ಚೌಕಟ್ಟಿನ ಒಳಗಿದ್ದು ಬದುಕನ್ನು ನಾನು ಹೀಗೆ ಅರ್ಥೈಸುತ್ತೇನೆ ಎಂದು ಹಲವಾರು ಸಂಬಂಧಗಳಲ್ಲಿ ತೊಡಗಿಕೊಳ್ಳುವ ವೆಂಕಟೇಶನ ಬದುಕು ನೋವಿನದೋ, ನಲಿವಿನದೋ ಆಕೆಯ ಗ್ರಹಿಕೆಗೆ ನಿಲುಕುವುದಿಲ್ಲ. ಮೂಲಭೂತವಾಗಿ ಯಾರ ವ್ಯಕ್ತಿತ್ವವನ್ನೂ ಹಂಚಿಕೊಳ್ಳುವ ಪ್ರಯತ್ನ ಮಾಡದೇ, ಎಲ್ಲೆಲ್ಲಿಯೂ ತನ್ನ ವ್ಯಕ್ತಿತ್ವದ ಹಿರಿಮೆಯನ್ನೇ ಕಾಯ್ದುಕೊಳ್ಳುವ ವೆಂಕಟೇಶನ ನಾಜೂಕಾದ, ಅವನಿಗೇ ಅರಿವಾಗದ ಅವನ ತಂತ್ರಗಳು ಅವನನ್ನು ಎಲ್ಲಿಗೆ ಸಾಗಿಸುತ್ತವೆಯೋ ಎಂಬುದನ್ನು ಗಂಗಾ ಯೋಚಿಸುತ್ತಾಳೆ. ರೋಜಾಳ ಬದುಕಿನ ವಲಯದಲ್ಲಿ ಆಕೆಯ ಪ್ರಶ್ನೆಗಳಿಗೆ ಅರ್ಥವಿದೆ. ಅವಳದೇ ಲಯದಲ್ಲಿ ಉತ್ತರಗಳೂ ಅಡಗಿವೆ. ನನಗೆ ಹೀಗೆ ಅನ್ನಿಸುತ್ತದೆ, ಹೀಗೆ ಭಾವನೆಗಳಿವೆ, ಭಾವನೆಗಳ ಮೇಲಿನ ಬದುಕು ನನ್ನದು ಎನ್ನುತ್ತಾನೆ ವೆಂಕಟೇಶ. ಭಾವನೆಗಳ ತಳಗಳನ್ನು ಶೋಧಿಸಿ, ಆ ಎಳೆಗಳಿಗೆ ಅಂಟಿಕೊಳ್ಳಲು ಪ್ರಯತ್ನಿಸದಿದ್ದರೆ ಯಾವುದೇ ಸಂಬಂಧ ಮೂರು ದಿನದ ಆಚೆ ಉಳಿಯುತ್ತದೆಯೇ ಎಂಬ ಅನುಮಾನ ಗಂಗಾಳದು. ರೋಜಾಳ ಪ್ರಶ್ನೆಗಳು ತುಂಬಾ ಸರಳ. ಬದುಕಿನಲ್ಲಿ ವೆಂಕಟೇಶನೇ ಸರ್ವಸ್ವ. ಆತನನ್ನು ನಂಬಿಯೇ ಇತರ ಸಂಬಂಧಗಳ ಕಡಿದುಕೊಂಡು ಬಂದುದರಿಂದ ಆತ ತನ್ನ ಸರ್ವಸ್ವವಾಗಿಯೇ ಉಳಿಯಬೇಕು ಎನಿಸುತ್ತದೆ ಆಕೆಗೆ. ಗಂಡ ಮನೆಗೆ ಬರಬೇಕು, ಮಾಡಿದ್ದನ್ನು ಉಣ್ಣಬೇಕು, ತನ್ನ ಜೊತೆ ಹೆಚ್ಚು ಹೊತ್ತು ಕಳೆಯಬೇಕು, ಗಂಡ-ಹೆಂಡತಿ ಎಂಬ ನೀಟಾದ ಸಂಬಂಧವಿರಬೇಕು. ಇವು ಆಕೆಯ ಬದುಕಿನ ಕಲ್ಪನೆಗಳು. ವೆಂಕಟೇಶನ ಬದುಕಿನ ಎಳೆಯ ಉತ್ತುಂಗ ಒಂದು ಕಡೆಯಾದರೆ ಆಕೆಯದು ಇನ್ನೊಂದು ಕಡೆ. ರೋಜಾ ಗಂಗಾಗೆ

ಮುಖಾಮುಖಿಯಾಗಿ ತನ್ನ ಪ್ರಶ್ನೆಗಳಿಗೆ ಉತ್ತರ ಕೇಳಿದ್ದಳು. ಗಂಗಾ ನಂತರದ ಕ್ಷಣಗಳಲ್ಲಿ, ವೆಂಕಟೇಶನ ಮನೆಯ ಪಾರ್ಟಿಯ ಬಗ್ಗೆ ಶಾಂತವಾಗಿ ಕುಳಿತು ಯೋಚಿಸುವ ಘಳಿಗೆಯಲ್ಲಿ ವೆಂಕಟೇಶನ ಸಂಬಂಧಕ್ಕೆ ಗುಡ್ ಬೈ ಹೇಳುವುದಾಗಿ ನಿರ್ಧರಿಸಿದ್ದಳು. ವೆಂಕಟೇಶನ ಹೆಂಡತಿಯ ಸಮಸ್ಯೆಗಳಿಗೆ ಗಂಗಾ ಕೂಡಾ ಪ್ರಶ್ನೆಯಾಗಿ ತಗಲಿಕೊಂಡಿದ್ದಳು. ಅವಳಿಗೆ ಪ್ರಶ್ನೆಯಾಗಿ ಇರುವುದು ಗಂಗಾಳಿಗೆ ಬೇಕಿರಲಿಲ್ಲ. ಆಕೆ ಇಷ್ಟಪಡಲಿಲ್ಲ ಕೂಡಾ. ತನ್ನ ಬದುಕಿನ ಪ್ರಶ್ನೆಗಳಿಗೆ ಉತ್ತರ ಹುಡುಕುವ ಸಂದರ್ಭದಲ್ಲಿ ತಾನೇ ಪ್ರಶ್ನೆಯಾಗಿ ಬಿಡಬಹುದೆಂಬ ದುರಂತ ಗಂಗಾಗೆ ಅರ್ಥವಾದದ್ದೇ ವೆಂಕಟೇಶ ಹಾಗೂ ಆತನ ಹೆಂಡತಿಯ ಸಂಬಂಧದಲ್ಲಿ. ತನ್ನ ವಲಯದಲ್ಲಿಯೇ ಇದ್ದುಕೊಂಡು ತನ್ನ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಆಕೆಗೆ ಬೇಕಿತ್ತು. ಮದುವೆ/ಕೌಟುಂಬಿಕ ಚೌಕಟ್ಟಿನೊಳಗೆ ಬದುಕು ಸೃಜನಶೀಲವಾಗಿ ಉಳಿಯುತ್ತದೆಯೇ ಎಂಬುದನ್ನು ನಂಬುವುದಕ್ಕೆ ತಡಕಾಡಿದರೂ ಗಂಗಾಳಿಗೆ ಅದು ನಂಬಿಕೆಯಾಗಿ ಮೂಡಿ ಬಂದಿರಲಿಲ್ಲ. ತನ್ನದು ಎಂತಹ ದುರಂತ ಎಂದು ಗಂಗಾಗೆ ಬಲವಾಗಿ ಅನ್ನಿಸತೊಡಗಿತು.

ಇದ್ದಕ್ಕಿದ್ದ ಹಾಗೆ ಗಂಗಾಗೆ ಅಪ್ಪ-ಅಮ್ಮನ ಸಂಬಂಧ ಜ್ಞಾಪಕಕ್ಕೆ ಬರುತ್ತದೆ. ಅಪ್ಪನಿಗೆ ಹೊರಗಡೆ ಬೇರೆ ಹೆಂಗಸರ ಸಂಬಂಧ ಇದೆಯೆಂದು ಹೇಳಿ ತಾಯಿ ಬಹಳ ಸಾರಿ ಗಂಗಾಳೊಟ್ಟಿಗೆ ಅತ್ತದ್ದುಂಟು. ತಂದೆಯೊಡನೆ ಎಲ್ಲದಕ್ಕೂ ಆಕೆ ಜಗಳ ಆಡುವಳು. ಜಗಳವಾಡಿದಾಗಲೆಲ್ಲಾ ಗಂಗಾಳನ್ನು ಕರೆದುಕೊಂಡು ರಾತ್ರಿ ಹನ್ನೊಂದು ಘಂಟೆಯ ವೇಳೆಗೆ ಕತ್ತಲಲ್ಲಿ ಹೋಗುವಳು. ಗವ್ ಎನ್ನುವ ಕತ್ತಲು. ಜಿಯ್‌ಗುಟ್ಟುವ ಜೀರುಂಡೆಗಳು. ಅಲ್ಲೊಂದು ಇಲ್ಲೊಂದು ವಾಹನದ ಶಬ್ದ. ಯಾವುದಾದರೂ ವಾಹನದ ಬೆಳಕು ರಸ್ತೆಯ ಮೇಲೆ ಬೀಳುವಾಗ ತಾಯಿ ದಡಬಡಿಸಿ ಯಾವುದಾದರೂ ಮರದ ಹಿಂದೆ ತನ್ನನ್ನು ಅವುಚಿಕೊಂಡು ಅಡಗಿಸಿಕೊಳ್ಳುವಳು. ನಿನ್ನ ಅಪ್ಪ ಕಟುಕನಂಥವನು ಮದುವೆಯಾಗಲು ನನಗಿಷ್ಟವಿರಲಿಲ್ಲ ಎಂದು ಚಿಕ್ಕ ಹುಡುಗಿಯಂತೆ ಗಂಗಾಳ ಮುಂದೆ ಅಳುವಳು. ತಾನು ಒಲ್ಲೆ ಎಂದರೂ, ಅತ್ತು, ಉಪವಾಸ ಮಾಡಿದರೂ ತನ್ನನ್ನು ಕಟುಕನ ಕೊರಳಿಗೆ ಬಿಗಿದ ತನ್ನ ತಂದೆ/ತಮ್ಮ ಎಲ್ಲರನ್ನೂ ಶಪಿಸುವಳು. 'ಅಮ್ಮಾ ಮನೆಗೆ ಹೋಗೋಣ, ಕತ್ತಲು, ಭಯ' ಎಂದು ಗಂಗಾ ಹೆದರಿ ನಡುಗಿದರೆ ಅಮ್ಮ ಸೆರಗಿನಲ್ಲಿ ಆಕೆಯನ್ನು ಸುತ್ತುವಳು. ಇಷ್ಟವಿಲ್ಲದ ಗಂಡನ ಜೊತೆ ಬದುಕುವುದು ತನ್ನ ಕರ್ಮ ಎನ್ನುವಳು. ನಾವಿಬ್ಬರೂ ಯಾವುದಾದರೂ ಕೆರೆಗೋ, ಬಾವಿಗೋ ಬೀಳೋಣ ಎನ್ನುವಳು. ಗಂಗಾ ಹೆದರಿ ಅಳತೊಡಗಿದರೆ 'ಅಳಬೇಡ ಸುಮ್ಮನಿರು ಗಂಗಾ, ಎಲ್ಲಿಯಾದರೂ ಭಿಕ್ಷೆ ಬೇಡಿ, ಮರದ ಕೆಳಗೆ ಬದುಕೋಣ' ಎನ್ನುವಳು. ಗಂಗಾಗೆ ಅಮ್ಮನ ಚಿತ್ರದಲ್ಲಿ ನೆನಪಾದದ್ದು ವೆಂಕಟೇಶನ ಹೆಂಡತಿ ರೋಜಾಳ ಚಿತ್ರ. ರೋಜಾಗೆ ಅರ್ಥವಾಗದ ಗಂಡ, ತಾಯಿಗೆ ಅರ್ಥವಾಗಿದ್ದ ಗಂಡ. ತಾನು ಬದುಕುವುದೇ ಹೀಗೇ, ಇದೇ ತನ್ನ ಬದುಕು, ಸಂಬಂಧ ಎಂದು ವೆಂಕಟೇಶ್ ನೇರವಾಗಿ ಹೇಳುತ್ತಾ ಬಂದರೂ, ವ್ಯಕ್ತಿತ್ವ ಬಿಚ್ಚಿಟ್ಟರೂ ರೋಜಾಗೆ ಅವನ ಬದುಕಿನ ಸತ್ಯಗಳು ತಲೆಗೆ ಹೋಗುವುದಿಲ್ಲ. ಅಪ್ಪ ಅಮ್ಮನ ಮುಂದೆ ಸಂಬಂಧಗಳ ಕುರಿತು ಮಾತನಾಡಲೇ ಇಲ್ಲ. 'ಹೀಗೇಕೆ?' ಎಂದರೆ 'ನಿಂಗ್ಯಾಕೆ ಬೋಸುಡಿ' ಎಂದು ಬಿಡುವ ಅಪ್ಪ. ತಂದೆಯ ಸುಳ್ಳು; ರೋಷಗಳ ಹಿನ್ನೆಲೆಯಲ್ಲಿಯೇ ತಾಯಿ ಅಪ್ಪನನ್ನು ಅರ್ಥಮಾಡಿಕೊಂಡಿದ್ದಳು. ರೋಜಾಗೆ ಎದುರಿಗೆ ಬಿಚ್ಚಿಟ್ಟಿದ್ದ ಸತ್ಯ ಅರ್ಥವಾಗಿರಲಿಲ್ಲ. ಆಕೆಗೆ ಅರಗಿಸಿಕೊಳ್ಳಲೂ ಸಾಧ್ಯವಾಗಿರಲಿಲ್ಲ. ರೋಜಾಳ ಪ್ರಶ್ನೆಗಳಿಗೆ ಮುಖಾಮುಖಿಯಾದ ಮೇಲೆ ಗಂಗಾ ಹೆಚ್ಚು ಹೆಚ್ಚು ಅಂತರ್ಮುಖಿ ಯಾಗತೊಡಗಿದ್ದಳು. ಆಕೆಯ ಹುಡುಕಾಟದ ಬದುಕಿನಲ್ಲಿ ತಗಲಿ ಹಾಕಿಕೊಂಡ ಜಟಿಲವಾದ ಪ್ರಶ್ನೆಗಳನ್ನು ಜೀರ್ಣಿಸಿಕೊಳ್ಳುವುದು ಆಕೆಗೇ ಕಷ್ಟ ಎನಿಸತೊಡಗಿತ್ತು. ಬೇರೆಯವರ ಬದುಕಿನ ಸತ್ಯಗಳಿಗೆ, ನಂಬಿಕೆಗಳಿಗೆ

ವಿರುದ್ಧವಾಗಿ ನನ್ನ ನಂಬಿಕೆ ಇದು ಎಂದು ನಿಲ್ಲುವ ತಾಕತ್ತು, ನನ್ನದೇ ಸತ್ಯ ಎಂದು ವಾದಿಸಲು ಸಾಧ್ಯವಾಗದ ಗೊಂದಲದಲ್ಲಿ ಗಂಗಾ ಸಿಕ್ಕಿಬಿದ್ದಳು. ಆಕೆಯಲ್ಲಿ ಭಯ ಮಿಶ್ರಿತ ಆತಂಕ ಪ್ರಾರಂಭವಾಗಿತ್ತು. ತನ್ನ ಬದುಕಿನಲ್ಲಿ ಇರುವ ಆಯ್ಕೆಗಳು ಏನು? ಒಬ್ಬ ವ್ಯಕ್ತಿಯ ಜೊತೆ-ಆತನನ್ನೇ ಕೇಂದ್ರಬಿಂದು ವಾಗಿಸಿಕೊಂಡು ಸಂಬಂಧ ರೂಢಿಸಿಕೊಳ್ಳುವುದು ಒಂದು ಆಯ್ಕೆಯಾಗಬಹುದು. ಹಾಗೆ ರೂಢಿಸಿಕೊಳ್ಳಲು ನಂಬಿಕೆಗಳಿಗೇ ತಡಕಾಡಬೇಕಾದ ಸನ್ನಿವೇಶಗಳಲ್ಲಿ ಕಾಮದ ತೃಪ್ತಿಗೋ, ಭಾವನಾತ್ಮಕತೆಯ ಎಳೆಗಳಿಗೋ ಹಲವು ಸಂಬಂಧಗಳಲ್ಲಿ ಅಂಟಿಕೊಳ್ಳದೇ ತೊಡಗಿಕೊಳ್ಳುವುದು. ಮೂರನೆಯ ಆಯ್ಕೆಯಾಗಿ ಗಂಗಾಳಿಗೆ ಕಂಡದ್ದು ಕಾಮದಂತಹ ಸಂಬಂಧಗಳನ್ನೇ ತಿರಸ್ಕರಿಸುವುದು. ಎಲ್ಲಾ ಆಯ್ಕೆಗಳಲ್ಲೂ ಅಸ್ತಿತ್ವದ ಪ್ರಶ್ನೆಗಳು ಸಾಂಸ್ಕೃತಿಕ ನೆಲೆಗಳಲ್ಲಿ ತಿಕ್ಕಾಟಕ್ಕೆ ಒಳಗಾಗುತ್ತವೆ, ಘರ್ಷಣೆಗಳಿಗೆ ಮುಖಾಮುಖಿಯಾಗುತ್ತವೆ. ರೋಜಾ/ವೆಂಕಟೇಶರ ಸಂಬಂಧದಲ್ಲಿ ತನ್ನ ಅಸ್ತಿತ್ವದ ಪ್ರಶ್ನೆಗಳು ರೋಜಾಳ ಬದುಕಿನ ಸಾಂಸ್ಕೃತಿಕ ನೆಲೆಯಲ್ಲಿ ತಳಕು ಹಾಕಿಕೊಂಡು ಸಮಸ್ಯೆಗಳಾಗತೊಡಗಿದಾಗ ವೆಂಕಟೇಶನ ಸಂಬಂಧಕ್ಕೆ ಒಟ್ಟಾರೆಯಾಗಿ ಗುಡ್ ಬೈ ಹೇಳುವುದು ಗಂಗಾಳಿಗೆ ಉತ್ತರವಾಗಿ ಕಂಡಿತ್ತು. ಹೀಗೆ ಗಟ್ಟಿಯಾಗಿ ನಿರ್ಧರಿಸಿದ ಮೇಲೆ ಗಂಗಾಗೆ ಇದ್ದಕ್ಕಿದ್ದ ಹಾಗೆ ಬೆಂಗಳೂರೇ ಬೇಸರವಾಗತೊಡಗಿತ್ತು. ಬೆಂಗಳೂರಿನ ಓಡುವ ಬದುಕಿನಲ್ಲಿ ತಾನೆಲ್ಲಿಯೋ ಕಳೆದೇ ಹೋಗುತ್ತಿದ್ದೇನೆ ಎನ್ನಿಸತೊಡಗಿದಾಗ ಗಂಗಾ ಗಾಭರಿಯಿಂದ ಭಯಮಿಶ್ರಿತ ಆತಂಕದಿಂದ ನಡುಗಿದ್ದಳು.

* * * * *

ಒಂದೊಂದು ಘಟನೆಯೂ ಒಂದೇ ಸತ್ಯವನ್ನು ಹೇಳುವುದಿಲ್ಲ, ವಿರೋಧವಾಗಿರುವ ಸತ್ಯಗಳನ್ನೇ ಹೇಳುತ್ತದೆಯೇನೋ ಎಂದು ಗಂಗಾಗೆ ಯಾವಾಗಲೂ ಅನಿಸುತ್ತದೆ. ತಾನೆಲ್ಲಿರುವೆ ಎಂದು ಯೋಚಿಸಿದರೆ ಇಪ್ಪತ್ನಾಲ್ಕು ವರ್ಷದ ಗಂಗಾಗೆ ಹೆದರಿಕೆ/ಆತಂಕ ಉಂಟಾಗುತ್ತದೆ. ಮೂರು ವರ್ಷದ ಬೆಂಗಳೂರಿನ ಬದುಕು ತನಗೆ ಕಲಿಸಿದ್ದೇನು? ಎಂದು ಗಂಗಾ ಯಾವಾಗಲೂ ಯೋಚಿಸುತ್ತಾಳೆ.

'ಸ್ತ್ರೀ ಮುಕ್ತಿ' ಸಂಘಟನೆಯಲ್ಲಿ ಗಂಗಾ ಯಥಾಪ್ರಕಾರ ಕ್ರಿಯಾಶೀಲಳಾಗಿಯೇ ಕೆಲಸ ಮಾಡುತ್ತಿದ್ದಳು. ನಾಟಕ, ಸೆಮಿನಾರ್, ಸಂಘಟನೆ, ಅನೇಕ ಮಹಿಳೆಯರ ವೈಯಕ್ತಿಕ ಸಮಸ್ಯೆಗಳಿಗಾಗಿ, ಅದರ ಪರಿಹಾರಕ್ಕಾಗಿ, ಕೋರ್ಟ್, ಪೋಲೀಸ್ ಸ್ಟೇಷನ್ ಓಡಾಡುವುದು ಜೊತೆಗೆ ಕಾಲೇಜಿನಲ್ಲಿ ಪಾಠ ಮಾಡುವುದು ಆಕೆಯ ದೈನಂದಿನ ಚಟುವಟಿಕೆಗಳಾಗಿದ್ದವು. ಜೊತೆಗೆ 'ಸ್ತ್ರೀ ಮುಕ್ತಿ' - ಸಂಘಟನೆಯಲ್ಲಿ ಕನ್ನಡದಲ್ಲಿ ಒಂದು ಮಹಿಳಾ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಪಾರ್ವತಿ, ಗಂಗಾ, ಸರೂ, ಇವರಲ್ಲದೇ ಕನ್ನಡ ಬಾರದ ರಾಗಿಣಿ, ಡಾಮಿನಿಕ್ ಕೂಡಾ ಇದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೀಗೆ ಚಟುವಟಿಕೆಗಳಲ್ಲಿಯೇ ತೊಡಗಿಸಿಕೊಂಡುಬಿಡುತ್ತಿದ್ದ ಗಂಗಾಗೆ ಸಮಯವೇ ಸಿಗುತ್ತಿರಲಿಲ್ಲ. ಕೂತು ತನ್ನಷ್ಟಕ್ಕೇ ತಾನೇ ಯೋಚಿಸದೇ, ಬರೆಯದೇ ಎಷ್ಟೊಂದು ದಿನಗಳಾಯಿತು ಎಂದು ಕೆಲವೊಮ್ಮೆ ಯೋಚಿಸುವಳು. ಗಂಗಾ ಇದ್ದಕ್ಕಿದ್ದ ಹಾಗೆ ಹೊನ್ನೇಕೆರೆಗೆ ಹೋಗಿ ಬರಲು ನಿರ್ಧರಿಸಿದಳು. ಯಾಕೋ ಬೆಂಗಳೂರಿನಿಂದ ದೂರ ಹೋಗಿ ತನ್ನಷ್ಟಕ್ಕೆ ತಾನಿರಬೇಕೆಂಬ ಯೋಚನೆ ಆಕೆಯನ್ನು ಬಲವಾಗಿ ಕಾಡತೊಡಗಿತ್ತು. ಅಮ್ಮನ ಬೆಚ್ಚನೆಯ ಮಾತುಗಳಲ್ಲಿ, ಹೃದಯದಲ್ಲಿ ತನ್ನ ಒಳಗೆ ಮಡುಗಟ್ಟುತ್ತಿರುವ ನೋವನ್ನು ಮರೆಯಬಹುದು ಅಥವಾ ಅಣ್ಣನ ಮಗಳು ಸಾಧನಾಳ ಸನಿಹದಲ್ಲಿ ಪುಟ್ಟ ಹುಡುಗಿಯ ಮುಗ್ಧತೆ ದಕ್ಕಿಸಿಕೊಳ್ಳಬಹುದೇನೋ ಎಂದು ಅನ್ನಿಸಿದಾಗ ಇದ್ದಕ್ಕಿದ್ದಂತೆ ಕಾಲೇಜಿಗೆ ರಜಾ ಹಾಕಿ ಊರಿಗೆ

ಹದಿನೈದು ದಿನದ ಮಟ್ಟಿಗೆ ಹೋದಳು. ಹೊನ್ನೇಕೆರೆಗೆ ಹೋಗಲು ಮತ್ತೊಂದು ಬಲವಾದ ಕಾರಣವೂ ಇತ್ತು. ಹೊನ್ನೇಕೆರೆಯ ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆಯಿಂದ ಗಂಗಾಗೆ ಪತ್ರ ಬಂದಿತ್ತು. ಹೊನ್ನೇಕೆರೆ ಹಾಗೂ ಹೊನ್ನೇಕೆರೆಯ ಅಕ್ಕಪಕ್ಕದ ಹಳ್ಳಿಗಳಲ್ಲಿ ಕಾರ್ಯಕರ್ತೆಯರಿಗಾಗುತ್ತಿರುವ ಅನ್ಯಾಯಗಳ ವಿರುದ್ಧ ಗಂಗಾ 'ಸ್ತ್ರೀ ಮುಕ್ತಿ' ಸಂಘಟನೆಯ ಮಹಿಳಾ ಪತ್ರಿಕೆಯಲ್ಲಿ ಬರೆದಿದ್ದಳು. ಆ ವರದಿ ನಿಜವೆನಿಸಿದರೂ ಅವರ ಯೋಜನಾಧಿಕಾರಿಗಳು ಗಂಗಾಳೊಡನೆ ಮಾತನಾಡಲು ಅಪೇಕ್ಷಿಸಿದ್ದರು. ಇದನ್ನು ಕಾರ್ಯಕರ್ತೆಯರು ಗಂಗಾಗೆ ತಿಳಿಸಿದರು. ಅವರ ಯೋಜನಾಧಿಕಾರಿಗಳು ಇದ್ದದ್ದು ಶಿವಮೊಗ್ಗೆಯಲ್ಲಿ. ಶಿವಮೊಗ್ಗೆಗೆ ಹೋಗುವ ಮೊದಲು ಹೊನ್ನೇಕೆರೆಯಲ್ಲಿ ಕಾರ್ಯಕರ್ತೆಯರ ಹತ್ತಿರ ಮಾತನಾಡುವ ಅಗತ್ಯ ಇತ್ತು. ಮೂವತ್ತರಿಂದ ನಲವತ್ತು ಕಾರ್ಯಕರ್ತೆಯರಿದ್ದ ಈ ಯೂನಿಯನ್ ಗಂಗಾ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಕ್ರಿಯಾತ್ಮಕವಾಗಿ ಕೆಲಸ ಮಾಡಿತ್ತು. ಹೊನ್ನೇಕೆರೆಗೆ ಹೋಗಿ ನಂತರ ಬರುವಾಗ ಶಿವಮೊಗ್ಗೆಯಲ್ಲಿ ಯೋಜನಾಧಿಕಾರಿಗಳನ್ನು ನೋಡಿ ಬರುವುದೆಂದು ನಿರ್ಧರಿಸಿ ಗಂಗಾ ಹೊನ್ನೇಕೆರೆಗೆ ಹೋದಳು. ಬೆಂಗಳೂರಿನ ಯಾಂತ್ರಿಕ ಜೀವನದಿಂದ ತಪ್ಪಿಸಿಕೊಳ್ಳಲು, ಮನಸ್ಸಿಗಾದ ಘಾಸಿಯಿಂದ ತಪ್ಪಿಸಿಕೊಳ್ಳಲೂ ಸಹ ಈ ಬದಲಾವಣೆಯನ್ನು ಬಯಸಿದ್ದಳು. ಅಣ್ಣನ ಮಗಳು ಸಾಧನಾ ಈಗಾಗಲೇ ಒಂದನೆಯ ತರಗತಿಯಲ್ಲಿ ಓದುತ್ತಿದ್ದಳು. ಗಂಗಾ ಮನೆಗೆ ಹೋಗಿದ್ದು ಅನಿರೀಕ್ಷಿತವಾಗಿ. ಅಪ್ಪ, ಅಣ್ಣ, ಅಮ್ಮ, ಅತ್ತಿಗೆ ಗಂಗಾಳ ಬರುವನ್ನು ಸಂಭ್ರಮದಿಂದ ಹಬ್ಬದ ರೀತಿ ಸಂತೋಷಿಸಿದರು. ಮನೆಯಲ್ಲಿ ಸಡಗರ/ಸಂಭ್ರಮದ ವಾತಾವರಣವೇರ್ಪಟ್ಟಿತ್ತು. ಗಂಗಾ ಹಟಮಾರಿ ಹುಡುಗಿಯಾದರೂ, ಛಲ ಬಿಡದೇ ಓದಿ ಉಪನ್ಯಾಸಕಿಯಾಗಿದ್ದು ಮನೆಯಲ್ಲಿ ಎಲ್ಲರಿಗೂ ಅವಳ ಬಗ್ಗೆ ಗೌರವ ಹೆಚ್ಚಿಸಿತ್ತು. ತಮ್ಮ ಕೈಗೆ ನಿಲುಕದುದೇನನ್ನೋ ಆಕೆ ಸಾಧಿಸಿದ್ದಾಳೆ ಎಂಬ ಗೌರವ/ಆದರಗಳು. ಗಂಗಾ ಬೆಂಗಳೂರಿನಂತಹ ಊರಿನಲ್ಲಿ ಯಾರ ಸಹಾಯವೂ ಇಲ್ಲದೇ ಕೆಲಸಕ್ಕೆ ಸೇರಿದುದರಿಂದ ಅವಳ ಸಾಮರ್ಥ್ಯದ ಬಗ್ಗೆ ಅವರಿಗೆ ಆಶ್ಚರ್ಯವೂ ಆಗಿತ್ತು. ಹೊನ್ನೇಕೆರೆಯ ಹುಡುಗಿಯೇ ಆದ ಪಾರ್ವತಿಯ ಜೊತೆಗೆ ಮನೆ ಮಾಡಿಕೊಂಡುದರಿಂದ ಗಂಗಾಳ ತಂದೆ/ತಾಯಿ/ಅಣ್ಣಂದಿರಿಗಷ್ಟೇ ಅಲ್ಲ, ಪಾರ್ವತಿಯ ತಂದೆ/ತಾಯಿ/ಅಣ್ಣಂದಿರಿಗೂ ಸಂತೋಷವಾಗಿತ್ತು. ಪಾರ್ವತಿಯ ಆರ್ಥಿಕ ಸ್ವಾತಂತ್ರ್ಯ ಅವಳ ಮನೆಯಲ್ಲಿ ಆಕೆಗೊಂದು ಸ್ಥಾನವನ್ನು ಕಲ್ಪಿಸಿತ್ತು. ಹೆದರಿಕೆ ಹೆದರಿಕೆಯಿಂದಲೇ ಪಾರ್ವತಿ ಮನೆಗೆ ಬಂದಾಗ ಆಕೆಯ ಮನೆಯವರೆಲ್ಲಾ ನೆಮ್ಮದಿಯಿಂದಲೇ ಮಾತನಾಡಿಸಿದ್ದರು. ಹೇಗೋ ಅವಳ ಪಾಡಿಗೆ ಅವಳು ಸುಖವಾಗಿದ್ದರೆ ಸಾಕು ಎನ್ನುವ ಮನೋಭಾವ ಅವರಲ್ಲಿ ಮೂಡತೊಡಗಿತ್ತು. ಹಾಗಾಗಿ ಪಾರ್ವತಿ ಕೂಡಾ ಆಗೀಗ ಹೊನ್ನೇಕೆರೆಗೆ ಬಂದು ಹೋಗುವಳು. ಪಾರ್ವತಿ ಊರಿಗೆ ಬಂದಾಗ ಗಂಗಾಳ ಮನೆಗೆ, ಗಂಗಾ ಬಂದಾಗ ಪಾರ್ವತಿಯ ಮನೆಗೆ ಹೋಗಿ ಬರುವರು. ಉಪ್ಪಿನಕಾಯಿ, ಸಂಡಿಗೆ, ಅಕ್ಕಿ ಮುಂತಾದವುಗಳನ್ನೆಲ್ಲ ಗಂಗಾ ಮನೆಯಿಂದ ಪಾರ್ವತಿ, ಪಾರ್ವತಿಯ ಮನೆಯಿಂದ ಗಂಗಾ ಒಯ್ಯುವರು. ಇಬ್ಬರು ಹುಡುಗಿಯರು ಬೆಂಗಳೂರಿನಲ್ಲಿ ಮನೆಮಾಡಿಕೊಂಡುದುದು ಮನೆಯ ಹಿರಿಯರಿಗೆ ಸಂತೋಷ/ಸಮಾಧಾನ ತಂದಿದ್ದರೆ ಊರವರಿಗೆಲ್ಲ ಇದು ಒಂದು ಪವಾಡವೆನ್ನಿಸುವಂತೆ ಕಾಣಿಸುತ್ತಿತ್ತು. 'ಬಹಳ ಧೈರ್ಯಸ್ಥ ಹುಡುಗಿಯರು' - ಎನ್ನುವ ಮಾತುಗಳನ್ನು ಎಷ್ಟೋ ಮಂದಿ ಆಡುವರು. 'ಓಹ್ ಅಲ್ಲಿ ಏನೇನು ಮಾಡಿಕೊಂಡು ಇರುವರೋ, ಹೆಣ್ಣು ಮಕ್ಕಳಿಗೆ ಮದುವೆ, ಗಿದುವೆ ಮಾಡದೇ ಹೀಗೆ ಗೂಳಿ ತರಹ ತಿರುಗಾಕೆ ಬಿಟ್ಟಿರೋದು ನೋಡು' ಎಂದು ಕುಹಕ ಆಡುವವರೂ ಇದ್ದರು. 'ನೋಡು ಹಳ್ಳಿಯಿಂದ ಹೋಗಿ ಬೆಂಗಳೂರಿನಲ್ಲಿ ಹೇಗೆ ಸಂಪಾದಿಸುತ್ತಾರೆ. ಇವರ ಮುಖಕ್ಕೆ ಮಂಗಳಾರತಿ ಎತ್ತಬೇಕು' ಎಂದು ಪಾರ್ವತಿ/ಗಂಗಾರನ್ನು

ತೋರಿಸಿ ತಮ್ಮ ಮನೆಯ ಗಂಡು ಮಕ್ಕಳನ್ನು ಹೊನ್ನೇಕೆರೆಯಲ್ಲಿ ಬಯ್ದವರೂ ಉಂಟು. ಪಾರ್ವತಿ/ಗಂಗಾ ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳುವ ಸ್ಥಿತಿಯನ್ನು ಮೀರಿ ಆಗಿತ್ತು. ಕೆಲವಾರು ವರ್ಷಗಳಿಂದ ಹೊನ್ನೇಕೆರೆ ಕೂಡಾ ನಗರೀಕರಣಕ್ಕೆ ತೆರೆದುಕೊಳ್ಳತೊಡಗಿತ್ತು. ಶಿವಮೊಗ್ಗೆಯಿಂದ ಸಾಕಷ್ಟು ಬಸ್ಸುಗಳು ಹೊನ್ನೇಕೆರೆಗೆ ಬರುತ್ತಿದ್ದರಿಂದ ಹಾಲಿನ ಡೈರಿ, ಗ್ಯಾಸ್, ಜೊತೆಗೆ ಕೆಲವು ಮೆಟಡಾರ್‌ಗಳೂ, ಕೆಲವು ಆಟೋಗಳೂ ಓಡಾಡಲು ಪ್ರಾರಂಭಿಸಿದ್ದವು. ಪಾರ್ವತಿ/ಗಂಗಾ ಬೆಳೆದ ಹೊನ್ನೇಕೆರೆಯಲ್ಲಿ ಸೀರೆ/ಲಂಗ ಬಿಟ್ಟರೆ ಬೇರೆ ತರಹೆಯ ಡ್ರೆಸ್ ಕಾಣಿಸುತ್ತಿರಲಿಲ್ಲ. ಆದರೆ ಈಗ ಹೊನ್ನೇಕೆರೆಯ ದೊಡ್ಡ ದೊಡ್ಡ ಹುಡುಗಿಯರೂ ಸಹ ಸೆಲ್ವರ್ ಕಮೀಜ್, ಮಿಡಿ ಧರಿಸುವುದು ಕಂಡುಬರುತ್ತಿತ್ತು. ಇಂತಹ ಬದಲಾವಣೆಗಳಿಂದಾಗಿಯೂ ಸಹ ಪಾರ್ವತಿ/ಗಂಗಾರ ಮನೆಯಲ್ಲಿ ಅವರನ್ನು ದುಡಿಯುವ ಮಕ್ಕಳಂತೆ ನೋಡುವ ಒಂದು ದೃಷ್ಟಿಕೋನ ಮೂಡಿ ಬರತೊಡಗಿತ್ತು. ಆರ್ಥಿಕ ಸ್ವಾತಂತ್ರ್ಯ/ದುಡಿಮೆ ಎನ್ನುವುದು ಹೆಣ್ಣು-ಗಂಡಿನ ಮಧ್ಯೆ ಇರುವ ಒಂದು ಬ್ಯಾರಿಯರ್ ಮುರಿಯುವಲ್ಲಿ ಎಷ್ಟು ಸಹಾಯಕವಾಗುತ್ತದೆ ಎಂದು ಗಂಗಾ ಹೊನ್ನೇಕೆರೆಗೆ ಹೋದಾಗಲೆಲ್ಲಾ ಅಂದುಕೊಳ್ಳುವಳು. ಈ ಬಾರಿ ಗಂಗಾ ಊರಿಗೆ ಹೋದಾಗ ಗಂಗಾಳ ತಾಯಿ ಒಂದೇ ರೀತಿಯ ವರಾತ ಹಚ್ಚಿದ್ದಳು. ಗಂಗಾ ಓದು/ಕೆಲಸ ಎಂದು ಮನೆಯ ಹೊರಗೇ ಹೆಚ್ಚು ಸಮಯ ಕಳೆಯುತ್ತಿದ್ದುದರಿಂದ ಓದಲಾರದ ಶಂಕ್ರಣ್ಣನಿಗೆ ಆಗಲೇ ಮದುವೆ ಮಾಡಿಬಿಟ್ಟಿದ್ದರು. ಗಂಗಾಳ ಮದುವೆ ಮಾಡದೇ ಶಂಕ್ರಣ್ಣನಿಗೆ ಮದುವೆ ಮಾಡುವುದು ತಂದೆ-ತಾಯಿಗೆ ಇಷ್ಟವಿಲ್ಲದಿದ್ದಾಗ್ಯೂ ಸಹ ಗಂಗಾ ಓದಲು ಹೋಗಿಬಿಟ್ಟಾಗ ಇವಳ ಮದುವೆ ನೆಚ್ಚಿಕೊಂಡರೆ ಶಂಕ್ರಣ್ಣನಿಗೆ ಮದುವೆಯಾಗುವುದಿಲ್ಲವೆಂದು ಅವನಿಗೆ ಮದುವೆ ಮಾಡಿಬಿಟ್ಟಿದ್ದರು. ಶಂಕ್ರಣ್ಣನ ಮಗಳು ಸಾಧನಳಿಗಾಗಲೇ ಆರು ವರುಷ. ಗಂಗಾಗೆ ತಿಳಿಯದಿದ್ದ ಎಷ್ಟೋ ವಿಚಾರಗಳು ಈಗ ಹೊನ್ನೇಕೆರೆಗೆ ಬಂದಿದ್ದರಿಂದ ತಿಳಿಯತೊಡಗಿದ್ದವು. ಗಂಗಾಳಿಗೆ ಮದುವೆ ಮಾಡಿಯೇಬಿಡಬೇಕೆಂಬ ಅಪ್ಪನ ನಿರ್ಧಾರ ಬಲವಾಗಿತ್ತು. ತಾಯಿಯಲ್ಲಿ ಒಂದು ರೀತಿಯ ಆತಂಕ - ಬೆಂಗಳೂರು ಎತ್ತಲೋ ಏನೋ? ತಾವು ಕಂಡರಿಯದ ಊರು. ಮಗಳ ಭವಿಷ್ಯದ ಬಗ್ಗೆ ಭಯ ಎನಿಸುತ್ತದೆ ಆಕೆಗೆ. ಮಹಾನಗರದ ಪಟ್ಟಣದಲ್ಲಿ ಇಬ್ಬರೇ ಹುಡುಗಿಯರು ಮನೆ ಮಾಡಿಕೊಂಡಿರುವುದು ಎಂದರೇನು? ಕಾಲಮಾನ ಸರಿಯಿಲ್ಲ. ಮದುವೆ ಮಾಡಿಬಿಡಬೇಕೆಂಬ ಹಟಕ್ಕೆ ಅಣ್ಣನದೂ ಒತ್ತಾಯ. ಅಪ್ಪ ಗಂಗಾಳ ಜಾತಕ ಹಿಡಿದುಕೊಂಡು ಈಗಾಗಲೇ ಹಲವಾರು ಕಡೆ ಸುತ್ತಿದ್ದರು. ಆತನಿಗೆ ಅನ್ನಿಸುವುದು ಇಷ್ಟೇ. ಮಗಳಿಗೆ ಮದುವೆ ಮಾಡಬೇಕು, ಮಗಳು ಜಾಣಳೇನೋ ನಿಜ, ಆದರೆ ನೋಡಿದವರಿಗೆ ಜೋರು, ಗಟ್ಟಿಗಿತ್ತಿ ಎನಿಸುತ್ತದೆ. ಶಿವಮೊಗ್ಗ, ಮೈಸೂರಂತಹ ಊರುಗಳಲ್ಲಿ ಒಬ್ಬೊಬ್ಬಳೇ ಹೋಗಿ ಓದಿ ಬಂದಿದ್ದಾಳೆ. ಬೆಂಗಳೂರಿನಲ್ಲಿ ಒಬ್ಬಳೇ ಅಲೆದು ಕೆಲಸ ಹುಡುಕಿ ಕೊಂಡಿದ್ದಾಳೆ. ಈಕೆ ತನಗೆ ಮೀರಿದವಳು ಎಂದು ಆತನಿಗೆ ಒಮ್ಮೊಮ್ಮೆ ಅನಿಸುತ್ತದೆ, ಮದುವೆ ಮಾಡಿ ಹೇಗಾದರೂ ತಮ್ಮ ಮೇಲಿನ ಜವಾಬ್ದಾರಿ ಕಳೆದುಕೊಂಡುಬಿಡಬೇಕು ಎಂದು ಇನ್ನೊಮ್ಮೆ ಅನಿಸುತ್ತದೆ. ತಿರಸ್ಕರಿಸುವ ರೂಪ ಗಂಗಾಳದ್ದಲ್ಲ. ಆದರೂ ಆಕೆಯ ಹಲ್ಲಿನ ನ್ಯೂನ್ಯತೆ ಅವರಿಬ್ಬರಿಗೂ ಕೊರೆಯುತ್ತದೆ. ಅಷ್ಟು ಮುದ್ದಾಗಿದ್ದ ಗಂಗಾಳ ಮುಖದ ಚಹರೆಯನ್ನೇ ಆಕೆಯ ಈಗಿನ ಹಲ್ಲುಗಳು ಬದಲಾಯಿಸಿಬಿಟ್ಟಿವೆ. ಅಣ್ಣನ ಮದುವೆಯ ನಂತರ ಹಾಗೂ ಹುಚ್ಚಿಗೆ ಶಾಕ್ ಟ್ರೀಟ್‌ಮೆಂಟ್ ಕೊಡಿಸಿದ ನಂತರ ತಾಯಿಯ ಹುಚ್ಚು ಕಡಿಮೆಯಾಗಿ ಒಂದು ಸಾಮಾನ್ಯ ಸ್ಥಿತಿಯಲ್ಲಿ ತಾಯಿ ಬದುಕುತ್ತಾಳೆ. ಗಂಗಾಳ ಮದುವೆ ನೋಡಬೇಕೆಂಬುದೇ ಆಕೆಗೆ ಆಸೆ. ಸಾಧನಾಳ ಸನಿಹದಲ್ಲಿ ತಾಯಿ ಹೆಚ್ಚು ಹೆಚ್ಚು Normal ಆಗಿ ವರ್ತಿಸುವುದನ್ನು ಕಂಡಾಗ ಗಂಗಾಗೆ ಸಂತೋಷವಾಗುತ್ತದೆ. ಈ ಸಲ ಗಂಗಾ ಮನೆಗೆ

ಹೋದಾಗ ತಾಯಿ ಹತ್ತಿರ ಕುಳಿತುಕೊಂಡು ಪ್ರೀತಿಯಿಂದ ಮಾತನಾಡಿಸಿದ್ದಳು. ಮದುವೆಯ ಬಗ್ಗೆ ನಿಧಾನವಾಗಿ ಮಾತೆತ್ತಿದ್ದಳು. 'ಅಯ್ಯೋ ಮದುವೇನಾ, ನೀನೇನಮ್ಮಾ ಸುಖ ಕಂಡೆ ಮದುವೆಯಿಂದಾ' ಎಂದು ಗಂಗಾ ನಕ್ಕರೆ, 'ಅಂಗಂತ ಯಾರ್‍ಯಾರ್‍ನೋ ಕಟ್ಕೊಂಡು ಓಡಿ ಹೋಗೋಕೆ ಆಗುತ್ತಾ, ಕಷ್ಟಾನೋ, ಸುಖಾನೋ ಮದುವೆಯಾಗಬೇಕು' ಅಂತ ತಾಯಿ. ಅಪ್ಪ ಅಲ್ಲಿ, ಇಲ್ಲಿ ಜಾತಕ ಕೊಟ್ಟು ತಿರುಗಿದ್ದ. ಆಗಾಗ್ಗೆ 'ಗಂಗಾನ ಜಾತಕ ಸರಿಯಿಲ್ಲ, ತಿದ್ದಿಸಬೇಕು, ಆ ಹುಡುಗಿ ಜಾತಕದಲ್ಲಿ ಮದುವೆ ಬಲ ಅಷ್ಟಾಗಿ ಕಾಣೋದಿಲ್ಲ ಅಂತ ಎಲ್ಲರೂ ಹೇಳ್ತಾರೆ' ಎಂದು ಅಪ್ಪ ಹೇಳಿದ್ದು ಗಂಗಾಳ ಕಿವಿಗೆ ಬಿದ್ದಿದೆ. ಈ ಮಾತು ಅಪ್ಪ/ಅಣ್ಣ/ಅಮ್ಮಂದಿರಲ್ಲಿ ದಿಗಿಲು ಹುಟ್ಟಿಸಿದರೆ ಗಂಗಾ ನಕ್ಕುಬಿಡುತ್ತಾಳೆ. 'ಸುಮ್ಮನೇ ನೀವು ಯಾಕೆ ತಲೆ ಕೆಡಿಸಿಕೊಳ್ಳುತ್ತೀರಿ? ನಾನು ಮದ್ವೆನೇ ಆಗೋದಾದ್ರೆ ಯಾವಾಗ್ಲಾದ್ರೂ ಆಗ್ತೀನಿ' ಅಂತಾಳೆ. ಆದ್ರೂ ಯಾರೋ ಒಬ್ಬ ಎಂಜಿನಿಯರ್ ವಿಚಾರ ಹೇಳಿದಾಗ ಅಪ್ಪ ಜಾತಕ ಹಿಡಿದು ಅಲ್ಲಿಗೂ ಹೋಗಿ ಬಂದಿದ್ದ. ಇದೆಲ್ಲ ಗಂಗಾ ಹೊನ್ನೇಕೆರೆಗೆ ಹೋದಾಗಲೇ ನಡೆಯುತ್ತಲಿತ್ತು. ಅವರಿಗೆಲ್ಲ ಹೇಗೆ ಹೇಳಬೇಕೆಂಬುದೇ ಗಂಗಾಗೆ ಸಮಸ್ಯೆಯಾಗಿ ಕಾಣಿಸುತ್ತಿತ್ತು. 'ನಾನು ರೊಟ್ಟಿ ತಟ್ಟಿಕೊಂಡು, ದೇವರ ಪೂಜೆ ಮಾಡಿಕೊಂಡು ಇರೋ ಜಾಯಮಾನಕ್ಕೆ ಸೇರಿದವಳಲ್ಲ. ನೀವು ಮದುವೆ ಮಾಡಿದ್ರೂ ನಾನು ಸುಖವಾಗಿ ಇರೋಲ್ಲ. ಯಾಕೆ ಸುಮ್ಮನೇ ಪ್ರಯತ್ನಪಡ್ತೀರಾ? ನಾನು ದುಡೀತೀನಲ್ಲ, ನನ್ನ ಯೋಚನೆ ನಿಮಗೆ ಯಾಕೆ?' ಎಂದು ಏನೇನನ್ನೋ ಹೇಳಿ ತಂದೆಯ ಪ್ರಯತ್ನಗಳನ್ನು ನಿಲ್ಲಿಸಲು ಪ್ರಯತ್ನಪಡುವಳು. ಆದರೂ ಅಪ್ಪ ಪ್ರಯತ್ನ ಮುಂದುವರಿಸುತ್ತಲೇ ಇದ್ದ. ಗಂಗಾ ಹೊನ್ನೇಕೆರೆಯಲ್ಲಿ ಇರುವಾಗಲೇ ಯಾರಾದರೂ ಬಂದು ನೋಡಿ ಒಪ್ಪಿದರೆ ಮದುವೆಯ ಮುಹೂರ್ತ ನೋಡಿ ಮದುವೆ ಮುಗಿಸಿಬಿಡಬಹುದು ಎಂಬುದು ಅವರ ಯೋಚನೆ. ಮನೆಯಲ್ಲಿ ಒಂದೆರೆಡು ದಿನ ಆರಾಮವಾಗಿ ಕಳೆದ ಗಂಗಾ ನಂತರ ಅಂಗನವಾಡಿ ಯೂನಿಯನ್ ಗೆಳತಿಯರನ್ನು ಭೇಟಿಯಾಗಲು ನಿತ್ಯ ಹೋಗುತ್ತಿದ್ದಳು. 'ಮದುವೆ'ಯ ಕಿರಿಕಿರಿ ಮನೆಯಲ್ಲಿ ಪ್ರಾರಂಭವಾದಾಗ ತಾನು ಹೊನ್ನೇಕೆರೆಗೆ ಬಂದು ತಪ್ಪು ಮಾಡಿದೆನೇನೋ ಎನ್ನುವ ಅಭಿಪ್ರಾಯ ಗಂಗಾಳಲ್ಲಿ ಮೂಡತೊಡಗಿತ್ತು. ಬಹಳ ದಿನಗಳ ಮೇಲೆ ಬಂದ ಗಂಗಾಳನ್ನು ಎಲ್ಲಿ ಹೋಗಲಿಕ್ಕೂ ತಾಯಿ ಬಿಡುತ್ತಿರಲಿಲ್ಲ. ಗಂಗಾಗೆ ಅದು ಇಷ್ಟ, ಇದು ಇಷ್ಟ ಎಂದು ಶಂಕ್ರಣ್ಣನ ಹೆಂಡತಿ ಉಮಾಗೆ ಹೇಳುವಳು. 'ದಿನಾ ಎಣ್ಣೆ ನೀರು ಸ್ನಾನ ಮಾಡು, ಸೀಗೆ ಹಾಕುತ್ತೇನೆ' ಎಂದು ಹಟ ಮಾಡುವಳು. 'ಬಾಳೆ ಹಣ್ಣು ತಿನ್ನು ಇದು ತೋಟದ್ದು' ಎಂದು ಪೀಡಿಸುತ್ತಾ ಹಿಂದೆ-ಮುಂದೆ ಓಡಾಡುವಳು. ತಾಯಿಯ ಪ್ರೀತಿಯಲ್ಲಿ ಬೆಂಗಳೂರಿನಲ್ಲಿ ಇರುತ್ತಿದ್ದ ಒಂಟಿತನ/ಏಕಾಂಗಿತನ ಮರೆತು ಹೋದಂತೆ ಗಂಗಾಗೆ ಅನ್ನಿಸುತ್ತಿತ್ತು. ಆದರೆ 'ಮದುವೆ'ಯ ವಿಚಾರದಲ್ಲಿ ಕಿರಿ ಕಿರಿ ಮಾಡಿದಾಗ ಹೊನ್ನೇಕೆರೆಯಿಂದ ಓಡಿ ಹೋಗಬೇಕು ಅನ್ನಿಸುತ್ತಿತ್ತು. ಹೊನ್ನೇಕೆರೆಯ ಅಂಗನವಾಡಿ ಯೂನಿಯನ್‌ನವರು ಸಂಘಟನೆಯಿಂದ ತಮಗಾದ ಅನುಕೂಲಗಳನ್ನು ಹೇಳಿಕೊಳ್ಳುವರು. ಆದರೂ ಕೇವಲ 300/ 350ರೂಗಳಿಗೆ ಸೀಮಿತವಾದ ಈ ಕೆಲಸ ಖಾಯಂ ಆಗುವುದಿಲ್ಲ, ಆ ಕೆಲಸದಲ್ಲಿ ತಮಗೆ ಭವಿಷ್ಯವಿಲ್ಲ ಎನ್ನುವ ಆತಂಕ ಅವರಲ್ಲಿ ಇರುವುದನ್ನು ಗಂಗಾ ಗಮನಿಸಿದ್ದಳು. ಹಲವಾರು ಹಳ್ಳಿಗಳಲ್ಲಿ ಮಕ್ಕಳಿಗೆ ಆಹಾರ ಬೇಯಿಸುವುದಕ್ಕೆ ಕಟ್ಟಿಗೆಯೇ ಮುಖ್ಯ ಸಮಸ್ಯೆಯಾಗುತ್ತಿತ್ತು. ಪಂಚಾಯಿತಿಗಳವರು ಅಷ್ಟು ಸಹಕಾರ ನೀಡುತ್ತಿರಲಿಲ್ಲ, ಕೊಡುವ ದವಸ ಧಾನ್ಯಗಳ ತೂಕ ಸರಿ ಇರುವುದಿಲ್ಲ, ಈ ನಡುವೆ ಯೂನಿಯನ್ ಆದ ಮೇಲೆ ಆಫೀಸಿನ ಜೀಪಿನಲ್ಲಿಯೇ ದವಸ-ಧಾನ್ಯ ಸೆಂಟರ್‌ಗೆ ತಂದು ಹಾಕಬೇಕೆಂದು ನಿಯಮವಿದ್ದರೂ, ಕೆಲವು ಹಳ್ಳಿಗಳಿಗೆ ಜೀಪ್ ಹೋಗುವುದೇ ಇಲ್ಲ. ಇಂತಹ ಅನೇಕ ಸಮಸ್ಯೆಗಳ

ಬಗ್ಗೆ ಶಿವಮೊಗ್ಗೆಯಲ್ಲಿ ತಾನು ಯೋಜನಾಧಿಕಾರಿಗಳನ್ನು ಭೇಟಿಯಾದಾಗ ಮಾತನಾಡುವುದಾಗಿ ಗಂಗಾ ಭರವಸೆ ಇತ್ತಿದ್ದಳು. ಹೀಗೇ ಗಂಗಾ ಸುಮಾರು ಒಂದು ವಾರ ಹೊನ್ನೇಕೆರೆಯಲ್ಲಿ ಸಮಯ ಕಳೆದಿದ್ದಿರಬಹುದು.

ಆ ದಿನ ರಾತ್ರಿ ಗಂಗಾರ ಮನೆಯಲ್ಲಿ ಗಂಗಾ ಚಿಕ್ಕ ವಯಸ್ಸಿನಿಂದಲೂ ನೋಡಿದ ಕರಿಯ ಬಣ್ಣದ ಹಸುವೊಂದು ಕಾಲು ಮುರಿದುಕೊಂಡು ಬಂತು. ಕರಿ ಮೈಯಿ ಇದ್ದು ಬಿಳಿ ಬಿಳಿಯಾದ ಪಟ್ಟೆಯಿದ್ದ ಈ ಹಸುವಿಗೆ ಕರಿಭಂಡ ಎಂದೇ ಮನೆಯಲ್ಲಿ ಕರೆಯುತ್ತಿದ್ದರು. ಅದು ಕಾಲು ಮುರಿದುಕೊಂಡು ಮನೆಗೆ ಬಂದಾಗ ಅಪ್ಪ, ಅಮ್ಮ, ಅಣ್ಣ ಎಲ್ಲರೂ ಅದರ ಸೇವೆಗೆ ನಿಂತಿದ್ದರು. ಅದರ ಹಿಂಗಾಲು ಅರ್ಧ ಕತ್ತರಿಸಲ್ಪಟ್ಟು ಜೋತಾಡುತ್ತಿತ್ತು. ಡಾಕ್ಟರ್ ಕರೆತಂದು ಕಟ್ಟು ಹಾಕಿಸಬೇಕಿತ್ತು. ಗಾಡಿಯಲ್ಲಿ ಹಸುವನ್ನು ಹೇರಿಕೊಂಡು ಬರುವುದೇ ದೊಡ್ಡ ಸಾಹಸದ ಕೆಲಸವಾಗಿತ್ತು. ಆ ರಾತ್ರಿ ಮಧ್ಯರಾತ್ರಿ ಎರೆಡು ಘಂಟೆಯವರೆಗೆ ಪ್ರತಿಯೊಬ್ಬರೂ ಕರಿಭಂಡದ ನೋವಿಗೆ ಏನೇನೋ ಔಷಧಿ ಮಾಡುತ್ತಾ ಕುಳಿತುಕೊಂಡಿದ್ದರು. ಕರಿಭಂಡ ಮುಲುಗುಟ್ಟುತ್ತಿತ್ತು. ಅವರಿವರ ಕೈಗೆ ಸಿಗದೇ ಉಡಾಫೆಯಿಂದ ಇದ್ದ ಹಸು ಅದು. ಯಾರ ಕೈಗೂ ಸಿಗುತ್ತಿರಲಿಲ್ಲ. ಗಂಗಾ ಚಿಕ್ಕವಳಿದ್ದಾಗಿನಿಂದಲೂ ಈ ಹಸುವನ್ನು ಕಂಡಿದ್ದಳು. ಯಾವಾಗಲೂ ಕಳ್ಳ ಬೀಳುತ್ತಿದ್ದ ಹಸು. ಇದರ ಸಲುವಾಗಿ ಅಪ್ಪ, ಅಮ್ಮ, ಅಣ್ಣ ಬಹಳ ಜನರಿಂದ ಬೈಗುಳ ಕೇಳಿದ್ದರು. ಆದರೂ ಅದು ಮನೆಯವರೊಡನೆ ಒಂದಾಗಿ ಬೆಳೆದು ಬಂದಿತ್ತು. ಕಾಲು ಮುರಿದುಕೊಂಡ ಕರಿಭಂಡ ಮುಲುಗುವುದನ್ನು ಕಂಡಾಗ ತಾಯಿ ಕಣ್ಣಲ್ಲಿ ನೀರು ಹಾಕಿದ್ದಳು. ಸಾಧನ ಊಟ ಬೇಕು ಎಂದು ಹಟ ಮಾಡಿದರೂ ಯಾರಿಗೂ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳುವ ತಾಳ್ಮೆಯೇ ಇರಲಿಲ್ಲ, ಊಟಕ್ಕಾಗಿ ಅತ್ತು ಅತ್ತು ಸಾಧನ ಏಳು ಘಂಟೆಗೆಲ್ಲಾ ತೂಕಡಿಸತೊಡಗಿದ್ದಳು. ನಿದ್ದೆಗಣ್ಣಿನಲ್ಲಿಯೇ ಅಪ್ಪನ ಹತ್ತಿರ, 'ತಾತ ಆ ಹಸುವಿಗೆ ಯಾಕೆ ಔಷಧಿ ಕೊಡುತ್ತೀರಿ, ಯಾಕೆ ಕಾಲಿಗೆ ಕಟ್ಟು ಹಾಕಿಸುತ್ತೀರಿ, ಅದು ಸತ್ತು ಹೋಗುತ್ತದೆ, ಅದು ಸತ್ತು ಹೋಗುತ್ತದೆ' ಎಂದು ಎರೆಡು-ಮೂರು ಬಾರಿ ಹೇಳಿ ಹಾಗೆಯೇ ನಿದ್ದೆ ಹೋಗಿಬಿಟ್ಟಿದ್ದಳು. ಅತ್ತಿಗೆ ಉಮಾ ಅನ್ನ ಮಾಡಿ ಮಗಳಿಗೆ ಊಟಕ್ಕೆ ಎಬ್ಬಿಸಿದರೆ ಸಾಧನ ಎದ್ದಿರಲೇ ಇಲ್ಲ. ಇತರ ಸಂದರ್ಭಗಳಲ್ಲಿ ಆಗಿದ್ದರೆ ಸಾಧನಾ ಊಟ ಮಾಡದಿದ್ದರೆ ತಾಯಿ ಬಿಡುತ್ತಿರಲಿಲ್ಲ. ನಿದ್ದೆಗಣ್ಣಿನಲ್ಲಿಯೇ ನಾಲ್ಕು ತುತ್ತಾದರೂ ತಿನ್ನಿಸುವರು. ಕರಿಭಂಡದ ಕಾಲಿಗಾಗಿ ಅಳುತ್ತಾ ಕುಳಿತ ತಾಯಿಗೆ ಸಾಧನಾಳ ಕಡೆಗೆ ಗಮನವೇ ಹರಿದಿರಲಿಲ್ಲ. ಅತ್ತಿಗೆ ಉಮಾಗೂ ಸುಸ್ತಾಗಿದ್ದಿರಬೇಕು. ಸಾಧನಾ ಬೇಡವೆಂದು ನಿದ್ದೆಗಣ್ಣಿನಲ್ಲಿ ಅತ್ತುಬಿಟ್ಟಾಗ ಆಕೆ ಒತ್ತಾಯ ಮಾಡದೇ ಸುಮ್ಮನಾಗಿಬಿಟ್ಟಿದ್ದಳು. ಹಸುವಿನ ಆರೈಕೆಯಲ್ಲಿ ಮನೆಯ ಒಬ್ಬೊಬ್ಬರೂ ಕಣ್ಣು ಮುಚ್ಚಿದಾಗ ರಾತ್ರಿ 4 ಘಂಟೆ. ಯಾರಿಗೂ ಅವಸರವಿರಲಿಲ್ಲ. ಮರುದಿನ ಶನಿವಾರ. ಸಾಧನ ಏಳುವಂತೆ ಏಳು ಘಂಟೆಗೆ ಎದ್ದು ದಡಬಡಿಸಿ ಬೆಳಗಿನ ಶಾಲೆಗೆ ಹೊರಟಿದ್ದಳು. ಉಮಾ ರಾತ್ರಿಯ ಅನ್ನಕ್ಕೇ ಒಗ್ಗರಣೆ ಹಾಕಿ ಕಲಸಿ ಕರೆಯುವಲ್ಲಿ ಸಾಧನ ಶಾಲೆಗೆ ಹೋಗಿಯಾಗಿತ್ತು. ತಾಯಿ ಕರೆಯುತ್ತಿದ್ದರೂ, 'ಸಾಯುವ ಹಸುವಿಗೆ ಮಾಡುವವರು ನೀವೆಲ್ಲ' ಎನ್ನುತ್ತಾ ಓಡಿ ಹೋಗಿದ್ದಳು. ಆ ಚಿಕ್ಕ ಹುಡುಗಿ ಹಾಗೆ ಮಾತನಾಡುವುದು ವಿಚಿತ್ರವಾಗಿ ಕಂಡಿತ್ತು ಗಂಗಾಗೆ. ಏನೂ ತಿನ್ನದೇ ಹೊರಟು ಹೋದ ಸಾಧನೆಳನ್ನು ನೆನಸಿಕೊಂಡಾಗ ವಿಚಿತ್ರ ಸಂಕಟವಾಗಿತ್ತು ಗಂಗಾಗೆ. ಸ್ಕೂಲ್ ಯೂನಿಫಾರ್ಮನಲ್ಲಿ ಮುದ್ದಾಗಿ ಕಾಣುತ್ತಿದ್ದ ಸಾಧನಳನ್ನು ಕಂಡಾಗ ಗಂಗಾಗೆ ತನಗೂ ಅಂತಹದೊಂದು ಮಗು ಇದ್ದಿದ್ದರೆ ಎನ್ನಿಸದಿರಲಿಲ್ಲ. ಬತ್ತಿದ ಮುಖದಿಂದಲೇ ಸಾಧನಾ ಸ್ಕೂಲಿಗೆ ಹೊರಟು ಹೋಗಿದ್ದಳು. ಸ್ಕೂಲಿಗೆ ಹೋದ ಸಾಧನ 12 ಘಂಟೆಗೆ ವಾಪಸ್ಸು

ಬರಬೇಕಿತ್ತು. ಉಮಾ ದೋಸೆ ಹೊಯ್ದುಕೊಂಡು ಚಡಪಡಿಸುತ್ತಿದ್ದಳು. 1 ಘಂಟೆಯವರೆಗೂ ಬರಲಿಲ್ಲ. ಶಂಕ್ರಣ್ಣ ಸೈಕಲ್ ತೆಗೆದುಕೊಂಡು ಗದ್ದೆಗೆ ಹೊರಟು ಹೋಗಿದ್ದ. ಗಂಗಾ ಚಪ್ಪಲಿ ಮೆಟ್ಟಿಕೊಂಡು ಹೊರಟಾಗ ಬಂದದ್ದು ಭಯಂಕರ ಸುದ್ದಿ. ಸಾಧನ ಸ್ಕೂಲ್ ಮುಗಿದ ಮೇಲೆ ಸ್ಕೂಲಿನ ದಾರಿಯಲ್ಲಿರುವ ಹೊಂಡವೊಂದಕ್ಕೆ ನಾಲ್ಕಾರು ಜನ ಹುಡುಗಿಯರೊಡನೆ ಹೋಗಿದ್ದಳು. ಅಲ್ಲಿಯೇ ಇದ್ದ ಮರದ ಕೆಳಗೆ ಆಡುತ್ತಾ, ನಂತರ ಕೈ ಕಾಲು ಮುಖ ತೊಳೆಯಲು ನೀರ ಹತ್ತಿರ ಹೋದರು. ಆಟವಾಡುತ್ತಾ ತಾನು ರಾತ್ರಿ, ಹಾಗೂ ಬೆಳಿಗ್ಗೆ ಏನನ್ನೂ ತಿನ್ನದೇ ಇದ್ದುದನ್ನು ಸಾಧನ ಮರೆತುಬಿಟ್ಟಿದ್ದಳೋ ಏನೋ? ಸಾಧನ ಕಾಲು ಜಾರಿ ಹೊಂಡದಲ್ಲಿ ಬಿದ್ದಾಗ ಆಕೆಯ ಗೆಳತಿಯರೆಲ್ಲ ಕೂಗಿಕೊಂಡರು. ಈ ಸುದ್ದಿ ತಲುಪಿದಾಗ ಮನೆಯಲ್ಲಿದ್ದುದು ಗಂಗಾ/ತಾಯಿ ಹಾಗೂ ಉಮಾ ಮಾತ್ರ. ಅಪ್ಪ ಹಸುವಿನ ಕಾಲಿಗೆ ಔಷಧಿ ತರಲು ಹೊರಟು ಹೋಗಿದ್ದರು. ಅಣ್ಣ ಬೆಳಿಗ್ಗೆಯೇ ಸೈಕಲ್ ಮೇಲೆ ಹೊರಟು ಹೋಗಿದ್ದ. ಗಂಗಾ ಒಂದೇ ಉಸಿರಿನಲ್ಲಿ ಹೊಂಡದ ಬಳಿ ಓಡಿದ್ದಳು. ಸಾಧನಾಳನ್ನು ದಡದ ಮೇಲೆ ಮಲಗಿಸಲಾಗಿತ್ತು. ಆಕೆಗೆ ಪ್ರಜ್ಞೆಯೇ ಇರಲಿಲ್ಲ. ಗಂಗಾ ಸಾಧನಳನ್ನು ಎತ್ತಿಕೊಂಡು ಯಾರದೋ ಬೈಕ್ ಮೇಲೆ ಮನೆಗೆ ಬಂದಳು. ಅಪ್ಪ ಡಾಕ್ಟರ್ ಕರೆತಂದಿದ್ದರು. ಅಮ್ಮ, ಉಮಾ ಲಬೋ ಲಬೋ ಎಂದು ಕೂಗಿಕೊಳ್ಳುತ್ತಿದ್ದರು. ನೀರು ತುಂಬಿಕೊಂಡ ಸಾಧನಾಳ ಹೊಟ್ಟೆ ಊದಿಕೊಂಡಿತ್ತು. ಮೇಲುಗಣ್ಣು ಬಿಟ್ಟುಕೊಂಡ, ಹೊಟ್ಟೆ ಊದಿಕೊಂಡ ಸಾಧನಾ ವಿಕಾರವಾಗಿ ಕಾಣುತ್ತಿದ್ದಳು. ಮನೆಯ ಸುತ್ತ ಹೊನ್ನೇಕೆರೆಯ ಜನವೇ ನೆರೆದಂತಿತ್ತು. ಹೊಟ್ಟೆಯಿಂದ ನೀರು ತೆಗೆಯಲು ಪ್ರಯತ್ನಿಸಿದಷ್ಟೂ ನೀರು ಬರುತ್ತಿತ್ತೇ ಹೊರತು ಸಾಧನಾ ಕಣ್ಣು ಬಿಡುತ್ತಿರಲಿಲ್ಲ. ಹಸು ಸಾಯುತ್ತದೆ, ಸಾಯುತ್ತದೆ, ಯಾಕೆ ಔಷಧ ಮಾಡುತ್ತೀರಿ ಎಂದು ಬಾರಿ ಬಾರಿಗೆ ಹೇಳಿದ್ದ ಸಾಧನಾ ಸದ್ದಿಲ್ಲದೇ ಸಾವಿನ ತೆಕ್ಕೆಗೆ ಜಾರಿಕೊಂಡಿದ್ದಳು. ಉಸಿರು ಹಿಡಿದು ಮನೆಗೆ ಬಂದ ಆ ನಿಶ್ಚಲ ದೇಹ ಆ ಉಸಿರನ್ನು ಮನೆಯ ಒಳಗೆ ಹಿಡಿದದ್ದು ಕೇವಲ ಒಂದು ಘಂಟೆ ಮಾತ್ರ. ಸಾವು ಹೇಳಿಯೇ ಮನೆಯ ಒಳಗೆ ಬಂದಿತ್ತು. ಯಾರಿಗೂ ಗಮನವಿರಲಿಲ್ಲ ಅಷ್ಟೇ. ರಾತ್ರಿ ನಿದ್ದೆಗಣ್ಣಿನಲ್ಲಿ ಮೂರು ಬಾರಿ ಸಾಧನಾ ಅಪ್ಪನ ಹತ್ತಿರ ನುಡಿದಿದ್ದಳು, ಆಕಳು ಸಾಯುತ್ತದೆ, ಔಷಧಿ ಮಾಡಬೇಡಿ ಎಂದು. ಸಾಧನ ಮಾತನಾಡುತ್ತಿದ್ದುದು ಆಕಳ ಸಾವನ್ನಲ್ಲ, ಮನದ ಮೂಲೆಯೊಳಗಿನಿಂದ ಹಾಯ್ದು ಬಂದ ತನ್ನ ಸಾವನ್ನೇ ಎಂಬ ಪಾಪಪ್ರಜ್ಞೆ ಅತ್ತಿಗೆಯ ಮನದೊಳಗೆ ಆಳವಾದ ನೋವಾಗಿ ಬೇರು ಬಿಟ್ಟಿರಬೇಕು. 'ಮಗಳಿಗೆ ತುತ್ತು ಅನ್ನ ತಿನ್ನಿಸದೇ ಸಾಯಿಸಿದ ತಾನೆಂಥ ಪಾಪಿ' ಎಂದು ಗಟ್ಟಿಯಾಗಿ ಹೇಳುತ್ತಾ ಉಮಾ ರೋಧಿಸುತ್ತಿದ್ದಳು. 'ನಾನೂ ಸಾಯುತ್ತೇನೆ' ಎಂದು ಬಾವಿಯ ಬಳಿ ಓಡುತ್ತಿದ್ದ ಉಮಾಳನ್ನು ನಾಲ್ಕಾರು ಜನ ಓಡಿ ಹೋಗಿ ಹಿಡಿದಿರಬೇಕು. ತಾಯಿಯ ಮಡಿಲಲ್ಲಿ ಸಾಧನಾ ಸತ್ತಿದ್ದಳು. ತಾಯಿ ಗುಬ್ಬಚ್ಚಿ ಮರಿಯಾಗಿದ್ದಳು. ಬೆಂಕಿಯಲ್ಲಿ ಬೆಂದು ಹೋದ ತಾರುಣ್ಯದ ಕನಸುಗಳ ಮುಗ್ಧತೆಯನ್ನು ಈ ಕಂದನಲ್ಲಿ ಕಾಣುತ್ತಿದ್ದ ತಾಯಿಗೆ ಸಾಧನಾ ಬೆಚ್ಚನೆಯ ಮರಿಯಾಗಿದ್ದಳು. 'ಬಾ ಬಾ ಗುಬ್ಬಿಮರಿ, ತರುವೇನು ಕಡಲೆ ಪುರಿ' ಎಂದು ಹೆಚ್ಚು-ಕಡಿಮೆ ಸಾಧನಾಳನ್ನು ಬೆಳೆಸಿದ್ದೇ ತಾಯಿ, ಸಾಧನಾ ಇಲ್ಲ ಎಂಬ ಸತ್ಯ ಮನೆಯಲ್ಲಿ ಅರಗಿಸಿಕೊಳ್ಳುವುದು ಎಲ್ಲರಿಗೂ ಕಷ್ಟವಾಗತೊಡಗಿತ್ತು. ಆಕೆ ಅಲ್ಲಿ ಮಲಗಿದ ಹಾಗೆ, ಇಲ್ಲಿ ನಿಂತ ಹಾಗೆ, ಅಲ್ಲಿ ಓಡಿದ ಹಾಗೆ,...... ಎಲ್ಲಿಯೋ ಕಣ್ಣು ಮುಚ್ಚಾಲೆಗೆ ಕೂಕ್ ಎಂದ ಹಾಗೆ. ಹೊನ್ನೇಕೆರೆಗೆ ಗಂಗಾ ಬರುವಾಗ ಸಾಧನಾಳ ಮೂಲಕ ಹೊಸದೊಂದು ಚೈತನ್ಯ ಪಡೆಯಲು ಹಂಬಲಿಸಿದ್ದಳು. ಇದ್ದಕ್ಕಿದ್ದ ಹಾಗೆ ರಾತ್ರಿ ಇದ್ದ ಸಾಧನಾ ಬೆಳಗಾಗುವುದರಲ್ಲಿ ಇಲ್ಲ ಎನಿಸಿದಾಗ ಗಂಗಾಗೆ ನಿದ್ರೆ, ಅರೆ ನಿದ್ರೆ ಅರೆ ಎಚ್ಚರದ ಸ್ಥಿತಿ

ತಲುಪುವಂತಾಗಿತ್ತು. ಸಾಧನಾ ಇಡೀ ಮನೆಯ ಜನರನ್ನು ಒಂದುಗೂಡಿಸಿದ ಹುಡುಗಿ. ತಾಯಿಯ ಹುಚ್ಚು ಕಡಿಮೆಯಾಗಲು ಅವಳೇ ಮುಖ್ಯ ಕಾರಣವಾಗಿದ್ದಳು. ಗಂಗಾ ಕಳೆದುಹೋಗಿದ್ದ ಮುಗ್ಧತೆಯನ್ನು ದಕ್ಕಿಸಿಕೊಳ್ಳಲು ಪ್ರಯತ್ನಿಸಿದ್ದೇ ಸಾಧನಾಳಲ್ಲಿ. ರಾತ್ರಿ ಇದ್ದ ಸಾಧನಾ ಇದ್ದಕ್ಕಿದ್ದಂತೆ ಬೆಳಗಾಗುವುದರಲ್ಲಿ ಇಲ್ಲ ಎನಿಸಿದಾಗ ಯಾರೂ ನಂಬುವಂತಿರಲಿಲ್ಲ. ಹೊಂಡದ ನೀರು ಸಾಧನಾಳ ಆಹುತಿ ತೆಗೆದುಕೊಳ್ಳಲು ಕಾದು ನಿಂತಿತ್ತೇ? ಕರಿಭಂಡನ ನೋವಿನಲ್ಲಿ ಆಕೆಯ ಸಾವಿನ ಸುದ್ದಿ ವ್ಯಕ್ತವಾಗಿತ್ತು. ಅರಗಿಸಿಕೊಳ್ಳಲಾಗದ ಸಾಧನಾಳ ಸಾವು ಮನೆಯನ್ನು ಸ್ಮಶಾನ ಮೌನವನ್ನಾಗಿಸಿತ್ತು. ಸಾಧನಾಳ ಸಾವಿಗೆ ಕರಿಭಂಡವೇ ನೆಪವಾಯಿತು. ಕರಿಭಂಡನನ್ನು ಗಮನಿಸಲು ಯಾರೂ ಪ್ರಯತ್ನಿಸಲಿಲ್ಲ. ಅಪ್ಪ ಆಗೀಗ ಕರಿಭಂಡದ ಬಳಿ ಕುಳಿತು ಕಣ್ಣೀರು ಹಾಕುವರು. ಮಲಗಿದ ತಾಯಿ, ಅತ್ತಿಗೆ ಉಮಾ ಎರೆಡು ದಿನ ಮೇಲೇಳಲೇ ಇಲ್ಲ. ಅಣ್ಣ ಶಂಕರ 'ನಾನೇನು ಪಾಪ ಮಾಡಿದ್ದೆ ಗಂಗಾ' ಎಂದು ಕಣ್ಣೀರಿಡುವನು. ಗಂಗಾ ಕಾಲೆಳೆದುಕೊಂಡೇ ಒಂದು ತುತ್ತು ಅನ್ನ ಬೇಯಿಸಿಯೋ, ಹಾಲು, ಕಾಫಿ ಕಾಯಿಸಿಯೋ ಎಲ್ಲರಿಗೂ ಕೊಡುವಳು. ತಾಯಿ, ಅತ್ತಿಗೆಗೆ ಸಮಾಧಾನ ಮಾಡುವಳು. ಬಂದವರು, 'ಅವಳು ನಿಮ್ಮ ಕಂದನಲ್ಲ, ಆ ಶಿವನ ಕಂದ' ಎಂದು ಸಮಾಧಾನ ಮಾಡುವರು. ಅತ್ತಿಗೆಗಾಗಲೀ, ಅಮ್ಮನಿಗಾಗಲೀ ಸಮಾಧಾನ ಮಾಡುವ ಶಕ್ತಿ ತನ್ನಲ್ಲಿ ಇದೆಯೇ ಎಂದು ಗಂಗಾಗೆ ಅನ್ನಿಸುತ್ತದೆ. ತಂದೆ ಮೌನವಾಗಿ ಕರಿಭಂಡನ ಮುಂದೆಯೋ, ಮನೆಯ ಮೂಲೆಯ ಕುರ್ಚಿಯ ಮೇಲೆಯೋ ಕುಳಿತು ಕಣ್ಣೀರು ಹಾಕುವುದನ್ನು ನೋಡಿದಾಗ ಹೊಟ್ಟೆ ಕಿವುಚಿದ ಹಾಗೆ ಅನ್ನಿಸುತ್ತದೆ. ಹೊನ್ನೇಕೆರೆಯಲ್ಲಿ ಗಂಗಾಳ ಕಣ್ಣ ಮುಂದೆ ಉಳಿದದ್ದು ಇಷ್ಟು ಮಾತ್ರ: ನೀರು ಕಕ್ಕಿ ಕಕ್ಕಿ ಪ್ರಜ್ಞೆ ಇಲ್ಲದ ಸಾಧನ ಅರೆಗಣ್ಣು, ವಾಲುಗಣ್ಣುಗಳಲ್ಲಿ ಸಾವಿನ ತೆಕ್ಕೆಗೆ ಹೊರಟು ಹೋದದ್ದು; ತಾಯಿಯ ಮೇಲೆ ಸಿಟ್ಟು ಮಾಡಿಕೊಂಡ ಸಾಧನ ಸಾವಿನ ಮಾತನಾಡಿ ಸಾವಿನ ದವಡೆಗೆ ಹೋಗಿದ್ದು; 'ಗಂಗತ್ತೇ' - ಎಂದು ಪ್ರೀತಿಯಿಂದ ತಬ್ಬಿಕೊಳ್ಳುತ್ತಿದ್ದ ಸಾಧನ ಇಂದು ಇಲ್ಲ. ಯಾರ ಮುಗ್ಧತೆಯಲ್ಲಿ ಕಳೆದು ಹೋದದ್ದನೆಲ್ಲ ಪಡೆಯಲು ಆಶಿಸಿ ಗಂಗಾ ಊರಿಗೆ ಬಂದಿದ್ದಳೋ ಆ ಸಾಧನ ಇಲ್ಲ. ಮನೆಯೆಲ್ಲಾ ಪುಟ್ಟ ಪುಟ್ಟ ಹೆಜ್ಜೆಯಿಂದ ಓಡಾಡಿ ಎಲ್ಲರನ್ನೂ ಒಂದುಗೂಡಿಸಿದ್ದ ಸಾಧನ ಇಲ್ಲ. ಗಂಗಾಗೆ ಹುಚ್ಚು ಹಿಡಿಯುವಂತೆ ಭಾಸವಾಗುತ್ತಿತ್ತು. ಕೆದರಿದ ಕೂದಲು ಬಿಟ್ಟುಕೊಂಡು ಈಗೀಗ ಎದ್ದು ಕೆಲಸ ಮಾಡುತ್ತಿದ್ದ ಉಮಾಳನ್ನು ಕಂಡಾಗ ಸಂಕಟವಾಗುತ್ತಿತ್ತು. 'ಐದು ವರ್ಷ ಬೆಳೆಸಿ ಸಾಯುವ ಹಿಂದಿನ ದಿನ ತುತ್ತು ಅನ್ನ ತಿನ್ನಿಸದೇ ಮಣ್ಣಲ್ಲಿ ಇಟ್ಟು ಬಂದೆನಲ್ಲಾ' ಎಂದು ಅನ್ನದ ತಟ್ಟೆ ಮುಂದೆ ಇಟ್ಟುಕೊಂಡು ಅಳುವ ಉಮಾ ಸಾಧನಾಳ ಸಾವನ್ನು ಜೀರ್ಣಿಸಿಕೊಳ್ಳಲಾರಳೇನೋ ಎಂದು ಗಂಗಾಗೆ ಅನ್ನಿಸುತ್ತಿತ್ತು. ಉಮಾ ಮನೆಗೆಲಸ ಮಾಡುವುದಕ್ಕೆ ಪ್ರಾರಂಭಿಸಿದ ಮೇಲೆ ಗಂಗಾ ಬೆಳಿಗ್ಗೆ ಹೊಂಡದ ಬಳಿ ಹೋಗಿ ಕೂರುವಳು. ಸತ್ತ ಸಾಧನಾ ಹೊಂಡದ ಮಧ್ಯದಲ್ಲಿ ಎಲ್ಲಿಯೋ ನಿಂತು ಕರೆದ ಹಾಗೆ ಆಕೆಗೆ ಭಾಸವಾಗುತ್ತದೆ. 'ಗಂಗತ್ತೆ' ಎಂದು ಎಲ್ಲಿಯೋ ಹರಿಯುವ ನೀರಿನಿಂದ ಶಬ್ದದ ಅಲೆಯೊಂದು ಮೂಡಿಬಂದ ಹಾಗೆ ಭಾಸವಾಗುತ್ತದೆ. ಗಂಗಾ ಕಣ್ಣೀರು ತಡೆಯುತ್ತಾಳೆ. ಯಾರು ಯಾರಿಗೆ ಮನೆಯಲ್ಲಿ ಸಮಾಧಾನ ಹೇಳಬೇಕು? ಯಾರು ಹೇಳುವ ಸಮಾಧಾನದ ಮಾತುಗಳೂ ಶೂನ್ಯವಾಗಿರುತ್ತವೆ ಶುಷ್ಕವೆನಿಸುತ್ತವೆ. ಆಡಂಬರ ಎನಿಸುತ್ತವೆ. ಅಪ್ಪ ಮೂಲೆಯ ಆರಾಮ ಕುರ್ಚಿಯ ಮೇಲೆ ಕುಳಿತೇ ಸಾಧನಾಳ ಸಾವನ್ನು ಜೀರ್ಣಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅಮ್ಮ, ಉಮ ಊಟ/ತಿಂಡಿ ಸರಿಯಾಗಿ ತಿನ್ನದೇ ಸಾಧನಾಳ ಸಾವಿಗೆ ಪ್ರತೀಕಾರ ತೋರಿಸುತ್ತಾರೆ. ಅಣ್ಣ ಸಿಗರೇಟು ಹಿಡಿದು ಬೀದಿಯ ಯಾವುದೋ ಅಂಗಡಿಯಲ್ಲಿ ಕೂತಿರುತ್ತಾನೆ. ಗಂಗಾಗೆ ಸಾಧನಾಳಿಲ್ಲದ ಮನೆ ಸ್ಮಶಾನವಾಗುತ್ತದೆ ಯಾರೂ ಗಮನಿಸಿದ

ಕಾರಣದಿಂದ ಕರಿಭಂಡವೂ ಸತ್ತು ಹೋಗುತ್ತದೆ. ಕರಿಭಂಡದ ಸಾವು ಮನೆಯಲ್ಲಿ ಯಾರಿಗೂ ತಟ್ಟುವುದೇ ಇಲ್ಲ. ಸತ್ತ ಕರಿಭಂಡನನ್ನು ನಾಲ್ಕಾರು ಜನ ಬಂದು ಹೊತ್ತುಕೊಂಡು ಹೋಗುತ್ತಾರೆ. ಕಣ್ಣರಳಿಸಿ ಬಿದ್ದ ಕರಿಭಂಡನಲ್ಲಿ ಗಂಗಾಗೆ ಕಂಡದ್ದು ಸಾಧನಾಳ ಮುಖವೇ! ಬದುಕಿಗೆ ಹೀಗೆ ಮುಖಾಮುಖಿಯಾಗುವ ಸತ್ಯಗಳು ಏನನ್ನು ಹೇಳಿಕೊಡುತ್ತವೆ? ಬೆಂಗಳೂರಿನ ಏಕಾಂಗಿತನ/ಒಂಟಿತನದ ಕ್ರೂರತೆಗಳನ್ನು, ಅದರ ಬೇಗುದಿಯನ್ನು ಸಾಧನಾಳ ಮುಗ್ಧತೆಯಲ್ಲಿ ತಣ್ಣಗೆ ಮಾಡಿಕೊಳ್ಳಲು ಬಂದ ಗಂಗಾ ಸತ್ತ ಸಾಧನಾಳ ಸಾವಿನ ಜೊತೆ ಕರಿಭಂಡದ ಶವದ ಚಿತ್ರವನ್ನು ಕಣ್ಣಲ್ಲಿ ಕಟ್ಟಿಕೊಂಡು ಹೊನ್ನೇಕೆರೆಯನ್ನು ಬಿಡುತ್ತಾಳೆ.

ಹೊನ್ನೇಕೆರೆ ಬಿಟ್ಟ ಗಂಗಾ ನೇರ ಬಂದದ್ದು ಶಿವಮೊಗ್ಗೆಗೆ. ಸ್ಮಶಾನ ಮೌನದ ಮನೆ ಬಿಟ್ಟು ಬರುವಾಗ ತಾಯಿ ಅತ್ತಿದ್ದಳು. ಉಮ ಕಣ್ಣೀರು ಹಾಕಿದ್ದಳು. ಸಾಧನಾಳ ಸಾವಿನ ಅಡಿಯಲ್ಲಿ ಭಿಕೋ ಎನ್ನುವ ಮನೆಯಲ್ಲಿ ಎಲ್ಲರೂ ಗಂಗಾಳ ಇರುವನ್ನು ಬಯಸಿದ್ದರು. ಅಲ್ಲಿದ್ದರೆ ಸಾಧನಾಳ ಸಾವನ್ನು ಜೀರ್ಣಿಸಿಕೊಳ್ಳುತ್ತೇನೆ ಎಂದು ಗಂಗಾಗೆ ಅನ್ನಿಸಿರಲಿಲ್ಲ. ಹಾಗಾಗಿ ಆಕೆ ಶಿವಮೊಗ್ಗೆಗೆ ಓಡಿ ಬಂದಿದ್ದಳು. ಅಂಗನವಾಡಿಯ ಕೇಂದ್ರದ ಅಧಿಕಾರಿಯಾಗಿದ್ದವನು ಸದಾಶಿವ. ಗಂಗಾಗೆ ಅವನನ್ನು ನೋಡಿ ಆಶ್ಚರ್ಯವಾದಂತೆ ಅವನಿಗೂ ಆಕೆಯನ್ನು ನೋಡಿ ಆಶ್ಚರ್ಯವಾಗಿತ್ತು. ಗಂಗಾ ಬಿ.ಎ. ಪ್ರಥಮ ವರ್ಷಕ್ಕೆ ಬಂದಾಗ ಸದಾಶಿವ ಬಿ.ಎ. ಫೈನಲ್ ಇಯರ್‌ನಲ್ಲಿ ಇದ್ದವನು. ಅದು ಚಿಕ್ಕ ಕಾಲೇಜ್ ಆದುದರಿಂದ ಸಾಹಿತ್ಯ ಚಟುವಟಿಕೆಗಳಲ್ಲಿ ಆಸಕ್ತಿ ಇದ್ದವರು ಒಬ್ಬರಿಗೊಬ್ಬರು ಪರಿಚಯವಾದುದುಂಟು. ಬಹಳ ವರ್ಷದ ನಂತರ ಸದಾಶಿವ ವಿದ್ಯಾಭ್ಯಾಸ ಮುಂದುವರಿಸಿದುದರಿಂದ ಗಂಗಾಗಿಂತ ಸದಾಶಿವ ಆರೇಳು ವರ್ಷಕ್ಕೆ ದೊಡ್ಡವನಿದ್ದ. ಬಿ.ಎ.ಗೇ ಓದು ನಿಲ್ಲಿಸಿ ಈ ಕೇಂದ್ರದಲ್ಲಿ ಈಗ ಪ್ರಮೋಶನ್ ಮೇಲೆ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ. ಸಾಧನಾಳ ಸಾವಿನಲ್ಲಿ ಕರಿಭಂಡದ ದೇಹವನ್ನು ಹೊತ್ತುಕೊಂಡು ಹೋದ ಗಂಗಾ ಸದಾಶಿವನೊಟ್ಟಿಗೆ ಮಾತನಾಡಿದ್ದು ವೈಯಕ್ತಿಕವಾಗಿಯೇ. ಗಂಗಾ ಅಂಗನವಾಡಿಯ ಬಗ್ಗೆ ಬರೆದ ಲೇಖನ ನೈಜ ವಿಚಾರಗಳನ್ನೇ ಒಳಗೊಂಡಿತ್ತು ಎಂದು ಸದಾಶಿವ ಮಾತಿಗೆ ಆರಂಭಿಸಿದ. ಅಂಗನವಾಡಿ ಕಾರ್ಯಕರ್ತೆಯರು 'ರಿಸರ್ವ್ ಆರ್ಮಿ', 'ಸರ್‌ಪ್ಲಸ್ ಲೇಬರ್ ಫೋರ್ಸ್' ಎಂಬುದು ನಿಜ. ಆದರೂ ಒಟ್ಟು structure ಬಹಳ ಲೂಸ್ ಆಗಿದೆ ಎಂದ. ಯಾರನ್ನು ಯಾವಾಗ ಬೇಕಾದರೂ ಕೆಲಸದಿಂದ ತೆಗೆದುಹಾಕಬಹುದಾದ ಕ್ಯಾಸುಯಲ್ ರೀತಿಯ ವ್ಯವಸ್ಥೆ ಇದು ಎಂದು ಸದಾಶಿವ ಅಂಗನವಾಡಿಯ ಚರಿತ್ರೆಯನ್ನು ಕುರಿತು ಮಾತನಾಡುತ್ತಿದ್ದ. ಗಂಗಾಗೆ ಅದೆಲ್ಲ ಗೊತ್ತಿತ್ತು. ಆಕೆ ಮಾತನಾಡುತ್ತಿದ್ದುದೇ ಬೇರೆ. ಮೂಲಭೂತ ಬದಲಾವಣೆಗಳಾಗಬೇಕು, ಎಲ್ಲರ ಹೋರಾಟ ಅದಕ್ಕಾಗಿಯೇ. ಆದರೂ ಕೆಲವು ಕಾರ್ಯಕರ್ತೆಯರಿಗಾಗುವ ಅನ್ಯಾಯ ತಪ್ಪಿಸಬಹುದು. ಸೂಪರ್‌ವೈಸರ್‌ರಿಂದ, ಮೇಲಾಧಿಕಾರಿಗಳಿಂದ ಆಗುವ ಕಿರುಕುಳ ತಪ್ಪಿಸುವುದು ಅಸಾಧ್ಯವೇನಲ್ಲ. ಆಹಾರ, ಸಾಮಗ್ರಿಗಳು ಕೇಂದ್ರಕ್ಕೇ ನೇರವಾಗಿ ತಲುಪುವಂತೆ ನೋಡಿಕೊಳ್ಳಬೇಕು. ಇದೆಲ್ಲ ಕೇಳಿಸಿಕೊಳ್ಳುತ್ತಿದ್ದ ಸದಾಶಿವ ಏನೋ ಗೊಣಗುತ್ತಿದ್ದ. ಕೆಳಗಿನ ಅಧಿಕಾರಿಗಳಿಗೆ ಆರ್ಡರ್ ಕೊಟ್ಟರೂ ಇನ್ನೇನೇನೋ ಗೋಲ್‌ಮಾಲ್‌ಗಳು. ಈ ಹಂತದಲ್ಲಿ ಯೂನಿಯನ್ ಇರುವುದೇ ಒಳ್ಳೆಯದಾಯಿತೆಂದು, ಆಯಾಯ ಊರುಗಳಲ್ಲಿರುವ ಇಂತಹ ಸಂಘಟನೆಗಳು ಸ್ಥಳೀಯ ಅಧಿಕಾರಿಗಳ ಮೇಲೆ ಒತ್ತಡ ತರುವಲ್ಲಿ ಸಫಲವಾಗುತ್ತವೆಯೆಂದೂ ಸದಾಶಿವ ಹೇಳುತ್ತಿದ್ದ. ಗಂಗಾ ಹೊನ್ನೇಕೆರೆಗೆ ಕಾಗದ ಬರೆದು ಎಲ್ಲಾ ಕಾರ್ಯಕರ್ತೆಯರಿಗೂ ಈ ಬಗ್ಗೆ ತಿಳಿಸುವುದಾಗಿ ತಿಳಿಸಿದಳು. ಈ ಎಲ್ಲಾ ಚರ್ಚೆಯ ನಡುವೆಯೇ ಸದಾಶಿವ ಕೇಳಿದ 'ಯಾಕೆ ಗಂಗಾ, ಮದುವೆಯ ಬಗ್ಗೆ ಇನ್ನೂ ಯೋಚಿಸಿಯೇ ಇಲ್ಲವೇ?' ಎಂದ. ಗಂಗಾಳ ಹಲವಾರು ಕತೆಗಳನ್ನು ಓದಿದ ಸದಾಶಿವನಿಗೆ ಆಕೆಯ ಬಗ್ಗೆ ಒಂದು ರೀತಿಯ ಗೌರವಾದರಗಳಿದ್ದವು. ಆಕೆಯ ವ್ಯಕ್ತಿತ್ವದಲ್ಲಿ ಏನೋ ನಿಗೂಢತೆ ಇದೆ ಎಂದು ಆತನಿಗನಿಸುತ್ತಿತ್ತು.

ಗಂಗಾಳಿಗೆ ಈ ಮಾತುಗಳೇ ಬೇಕಿರಲಿಲ್ಲ. ಸತ್ತ ಸಾಧನಾ ಮಂಜುಗಡ್ಡೆಯಾಗಿ ಎದೆಯಲ್ಲಿ ಕೂತಿದ್ದಾಳೆ. ಸಾಧನಾಳ ಮುಖದಲ್ಲಿ ಮೂಡಿ ಬರುವ ಕರಿಭಂಡನ ಹೆಣ. ಗಂಗಾ ಪ್ರತಿಕ್ರಿಯಿಸಲಿಲ್ಲ. ಮತ್ತೆ ಸಿಕ್ಕುವುದಾಗಿ ಹೇಳಿ ಗಂಗಾ ಕಮಲೆಯನ್ನು ಹುಡುಕಿಕೊಂಡು ಹಾಸ್ಟೆಲ್‌ಗೆ ಹೋದಳು.

ಸಾಧನಾಳ ಸಾವಿನಲ್ಲಿ ಗಂಗಾಳಿಗೆ ಒಂಟಿತನದ ಭಯ ಜಾಸ್ತಿ ಆದ ಹಾಗೆ ಅನ್ನಿಸುತ್ತಿತ್ತು. ಎಲ್ಲಿ ಕೂತರೂ, ನಿಂತರೂ, ಏನು ಮಾತನಾಡಿದರೂ ಆಕೆಗೆ ಸಮಾಧಾನವಾಗುತ್ತಿರಲಿಲ್ಲ. ಬಿ.ಎಡ್. ಮೈಸೂರಿನಲ್ಲಿ ಮುಗಿಸಿದ ಹೊನ್ನೇಕೆರೆಯ ಕಮಲ ಶಿವಮೊಗ್ಗೆಯ ಹೈಸ್ಕೂಲ್ ಒಂದರಲ್ಲಿ ಕೆಲಸ ಮಾಡುತ್ತಿದ್ದಳು. ಗಂಗಾ ಕಮಲೆಯ ಜೊತೆ ಸ್ವಲ್ಪ ದಿನ ಇರಲು ನಿರ್ಧರಿಸಿದಳು. ಯಾಕೋ ಗಂಗಾಗೆ ಬೆಂಗಳೂರೇ ಬೋರ್ ಎನ್ನಿಸತೊಡಗಿತ್ತು. ಮೈಸೂರಿನಲ್ಲಿದ್ದಾಗ ಬಿ.ಎಡ್. ಮಾಡುತ್ತಿದ್ದ ಕಮಲ, ಗಂಗಾಳ ಹಳ್ಳಿನಲ್ಲಿ ಉಂಟಾದ ನ್ಯೂನ್ಯತೆಯಲ್ಲಿ ಆಕೆಯ ಅಂತರಂಗದ ನೋವನ್ನು ಹಂಚಿಕೊಂಡಿದ್ದಳು, ತಲೆ ತಟ್ಟಿ ಸಮಾಧಾನ ಮಾಡಿದ್ದಳು. ಹೊನ್ನೇಕೆರೆಯಲ್ಲಿ 'ಗೆಳತಿಯರ ಬಳಗ'ದಲ್ಲಿ ಕೂತು ಮಾತಾಡಿದ್ದಳು, ನಾಟಕ ಇತ್ಯಾದಿಗಳಲ್ಲಿ ಭಾಗವಹಿಸಿದ್ದಳು. ಹೀಗೆ ಊರಿನಲ್ಲಿ ಬಾಲ್ಯದಿಂದಲೇ ಬೆಸೆದುಕೊಂಡ ಕಮಲಳ ಸಂಬಂಧ ಮುಜುಗರದ ಸಂಬಂಧವಾಗಿರಲಿಲ್ಲ. ಗಂಗಾಳ ಕತೆಗಳ ಓದಿದ್ದ, ಗಂಗಾಳ ತಾಯಿಯ ಹುಚ್ಚು, ಸಾಧನಾಳ ಸಾವು ಎಲ್ಲದರ ಬಗ್ಗೆ ತಿಳಿದಿದ್ದ ಕಮಲ, ಗಂಗಾಳನ್ನು ಅವಳ ಪಾಡಿಗೇ ಸುಮ್ಮನಿರಲು ಬಿಟ್ಟು ಬಿಡುತ್ತಿದ್ದಳು.

ಗಂಗಾ ಸುಮ್ಮನೇ ಕುಳಿತು ಮೂರು-ನಾಲ್ಕು ವರುಷದ ಬೆಂಗಳೂರಿನ ಬದುಕನ್ನು ಕುರಿತು ಯೋಚಿಸುವಳು. ಕಳೆದುಹೋದ ಸಂಬಂಧಗಳ ಬಗ್ಗೆ ತಲೆ ಕೆಡಿಸಕೊಳ್ಳುವಳು. ಸದ್ದಿಲ್ಲದೇ ಸತ್ತ ಸಾಧನಾಳ ಸಾವಿನ ಬಗ್ಗೆ ಚಿಂತಿಸುವಳು. ಗಂಡು-ಹೆಣ್ಣಿನ ನಡುವೆ ತಾನು ಹುಡುಕುತ್ತಿರುವ ಐಡಿಯಲ್ ರಿಲೇಶನ್‌ಶಿಪ್ ಅನ್ನುವುದೇ ಒಂದು ಭ್ರಮೆ ಇರಬಹುದೇ ಎಂದುಕೊಳ್ಳುವಳು. ಮೃಗತೃಷ್ಣದ ಹಾಗೆ, ಇದೆ ಅನ್ನೋ ಹಾಗೆ ಕಾಣುತ್ತೆ, ಇದೆ ಅಂದುಕೊಂಡು ಮುಂದೆ ಸಾಗಿದರೆ ಎಷ್ಟು ದೂರ ನಡೆದರೂ ಅದು ಇರೋದಿಲ್ಲ. ಕಣ್ಣಿಗೆ ಕಾಣುತ್ತೆ ಅಂತ ಭರವಸೆಯಿಂದ ಮುಂದೆ ನಡೀತಾನೆ ಇರ್ತೀವಿ, ನಡಿಗೆಗೆ ಉತ್ಸಾಹ ತುಂಬ್ತೀವಿ, ನಡಿಗೆ ಆಶಾದಾಯಕವಾಗಿರುತ್ತೆ!

ವೆಂಕಟೇಶ್ ಯಾವಾಗ್ಲೂ ಗಂಗಾಗೆ ಹೇಳ್ತಾ ಇದ್ದ ಮಾತು ಆಕೆಗೆ ಜ್ಞಾಪಕಕ್ಕೆ ಬರುತ್ತದೆ. 'ನೀನು ಬದುಕಲ್ಲಿ ಏನೋ ಆದರ್ಶಗಳನ್ನ ಹುಡುಕ್ತಾ ಹೋಗ್ತಿ. ವ್ಯಕ್ತಿಗಳ ಜೊತೆ ಸಂಬಂಧ ಬೆಳೆಸುವಾಗ ಸಹಾ ನಿನ್ನ ಬದುಕಿನ ಫ್ರೇಮ್‌ವರ್ಕ್‌ಗೆ ಹೊಂದುವಂತಹ ಮನುಷ್ಯರಿಗಾಗಿ ಹುಡುಕ್ತಾ ಇರ್ತೀಯ. ಹಾಗೆ ಯಾಕೆ ಮನುಷ್ಯರಲ್ಲಿ ಏನೇನೋ ಹುಡುಕುತೀಯ? ಅರ್ಥ ಮಾಡಿಕೊಳ್ಳಬೇಕು ಅಂದ್ರೆ ಅವರ ಜೊತೆ involve ಆಗಿ ನೋಡಬೇಕು. Involve ಆಗಿದ್ದೂ ಅಂಟಿಕೊಳ್ಳದಂತೆ ಇರಲು ಪ್ರಯತ್ನಿಸಬೇಕು. ಮಂಜನ್ನ ತಳ್ಳಿಕೊಂಡು ಮುಂದಕ್ಕೆ ಹೋಗೋ ರೀತಿ ಬದುಕಲ್ಲಿ ಮುಂದೆ ಹೋಗ್ತಾ ಇರಬೇಕು. ಬದುಕನ್ನ ಹತ್ತಿರದಿಂದ ನೋಡೋದು ಅಂದ್ರೆ ಜನರನ್ನು ಹತ್ತಿರದಿಂದ, ವೈಯಕ್ತಿಕವಾಗಿ ಪ್ರೀತಿಸೋದನ್ನ ಕಲೀಬೇಕು. ಬದುಕಲ್ಲಿ ಏನೋ ಸಾಧಿಸೋದೇ ಒಂದು ಗುರಿ ಅಲ್ಲ, ಬದುಕೋದೆ ಒಂದು ಗುರಿ'.

ವೆಂಕಟೇಶ್ ಹೀಗೆ ಬದುಕ್ತಾನಾ ಅಂತ ಗಂಗಾ ಯೋಚಿಸುತ್ತಾಳೆ. Involve ಆಗೋದು ವೆಂಕಟೇಶನಿಗೆ ಪ್ರಾಯೋಗಿಕತೆಯಲ್ಲ, ಹುಚ್ಚೂ ಕೂಡಾ. ಪ್ರಾಯೋಗಿಕತೆ ಹುಚ್ಚಾಗಬಾರದು, ರೋಮಾಂಚಕಾರಕವಾಗ ಬಾರದು, ಇನ್ನೊಬ್ಬರನ್ನ ವಸ್ತು ಮಾಡಿಕೊಳ್ಳಬಾರದು. ಹಾಗಾದ್ರೆ ಬದುಕು ಮೌಲ್ಯ ಆಗೋಲ್ಲ, ಹತ್ತಿರ ಆಗೋಲ್ಲ, ಪ್ರೀತಿ ಆಗೋಲ್ಲ, ಕಳಕಳಿಯ ಹುಚ್ಚು ಆಗಿಲ್ಲ. ದೂರ ನಿಂತು ಪ್ರಾಯೋಗಿಕವಾಗಿ ಬದುಕನ್ನ

ಸಂಕೀರ್ಣ ಮಾಡಿಕೊಳ್ಳುತ್ತಾ, ಸಂಕೀರ್ಣತೆಯನ್ನು ರೋಮಾಂಚಕಾರಿಯಾಗಿ ಮಾಡಿಕೊಳ್ತಾ, ಬದುಕಲ್ಲಿ ಮುಂದೂ ಹೋಗದೇ, ಹಿಂದೂ ಬರದೇ ನಿಂತಲ್ಲೇ ನಿಂತು ತಲೆ ಕೆಡಿಸಿಕೊಳ್ಳೋದಾಗಿರುತ್ತೋ ಏನೋ......

ಗಂಗಾ ಕಮಲೆಯ ಹಾಸ್ಟೆಲ್ ರೂಮಲ್ಲಿ ಕೂತು ಒಬ್ಬಳೇ ಬಿಯರ್ ಕುಡಿಯುತ್ತಾ ಇದೆಲ್ಲಾ ಯೋಚಿಸುವಳು. ಇದ್ದಕ್ಕಿದ್ದ ಹಾಗೆ ತಾನು ಬಹಳ Philosophical ಆಗ್ತಾ ಇದೀನಾ ಅಂತ ಅನ್ನಿಸತೊಡಗಿತ್ತು ಆಕೆಗೆ. ಹೀಗೆ ಎಷ್ಟು ಹೊತ್ತು ಕುಡಿಯುತ್ತಾ ಕುಳಿತಿದ್ದಳೋ ಆಕೆಗೇ ತಿಳಿದಿರಲಿಲ್ಲ. ಮಡಿಲಲ್ಲಿದ್ದ, ದಕ್ಕಿಸಿಕೊಳ್ಳಲಾಗದ ಬದುಕಿನ ಸತ್ಯಗಳು ಗಂಗಾಳಿಂದ ಈಚೆ ಬಂದದ್ದು ಕುಡಿದು ಮತ್ತೇರಿದಾಗ, ಮತ್ತೆ ವಾಂತಿಯಾಗಿ ಹೊಟ್ಟೆಯಲ್ಲಿದ್ದ ಚೂರು ಪಾರು ಅನ್ನ, ಬ್ರೆಡ್‌ಗಳು ಈಚೆ ಬಂದಾಗ. ಕಮಲ ರೂಮಿಗೆ ಬಂದಾಗ ಗಂಗಾ ವಾಂತಿ ಮಾಡಿದ್ದೆಲ್ಲ ಹಾಗಾಗಿಯೇ ಇತ್ತು. ಗಂಗಾ ನೆಲದ ಮೇಲೆಯೇ ಮಲಗಿ ನಿದ್ದೆ ಮಾಡಿ ಬಿಟ್ಟಿದ್ದಳು. ಕಮಲಳಿಗೆ ದಿಗ್ಭ್ರಮೆಯಾಯಿತು. ನೊಣ ಗೊಯ್ ಎನ್ನುತ್ತಿದ್ದವು. ಒಮ್ಮೆಲೇ ಗಂಗಾಳ ಕೈ ಮುಟ್ಟಿ ನೋಡಿದಳು. ಮನಸ್ಸಿಗೆ ಸಮಾಧಾನವಾಯಿತು. 'ಏನಾಯಿತು ಈ ಗಂಗಾಗೆ!' ಎಂದುಕೊಂಡಳು. ಎಂತಹ ಸಂಕಟ/ಕಷ್ಟದಲ್ಲಿಯೂ ಕೂಡಾ ಗಂಗಾ ಎಂದೂ ಹೀಗೆ ತನ್ನನ್ನು ತಾನು ಕಳೆದುಕೊಂಡಿದ್ದನ್ನು ಕಮಲ ಕಂಡವಳಲ್ಲ. ಈಗ ಗಂಗಾ ಹೊಟ್ಟೆಯಲ್ಲಿನ ಸಂಕಟವನ್ನೆಲ್ಲ ಜೀರ್ಣಿಸಿಕೊಳ್ಳಲೆಂಬಂತೆ ಎಲ್ಲಾ ವಾಂತಿ ಮಾಡಿ ಮಲಗಿದ್ದಾಳೆ. ಶಾಂತವಾಗಿ ಎನ್ನುವಂತೆ ನಿದ್ರಿಸುತ್ತಿದ್ದಾಳೆ. ಕಮಲ ಅವಳನ್ನು ಎಚ್ಚರಿಸುವ ಗೋಜಿಗೇ ಹೋಗಲಿಲ್ಲ. ಗಂಗಾಳ ಹೆಸರಿಗೆ ಸದಾಶಿವ ಕೊಟ್ಟ ಪತ್ರವೊಂದನ್ನು ಪಕ್ಕದ ಟೇಬಲ್ ಮೇಲೆ ಇಟ್ಟು ಕಮಲ ಗಂಗಾಳಿಗೆ ಎಚ್ಚರವಾಗದಂತೆ ನಿಧಾನವಾಗಿ ಕೊಠಡಿ ಸ್ವಚ್ಛ ಮಾಡತೊಡಗಿದಳು. ಯಾವಾಗಲೂ ಬದುಕನ್ನು ನಮ್ಮ ಹಿಡಿತಕ್ಕೆ ತೆಗೆದುಕೊಳ್ಳಬೇಕು, ಹಾಗೆ ಹಿಡಿತ ತಪ್ಪಿದರೆ ನಮ್ಮ ಜೀವನವೆಲ್ಲವೂ ದುರಂತವೇ ಎನ್ನುತ್ತಿದ್ದ ಗಂಗಾ ಹೀಗೆ ಪ್ರಜ್ಞೆ ತಪ್ಪುವವರೆಗೆ ಕುಡಿದದ್ದಾದರೂ ಯಾಕೆ?

ರಾತ್ರಿ ಹತ್ತು ಘಂಟೆಯಾದರೂ ಗಂಗಾ ಹಾಗೆಯೇ ಮಲಗಿಯೇ ಇದ್ದಳು. ಕಮಲೆಗೂ ಆಕೆಯನ್ನು ಎಬ್ಬಿಸುವ ಮನಸ್ಸಾಗಲೇ ಇಲ್ಲ. ಕೊನೆಗೆ ಒಂದು ತುತ್ತು ತಿಂದು ಮಲಗಲಿ ಎಂದು ಆಕೆಯನ್ನು ಎಬ್ಬಿಸಿದಳು. ಇಬ್ಬರೂ ಏನನ್ನೂ ಮಾತನಾಡಲೇ ಇಲ್ಲ. ತನ್ನನ್ನು ಎಬ್ಬಿಸದೇ ಕೊಠಡಿಯೆಲ್ಲ ಸ್ವಚ್ಛ ಮಾಡಿ ಈಗ 'ಒಂದು ತುತ್ತು ಅನ್ನ ತಿಂದು ಮಲಗು' ಎಂದು ಒತ್ತಾಯ ಮಾಡಿ ತಟ್ಟೆ ಹಿಡಿದ ಕಮಲೆ ಬಗ್ಗೆ ಎದೆ ತುಂಬಿ ಬಂತು. ಗಂಗಾಳ ಊಟ ಆದ ಮೇಲೆ ಕಮಲ ಸದಾಶಿವನ ಪತ್ರವನ್ನು ಗಂಗಾಳ ಕೈಯಲ್ಲಿಟ್ಟಳು. ಗಂಗಾಗೆ ಆಶ್ಚರ್ಯವಾಯಿತು. ಪತ್ರ ಬರೆಯುವಂತಹ ವೈಯಕ್ತಿಕವಾದರೂ ಏನು? ಯಾಕೋ ಏನನ್ನೂ ತಲೆಗೆ ಹಚ್ಚಿಕೊಳ್ಳುವ ಮನಸ್ಸಾಗದೇ ಗಂಗಾ ಬ್ಯಾಗಿನಲ್ಲಿ ಪತ್ರವನ್ನು ಇಟ್ಟುಕೊಂಡಳು. ಮರುದಿನ ಬೆಳಿಗ್ಗೆಯೇ ಬ್ಯಾಗಿನೊಂದಿಗೆ ಬೆಂಗಳೂರಿಗೆ ಹೊರಟು ನಿಂತ ಗಂಗಾಳನ್ನು ಕಂಡಾಗ ಕಮಲೆಯ ಕಣ್ಣಲ್ಲಿ ನೀರಾಡಿತ್ತು.

* * * *

ಸದಾಶಿವ ಪತ್ರದಲ್ಲಿ ತನ್ನ ವೈಯಕ್ತಿಕ ಜೀವನ ಬಿಚ್ಚಿಟ್ಟಿದ್ದನು. ಬಿಚ್ಚಿಕೊಳ್ಳುತ್ತಿರುವ ಉದ್ದೇಶವನ್ನೂ ಮೊದಲೇ ಹೇಳಿಬಿಟ್ಟಿದ್ದ. ಗಂಗಾಳಿಗೆ ತನ್ನನ್ನು ಮದುವೆಯಾಗುವ ಸಾಧ್ಯತೆಯ ಬಗ್ಗೆ ಕೇಳಿ ಹೆಚ್ಚು ಸರಳವಾಗಿಯೇ ಬರೆದ ಪತ್ರ ಅದು. ಸದಾಶಿವನ ವೈಯಕ್ತಿಕ ಜೀವನದ ಬಗ್ಗೆ ಗಂಗಾಳಿಗೆ ಏನೂ ತಿಳಿದಿರಲಿಲ್ಲ. ಆಕೆಯ ತಲೆಯಲ್ಲಿ ಆತನ ವಿಚಾರವನ್ನು ತಂದುಕೊಂಡವಳೂ ಅಲ್ಲ. ಬೇಡ ಎಂದರೂ, ದೂರ ಸರಿಸಿದಷ್ಟೂ ಸಂಬಂಧಗಳೇಕೆ ತನಗೆ ಹೀಗೆ ಅಂಟಿಕೊಳ್ಳುತ್ತವೆ ಎಂದು ಗಂಗಾಗೆ ಒಮ್ಮೆ

ಗಾಭರಿಯಾಯಿತು. ಬಾಲು ಅಲೆಮಾರಿ ಜೀವನದಲ್ಲಿ ನೈತಿಕ ಮೌಲ್ಯದ ಪ್ರಶ್ನೆಯನ್ನು ತನ್ನ ಎದೆಯಲ್ಲಿ ಬಿಟ್ಟು ಹೋಗಿದ್ದಾನೆ. ವೆಂಕಟೇಶ್/ರೋಜಾರ ಪ್ರಶ್ನೆಗಳಿಗೆ ಮುಖಾಮುಖಿಯಾಗಿ ವಿರೋಧವಾದ ಸತ್ಯಗಳನ್ನೇ ಗಂಗಾ ಕಂಡುಕೊಂಡಿದ್ದಾಳೆ. ಈಗ ತಾನು ನಂಬಿದ್ದೇ ಸತ್ಯ ಎನ್ನುವ ಯಾವ ವಿಶ್ವಾಸವೂ ಆಕೆಯಲ್ಲಿ ಉಳಿದಿಲ್ಲ. ಗಂಡು-ಹೆಣ್ಣಿನ ಸಂಬಂಧದ, ಲೈಂಗಿಕತೆಯ ಪ್ರಶ್ನೆಗೆ ಸುತ್ತಿ ಹಾಕಿಕೊಳ್ಳದೇ ತನ್ನನ್ನು ತೊಡಗಿಸಿಕೊಳ್ಳುವ ಮಾಧ್ಯಮಗಳ ಹುಡುಕುವಿಕೆಯಲ್ಲಿ ಕಳೆದುಹೋದ ಮುಗ್ಧತೆ ಭರಿಸಲೆಂಬ ಆಸೆ ಹೊತ್ತೇ ಆಕೆ ಹೊನ್ನೇಕೆರೆಗೆ ಹೋದದ್ದು. ಆದರೆ ನಶಿಸಿಹೋದ ಮುಗ್ಧತೆಯ ನೋವಿನ ಗೂಡೊಂದನ್ನು ಹೃದಯದಲ್ಲಿ ಕಟ್ಟಿಕೊಂಡು ಹೊನ್ನೇಕೆರೆಯಿಂದ ಮರಳಿ ಬಂದಿದ್ದಳು. ಸದಾಶಿವ ತನ್ನ ವೈಯಕ್ತಿಕ ಬದುಕಿನ ಬಗ್ಗೆ ನೋವಿನಿಂದ ಬರೆದುಕೊಂಡಿದ್ದ. ತಾನು ಗಂಗಾಳಿಗಿಂತ 8-9 ವರ್ಷಕ್ಕೆ ದೊಡ್ಡವನಿರಬೇಕೆಂದು ಅವನು ಊಹಿಸಿದ್ದ. ತಾನು ಬೆಳೆಯುವಾಗ ಮನೆಯಲ್ಲಿ ಇದ್ದ ಬಡತನ, ಎಷ್ಟೋ ವರ್ಷಗಳು ಪರದಾಡಿ, ಮಧ್ಯೆ ಮಧ್ಯೆ ನಿಲ್ಲಿಸಿ ತಾನು ಬಿ.ಎ. ಮುಗಿಸಿದ್ದು ಇಂತಹ ಯಾತನೆಯನ್ನೆಲ್ಲ ವಿವರವಾಗಿ ಬರೆದಿದ್ದ. ಐದು ವರ್ಷಗಳ ಹಿಂದೆ ಆತನಿಗೆ ಇಷ್ಟವಿಲ್ಲದ ಹುಡುಗಿಯೊಡನೆ ಆತನಿಗೆ ಮದುವೆಯಾದದ್ದು, ಮಾನಸಿಕವಾಗಿ ಹತ್ತಿರವಾಗದ ಆಕೆಯೊಡನೆ ಸಂಸಾರ ಮಾಡಲಾಗದಿದ್ದುದು, ದೈಹಿಕವಾಗಿ ಇನ್ನಾರೊಡನೆಯೋ ಸಂಬಂಧ ಹೊಂದಿದ ಆಕೆ, ಎಲ್ಲಿಯೋ ಹೋಗಿ ಆತ್ಮಹತ್ಯೆ ಮಾಡಿಕೊಂಡುದುದು ಇವೆಲ್ಲ ಬರೆದಿದ್ದ. ಸದಾಶಿವ ಇಷ್ಟರವರೆಗೆ ತಾನು ಮದುವೆಯ ಬಗ್ಗೆ ಯೋಚಿಸಿರಲಿಲ್ಲವೆಂದೂ, ಗಂಗಾಳಿಗೆ ತನ್ನನ್ನು ಮದುವೆಯಾಗಲು ಅಭ್ಯಂತರವಿದೆಯೇ? ಗಂಗಾ ಇಷ್ಟಪಟ್ಟರೆ ತುಂಬಾ ಸರಳವಾಗಿ ಮದುವೆಯಾಗಬಹುದು ಎಂದು ಸೂಚಿಸಿ ಸರಳವಾಗಿ, ನೇರವಾಗಿ ಬರೆದ ಪತ್ರ ಅದು. ಗಂಗಾ ಒಂದು ಕ್ಷಣ ಮನಸ್ಸಿನೊಳಗೇ ನಕ್ಕಳು. ಯಾವುದೇ ಆದರ್ಶ, ಕ್ರಾಂತಿ ಅಂತ ಮಾತನಾಡದೇ ಬೆಂಗಳೂರಿನ ಗೊಂದಲಮಯ ಬದುಕಿನ ದ್ವಂದ್ವಗಳನ್ನು ಒಳಗೊಳ್ಳದ ಸದಾಶಿವನನ್ನು ಮದುವೆಯಾಗಿ ಬಿಟ್ಟರೆ ಹೇಗೆ? ಎಂದು ಯೋಚಿಸಿದಳು. ಯಾಕೋ ಆ ಯೋಚನೆಯೇ ವಾಸ್ತವಿಕತೆಯ ಬುಡವಿಲ್ಲದ ರೊಮ್ಯಾಂಟಿಕ್ ಆಲೋಚನೆ ಎನ್ನಿಸತೊಡಗಿತು. ಮದುವೆಯ ಸಂಬಂಧ ಖುಷಿ ಕೊಡುತ್ತದೆ ಎಂಬ ಸತ್ಯವನ್ನು ನಂಬುವ ಮನಸ್ಸು ಗಂಗಾಳದಾಗಿರಲಿಲ್ಲ. ಕುದುರೆಯ ಬಾಲ ಹಿಡಿದುಕೊಂಡು ಓಡುವಂತೆ ಬದುಕಿನ ತೀವ್ರ ಗತಿಯ ಲಯಗಳನ್ನು ಶೋಧಿಸುತ್ತಾ ಹೊರಟ ತಾನು ಸದಾಶಿವನಂತಹ ವ್ಯಕ್ತಿಯೊಡನೆ ಮದುವೆಯಾಗಿ ಬದುಕಲು ಸಾಧ್ಯವಾಗುತ್ತದೆಯೇ ಎಂಬ ಪ್ರಶ್ನೆ ಗಂಗಾಳ ಎದುರಿಗಿತ್ತು. ಆಕೆಯ ಬಗ್ಗೆ ಆಕೆಗೇ ಅನುಮಾನ. ಬೌದ್ಧಿಕ ಲಯಗಳಲ್ಲಿ ಬದುಕನ್ನು ಹಿಡಿಯ ಬಯಸುವ, ಶೋಧಿಸ ಬಯಸುವ ತಾನು ಸದಾಶಿವನಂತಹ ವ್ಯಕ್ತಿಯೊಡನೆ ನೆಮ್ಮದಿಯಾಗಿ ಇರಬಲ್ಲೆನೇ? ಅಥವಾ ಆತನನ್ನಾದರೂ ನೆಮ್ಮದಿಯಿಂದ ಬದುಕಲು ಬಿಡುತ್ತೇನೆಯೇ? ಸಾಧನಾಳ ಸಾವಿನಲ್ಲಿ ಶಾಂತಿ ಬಯಸಿ, ಅಥವಾ ತನಗೆ ಈಗಿರುವ ತುಮುಲ/ಘರ್ಷಣೆಗಳ ಸಂದರ್ಭದಲ್ಲಿ ಸದಾಶಿವನಿಗೆ ಮದುವೆಯಾಗಿ ಬಿಡುತ್ತೇನೆ ಎಂದು ಹೇಳಿಬಿಡಬಹುದು. ಆದರೆ ನಿತ್ಯ ಬದುಕಿನಲ್ಲಿ?

ಇಂತಹ ಯೋಚನೆಗಳು ಕಾಡಿದಾಗ ಗಂಗಾ ಸದಾಶಿವನ ಪತ್ರಕ್ಕೆ ಉತ್ತರಿಸುವ ಗೋಜಿಗೇ ಹೋಗಲಿಲ್ಲ. ಬೆಂಗಳೂರಿನಲ್ಲಿ ಸ್ತ್ರೀ ಮುಕ್ತಿ ಸಂಘಟನೆಯ ಚಟುವಟಿಕೆಗಳಲ್ಲಿ ತನ್ನನ್ನು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳ ತೊಡಗಿದಳು. ಸದಾಶಿವನ ಪತ್ರಕ್ಕೆ ಉತ್ತರಿಸುವ ವ್ಯವಧಾನದ ಮನಸ್ಸನ್ನು ತಾನು ಹೊಂದಿಲ್ಲ ಎಂಬುದು ಆಕೆಗೇ ಅರ್ಥವಾಗಿತ್ತು. ಕುಡಿದಷ್ಟೂ ಜೀರ್ಣವಾಗದೇ ಸಾಧನಾಳ ಸಾವು ಉಂಡೆ, ಉಂಡೆಯಾಗಿ ಹೊಟ್ಟೆಯಲ್ಲಿ ಉಳಿದುಕೊಂಡುಬಿಟ್ಟಿದೆ ಎಂದು ಆಕೆಗೆ ಅನ್ನಿಸುತ್ತಿತ್ತು. ವೆಂಕಟೇಶ, ಆತನ ಹೆಂಡತಿ ರೋಜಾಗೆ ಮುಖಾಮುಖಿಯಾದಾಗಿನ ಸತ್ಯದ ಹೊಳವುಗಳು ಗವ್ ಎನ್ನುತ್ತಾ ಕತ್ತಲೆಯಲ್ಲಿ ಎಲ್ಲಿಯೋ ಮನೆ ಮಾಡಿದಂತೆ ಮನದ ಒಳಗೆಲ್ಲೋ ಮನೆ ಮಾಡಿವೆ. ವೆಂಕಟೇಶ ಇತಿಹಾಸದ ಬಗ್ಗೆ ಮಾತನಾಡುತ್ತಾನೆ.

ಹಲವಾರು ವರ್ಷಗಳ ಇತಿಹಾಸ ಬೇರೆಯದೇ ಆಗಿರಬೇಕು ಎಂದು ಆತ ಯಾವಾಗಲೂ ಹೇಳುತ್ತಾನೆ. ಇಲ್ಲಿಯವರೆಗೆ ಇತಿಹಾಸ ಬರೆದವರೆಲ್ಲ ಮಾತು ಬಲ್ಲ, ಬರಹ ಬಲ್ಲ ಜನ. ಮೌನವಾಗಿರುವವರ ಇತಿಹಾಸವೇ ಬೇರೆ ಇದೆ, ಮೂಕ ಜನರ ಇತಿಹಾಸ ಹಿಡಿದಿಡಬೇಕು ಎಂದು ಒಡಾಡುತ್ತಾನೆ. ಹೀಗೆ ಇತಿಹಾಸ ಹಿಡಿದಿಡಬೇಕು ಎನ್ನುವ ಗೆಳೆಯ ಆ ಕ್ಷಣಗಳಲ್ಲಿ ತಾನೇನು ಯೋಚಿಸಿದ್ದೆ ಎಂದು ಜ್ಞಾಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುತ್ತಾನೆ. ಬರೆಯುವ ಸಾಧ್ಯತೆಗಳಲ್ಲಿ ಒಟ್ಟು ಬದುಕನ್ನು ಹೀಗೇ ಎಂದು ಅರ್ಥೈಸಬಹುದೇ ಹೊರತು ಆ ಕ್ಷಣಗಳಲ್ಲಿ ಬದುಕಿದ ಸತ್ಯವನ್ನಲ್ಲ ಎನ್ನುತ್ತಾನೆ. ಐದಾರು ವರ್ಷಗಳ ತೀವ್ರ ಬದುಕಿನ ಕ್ಷಣಗಳನ್ನೇ ಹಿಡಿದಿಡಲು ಸಾಧ್ಯವಾಗದ ವೆಂಕಟೇಶನಿಗೆ ಸಾವಿರಾರು ವರ್ಷಗಳ ಜನರ ಬದುಕಿನ ಇತಿಹಾಸಕ್ಕೆ ಧ್ವನಿ ಆಗುತ್ತೇನೆ ಎನ್ನುವುದು ಎಷ್ಟು ಸತ್ಯ? ಇದು ಸಾಧ್ಯವೇ? ಆಡಿದ ಮಾತು, ಅನ್ನಿಸಿದ ಕ್ಷಣಗಳ ಅನ್ನಿಸಿಕೆಗಳ ಸತ್ಯವೇ ಕೈಗೆಟುಕದಿರುವಾಗ, ಸಾವಿರಾರು ವರ್ಷಗಳ ಬದುಕಿನ ಇತಿಹಾಸದ ಅರ್ಥವಿವರಣೆಯನ್ನು ನಂಬುವುದು ಹೇಗೆ? ಇಂತಹ ತಾಕಲಾಟಗಳೇ ಗಂಗಾಳ ಮನಸ್ಸನ್ನು ಸೂರೆಗೊಳ್ಳತೊಡಗಿದ್ದವು. ಗಂಗಾ ಸಾಧನಾಳ ಸಾವಿನಲ್ಲಿ ಒಂದು ನಿರ್ಲಿಪ್ತತೆಯ ಭಾವ ಬೆಳೆಸಿಕೊಳ್ಳತೊಡಗಿದ್ದಳು. ತಾರುಣ್ಯದ ಕನಸುಗಳು ಎಲ್ಲೆಲ್ಲಿಯೋ ಹರಿದು ಹಂಚಿ ಹೋಗಿರುವವೇನೋ ಎಂದು ಕೊರಗು ಕಾಡುತ್ತಿತ್ತು. ಎಲ್ಲಾ ಸಂಬಂಧಗಳಲ್ಲಿ ತಾನು ಕಂಡ ಲೈಂಗಿಕತೆಯ ಸತ್ಯಗಳಾದರೂ ಏನು? ಬಾಲು ಬೆತ್ತಲೆಯಾಗಿ ಬಿಸಿಯಾದ ಮೈಯನ್ನು ಅಪ್ಪಿದ್ದನೇ ಹೊರತು, ತನ್ನ ದೇಹದ ಲಯಗಳಲ್ಲಿ ಯಾವ ಮಧುರ ಸ್ವರವನ್ನೂ ಹೊರಡಿಸಿರಲಿಲ್ಲ. ರವಿ ಜೊತೆಗೆ ಗಂಗಾ ಬೆತ್ತಲೆಯಾಗದೇ ಚುಂಬನದ, ಅಪ್ಪುಗೆಯ ಸುಖ ಕಂಡಿದ್ದಳು. ಬಾಲು ಬೆತ್ತಲೆಯಾಗಿಯೂ ಲೈಂಗಿಕ ಸುಖ ಹೇಳಿಕೊಡಲಾಗದ ಸ್ಥಿತಿಯಲ್ಲಿ ಒದ್ದಾಡಿದಾಗ ಗಂಗಾ ಶಾಂತಳಾಗಿಯೇ ವರ್ತಿಸಿದ್ದಳು. ಸಂಭೋಗದ ಸುಖದ ಲಯಗಳೇ ಗೊತ್ತಿರದ ದೇಹಕ್ಕೆ ಆಗ ಅಂತಹ ಆತಂಕಗಳು ಕಾಡಿದ್ದೇ ಇಲ್ಲ. ತಾಯ್ತನದ ಮಮತೆಯಿಂದೆಂಬಂತೆ ಆಕೆ ವರ್ತಿಸಿದ್ದಳು. ಆ ಮೂಲಕ ತನ್ನ ವ್ಯಕ್ತಿತ್ವದ ಹಿರಿಮೆ ಕಾಯ್ದುಕೊಳ್ಳಲು ಪ್ರಯತ್ನಿಸಿದೆನೇನೋ ಎಂದು ಗಂಗಾಳಿಗೇ ಅನುಮಾನ. ವೆಂಕಟೇಶ? ತನಗೆ ಸೋಲೇ ಇಲ್ಲ ಎನ್ನುವ ಹಮ್ಮನ್ನು ಗಂಗಾ ಇವನಲ್ಲಿ ಗಮನಿಸಿದ್ದಳು. ಈ ಅಹಂನ ಮನುಷ್ಯನ ದೇಹದ ಲಯಗಳಲ್ಲಿ ಗಂಗಾಳ ದೇಹ, ಮನಸ್ಸು ಎರಡೂ ಬಿಚ್ಚಿಕೊಂಡಿರಲಿಲ್ಲ. ಆ ಕ್ಷಣದ ರೋಚಕತೆ, ರೋಮಾಂಚನ, ಮಾದಕತೆಗೆ ಮಾತ್ರ ಈತ ತೆರೆದುಕೊಳ್ಳುವವ ಎನ್ನಿಸಿದಾಗ ಮನಸ್ಸು ಸಂಕುಚಿತಗೊಂಡ ಹಾಗೆ ದೇಹವೂ ಸಂಕುಚಿತಗೊಂಡಿತ್ತು. ಇಷ್ಟಿಷ್ಟು ಹಿಡಿಯಾಗಿ ಬಿಡುವಳು ಗಂಗಾ. ಮನಸ್ಸಿನ ಕುಗ್ಗುವಿಕೆಯಲ್ಲಿ ದೇಹವೂ ಕುಗ್ಗಿಬಿಡುತ್ತಿತ್ತು. ಮಲಗಿ ಎದ್ದರೆ ವೆಂಕಟೇಶ ತನ್ನ ದೇಹದಲ್ಲಿ ತುಂಬಿಬಿಡುತ್ತಿದ್ದುದು ನೋವಿನ ಲಯಗಳನ್ನು ಮಾತ್ರ. ಈ ನೋವಿನ ಲಯಗಳು ಇಡಿಯ ದೇಹದ ಲಯಗಳನ್ನೇ ಆವರಿಸಿಕೊಂಡುಬಿಡುತ್ತಿದ್ದವು. ಎದ್ದಾಗ ವೆಂಕಟೇಶನ ಮಡಿಲಲ್ಲಿ ತಲೆ ಇಡಬೇಕು ಎಂದು ಅನ್ನಿಸುತ್ತಿರಲಿಲ್ಲ. ಅವನ ಕೈ ತಲೆದಿಂಬು ಮಾಡಿಕೊಂಡು ಮಗುವಿನ ರೀತಿ ಅವನ ಎದೆಯ ಮೇಲೆ ತಲೆ ಇಡಬೇಕು ಎನ್ನಿಸುತ್ತಿರಲಿಲ್ಲ. ಇಡಿಯ ದೇಹದ ನೋವಿನ ಲಯಗಳಲ್ಲಿ ಎದ್ದು ಬಾತ್‌ರೂಂಗೆ ಹೋದರೆ ಹೊಟ್ಟೆ ತೊಳಸಿದಂತಾಗಿ ಇಡಿಯ ಮೈಯಿನ ನೋವೆಲ್ಲ ವಾಂತಿಯಾಗಿ ಈಚೆ ಬರಬಹುದೇನೋ ಎನ್ನುವಷ್ಟು ಸಂಕಟವಾಗುತ್ತಿತ್ತು. ವೆಂಕಟೇಶ ಯಾವಾಗಲೂ ಹೇಳುತ್ತಿದ್ದ, 'ನಿನ್ನ ego ನಿನ್ನ ಮನಸ್ಸನ್ನು ಮಾತ್ರವಲ್ಲ, ನಿನ್ನ ಮೈಯನ್ನೂ ಸಂಕುಚಿತಗೊಳಿಸಿಬಿಡುತ್ತೆ. ನಿನ್ನ ದೇಹ, ಮನಸ್ಸುಗಳಿಗೆ ಸ್ಪಂದಿಸುವ ಗೆಳೆಯನನ್ನು ನೀನೇ ಕಂಡುಕೊಳ್ಳಬೇಕಷ್ಟೇ!' ಈ ವಾಕ್ಯಗಳನ್ನು ವೆಂಕಟೇಶ್ ಪ್ರತಿ ಸಲ ಮಲಗಿ ಎದ್ದಾಗಲೂ ಗಂಗಾಗೆ ಹೇಳುತ್ತಾನೆ. ಆಗೆಲ್ಲ ಅವನ ಬಗ್ಗೆ ಗಂಗಾಳಿಗೆ ಪ್ರೀತಿ ಎನಿಸುತ್ತದೆ. 'ನೀನಿನ್ನೂ ಚಿಕ್ಕ ಹುಡುಗಿ, ನಿನ್ನ ದೇಹದ ಲಯಗಳನ್ನು ನೀನೇ assert ಮಾಡಿಕೊಳ್ಳುವುದನ್ನು ಕಲಿಯಬೇಕು ಹುಡುಗೀ ನೀನು' ಎನ್ನುವನು.

ವೆಂಕಟೇಶ್ ಮೈಯಿನ ಸಂಬಂಧದಲ್ಲಿ ಅಲ್ಲದಿದ್ದರೂ ಮನಸ್ಸಿನ ಸಂಬಂಧದಲ್ಲಿ ಕೆಲವೊಮ್ಮೆ ಬೆಚ್ಚಗೆ ಎಂದು ಗಂಗಾಳಿಗೆ ತೋರುತ್ತಿತ್ತು. ಗಂಗಾ ಈಗ ವೆಂಕಟೇಶನನ್ನು ಭೇಟಿಯಾಗುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದಳು. ಕೆಲವು ಬಾರಿ ಅವನ ಜೊತೆ ಕುಳಿತು ಗಂಟೆಗಟ್ಟಲೆ ಮಾತನಾಡಬೇಕು ಅನ್ನಿಸುತ್ತಿತ್ತು. ಆದರೆ ಅವನ ಜೊತೆ ಸುರುಳಿ ಸುತ್ತಿ ಹಾಕಿಕೊಂಡಿರುವ ಅವನ ಹೆಂಡತಿಯ ಪ್ರಶ್ನೆಗಳಿಗೆ ತಾನು ಉತ್ತರವಾಗಬೇಕಾದೀತೇನೋ ಎಂಬ ಹೆದರಿಕೆಯಿಂದ ಗಂಗಾ ಸುಮ್ಮನಾಗಿಬಿಡುವಳು. ಬದುಕು ಏನೇನೋ ಸತ್ಯಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿದೆ. ಯಾರದೂ ಸತ್ಯ ಎನ್ನುವ ಹಾಗೆ ಇರುವುದಿಲ್ಲ. ಯಾವುದನ್ನೂ ಸುಳ್ಳು ಎನ್ನುವ ಹಾಗೆ ಇರುವುದಿಲ್ಲ. ಗಂಗಾಗೆ ಬೆಂಗಳೂರಿನ ಬದುಕು confusing ಆಗಿ ಕಾಣತೊಡಗಿತ್ತು. ಈಗ ತನ್ನ ಮನಸ್ಸಿನ ಸತ್ಯ ಏನು ಎಂದು ಆಕೆಗೆ ಮರೆತು ಹೋಗತೊಡಗಿತ್ತು. ಕುಟುಂಬದ ಬಗ್ಗೆ ಮಾತನಾಡುವಾಗಲೆಲ್ಲಾ ಗಂಗಾಗೆ ಅನಿಸುತ್ತಿದ್ದುದು ಹೀಗೆ. ನಾವು ಬಂಡವಾಳ ಸಮಾಜದ ಬಗ್ಗೆ ಮಾತನಾಡುತ್ತೇವೆ, ಈ ಕೆಲಸ ಹೆಂಗಸರನ್ನು ಎರಡು ಬಗೆಯಾಗಿ ಶೋಷಿಸುತ್ತದೆ ಎನ್ನುತ್ತೇವೆ. ಮನೆಗೆಲಸ ಹೆಂಗಸಿನ ಜವಾಬ್ದಾರಿಯಾಗಿದ್ದು ಎರಡೂ ಕಡೆ ದುಡಿಯುವ ಹೊರೆ ಹೆಣ್ಣಿಗೆ ಅನಿವಾರ್ಯ ವಾಗುತ್ತಿದೆ ಎನ್ನುತ್ತೇವೆ. ಬಂಡವಾಳಶಾಹಿ ಸಮಾಜ ಹೆಣ್ಣನ್ನು ಸೊತ್ತು ಎಂದು ಭಾವಿಸುತ್ತದೆ ಎನ್ನುತ್ತೇವೆ. ಪಾವಿತ್ರ್ಯತೆಯ ಸೋಗಿನಲ್ಲಿ ಅವಳನ್ನು ಒಬ್ಬರಿಗೆ ಬಂಧಿಸುವ, ಕುಟುಂಬದ ರಿಪ್ರೊಡಕ್ಟಿವಿಟಿಯಲ್ಲಿ ಭಾಗಿಯಾಗಿರುವಂತೆ ಮಾಡಿದೆ ಎನ್ನುತ್ತೇವೆ. ಬಂಡವಾಳಶಾಹಿ ಸಮಾಜದಿಂದ ಸಮಾಜವಾದದತ್ತ ಸಾಗಿದಾಗ ಮಹಿಳೆಯರು ಕೆಲಮಟ್ಟಿಗೆ ಸಾಮಾಜಿಕ ಹೊರೆಗಳಿಂದ ತಪ್ಪಿಸಿಕೊಂಡರೂ ಮಾನಸಿಕ ದಾಸ್ಯ?

ವೆಂಕಟೇಶ್ ಹೇಳುತ್ತಾನೆ, 'ನೀವು ಮಹಿಳಾ ಚಳುವಳಿಯಲ್ಲಿ ಸ್ವಾತಂತ್ರ್ಯ ಅಪೇಕ್ಷಿಸುತ್ತೀರಿ. ಜೊತೆಗೇನೇ ನಿಮ್ಮನ್ನು ನೀವೇ ಬಗೆದು ನೋಡಿಕೊಂಡರೆ ಪಿತೃಪ್ರಧಾನ ಮೌಲ್ಯಗಳಲ್ಲಿರುವ ಸವಲತ್ತುಗಳನ್ನೂ ಅಪೇಕ್ಷೆ ಪಡುತ್ತೀರಿ. ನಿಮ್ಮನ್ನೇ ತಡಕಾಡಿಕೊಂಡರೆ ಈ ಸತ್ಯ ನಿಮಗೇ ಅರ್ಥವಾದೀತು! ಹೀಗೆ ಪಿತೃಪ್ರಧಾನ ಮೌಲ್ಯದ ಸವಲತ್ತುಗಳನ್ನು ಅಪೇಕ್ಷಿಸುತ್ತಲೇ ಸ್ವಾತಂತ್ರ್ಯದ ಕಲ್ಪನೆಯ ಕುರಿತು ಮಾತನಾಡುತ್ತೀರಿ. ಭಾವನಾತ್ಮಕವಾಗಿರೋ ಪ್ರಶ್ನೆಗೆ ಬಂದರೆ ಭಾರತದಲ್ಲಿನ ಚರಿತ್ರೆ ನೋಡಿ. ಸಾಮಾಜಿಕವಾಗಿರೋ ಶೋಷಣೆ ಬಗ್ಗೆ ಅಲ್ಲ ನಾನು ಮಾತನಾಡ್ತಾ ಇರೋದು, ಮಾನಸಿಕ ಸಂಬಂಧದ ಬಗ್ಗೆ. ಗಂಡು ದೇವತೆಗಳ ಹಾಗೆ ಹೆಣ್ಣು ದೇವತೆಗಳೂ ಇಲ್ಲಿ ಇದ್ದಾರೆ. ಪಾರ್ವತಿ/ಶಿವ ಸಂಬಂಧ ಯಾವ ರೀತಿಯದು? ಕೃಷ್ಣ-ರಾಧೆಯರ ಸಂಬಂಧ ಯಾವ ರೀತಿಯದು? ಈ ರೀತಿಯ ಭಾವನಾತ್ಮಕ ಸಂಬಂಧಗಳನ್ನು ಮಾನಸಿಕ ಹಂತದಲ್ಲಿ ಪುರುಷ-ಸ್ತ್ರೀ ಸಂಬಂಧದಲ್ಲಿ ಉಳಿಸಿಕೊಂಡೂ ನೀವು ಸಾಮಾಜಿಕ ಶೋಷಣೆಯ ಬಗ್ಗೆ ಮಾತನಾಡಬಲ್ಲಿರಾದರೆ ಬದುಕಿನ ಇತರ ಸತ್ಯಗಳೂ ನಿಮಗೆ ಅರ್ಥವಾಗುತ್ತದೆ. ಆದರೆ ಬಂಡವಾಳಶಾಹಿ ಸಮಾಜದ ವಿರುದ್ಧ ಮಾತನಾಡುತ್ತಲೇ, ಹೊಸ ಸಮಾಜದ ಕನಸು ಕಟ್ಟುತ್ತಲೇ ನೀವು ಸಾಗುವುದು ಪುರುಷಪ್ರಧಾನ ಸಮಾಜದ ಮೌಲ್ಯಗಳ ಕಡೆಗೆಯೇ! ಚಾರಿತ್ರಿಕವಾಗಿ ಇರುವ ಭಾವನಾತ್ಮಕ ಸಂಬಂಧಗಳನ್ನು ಉಳಿಸಿಕೊಳ್ಳುವ ಬಯಕೆಯೇ ಮಹಿಳಾ ಚಳುವಳಿಯಲ್ಲಿ ಕಾಣುತ್ತಿಲ್ಲ. ಇದು ಇಂಪೀರಿಯಲಿಸಂ ನಮಗೆ ಮಾಡಿರುವ ಮೋಸ. ಇಂಪೀರಿಯಲಿಸಂ ಗಂಡು-ಹೆಣ್ಣಿನ ಮಧ್ಯೆ ತಂದಿರುವ ಈ ಭಾವನಾತ್ಮಕ ಬಿರುಕನ್ನು ದಾಟುವುದು ಸಾಧ್ಯವೇ ಅನ್ನಿಸುತ್ತದೆ. ಈ ಭಾವನಾತ್ಮಕ ಬಿರುಕನ್ನು ಕುರಿತು ಎಂದಾದರೂ ಯೋಚಿಸಿದ್ದೀಯ ಗಂಗಾ?'

ಮಾತನಾಡುವಾಗ ವೆಂಕಟೇಶ್ ಯಾವುದೇ ಸರಣಿಯಿಂದ ವಾದ ಪ್ರಾರಂಭಿಸಿದರೆ ಮೊಣಕಾಲೂರಿ, ಕೈ ಬೆರಳು ಎತ್ತಿ ಹಿಡಿದು ಇಡಿಯ ಗುಂಪಲ್ಲೇ ಇಡಿಯಾಗಿ ಮಾತನಾಡುವುದನ್ನು ಗಂಗಾ ಕಂಡಿದ್ದಳು. ಆ ಕ್ಷಣಕ್ಕೆ

ತಾನು ಮಾತಾಡುವುದು ತನ್ನ ಹೃದಯದ ಮಾತು ಎನ್ನುವ Conviction ಆತನದು. ಮಾನಸಿಕ ಲಯಗಳನ್ನೇ ಕೊಂದು ಹಾಕುವ ಲೌಕಿಕ ಬದುಕನ್ನು ಕುರಿತು ಗಂಗಾ ಯಾವಾಗಲೂ ಮಾತನಾಡುವುದು. ವಾಸ್ತವದ ಬದುಕಿನ ಕ್ರೂರತೆಯಲ್ಲಿ ಈ ರೀತಿಯ ಮಾನಸಿಕ ಲಯಗಳನ್ನು ಉಳಿಸಿಕೊಳ್ಳಲು ಹೋರಾಡುತ್ತೇನೆ ಎನ್ನುವುದು ಹುಚ್ಚುತನ ಎಂದು ಗಂಗಾಗೆ ಅನಿಸುತ್ತದೆ. ಇತಿಹಾಸದಲ್ಲಿ ಹುಡುಕಿದರೆ ಚಳುವಳಿಯಲ್ಲಿ Force ಆಗಬಲ್ಲ ಅನೇಕ ಲಯಗಳು ದೊರಕಬಹುದು. ಉಳಿಸಿಕೊಳ್ಳಬೇಕಾದ, ಕೆಡವಬೇಕಾದ ಲಯಗಳು ಸಿಕ್ಕಬಹುದು. ಇತಿಹಾಸವಿಲ್ಲದ ಬದುಕು ಶೂನ್ಯದಲ್ಲಿ ಅರಳಲು ಸಾಧ್ಯವಿಲ್ಲ - ಬದುಕನ್ನು ಸೃಜನಶೀಲವಾಗಿಸಬಲ್ಲ ಇತಿಹಾಸದ ಲಯಗಳಿಗೆ ಧ್ವನಿ ಕೊಡಬೇಕು, ಶೋಧಿಸಿ, ಶೋಧಿಸಿ ಹೆಕ್ಕಬೇಕು. ಹೀಗೆ ಏನೇನೋ ಯೋಚನೆಗಳು ಗಂಗಾಳನ್ನು ಬಲವಾಗಿ ಕಾಡುತ್ತವೆ. 'ಸ್ತ್ರೀ ಮುಕ್ತಿ' ಸಂಘಟನೆಗೆ ಬರುವ ಹಲವಾರು ವಿಧದ ಸ್ತ್ರೀಯರ ಮಾತಿನ ಒಳಗಡೆ ಇರುವ ಆಂತರಿಕ ಲಯಗಳಲ್ಲಿ ಹೆಣ್ಣಿನ ಮುಖವೊಂದಿದೆ ಎನಿಸಿದಾಗ ದುಗುಡ, ದುಮ್ಮಾನ, ಅಳುವಿನಲ್ಲಿ ಬರುವ ಹೆಂಗಸರ ಮಾತಿನ ಕೆಳಗೆ, ಅಳುವಿನ ಕೆಳಗೆ, ದುಗುಡದ ಒಳಗೆ ಇರುವ ಲಯವೊಂದಕ್ಕೆ ಧ್ವನಿಸಲು ಗಂಗಾ ಪ್ರಯತ್ನಿಸುವಳು.

* * * *

ಹೀಗೇ ಏನಾದರೂ ಬರೆಯುತ್ತಾ ಕುಳಿತರೆ ಗಂಗಾಗೆ ಪಾಪಪ್ರಜ್ಞೆ ಕಾಡುತ್ತದೆ. ತೊಡಗಿಸಿಕೊಳ್ಳುವ ಮಾಧ್ಯಮವಾಗಿ ಗಂಗಾ ತನ್ನನ್ನು ಗುರುತಿಸಿಕೊಂಡದ್ದೇ ಬರವಣಿಗೆಯಲ್ಲಿ. ಗಂಟೆಗಟ್ಟಲೆ ಬರೆಯುತ್ತಾ ಕುಳಿತುಬಿಡುತ್ತಿದ್ದ ಗಂಗಾ ಕೆಲವು ಸಲ ಊಟ-ತಿಂಡಿಯ ಯೋಚನೆಯಿಲ್ಲದೇ ಬರೆಯುತ್ತಾ ಕುಳಿತು ಬಿಡುತ್ತಿದ್ದಳು. ಹೀಗೆ ಬರೆಯುತ್ತಾ ಕುಳಿತಾಗ ಅಥವಾ ಬರೆದಾದ ಮೇಲೆ ಗಂಗಾಗೆ ಮುಜುಗರ ಆಗುತ್ತಿತ್ತು. ಬರವಣಿಗೆಯ ಕ್ರಿಯೆ-ಕ್ರಿಯಾ ಹೀನತೆಯಲ್ಲಿ ಹುಟ್ಟಿದ್ದೋ, ಕ್ರಾಂತಿಕಾರಿ ಗೆಳೆಯ/ಗೆಳತಿಯರು ಆಕೆಯನ್ನು ಟೀಕಿಸುವುದರಿಂದ ಬಂದದ್ದೋ, ಅಥವಾ ಚೆಲ್ಲಾಪಿಲ್ಲಿಯಾಗಿರುವ ಬದುಕಿಗೆ ಆಕೃತಿ ಕೊಡಬೇಕೆಂಬ ಅಭಿಲಾಷೆಯಲ್ಲಿ ಮೂಡಿದ್ದೋ-ಗಂಗಾಳಿಗೇ ಗೊಂದಲ. ಬದುಕಿನಲ್ಲಿ ಹೋರಾಡಲಿಕ್ಕಾಗದೇ ಬರವಣಿಗೆಯ ಜೊತೆ ಹಾದರ ಮಾಡುತ್ತೇನೇನೋ ಎನ್ನುವ ವಿಚಿತ್ರ ಭಾವನೆಗಳು. ಒಂಟಿಯಾಗಿದ್ದಾಗ ಇಂತಹ ವಿಚಿತ್ರ ಭಾವನೆಗಳು ಕಾಡಿದಾಗ ಗಂಗಾ ಹಾಳೆಯ ಮೇಲೆ ಒಂದು ಅಕ್ಷರ ಬರೆಯೋದಿಲ್ಲ. ಹೊದಿಕೆ ಹೊದ್ದು ಬಿಗಿಯಾಗಿ ಕಣ್ಣು ಮುಚ್ಚಿಬಿಡುತ್ತಾಳೆ. ನಿದ್ದೆಯಿಲ್ಲದೇ ಹೊರಳಾಡುತ್ತಾಳೆ. ಇಂತಹದೇ ಒಂದು ರಾತ್ರಿ. ಪೋಲೀಸ್ ಸ್ಟೇಷನ್ನಿಂದ ಬಂದು ಮೂರು ತಾಸಾಗಿದೆ. ದೊಪ್ಪಂತ ಹಾಸಿಗೆಯ ಮೇಲೆ ಬಿದ್ದು ಹತ್ತು ಘಂಟೆಯಿಂದ ಕಣ್ಣು ಮುಚ್ಚೋಕೆ ಪ್ರಯತ್ನ ಪಡ್ತಾಳೆ. ನಿದ್ದೆ ಮಾಡಲು ಸಾಧ್ಯವಾಗದೇ ಹೊರಳಾಡ್ತಾ ನರಳ್ತಾಳೆ. ಕೂತು ಏನಾದ್ರೂ ಬರಿಯೋಣ ಎನ್ನುವ ಆಸೆಯನ್ನು ಅದುಮಿ, ಮಲಗಿ ನಿದ್ರಿಸಲು ಪ್ರಯತ್ನಿಸಿದಷ್ಟೂ ಕಣ್ಣು ದೆವ್ವದ ಹಾಗೆ ತೆರೆದುಕೊಳ್ತಾ ಇದೆ. ಬಾಟಲ್ ರಮ್ ಆದ್ರೂ ಇದ್ದಿದ್ರೆ ಎನ್ನುವ ಯೋಚನೆ ಬಂದಾಗ ಆಕೆಗೇ ಹೆದರಿಕೆಯಾಗುತ್ತದೆ. ಕುಡಿದ ಬಿಸಿಗಾದರೂ ಅನಾವಶ್ಯಕ ಗೊಂದಲ ನಿಂತು ಹಾಯಾಗಿ ನಿದ್ದೆ ಮಾಡಬಹುದಿತ್ತು, ನೆಮ್ಮದಿಯಾಗಿರಬಹುದಿತ್ತು, ಅಥವಾ ಹಾಯಾಗಿ ಹಾಡಬಹುದಿತ್ತು ಎನ್ನುವ ವಿಚಿತ್ರ ಆಸೆ ಆಕೆಯ ಮನದಲ್ಲಿ ಮೂಡುತ್ತದೆ. ಪಾರ್ವತಿ ಊರಿನಲ್ಲಿ ಇಲ್ಲ. ಹೊರಗಡೆ ಕಾಲಿಡಲಿಕ್ಕೆ ರಾತ್ರಿಯ ಭಯ. ಗಂಗಾ ಎದ್ದು ಮತ್ತೆ ಬರೆಯುತ್ತಾ ಕೂರುತ್ತಾಳೆ. ಪೋಲೀಸ್ ಸ್ಟೇಷನ್ನಲ್ಲಿ ನಡೆದುದನ್ನು ಬರೆದೇ ಜೀರ್ಣಿಸಿಕೊಳ್ಳಬೇಕು ಅನಿಸುತ್ತದೆ. ಕುಳಿತು ಆಕೆ ಬರೆಯತೊಡಗಿದರೆ ಅಕ್ಷರ ಮೂಡುವುದಿಲ್ಲ. ಬದಲಿಗೆ ಮುಖದ ಮುಂದೆ ಬರುವುದು ಈಗಷ್ಟೇ ಪೋಲೀಸ್ ಸ್ಟೇಷನ್ನಿಂದ ಬೈಕ್‌ನಲ್ಲಿ ಗಂಗಾಳೇ ಮನೆಗೆ ಬಿಟ್ಟು ಬಂದ ತಿಮ್ಮುವಿನ ಮುಖ. ತಿಮ್ಮು ಪುಟ್ಟ ಹುಡುಗಿ. ಕಪ್ಪು ಮುಖ,

ಕಪ್ಪು ಮೈ, ಉದ್ದಗೂದಲಿನ ಹುಡುಗಿ. ಯಾವುದೇ ಕತೆಗೆ ನಾಯಕಿಯಾಗುವಂತಹ ಸೌಂದರ್ಯ ಈಕೆಯದಲ್ಲ. ಈ ಬದುಕಿನಲ್ಲಿ, ಈ ದೇಶದಲ್ಲಿಯಂತೂ ಅಲ್ಲವೇ ಅಲ್ಲ ಎನಿಸಿದಾಗ ಗಂಗಾಳ ಕಣ್ಣಲ್ಲಿ ನೀರೊಡೆಯುತ್ತದೆ. ಆಕೆ ಬಸುರಾದದ್ದು, ಗಂಡ ಬಿಟ್ಟದ್ದು, ಮೂರು ತಿಂಗಳ ಕಂದವೊಂದನ್ನು ಮಾಂಸದ ಒಡಲಲ್ಲಿ ತುಂಬಿಕೊಂಡು ಬೀಗಿ ನಡೆಯುವ ಈ ತಿಮ್ಮಿಗಾಗಿಯೇ ಗಂಗಾ ಪೋಲೀಸ್ ಠಾಣೆಗೆ ಹೋದದ್ದು. ಸರಳುಗಳ ಕಂಬಿಯಿಂದ ಇಣುಕುತ್ತಿದ್ದ ಈಕೆಯ ಗಂಡ ಮೀಸೆ ತಿರುವುತ್ತಾ ನಿಂತದ್ದನ್ನು ಕಂಡಾಗ ಗಂಗಾಳ ಎದೆಯಲ್ಲಿ ನಡುಕ ಹುಟ್ಟಿತ್ತು. ಎರೆಡು ತಿಂಗಳಿಂದ ಠಾಣದ ಮುಖ ಕಂಡದ್ದಕ್ಕೋ, ಬದುಕಿನ ಧಾರಣೆಯ ಕಲ್ಪನೆ ಇಲ್ಲದ್ದಕ್ಕೋ ತಿಮ್ಮಿ ಸರಳುಗಳ ಹಿಂದೆ ಮೀಸೆ ತಿರುವುತ್ತಾ ನಿಂತಿದ್ದ ಯುವಕನನ್ನು ತೋರಿಸಿ ಪೆದ್ದು ಪೆದ್ದಾಗಿ ನಗಲು ಪ್ರಾರಂಭಿಸಿದ್ದಳು. ಹೀಗೇ ಗಂಗಾ/ತಿಮ್ಮಿ ಅಲ್ಲಿಯೇ ಕುಳಿತಿದ್ದಾಗ ಅಲ್ಲೊಬ್ಬ ಹೆಂಗಸು ಏನೋ ಕೋಳಿ, ಕೋಳಿ ಅಂತ, ಅಪ್ಪ ಬನ್ರೋ ಅಂತ ಸ್ಟೇಷನ್ನಿನ ಗಾಂಭೀರ್ಯ ಮೀರಿ ಕೂಗ್ತಾ ಬಂದ್ಳು. 'ನನ್ನ ಕೋಳಿನ ಆಕಿ ಗಂಡ ಎತ್ಕೊಂಡ್ ಮಡ್ಕೊಂಡು ಹೋದ, ಆಕಿನ್ನ - ಅವನ್ನ ಹೆಂಡ್ತಿ ಮೂದೇವಿನ ಅಲ್ಲಿ ನಿಲ್ಲಿಸಿ ಬಂದಿದೀನಿ, ಬನ್ರಪ್ಪೋ, ಬನ್ರಪ್ಪೋ' ಆಕೆ ಬಾಯಿ ಬಿಟ್ಟು ಬಡಕೊಳ್ಳಾಕ ತೊಡಗಿದಾಗ ಅನಿವಾರ್ಯವಾಗಿ ಒಬ್ಬ ಹೆಂಗಸು ಪೋಲೀಸ್ ಅವಳ ಜೊತೆ ಹೋದ್ಳು. ಕುತೂಹಲಕ್ಕೆ ಅಂತ ಗಂಗಾನೂ ಹೆಂಗಸು ಪೋಲೀಸಿನ ಜೊತೆ ನಡೆದಳು. ಪೋಲೀಸ್ ಸ್ಟೇಷ್ನಗೆ ಕಂಪ್ಲೇಂಟ್ ತಂದಿದ್ದ ಹೆಂಗಸು ಕಿವಿಗೆ ಓಲೆ ಹಾಕಿದ್ಲು. ಸೀರೆ ಹಳೇದಾಗಿದ್ರೂ ಮೈನ ಪೂರ್ತಿ ಮುಚ್ಚಿತ್ತು. ಕತ್ತಲ್ಲಿ ಕರಿಮಣಿಯ ತಾಳಿ ಸರ ಇತ್ತು. ಆ ಮಹಿಳೆ ಪೋಲೀಸಿನವಳ ತರಹ ದಢೂತಿ ಹೆಂಗಸು ಅಲ್ಲದಿದ್ದರೂ ಅಂತಹ ಸಪೂರ ಹೆಂಗಸೇನೂ ಆಗಿರಲಿಲ್ಲ. ಕೈಯಲ್ಲಿದ್ದ ಮೂರು ಸಣ್ಣ ಸಣ್ಣ ಕೋಳೀ ಮರೀನ ಆಕೆ ಎದೆಗೆ ಅವುಚಿಕೊಂಡು ಲಬೋ ಲಬೋ ಅಂತ ಬಡಕೊಳ್ಳೋದನ್ನ ನೋಡಲಾರದೇನೇ ಪೋಲೀಸರು ಆಕೆಯನ್ನು ಬೇಗ ಬೇಗ ಹಿಂಬಾಲಿಸಿದ್ದಿರಬೇಕು. ನಾಲ್ಕು ತಿಂಗಳ ಸಂಸಾರ ಮಾಡಿ, ಮಗುವಿನ ತಂದೆಯಾಗ್ತೀನಿ ಅಂದಾಕ್ಷಣ - ನೀನು, ನಾನು ಯಾರ್‍ಯಾರೋ ಏನೋ ಅಂತ ಮಾತಾಡೋ ತಿಮ್ಮಿ ಗಂಡನನ್ನು ಪೋಲೀಸ್ ಸ್ಟೇಷ್ನಗೆ ಕರಿಸೋಕೆ ಪೋಲೀಸರಿಗೆ ಒಂದೂವರೆ ತಿಂಗಳೇ ಬೇಕಾಯ್ತು. ಇಂತಹವರು ಜುಜುಬಿ ಕೋಳಿ ಜಗಳಕ್ಕೆ ತಲೆ ಕೆಡಿಸಿಕೊಳ್ಳೋಕೆ ಕಾರಣಾನೇ ಇರಲಿಲ್ಲ. ನಾಲ್ಕು ಕರಿಯ ಮಕ್ಕಳ ಮಧ್ಯೆ, ಎಂಟು ಹತ್ತು ದಿನದ ಮಗುವೊಂದನ್ನು ಹಿಡಿದು, ತಲೇ ಮೇಲೆ ಭಾರದ ಕುಕ್ಕೆಯೊಂದನ್ನು ಹೊತ್ತ ಹೆಂಗಸು ಕೋಳಿ ಬಗ್ಗೆ ತನಗೇನೂ ಗೊತ್ತಿಲ್ಲ ಅಂತ ಬಾಯಿ ಮಾಡ್ತಾ ಇದ್ದಾಗಲೇ ಪೋಲೀಸರ ಜೊತೆ ಗಂಗಾ ಅಲ್ಲಿಗೆ ಹೋದದ್ದು. ಹತ್ತು ದಿನದ ಕೂಸು..... ಒಣಕಲು..... ಒಣಕಲು, ಬಟ್ಟೆ ಪೂರ್ತಾ ಮೈ ಮುಚ್ಚಿರಲಿಲ್ಲ. ಕುಕ್ಕೆ ತಲೇ ಮೇಲೆ ಇಟ್ಟುಕೊಂಡು, ಬಾಯಿ ಮಾಡುತ್ತಾ ಕರಿ ಮಕ್ಕಳನ್ನು ಸೊಂಟದಲ್ಲೇ ತಿವಿಯುತ್ತಾ ನಡೆಯುತ್ತಿದ್ದಾಕೆಯನ್ನು ಪೋಲೀಸರು ನಿಲ್ಲಿಸಿದರು. ನಾಲ್ಕು ಕರಿ ಎಲುಬಿನ ಹಂದರಗಳು ಒಯ್ಯಯ್ಯೋ ಅಂತ ಕಿರುಚಾಕೆ ಪ್ರಾರಂಭಿಸಿದವು. 'ಬಾಯಿ ಬಿಟ್ಟರೆ ನಿಮ್ಮನ್ನ ಒಬ್ಬಬ್ಬರನ್ನೇ ಹೂತುಬಿಡ್ತೀನಿ' ಅಂತ ಹೆಂಗಸು ಪೋಲೀಸ್ ಜೊತೆಗೆ ಬಂದಿದ್ದ ಗಂಡು ಪೋಲೀಸ್ ಒಂದೊಂದರ ಪಕ್ಕೆಗೂ ತನ್ನ ಕೋಲಿನಿಂದ ತಿವಿಯತೊಡಗಿದ. ನಾಲ್ಕೂ ಒಟ್ಟಿಗೆ 'ಆ......' ಅಂತ ಅಪಸ್ವರ ಹೊರಡಿಸಿದವು. ಮೈಮೇಲೆ ಹರಕು, ಮುರಕು ಬಟ್ಟೆ ಇದ್ದು, ಬೋಳು ಹಣೆ, ಬೋಳು ಕಿವಿ, ಬೋಳು ಕತ್ತಿನ ಬಾಣಂತಿ, 'ನನ್ನ ಬುದ್ರಪ್ಪೋ, ನಂಗೇನೂ ಗೊತ್ತಿಲ್ಲ' ಅಂದಾಗ ಓಲೆ ಕಿವಿಯ ಹೆಂಗಸು, 'ರಂಡೆ, ಗೊತ್ತಿಲ್ಲ ಅಂತೀಯೇನೇ! ಬಾಣಂತನಕ್ಕೆ ಅಂತ ನನ್ನ ಕೋಳಿ ತಂಗಂಡ್ಯೇನೇ, ಪಕ್ಕಾಗಿ ಕೂತ್ಕಂಡು ತಿನ್ನಬಹುದು ಅಂತಾ, ನಿನ್ನ ಗಂಡ, ಆ ರೌಡಿ ಗಂಡ ಬರ್ಲಿ ತಾಳೆ' - ಹೀಗೆ ರಂಡೆ, ಮುಂಡೆ ಅಂತ ಆಕೆ ಬಯ್ಯತೊಡಗಿದಾಗ ಲೇಡೀ ಪೋಲೀಸ್‌ಗೆ ತನ್ನ ಅಧಿಕಾರದ ನೆನಪಾದಂತಾಗಿ ಒಮ್ಮೆಲೇ, 'ನಡಿಯೇ

ಬೋಸುಡಿ, ತಿಕಾ ಮುಚಕೊಂಡ್ ನಡಿಯೇ ಪೋಲೀಸ್ ಸ್ಟೇಷನ್‌ಗೆ' ಎನ್ನುತ್ತಾ ಕೋಲಲ್ಲಿ ಬಾಣಂತಿನಾ ತಿವಿಯತೊಡಗಿದಳು. ಆಕೆ ತಿವಿಯುವ, ಬಯ್ಯುವ ರೀತಿಯಲ್ಲಿ ಯಾವ ಗಂಡು ಪೋಲೀಸ್‌ಗೂ ಕಡಿಮೆ ಇಲ್ಲ ಎನ್ನುವಂತೆ ಅಬ್ಬರಿಸತೊಡಗಿದ್ದಳು. ಆಕೆಯ ಪೋಲೀಸ್‌ತನದಲ್ಲಿ ಹೆಣ್ಣುತನವೆಲ್ಲ ಮಾಯವಾಗಿರಬೇಕು ಎಂದು ಗಂಗಾಗೆ ಅನ್ನಿಸತೊಡಗಿತು. ಪೋಲೀಸ್ ಡಿಪಾರ್ಟ್‌ಮೆಂಟ್‌ನ ಕ್ರೌರ್ಯವೆಲ್ಲ ಆಕೆಯಲ್ಲಿ ಮೈಗೂಡಿದೆಯೇನೋ ಎಂಬ ಭಾವನೆ ಗಂಗಾಳಲ್ಲಿ ಮೂಡತೊಡಗಿತ್ತು. ಬಾಣಂತಿಯನ್ನು ಚುಚ್ಚುವಲ್ಲಿ, ಬಯ್ಯುವ ಕ್ರಿಯೆಗಳಲ್ಲಿ ಪೋಲೀಸ್ ಸಾಮರ್ಥ್ಯವನ್ನು ಆಕೆ ತೋರಿಸುತ್ತಿದ್ದಿರಬೇಕು. ಹೆಂಗಸು ಪೋಲೀಸಿನ ತಿವಿತಕ್ಕೆ ಬಾಣಂತಿ ಹೆಂಗಸು ಬಗ್ಗದೇ ಇದ್ದಾಗ ಗಂಡಸು ಪೇದೆ ತನ್ನ ಚಾನ್ಸ್ ತೆಗೆದುಕೊಂಡು ತಿವಿಯೋಕೆ ಪ್ರಾರಂಭಿಸಿದಾಗ ಕುಕ್ಕೆ ಕೆಳಗೆ ಬಿದ್ದು ಚಂಬು, ಲೋಟ, ಗೋಣಿತಟ್ಟು, ಕಟ್ಟಿಗೆಯ ತುಂಡು ಚೆಲ್ಲಾಪಿಲ್ಲಿಯಾಗಿ ಬಿದ್ದವು. ಬಾಣಂತಿ 'ನನ್ ಸಾಮಾನೋ' ಅಂತ ಆಳೋಕೆ ಪ್ರಾರಂಭಿಸಿದ್ಲು. 'ನಿನ್ನ ಹಡಪ ಇರ್ಲಿ, ನಡಿಯೇ' ಅಂತ ಪೋಲೀಸ್ ಕೋಲಿನಿಂದ ತಿವಿದ ತಿವಿತಕ್ಕೆ ಸಹಿಸಲಾರದೇ ಬೊಬ್ಬೆ ಇಟ್ಟು 'ಬರ್ತೀನಿ ತಡಿಯಪ್ಪೋ' ಅಂತ ಸಾಮಾನು ಕುಕ್ಕೆಗೆ ಸೇರಿಸಿ, ಕುಕ್ಕೆ ತಲೇ ಮೇಲೆ ಇಟ್ಟುಕೊಂಡು, ಮುಲುಗುಟ್ಟೋ ಮಗೂನಾ ಬಗಲಿಗೆ ಸೇರಿಸಿ, ನಾಲ್ಕು ಎಲುಬಿನ ಹಂದರಗಳನ್ನು 'ಬರ್‍ರ್ರೋ' ಅಂತ ಸ್ಟೇಷನ್‌ಗೆ ನಡೆಸಿದಾಗ, 'ಹ್ಯಾಂಗ್ ಹೊಂಟ್ಲು ನೋಡು ರಂಡೇ' ಅಂತ ಪೇದೆ ಅಟ್ಟಹಾಸದ ನಗೆ ನಕ್ಕ. ವಾಪಸ್ ಬರುವಾಗ ಗಂಗಾಳ ತಲೆ ಗಿಮ್ ಅನ್ನೋಕೆ ಪ್ರಾರಂಭ ಆಯ್ತು. ಕೋಳೀನ ಮಗುವಿನ ಹಾಗೆ ಸಾಕಿದ್ದೆ ಅನ್ನೋ ಓಲೆಗಿವಿ ಹೆಂಗಸಿನ ನೋವು ಹೆಚ್ಚೋ? ಒಣಕಲು ಮಗು, ಹಸೀ ದೇಹಕ್ಕೆ ಕೋಳಿ ಕದ್ದಿರಬಹುದಾದ ಬಾಣಂತಿ ಸಂಕಟ ಹೆಚ್ಚೋ? ಪೋಲೀಸ್ ಕೆಲಸದಲ್ಲಿ ಸಾಮರ್ಥ್ಯ ತೋರಿಸೋಕೆ ಬೆಳೆಸಿಕೊಂಡ ಹೆಂಗಸು ಪೋಲೀಸಿನ ಕ್ರೌರ್ಯಕ್ಕೂ, ಪೇದೆ ಪೋಲೀಸನ ಕ್ರೌರ್ಯಕ್ಕೂ ವ್ಯತ್ಯಾಸ ಎಲ್ಲಿತ್ತು? ಬಾಣಂತಿ ಓಲೆಗಿವಿ ಹೆಂಗಸನ್ನ ಶೋಷಿಸಿದ್ಲಾ? ಓಲೆಗಿವಿ ಹೆಂಗಸು ಬಾಣಂತೀನ ಶೋಷಿಸಿದ್ಲಾ? ಅಥವಾ ಹೆಂಗಸು ಪೋಲೀಸಿನ ಒರಟುತನದಲ್ಲಿ, ಪೋಲೀಸ್ ಗಂಡು ಪೇದೆಯ ಗುರುಗುಟ್ಟುವಿಕೆಯಲ್ಲಿ ಶೋಷಣೆಯಿತ್ತಾ? ಈ ಪೋಲೀಸ್, ಈ ಹಿಂಸೆ, ಈ ಬಡತನ..... ಎಲ್ಲವೂ ಗೊಂದಲಮಯವಾಗತೊಡಗಿದಾಗ ಪೋಲೀಸರು, ಬಾಣಂತಿ, ಓಲೆಗಿವಿ ಹೆಂಗಸು, ಕರಿ ಮಕ್ಕಳನ್ನು ಬಿಟ್ಟು ಗಂಗಾ ಮುಂದೆ ಮುಂದೆ ನಡೆದು ಸ್ಟೇಷನ್‌ಗೆ ಬಂದಳು. ತಿಮ್ಮುವಿನ ವಿಚಾರಣೆ ನಡೀತಾ ಇತ್ತು. ಆಕೆ ಗಂಡ 'ಆಕೆ ನನಗೆ ಗೊತ್ತಿಲ್ಲ' ಅಂತ ಒಂದು ಶಬ್ದ ಬಿಟ್ಟರೆ ಬೇರೆ ಏನನ್ನೂ ಹೇಳಲಿಲ್ಲ. 'ನಾಲ್ಕು ಒದ್ದರೆ ಬಾಯಿ ಬಿಡ್ತಾನೆ' ಗಂಗಾಳ ಬಾಯಲ್ಲಿ ಸರಾಗವಾಗಿ ಬಂತು. ಸಬ್ ಇನ್‌ಸ್ಪೆಕ್ಟರ್ 'ನಾವು ಈಗಾಗ್ಲೇ ಅವನನ್ನ ಸಾಕಷ್ಟು ಹೆರಾಸ್ ಮಾಡಿದೀವಿ, ಅವನು ಹೇಳ್ತಾ ಇರೋದು ಅಷ್ಟೇ! ಬೇಕಿದ್ರೆ ನಾಳೆ ಟ್ರೈ ಮಾಡ್ತೀವಿ ಮೇಡಂ' ಅಂದ್ರು. ಹೊರಗೆ ಬರ್‍ತಾ ಇದ್ದ ಹಾಗೆ ಇದ್ದಕ್ಕಿದ್ದ ಹಾಗೆ ಗಂಗಾಗೆ ಯಾರದೋ ಅಂದು ಕಣ್ಣು ಮುಂದೆ ಬರುತ್ತದೆ...... ನೀಲಿ ಪಟ್ಟೆ, ಆಕೆ ಇತ್ತೀಚಿಗೆ ಹ್ಯೂಮನ್ ರೈಟ್ಸ್ ಕಮಿಟಿ ಮೀಟಿಂಗ್‌ನಲ್ಲಿ ನೋಡಿದ್ದು. ಪೋಲೀಸ್ ಹಿಂಸೆಗೆ ಗುರಿಯಾದ ವ್ಯಕ್ತಿ ಮಾತನಾಡುವಾಗ ತೋರಿಸಿದ್ದು. ಪೋಲೀಸ್ ಚಿತ್ರ ಹಿಂಸೆ ವಿರುದ್ಧ ಪ್ರತಿಭಟಿಸೋದು ತಮ್ಮೆಲ್ಲರ ಮೂಲ ಕರ್ತವ್ಯ ಎಂದು ಎಲ್ಲರೂ ಕೈಯೆತ್ತಿ ಸಹಕಾರ ತೋರಿಸಿದಾಗ, ಹಿಂಸೆ ನಿಲ್ಲಬೇಕು ಎಂದು ಮನಃಪೂರ್ವಕವಾಗಿ ಹೇಳಿದವರಲ್ಲಿ ತಾನೂ ಒಬ್ಬಳಲ್ಲವೇ? ತಿಮ್ಮು ಗಂಡ ಎನ್ನಿಸಿಕೊಂಡವನು ಬಾಯಿ ಬಿಡದೇ ಇದ್ದಾಗ, 'ನಾಲ್ಕು ಒದೀರಿ' ಅಂತ ಎಷ್ಟು ಸಲೀಸಾಗಿ ತನ್ನ ಬಾಯಲ್ಲಿ ಬಂತು? ಇದೇ ಮನುಷ್ಯನಿಗೆ ಕ್ರೂರ ಹಿಂಸೆ ಮಾಡಿದರೆ ನಾಳೆ ಮಾನವೀಯ ಕಾಳಜಿ ಇರೋ ಜನ ಹಿಂಸೆ ವಿರೋಧಿಸ್ತಾರೆ, ಪ್ರದರ್ಶನ ಮಾಡ್ತಾರೆ. ತಿಮ್ಮುವಿನ ಸಂಕಟಕ್ಕೆ ಅವನಿಗೆ ಹಿಂಸೆಯಿಂದಲೇ ಬುದ್ಧಿ ಕಲಿಸಬೇಕೇ? ಪೋಲೀಸರು ಒದಿದೇ ಇದ್ದರೆ ಆತ ಸತ್ಯ ಬಾಯಿ ಬಿಡ್ತಾನಾ?

ಸತ್ಯ ಹೆಚ್ಚೋ? ಹಿಂಸೆ ಹೆಚ್ಚೋ? ಮತ್ತೆ ಮತ್ತೆ ಗಂಗಾಗೆ ಗಾಂಧಿ ರಾಜಕಾರಣ ನೆನಪಾಗುತ್ತದೆ. ಗಾಂಧಿ ನಮಗೆ ಒಪ್ಪಿಗೆ ಆಗ್ತಾನೋ ಇಲ್ಲವೋ? ಆದ್ರೂ ಮುದುಕ ಇಷ್ಟ ಆಗ್ತಾನೆ. ಹಿಂಸೆ ಅಂತ ಆತ ಸುಮ್ಮನೇ ಮಾತನಾಡಲಿಲ್ಲ. ತಿನ್ನೋದರ ಮೂಲದಲ್ಲಿ, ಕಾಮದ ಮೂಲದಲ್ಲಿ, ಹಣದ ಮೂಲದಲ್ಲಿ ಹಿಂಸೆಯ ಮೂಲವನ್ನ ಹುಡುಕಿದ್ದ. ವೈಯಕ್ತಿಕವಾಗಿ ಈ ಬೇರುಗಳನ್ನು ಹಿಂಸೆಯ ಮುಖಗಳನ್ನು ಕತ್ತರಿಸುತ್ತಲೇ ಜನರ ಮಧ್ಯೆ ಇದ್ದ. ಎಲ್ಲೋ ಸ್ಟುಪಿಡ್ ಎನ್ನಿಸಿದರೂ ಮುದುಕ ರ್‍ಯಾಡಿಕಲ್ ಅನ್ನಿಸ್ತಾನೆ, ವ್ಯಕ್ತಿವಾದದಿಂದ ದೂರನೇ ಉಳೀತಾನೆ ಎನಿಸಿದಾಗ ಗಂಗಾಗೆ ಗಾಂಧಿಯ ಬಗ್ಗೆ ಗೌರವ ಹುಟ್ಟುತ್ತದೆ. ಆದರೂ ಗಂಗಾಗೆ . ತಿಮ್ಮುವಿನ ಮುಖ ಕಾಡುತ್ತದೆ. ತಿಮ್ಮುವಿನ ಮೂರು ತಿಂಗಳ ಹೊಟ್ಟೆ, ಕಡ್ಡೀ ಮಗುವಿನ ಬಾಣಂತಿ ಗಂಗಾಳ ನಿದ್ರೆಯನ್ನು ಕಳೆಯುತ್ತಾರೆ. ಮೈಯಲ್ಲಾ ಬಿಸಿ ಬಿಸಿಯಾಗೋ ಭಾವನೆಗಳನ್ನು ಹುಟ್ಟುಹಾಕುತ್ತಾರೆ. ಮೂರು ತಿಂಗಳ ಮಗೂನ ಹೊಟ್ಟೇಲಿಟ್ಟುಕೊಂಡು ಕುಣೀತಾ ಕುಣೀತಾ ಓಡಾಡೋ ತಿಮ್ಮುಗೆ, ಹಸಿ ಹಸಿ ಮೈಯಿನ ಬಾಣಂತಿಗೆ ತಾಯ್ತನ ಕ್ರೂರವಾಗಿತ್ತೇ? ಸುಂದರವಾಗಿತ್ತೇ? ತಿಮ್ಮು ಅಬಾರ್ಶನ್ ಮಾಡಿಸಿ ಕೊಳ್ಳಬೇಕೆಂದು ಓಡಾಡುತ್ತಾಳೆ. ಹೊಟ್ಟೆಯೊಳಗಿನ ಪೀಡೆ ತೊಲಗಿದರೆ ಸಾಕು ಅಂತ ಕೈ ಕೊಟ್ಟ ಗಂಡನ ಮಗುವಿನ ದ್ವೇಷಾನ ಈ ಮಗುವಿನ ಮೇಲೆ ತೋರಿಸ್ತಾ ಇದ್ಳು. ಅಬಾರ್ಶನ್ ಮಾಡಿಸುವಷ್ಟು ಸುಲಭವಾಗಿ, ಮಾಂಸದ ಮುದ್ದೇನಾ ಈಚೆಗೆ ಎಳೆಯುವಷ್ಟು ಸುಲಭವಾಗಿ ತಿಮ್ಮು ಆಕೆ ಮನಸ್ಸಿನ ದ್ವೇಷಾನಾ, ಕೋಪಾನಾ ಕಾಲಾಂತರದಲ್ಲಿ ಮರೆಯುತ್ತಾಳೆಯೇ? ನಾಲ್ಕು ಕರಿ ಮೈನ, ಮೂಳೆಗಳ ಹಂದರಗಳ ಜೊತೆ ಮತ್ತೊಂದನ್ನು ಹೊತ್ತು ಓಡಾಡುವ ಬಾಣಂತಿಯ ಎದೆಯಲ್ಲಿ ಹಾಲಿತ್ತೇ? ಮಗು ಮೊಲೆ ಕಚ್ಚಿದಾಗ ಆಕೆಗೆ ಸಂಕಟವಾಗಿತ್ತೇ? ಆನಂದವಾಗಿತ್ತೇ? ಇಬ್ಬರ ತಾಯ್ತನಗಳೂ ಗಂಗಾಗೆ ಕಾಡುತ್ತವೆ. ತಿಮ್ಮುವಿನದು, ಬಾಣಂತಿಯದು ಬಿಚ್ಚಿಟ್ಟ ಬದುಕು. ನಾಲ್ಕು ಜನರ ಎದುರೇ ಬಾಣಂತಿ ಮಗುವಿಗೆ ಹಾಲಿಲ್ಲದ ಎದೆ ಚೀಪಿಸುತ್ತಾಳೆ. ತಿಮ್ಮು ಹುಟ್ಟದಿರುವ ಮಗುವಿನ ಮೇಲೆ ದ್ವೇಷ ಕಾರುತ್ತಾಳೆ, ಪೋಲೀಸ್ ಸ್ಟೇಷನ್ನಲ್ಲಿ ನಗುತ್ತಾಳೆ, ಬದುಕು ತನಗೆ ಕ್ರೂರವಾದ ಪಾಠ ಕಲಿಸಿದೆ ಅಂತ ನಿರ್ದಿಷ್ಟವಾಗಿ ಮಾತನಾಡುತ್ತಾಳೆ. ವೈಯಕ್ತಿಕ ರಾಜಕೀಯ, ಪೋಲೀಸ್ ರಾಜಕೀಯ, ಒಟ್ಟಾರೆ ರಾಜಕೀಯ ಎಲ್ಲವೂ ಸೂಳೆಗಾರಿಕೆ ಎನಿಸಿದಾಗ ಗಂಗಾಗೆ ಉಸಿರಾಟದಲ್ಲಿ ಎಲ್ಲಿಯೋ ನೋವಿನ ಧಗೆ ಕಂಡುಬರುತ್ತದೆ.

* * * *

ಸಂಬಂಧಗಳಲ್ಲಿ ಸೂಳೆಗಾರಿಕೆ ರಾಜಕೀಯದ ಗೂಡು ಕಟ್ಟಿಕೊಳ್ಳುತ್ತಿರುವಾಗ ಅದು ಒಡಲಾಳದಲ್ಲಿ ಹೆಪ್ಪುಗಟ್ಟುತ್ತಿರುವಾಗ ಗಂಗಾ ಸದಾಶಿವನಿಗೆ ಪತ್ರ ಬರೆಯುತ್ತಾಳೆ. ಮದುವೆಯ ಬಗ್ಗೆ ಆಕೆ ಏನನ್ನೂ ಬರೆಯುವುದಿಲ್ಲ. ಬರಲು ಪತ್ರ ಬರೆಯುತ್ತಾಳೆ. ಇದು ತಾನು ಅವನನ್ನು ಮದುವೆಯಾಗುತ್ತೇನೆ ಎಂಬ ಬಗ್ಗೆ ಕೊಡುತ್ತಿರುವ ಭರವಸೆ ಅಥವಾ ಆಶಾಕಿರಣ ಅಲ್ಲ ಎಂಬುದನ್ನು ಸ್ಪಷ್ಟವಾಗಿ ಬರೆಯುತ್ತಾಳೆ. ಸದಾಶಿವನೊಟ್ಟಿಗೆ ಗಂಗಾ ತಲಕಾವೇರಿಗೆ ಬರುತ್ತಾಳೆ. ಜಿಯ್ಯೆನ್ನುವ ಜೀರುಂಡೆ, ಆಕಾಶಕ್ಕೆ ಮುತ್ತಿಟ್ಟ ಜಾರು ಬಂಡೆಗಳು, ಸಂದಿ-ಗೊಂದಿನಲ್ಲಿ ಮೊರೆಯಿಡುವ ನೀರು, ಹುಲ್ಲಿನ ಹಾಸಿಗೆಯ ಬೆಟ್ಟ ಗುಡ್ಡಗಳಲ್ಲಿ ಹಾವಾಗಿ ಹರಿದ ದಿಣ್ಣೆ-ಎತ್ತರಗಳು, ಮಂಜು ನೀರಲ್ಲಿ ಮುಳುಗಿ ಪಿಂಡ ಇಟ್ಟು ಕಾಗೆ ಕಾಯುವ ಬೋಳು ಮಂದಿ, ಒತ್ತೊತ್ತಾಗಿ ಕಣ್ಣಿಗೆ ಹೊಡೆಯುವ ಹಸಿರು ಮರಗಳ ಮೌನದಲ್ಲಿಯಾದರೂ ಮನಸ್ಸು ಖಾಲಿ ಖಾಲಿಯಾಗಿ ನೋವು ಒಡೆದುಕೊಳ್ಳಲಿ ಎಂದು ಗಂಗಾಗೆ ತೀವ್ರ ಆಸೆ.

ಎಲ್ಲಾ ಪರಿಚಿತ ಹಾದಿ. ಅದೇ ತಲೆಬಾಗಿಸಿ ಹೋಗಬೇಕಾದ ಪುಟ್ಟ ಹೋಟೆಲ್. ಸದಾಶಿವನ ಜೊತೆಗೆ ಒಳಗೆ ಹೋದಾಗ ಆಕೆಗೆ ವೆಂಕಟೇಶನ ನೆನಪಾಯಿತು. ಆತನ ಜೊತೆಗೇ ತಾನಿಲ್ಲಿಗೆ ಮೊದಲ ಬಾರಿಗೆ

ಬಂದದ್ದು. ಮತ್ತೇನೂ ಇರದ ನಿರ್ಜನ ಬೆಟ್ಟ-ಗುಡ್ಡಗಳೇ ಎಂದು ಗಂಗಾ ಭಾವಿಸಿದ್ದು ತಪ್ಪಾಗಿತ್ತು. ಎಲ್ಲಾ ಹೊಸತು, ಹೊಸತು. ವೆಂಕಟೇಶ್ ಕೂಡಾ ಆಗ ನಿಗೂಢ ವ್ಯಕ್ತಿಯಾಗಿಯೇ ಕಾಡಿದ್ದ. ಸ್ಥಳದ ನಿಗೂಢತೆಗಿಂತ ವೆಂಕಟೇಶನ ಒಳಗುಗಳ ಭೇದಿಸುವ ನಿಗೂಢತೆಯೇ ಗಂಗಾಳಲ್ಲಿ ಬಲವಾಗಿ ಕಾಡಿತ್ತು. ವೆಂಕಟೇಶ್ ಮಾತನಾಡುವಾಗ ತಾನು ಗಂಗಾಳನ್ನು ಇಲ್ಲಿಗೆ ಏಕೆ ಕರೆದು ತಂದದ್ದು ಎಂಬ ತನ್ನ ಮನಸ್ಸಿನ ಒಳಗಿನ ಸತ್ಯವನ್ನು ನುಡಿದಿದ್ದ. ತಾನೋರ್ವ ನಿಗೂಢ ವ್ಯಕ್ತಿ, ಎಂತಹ ಒಳಮನಸ್ಸಿನವನು, ಇಂತಹ ಪ್ರದೇಶಗಳಲ್ಲಿ ತಾನು ಒಬ್ಬೊಬ್ಬನೇ ಏನೇನು ಮಾಡುತ್ತಿರುತ್ತೇನೆ, ತನ್ನ ಹಿರಿಮೆ ತೋರಿಸಬೇಕು ಎಂಬ ಉದ್ದೇಶದಲ್ಲಿ ಆಕೆಯನ್ನು ಕರೆ ತಂದಿದ್ದೇನೋ ಎಂದು ಅಳುಕು-ಅಳುಕಾಗಿಯೇ ನುಡಿದಿದ್ದ. 'ಗಂಗಾ ನಿನಗೆ ನನ್ನ ಬಗ್ಗೆ ಅಡ್‌ಮಿರೇಷನ್ ಇದೆ ಅಂತ ನಾನು ಸೆನ್ಸ್ ಮಾಡಿದ ಮೇಲೆ ಅದನ್ನು ಬಳಸಿಕೊಂಡು, ಆ ಭಾವನೆಯನ್ನು ನಿನ್ನಲ್ಲಿ ಹೆಚ್ಚು ಮಾಡಲು ಇಂತಹ ಕ್ರಿಯೆಗಳಿಂದ ನಾನು ಪ್ರಯತ್ನಿಸಿರಬಹುದು', ವೆಂಕಟೇಶ್ ಕುಡಿದ ಅಮಲಿನಲ್ಲಿ ಮಾತನಾಡುವಂತೆ ಮಾತನಾಡಿದ್ದ.

ಕುಟುಂಬದ ಚೌಕಟ್ಟಿನ ಬಗ್ಗೆ ಮಾತನಾಡುತ್ತಾ 'ಕುಟುಂಬ'ದ ಕಲ್ಪನೆಯೇ ಎಷ್ಟೆಲ್ಲಾ ವಿರೋಧಾಭಾಸಗಳನ್ನು ಹೊಂದಿದೆ, ಆಸ್ತಿಯ ಹಕ್ಕಿನ ಕಲ್ಪನೆ ಇಲ್ಲಿ ಎಷ್ಟು ಪ್ರಬಲವಾಗುತ್ತದೆ - ಕೌಟುಂಬಿಕ ಚೌಕಟ್ಟಿನಲ್ಲಿ ಬದುಕು ಅರಳುವುದಿಲ್ಲ ಎನ್ನುತ್ತಿದ್ದ. ಸದೂನ ಜೊತೆ ಬಸ್ಸಿನಲ್ಲಿ ಬರುವಾಗ ಗಂಗಾ ಏನನ್ನೂ ಮಾತನಾಡಿರಲಿಲ್ಲ. ನಿದ್ದೆಯನ್ನೂ ಮಾಡಿರಲಿಲ್ಲ. ಕಣ್ಣು ಮುಚ್ಚಿದರೆ ಕಾಣುತ್ತಿದ್ದುದು ತಿಮ್ಮುವಿನ ಮುಖ. ಒಯ್ ಎಂದು ಕಿರುಚುತ್ತಿದ್ದ ಬಾಣಂತಿಯ ಮುಖ. ತಿಮ್ಮು ಇದೆಲ್ಲ ಘರ್ಷಣೆಗಳ ನಂತರ ಏನೂ ಆಗದವಳ ಹಾಗೆ ಇದ್ದುಬಿಟ್ಟಿದ್ದಳು. ಅವಳ ಸಂದರ್ಭದಲ್ಲಿ ಗಂಗಾ ತನ್ನನ್ನಿಟ್ಟುಕೊಂಡು ನೋಡಲು ಪ್ರಯತ್ನಿಸುತ್ತಾಳೆ. ಆಕೆಗೇ ದಿಗ್ಭ್ರಮೆಯಾಗುತ್ತದೆ. ಒಂದು ಪಕ್ಷ ಕೆಲಸಕ್ಕೆ ರಾಜೀನಾಮೆ ಕೊಟ್ಟು ತಂದೆಯಿರದ, ಕುಟುಂಬವಿರದ ಒಂದು ಮಗುವಿನ ತಾಯಿಯಾಗಲು ಪ್ರಯತ್ನಿಸಿದರೆ? ಸಾಧನಾಳ ಆಟ/ಪಾಠ ನೋಡಿದಾಗ ತನಗೂ ಒಂದು ಅಂತಹ ಮಗು ಇದ್ದಿದ್ದರೆ - ಅನ್ನಿಸಿದ ಕ್ಷಣಗಳೂ ಉಂಟು. ಮದುವೆಯಿಲ್ಲದೆ ಅಥವಾ ಮಗುವಿಗೆ ಇಂತಹವನು ತಂದೆ ಎಂದು ಹೇಳಲಾರದೇ ಹೊಟ್ಟೆ ಹೊತ್ತುಕೊಂಡು ತಾನು ತಾಯಿಯಾಗಲಿದ್ದೇನೆ ಎಂಬ ಸತ್ಯದೊಂದಿಗೆ ಕಾಲೇಜಿಗೆ ಹೋಗಿ ಪಾಠ ಮಾಡಲು ಸಾಧ್ಯವೇ? ಅಕ್ಕ-ಪಕ್ಕ ಜನರಿರುವ ಮನೆಯಲ್ಲಿ ವಾಸಿಸಲು ಸಾಧ್ಯವೇ? ಕೆಲಸವಿಲ್ಲದೇ ತಾಯಿಯಾಗಲು ಪ್ರಯತ್ನಿಸಿದರೆ? ತನ್ನ ಹಸಿವಿಗೋ, ಅಥವಾ ತನ್ನ ಮಗುವಿನ ಹಸಿವಿಗೋ ಬಾಣಂತಿಯ ಹಾಗೆ ತಾನೂ ಕದಿಯಬೇಕಾಗುತ್ತದೆಯೇನೋ?....... ಹಸಿವೆ ಕೆಟ್ಟದ್ದು, ಬಡತನ, ಹಸಿವು ಯಾವ ಸ್ವಾಭಿಮಾನವನ್ನೂ ಮುರಿದುಬಿಡುತ್ತವೆಯೋ ಏನೋ?

ಬೆಟ್ಟ-ಗುಡ್ಡಗಳ ನಡುವೆ ಹರಿಯುವ ನೀರಿನಲ್ಲಿ, ಶಾಂತವಾಗಿರುವ ಕಾವೇರಿಯ ಅಡಿಯಲ್ಲಿ ಗಂಗಾ ಸಾಧನಾಳ ಸಾವನ್ನು, ತಿಮ್ಮುವಿನ ಗರ್ಭಪಾತವನ್ನು, ಬಾಣಂತಿಯ ಆಕ್ರಂದನವನ್ನು ಮರೆಯಲು ಪ್ರಯತ್ನಿಸುತ್ತಾಳೆ. ಮನದಾಳದಿಂದ ಹಾಡಲು ಪ್ರಯತ್ನಿಸಿದರೆ ಬೆಂಗಳೂರಿನಲ್ಲಿ ತುಂಬಿ ಬರದ ಮಾಧುರ್ಯ ಇಲ್ಲಿ ಎದೆಯಾಳದಿಂದ ತುಂಬಿ ಬರಬಹುದೇನೋ ಎನಿಸುತ್ತದೆ. ಮಾತನಾಡದೇ ಮೌನವಾಗಿರುವ, ಅಥವಾ ಮಾತನಾಡಿದರೆಲ್ಲಿ ಗಂಗಾಳ ವ್ಯಕ್ತಿತ್ವದ ಗಾಂಭೀರ್ಯತೆಗೆ ಧಕ್ಕೆ ಬರುತ್ತದೋ ಎಂಬಂತೆ ಮೌನವಾಗಿಯೇ ನಡೆದುಕೊಂಡು ಬರುವ, ಹೇಳಿದ್ದನ್ನ ಅರಗಿಸಿಕೊಳ್ಳುವವನಂತೆ ಆಲಿಸಿಕೊಂಡು ಬರುವ ಸದಾಶಿವನ ಬಗ್ಗೆ ಪ್ರೀತಿ ಎನಿಸುತ್ತದೆ. ಆಧುನಿಕ ಬದುಕಿನ ರಗಳೆಗಳೊಳಗೆ ಕಾಲಿಡದ ಮನುಷ್ಯ ಈತ ಎನಿಸುತ್ತದೆ.

ಹೀಗೆಯೇ ಕೊಠಡಿಯಲ್ಲಿ ಕುಳಿತಾಗ ಸದಾಶಿವ ತನ್ನ ಹಾಗೂ ಸತ್ತು ಹೋದ ಹೆಂಡತಿಯ ಬಗ್ಗೆ ಮಾತನಾಡತೊಡಗುತ್ತಾನೆ. ಮಾನಸಿಕವಾಗಿ ಹತ್ತಿರವಾಗಿನ ತನ್ನ ಹೆಂಡತಿಯ ಜೊತೆಗಿನ ಸಂಬಂಧದಲ್ಲಿ

ತಾನು ಹೇಗೆ ನಿರ್ವೀರ್ಯನಾಗುತ್ತಿದ್ದೇನೆಂದು ಹೇಳುವಾಗ ಆತನ ಕಣ್ಣಲ್ಲಿ ನೀರು ಸುರಿಯತೊಡಗಿತ್ತು. ನಿರ್ವೀರ್ಯತೆ ತನಗೀಗ ಮನಸ್ಸಿಗೇ ಅಂಟಿಕೊಂಡ ಜಡವಾಗಿಬಿಟ್ಟಿದೆ ಎಂದು ಸದಾಶಿವ ಜೋರಾಗಿ ಅಳತೊಡಗಿದಾಗ ಗಂಗಾ ಆತನ ಕೈ ಹಿಡಿಯುತ್ತಾಳೆ. 'ನೀನೇನೂ ಹೇಳಬೇಡ' ಎಂದು ಒಮ್ಮಿಂದೊಮ್ಮೆಲೇ ಗಂಗಾ ಅವನನ್ನು ಮುದ್ದಿಸುತ್ತಾಳೆ. ಸದಾ ತಬ್ಬಿ ಹಿಡಿಯುತ್ತಾನೆ. ಅಂದು ಸದಾ ಹುಚ್ಚನಂತೆ ಗಂಗಾಳ ದೇಹವನ್ನು ಒಂದು ಬಾರಿ...... ಎರಡು ಬಾರಿ.... ಮೂರು ಬಾರಿ...... ಪ್ರತಿ ಭಾಗದ ಮೂಲೆಯಲ್ಲಿ ತನ್ನ ಮುದ್ರೆ ಒತ್ತಿದಾಗ ಆಕೆಯನ್ನು ಗೆದ್ದೆ ಎನ್ನುವ ಭಾವ ಆತನಲ್ಲಿ ಹಾದು ಹೋಗಿರಬೇಕು. ವಿಜಯೋತ್ಸವದ ಉತ್ಸಾಹ ದೇಹ/ಮನದಲ್ಲಿ ಎಲ್ಲಾ ತಲೆ ಹಾಕಿರಬೇಕು...... ಏನಾಯಿತೋ ಆತನಿಗೆ! ಇದ್ದಕ್ಕಿದ್ದಂತೆ ಅಳತೊಡಗಿದ್ದ. 'ಕ್ಷಮಿಸು' ಎಂದು ಗಂಗಾಳ ತೊಡೆಯ ಮೇಲೆ ತಲೆ ಇಟ್ಟಿದ್ದನು. ಮೌನವಾಗಿ ಅಳುತ್ತಿದ್ದ ಗಂಗಾ ಕೂಡಾ ಜೋರಾಗಿ ಅಳಲು ಪ್ರಾರಂಭಿಸುತ್ತಾಳೆ. ಸದಾ 'ಕ್ಷಮಿಸು, ಕ್ಷಮಿಸು' ಎಂದು ಹೇಳುತ್ತಲೇ ಇದ್ದ. ಗಂಗಾ ಅಳುತ್ತಲೇ ಮಾತನಾಡಲು ಆರಂಭಿಸಿದ್ದಳು. ಈ ರೀತಿಯ ದೈಹಿಕ ಆತ್ಮೀಯತೆಯಿಂದಾಗಿ ಸದಾಗೆ ತನ್ನ·ಬಗ್ಗೆ ಆತ್ಮೀಯ ಭಾವ ಹುಟ್ಟಿಬಿಡಬಹುದು. ಆ ಆತ್ಮೀಯತೆ ತನ್ನಲ್ಲಿ ಹೆದರಿಕೆಯನ್ನು ಹುಟ್ಟಿಸುತ್ತದೆ ಎಂದು ಗಂಗಾ ಮತ್ತಷ್ಟು ಜೋರಾಗಿ ಅಳತೊಡಗಿದ್ದಳು. ಗಂಗಾ ಹಾಗೆಯೇ ಮುಂದುವರಿಸಿದ್ದಳು, 'ನನ್ನದು ಅಲೆಮಾರಿ ಜೀವನ. ಈ ಆತ್ಮೀಯತೆಯ ಬೇರುಗಳು ಮನದಾಳದಲ್ಲಿ ಉಳಿಯಬಹುದೇ ಹೊರತು ಅವೇ ಶಾಶ್ವತ ಬೇರುಗಳಾಗಿ ಉಳಿಯುವುದಿಲ್ಲ. ಮತ್ತೆ ಮತ್ತೆ ನಾನು ನಿನಗೆ ಈ ಮಾತನ್ನು ಹೇಳುತ್ತಿದ್ದೇನೆ. ಯಾರೊಬ್ಬರಿಗಾದರೂ ಅಂಟಿಕೊಂಡು ನಾನು ಬದುಕುತ್ತೇನೆ ಎಂಬ ನಂಬಿಕೆ ನನಗೇ ಹೊರಟು ಹೋಗಿದೆ. ಅಂಟಿಕೊಳ್ಳುವ ಎನ್ನುವ ಪ್ರವೃತ್ತಿಯೇ ನನ್ನಲ್ಲಿ ಹೆದರಿಕೆಯನ್ನು ಹುಟ್ಟು ಹಾಕುತ್ತದೆ. ಮದುವೆ, ಕುಟುಂಬ ಎನ್ನುವ ಪ್ರಶ್ನೆಗಳು ಈಗ ಕನಸಿನಲ್ಲಿಯೂ ಸುಳಿಯುವುದಿಲ್ಲ. ಕ್ಷಮಿಸು ಸದಾ, ಬಹಳ ವರ್ಷದ ನಂತರ ನಿನ್ನ ಜೀವನದಲ್ಲಿ ಹೊಸ ಉತ್ಸಾಹ, ಮಾನಸಿಕ, ದೈಹಿಕ ನಿರ್ವೀರ್ಯತೆ ಮೀರುವಂತಹ ಹೊಸ ಉತ್ಸಾಹ ನಿನ್ನಲ್ಲಿ ಮೂಡಿದೆ. ಆದರೆ ಅನಿವಾರ್ಯವಾಗಿ ನಿನ್ನೊಡನೆ ಬದುಕನ್ನು ನಾನು ಒಪ್ಪಿಕೊಳ್ಳಲಾರೆ. ಪ್ರತಿ ಹೆಜ್ಜೆ, ಹಂತದಲ್ಲಿಯೂ ಇದನ್ನು ನಾನು ನಿನಗೆ ಸ್ಪಷ್ಟ ಪಡಿಸುತ್ತಿದ್ದೇನೆ. ಏಕೆಂದರೆ ಈ ರೀತಿಯ ಭಾವನಾತ್ಮಕತೆಯ ಪೆಟ್ಟು ಹೆಚ್ಚು ಹೆಚ್ಚಾಗಿ ಮನುಷ್ಯನನ್ನು ಹಾಳು ಮಾಡಬಹುದು.......'. ಗಂಗಾ ಏನೇನೋ ಮಾತನಾಡುತ್ತಲೇ ಇದ್ದಳು. ಮಧ್ಯೆ ರಾತ್ರಿ ನಿದ್ದೆಗಣ್ಣಿನಲ್ಲಿ ಎರಡು-ಮೂರು ಬಾರಿ ಆಕೆ ಕೂಗಿಕೊಂಡಳೆಂದು ಬೆಳಿಗ್ಗೆ ಸದಾ ಹೇಳಿದ್ದ. ತಾಯಿಯ ಹತ್ತಿರ ಮಾತನಾಡುವ ರೀತಿ ಏನೋ ಬಡಬಡಿಸುತ್ತಿದ್ದಳೆಂದೂ ಹೇಳಿದ. ಸದಾಶಿವ ಆಕೆಯ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ತಟ್ಟುತ್ತಿರುವಾಗಲೇ ಮಾತನಾಡುತ್ತಾ, ಮಾತನಾಡುತ್ತಾ ಗಂಗಾ ನಿದ್ರೆ ಮಾಡಿಬಿಟ್ಟಿದ್ದಳು. ಯಾವಾಗ ನಿದ್ದೆ ಮಾಡಿದಳೋ ಆಕೆಗೇ ತಿಳಿಯದು. ಕಣ್ಣು ಬಿಟ್ಟಾಗ ಒಂದು ಕೈಯನ್ನು ತನ್ನ ತಲೆಯ ಮೇಲಿಟ್ಟು, ಇನ್ನೊಂದು ಕೈಯನ್ನು ಗದ್ದಕ್ಕೆ ಕೊಟ್ಟು ಏನೋ ಯೋಚಿಸುತ್ತಿದ್ದ ಸದೂವನ್ನು ಗಂಗಾ ಕಂಡಿದ್ದಳು.

* * * * *

ಯಾವ ಸಂಬಂಧವೂ ನಂಬಿಕೆಯ ಬೇರುಗಳನ್ನು ಹುಟ್ಟುಹಾಕದೇ ಹೋದಾಗ ಗಂಗಾಗೆ ಆಕೆಯ ಬಗ್ಗೆ ಆಕೆಗೇ ಹೆದರಿಕೆಯಾಗತೊಡಗಿತ್ತು. ಎಲ್ಲಾ ದ್ವಂದ್ವಗಳನ್ನೂ ಮೀರಿ ಬರಬೇಕಾದ ನಂಬಿಕೆ ಅದು. ನಂಬುತ್ತೇನೆ ಎಂದು ನಟಿಸಬಹುದು, ಆದರೆ ನಂಬಿಕೆ ಹೃದಯದ ಪ್ರಶ್ನೆಯಾಗಿ ಮೂಡಬೇಕು. ಅಂತಹ ಹೃದಯದ ಪ್ರಶ್ನೆಯಾಗಿ ಗಂಗಾ ಹುಡುಕುತ್ತಿದ್ದ ನಂಬಿಕೆ ಆಕೆಯ ಮನದಾಳದಲ್ಲಿ ಮೂಡಲಿಲ್ಲ. ಗಂಡು-ಹೆಣ್ಣಿನ ಸಂಬಂಧದಲ್ಲಿ ಇಂತಹ ಅರ್ಥವಂತಿಕೆ ಹುಡುಕುವುದು ತನ್ನ ಹುಚ್ಚುತನವೇನೋ ಎಂದು ಬಲವಾಗಿ ಅನ್ನಿಸತೊಡಗಿತು. ಸದೂಗೆ ಮೇಲಿಂದ ಮೇಲೆ ಹೇಳಿದಾಗ್ಯೂ ತೀರಾ Sentimental ಆಗಿ ವರ್ತಿಸುತ್ತಿದ್ದ.

ಭಾವನೆಗಳಿಂದ ನಿನ್ನನ್ನು ನಾನು ಕಟ್ಟಿಹಾಕುವುದಿಲ್ಲ ಎಂದು ಹೇಳುತ್ತಲೇ ಅಪರೋಕ್ಷವಾಗಿ ಅಂಟಿಕೊಳ್ಳುವ ಸ್ವಭಾವದಿಂದಾಗಿ ಗಂಗಾಳಲ್ಲಿ ಪಾಪಪ್ರಜ್ಞೆ ಹುಟ್ಟುಹಾಕುತ್ತಿದ್ದ. ಬೆಂಗಳೂರು ನಗರಕ್ಕೆ ಬಂದು ಗಂಗಾಳನ್ನೆ ಕೇಂದ್ರಬಿಂದುವಾಗಿಟ್ಟುಕೊಂಡು ಜೀವನದ ಲಯಗಳನ್ನು ಅಲ್ಲಿ ಹುಡುಕಲು ಪ್ರಯತ್ನಿಸುತ್ತಿದ್ದ. ಇದ್ದಕ್ಕಿದ್ದಂತೆ ಆತನಲ್ಲಿ ತುಂಬಿಕೊಂಡ ಹೊಸ ಉತ್ಸಾಹಕ್ಕಾಗಿ ಇಡಿಯ ಬದುಕೇ ಆತನಿಗೆ ಹೊಸದಾಗಿ ಕಾಣಿಸತೊಡಗಿತ್ತು. ಅಂಟಿಕೊಂಡು ಬದುಕುವ ಬದುಕಿಗೆ ಗಂಗಾ ತಯಾರಿರಲಿಲ್ಲ. ಸದೂವಿನದು ಅಂಟಿಕೊಂಡು ಬದುಕುವ ಮನಸ್ಸು. ಆತನೊಡನೆ ತಾನೂ ಸುಖವಾಗಿರಲಾರೆ, ಅವನನ್ನೂ ಸುಖವಾಗಿರಲು ಬಿಡಲಾರೆ ಎಂದು ಆಕೆಯ ಮನಸ್ಸಿಗೇ ಅನ್ನಿಸುತ್ತಿತ್ತು. ಆಕೆಯ ಬಗ್ಗೆ ಆತನಿಗಿದ್ದ ಧನ್ಯತಾ ಭಾವವೇ ಆಕೆಗೆ ಕಿರಿ ಕಿರಿಯನ್ನುಂಟು ಮಾಡುತ್ತಿತ್ತು. ಗಂಡು-ಹೆಣ್ಣಿನ ಸಮಾನಾಂತರ ರೇಖೆಯ ಸಂಬಂಧ ತಮ್ಮದಾಗಿರಲಿಲ್ಲ ಎಂಬುದು ಆಕೆಗೆ ಅರಿವಿತ್ತು. ಪ್ರಜ್ಞಾಪೂರ್ವಕವಾಗಿ ಗಂಗಾ ಅವನನ್ನು ದೂರ ಸರಿಸುತ್ತಿದ್ದಳು. ಕರುಣೆಗೆ, ಧನ್ಯತಾಭಾವಕ್ಕೆ ಜಗ್ಗಿ ಉಳಿದುಕೊಳ್ಳುವ ಸಂಬಂಧ ಬಹಳ ದಿನದವರೆಗೆ ಪ್ರೀತಿ-ತುಂಬಿದ ಸಂಬಂಧವಾಗಲಾರದೇನೋ ಎನ್ನುವ ಅನುಮಾನ. ಹೀಗಾಗಿ ಸದೂನೊಟ್ಟಿಗೆ ಹಲವಾರು ಕ್ಷಣಗಳು, ರಾತ್ರಿಗಳ ಕಳೆದರೂ ಗಂಗಾನಲ್ಲಿ ಅವನ ಆತ್ಮೀಯತೆ ಹೆದರಿಕೆ ಹುಟ್ಟಿಸುತ್ತಿತ್ತು. ಆಗೆಲ್ಲ ಅವನಿಗೆ ಬೇರೆ ಒಂದು ಮದುವೆಯಾಗುವಂತೆ ಒತ್ತಾಯಿಸುತ್ತಿದ್ದಳು, ಪ್ರೋತ್ಸಾಹಿಸುತ್ತಿದ್ದಳು.

ಗಂಡು-ಹೆಣ್ಣಿನ ಸಂಬಂಧದಲ್ಲಿ ತಾನು ಹುಡುಕುತ್ತಿರುವುದು ಮರೀಚಿಕೆಯೇನೋ, ಭ್ರಮೆಯೇನೋ ಎನ್ನಿಸಿದಾಗಲೆಲ್ಲಾ, ಗಂಗಾ ಸ್ತ್ರೀ ಮುಕ್ತಿ ಸಂಘಟನೆಯ ಕೆಲಸಗಳಲ್ಲಿ ತನ್ನನ್ನು ತೀವ್ರವಾಗಿ ತೊಡಗಿಸಿಕೊಳ್ಳುವಳು. ಗಂಡು-ಹೆಣ್ಣಿನ ಸಂಬಂಧವೊಂದೇ absolute ಆಗಿರೋ ಸತ್ಯ ಎನ್ನುವ ತಾರುಣ್ಯದ ಕನಸುಗಳು ಗಂಗಾಳಲ್ಲಿ ನಿಧಾನವಾಗಿ, ಕ್ರಮೇಣವಾಗಿ ಕರಗಿ ಹೋಗತೊಡಗಿದ್ದವು. ಸ್ತ್ರೀ ಮುಕ್ತಿ ಸಂಘಟನೆಯ ಕೆಲಸಗಳನ್ನು ಧ್ಯಾನದಿಂದ ಎಂಬಂತೆ ಮಾಡುವಳು. ಯಾಕೋ ಮನಸೊಳಗಿನದೆಲ್ಲ ಎಲ್ಲೂ ಕರಗುವುದಿಲ್ಲ, ಎಲ್ಲಿಯೋ ಹೆಪ್ಪುಗಟ್ಟಿಕೊಳ್ಳತೊಡಗಿದೆ ಎನಿಸಿದಾಗ ಗಂಗಾ ಇದೆಲ್ಲವನ್ನು ಮರೆಸುವಂತಹ ಒಂದು ಬ್ರೇಕ್‌ಗಾಗಿ ಕಾಯತೊಡಗಿದಳು. ಕಾಲೇಜ್‌ನಲ್ಲಿ ಪಾಠ ಮಾಡುವುದು ಯಾಂತ್ರಿಕ ಎನಿಸತೊಡಗಿತ್ತು. ಕೆಲವೊಮ್ಮೆ ಸ್ತ್ರೀ ಮುಕ್ತಿ ಸಂಘಟನೆಯ ಕೆಲಸಗಳನ್ನು ಧ್ಯಾನದಿಂದ ಮಾಡಿದರೆ ಕೆಲವೊಮ್ಮೆ ಎಲ್ಲಿಯೋ ಇದ್ದಂತೆ ಇದ್ದು ಬಿಡುವಳು. ಸಾಧನಾಳ ರೀತಿ ತನಗೊಂದು ಮಗು ಇದ್ದಿದ್ದರೆ ಎನ್ನುವ ಚಿಂತೆ ಗಂಗಾಳನ್ನು ಕಾಡದಿರಲಿಲ್ಲ.

ಮಗು......! ಒಂದು, ಎರಡು ತಿಂಗಳಲ್ಲಿ ಎಣಿಸಿದ ದಿನಗಳಲ್ಲಿ ತನ್ನ ದೇಹದಿಂದ ರಕ್ತ ಈಚೆ ಒಸರದಿದ್ದಾಗ ಗಂಗಾಗೆ ನಿಜಕ್ಕೂ ಗಾಬರಿಯಾಗತೊಡಗಿತ್ತು. ಮತ್ತೊಂದೆಡೆ ತನ್ನದೇ ಮಗು, ಏನೋ ಉದ್ವೇಗ, ಹೆದರಿಕೆ, ಭಯ, ಆತಂಕ. ಸತ್ತ ಸಾಧನಾ ಮಗುವಾಗಿ ತನ್ನ ಹೊಟ್ಟೆಯಲ್ಲಿ ಮೂಡಿ ಬರುವ ಹಾಗೆ..... ಹೀಗೆಯೇ ಏನೇನೋ..... ಮಗು ತನ್ನ ಬದುಕಿನ ಸೊನ್ನೆಗೆ ಒಂದು ಕೇಂದ್ರ ಬಿಂದುವಾಗುತ್ತದೆ. ಮದುವೆ ಇಲ್ಲ, ನಾನೊಟ್ಟಿಗಿದ್ದೇನೆ ಎಂದು ಒಂದು ಸೂರಿನಡಿಗೆ ಬದುಕುವ ಸಂಗಾತಿ ಇಲ್ಲ, ... ತನ್ನ ಹೊಟ್ಟೆಯಲ್ಲಿ ಮಗು.... ಅಹುದೋ ಅಲ್ಲವೋ....... ಅದೂ ತಿಳಿಯದು. ಈ ಹೆದರಿಕೆಯಲ್ಲಿಯೇ ಒಂದು ದಿನ ಗಂಗಾ ಅನುವನ್ನು ಅರಸಿಕೊಂಡು ಹೋದಳು. ವೈಚಾರಿಕ ಲಯದ ಶುದ್ಧತೆಯಲ್ಲಿ ಬದುಕನ್ನರಸುವ ಅನುವಿನೊಟ್ಟಿಗೆ ಕೂತು ಮಾತನಾಡುವುದು ಗಂಗಾಗೆ ಕಷ್ಟ ಎನಿಸುತ್ತಿರಲಿಲ್ಲ. 'ಸ್ತ್ರೀ ಮುಕ್ತಿ' ಸಂಘಟನೆಯಿಂದ ತರುತ್ತಿದ್ದ ಪತ್ರಿಕೆಯಲ್ಲಿ ಅನುವಿನೊಟ್ಟಿಗೆ ಕೆಲಸ ಮಾಡುತ್ತಿದ್ದರಿಂದ, ಜೊತೆಗೆ ಓದಿದ ದಿನಗಳನ್ನು ಮೈಸೂರಿನಲ್ಲಿ ಒಟ್ಟಿಗೆ ಕಳೆದುದರಿಂದ ಅನುವಿನೊಡನೆ ಗಂಗಾ ಅನೇಕ ಸಮಾಚಾರಗಳನ್ನು ಹಂಚಿಕೊಳ್ಳುವಳು. ಅನುವಿಗೆ ಕೇಳಿಸಿಕೊಳ್ಳುವ ಸಹನೆ ಇತ್ತು. ಸರಿ/ತಪ್ಪು ಎನ್ನುವ ಹಟದ ಸ್ವಭಾವವಲ್ಲ. ಎದುರಿನ ವ್ಯಕ್ತಿಯ

ಬದುಕಿನೊಳಗೆ ಇನ್ನೇನೋ ಆಯಾಮಗಳಿರಬಹುದು, ತನ್ನ ನಂಬಿಕೆ/ವಿಶ್ವಾಸದ ಬದುಕಿನ ಬದುಕು ಅವರದಲ್ಲದಿರಬಹುದು ಎನ್ನುವ ನಂಬಿಕೆಯ ಹುಡುಗಿ. ಕೇಳಿಸಿಕೊಳ್ಳುವ ಸಹನೆಯಷ್ಟೇ ಅಲ್ಲ, ಮುಂದಾಗುವುದನ್ನು ಗ್ರಹಿಸಬಹುದಾದ ವ್ಯಕ್ತಿತ್ವದ ಬೇರುಗಳು ಇದ್ದವು ಈಕೆಯಲ್ಲಿ. ಸಮಸ್ಯೆಗೆ ನೇರ ಉತ್ತರ ಇದೇ ಎನ್ನುವವಳಲ್ಲ, ನೋಡಿ ಹೀಗಾಗಬಹುದು, ನನಗೆ ಹೀಗೆ ಅನಿಸುತ್ತದೆ, ನಿಮಗೆ ಹೇಗೆ ಅನಿಸುತ್ತದೆಯೋ? ಹೀಗೆ ಹೇಳಬೇಕಾದುದನ್ನು ನೋವಾಗದ ರೀತಿ ಹೇಳಬೇಕೆನ್ನುವ ಸ್ವಭಾವ. ಗಂಗಾ ತನ್ನ ಬದುಕಿನ ಆತಂಕದ ಕ್ಷಣಗಳನ್ನು ಅನೂವಿನ ಹತ್ತಿರ ಹಂಚಿಕೊಂಡಿದ್ದಳು.

ಗಂಗಾ ತನ್ನ ಹೊಟ್ಟೆಯೊಳಗೆ ಮಗು ಇದೆಯೋ ಇಲ್ಲವೋ ಎಂಬ ತನ್ನ ಅನುಮಾನದಿಂದಲೇ ಮಾತನ್ನು ಪ್ರಾರಂಭಿಸಿದಳು. ಸಾಧನಾಳ ಸಾವು/ತನ್ನ ಭವಿಷ್ಯ ಇಂತಹ ಆತಂಕಗಳನ್ನೇ ಕುರಿತು ಮಾತನಾಡಲು ಪ್ರಯತ್ನಿಸಿದ್ದಳು. ಅನುವಿಗೆ ಗಂಗಾಳೊಟ್ಟಿಗೆ ಮಾತನಾಡುವಾಗ ತಂದೆಯಿಲ್ಲದ ಮಗುವಿನ ತಾಯಿಯಾಗಿ ಗಂಗಾ ಈ ಸಮಾಜ ಹೇಗೆ ಎದುರಿಸುತ್ತಾಳೆ ಎಂಬ ಪ್ರಶ್ನೆಯೇ ಕಾಡುತ್ತಿತ್ತು. ಕಾಲೇಜಿನಲ್ಲಿ ತೊಂದರೆಯಾಗುವುದಿಲ್ಲವೇ? ಎಲ್ಲಾ ವಿದ್ಯಾರ್ಥಿಗಳು! ಕಾಲೇಜಿನ ಆವರಣದಲ್ಲಿ ಇದು ಒಂದು ನೈತಿಕ ಮೌಲ್ಯದ ಪ್ರಶ್ನೆಯಾಗಿಬಿಟ್ಟರೆ ಗಂಗಾಳ ಸ್ಥಿತಿ ಶೋಚನೀಯವಾಗುವುದಿಲ್ಲವೇ? ಹಾಗೆ ಒಂದು ವಿಚಾರಧಾರೆಗೋಸ್ಕರ ಕೆಲಸ ಬಿಡುತ್ತೇನೆಂದರೆ ಗಂಗಾ ಹುಟ್ಟುವ ಮಗುವಿನೊಂದಿಗೆ ಹೇಗೆ ಜೀವನ ಸಾಗಿಸುತ್ತಾರೆ? ತಂದೆಯಿಲ್ಲದ ಮಗುವೆಂದರೆ ಮಗುವಿನ ಬಗ್ಗೆ ಅಸಡ್ಡೆ ಇರಲಿ, ಗಂಗಾಳ ನೈತಿಕತೆಯನ್ನೇ ಒಂದು ಮೌಲ್ಯವಾಗಿ ಇಟ್ಟುಕೊಂಡುಬಿಟ್ಟರೆ ಹೇಗೆ ಗಂಗಾ ಇಲ್ಲಿ ಬದುಕುತ್ತಾರೆ? ಇಂತಹ ಪ್ರಶ್ನೆಗಳನ್ನೇ ಅನೂ ಗಂಗಾಳ ಮುಂದೂ ಬಿಚ್ಚಿಟ್ಟರು. ಗಂಗಾ ತನ್ನ ಅಂತರಂಗದ ಸಮಸ್ಯೆಗಳನ್ನು ಅನೂವಿನೊಂದಿಗೆ ಮನಸ್ಸು ಬಿಚ್ಚಿ ಹಂಚಿಕೊಳ್ಳತೊಡಗಿದಳು. ತಂದೆಯಿಲ್ಲದ ಈ ಮಗು ತನ್ನ ಮಗು ಆಗಲಾರದೇ? ಯಾರಲ್ಲಿ ಹೋಗುವುದು? ನಾನು ತಂದೆಯಿಲ್ಲದ ಮಗುವಿನ ತಾಯಿಯಾಗಲಿದ್ದೇನೆ, ಮಗುವಿನ ಜವಾಬ್ದಾರಿ ಹೇಗೆ? ಇಂತಹ ಪ್ರಶ್ನೆಗಳನ್ನು ಯಾರ ಮುಂದೆ ಇಡುವುದು! ಇದು ಹುಚ್ಚುತನವೇ ಅಥವಾ ಆದರ್ಶದ ಹಮ್ಮೇ? ಈ ಆದರ್ಶದ ಹುಚ್ಚಿನಲ್ಲಿ ತನ್ನ ಬದುಕು ನಿಜವಾಗಿಯೂ ಅರ್ಥವಂತಿಕೆ ಪಡೆದೀತೇ? ಈ ಹೋರಾಟದಲ್ಲಿಯೇ ಮನಸ್ಸು ಬದುಕುವ ಛಾತಿಯನ್ನೇ ಕಳೆದುಕೊಂಡುಬಿಟ್ಟರೆ? ಈ ಹಂತದಲ್ಲಿಯೇ ಬದುಕು ನಶಿಸಿ ಹೋದರೆ? ವೆಂಕಟೇಶನಲ್ಲಿ ತನ್ನ ಸಮಸ್ಯೆ ಹೇಳಿಕೊಂಡರೆ? ಆದರ್ಶದ ಅಮಲಿಗೆ ಜವಾಬ್ದಾರಿ ತೆಗೆದುಕೊಳ್ಳುವುದನ್ನು ಒಪ್ಪಿಬಿಡಬಹುದು. ಹಣ ಸಹಾಯ ಕೂಡಾ ಮಾಡಿಬಿಡಬಹುದು. ದಿನ ನಿತ್ಯ ಜೀವನದಲ್ಲಿ ಅಲ್ಲವಾದರೂ ಒಟ್ಟಾರೆ ನಿನ್ನ ಬೆಂಬಲಕ್ಕಿರುವೆ ಎನ್ನುತ್ತಾನೆ. ನಿತ್ಯ ಜೀವನದ ರಗಳೆ? ಸದೂನೊಟ್ಟಿಗೆ ಹೇಳಿದರೆ? ಮಗು ಯಾರದೆಂದು ಕೇಳಲಾರೆ, ಆದರೆ ನಾನು ಮಗುವಿನ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದಾನು. ಆ ಸಂದರ್ಭದ ಕಷ್ಟ ನಷ್ಟಗಳು ನಿನಗೆ ಗೊತ್ತಿಲ್ಲ, ನನ್ನ ತಾಯಿಯನ್ನು ಒಪ್ಪಿಸಿ ಕರೆತರುತ್ತೇನೆ ಎಂದಾನು. ಇದನ್ನು ಸದೂ ಬೂಟಾಟಿಕೆಗೆ ಮಾತನಾಡುವುದಿಲ್ಲ, ಈ ಮೂಲಕ ತನ್ನನ್ನು ಗಂಗಾಳ ಬದುಕಿಗೆ ಅಂಟಿಕೊಳ್ಳುವ ಪ್ರಯತ್ನವನ್ನು ಆತ ಮಾಡಿಯಾನು! ಬಾಲುವಿನಲ್ಲಿ ಈ ಬಗ್ಗೆ ಹೇಳಿದರೆ? ತಂದೆ ಯಾರೆಂದು ಕೇಳಬೇಡ, ನಾನು ಮಗುವಿನ ತಾಯಿಯಾಗಲಿದ್ದೇನೆ - ಎಂದರೆ ಬಾಲು ಮಾನವೀಯ ಮೌಲ್ಯ ಕುರಿತು ಮಾತನಾಡುತ್ತಾನೆ ಕನಸುಗಳನ್ನು ಹೇಳುತ್ತಾನೆ, ಈ ದೇಶದಲ್ಲಿ ತಂದೆಯಿಲ್ಲದ ಮಗುವಿಗೆ ತಾಯಿಯಾಗುವ ಅಥವಾ ಅದನ್ನು ಹಕ್ಕೆಂದು ಬಯಸುವ ಹೆಣ್ಣು ಖಂಡಿತಾ ಸ್ವಾತಂತ್ರ್ಯದ ಪ್ರತಿನಿಧಿಯಾಗುತ್ತಾಳೆ ಎಂದು ಕನಸುಗಳೊಟ್ಟಿಗೆ ಮಾತನಾಡುತ್ತಾನೆ. ಮರುದಿನ ಬಸ್‌ಸ್ಟ್ಯಾಂಡಿನಲ್ಲಿ ಸಿಗು, ಚರ್ಚೆ ಮಾಡೋಣ, ಎಂದು ಮರುದಿನ ಬಸ್‌ಸ್ಟ್ಯಾಂಡ್‌ಗೆ ಬರದೇ ಈತ ತಪ್ಪಿಸಿಕೊಂಡುಬಿಡುತ್ತಾನೆ. ಮಾರ್ಕ್ಸಿಸಂನೇ ನಂಬಿ, ಬೌದ್ಧಿಕ ಲಯದೊಳಗೇ ಬದುಕನ್ನು ಶೋಧಿಸುವ ಇಂದ್ರಜಿತ್ ಮುಂದೆ ಈ

ಸಮಸ್ಯೆ ಇಟ್ಟರೆ? ಗಂಗಾ ನಿಧಾನವಾಗಿ ಮಾತನಾಡಿ, ಅವರಿವರು ಕಂಡಾರು ಎನ್ನುತ್ತಾ, ಕೇಳಿಯಾರು ಎನ್ನುತ್ತಾ ಹೇಳದೇ ಕೇಳದೇ ನಾಪತ್ತೆಯಾಗಿಬಿಡುತ್ತಾನೇನೋ? ಎಲ್ಲರ ವ್ಯಕ್ತಿತ್ವದ ತಂತುಗಳಲ್ಲಿಯೂ ಗಂಗಾ ಈ ಪ್ರಶ್ನೆಯನ್ನಿಟ್ಟು ನೋಡಲು ಪ್ರಯತ್ನಿಸುತ್ತಾಳೆ. ಯಾರ ಹೆಸರಿಲ್ಲದ ಕಂದನಿಗಾಗಿ ಕೆಲಸ ಬಿಟ್ಟರೆ? ಆಕೆಗೆ ಒಮ್ಮೆ ಎದೆ ದಸಕ್ ಎನ್ನುತ್ತದೆ. ಕೆಲಸ ಬಿಟ್ಟರೆ ಅನ್ನದ ಗತಿ? ಎಲ್ಲಿ ಬೇಡಿಕೊಂಡು ಅಲೆಯುವುದು? ಯಾವುದೇ ಸಂಘಟನೆ ಎಷ್ಟು ದಿನ ತನಗೆ ಅನ್ನ ಹಾಕಬಹುದು? 'ಸ್ತ್ರೀ ಮುಕ್ತಿ' ಸಂಘಟನೆಯಂತಹ ಸಂಘಟನೆಯಲ್ಲಿಯೇ ಎಷ್ಟು ದಿನ ಇನ್ನೊಬ್ಬರ ಅವಲಂಬಿಸಿ ಇರಲು ತನಗೆ ಸಾಧ್ಯ? ಎಷ್ಟು ದಿನ ಆಶ್ರಿತಳಾಗಿ ತಾನು ಬದುಕಿನ ಚಾಲನೆಯನ್ನು ಹಿಡಿಯಬಹುದು? ಅನು Practical ಆಗಿರುವ ಮಾತುಗಳನ್ನು ಹೇಳುತ್ತಾಳೆ. ತಂದೆಯಿಲ್ಲದ ಮಗುವಿನ ತಾಯಿಯಾಗಬೇಕೆಂಬ ತನ್ನ ಸ್ವಾತಂತ್ರ್ಯದ ಪ್ರತೀಕದ ಹುಚ್ಚೇ? ಆದರ್ಶದ ಹುಚ್ಚೇ? ಅಥವಾ ಸತ್ತ ಸಾಧನಾ ತನ್ನ ಹೊಟ್ಟೆಯಲ್ಲಿ ಮಗುವಾಗಿ ಬರಲಿದ್ದಾಳೆ ಎನ್ನುವ ಭ್ರಮೆಯೇ? ಸುಮ್ಮನೇ ಗೊಂದಲಗಳಲ್ಲೇ ಅಬಾರ್ಶನ್ ಮಾಡಿಸಿಬಿಟ್ಟರೆ? ಮಗು ಬೇಕೆಂಬ ಹುಚ್ಚಿನಿಂದ ತಾನು ಸಾಧಿಸುವುದಾದರೂ ಏನನ್ನು? ಈಗ ಕೆಲಸ ಇರುವುದರಿಂದ ನೆಮ್ಮದಿಯಿಂದ ಎರೆಡು ಹೊತ್ತು ಅನ್ನವಾದರೂ ತಿನ್ನುತ್ತೇನೆ. ತಿನ್ನುವ ಅನ್ನಕ್ಕೂ ಕೈ ಚಾಚಬೇಕಾದ ಹೊತ್ತು ಬಂದರೆ? ಸಿನೇಮಾ ಥಿಯೇಟರ್‌ಗಳಲ್ಲಿ, ಮೆಜೆಸ್ಟಿಕ್ ಬೀದಿಗಳಲ್ಲಿ, ರಸ್ತೆಗಳಲ್ಲಿ ಮಕ್ಕಳನ್ನು ಜೋಳಿಗೆಗೆ ಕಟ್ಟಿಕೊಂಡು ತಿರುಗುವ ಭಿಕ್ಷುಕಿಯರನ್ನು ಕಂಡಾಗ ಗಂಗಾ ಅವರ ಸ್ಥಿತಿಯಲ್ಲಿ ತನ್ನನ್ನ ಇಟ್ಟುಕೊಂಡು ನೋಡುತ್ತಾಳೆ. ಅವರ ಮುಖಗಳಲ್ಲಿ ಅವರ ದೈನ್ಯತೆಯಲ್ಲಿ ಕರುಳು ಕಿವುಚಿ ಕೂಗುವ ಕಂದಮ್ಮಗಳಲ್ಲಿ ಗಂಗಾ ಆ ದಿನಗಳಲ್ಲೆಲ್ಲ ತನ್ನನ್ನು ಗುರುತಿಸಿಕೊಳ್ಳತೊಡಗಿದ್ದಳು. ಕಣ್ಣಿಗೆ ಕಾಣದ ಯಾವುದೇ ಭಾಗದಲ್ಲಿ ಹುಟ್ಟುವ ಕಂದನೊಡನೆ ಬೇಡುವ ಚಿತ್ರ ಕಣ್ಣಿಗೆ ಕಟ್ಟಿಕೊಂಡಾಗ ಗಂಗಾಗೆ ಇದ್ದಕ್ಕಿದ್ದ ಹಾಗೆ ನಾನು ಯಾರು? ಎಂಬ ಪ್ರಶ್ನೆಯೇ ಎದುರಾಗುತ್ತಿತ್ತು. 'ನಾನು' ಎಂಬ ಪ್ರಶ್ನೆಯೊಡನೆ ಮಗುವಿಗಾಗಿ ಊರು ಬಿಡಬೇಕಾಗುತ್ತದೆ, ಕೆಲಸ ಬಿಡಬೇಕಾಗುತ್ತದೆ, ಬದುಕು ಚೂರು ಚೂರಾಗುತ್ತದೆ. ತಾಯ್ತನ ತನಗೆ ಮಾತ್ರ ಸಂಬಂಧಿಸಿದ ಪ್ರಶ್ನೆಯಲ್ಲ. ಇಲ್ಲಿ ಒಪ್ಪಿಗೆ ಅಥವಾ ಅಸ್ತಿತ್ವ ಸಿಗುವುದೇ ತಂದೆಯ ಮುದ್ರೆ ಇದ್ದಾಗ. ಯಾಕೋ ಇದ್ದಕ್ಕಿದ್ದ ಹಾಗೆ ಗಂಗಾಗೆ ಸ್ವಾತಂತ್ರ್ಯಾಪೂರ್ವ ಲೇಖಕಿ ಕಲ್ಯಾಣಮ್ಮನ ಮಾತು ಜ್ಞಾಪಕಕ್ಕೆ ಬರುತ್ತದೆ, 'ನಾಣ್ಯ ಯಾವುದಾದರೇನು? ಚಲಾವಣೆಯಲ್ಲಿರಲು ಬಿಡಿ'. ಯಾವುದೂ ತನ್ನ ಸ್ವತಂತ್ರ ಆಯ್ಕೆ ಆಗಲಾರದು. ಸ್ವಾತಂತ್ರ್ಯದ ಆಯ್ಕೆಯೇ ಜಟಿಲ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ತಾನು ಬದುಕುವ ಪರಿಸರದ ಸುತ್ತ-ಮುತ್ತ ತಾನು ನಿಂದನೆಗೊಳಗಾಗುತ್ತೇನೆ. ತನ್ನ ಬದುಕನ್ನು ಎಲ್ಲರೂ ಮಾತನಾಡಿಕೊಳ್ಳುತ್ತಾರೆ. ತಿಂಗಳು ಕಳೆದು ಎಂಟು ದಿನವಾದರೂ ತನ್ನ ಯೋನಿಯಲ್ಲಿ ರಕ್ತ ಒಸರದಿದ್ದಾಗ ಗಂಗಾ ಇಂತಹ ಗೊಂದಲಗಳಲ್ಲಿಯೇ ದಿನ ತಳ್ಳುತ್ತಿದ್ದಳು. ಕೌಟುಂಬಿಕ ಚೌಕಟ್ಟಿಲ್ಲದೇ, ತಂದೆಯಿಲ್ಲದೇ ಮಗು ಬೇಕು ಎನ್ನುವ ತನ್ನ ಹಂಬಲ 'ಅಹಂ'ನ ಮೂಲದಿಂದ ಉದ್ಭವವಾದದ್ದೇನೋ ಎಂದು ಒಮ್ಮೊಮ್ಮೆ ಗಂಗಾಗೆ ಅನಿಸುತ್ತಿತ್ತು. ಯಾರ ಆಧೀನಕ್ಕೂ ಒಳಗಾಗದೇ ಜೀವನ ಪೂರ್ತಿ ಉಳಿಯಬೇಕೆಂಬಾಸೆ. ಯಾವುದೂ ತನ್ನ ಸ್ವಾತಂತ್ರ್ಯ ಕಸಿದುಕೊಳ್ಳಬಾರದು ಎಂಬಾಸೆ. ಮಗು ತನ್ನ ಜೀವನದ ಬಂಧನವಾಗಲಿ ಎಂಬಾಸೆ. ಹೊಕ್ಕಳ ಬಳ್ಳಿ ಕಡಿದುಕೊಂಡು ಬೀಳುವ ಮಗು ಸಾಧನಾಳ ತರಹ ಈ ಬದುಕಿನ ಜೊತೆ ತನ್ನನ್ನು ಬಂಧಿಸಬಹುದು. ಈ ಬಂಧನ ಹೆಚ್ಚೋ, ಸ್ವಾತಂತ್ರ್ಯ ಹೆಚ್ಚೋ? ಹುಟ್ಟದಿರುವ ಮಗು ಈಗಾಗಲೇ ತನ್ನ ಸ್ವಾತಂತ್ರ್ಯ ಕಸಿದುಕೊಳ್ಳತೊಡಗಿದೆ. ಹೀಗೆನ್ನಿಸಿದಾಗಲೆಲ್ಲಾ ಬಹುಶಃ ತನಗೆ ಸ್ವಾತಂತ್ರ್ಯವೇ ಹೆಚ್ಚೇನೋ. ಎಂದು ಗಂಗಾಗೆ ಅನ್ನಿಸುತ್ತಿತ್ತು. ಅನೂವನ್ನು ಭೇಟಿಯಾದ ಮೇಲೆ ಗಂಗಾ ಯಾರನ್ನೂ ಭೆಟ್ಟಿಯಾಗಲಿಲ್ಲ. ಈ ಪ್ರಶ್ನೆಗಳ ಜಟಿಲತೆಗಳಲ್ಲಿ ತನ್ನ ಸ್ವಾತಂತ್ರ್ಯವೇ ಇಲ್ಲವಾಗುತ್ತದೆ ಎನ್ನಿಸಿದಾಗ ಗಂಗಾ ಕಾಲೇಜ್

ಮುಗಿಸಿ ಬರುವಾಗಲೊಮ್ಮೆ ಬೆಂಗಳೂರಿನ ಮೂಲೆಯಲ್ಲಿರುವ ಯಾವುದೋ ಆಸ್ಪತ್ರೆಯೊಂದಕ್ಕೆ ಹೋದಳು. ಯಾವುದೋ ಚಿಕ್ಕ ಆಸ್ಪತ್ರೆ, Staff ಜಾಸ್ತಿ ಇರಲಿಲ್ಲ. ಒಬ್ಬ ನರ್ಸ್ ಟೇಬಲ್ ಮೇಲೆ ಗಂಗಾಳಿಗೆ ಮಲಗು ಎಂದಳು. ಸೀರೆ ಎತ್ತು ಎಂದಳು. ಒರಟೊರಟಾಗಿ ಯೋನಿಯೊಳಗೆ ಕೈ ತೂರಿದಳು. ಮಗು ಇದೆ ಎಂದಳು. ಅಬಾರ್ಶನ್‌ಗೆ ಎರಡು ದಿನ ಬಿಟ್ಟು ಬಾ, ಆರು ನೂರು ರೂಪಾಯಿ ತಾ ಎಂದಳು. ನರ್ಸ್‌ನ ಒರಟುತನ ಗಂಗಾಳನ್ನು ನಡುಗಿಸಿತ್ತು. ಆ ನಡುಕದಲ್ಲಿ 'ತಾನು ಯಾರು?' ಎಂದು ಗಂಗಾ ನಡುಗಿಕೊಂಡೇ ಯೋಚಿಸಿದ್ದಳು. ತಾನು ಯಾರು? ಗಂಗಾಗೆ ತಾಯಿಯ ನೆನಪಾಗುತ್ತದೆ. ಚಿಕ್ಕವಳಿರುವಾಗಲೇ ಗಂಗಾ ತಾಯಿಯ ಹುಚ್ಚನ್ನು ನೋಡಿದ್ದಳು. ಆಕಾಶದಲ್ಲಿ ಕಣ್ಣು ನೆಟ್ಟು ಕೈ ಹೊಸೆಯುವಳು. ನಾದುವ ಅಕ್ಕಿ ಹಿಟ್ಟಿನಲ್ಲಿ ರೊಟ್ಟಿ ಮಾಡುವ ಬದಲು ಉದ್ದುದ್ದ/ಅಡ್ಡಡ್ಡ ಬಳ್ಳಿಗಳನ್ನು ಹೊಸೆಯುವಳು. ದನದ ಕೊಟ್ಟಿಗೆಯಲ್ಲಿ ಹಸು/ಕರುಗಳ ಕಣ್ಣುಗಳಲ್ಲಿ ಏನನ್ನೋ ಹುಡುಕುವಳು. ಹೊರಗಡೆ ಪಾತ್ರೆ ಉಜ್ಜುತ್ತಾ ಎಲ್ಲೆಲ್ಲಿಯೋ ದಿಟ್ಟಿಸುವಳು. ಅವಳೇನು ಹುಡುಕಿದಳೋ? ಅವಳಿಗೇನು ಸಿಕ್ಕಿತ್ತೋ? ತಾನೇ ಹಬ್ಬಿಸಿದ ಮಲ್ಲಿಗೆಯ ಮುತ್ತಿಕ್ಕುವ ರಾಶಿಯಲ್ಲಿ, ಕನಕಾಂಬರದ ಕೆಂಪಿನಲ್ಲಿ ತಾಯಿ ನಿಟ್ಟುಸಿರುಗೈಯುವುದನ್ನು ಗಂಗಾ ಅನೇಕ ಬಾರಿ ಕಂಡಿದ್ದಳು. ಗಂಗಾಗೆ ನೆನಪಾಗುವುದೆಲ್ಲ ಈ ವೈಖರಿಯೇ. ತಾಯಿಯ ನಿತ್ಯ ಚಟುವಟಿಕೆಯ ವಿವರಗಳೇ! ಮಲೆನಾಡಿನ ಸೌಂದರ್ಯವನ್ನೆಲ್ಲ ತನ್ನ ಮಡಿಲೊಳಗಿಟ್ಟುಕೊಂಡು ವೈಯ್ಯಾರದಿಂದ ಮೆರೆದ ತಾಯಿಗೆ ಎರಡು ಮಕ್ಕಳ ತಾಯಿಯಾಗಿ, ಪಾತ್ರೆ, ಕಸ, ಕರು, ಸಗಣಿ, ಗಂಜಲ ಇಂತಹ ಕೆಲಸಗಳಲ್ಲಿ ತನ್ನ ಸಾಮರ್ಥ್ಯವೆಲ್ಲಾ ನಶಿಸಿ ಹೋಗುತ್ತಿದೆ ಎನಿಸಿದಾಗ 'ನಾನು ಯಾರು?' ಎಂಬ ಪ್ರಶ್ನೆ ಆಕೆಗೂ ಉದಯಿಸಿರಬಹುದು. ಅಪ್ಪ ಹೊರಗಡೆ ಜಾತಿಯಲ್ಲದ ಜಾತಿಯ ಹೆಣ್ಣುಗಳೊಡನೆ ಮಲಗಿ ಸುಖಿಸುತ್ತಾನೆಂದು ತಿಳಿದಾಗ ಜಾತಿಯಲ್ಲಿ ನಂಬಿಕೆಯಿದ್ದ ಆಕೆಯ ಅಹಂಕಾರಕ್ಕೆ ಪೆಟ್ಟು ಬಿದ್ದಿರಬಹುದು. ಜೀರ್ಣಿಸಿಕೊಳ್ಳಲಾಗದ ಆತಂಕಗಳಲ್ಲಿ ತಾಯಿ ಕೂಗುತ್ತಿದ್ದಳು, ಅಳುತ್ತಿದ್ದಳು, ರಂಪ ಮಾಡುತ್ತಿದ್ದಳು. ಹೀಗೆ ತಾಯಿ ರಂಪ ಮಾಡಿದಾಗಲೆಲ್ಲಾ ಗಂಗಾ ಹಾಗೂ ಅಣ್ಣಂಗೂ ಬೇಸರವಾಗುತ್ತಿತ್ತು. ತಾಯಿ ಸುಮ್ಮನಿದ್ದರೆ-ಎಲ್ಲಾ ಮನೆಯ ಹೆಣ್ಣುಗಳ ಹಾಗೆ, ತಾವೂ ನೆಮ್ಮದಿಯಿಂದ ಶಾಂತಿಯಿಂದ ಇರಬಹುದಿತ್ತಲ್ಲವೇ? ತಂದೆ ಮತ್ತು ತಾಯಿಯ ನಡುವೆ ಯಾವಾಗಲೂ ಬಿರುಕು, ಜಗಳ. ಆಕೆಯ ಅಹಂಕಾರ ಮಣಿಸಲು ತಂದೆ ಹೊಡೆಯುತ್ತಿದ್ದ. ಹೀಗೆ ಹೊಡೆದಾಗಲೆಲ್ಲಾ ಆಕೆಯ ಹಲ್ಲಿಗೆ ಪೆಟ್ಟು ಬಿದ್ದು ರಕ್ತ ಸುರಿಯುತ್ತಿತ್ತು. ಆಗೆಲ್ಲ ಬಹುಶಃ ಆಕೆಗೆ ಕಾಡಿದ್ದು 'ನಾನು ಯಾರು?' ಎಂಬ ಪ್ರಶ್ನೆಯೇ ಇರಬಹುದೇ? ಕೂಗಿ, ಹತಾಶಳಾಗಿ, ರಂಪ ಮಾಡಿ, ಯಾರೂ ದಿಕ್ಕಿಲ್ಲದವರಂತೆ ಎಲ್ಲವನ್ನೂ ದಿಟ್ಟಿಸಿ ನೋಡುವಳು. ಆ ದಿಟ್ಟಿಸಿ ನೋಡುವ ಕ್ರಿಯೆಯಲ್ಲಿ ತನ್ನೆಲ್ಲ ಅಂತರಂಗದ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕೆಂಬ ಛಲ ಆಕೆಯದಾಗಿತ್ತು. ಕೊನೆಗೆ ನಶಿಸಿ ಹೋಗುತ್ತಿರುವ ತನ್ನ ಅಹಂಕಾರಕ್ಕೆ, ನಶಿಸಿ ಹೋಗುತ್ತಿರುವ ತನ್ನ ಸೌಂದರ್ಯಕ್ಕೆ, ನಶಿಸಿ ಹೋಗುತ್ತಿರುವ ತನ್ನ ವ್ಯಕ್ತಿತ್ವದ ಮಜಲಿಗೆ ಹೆದರಿ, ಕೋಪದಲ್ಲಿ, ರೋಷದಲ್ಲಿ, ಅಸಹಾಯಕತೆಯಲ್ಲಿ ತಾಯಿ ಪ್ರವೇಶಿಸಿದ್ದು ಬಹಳ ವಿಚಿತ್ರ ಲೋಕವನ್ನು. ಅಕ್ಕಿ ಹಿಟ್ಟಿನಲ್ಲಿ ಬಳ್ಳಿಗಳ ಮೌನವಾಗಿ ಹೊಸೆಯುತ್ತಲೇ 'ನಾನು ಯಾರು?' ಎಂಬ ಪ್ರಶ್ನೆಯನ್ನು ಅರ್ಥೈಸಿಕೊಳ್ಳಲು ಆಕೆ ಉನ್ಮಾದತೆಯ ಲೋಕ ಪ್ರವೇಶಿಸಿದ್ದಳು. ಆಕೆಗೆ ಆಕೆಯೇ ನಾಯಕಿಯಾಗುವ ಲೋಕ.

ತಾಯಿಯ ಆತಂಕದ ಕ್ಷಣಗಳು ಉನ್ಮಾದತೆಯ ಲೋಕದಲ್ಲಿ ಉತ್ತರ ಕಂಡುಕೊಂಡಿದ್ದವೋ ಏನೋ? ಆದರೆ ತನ್ನ ಆತಂಕದ ಕ್ಷಣಗಳು? ತಾನು ಹಾಗೂ ತನ್ನ ಮಗು - ಈ ಎರಡೇ ಲೋಕ ಸೃಷ್ಟಿಸುವುದು ಹೇಗೆ? ಈ ಒತ್ತಡ, ಆತಂಕಗಳಲ್ಲಿ ಯಾದರೂ ತನ್ನೊಳಗೇ ಮಡುಗಟ್ಟಿದ ರಕ್ತ ಯೋನಿಯಲ್ಲಿ ಒಸರಿಬಿಡಲಿ ಎಂದು ಗಂಗಾ ಆಶಿಸಿದ್ದುಂಟು.

ಈ ಮಧ್ಯೆ ಗಂಗಾ ಸ್ತ್ರೀ ಮುಕ್ತಿ ಸಂಘಟನೆಯಿಂದ ಯಾವುದೋ ಸ್ತ್ರೀ ವಿಚಾರಕ್ಕೆ ಸಂಬಂಧಿಸಿದ ಸೆಮಿನಾರ್ ಒಂದಕ್ಕೆ ಹೈದರಾಬಾದ್‌ಗೆ ಹೋದಳು. ಈ ರೀತಿಯ ಚಟುವಟಿಕೆಗಳಲ್ಲಿ ಗಂಗಾ ತನ್ನ ಆತಂಕದ ಕ್ಷಣಗಳನ್ನು ಒಂದೆರಡು ಘಳಿಗೆ ಮರೆತುಬಿಡುತ್ತಿದ್ದಳು. ಅಥವಾ ತನ್ನೊಟ್ಟಿಗೆ ಸ್ಪಂದಿಸುವ ಒಂದು ವೈಚಾರಿಕ ಎಳೆಯಲ್ಲಿ ತನ್ನೆಲ್ಲ ಒಂಟಿತನವನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಇಲ್ಲಿ ಗಂಗಾ ಆಕಸ್ಮಿಕವಾಗಿ ಭೇಟಿಯಾದದ್ದು ಸ್ತ್ರೀವಾದಿ ಚಿಂತಕಿಯೋರ್ವಳನ್ನು. ಆಕೆ ಸೆಮಿನಾರ್‌ನಲ್ಲಿ ಮಾತನಾಡಿದ ರೀತಿ ಗಂಗಾಗೆ ಇಷ್ಟವಾಯಿತು. ನಿಧಾನವಾಗಿ, ನಿಧಾನಗತಿಯಲ್ಲಿ ಆದರೆ ದೃಢವಾಗಿ ಆಕೆ ಮಹಿಳೆಯ ಸ್ಥಿತಿ-ಗತಿಯ ಬಗ್ಗೆ ಸೂಕ್ಷ್ಮವಾಗಿ ಮಾತನಾಡಿದ್ದರು. ಮನೆಗೆಲಸದ ಜವಾಬ್ದಾರಿ, ಆಕೆಯ ಸೌಂದರ್ಯದ ಹಿಂದಿರುವ ಅಹಂಕಾರದ ಪ್ರಶ್ನೆಗಳು ಇಂತಹವುಗಳನ್ನು ಈಕೆ ತಾತ್ವಿಕ ಹಿನ್ನೆಲೆಯಲ್ಲಿ ಶೋಧಿಸಿ ಮಾತನಾಡುತ್ತಿದ್ದರು. ಅಕ್ಕ ಮಹಾದೇವಿಯ ಬಗ್ಗೆ ರಿಸರ್ವೇಶನ್ ಇದ್ದೂ ಕೂಡಾ ಆಕೆ ಎಂತಹ ಗಟ್ಟಿಗಿತ್ತಿ, ಎಂತಹ ಕವಿಯಿತ್ರಿ ಎಂಬುದನ್ನು ಗೌರವ ಭಾವದಿಂದ ಬಿಡಿಸಿ ಹೇಳುತ್ತಿದ್ದರು. ಗಂಡು-ಹೆಣ್ಣಿನ ಸಂಬಂಧಗಳ ನಡುವೆ ಒತ್ತು ಕೊಡುವ ಬದಲು ಹೆಣ್ಣು ಸ್ವತಂತ್ರಶೀಲ ವ್ಯಕ್ತಿತ್ವ ಹೊಂದುವ, ಆಕೆಯ ತಾತ್ವಿಕ ಚಿಂತನೆ ಹೆಚ್ಚಿಸಿಕೊಳ್ಳುವ, ಆಕೆಯ ಪ್ರಶ್ನೆಗಳನ್ನು ತಾತ್ವಿಕವಾಗಿ ಚಿಂತಿಸುವ ಅಗತ್ಯಗಳನ್ನು ಇವರು ಒತ್ತಿ ನುಡಿಯುತ್ತಿದ್ದರು. ಈಕೆ ಮಾತನಾಡಿದ ರೀತಿ ಗಂಗಾಗೆ ಬಹಳ ಇಷ್ಟವಾಯಿತು. ಇದ್ದಕ್ಕಿದ್ದಂತೆ ಆಕೆಯ ಬಳಿ ಕುಳಿತು 'ತಾನು ಯಾರು?' ಎಂದು ಬಲವಾಗಿ ಕಾಡುತ್ತಿರುವ ತನ್ನ ಸಮಸ್ಯೆಗಳನ್ನು ಹೇಳಿಕೊಳ್ಳಬೇಕು ಎನಿಸತೊಡಗಿತ್ತು. ಗಂಗಾ ಹೈದರಾಬಾದ್ ಬಿಡುವ ಮುಂಚೆ ಸರೋಜ್‌ಜ ಜೊತೆ ಮಾತನಾಡಬೇಕೆಂದು ತೀರ್ಮಾನಿಸಿದಳು. ಒಂದು ಸಾಯಂಕಾಲ ಆಕಸ್ಮಿಕವಾಗಿ ಹುಲ್ಲುರಾಶಿಯ ಮೇಲೆ ಕುಳಿತು ಎಲ್ಲಿಯೋ ದಿಗಂತ ದಿಟ್ಟಿಸುತ್ತಾ ಕುಳಿತ ಸರೋಜ್‌ಜರವರನ್ನು ಗಂಗಾ ಕಂಡಳು. ಪ್ರಶಾಂತವಾದ ಸಂಜೆ. ಮೋಡ ಕವಿದ ಗಗನವಲ್ಲದಿದ್ದರೂ ಮೈಗೆ ಹಿತವೆನ್ನಿಸುವಂತೆ ಬೀಸುವ ಗಾಳಿ. ಕೆಂಪೊಡೆದು ಸೂರ್ಯ ಮುಳುಗಲು ಹವಣಿಸುತ್ತಿದ್ದ. ಗಂಗಾಳಿಗೆ ನಿಧಾನವಾಗಿ ಅವರ ಬಳಿ ನಡೆದು ಹೋದಾಗ ಅವರು 'ಹಲೋ' ಎಂದರು. ಬದುಕಿನ ಅಪ್ಯಾಯಮಾನತೆಯಲ್ಲಿ ಹೃದಯದ ಒಳಗಿನಿಂದ ಬಂದ ಆತ್ಮೀಯ ಧ್ವನಿಯಂತೆ ಗಂಗಾಳಿಗೆ ಭಾಸವಾಯಿತು. 'ಸ್ತ್ರೀ ಮುಕ್ತಿ' ಸಂಘಟನೆಯ ಒಳಗೆಯೂ ಸಹ ಹಲವಾರು ಮಹಿಳೆಯರ ಜೊತೆ ಓಡಾಡಿದ್ದ ಗಂಗಾ ಈ ಅಪ್ಯಾಯಮಾನತೆಯ, ಬೆಚ್ಚಗಿನ ಸಂಬಂಧವನ್ನು ಕಂಡಿದ್ದಳು. ಬೆಳಿಗ್ಗೆಯಿಂದ ಸಂಜೆಯವರೆಗೂ ವರದಕ್ಷಿಣೆ ಸಮಸ್ಯೆಗೆಂದೋ, ಫ್ಯಾಕ್ಟರಿಯ ಹೆಂಗಸರ ಅಳಲಿಗೆಂದೋ, ಅಂಗನವಾಡಿ ಕಾರ್ಯಕರ್ತೆಯರಿಗೆಂದೋ, ಡೈವೋರ್ಸ್ ಕೇಸಿಗೆಂದೋ ಓಡಾಡುವ ರಾಗಿಣಿ, ರೀನಾ, ಡಾಮಿನಾ, ಪಾರ್ವತಿ ಹಲವಾರು ಚಟುವಟಿಕೆಗಳಲ್ಲಿ ತೊಡಗಿರುತ್ತಿದ್ದರು. ದೀನ ಹೆಂಗಸರ ಅಳಲುಗಳ ಜೊತೆ ಪೋಲೀಸ್, ಲಾಯರ್, ಕೋರ್ಟ್ ಕಛೇರಿ ಎಂದು ಓಡಾಡುತ್ತಿದ್ದರು. ಹೀಗೆ ಹಲವಾರು ಚಟುವಟಿಕೆಗಳಲ್ಲಿಯೇ ಸಮಯ ಕಳೆಯುತ್ತಿದ್ದ ಇವರ್‍ಯಾರಲ್ಲೂ ನಾಯಕತ್ವದ ಹುಚ್ಚು ಇರಲಿಲ್ಲ, ಅಧಿಕಾರದ ಆಸೆ ಇರಲಿಲ್ಲ. ನಮ್ಮೆಲ್ಲರನ್ನೂ ಒಂದುಗೂಡಿಸುವ ಅನುಭವದ ಎಳೆಯೊಂದಿದೆ ಎನ್ನುವ ದೃಢವಾದ ನಂಬಿಕೆಯಲ್ಲಿ ಹುಟ್ಟಿದ ಸೌಜನ್ಯ. ಹಾಗಾಗಿ ಹೆಂಗಸರೊಂದಿಗೆ ಮುಕ್ತವಾಗಿ, ಹೃದಯಪೂರ್ವಕವಾಗಿ, ಸೌಜನ್ಯಪೂರ್ಣವಾಗಿ ನಡೆದುಕೊಳ್ಳುವ ರೀತಿ. 'ಸ್ತ್ರೀ ಮುಕ್ತಿ' ಸಂಘಟನೆಗೆ ಬರುವ ಮಹಿಳೆಯರು ಒಂದು ರೀತಿಯ ಸೌಹಾರ್ದಯುತ ವಾತಾವರಣವನ್ನು ಕಂಡುಕೊಳ್ಳುತ್ತಿದ್ದುದುಂಟು. ಶ್ರೇಣೀಕೃತ ವ್ಯವಸ್ಥೆಯ ಬಗ್ಗೆ ಇಲ್ಲಿ ಪ್ರತಿಯೊಬ್ಬರೂ ಪ್ರಜ್ಞಾಪೂರ್ವಕವಾಗಿ ಇರುತ್ತಿದ್ದುದುಂಟು. 'ಸ್ತ್ರೀ ಮುಕ್ತಿ' ಸಂಘಟನೆಗಳೊಳಗೆ ಹಾಗೂ ಹೊರಗಡೆ ಗಂಗಾ ಕಂಡ ಹಲವಾರು ಚಿಂತಕಿಯರು ಮಾರ್ಕ್ಸಿಸ್ಟ್ ಪಾರ್ಟಿಗಳೊಳಗೆ ಕೆಲವು ಕಾಲ ಇದ್ದು ಕೆಲಸ ಮಾಡಿದವರು. ಅಥವಾ ಮಾರ್ಕ್ಸಿಸ್ಟ್ ಪಾರ್ಟಿಗಳ ಜೊತೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದವರು. ಪಾರ್ಟಿಯ ಒಳಗಡೆ ಇದ್ದ top to bottom ಸಂಬಂಧಗಳ ಬಗ್ಗೆ ಭ್ರಮೆ ನಿರಸನಗೊಂಡೋ, ಆ ಹತಾಸೆ,

ಅನುಭವಗಳಲ್ಲಿ ಪಾರ್ಟಿಯ ಸಂಬಂಧ ಕಡಿದುಕೊಂಡವರು. ಅಧಿಕಾರ, ನಿರ್ಧಾರ, ಒಟ್ಟಾಗಿ ಕೆಲಸ ಮಾಡುವುದು, ಒಗ್ಗೂಡಿದ ನಾಯಕತ್ವ ಇಂತಹ ಕೆಲವು ಪ್ರಶ್ನೆಗಳಲ್ಲಿ ಮಹಿಳಾ ಸಂಘಟನೆ ಹುಟ್ಟು ಹಾಕಿ ಕೆಲಸ ಮಾಡತೊಡಗಿದವರು. ಸಂಘಟನೆಗಳೊಳಗೆ ಇರುವ, ಜೊತೆಗೆ ಸಂಘಟನೆಯೊಳಗೆ ಬರುವ ಎಲ್ಲಾ ಮಹಿಳೆಯರಿಗೂ ಒಂದು space ಇರಬೇಕು ಎನ್ನುವಂತಹ, ಯಾರೇ ನಾಯಕರ ಅಡಿ ಸುಮ್ಮನೇ ಕೆಲಸ ಮಾಡುವವರು ಮಾತ್ರ ಆಗಬಾರದು, ನಾಯಕತ್ವ ಎನ್ನುವುದೇ ಒಟ್ಟು ಸಮುದಾಯದ್ದಾಗಿರುತ್ತದೆ, ಒಬ್ಬರು-ಇಬ್ಬರದ್ದಲ್ಲ-ಇಂತಹ Conceptsಗಳೊಂದಿಗೆ ಸಂಘಟನೆಯೊಳಗಡೆ ಮಹಿಳೆಗೆ ಒಂದು ಸ್ಪೇಸ್ ಹುಟ್ಟು ಹಾಕುವ ಪ್ರಯತ್ನವನ್ನು ಗಂಗಾ ಗಮನಿಸಿದ್ದಳು. ರಾಜಕೀಯ ಪಾರ್ಟಿಗಳೊಳಗೆ ಇರದ ಸ್ವಾಯತ್ತ ಮಹಿಳಾ ಸಂಘಟನೆಗಳು ಮಹಿಳೆಯರ ಸಮಸ್ಯೆಗಳಿಗೇ ಹೋರಾಡುವುದಕ್ಕೆ ಪ್ರಾರಂಭಿಸಿದ್ದರು. ಸ್ಪರ್ಧಾತ್ಮಕವಾಗಿರುವುದು-ಬಂಡವಾಳಶಾಹಿಗಳ ಕಲ್ಪನೆ ಎನ್ನುವುದನ್ನು ಬಲವಾಗಿ ನಂಬಿದ ಸಂಘಟನೆಗಳು ಸ್ಪರ್ಧೆ ಸಂಘಟನೆಗಳೊಳಗೆ, ಮಹಿಳೆಯರ ಸಂಬಂಧಗಳಲ್ಲಿ ತಲೆ ಹಾಕಬಾರದು ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಪ್ರಾಕ್ಟೀಸ್‌ಗೆ ತರಲು ಪ್ರಯತ್ನಿಸುತ್ತಿದ್ದರು. 'ಸ್ತ್ರೀ ಮುಕ್ತಿ' ಸಂಘಟನೆಯಲ್ಲಿಯೂ ಇಂತಹ ಬಲವಾದ ನಂಬಿಕೆಗಳು ಬೇರೂರಿರುವುದನ್ನು ಗಂಗಾ ಗಮನಿಸಿದ್ದಳು. ಪ್ರಾಕ್ಟೀಸ್ ಮತ್ತು ಥಿಯರಿಗಳ ಮಧ್ಯೆ ಇರುವ ಸಂಬಂಧವನ್ನು ಯಾವಾಗಲೂ ಮಾತನಾಡುವ ರೆನೇಯವರೇ ಕ್ರಿಯಾಶೀಲರಾಗಿ ಕೆಲಸ ಮಾಡುವುದನ್ನು ಗಂಗಾ ಗಮನಿಸಿದ್ದಳು. 'ಸ್ತ್ರೀ ಮುಕ್ತಿ' ಸಂಘಟನೆಯಲ್ಲಿ ಕ್ರಿಯಾಶೀಲರಾಗಿ ದುಡಿಯುತ್ತಿದ್ದ ರಾಗಿಣಿ, ಡಾಮಿನಾರಲ್ಲೂ ಈ ರೀತಿಯ ಬದ್ಧತೆಯನ್ನು ಗಂಗಾ ಗಮನಿಸಿದ್ದಳು. ತಾರುಣ್ಯದಲ್ಲಿ, ಸೌಂದರ್ಯದಲ್ಲಿ ಮಹಿಳೆಯರೊಳಗೇ ಅಡಕವಾಗಿರುವ ಸಾಂಸ್ಕೃತಿಕ ಆಚರಣೆಗಳಿಂದಾಗಿಯೋ ಅಥವಾ ಅವರೊಳಗೇ ಅಡಕವಾಗಿರುವ ಅಹಂನ ಅಸ್ತಿತ್ವವನ್ನು ಇಂತಹ ಸಂಘಟನೆಗಳೊಳಗಿನ ಅನುಭವ ಪ್ರಶ್ನಿಸುವ ಹಾಗೆ ಮಾಡುತ್ತಿತ್ತು. ಸ್ತ್ರೀ ಮುಕ್ತಿ ಸಂಘಟನೆಗಳೊಳಗೆಯೇ ಹಲವಾರು ಚಿಕ್ಕ ಚಿಕ್ಕ ಹುಡುಗಿಯರಲ್ಲಿ ಆದ ಬದಲಾವಣೆಗಳನ್ನು ಗಂಗಾ ಕಂಡಿದ್ದಳು. ತಾರುಣ್ಯದ ಅಧಿಕತನ, ಅಹಂ, ಸೊಫಿಸ್ಟಿಕೇಶನ್, ಸ್ಪರ್ಧಾತ್ಮಕವಾಗಿರುವುದು ಇಂತಹ ನಮ್ಮೊಳಗಿನದನ್ನೇ ಮುರಿದುಕೊಳ್ಳಲು ಹಲವರು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಿದ್ದುದನ್ನೂ ಗಂಗಾ ಗಮನಿಸಿದ್ದಳು. ಸರೋಜ್‌ರ ವ್ಯಕ್ತಿತ್ವದಲ್ಲಿ ಇಂತಹ ಎಲ್ಲಾ ಗುಣಗಳೂ ಅಡಕವಾಗಿದ್ದವು. ಇನ್ನೋರ್ವ ಮಹಿಳೆಯ ಅನುಭವದೊಡನೆ ತಾದಾತ್ಮ್ಯಕತೆಯಿಂದ ಸ್ಪಂದಿಸಿ, ಅರ್ಥಮಾಡಿಕೊಳ್ಳುವ ಹೃದಯವಂತಿಕೆ ಇತ್ತು. ಈಕೆಯ ವ್ಯಕ್ತಿತ್ವದ ಆತ್ಮೀಯತೆಯಲ್ಲಿ ಎಲ್ಲಾ ಐತಿಹಾಸಿಕ ಪ್ರಜ್ಞೆಯ ನೋಟವನ್ನು ಗಂಗಾ ಗಮನಿಸಿದ್ದಳು. ಹೀಗೆಯೇ ನಡೆಯುತ್ತಿರುವ ಸೆಮಿನಾರ್ ಬಗ್ಗೆ ಗಂಗಾ ಮಾತನಾಡತೊಡಗಿದಳು. ಸರೋಜ್‌ರ ಮಾತನಾಡಿದ, ವಿಶ್ಲೇಷಿಸಿದ ರೀತಿ ತನಗೆ ಇಷ್ಟವಾದುದನ್ನು ವ್ಯಕ್ತಪಡಿಸಿದಳು. ಮಹಿಳಾ ಚಳುವಳಿಯೊಳಗೆ ಅನುಭವಗಳನ್ನು ತಾತ್ವಿಕ ನೆಲೆಯಲ್ಲಿ ಇಟ್ಟು ಚರ್ಚೆ ಮಾಡುವ, ಐತಿಹಾಸಿಕ ಪ್ರಜ್ಞೆಯ ಅಗತ್ಯ ಎಷ್ಟು ಇದೆ ಎಂಬ ಕಡೆಗೆ ಮಾತು ಸರಿಯಿತು. ನಡೆದಿರುವ ಯಾವುದೇ ಚಳುವಳಿಯಲ್ಲಾಗಲೀ -ರೈತ ಚಳುವಳಿ, ನಕ್ಸಲೇಟ್ ಚಳುವಳಿಗಳಲ್ಲಿ ಮಹಿಳೆಯರ ಪಾತ್ರವನ್ನು ಪರಿಶೀಲಿಸುವ ಅಗತ್ಯವೆಷ್ಟು ಇದೆ ಎಂಬುದನ್ನು ಸರೋಜ್‌ರ ಮಾತನಾಡತೊಡಗಿದ್ದರು. ತೆಲಂಗಾಣ ಚಳುವಳಿಯಲ್ಲಿ ಮಹಿಳೆಯರು ಭಾಗಿಗಳಾಗಿದ್ದರು ಎಂಬ ಐತಿಹಾಸಿಕ ಪ್ರಜ್ಞೆಯಷ್ಟೇ ಸಾಲದು, ಅದರ inner details ಕುರಿತು ಮಾತನಾಡಬೇಕು. ಹುಡುಕಿಕೊಂಡು ಹೋಗಿ ಇರುವ ಮಹಿಳೆಯರೊಂದಿಗೆ ಮಾತನಾಡಬೇಕು. ಅವರ ಮಾತುಗಳಲ್ಲಿ ಅವರ ಬದುಕನ್ನು ಕುರಿತು ಕೇಳಬೇಕು, ಚರಿತ್ರೆ ನಮಗೆ ಕೊಡುವ ಸತ್ಯವೇ ಒಂದು, ಅದರೊಳಗೆ ಲಿಂಗಭೇದ ವಿಚಾರಗಳೇ ಬರುವುದಿಲ್ಲ, ಈ ಲಿಂಗಭೇದ ವಿಚಾರ ಕುರಿತು ಮಾತನಾಡಬೇಕು ಎಂಬುದನ್ನು ಆಕೆ ಮಾತನಾಡುತ್ತಿದ್ದರು. ಅಕ್ಕ ಮಹಾದೇವಿಯ ಬಗ್ಗೆ ಮಾತನಾಡುತ್ತಾ ಆಕೆಯ ಆತಂಕದ ಸ್ಥಿತಿಯ ಬಗ್ಗೆ, ಆ ಆತಂಕದಲ್ಲಿ ಹುಟ್ಟಿದ ಕಾವ್ಯದ ಬಗ್ಗೆ ಅವರು ಮಾತನಾಡುವಾಗ ಗಂಗಾ

ಮೆಲ್ಲನೆ ಸ್ವರ ಎತ್ತಿದಳು. ಈ ಆತಂಕ ಎನ್ನುವುದು ಮಹಿಳೆಯರ ಮಾನಸಿಕ ಸ್ಥಿತಿಯಲ್ಲಿ ಹೇಗೆ ಕೆಲಸ ಮಾಡುತ್ತದೆ ಎಂದು ಹೇಳುತ್ತಲೇ ಗಂಗಾ ಆ ಕ್ಷಣಕ್ಕೆ ತನ್ನಲ್ಲಿರುವ ಮನಸ್ಥಿತಿಯನ್ನು ಹೇಳಿಕೊಳ್ಳತೊಡಗಿದಳು. ನಿರೀಕ್ಷಿತ ದಿನಗಳಲ್ಲಿ ತನ್ನ ದೇಹದಿಂದ ರಕ್ತ ಆಚೆ ಹೋಗಿಲ್ಲ. ಒಂದೂವರೆ ತಿಂಗಳಿಂದ ಹೀಗೆ, ಮಗುವಾದರೆ ಹೇಗೆ? ಈ ಮಗು ನನ್ನದು, ಮಗುವಿನ ನೆಪದಲ್ಲಿ ಯಾರೊಟ್ಟಿಗೂ ಬಂಧಿಸಿಕೊಳ್ಳುವ ಮನಸ್ಥಿತಿಯಲ್ಲಿ ತಾನು ಇಲ್ಲ. ತನಗೊಂದು ಮಗು ಬೇಕಷ್ಟೇ. ಅದರಲ್ಲಿ ಅಹಂ ಅಡಗಿದೆಯೋ, ಸ್ವಾತಂತ್ರ್ಯದ ಛಲ ಇದೆಯೋ, ಸತ್ತ ಸಾಧನಾಳ ಪಡೆದುಕೊಳ್ಳುವ ಹಟ ಇದೆಯೋ? ತಾನೆಂತಹ ಸ್ಥಿತಿಯಲ್ಲಿ ಇದ್ದೇನೆಂದರೆ ಮಾಡುವ ಕೆಲಸದ ಬಗ್ಗೆ ಗಮನವಿಲ್ಲ, ಬೀದಿಯಲ್ಲಿ ಕಾಣುವ ಭಿಕ್ಷುಕಿಯ ಮುಖದಲ್ಲಿ, ದೈನ್ಯತೆಯಲ್ಲಿ ತನ್ನ ಹಾಗೂ ತನ್ನ ಮಗುವಿನ ಮುಖ ಕಾಣಿಸುತ್ತದೆ. ಹೀಗೆಲ್ಲ ಅಳುಕಿನಿಂದಲೇ ಗಂಗಾ ಮಾತನಾಡುತ್ತಾ ಇರುವಾಗ ಮಧ್ಯದಲ್ಲಿಯೇ ಸರೋಜ್ಜ ನುಡಿಯುತ್ತಾರೆ. 'ನನ್ನ ಅನುಭವದಲ್ಲಿ ಇದೆಲ್ಲವನ್ನೂ ನಿಮಗೆ ಹೇಳುತ್ತೇನೆ' ಎಂದು ನಿಧಾನವಾಗಿ ಮಾತು ಪ್ರಾರಂಭಿಸಿದ ಅವರು 'ಇದೆಲ್ಲವನ್ನೂ ನೀವೊಬ್ಬರೇ ಎದುರಿಸುವ ಹಂತದಲ್ಲಿಯೇ, ಹೋರಾಟದಲ್ಲಿಯೇ ನಿಮ್ಮ ಬದುಕು ನಶಿಸಿ ಹೋಗುತ್ತದೆ. ಮಗು ಎನ್ನುವುದು ಭಾವನಾತ್ಮಕ ಲಯದಲ್ಲಿ ಸುಖ ಕೊಡುವ ಅಂಶವೇನೋ ನಿಜ. ಆದರೆ ವಾಸ್ತವದಲ್ಲಿ ಅದನ್ನು ಬೆಳೆಸುವ, ಅದರ ಅವಶ್ಯಕತೆ ಎಲ್ಲವನ್ನೂ ಪೂರೈಸುವ ಜವಾಬ್ದಾರಿ ಹೊರುವಾಗ ಒಬ್ಬರೇ ಹೊರುವುದು ಕಷ್ಟಸಾಧ್ಯ. ಜೊತೆಗೆ ಮಗು ಜೀವವಿರುವ ವಸ್ತು. ಈಗ ನಿಮ್ಮೆದುರಿಗೆ ಜೀವವಿರುವ ಮಗುವಿಲ್ಲ. ಅದೊಂದು ಭಾವನಾತ್ಮಕ ಲಯವಾಗಿದೆ. ಉಸಿರಾಡುವ ಮಗು ನಿಮ್ಮೆದುರಿಗಿರುವಾಗ ಅದರ ಅವಶ್ಯಕತೆಗಳೇ ಬೇರೆಯಾಗಿರುತ್ತದೆ. ಇಬ್ಬರು ವಹಿಸಿಕೊಳ್ಳಬೇಕಾದ ಎಲ್ಲಾ ಜವಾಬ್ದಾರಿಗಳನ್ನು ನೀವೊಬ್ಬರೇ ವಹಿಸಿಕೊಳ್ಳುತ್ತೇನೆ ಎನ್ನುವುದು ನಿಮ್ಮ ದೇಹ/ಮನಸ್ಸು ಎರಡನ್ನೂ ಜಡವಾಗಿಸಿಬಿಡುತ್ತದೆ. ಮಗುವಿನ ಮೇಲೆ ಹಕ್ಕು ಸಾಧಿಸುವ/ತಾಯ್ತನದ ಮೇಲೆ ಹಕ್ಕು ಸಾಧಿಸುವ/ನೈತಿಕತೆ ವಿರೋಧಿಸುವ ನಿಮ್ಮ ಮನಸ್ಸು ನನಗೆ ಅರ್ಥವಾಗುತ್ತದೆ. ಆದರೆ ಮಗುವಿನೊಡನೆ ವಾಸ್ತವದಲ್ಲಿ ತಗಲಿ ಹಾಕಿಕೊಳ್ಳುವ ಪ್ರಶ್ನೆಗಳು ಅನೇಕ. ವಾಸ್ತವದಲ್ಲಿ ಅನೇಕ ಜವಾಬ್ದಾರಿಗಳಿಂದ ಬಳಲುವ, ಕಿರಿ ಕಿರಿ ಮಾಡುವ ತಾಯಂದಿರನ್ನು ನಾವು ಕಂಡಿಲ್ಲವೇ? ಯೋಚಿಸಿ ನೋಡಿ ಗಂಗಾ, ಈ ವ್ಯವಸ್ಥೆಯನ್ನು ವಿರೋಧಿಸಲು ನಿಮ್ಮ ಮನಸ್ಸು ಮಾಡಿರುವ ಆಯ್ಕೆಯೇನೋ ಸರಿ, ಆದರೆ ಈ ಆಯ್ಕೆಯೊಂದಿಗೆ ಜಟಿಲಗೊಳ್ಳುವ ಬದುಕಿನ ಆಯಾಮಗಳ ಪರಿಚಯ ನಿಮಗಿಲ್ಲ'. ಯಾರೋ ಬಂದು ಸರೋಜ್ಜರವರನ್ನು ಕರೆದಾಗ ಸರೋಜ್ಜ ಹೊರಡಲು ಸಿದ್ಧರಾದರು. ಹೋಗುವಾಗ, 'ಕೊನೆಗೆ ಎಲ್ಲವೂ ನಿಮಗೇ ಬಿಟ್ಟದ್ದು. ನಾವೆಲ್ಲರೂ ಒಂದೊಂದು ಸಂದರ್ಭದಲ್ಲಿ ಮಾತ್ರ ನಿಮಗೆ ಒತ್ತಾಸೆಯಾಗಿ ನಿಲ್ಲಬಹುದು. ಆದರೆ ಕೊನೆಗೆ ನಿಮ್ಮ ಬದುಕು ನಿಮ್ಮದಾಗಿರುತ್ತದೆ. ನಿಮ್ಮ ಬದುಕಿನ ಒಂಟಿತನ, ಆಸೆ, ನಿರಾಸೆ, ದುಃಖಗಳಿಗೆ ನೀವೇ ಹೊಣೆಯಾಗಿರುತ್ತೀರಿ'. ಸರೋಜ್ಜ ಭುಜ ತಟ್ಟಿ ಹೊರಟು ಹೋದ ಮೇಲೆ ಗಂಗಾ ಎಷ್ಟೋ ಹೊತ್ತಿನವರೆಗೆ ಅಲ್ಲಿಯೇ ಕುಳಿತಿದ್ದಳು. ದಿಗಂತ ದಿಟ್ಟಿಸುತ್ತಾ 'ನಾನು ಯಾರು?' ಎಂಬ ಪ್ರಶ್ನೆಯನ್ನು ತಾಯಿಯಂತೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಮನಸ್ಸು ಇದ್ದಕ್ಕಿದ್ದಂತೆ ಅಂತರ್‌ಮುಖಿಯಾಗತೊಡಗಿತ್ತು. ಸರೋಜ್ಜ ಹೇಳಿದ್ದು ವಾಸ್ತವದ ಮುಖ. ವಾಸ್ತವದಲ್ಲಿ ಭಾವನೆಗಳ ಲಯದಲ್ಲಿಯೇ ಬದುಕಲು ಸಾಧ್ಯವಾಗದು ಎಂಬ ಕಟು ಸತ್ಯವೊಂದನ್ನು ಸರೋಜ್ಜ ಆಕೆಯ ಮುಂದೆ ಬಿಚ್ಚಿ ಇಟ್ಟಿದ್ದರು. ಮನಸ್ಸಿನೊಳಗೆ ಏನೇನೋ ಗೊಂದಲಗಳು, ತುಮುಲಗಳು. ಹೈದರಾಬಾದ್‌ನಲ್ಲಿಯೇ ನಾಲ್ಕಾರು ದಿನ ಕಳೆದ ಗಂಗಾ ಇಂತಹ ಗೊಂದಲಗಳಲ್ಲಿಯೇ ದಿನ ತಳ್ಳುವಳು. ಆದರೆ ಹೈದರಾಬಾದ್ ಬಿಡುವ ವೇಳೆಗಾಗಲೇ ಆಕೆಗೆ ಒಂದು ಆಶ್ಚರ್ಯ ಕಾದಿತ್ತು. ಟಾಯ್‌ಲೆಟ್‌ಗೆ ಹೋದಾಗ ತನ್ನ ಯೋನಿಯಲ್ಲಿ ರಕ್ತ ಹರಿಯುವುದು ಕಂಡಾಗ ಒಮ್ಮೆ ಗಂಗಾಗೆ ತಲೆ ತಿರುಗಿದ ಹಾಗೆ ಆಯಿತು. ಭಯ, ಭ್ರಮೆಗಳೇ ಒಮ್ಮೊಮ್ಮೆ ಎಂತಹ ಭಯಂಕರ ಆತಂಕಗಳನ್ನು ಹುಟ್ಟು ಹಾಕಿಬಿಡುತ್ತವೆ

ಎಂದು ಆಕೆ ಯೋಚಿಸುತ್ತಾಳೆ. ಬೆಂಗಳೂರಿನ ಯಾವುದೋ ಮೂಲೆಯಲ್ಲಿ ನರ್ಸ್‌ವೊಬ್ಬಳು ಒರಟೊರಟಾಗಿ ವರ್ತಿಸಿದ್ದು ಜ್ಞಾಪಕಕ್ಕೆ ಬರುತ್ತದೆ. ಅಬಾರ್ಷನ್ ಮಾಡುತ್ತೇನೆ, ಆರೂ ನೂರು ರೂಪಾಯಿ ತೆಗೆದುಕೊಂಡು ಬಾ ಎಂದು ಆಕೆ ಹೇಳಿದ್ದು ತನ್ನಿಂದ ದುಡ್ಡು ಕಸಿಯುವುದಕ್ಕಾಗಿ ಹೇಳಿದ ಅಪ್ಪಟ ಸುಳ್ಳೇ ಎಂದು ಯೋಚಿಸುವಾಗ ವಾಸ್ತವದ ಕಟು ಸತ್ಯ ಆಕೆಯ ಮೈಯನ್ನು ಅದುರಿಸುತ್ತದೆ. ಋತುಚಕ್ರದಲ್ಲಿ ಆಗುವ ಬದಲಾವಣೆಗಳು ಎಷ್ಟು ಮಾನಸಿಕ ಅಘಾತ ಹುಟ್ಟು ಹಾಕಿಬಿಡುತ್ತದೆಯಲ್ಲಾ ಎಂದು ಯೋಚಿಸುವಾಗ ಗಾಭರಿಯ ಜೊತೆಗೆ ಗಂಗಾಗೆ ನಗೂ ಕೂಡಾ ಬರುತ್ತದೆ. ಹೈದರಾಬಾದ್ ಬಿಡುವಾಗ ಗಂಗಾಗೆ ಮನಸ್ಸಿನ ಆತಂಕವೆಲ್ಲಾ ಮಾಯವಾಗಿ ಹೊಸದಾಗಿ ಬದುಕುವ ಉತ್ಸಾಹ ಮೂಡತೊಡಗುತ್ತದೆ. ಭಾವನಾತ್ಮಕ ಲಯದಲ್ಲಿ ತಾಯ್ತನ ಸುಖವಾದಷ್ಟು ವಾಸ್ತವ ಬದುಕಿನಲ್ಲಿ ಅಲ್ಲವೇನೋ ಎಂಬ ಸತ್ಯವೊಂದು ಆಕೆಗೆ ಗೋಚರವಾಗಿತ್ತು.

* * * *

ಸದೂ ಇದ್ದಕ್ಕಿದ್ದ ಹಾಗೆಯೇ ಗಂಗಾಳನ್ನು ಹುಡುಕಿಕೊಂಡು ಬೆಂಗಳೂರಿಗೆ ಬಂದಾಗ ಗಂಗಾಗೆ ಆಶ್ಚರ್ಯ ಕಾದಿತ್ತು. ಮಡಿಕೇರಿಗೆ ಹೋಗಿ ಬಂದ ಎರೆಡು ವರ್ಷಗಳಲ್ಲಿ ಗಂಗಾ ಅವನನ್ನು ಹಲವಾರು ಬಾರಿ ಭೇಟಿಯಾಗಿದ್ದಳು. ಅವನು ಅಂಟಿಕೊಳ್ಳ ಬಯಸುವ ರೀತಿಯಲ್ಲಿ ಆಕೆಗೇ ಬೇಸರವಾಗುತ್ತಿತ್ತು. ಹೀಗೆ ಅವನು ಅಂಟಿಕೊಳ್ಳುವ ಸ್ವಭಾವ ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ ಎನ್ನುವ ಭಯ, ಎಲ್ಲಿಯೋ ಬಂಧಿಸಿ ಬಿಡುತ್ತದೆ ಎನ್ನುವ ಭಯ. ಅವನ ದೈನ್ಯತೆ ಆಕೆಯಲ್ಲಿ ಸಿಟ್ಟನ್ನು ಭರಿಸುತ್ತಿತ್ತು. ಪ್ರತಿ ಬಾರಿ ಬೆಂಗಳೂರಿಗೆ ಬಂದಾಗ ಆತನೊಡನೆ ಮಲಗಿಯೇ ಆತನಲ್ಲಿ ವಿಶ್ವಾಸ ಹುಟ್ಟಿಸಬೇಕಾದ ಅನಿವಾರ್ಯತೆ ಆಕೆಗೆ ಬೇಸರ ಹುಟ್ಟಿಸುತ್ತಿತ್ತು. ಹಾಗೆ ಇರದಿದ್ದಾಗ ಗಂಗಾ ಎಲ್ಲಿಯೋ ತನ್ನನ್ನು ದೂರ ಸರಿಸುತ್ತಿದ್ದಾಳೆ, ತಿರಸ್ಕರಿಸುತ್ತಿದ್ದಾಳೆ ಎಂಬ ಭಾವ ಅವನಲ್ಲಿ. ಸಂಭೋಗದ ಸಂಬಂಧದಲ್ಲಿ ಸೋತ ಸಂದರ್ಭಗಳಲ್ಲಿ ಅವನ ಮುಖದಲ್ಲಿ ಮೂಡುತ್ತಿದ್ದ ದೈನ್ಯತೆಗೆ ಗಂಗಾ ಹೆದರಿಬಿಡುತ್ತಿದ್ದಳು. ಮತ್ತೆ ಸಮಾಧಾನಿಸಬೇಕು, 'ಪರವಾಗಿಲ್ಲ ಬಿಡು' ಎಂದು ಬೆಚ್ಚಗಿನ ಮೈಯಲ್ಲಿ ತಣ್ಣನೆಯ ಮಾತುಗಳನ್ನು ಆಡಬೇಕು, ಶಾಂತವಾಗಿದ್ದು ಸಮಾಧಾನಿಸಬೇಕು. ಗಂಗಾಗೆ ಇವೆಲ್ಲ ಕಿರಿ ಕಿರಿಯನ್ನುಂಟು ಮಾಡತೊಡಗಿದ್ದವು. ದೈನ್ಯತೆಯ ಸಂಬಂಧಗಳು ಉಂಟು ಮಾಡುವ ಕಿರಿ ಕಿರಿಯನ್ನು ಗಂಗಾ ಕಂಡುಕೊಂಡದ್ದೇ ಈ ಸಂಬಂಧದಲ್ಲಿ. ಸಂಸಾರ, ತಾನು, ಗಂಡ ಎನ್ನುವ ಕಲ್ಪನೆಯ ಹುಡುಗಿಯರು ಈತನೊಡನೆ ಸಂಸಾರ ಮಾಡಿದರೆ ಈತ ಸುಖವಾಗಿ ಬದುಕಬಲ್ಲನೇನೋ ಎಂದು ಗಂಗಾ ಯಾವಾಗಲೂ ಫೀಲ್ ಮಾಡುತ್ತಿದ್ದಳು. ಕ್ಷಣ ಕ್ಷಣದಲ್ಲಿ ಏನೇನೋ ಆತಂಕಗಳಲ್ಲಿ ಬಳಲುವ, 'ನಾನು ಯಾರು' ಎಂಬ ಪ್ರಶ್ನೆಗೆ ಉತ್ತರ ಹುಡುಕುವ ತಾನು-ಸದೂನೊಟ್ಟಿಗೆ ಕಿರಿ ಕಿರಿ ಮಾಡಿಕೊಂಡು ಬದುಕುವ ಹೆಂಗಸಾಗಿಬಿಡುವೆನೇನೋ ಎಂದು ಗಂಗಾ ಹೆದರುವಳು.

ಈ ಸಲ ಸದೂ ಬಂದಾಗ ಹಿಂದಿನ ದಿನಗಳಿಂತ ಭಿನ್ನವಾಗಿ ಬಂದಿದ್ದ. ನಿನ್ನ ಹತ್ತಿರ ಗಂಭೀರವಾದ ವಿಚಾರವೊಂದನ್ನು ಕುರಿತು ಮಾತನಾಡಬೇಕಿದೆ ಎಂದ. ಯಾವುದೋ ಅವನ ಅಂತರಂಗ ಕಲಕಿದ ವಿಚಾರವಿರಬಹುದು ಎಂದು ಗಂಗಾ ಮೊದಲೆಣಿಸಿದಳು. ಅವನ ಮದುವೆಯ ವಿಚಾರವಿರಬಹುದೇ ಎಂದು ಆಕೆಯ ಮನಸ್ಸಿಗೆ ಬಂದಾಗ ಆಕೆಗೆ ಸಂತೋಷವೇ ಆಯಿತು. ಸದಾ ಮದುವೆಯಾದರೆ ತಾನೊಂದು ಬಂಧನದಿಂದ ಕಳಚಿಕೊಂಡ ಹಾಗೆ ಎಂದು ಯೋಚಿಸಿದಾಗ ಆಕೆಗೆ ಹಾಯ್ ಎನಿಸುತ್ತದೆ. ತನ್ನಂಥವಳಿಗೇ ಅಂಟಿಕೊಳ್ಳುವ ಹಂದರದಲ್ಲಿ ಇಬ್ಬರ ಮನಸ್ಸಿನ ನೆಮ್ಮದಿಯೂ ನಾಶವಾಗಿ ಹೋಗುತ್ತದೆಯೋ ಎಂಬ ಹೆದರಿಕೆ ಆಕೆಯಲ್ಲಿ ದಿಗಿಲು ಹುಟ್ಟಿಸುತ್ತದೆ. 'ಸ್ತ್ರೀ ಮುಕ್ತಿ' ಸಂಘಟನೆಯ 'ವರದಕ್ಷಿಣೆ'ಯ ನಾಟಕವೊಂದರಲ್ಲಿ ಭಾಗವಹಿಸಬೇಕಾದುದರಿಂದ ಸಂಜೆ ಸಿಗುತ್ತೇನೆಂದು ಗಂಗಾ ನುಡಿಯುತ್ತಾಳೆ. ಸಾಯಂಕಾಲ ಗಂಗಾ ಹೋಗುವ

ಮುಂಚೆ ಸದೂ ಪಾರ್ಕ್‌ವೊಂದರಲ್ಲಿ ಕಾಯುತ್ತಾ ಕುಳಿತಿದ್ದ. ಸದೂ ಏನು ಹೇಳಬಹುದು ಎಂಬ ಕುತೂಹಲದಿಂದಲೇ ಗಂಗಾ ಅಲ್ಲಿಗೆ ಹೋದಳು. ಸದೂ ಪೀಠಿಕೆಯೆಂಬಂತೆ ಗಂಗಾ ತನ್ನ ಬಾಳಿನಲ್ಲಿ ತುಂಬಿದ ಆತ್ಮವಿಶ್ವಾಸ, ಧೈರ್ಯಕ್ಕೆ ತಾನು ಯಾವತ್ತೂ ಋಣಿಯಾಗಿರುತ್ತೇನೆ ಎನ್ನುತ್ತಾನೆ. ತನ್ನ ಜೀವನದ ಯಾವ ಸಂದರ್ಭದಲ್ಲಿಯೂ ಅದನ್ನು ಮರೆಯಲಾರೆ ಎನ್ನುತ್ತಾನೆ. ಗಂಗಾ ತಮಾಷೆ ಮಾಡುತ್ತಾಳೆ. 'ಅಂದರೆ ಸದೂ ನೀನು ನನಗೆ ಗುಡ್-ಬೈ ಹೇಳುತ್ತಾ ಇದ್ದೀಯ ಅಲ್ಲವೇ? ಇಷ್ಟೆಲ್ಲ ಹೊಗಳಿಕೆ ಬೇಡ, ನೇರ ವಿಚಾರಕ್ಕೆ ಬಾ' ಎನ್ನುತ್ತಾಳೆ. ಸದೂ ಸಂಕೋಚದಿಂದಲೇ ಹೇಳುತ್ತಾನೆ, 'ನನಗೆ ಮದುವೆಯಾಗುವ ಆಲೋಚನೆ ಇದೆ, ಆದರೆ ನಿನ್ನನ್ನು ಕೇಳದೆಯೇ, ನಿನ್ನೊಟ್ಟಿಗೆ ಚರ್ಚಿಸದೇ ನಾವೇನೂ ನಿರ್ಧಾರ ತೆಗೆದುಕೊಳ್ಳುವುದಿಲ್ಲ' ಎಂದು ಮುಖ ತಿರುಗಿಸುತ್ತಾನೆ. ಆತನ ಕಣ್ಣಂಚಿನಲ್ಲಿ ನೀರು ಕಂಡಾಗ ಗಂಗಾಗೆ ಖೇದವಾಗುತ್ತದೆ. 'ನಾವು ಎಂದರೆ'? ಗಂಗಾ ಕುತೂಹಲದಿಂದ ಕೇಳುತ್ತಾಳೆ. ಸದೂ 'ನಾನು, ಕಮಲ' ಎನ್ನುತ್ತಾನೆ. ಗಂಗಾಗೆ ಆಶ್ಚರ್ಯವಾಗುತ್ತದೆ. ಕಮಲ ಹೊನ್ನೇಕೆರೆಯ ಹುಡುಗಿಯೇ! ಮೈಸೂರಿನಲ್ಲಿ ಬಿ.ಎಡ್. ಮುಗಿಸಿ ಶಿವಮೊಗ್ಗೆಯಲ್ಲಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿಕೊಂಡಿರುವ ಕಮಲ. ಸಾಧನಾಳ ಸಾವನ್ನು ಅರಗಿಸಿಕೊಳ್ಳಲಾರದೇ ಕುಡಿದು ಮಲಗಿದಾಗ, ಕುಡಿದು ಕಕ್ಕಿದ್ದನ್ನು ಬಾಚಿ ಪ್ರೀತಿಯಿಂದ ತಬ್ಬಿಕೊಂಡ ಕಮಲ! ಪ್ರಜ್ಞೆಯಿಲ್ಲದೇ ಮಲಗಿದ ಗಂಗಾಳನ್ನು ಕಂಡ ಕಮಲೆ ಮರುಗಿದ್ದಳು. ಆಕೆಯ ಬಗೆಗೆ ನೊಂದುಕೊಂಡಿದ್ದಳು. ಎಂತಹ ಸಂದರ್ಭದಲ್ಲೂ ಜೀವನದ ಕಡಿವಾಣ ತಮ್ಮ ಕೈಯಲ್ಲೇ ಇರಬೇಕೆಂದು ಬಯಸುತ್ತಿದ್ದ ಗಂಗಾ ಹೀಗೇಕೆ ಎಂದು ಮನದಾಳದಲ್ಲಿಯೇ ಚಡಪಡಿಸಿದ್ದಳು. ತಾಯಿಯ ಹುಚ್ಚಿನಲ್ಲಿ ಗಂಗಾ ಇಷ್ಟಿಷ್ಟೇ ಇಂಚು ಇಂಚು ಕರಗಿದುದನ್ನು ಕಮಲೆ ಕಂಡಿದ್ದಳು. ಅಂಟಿಕೊಂಡು ಬದುಕಲಾರದ ಗಂಗಾಳ ಬದುಕಿನ ಅರಿವಿನ ಅಂಚುಗಳು ಕಮಲೆಗೆ ಅರಿವಾಗತೊಡಗಿತ್ತು. ಸದಾ ಗಂಗಾಗೆ ಪತ್ರ ಕಳಿಸಿದ್ದೇ ಕಮಲೆಯ ಕೈನಿಂದ. ಸದಾ-ಗಂಗಾರ ನಡುವಿನ ಸಂಬಂಧ ಕಮಲೆ ತಿಳಿಯದ್ದೇನಲ್ಲ. ಆದರೆ ನೇರವಾಗಿ ಈ ಬಗ್ಗೆ ಕುಳಿತು ಗಂಗಾ-ಕಮಲ ಮಾತನಾಡಿದವರಲ್ಲ. ಗಂಗಾ ಕಂಡ ಹಾಗೆ ಕಮಲ ಶಾಂತಸ್ವಭಾವದ ಹುಡುಗಿ. ಸಿಕ್ಕಿದುದರಲ್ಲಿ ತೃಪ್ತಿ ಪಟ್ಟುಕೊಳ್ಳುವ ಸ್ವಭಾವ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎನ್ನುವ ಸ್ವಭಾವದ ಬದುಕು. ಬದುಕಲ್ಲಿ ರೋಷ/ದ್ವೇಷ ತುಂಬಿಕೊಂಡ ಹುಡುಗಿಯಂತೆ ಈಕೆ ಕಂಡಿರಲಿಲ್ಲ. ಹೀಗೆ ಒಮ್ಮಿಂದೊಮ್ಮೆಗೇ ಕಮಲೆಯ ಬಗ್ಗೆ ಯೋಚಿಸುತ್ತಾ ಕುಳಿತ ಗಂಗಾಗೆ ಸದೂ ಮಾತನಾಡಿದ್ದು, ಮಾತನಾಡುತ್ತಿದ್ದುದು ಕೇಳಿಸುತ್ತಲೇ ಇರಲಿಲ್ಲ. 'ಯಾಕೆ ಹೀಗೆ ನೀನು ಅಂತರ್‌ಮುಖಿಯಾಗಿ ಬಿಟ್ಟೆ, ನಾನು ಕಮಲೆಯನ್ನು ಮದುವೆಯಾಗುವುದು ನಿನಗಿಷ್ಟವಿಲ್ಲವೇ' ಎಂದು ಸದೂ ಜೋರಾಗಿಯೇ ಕೇಳಿದಾಗ ಗಂಗಾ ಬೆಚ್ಚಿದಂತೆ ಒಮ್ಮೆಲೇ ಹೇಳುತ್ತಾಳೆ, 'ಛೇ, ನಿನ್ನ ಬದುಕಿನ ಬಗ್ಗೆ, ನಿನ್ನ ಮದುವೆಯ ಬಗ್ಗೆ ನಾನೇ ಒತ್ತಾಯಿಸುತ್ತಿರಲಿಲ್ಲವೇ, ನಾನು ಕಮಲೆಯ ಬಗ್ಗೆ ಯೋಚಿಸುತ್ತಿದ್ದೆ' ಎಂದಳು. ಸಂಬಂಧಿಕರ ಮನೆಯೊಂದಕ್ಕೆ ಬರುತ್ತಿದ್ದ ಕಮಲ ಮರುದಿನ ಗಂಗಾಳನ್ನು ಭೇಟಿಯಾಗುತ್ತಾಳೆ ಎಂದು ತಿಳಿಸಿದಾಗ ಗಂಗಾ ಸಂತೋಷಪಟ್ಟುಕೊಂಡಳು. ಮರುದಿನ ಭೇಟಿಯಾಗುವುದಾಗಿ ಹೇಳಿ ಗಂಗಾ ಸದಾನಿಂದ ಬೀಳ್ಕೊಂಡು ಬಸ್ಸು ಹತ್ತಿದಳು. ಗಂಗಾಳ ಮನಸ್ಸಿನಲ್ಲಿ ನೆಮ್ಮದಿಯ ಭಾವವೊಂದು ಮೂಡತೊಡಗಿತ್ತು. ವೆಂಕಟೇಶ್, ಬಾಲು, ರವಿಯವರ ಸಂಬಂಧದಲ್ಲಿ ಕಾಡಿರದ ಪಾಪಪ್ರಜ್ಞೆಯೊಂದು ಆಕೆಗೆ ಸದೂನ ಸಂಬಂಧದಲ್ಲಿ ಕಾಡುತ್ತಿತ್ತು. ತಾನು ಹೇಳಿದರೂ ಕೇಳದೇ ತನ್ನನ್ನೇ ಜೀವನದ ಕೇಂದ್ರ ಬಿಂದುವನ್ನಾಗಿ ಮಾಡಿಕೊಳ್ಳುವ ಸದೂನ ಬದುಕು ತನ್ನಿಂದಾಗಿ ಮೂರಾಬಟ್ಟೆಯಾಗಿಬಿಡುತ್ತದೆಯೇನೋ ಎಂಬ ಹೆದರಿಕೆ ಆಕೆಯಲ್ಲಿ ಮನೆ ಮಾಡಿತ್ತು. ಈಗ ಆಕೆಯಲ್ಲಿ ನಿರಾತಂಕ ಮೂಡಿತ್ತು. ಮರುದಿನ ಸಾಯಂಕಾಲ ಗಂಗಾ ಬರುವ ಮುಂಚೆಯೇ ಅದೇ ಪಾರ್ಕ್‌ನಲ್ಲಿ ಕಮಲೆ-ಸದೂ ಗಂಗಾಳಿಗೋಸ್ಕರ ಕಾಯುತ್ತಾ ಕುಳಿತಿದ್ದರು. ಕಮಲೆ-ಗಂಗಾರ ಎಳೆತನದ, ಬಾಲ್ಯದ ನೆನಪುಗಳು ಅವರನ್ನು ಮನಬಿಚ್ಚಿಸಿ ಮಾತನಾಡಿಸಿತ್ತು. 'ಬೆಂಗಳೂರಿನ

ಈ ಯಾಂತ್ರಿಕ ಬದುಕಿನಲ್ಲಿ ಅದ್ಹೇಗೆ ಬದುಕುತ್ತೀಯೆ ಗಂಗಾ' ಎಂದು ಬೆಚ್ಚನೆಯ ಹೃದಯದಿಂದಲೇ ಕಮಲೆ ಮಾತನಾಡಿದಳು. 'ಸದೂವನ್ನು ನಿನ್ನಿಂದ ಕಸಿದುಕೊಳ್ಳುತ್ತಿರುವೆನೇನೋ ಎಂಬ ಆತಂಕ ನನ್ನನ್ನು ಯಾವಾಗಲೂ ಬಾಧಿಸುತ್ತದೆ' ಎಂದಳು. ಗಂಗಾ ಮನಸಾರೆ ನಕ್ಕು, 'ಕಮಲೆ ನಿಜ ಹೇಳಬೇಕೆಂದರೆ ನನ್ನನ್ನು ಒಂದು ರೀತಿಯ ಬಂಧನದಿಂದ ನೀನು ಬಿಡುಗಡೆಗೊಳಿಸುತ್ತಿರುವೆ' ಎಂದಳು. ಗಂಗಾ/ಕಮಲೆ ಒಟ್ಟಿಗೆ ಮಾತನಾಡಲಿ, ಅವರೀರ್ವರ ನಡುವೆ ತಾನಿರುವುದು ಅವರಿಗೆ ಮನಬಿಚ್ಚಿ ಮಾತನಾಡಲು ಸಾಧ್ಯವಾಗುವುದಿಲ್ಲವೆಂದು ಸದೂ ಹೋಟೆಲ್‌ನಲ್ಲಿ ಏನಾದರೂ ಕಟ್ಟಿಸಿಕೊಂಡು ಬರುತ್ತೇನೆ ಎಂದು ಅಲ್ಲಿಂದ ಜಾಗ ಖಾಲಿ ಮಾಡಿದ. ಇಷ್ಟು ನಿರ್ವಿಕಾರವಾಗಿ, ನಿರ್ಲಿಪ್ತವಾಗಿ, ಭಾವನಾರಹಿತಳಾಗಿ ಗಂಗಾ ಬದುಕನ್ನು ಸ್ವೀಕರಿಸುತ್ತಾಳಲ್ಲ ಎಂಬ ಬಗ್ಗೆ ಸದೂಗೆ ಒಮ್ಮೆ ಆಶ್ಚರ್ಯವಾಗದಿರಲಿಲ್ಲ. ಈ ನಿರ್ಲಿಪ್ತತೆ, ನಿರ್ವಿಕಾರದೊಳಗೆ ಅಸೂಯೆ, ಒಂಟಿತನ, ಆತಂಕ ಈಕೆಗೆ ಕಾಡಬಹುದೇ ಎಂದು ಅನ್ನಿಸಿದಾಗ ಗಂಗಾಳ ಪಾಲಿಗೆ ತಾನು ಒಬ್ಬ ಪಯಣಿಗನಾಗಿ ಮಂಜುಗಡ್ಡೆಯ ನೋವೊಂದನ್ನು ಆಕೆಯ ಎದೆಯಲ್ಲಿ ಬಿಟ್ಟುಬಿಟ್ಟೆನೇನೋ ಎಂಬ ನೋವು, ಅಳುಕು ಸದೂಗೆ ಕಾಡದಿರಲಿಲ್ಲ. ಸದೂ ಹೋದ ನಂತರ ಗಂಗಾ ಕಮಲೆಯಲ್ಲಿ ಮನಬಿಚ್ಚಿ ಮಾತನಾಡತೊಡಗಿದಳು. ತನಗೆ ಅನ್ನಿಸಿದ ಸತ್ಯವೊಂದನ್ನು ಕಮಲೆಯಲ್ಲಿ ಹೇಳುತ್ತೇನೆ ಎಂದು ಸದೂ ಜೊತೆಗಿದ್ದ ಸೆಕ್ಸ್ ಸಂಬಂಧವನ್ನು ಕುರಿತು ಮಾತನಾಡತೊಡಗಿದಳು. 'ನೋಡು, ಮುಂದೆ ಎಂದಾದರೊಮ್ಮೆ ಗಂಗಾ ಇದೆಲ್ಲ ಗೊತ್ತಿದ್ದೂ ನನಗೆ ಹೇಳಲಿಲ್ಲ ಎಂದು ನಿನ್ನ ಮನಸ್ಸಿಗೆ ಬರಬಾರದು, ದೈಹಿಕ ಸುಖದ ಬಗ್ಗೆ ಮಾತನಾಡುವುದಾದರೆ ಸದನೊಟ್ಟಿಗಿನ ನನ್ನ ಸಂಬಂಧ ಅನೇಕ ಬಾರಿ ಸೋಲಿನದೇ ಆಗಿದೆ. ಹಾಗಾಗಿ ಈ ಬಗ್ಗೆ ನೀನು ಯೋಚಿಸಿ ನೋಡು, ಇದು ನನಗೆ ಗೊತ್ತಿರುವ ಸತ್ಯ' ಎನ್ನುತ್ತಾ ಕಮಲಳ ಮುಖ ದಿಟ್ಟಿಸಿದಳು. 'ದೈಹಿಕ ಸಂಬಂಧದಲ್ಲಿ ಸೋತಾಗ ಅವನ ಮುಖದಲ್ಲಿ ಮೂಡುವ ದೈನ್ಯತೆ, ಇಂತಹವುಗಳನ್ನು ಎದುರಿಸುವ ಶಕ್ತಿ ನಿನ್ನಲ್ಲಿದೆಯಾ ಕಮಲ' ಎನ್ನುತ್ತಾ ಇರುವಾಗ ಸದೂನ ಬಗ್ಗೆ ತಾನು ಕೆಟ್ಟ ಅಭಿಪ್ರಾಯ ಮೂಡಿಸುತ್ತಿರುವೆನೇನೋ ಎಂಬ ಅಳುಕೂ ಗಂಗಾಗೆ ಕಾಡದಿರಲಿಲ್ಲ. ಇನ್ನೊಂದು ಕಡೆ ಕಮಲೆಗೆ ತನಗೆ ತನ್ನ ಅನುಭವಕ್ಕೆ ಬಂದಿರುವ ಸತ್ಯ ಹೇಳದಿದ್ದರೆ ಮುಂದೆ ಎಂದಾದರೊಂದು ದಿನ ಕಮಲೆ, 'ನನ್ನ ಬಾಲ್ಯ ಸ್ನೇಹಕ್ಕೆ, ನನ್ನ ನಂಬಿಕೆಗೆ ನೀನು ಕೊಟ್ಟ ಬಳುವಳಿ, ಇದೇ ಏನು' ಅನ್ನಬಹುದು. ಏನೇನೋ ವಿಚಿತ್ರ ತಳಮಳಗಳಲ್ಲಿಯೇ ಗಂಗಾ ಹೇಳತೊಡಗಿದ್ದಳು. 'ಇದು ತನ್ನ ಅನುಭವದ ಸತ್ಯ. ಆದರೆ ಇದು ಇನ್ನೊಬ್ಬರ ಬದುಕಿನ ಸತ್ಯವಾಗಬೇಕಿಲ್ಲ. ಸದೂವಿನ ಸೋಲು ತನ್ನ ದೇಹದ ಅಥವಾ ತನ್ನ ಮನಸ್ಸಿನ ಯಾವುದೇ ಮಿತಿಯ ಮೇಲೂ ಅವಲಂಬಿಸಿರಬಹುದು...' ಹೀಗೆಲ್ಲ ಗಂಗಾ ಕಮಲೆಯ ಬಳಿ ಹೇಳಿದಾಗ ಕಮಲೆ ಶಾಂತವಾಗಿ ಎಲ್ಲವನ್ನೂ ಕೇಳಿಸಿಕೊಂಡಳು. ಅದೇ ಗಾಂಭೀರ್ಯ, ಅದೇ ಶಾಂತತೆ. ಯಾವ ರೋಚಕತೆ ಇಲ್ಲ. ಯಾವುದೂ ಆಕೆಯನ್ನು ಬೆಚ್ಚಿ ಬೀಳಿಸಲೂ ಇಲ್ಲ. ಇದೆಲ್ಲ ತನಗೆ ಗೊತ್ತಿರುವುದು ಎನ್ನುವ ರೀತಿ ಕಮಲೆಯ ವರ್ತನೆ ಇತ್ತು. ಸದಾ ಇದನ್ನೆಲ್ಲ ಕಮಲೆಯ ಬಳಿ ಹಂಚಿಕೊಂಡಿರಬಹುದು. ಮತ್ತೆ ಕಮಲ ನುಡಿದಳು 'ಲೈಂಗಿಕ ವಿಚಾರ ಬಂದಾಗ ನಾನು ತಣ್ಣನೆಯ ಹುಡುಗಿಯೇ, ನನ್ನದು ಶೀತಲ ದೇಹ, ಶೀತಲ ಮನಸ್ಸು, ಅದು ನನಗೆ ಮುಖ್ಯವಲ್ಲ. ನನ್ನ ಬದುಕಿನಲ್ಲಿ ನಾನೆಣಿಸಿದಂತೆ ಇರಬಲ್ಲ, ನನ್ನ ಬದುಕಿಗೆ ಧೈರ್ಯ ತುಂಬುವಂತಹ ಸಂಗಾತಿಗಾಗಿ ಮಾತ್ರ ನನ್ನ ಹಂಬಲ'. ಕಮಲೆ ಹೀಗೆಲ್ಲ ನುಡಿಯುವಾಗ ಗಂಗಾಳ ಮನಸ್ಸಿನ ಆತಂಕ ಕಡಿಮೆಯಾಗುತ್ತಾ ಹೋಗುತ್ತದೆ. ಕಮಲೆಯ ಬಳಿ ಇದನ್ನೆಲ್ಲ ಹಂಚಿಕೊಳ್ಳದಿರಲು ಆಕೆಗೆ ಸಾಧ್ಯವೇ ಇರಲಿಲ್ಲ. ಸದೂವಿನ ಸಂಬಂಧಕ್ಕಿಂತ ಹೆಚ್ಚು ಬೆಚ್ಚನೆಯ ಸಂಬಂಧ ಕಮಲೆಯದು. ಹೊನ್ನೇಕೆರೆಯ ನವಿಲುಗರಿಗಳು ಕಣ್ಣು ಬಿಡುವುದನ್ನು ನೋಡಲು ಓಡಿ ಹೋಗುತ್ತಿದ್ದ ಬಾಲೆಯರಿಬ್ಬರ ಸಂಬಂಧ ಅದು. ಒಬ್ಬರಿಗೊಬ್ಬರು ಗೆಲ್ಲಬೇಕೆಂಬ ಛಲವಿರಲಿಲ್ಲ. ಸದೂ ಜೊತೆ ನಾನು ಬಾಳ ಹೊರಟಿದ್ದೇನೆ ಎನ್ನುವ ಹಮ್ಮೂ ಆಕೆಯಲ್ಲಿ ಇರಲಿಲ್ಲ. ಗಂಗಾಳ ಬಗ್ಗೆ ಗೌರವಾದರಗಳ ಜೊತೆಗೆ ಆಕೆಗೆ ಗಂಗಾಳ ಬದುಕಿನ ಬಗ್ಗೆ ಆತಂಕವೂ

ಇತ್ತು. ನಿನ್ನಷ್ಟು ಬದುಕಿನಲ್ಲಿ ಧೀರಳಾಗಿ ಏನನ್ನೋ ಹುಡುಕುತ್ತೇನೆ ಎನ್ನುವ ಗಟ್ಟಿತನ ತನ್ನಲ್ಲಿ ಇಲ್ಲವೆಂದು ಕಮಲೆ ಹಲವಾರು ಬಾರಿ ನುಡಿದಳು. 'ನನಗೆ ಬೇಕಾಗಿರುವುದು ಶಾಂತ ಜೀವನ. ಶಾಂತವಾಗಿ ಹರಿಯುವ ನೀರಿನ ಹಾಗೆ. ಬೆಂಗಳೂರಿನ ಓಡುವ ಬದುಕಿನ ಯಾಂತ್ರಿಕತೆ ನನಗೆ ಬೇಕಿಲ್ಲ'. ಕಮಲೆ ಇದೆಲ್ಲ ತನ್ನ ನಂಬಿಕೆ ಎಂಬಂತೆ ಮಾತನಾಡುತ್ತಿದ್ದಳು. 'ಬೆಂಗಳೂರಿನ ಓಡುವ ಬದುಕಿನಂತೆಯೇ ನಿನ್ನ ಬದುಕಿನ ಓಟ ಗಂಗಾ, ಅದ್ಹೇಗೆ ಈ ಪ್ರವಾಹದಲ್ಲಿ ಈಜುತ್ತೀಯೋ ಎಂದು ಆಶ್ಚರ್ಯವಾದರೆ, ಒಮ್ಮೊಮ್ಮೆ ಇದನ್ನೆಲ್ಲ ಜೀರ್ಣಿಸಿಕೊಳ್ಳುವ ಅದ್ಭುತ ಶಕ್ತಿ ಏನಿದೆಯೋ ನಿನ್ನಲ್ಲಿ ಎನಿಸುತ್ತದೆ', ಕಮಲ ಗಂಗಾಳ ಬಗ್ಗೆ ತನಗಿದ್ದ ಗೌರವಾದರ, ಆತಂಕಗಳನ್ನು ಒಟ್ಟೊಟ್ಟಿಗೇ ಮಾತನಾಡತೊಡಗಿದ್ದಳು. ಆಕೆ ಮಾತನಾಡಿದ್ದೆ ಹೃದಯಾಂತರಾಳದಿಂದ. ಯಾರನ್ನೂ ಮೆಚ್ಚಿಸಲು ಆಕೆ ಮಾತನಾಡುತ್ತಿರಲಿಲ್ಲ. ಗಂಗಾನಂತಹ ರಭಸದ ಹುಡುಗಿ ಸದೂವಿನೊಡನೆ ಬಾಳಲಾರಳೇನೋ ಎಂದು ಕಮಲೆಗೂ ಅನ್ನಿಸುತ್ತಿತ್ತು. ಇಷ್ಟೆಲ್ಲ ದೀರ್ಘವಾಗಿ ಮಾತನಾಡಿದ ಮೇಲೆ ಗಂಗಾಳ ಮನಸ್ಸಿಗೆ ನೆಮ್ಮದಿ/ಶಾಂತಿ ದೊರಕಿದಂತಾಗಿತ್ತು. ಹೀಗೆ ಕಮಲ/ಗಂಗಾ ಒಟ್ಟಿಗೇ ಚರ್ಚಿಸಿದ ನಂತರದ ದಿನಗಳಲ್ಲಿ ಬೆಂಗಳೂರಿನಲ್ಲಿ ಹಲವಾರು ಕಡೆ ಗಂಗಾ ಅವರೊಡನೆ ಸುತ್ತಾಡಿದುದುಂಟು, ಅವರ ಭವಿಷ್ಯದ ಕನಸುಗಳಿಗೆ ಮೂಕ ಪ್ರೇಕ್ಷಕಿಯಾದುದುಂಟು, ಅವರ ಮದುವೆಯ ಮಾತು ಕತೆಗಳಿಗೆ ಸಲಹಿಸಿದ್ದೂ ಉಂಟು. ತಮ್ಮೊಡನೆ ಸುತ್ತುವ ಗಂಗಾಳ ಮನಸ್ಸಿನಲ್ಲಿ ಏನು ನಡೆಯುತ್ತಿರಬಹುದು ಎನ್ನುವುದನ್ನು ಗ್ರಹಿಸಲು ಕಮಲೆಗೆ ಸಾಧ್ಯವಾಗುವುದಿಲ್ಲ. ಗಂಗಾಳ ನಿರ್ವಿಕಾರ, ನಿರ್ಲಿಪ್ತತೆಗಳು ಆಕೆಯನ್ನು ಒಮ್ಮೆ ದಂಗುಬಡಿಸುತ್ತವೆ.

ಸದೂ, ಕಮಲೆಯನ್ನು ಬೆಂಗಳೂರಿನಿಂದ ಬೀಳ್ಕೊಟ್ಟ ಮೇಲೆ ಗಂಗಾಗೆ ಬದುಕು ಒಂದು ರೀತಿಯ ಬರಡು ಎನಿಸತೊಡಗಿತ್ತು. ಸುಮಾರು ಒಂದು ವಾರದ ಕಾಲ ಆಕೆ ಸದೂ ಹಾಗೂ ಕಮಲಾರೊಟ್ಟಿಗೆ ಬೆಂಗಳೂರು ತಿರುಗಿದ್ದಳು. ಆಗೇನೂ ಅನ್ನಿಸಿರಲಿಲ್ಲ, ಅವರನ್ನು ಬೀಳ್ಕೊಡುವ ತನಕ ಏನೋ ಆದರ್ಶದ ರೋಮಾಂಚನ, ಮನಸಿನ ಒಳ ಅಂಗಳದಲ್ಲಿ ಏನೋ ನಿಟ್ಟುಸಿರು. ಏನೋ ಸಮಾಧಾನ. ಅವರಿರುವಾಗ ತುಂಬಿಕೊಂಡಿರುತ್ತಿದ್ದ ಮನಸ್ಸು ಈಗ ಇದ್ದಕ್ಕಿದ್ದಂತೆ ಬರಡು ಅನ್ನಿಸತೊಡಗಿತ್ತು. ಯಾಕೋ 26ರ ಅವಧಿಗೇ ಸಾಕಪ್ಪಾ ಈ ಬದುಕು ಎನ್ನುವ ಭಾವನೆ. ಒಮ್ಮೊಮ್ಮೆ ಹಸಿವೆಯೂ ಆಗುತ್ತಿರಲಿಲ್ಲ. ಊಟ/ತಿಂಡಿಯ ಬಗ್ಗೆಯೂ ಆಸಕ್ತಿ, ಅಭಿರುಚಿ ಹೋಗಿಬಿಟ್ಟರೆ ಇನ್ನೇನಕ್ಕೆ ಬದುಕಿರಬೇಕು ಎನ್ನುವ ಪ್ರಶ್ನೆಯಲ್ಲಿ ಗಂಗಾಳ ಮನಸ್ಸು/ದೇಹ ಎರಡೂ ಮುದುಡಿಕೊಳ್ಳತೊಡಗಿತ್ತು. ಮನಸ್ಸು ಸಾವಿಗಾಗಿ ಕಾದು ಕುಳಿತಿದೆ ಅನ್ನಿಸತೊಡಗಿದಾಗ ಗಂಗಾಳಿಗೆ ಬಹಳಷ್ಟು ಹೆದರಿಕೆಯಾಗತೊಡಗಿತ್ತು. ಈ ಬದುಕಿಗೆ ಭಿನ್ನವಾಗಿರುವ ಬದುಕೊಂದಕ್ಕೆ ತೆರೆದುಕೊಳ್ಳಬೇಕು ಎನ್ನುವ ಹಂಬಲ, ಆಕೆಯಲ್ಲಿ ಬಲವಾಗಿ ಬೆಳೆಯತೊಡಗಿತು. 'ಮಗು'-ವಿನ ಆಯ್ಕೆಯೊಂದನ್ನು ಯೋಚಿಸಿ, ಭ್ರಮಾತ್ಮಕವಾಗಿ ಆ ಹಂತಕ್ಕೆ ಒಳಗಾದ ಗಂಗಾಗೆ ಈಗ ಕುಟುಂಬವಿಲ್ಲದೇ, ತಂದೆಯಿಲ್ಲದ ಮಗುವಿನ ತಾಯಿಯಾಗಬೇಕೆಂಬುದು ರೋಮಾಂಚಕರ ಆದರ್ಶದ ಆಯ್ಕೆಯಾಗಿ ಕಂಡಿತ್ತು. ಬದುಕನ್ನು ಇನ್ನಷ್ಟು ದುರ್ಬಲಗೊಳಿಸುವುದರ ಜೊತೆಗೆ ತನ್ನ ಬದುಕಿನ ಇಡಿಯ ಸ್ವಾತಂತ್ರ್ಯವನ್ನೇ ಕಸಿದುಕೊಂಡು ಬಿಡುವ ತಾಯ್ತನದಲ್ಲಿ ತಾನು ಕಿರಿ ಕಿರಿ ಮಾಡುವ ತಾಯಿಯಾಗಿ ಬಿಡುತ್ತೇನೇನೋ ಎಂಬ ಅನುಮಾನ ಆಕೆಯಲ್ಲಿಯೇ ಕಾಡತೊಡಗಿದ್ದವು. ಈ ಹಂತದಲ್ಲಿ ಸರೋಜ್ಜ ಭಾವನಾತ್ಮಕವಲ್ಲದ ವಾಸ್ತವದ ಲಯದ ಕಡೆ ಗಂಗಾಳ ಕಣ್ಣು ತೆರೆಸಿದ್ದರು. ಮಗು ಬರಿಯ ಭಾವನಾತ್ಮಕ ವಿಷಯವಲ್ಲ. ರಕ್ತ-ಮಾಂಸ ತುಂಬಿಕೊಂಡು ಒಂದು ಯುನಿಕ್ ವ್ಯಕ್ತಿತ್ವದಿಂದಲೇ ಮಗು ವಾಸ್ತವಕ್ಕೆ ಬರುತ್ತದೆ. ಆ ಮಗುವಿನ ಬೇಕು-ಬೇಡಗಳಲ್ಲಿ ತಂದೆಯೂ ಇರುತ್ತಾನೆ. ಗಂಗಾಗೆ ಇದೆಲ್ಲ ಗೋಜಲು-ಗೋಜಲು ಎನಿಸತೊಡಗಿತ್ತು. ಮನಸ್ಸೆಲ್ಲ ಗೊಂದಲಮಯವಾಗತೊಡಗಿತ್ತು.

'ಮಹಿಳಾ ಅಧ್ಯಯನಕ್ಕೆ' ಸಂಬಂಧಪಟ್ಟ ಕೋರ್ಸ್ ಒಂದನ್ನು ಅಭ್ಯಸಿಸುವ ಸಲುವಾಗಿ ಗಂಗಾ ಈ ಸಂದರ್ಭದಲ್ಲಿಯೇ ವಿದೇಶಕ್ಕೆ ಅರ್ಜಿ ಗುಜರಾಯಿಸಿದ್ದಳು. ತಾನು ಆಯ್ಕೆಯಾಗುವುದರ ಜೊತೆಗೆ ಸ್ಕಾಲರ್‌ಶಿಪ್ ಕೂಡಾ ಸಿಕ್ಕಾಗ ಗಂಗಾಗೆ ತನ್ನ ಕಣ್ಣನ್ನು ತನಗೇ ನಂಬಲಿಕ್ಕೆ ಆಗದಷ್ಟು ಆಶ್ಚರ್ಯ, ಸಂತೋಷ ಎರಡೂ ಆಗಿತ್ತು. ಕಾಣದ ದೇಶವೊಂದರ ಬದುಕು ತನ್ನ ಬದುಕನ್ನು ಕಣ್ಣರಳಿಸಿ ನೋಡುವ ವಿಸ್ಮಯಗಳನ್ನು ಹುಟ್ಟುಹಾಕಬಹುದೇನೋ ಎಂಬ ಆಸೆ ಒಂದು ಕಡೆ. ಬೆಂಗಳೂರಿನ ಐದಾರು ವರ್ಷದ ಯಾಂತ್ರಿಕ, ಆತಂಕದ ಬದುಕಿನಿಂದ ಸ್ವಲ್ಪ ದಿನ ಬಿಡುಗಡೆ ಸಿಗುತ್ತದೆ ಎನ್ನುವುದಂತೂ ಆಕೆಯಲ್ಲಿ ತೀವ್ರತೆರನಾದ ಸಂತೋಷವನ್ನು ಹುಟ್ಟುಹಾಕಿತ್ತು. ತಾನು ಬಯಸಿದ್ದೆಲ್ಲಾ ತನ್ನ ಜೀವನದಲ್ಲಿ ಸಿಗುತ್ತಾ ಹೋಗುವುದು ದುರಂತಕ್ಕೋ, ಸಂತೋಷಕ್ಕೋ ಎಂದು ಒಮ್ಮೊಮ್ಮೆ ಆಕೆಗೇ ದಿಗಿಲಾಗುತ್ತಿತ್ತು. ಈ ಅವಕಾಶವನ್ನು ಆಕೆ ನಿರೀಕ್ಷಿಸಿಯೇ ಇರಲಿಲ್ಲ. ಬೆಂಗಳೂರಿನ ತನ್ನ ಆತಂಕದ ಬದುಕನ್ನು ಮರೆಸುವ ಇನ್ನಾವುದೋ ಪ್ರಪಂಚಕ್ಕೆ, ಬದುಕಿನ ಆಯಾಮಕ್ಕೆ ಕಣ್ತೆರೆಯಬೇಕು ಎನ್ನುವ ಹಂಬಲದಲ್ಲಿ ಪ್ರಯತ್ನಗಳನ್ನು ಹಾಕಿದ್ದಳು ಅಷ್ಟೇ! ಈ ಅವಕಾಶದಿಂದಾಗಿ ಗಂಗಾಳಲ್ಲಿ ಆ ಕ್ಷಣಕ್ಕೆ ಬಹಳಷ್ಟು ನೆಮ್ಮದಿ! ಸಂತಸ ಸಿಕ್ಕಿತ್ತು.

ಗಂಗಾ ಸಂಭ್ರಮಪಟ್ಟ ಹಾಗೆಯೇ ಪಾರ್ವತಿ ಕೂಡಾ ಆಕೆಯ ಪ್ರವಾಸದ ಬಗ್ಗೆ ಸಂಭ್ರಮ ಪಟ್ಟಿದ್ದಳು. ಬೆಂಗಳೂರಿನ ಆತಂಕದ ಬದುಕನ್ನು ಮತ್ತೊಂದು ಪರಿಸರದಲ್ಲಿ ಕುಳಿತು ಅರಗಿಸಿಕೊಳ್ಳಲಿಕ್ಕೆ ಒಳ್ಳೆಯ ಅವಕಾಶವಿದು ಎಂದುಕೊಂಡಾಗಲೆಲ್ಲಾ ಗಂಗಾಗೆ ಅತೀವ ಸಂತೋಷವಾಗುತ್ತಿತ್ತು. ಒಮ್ಮೆಗೆ ಹೀಗೆ ಬಯಸಿದ್ದೆಲ್ಲ ಕೈಗೆ ಎಟುಕುತ್ತಾ, ಕೊನೆಗೆ ನಿಗೂಢಗಳೆಲ್ಲವೂ ಮಾಯವಾಗಿ ಏನೋ ಬರಡು, ಬರಡು ಎನಿಸುವ ಜೀವನದಿಂದ ಇನ್ನೇನು ಕಾದಿದೆಯೋ ಎಂಬ ಆತಂಕ. ವಿದೇಶಕ್ಕೆ ಒಂಟಿಯಾಗಿ ಪ್ರಯಾಣ ಮಾಡುವ ಸಾಹಸ ಪ್ರವೃತ್ತಿಯ ರೋಚಕತೆಯ ಒಳಗೆಲ್ಲೋ ಮೂಡುತ್ತಿದ್ದ ಭಯಮಿಶ್ರಿತ ಕುತೂಹಲಗಳು. ಎಲ್ಲದರ ಮಧ್ಯೆ ಗಂಗಾ ಕಾಣದ ದೇಶವೊಂದಕ್ಕೆ, ಮತ್ಯಾವುದೋ ನಿಗೂಢ ಲೋಕಕ್ಕೆ, ಕಾಣದ ಜನರ ಪ್ರಪಂಚವೊಂದಕ್ಕೆ ಹೋಗಲು ಅಣಿ ಮಾಡಿಕೊಳ್ಳತೊಡಗಿದಳು. ಸದೂ-ಕಮಲೆಯರನ್ನು ಹುಡುಕಿಕೊಂಡು ಹೋದಳು. ಹೊನ್ನೇಕೆರೆಯ ಹುಡುಗಿಯರನ್ನ, ಅಂಗನವಾಡಿ ಯೂನಿಯನ್ ಸದಸ್ಯೆಯರನ್ನ ಎಲ್ಲರನ್ನೂ ಹೋಗಿ ಮಾತನಾಡಿಸಿಕೊಂಡು ಬಂದಳು. ಗಂಗಾಳ ತಾಯಿ ಸಂತೋಷಪಟ್ಟರೂ 'ವಿಮಾನದಲ್ಲಿ ಕಳ್ಳರಿರುತ್ತಾರೆ' ಎಚ್ಚರವಾಗಿರೆಂದು ಎಚ್ಚರಿಕೆಯ ಮಾತು ಹೇಳಿದ್ದಳು. ಅಮ್ಮನ ಮುಗ್ಧತೆಯಲ್ಲಿ ಗಂಗಾ ಸಂತೋಷ/ದುಃಖ ಎರಡನ್ನೂ ಅನುಭವಿಸಿದ್ದಳು. ದೆಹಲಿಯಲ್ಲಿದ್ದ ವೆಂಕಟೇಶನಿಗೊಂದು ಹೊನ್ನೇಕೆರೆಯಲ್ಲಿಯೇ ಕುಳಿತು ಪತ್ರ ಬರೆದಳು. 'ಹಣವೇ ಬದುಕೆನ್ನುತ್ತಾ ಹಣದ ಸ್ತರದಲ್ಲಿ ಬದುಕ ಬಯಸಿ, ನೆಲೆ ಬಯಸಿ, ದೆಹಲಿಯಂತಹ ಊರೊಂದರಲ್ಲಿ ಕುಳಿತು ಬೇರುಗಳೇ ಇಲ್ಲದ ಬದುಕಿನಲ್ಲಿ ಬದುಕಿನ ಬೇರುಗಳ ಹುಡುಕುತ್ತೇನೆ ಎನ್ನುವ ನಿನ್ನ ಹುಡುಕಾಟ ಎಷ್ಟು restless ಆಗಿದ್ದು ಎಂದು ಕೆಲವೇ ದಿನಗಳಲ್ಲಿ ನಿನಗೇ ತಿಳಿಯುತ್ತದೆ. ಬೆಂಗಳೂರಿಗೇ ವಾಪಸ್ಸು ಬಂದು ಕೆಲಸ ಮಾಡು, ತೊಡಗಿಸಿಕೊಳ್ಳುವ ನಿನ್ನ ಸೃಜನಾತ್ಮಕ ಶಕ್ತಿಗೆ ಹಲವಾರು ಕ್ಷೇತ್ರಗಳಿವೆ ಇಲ್ಲಿ. ಹಣ, ಕಾಮ, ಹೆಸರು - ಇಂತಹ ಸ್ತರಗಳಲ್ಲಿ ಮಾತ್ರ ಬದುಕ ನಡೆಸ ಹೊರಟರೆ ಕೊನೆಗೆ ಉಳಿದು ಕಾಡುವುದು ಒಂಟಿತನ ಮಾತ್ರ ಎನ್ನುವ ಸತ್ಯ ನನಗೆ ಅರ್ಥವಾಗಿದೆ' ಎಂದು ಮನಸ್ಸಿಗನ್ನಿಸುದುದನ್ನು ಬರೆದು ವರ್ಷಗಟ್ಟಲೇ ಮಾತನಾಡಿರದ ವೆಂಕಟೇಶನಿಗೆ ಪೋಸ್ಟ್ ಮಾಡಿದ್ದಳು. ಡೆನ್‌ಹಾಗ್‌ನ ಅಧ್ಯಯನದಲ್ಲಿ ಎರೆಡು ವರ್ಷ ತೊಡಗಿಸಿಕೊಳ್ಳಬಹುದು ಎನ್ನುವುದರ ಜೊತೆಗೆಯೇ ಗಂಗಾಳಿಗೇ ತನ್ನೊಳಗೇ ಇದ್ದು ತನ್ನ ಬದುಕಿನ ಸತ್ಯಗಳನ್ನು ಜೀರ್ಣಿಸಿಕೊಳ್ಳುವುದು ಬೇಕಿತ್ತು. ಅಲೆಮಾರಿ ಬದುಕಿನಲ್ಲಿ ಕಂಡದ್ದೋ ಸಿಹಿಯೋ, ಕಹಿಯೋ? ತನ್ನ ಬದುಕಿನ ಆಯ್ಕೆಗಳನ್ನು ತಾನೆ, ತನ್ನೊಳಗೇ ಇದ್ದುಕೊಂಡು ಜೀರ್ಣಿಸಿಕೊಳ್ಳುವುದು ಆಕೆಗೆ ಬೇಕಿತ್ತು.

ಇನ್ನೇನು ಬೆಂಗಳೂರನ್ನು ಬಿಡಬೇಕು ಎನ್ನುವ ಕೆಲವು ದಿನಗಳ ಮೊದಲು ಗಂಗಾ ತನ್ನ ಗೆಳತಿಯರಿಗೆಲ್ಲ ಮನೆಯಲ್ಲಿಯೇ ಒಂದು ಚಿಕ್ಕ ಪಾರ್ಟಿ ಏರ್ಪಡಿಸಿದ್ದಳು. ಪಾರ್ವತಿ, ಅನು, ಸರೂ, ತಿಮ್ಮು, ಶಿಲ್ಪ, ಕಮಲ, ರಾಗಿಣಿ ಮುಂತಾದವರೆಲ್ಲಾ ಇದರಲ್ಲಿ ಪಾಲ್ಗೊಂಡಿದ್ದರು. ಸೇಸಿಯಮ್ಮ ಸ್ವಲ್ಪ ನಿಧಾನಕ್ಕೆ ಬಂದಿದ್ದರು. ಸೇಸಿಯಮ್ಮ ನಿಧಾನವಾಗಿ ಬರುವುದಕ್ಕೆ ಕಾರಣವಿತ್ತು. ಮನೆಯಲ್ಲಿ ಮಾಡಿದ ವೈನ್ ಬಾಟಲ್‌ಗಳು, ದೊಡ್ಡ ಕೇಕ್ ಬಾಕ್ಸ್‌ವೊಂದನ್ನು ಹಿಡಿದು ಸೇಸಿಯಮ್ಮ ಆಗಮಿಸಿದಾಗ ಸರೂ ಇದ್ದಕ್ಕಿದ್ದಂತೆಯೇ, "ತಕಾಳಪ, ಇಲ್ಲಿದೆ ನಮ್ಮ ಸ್ಪಿರಿಟ್, ಈ ಸೇಸಿಯಮ್ಮನ ಉತ್ಸಾಹದ ಮುಂದೆ ನಮ್ಮಂತಹ ಹದಿಹರೆಯದ ತರುಣಿಯರು ಒದ್‌ಕಂಡ ಕೆಲಸ ಮಾಡಬೇಕು' ಅಂದ್ಲು. ಆಕೆ ಹೇಳಿದ್ದ ಮಾತು ನಿಜವಾಗಿತ್ತು. ಸೇಸಿಯಮ್ಮ ಕೇರಳದ ಹೆಣ್ಣು. ಮದುವೆಯಾದದ್ದು ಅತೀ ಚಿಕ್ಕ ವಯಸ್ಸಿನಲ್ಲಿಯೇ. ಮದುವೆಯಾಗಿ ಮೂರು ಮಕ್ಕಳಾದ ಮೇಲೆಯೇ ಆತ ಅತ್ತಿಹಣ್ಣು ಎಂಬ ಸತ್ಯ ಆಕೆಯ ಅರಿವಿಗೆ ಬಂದದ್ದು. ಕೆಂಪು ಕೆಂಪಾಗಿ ಸ್ಮಾರ್ಟ್ ಆಗಿದ್ದ ಗಂಡನಿಗೆ ಒಲಿಯಾದ ಹೆಣ್ಣುಗಳಿಲ್ಲ. ಮರುಳುಗೊಳಿಸುವ, ಒಲಿಸಿಕೊಳ್ಳುವ, ಮೋಸ ಮಾಡುವಂತಹ ಎಲ್ಲಾ ಗುಣಗಳೂ ರಕ್ತಗತವಾಗಿದ್ದ ಅತ್ತಿಹಣ್ಣಿನಂಥ ಗಂಡಿನೊಡನೆ ತಮ್ಮ ಪುಟ್ಟ ಪುಟ್ಟ ಮೂರು ಮಕ್ಕಳ ಕಟ್ಟಿಕೊಂಡೇ ಸೇಸಿಯಮ್ಮ ಹೆಣಗಾಡುತ್ತಿದ್ದರು. ಮಕ್ಕಳು ಬೆಳೆಯುತ್ತಾ ಹೋದ ಹಾಗೆ ಕಲಿತ ಆಯುರ್ವೇದದ ವಿದ್ಯೆಯಿಂದ ಹಳ್ಳಿಗಾಡು ಹೆಂಗಸರಿಗೆ ಔಷಧಿ ಮಾಡುತ್ತಾ ದುಡ್ಡಿನ ಜೊತೆಗೆ ಹೆಸರನ್ನೂ ಸಂಪಾದಿಸುತ್ತಿದ್ದರು. ತಾವು ಬದುಕುತ್ತಿದ್ದ ಬೆಂಗಳೂರಿನ ಸಮೀಪದ ಹಳ್ಳಿಯ ಹೆಂಗಸರೊಡನೆ ಆತ್ಮೀಯತೆ ಬೆಳೆಸಿಕೊಂಡ ಸೇಸಿಯಮ್ಮ ಅವರೆಲ್ಲರ ಕಷ್ಟ-ನಷ್ಟ ಕೇಳಿಸಿಕೊಂಡು ತಮ್ಮದನ್ನು ಮರೆಯಲು ಪ್ರಯತ್ನಿಸುವರು. ಎದೆಯುದ್ದ ಬೆಳೆದ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಜವಾಬ್ದಾರಿಯ ಮರೆತ ಗಂಡ-ಅತ್ತಿಹಣ್ಣು ಉತ್ತರ ಪ್ರದೇಶದಲ್ಲಿ ಎಲ್ಲಿಯೋ ಮದುವೆ ಮಾಡಿಕೊಂಡು ಅಲ್ಲಿಯೇ ಎರಡು ವರ್ಷದಿಂದ ಇದ್ದುಬಿಟ್ಟಿದ್ದ. ಸೇಸಿಯಮ್ಮ ಹಾಗೂ ಮಕ್ಕಳ ಇರುವನ್ನೇ ಆತ ಮರೆತುಬಿಟ್ಟಂತಿತ್ತು. ಡಾಕ್ಟರ್ ಆಗಿದ್ದ ಆತನಿಗೆ ಎಲ್ಲೆಲ್ಲಿಯೋ ಮದುವೆಯಾಗುವುದು, ಕ್ಲಿನಿಕ್ ಪ್ರಾರಂಭಿಸುವುದು ಅಷ್ಟೇನೂ ಕಷ್ಟಸಾಧ್ಯವಾಗಿ ಕಂಡಿರಲಿಲ್ಲ. ಸೇಸಿಯಮ್ಮನಿಗೆ ಆತ ಉತ್ತರ ಪ್ರದೇಶದಲ್ಲಿ ಇರುವನೆಂಬ ಸುಳಿವು ಸಿಕ್ಕಿತೇ ಹೊರತು ಆತನ ನಿಜವಾದ ವಿಳಾಸದ ಪತ್ತೆಯೇ ಇರಲಿಲ್ಲ. ಸೇಸಿಯಮ್ಮ ಗಂಡನ ಮೇಲೆ ದಾವೆ ಹೂಡಿದ್ದರು. ಈ ಮೂಲಕವೇ ಸೇಸಿಯಮ್ಮ 'ಸ್ತ್ರೀ ಮುಕ್ತಿ' ಸಂಘಟನೆಗೆ ಪರಿಚಯವಾದದ್ದು. ಆತನ ವಿಳಾಸ ಹುಡುಕುವುದಕ್ಕಾಗಿ ಗಂಗಾ ಕೂಡಾ ಸೇಸಿಯಮ್ಮನೊಡನೆ ಕೇರಳಕ್ಕೆ ಹೋಗಿದ್ದಳು. ಆತನ ವಿಳಾಸ ಅವನ ಹುಟ್ಟೂರಾದ ಕೇರಳದ ಪರಿಚಯಸ್ಥರ ಅಥವಾ ನೆಂಟರಿಷ್ಟರ ಮನೆಯಲ್ಲಿ ಸಿಕ್ಕಬಹುದೆಂಬುದು ಆಕೆಯ ಆಶಯವಾಗಿತ್ತು. ಗಂಗಾ, ಸೇಸಿಯಮ್ಮ ಕೇರಳದ ಹಳ್ಳಿ ಹಳ್ಳಿಗಳಲ್ಲಿ ಒಟ್ಟಾಗಿ ತಿರುಗಿದ್ದರು. ಸೇಸಿಯಮ್ಮ ಮಾಡಿತಂದ ವೈನ್‌ನ ಸವಿಯನ್ನು ಸವಿಯುತ್ತಾ ಕೇರಳದಲ್ಲಿ ಅವರು ಗಂಡನ ವಿಳಾಸಕ್ಕಾಗಿ ವಿಚಾರಿಸುತ್ತಿದ್ದ ರೀತಿಯನ್ನು ನೆನಪಿಸಿಕೊಂಡಳು. 'ಸೇಸಿಯಮ್ಮ ನೀವು ಕೇರಳದ ಹಳ್ಳಿ ಹಳ್ಳಿಗಳಲ್ಲಿ ವಿಳಾಸಕ್ಕಾಗಿ ವಿಚಾರಿಸುತ್ತಿದ್ದ ರೀತಿ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತುಬಿಟ್ಟಿದೆ. ನಿಮ್ಮ ಸ್ಥಿತಿ ಹೇಗಿತ್ತೆಂದರೆ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕುವಾಗ 'ನೀವು ಕಂಡಿರಾ, ನೀವು ಕಂಡಿರಾ' ಎನ್ನುವ ರೀತಿಯ ಆತಂಕದ, ಕಾತರದ ಸ್ಥಿತಿ. ಎದುರು ಬರುವ ಪೋಸ್ಟ್ ಮ್ಯಾನ್‌ಗಳ ಹತ್ತಿರ, ಅಲ್ಲಿ, ಇಲ್ಲಿ ಇರುವ ಅಂಗಡಿಗಳಲ್ಲಿ, ಎದುರುಗಾಗುವ ಪರಿಚಯಸ್ಥರಲ್ಲಿ, ಕೊನೆಗೆ ಚರ್ಚಿನ ಪಾದ್ರಿಯಲ್ಲಿ 'ಬಲ್ಲಿರಾ, ಈ ವಿಳಾಸ ಬಲ್ಲಿರಾ, ಕಂಡಿರಾ, ಈ ಮನುಷ್ಯನನ್ನು ಕಂಡಿರಾ' ಎಂದು ನೀವು ಗೋಗರೆಯುವುದು ನನ್ನ ಕಿವಿಯಲ್ಲಿ ಗುಯ್‌ಗುಟ್ಟುತ್ತಿದೆ ನೀವು ಕೇಳದೇ ಬಿಟ್ಟದುದು ಮರ ಗಿಡಗಳು, ಕೆರೆ, ಬಂಡೆಗಳು, ಮುಗಿಯಲಾರದ ಹಾದಿಗಳನ್ನು ಮಾತ್ರ. ಬಹುಶಃ ನೀವು ಮೌನವಾಗಿ ನಡೆಯುತ್ತಿದ್ದ ಕಡೆಗಳಲ್ಲೆಲ್ಲಾ ನಿಮ್ಮ ಮನಸ್ಸು ರೋಧಿಸುತ್ತಿದ್ದುದು 'ಕಂಡಿರಾ,

ಬಲ್ಲಿರಾ' ಎಂಬುದನ್ನೇ! ರೂಪಾಕಾರವಿಲ್ಲದ ಚನ್ನಮಲ್ಲಿಕಾರ್ಜುನ ಅಕ್ಕನಿಗೆ ಆರಾಧ್ಯ ದೈವವಾಗಿದ್ದ. ಲೌಕಿಕ ಮೋಹಾಕಾರವ ಅಳಿಸಿ ಬಿಡುವ, ತನ್ನ ತನಕ್ಕೊಂದು ವಿಶಿಷ್ಟತೆ ಕಲ್ಪಿಸುವ ಒಂದು ಚೇತನವಾಗಿದ್ದ. ಆಂತರಿಕ ಚಾಲನೆಗೆ ಇಂಬುಗೊಡುವವನಾಗಿದ್ದ. ಆದರೆ ಸೇಸಿಯಮ್ಮ ನೀವು 'ಬಲ್ಲಿರಾ, ಬಲ್ಲಿರಾ' ಎಂದು ವಿಚಾರಿಸಿ ಹೊರಟ ವ್ಯಕ್ತಿ ರೂಪಾಕಾರವಿರುವ ವ್ಯಕ್ತಿ. ನಿಮ್ಮ ಆಂತರಿಕ ಚೇತನವನ್ನೆಲ್ಲ ಬತ್ತಿಸಿ, ನಿಮ್ಮಲ್ಲಿರುವ ರೋಷ/ಕೋಪ/ಅಸೂಯೆಯೆಲ್ಲ ಬಡಿದೆಬ್ಬಿಸಿ ನಿಮ್ಮನ್ನು ಪೋಲೀಸ್ ಸ್ಟೇಷನ್ನಲ್ಲಿ, ಕೋರ್ಟ್‌ನಲ್ಲಿ ಮುಖಾಮುಖಿಯಾಗುವಂತೆ ಮಾಡಿದವ. ನಿಮ್ಮ ಅಸ್ತಿತ್ವವೆಲ್ಲಾ ಮೊದಲು ಆತನಿಗಾಗಿ, ಈಗ ಆತನ ವಿರುದ್ಧ ಸೇಡು ತೀರಿಸಿಕೊಳ್ಳುವುದಕ್ಕಾಗಿ ಕಳೆದು ಹೋಯಿತು, ಹೋಗುತ್ತದೆ ಎಂದು ನೆನಸಿಕೊಂಡಾಗಲೆಲ್ಲಾ ದುಃಖವಾಗುತ್ತದೆ. ನಿಮ್ಮ ನಲವತ್ತು ವರುಷದ ಬದುಕಲ್ಲಿ ಇದಿಷ್ಟರ ಹೊರತು, ನಿಮ್ಮ ವೈಯ್ಯಕ್ತಿಕೀಯ ಪ್ರಪಂಚದ ಇನ್ನೆಷ್ಟೋ ಆಯಾಮ, ಸತ್ಯಗಳು, ನಿಮಗೆ ಗೋಚರವಾಗಲೇ ಇಲ್ಲ ಅಲ್ಲವೇ?'. ಸೇಸಿಯಮ್ಮ ಜೋರಾಗಿ ನಕ್ಕುಬಿಟ್ಟರು. ಜೊತೆಗೆ, 'ಈಗಲೂ ಇನ್ಯಾರನ್ನಾದರೂ ಮದುವೆಯಾಗಿ ಆತನ ಮುಖಕ್ಕೆ ಹೊಡೆದ ಹಾಗೆ ಬದುಕಬೇಕು ಅನ್ನಿಸುತ್ತದೆ. ಆದರೆ ಬೆಳೆದಿರುವ ಮಕ್ಕಳು, ಈ ನಲವತ್ತು ವರ್ಷದಲ್ಲಿ ನನ್ನನ್ಯಾರು ಮದುವೆಯಾಗುತ್ತಾರೆ? ಯಾವನು ನನಗೆ ಒಲಿದು ಬಂದಾನು? ಗಂಡಸರಿಗೆ ಬೇಕಾದರೆ ಅರವತ್ತಕ್ಕೂ ಮದುವೆಯಾಗಬಹುದು!' ಸೇಸಿಯಮ್ಮ ಕಟುವಾದ ಸತ್ಯವನ್ನೇ, ವಾಸ್ತವವನ್ನೇ ಮಾತನಾಡುತ್ತಿದ್ದರು. ಅವರ ಕಣ್ಣಂಚಿನಲ್ಲಿ ನೀರು ಕಂಡರೂ ಕಾಣದ ಹಾಗೆ ಚಿಮ್ಮಿತ್ತು. ಪರಿಸ್ಥಿತಿ ಗಂಭೀರವಾಗುವುದನ್ನು ವಿನೋದಕರವಾಗಿ ತಪ್ಪಿಸಲು ರಾಗಿಣಿ ಪ್ರಯತ್ನಿಸಿದಳು. ಎತ್ತರದ, ಬಾಬ್ ಕಟ್ಟಿನ ಹುಡುಗಿ ರಾಗಿಣಿ. ತೆಳ್ಳಗಿದ್ದರೂ ಆಕರ್ಷಣೀಯ ಮುಖ. ಇಂಗ್ಲೀಷ್ ಕಲ್ಚರ್‌ನ ಹುಡುಗಿಯಾದರೂ ಮಣ್ಣಿನ ವಾಸನೆಗೆ, ಈ ಪರಿಸರಕ್ಕೆ ಒಗ್ಗಬೇಕೆನ್ನುವ ಹುಡುಗಿ. ತನ್ನ ವರ್ಗದ ಪ್ರಜ್ಞೆಗಳನ್ನು ನಿತ್ಯ ಜೀವನದಲ್ಲಿ ತೊಡೆದುಹಾಕಬೇಕೆಂಬ ಒಂದು ಆಸೆಯಿಂದ ಎಲ್ಲಾ ರೀತಿಯ ಚಟುವಟಿಕೆಗಳಲ್ಲಿ, ಸಂಬಂಧಗಳಲ್ಲಿ, ಸಂಸ್ಕೃತಿಯಲ್ಲಿ ಬೆರೆಯಬಹುದಾದ ಸಾಧ್ಯತೆಗಳನ್ನೆಲ್ಲ ಈಕೆ ಉಪಯೋಗಿಸಿಕೊಳ್ಳುತ್ತಿದ್ದಳು, ಬೆರೆಯುತ್ತಿದ್ದಳು. 'ಸ್ತ್ರೀ ಮುಕ್ತಿ' ಸಂಘಟನೆಯ ಅಡಿ ಬರುವ ಸ್ತ್ರೀ ಸಮುದಾಯದ ಸ್ತರಗಳಲ್ಲೊಂದು ತಾನು ಆಶಿಸುವ ಬದುಕನ್ನು ಕಾಣಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದಳು. 'ಸೇಸಿಯಮ್ಮ ನಿಮಗೆ ನಲವತ್ತು ವರ್ಷ, ಮದುವೆಯಾಗೋದು ಕಷ್ಟ ಅಂತೀರಾ! ನನಗೆ ಇಪ್ಪತ್ತ ನಾಲ್ಕೇ ವರ್ಷ. ನಮ್ಮಜ್ಜಿ ನಿನ್ನನ್ಯಾರು ಮದುವೆಯಾಗ್ತಾರೆ ಅಂತ ನಿತ್ಯ ಹಂಗಿಸ್ತಾರೆ. ನಿನ್ನ ಎದೆ ಭಾಗದಲ್ಲಿ ಏನೂ ಇಲ್ಲ, ಫ್ಲ್ಯಾಟ್ ಆಗಿದೆ ಅಂತಾರೆ. ಎದೇ ಭಾಗದಲ್ಲಿ ಏನೂ ಇಲ್ಲದೆ ಇರೋ ಹುಡುಗೀನ ಯಾರು ಮದುವೆಯಾಗ್ತಾರೆ ಅಂತ ನಮ್ಮಜ್ಜಿ ಯಾವಾಗ್ಲೂ ಹೇಳ್ತಾರೆ'. ರಾಗಿಣಿ ಜೋರಾಗಿ ನಕ್ಕಳು. ಕಪಟವಿಲ್ಲದ ನಗು. ನಮ್ಮ ವೀಕ್‌ನೆಸ್‌ಗಳನ್ನು, ಅಥವಾ ನಮ್ಮ ವೀಕ್‌ನೆಸ್ ಎಂದು ಕರೆಯಲ್ಪಡುವಂತಹವುಗಳನ್ನು ನಾವೇ ನಕ್ಕು, ನಾವೇ ಕ್ರಿಟಿಸೈಸ್ ಮಾಡಿಕೊಳ್ಳಬೇಕು. ನಕ್ಕು ಅಂತಹವುಗಳನ್ನು ಅರಗಿಸಿಕೊಳ್ಳಬೇಕು. ಹೆಂಗಸಿನ ದೇಹ ಮಾತ್ರವೇ ಆಕೆಯ ಅಸ್ತಿತ್ವ ಎಂದು ನಂಬುವ ಸಂಸ್ಕೃತಿಯಲ್ಲಿ, ಆ ಮೂಲಕವೇ ಆಕೆಯ ವ್ಯಕ್ತಿತ್ವವನ್ನು ಮೊಟಕುಗೊಳಿಸಿಬಿಡುವ ಪ್ರವಾಹದ ವಿರುದ್ಧ ಈಜಬೇಕಾದರೆ, ನಗುವೇ ಮುಖ್ಯವಾಗಬೇಕು. ನಕ್ಕು ನಮ್ಮೊಳಗೆ ಬೇರು ಬಿಡಬಹುದಾದ ಕೀಳರಿಮೆಯನ್ನು ಕಿತ್ತೆಸೆಯಬೇಕು. ವಿಡಂಬಿಸಿ ನಕ್ಕುಕೊಂಡುಬಿಡುವ ಮೂಲಕ ನಮ್ಮ ಬಗ್ಗೆ ನಾವೇ, ವಿಶ್ವಾಸ, ಪ್ರೀತಿ ಬೆಳೆಸಿಕೊಳ್ಳಬೇಕು. ವಿಡಂಬಿಸಿಕೊಂಡು ನಕ್ಕುಬಿಡುವ ವಿಧಾನ ನಮ್ಮೊಳಗಿನ ಇನ್ಯಾವುದೋ ಅನಾರೋಗ್ಯ ಮನಸ್ಸು ಇನ್ನೊಬ್ಬರನ್ನು ವಿಡಂಬಿಸುವುದನ್ನು ನಿಲ್ಲಿಸುತ್ತದೆ. ರಾಗಿಣಿ ಇಂತಹವುಗಳನ್ನು ಮೂಲಭೂತವಾಗಿ ನಂಬುತ್ತಿದ್ದಳು. ನಮ್ಮೊಳಗಿನ ಅಸೂಯೆ, ದ್ವೇಷ, ಪೆಟಿನೆಸ್‌ಗಳನ್ನು ಮೀರುವುದನ್ನು ಕ್ಷಣ, ಕ್ಷಣಗಳಲ್ಲಿಯೂ ಕಲಿಯುತ್ತಾ ಹೋಗಬೇಕು. ಇಂತಹ ಸ್ವ-ವಿಮರ್ಶೆಯ ಗುಣ ಮಹಿಳಾ ಚಳುವಳಿಯ ಕೋರ್ ಆಗಬೇಕು

ಎಂಬುದು, ಮಹಿಳೆಯರ ಸಂಬಂಧದ ಕೋರ್ ಆಗಬೇಕೆಂಬುದು, ಒಬ್ಬರಿಗೊಬ್ಬರು space ಕೊಟ್ಟು ಬದುಕಬೇಕು ಎಂಬುದು 'ಸ್ತ್ರೀ ಮುಕ್ತಿ' ಸಂಘಟನೆ ನಂಬಿದ್ದ ಆದರ್ಶಗಳಲ್ಲಿ ಒಂದಾಗಿತ್ತು. ಸೇಸಿಯಮ್ಮ 'ನನ್ನಮ್ಮಾರು ಮದುವೆಯಾಗ್ತಾರೆ' ಎನ್ನುವಲ್ಲಿ ತೋರಿಸಿದ್ದ ದೈನ್ಯತೆ, ಮನದೊಳಗೆ ಮಡುಗಟ್ಟಿದ ನೋವು ಕಣ್ಣಂಚಿನಲ್ಲಿ ಬಿಂಬಿಸಿದ್ದನ್ನು ರಾಗಿಣಿ ಹೋಗಲಾಡಿಸಲು ಪ್ರಯತ್ನಪಟ್ಟದ್ದೇ ತನ್ನ ವ್ಯಕ್ತಿತ್ವವನ್ನು ವಿಡಂಬಿಸಿಕೊಳ್ಳುವ ಮೂಲಕ. ಇಂತಹವುಗಳೇ ಒಬ್ಬೊಬ್ಬರಲ್ಲಿ ಬೆಚ್ಚನೆಯ, ಆತ್ಮೀಯತೆಯ ತಂತುಗಳನ್ನು ಬೆಸೆಯಬೇಕೆಂಬುದೇ ರಾಗಿಣಿಯ ಆಶಯ. ಸರೂ ಹೇಳಿದ ಹಾಗೆ ಸೇಸಿಯಮ್ಮನದು ಬತ್ತದ ಉತ್ಸಾಹ. ಕೆಲವು ನೊಂದ ಮಹಿಳೆಯರ ರೀತಿ ಈಕೆ ತನ್ನ ಸಮಸ್ಯೆಗೆ ಅಥವಾ ತನ್ನ ಕೆಲಸಗಳಿಗಾಗಿ 'ಸ್ತ್ರೀ ಮುಕ್ತಿ' ಸಂಘಟನೆಗೆ ಬರುತ್ತಿರಲಿಲ್ಲ. ವರದಕ್ಷಿಣೆಯ ಸಮಸ್ಯೆಗಾಗಿಯೇ ಓಡಾಡುವ ಇತರ ಮಹಿಳೆಯರ ಜೊತೆಯೂ ಅಲೆಯುವರು. ಕಾರ್ಖಾನೆಯ ಹೆಂಗಸರು ಬೀದಿ ಪಾಲಾದಾಗ ಅಲ್ಲಿ-ಇಲ್ಲಿ ಅವರ ಜೊತೆ ಓಡಾಡುವರು, ಧರಣಿ ಕೂರುವರು, ಕೋರ್ಟ್ ಕೇಸಿಗೆಂದು ಇತರರೊಡನೆ ಹೋಗುವರು, ಅಲ್ಲಿ ಅವರೊಡನೆ ಘಂಟೆಗಟ್ಟಲೆ ಕೂತು ಮಾತನಾಡುವರು. 'ಬನ್ನಿ' ಎಂದು ತಮ್ಮ ಮನೆಗೆ ಒತ್ತಾಯದಿಂದ ಕರೆದೊಯ್ದು ವೈನ್, ಕೇಕ್ ಕೊಡುವರು. ಸೇಸಿಯಮ್ಮನ ವಯಸ್ಸಿನಲ್ಲಿ ಅವರ ಕುಂದದ ಉತ್ಸಾಹ 'ಸ್ತ್ರೀ ಮುಕ್ತಿ' ಸಂಘಟನೆಯ ಬಹುಪಾಲು ಮಹಿಳೆಯರಿಗೆ ಸ್ಫೂರ್ತಿಯಾಗಿತ್ತು. ಸರೂ ಹೇಳಿದ್ದು ನಿಜ. ಸೇಸಿಯಮ್ಮನ ವ್ಯಕ್ತಿತ್ವವೇ ಬತ್ತದ ಒಂದು ರೀತಿಯ spirit ತರಹ ಇತ್ತು.

ಬಹಳ ಸೊಗಸಾಗಿ ಮಾಡಿದ ವೈನ್ ಹಾಗೂ ಕೇಕ್. ಬೇಸರವಿಲ್ಲದೇ ಮೂರೂ ಹೊತ್ತು ಚಟ ಪಟ ಅಂತ ಕೆಲಸ ಮಾಡಿಕೊಂಡು, ಪಟ ಪಟ ಎಂದು ಮಾತನಾಡುವ ಸೇಸಿಯಮ್ಮನ ಬಗ್ಗೆ ಎಲ್ಲರಿಗೂ ಪ್ರೀತಿ, ಆದರ, ಗೌರವ. 'ಸ್ತ್ರೀ ಮುಕ್ತಿ' ಸಂಘಟನೆಯ ಬಹುಪಾಲು ಮಹಿಳೆಯರಿಗೆ ಆಕೆ ದೊಡ್ಡಕ್ಕನ ತರಹ. 'ಈ ಸೇಸಿಯಮ್ಮನ ಬದುಕಿನ ಕತೆ ಮೀಡಿಯಾಳ ಕತೆಯನ್ನು ಜ್ಞಾಪಕಕ್ಕೆ ತರುತ್ತದೆ' ಎಂದು ಪಾರ್ವತಿ ಒಮ್ಮಿಂದೊಮ್ಮೆಲೇ ಮಾತಿಗೆ ಆರಂಭಿಸಿದಳು. 'ಈ ಸೇಸಿಯಮ್ಮ ಅಲ್ಲಿ-ಇಲ್ಲಿ ಎಂದು ಫೈಲ್ ಹಿಡಿದು ಅಲೆಯುತ್ತಾರೆ, ವಿಳಾಸಕ್ಕಾಗಿ ಊರೂರು ಅಲೆಯುತ್ತಾರೆ, ಆತನನ್ನು ರೋಷದಿಂದಲೇ ಧ್ಯಾನಿಸುತ್ತಾರೆ, ಈಕೆಯನ್ನು ನೋಡಿದಾಗಲೆಲ್ಲಾ ಮೀಡಿಯಾಳ ಅಸಹಾಯಕತನವೇ ನನಗೆ ಜ್ಞಾಪಕಕ್ಕೆ ಬರುತ್ತದೆ'. ಪಾರ್ವತಿ ಹೀಗೆನ್ನುತ್ತಿರುವಾಗಲೇ ಗಂಗಾ ಮಾಡಿದ್ದ ಅಡಿಗೆಯನ್ನು ಬಡಿಸಿ, ಕುಡಿಯುವವರಿಗೆ ಎಂದು ಗ್ಲಾಸ್‌ಗಳಲ್ಲಿ ಬಿಯರ್ ತುಂಬಿಸತೊಡಗಿದಳು. ಅಭ್ಯಾಸವಿರದ ತಿಮ್ಮುವಿಗೆ ಚೂರು ಕುಡಿದೇ ತಲೆಗೆ ಏರಿದ ರೀತಿ ಅನ್ನಿಸಿರಬೇಕು. ಪಾರ್ವತಿ ಮೀಡಿಯಾಳ ಬಗ್ಗೆ ಹೇಳಿದ್ದು ಮಾತ್ರ ಆಕೆಗೆ ಕೇಳಿಸಿದಂತಿತ್ತು. ಎರಡು ಸಿಪ್ ಕುಡಿದಾಗ ತನಗೆ ನೆತ್ತಿಗೇ ಏರಿರಬೇಕು ಎಂದು ಆಕೆಗೆ ಭಾಸವಾಗಿರಬೇಕು. ಆಕೆ ಹಾಡಲು ಪ್ರಾರಂಭಿಸಿದ್ದಳು-

ಅಲ್ಲಿರುವವಳು ಮೀಡಿಯಾ
ಇಲ್ಲಿರುವವಳು ಸೇಸಿಯಾ
ಅವಳ ಬಾಳು, ಇವಳ ಗೋಳು
ಅವಳ ಸಾವು, ಇವಳ ನೋವು
ಒಂದೇ, ಒಂದೇ, ಒಂದೇ......

ಹೀಗೆನ್ನುತ್ತಾ 'ನಾವೆಲ್ಲರೂ ಒಂದೇ' ಎನ್ನುತ್ತಾ ಶಬ್ದಗಳನ್ನು ಹುಡುಕುತ್ತಾ ಏನೇನನ್ನೋ ಜೋಡಿಸಲು ಪ್ರಯತ್ನ ಪಡುತ್ತಿದ್ದಳು. ಹಾಗೆ ಹೇಳುತ್ತೇಳುತ್ತಲೇ ತಿಮ್ಮು ಜೋರಾಗಿ ಅಳಲು

ಪ್ರಾರಂಭಿಸಿದ್ದಳು. ಪೋಲೀಸ್ ಠಾಣೆಯ ನೆನಪಾಗಿರಬೇಕು. ಪೆದ್ದು ಪೆದ್ದಾಗಿ ನಕ್ಕಿದ್ದ ಆಕೆಯ ನಗೆಯೇ ನೆನಪಾಗಿರಬೇಕು. ನಾಲ್ಕು ತಿಂಗಳು ಸಂಸಾರ ಮಾಡಿ ಗರ್ಭದಲ್ಲಿ ಒಡಮೂಡಿದ್ದ ಮಾಂಸದ ಮುದ್ದೆಯನ್ನು ಈಚೆ ಎಳೆದದ್ದು ನೆನಪಾಗಿರಬಹುದು. ಅಥವಾ ರೋಷ/ಕಿಚ್ಚಿನಿಂದ ತುಂಬಿಕೊಂಡಿದ್ದ ಹೃದಯ ಈಗ ಖಾಲಿ, ಖಾಲಿ ಎನಿಸುತ್ತಿರಬಹುದು.

ತಿಮ್ಮು ಜೋರಾಗಿ ಅಳತೊಡಗಿದಾಗ ಪಾರ್ವತಿ ಬೆಚ್ಚಿದ್ದಳು. ಸೇಸಿಯಮ್ಮ 'ಹುಚ್ಚು ಹುಡುಗಿ' ಎಂದು ಸಮಾಧಾನ ಮಾಡಲು ಪ್ರಯತ್ನಿಸಿದ್ದರು.

* * * * *

ಗಂಗಾ ಬೆಂಗಳೂರು ಬಿಡುವ ವೇಳೆಗೆ ವೆಂಕಟೇಶ ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದ. ಗಂಗಾ ಡೆನ್‌ಹಾಗ್‌ಗೆ ಹೋಗುವ ಮೊದಲು ದೆಹಲಿಯಲ್ಲಿ ವೀಸಕ್ಕಾಗಿ ತಂಗಲೇಬೇಕಿತ್ತು. ಹಾಗಾಗಿ ನಾಲ್ಕು ದಿನದ ಮುಂಚೆಯೇ ಗಂಗಾ ಬೆಂಗಳೂರಿನಿಂದ ದೆಹಲಿಗೆ ಹೊರಟಳು. ಅಹಮದಾಬಾದ್, ಕೇರಳ, ಮದ್ರಾಸ್‌ಗಳಂತಹ ಊರು ಬಿಟ್ಟರೆ ಉತ್ತರದ ಪ್ರದೇಶಗಳಿಗೆ ಹೋದವಳೇ ಅಲ್ಲ. ದೆಹಲಿಯ ಬಗ್ಗೆ ಆಕೆಗಿದ್ದುದು ವಿಭಿನ್ನ ಭಯ/ಆತಂಕ. ಅದರ ಸುತ್ತ ಕೋಮುವಾದವೋ/ಅತ್ಯಾಚಾರವೋ ಇಂತಹ ಕತ್ತಲೆಯ ಮುಖಗಳೇ ಆಕೆಯಲ್ಲಿ ತುಂಬಿಕೊಂಡಿದ್ದವು. ದೆಹಲಿಯಲ್ಲಿರುವ ನಾಲ್ಕು ದಿನ ವೆಂಕಟೇಶನ ಮೇಲೆ ಅವಲಂಬಿತವಾಗಿರುವುದು ಅನಿವಾರ್ಯವಾಗಿತ್ತು. ವೆಂಕಟೇಶ್ ಏರ್‌ಪೋರ್ಟ್‌ಗೆ ಬರುವೆನೆಂದು ಹೇಳಿದ್ದರಿಂದ ಗಂಗಾಗೆ ಅಷ್ಟೇನೂ ಆತಂಕವಿರಲಿಲ್ಲ. ದೆಹಲಿಯ ಕತ್ತಲೆಯ ಮುಖಗಳು ಆಕೆಗೆ ಅಷ್ಟಾಗಿ ಕಾಡಿರಲಿಲ್ಲ. ಹೇಗಿದ್ದರೂ ವೆಂಕಟೇಶನಿರುತ್ತಾನೆಂಬ ಭರವಸೆ. ವಿಮಾನ ಬೆಂಗಳೂರನ್ನು ಸಮಯಕ್ಕೆ ಸರಿಯಾಗಿ ಬಿಟ್ಟರೂ, ಏನೋ ಕಾರಣಗಳಿಂದ ಹೈದರಾಬಾದ್‌ನಲ್ಲಿ ಎರೆಡು ಘಂಟೆ ತಡವಾಗಿಬಿಟ್ಟಿತ್ತು. ಗಂಗಾ ನಿರೀಕ್ಷಿಸಿದ ಸಮಯಕ್ಕೆ ಸರಿಯಾಗಿ ದೆಹಲಿಯನ್ನು ತಲುಪಲಾಗಲಿಲ್ಲ. ಆಕೆ ಡೆಲ್ಲಿ ತಲುಪಿದಾಗ ಸುಮಾರು ರಾತ್ರಿ ಒಂದು ಘಂಟೆ. ಆಕೆ ತಲುಪಬೇಕಾದದ್ದು ಸುಮಾರು 11ಘಂಟೆಯ ವೇಳೆಗೆ. ಗಂಗಾಳ ಮನಸ್ಸಿನಲ್ಲಿ ಏನೋ ಭಯ/ಹೆದರಿಕೆ ಪ್ರಾರಂಭವಾಯಿತು. ಆಕೆ ಎಲ್ಲಾ ಪ್ರಯಾಣಿಕರು ಹಾಯ್ದು ಬರುವ ಸ್ಥಳಗಳ ಮೂಲಕ ಹಾದು ಬಂದು ವೆಂಕಟೇಶನಿಗಾಗಿ ಎಲ್ಲೆಲ್ಲಿಯೂ ತಡಕಾಡಿದಳು. ವೆಂಕಟೇಶ ಎಲ್ಲಿಯೂ ಕಾಣಿಸಲಿಲ್ಲ. ಗಂಗಾಗೆ ಗಾಭರಿಯಾಗತೊಡಗಿತು. ಹೀಗೆ ಏನೂ ಗೊತ್ತಿಲ್ಲದೇ ಇರುವ ಪ್ರದೇಶಕ್ಕೆ ಒಬ್ಬಳೇ ಬರುವ ಜವಾಬ್ದಾರಿ ಎಷ್ಟು ಕಷ್ಟದ್ದು ಎಂದು ಆಕೆಗೆ ಅನ್ನಿಸತೊಡಗಿತು. ಸುಮಾರು ಹೊತ್ತು ಕಾದು ನೋಡಿದಳು. ಆಗಲೇ ಘಂಟೆ ಎರೆಡಾಗುತ್ತಾ ಬಂದಿತ್ತು. ವೆಂಕಟೇಶ ಕಾಣಿಸಲಿಲ್ಲ. ಎಷ್ಟು ಬೇಜವಾಬ್ದಾರಿ ಮನುಷ್ಯ ಈತ ಎನ್ನಿಸತೊಡಗಿತು. ಭಯವಾಗತೊಡಗಿತು. ಈತನನ್ನು ನಂಬಿ ಬೇರೆ ಏನೂ ನೆಲೆಗಳಿಲ್ಲದೇ ದೆಹಲಿಗೆ ಬಂದೆನಲ್ಲ ಎಂದು ಒಂದು ಕ್ಷಣ ದಿಗಿಲಾಯಿತು. ಶಂಕ್ರಣ್ಣನ ನೆನಪು ಬಂತು. ಒಬ್ಬಳೇ ಬರುತ್ತಿದ್ದಾಳೆ, ಆಕೆಗೆ ಊರೇ ತಿಳಿಯದು ಎಂದು ಗೊತ್ತಿದ್ದರೆ ಇಡಿಯ ದೆಹಲಿಯೇ ಕಣ್ಣಾದಂತೆ ಕಾದು ಕುಳಿತಿರುತ್ತಿರಲಿಲ್ಲವೇ ಅಣ್ಣ? ಏನೇನೋ ತಳಮಳಗಳು. 3 ಘಂಟೆಯವರೆಗೆ ಕಾದರೂ ವೆಂಕಟೇಶ ಕಾಣಿಸದಿದ್ದಾಗ ಗಂಗಾಗೆ ಗಾಭರಿ. ಕಣ್ಣಲ್ಲಿ ನೀರು ಸುರಿಯತೊಡಗಿತ್ತು. ಅಲ್ಲಿಯೇ ಕುಳಿತು ಕಾಯಬಹುದು ಎನ್ನುವ ಅಂಶ ಕೂಡಾ ಆಕೆಗೆ ತಿಳಿದಿರಲಿಲ್ಲ. ಪೋಲೀಸರು ಬಂದು ಹೋಗಿ ಎಂದುಬಿಟ್ಟರೆ? ಬಸ್ ಸ್ಟ್ಯಾಂಡ್‌ನಲ್ಲಿ, ರೈಲ್ವೇ ಸ್ಟೇಷನ್‌ನಲ್ಲಿ ಮಲಗುವ ಭಿಕ್ಷುಕರನ್ನು ಓಡಿಸುವ ರೀತಿಯನ್ನು ಕಂಡಿದ್ದ ಗಂಗಾಗೆ airportನಿಂದ ಮೊದಲು ಓಡಿಹೋಗಬೇಕು ಎನ್ನಿಸತೊಡಗಿತ್ತು, ಯಾಕೆ ಇದೆಲ್ಲ, ತನಗೆ ಬೇಕಿತ್ತು? ಎಂದು ಗಂಗಾಗೆ ಒಮ್ಮಿಂದೊಮ್ಮೆಗೇ ಅನ್ನಿಸದಿರಲಿಲ್ಲ. ಇದೆಲ್ಲ ತಪ್ಪಿಸಿಕೊಂಡು ಹೊಸ್ಕೇರೆಯ ಮನೆಗೆ

ಹೋಗಿ ತಾಯಿಯ ಹೃದಯದಲ್ಲಿ ಬೆಚ್ಚಗೆ ತಲೆ ಇಟ್ಟು ಮಲಗಿಬಿಡಬೇಕು ಎನ್ನುವ ಭಾವನೆ ಬಲವಾಗತೊಡಗಿತ್ತು. ಏನು ಮಾಡಬೇಕೆಂಬುದು ಆಕೆಗೆ ತಿಳಿಯಲಿಲ್ಲ. ಮಧ್ಯರಾತ್ರಿ 3 ಘಂಟೆ. ಅಲ್ಲಿ, ಇಲ್ಲಿ ತಿರುಗುವ ಪೋರ್ಟರ್ಸ್ ಬಿಟ್ಟರೆ ಆಕೆಯೊಬ್ಬಳೇ. ಒಂದು ಘಂಟೆಗೆ ಏರ್‌ಪೋರ್ಟ್ ತಲುಪಿದವಳು ಮೂರು ಘಂಟೆಯವರೆಗೆ ಎವೆಯಿಕ್ಕದೇ ಕಾದಿದ್ದಾಳೆ. ಸುಮ್ಮನೇ ತನ್ನ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿಯೇ ಇದ್ದಿದ್ದರೆ ಆಗುತ್ತಿರಲಿಲ್ಲವೇ? ಎಂದು ಆಕೆಗೆ ಆಕೆಯೇ ಬಯ್ದುಕೊಳ್ಳತೊಡಗಿದ್ದಳು. ಕ್ಷಣ ಕೂತು ಯೋಚಿಸುವಳು. ಕ್ಷಣ ಕಾಲ ಹೊರಗೆ ನಿರೀಕ್ಷಿಸುವಳು. ಕ್ಷಣ ಕಾಲ ಓಡಾಡುವಳು. ಮಧ್ಯರಾತ್ರಿಯಾಗಿದೆ, ತಾನೊಬ್ಬಳೇ ಎನ್ನುವ ಅಂಶವೇ ಆಕೆಯ ಮಾನಸಿಕ ಒತ್ತಡವನ್ನು ಹೆಚ್ಚು ಮಾಡುತ್ತದೆ. ವೆಂಕಟೇಶನನ್ನು ಕೊಂದುಬಿಡಬೇಕು ಎನ್ನುವಷ್ಟು ಸಿಟ್ಟು ಆಕೆಗೆ ಬರತೊಡಗಿತ್ತು. ತಮಗೆ ಪೂರ್ಣವಾಗಿ ಸೇರಿದವರು ಎಂದು ಮನಸ್ಸಿಗೆ ಬಂದರೆ ಮಾತ್ರ ಎಲ್ಲರಿಗೂ ಜವಾಬ್ದಾರಿಯ ಪ್ರಶ್ನೆ ಕಾಡುತ್ತದೆಯೋ ಏನೋ? ಅಥವಾ ಆಗಲೂ ಈ ಪ್ರಶ್ನೆಗಳು ಕಾಡುವುದಿಲ್ಲವೇ? ಹೀಗೆಯೇ ಎರಡು ದಿನ ಮಲಗಿದ ಹುಡುಗಿಯ ಬಗ್ಗೆ ಆತನಿಗೇಕೆ ಜವಾಬ್ದಾರಿ? ಅಥವಾ ಎಲ್ಲಿಯೋ ಗುಂಡು ಹಾಕಿ ಮಲಗಿರಬಹುದು ಎಂದು ಯೋಚಿಸಿದಾಗಲೆಲ್ಲಾ ಗಂಗಾಗೆ ಅತೀವ ಸಿಟ್ಟು ಬರತೊಡಗಿತ್ತು. ಗಂಗಾ ಅಲ್ಲಿಂದ ಹೋಗಿಬಿಡಬೇಕೆಂದು ನಿರ್ಧರಿಸಿದಳು. ಎಲ್ಲಿಗೆ ಎಂಬುದು ಗೊತ್ತಿಲ್ಲ, ವೆಂಕಟೇಶನ ವಿಳಾಸ ಬಿಟ್ಟು ಬೇರೆ ಯಾವ ವಿಳಾಸವೂ ಆಕೆಯ ಬಳಿ ಇರಲಿಲ್ಲ. ವೆಂಕಟೇಶ್ ಬಂದೇ ಬರುತ್ತಾನೆ, ದೆಹಲಿಯಲ್ಲಿ ಅವನಿದ್ದಾನೆ ಎಂಬ ನಂಬಿಕೆಯಲ್ಲಿ ಹೊರಟುಬಿಟ್ಟಿದ್ದಳು. ಈಗ ವೆಂಕಟೇಶನನ್ನೇ ಆಕೆ ಹುಡುಕಬೇಕಿತ್ತು. ಹುಡುಕುವುದು ಅನಿವಾರ್ಯವಾಗಿತ್ತು ಕೂಡಾ. ಕೊನೆಗೆ ಅವನ ವಿಳಾಸ ಹುಡುಕಿಯೇ ಹೋಗುವುದು ಎಂದು ನಿರ್ಧರಿಸಿ ವಿಳಾಸ ತೆಗೆದು, ಸೂಟ್‌ಕೇಸ್ ಹಿಡಿದು ಹೊರಗೆ ಬಂದಳು. ರಾತ್ರಿ 3.25 ಆಗುತ್ತಿದೆ. ಆಕೆಯ ನಡುಗೆಯಲ್ಲಿ ಗತ್ತು ಇತ್ತು. ಆದರೆ ನಡುಗೆಯಲ್ಲಿದ್ದ ಗತ್ತು ಎದೆಯಲ್ಲಿ ಇರಲಿಲ್ಲ. ಏಕಾಂಗಿಯಾಗಿ ಇಲ್ಲೆಲ್ಲೋ ಕಳೆದು ಹೋಗಿಬಿಡುತ್ತೇನೇನೋ ಎಂಬ ಆತಂಕದಲ್ಲಿ ಸೂಟ್‌ಕೇಸ್ ಹಿಡಿದು ಹೆಜ್ಜೆ ಹಾಕಿದಳು. ಡೆನ್‌ಹಾಗ್‌ನಲ್ಲಿ ಸ್ಕಾಲರ್‌ಷಿಪ್ ಸಿಗುವುದಾದ್ದರಿಂದ ಕೈಯಲ್ಲಿ ಆಕೆಯಲ್ಲಿ ಇದ್ದುದು ಐದುನೂರು ರೂಗಳು ಮಾತ್ರ. ಹಾಗಾಗಿ ತಾನು ಆಟೋದಲ್ಲಿ ಹೋಗಬೇಕೋ, ಟ್ಯಾಕ್ಸಿಯಲ್ಲಿ ಹೋಗಬೇಕೋ ಎಂಬುದು ಆಕೆಗೇ ತಿಳಿಯಲಿಲ್ಲ. ಬಹುಶಃ ಆಟೋನೇ ಕೈಗೆಟುಕುವುದು ಎಂದು ಎಣಿಸಿ ಆಟೋ ಸ್ಟ್ಯಾಂಡ್ ಕಡೆಗೆ ನಡೆದಳು. ಆಟೋ ನಂಬರ್ ಗಮನಿಸಿ ತನ್ನ ಡೈರಿಯಲ್ಲಿ ಗುರುತು ಹಾಕಿಕೊಂಡಳು. ಆಟೋ ಹತ್ತಿ ಅವನ ಕೈಯಲ್ಲಿ ಅಡ್ರೆಸ್ ಕೊಟ್ಟಳು. ಆತ ತಿರುಗಿಸದ ಗಲ್ಲಿಗಳಿಲ್ಲ. ರಾತ್ರಿ 4 ಘಂಟೆಯವರೆಗೆ ಆತ ಯಾವುದೋ ಯಾವುದೋ ರಸ್ತೆಗಳಲ್ಲಿ, ಯಾವುದೋ, ಯಾವುದೋ ಗಲ್ಲಿಗಳು - ಹೀಗೇ ಎಲ್ಲೆಲ್ಲಿಯೋ ಸುತ್ತಿಸತೊಡಗಿದ್ದ. ಆತ ಕರೆದುಕೊಂಡು ಹೋಗುತ್ತಿದ್ದ ದಾರಿಗಳೇ ಗೊತ್ತಾಗದ ಗಂಗಾ ಆದದ್ದಾಗಲೀ ಎಂದು ಸುಮ್ಮನೇ ಕೂತುಬಿಟ್ಟಿದ್ದಳು. ಎಲ್ಲೆಲ್ಲಿಯೋ ರಸ್ತೆಗಳಲ್ಲಿ ಉರುಳಿರುವ ಕೆಲವರನ್ನು ಬಿಟ್ಟರೆ ನಿರ್ಜನವಾದ ಹಾದಿ/ಬೀದಿಗಳು. ಸರಿಯಾಗಿ ಹೋಗುತ್ತಿದ್ದೀಯಾ ಎಂದು ಆತನನ್ನು ಕೇಳುವ ಹಾಗಿಲ್ಲ, ಯಾಕೆಂದರೆ ಯಾವ ರಸ್ತೆ ಏನು ಎಂದು ಗಂಗಾಳಿಗೇ ತಿಳಿದಿಲ್ಲ. ಸುಮ್ಮನೇ ಹಿಂದೆ ಒರಗಿ ಕುಳಿತುಬಿಟ್ಟಿದ್ದಳು. ಹಿಂದಿಯೇ ಬರದ ಆಕೆ ಆ ಹಿಂದೀವಾಲಾ ಆಟೋದವನೊಡನೆ ಇಂಗ್ಲೀಷ್‌ನಲ್ಲಿಯೇ ಮಾತನಾಡುವಳು. ಅವನು ಹೇಗೋ ಇಂಗ್ಲೀಷ್‌ನಲ್ಲಿಯೇ ವಿವರಿಸಲು ಪ್ರಯತ್ನಿಸುತ್ತಿದ್ದ. ಆ ಕ್ಷಣದಲ್ಲಿ, ಆ ಮಧ್ಯರಾತ್ರಿಯಲ್ಲಿ ಆ ಆಟೋದವನೊಬ್ಬನೇ ತನಗೆ ಆತ್ಮೀಯನಾದವನು ಎಂದುಕೊಳ್ಳುವಾಗ ಗಂಗಾಗೆ ದುಃಖವಾಯಿತು. ಕೊನೆಗೆ ಆತನೇ 'ಹೀಗೆ ಇನ್ನು ಸುತ್ತುವುದು ಬೇಡ, ಯಾವುದಾದರೂ ಹೋಟೆಲ್‌ನಲ್ಲಿ ಉಳಿದುಬಿಡಿ' ಎಂದು ಸಲಹಿಸಿದ ಮೇಲೆ ಗಂಗಾ ಹೋಟೆಲ್‌ನಲ್ಲಿ ಉಳಿಯಲು ನಿರ್ಧರಿಸಿದಳು.

ಏರ್‌ಪೋರ್ಟ್‌ನಲ್ಲಿ ಗಂಗಾ ವೆಂಕಟೇಶನಿಗೆ ಇಪ್ಪತ್ತಾರು ಬಾರಿ ಫೋನ್ ಮಾಡಿರಬೇಕು. ಅದು ಡೆಡ್ ಆಗಿದೆಯೋ, ಎಂಗೇಜ್ ಆಗಿದೆಯೋ, ಕೆಟ್ಟು ಹೋಗಿದೆಯೋ ಎಂಬುದೇ ಆಕೆಗೆ ತಿಳಿದಿರಲಿಲ್ಲ. ಮತ್ತೆ ಫೋನ್ ಮಾಡುವುದು ಏತಕ್ಕೆ ಎಂದು ಆಕೆಯ ಮನಸ್ಸಿಗೆ ಅನ್ನಿಸತೊಡಗಿತು. ಆಟೋದವನು ಯಾವುದೋ ಇಂಟರ್ ನ್ಯಾಷನಲ್ ಹೋಟೆಲ್‌ಗೆ ಕರೆದೊಯ್ದು ನಿಲ್ಲಿಸಿದ. ಗಂಗಾಗೆ ಗಾಭರಿಯಾಯಿತು. ತನ್ನ ಹತ್ತಿರ ಇರುವುದು ಕೇವಲ ಐದು ನೂರು ರೂಪಾಯಿ. ಈ ಹೋಟೆಲ್‌ನಲ್ಲಿ ಬಾಡಿಗೆ ಎಷ್ಟೋ? ಫೋನಿನಲ್ಲಿ ಬೆಳಿಗ್ಗೆ ಕೂಡಾ ವೆಂಕಟೇಶ್ ಸಿಗದಿದ್ದರೆ ತಾನೇನು ಮಾಡುವುದು? ವೀಸಾಕ್ಕೆ ಎಲ್ಲಿ ಓಡಾಡುವುದು? 500ರೂಗಿಂತ ಬೆಳಿಗ್ಗೆಗೆ ಬಾಡಿಗೆ ಜಾಸ್ತಿಯಾದರೆ ತಾನೇನು ಮಾಡುವುದು? ಹೋಟೆಲ್‌ನಲ್ಲಿ ಉಳಿಯುವುದಿಲ್ಲವೆಂದರೆ ಬೆಳಿಗ್ಗೆ ಆರು ಘಂಟೆಯವರೆಗೆ ಎಲ್ಲಿ ಉಳಿಯುವುದು? ಹೀಗೇ ಏನೇನೋ ಗೊಂದಲಗಳು. ಗಂಗಾ ನಿಧಾನವಾಗಿ ಆಟೋದವನ ಹತ್ತಿರ ಹೇಳಿದಳು, 'ಇಲ್ಲಿ, ಬೇಡ, ಯಾವುದಾದರೂ ಸಾಧಾರಣ ಹೋಟೆಲ್‌ಗೆ ಕರೆದೊಯ್ಯಿ'. ಅವನು ಮತ್ತೊಂದು ಹೋಟೆಲ್ ಬಳಿ ಆಟೋ ನಿಲ್ಲಿಸಿದ. ಅಷ್ಟು ತಳಕು, ಬಳಕು ಇಲ್ಲದ ಹೋಟೆಲ್ ಆದರೂ ತನ್ನಲ್ಲಿರುವ ಹಣಕ್ಕೆ ಆ ರಾತ್ರಿಯಾದರೂ ತಂಗಲು ಸಾಧ್ಯವಾಗುತ್ತದೆಯೇ ಎಂದು ಗಂಗಾಗೆ ಅಂಜಿಕೆಯಾಗುತ್ತದೆ. ಆಟೋದವನು 150 ರೂ ಕೇಳುತ್ತಿದ್ದಾನೆ. ಆಕೆಯಲ್ಲಿ ಉಳಿದುದು 350 ರೂ. ಮಾತ್ರ. ಆದದ್ದಾಗಲೀ ಎಂದು ಗಂಗಾ ಆಟೋದಿಂದ ಇಳಿದು ಅವನಿಗೆ 150 ರೂ. ನೀಡಿ, ಮನಃಪೂರ್ವಕವಾಗಿ ವಂದಿಸಿದಳು. ದೆಹಲಿಯಲ್ಲಿ ತಾನು ಕಳೆದುಹೋಗುತ್ತೇನೇನೋ ಎಂಬ ಭಯವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿದವನೇ ಆ ಆಟೋದವನು. ಇಂಗ್ಲೀಷಿನಲ್ಲಿ ಅಷ್ಟು ಇಷ್ಟು ಏನೇನೋ ವಿವರಿಸುತ್ತಿದ್ದ. ಬೆಳಿಗ್ಗೆ ಫೋನ್‌ನಲ್ಲಿ ನಿಮಗೆ ಸಿಗಬಹುದು, ಬೆಳಿಗ್ಗೆ ವಿಳಾಸ ಹುಡುಕುವುದು ಸುಲಭವಾಗಬಹುದು - ಹೀಗೇ ಏನೇನೋ ಹೇಳಿ ಆಕೆಯ ಮನಸ್ಸಿನ ಆತಂಕವನ್ನು, ಭಯವನ್ನು ಹೋಗಲಾಡಿಸಲು ಆತ ಪ್ರಯತ್ನಿಸಿದ್ದ. ಒಂದು ರೀತಿಯ ಭರವಸೆಯನ್ನು ಆಕೆಯಲ್ಲಿ ಹುಟ್ಟುಹಾಕಿದ್ದ. 'ನಿಮಗೆ ಏನೂ ಆಗದ ಹಾಗೆ ಸುರಕ್ಷಿತ ಸ್ಥಳದಲ್ಲಿ ಇಳಿಸುತ್ತೇನೆ' ಎಂದು ಹೇಳುತ್ತಲೇ 3.15ರ ಮಧ್ಯರಾತ್ರಿಯಿಂದ 4.15ರ ರಾತ್ರಿಯವರೆಗೆ ಆಕೆಯ ವಿಳಾಸ ಹುಡುಕುತ್ತಲೇ ಆಟೋ ನಡೆಸಿದ್ದ. ಆತನ ವಿವರಣೆಯಲ್ಲಿ, ಆಶ್ವಾಸನೆಯಲ್ಲಿ, ಸಹನೆಯಲ್ಲಿಯೇ ಗಂಗಾ ದೆಹಲಿಯಲ್ಲಿ ಕತ್ತಲ ಮುಖಗಳ ಭಯಾನಕತೆಯನ್ನು ಸ್ವಲ್ಪ ಸ್ವಲ್ಪವಾಗಿ ಕಳೆದುಕೊಂಡಿದ್ದಳು. ಆತನ ಮೇಲಿನ ನಂಬಿಕೆಯಿಂದಲೇ ಹೋಟೆಲ್ ಮೆಟ್ಟಿಲು ಹತ್ತಿ ಆಕೆಗೆ ತೋರಿಸಲಾದ ಕೊಠಡಿಯೊಳಗೆ ಹೆಜ್ಜೆ ಇಟ್ಟಳು. 'ಬೆಳಗಾದರೆ ಸಾಕು ದೇವರೇ' ಎಂದೂ ಸೂರ್ಯ ಮುಖ ತೋರುವುದನ್ನೇ ಕಾಯುವವಳಂತೆ ಒಂದು ನಿಮಿಷ ರಂಗು ರಂಗಾದ ಕುರ್ಚಿಯ ಮೇಲೆ ಕುಳಿತಳು. ಇಷ್ಟು ಸುಸಜ್ಜಿತವಾದ ಏರ್ ಕಂಡೀಷನ್ ಕೊಠಡಿಯಲ್ಲಿ ಗಂಗಾ ಉಳಿದವಳೇ ಅಲ್ಲ. ಕುರ್ಚಿಯಲ್ಲಿ ಕೂರಲಾಗದೇ ಕೊಠಡಿಯ ಸುತ್ತ ಒಮ್ಮೆ ಹೆಜ್ಜೆ ಹಾಕಿದಳು. ಬಾತ್ ರೂಂನಲ್ಲಿ ಮಲಗಿ ಸ್ನಾನ ಮಾಡುವ ನೀರಿನ ಟಬ್. ಕೊಠಡಿಯ ಬಾಗಿಲು ಮತ್ತೊಮ್ಮೆ ಭದ್ರಪಡಿಸಿ ಹೋಟೆಲ್ ರೂಮ್‌ನಲ್ಲಿದ್ದ ಸಾಮಾನುಗಳನ್ನು ಒಂದೊಂದನ್ನೇ ಪರೀಕ್ಷಿಸತೊಡಗಿದಳು. ತಾನು ಬೆಳಕು ಹರಿಯುವವರೆಗೆ ಸುರಕ್ಷಿತವಾಗಿರಬಲ್ಲೆ ಎಂಬ ಮನೋಭಾವ ಆಕೆಯಲ್ಲಿ ಬೆಳೆಯುತ್ತಿರುವ ಹಾಗೆಯೇ ಆಕೆಯ ಆತಂಕ ಕಡಿಮೆಯಾಗತೊಡಗಿತ್ತು. ಈಗ ಆಕೆಗೆ ಯೋಚನೆಯಾದದ್ದು ಹಣದ ಬಗ್ಗೆ. ಬೆಳಕು ಹರಿಯುವುದಕ್ಕೆ ಇನ್ನು ಒಂದೂವರೆ ಘಂಟೆ. ಆ ಅಂಶವೇ ಆಕೆಯಲ್ಲಿ ಆಶಾಭಾವನೆಯನ್ನು ಹುಟ್ಟುಹಾಕಿತ್ತು. ಸೂರ್ಯನೊಂದಿಗೆ ತನ್ನ ಬದುಕಿನ ಭರವಸೆಯೂ ಏರಿ ಬರುವಂತೆ ಆಕೆಗೆ ಭಾಸವಾಗತೊಡಗಿತ್ತು. ದೆಹಲಿಯ ವಿಮಾನ ನಿಲ್ದಾಣದಲ್ಲಿ ಆಕೆ ಇಳಿದಾಗ ರಾತ್ರಿ ಒಂದು ಘಂಟೆ. ಈಗಾಗಲೇ 4.30ರ ಸಮಯ. ಈ ಮೂರು ಘಂಟೆಯ ಅವಧಿಯೊಳಗೆ ಅವಳ

ಮಾನಸಿಕ ಭಯದಲ್ಲಿಯೇ ಆಕೆ ಅರ್ಧ ಸತ್ತು ಹೋಗಿದ್ದಳು. ಇನ್ನುಳಿದುದು 1.30 ಘಂಟೆ ಮಾತ್ರ, ಬೆಳಕು ಹರಿದುಬಿಡುತ್ತದೆ ಎಂಬ ಅಂಶವೇ ಆಕೆಯ ಮನಸ್ಸನ್ನು ಸ್ವಲ್ಪ ಸ್ವಲ್ಪವಾಗಿ ಮುದಗೊಳಿಸ ತೊಡಗುತ್ತದೆ. ಕೊಠಡಿಯ ಯಾವ ಸಾಮಾನು ಮುಟ್ಟುವುದಕ್ಕೂ ಹೆದರಿಕೆ. ರೂಮ್ ಬಾಯ್ ಬಾಗಿಲು ತಟ್ಟಿದರೆ ದಿಗಿಲು. 'ಏನಾದರೂ ಬೇಕೇ' ಎಂದು ಫೋನಿನಲ್ಲಿ ಹೋಟೆಲ್‌ನವರು ವಿಚಾರಿಸಿದಾಗ ಕಾಫಿಗೆ ಆರ್ಡರ್ ಮಾಡಲೂ ಕೂಡಾ ಭಯ. ಇರುವುದು 350ರೂ. ಕೊಠಡಿಯ ಬಾಡಿಗೆ ಹೆಚ್ಚಾದರೆ ಏನು ಮಾಡುವುದು? ವೆಂಕಟೇಶ್ ಬೆಳಿಗ್ಗೆಯೂ ಸಿಗದೇ ಹೋದರೆ ಏನು ಮಾಡುವುದು? ವೀಸಾಕ್ಕೆ ಎಲ್ಲಿ ಹೋಗಬೇಕು? ತಾನೆಲ್ಲಿ ಉಳಿಯುವುದು? ಆಕೆಯ ಅಜ್ಞಾನದ ಬಗ್ಗೆ ಆಕೆಗೇ ಸಿಟ್ಟು ಬರತೊಡಗಿತ್ತು. ಸರಿಯಾಗಿ ಒಂದಿಷ್ಟು ಮಾಹಿತಿಯನ್ನಾದರೂ ಇಟ್ಟುಕೊಂಡು ಬರಬೇಕಿತ್ತು. ಹೊನ್ನೇಕೆರೆಯ ಪಕ್ಕದ ಊರಿಗೆ ಹೊರಡುವ ಹಾಗೆ ಹೊರಟುಬಿಟ್ಟಿದ್ದಳು. ಎಲ್ಲವನ್ನೂ ಹಗುರವಾಗಿ ತೆಗೆದುಕೊಂಡಿದ್ದಳು. 'ಏನು ಮಹಾ ಹುಡುಕಿಕೊಂಡು ಹೋದರಾಯಿತು' ಎನ್ನುವ ಉದಾಸೀನ. ಗಂಗಾ ರಾತ್ರಿಯೆಲ್ಲಾ ಮಲಗಲೇ ಇಲ್ಲ. 10 ನಿಮಿಷಕ್ಕೊಮ್ಮೆ ವೆಂಕಟೇಶನಿಗೆ ಫೋನ್ ಮಾಡುವಳು. ಉಳಿದ ಒಂದೆರಡು ತಾಸನ್ನು ಕುರ್ಚಿಯ ಮೇಲೆ ಕೂರಲಾರದೇ, ನಿಲ್ಲಲಾರದೇ ಕಳೆದಳು. ಕೊನೆ ಕೊನೆಗೆ ಐದು ನಿಮಿಷಕ್ಕೊಮ್ಮೆ ಫೋನ್ ಮಾಡುವಳು. ಬೆಳಿಗ್ಗೆ 6.30ರ ವೇಳೆಗೆ ವೆಂಕಟೇಶ್ ಫೋನಿನಲ್ಲಿ ಮಾತನಾಡಿದಾಗ ಗಂಗಾಗೆ ನಿರಾತಂಕವೆನಿಸಿತ್ತು. ವೆಂಕಟೇಶ ಫೋನಿನಲ್ಲಿ 'ಹಾಯ್' ಎಂದಾಗ ಗಂಗಾ ಮನಸ್ಸಿನೊಳಗಿನ ಸಿಟ್ಟನ್ನೆಲ್ಲ ಅದುಮಿ ಹಿಡಿದಿದ್ದಳು. ಅವನಿಗೆ ಆ ಕ್ಷಣದಲ್ಲಿ ಶರಣು ಹೋಗುವುದು ಅನಿವಾರ್ಯವಾಗಿತ್ತು. ನಂದು ಎನ್ನುವ ಸಂಬಂಧವಿಲ್ಲದಿರುವ ನಾನು ಇನ್ನೇನೋ ಎಂದು ಮನಸ್ಸಿಗೆಲ್ಲ ಪಿಚ್ಚೆನಿಸತೊಡಗಿತ್ತು. ಗಂಗಾ ಹೆಚ್ಚು ಮಾತನಾಡದೇ ತಾನಿರುವ ಹೋಟೆಲ್ ವಿಳಾಸ ತಿಳಿಸಿದಳು. ವೆಂಕಟೇಶ್ 'ರಾತ್ರಿಯೆಲ್ಲಾ ಎಲ್ಲಿ ನಾಪತ್ತೆಯಾಗಿದ್ದೀ' ಅಂದ. 'ನಾನು ಏರ್‌ಪೋರ್ಟ್‌ಗೆ ಹಲವಾರು ಬಾರಿ ಫೋನ್ ಮಾಡಿದೆ. ಅಲ್ಲಿಯೇ ಇರಲಿಕ್ಕೆ ಆಗಲಿಲ್ಲವಾ' ಎಂದು ಫೋನಿನಲ್ಲಿಯೇ ಸಿಟ್ಟು ಕೂಡಾ ಮಾಡಿದ. 'ಅಲ್ಲಿಯೇ ಇರಬಹುದಾಗಿತ್ತು ಎಂಬ ವಿಚಾರವೇ ನನಗೆ ತಿಳಿದಿರಲಿಲ್ಲ' ಎಂದು ಗಂಗಾ ಕೋಪವನ್ನೆಲ್ಲ ಅದುಮಿಕೊಂಡು ಹೇಳಿದಳು. ಇನ್ನುಳಿದ ಮೂರು ದಿನಗಳು ದೆಹಲಿಯಲ್ಲಿ ಕಳೆಯಬೇಕು, ವೆಂಕಟೇಶನಿಲ್ಲದೇ ತನಗ್ಯಾರೂ ಗೊತ್ತಿಲ್ಲ ಎಂದು ಗೊತ್ತಿರುವ ಸತ್ಯದಿಂದಾಗಿ, ಅನಿವಾರ್ಯತೆಯಿಂದಾಗಿ ಗಂಗಾ ಅವನ ಬಗ್ಗೆ ಇದ್ದಿರುವ ಕೋಪವನ್ನೆಲ್ಲ ತಾತ್ಕಾಲಿಕವಾಗಿ ಹಿಡಿತದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸತೊಡಗಿದ್ದಳು.

* * * *

ದೆಹಲಿಯಲ್ಲಿ ನಿಂತರೂ ನಿಲ್ಲಲಾರದ, ಕುಳಿತುಕೊಂಡು ಯೋಚಿಸಲಾಗದ ಬದುಕಿನಲ್ಲಿ ಮಾನಸಿಕ ಸ್ಥಿರತೆ ವೆಂಕಟೇಶನಲ್ಲಿ ಹೇಗೆ ಉಳಿಯುವುದೋ ಎಂದು ಗಂಗಾ ಯೋಚಿಸುವಳು. ದೆಹಲಿಯಲ್ಲಿ ಕಳೆದ ಮೂರು ದಿನಗಳಲ್ಲಿ ಆಕೆ ಅನುಭವಿಸಿದ ಏಕಾಂಗಿತನದಲ್ಲಿ ದೆಹಲಿ, ಬೆಂಗಳೂರ್‌ಗಿಂತ ಭೀಕರ ಎನಿಸತೊಡಗಿತ್ತು. ಹಳ್ಳಿಗಳ ಆತ್ಮೀಯ ಸಂಬಂಧಗಳಲ್ಲಿ ಬೇರು ಬಿಟ್ಟ ಮನಸ್ಸುಗಳು ನಗರೀಕರಣದ ಬದುಕಿಗೆ ಕಚ್ಚಿಕೊಳ್ಳುವುದು ಸಾಧ್ಯವೇ ಹೊರತು, ಅಲ್ಲಿಗೇ ಅಂಟಿಕೊಂಡು ಬದುಕಲು ಸಾಧ್ಯವಾಗುವುದಿಲ್ಲವೇನೋ ಎಂದೆನಿಸತೊಡಗಿತ್ತು. ಯಾಕೋ ಬೇರುಗಳಿಲ್ಲದೇ ದೆಹಲಿಯಂತಹ ವಾತಾವರಣದಲ್ಲಿ ಬದುಕುವ ವೆಂಕಟೇಶನಷ್ಟು ಒಂಟಿ ಇನ್ನಾರೂ ಇಲ್ಲವೆಂದೇ ಗಂಗಾಗೆ ಭಾಸವಾಗತೊಡಗಿತ್ತು. ಏನೇನೋ ವಿಚಾರಗಳಲ್ಲಿ ತೊಡಗಿಸಿಕೊಂಡು ಬ್ಯುಸಿಯಾದಂತೆ ಕಾಣುವ ವೆಂಕಟೇಶನ ಮನಸ್ಸು ಮಾತ್ರ ಖಾಲಿ ಖಾಲಿಯಾಗಿರುತ್ತದೇನೋ ಎಂದು ಆಕೆಗೆ ಅನ್ನಿಸತೊಡಗಿತ್ತು. ಕನಸುಗಳು ವಾಸ್ತವದಲ್ಲಿ ಹೇಗೆ ಕಲಸು ಮೇಲೋಗರವಾಗುತ್ತದೆ ಎಂದು ಆತನನ್ನು ನೋಡಿದಾಗಲೆಲ್ಲಾ ಆಕೆಗೆ

ಅನ್ನಿಸುತ್ತಿತ್ತು. ಮೂರು ದಿನಗಳಲ್ಲಿ ಆಗೀಗ್ಗೆ ಗಂಗಾ ತನಗನ್ನಿಸಿದುದನ್ನು ವೆಂಕಟೇಶನಲ್ಲಿ ಹೇಳುವಳು. ಆತನ ಬದುಕನ್ನು, ಬದುಕಿನ ಶೈಲಿಯನ್ನು ಕುರಿತು ಹಳಿಯುವಳು. ಆತನಿಗೆ ಸೂಚಿಸುತ್ತಿರುವುದೋ ಅಥವಾ ತನ್ನ ಬದುಕನ್ನು ತಾನೇ ಹಳಿದುಕೊಳ್ಳುತ್ತಿರುವುದೋ ಆಕೆಗೇ ತಿಳಿಯದು. ಆತನಿಗೆ ಅವನ ಬಗ್ಗೆ ಹೇಳುತ್ತಾ ಹೇಳುತ್ತಾ ಇರುವಾಗಲೆಲ್ಲಾ ಅದು ತನಗೆ ತಾನೇ ಹೇಳಿಕೊಳ್ಳುತ್ತಿರುವ ಮಾತೇ ಎಂದು ಆಕೆಯೇ ಅಂದುಕೊಳ್ಳುವಳು. 'ಭಾವನೆಗಳ ಲಯದಲ್ಲಿ, ನನಗೆ ಏನೆನಿಸುತ್ತದೆ ಎಂಬುದನ್ನು ರಕ್ತದ ನಾಡಿಯ ಮಿಡಿತದಿಂದ ಕೇಳಬೇಕು ವೆಂಕಟೇಶ್' ಎನ್ನುವ ಗಂಗಾ, 'ಹಾಗೆ ನಿನಗೆ ನೀನೇ ಕಿವಿಗೊಟ್ಟು ಆಲಿಸಿದರೆ ಮಧ್ಯ ಮಧ್ಯ ತಳಕು ಹಾಕಿಕೊಂಡಿರುವ ಏನೇನೋ ವಿಚಾರಗಳು ಈಚೆ ಬರಬಹುದು, ನಮ್ಮನ್ನು ಬೆಚ್ಚಿಸಿ ಬಿಡಬಹುದು, ನಮ್ಮಲ್ಲಿನ ಅಹಂಕಾರ, ಅಸ್ತಿತ್ವದ ಹಮ್ಮಿಗೆ ತಳಕು ಹಾಕಿಕೊಂಡಿರುವ ಪ್ರಶ್ನೆಗಳನ್ನು ಆಚೆ ಸರಿಸಿ, ಬೆತ್ತಲೆಯಾಗಿ ನಿಂತು ನಮ್ಮನ್ನೇ ನೋಡಿಕೊಳ್ಳುವುದೆಂದರೆ ಕನ್ನಡಿಯ ಮುಂದೆ ನಮ್ಮನ್ನು ಬೆತ್ತಲೆಯಾಗಿ ನೋಡಿಕೊಂಡಷ್ಟು ಸುಲಭವಲ್ಲ. ವೆಂಕಟೇಶ್, ಎಲ್ಲರಿಗಾಗಿ ನಾನು ಎಂದು ಹಲವಾರು ಸಂಬಂಧಗಳಿಗೆ, ಹಲವಾರು ಸಾಧ್ಯತೆಗಳಿಗೆ ತೆರದುಕೊಳ್ಳುವ ನೀನು ಕೊನೆಗೆ ಹೀಗೆ ತೆರೆದುಕೊಳ್ಳುವುದು ಯಾರಿಗಾಗಿಯೂ ಅಲ್ಲದಿರಬಹುದು. ನಶಿಸುತ್ತಿರುವ ಅಹಂಕಾರವನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು, ಅಸ್ತಿತ್ವದ ಪ್ರಶ್ನೆಗಳನ್ನು ಗುರುತಿಸಿಕೊಳ್ಳುವುದಕ್ಕಾಗಿಯೇ - ಬದುಕಿನ ಎಲ್ಲಾ ಸ್ತರಗಳಿಗೂ ನಿನ್ನನ್ನು ನೀನು ಒಡ್ಡಿಕೊಂಡಿದ್ದೆ ಎನ್ನುವ ಸತ್ಯ ನಿನ್ನನ್ನು ಬೆಚ್ಚಿ ಬೀಳಿಸುವ ಮೊದಲೇ ನಿನ್ನ ಸಾಧ್ಯತೆಗಳೆಷ್ಟು ಎಂಬುದನ್ನು ನೀನೇ ಅರ್ಥ ಮಾಡಿಕೋ ವೆಂಕಟೇಶ್' ಎನ್ನುತ್ತಾಳೆ. ವೆಂಕಟೇಶನ ಬದುಕಿನ ವೃತ್ತ ದೊಡ್ಡದು. ಅಲ್ಲಿ ಎಲ್ಲರೂ ಇರುತ್ತಾರೆ, ಎಲ್ಲಾ ಸಾಧ್ಯತೆಗಳೂ ಇರುತ್ತವೆ ಎನಿಸುತ್ತದೆ. ಆದರೆ ಎಲ್ಲಾ ಇದೆ ಎನ್ನುವ ಹಂತದಲ್ಲಿಯೇ ಅಲ್ಲಿರುವ ಪ್ರತಿಯೊಬ್ಬರೂ ತಮ್ಮ ತಮ್ಮ ವೃತ್ತಗಳನ್ನು ಕಟ್ಟಿಕೊಂಡು ಬಿಟ್ಟಿರುತ್ತಾರೆ. ವೆಂಕಟೇಶ ಸೃಷ್ಟಿಸಿದ ವೃತ್ತ ಅವನ ಹಾಗೂ ಇತರರ ಕಾರಣದಿಂದ ಅವನ ಕುತ್ತಿಗೆಗೇ ಬಿಗಿಯಬಹುದು ಎಂದೆಲ್ಲಾ ಗಂಗಾಗೆ ಅನ್ನಿಸುತ್ತದೆ.

ಗಂಗಾ ದೆಹಲಿ ಬಿಡುವ ರಾತ್ರಿ ವೆಂಕಟೇಶ್ ಅವನ ಫ್ರೆಂಡ್ಸ್ ಜೊತೆ ಕುಡಿಯುತ್ತಲೇ ಕುಳಿತಿದ್ದನು. ರಾತ್ರಿ ಒಂಬತ್ತು ಘಂಟೆಯ ವಿಮಾನಕ್ಕೆ ಗಂಗಾ ಹತ್ತಬೇಕಿತ್ತು. ವೆಂಕಟೇಶ್ ರಾತ್ರಿ 8.30 ಆದರೂ ಹೊರಡುವ ಸೂಚನೆಯನ್ನೇ ತೋರಿಸಲಿಲ್ಲ. ಗಂಗಾಳೇ ಅವಸರಿಸತೊಡಗಿದಳು. ವೆಂಕಟೇಶ್ ಅವನಿಗರಿವಿಲ್ಲದ ಹಾಗೆ ಜಾಸ್ತಿ ಕುಡಿದಿರುವನೇ ಎಂದು ಆಕೆಗೇ ಅನುಮಾನ ಬರತೊಡಗಿತ್ತು. ತಾನೇ ಹೋಗಿಬಿಡೋಣವೆಂದರೆ ತನಗೆ ಅಷ್ಟಾಗಿ ಪರಿಚಯವಿಲ್ಲ. ಮತ್ತೆ ವೆಂಕಟೇಶನಲ್ಲಿ ಹೋಗೋಣ ಎಂದು ಆತ ಏಳದೇ ಇದ್ದಾಗ 'ನಾನು ಹೋಗಿ ಬಿಡುತ್ತೇನೆ ವೆಂಕಟೇಶ್, ನನಗೆ ಈಗ ಹೋಗಿ ವಿಚಾರಿಸಲಿಕ್ಕೆ ಸಾಧ್ಯವಾಗುವುದಿಲ್ಲವಾ' ಎನ್ನುತ್ತಾಳೆ. ಈತನನ್ನು ನಂಬಿಕೊಂಡು 8.30ರವರೆಗೆ ಕಾದದ್ದು ತನ್ನ ಮೂರ್ಖತನ ಎಂದುಕೊಳ್ಳುತ್ತಾಳೆ. ಸುಮ್ಮನೇ ಮೊದಲೇ ನಿಲ್ದಾಣಕ್ಕೆ ಹೋಗಿ ತಾನೇ ವಿಚಾರಿಸಿ ಹೋಗಬಹುದಿತ್ತು ಎಂದೆನ್ನಿಸುತ್ತದೆ. ಯಾಕೋ ಈ ವೆಂಕಟೇಶ್, ಈ ದೆಹಲಿ, ಡೆನ್‌ಹಾಗ್ ಎಲ್ಲಾ ಬಿಟ್ಟು ಬಿಟ್ಟು ವಾಪಸ್ಸು ಹೊನ್ನೇಕೆರೆಗೆ ಹೋಗಿಬಿಡಬೇಕು ಎನ್ನುವ ಆಸೆ ಮನದಾಳದಲ್ಲಿ ಬೇರೂರತೊಡಗುತ್ತದೆ. ಆದರೆ ಹೊಳೆಯಲ್ಲಿ ಇಳಿದಾಗಿತ್ತು. ಚಳಿಯೋ, ಮುಳುಗಿ ಬಿಡುವೆನೋ, ಎಂಬ ಹೆದರಿಕೆಯಿದ್ದರೂ ಮುಂದುವರೆಯಲೇಬೇಕಿತ್ತು. ಬದುಕನ್ನು ಕುರಿತು ಅರಗಿಸಿಕೊಳ್ಳುವುದಕ್ಕಾಗಿ ಆಕೆ ಬೆಂಗಳೂರ್ ಬಿಟ್ಟು ಹೊರಟಿದ್ದಳು. ಬೆಂಗಳೂರಿನ ಅಲೆಮಾರಿ ಬದುಕಿಗೆ ಪೂರ್ಣ ವಿರಾಮ ಹಾಕಿ ಅಲ್ಲಿಂದ ದೂರ ನಿಂತು ಬದುಕನ್ನು ಜೀರ್ಣಿಸಿಕೊಳ್ಳುವುದು ಆಕೆಗೆ ಬೇಕಿತ್ತು. ಯಾಕೋ ವೆಂಕಟೇಶನ ಮೀಟಿಂಗ್ಸ್‌ಗಳು, ಅವನ ಸುತ್ತ ಇರುವ ಜನ, ಅವನ ಸಂಬಂಧಗಳು, ಅವನ ಹಣದ ಸ್ತರದ ಬದುಕು ಇವನ್ನು ಮೂರು ದಿನದಲ್ಲಿ

ಅತೀ ಹತ್ತಿರದಿಂದ ಗಮನಿಸಿದಾಗ ಹೆಚ್ಚು ಬೆಚ್ಚಿಬಿಡುವ ಹಾಗೆ ಆಗಿತ್ತು. ಗಂಗಾ 'ನಾನೇ ಹೋಗುತ್ತೇನೆ' ಎಂದು ಹಲವಾರು ಬಾರಿ ಹೇಳಿ ಹೊರಟು ನಿಂತಾಗ ವೆಂಕಟೇಶ ಗಂಗಾಳ ಜೊತೆ ನಡೆದ. ಏರ್‌ಪೋರ್ಟ್‌ನಲ್ಲಿ ಸಾಕಷ್ಟು ಗದ್ದಲವಿತ್ತು. ವೆಂಕಟೇಶನನ್ನು ಅನುಸರಿಸಿಯೇ ಗಂಗಾ ನಡೆದಳು. ಆಗಲೇ ಸಮಯ ಮೀರತೊಡಗಿತ್ತು. ಆಕೆಯ ಟಿಕೆಟ್ ಚೆಕ್ ಮಾಡಿಸಬೇಕಿತ್ತು. ಚೆಕಿಂಗ್ ಸೆಂಟರ್‌ಗೆ ವೆಂಕಟೇಶನನ್ನು ಬಿಡುವುದಿಲ್ಲ ಎಂದು ಪೋಲೀಸ್ ಗಲಾಟೆ ಪ್ರಾರಂಭಿಸಿದ ಮೇಲೆ ವೆಂಕಟೇಶ್ ಅವನೊಟ್ಟಿಗೆ ಜೋರಾಗಿ ಜಗಳ ಕಾಯಲು ಪ್ರಾರಂಭಿಸಿದ. ಗಂಗಾ ಈಗ ವೆಂಕಟೇಶನನ್ನು ಕಾಯಲಿಲ್ಲ. ನೇರವಾಗಿ ಟಿಕೆಟ್ ಹಿಡಿದು ಚೆಕಿಂಗ್ ಕೌಂಟರ್ ಬಳಿ ಹೋದಳು. ಈಗ ವೆಂಕಟೇಶನನ್ನೇ ನೆಚ್ಚುವುದು ಸರಿಯಲ್ಲ ಎಂಬ ವಿವೇಕ ಆಕೆಯಲ್ಲಿ ಉದಯವಾಗಿತ್ತು. ಕುಡಿದ ಮತ್ತಿನಲ್ಲಿ ವೆಂಕಟೇಶ್ ಪೋಲೀಸ್‌ನೊಟ್ಟಿಗೆ ಜಗಳಕ್ಕೆ ಇಳಿದಿದ್ದನೋ ಅಥವಾ ಆತನ ಸ್ವಭಾವದ ಒರಟುತನವೋ ಆಕೆಗೆ ಅರ್ಥವಾಗಿರಲಿಲ್ಲ. ವೆಂಕಟೇಶ್ ಎತ್ತರದ ಧ್ವನಿಯಲ್ಲಿ ಪೋಲೀಸ್‌ನೊಟ್ಟಿಗೆ ಜಗಳ ಪ್ರಾರಂಭಿಸಿದಾಗಲೇ ಗಂಗಾ ಅಲ್ಲಿಂದ ಚೆಕಿಂಗ್ ಕೌಂಟರ್ ಹತ್ತಿರ ನಡೆದುಬಿಟ್ಟಿದ್ದಳು. ಅನಿವಾರ್ಯ ಕಾರಣದಿಂದಾಗಿ ಗಂಗಾಳಿಗೆ ವಿಮಾನದಲ್ಲಿ ಕಾದಿರಿಸಿದ್ದ ಸ್ಥಳ ಅಂದು ಕ್ಯಾನ್ಸಲ್ ಆಗಿತ್ತು. ಗಂಗಾಳಿಗೆ ದಿಕ್ಕೇ ತೋಚದಾಯಿತು. ವೆಂಕಟೇಶ ಜಗಳ ಪ್ರಾರಂಭಿಸಿದ ಸ್ಥಳಕ್ಕೆ ಬಂದು ನೋಡಿದಳು. ಅಲ್ಲಿ ವೆಂಕಟೇಶ ಕಾಣಿಸಲಿಲ್ಲ. ಪೋಲೀಸ್‌ನವನೂ ಕಾಣಿಸಲಿಲ್ಲ. ಗಂಗಾಳಿಗೆ ಗಾಭರಿಯಾಯಿತು. ಈಗ ಎಲ್ಲಿ ಹೋಗುವುದು? ತಾನು ಇನ್ನು ಯಾವಾಗ ಡೆನ್‌ಹಾಗ್‌ಗೆ ಹೋಗಬಹುದು? ಈ ಯಾವುದರ ಬಗ್ಗೆಯೂ ಆಕೆಗೆ ತಿಳಿಯದು. ಟಿಕೆಟ್ ಕ್ಯಾನ್ಸಲ್ ಆಗಿದೆ ಎಂದು ಹೇಳಿದ ವ್ಯಕ್ತಿಯ ಬಳಿಯೇ ಹೋಗಿ ಈಗ ತಾನೆಲ್ಲಿಗೆ ಹೋಗಬೇಕು? ಎಂದು ಜೋರಾಗಿ ಜಗಳಕ್ಕೆ ಪ್ರಾರಂಭಿಸಿದಳು. ಆತ ಆಕೆಗೆ ವ್ಯವಸ್ಥೆ ಮಾಡುವುದಾಗಿ ಭರವಸೆ ಇತ್ತ. ಎರೆಡು ದಿನದ ಮೇಲೆ ಗಂಗಾಳ ಟಿಕೆಟ್ ಕನ್‌ಫರ್ಮ್ ಆಗಿತ್ತು. ಇನ್ನೆರಡು ದಿನಕ್ಕೆ ತನ್ನಲ್ಲಿ ಹಣವೂ ಇಲ್ಲ, ಉಳಿಯಲು ವ್ಯವಸ್ಥೆಯೂ ಇಲ್ಲ ಎಂದು ಗಂಗಾ ಉದ್ವಿಗ್ನಳಾಗಿಯೇ ಗಲಾಟೆ ಮಾಡಲು ಪ್ರಾರಂಭಿಸಿದಳು. ಆಗ ಆ ವ್ಯಕ್ತಿ 'ಅದು ನಮ್ಮ ಜವಾಬ್ದಾರಿ, ಹೋಟೆಲ್‌ನಲ್ಲಿ ನಿಮಗೆ ವ್ಯವಸ್ಥೆ ಮಾಡುತ್ತೇವೆ' ಎಂದು ಹೇಳಿದ. 'ಸರಿ' ಎಂದಳು ಗಂಗಾ. ಕೊನೆಗೆ ಮತ್ತೊಮ್ಮೆ ವೆಂಕಟೇಶ ಸಿಗಬಹುದೆಂದು ಸುತ್ತಲೂ ಕಣ್ಣಾಡಿಸಿ ನೋಡಿದಳು. ಕಾಣದಿದ್ದಾಗ ಶಾಂತವಾಗಿ ಒಂದು ಕಡೆ ಕುಳಿತು ಯೋಚಿಸತೊಡಗಿದಳು. ಟಿಕೆಟ್ ಕೌಂಟರ್‌ನಲ್ಲಿದ್ದ ಮನುಷ್ಯ 'ಈಗ ಕಾರು ಬರುತ್ತದೆ, ನಿಮಗೆ ಉಳಿಯುವ ಹೋಟೆಲ್‌ಗೆ ಡ್ರಾಪ್ ಮಾಡಲಾಗುತ್ತದೆ' ಎಂದ. ಗಂಗಾ ಒಂದು ಕಡೆ ಕುಳಿತುಕೊಂಡು ಯೋಚಿಸತೊಡಗಿದಳು. ಮನಸ್ಸು/ದೇಹ ಎರೆಡೂ ಭಾರವಾದಂತೆ ಭಾಸವಾಗತೊಡಗಿತ್ತು. ಮುಚ್ಚಿದರೆ ಕಣ್ಣು ರೆಪ್ಪೆಗಳು ಅಂಟಿಕೊಂಡು ಬಿಡುವಂತೆ ಭಾಸವಾಗುತ್ತಿತ್ತು. ಫೈವ್ ಸ್ಟಾರ್ ಹೋಟೆಲ್ ನೋಡಿದರೆ ಕಣ್ಣರಳಿಸುವ ಕ್ಲಾಸಿನಿಂದ ಬಂದ ಹುಡುಗಿ ತಾನು. ಈಗ ಇದೆಲ್ಲ ವಿಸ್ಮಯ. ವಿಮಾನ ಹತ್ತುವುದು ಏಕೆ? ದೂರದಿಂದ ನೋಡಿದರೇ ರೋಚಕಗೊಳ್ಳುತ್ತಿದ್ದ ತಾನು ಈಗ ಎಲ್ಲೆಲ್ಲಿಯೋ, ಯಾವುದಾವುದೋ ಸುಳಿಗಳಲ್ಲಿ ಸಿಕ್ಕಿ ಹಾಕಿಕೊಳ್ಳತೊಡಗಿದ್ದೇನೆ ಎಂದು ಗಂಗಾಗೆ ಭಾಸವಾಗುತ್ತದೆ. ತಾನು ಕಂಡಿರದ ಈ ಬದುಕಿನ ಆಯಾಮದ ನಾಡಿಯ ಹಿಡಿಯಲು ತನ್ನ ಜ್ಞಾನದ ಪರಿಧಿಯನ್ನೇ ಆಚೀಚೆ ಚಾಚುತ್ತಾ ಕುಳಿತಳು. ಈಗ ಹೋಟೆಲ್‌ಗೆ ಹೋಗಿ ಉಳಿಯುವುದಕ್ಕೆ ಆಕೆಗೆ ಭಯವಿರಲಿಲ್ಲ, ಆತಂಕವಿರಲಿಲ್ಲ. ವೆಂಕಟೇಶನನ್ನು ಹುಡುಕಿಕೊಂಡು ಹೋಗುವುದಕ್ಕಿಂತ ಇವರು ವ್ಯವಸ್ಥೆ ಮಾಡಿದ ಹೋಟೆಲ್‌ನಲ್ಲಿ ಉಳಿಯುವುದೇ ವಾಸಿಯೆಂದು ನಿರ್ಧರಿಸಿದಳು. ವಿಮಾನ ಹೊರಡುವ ಕೊನೆಯ ನಿಮಿಷಗಳಿಂದಾಗಿಯೇ ಇಂತಹ ಅವಾಂತರಗಳಾದದ್ದು ಎನಿಸತೊಡಗಿದಾಗ ಮರಳಿ ವೆಂಕಟೇಶನನ್ನು ಹುಡುಕುವುದಕ್ಕಿಂತ ಇದೇ ವಾಸಿ ಎನ್ನಿಸತೊಡಗಿತ್ತು. ಮೂರು ದಿನಗಳ ಹಿಂದೆ ದೆಹಲಿಗೆ ಬಂದಾಗ ಇದ್ದ

ಉದ್ವಿಗ್ನತೆ ಈಗ ಆಕೆಯಲ್ಲಿ ಇರಲಿಲ್ಲ. ಮನಸ್ಸು ಗಾಬರಿಯಾಗುತ್ತಿರಲಿಲ್ಲ. ಆತಂಕಗೊಂಡ ಮನಸ್ಥಿತಿ ಇರುತ್ತಿರಲಿಲ್ಲ. ಮನ ಸ್ಥಿರತೆ ಇಲ್ಲದಾಗಿ ಕಣ್ಣಲ್ಲಿ ನೀರು ಸುರಿಯುತ್ತಿರಲಿಲ್ಲ. ಚೆಕಿಂಗ್ ಕೌಂಟರ್‌ನ ಮನುಷ್ಯ 'ಕಾರು ಬಂದಿದೆ ಹೋಗಿ' ಎಂದಾಗ ಆಕೆ ಸೂಟ್‌ಕೇಸ್‌ನೊಂದಿಗೆ ಹೊರಗೆ ಬಂದು ಕಾರು ಹತ್ತಿದಳು. ತನ್ನ ಹಾಗೆ ಟಿಕೇಟ್ ಕನ್‌ಫರ್ಮ್ ಆಗದೇ ಇನ್ನೆರಡು ಜನ ಹೆಂಗಸರು ಕಾರಿನಲ್ಲಿ ಕುಳಿತಿದ್ದನ್ನು ಕಂಡಾಗ ಆಕೆಯ ಮನಸ್ಸಿನಲ್ಲಿ ನಿರಾಳ ಎನ್ನಿಸಿತು. ಕಾರಲ್ಲಿ ಕುಳಿತು ಆಕೆ ವೆಂಕಟೇಶನ ಬಗ್ಗೆ, ಕೈಗೆ ನಿಲುಕದಿರುವ ಈ ಜೀವನದ ಮಗ್ಗಲುಗಳ ಬಗ್ಗೆ ಯೋಚಿಸುತ್ತಾ ಸೀಟಿಗೆ ಒರಗಿದಳು.

* * * * *

ಮರುದಿನ ಬೆಳಿಗ್ಗೆ ವೆಂಕಟೇಶನ ಆಫೀಸಿಗೆ ಫೋನಿಸಿದಾಗ ರಾತ್ರಿಯೆಲ್ಲಾ ವೆಂಕಟೇಶ ಅಲ್ಲಿಗೆ ಹೋಗಿಯೇ ಇಲ್ಲ ಎಂದು ತಿಳಿದಾಗ ಗಂಗಾಗೆ ಗಾಭರಿಯಾಯಿತು. ಆತ ಏರ್‌ಪೋರ್ಟ್‌ನಲ್ಲಿ ಪೋಲೀಸಿನ ಜೊತೆಗೆ ಗಲಾಟೆ ಮಾಡುತ್ತಿರುವಾಗಲೇ ಗಂಗಾ ಅವನನ್ನು ಬಿಟ್ಟು ಕೌಂಟರ್ ಹತ್ತಿರ ಓಡಿದ್ದು. ಈಗ ಅವಳಿಗೆ ಹೋಟೆಲ್‌ನಲ್ಲಿ ಇರುವುದಕ್ಕೆ ಭಯವಾಗುತ್ತಿರಲಿಲ್ಲ. ಮುಜುಗರವೂ ಆಗುತ್ತಿರಲಿಲ್ಲ. ಏರ್‌ಪೋರ್ಟ್‌ನವರೇ ಹೋಟೆಲ್‌ನಲ್ಲಿ ಇರಿಸಿದುದರಿಂದ ಆಕೆ ದುಡ್ಡಿಗೆ ಹೆದರಬೇಕಿದ್ದೂ ಇಲ್ಲ. ಮೂರು ದಿನಗಳ ಹಿಂದೆ ಡೆಲ್ಲಿಗೆ ಬಂದು ಹೋಟೆಲ್‌ನಲ್ಲಿ ಉಳಿದಾಗ ಗಂಗಾ ತಾನು ದೆಹಲಿಯಲ್ಲಿ ಎಲ್ಲಿಯೋ ಕಳೆದು ಹೋಗಿಬಿಡುತ್ತೇನೆ, ತನ್ನ ಅಸ್ತಿತ್ವವೇ ಎಲ್ಲಿಯೋ ಮಾಯವಾಗಿಬಿಡುತ್ತದೆ ಎಂದು ಹೆದರಿದ್ದಳು. ಈಗ ಹಾಗಲ್ಲ, ಆಕೆಗೆ ಆತಂಕವಾದದ್ದು ಆಕೆಯ ಬಗ್ಗೆ ಅಲ್ಲ. ಪೋಲೀಸಿನವನೊಟ್ಟಿಗೆ ಘರ್ಷಣೆಗೆ ತೊಡಗಿದ್ದ ವೆಂಕಟೇಶ್ ಕಳೆದು ಹೋದುದರ ಬಗ್ಗೆ. ದೆಹಲಿಯ ಕರಾಳ ರಾತ್ರಿಯ ಮುಖಗಳಲ್ಲಿ, ಪೋಲೀಸರ ಹಿಂಸೆಯ ಮುಖಗಳಲ್ಲಿ ಕಳೆದು ಹೋಗಿರಬಹುದಾದ ವೆಂಕಟೇಶನ ಬಗ್ಗೆ ಗಂಗಾಗೆ ಭಯ/ಆತಂಕ ಎರಡೂ ಪ್ರಾರಂಭವಾಗಿತ್ತು. ಅವನ ಆಫೀಸಿಗೆ ಹೋಟೆಲ್ ಫೋನ್ ನಂಬರ್ ಕೊಟ್ಟು ಆತ ಆಫೀಸಿಗೆ ಬಂದ ತಕ್ಷಣ ಫೋನ್ ಮಾಡಲು ತಿಳಿಸುವಂತೆ ಕೇಳಿಕೊಂಡಳು. ಮಧ್ಯಾಹ್ನದಿಂದ ಸಂಜೆಯವರೆಗೆ ಆತಂಕದಿಂದಲೇ ಕಾದಳು. ಡೆಲ್ಲಿಯ ಯಾವ ಕದಂಬ ಬಾಹುಗಳು ವೆಂಕಟೇಶನ ಬಲಿ ತೆಗೆದುಕೊಂಡವೋ ಎನ್ನುವ ಭಯ. ಸತ್ತ ಸಾಧನಾಳ ನೆನಪು ಅಲೆ ಅಲೆಯಾಗಿ ಗಂಗಾಳಲ್ಲಿ ಮೂಡತೊಡಗಿತ್ತು.

ಮಧ್ಯಾಹ್ನ ಸರ್ವರ್ ತಂದಿಟ್ಟುದುದನ್ನು ತಿನ್ನಲೋ, ಬೇಡವೋ ಎಂಬಂತೆ ತಿಂದಳು. ಹೀಗೆಯೇ ವೆಂಕಟೇಶ್, ಸಣ್ಣ-ಪುಟ್ಟ ವಿಚಾರಗಳಲ್ಲೂ ತಾನು ವ್ಯವಸ್ಥೆಯನ್ನು ವಿರೋಧಿಸುವ ನೇತಾರ ಎನ್ನುವ ರೀತಿ ಯಾಕೆ ವರ್ತಿಸುತ್ತಾನೋ ಎಂದು ಆತನ ಬಗೆಗೆ ಆಕೆಯಲ್ಲಿ ಕೋಪ ಮೂಡತೊಡಗಿತ್ತು. ಯಾವ ಪೋಲೀಸ್ ಠಾಣೆಯಲ್ಲಿ ಆತ ಸಿಕ್ಕಿ ಹಾಕಿಕೊಂಡಿರಬಹುದು? ಆತ ಅಲ್ಲಿ ಹೊಡೆತ ತಿಂದಿರಬಹುದೇ? ಇತ್ಯಾದಿಗಳ ಕಲ್ಪನೆಯಲ್ಲಿಯೇ ಗಂಗಾ ಹೆದರಿ ನಡುಗಿದ್ದಳು. ಸಾಯಂಕಾಲ ಸರ್ವರ್ ಕಾಫಿ, ಟಿಫನ್ ತಂದಿಟ್ಟಾಗ ತಿನ್ನಲು ಆಕೆಗೆ ಸಾಧ್ಯವೇ ಆಗಿರಲಿಲ್ಲ. ಹೀಗೆ ಇದ್ದಕ್ಕಿದ್ದ ಹಾಗೆ ದೆಹಲಿಯಿಂದ ಕಣ್ಮರೆಯಾದ ವೆಂಕಟೇಶನ ಸುತ್ತವೇ ಆಕೆಯ ಆಲೋಚನೆಗಳು ಸುತ್ತುವುವು. ಮಹಡಿಯಿಂದ ನಾಲ್ಕಾರು ಬಾರಿ ಕೆಳಗೆ ಇಳಿದು ಬಂದಳು. ಹೊರಗೆ ಹುಲ್ಲಿನ ಮೇಲೆ ಕುಳಿತಳು. ಮತ್ತೆ ಕೊಠಡಿಗೆ ಹೋದಳು. ಫೋನ್ ಹತ್ತಿರವೇ ಕುಳಿತು ನಿದ್ದೆ ಮಾಡಲು ಪ್ರಯತ್ನಿಸಿದಳು. ಯಾವುದೂ ಸಮಾಧಾನ ನೀಡಲಿಲ್ಲ. ಕೊನೆಗೆ ಆ ದಿನದ ಪತ್ರಿಕೆಯ ಮೂಲೆ ಮೂಲೆ ಶೋಧಿಸತೊಡಗಿದಳು. ಎಲ್ಲಿಯೂ ಏನೂ ಕಾಣಲಿಲ್ಲ. ಇಡಿಯ ದೆಹಲಿಯೇ ಪೋಲೀಸ್‌ಮಯವಾದಂತೆ ಆಕೆಗೆ ಭಾಸವಾಗತೊಡಗಿತ್ತು. ಅವಳ ಮನಸ್ಸಿನ ಕೇಂದ್ರ ಬಿಂದುವಿನಲ್ಲಿ ವೆಂಕಟೇಶ್, ದೆಹಲಿ, ಪೋಲೀಸ್ ಇವು ಮೂರೇ ಸುತ್ತ ತೊಡಗಿದ್ದವು. ಗಂಗಾಳಿಗೆ ಆಕೆಯೊಳಗೇ

ನಡೆಯುತ್ತಿದ್ದ ತುಮುಲಗಳಿಂದಾಗಿ ಹೊಟ್ಟೆ ತೊಳೆಸಿ ತಲೆ ತಿರುಗಿದಂತಾಗತೊಡಗಿತ್ತು. ನಾಳೆಯೂ ವೆಂಕಟೇಶ್ ಬಗ್ಗೆ ಗೊತ್ತಾಗದಿದ್ದರೆ ಏನು ಮಾಡುವುದು? ತಾನು ಹಾಲೆಂಡಿಗೆ ಹೋಗುವುದೇ, ಬೇಡವೇ? ಬೆಂಗಳೂರಿಗೆ ವಾಪಸ್ಸು ಹೋಗಿಬಿಡುವುದೇ? ಗೊತ್ತು, ಪರಿಚಯವಿಲ್ಲದ ಈ ಊರಿನಲ್ಲಿ ಹೇಗೆ ವೆಂಕಟೇಶನಿಗಾಗಿ ಹುಡುಕುವುದು? ಪೋಲೀಸ್ ಠಾಣೆಯಲ್ಲಿ ಆತನಿಗೆ ಏನಾದರೂ ಆಗಿಬಿಟ್ಟಿದ್ದರೆ? ಈ ಗಾಭರಿಯಲ್ಲಿಯೇ ತಾನು ಡೆನ್‌ಹಾಗ್‌ಗೆ ಹೋದರೆ ಮನಸ್ಸು ಸಮಾಧಾನದಿಂದ ಇರುತ್ತದೆಯೇ? ತಾನು ಶಾಂತವಾಗಿ ವಿಮಾನ ಹತ್ತಬಲ್ಲೆನೇ? ಕೊನೆಗೆ ಬೆಂಗಳೂರಿಗೆ ಪಾರ್ವತಿಯ ಆಫೀಸಿಗಾದರೂ ಫೋನಿಸಿ ಅವರ ಸಲಹೆ ಕೇಳಬೇಕು. ಹೇಗೆ ಸಮರ್ಥಿಸಿಕೊಂಡರೂ ವೆಂಕಟೇಶನಿಗೆ ಏನಾಗಿದೆ ಎಂದು ತಿಳಿಯದೇ ಹೇಗೆ ದೆಹಲಿ ಬಿಡುವುದು? ಗಂಗಾ ಕೊನೆಗೆ ತನಗೆ ತಾನೇ ಸಮಾಧಾನ ಮಾಡಿಕೊಳ್ಳುವಳು. ವೆಂಕಟೇಶ್ ತನಗೆ ನಾಳೆಯವರೆಗೆ ಫೋನಿನಲ್ಲಿ ಸಿಗದಿದ್ದರೆ ತಾನು ಹಾಲೆಂಡಿಗೆ ಹೋಗುವ ಕಾರ್ಯಕ್ರಮ ಸಧ್ಯಕ್ಕೆ ಕ್ಯಾನ್ಸಲ್ ಮಾಡುವುದು, ಇಲ್ಲಿಂದ ಬೆಂಗಳೂರಿಗೆ ಫೋನ್ ಮಾಡಿ ವಿಷಯ ತಿಳಿಸುವುದು ಇತ್ಯಾದಿ. ಈ ನಿರ್ಧಾರಕ್ಕೆ ಬಂದಾಗ ಗಂಗಾಳ ಮನಸ್ಸು ಸ್ಥಿಮಿತಕ್ಕೆ ಬಂತು. ಕಾಯುವುದು ಬಿಟ್ಟು ಸಧ್ಯಕ್ಕೆ ಏನೂ ಮಾಡಲಾರದ ಸ್ಥಿತಿ ಅವಳದಾಗಿತ್ತು. ರಾತ್ರಿ ಊಟ ಮಾಡಿದಳು. ಈ ಹೊತ್ತಿಗಾಗಲೇ ಆಕೆ ಸುಮಾರು ಬಾರಿ ವೆಂಕಟೇಶನ ಆಫೀಸಿಗೆ ಫೋನಿಸಿದ್ದಳು. ಆಫೀಸಿನವರೊಡನೆ ಎಲ್ಲರಲ್ಲಿಯೂ ತಾನು ಗಾಭರಿಯಾಗಿರುವುದಾಗಿ ಹೇಳಿ ಆತ ಬಂದೊಡನೆ ಫೋನಿಸಲು ಹೇಳಿದಳು. ಕೊನೆಗೆ ದಿಂಬಿಗೊರಗಿ ಮಂಚದ ಮೇಲೆ ಮಲಗಿದಾಗ ಆಕೆಗೆ ಹೊನ್ನೇಕೆರೆಯ ನೆನಪಾಗತೊಡಗಿತ್ತು. ಗಂಜಲ ವಾಸನೆ ಬರುವ ಕೊಠಡಿಯ ನೆನಪು ಒತ್ತರಿಸಿ ಒತ್ತರಿಸಿ ಬರತೊಡಗಿತು. ತಾಯಿ, ಅತ್ತಿಗೆ, ಸತ್ತ ಸಾಧನ ಎಲ್ಲರೂ ಕಣ್ಣು ಮುಂದೆ ಸಾಲು ಸಾಲಾಗಿ ಬರತೊಡಗಿದರು. ಅಪ್ಪನಿಗೆ ಫಾರಿನ್ನಿಗೆ ಹೋಗುವ ವಿಚಾರ ಅವರ ಊಹೆಗೆ ನಿಲುಕದ್ದು. ಗಂಗಾಳ ಹಾಗೆಯೇ ಆಕಾಶದಲ್ಲಿ ಹಾರುವ ವಿಮಾನವನ್ನು ದೃಷ್ಟಿಯಿಟ್ಟು ನೋಡುವಷ್ಟು ಮಾತ್ರ ಅವರು ಪ್ರಶ್ನೆ ಹಿಗ್ಗಿಸಿ ನೋಡಬಲ್ಲರು. ಅದರ ಮುಂದೆ ಗಂಗಾ ಹೋಗಲಿರುವ ದೇಶ ಹೇಗಿದ್ದೀತೆಂದು ಊಹಿಸಲಿಕ್ಕೂ ಸಾಧ್ಯವಾಗದವರು. ಆದರೂ ಗಂಗಾ ಹೊನ್ನೇಕೆರೆ ಬಿಡುವಾಗ ತಂದೆ ಜಾತಿ/ಮಾಂಸ/ಕುಡಿತ/ಶೀಲ ಎನ್ನುವಂತಹ ಮಾತುಗಳನ್ನು ಮಾತ್ರ ಆಡಿದ್ದರು. ಗಂಗಾ ಮನಸೊಳಗೇ ನಕ್ಕಿದ್ದಳು. ತಂದೆ ಮಾತನಾಡುವ ಜವಾಬ್ದಾರಿಯಿಂದ ಮಾತನಾಡಿದ್ದನು. ಅಷ್ಟು ಬಿಟ್ಟರೆ ಬೇರೇನನ್ನೂ ಹೇಳಲಿಕ್ಕೆ ಆತನಿಗೆ ತೋಚಿರಲಿಲ್ಲ. ಇದ್ದಕ್ಕಿದ್ದಂತೆ ಅಪ್ಪನಿಗೆ ಗಂಗಾ ತಮಗೆ ನಿಲುಕದವಳು ಎನ್ನಿಸಿರಬೇಕು. ತಮಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲದವಳು ಎನಿಸಿರಬೇಕು. ಅಷ್ಟು ಸುಸಜ್ಜಿತವಾದ ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಕುಳಿತು ಹೀಗೆಲ್ಲ ಯೋಚಿಸುವ ಗಂಗಾಗೆ ಹೊನ್ನೇಕೆರೆಯ ಸಂಬಂಧಗಳೇ ಬೆಚ್ಚಗೇ ಎನಿಸತೊಡಗಿತು. ಇಲ್ಲಿ ಹೊಡೆಯುವ ಸೆಂಟ್ ವಾಸನೆಗಿಂತ ತಮ್ಮ ಅಡಿಗೆ ಮನೆಯ ಒಳಗೂ ಬರುತ್ತಿದ್ದ ಗಂಜಲದ ವಾಸನೆ ಆತ್ಮೀಯವಾಗಿತ್ತೇನೋ ಎಂದು ಆಕೆಗೆ ಅನ್ನಿಸತೊಡಗಿತು. ಇದ್ದಕ್ಕಿದ್ದಂತೆ ಒಬ್ಬ ವ್ಯಕ್ತಿಯನ್ನೇ ನುಂಗಿ ಬಿಡುವ ಪೋಲೀಸ್ ರಾಜಕೀಯದ ಈ ಡೆಲ್ಲಿಗಿಂತ ನೇರವಾದ ಸಂಬಂಧಗಳಿರುವ ಹೊನ್ನೇಕೆರೆಯೇ ಎಷ್ಟೋ ಮಧುರ ಎನಿಸತೊಡಗಿತು ಗಂಗಾಗೆ. ಮೆಲ್ಲನೆ ಬಾಗಿಲು ತಟ್ಟಿದ ಶಬ್ದವಾದಾಗ ಗಂಗಾ ಸರ್ವರ್ ಇರಬೇಕು ಅಂದುಕೊಂಡು 'Yes' ಅಂದಳು. ವೆಂಕಟೇಶ್! ಗಂಗಾ ಜಿಗಿದು ಎದ್ದಳು. ಬಾಗಿಲ ಬಳಿ ಹಾರಿ ವೆಂಕಟೇಶನ ಕೈಯನ್ನು ಭದ್ರವಾಗಿ ಹಿಡಿದುಕೊಂಡಳು. "ನೀನು ಬದುಕಿದ್ದೀಯ!" ಎಂಬ ಉದ್ಗಾರದೊಂದಿಗೆ ಅವನ ಬೆನ್ನಿಗೆ ಜೋರಾಗಿ ಗುದ್ದಿದಳು. "ವೆಂಕಟೇಶ್, ನಿನ್ನನ್ನು ಮತ್ತೆ ಕಾಣುತ್ತೇನೋ, ಇಲ್ಲವೋ ಎಂಬ ಭಯ ನನ್ನನ್ನು ಆವರಿಸಿಕೊಂಡು ಬಿಟ್ಟಿತ್ತು. ನಿನ್ನನ್ನು ಕಾಣದೇ ಬಹುಶಃ ನಾನು ಡೆಲ್ಲಿಯಿಂದ ಕಾಲ್ತೆಗೆಯುತ್ತಿರಲಿಲ್ಲ" ಎಂದಳು. ಗಂಗಾಳ ಕಣ್ಣಂಚಿನಲ್ಲಿ ಕಂಡೂ

ಕಾಣದ ಹಾಗೆ ನೀರಾಡಿದ್ದು ಕಂಡು ವೆಂಕಟೇಶ್‌ಗೆ ಆಕೆಯ ಬಗ್ಗೆ ಆತ್ಮೀಯತೆ ಅನ್ನಿಸಿತು. ಹೀಗೆ ಮಾನವೀಯ ಸಂಬಂಧಕ್ಕಾಗಿ ತಡಕಾಡುವ ಹೊನ್ನೇಕೆರೆಯ ಈ ಪುಟ್ಟ ಹುಡುಗಿಯ ಹೃದಯವನ್ನು ದೆಹಲಿಯಲ್ಲಿ ಎಲ್ಲಿ ಹುಡುಕಲಿ ಎನಿಸಿದ್ದಕ್ಕೋ ಏನೋ ಅವನ ಮನಸ್ಸು ಒಮ್ಮಿಂದೊಮ್ಮೆಗೇ ಮುದುಡಿತು. ಕಾತರಿಸಿ, ನಿದ್ದೆಯಿಲ್ಲದೇ ಅಷ್ಟೊಂದು ಸಲ ಫೋನಾಯಿಸಿದ ಈ ಹುಡುಗಿಯ ಬೆಚ್ಚನೆಯ ಭಾವನೆಯನ್ನು ಬದುಕಿನಲ್ಲಿ ಎಲ್ಲಿ ಹುಡುಕುವುದು? ಹೀಗೇ ಏನೇನೋ ಭಾವನೆಗಳಲ್ಲಿ ವೆಂಕಟೇಶ್ ಹೆಚ್ಚು ಹೊತ್ತು ಮಾತನಾಡಲೇ ಇಲ್ಲ. ಗಂಗಾಗೆ ತಲೆಯ ಮೇಲಿನ ಭಾರವೆಲ್ಲ ಕಳಚಿ ಹೋದಂತಾಗಿ ಈಗ ದೆಹಲಿ ಇದ್ದಕ್ಕಿದ್ದಂತೆ ಪ್ರಿಯವಾಗಿ ಕಾಣಿಸತೊಡಗಿತ್ತು. ಈ ಊರು ತಾನು ಅಂದುಕೊಂಡಷ್ಟು ಕ್ರೂರವಾಗಿಲ್ಲ ಎಂದೂ ಆಕೆಗೆ ಅನ್ನಿಸತೊಡಗಿತು.

ವೆಂಕಟೇಶ್ ಬಿಯರ್‌ಗೆ ಆರ್ಡರ್ ಮಾಡಿದ. ಬಹಳ ಸೀರಿಯಸ್ ಆಗಿರುವವರ ತರಹ ಸುಮ್ಮನೇ ಇದ್ದ. ಯಾವುದೋ ಯೋಚನೆಗಳಲ್ಲಿ ಆವೃತನಾದಂತೆ ಆತ ಕಾಣಿಸುತ್ತಿದ್ದ. ವೆಂಕಟೇಶ್ ಸಾಮಾನ್ಯವಾಗಿ ಸುಮ್ಮನಿರುವವನೇ ಅಲ್ಲ. ಏನಾದರೂ ಮಾತನಾಡುತ್ತಿರುತ್ತಾನೆ. ಕೊನೆಗೆ ತಲೆಹರಟೆಯನ್ನಾದರೂ ಮಾಡುತ್ತಾನೆ. ಬಿಯರ್ ಕುಡಿಯುತ್ತಾ ಕುಡಿಯುತ್ತಾ ವೆಂಕಟೇಶ್ ಮಾತನಾಡಲು ಪ್ರಾರಂಭಿಸಿದ್ದ. 'ಮಾನವೀಯ ಸಂಬಂಧಗಳನ್ನು ಹತ್ತಿರದ ಗೆಳೆಯ/ಗೆಳತಿಯರಲ್ಲಿ ನನ್ನ ಜೀವನದ ಭಾಗಗಳನ್ನು ಹಂಚಿಕೊಳ್ಳುವುದರಲ್ಲಿ ಹುಡುಕುತ್ತಿದ್ದೇನೆ, ಇದು ನನಗೆ ಪಲಾಯನ ಸೂತ್ರ ಎನಿಸುವುದಿಲ್ಲ. ಸಾಹಿತ್ಯದ ಅಥವಾ ಸಿನಿಮೀಯ ಪಾತ್ರದೊಂದಿಗೆ ಹೋಲಿಸಿಕೊಂಡು ನನ್ನ ದುರಂತವನ್ನೂ, ದೌರ್ಬಲ್ಯವನ್ನೂ ವೈಭವೀಕರಿಸಿಕೊಳ್ಳುವ ಪ್ರಯತ್ನವೂ ಇಲ್ಲ. ಯಾಕೆ ಹೀಗೆ ಮಾಡ್ತೀಯ ಅಂತ ನೀನು ಕೇಳಿದ್ರೆ ಗಂಗಾ ನನ್ನ ಹತ್ತಿರ ಉತ್ತರ ಇಲ್ಲ. ಅದು ಪ್ರಿಟೆನ್‌ಷನ್ ಅಂತ ಕಾಣಬಹುದು. ಬಹುಶಃ ತುಂಬಾ ಹತ್ತಿರವಾದ ಅನಿಸಿಕೆ ಅಂತಂದ್ರೆ ನನಗೆ ಏನಾಗುತ್ತಿದೆ ಅನ್ನೋದನ್ನ ಹತ್ತಿರದವರ ಕೆಲವರ ಬಳಿ ಹಂಚಿಕೊಳ್ಳೋ ಪ್ರಯತ್ನ ಮಾಡ್ತೀನಿ.

ಯಾಕೆ ಹಂಚಿಕೊಳ್ತೀಯ ಅಂತ ಉತ್ತರ ಹುಡುಕಿದ್ರೆ ನನ್ನ ಹತ್ತಿರ ಉತ್ತರ ಸಿಗಲ್ಲ. ಹಂಚಿಕೊಳ್ಳದೇನೇಯೇ ಒಬ್ಬ ವ್ಯಕ್ತಿ ತನ್ನ ಬದುಕನ್ನು ಬದುಕಲಿಕ್ಕೆ ಸಾಧ್ಯವಿಲ್ಲವಾ ಅಂತ ಕೇಳಿದ್ರೆ ಸಾಧ್ಯವಿರಬಹುದು ಅನ್ನಬಲ್ಲೆ. Then why this desire to share? May be, life can not be explained in a mere set of questions and answers. Reasoning is not life.

ಕಾಲಿಗೆ ಮುಳ್ಳು ಚುಚ್ಚಿದರೆ ಹಾ! ಅಂತೀವಿ. ಹತ್ತಿರದವರು ಸತ್ತರೆ ಅಳತೀವಿ. ಯಾಕೆ? ನಮ್ಮ ಅಳುವೇನೂ ಸತ್ತವರಿಗೆ ಜೀವ ತುಂಬಲ್ಲ. ಮತ್ಯಾಕೆ ಅಳತೀವಿ? It is just that you feel like crying and you cry? ವೆಂಕಟೇಶ್ ಬಿಯರ್ ಕುಡಿಯುತ್ತಲೇ ಇದ್ದ. ಯಾವುದೋ ಲೋಕದಲ್ಲಿ ಇದ್ದ ಹಾಗೆ ಯಾವುದೋ ಧ್ಯಾನದಲ್ಲಿರುವವನ ಹಾಗೆ ಅವನ ಮಾತುಗಳಿದ್ದವು.

'ದಾರಿಹೋಕರ ತಲೆ ಒಡೆದು ಬದುಕುತ್ತಿದ್ದ ಬೇಡನೊಬ್ಬ ಧ್ಯಾನ್ಯದಲ್ಲಿ ಆಸಕ್ತಿ ಹೊಂದಿ ಮೈಯ ಸುತ್ತ ಹುತ್ತ ಕಟ್ಟಿಕೊಂಡಾಗ ಆತ ಏನನ್ನು ಕಾಣುತ್ತಿದ್ದನು? ಆನಂತರ ಆತ ರಾಮಾಯಣ ಏಕೆ ಬರೆದ?' ವೆಂಕಟೇಶ ತನಗೆ ತಾನೇ ಮಾತನಾಡಿಕೊಳ್ಳುವ ರೀತಿಯಲ್ಲಿ ಮಾತನಾಡುತ್ತಿದ್ದನು. ಗಂಗಾ ಎದುರಿಗಿರುವ ಪರಿವೆಯೇ ಇತ್ತೋ? ಇಲ್ಲವೋ ಆತನಿಗೆ.

"ಅರಮನೆಯ ವಿಲಾಸದಲ್ಲಿ ಮುಳುಗಿದ್ದ ರಾಜಕುಮಾರ ರಾತ್ರೋ ರಾತ್ರಿ ತನ್ನ ಇಡಿಯ ಬದುಕನ್ನು ತೊರೆದು ಹೋಗುವಾಗ ಆತನ ತಲೆಯಲ್ಲಿ ತಾಕಲಾಡುತ್ತಿದ್ದ ಸಂಗತಿಗಳು ಯಾವುವು? ಬೋಧಿವೃಕ್ಷದ ಕೆಳಗೆ ಕೂತವನ ಒಳಗಣ್ಣಿಗೆ ಕಂಡಿದ್ದೇನು? ಸಾವಿಲ್ಲದ ಮನೆಯಿಂದ ಸಾಸಿವೆ ಕಾಳು ತಾ ಎನ್ನುವಾಗ ಆತನ ಭಾವನೆಗಳು ಏನಾಗಿದ್ದವು?" ಗಂಗಾಳತ್ತ ನೋಡಿದಾಗ ಗಂಗಾಳಿಗೇ ಹೇಳುತ್ತಿದ್ದೇನೆ ಎಂಬ ರೀತಿಯಲ್ಲಿ "ಅವರಿವರ್‍ಯಾಕೆ ಗಂಗಾ, ನಿನ್ನೆ ನೀನು ಹಾಲೆಂಡಿಗೆ ವಿಮಾನ ಹತ್ತಿಬಿಡುತ್ತೀಯ ಎನ್ನುವಾಗ ನಾನೇಕೆ ಹಾಗೆ ಮಾಡಿದೆ?"

Why I Preferred Police Station to house? Why I enjoyed that night? I told the constable who had taken me to the station, brother, I feel very much bored at home, and it is so long ever since I had gone to Police Station, please take me to your place, 'I don't know Ganga, and I don't ever seek answers, ಇದೆಲ್ಲ ನಿನ್ನ ಹತ್ರ ಹೇಳಬೇಕು ಅನ್ಸುತ್ತೆ, ಆದರೆ ಯಾಕೆ ಅಂತ ಗೊತ್ತಿಲ್ಲ.

ನನಗೆ ತಲೆ ತುಂಬಾ ಗೊಂದಲಗಳಿವೆ ಗಂಗಾ, ನನ್ನಜ್ಜನಿಗೆ ಪ್ರಶ್ನೆ ಆಗಿರದೇ ಇದ್ದ ಸಂಗತಿಗಳು ನನಗೆ ಪ್ರಶ್ನೆಗಳಾಗ್ತಾ ಇವೆ. ಅಲ್ಲಮಪ್ರಭುವಿಗೆ ಶೂನ್ಯ ಸಂಪಾದನೆ ಮೊಸರಿಂದ ಬೆಣ್ಣೆ ಹುಟ್ಟುವಷ್ಟು ಸಹಜ ಆಗಿತ್ತು. ಆದರೆ ನನಗೆ ಹುಟ್ಟುವುದೆಲ್ಲಾ ಪ್ರಶ್ನೆಗಳೇ! ನನ್ನ ಪ್ರಶ್ನೆಗಳಿಗೆ ನಾನು ಆತುಬಿದ್ದು ಬೆಣ್ಣೆಯ ಬಗ್ಗೆ ಕರಬುತ್ತೇನೆ ಅಷ್ಟೇ!

ಗಂಗಾ ನಿನಗೆ ಅನ್ನಿಸಲ್ವಾ? We know too much. That is our problem. We have forgotten how to be humble in life! ನೀನು ಹೇಳಿದ ಹಾಗೆ ದೆಹಲಿಯನ್ನು ಬಿಟ್ಟು ಬೆಂಗಳೂರಿಗೆ ವಾಪಸ್ಸು ಹೋಗುತ್ತೇನೆ. ಬೆಂಗಳೂರಿಗೆ ಹಿಂತಿರುಗಿದರೆ ನನಗೆ ಬದುಕು ದುರ್ಭರ ಅಲ್ಲ ಅಂತಾನೂ ಗೊತ್ತು. ಬದುಕನ್ನು ಆಶಾದಾಯಕವಾಗಿಸಿಕೊಳ್ಳುವತ್ತ ನನ್ನ ಮನಸ್ಸು ರೂಪುಗೊಂಡಿದೆ. ನನ್ನ ಮನಸ್ಸಿಗೆ ಒಂದು ನೆಲೆ ಬೇಕು ಎನಿಸತೊಡಗಿದೆ. ನನಗೇ ಒಂದು ನೆಲೆ ಬೇಕು ಎಂದೂ ಕೂಡಾ ಅನಿಸತೊಡಗಿದೆ. ಬಹುಶಃ ನಾಲ್ಕೈದು ವರ್ಷಗಳ ಹಿಂದೆ ನಾನು ಹೀಗೆ ಯೋಚಿಸುತ್ತಿರಲಿಲ್ಲ ಗಂಗಾ!"

ವೆಂಕಟೇಶ್ ನಿಧಾನವಾಗಿ ಅಳಲು ಪ್ರಾರಂಭಿಸಿದ್ದ. "I think of my mother, I want to have a comfortable life. ಈಗ ಕಾದಂಬರಿ/ಕವನ ಬರೆಯುವ ಬಗ್ಗೆ, ಸಿನೆಮಾ ಮಾಡುವ ಬಗ್ಗೆ ಅಥವಾ ಇನ್ಯಾವುದರ ಬಗ್ಗೆಯೋ ಯೋಚನೆ ಮಾಡುವ ಬದಲು ಮನಸ್ಸು ನೆಲೆಯ ಬಗ್ಗೆ ಯೋಚಿಸತೊಡಗಿದೆ. ಎಲ್ಲೋ ಒಂದು ಕಡೆ ನೆಲೆ ಬೇಕು ಅಂತ ನನ್ನ ಮನಸ್ಸು ಬಯಸುತ್ತೆ. ಸಾಹಸಮಯವಾಗಿ ಇರಬೇಕು ಅನ್ಸಲ್ಲ. ರಿಸ್ಕ್ ತೆಗೆದುಕೊಳ್ಳೋ ಮನೋಭಾವನೆಯೇ ಹೊರಟು ಹೋಗ್ತಾ ಇದೆ.

ಹೀಗೆಲ್ಲ ನಾನು ಮಾತನಾಡಿದರೆ ನಿನಗೆ ಅರ್ಥವಾಗುತ್ತಾ ಗಂಗಾ, There are no solutions in life. There is nothing you can resolve. There is no black & white situation.

ಈಗ ಗಂಗಾ ನೀನು ಯುರೋಪ್‌ಗೆ ಹೋಗ್ತೀಯ. ಯುರೋಪ್‌ನಲ್ಲಿ ಭಾರತೀಯತೆಗೆ, Spiritual dimension ಒಂದನ್ನು ಕಂಡುಹಿಡಿದು, ಬದುಕಿನಲ್ಲಿ ಬಲವಾದ ತಿರುವೊಂದಕ್ಕೆ ಕಾಲಿಡಬೇಕು

ಅಂತೀಯ. ನೀನು ಹೇಗೆ ಅಂದ್ರೆ ನಿನಗೆ ಬದುಕು ಹೀಗೇ ಇರಬೇಕು ಎನ್ನುವ ಕಲ್ಪನೆಗಳಿವೆ. ನೀನು ನಿನ್ನ ಪ್ರಿಯಕರರ ಬಗ್ಗೆಯೂ choosy ಆಗಿ ಇರ್ತೀಯ. ಆದ್ರೆ ನಾನು ಬದುಕನ್ನ ಹೀಗೆ ರೂಪಿಸಿಕೊಳ್ಳುತ್ತೇನೆ, ಅದನ್ನು ಮಾಡುತ್ತೇನೆ, ಇದನ್ನ ಮಾಡೋಲ್ಲ, ಅನ್ನೋದು ನನಗೇ ಯಾಕೋ honest ಅಂತ ಅನ್ನಿಸೋಲ್ಲ. ಯಾಕೆಂದ್ರೆ ಬದುಕಲ್ಲಿ ಹಾಗೆ ಆಗೋಲ್ಲ.

ನನಗೆ ಹಾಗೆ ಕುಡಿಯೋದನ್ನ ಬಿಡು ಅಂತೀಯ. ನೀನು ಎಲ್ಲಾ ಬಿಟ್ಟು ಬದುಕಿನ ಬೇರೆ ಏನೋ ಸತ್ಯಗಳನ್ನು ಹುಡುಕಬೇಕು ಅಂತೀಯ. ಕುಡಿಯೋದನ್ನ ಬಿಡೋದರ ಮೂಲಕ ನನ್ನ ಬದುಕನ್ನು ರೂಪಿಸಿಕೊಳ್ತೀನಿ ಅನ್ನೋದಾಗಲೀ, ಓದುವುದನ್ನ ಅಥವಾ ಬರೆಯುವುದನ್ನ ಗಂಭೀರವಾಗಿ ಆರಂಭಿಸೋ ಮೂಲಕ ಬದುಕನ್ನ ಹೊಸದಾಗಿ ಆರಂಭಿಸ್ತೀನಿ ಅನ್ನೋದು ನನಗೆ ಯಾಕೋ ಮನದ ಆಳದ ಮಾತುಗಳು ಅನ್ನಿಸೋಲ್ಲ.

ನನ್ನ ಈ ಗೊಂದಲಗಳ ನಡುವೆಯೇ ಗಂಗಾ ನಾನು ನೆಮ್ಮದಿ ಹುಡುಕೋಕೆ ಪ್ರಯತ್ನಿಸ್ತೀನಿ. ಒಂದು ವಾರ ಹಿಮಾಲಯಕ್ಕೆ ಹೋಗ್ತಾ ಇದೀನಿ. ಮಂಜಿನಲ್ಲಿ ಕೂತು, ತಲೆ ಮೇಲೆ ಸುರಿಯುವ ಮಂಜಿನಲ್ಲಿ ತಲೆಯ ಕಾವು ಕಡಿಮೆಯಾದೀತು ಎಂದು ಬಯಸಿ ಹೋಗುತ್ತಿದ್ದೇನೆ"

ವೆಂಕಟೇಶ್ ಮಾತಾಡುತ್ತಾ, ಮಾತಾಡುತ್ತಲೇ ಹಾಸಿಗೆಯ ಮೇಲೆ ನಿದ್ದೆ ಮಾಡಿಬಿಟ್ಟಿದ್ದನು. ಗಂಗಾ ಅವನನ್ನು ಎಬ್ಬಿಸುವ ಗೋಜಿಗೇ ಹೋಗಲಿಲ್ಲ. ಆಕೆಗೆ ನಿದ್ದೆಯೇ ಹಾರಿ ಹೋಗಿತ್ತು. ವಿಚಿತ್ರ ಮನುಷ್ಯ ಎಂದುಕೊಂಡಳು. ವೆಂಕಟೇಶ ಆಡಿದ ಮಾತುಗಳ ಹಿನ್ನೆಲೆಯಲ್ಲಿ ಆಕೆಯ ಜೀವನದ/ಭಾವನೆಯ ಪದರುಗಳನ್ನು ಬಿಚ್ಚಿ ಬಿಚ್ಚಿ ನೋಡಲು ಪ್ರಯತ್ನಿಸಿದಳು. ಹೀಗೇ ಏನೋ ಡೈರಿ ಬರೆಯುತ್ತಾ ಕುಳಿತ ಗಂಗಾಗೆ ತಾನು ಯಾವಾಗ ಟೇಬಲ್‌ಗೆ ತಲೆಕೊಟ್ಟು ಮಲಗಿದೆ ಎಂಬುದೇ ಅರಿವಿರಲಿಲ್ಲ.

* * * * *

ಗಂಗಾ ಕೊನೆಯದಾಗಿ ವೆಂಕಟೇಶನಿಂದ ಬೀಳ್ಕೊಂಡು ವಿಮಾನ ಹತ್ತಿದ್ದಳು. ತನ್ನ ಬದುಕಿನ ಹೊಸದೊಂದು ಅಧ್ಯಾಯ ಪ್ರಾರಂಭವಾಗಿದೆ ಎನ್ನುವುದರ ಜೊತೆಗೆ ಹಳೆಯ ಅಧ್ಯಾಯದ ಪುಟಗಳೂ ಜ್ಞಾಪಕಕ್ಕೆ ಬರತೊಡಗಿದ್ದವು. ವಿಮಾನ ಆಕಾಶದ ಕತ್ತಲ ಗರ್ಭ ಸೀಳಿ ಮೇಲೆ ಮೇಲೆ ಹೋಗುವಾಗ ಇದ್ದಕ್ಕಿದ್ದಂತೆ ಬಾಲ್ಯದಲ್ಲಿ ತಾವು ಹುಡುಕಿಕೊಂಡು ಹೋಗುತ್ತಿದ್ದ ನವಿಲುಗರಿಗಳ ಜ್ಞಾಪಕ ಗಂಗಾಳಿಗೆ ಬರುತ್ತದೆ. ವಿಮಾನ ಚಾಲಕಿಯರು ತಂದು ಕೊಟ್ಟಿದ್ದನ್ನೆಲ್ಲ ಗಂಗಾ ಮರುಮಾತಿಲ್ಲದೇ ತಿನ್ನುತ್ತಾಳೆ. ಒಂದು ರೀತಿಯ ಭಯ ಮಿಶ್ರಿತ ವಾತಾವರಣವಿದು ಎನಿಸತೊಡಗಿದಾಗ ನೆನಪಿನಾಳದಿಂದ ಏನೇನೋ ನೆನಪುಗಳು ನುಗ್ಗಿ ಬರತೊಡಗುತ್ತವೆ. ನೆನಪುಗಳ ಜಾಡಿಸಲು ಗಾಜುಗಳಿಂದ ಅಂತರಿಕ್ಷದ ಪ್ರಯಾಣದ ಮೇರೆಗಳನ್ನು ಅಳೆಯಲು ಪ್ರಯತ್ನಿಸುತ್ತಾಳೆ. ಕತ್ತಲಲ್ಲಿ ಏನೂ ಕಾಣಿಸದಿದ್ದಾಗ ಹಾಗೆಯೇ ಕುರ್ಚಿಯ ಹಿಂಭಾಗಕ್ಕೆ ಒರಗಲು ಪ್ರಯತ್ನಿಸುತ್ತಾಳೆ. ನೆನಪಿನಂಗಳದಲ್ಲಿ ಬೇಡವೆಂದರೂ ಏನೇನೊ ನೆನಪುಗಳು, ಚಿತ್ತಾರಗಳು, ಗೋಜಲುಗಳು.

ಗಂಗಾ ಆತನ ಕಡೆಗೇ ನೋಡುತ್ತಿದ್ದಾಳೆ. ಎರಡೂ ಕೈಗಳೂ ಅವಳ ಮುಖದಲ್ಲಿ ಆಳವಾಗಿ ಹುದುಗಿವೆ ಆತನ ಮೈಮೇಲಿನ ಕಪ್ಪು, ಕಪ್ಪು ಕಲೆಗಳು ಗೋಚರಿಸುತ್ತವೆ. ದೊಡ್ಡ ಮಚ್ಚೆಯ ತರಹದ ಕಲೆಗಳು. 'ಅದೇನು ನಿನ್ನ ಮೈ ಮೇಲೆ ಅಷ್ಟೊಂದು ಕಲೆಗಳು ಇವೆ' ಎನ್ನುತ್ತಾಳೆ. ತಮ್ಮಿಬ್ಬರ ನಡುವಿನ ಮೌನದ ಗೋಡೆಯನ್ನು ಒಡೆಯಲು ಗಂಗಾ ಹಾಗೆ ಮಾತನಾಡಿದ್ದಳು. ತನ್ನ ದೇಹದ ಅಸಮಧಾನವನ್ನು, ಮಾನಸಿಕ

ಗೊಂದಲವನ್ನು ಶಾಂತವಾಗಿ ಜೀರ್ಣಿಸಿಕೊಳ್ಳಲು ಹಾಗೆ ಏನಾದರೂ ಮಾತನಾಡುತ್ತಿದ್ದಳು ಅಥವಾ ಆ ವ್ಯಕ್ತಿಯೊಳಗಿನ ತುಮುಲ, ಘರ್ಷಣೆ, ಬಿಗುತನಗಳನ್ನು ಹೀಗೆ ಮಾತಿನ ಮೂಲಕ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು.

ತುಂಬಾ ದಿನದ ನಂತರ ನನ್ನ ದೇಹ ಈ ಅನುಭವಕ್ಕೆ ಬಿಚ್ಚಿಕೊಳ್ತಾ ಇರುವುದರಿಂದ ತಕ್ಷಣ explode ಆಗುತ್ತೆ.

....

'Do you feel bad?'

'ಇಲ್ಲ, ಪರವಾಗಿಲ್ಲ' - ಗಂಗಾಳದು ಹೀಗೆಯೇ ಯಾವಾಗಲೂ ಶಾಂತ ಉತ್ತರ.

'ನೀನು ಅವಸರ ಮಾಡಿ ಪ್ರೀತಿ ಮಾಡ್ತೀಯ, ಅದಕ್ಕೇ ನಿನಗೆ ನಿನ್ನ ದೇಹದ ಲಯಗಳನ್ನು ಕಂಡುಕೊಳ್ಳೋದಕ್ಕೆ ಸಾಧ್ಯವಾಗುವುದಿಲ್ಲ'

'ಇಲ್ಲ, ನಿನ್ನ ಜೊತೆ ನನಗೆ ಸಂಭೋಗದಂತಹ ಸಂಬಂಧ ಸಾಧ್ಯ ಆಗ್ತಾನೇ ಇಲ್ಲ, ನೀನು ಮೈ ತೆರೆದು ಬೆತ್ತಲಾಗಿ ನಿಂತಾಗ ನಾನು ಎರಡೂ ಸಲ ಸೋತಿದ್ದೇನೆ, ನನಗೆ ಗೊತ್ತಿಲ್ಲ...."

..... ಕಚ್ಚಿದ್ದ ಮೊಲೆಗಳು ನೋಯುತ್ತಿದ್ದವು. ದೇಹದ ಒಳಗೆಲ್ಲೋ ಏನೋ ಸಂಕಟ. ಗಂಗಾಗೆ ರಾತ್ರಿಯೆಲ್ಲಾ ಹೊರಳಾಡಿದ್ದ ನೆನಪು. ದೇವರೇ ಹಾಗೇಕೆ ತನ್ನ ದೇಹ ಯಾರಿಗೂ ಪ್ರತಿಕ್ರಿಯಿಸದೇ ಹೋದದ್ದು?

ಪಕ್ಕದಲ್ಲಿ ಮಲಗಿದ ಗೆಳೆಯ ಹೇಳುತ್ತಾನೆ.

'ನಿನ್ನ ದೇಹಾನ ನೀನು ಅಸರ್ಟ್ ಮಾಡಿಕೋ, ನಿನ್ನ expression ಕೆಲವು ಸಲ ನನಗೆ ಮೋಸ ಮಾಡುತ್ತೆ. ಇದು ನನ್ನ ಮತ್ತೊಂದು unsuccessful attempt. ನಿನ್ನ ದೇಹಕ್ಕೆ ಪ್ರತಿಕ್ರಿಯಿಸುವ ಗೆಳೆಯನನ್ನು ನೀನು ಕಂಡುಕೊಳ್ಳಬೇಕಷ್ಟೇ'.

'ಗಂಗಾ ನೀನು ರೀಚ್ ಆಗಲು ಪ್ರಯತ್ನಿಸಬೇಕು, ನನಗೆ ಸುಸ್ತಾಗುತ್ತಿದೆ, ನಾನು explode ಆಗುವ ಸ್ಥಿತಿಯಲ್ಲಿದ್ದೇನೆ'.

'ನಿನ್ನ ದೇಹದಲ್ಲಿಯೇ ಏನೋ ತೊಂದರೆ ಇರಬೇಕು, ವಿಚಾರಿಸು'

'ಸಾರಿ ಗಂಗಾ, ಬಹುಶಃ ಈ ವಾತಾವರಣ, ನಿನ್ನ expression ಗಮನಿಸಿದರೇ ನೀನೆಷ್ಟು ಉದ್ರಿಕ್ತಳಾಗಿದ್ದೀಯ ಎಂಬುದು ನನಗೆ ಗೊತ್ತು. ನಿನ್ನ ದೇಹದ ಚಲನ-ವಲನ ಗಮನಿಸಿಯೇ ಹೇಳಬಲ್ಲೆ, ಕ್ಷಮಿಸು'.

'ಗಂಗಾ ಯಾವುದಕ್ಕಾಗಿ ಅಲ್ಲದಿದ್ದರೂ, ನನ್ನ ಜೀವಮಾನದಲ್ಲಿ ಈ ರಾತ್ರಿಗಾಗಿ ನಿನಗೆ ಜೀವಮಾನವಿಡೀ ಋಣಿಯಾಗಿರುತ್ತೇನೆ'.

ಗಂಗಾ ವಿಮಾನದ ಕುರ್ಚಿಯ ಮೇಲೆ ಕುಳಿತಲ್ಲಿಯೇ ಕೊಸರಾಡುತ್ತಾಳೆ. ಯಾರ ಮೇಲೂ ಸಿಟ್ಟು ಬರುವುದಿಲ್ಲ. ಮದುವೆಯ ನಂಬಿಕೆ ಮುರಿದು ಹಾಕಿದ ರವಿಯ ಮೇಲೆ ತನಗೆಷ್ಟು ನಂಬಿಕೆ ಇದೆ?

ಹಲವಾರು ಸಂಬಂಧಗಳಲ್ಲಿ ಏನೇನೋ ಸತ್ಯಗಳನ್ನು ಹುಡುಕಿ ಹೋಗಬೇಕೆನ್ನುವ ಛಾತಿಯಾದರೂ ತನಗೇಕೆ? ಈ ವ್ಯವಸ್ಥೆಯ ಮೇಲಿನ ಸಿಟ್ಟಿಗೆ ತಾನು ಹೀಗೆಲ್ಲ ಮಾಡುತ್ತೇನೆಯೇ? ಬದುಕನ್ನು ಹೀಗೆ ಗ್ರಹಿಸಿಕೊಳ್ಳುತ್ತಾ, ಏನೇನೋ ಸತ್ಯಗಳನ್ನು ಗ್ರಹಿಸುತ್ತೇನೆ ಎಂದು ಹೊರಟ ತಾನು ಇಂದು ನಿಂತುದಾದರೂ ಎಲ್ಲಿ?

ಗಂಗಾ ಬೆಚ್ಚಿ ನಡುಗುತ್ತಾಳೆ. ಈ ಅಲೆಮಾರಿತನ? ಈ ಒಂಟಿತನ? ಆತ ಹೇಳುತ್ತಾನೆ, 'ಬರಹಗಾರರಲ್ಲಿ ಒಂದು ಹುಚ್ಚಿರುತ್ತದೆ. ಹೀಗೇ ಸಂಬಂಧಗಳಲ್ಲಿ ತೊಡಗಿಸಿಕೊಳ್ಳುತ್ತಾ ಅನುಭವವನ್ನು ಕಲೆ ಮಾಡಿಬಿಡುತ್ತಾರೆ. ನನ್ನನ್ನು 'ಗಿನಿ ಪಿಗ್' ಆಗಿ ಬಳಸಿಕೊಳ್ಳಬೇಡ'.

ಗಂಗಾ ಹೇಳುತ್ತಾಳೆ, 'ಅದು ನನಗೆ ಗೊತ್ತಿಲ್ಲ. ಆದರೆ ನನ್ನ ಬದುಕಿನ ಆಯಾಮ ನನಗೆ ಹಲವಾರು ಸತ್ಯದ ಬಾಗಿಲು ತೆರೆಸಿದ್ದರೆ, ತನ್ನನ್ನು ಬೆಚ್ಚಿಸಿದ್ದರೆ, ಬರೆಯುವುದು ನನಗೆ ಅನಿವಾರ್ಯ. ನೀನೇಕೆ ಗಿನಿ ಪಿಗ್ ಎಂದು ಭಾವಿಸಬೇಕು? ಬರೆಯಬೇಕೆಂದೇ ನಿನ್ನೊಟ್ಟಿಗೆ ಮಲಗಲಿಲ್ಲ. ನನ್ನ ದೇಹ ಪ್ರತಿ ಸಲ ಸೂಕ್ಷ್ಮವಾಗಿಬಿಡುತ್ತದೆ. ಪ್ರತಿ ಸಲ ಸಂಕಟಕ್ಕೊಳಗಾಗಿಬಿಡುತ್ತದೆ. ಪ್ರತಿ ಸಲ ಯಾವುದೇ ಆನಂದ ಕಂಡುಕೊಳ್ಳಲಾಗಲಿಲ್ಲ. ಅದೆಲ್ಲ ಬರೆಯಬೇಕು ಅನ್ನಿಸಿದರೆ ಯಾಕೆ ಬರೆಯಬಾರದು? ನಿನ್ನನ್ನೇ ಗಿನಿ ಪಿಗ್ ಮಾಡಿಕೊಳ್ಳಬೇಕೆಂಬುದು ನನ್ನ ಉದ್ದೇಶವಲ್ಲ. ನಿನ್ನ ಆಲೋಚನೆಗಳು, ನಿನ್ನ ವ್ಯಕ್ತಿತ್ವದ ಘರ್ಷಣೆಗಳು, ನಿನ್ನ ದ್ವಂದ್ವಗಳು ಯಾವುದೇ ಪಾತ್ರ ರೂಪದಲ್ಲಿ ಬಂದರೆ ಅದನ್ನು ಬರೆಯದೇ ಇರಲಾರೆ. ನಿನ್ನನ್ನು ಬಳಸಿಕೊಳ್ಳಬೇಕೆಂದು ಅಲ್ಲ, ನಿನ್ನ ಮೇಲಿನ ಸಿಟ್ಟಿಗೋಸ್ಕರವೂ ಅಲ್ಲ, ನನ್ನ ಬದುಕು ನನಗೆ ಏನೇನೋ ಸತ್ಯ ಕಲಿಸಿರಬಹುದು, ಹೊಸದಕ್ಕೆ ಒಡ್ಡಿಕೊಳ್ಳುವುದೆಂದರೆ ಸಂಘರ್ಷಕ್ಕೆ ಒಡ್ಡಿಕೊಳ್ಳುವುದು ಎಂದುಕೊಂಡಿದ್ದೇನೆ. ಈ ಸಂಘರ್ಷ ಗುಂಪುಗಾರಿಕೆಯಲ್ಲಿ ಕಂಡಿರಬಹುದು, ವೈಯಕ್ತಿಕ ಹಂತದಲ್ಲಿ ಇರಬಹುದು, ಇವೆರಡೂ ಬೇರೆ ಬೇರೆಯಾಗಿ ನನ್ನ ಮಟ್ಟಿಗೆ ಕಾಣುತ್ತಿಲ್ಲ. ವೈಯಕ್ತಿಕವಾಗಿರುವುದು ಚಳುವಳಿಗಳಲ್ಲಿ ಪ್ರತಿಬಿಂಬಿಸಬಹುದು. ಚಳುವಳಿಯಲ್ಲಿರುವುದು ವೈಯಕ್ತಿಕವಾಗಿ ಪ್ರತಿಬಿಂಬಿಸಬಹುದು. ಈ ಎಲ್ಲಾ ರಚನೆಗಳೊಳಗೆ ನೀನೊಂದು ಪಾತ್ರವಾಗಿ ಬರಬಹುದು. ನೀನೇ ಈ ಪಾತ್ರವೆಂದು ನಾನ್ಯಾರಿಗೂ ಹೇಳಲಾರೆ, ಗುಮಾನಿಗಳಿದ್ದರೆ ಉತ್ತರಿಸಲಾರೆ'.

ಇದೆಲ್ಲ ನೆನಪಾದಾಗ ಗಂಗಾಗೆ ತಾಸುಗಟ್ಟಲೇ ಹೋಟೆಲ್‌ನಲ್ಲಿ ಒಬ್ಬನೇ ಮಾತನಾಡಿದ ವೆಂಕಟೇಶನ ಜ್ಞಾಪಕವಾಗುತ್ತದೆ. ವೆಂಕಟೇಶ್ ಆ ಕ್ಷಣಕ್ಕೆ ನನಗೆ ಅನಿಸಿಬಿಡುತ್ತದೆ ಎಂದು ಹೇಳುವ ಆತನ ಮನಸ್ಸಿನ ಪೊಳ್ಳುತನ ಗಂಗಾಳಿಗೆ ತಟ್ಟುತ್ತದೆ. ಕೆಲವು ಸಲ ಅದೆಲ್ಲ ಚೀಪ್ ಎಮೋಶನ್ಸ್ ಎಂದೂ ಕೂಡಾ ಆಕೆಗೆ ಭಾಸವಾಗುತ್ತದೆ. 'ನಿನಗೆ ಭಾವನೆಗಳೇ ಇಲ್ಲ' ಎಂದು ವೆಂಕಟೇಶ್ ರೇಗಿಸುವುದನ್ನು ಗಂಗಾ ನೆನಪಿಸಿ ಕೊಳ್ಳುತ್ತಾಳೆ. ತನ್ನದಲ್ಲದ ವ್ಯಕ್ತಿತ್ವಕ್ಕೆ ತಾನು ಚಾಚಿಕೊಳ್ಳುವುದಾದರೂ ಹೇಗೆ? ಎಂದುಕೊಳ್ಳುತ್ತಾಳೆ.

ಕುಡಿದು ಮತ್ತೇರಿ ಮಲಗಿದ್ದ ದಿನವೊಂದು ಆಕೆಯ ಜ್ಞಾಪಕಕ್ಕೆ ಬರುತ್ತದೆ. ಮಲಗುವಾಗ ಅವನಿಗೆ ದಯವಿಟ್ಟು ಬೇರೆ ಹಾಸಿಗೆಯಲ್ಲಿ ಮಲಗು ಎಂದು ಹೇಳಬೇಕೆನಿಸುತ್ತದೆ. ತನಗೆ ಸುಸ್ತಾಗಿದೆ. ಅದಕ್ಕಿಂತ ಹೆಚ್ಚಾಗಿ ಮಾನಸಿಕವಾಗಿ ಬಳಲಿದ್ದೇನೆ. ನನ್ನ ಪಾಡಿಗೆ ನನ್ನ ಬಿಟ್ಟು ಬಿಡು, ಹಾಗೆ ಹೇಳಿದರೆ ಅವನಿಗೆ ನೋವಾಗುತ್ತದೆ ಎಂದು ಗಂಗಾಗೆ ಗೊತ್ತು. ದೈಹಿಕ ಸಂಬಂಧ ನಿರ್ಲಕ್ಷಿಸುವುದು ಆತನನ್ನು ಪ್ರೀತಿಸದಿರುವುದಕ್ಕಾಗಿ ಎಂಬಂತಹ ಕೀಳರಿಮೆಯೊಂದು ಆತನಲ್ಲಿ ಹುಟ್ಟಿಕೊಳ್ಳುತ್ತದೆ. ಅವನನ್ನು ನೋಯಿಸಲಿಕ್ಕೆ ಆಕೆಗೆ ಮನಸ್ಸು ಬರುವುದಿಲ್ಲ. ಬೇಕೆಂದೇ avoid ಮಾಡುತ್ತೇನೆ ಎಂದು ಆತನಿಗೆ ಅನ್ನಿಸಬಹುದು. ಗಂಗಾ ಆತನು ಒಡ್ಡಿದ ಕೈಗೆ ಕೈಗೂಡಿಸುತ್ತಾಳೆ. ತನ್ನ ಮೈ ಬಿಸಿಯಾಗಿಸುವ ಪ್ರಯತ್ನ ಮಾಡುತ್ತಾಳೆ. ಒಮ್ಮೆಲೇ ಅವನ ಮೈ ಮೇಲೆ ಎರಗಿ ಕಾಲುಗಳನ್ನು ಚಾಚುತ್ತಾಳೆ. ಕುಡಿದದ್ದು ತಲೆಯಲ್ಲಿದೆ

ಮೈ ಬಿಸಿಯಾಗತೊಡಗಿದೆ. ಅವನ ತುಟಿಗಳನ್ನು ಬಿಗಿಯಾಗಿ ಒತ್ತಿ ಮುದ್ದಿಸುತ್ತಾಳೆ. ಕತ್ತಲು...... ಹಾಸಿಗೆ ಬಿಟ್ಟು ತಾನು ಎಲ್ಲೆಲ್ಲಿಯೋ ಸರಿಯುತ್ತಿರುವುದು ಗಂಗಾಗೆ ಅರ್ಥವಾಗುತ್ತದೆ. ಮೊದಲು ತಲೆ ಇದ್ದಲ್ಲಿ ಈಗ ಕಾಲುಗಳು. ಗಂಗಾಳ ಮೈ ಜ್ವರ ಬಂದವರ ಹಾಗೆ ಸುಡುತ್ತಿದೆ. ಆತ ತಣ್ಣಗಿದ್ದಾನೆ. ಅವನ ಕಾಲುಗಳ ಬೆರಳುಗಳ ಸಂಧಿಯಲ್ಲಿ ಅವನ ಮೈಯಿನ.ಕಾವನ್ನು ಪರೀಕ್ಷಿಸಲು ಆಕೆ ಪ್ರಯತ್ನಿಸುತ್ತಾಳೆ. ಆತನನ್ನು ಹೆಸರಿಡಿದು ಕರೆಯುತ್ತಾಳೆ. ಇದ್ದಕ್ಕಿದ್ದ ಹಾಗೆ ಆತ ಅಳಲು ಪ್ರಾರಂಭಿಸುತ್ತಾನೆ. ಗಂಗಾ ಏನಾಯಿತು? ಎಂದು ಲೈಟ್ ಹಾಕಿದರೆ ಆತನ ಮುಖ ಸಪ್ಪಗಾಗಿದೆ. 'ಸಾರಿ' ಎಂದು ಮತ್ತೆ ಬಿಕ್ಕುತ್ತಾನೆ. 'ಪರವಾಗಿಲ್ಲ, ಮಲಗು ಬಾ' ಎಂದು ಗಂಗಾ ಕೈ ಹಿಡಿದು ಎಳೆಯುತ್ತಾಳೆ. ಮತ್ತೆ ಮತ್ತೆ ಆತ ಬಿಕ್ಕಿ ಬಿಕ್ಕಿ ಅಳುತ್ತಾನೆ. ಆಕೆಗೆ ಕಿರಿ ಕಿರಿಯಾಗುತ್ತದೆ. 'ನನಗೆ ತೊಂದರೆಯಿಲ್ಲ, ನನ್ನ ಮನಸ್ಸು ನನ್ನ ದೇಹವನ್ನು ನಿಯಂತ್ರಿಸುತ್ತದೆ, ಬಾ' ಎನ್ನುತ್ತಾಳೆ. ಆತ ಸುಮ್ಮನೇ ಕೂರುತ್ತಾನೆ. ಆತನನ್ನು ಸಮಾಧಾನ ಮಾಡುವ ತಾಳ್ಮೆ-ಶಕ್ತಿಗಳು ತನ್ನಲ್ಲಿ ಉಳಿದಿಲ್ಲವೆಂದೇ ಗಂಗಾಗೆ ಅನ್ನಿಸತೊಡಗುತ್ತದೆ. ಕಾವೇರಿ-ಸರಕ್ಕನೇ ಬಿಸಿ ಇಳಿದ ಮೈಯಲ್ಲಿ ಗಂಗಾಗೆ ಮತ್ತಷ್ಟು ಸುಸ್ತಾದ ಹಾಗೆ ಅನಿಸತೊಡಗುತ್ತದೆ. ಕುಡಿದದ್ದು ತನ್ನ ತಲೆಗೇರಿಬಿಟ್ಟಿದೆಯೇನೋ ಎಂದು ಆಕೆಗೇ ಅನ್ನಿಸತೊಡಗುತ್ತದೆ. ಕೊನೆಗೆ ಮಾತನಾಡದೇ ಕುಳಿತ ಆತನಿಗೆ ಹೇಳುತ್ತಾಳೆ, 'ನೋಡು, ನಾನು ಮಲಗುತ್ತೇನೆ, ನನಗೆ ತುಂಬಾ ಸುಸ್ತಾಗಿದೆ, ಕಣ್ಣುಗಳು ಎಳೆಯುತ್ತವೆ, ಏನೆಲ್ಲ ಯೋಚಿಸಬೇಡ, ಬಂದು ಮಲಗು' ಎಂದು ಹಾಸಿಗೆಯ ಮೇಲೆ ಮಲಗಿ ಬೆಡ್‌ಶೀಟ್ ಎಳೆದುಕೊಳ್ಳುತ್ತಾಳೆ.

ಗಂಗಾಗೆ ನಿಧಾನವಾಗಿ ನಿದ್ರೆ ಬರತೊಡಗಿದೆ. ದೇಹದ ಎಲ್ಲಾ ಆಯಾಸವನ್ನೂ ನಿದ್ರೆ ಹೀರಿಕೊಂಡಂತೆ ಅನ್ನಿಸಿದಾಗ ಆಕೆಗೆ ನಿದ್ರೆಯ ಬಗ್ಗೆಯೇ ಕೃತಜ್ಞತೆ ಮೂಡುತ್ತದೆ. ಹೀಗೆ ಎಷ್ಟು ಹೊತ್ತು ದೀರ್ಘ ನಿದ್ರೆ ಮಾಡಿದ್ದಳೋ ಆಕೆಗೇ ತಿಳಿಯದು. ಆತ ಕೈ ಹಿಡಿದು ಎಳೆದಾಗ ಆಕೆಗೆ ಕಣ್ಣು ಬಿಡಲು ಸಾಧ್ಯವಾಗುವುದಿಲ್ಲ. ಕಣ್ಣು ರೆಪ್ಪೆಗಳು ಒಂದಕ್ಕೊಂದು ಅಂಟಿಕೊಂಡಂತೆ ಭಾಸವಾಗತೊಡಗುತ್ತದೆ. ಹಾಗೆಯೇ ಕಷ್ಟಪಟ್ಟು ಕಣ್ಣು ತೆರೆದರೆ ಆತ ಎದುರಿಗೆ ನಿಂತಿದ್ದಾನೆ - ಬೆತ್ತಲೆಯಾಗಿ. ಕತ್ತಲಲ್ಲೂ ಆತ ಎಕ್ಸೈಟ್ ಆಗಿರುವುದು ಆಕೆಯ ಅನುಭವಕ್ಕೆ ಬರುತ್ತದೆ. ಒಮ್ಮೆಲೇ ಗಂಗಾಗೆ ಸಿಟ್ಟು ನೆತ್ತಿಗೇರಿ ಬರುತ್ತದೆ. ಅವನನ್ನು ಪಕ್ಕಕ್ಕೆ ದೂಡಿ 'ದೂರ ಹೋಗು, ನಿದ್ರೆಯಲ್ಲಿ ನಾನು ಬಹಳಷ್ಟು ಸುಖವಾಗಿದ್ದೇನೆ' ಎಂದು ಹೇಳಬೇಕು ಅನಿಸುತ್ತದೆ. ಗಂಗಾ ಏನನ್ನೂ ಹೇಳುವುದಿಲ್ಲ. ಅವನಿಗೆ ಏನನ್ನು ಹೇಳಿದರೂ ನೋವಾಗುತ್ತದೆ. ತಾನು ಅವನಿಗೆ ಅವಮಾನ ಮಾಡುತ್ತಿದ್ದೇನೆ ಅನಿಸುತ್ತದೆ. ರಾತ್ರಿಯೆಲ್ಲಾ ಅಳುತ್ತಾನೆ, ನಿದ್ರೆಗೆಡುತ್ತಾನೆ. ಗಂಗಾ ಯಾಂತ್ರಿಕವಾಗಿ ನೈಟಿ ಬಿಚ್ಚುತ್ತಾಳೆ. ಕೂತುಕೊಂಡು ಅವನ ತೊಡೆಯ ಮೇಲೆ ತಲೆ ಇಡುತ್ತಾಳೆ. ತುಟಿಗಳನ್ನು ಕೂಡಿಸುತ್ತಾಳೆ. ಏನಾಗಿದೆ ಎನ್ನುವ ಮೊದಲೇ ಕೆಳಗುರುಳುತ್ತಾಳೆ. ಅವನಿಗೆ ಮೈಗೂಡಿಸುತ್ತಾಳೆ. ಆತ ಉಸಿರೆಳೆಯುತ್ತಿದ್ದಾನೆ. ಗಂಗಾಗೆ ಮೈಯೆಲ್ಲಾ ನೋವು ಎನಿಸುತ್ತದೆ. ಯೋನಿಯ ಒಳಗಿನ ನೋವು ಮೈಯೆಲ್ಲಾ, ದೇಹವೆಲ್ಲಾ ಆವರಿಸಿ ಆಕೆಗೆ ವಾಂತಿ ಮಾಡಬೇಕು ಎನಿಸುತ್ತದೆ. ಆತ ಪಕ್ಕಕ್ಕೆ ಮಲಗಿದಾಗ ಗಂಗಾ ತಿರುಗಿಯೂ ನೋಡುವುದಿಲ್ಲ. ಬೇಡವೆಂದರೂ ಆಕೆಯ ಕಣ್ಣುಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ತಾಯಿ ಇದ್ದಿದ್ದರೆ ಅವುಚಿಕೊಂಡು ಮಲಗಬಹುದಿತ್ತು ಎಂದುಕೊಳ್ಳುತ್ತಾಳೆ. ಚಿಕ್ಕವಳಿರುವಾಗ ತಾಯಿಯ ಹೊಟ್ಟೆಯನ್ನು ಅವುಚಿ ತಾನು ಮಲಗುತ್ತಿದ್ದುದು ಆಕೆಯ ಜ್ಞಾಪಕಕ್ಕೆ ಬರುತ್ತದೆ. ಆಕೆಗೆ ಕಣ್ಣಲ್ಲಿ ನೀರು ತುಂಬಿಕೊಂಡು ಬಿಕ್ಕಳಿಸುತ್ತಾಳೆ. ಆತ ತನ್ನನ್ನು ಪಕ್ಕಕ್ಕೆ ಎಳೆಯುತ್ತಾನೆ. 'ಸಾರಿ' ಎನ್ನುತ್ತಾನೆ. 'ನಿನ್ನ ನಿದ್ರೆ ಕೆಡಿಸಿದೆ' ಎನ್ನುತ್ತಾನೆ. ಗಂಗಾ ಏನೂ ಮಾತನಾಡುವುದಿಲ್ಲ. ಆತ ಆಕೆಯ ಮುಖವನ್ನು ತನ್ನ ಕಡೆ ಎಳೆದುಕೊಳ್ಳಲು ಪ್ರಯತ್ನಿಸಿದಷ್ಟೂ ಗಂಗಾ ವಿರುದ್ಧವಾಗಿಯೇ ಮುಖ ತಿರುಗಿಸುತ್ತಾಳೆ. ಅವನ ಹಿಡಿತದಿಂದ ತಪ್ಪಿಸಿಕೊಂಡು

ಬಾತ್ ರೂಂಗೆ ಹೋಗಲು ಸ್ವಿಚ್ ಹಾಕುತ್ತಾಳೆ. ನಡೆಯುವಾಗ ದೇಹಪೂರ್ತಿ ನೋವಿನಿಂದ ಕೂಡಿದಂತೆ ಅನಿಸುತ್ತದೆ. ತೊಡೆಗಳಲ್ಲಿ ನೋವು ನಿಗೂಢವಾಗಿ ಮನೆ ಮಾಡಿದಂತೆ ನಡೆಯಲಿಕ್ಕೇ ಕಷ್ಟವಾಗುತ್ತದೆ. ಇಡಿಯ ಮೈ ನೋವಿನಿಂದ ಉರಿಯುತ್ತಿದೆ. ತಣ್ಣೀರನ್ನು ಮೈ ಮೇಲೆ ಎರಚಿಕೊಳ್ಳುತ್ತಾಳೆ. ವಾಂತಿ ಮಾಡಿದರೆ ಮೈಯ ಸಂಕಟ ಕಡಿಮೆಯಾಗಬಹುದು ಎಂದು ಎಣಿಸಿ ನಾಲಿಗೆಗೆ ಕೈ ಹಾಕಿ ಉಜ್ಜುತ್ತಾಳೆ. ವಾಂತಿಯಾಗುವುದಿಲ್ಲ, ದೇಹದ ಕಣ ಕಣಗಳೆಲ್ಲ ಗಾಸಿಗೊಂಡಂತೆ ಆಕೆಗೆ ಭಾಸವಾಗತೊಡಗುತ್ತದೆ. ಮತ್ತೆ ಬಂದು ಮಲಗುತ್ತಾಳೆ. ನಿದ್ರೆ ಹತ್ತುವುದಿಲ್ಲ. ಮತ್ತೆ ಮತ್ತೆ ಹಾಸಿಗೆಯಲ್ಲಿ ಉರುಳುತ್ತಾಳೆ. ನಿದ್ರೆ ಹತ್ತುವುದಿಲ್ಲ.

ಸಂಬಂಧಗಳ ಮುಖಗಳ ಹುಡುಕುವ ಹಂತದಲ್ಲಿ ಕುಳಿತು ಯೋಚಿಸಿದರೆ ಗಂಗಾಗೆ ಏನೇನೋ ಹೊಳೆಯುತ್ತದೆ.

ಇಂದ್ರಜಿತ್ ತನ್ನ ಕತೆಯ ಬಗ್ಗೆ ಹೇಳಿದ್ದು, ಅವನೊಟ್ಟಿಗೆ ಮಾತನಾಡಿದ್ದು ಗಂಗಾಗೆ ಜ್ಞಾಪಕಕ್ಕೆ ಬರುತ್ತದೆ. ಆತನಿಗೆ ತಾನೊಬ್ಬ ಮಹಾ ಬುದ್ಧಿವಂತ ಎನ್ನುವ ಹಮ್ಮು, ಹುಡುಗಿಯರು ತನ್ನನ್ನು ಹುಡುಕಿಕೊಂಡು ಬಂದು ಮೈ ಮೇಲೆ ಬೀಳುತ್ತಾರೆ ಎನ್ನುವ ಧಿಮಾಕು. ಇಂದ್ರಜಿತ್ ಸಂಸ್ಕೃತಿ/ವ್ಯಕ್ತಿಯಾಗಿ ಕಂಡಾಗ ಇಲ್ಲಿ ತಾನು ಯಾರನ್ನು ಕನ್‌ಫ್ರಾಂಟ್ ಮಾಡುತ್ತಿದ್ದೇನೆ ಎಂದು ಆತನನ್ನೇ ಗಂಗಾ ಕೇಳಿದ್ದುಂಟು. ಸಂಸ್ಕೃತಿ-ವ್ಯಕ್ತಿಯಲ್ಲಿ, ವ್ಯಕ್ತಿ-ಸಂಸ್ಕೃತಿಯಲ್ಲಿ ಎಷ್ಟೊಂದು ಮಟ್ಟಿಗೆ ತಳಕು ಹಾಕಿಕೊಂಡಿರುತ್ತಾನೆ ಎಂದು ಈತನನ್ನು ಹಲವಾರು ಬಾರಿ ಪ್ರಶ್ನಿಸಿದ್ದಳು. ಮಾರ್ಕ್ಸ್‌ವಾದಿ ಇಂದ್ರಜಿತ್ individualನಿಂದ universe ಅಳೆ ಎನ್ನುತ್ತಾನೆ. 'I am a better man' ಎನ್ನುತ್ತಾರೆ. 'ನೀನು ನಿನ್ನ ಬರಹಗಳಲ್ಲಿ ಹಾಗೂ ಸಂಬಂಧಗಳಲ್ಲಿ ಸೆಕ್ಸ್‌ನ ರಾಜಕೀಯ ಮುಖದ ಮೇಲೆಯೇ ಒತ್ತು ಹಾಕುತ್ತೀಯ' ಎನ್ನುತ್ತಾನೆ. 'ಮತ್ತೇನು ಮಾಡಲಿ' ಎಂದು ಗಂಗಾ ಅಸಹಾಯಕಳಂತೆ ಕೇಳುತ್ತಾಳೆ. 'ಯಾವ ಮುಖದ ಹಿನ್ನೆಲೆಯಲ್ಲಿ ಈ ಸಂಸ್ಕೃತಿಯಲ್ಲಿ ಗಂಡು-ಹೆಣ್ಣಿನ ಸಂಬಂಧ ನಿರ್ಧಾರವಾಗಿದೆ? ಕೌಟುಂಬಿಕ ಚೌಕಟ್ಟಿನೊಳಗಡೆ ಗಂಡು-ಹೆಣ್ಣಿನ - ಗಂಡ/ಹೆಂಡತಿ ಸಂಬಂಧ ಹೇಗೆ ಯಾಂತ್ರಿಕವಾಗಿಬಿಡುತ್ತದೆ? ಮನೆಗೆಲಸ, ಮಗುವನ್ನು ಲಾಲಿಸುವ, ಪಾಲಿಸುವ ಕೆಲಸಗಳು ಹೆಂಗಸಲ್ಲಿ ಅಸಹಾಯಕತೆ ಹುಟ್ಟುಹಾಕುವುದಿಲ್ಲವೇ? ಯಾವ ರೀತಿಯ ಕೌಟುಂಬಿಕ ಚೌಕಟ್ಟು ಹೆಂಗಸಿನ ಬದುಕನ್ನು ಅರಳಲು ಬಿಡುತ್ತದೆ?'. ಹೀಗೆಯೇ ಸಿಟ್ಟಿನಿಂದಲೇ ಮಾತನಾಡುತ್ತಲೇ ಇಂದ್ರಜಿತ್ ಬಳಿ ಹೇಳುತ್ತಾಳೆ, 'ನಿಮ್ಮಂತಹವರ ಸಂಬಂಧಗಳಿಗೆ ಮುಖ ತಿರುಗಿಸುವುದೂ ಕಷ್ಟ ಇಂದ್ರಜಿತ್. ಏಕೆಂದರೆ ಸಂಸ್ಕೃತಿಯಲ್ಲಿ ಇರುವವರು ನೀವುಗಳೇ. ಬಿಟ್ಟುಬಿಡತೀವಿ ಅಂದ್ರೂ ಈ ಸಂಸ್ಕೃತಿಯ ಪ್ರವಾಹದಲ್ಲಿ ನಿಮ್ಮಂತಹವರನ್ನೇ ನಾವು ಭೇಟಿಯಾಗಬೇಕಾಗುತ್ತೆ. ನಾವು ಯಾವುದೋ ಮೂಲೆಯಲ್ಲಿ ಕುಳಿತು ಈ ಸಂಸ್ಕೃತಿ ಬಗ್ಗೆ ಮಾತನಾಡೋಕೆ ಆಗೋಲ್ಲ. ನಿಮ್ಮಂತಹವರ ಜೊತೆ ಮುಖಾಮುಖಿ ಯಾಗುವುದೇ ನಮಗೆ ಅನಿವಾರ್ಯ ಚಾರಿತ್ರಿಕ ಸತ್ಯ ಆಗುತ್ತೆ. ಮುಖಾಮುಖಿಯಾಗೋಲ್ಲ ಅಂದ್ರೂ ರಾಜಕೀಯ, ಸಾಂಸ್ಕೃತಿಕ ಒತ್ತಡಗಳು ಮುಖಾಮುಖಿಯಾಗೋದನ್ನ ಅನಿವಾರ್ಯ ಸತ್ಯವಾಗಿಸುತ್ತೆ'. ಹೀಗೇ ಏನೇನೋ ಗಂಗಾ ಕೋಪದಿಂದಲೇ ಇಂದ್ರಜಿತ್ ಹತ್ತಿರ ಮಾತನಾಡಿದ ನೆನಪು. ನಿಂತುಕೊಂಡ ಇಂದ್ರಜಿತ್ ವಿಧೇಯ ಹುಡುಗನ ರೀತಿ ಮಾತನಾಡುತ್ತಾನೆ. 'ನೀನು ಮಾತನಾಡುವುದನ್ನು ಕೇಳಿಸಿ ಕೊಳ್ಳುವವರಿಗೆ ಚೀಪ್, ಡರ್ಟಿ ಎನ್ನುವ ಭಾವನೆ ಬರುವ ಹಾಗೆ ಮಾತನಾಡುತ್ತೀ, I am deeply hurt, ನೀನು ನಿನ್ನ ಬರಹಗಳಲ್ಲಿ complex womanhood ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತೀಯೇ ಹೊರತು complex manhood ಅಲ್ಲ' ಎನ್ನುತ್ತಾನೆ. ತಾನು ಕೊಟ್ಟ ಕತೆಯೊಂದನ್ನು ಇಂದ್ರಜಿತ್ ವಿಮರ್ಶಿಸಿದ ರೀತಿ ನೆನಪಾದಾಗ ಗಂಗಾ ಸುಮ್ಮನಾಗಿಬಿಡುತ್ತಾಳೆ. ಹೀಗೆ

ಮಾತನಾಡುತ್ತಾ ಇಂದ್ರಜಿತ್ 'ನಿನ್ನಂತಹ ಹುಡುಗಿಯರ inspirationನಲ್ಲಿಯೇ ಬರೆದ ಹಲವಾರು ಲೇಖನಗಳಿವೆ, ಅವುಗಳನ್ನು ಅವರಿಗೇ ಅರ್ಪಿಸಬೇಕೆಂದಿದ್ದೇನೆ' ಎನ್ನುತ್ತಾನೆ. 'ಜೊತೆಗೆ ನಾನು ಕೆಲವು ಹುಡುಗಿಯರಿಗೆ grateful ಕೂಡಾ' ಎಂದಾಗ ಗಂಗಾ ಜೋರಾಗಿ ನಕ್ಕುಬಿಡುತ್ತಾಳೆ. 'ಏನು ಡೋಂಗಿ ಬಿಡ್ತೀರಾ ಇಂದ್ರಜಿತ್' ಎನ್ನುತ್ತಾ ಇನ್ನೂ ಜೋರಾಗಿ ನಕ್ಕುಬಿಡುತ್ತಾಳೆ. ಇಂದ್ರಜಿತ್ ಹೇಳುತ್ತಾನೆ, 'ನಿಮ್ಮಂತಹ ಹುಡುಗಿಯರು ಒಂದು ಓಷನ್ ತರಹ. ನಮ್ಮಂತಹವರು ನಿಮಗೆ ಒಂದು ಟ್ಯಾಂಕ್ ಆಗಿ ಮಾತ್ರ ಕಂಡಿರಬೇಕು' ಎಂದು ಹೇಳುತ್ತಲೇ ಛೇಡಿಸುತ್ತಾನೆ. 'ಒಂದು ಮಗ್ಗಲು ಸತ್ಯ ಹಿಡಿದುಕೊಂಡು ತೀರ್ಮಾನಗಳಿಗೆ ಬರಬಾರದು ಗಂಗಾ' ಎನ್ನುತ್ತಾನೆ. ಯಾವಾಗಲೂ ಉದ್ವೇಗ, ಕೋಪಗಳ ಒತ್ತಾಸೆಯಲ್ಲಿ ಮಾತನಾಡುವ ಗಂಗಾಗೆ 'ನೀನು ಮಾತನಾಡುವಾಗ ನನ್ನನ್ನು ಒಂದು ಪುಸ್ತಕ ಎಂದು ಎಣಿಸಬೇಡ. ಹೇಳಲಾಗದಿರುವ ವಿಚಾರಗಳೊಳಗಿರುವ complexity ನೀನು ಅರ್ಥಮಾಡಿಕೊಳ್ಳಲಾರೆ' ಎನ್ನುತ್ತಾ 'As you become older, you feel that you are losing a lot' ಎನ್ನುತ್ತಾರೆ. 'ದ್ವಂದ್ವಗಳನ್ನು ಇಟ್ಟುಕೊಂಡು ಗಂಡಸರ ತರಹ ಬದುಕೋದು ಕಷ್ಟ' ಎಂದು ಗಂಗಾ ಗೊಣಗುತ್ತಾಳೆ. 'We think and we live by it' ಎನ್ನುತ್ತಾಳೆ.

ವಿಮಾನದಲ್ಲಿ ಹತ್ತಿ ಹೋಗುವ, ದೂರ ದೇಶದ ಸತ್ಯಗಳನ್ನು, ಬದುಕಿನ ಆಯಾಮಗಳನ್ನು ಚಿಂತಿಸುವ ಬದಲು ಮನಸ್ಸು ಗತಿಸಿದ ಸಂಗತಿಗಳ ಬಗ್ಗೆಯೇ ಯೋಚಿಸತೊಡಗಿದಾಗ ಗಂಗಾ ತಲೆ ಕೊಡವುತ್ತಾಳೆ. ತನ್ನ ಬದುಕಿನ ಇಂಟೆಗ್ರಿಟಿ ತಾನೆಲ್ಲಿ ಕಾಯ್ದುಕೊಳ್ಳಬಹುದಿತ್ತು ಎಂದು ಮತ್ತೆ ಮತ್ತೆ ಯೋಚಿಸುತ್ತಾಳೆ. ಮತ್ತೆ ಇವೆಲ್ಲದಕ್ಕಿಂತ ಹಿಂದೆ, ಹಿಂದೆ ಹೋಗಿ ಬದುಕಿದರೆ ಹೇಗೆ ಎಂದು ಯೋಚಿಸುತ್ತಾಳೆ. ಯಾಕೋ ತನ್ನ ಬದುಕಿನ ಇತಿಹಾಸವೇ ಗಿರಕಿ ಹೊಡೆಯುವ ರೀತಿ ಇದೆಯೇನೋ ಎನ್ನಿಸತೊಡಗುತ್ತದೆ. ಇತಿಹಾಸದ ಜೊತೆ ಸುತ್ತುತ್ತೇನೋ, ಗಿರಕಿ ಹೊಡೆಯುತ್ತೇನೋ ಅಥವಾ ಇತಿಹಾಸದ ಸುರಳಿಗಳಲ್ಲೇ ವಾಸ್ತವ ಕಂಡುಕೊಳ್ಳುತ್ತೇನೋ ಎಂದು ಯೋಚಿಸುವಾಗ ಗಂಗಾಗೆ ಒಮ್ಮೆಲೇ ದಿಗಿಲೆನಿಸುತ್ತದೆ. ತಾನು ಪ್ರೀತಿಸಿದ ಕಾವ್ಯದ ಸಾಲುಗಳನ್ನು ಕತ್ತಲೆಯಲ್ಲಿ ಆಕಾಶದ ಗರ್ಭದಲ್ಲೆಲ್ಲೋ ಹುಡುಕುವಂತೆ ದಿಗಂತದತ್ತ ನೋಡುತ್ತಾ ಗಂಗಾ ತನ್ನೊಳಗೇ ಗುಣಗುಣಿಸುತ್ತಾಳೆ, ನೆನಪಿಗೆ ಬಂದ ಸಾಲುಗಳು ಸರಿಯೋ ತಪ್ಪೋ ಎಂದುಕೊಳ್ಳುತ್ತಾಳೆ.

ಬರುವ ಪ್ರಿಯತಮರೆಲ್ಲ
ನನ್ನೊಡಲ ಪಾತ್ರೆಯಲಿ
ಪಚ್ಚೆಗಳ ಹೆಕ್ಕಿದರು,
ಹವಳಗಳ ಹೆಕ್ಕಿದರು,
ಬರಿಯ ನಾನಿಲ್ಲ ಳಿದೆ, ಬರಿಯ ನಾನಿಲ್ಲ ಳಿದೆ.

* * * * *

ಭಾಗ - ೪

ಐದಾರು ತಿಂಗಳ ಅವಧಿಯಲ್ಲಿ ರಮೇಶ ಗಂಗಾಗೆ ತೀರಾ ಹತ್ತಿರನಾಗತೊಡಗಿದ್ದನು. ಬೆಂಗಳೂರಿನಿಂದ ಬಂದವನು ಎಂಬ ಆಂಶ ಆಕೆಯಲ್ಲಿ ಬೆಚ್ಚನೆಯ ಭಾವವನ್ನು ಹುಟ್ಟಿಸಿತ್ತು. ರಮೇಶ್ ಮೂಲತಃ ಗುಜರಾತೀ. ಬೆಂಗಳೂರಿನ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದು ವರ್ಷ ಕೂಡಾ ಕಳೆದಿರಲಿಲ್ಲ. ಇನ್ನೂ ವಿದ್ಯಾರ್ಥಿ ದೆಸೆಯಲ್ಲಿಯೇ ಇರುವಂತೆ ಎಲ್ಲವನ್ನೂ ಕಣ್ತೆರೆದು ನೋಡುವ ಅವನ ಸಂಕುಚಿತ ಸ್ವಭಾವದಿಂದಾಗಿ ಯುರೋಪಿನ ಸಂಸ್ಕೃತಿಗೆ ಹೆದರಿ ಹೆದರಿ ಕಣ್ಣು ತೆರೆಯುತ್ತಿದ್ದ. ಮುಗ್ಧತೆಯಿಂದ ಸಮುದ್ರದ ಅಲೆಗಳನ್ನು ಆಲಿಸುವಂತೆ ಯುರೋಪಿನ ಸ್ತರದ ಬದುಕಿನ ಮಿಡಿತಗಳನ್ನು ಆಲಿಸುವ ರಮೇಶನನ್ನು ಕಂಡರೆ ಗಂಗಾಗೆ ಅವನ ಬಗ್ಗೆ ಪ್ರೀತಿಯೆನಿಸುತ್ತಿತ್ತು. ಇವನ ಮುಗ್ಧತೆ ಚೂರಾಗದಂತೆ ಇಡಿಯಾಗಿ ಯುರೋಪ್‌ನ ದೇಶದಲ್ಲಿ ಕಾಯ್ದಿಡಬೇಕು ಎನ್ನುವಂತಹ ವಿಚಿತ್ರ ಬಯಕೆ ಆಕೆಯಲ್ಲಿ ಉಂಟಾಗುತ್ತಿತ್ತು. ಸಿರಾಕ್ಸ್‌ನ ಹಾಗೆ ಯುರೋಪಿನ ಸಂಸ್ಕೃತಿ ಒಪ್ಪಿಕೊಳ್ಳುವಲ್ಲಿ ಹಿರಿಮೆ ಇದೆ ಎಂದು ರಮೇಶನಿಗೆ ಅನ್ನಿಸುತ್ತಿರಲಿಲ್ಲ. ಬದಲಾಗಿ ಏನೋ ವಿಚಿತ್ರಗಳು, ಕೈಗೆ ನಿಲುಕದ ವಿಸ್ಮಯಗಳಿವು ಎನ್ನುವಂತೆ ಆತ ಯುರೋಪಿನ ನಾಡಿಗೆ ಕಣ್ತೆರೆಯುವುದನ್ನು ಗಂಗಾಳೊಡನೆ ಹೇಳಿಕೊಳ್ಳತೊಡಗಿದ್ದನು. ಆತ ಹೇಳುತ್ತಿದ್ದ ರೀತಿಯಲ್ಲಿ ಗಂಗಾಗೆ ತಾನು ಹೊನ್ನೇಕೆರೆ ಬಿಟ್ಟು ಬೆಂಗಳೂರಿಗೆ ಬಂದಾಗ ಉಂಟಾಗುತ್ತಿದ್ದ ಗೊಂದಲ, ವಿಸ್ಮಯಗಳು ಜ್ಞಾಪಕಕ್ಕೆ ಬರುತ್ತಿದ್ದವು. ಸಂಪ್ರದಾಯಸ್ಥ ಮನೆತನದಿಂದ, ಗುಜರಾತಿನ ಹಳ್ಳಿಯೊಂದರಿಂದ ಬಂದಿದ್ದ ರಮೇಶ ತಾನು, ಕೆಲಸ, ಕೊಠಡಿ, ಊಟ, ತಿಂಡಿ ಅಷ್ಟೇ ಪ್ರಪಂಚದಲ್ಲಿ ಬೆಂಗಳೂರಿನಲ್ಲಿ ಕಾಲ ಕಳೆಯುತ್ತಿದ್ದವ. ಗಂಗಾ ಡೆನ್‌ಹಾಗ್‌ಗೆ ಹೋದಾಕ್ಷಣ ಉಳಿದುದು ಇಗಾರು ಕೊಠಡಿಗಳನ್ನು ಬಾಡಿಗೆ ಕೊಟ್ಟಿದ್ದ ಒಂದು ಡಚ್ ಮನೆಯಲ್ಲಿ. ಅಲ್ಲಿ ನಾಲ್ಕೈದು ಜನ ವಿದ್ಯಾರ್ಥಿಗಳಿದ್ದರು. ಥೈಲ್ಯಾಂಡ್, ಫಿಲಿಫೈನ್ಸ್ ಗೆಳತಿಯರು ಅಲ್ಲಿಯೇ ಇದ್ದರು. ಅವರೆಲ್ಲ ಆಕೆ ಓದುತ್ತಿದ್ದ ಸಂಸ್ಥೆಯಲ್ಲಿಯೇ ಓದುತ್ತಿದ್ದುದರಿಂದ ಹಾಗೂ ಆ ಹುಡುಗಿಯರಿಗೆ ಯುರೋಪ್‌ನಲ್ಲಿ ಓಡಾಡಿ ಅಭ್ಯಾಸವಿದ್ದುದರಿಂದ ಟ್ರ್ಯಾಮ್‌ನಲ್ಲಿ ಪ್ರಯಾಣಿಸುವುದು, ಬ್ಯಾಂಕ್ ಇತ್ಯಾದಿ ಕಡೆ ಓಡಾಡುವುದು ಪ್ರಥಮ ದಿನಗಳಲ್ಲಿ ಗಂಗಾಳಿಗೆ ಕಷ್ಟವಾಗಿ ಕಂಡಿರಲಿಲ್ಲ. ರಮೇಶನ ಪರಿಚಯವಾದ ಮೇಲೆ ಗಂಗಾ ತನ್ನ ಸಮಯವನ್ನು ಬೆಳಿಗ್ಗೆ ಸಮುದ್ರದ ಬಳಿ, ಹತ್ತು ಘಂಟೆಯಿಂದ ಸಂಜೆಯವರೆಗೆ ಇನ್‌ಸ್ಟಿಟ್ಯೂಟ್‌ನಲ್ಲಿ, ಸಾಯಂಕಾಲ ರಮೇಶನೊಟ್ಟಿಗೆ ಕಳೆಯುತ್ತಿದ್ದಳು. ಆಕೆ ಓದುತ್ತಿದ್ದ ಸಂಸ್ಥೆಯಲ್ಲಿಯೇ ಇಬ್ಬರು ಭಾರತೀಯ ಹುಡುಗಿಯರೂ ಓದುತ್ತಿದ್ದರು. ಇಂದುಮತಿ ಹಾಗೂ ಶಾಲಿನಿ. ಮೂರು ಹೊತ್ತು ಈ ಹುಡುಗಿಯರ ಮಾತುಕತೆಗಳು ಮಕ್ಕಳು/ಗಂಡ ಇಂತಹ ವಿಚಾರಗಳ ಸುತ್ತವೇ ಗಿರಕಿ ಹೊಡೆಯುತ್ತಿದ್ದರೆ ಗಂಗಾಗೆ ಅವರೊಟ್ಟಿಗೆ ಸಮಯ ಕಳೆಯುವುದೇ ಬೇಸರ ಎನಿಸತೊಡಗಿತ್ತು. ಇಂದುಮತಿ ಆಗಷ್ಟೇ ಡಚ್ ಯುವಕನೋರ್ವನನ್ನು ಮದುವೆಯಾಗಿ ಅಲ್ಲಿಯೇ ಇರಲು ಪ್ರಯತ್ನಿಸುತ್ತಿದ್ದಳು. ಆಕೆ ಯಾವಾಗಲೂ ತಾನು ಮಾಡುವ ಅಡಿಗೆಯ ಬಗ್ಗೆ, ಆತನ ಆಹಾರದ ಅಭ್ಯಾಸಗಳ ಬಗ್ಗೆ ಇಂತಹ ಮಾತುಕತೆಗಳಲ್ಲಿಯೇ ತೊಡಗಿರುತ್ತಿದ್ದಳು. ಮೂರು ಹೊತ್ತೂ ಇಂಡಿಯಾದ

ದೋಸೆಯನ್ನೋ, ಇಡ್ಲಿ, ಸಾಂಬಾರು ಮಾಡುವ ಬಗೆಯನ್ನೋ ವಿವರಿಸುತ್ತಾ, ವಿವರಿಸುತ್ತಾ ಆ ಕ್ಷಣದಲ್ಲಿ ರೋಮಾಂಚಕಾರಿಯಾಗಿ ಮೈ ಮರೆತು ಮಾತನಾಡುವ ಅವರೊಟ್ಟಿಗೆ ಗಂಗಾಗೆ ಒಮ್ಮೊಮ್ಮೆ ಅನಾಥ ಪ್ರಜ್ಞೆ ಕಾಡುತ್ತಿತ್ತು. ಇದೇ ಸಂದರ್ಭದಲ್ಲಿ ಇನ್‌ಸ್ಟಿಟ್ಯೂಟ್‌ನಲ್ಲಿ ಪರಿಚಯವಾದ ಹುಡುಗಿ ಕುಮುದಿನಿ. ಶ್ರೀಲಂಕಾದ 'ಫ್ರೀ ಟ್ರೇಡ್ ಜೋನ್ಸ್'ಗಳಲ್ಲಿ ಮಹಿಳೆಯರನ್ನು ಸಂಘಟಿಸುತ್ತಿದ್ದ ಈಕೆ ಮುಕ್ತ ಆರ್ಥಿಕ ವ್ಯವಸ್ಥೆ ಹುಡುಗಿಯರ ಶ್ರಮಶಕ್ತಿಯನ್ನು ಹೇಗೆ ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹರಾಜು ಹಾಕಿ ಬಿಡುತ್ತದೆ ಎಂಬುದನ್ನು ಯಾವಾಗಲೂ ನೋವಿನಿಂದ ಹೇಳುತ್ತಿದ್ದಳು. ಎಲೆಕ್ಟ್ರಾನಿಕ್ಸ್ ಬಿಡಿ ಭಾಗಗಳನ್ನು ಮನೆಯಲ್ಲಿ ಕೂತು ಮಾಡುವ ಮಹಿಳೆಗಾಗಲೀ ಅಥವಾ ಬಟ್ಟೆಗಳನ್ನು ಹಳ್ಳಿಯಲ್ಲಿ ತನ್ನ ಮನೆಯಲ್ಲಿಯೇ ಕುಳಿತು ಹೊಲಿದು ಕೊಡುವ ಹೆಂಗಸಿಗಾಗಲೀ ಆಕೆಯ ಶ್ರಮಶಕ್ತಿ ಆಕೆಗೆ ಗೊತ್ತಿಲ್ಲದೆಯೇ ಅಂತರ್‌ರಾಷ್ಟ್ರೀಯ ರಫ್ತಿನ ವಸ್ತುವಾಗುತ್ತದೆ ಎಂಬುದನ್ನು ಕುಮುದಿನಿ ತನ್ನ ಹೃದಯದ ಮಾತಾಗಿ ಮಾತನಾಡುವಳು. ಹೀಗೇ ಕುಳಿತು ಗಂಗಾ ಆಕೆಯ ಅನುಭವಗಳನ್ನು ಕೇಳುವಳು. ಇವಳ ಜೊತೆಗೇ ಇರುತ್ತಿದ್ದ ಇನ್ನೊಬ್ಬ ಹೆಂಗಸು ಮಲೇಶಿಯಾದ ಟ್ರೇಡ್ ಯೂನಿಯನ್‌ನಲ್ಲಿ ಕೆಲಸ ಮಾಡುತ್ತಿದ್ದವಳು. ಈಕೆ ಕಮಲಮ್. ಈಕೆಯನ್ನು ತಾನು ಎಲ್ಲಿಯೋ ಕಂಡಿರಬೇಕು ಎಂದು ಗಂಗಾಗೆ ಅನಿಸುವಾಗಲೇ ಕಮಲಮ್ ತನ್ನ ಬಳಿ ಇದ್ದ ಫೋಟೋವೊಂದನ್ನು ಗಂಗಾಗೆ ತೋರಿಸಿ, 'ನೀವು ಮದ್ರಾಸ್‌ನಲ್ಲಿ ನಡೆದ ಮಹಿಳಾ ಸೆಮಿನಾರ್‌ಗೆ ಬಂದಿರಲಿಲ್ಲವೇ?' ಎಂದು ಕೇಳಿದ್ದರು. ಗಂಗಾಗೆ ತಟಕ್ಕೆಂದು ಜ್ಞಾಪಕಕ್ಕೆ ಬಂತು. ಗಂಗಾ, ಅನು ಒಟ್ಟಾಗಿಯೇ ಮದ್ರಾಸ್‌ಗೆ ಹೋಗಿದ್ದರು. ಆಗಿನ್ನೂ ಗಂಗಾ ಬೆಂಗಳೂರಿಗೆ ಹಾಗೂ ಸ್ತ್ರೀ ಮುಕ್ತಿ ಸಂಘಟನಾ ಸಂಘಕ್ಕೆ ಹೋದ ಹೊಸತು. ಮದ್ರಾಸ್‌ನಲ್ಲಿ ನಡೆಯುವ ಸೆಮಿನಾರ್‌ಗೆ ಗಂಗಾ, ಅನುವನ್ನು ಸೂಚಿಸಿದ್ದರಿಂದ ಅವರಿಬ್ಬರೂ ಒಟ್ಟಾಗಿಯೇ ಮದ್ರಾಸ್‌ಗೆ ಹೋಗಿದ್ದರು. ಅವರಿಬ್ಬರೇ ಹೀಗೆ ಹೊರಗಿನ ರಾಜ್ಯವೊಂದಕ್ಕೆ ಪ್ರಯಾಣಿಸುತ್ತಿದ್ದರಿಂದ ಇಬ್ಬರಲ್ಲೂ ಒಂದು ಬಗೆಯ ಖುಷಿ ಇತ್ತು. ಗಂಗಾ 'ಮನೆಗೆಲಸ'ದ ಬಗ್ಗೆ ಒಂದು ಚಿಕ್ಕ ಪ್ರಬಂಧವನ್ನು ತಯಾರಿಸಿದ್ದಳು. ಸಾಹಸದ ರೋಮಾಂಚನವಿತ್ತು. ಮದ್ರಾಸ್ ತಲುಪಿದಾಗ ಬೆಳಗಿನ ಐದು ಘಂಟೆ. ಅವರೀರ್ವರು ತಂಗಬೇಕಾಗಿದ್ದ ಹೋಟೆಲ್ ವಿಳಾಸ ಅವರ ಬಳಿ ಇತ್ತು. ಅವರಿಗೆ ಬರದ ಭಾಷೆ, ಇಂಗ್ಲೀಷಿನಲ್ಲಿ ಮಾತನಾಡಿದರೆ ತಮಿಳಲ್ಲಿ ಉತ್ತರ ನೀಡುವರು. ಕೊನೆಗೆ ತಾವು ಹತ್ತಿದ್ದ ಸಿಟಿ ಬಸ್‌ನ ಚಾಲಕ 'ನೀವು ಇದೇ ಸ್ಥಳದಲ್ಲಿ ಇಳಿಯಬೇಕು' ಎಂದು ಹೇಳಿದಾಗ ಅಲ್ಲಿಯೇ ಇಳಿದಿದ್ದರು. ಅನು, ಗಂಗಾ ತುಂಬಾ ಸಂತೋಷದಿಂದ ಓಡಾಡಿದ ದಿನಗಳವು. ಸೆಮಿನಾರ್ ನಡೆಯುವ ಅವಧಿಯಲ್ಲಿ ಮಾತ್ರ ಅಲ್ಲಿದ್ದು ನಂತರದಲ್ಲಿ ಇಬ್ಬರೇ ಇಡಿಯ ಮದ್ರಾಸ್‌ನಲ್ಲಿ ಖುಷಿಯಾಗಿ ಓಡಾಡಿದ್ದರು. ಸಮುದ್ರದ ಬೀಚ್‌ನಲ್ಲಿ ನಿಂತು ಆನಂದಿಸಿ ಕಪ್ಪೆ ಚಿಪ್ಪಿನ ರಾಶಿಯನ್ನೇ ಆಯ್ದು ತಂದಿದ್ದರು. ಈ ಸಂದರ್ಭದಲ್ಲಿಯೇ ಕಮಲಮ್‌ನ್ನು ಗಂಗಾ ಹಾಗೂ ಅನು ಭೇಟಿಯಾದದ್ದು. ಕಮಲಮ್‌ಗೆ ಮೂವತ್ತೆಂಟು ವರ್ಷ ಎಂದರೆ ಅವರಿಬ್ಬರಿಗೂ ನಂಬಲಿಕ್ಕೇ ಸಾಧ್ಯವಾಗಿರಲಿಲ್ಲ. ಮಿಡಿ ಹಾಕಿದ್ದ, ಕೋಲು ಮುಖದ ಕಮಲಮ್ 22ರ ತರುಣಿಯಂತೆ ಅವರ ಕಣ್ಣಿಗೆ ಕಂಡದ್ದುಂಟು. ತಮಗೆ 38 ವರ್ಷ ಎಂದು ಕಮಲಮ್ ತಾವೇ ಹೇಳಿಕೊಂಡಿದ್ದರು. ಗಂಗಾ 'ಮನೆಗೆಲಸ' ಕುರಿತ ಪ್ರಬಂಧ ಓದಿದಾಗ ಅಲ್ಲಿದ್ದವರೆಲ್ಲ ಸ್ಪಂದಿಸಿದ್ದರು. ಆಗೆಲ್ಲ ಅದು ಹೊಸ ವಿಚಾರವಾಗಿ ಕಂಡಿತ್ತು. ಮಹಿಳಾ ಚಳುವಳಿಯ ಬಿಸಿ ಪ್ರಾರಂಭವಾಗಿ 3-4 ವರುಷಗಳಾಗಿರಬಹುದಷ್ಟೇ. ಕಮಲಮ್ ಗಂಗಾ ಹಾಗೂ ಅನು ಇಬ್ಬರನ್ನೂ ಈ ಸಂದರ್ಭದಲ್ಲಿ ಮಾತನಾಡಿಸಿದ್ದರು. ನಿಮ್ಮೀರ್ವರ ವಿಚಾರಧಾರೆ ನನಗಿಷ್ಟವಾಯಿತು ಎಂದು ಹೇಳಿ ತಮ್ಮ ಟ್ರೇಡ್ ಯೂನಿಯನ್ ಅನುಭವಗಳನ್ನು ಹಂಚಿಕೊಂಡಿದ್ದರು. ಕಮಲಮ್ ತಾವೆಲ್ಲರೂ ಇದ್ದ ಫೋಟೋ ಡೆನ್‌ಹಾಗ್‌ನಲ್ಲಿ ತೋರಿಸಿದಾಗ ಐದಾರು ವರ್ಷಗಳ ಕೆಳಗೆ

ನಡೆದುದೆಲ್ಲ ಗಂಗಾಗೆ ಕಣ್ಣ ಮುಂದೆ ಬಂದ ರೀತಿ ಭಾಸವಾಗಿತ್ತು. ತಕ್ಷಣ 'ಕಮಲಮ್ ನೀವಾ' ಎಂದುಕೊಂಡು ಅವರನ್ನು ಅಪ್ಪಿಕೊಂಡು ಬಿಟ್ಟಿದ್ದಳು. ಹೀಗೆ ಶ್ರೀಲಂಕಾದ ಕುಮುದಿನಿ ಹಾಗೂ ಮಲೇಶಿಯಾದ ಕಮಲಮ್ ಒಟ್ಟಿಗೆ ಗಂಗಾ ಆತ್ಮೀಯವಾದ ಸಂಬಂಧ ಬೆಳೆಸಿಕೊಂಡಿದ್ದಳು.

ಬಿಡುವಿನ ಸಮಯದಲ್ಲಿ ರಮೇಶ ಗಂಗಾಳನ್ನು ಹುಡುಕಿ ಬರುತ್ತಿದ್ದ ರಮೇಶನ ವ್ಯಕ್ತಿತ್ವವನ್ನು ಗಂಗಾ ನಿಧಾನವಾಗಿ ಅರಿಯತೊಡಗಿದ್ದಳು. ಒಂದು ದಿನ ರಮೇಶ ತುಂಬಾ ಬೇಸರದಿಂದ ಗಂಗಾಳನ್ನು ಹುಡುಕಿಕೊಂಡು ಬಂದಿದ್ದ. ಆತ ಮೂಲತಃ ಹೆಚ್ಚು ಮಾತುಗಾರ ಅಲ್ಲ ಎಂಬುದು ಗಂಗಾಳಿಗೆ ಅರ್ಥವಾಗಿತ್ತು. ಯುರೋಪಿನ ಸಂಸ್ಕೃತಿಗೆ ಹೊಂದಿಕೊಳ್ಳಲೂ ಆಗದೇ, ಅಥವಾ ತನ್ನದೇ ಒಂದು ನಿಲುವು ಇಟ್ಟುಕೊಂಡು ಭರವಸೆಯಿಂದ ಇರಲೂ ಆಗದ ಒಂದು ರೀತಿಯ ತಹತಹಿಕೆಯಲ್ಲಿ ಆತ ಡೆನ್‌ಹಾಗ್‌ನಲ್ಲಿ ಬದುಕುತ್ತಿದ್ದಾನೆ ಎಂದು ಯಾವಾಗಲೂ ಆಕೆಗೆ ಅನ್ನಿಸುತ್ತಿತ್ತು. ಯುರೋಪಿನ ಸಂಸ್ಕೃತಿಗೆ ತೆರೆದುಕೊಳ್ಳುತ್ತಿರುವ ಜೊತೆಗೆ 24 ವರುಷದ ರಮೇಶನಿಗೆ ತಾನು ಒಂದು ರೀತಿಯಲ್ಲಿ Manhoodಗೆ ಪ್ರವೇಶಿಸುತ್ತಿರಬೇಕೆಂಬ ಆತಂಕ/ತವಕಗಳೂ ಇದ್ದವು. ಮೊದ ಮೊದಲು ಗಂಗಾಳ ಹತ್ತಿರ ಸಂಕೋಚದಿಂದ, ಭಯದಿಂದ, ವಿಸ್ಮಯದಿಂದ ಮಾತನಾಡುತ್ತಿದ್ದ. ಎಷ್ಟೋ ತಿಂಗಳುಗಳ ನಂತರದಲ್ಲಿ ತನ್ನ ವ್ಯಕ್ತಿತ್ವದ ಒಳಗಿನ ದುಗುಡಗಳನ್ನು ಗಂಗಾಳಲ್ಲಿ ನಿಧಾನವಾಗಿ ಹಂಚಿಕೊಳ್ಳತೊಡಗಿದ್ದನು. ಅವನು ಹೇಳಿದ ಎರಡು ವಿಚಾರಗಳು ಗಂಗಾಳಿಗೆ ಬಹಳ ವಿನೋದಕರವಾಗಿ ಕಂಡಿದ್ದವು. ರಮೇಶ ಡೆನ್‌ಹಾಗ್‌ಗೆ ಬಂದ ಹದಿನೈದು ದಿನಗಳಲ್ಲೊಮ್ಮೆ ಪಾರ್ಟಿಗೆ ಹೋಗಿದ್ದ. ಆತನ ಜೊತೆಗೆ ಓದುತ್ತಿರುವ ಇನ್ನೋರ್ವ ದೇಶದ ಹುಡುಗಿಯೊಬ್ಬಳು ಡ್ಯಾನ್ಸ್ ಮಾಡಲು ಕರೆದಳಂತೆ. ಎಷ್ಟು ಬೇಡವೆಂದರೂ ರಮೇಶನನ್ನು ಬಿಡದೇ ಆಕೆ ಕರೆದೊಯ್ಯುವಾಗ ತನ್ನ ತೊಡೆಗಳು ಬಿಮರಿಕೊಂಡಿದ್ದನ್ನು ರಮೇಶ ಹೇಳಿ ಜೋರಾಗಿ ನಕ್ಕಿದ್ದ. ಆಕೆಯೊಡನೆ ಪಾಶ್ಚಿಮಾತ್ಯ ಸಂಗೀತಕ್ಕೆ ಹೆಜ್ಜೆ ಹಾಕಲು ಬರದಿದ್ದಾಗ ಈತ ಮರುದಿನವೇ ಈ ಅವಮಾನದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಡ್ಯಾನ್ಸ್ ಸ್ಕೂಲಿಗೆ ಸೇರಿದ್ದನು. ಅಲ್ಲಿನ ಮಧ್ಯ ವಯಸ್ಸಿನ ಹೆಂಗಸು ಈತನಿಗೆ ಡ್ಯಾನ್ಸ್ ಕಲಿಸುವಾಗ 'ಹೀಗೆ ಹೆಜ್ಜೆ ಹಾಕು', 'ಹೀಗೇ' ಎಂದು ಕೈ, ಸೊಂಟ ತಗಲಿಸಿಕೊಂಡು ಡ್ಯಾನ್ಸ್ ಕಲಿಸುವಾಗ ಭಯಕ್ಕೆ, ದಿಗಿಲಿಗೆ ಆಕೆಯ ಕಾಲು ತುಳಿದುಬಿಡುವನಂತೆ. 'What man!' ಎಂದು ಆಕೆ ತಮಾಷೆಯಿಂದಲೋ, ಸಿಟ್ಟಿಗೋ ಸ್ವಲ್ಪ ಗಟ್ಟಿ ಧ್ವನಿಯಲ್ಲಿ ಹೇಳಿದರೆ ಅವಮಾನದಿಂದ ಆತ ಹಿಡಿ ಹಿಡಿಯಾಗಿ ಕುಗ್ಗಿ ಬಿಡುವನು. 'ನಂತರ ಡ್ಯಾನ್ಸ್ ಕಲಿಯುವುದಕ್ಕೇ ದೊಡ್ಡ ನಮಸ್ಕಾರ ಹೊಡೆದೆ' ಎನ್ನುವಾಗ ರಮೇಶ ನಗುತ್ತಿದ್ದ. ಆದರೂ ಕಣ್ಣಂಚಿನಲ್ಲಿ ಎಲ್ಲಿಯೋ ಹೊಳಪಾಗಿ ಮಿಂಚಿದ ಕಣ್ಣೀರು ಅವನ ಹೃದಯದೊಳಗಿನ ಅವಮಾನ ಕರಗಿ ನೀರಾಗಿಲ್ಲ ಎನ್ನುವುದನ್ನು ಗಂಗಾಗೆ ಸೂಚಿಸಿತ್ತು. ಇಂತಹದೇ ಇನ್ನೊಂದು ಘಟನೆಯನ್ನು ರಮೇಶ ಗಂಗಾಳಿಗೆ ಹೇಳಿದ್ದ. ಅದು ಆತ ಕುಡಿಯುವುದರ ಬಗ್ಗೆ ಹೇಳಿದ್ದು. ರಮೇಶ ತನ್ನ ಹಾಗೆ ಒಂದು ಸಾಧಾರಣ ಮಧ್ಯಮ ವರ್ಗಕ್ಕೆ ಸೇರಿದ ಹುಡುಗ ಎಂಬುದು ಗಂಗಾಗೆ ಅರ್ಥವಾಗಿತ್ತು. ಎಲ್ಲಾ ಮಧ್ಯಮ ವರ್ಗದವರ ಹಾಗೆ ಫಾರಿನ್ನಿನ ಕನಸುಗಳಲ್ಲಿ ಪ್ರಾಪಂಚಿಕ ವ್ಯಾಮೋಹ, ಹಣದ ವ್ಯಾಮೋಹಗಳ ರಂಗುಗಳನ್ನೇ ಕಟ್ಟಿಕೊಂಡು ಬಂದವನು. ಎಲೆಕ್ಟ್ರಾನಿಕ್ಸ್ ಜಗತ್ತಿನೊಂದಿಗೆ ತನ್ನನ್ನೇ ಸೆಟ್ ಮಾಡಿಕೊಳ್ಳಲು, ಗುರುತಿಸಿಕೊಳ್ಳಲು ಡ್ಯಾನ್ಸ್, ಕುಡಿತ ಇಂತಹ ಮಾಧ್ಯಮಗಳೇ ಆತನ ಕಣ್ಣಿಗೆ ರಾಚಿದ್ದು. ಒಂದು ಬಾರ್‌ಗೆ ಒಬ್ಬನೇ ಹೋಗಿ ಕುಳಿತು ಕುಡಿದು ಬರುವಾಗಿನ ಕತೆಯನ್ನು ಗಂಗಾಳ ಬಳಿ ಹೇಳಿ ಮುಗಿಸುವಾಗ ಆತನ ಕಣ್ಣಂಚಿನಲ್ಲಿ ಫಳಕ್ಕೆಂದು ನೀರು ಚಿಮ್ಮಿ ಬಿದ್ದಿತ್ತು. ಯಾಕೋ ಈ ಯುರೋಪ್‌ನಲ್ಲಿ ಈತನಷ್ಟು ಒಂಟಿ ಇನ್ಯಾರೂ ಕೂಡ ಇರಲಾರರು ಎನಿಸಿದಾಗ ಗಂಗಾಗೆ ಅವನ ಬಗ್ಗೆ ಮಮತೆ ಎನಿಸಿತ್ತು. ಆತ ಹೋದ ಬಾರ್‌ನಲ್ಲಿ ಸರ್ವ್ ಮಾಡುತ್ತಿದ್ದವಳು ಒಬ್ಬ ಹೆಂಗಸು. ಇವೆಲ್ಲ ರಮೇಶ ಕಂಡಿರದ ಪ್ರಪಂಚಗಳು.

ಬಾರ್‌ನಲ್ಲಿ ಸರ್ವ್ ಮಾಡುತ್ತಿದ್ದ ಡಚ್ ಸುಂದರಿಯನ್ನು ಕಂಡು ಆತನಿಗೆ ರೋಮಾಂಚನವಾಗಿರಬೇಕು. ಸಿನೆಮಾದಲ್ಲಿ ಕಂಡೂ ಕಾಣದಂತಿದ್ದ ಒಂದು ಪ್ರಪಂಚವನ್ನು, ಒಂದು ಅದ್ಭುತವನ್ನು ಕಂಡಂತೆ ರಮೇಶನಿಗೆ ಅನ್ನಿಸಿರಬೇಕು. ಇಂತಹವುಗಳನ್ನು ರಮೇಶ ಗಂಗಾಳ ಬಳಿ ಹೇಳುತ್ತಿದ್ದ. ಇಂತಹ ವಸ್ತು ಸುಖಗಳ ನಡುವೆ ಗಂಗಾಳ ಪ್ರಪಂಚ ರಮೇಶನಿಗೆ ವಿಚಿತ್ರವಾಗಿ ಕಾಣುತ್ತಿತ್ತು. ಒಂದು ಕಡೆ ವಸ್ತು ಪ್ರಪಂಚದ ಸುಖ, ಇನ್ನೊಂದು ಕಡೆ ಇವೆಲ್ಲವುಗಳಿಗೆ ವಿಮುಖಳಾಗಿ ಸಮುದ್ರದ ತೀರದಲ್ಲಿ ಕುಳಿತು ಒಂಟಿಯಾಗಿ ಬರೆಯುವ ಗಂಗಾಳ ಪ್ರಪಂಚ. ಗಂಗಾಳ ಬಳಿ ಕೂತು ಮಾತನಾಡುವಾಗಲೆಲ್ಲಾ ತನ್ನ ವಸ್ತು ಪ್ರಪಂಚದ ಜ್ಞಾನಕ್ಕೆ ಮೀರಿದ ಜ್ಞಾನವೊಂದು ಜೀವನದಲ್ಲಿ ಇದೆ ಎಂದು ರಮೇಶನಿಗೆ ಭಾಸವಾಗುತ್ತಿತ್ತು. ತಾರುಣ್ಯದ ರೋಚಕಗಳು, ವಸ್ತು ಪ್ರಪಂಚದ ಮೋಹಗಳು ಯಾವುವೂ ಗಂಗಾಳನ್ನು ಅಲುಗಾಡಿಸದಿದ್ದನ್ನು ಕಂಡಾಗ ರಮೇಶನಿಗೆ ಆಶ್ಚರ್ಯ ಅನ್ನಿಸುತ್ತಿತ್ತು. ಏನಕ್ಕೂ ಅಂಟಿಕೊಳ್ಳದೇ, ಯಾವ ವಿಸ್ಮಯಗಳಿಗೂ ಬೆರಗಾಗದೇ, ಇದೊಂದು ತಾನು ಬಯಸುವ ಪ್ರಪಂಚವೇ ಅಲ್ಲ ಎನ್ನುವಂತೆ ಸಮುದ್ರದ ತೆರೆಗಳಲ್ಲಿ ತನ್ನನ್ನೇ ಕಂಡುಕೊಂಡಂತೆ ಬದುಕುವ ಗಂಗಾಳನ್ನು ಕಂಡಾಗ ರಮೇಶನಿಗೆ ವಿಚಿತ್ರ ಗೊಂದಲಗಳು. ಇಪ್ಪತ್ತೈದರ ವಯಸ್ಸಿಗೇ ಯುರೋಪಿನ ನಿಯಾನ್ ದೀಪಗಳ ಸಂಪತ್ತಿಗೆ ವಿಮುಖಳಾಗಿ ನಡೆಯುವ ಗಂಗಾಳ ಹಿನ್ನೆಲೆಯಲ್ಲಿ ತನ್ನ ಬದುಕಿನ ಬಗ್ಗೆ ರಮೇಶ ತಾನೇ ಪ್ರಶ್ನಿಸಿಕೊಳ್ಳುವಂತಾಗುತ್ತಿತ್ತು. ಇಪ್ಪತ್ನಾಲ್ಕರಲ್ಲಿ ತಾನು ಕುಡಿತ, ಡ್ಯಾನ್ಸ್ ಎಂದು ಯುರೋಪ್‌ನಲ್ಲಿ ಹಿಡಿಯುತ್ತಿರುವ ದಾರಿ ತಪ್ಪೇನೋ ಎಂದು ಅವನ ಮನಸ್ಸಿಗೇ ಕಿರಿ ಕಿರಿಯಾಗತೊಡಗಿತ್ತು. ಕುಡಿತ, ಬಾರ್, ಡ್ಯಾನ್ಸ್, ಎಲೆಕ್ಟ್ರಾನಿಕ್ಸ್ ಇಂತಹ ಪ್ರಪಂಚ ಮೀರಿದ ಒಂದು ಆದರ್ಶ ಪ್ರಪಂಚದ ಕನಸಾಗಿದ್ದಳು ಗಂಗಾ. ಹಾಗಾಗಿ ಬಿಡುವಾಗಿರುವಾಗಲೆಲ್ಲಾ ರಮೇಶ ಗಂಗಾಳನ್ನು ಹುಡುಕಿಕೊಂಡು ಬರುತ್ತಿದ್ದ. ಗಂಟೆಗಟ್ಟಲೇ ಕೆಲವು ಸಾರಿ ಗುಜರಾತಿನಲ್ಲಿ ಕೆಲಸ ಮಾಡುತ್ತಿದ್ದ ತಂಗಿಯ ಆಫೀಸಿಗೆ ಫೋನ್ ಮಾಡಿ ಆತನ ತಂದೆ/ತಾಯಿ ಇತರರೊಡನೆ ಮಾತನಾಡಲು ಪ್ರಯತ್ನಿಸುತ್ತಿದ್ದ. ಹಾಲೆಂಡ್‌ನಲ್ಲಿ ತಾನೊಬ್ಬನೇ, ಒಂಟಿ ಎಂದು ತೀವ್ರವಾಗಿ ಅನ್ನಿಸಿದಾಗಲೆಲ್ಲಾ ಆತ ಗುಜರಾತಿಗೆ ಫೋನಿಸುವುದಿತ್ತು. ಹೀಗೆ ಫೋನಿಸುವುದನ್ನು ಬಿಟ್ಟರೆ ಅತ್ಯಂತ ಗಾಢವಾಗಿ ಕಾಡುತ್ತಿದ್ದುದೆಂದರೆ ಗಂಗಾಳ ಸ್ನೇಹ. ಈಗ ಗಂಗಾಳ ಸ್ನೇಹ ಆತನಿಗೆ ಬೆಚ್ಚಗೆ ಎನಿಸುತ್ತಿತ್ತು. ಆಕೆಯ ಸ್ನೇಹದಲ್ಲಿ ಮಮತೆಯ ಮಾರ್ದವತೆಯನ್ನು ರಮೇಶ ಕಂಡಿದ್ದ. ಇಪ್ಪತ್ನಾಲ್ಕು ವರ್ಷದ ರಮೇಶನಿಗೆ ಆಕೆ ಆದರ್ಶದ, ಪ್ರೇಮದ ಮೂರ್ತಿಯಾಗಿ ಕಂಡಿದ್ದಳು.

ಅಪ್ಪನ ಕಾಠಿಣ್ಯತೆಯಲ್ಲಿ ಸಂರಕ್ಷಣೆಯಿಂದಲೇ ಬೆಳೆಯಲ್ಪಟ್ಟ ರಮೇಶ ಬದುಕಿನುದ್ದಕ್ಕೂ ಯಾವ ಹುಡುಗಿಯನ್ನೂ ಹತ್ತಿರದಿಂದ ಮಾತನಾಡಿಸಿ ಅರಿಯದ ವ್ಯಕ್ತಿ. ತಾರುಣ್ಯದ ಕನಸುಗಳನ್ನು ಒಳಗೊಳಗೇ ಬಚ್ಚಿಟ್ಟುಕೊಂಡು ನಿಟ್ಟುಸಿರುಗೈಯುವ ರಮೇಶ ಗಂಗಾಳಲ್ಲಿ ಈ ಪ್ರೀತಿ/ಪ್ರೇಮ ಹುಡುಕತೊಡಗಿದ್ದ. ರಮೇಶ ಮೂಲತಃ ಅಂತರಂಗದ ಒಳಗೇ ಇರುವ ವ್ಯಕ್ತಿಯಾದುದರಿಂದ ಯಾರೊಂದಿಗೂ ಅಷ್ಟಾಗಿ ಬೆರೆಯುತ್ತಿರಲಿಲ್ಲ. ಅವನು ಅಂಟಿಕೊಳ್ಳ ಬಯಸುವ ಗೆಳೆಯರ್‍ಯಾರೂ ಅವನಿಗೆ ಇರಲಿಲ್ಲ. ಗಂಗಾ ಕುಮುದಿನಿ/ಕಮಲಮ್, ಇನ್ಯಾರೋ ಆಫ್ರಿಕಾದ ಹೆಂಗಸರನ್ನು ಹುಡುಕಿಕೊಂಡು ಹೋಗುವಳು. ಅಲ್ಲಿ-ಇಲ್ಲಿ ನಡೆಯುವ ಮೂರನೇ ಜಗತ್ತಿಗೆ ಸಂಬಂಧಪಟ್ಟ ಮುಷ್ಕರ, ಧರಣಿಗೆ ಉತ್ಸಾಹದಿಂದ ಹೋಗಿ ಕೂರುವಳು. ಮೊದ ಮೊದಲು ರಮೇಶನಿಗೆ ಇದೆಲ್ಲ ಏನು ಎನ್ನುವಂತಹ ಪ್ರಶ್ನೆಗಳೇ ಹುಟ್ಟಿಕೊಳ್ಳುತ್ತಿದ್ದವು. ಇಂತಹ ಆದರ್ಶದ, ಕ್ರಾಂತಿಯ ಅಥವಾ ಸಾಮಾನ್ಯ ಬದುಕಿನಾಚೆ ನಡೆಯುವ ಬದುಕಿನ ಮುಖದ ಪರಿಚಯ ಆತನಿಗೆ ಇರಲೇ ಇಲ್ಲ. ಆತ ಬೆಳೆದುದು ಬೆಚ್ಚನೆಯ ನಾಲ್ಕು ಗೋಡೆಗಳ ಮಧ್ಯೆ. ತಾಯಿ, ತಂಗಿ, ಅಪ್ಪ, ತಮ್ಮ ಇಷ್ಟರ ಮಧ್ಯೆ ಸುಭದ್ರವಾಗಿ ಬೆಳೆದ ರಮೇಶನಿಗೆ ಸಂಕೋಚಗಳು ಮೈತುಂಬಿ

ಕೊಂಡಿದ್ದವು. ಹೆಚ್ಚು ಮಾತನಾಡಲಾರ, ಬೇಗ ಸ್ನೇಹತ್ವಕ್ಕೆ ಅಂಟಿಕೊಳ್ಳಲಾರ, ತನ್ನ ಪಾಡಿಗೆ ತಾನಿದ್ದು ಬಿಡುತ್ತಾನೆ. ಗಂಗಾಳ ಸ್ನೇಹದಿಂದಾಗಿ ಐದಾರು ತಿಂಗಳಲ್ಲಿ ಆದರ್ಶದ ಪ್ರಪಂಚವೊಂದು ರಮೇಶನ ಕಣ್ಣಿಗೆ ಬೀಳತೊಡಗಿತ್ತು. ಎಲೆಕ್ಟ್ರಾನಿಕ್ಸ್ ವಸ್ತುಗಳ ನಡುವೆ ತನ್ನನ್ನು ತಾನು ಗುರುತಿಸಿಕೊಳ್ಳುವ ಮನೋಭಾವ ಕ್ರಮೇಣವಾಗಿ ಕಡಿಮೆಯಾಗತೊಡಗಿತ್ತು.

ಹಾಲೆಂಡಿನ ವಸ್ತು ಪ್ರಪಂಚದ ಸುಖಕ್ಕಿಂತ ಗಂಗಾಳ ಮಾತಿನ ಪ್ರಪಂಚದ, ಆದರ್ಶ ಪ್ರಪಂಚದ ಬೆಚ್ಚನೆಯ ಹೃದಯದ ಸುಖ ಅವನ ಒಂಟಿತನಗಳನ್ನೆಲ್ಲ ಕರಗಿಸಿಬಿಡುತ್ತಿತ್ತು. ಹೀಗಾಗಿ ಗಂಗಾಳ ಬದುಕಿನ ಬಗ್ಗೆ, ಆಕೆಯ ಗ್ರಹಿಕೆಯ ಬಗ್ಗೆ, ಆಕೆಯ ಆಂತರಂಗಿಕವಾದ ಪ್ರಪಂಚದ ಬಗ್ಗೆ ರಮೇಶನಿಗೆ ಕುತೂಹಲದ ಜೊತೆಗೆ ಆಸಕ್ತಿಯೂ ಬೆಳೆಯುತ್ತಾ ಹೋಯಿತು. ಹೀಗೇ ಆಕೆಯ ವಸ್ತು ಸುಖಕ್ಕೆ ವಿಮುಖವಾಗುವ ಪ್ರಪಂಚ ರಮೇಶನಿಗೆ ಆತ್ಮೀಯ ಎನಿಸತೊಡಗಿತ್ತು. ಆತನ ತಾರುಣ್ಯದ ಕನಸುಗಳು ಆಕೆಯ ವ್ಯಕ್ತಿತ್ವದೊಡನೆ ಬೆಸೆದುಕೊಳ್ಳತೊಡಗಿದ್ದವು. ಹೀಗೆ ರಮೇಶ ಆರೇಳು ತಿಂಗಳುಗಳಲ್ಲಿ ನಿಧಾನವಾಗಿ ಅಂಬೆಗಾಲಿಕ್ಕುತ್ತಾ ಗಂಗಾಳ ಪ್ರಪಂಚಕ್ಕೆ ಕಾಲಿಡತೊಡಗಿದ್ದ. ಮೊದ ಮೊದಲು ರೋಚಕವೆನಿಸುತ್ತಿದ್ದ ಡೆನ್‌ಹಾಗ್‌ನ ನಿಯಾನ್ ದೀಪಗಳ ಸಂಪತ್ತಿನ ನಡುವೆ 'ಗಂಗಾ'ಳೇ ಒಂದು ವಿಸ್ಮಯವೆಂಬಂತೆ ಕಾಣಿಸತೊಡಗಿದ್ದಳು. ತಂದೆಯ ಮಾತು ಚಾಚೂ ತಪ್ಪಿಲ್ಲದೇ ಪಾಲಿಸುವ, ಆತನ ನೆರಳಲ್ಲೇ ತನ್ನ ವ್ಯಕ್ತಿತ್ವದ ಪರವನ್ನು ಇಪ್ಪತ್ನಾಲ್ಕು ವರ್ಷ ಕಾಲ ಬಿಚ್ಚಿಡಲು ಪ್ರಯತ್ನಿಸಿದ ರಮೇಶನಿಗೆ ಗಂಗಾಳ ಸ್ವತಂತ್ರ ಬದುಕು ನಿಗೂಢವೆಂಬಂತೆ ಕಾಣಿಸತೊಡಗಿತ್ತು. ಆತ ಎಂ.ಎ. ಮಾಡುವಾಗಲೂ ತಂದೆಯೇ ಬಂದು ಆತನನ್ನು ಕಳಿಸಿದ್ದುಂಟು, ಕಾಲೇಜಿನಲ್ಲಿ ಪ್ರೊಫೆಸರ್‌ನ ಏನಾದರೂ ವಿಚಾರಿಸಬೇಕೆಂದರೆ ತಂದೆಯೇ ಬಂದು ವಿಚಾರಿಸುತ್ತಿದ್ದುದುಂಟು. ರಮೇಶ ತಂದೆಯ ಹಿಂದೆ ಕೈ ಕಟ್ಟಿ ನಿಲ್ಲುತ್ತಿದ್ದ ಮಾತ್ರ. ಅವನ ಇಪ್ಪತ್ನಾಲ್ಕು ವರ್ಷದಲ್ಲಿ ಅವನೊಳಗೆ ಆಳವಾಗಿ, ಬಲವಾಗಿ ಬೇರೂರಿದ್ದ ವ್ಯಕ್ತಿ ಅವನ ತಂದೆಯೇ. ಹಾಗಾಗಿ ಗಂಗಾಳನ್ನು ನೋಡಿದಾಗಲೆಲ್ಲಾ ಅವನಿಗೆ ಆಶ್ಚರ್ಯ. ಪುಟ ಪುಟನೇ ಹೆಜ್ಜೆ ಇಡುತ್ತಾ ಎಲ್ಲೆಂದರಲ್ಲಿ ಹೋಗಿಬಿಡುತ್ತಾಳೆ. ಯಾರೊಂದಿಗಾದರೂ ಅಳುಕಿಲ್ಲದೇ ವ್ಯವಹರಿಸಿಬಿಡುತ್ತಾಳೆ. ತನ್ನ ಪಾಡಿಗೆ ಒಬ್ಬಂಟಿಯಾಗಿದ್ದು ಸಮುದ್ರದ ಬಳಿ ಕುಳಿತು ಒಬ್ಬಳೇ ಬರೆಯುತ್ತಾಳೆ. ಅಂಜಿಕೆ ಇಲ್ಲ, ಸಂಕೋಚ ಇಲ್ಲ, ಯಾರು ಏನೆಂದುಕೊಂಡಾರು ಎಂಬ ಅಳುಕೂ ಇಲ್ಲ. ರಮೇಶನಿಗೆ ಕೆಲವು ಸಲ ಅಸೂಯೆಯ ಜೊತೆಗೆ ಗೌರವವೂ ಹುಟ್ಟುತ್ತಿತ್ತು. ಆತನ ತಂಗಿಯರಾಗಲೀ, ಅಥವ ಸುತ್ತ-ಮುತ್ತ ಆತ ಕಂಡ ಸಮಾಜದಲ್ಲಾಗಲೀ ರಮೇಶ ಗಂಗಾಳಂತಹ ವ್ಯಕ್ತಿಯನ್ನು ಕಂಡುದಿಲ್ಲ. ಅತೀ ಶ್ರೀಮಂತ ಕುಟುಂಬದ ಹೆಂಗಸರು ಹೀಗಿರುತ್ತಾರೇನೋ ಎಂಬ ಅವನ ಮನದೊಳಗಿನ ಅಂಶ ಗಂಗಾಳನ್ನು ನೋಡಿದಾಗ ಸುಳ್ಳು ಎನಿಸುತ್ತಿತ್ತು. ಗಂಗಾ ಶ್ರೀಮಂತ ಕುಟುಂಬದ ಹೆಣ್ಣು ಅಲ್ಲ, ಪಟ್ಟಣವಾಸಿಯೂ ಅಲ್ಲ, ಆಕೆಯೇ ಹೇಳುವ ಹಾಗೆ ಚಿಕ್ಕ ಹಳ್ಳಿಯೊಂದರಿಂದ ಬಂದ ಸಾಮಾನ್ಯ ಮಧ್ಯಮ ವರ್ಗದ ಹುಡುಗಿ. ರಮೇಶ ಹಾಲೆಂಡಿನ ಸಿರಿ-ಸಂಪತ್ತಿಗೆ ಕಣ್ಣು ಬಿಟ್ಟಂತೆ ತಾನು ಬೆಂಗಳೂರಿನ ಸಿರಿ-ಸಂಪತ್ತಿಗೇ ಕಣ್ಣು ಬಿಟ್ಟವಳು ಎಂದು ಗಂಗಾ ಯಾವಾಗಲೂ ರಮೇಶನಲ್ಲಿ ನುಡಿಯುತ್ತಾಳೆ. ಆದರೆ ಈಗ ಮಾತ್ರ ನಿರ್ಲಿಪ್ತೆ. ಯಾವ ಸಂಪತ್ತೂ ಅವಳನ್ನು ಬೆರಗುಗೊಳಿಸುವುದಿಲ್ಲ, ಅಲ್ಲಾಡಿಸುವುದಿಲ್ಲ. ಈ ಸಿರಿ-ಸಂಪತ್ತುಗಳ ಮಧ್ಯೆಯೇ ತನಗೆ ಬೇಕಾದ ಸತ್ಯಗಳನ್ನು ಹುಡುಕಿ ಹೋಗುತ್ತಾಳೆ ಗಂಗಾ. ಇನ್‌ಸ್ಟಿಟ್ಯೂಟ್‌ನಲ್ಲಿ ಚಮಚ, ಫೋರ್ಕ್‌ಗಳ ಜೊತೆ ಆಟವಾಡುವವರ ನಡುವೆಯೇ ನೇರವಾಗಿ ಎಲ್ಲಾ ಎತ್ತಿಟ್ಟು ಕೈಯಲ್ಲಿಯೇ ತಿಂದುಬಿಡುತ್ತಾಳೆ. ಸಾಧಾರಣವಾಗಿ ತಲೆ ಬಾಚಿ, ಸೀದಾ ಸಾದಾ ಉಡುಗೆಯಲ್ಲಿ ಹೊರಟುಬಿಡುತ್ತಾಳೆ. ಡೆನ್‌ಹಾಗ್‌ನ ಕಾಸ್‌ಮೆಟಿಕ್ ಪ್ರಪಂಚ, ಸೆಂಟ್ ಇತ್ಯಾದಿಗಳು ಆಕೆಯನ್ನು ಅಲುಗಾಡಿಸುವುದೇ ಇಲ್ಲ. ಡೆನ್‌ಹಾಗ್‌ನ ರೋಚಕಗಳಿಗಿಂತ ಗಂಗಾಳ ವ್ಯಕ್ತಿತ್ವದ ಆಯಾಮಗಳೇ

ಈಗ ರಮೇಶನಿಗೆ ಕುತೂಹಲಗಳಾಗಿ ಕಾಡತೊಡಗಿದ್ದವು. ಡ್ಯಾನ್ಸ್ ಕಲಿತು ಯುರೋಪಿಯನ್ ಸಂಸ್ಕೃತಿಯಲ್ಲಿ, ಬಿಳಿಯರ ಸಂಸ್ಕೃತಿಯಲ್ಲಿ ತನ್ನನ್ನು ಗುರುತಿಸಿಕೊಳ್ಳಬೇಕು ಎನ್ನುವಂತಿದ್ದ ತನ್ನ ಯೋಚನೆಗಳ ಬಗ್ಗೆಯೇ ಅವನಿಗೆ ನಗು ಬರುವುದು. ಕುಡಿಯುವುದನ್ನು ಕಲಿಯುವುದೇ ರೋಚಕತೆ ಎನ್ನುವ ಸಾಹಸಮಯ ಅಂಶ ನಿಧಾನವಾಗಿ ಮಾಯವಾಗತೊಡಗಿತ್ತು. ರಮೇಶ ನಿಧಾನವಾಗಿ ಗಂಗಾಳ ಜೀವನದಲ್ಲಿ, ವ್ಯಕ್ತಿತ್ವದಲ್ಲಿ ಬೆರೆಯಲು ಪ್ರಯತ್ನಿಸತೊಡಗಿದ್ದನು. ಹೊನ್ನೇಕೆರೆ ಬಿಟ್ಟಾಗಿನ ತನ್ನ ವ್ಯಕ್ತಿತ್ವದ ಆಯಾಮಗಳನ್ನು ರಮೇಶನಲ್ಲಿ ಕಾಣುತ್ತಾ ಹೋದ ಹಾಗೆ ಗಂಗಾ ಕೂಡಾ ಆತನ ಬೆಚ್ಚನೆಯ ಸ್ನೇಹಕ್ಕೆ ಕೈ ಚಾಚಿದ್ದಳು. ತಾನು ಬೆಂಗಳೂರಿನಲ್ಲಿ ಕಳೆದು ಹೋದ ಹಾಗೆ ಆತ ಯುರೋಪಿನ ಸಂಸ್ಕೃತಿಯಲ್ಲಿ ಕಳೆದು ಹೋಗಬಾರದು ಎನ್ನುವ ವಿಚಿತ್ರ ಬಯಕೆ ಆಕೆಯ ಮನದಾಳದಲ್ಲಿ ಮೂಡುತ್ತಿತ್ತು. ಓಡುವ ಜಗತ್ತಿನಲ್ಲಿ ನೆಲೆ ಇಲ್ಲದೇ ಓಡುತ್ತಾ ಹೋದರೆ ಉಳಿಯುವುದು ಒಂಟಿತನ ಮಾತ್ರ ಎಂದು ಗಂಗಾ ಯಾವಾಗಲೂ ರಮೇಶನಿಗೆ ಹೇಳುವಳು. ಕಾಣದ ದೇಶದ ವಸ್ತು ಸುಖದ ಪ್ರಪಂಚದಲ್ಲಿ ಕುಳಿತಾಗ ತಾಯಿ ಹೊನ್ನೇಕೆರೆಯಲ್ಲಿ ನಿತ್ಯ ದೇವರ ಪೂಜೆ ಮಾಡುವುದೇ ಆಧ್ಯಾತ್ಮಿಕತೆ ಎನಿಸತೊಡಗಿತ್ತು ಆಕೆಗೆ. ಹೊನ್ನೇಕೆರೆಯಲ್ಲಿ ಇದ್ದಾಗ ನಿತ್ಯ ಜೀವನದಲ್ಲಿ ಪೂಜೆ, ಪೂಜೆ ಎಂದು ಒದ್ದಾಡುವ ತಾಯಿಗೆ ಗಂಗಾ ಬಯ್ದು ಬಿಡುತ್ತಿದ್ದಳು. 'ಪೂಜೆ ಮಾಡ್ತಾ ಮಾಡ್ತಾನೆ ನಿನ್ನ ಇಡೀ ಜೀವನ ನಶಿಸಿ ಹೋಗುತ್ತೆ' ಎಂದು ರೇಗುವಳು. ಡೆನ್‌ಹಾಗ್‌ನಲ್ಲಿ ಬ್ರೆಡ್-ಜಾಮ್‌ಗಳ ತಿನ್ನು ತಿನ್ನುತ್ತಲೇ ನಡೆಯುವ, ತುಟಿಗಳಿಗೆ ರಂಗು ಸವರಿಕೊಂಡು, ಎತ್ತರದ ಚಪ್ಪಲಿಗಳಲ್ಲಿ, ಸೆಂಟ್ ಸೂಸುತ್ತಾ ನಡೆಯುವ, ವೈಯ್ಯಾರದಿಂದ ಕುಲುಕುವ ಹೆಂಗಸರನ್ನು ಕಂಡಾಗ ತಾಯಿಯ ಬದುಕೇ ಆತ್ಮೀಯ ಎನಿಸುತ್ತಿತ್ತು ಆಕೆಗೆ. ಪಶ್ಚಿಮ ದೇಶಗಳ ಈ ಓಡಾಟಗಳಿಗಿಂತ ದೇವರ ಕೋಣೆಯಲ್ಲಿ ಕುಳಿತು ತಾಸುಗಟ್ಟಲೇ ಪೂಜೆ ಮಾಡುತ್ತಾ ಏನೋ ಕಳೆದುಕೊಂಡಿದ್ದನ್ನು ಪಡೆಯುತ್ತೇನೆ ಎನ್ನುವ ತಾಯಿಯ 'ಆಧ್ಯಾತ್ಮ!'ದ ಬದುಕೇ ಮೇಲು ಮೈಯಿನದಾದರೂ ಹಿತವಾದದ್ದೇನೋ ಎಂಬ ಭಾವನೆ ಗಂಗಾಳಲ್ಲಿ ಆಗಾಗ್ಗೆ ಉಂಟಾಗುತ್ತಿತ್ತು. ಇದೆಲ್ಲವನ್ನೂ ಗಂಗಾ ರಮೇಶನ ಬಳಿ ಹೇಳುವಳು. ರಮೇಶ ಪುಟ್ಟ ಹುಡುಗನಂತೆ ಕುಳಿತು ಗಂಗಾ ಹೇಳುವುದನ್ನು ಕೇಳಿಸಿಕೊಳ್ಳುತ್ತಾನೆ. ಕೇವಲ ತನಗಿಂತ ಒಂದೇ ವರ್ಷಕ್ಕೆ ಹಿರಿಯವಳಾದ ಗಂಗಾ ಹೇಗೆಲ್ಲಾ ಯೋಚಿಸುತ್ತಾಳೆ ಎಂಬುದರ ಬಗ್ಗೆ ಆತನಿಗೆ ಆಶ್ಚರ್ಯವಾಗುತ್ತದೆ. 'ನಿನ್ನೊಳಗೇ ಅಡಕವಾಗಿರುವ ನಿನ್ನ ತಂದೆಯ ಚಿತ್ರವನ್ನು ನಿನ್ನ ಹೃದಯದಾಳದಿಂದ ಕಿತ್ತುಹಾಕುವ ತನಕ ನೀನು ಸ್ವತಂತ್ರವಾಗಿ ವರ್ತಿಸಲಾರೆ' ಎಂದು ಗಂಗಾ ಯಾವಾಗಲೂ ರಮೇಶನಿಗೆ ಹೇಳುತ್ತಾಳೆ. 'ನಿನ್ನಲ್ಲಿ ಯಾವಾಗಲೂ ಅಳುಕು, ಅಧೀನತೆಯ ಭಾವವೇ ತುಂಬಿಕೊಂಡಿರುತ್ತದೆ. ಅದಕ್ಕೆ ಕಾರಣ ನಿನ್ನೊಳಗೇ ಬಲವಾಗಿ ಬೇರೂರಿರುವ ನಿನ್ನ ತಂದೆಯ ಚಿತ್ರ. ಆತ ಸಂರಕ್ಷಕನಾಗಿ ನಿನ್ನ ಹೃದಯದೊಳಗೆ ಕೆಲಸ ಮಾಡುವವರೆಗೆ ನಿನ್ನ ವ್ಯಕ್ತಿತ್ವದಲ್ಲಿ ಬಿಡುಗಡೆಯೇ ಇಲ್ಲ' ಎಂದು ಗಂಗಾ ಹೇಳಿದಾಗ ರಮೇಶ ತನ್ನ ಬಗ್ಗೆಯೇ ಯೋಚಿಸುತ್ತಾನೆ. ಗಂಗಾಳ ಸನಿಹದಲ್ಲಿ ತನ್ನ ಬದುಕಿನ ಗ್ರಹಿಕೆಗಳು ಅಡ್ಡಾದಿಡ್ಡಿಯಾಗಿ ತಾನೊಂದು ಹೊಸ ಬದುಕಿಗೆ ಕಾಲಿಡುತ್ತಿದ್ದೇನೆಂದು ಆತನಿಗೆ ಅನಿಸತೊಡಗುತ್ತದೆ. ಗಂಗಾಳನ್ನು ದಿನಕ್ಕೆ ಒಂದು ಬಾರಿ ಭೇಟಿಯಾಗದಿದ್ದರೆ ರಮೇಶನಿಗೆ ಸಮಾಧಾನವೆನಿಸುತ್ತಿರಲಿಲ್ಲ. ಆಕೆಯನ್ನು ಹುಡುಕಿಕೊಂಡು ಬಿಡುವಿರುವಾಗಲೆಲ್ಲಾ ಓಡೋಡಿ ಬರುವನು. ಕುಮುದಿನಿಯ ಮನೆಯಲ್ಲಿ ಪಾರ್ಟಿ, ಕಮಲಮ್ ಮನೆಯಲ್ಲಿ, ಡೋರೀನ್ ಜೊತೆ, ಆಫ್ರಿಕಾದ ಹುಡುಗಿಯರ ಜೊತೆ ಮಾತುಕತೆಯೆಂದು ಗಂಗಾ ಬರದ ದಿನಗಳಲ್ಲಿ ರಾತ್ರಿ ಒಂದು ಘಂಟೆಯವರೆಗೆ ಗಂಗಾ ಇಳಿಯಬಹುದಾದ ಸ್ಟಾಪ್‌ನಲ್ಲಿ ಕಾಯುತ್ತಿದ್ದ. ಹೀಗೆ ರಾತ್ರಿ ಒಂದು ಘಂಟೆಯಲ್ಲಿ ಡೆನ್‌ಹಾಗ್‌ನಲ್ಲಿ ಓಡಾಡಲು ಟ್ರ್ಯಾಮ್ ವ್ಯವಸ್ಥೆಯಿಂದ, ಪೋಲೀಸ್ ಹಾಗೂ ಇತರ ಸಂಪರ್ಕ ಮಾಧ್ಯಮಗಳಿಂದ ಸಾಧ್ಯವಾಗುವುದರಿಂದ ನನಗೆ ಖುಷಿಯಾಗುತ್ತದೆ

ಎಂದು ಗಂಗಾ ಹೇಳುವಳು. 'ಹೆಂಗಸರೇ ಏಕೆ ಅಡಿಗೆ ಮಾಡಬೇಕು?' ಎಂದು ಸಿಡಿಮಿಡಿಗೊಳ್ಳುವ ಗಂಗಾಳಿಗಾಗಿ ತನ್ನ ಕೊಠಡಿಯಿಂದ ಹೊರ ಬರುವಾಗ ತನಗೆ ಗೊತ್ತಿರುವ ಪಲ್ಯ, ಗೊಜ್ಜು ಅಥವಾ ನಿಂಬೆ ಹಣ್ಣಿನ ಚಿತ್ರಾನ್ನವಾದರೂ ಕೈಯಲ್ಲಿ ಹಿಡಿದು ಗಂಗಾಳನ್ನು ನೋಡಲು ಬರುವನು. ಹೀಗೇ ಕೆಲವೊಮ್ಮೆ ಬೆಚ್ಚಗೆ ಎನಿಸುತ್ತಿದ್ದ ಗಂಗಾ, ಮಾತನಾಡುವಾಗ ಅರ್ಥವಾಗುತ್ತಿದ್ದ ಗಂಗಾ, ಮಾತನಾಡದೇ ಮೌನವಾಗಿರುವಾಗ 'ಅತೀ ದೂರ' ಎನ್ನಿಸುವಳು. ಘಂಟೆಗಟ್ಟಲೇ ಟ್ರ್ಯಾಮ್ ಸ್ಟಾಪ್‌ನಲ್ಲಿ ಕಾಯುತ್ತಿದ್ದರೆ 'ನನಗೋಸ್ಕರ ಏಕೆ ಕಾಯಲು ಹೋದೆ' ಎನ್ನುವಳು. ಗುಜರಾತಿನ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದ ರಮೇಶ ಬೆಂಗಳೂರಿಗೆ ಬಂದುದು ಕೇವಲ ವರ್ಷದ ಹಿಂದೆ ಮಾತ್ರ. ಆತ ಕೆಲಸ ಮಾಡುತ್ತಿದ್ದ ಕಾರ್ಖಾನೆಯಿಂದ ಆತ ಈ ಇನ್‌ಸ್ಟಿಟ್ಯೂಟ್‌ಗೆ ಕಳಿಸಲ್ಪಟ್ಟಿದ್ದನು. ಅವನಿಗೆ ಕನ್ನಡ ಕೂಡಾ ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲ. ಆತ ತಪ್ಪು ತಪ್ಪಾಗಿ ಒಂದೆರಡು ಶಬ್ದ ಕನ್ನಡದಲ್ಲಿ ಹೇಳಿದಾಗ ಗಂಗಾ ಬಿದ್ದು ಬಿದ್ದು ನಗುವಳು. 'ನೀವೆಲ್ಲ ಸೇರಿ ಬೆಂಗಳೂರನ್ನು, ಬೆಂಗಳೂರಿನ ಭಾಷೆಯನ್ನು ಕುಲಗೆಡಿಸಿಬಿಟ್ಟಿರಿ' ಎನ್ನುವಳು. ಇವರೀರ್ವರೂ ಇಂಗ್ಲೀಷಿನಲ್ಲಿ ಮಾತನಾಡುವುದನ್ನು ಕಂಡಾಗಲೆಲ್ಲಾ ಗಂಗಾಳ ಸ್ನೇಹಿತೆಯರಿಗೆ ತುಂಬಾ ಆಶ್ಚರ್ಯವಾಗುತ್ತಿತ್ತು. ಬೆಂಗಳೂರಿನಿಂದ, ಒಂದೇ ಪ್ರದೇಶದಿಂದಲೇ ಬಂದಿರುವ ಈರ್ವರೂ ಅದ್ಹೇಕೆ ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ ಎಂಬುದೇ ಅವರ ಪ್ರಶ್ನೆ. ಗಂಗಾ ನಕ್ಕುಬಿಡುತ್ತಿದ್ದಳು. ಭಾರತದಂತಹ ವಿಶಾಲ ದೇಶದ ಸಮಸ್ಯೆಗಳ ಸಂಕೀರ್ಣತೆ, ಸುಳಿಯನ್ನು ಗ್ರಹಿಸುವುದೇ ಪಾಶ್ಚಿಮಾತ್ಯರಿಗೆ ಕಷ್ಟ ಎಂದು ಆಕೆಗೆ ತೋರುತ್ತಿತ್ತು. ನೂರಾರು ಪ್ರಾದೇಶಿಕ ಭಾಷೆಗಳು, ಯಾರು ವಲಸೆ ಹೋಗಿ ಎಲ್ಲಿ ಬದುಕುತ್ತಾರೋ? ಭಾಷೆಯೂ ಭಾರತೀಯರಿಗೊಂದು ಸಮಸ್ಯೆ ಎನ್ನುವುದನ್ನು ತಿಳಿಯಾಗಿ ಹೇಳಿದರೆ ಅದು ಅವರ ಗ್ರಹಿಕೆಗೆ ನಿಲುಕುವುದಿಲ್ಲ. 'ಅದು ಹೇಗೆ ಸಾಧ್ಯ? ನಿಮ್ಮೆಲ್ಲರಿಗೂ ಒಂದು ರಾಷ್ಟ್ರೀಯ ಭಾಷೆ ಇರಲೇಬೇಕಲ್ಲ' ಎನ್ನುತ್ತಾರೆ. ಬೆಂಗಳೂರಿನಲ್ಲಿ ಭಾಷೆಯ ಬಗ್ಗೆ ನಡೆಯುವ ಚರ್ಚೆಗಳು ಗಂಗಾಳ ಜ್ಞಾಪಕಕ್ಕೆ ಬರುತ್ತವೆ. ಮಣ್ಣಿನ ವಾಸನೆಗೆ ಬದುಕು ಹತ್ತಿರವಾಗಬೇಕು, ಮಕ್ಕಳ ಮನಸ್ಸಿನ ಸೃಜನಶೀಲತೆ ಅರಳಬೇಕು ಎನ್ನುವ ಹಂತದಲ್ಲಿ ಶಿಕ್ಷಣದಲ್ಲಿ - ಪ್ರಾಥಮಿಕ ಶಿಕ್ಷಣದಲ್ಲಿ ಹಿಂದಿ/ಇಂಗ್ಲೀಷ್ ಹೇರಿಕೆಯನ್ನು ವಿರೋಧಿಸಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದುದುಂಟು, ಧರಣಿ ಕೂತದ್ದೂ ಉಂಟು. ಆದರೆ ಇಂತಹ ದೇಶದಲ್ಲಿ ಪ್ರಾದೇಶಿಕ ಭಾಷೆ ಗಣನೆಗೆ ಬರುವುದಿಲ್ಲ. ನಿಮ್ಮ ದೇಶದ ಭಾಷೆ ಎನ್ನುತ್ತಾರೆ. ಈ ಭಾಷೆಯ ಪ್ರಶ್ನೆ ಭಾರತದಲ್ಲಿ ಅಷ್ಟು ಸುಲಭವಾಗಿ ಬಗೆಹರಿಸಲು ಸಾಧ್ಯವಾಗುವುದಿಲ್ಲ ಎಂದು ಗಂಗಾ ಯೋಚಿಸುತ್ತಾಳೆ.

ಆರೇಳು ತಿಂಗಳಲ್ಲಿ ಹೀಗೇ ರಮೇಶ ಹೆಜ್ಜೆ ಹೆಜ್ಜೆಗೆ ಹತ್ತಿರದವನಾಗತೊಡಗಿದಾಗ ಗಂಗಾಳಿಗೆ ಹೃದಯದ ಒಳಗೆಲ್ಲೋ ಗಾಬರಿಯಾಗತೊಡಗುತ್ತದೆ. ರಮೇಶ ಪ್ರಪಂಚವನ್ನು ಅಷ್ಟಾಗಿ ಅರಿಯದ ಮುಗ್ಧ. ಗಂಗಾ ಯಾವಾಗಲೂ ಬೆಚ್ಚಗೆ ಮಾತನಾಡುವುದರಿಂದ ಆಕೆಗೆ ಹತ್ತಿರ ಹತ್ತಿರ ಸರಿಯುತ್ತಾ ಹೋಗುತ್ತಿದ್ದಾನೆ. ಗಂಗಾಳಿಗೆ ಇದೇ ಭಯವಾಗುತ್ತದೆ. ಆಕೆಯ ಬದುಕಿಗೆ ಅಂಟಿಕೊಳ್ಳುವ ಪ್ರಯತ್ನಗಳನ್ನು ಆತನಲ್ಲಿ ಕಂಡಾಗ ಆಕೆಗೆ ದಿಗಿಲಾಗುತ್ತದೆ. ಹೊನ್ನೇಕೆರೆಯಿಂದ ತಾನು ಬೆಂಗಳೂರಿಗೆ ಬಂದಾಗಿನ ವಿಸ್ಮಯಗಳನ್ನು ರಮೇಶನಲ್ಲಿ ಗಮನಿಸಿದಾಗ ಆ ಮುಗ್ಧತೆಗೆ ಗಂಗಾ ಸ್ನೇಹ ಹಸ್ತ ಚಾಚಿದ್ದಳು. ಕುಳಿತು ಅವನೊಡನೆ ಬೆಚ್ಚಗೆ ಮಾತನಾಡಿದ್ದಳು. ಯುರೋಪಿನ ಸಂಸ್ಕೃತಿಯಲ್ಲಿ ಆತ ಕಳೆದು ಹೋಗಬಾರದು, ತಾನು ಬೆಂಗಳೂರಿನಲ್ಲಿ ಛಿದ್ರ ಛಿದ್ರವಾದ ಹಾಗೆ ಆತ ಆಗಬಾರದು ಎಂಬುವ ಉತ್ಕಟ ಬಯಕೆಯೊಂದು ಆಕೆಯಲ್ಲಿ ಮೂಡುತ್ತಿತ್ತು. ಹಾಗಾಗಿ ಸ್ನೇಹದಲ್ಲಿ ಮಾರ್ದವತೆ ಇತ್ತು, ಬೆಚ್ಚಗೆ ಎನಿಸಬಹುದಾದ ಹೃದಯದ ಸ್ಪಂದನವಿತ್ತು. ರಮೇಶನ ಕಾಯುವಿಕೆ, ಮೂರು ಹೊತ್ತು ಗಂಗಾಳಿಗೆ ಅಂಟಿಕೊಳ್ಳಲು ಪ್ರಯತ್ನಿಸುತ್ತಿದ್ದುದು,

ಆಕೆ ಸಂತೋಷವಾಗಿರುವುದನ್ನು ಬಯಸುವುದು - ಇವೆಲ್ಲ ನಿಧಾನವಾಗಿ ಗಂಗಾಳಲ್ಲಿ ದಿಗಿಲು ಉಂಟುಮಾಡತೊಡಗಿದ್ದವು. ತನ್ನ ಅಲೆಮಾರಿ ಬದುಕಿನ ಬಗ್ಗೆ ಈತನಲ್ಲಿ ಹೇಳಿದರೆ ಈತ ಬೆಚ್ಚಿಬೀಳಬಹುದು ಎಂದು ಆಕೆ ಎಣಿಸುತ್ತಿದ್ದಳು. ಇಷ್ಟರವರೆಗೆ ಅವನಿಗೆ ಕಾಣುತ್ತಿದ್ದ ಗಂಗಾ ಬೇರೆ ರೀತಿಯಾಗಿಯೇ ಕಾಣಬಹುದು. ತನ್ನಲ್ಲಿರದ 'ಗಂಡುತನ'ವನ್ನು ರಮೇಶ ಗಂಗಾಳಲ್ಲಿ ಕಂಡಿದ್ದ. ಆತನ ಮನಸ್ಸಿನ ಗೌರವಾದರಗಳಿಗೂ ಅದೇ ಕಾರಣವಿದ್ದಿರಬಹುದು. ಅಪ್ಪನ ಹಿಡಿತದ ಭಯದಲ್ಲಿ, ಅಂಕೆಯಲ್ಲಿಯೇ ಬೆಳೆದಿದ್ದ ರಮೇಶನಿಗೆ ಬೆಂಗಳೂರಿಗೆ ಬರುವವರೆಗೂ ಅಪ್ಪನೇ ಆದರ್ಶದ ಬಿಂದುವಾಗಿದ್ದ. ಅಪ್ಪನ ಎದುರಿಗೆ ನಿಂತು ಎಂದೂ ಆತ ಮಾತನಾಡಿದವನಲ್ಲ. ಅಮ್ಮನನ್ನು ನೆನೆಸಿಕೊಂಡು ಹಾಲೆಂಡಿಗೆ ಬಂದ ಹಲವಾರು ದಿನಗಳು ಅತ್ತದ್ದುಂಟು. ಅಕ್ಕ-ತಂಗಿಯರೊಂದಿಗೆ ಮನೆಯೊಳಗೆ ಬೆಚ್ಚಗೆ ಇರುತ್ತಿದ್ದ ರಮೇಶನಿಗೆ ಹೊರಗಿನ ಪ್ರಪಂಚಕ್ಕೆ ಮುಖಾಮುಖಿಯಾದರೆ ದಿಕ್ಕು ತಪ್ಪಿದಂತಾಗಿಬಿಡುತ್ತಿತ್ತು. ಬೆಂಗಳೂರಿನ ಆತ ಕೆಲಸ ಮಾಡುತ್ತಿದ್ದ ಕಾರ್ಖಾನೆಯ ಎಂ.ಡಿ.ಯ ಬಗ್ಗೆಯೂ ಅದೇ ಅಭಿಮಾನ/ವಿಧೇಯತೆ. ಅಪ್ಪನ ಸ್ಥಾನದಲ್ಲಿ ಅವರನ್ನು ಇರಿಸಿ ನೋಡುತ್ತಿದ್ದ ರಮೇಶ. ಬಹುಶಃ ಆ ಕಾರಣದಿಂದಲೇ ಆತನ ಎಂ.ಡಿಗೆ ಈತನ ಬಗ್ಗೆ ಪ್ರೀತಿ-ಮೆಚ್ಚುಗೆ. ಹೀಗೇ ಮುಂದುಬರಲಿ ಎಂದು ಅವರೇ ಆಸಕ್ತಿ ವಹಿಸಿ 'ಲೇಬರ್ ಸ್ಟಡೀಸ್'ಗೆಂದು ರಮೇಶನನ್ನು ಅವರು ಗಂಗಾ ಓದುತ್ತಿದ್ದ ಇನ್‌ಸ್ಟಿಟ್ಯೂಟ್‌ಗೆ ಕಳಿಸಿದ್ದು. ಗಂಗಾಳನ್ನು ನೋಡುವಾಗಲೆಲ್ಲಾ ರಮೇಶನಿಗೆ ತಾನು ಬಾಲ್ಯದಲ್ಲಿ ಹಾಗೂ ಬೆಳೆಯುವಾಗ ಏನನ್ನೋ ಕಳೆದುಕೊಂಡೆ ಎನ್ನುವ ಭಾವನೆ ಬರುತ್ತಿತ್ತು. ಇಪ್ಪತ್ನಾಲ್ಕರವರೆಗೆ ಆತುಕೊಂಡೇ ಬದುಕಿದ ಜೀವನ ಆತನದು. ಯಾವುದೇ ನಿರ್ಧಾರಕ್ಕೆ ಅಪ್ಪನ ಕಡೆ ನೋಡುವ ಹಾಗೆ ಬೆಂಗಳೂರಿನಲ್ಲಿ ಕಾರ್ಖಾನೆಯ ಎಂ.ಡಿ. ಕಡೆ ನೋಡುತ್ತಿದ್ದ. ಡೆನ್‌ಹಾಗ್‌ನಲ್ಲಿ ಐದಾರು ತಿಂಗಳ ಅವಧಿಯಲ್ಲಿ ಗಂಗಾಳ ಮೇಲೆ ತಾನು ಅವಲಂಬಿತನಾಗುತ್ತಿದ್ದೇನೆಂಬುದು ಅವನಿಗೇ ಅರ್ಥವಾಗತೊಡಗಿತ್ತು. ಹೀಗೆಂದು ಗಂಗಾಳೂ ರಮೇಶನಿಗೆ ಛೇಡಿಸುತ್ತಿದ್ದಳು. 'ನಿನ್ನ ನಿತ್ಯದ ಚಿಕ್ಕ-ಪುಟ್ಟ ವಿಚಾರಗಳಿಗೂ ಯಾಕೆ ನನ್ನನ್ನೇ ಕೇಳುತ್ತೀ. ನೀನು ಸ್ವತಂತ್ರವಾಗಿ ಯೋಚಿಸು, ಸರಿ ಎನ್ನಿಸಿದರೆ ಮಾಡು', ಎನ್ನುವಳು. ಆತನ ಪರಾವಲಂಬಿತವನ್ನು ಗಂಗಾ ಹೆಜ್ಜೆ ಹೆಜ್ಜೆಗೂ ಟೀಕಿಸುವಳು. 'ಸರಿ-ತಪ್ಪು ಎನ್ನುವುದು ನಿನ್ನ ತಿಳುವಳಿಕೆಯಾಗಿರಬೇಕು' ಎನ್ನುವಳು. ಇಂತಹ ಮನುಷ್ಯ ತೀರಾ ಹತ್ತಿರವಾಗ ತೊಡಗಿದ್ದಾನೆ. ಭಾವನೆಗಳ ಲಯದಲ್ಲಿ ಹತ್ತಿರನಾಗಬಯಸುತ್ತಿದ್ದ ರಮೇಶ ಬಹುಶಃ ಅಷ್ಟು ಹತ್ತಿರವಾಗುತ್ತಿದ್ದುದು ಆತನ ಹೆಣ್ತನಗಳಿಂದಾಗಿ ಎಂದು ಗಂಗಾಗೆ ಅನ್ನಿಸತೊಡಗಿತ್ತು. ಬೆಂಗಳೂರಿನ ಅಲೆಮಾರಿ ಬದುಕು ಆಕೆಗೆ ಭಯ ಹುಟ್ಟಿಸುತ್ತದೆ. ದೆಹಲಿಯಲ್ಲಿ ವೆಂಕಟೇಶ್ ಕುಡಿದು ಪೋಲೀಸ್ ಸ್ಟೇಷನ್‌ಗೆ ಹೋದುದು ಜ್ಞಾಪಕಕ್ಕೆ ಬರುತ್ತದೆ. ಇಂತಹ ಅಶಾಂತಿಯ ಬದುಕು ತನ್ನದಾಗಬೇಕೇ ಎಂದು ನೆನಸಿಕೊಂಡರೆ ಗಂಗಾಗೆ ಹೆದರಿಕೆಯಾಗುತ್ತದೆ. ಇಂತಹ ಅಶಾಂತಿಯ ಬದುಕಿನಲ್ಲಿ ಯಾವ ನೆಲೆ ಹುಡುಕುವುದು? ರಮೇಶನೊಟ್ಟಿಗೆ ಬದುಕಲು ನಿರ್ಧರಿಸಿಬಿಟ್ಟರೆ? ತಾನು ಸಂತೋಷದಿಂದಿರಬಲ್ಲೆನೇ ಎಂದು ಗಂಗಾ ಯೋಚಿಸುತ್ತಾಳೆ. ಅಂಟಿಕೊಂಡು ಬದುಕುವ ಬದುಕು ತಾಯಿ, ತಂದೆಯರ ಹಾಗೆ ನರಕವಾಗಿಬಿಟ್ಟರೆ? ಅಂಟಿಕೊಂಡು ಬದುಕುವ ಬದುಕು ತನ್ನಲ್ಲಿ ಕ್ರೂರತೆಯನ್ನು ಹುಟ್ಟುಹಾಕಿಬಿಟ್ಟರೆ? ರಮೇಶ ಹತ್ತಿರವಾಗುತ್ತಿದ್ದ ಹಾಗೆ ಆತನನ್ನು ದೂರ ಮಾಡಿಬಿಡಬೇಕು ಅನಿಸುತ್ತದೆ. ಅಂಟಿಕೊಂಡರೆ ತನ್ನ ಬದುಕಿನ ಜೊತೆ ಆತನ ಬದುಕನ್ನೂ ಛಿದ್ರ ಛಿದ್ರ ಮಾಡಿಬಿಡುತ್ತೇನೋ ಏನೋ ಎನ್ನುವ ಆತಂಕ ಗಂಗಾಳಿಗೆ ಕಾಡುತ್ತದೆ. ಇದೆಲ್ಲ ಕುರಿತು ರಮೇಶನಲ್ಲಿ ಹೇಳಿಬಿಡಬೇಕು ಅನಿಸುತ್ತದೆ. ತನ್ನ ಅಲೆಮಾರಿ ಬದುಕಿನ ಆಯಾಮಗಳನ್ನು ರಮೇಶನ ಮುಂದೆ ಪದರು ಪದರಾಗಿ ಬಿಚ್ಚಿಡಬೇಕು ಎನಿಸುತ್ತದೆ. ಅಂಟಿಕೊಂಡು ಬದುಕುವುದು ತನಗೆ ಸಾಧ್ಯವೇ ಎಂದು ರಮೇಶನ ಬಳಿಯೇ ಕೇಳಿಬಿಡಬೇಕು. ತನ್ನ

ಬದುಕಿನ ರೀತಿ ಆತನ ಮುಗ್ಧ ಬದುಕೂ ಛಿದ್ರ ಛಿದ್ರವಾಗಿಬಿಡಬಹುದು ಎಂಬ ಸತ್ಯವನ್ನು ಅವನ ಮುಂದೆಯೇ ಬಿಚ್ಚಿಡಬೇಕೆಂದು ಗಂಗಾ ಯೋಚಿಸುತ್ತಾಳೆ. ಯಾಕೋ ಈ ಗೊಂದಲಗಳೇ ಬೇಡ ಎನಿಸಿದಾಗ ರಮೇಶನ ಸಂಬಂಧವನ್ನು ಬರಿಯ ಸ್ನೇಹ ಸಂಬಂಧವಾಗಿ ಮಾತ್ರ ಉಳಿಸಿಕೊಳ್ಳಬೇಕು ಎಂದೂ ಕೂಡಾ ಆಕೆ ಯೋಚಿಸುತ್ತಾಳೆ. ದೈಹಿಕ ಸಂಬಂಧ ತಮ್ಮ ನಡುವೆ ಇರುವ ಬೆಚ್ಚನೆಯ ಅಂಶವನ್ನೂ ಮುರಿದು ಹಾಕಿಬಿಡುತ್ತದೆ ಎಂಬುದೊಂದು ಆತಂಕವೂ ಮನದಾಳದಲ್ಲಿ ಆಕೆಗೆ ಕಾಡುತ್ತದೆ. ಇದ್ದೂ ಇಲ್ಲದಂತೆ ಇದ್ದುಬಿಡುವ ತನ್ನ ಅಲೆಮಾರಿತನ ಆ ಮುಗ್ಧ ಹುಡುಗನ ಬಾಳನ್ನು ಹಾಳು ಮಾಡದಿರಲಿ ಎಂದು ಅನ್ನಿಸಿದಾಗಲೆಲ್ಲಾ ರಮೇಶನಿಗೆ ತನ್ನ ಬಗ್ಗೆ ಇರುವ ನಿರೀಕ್ಷೆಗಳನ್ನು ನಿರ್ಲಿಪ್ತತೆಯಿಂದ ದೂರ ಸರಿಸಬೇಕು ಎಂದುಕೊಳ್ಳುತ್ತಾಳೆ ಗಂಗಾ.

* * * *

ಸಾಶಾ ಕರೆದ ಪಾರ್ಟಿಗೆ ಗಂಗಾ ಹೋದದ್ದು ಈ ಸಂದರ್ಭದಲ್ಲಿಯೇ. ಸಾಶಾ ಗಂಗಾಳ ಅಧ್ಯಾಪಕಿ. ಆರು ಅಡಿ ಎತ್ತರದ ಮಸ್ತಾದ ಮೈ ಕಟ್ಟಿನ ಹೆಂಗಸು. ಬಾಬ್ ಮಾಡಿದ ಕೂದಲು. 34-35ರ ಹರೆಯ. ಮಸ್ತಾದ ಮೈ ಕಟ್ಟಿಗೆ ತಕ್ಕಂತೆ ಗಂಡಸರ ನಡುಗೆ. ಹೆಣ್ಣು ಎಂದು ಗುರುತಿಸಲಾಗದ ರೀತಿಯಲ್ಲಿ ಆಕೆ ಕಾಣುತ್ತಿದ್ದುದುಂಟು. ಟಪ್ ಟಪ್ ಎಂದು ನಡೆಯುವ ರೀತಿ, ಎದೆಯೇರಿಸಿ ಮಾತನಾಡುವ ಗತ್ತು, ಒರಟು ಧ್ವನಿ - ಪರೀಕ್ಷಿಸಿ ನೋಡಿ ಹೆಣ್ಣು ಎಂದು ದೃಢಪಡಿಸಿಕೊಳ್ಳಬೇಕು. ಸಾಶಾ ತಾವು ಲೆಸ್‌ಬಿಯನ್ ಎಂದು ಹೇಳಿಕೊಳ್ಳುತ್ತಿದ್ದರು. ಗಂಗಾಗೆ ಈ ಬಗ್ಗೆ ತಿಳಿದಿತ್ತಾದರೂ ಆಕೆ ಹೆಚ್ಚು ಹತ್ತಿರದಿಂದ ಲೆಸ್‌ಬಿಯನ್‌ರ ಜೀವನ ನೋಡಿದ್ದು ಹಾಲೆಂಡಿನಲ್ಲಿಯೇ. ಸಾಶಾ ಬದುಕುತ್ತಿದ್ದುದು ಒಂದು ಮಗುವಿದ್ದ ಹೆಂಗಸಿನೊಡನೆ. ಗಂಗಾಗೆ ಸಾಶಾರವರನ್ನು ನೋಡಿದಾಗ ಸ್ವಲ್ಪ ಮುಜುಗರವೇ ಆಗುತ್ತಿತ್ತು. ಬಡತನ/ನಗರೀಕರಣ/ಆರ್ಥಿಕ ಬಿಕ್ಕಟ್ಟು ಇಂತಹ ಸಮಸ್ಯೆಗಳೊಂದಿಗೆ ತಳಕು ಹಾಕಿಕೊಂಡಿರುವ ಮಹಿಳಾ ಸಮಸ್ಯೆಗಳಿಗೆ ಲೆಸ್‌ಬಿಯನಿಸಂ ವಾದ ಒಂದು ಉತ್ತರವಾಗಬಹುದೇ ಎಂದು ಗಂಗಾ ಯೋಚಿಸುವಳು. ಜಾತಿ/ವರ್ಗ/ಬಡತನಗಳೊಂದಿಗೆ ಹೆಣೆದುಕೊಂಡಿರುವ ಭಾರತದ ಮಹಿಳೆಯರ ಸಮಸ್ಯೆಗಳಿಗೆ ಈ ವಾದ ಹತ್ತಿರ ಎನಿಸುತ್ತದೆಯೇ? ಗಂಗಾ ಈ ಲೆಸ್‌ಬಿಯನಿಸಂ ಬದುಕನ್ನು ಹೆಚ್ಚು ಹತ್ತಿರದಿಂದ ಕಂಡದ್ದು ಡೆನ್‌ಹಾಗ್‌ನಲ್ಲಿಯೇ. ಹೆಂಗಸರು ಒಟ್ಟಿಗೇ ಬದುಕಬೇಕು ಎನ್ನುವ ಕಲ್ಪನೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೆಚ್ಚು ಹೆಚ್ಚು ಪ್ರಚಾರಕ್ಕೆ ಬರುವ ಗ್ರಹಿಕೆಯ ಹಿಂದಿನ ಭಾವನೆ ಕುರಿತು ಯೋಚಿಸಲು ಗಂಗಾ ಪ್ರಯತ್ನಿಸುವಳು. ಭಾರತದಲ್ಲಿ ಅಕ್ಕ-ತಂಗಿಯರೆಲ್ಲ ಇಪ್ಪತ್ತು, ಇಪ್ಪತ್ತೈದು ವರ್ಷಗಳು ಒಟ್ಟಿಗೆ ಬದುಕುವುದಿಲ್ಲವೆ? ಹಾಸ್ಟೆಲ್‌ಗಳಲ್ಲಿ ಹೆಂಗಸರು ಒಟ್ಟಿಗೇ ಇರುವುದಿಲ್ಲವೇ? ಮೂಲಭೂತ ವಿಧಿನಿಯಮಗಳಿಗೆ, ಸೃಷ್ಟಿಗೆ ಪೂರ್ಣ ವಿರೋಧವಾಗಿ ಚಳುವಳಿ ಕಟ್ಟಿ ಏನು ಪ್ರಯೋಜನ ಎಂದು ಗಂಗಾಗೆ ಅನ್ನಿಸುತ್ತಿತ್ತು. ತಾಯ್ತನ ಬೇಕು/ಬೇಡ ಎನ್ನುವುದು ಆಯ್ಕೆ ಸರಿ. ಆದರೆ ಒಂದು ಇಡಿಯ ಸಮುದಾಯವನ್ನೇ ಧಿಕ್ಕರಿಸಿ ಬದುಕುತ್ತೇವೆ, ಹಾಗೆ ಬದುಕಬೇಕು ಎಂದು ಒಂದು ಚಳುವಳಿ ಕಟ್ಟುವುದು ಗಂಗಾಗೆ ಅತಿರೇಕದ ವಾದವಾಗಿ ಕಾಣುತ್ತಿತ್ತು. ಎಲ್ಲಾ ಕಹಿ ನೆನಪುಗಳೊಂದಿಗೂ ತಂದೆ/ಅಣ್ಣ/ತಮ್ಮಂದಿರ ನಡುವೆ ಭಾರತದಂತಹ ದೇಶದಲ್ಲಿ ಇರಬಹುದಾದ ಒಂದು ಮಧುರ ಬಾಂಧವ್ಯವನ್ನು ಈ ವಾದ ಹಾಳು ಮಾಡುವುದಿಲ್ಲವೇ ಎಂದು ಗಂಗಾ ಯೋಚಿಸುವಳು.

ಸಾಶಾರ ಮನೆಯಲ್ಲಿ ಪಾರ್ಟಿಗೆ ಹೋಗುವಾಗ ಶ್ರೀಲಂಕಾದ ಕುಮುದಿನಿಯನ್ನು ಅಲ್ಲಿ ಕಂಡು ಗಂಗಾಗೆ ಸಂತೋಷವಾಯಿತು. ದಪ್ಪಗೆ, ಕಪ್ಪಗೆ, ದೊಡ್ಡ ಅಂಡುಗಳ ಹುಡುಗಿ ಆಕೆ. 'ನಾನೊಂದು ಡ್ರಮ್' ಎಂದು ಆಕೆ ನಗಾಡುವುದನ್ನು ನೋಡುವುದೇ ಗಂಗಾಗೆ ಖುಷಿ. ಆಕೆ 'ಹಲೋ ಕಾಮ್ರೇಡ್ಸ್'

ಎಂದು ಪಾರ್ಟಿಗೆ ಬರುತ್ತಿದ್ದ ಆಫ್ರಿಕಾದ ಹುಡುಗಿಯರನ್ನು ಕರೆದಳು. ಗಂಗಾಳ ಕಡೆ ತಿರುಗಿ 'Hey Ganga, Can't you find a different word for comrades? I have been calling my marxist colleagues like that. But I don't feel warmth when I call my female friends like that. Why don't you give me a new word? okey, listen friends, here is Ganga, our introvert friend, and she will give us a new word for comrade tomorrow'. ಹಾಗೆಂದು ಹೇಳುತ್ತಲೇ ಕುಮುದಿನಿ ಎಲ್ಲರ ಮುಂದೆ ಗಂಗಾಳನ್ನು ತಬ್ಬಿಕೊಳ್ಳುತ್ತಾಳೆ. ಯಾರಿಗೂ, ಎಲ್ಲಿಯೂ ಸಂಕೋಚವೆನ್ನಿಸಬಾರದು, ಅಳುಕೆನ್ನಿಸಬಾರದು - ಹಾಗೆ ವರ್ತಿಸುವ ಗುಣ ಕುಮುದಿನಿಯದು. ಯಾರೂ ಅಂತರ್ಮುಖಿಗಳಾಗಬಾರದು, ಯಾರಿಗೂ left out ಎನ್ನಿಸಬಾರದು ಎಂಬುದನ್ನು ಗುಂಪಿನಲ್ಲಿರುವಾಗ ಪ್ರಜ್ಞಾಪೂರ್ವಕವಾಗಿ ಮಾಡುತ್ತಿದ್ದವಳು ಕುಮುದಿನಿ. ಗಂಗಾಳಿಗೆ ಹೇಳುತ್ತಾಳೆ, 'ನಿನ್ನ ಕಂಡರೆ ನನಗೆ ಇಷ್ಟ, ನೀನೇ ನನ್ನ ಹೆಂಡತಿಯಾಗಬೇಕು ಎನ್ನುವಷ್ಟು ಮೋಹ ನನಗೆ' ಹೀಗೆ ಕುಮುದಿನಿ ನಕ್ಕಾಗ ಸಾಶಾ ಎಲ್ಲಿಯೋ ನಿಂತು ಕುಮುದಿನಿಯ ಮಾತು ಕೇಳಿಸಿಕೊಂಡವರು 'ಅದಕ್ಕೇನು ಕುಮುದಿನಿ' ಎಂದು ಬಿಯರ್ ಗ್ಲಾಸ್ ಹಿಡಿದು ಗಂಗಾ, ಕುಮುದಿನಿ ನಿಂತಲ್ಲಿಗೆ ಬರುತ್ತಾರೆ. ಸಾಶಾ ನಕ್ಕರೆ ಹೃದಯಪೂರ್ವಕವಾಗಿ ದೊಡ್ಡದಾಗಿ ನಗುತ್ತಾರೆ ಎನಿಸುತ್ತದೆ ಗಂಗಾಗೆ. 'ಏನು ಸಾಶಾ ನಮ್ಮಿಬ್ಬರನ್ನೂ ನೀವು ನಿಮ್ಮ ಲೈನ್ ಆಫ್ ಥಾಟ್ಸ್‌ಗೆ ಎಳೀತಾ ಇದೀರ' ಎನ್ನುತ್ತಾಳೆ ಕುಮುದಿನಿ. 'Why not?' ಎಂದು ಸಾಶಾ 'Come on Girls, Let us dance and enjoy' ಎನ್ನುತ್ತಾ ಆಫ್ರಿಕಾದ ಹುಡುಗಿಯರತ್ತ ಸಾಗುತ್ತಾರೆ.

ಬಿಳಿಯ ದಂತದ ಗೊಂಬೆಯಂತಿರುವ ಸಾಶಾ ಬಿಯರ್ ಕುಡಿಯುತ್ತಾ, ಕುಡಿಯುತ್ತಾ ಕೆಂಪಾಗಿ ಗಂಗಾಳ ಕಣ್ಣಿಗೆ ಕಾಣಿಸುತ್ತಾರೆ. ಗಂಗಾ ನಿಧಾನವಾಗಿ ಅವರು ಕುಳಿತಲ್ಲಿಗೆ ಹೋಗುತ್ತಾಳೆ. ಸಾಶಾರ ಪಕ್ಕ ಕುಳಿತು ಮಾತಿಗೆ ಪ್ರಾರಂಭಿಸುತ್ತಾಳೆ. 'ಸಾಶಾ ಇದು ನಿಮ್ಮ ವೈಯಕ್ತಿಕ ಬದುಕನ್ನು ಕೆದಕುವ ಪ್ರಶ್ನೆ. ಆದಾಗ್ಯೂ ನಿಮ್ಮ ಅಂತರಂಗದ ಒಳಗಿನ ಮಾತುಗಳನ್ನು ಕೇಳಬೇಕು ಎಂಬುದು ನನ್ನ ಆಸೆ. ನೀವು ಈ ಲೆಸ್‌ಬಿಯನಿಸಂನ ವಾದಕ್ಕೆ, ಜೀವನಕ್ಕೆ ಬದ್ಧರಾದದ್ದು ಹೇಗೆ?'

ಸಾಶಾ ಗಂಗಾಳ ಕೈ ಹಿಡಿದು ಮಾತನಾಡುತ್ತಾರೆ. "Ganga, really I don't hate you because you go around with a man, ನಿನಗೊಬ್ಬ ಫ್ರೆಂಡ್ ಇದಾನೆ ಅಂತ ನನಗೆ ಗೊತ್ತು. ನೀನು ನಿತ್ಯ ಕ್ಲಾಸ್ ಮುಗಿಸಿದ ಮೇಲೆ ಅವನ ಜೊತೆ ಸುತ್ತೋದನ್ನ ಕೂಡಾ ನಾನು ಕಂಡಿದೀನಿ. ಜೊತೆಗೆ ಭಾರತದಂತಹ ಸಂಪ್ರದಾಯಬದ್ಧ ದೇಶದಲ್ಲಿ ನೀನು Multiple relationshipನ ಹಂತದಲ್ಲಿ ಶೋಧನೆಗೆ, ಬದುಕಿನ ಸತ್ಯಕ್ಕೆ ಮುಖಾಮುಖಿಯಾದವಳು ಎಂಬುದನ್ನೂ ನಾನು ಬಲ್ಲೆ. ಇದನ್ನು ನಿನ್ನ ಗೈಡ್ ರೋಹಿಣಿಯೇ ನನಗೆ ಹೇಳಿದ್ದಾರೆ. ಗಂಗಾ ನಿನ್ನ ಬದುಕು ಹೇಗೋ, ನನ್ನ ಬದುಕು ಹೇಗೋ ನನಗೆ ತಿಳಿಯದು. ಈ ಪಾಶ್ಚಿಮಾತ್ಯ ಬದುಕಿಗೆ ನನ್ನ ಮನಸ್ಸು ತುಡಿಯೋದಿಲ್ಲ. ಈ ಪಾಶ್ಚಿಮಾತ್ಯ ಬದುಕನ್ನ ನಾನು ದ್ವೇಷಿಸುತ್ತೇನೆ. ಇಂಡಿಯಾ, ಶ್ರೀಲಂಕಾ, ಆಫ್ರಿಕಾ ದೇಶಗಳಿಗೆ ಹೋದಾಗ ನನ್ನ ದೇಶದಲ್ಲಿ ನಾನೆಷ್ಟು ಕಳೆದುಕೊಂಡಿದ್ದೇನೆ ಎಂಬುದು ನನಗೆ ಭಾಸವಾಗುತ್ತದೆ. ಈ ಪಾಶ್ಚಿಮಾತ್ಯ ಸೆಕ್ಸ್ ಬದುಕು ಎಷ್ಟು ಕ್ರೂರವಾದದ್ದು ಎಂದು ನನಗೆ ಭಾಸವಾಗುತ್ತದೆ. ನೆಲೆ ಇಲ್ಲದೇ ಹಲವಾರು ಜನರ ಜೊತೆಗೆ ತಿರುಗುವುದು, ತೆಕ್ಕೆ ಹಾಕಿಕೊಳ್ಳುವುದು ಇಂತಹದರ ಬಗ್ಗೆಯೇ ನನಗೆ ಅಸಹ್ಯ ಎನಿಸುತ್ತದೆ. ಅದಕ್ಕೇ ಒಬ್ಬನನ್ನು ಮೆಚ್ಚಿ ಮದುವೆಯಾದೆ. ಆ ಮನುಷ್ಯನೊಡನೆ ಹತ್ತು ವರ್ಷ ಸಂಸಾರ ಮಾಡಿದೆ. ಆ ಹತ್ತು ವರುಷಗಳಲ್ಲಿ

ಎಲ್ಲಿಯೋ ನನ್ನ ಕಳೆದುಕೊಳ್ತಾ ಇದೀನಿ ಅಂತ ನನಗೆ ಅನ್ನಿಸತೊಡಗಿತ್ತು. ಅವನಿಗೆ ಫೈನಲ್ ಆಗಿ ಬೇಕಾದದ್ದು ಒಂದು ರೀತಿಯ ಲೈಂಗಿಕ ಸಂತೋಷ. ನನಗೆ ಹಿಂಸೆ. ಹೊಸತರಲ್ಲಿ ಬಹುಶಃ ಅರ್ಥ ಮಾಡಿಕೊಳ್ಳಬೇಕು ಅಂತ ಸಹಿಸಿಕೊಂಡೆ. ಕೊನೆ ಕೊನೆಗೆ ಅದು ಒಂಥರಾ ರೇಪ್ ತರಹ ಅಂತ ನನಗೆ ಅನ್ನಿಸತೊಡಗಿತ್ತು. ನಾನು ಯಾವುದಾದರೂ ಮೀಟಿಂಗ್‌ಗೆ ಅಂತ ಹೋಗುವೆ. ಮನೆಗೆ ಹೋಗೋದರಲ್ಲಿ ರಾತ್ರಿ ಹತ್ತು, ಹನ್ನೊಂದು ಘಂಟೆ ಆಗ್ತಾ ಇತ್ತು. ಆತ ಡ್ರಿಂಕ್ಸ್ ಮಾಡಿಕೊಂಡು ಕಾದಿರ್ತಾ ಇದ್ದ. ಅವನಿಗೆ ನಾನು ಆ ದಿನದ ದಿನಚರಿ ಹೇಳುವುದನ್ನು ಕೇಳುವ ಹಾಗೆ ನಟಿಸುತ್ತಿದ್ದ ಅಷ್ಟೇ. ಅವನಿಗೆ ಬೇಕಾಗಿರುತ್ತಿದ್ದುದು ನನ್ನ ಮನಸ್ಸಲ್ಲ, ಮೈ. ಯಾಕೋ ಒಂಥರಾ ಹಾಗೇ ಒಪ್ಕೊಂಡೂ, ಒಪ್ಕೊಂಡೂ ಬೇಸರವಾಯ್ತು. ಜವಾಬ್ದಾರಿ ತೆಗೆದುಕೊಳ್ಳದಿರುವ, ಮನೆಗೆಲಸದ ಜವಾಬ್ದಾರಿ ಫೀಲ್ ಮಾಡದಿರುವ ಅವನ ಸನಿಹದಲ್ಲಿ ತಾಯ್ತನವೂ ಬೇಡವಾಯ್ತು. ಕೊನೆಗೆ ಜಗಳವಾಡ್ತಾ ಹೋದೆ. ನಿತ್ಯ ಸೆಕ್ಸ್‌ಗಾಗಿ ಹಿಂಸಿಸಬೇಡ ಎಂದೆ. ತಲೆ ಕೆಡಿಸಿಕೊಳ್ಳುವಂತಹ ಹಲವಾರು ವಿಚಾರಗಳು ನನ್ನ ತಲೆಯಲ್ಲಿ ಇವೆ ಎಂದು ಹೇಳಿದೆ. ಆತ ಕೇಳಿಸಿಕೊಳ್ಳುತ್ತಿರಲಿಲ್ಲ. ಕೊನೆ ಕೊನೆಗೆ ಆತ ರೇಪ್ ಮಾಡತೊಡಗಿದ. ರೇಪ್ ಎನ್ನುವ ಪದವನ್ನು ಬಹಳಷ್ಟು ಕ್ರೂಡ್ ಆಗಿರೋದಕ್ಕೆ ನಾನು ಬಳಸ್ತಾ ಇಲ್ಲ. ಸೂಕ್ಷ್ಮವಾಗಿರೋ, ನನಗೆ ಒಪ್ಪಿಗೆ ಇಲ್ಲದೇ ಮಲಗಬೇಕಾದ ಒತ್ತಾಯಕ್ಕೇ ಬಳಸ್ತಾ ಇದೀನಿ. ಯಾಕೋ ನನ್ನ ಮನಸ್ಸು, ದೇಹ ಎರಡೂ ನನ್ನ ಕೈಲಿ ಉಳಿಯಲೇ ಇಲ್ಲ ಅಂತ ತೀವ್ರವಾಗಿ ಅನ್ನಿಸತೊಡಗಿದಾಗ ನಾನು ಕೆಲವು ನಿರ್ಧಾರಗಳಿಗೆ ಬರತೊಡಗಿದ್ದೆ. ಹತ್ತು ವರ್ಷಗಳು ಆತನ ಜೊತೆ ಬದುಕೋದಕ್ಕಿಂತ ಇನ್ನ್ಯಾರಾದರೂ ಆತ್ಮೀಯರ ಜೊತೆ ಬದುಕಬಹುದು ಎಂದು ಅನ್ನಿಸತೊಡಗಿತ್ತು. ಕೊನೆಗೆ ನಿರ್ಧಾರಕ್ಕೆ ಬಂದೆ. ನನಗೆ ತುಂಬಾ ಗೆಳತಿಯಾಗಿದ್ದ ಲೈಲಾಸ್ ಮಗುವಿರುವಾಕೆ. ಆಕೆಯ ಜೊತೆಯೇ ಬದುಕುವುದು ಎಂದು ತೀರ್ಮಾನಿಸಿದೆ. ಆಕೆ ಒಂಟಿಯಾಗಿದ್ದಾಕೆ. ಆಕೆಗೂ ಜೊತೆ ಬೇಕಾಗಿತ್ತು. ಗಂಡನ ಜೊತೆ ಬದುಕಿದ ರೀತಿ ಲೈಲಾಸ್ ಜೊತೆಯೇ ಬದುಕಬಹುದು ಎಂದುಕೊಂಡೆ. ಆಕೆಯ ಜೊತೆ ಜೀವನ ಪ್ರಾರಂಭಿಸಿದೆ. ಅವಳಿಗೆ ಮಗ, - ಈಗ ಅವನು ನನ್ನ ಮಗ. ನನ್ನನ್ನು ಅಪ್ಪನ ಸ್ಥಾನದಲ್ಲಿ ನಿಲ್ಲಿಸಿದ್ದಾನೆ. ಲೈಲಾಸ್‌ಗೆ ಕೆಲಸ ಇಲ್ಲ. ಹಾಗಾಗಿ ಅಡಿಗೆ/ಮನೆಗೆಲಸ ಇತ್ಯಾದಿ ಎಲ್ಲಾ ನೋಡಿಕೊಳ್ತಾಳೆ. ಮಗೂನಾ ಸ್ಕೂಲಿಗೆ ಕರೆದುಕೊಂಡು ಹೋಗ್ತಾಳೆ. ನನಗೆ ಕೆಲಸ ಮುಗಿದರೆ ಲೈಲಾಸ್‌ನ ಜ್ಞಾಪಕವಾಗುತ್ತದೆ. ಹೀಗೇ ಜೊತೆ ಜೊತೆಗೇ ಇದ್ದು ದೈಹಿಕ ಬೇಡಿಕೆ ಅಗತ್ಯ ಎನಿಸಿದಾಗ ಲೈಲಾಸ್ ಜೊತೆಗೆಯೇ ಮಲಗುತ್ತೇನೆ. ಯೋನಿಯೊಳಗೆ ಶಿಶ್ನ ತೂರಿಸುವ ಸಂಭೋಗದ ಕ್ರಿಯೆಯೇ ಸೆಕ್ಸ್‌ನ ಪರಮ ಸುಖವೆಂದು ನಾನೆಣಿಸುವುದಿಲ್ಲ. ಸಂಭೋಗದ ಕ್ರಿಯೆಗಿಂತ ಆತ್ಮೀಯ ಭಾವನೆಯಲ್ಲಿ ಅಪ್ಪಿಕೊಳ್ಳುವ ಮುದ್ದಿಸುವ ಈ ಕ್ರಿಯೆಗಳಲ್ಲಿ ಪರಮ ಸಂತೋಷವನ್ನು ನಾನು ಕಾಣುತ್ತೇನೆ. ಲೈಲಾಸ್ ಹಾಗೂ ನಾನು ಬೆತ್ತಲೆಯಾಗಿ ಸಂತೋಷಿಸಿಲ್ಲ ಎಂದು ನಾನು ಹೇಳಲಾರೆ". ಹೀಗೇ ಸಾಶಾ ತಮ್ಮಷ್ಟಕ್ಕೆ ತಾವು ಎಂಬಂತೆ ಮಾತನಾಡುತ್ತಲೇ ಹೋಗುತ್ತಿದ್ದರು. "ಈ ಸಂಬಂಧಗಳಲ್ಲಿ ಅರ್ಥ ಮಾಡಿಕೊಳ್ಳಲು ಹೆಣಗಬೇಕಾಗುತ್ತದೆ. ಇಲ್ಲಿ ನಾನು ಹೆಣಗುವ ಹಾಗೆ ಲೈಲಾಸ್ ಕೂಡಾ ಹೆಣಗುತ್ತಾಳೆ. ನಮ್ಮದೇ ಆದ ಲೈಂಗಿಕ ಕ್ರಿಯೆಯ ಶೋಧ ಇಲ್ಲಿ ಇರುತ್ತದೆ. ಇಲ್ಲಿ ಒತ್ತಾಯದ ಬದುಕಿಲ್ಲ, ಒತ್ತಾಯದ ಲೈಂಗಿಕತೆ ಇಲ್ಲ. ಲೈಲಾಸ್ ಮನೆಗೆಲಸ ಪ್ರಾರಂಭಿಸುವಾಗ ನಾನೂ ಏಳುತ್ತೇನೆ. ಅವಳೊಬ್ಬಳೇ ಕೆಲಸ ಮಾಡುವುದು ನನಗಿಷ್ಟವಾಗುವುದಿಲ್ಲ. ನಾನು ಬರೆಯುವಾಗಲೂ ಲೈಲಾಸ್ ತನಗಿಷ್ಟವಾದ ಏನೋ ಕೆಲಸ ಮಾಡಿಕೊಂಡಿರುತ್ತಾಳೆ. ಹತ್ತು ವರ್ಷ ಗಂಡನೊಟ್ಟಿಗೆ ಸಂಸಾರ ಮಾಡಿದ್ದೇನೆ. ಆದರೆ ಈ ಎರಡು ವರ್ಷದಲ್ಲಿ ಲೈಲಾಸ್ ನನ್ನನ್ನು ಅರ್ಥಮಾಡಿಕೊಳ್ಳುವಷ್ಟು ನನ್ನ ಗಂಡ ಹತ್ತು ವರ್ಷದ ಅವಧಿಯಲ್ಲಿ ಕಿಂಚಿತ್ತೂ ಅರ್ಥಮಾಡಿಕೊಳ್ಳಲಿಲ್ಲ ಎನಿಸುತ್ತದೆ. ಬಹುಶಃ ಹತ್ತು ವರ್ಷ ಮದುವೆಯ ನೆಲೆಯಲ್ಲಿಯೇ

ಬದುಕಿನ ಅರ್ಥ ಹುಡುಕುತ್ತಿದ್ದ ನನಗೆ, ಅದೇ ಸುಪ್ರೀಂ ರಿಯಾಲಿಟಿ ಎಂದುಕೊಂಡಿದ್ದ ನನಗೆ ಈಗಿನ ಬದುಕು ಸುಂದರ ಎನಿಸುತ್ತದೆ. ಗಂಗಾ ನಿಮ್ಮ ದೇಶದವರ ಹಾಗೆ ಹುಟ್ಟಿನಿಂದ ಹೆಣ್ಣು ಮಕ್ಕಳೊಡನೆ ಬೆಳೆದವಳು ನಾನಲ್ಲ. ಅಕ್ಕ, ತಂಗಿ, ತಾಯಿಯ ಬಾಂಧವ್ಯ ಅಷ್ಟೂ ಹತ್ತಿರವಾಗಬೇಕಾದ ಯಾವ ಕೌಟುಂಬಿಕ ರಚನೆಗಳೂ ನಮ್ಮಲ್ಲಿಲ್ಲ. ಎಲ್ಲಾ ಬಿಟ್ಟು ಒಂಟಿಯಾಗಿ ನೆಲೆ ಹುಡುಕಬೇಕು. ಆ ನೆಲೆಯಲ್ಲಿಯೇ ಪರಮಸತ್ಯ ಕಂಡುಕೊಳ್ಳಬೇಕು. ಈ ಲೆಸ್‌ಬಿಯನಿಸಂನಲ್ಲಿ ನನ್ನೆಲ್ಲ ಪ್ರಶ್ನೆಗಳಿಗೆ, ಬದುಕಿಗೆ, ಅಭಿವ್ಯಕ್ತಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಅಭಿವ್ಯಕ್ತಿಯಲ್ಲಿ ಇರುವ ಹೆಣ್ಣುತನದ ವಿಶಿಷ್ಟ ಬಗೆಗಳನ್ನು ಶೋಧಿಸಲು ಪ್ರಯತ್ನಿಸುತ್ತಿದ್ದೇನೆ. ನನ್ನ ದೇಶದ ಸಂದರ್ಭದಲ್ಲಿ ಇದು ನನಗೆ ಆಯ್ಕೆಯಾಗಿ ಕಂಡದ್ದು".

ಸಾಶಾ ಮಾದಕತೆಯ ಗುಂಗಿನಲ್ಲಿಯೇಂಬಂತೆ ಪದರು ಪದರು ಬಿಚ್ಚಿ ಬಿಚ್ಚಿ ಮಾತನಾಡುತ್ತಿದ್ದರು. ಕೆಲವೊಮ್ಮೆ ಗಂಗಾಳಿಗೆ ಉದ್ದೇಶಿಸಿದಂತೆ, ಕೆಲವೊಮ್ಮೆ ಅಲ್ಲಿರುವವರಿಗೆ ಎಂಬಂತೆ, ಕೆಲವೊಮ್ಮೆ ತಮಗೇ ಎಂಬಂತೆ ಮಾತನಾಡಿಕೊಳ್ಳುತ್ತಿದ್ದರು. ಗಂಗಾ ಕೇಳಿದ ಪ್ರಶ್ನೆ ಅವರ ಒಳಗನ್ನು ಬಿಚ್ಚಿ ಬಿಚ್ಚಿ ಇಡುವಂತೆ ಮಾಡಿತ್ತು. ಹೀಗೆಯೇ ಸಾಶಾ ಮಾತನಾಡುವಾಗಲೆಲ್ಲಾ ಗಂಗಾಗೆ ಇದ್ದಕ್ಕಿದ್ದ ಹಾಗೆ ಹೊನ್ನೇಕೆರೆಯ ನೆನಪಾಗತೊಡಗಿತ್ತು. ತಾನು ಚಿಕ್ಕ ವಯಸ್ಸಿನಿಂದಲೂ ಸಂಭ್ರಮದಿಂದ ಕುಣಿದು ಕುಪ್ಪಳಿಸುತ್ತಿದ್ದ ಭೂಮಿ ಹುಣ್ಣಿಮೆ ಹಬ್ಬದ ನೆನಪಾಯಿತು. ಅಡಿಕೆ ಮರಕ್ಕೆ ಸೀರೆ ಉಡಿಸಿ, ಒಡವೆ ತೊಡಿಸಿ ಸೀಮಂತ ಮಾಡುತ್ತಿದ್ದ ಅರ್ಥದ ಹೊಳವುಗಳು ಆಕೆಯ ಮನದಾಳದಲ್ಲಿ ಬಿಚ್ಚಿಕೊಳ್ಳತೊಡಗಿದ್ದವು. ನೇಗಿಲು ಹೊರುವಾಗ ಪೂಜಿಸುವ ನೇಗಿಲದ ನೆನಪಾಗುತ್ತದೆ. ಸಾಶಾ ಶೋಧಿಸುತ್ತಿದ್ದ ಬದುಕಿನಲ್ಲಿ ಈ ರೂಪಕಗಳನ್ನು ಅಳಿಸಿ ಹಾಕುವ, ಪೂರ್ಣವಾಗಿ ಸ್ತ್ರೀತ್ವದ ಬದುಕಿನಲ್ಲಿ, ಅಭಿವ್ಯಕ್ತಿಯಲ್ಲಿ ಇವುಗಳನ್ನು ಇಲ್ಲವಾಗಿಸುವ ಒಂದು ಹೋರಾಟ ಇತ್ತು.

ಸಾಶಾ ತೆರೆದುಕೊಂಡದ್ದು ಬರಿಯ ರಾಜಕೀಯ ಲೆಸ್‌ಬಿಯನಿಸಂಗೆ ಮಾತ್ರವಲ್ಲ, ವೈಯಕ್ತಿಕ ಜೀವನದಲ್ಲೂ ಈಕೆ ಇದನ್ನು ನಂಬಿಕೊಂಡು ಬದುಕುತ್ತಿದ್ದಳು. 'ಫೆಮಿನಿಸಂ' - ಎಲ್ಲಾ ವೈವಿಧ್ಯಗಳಿಗೆ 'ಸ್ಪೇಸ್' ಕೊಡುವುದು ಸಾಧ್ಯವಾಗುವಲ್ಲಿ ಲೈಂಗಿಕ ಪ್ರಕ್ರಿಯೆಯಲ್ಲಿ ತಮ್ಮದೇ ಅಭಿವ್ಯಕ್ತಿ ವಿಧಾನ ಕಂಡುಕೊಳ್ಳುವ, ಸಾಮಾಜಿಕ ರಚನೆಯಲ್ಲಿ, ಕೌಟುಂಬಿಕ ರಚನೆಯಲ್ಲಿ ತಮ್ಮದೇ ವಿವಿಧ ರೂಪ ಕಂಡುಕೊಳ್ಳುವ ಈ ಲೆಸ್‌ಬಿಯರ್ಗಗೂ ಒಂದು ಜಾಗ ಇರಬೇಕು ಎಂಬುದನ್ನು ಸಾಶಾ ಬಲವಾಗಿ ವಾದಿಸುತ್ತಿದ್ದರು.

ಸಾಶಾರ ಮಾತು, ಅವರ ಅಂತರಂಗದ ಮಾತುಗಳ ಕೇಳಿಸಿಕೊಳ್ಳುತ್ತಾ ಹೋದ ಹಾಗೆ ಗಂಗಾಗೆ ಅವರ ಬಗ್ಗೆಗಿದ್ದ ಮುಜುಗರದ ಭಾವನೆ ಕಡಿಮೆಯಾಗತೊಡಗಿತ್ತು. ಯಾರಿಗೆ ಯಾವುದು ಸರಿ ಎನ್ನುವುದು ಅವರವರ ಬದುಕಿನ ಆಯ್ಕೆಗೇ ಬಿಟ್ಟದ್ದಾಗಿರಬೇಕೇನೋ ಎನಿಸತೊಡಗಿತ್ತು. ಆಕೆಯ ಅನುಭವದಲ್ಲಿ ಸ್ತ್ರೀತನದ ಸೂಕ್ಷ್ಮ ಬದುಕು ಆಕೆಗೆ ಕಾಣಸಿಗುವುದೇ ಇನ್ನೊಬ್ಬ ಹೆಣ್ಣಿನೊಡಗಿನ ಸಂಬಂಧದಲ್ಲಿ. ಮೊದ ಮೊದಲ ದಿನಗಳಲ್ಲಿ ಈ ವಾದವನ್ನು ಪಟ್ಟಾಗಿ ಮಂಡಿಸುತ್ತಿದ್ದ ಸಾಶಾರನ್ನು ಕಂಡಾಗ ಗಂಗಾಗೆ ಶಾಕ್ ಎನಿಸುತ್ತಿತ್ತು. ಎಲ್ಲಿಯೋ ಮನದಾಳದಲ್ಲಿ ಕೋಪ ಇಣುಕುತ್ತಿತ್ತು. ಆದರೆ ಈಗ ಸಾಶಾರ ಮಾತಿನ, ಬದುಕಿನ ಲಯಗಳಲ್ಲಿ ಗಂಗಾ ಸಾಶಾರ ಅಂತರಂಗವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸ ತೊಡಗಿದ್ದಳು. ಬಹುಶಃ ಫೆಮಿನಿಸ್ಟ್ ಚಳುವಳಿಗೆ ಇದೇ ಸತ್ಯ ಎನ್ನುವಂತಹ ಯಾವುದೇ ವಾದವನ್ನು ಎತ್ತಿ ಹಿಡಿಯಲಾಗದ ಒಂದು ಪ್ರಶ್ನೆ ಗಂಭೀರವಾಗಿಯೇ ಎದುರಾಗುತ್ತದೆ ಎಂಬುದು ಕೂಡಾ ಆಕೆಗೆ

ಅರ್ಥವಾಗುತ್ತದೆ. ಅವರವರ ಮಟ್ಟಿಗಿನ ಬದುಕಿನ ಸತ್ಯಗಳನ್ನು ಶೋಧಿಸಲು ಕೊನೆಗೆ ಫೆಮಿನಿಸ್ಟ್ ಚಳುವಳಿ space ಕೊಡುವುದು ಅತೀ ಮುಖ್ಯವಾದ ವಿಚಾರವಾಗಿಬಿಡುತ್ತದೆಯೇನೋ ಎಂದು ಯೋಚಿಸುತ್ತಾಳೆ. 'Hey, Ganga, where are you?' ಎಂದು ಸಾಶಾ ಗಂಗಾಳ ಕಣ್ಣ ಮುಂದೆ ಬೆರಳಾಡಿಸಿದಾಗ ಗಂಗಾ ಸಾಶಾರನ್ನು ನಿರೀಕ್ಷಿಸುತ್ತಾಳೆ. ಬಿಳಿಯ ಮುತ್ತಿನ ಹಲ್ಲಿನ ಸಾಲುಗಳಲ್ಲಿ ದೊಡ್ಡದಾಗಿ ನಕ್ಕು, ಕೆಂಪು ಕೆಂಪಾದ ಮುಖದ ಆ ಅಜಾನುಬಾಹು ವ್ಯಕ್ತಿಯ ಒಳಗಡೆ ಏನೇನು ಹೇಳಲಾರದ ಸತ್ಯಗಳು ಅಡಗಿವೆಯೋ ಎನಿಸುತ್ತದೆ ಗಂಗಾಗೆ. ಯಾವುದು ಸರಿ? ಯಾವುದು ತಪ್ಪು? ಗಂಗಾಗೆ ಗೊಂದಲವಾಗುತ್ತದೆ. ತಲೆ ಕೊಡವುತ್ತಾಳೆ. ಎಲ್ಲಾ ಗೊಂದಲವಾದಂತಾದಾಗ ಅವರೆಲ್ಲರನ್ನೂ ಬಿಟ್ಟು ಮಧ್ಯದಲ್ಲಿರುವ ಖಾಲಿ ಸೋಫಾ ಒಂದರ ಮೇಲೆ ಉರುಳಲು ಪ್ರಯತ್ನಿಸುತ್ತಾಳೆ. ಕುಮುದಿನಿ ಸರಕ್ಕನೆ ಅಲ್ಲಿಗೆ ಬಂದು ಗಲಾಟೆ ಮಾಡುತ್ತಾಳೆ. 'ನೀನು ಊಟ ಮಾಡಿ ಬೇಕಾದರೆ ಮಲಗು, ಬರಿಯ ಹೊಟ್ಟೆಯಲ್ಲಿ ಮಲಗಬೇಡ' ಎನ್ನುತ್ತಾಳೆ. ಇದ್ದಕ್ಕಿದ್ದ ಹಾಗೆ ಗಂಗಾಗೆ ರಮೇಶನ ಜ್ಞಾಪಕವಾಗುತ್ತದೆ. ತಾನು ಇಳಿಯಬಹುದಾದ ಟ್ರ್ಯಾಮ್‌ನ ಜಾಗದಲ್ಲಿ ಕಣ್ಣಿಗೆ ಕಣ್ಣು ಮುಚ್ಚದೇ ಕಾಯುತ್ತಿರುತ್ತಾನೆ. ಚಳಿಗೆ ಮುದುರಿಕೊಂಡು ಮೂಲೆಯೊಂದರಲ್ಲಿ ಆರಿದ ಪೊಟಾಟ್ಸ್ ತಿನ್ನುತ್ತಿರುತ್ತಾನೆ ಎಂದು ನೆನಪಾದಾಗ ದಿಮ್ಮನೆಂದು ಮೇಲೆ ಏಳುತ್ತಾಳೆ. 'ಅಯ್ಯೋ, ಬರಲೇ ಇಲ್ಲ' ಎನ್ನುವ ಆತಂಕ ಅವನಿಗೆ ಕಾಡುತ್ತದೆ ಎನಿಸಿದಾಗ ಕುಮುದಿನಿಯ ಕೈ ಹಿಡಿದು ಮೇಲೇಳುತ್ತಾಳೆ. ಗಂಗಾ ಒಂದಿಷ್ಟು ಚಿಕನ್, ಬೇಯಿಸಿದ ಆಲೂಗಡ್ಡೆ ತಿಂದು ಹೊರಟು ನಿಂತಾಗ ಸಾಶಾ ಬಾಗಿಲು ಬಳಿ ಬಂದು 'Good Night ಗಂಗಾ' ಎನ್ನುತ್ತಾರೆ. ಕುಮುದಿನಿ ಕುಳಿತ ಕಡೆಯಿಂದಲೇ ವಿಷ್ ಮಾಡುತ್ತಾಳೆ. 'ಗುಡ್ ನೈಟ್' ಎನ್ನುತ್ತಾ ಗಂಗಾ ಕೋಟ್ ಸರಿಮಾಡಿಕೊಳ್ಳುತ್ತಾ ನಡೆಯುತ್ತಾಳೆ. ರಾತ್ರಿ ಒಂದು ಘಂಟೆಯ ಸಮಯ. ಟ್ರ್ಯಾಮ್ ಸ್ಟೇಷನ್‌ನಲ್ಲಿ ನಿಂತರೆ, ಐದು ನಿಮಿಷಕ್ಕೊಂದು ಟ್ರ್ಯಾಮ್ ಬರುತ್ತದೆ. ಗಂಗಾ ಹತ್ತಿ ಕೂರುತ್ತಾಳೆ. ತಲೆ ಗಿಮ್ ಎನ್ನತೊಡಗುತ್ತದೆ. ಸತ್ಯದ ಯಾವ ಮಗ್ಗುಲುಗಳು ನಿಜ ಎನ್ನುವ ರೀತಿಯ ಗೊಂದಲ. ಸಾಶಾರ ಮಾತುಗಳು ತಲೆಯಲ್ಲಿ ಹುಳುವಿನಂತೆ ಕೊರೆಯತೊಡಗುತ್ತವೆ. ಪ್ರಪಂಚವನ್ನು, ಸಂಬಂಧವನ್ನ, ಲೈಂಗಿಕತೆಯನ್ನು ಹೊಸದಾಗಿ ಗ್ರಹಿಸಬೇಕಾಗಿದೆ, ಭಿನ್ನವಾಗಿ ಶೋಧಿಸಬೇಕಾಗಿದೆ ಎಂದು ಸಾಶಾ ಯಾವಾಗಲೂ ಹೇಳುವ ಮಾತು ಜ್ಞಾಪಕಕ್ಕೆ ಬರುತ್ತದೆ. ಗಂಗಾ ತನ್ನ ಕೊಠಡಿಯ ಹತ್ತಿರದ ಸ್ಟಾಪ್‌ನಲ್ಲಿ ಇಳಿದಾಗ ರಮೇಶ ಎದುರಿಗೇ ನಿಲ್ಲುತ್ತಾನೆ. 'ಈ ಚಳಿಯಲ್ಲಿ ನಿನ್ನ ರೂಮಿಗೇ ಹೋಗಿ ಮಲಗೋದು ಬಿಟ್ಟು ಒಳ್ಳೇ ಕಾಯೋ ಕೆಲಸ ನಿನಗೆ' ಎಂದು ರಮೇಶನನ್ನು ರೇಗಿಸುತ್ತಾಳೆ. ಆದರೂ ಹೊನ್ನೇಕೆರೆಯ ತಾಯಿಯ ನೆನಪು ರಮೇಶನ ಬಿಂಬದಲ್ಲಿ ಕಾಣಿಸಿದಂತೆ ಅನಿಸುತ್ತದೆ. ತಾನು ಎಲ್ಲಿಯಾದರೂ ಹೋದರೆ ತಾಯಿ ತಾನು ಬರುವವರೆಗೂ ಕಾಯ್ದುಕೊಂಡಿರುತ್ತಿದ್ದಳು. ಆಕೆಯ ಬೆಚ್ಚನೆಯ ನೆನಪಿನಲ್ಲಿ ರಮೇಶನ ವ್ಯಕ್ತಿತ್ವದ ಬಗ್ಗೆ ಯೋಚಿಸುತ್ತಾ ಗಂಗಾ ಕೊಠಡಿಯತ್ತ ನಡೆಯುತ್ತಾಳೆ. ಕೊಠಡಿ ಸಮೀಪಿಸಿದ ಹಾಗೆ ಹೊರಗಡೆ ಇರುವ ಸೈಕಲ್ ತೆಗೆದುಕೊಂಡು 'Good night - ಗಂಗಾ' ಎನ್ನುತ್ತಾ, ಆತ ತನ್ನ ಕೊಠಡಿಯ ಕಡೆಗೆ ಸೈಕಲ್ ಮೇಲೆ ಹೊರಟು ಹೋದಾಗ ಗಂಗಾ ಕತ್ತಲೆಯಲ್ಲಿ ಅವನು ಹೋದ ದಿಕ್ಕಿನತ್ತಲೇ ದಿಟ್ಟಿಸುತ್ತಾಳೆ. ಈ ರೀತಿ ಹೆಣ್ಣು ಹೃದಯವೇ ರಮೇಶನನ್ನು ಎಲ್ಲಿಯೋ ಕಾಪಾಡಿಬಿಡುತ್ತದೆ ಎನಿಸಿದಾಗ ಅವನ ಬಗ್ಗೆ ಪ್ರೀತಿಯ ಜೊತೆಗೆ ಅಸೂಯೆಯೂ ಹುಟ್ಟಿಕೊಳ್ಳುತ್ತದೆ.

* * * * *

ಸಾಶಾರ ಮನೆಯಲ್ಲಿ ಸಾಶಾ ಮಾತನಾಡಿದುದನ್ನು ಅರಗಿಸಿಕೊಳ್ಳಲಾಗದ ಗಂಗಾ ಮರುದಿನ ಸಾಯಂಕಾಲ ಟ್ರ್ಯಾಮ್ ಹಿಡಿದು ತನ್ನ ನೆಚ್ಚಿನ ಉಪಾಧ್ಯಾಯಿನಿ ರೋಹಿಣಿಯ ಮನೆಗೆ ಹೋಗುತ್ತಾಳೆ.

ರೋಹಿಣಿ ದೆಹಲಿಯಿಂದ ಬಂದು ಗಂಗಾ ಓದುತ್ತಿದ್ದ instituteನಲ್ಲಿಯೇ ಬೋಧಿಸುತ್ತಿದ್ದವರು. ಗಂಗಾ ಬರುವುದಾಗಿ ಫೋನಿಸಿದ್ದರಿಂದ ರೋಹಿಣಿ ಗಂಗಾಳನ್ನು ನಿರೀಕ್ಷಿಸಿಯೇ ಇದ್ದರು. ರೋಹಿಣಿಯ ಜೊತೆಗೆ ಆಕೆಯ ಬಾಂಗ್ಲಾ ದೇಶದ ಗೆಳೆಯನನ್ನು ಕಂಡಾಗ ಗಂಗಾಗೆ ಸ್ವಲ್ಪ ಮುಜುಗರವಾಗುತ್ತದೆ. ತಾನು ಎಲ್ಲೋ ಅವರಿಗೆ disturb ಮಾಡುತ್ತಿರುವೆನೇನೋ ಎನಿಸಿದಾಗ 'ಮತ್ತೆ ಸಿಗುತ್ತೇನೆ' ಎಂದು ಹೇಳಿ ಹೊರಟು ಹೋಗುವುದೇ ಎಂದು ಗಂಗಾ ಮನಸ್ಸಿನೊಳಗೇ ಒಮ್ಮೆ ಯೋಚಿಸುತ್ತಾಳೆ. ಆಕೆ ಮುಂದೆ ಯೋಚಿಸಲು ಅವಕಾಶವೇ ಕೊಡದಂತೆ 'ಬಾ ಗಂಗಾ' ಎಂದು ರೋಹಿಣಿ ಆತ್ಮೀಯವಾಗಿ ಕರೆಯುತ್ತಾರೆ. ಸ್ಪಾಂಟೇನಿಯಸ್ ಆದ ನಗು. ಗಂಗಾಳ ಬರವಿನಿಂದ ರೋಹಿಣಿಗೆ ಸಂತೋಷವಾದ ಹಾಗೆ ಇತ್ತು. ಆದರೂ ಸಂಕೋಚ ಗಂಗಾಗೆ. ಮೊದಲೇ ಫೋನಿಸಿ ಬಂದಿದ್ದಾಗ್ಯೂ ತಾನು ರೋಹಿಣಿಗೆ ತೊಂದರೆ ಕೊಡುತ್ತಿದ್ದೇನೇನೋ ಎನ್ನುವ ಒಂದು ಹಿಂಜರಿಕೆ. ಮೂರು ಹೊತ್ತು ಏನೇನೋ ಕೆಲಸಗಳಲ್ಲಿ ತೊಡಗಿರುವ ರೋಹಿಣಿಗೆ ಸಿಗುವ ಸಮಯವೂ ಕಡಿಮೆ. ಅವರ ವೈಯಕ್ತಿಕ ಬದುಕಿನ ಸಂತೋಷಕ್ಕೆ ತಾನು ಅಡ್ಡಿಯಾಗುತ್ತಿರುವೆನೇನೋ ಎನ್ನುವ ಗೊಂದಲ ಆಕೆಯ ಮನಸ್ಸಿನಿಂದ ಕಡಿಮೆಯಾಗಲಿಲ್ಲ. ಸ್ವಲ್ಪ ಹೊತ್ತು ಕುಳಿತಿದ್ದ ಆ ಬಾಂಗ್ಲಾ ದೇಶದ ಮನುಷ್ಯ ಅಲ್ಲಿಂದ ಎದ್ದು ಹೋದರು. ಟ್ರೇಡ್ ಯೂನಿಯನ್‌ನಲ್ಲಿ ಕೆಲಸ ಮಾಡುವವ ಆತ. ಇನ್‌ಸ್ಟಿಟ್ಯೂಟ್‌ನಲ್ಲಿ ಹೀಗೇ ರೋಹಿಣಿಗೆ ಪರಿಚಯ. ರೋಹಿಣಿಯ ಬದುಕಿನ ವೈಯಕ್ತಿಕ ಕ್ರೈಸಿಸ್‌ನಲ್ಲಿ ಬಾಂಗ್ಲಾ ದೇಶದ ಗೆಳೆಯ ಸಹಾಯ ಮಾಡಿದ್ದರು ಎಂದು ರೋಹಿಣಿಯೇ ಹಲವಾರು ಬಾರಿ ಹೇಳಿದ್ದರು. ಅತ್ಯಂತ ಸುಂದರಳಾಗಿದ್ದ ಹೆಣ್ಣು ರೋಹಿಣಿ. ತಾನು ಓದುವ ವಯಸ್ಸಿನಲ್ಲಿ ಬಹಳಷ್ಟು a-political ಆಗಿದ್ದೆ ಎನ್ನುತ್ತಾರೆ. ಈಕೆಯನ್ನು ತಿದ್ದಿ ಒಂದು ರೀತಿಯ ಬದುಕಿನ ವೈಚಾರಿಕ ಆಯಾಮಕ್ಕೆ, ಇಂಟಲೆಕ್ಚುಯಲ್ ಡೈಮನ್‌ಷನ್‌ಗೆ ತಿರುಗಿಸಿದ ಮನುಷ್ಯ ಥಾಂಸನ್. ಕಪ್ಪಗಿದ್ದು, ಎತ್ತರವಾಗಿದ್ದ, ಸಪೂರವಾಗಿದ್ದ ಥಾಂಸನ್‌ನ್ನು ಗಂಗಾ ಬೆಂಗಳೂರಿನಲ್ಲಿಯೇ ಕಂಡಿದ್ದಳು. 'ಸ್ತ್ರೀ ಮುಕ್ತಿ ಸಂಘಟನೆಗೆ' ಹಲವಾರು ಬಾರಿ ವೆಂಕಟೇಶನನ್ನು ಹುಡುಕಿಕೊಂಡು ಈತ ಬರುತ್ತಿದ್ದ. ರೆನೆ ಕೂಡಾ ಈತನಿಗೆ ಪರಿಚಯವಿದ್ದರು. ಗಂಗಾ ಡೆನ್‌ಹಾಗ್‌ಗೆ ಹೋಗುತ್ತಾಳೆ ಎಂದು ಗೊತ್ತಾದಾಗ ರೋಹಿಣಿಯ ಬಗ್ಗೆ ತಿಳಿಸಿ ಅನೇಕ ವಿಳಾಸ ಕೊಟ್ಟಿದ್ದವನೂ ಥಾಂಸನ್ನನೇ. ರೋಹಿಣಿ, ಥಾಂಸನ್ ಅಕ್ಕ ಪಕ್ಕದಲ್ಲಿ ನಿಂತರೆ ಅಜಗಜಾಂತರ. ರೋಹಿಣಿಯದು ನವಿರು ಸೌಂದರ್ಯ. ಸೂಕ್ಷ್ಮ ಮನಸ್ಸು. ಥಾಂಸನ್ ಆಕೆಯ ಜೊತೆಗಿದ್ದಾಗ ಒರಟು, ಒರಟಾಗಿಯೇ ಕಾಣಿಸುತ್ತಿದ್ದ. ರೋಹಿಣಿ ದೆಹಲಿಯಲ್ಲಿ ಎಂಟು ವರ್ಷಗಳ ಕಾಲ ಸಂಸಾರ ಮಾಡಿದ್ದನ್ನು ಗಂಗಾಳ ಬಳಿ ಹೇಳಿದ್ದರು. ಥಾಂಸನ್‌ನ ಬೌದ್ಧಿಕತೆಗೆ ತಾನು ಬೆಂಬಲವಾಗಿ ನಿಂತು ಆತನ ಬದುಕಿನಲ್ಲಿ ಧೈರ್ಯ ತುಂಬಿದ್ದೇ ಅಲ್ಲದೇ ತನ್ನ ಬದುಕಿನಲ್ಲಿ ಆತನಿಂದಲೇ ವೈಚಾರಿಕತೆ ಬೆಳೆಸಿಕೊಂಡದ್ದು ಎಂದು ರೋಹಿಣಿ ಯಾವಾಗಲೂ ನೆನೆಸಿಕೊಳ್ಳುತ್ತಿದ್ದರು. ಅಮ್ಮನ ವಿರೋಧ ಕಟ್ಟಿಕೊಂಡು ಬೇರೊಂದು ಮನೆಯಲ್ಲಿ ಆತನೊಡನೆ ಎಂಟು ವರ್ಷ ಡೆಲ್ಲಿಯಲ್ಲಿ ಸಂಸಾರ ಮಾಡಿದ್ದು ನಿಜವೇ ಎಂದು ರೋಹಿಣಿಯೇ ಆಶ್ಚರ್ಯ ಪಡುತ್ತಾರೆ. ಒಂದಷ್ಟು ವರ್ಷ ರೋಹಿಣಿಯೊಡನೆ ಬದುಕಿದ ಥಾಂಸನ್‌ಗೆ ರೋಹಿಣಿ ಕ್ರಮೇಣ ತನ್ನನ್ನು ಮೀರಿ ಬೆಳೆಯುವುದನ್ನು ಕಂಡು ಸಹಿಸಲಾಗಲಿಲ್ಲ. ಆಕೆಯ ವ್ಯಕ್ತಿತ್ವದ ಬೆಳವಣಿಗೆಯ ಗುರು ತಾನೇ ಎನ್ನುವ ಅಹಂ ಕೊನೆಯತನಕ ಆತನಲ್ಲಿ ಉಳಿಯುವುದು ಅವನಿಗೆ ಬೇಕಿತ್ತು. ಆದರೆ ರೋಹಿಣಿ ಸೌಂದರ್ಯದ ಜೊತೆಗೆ ಸಮುದ್ರದಾಳದಷ್ಟು ಜ್ಞಾನದ ದಾಹ ಹೊಂದಿದ್ದವರು. ವಿಶಾಲ ಗಗನದೆಡೆಗೆ ಹಾರುವ ರೋಹಿಣಿಯ ಅರಿವಿನ ಮಟ್ಟವನ್ನು ಥಾಂಸನ್‌ಗೆ ತಡೆಯಲು ಸಾಧ್ಯವಾಗಿರಲಿಲ್ಲ. ಆಕೆಯನ್ನ ಗೆಲ್ಲುವುದಕ್ಕೆ ಅಥವಾ ತನ್ನ 'ಇಗೋ' ತಾನೇ ಗೆಲ್ಲುವುದಕ್ಕೆ ಇನ್ನೇನೇನೋ ತಂತ್ರಗಳನ್ನು ಥಾಂಸನ್ ಬಳಸಲು ಕ್ರಮೇಣವಾಗಿ ಪ್ರಾರಂಭಿಸಿದ. ರೋಹಿಣಿಗೆ ತನ್ನ ಬಗ್ಗೆ ಅಸೂಯೆ ಹುಟ್ಟಬೇಕು

ಎನ್ನುವುದೆಲ್ಲೋ ಆತನಲ್ಲಿ ಮೂಲಭೂತವಾಗಿ ಕೆಲಸ ಮಾಡಿರಬೇಕು. ಅನೇಕ ಹುಡುಗಿಯರ ಜೊತೆ ಸುತ್ತುವುದು, ತನಗೆ ಅಲ್ಲಿ ಅಪಾಯಿಂಟ್‌ಮೆಂಟ್, ಇಲ್ಲಿ ಅಪಾಯಿಂಟ್‌ಮೆಂಟ್ ಎನ್ನುತ್ತಾ ರೋಹಿಣಿಯ ಕೈಗೇ ಸಿಗದೇ ಓಡಾಡುವುದು ಇತ್ಯಾದಿ. ಬೌದ್ಧಿಕವಾಗಿ ಕ್ರಮೇಣವಾಗಿ ಥಾಂಸನ್‌ಗಿಂತ ಎತ್ತರ. ಎತ್ತರಕ್ಕೆ ಬೆಳೆಯ ತೊಡಗಿದ್ದ ರೋಹಿಣಿಗೆ ಥಾಂಸನ್‌ನ ವರ್ತನೆ ಅತಿರೇಕದ್ದು ಎನಿಸತೊಡಗಿತ್ತು. ಆತನ ಜೊತೆ ತಮ್ಮ ವಿವಾಹದ ರೆಜಿಸ್ಟ್ರೇಷನ್ ಮಾಡಿಸಿಕೊಳ್ಳಲು ರೆಜಿಸ್ಟ್ರೇರ್ಷ ಆಫೀಸಿಗೆ ಹೋಗಿದ್ದ ರೋಹಿಣಿ ಮನಸ್ಸಿಗೆ ಅದೇನೇನೋ ಅನ್ನಿಸಿ ವಾಪಸ್ಸು ಬಂದುಬಿಟ್ಟಿದ್ದರು. 'ನನ್ನ ಮನಸ್ಸಿಗೆ ಹೇಗೋ ಹೇಗೋ ಅನ್ನಿಸಿತು ಗಂಗಾ, ಐದಾರು ವರ್ಷ ಏಕೆ, ಹತ್ತು ವರ್ಷ ಅವನೊಟ್ಟಿಗೆ ಬದುಕಿದ ನನಗೆ ಇದ್ದಕ್ಕಿದ್ದ ಹಾಗೆ ಅವನ ಜೊತೆ ಕಾನೂನಿನ ಬಂಧನ ಬೇಡ ಎನ್ನಿಸಿಬಿಟ್ಟಿತ್ತು. ಕಾನೂನಿನ ಪ್ರಕಾರ ಅವನ ಹೆಂಡತಿ ಏನಾದರೂ ಆಗಿಬಿಟ್ಟಿದ್ದರೆ ಆ ವ್ಯಕ್ತಿಯ ಕೈಯಿಂದ ನನ್ನ ಬದುಕು ಬಿಡಿಸಿಕೊಳ್ಳುವುದೇ ಸಾಧ್ಯವಾಗುತ್ತಿರಲಿಲ್ಲ. ನಂತರದ ದಿನಗಳಲ್ಲಿ ನಾನು ದೂರವಾಗಬಯಸಿದರೂ ಥಾಂಸನ್ ನನ್ನನ್ನು ಭೂತದಂತೆಯೇ ಹಿಂಬಾಲಿಸುತ್ತಿದ್ದ. ದೂರವಾಗುವ ಕ್ಷಣದಲ್ಲಿ ನನ್ನ ಗೊಂದಲಗಳಿಗೆ ನನ್ನಲ್ಲಿಯೇ ಉತ್ತರವಿರಲಿಲ್ಲ ಗಂಗಾ, ನನ್ನ ಬದುಕಿನ ಬಗ್ಗೆಯೇ ನನಗೆ ದಿಗ್ಭ್ರಮೆ, ಅವನ ಗೆಳೆಯ/ಗೆಳತಿಯರೇ ನನ್ನ ಸುತ್ತ ಇದ್ದವರು. ಥಾಂಸನ್‌ನನ್ನು ದೂರ ಮಾಡುವ ಜೊತೆಗೆ ನಾನು ಬದುಕನ್ನು ಹೊಸದಾಗಿ ಪ್ರಾರಂಭಿಸಬೇಕಿತ್ತು. ಎಲ್ಲಾ ಸ್ನೇಹಿತ/ ಸ್ನೇಹಿತೆಯರನ್ನು ಬಿಟ್ಟು ಕೊಡಬೇಕಿತ್ತು. ಒಬ್ಬಂಟಿಯಾಗಿ ನಿಂತು ಬದುಕನ್ನು ಅರಗಿಸಿಕೊಳ್ಳುವುದನ್ನು ಕಲಿಯಬೇಕಿತ್ತು. ಹಾಲೆಂಡಿನಲ್ಲಿ ಮಹಿಳಾ ಅಧ್ಯಯನಕ್ಕೆ ಸಂಬಂಧಪಟ್ಟ ಕೋರ್ಸ್‌ನಲ್ಲಿ ಟೀಚ್ ಮಾಡುವುದಕ್ಕೆ ಅವಕಾಶ ಸಿಕ್ಕಿದ್ದರಿಂದ ಥಾಂಸನ್‌ನಿಂದ ದೂರವಾಗುವುದಕ್ಕೆ, ಬದುಕು ಮತ್ತೆ ಆರಂಭಿಸುವುದಕ್ಕೆ ಇದೊಂದು ದೊಡ್ಡ ಬ್ರೇಕ್ ಪಾಯಿಂಟ್ ಎಂದು ಇಲ್ಲಿಗೆ ಬಂದೆ'. ರೋಹಿಣಿ ಇದೆಲ್ಲವನ್ನೂ ಗಂಗಾಳ ಹತ್ತಿರ ಬಹಳ ಆತ್ಮೀಯವಾಗಿ ಹೇಳಿಕೊಂಡಿದ್ದರು. ಗಂಗಾಗೆ ಹಾಲೆಂಡಿಗೆ ಬರುವ ಮುಂಚೆಯೇ ರೋಹಿಣಿಯ ಪರಿಚಯವಿತ್ತು. ಗಂಗಾಳ ಸ್ಕಾಲರ್‌ಷಿಪ್‌ಗಾಗಿ ರೋಹಿಣಿ ಪ್ರಯತ್ನಿಸಿದ್ದರೂ ಕೂಡಾ. ರೋಹಿಣಿ ಹಾಲೆಂಡಿಗೆ ಬಂದ ಮೇಲೂ ಥಾಂಸನ್ ರೋಹಿಣಿಯನ್ನು ಕಾಡುವುದನ್ನು ನಿಲ್ಲಿಸಿರಲಿಲ್ಲ. ಹಲವಾರು ಬಾರಿ ಆಕೆಯಿದ್ದ ಸ್ಥಳಕ್ಕೆ ಹೋಗಿ ಆಕೆಯನ್ನು ಮಾನಸಿಕವಾಗಿ ಹಿಂಸಿಸುತ್ತಿದ್ದರು. ಹೀಗೊಂದು ಸಲ ಆಕೆ ಬಾಡಿಗೆಗಿದ್ದ ಅಪಾರ್ಟ್‌ಮೆಂಟಿಗೆ ಹೋಗಿ ಆಕೆಯ ಹಾಸಿಗೆಗೆ ಬೆಂಕಿ ಹಚ್ಚಿದ್ದನ್ನು ರೋಹಿಣಿ ನೆನೆಸಿಕೊಂಡು ನಡುಗಿದ್ದರು. ಇಂತಹ ಭಯಂಕರಗಳ ಮೂಲಕ ರೋಹಿಣಿಯನ್ನು ಹೆದರಿಸುವಷ್ಟು ಥಾಂಸನ್ ಚಿಕ್ಕವನಾಗಿಬಿಡತೊಡಗಿದ್ದ. ಮಾರ್ಕ್ಸ್‌ವಾದದ ಮಜಲುಗಳನ್ನು ಹಿಡಿದು ಜೀವನದ ಗ್ರಹಿಕೆಗಳನ್ನು ರೋಹಿಣಿಯಲ್ಲಿ ಬಿತ್ತಿ ಬೆಳೆಸಿದ್ದ ಥಾಂಸನ್ ಬೆಳೆಯತೊಡಗಿದ ರೋಹಿಣಿಯ ಮುಂದೆ ಮಾನಸಿಕವಾಗಿ ಕುಬ್ಜನಾಗಿಬಿಡತೊಡಗಿದ್ದ. ಮನಸ್ಸಿನ ಅಸ್ಥಿರತೆಯಲ್ಲಿ ಆತನೇನು ಮಾಡುತ್ತಾನೆಂದು ಆತನಿಗೇ ತಿಳಿಯದಷ್ಟು ಹುಚ್ಚನಾಗಿಬಿಡುತ್ತಿದ್ದ. ರೋಹಿಣಿಯ ಹಾಸಿಗೆ ಸುಟ್ಟು, ಪೋಲೀಸ್‌ಗೆ ಅತಿಥಿಯಾಗಿ ಹಾಲೆಂಡಿನಲ್ಲಿ ಥಾಂಸನ್ ಒಂದು ದೊಡ್ಡ ಸೀನ್ ಉಂಟುಮಾಡಿದಾಗ ರೋಹಿಣಿ ಇನ್ನಿಲ್ಲದಷ್ಟು ಬೇಸರಗೊಂಡು ಬಿಟ್ಟಿದ್ದರು. ಈ ಸಂದರ್ಭದಲ್ಲಿ ಥಾಂಸನ್‌ನ್ನು ದೈಹಿಕವಾಗಿ ಕೂಡಾ ಕಂಟ್ರೋಲ್ ಮಾಡುವ ಪ್ರಯತ್ನದಲ್ಲಿ ನೆರವಾದವರು ಬಾಂಗ್ಲಾದ ಒಬ್ಬ ಮುಸ್ಲಿಂ ಗೆಳೆಯ. ರೋಹಿಣಿಗೆ ಹಗಲು, ಇರುಳು ಕಾವಲಾಗಿ ನಿಂತವರು ಇವರು. ಥಾಂಸನ್ ಹಾಲೆಂಡಿಗೆ ಬಂದು ಎಲ್ಲೆಲ್ಲಿಂದಲೋ ಫೋನ್ ಮಾಡಿ, ಹುಡುಕಿಕೊಂಡು ಬಂದು ರೋಹಿಣಿಯನ್ನು ಬೆದರಿಸುತ್ತಿದ್ದುದನ್ನು ಬಾಂಗ್ಲಾದ ಈ ಗೆಳೆಯ ಕಂಡಿದ್ದ. ಥಾಂಸನ್ ಹಾಲೆಂಡ್ ಬಿಡುವವರೆಗೆ ಆತನನ್ನು ನಿಭಾಯಿಸುತ್ತಿದ್ದುದು ಈತನೇ. ಹೀಗೇ ರೋಹಿಣಿಗೆ ಆತ ಹತ್ತಿರವಾಗಿದ್ದೂ ಕೂಡಾ. ಇದೆಲ್ಲ ಗಂಗಾಗೆ ರೋಹಿಣಿಯ ಮೂಲಕವೇ ತಿಳಿದಿತ್ತು. ಗಂಗಾ ಹಾಲೆಂಡಿಗೆ ಬಂದ ಮೇಲೂ

ಅನೇಕ ಬಾರಿ ಥಾಂಸನ್‌ನ್ನು ಡೆನ್‌ಹಾಗ್‌ನಲ್ಲಿ ಕಂಡಿದ್ದಳು. ಆತ ಡೆನ್‌ಹಾಗ್‌ಗೆ ಬಂದಾಗಲೆಲ್ಲಾ ರೋಹಿಣಿ ಕಣ್ಣಿಗೇ ಕಾಣಿಸುತ್ತಿರಲಿಲ್ಲ. ಯಾರದಾದರೂ ಮನೆಯಲ್ಲಿ ಗೊತ್ತಾಗದ ಹಾಗೆ ಇದ್ದುಬಿಡುವರು. ಆತ ಡೆನ್‌ಹಾಗ್‌ನ ಬಿಡುವವರೆಗೂ ಆಕೆ ಈಚೆ ಕಾಣಿಸಿಕೊಳ್ಳುತ್ತಲೇ ಇರಲಿಲ್ಲ. ರೋಹಿಣಿಗೆ ಆತ ಬೆಂಕಿ ಹಚ್ಚಿದ ಪ್ರಕರಣದ ನಂತರದ ದಿನಗಳಲ್ಲಿ ಮಾನಸಿಕ ಭೀತಿ ಬಲವಾಗಿ ಅಂಟಿಕೊಂಡುಬಿಟ್ಟಿತ್ತು. ಉತ್ತುಂಗಗಳ ನಡುವೆಯೇ ಬದುಕ ಬಯಸಿದ ಥಾಂಸನ್‌ಗೆ ದೂರವಾದ ರೋಹಿಣಿ ನೆಮ್ಮದಿಯಿಂದ ಬದುಕುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಅತಿರೇಕದ ವ್ಯಕ್ತಿಯಾಗಿಬಿಟ್ಟಿದ್ದ ಥಾಂಸನ್. ಡೆನ್‌ಹಾಗ್‌ನಲ್ಲಿ ರೋಹಿಣಿಯ ಪರಿಚಯದವರಿಗೆಲ್ಲ ಈತನೊಬ್ಬ ಭಯಾನಕ ವ್ಯಕ್ತಿಯಾಗಿಬಿಟ್ಟಿದ್ದ. ರೋಹಿಣಿ ಮಗುವಿನಂತೆ ಬಾಂಗ್ಲಾದ ಗೆಳೆಯನಿಗೆ ಅಂಟಿಕೊಳ್ಳತೊಡಗಿದ್ದಳು.

ಗಂಗಾ ರೋಹಿಣಿಯನ್ನು ಕಂಡಾಗಲೆಲ್ಲಾ ಆಕೆಯ ಬದುಕಿನ ಬಗ್ಗೆ ಯೋಚಿಸುತ್ತಾಳೆ. ಸುಂದರತೆಯ ಒಳಗೆಲ್ಲೋ ಬದುಕಿನ ಏನೇನೋ ನೋವುಗಳು. ಬಾಂಗ್ಲಾ ಗೆಳೆಯನನ್ನು ಬೀಳ್ಕೊಟ್ಟ ನಂತರ ರೋಹಿಣಿ ಗಂಗಾ ಕೇಳಲೆಂದು ಮೂಕೇಶ್ ಹಾಡೊಂದನ್ನು ಹಾಕಿದರು. 'ನಿನಗೆ ಭಾರತದಲ್ಲಿರುವೆ ಎನ್ನುವ ಫೀಲಿಂಗ್ ಬರಲಿ' ಎಂದು ನಗುತ್ತಾ ನುಡಿದರು. ಗಂಗಾ ನಕ್ಕಳು. 'ಮುಖೇಶ್ ಹಾಡು ಕೇಳುತ್ತೇನೆ. ಆದರೆ ಹಿಂದಿ ನನಗೆ ಅರ್ಥವೇ ಆಗುವುದಿಲ್ಲ ರೋಹಿಣೀ' ಎಂದಳು. ರೋಹಿಣಿ ನಗುತ್ತಾ ಮತ್ತೆ ಹೇಳಿದರು, 'ನೋಡಿದೆಯಾ ಗಂಗಾ, ಭಾರತ ಎಷ್ಟು ಕಾಂಪ್ಲೆಕ್ಸ್. ನಾವೆಲ್ಲ ಇಲ್ಲಿ ಇರುವವರ ಕಣ್ಣಿಗೆ ಇಂಡಿಯನ್ಸ್. ಆದರೆ ನಿನಗೆ ಗೊತ್ತಿರೋ ಭಾಷೆ ನನಗೆ ಗೊತ್ತಿಲ್ಲ, ನನಗೆ ಗೊತ್ತಿರೋ ಭಾಷೆ ನಿನಗೆ ಗೊತ್ತಿಲ್ಲ. Unity in diversity ಎಂದು ಹೇಳಿಬಿಡಬಹುದು. ಆದರೂ ಈ ದಿನ ನಮ್ಮಿಬ್ಬರನ್ನು ಕೂಡಿಸುವ ಭಾಷೆ ಇಂಗ್ಲೀಷ್ ಮಾತ್ರ. ವಸಾಹತುಶಾಹಿತ್ವ ಹುಟ್ಟುಹಾಕಿದ ಭಾಷೆಯ ತೊಡರುಗಳು, ನಮ್ಮದನ್ನು ಉಳಿಸಿಕೊಳ್ಳಬೇಕು ಎನ್ನುವ ಹಂಬಲಗಳು ಎಲ್ಲಾ ಗೊಂದಲಗಳೇ......'.

ಗಂಗಾ ತಾನು ಸಾಶಾರ ಮನೆಯಲ್ಲಿ ಅರಗಿಸಿಕೊಳ್ಳಲಾಗದ ಸತ್ಯಗಳನ್ನು ಕುರಿತು ಮಾತನಾಡ ತೊಡಗಿದಳು. 'ಲೆಸ್‌ಬಿಯನಿಸಂ' ಅನ್ನು ಭಾರತದಂತಹ ಮೂರನೆಯ ಜಗತ್ತಿಗೆ ಒಂದು Political alternative ಆಗಿ ಯೋಚಿಸುವುದೇ ನನಗೆ ಒಂದು ಘೋರ ಪಾಪದಂತೆ ಕಾಣಿಸುತ್ತದೆ ರೋಹಿಣಿ. ಬಡತನ, ಸಂಪ್ರದಾಯ, ಮುಗ್ಧತೆ - ನೂರಾರು ಆಯಾಮಗಳೊಳಗೆ ತಳಕು ಹಾಕಿಕೊಂಡಿರುವ ನಮ್ಮಂತಹ ದೇಶಗಳಲ್ಲಿ ಲೆಸ್‌ಬಿಯನಿಸಂ ಸಾಮಾನ್ಯ ಹೆಂಗಸೋರ್ವಳಿಗೆ ಒಂದು ಉತ್ತರವಾದೀತೇ'?.

ಗಂಗಾ ಹೀಗೆ ಉದ್ವೇಗದಿಂದ ಮಾತನಾಡುವುದನ್ನು ರೋಹಿಣಿ ಕಂಡಿದ್ದಾರೆ. ಗಂಗಾ ಮನಸ್ಸಿಗೆ ಹಚ್ಚಿಕೊಂಡು ಮಾತನಾಡುತ್ತಾಳೆ, ಮನದಾಳದಲ್ಲೆಲ್ಲೋ hurt ಮಾಡಿಕೊಂಡು ಮಾತನಾಡುತ್ತಾಳೆ. ಆಕೆಯ ಮನದಾಳದ ನೋವು, ಸಾಶಾರ ಪಾರ್ಟಿಯಲ್ಲಿ ಹೃದಯಕ್ಕಂಟಿಕೊಂಡ ನೋವಿನ ಸತ್ಯಗಳು ಆಕೆಯ ಮುಖದಲ್ಲಿಯೇ ಕಾಣಿಸತೊಡಗಿದಾಗ ರೋಹಿಣಿ ಕೇಳುತ್ತಾರೆ, 'ಅದಿರ್ಲಿ ಗಂಗಾ, ನೀನು Multiple relationshipಗಳಲ್ಲಿ ನಂಬಿಕೆ ಇಟ್ಟುಕೊಂಡು ಏನೇನೋ ಸತ್ಯಗಳನ್ನು ಹುಡುಕುತ್ತಾ ಬೆರೆತೆ ಎಂದೆಯಲ್ಲಾ, ನೀನು ಕಂಡುಕೊಂಡ ಸತ್ಯವಾದರೂ ಎಂತಹದು? ನಿನಗಿಷ್ಟವಾದರೆ ಅಥವಾ share ಮಾಡಬಹುದು ಅನ್ನಿಸಿದರೆ ಹೇಳು, ಕುತೂಹಲಕ್ಕಲ್ಲ, ಈ ಅನುಭವಗಳ ಮೊತ್ತವೇನು? ಎಂದು ತಿಳಿಯಲು ಕೇಳುತ್ತಿದ್ದೇನೆ'.

ಗಂಗಾ ನಿಧಾನವಾಗಿ ತನ್ನಲ್ಲಿಯೇ ಎಂಬಂತೆ ಮಾತನಾಡತೊಡಗಿದಳು. "ನಾನೇನು ಕಂಡುಕೊಂಡೆನೋ ನನಗೇ ಗೊತ್ತಿಲ್ಲ, ಎಲ್ಲಾ ಗೊಂದಲಗಳು ಮಾತ್ರ. ಪ್ರೀತಿ-ಪ್ರೇಮದ ಮೊದಲನೇ ಸಂಬಂಧ ಮುರಿದು ಬಿದ್ದಾಗ ದೊಡ್ಡ ಮಾನಸಿಕ ಆಘಾತವಾಗಿತ್ತು. ಅವನನ್ನು ಗೆಲ್ಲಲೇಬೇಕೆಂಬ ಹಟಕ್ಕೆ ನಾನು ಓದಲಿಲ್ಲ.

ಅವನು ದೂರ ಸರಿದಾಗ ನನಗೆ ಓದುವುದರಿಂದ, ಉಪನ್ಯಾಸಕಿಯಾಗುವುದರಿಂದ ಮಾತ್ರ ನನ್ನ ಜೀವನ ರೂಪಿಸಿಕೊಳ್ಳಲು ಸಾಧ್ಯ ಎನಿಸಿತು. ಆದರೆ ಒಬ್ಬರ ಜೊತೆ ಬದುಕುವ ಕಲ್ಪನೆಯನ್ನೇ ನಾಶಮಾಡಿ ದೂರವಾಗಿದ್ದ ಆತ. ಚಿಕ್ಕ ವಯಸ್ಸಿನಲ್ಲಿ ಮೂಡಿದ ವಕ್ರಗೆರೆಯನ್ನು ಅಳಿಸಲಾಗಲಿಲ್ಲ ರೋಹಿಣಿ. ಸರಿ, ಬೆಳೆಯುತ್ತಾ ಹೋದ ಹಾಗೆಲ್ಲಾ ಕಾಮವನ್ನು ಸರಳ ರೇಖೆಯಲ್ಲಿ ಇಟ್ಟು ನೋಡುವ ಪ್ರಯತ್ನ ಮಾಡತೊಡಗಿದೆ. ಯಾರ ಆಸ್ತಿಯೂ ಆಗಿ ಬದುಕಬಾರದೆಂಬ ಛಲ, ಹಟ. ಹೀಗೇ ಒಬ್ಬಂಟಿಯಾಗಿದ್ದೇ ಎಲ್ಲವನ್ನೂ ಪಡೆದುಕೊಳ್ಳಬೇಕೆಂಬ ಅಹಂಕಾರ. ಮುಗ್ಧತೆಯ ಮೇಲೆ ಇದ್ದ ಗೆರೆಗಳನ್ನು ಹೀಗೇ ಅಳಿಸಿಬಿಡುತ್ತೇನೆ ಎಂಬ ಹಟ. ಏನೇನೋ ಗೊಂದಲಗಳು, ಹಟ, ರೋಷ, ದ್ವೇಷ. ಯಾವುದು ಯಾವ ಸಂದರ್ಭದಲ್ಲಿ ಇತ್ತೋ? ಹೀಗೇ ಬದುಕಿಗೆ ನನ್ನನ್ನು ತೆರೆದುಕೊಳ್ಳುತ್ತಾ ಹೋದೆ. ಬರವಣಿಗೆಯ ಸೃಜನಾತ್ಮಕತೆಗೆ ಅನುಭವಗಳ ಹುಚ್ಚು ಮನದಾಳದಲ್ಲಿ ಕೆಲಸ ಮಾಡಿತ್ತೋ ಏನೋ? ಬದುಕಿನ ಸತ್ಯಗಳಿಗೆ ತೆರೆದುಕೊಳ್ಳುತ್ತಾ ಹೆಣ್ಣಿನ ಬದುಕಿನ ಸತ್ಯಗಳನ್ನು ಬಿಚ್ಚಿಡುತ್ತಾ ಬಿಚ್ಚಿಡುತ್ತಾ ಹೋಗುವ ಬಯಕೆ. ಗೊತ್ತಿಲ್ಲ ರೋಹಿಣಿ, ಅಲೆಮಾರಿ ಬದುಕಿನಲ್ಲಿ ನೋವುಗಳಿವೆ. ಯಾರಿಗೂ ಅಂಟಿಕೊಳ್ಳದೇ ಬದುಕುವಲ್ಲಿ ಯಾರೂ ಇಲ್ಲದೆ ಒದ್ದಾಡುವ ಹೆದರಿಕೆ ಇದೆ. ಏನು ಸತ್ಯಗಳೋ? ಎಲ್ಲಾ ಗೊಂದಲಗಳು. ಅಂಟಿಕೊಳ್ಳುವ/ಅಂಟಿಕೊಳ್ಳದಿರುವ ಎರಡೂ ಬದುಕುಗಳು ನನಗೆ ಇಂದು ಹೆದರಿಕೆಯನ್ನು ಹುಟ್ಟುಹಾಕುತ್ತವೆ. ಈಗ ನೀವು ಹೇಳಿ, ನಿಮ್ಮ ಫ್ರೆಂಡ್ ಥಾಂಸನ್ ನನಗೆ ಗೊತ್ತು, ಹತ್ತಾರು ಜನ ಹುಡುಗಿಯರ ಜೊತೆ ಓಡಾಡಿ ನಿಮ್ಮ ಮನಸ್ಸು ಗೆಲ್ಲೋಕೆ, ತಾನೇನೋ ನಿಮಗೆ ಮೀರಿದವರು ಅಂತ ತೋರಿಸೋಕೆ ಪ್ರಯತ್ನ ಪಡ್ತಾರೆ. ಆದ್ರೂ ಅವರ ಪ್ರಯತ್ನಗಳ ಕೇಂದ್ರ ಬಿಂದು ನೀವೇ. ಎಲ್ಲಿಂದಲೋ ಬಂದು ನೀವು ಮಲಗುವ ಹಾಸಿಗೆ ಸುಟ್ಟು ಹಾಕಿ ನಿಮ್ಮ ಮನಸ್ಸಿಗೆ ಹಿಂಸೆ ಮಾಡ್ತಾರೆ. ಎಲ್ಲೆಲ್ಲಿಂದಲೋ ನಿಮಗೆ ಫೋನ್ ಮಾಡುತ್ತಾರೆ. ಅವರ ವಿಕೃತ ಮನಸ್ಸಿನಲ್ಲಿ ನಿಮ್ಮ ಮೇಲೆ ಹಿಂಸೆ ಮಾಡ್ತಾ ಹೋಗ್ತಾರೆ. ಆ ಹುಡುಗಿ ಜೊತೆ ಅಪಾಯಿಂಟ್‌ಮೆಂಟ್, ಈ ಹುಡುಗಿ ಜೊತೆ date ಇತ್ಯಾದಿಗಳ ಮೂಲಕ ಅಷ್ಟೊಂದು ಇಂಟಲೆಕ್ಚುಯಲ್ ಆಗಿರೋ ಅವರೇ ಇಂದು ನಿಮ್ಮ ಜೊತೆ - ಅಂದರೆ ಬೆಳೆದಿರೋ ನಿಮ್ಮ ವ್ಯಕ್ತಿತ್ವದ ಜೊತೆ Cope ಮಾಡೋಕೆ ಆಗದೇ ನಿಮ್ಮಲ್ಲಿ ಮತ್ತೆ establish ಆಗಬೇಕೂಂತ ಏನೇನೋ strategy ಬಳಸಿಕೊಳ್ತಾರೆ. ಹೇಳಿ ರೋಹಿಣಿ ಹತ್ತು ವರ್ಷ ಈ ವ್ಯಕ್ತಿ ಜೊತೆ ಬದುಕಿದ ನೀವು ಹೇಗೆ ಆತನ್ನ ಅರ್ಥ ಮಾಡಿಕೊಂಡಿರಿ?"

ರೋಹಿಣಿ ಸ್ವಲ್ಪ ಹೊತ್ತು ಸುಮ್ಮನಿದ್ದರು. ನಂತರ ನಿಧಾನವಾಗಿ ಮಾತನಾಡತೊಡಗಿದರು. 'ಥಾಂಸನ್ ಇಲ್ಲಿಗೆ ಬಂದು ಉಂಟುಮಾಡಿದ ನರಕ ನೆನಸಿಕೊಂಡರೆ ಕೋಪ ಬರುತ್ತೆ, ನಡುಕ ಬರುತ್ತೆ, But still I pity him. ಗಂಗಾ ಒಂದು ವರುಷ, ಎರೆಡು ವರುಷ ಅಲ್ಲ, ಹತ್ತು ವರ್ಷ ಆತನ ಜೊತೆ ಇದೀನಿ. ನನ್ನ ತಾಯಿ ಸತ್ತಾಗ ಎಲ್ಲೋ ಇದ್ದವನು ಏರೋಪ್ಲೇನ್ ಹತ್ತಿಕೊಂಡು ದೆಹಲಿಗೇನೋ ಬಂದ. ಬಂದವನು ಅರೆಗಳಿಗೆ ನನ್ನ ಪಕ್ಕ ನಿಲ್ಲಲಿಲ್ಲ. ನನ್ನ ಕೈಯ ಹಿಡಿದುಕೊಂಡು ಸಮಾಧಾನ ಮಾಡಲಿಲ್ಲ. ನನ್ನ ತಲೆ ಸವರಲಿಲ್ಲ. ನನಗೆ ಆ ಸಂದರ್ಭದಲ್ಲಿ ಯಾವ ಮಾನಸಿಕ ಶಾಂತಿ/ಸಮಾಧಾನ ಬೇಕಿತ್ತೋ ಅದನ್ನ ಆತ ನನಗೆ ನೀಡಲಿಲ್ಲ. ತಾಯಿ ಸತ್ತ ಮನೆ ಭಿಕೋ ಅನ್ನುತ್ತಿತ್ತು. ಮನೇಲಿ ಕೂತು ಸಮಾಧಾನವಾಗದೇ ಥಾಂಸನ್ ಹುಡುಕಿಕೊಂಡು ನಾನೇ ಹೋದೆ. ಯಾರದೋ ಹುಡುಗಿಯ ಮನೆ. ಒಳಗಡೇನೇ ಇದ್ದ. ಹೊರಗೆ ಬಂದು ನನ್ನನ್ನ meet ಮಾಡೋದಕ್ಕೇನೇ ತಿರಸ್ಕರಿಸಿಬಿಟ್ಟ. ಬಾಗಿಲ ಬಳಿ ಬಂದು ಮುಖ ಕೂಡಾ ತೋರಿಸಲಿಲ್ಲ. ತಾಯಿಯ ಸಾವಿನ ಜೊತೆ ಥಾಂಸನ್‌ನ ಪ್ರೀತಿ ಕೂಡಾ ನಾಶವಾಗಿ ಹೋಯ್ತು ಅಂತ ನನ್ನ ಮನಸ್ಸಿನಲ್ಲಿಯೇ ಗಟ್ಟಿ ಮಾಡಿಕೊಂಡೆ. ಹತ್ತು ವರ್ಷ ಎಲ್ಲರ ವಿರೋಧ ಕಟ್ಟಿಕೊಂಡು ಒಬ್ಬ ವ್ಯಕ್ತಿಯೊಡನೆ ದೇಹ/ಮನಸ್ಸು ಹಂಚಿಕೊಂಡು ಬದುಕಿದ್ದಕ್ಕೆ ಸಿಕ್ಕ ಪ್ರತಿಫಲ ಇಷ್ಟೇನಾ

ಅಂತ ತೀವ್ರವಾಗಿ ಕಾಡೋಕೆ ಪ್ರಾರಂಭವಾಯ್ತು. ತಾಯಿಯನ್ನು ಎದುರು ಹಾಕಿಕೊಂಡು ಈ ವ್ಯಕ್ತಿ ಜೊತೆ ಬದುಕಿದುದರ ಅರ್ಥ ಇಷ್ಟೇನಾ ಅನ್ನಿಸತೊಡಗಿದಾಗ ಮನಸ್ಸೆಲ್ಲಾ ಖಾಲಿ ಖಾಲಿಯಾಗಿ ಹೋಯಿತು ಗಂಗಾ. ಸಾವಿನ ಒಂಟಿತನದ ಜೊತೆಗೆ ಜೀವನದ ಒಂಟಿತನ ಕೂಡಾ ಕಾಡೋಕೆ ಪ್ರಾರಂಭವಾಯ್ತು. ನನ್ನ egoಕ್ಕೆ ಬಲವಾದ ಪೆಟ್ಟು ಬಿದ್ದಿತ್ತು. ತಾಯಿ/ಮಗಳ ಆತ್ಮೀಯತೆ ಅರ್ಥಮಾಡಿಕೊಳ್ಳದ ಥಾಂಸನ್ ತನ್ನನ್ನು ಅರ್ಥಮಾಡಿಕೊಂಡದ್ದಾದರೂ ಏನನ್ನು? ತನ್ನನ್ನು ನಂಬಿ ಬಂದ ಹೆಣ್ಣು ಸಾವಿನ ಭೀಕರತೆಯಲ್ಲಿ ಒಂಟಿಯಾಗಿದ್ದಾಳೆ ಎಂಬುದು ಆತನಿಗೆ ಕಾಡಲೇ ಇಲ್ಲ. ಆ ಕ್ಷಣಕ್ಕೆ ಆತನಿಗೆ Comfortable ಆಗಿರುವುದು ಬೇಕಿತ್ತು. ಸಾವಿನ ಮನೆಯ ಒಂಟಿ ಹೆಣ್ಣು ಆತನಿಗೆ ಬೇಡವಾಗಿತ್ತು. ಇಂತಹ ಸಂಬಂಧಕ್ಕೆ ಬೆಂಕಿ ಬೀಳ್ಲಿ ಅನ್ನಿಸ್ತು ಗಂಗಾ. ಹತ್ತು ವರ್ಷ ಆತನ ಬದುಕಿನ ಭರವಸೆಗೆ ನಾನು ವಸ್ತುವಾದೆ, ತನ್ನ ಸೌಂದರ್ಯವೇ ಆತನಿಗೆ ಆತನಲ್ಲಿ ಭರವಸೆ ಹುಟ್ಟುಹಾಕಿಬಿಡುವ ಅಂಶವಾಯಿತೇನೋ ಎಂದು ಯೋಚಿಸುವಾಗಲೆಲ್ಲಾ ನನಗೆ ಬಹಳ hurt ಆಗೋಕೆ ಪ್ರಾರಂಭವಾಯ್ತು. ಅಂದೇ ನಿರ್ಧರಿಸಿದೆ. ನಾನು ಅವನ ಜೊತೆ ಬದುಕೋಲ್ಲ ಅಂತ. ಜೊತೆಗೆ ಆ ಕ್ಷಣದಲ್ಲಿ ಅವನನ್ನ, ಅವನ ಗೆಳೆಯರನ್ನ ಕಳೆದುಕೊಂಡು ನಾನು ಒಂಟಿಯಾಗಿಬಿಟ್ಟಿದ್ದೆ. ನನ್ನ ತಂಗಿ ಇಲ್ಲದಿದ್ದರೆ ಬಹುಶಃ ಜೀವನದಲ್ಲಿ ಚೇತರಿಸಿಕೊಳ್ಳುವುದಕ್ಕೇ ನನಗೆ ಸಾಧ್ಯವಾಗುತ್ತಿರಲಿಲ್ಲವೋ ಏನೋ? ಗಂಗಾ ಸಧ್ಯ, ಥಾಂಸನ್ ಜೊತೆ ನಾನು ರಿಜಿಸ್ಟರ್ ಮಾಡಿಸಿರಲಿಲ್ಲ. ಕಾನೂನಿನ ಪ್ರಕಾರ ಅವನ ಹೆಂಡತಿ ಏನಾದರೂ ಆಗಿಬಿಟ್ಟಿದ್ದರೆ ಬಹುಶಃ ಥಾಂಸನ್ ತನ್ನನ್ನು 'ನನ್ನ ಹೆಂಡ್ತಿ' ಎಂದು ಇನ್ನೆಷ್ಟು ಗೋಳಾಡಿಸಿಬಿಡುತ್ತಿದ್ದನೋ? ಹಾಗೆಯೇ ನೋಡು ಈಗ ಹೋದನಲ್ಲ ಈ ಬಾಂಗ್ಲಾ ಗೆಳೆಯ, ಬಾಂಗ್ಲಾಕ್ಕೆ ಹೋಗಿಬಿಟ್ಟರೆ ನೂರಾರು ಕಾಗದ ಬರೀತಾನೆ, ಈತ ಥಾಂಸನ್ ತರಹ ಇಂಟಲೆಕ್ಚುಯಲ್ ಅಲ್ಲ, ಆದರೂ Warm ಅನ್ನಿಸ್ತಾನೆ. ಮದುವೆಯಾಗೋಣ, ಒಟ್ಟಿಗೇ ಇರೋಣ ಅಂತಾನೆ. ಆದ್ರೆ ಗಂಗಾ ನನಗೆ ಯಾವುದರಲ್ಲೂ ನಂಬಿಕೇನೇ ಹೊರಟು ಹೋಗ್ತಾ ಇದೆ. ನನ್ನ ತಂದೆ ಒಬ್ಬ liberal father. ಅವರಿಗೇ ಹೇಳ್ತೀನಿ ನಾನು ಮದುವೆಯಾಗೋಲ್ಲ ಅಂತ. ಆದರೆ ನನಗೆ ಒಂದು ಮಗು ಬೇಕು. ಅದರ ಅಪ್ಪ ಯಾರು ಅಂತ ಕೇಳಬೇಡ ಅಂತ ನಮ್ಮ ತಂದೇಗೇ ಹೇಳ್ತೀನಿ. ನನ್ನ ತಂದೆ ಏನೂ ಹೇಳಲ್ಲ. ಯಾಕೆಂದರೆ ಈಗ 'ನಿನ್ನ ಬ್ರ್ಯಾಂಡ್ ಯಾವುದು ಅಂತ' ಒಮ್ಮೊಮ್ಮೆ ಸಿಗರೇಟ್ ತೆಗೆದು ಕೊಡೋಕೆ ಬರ್‍ತಾರೆ. ಹೀಗೆ ಮಾತನಾಡುವಾಗ ರೋಹಿಣಿಯ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಮತ್ತೆ ರೋಹಿಣಿ ಹೇಳಿದರು, "of course my father is a liberal father'. ದೆಹಲಿಯಲ್ಲಿ ಬೆಳೆದಿರೋ ನಮ್ಮಪ್ಪನಿಗೆ ಇದೆಲ್ಲ ಒಪ್ಪಿಕೊಳ್ಳೋಕೆ ಕಷ್ಟ ಆಗೋಲ್ಲ, ಖಂಡಿತಾ ಅವರು ಆಗ್ಲಿ ಅಂತಾರೆ. ನನ್ನ ಮಗು ನನ್ನ ತಂಗಿ/ಅಪ್ಪ/ಗೆಳೆಯರ ಮಧ್ಯವೇ ಬೆಳೆಯಲಿ', ಹೀಗೇ ಹೇಳುತ್ತಾ ಕುಕ್ಕರ್ ಮೇಲಿದ್ದುದನ್ನು ಎತ್ತಿ ಇಳುಹಲು ಹೊರಟ ರೋಹಿಣಿ, 'ಹಳ್ಳಿಯಿಂದ ಬಂದ ನಿನಗೆ ಕುಟುಂಬದ ಸಂಬಂಧಗಳು ಇಷ್ಟು ಸರಳವಾಗಿರುತ್ತವೆಯೇ ಎಂದೆನ್ನಿಸಬಹುದಲ್ಲವೇ? ಆದರೆ ನಗರೀಕರಣದ ಬದುಕಿನಲ್ಲಿ ಎಲ್ಲರೂ expose ಆಗಿರುತ್ತಾರೆ. ಇಂತಹ ಸತ್ಯಗಳನ್ನ ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಾರೆ'. ಗಂಗಾಗೆ ರೋಹಿಣಿ ಆತ್ಮೀಯವಾಗಿ ಊಟ ಬಡಿಸಿದ್ದರು. 'ದೆಹಲಿಯಲ್ಲಿ ಈ ರೀತಿ ಚಿಕನ್ ತಯಾರಿಸೋದು, ತಿನ್ನು' ಎಂದು ಒತ್ತಾಯಿಸಿದರು. 'ಗಂಗಾ ನಿಜ ಹೇಳಬೇಕೆಂದರೆ ನಿನಗೆ ಬರೆಯುವ ಮನಸ್ಸಿದೆ, ಕತೆ/ಕಾದಂಬರಿ ಬರೆಯುವುದನ್ನು ನಿಲ್ಲಿಸಬೇಡ' ಎಂದರು. ಗಂಗಾ ನಕ್ಕಳು. ರೋಹಿಣಿಯವರ ತುಂಬು ಹೃದಯದ ಮಾತುಗಳು, ತುಂಬು ಹೃದಯದ ಉಪಚಾರ ಗಂಗಾಳ ಅಂತರಾಳದಲ್ಲಿ ಬೆಚ್ಚಗೆ ಉಳಿಯಿತು.

* * * * *

ಆ ದಿನ ಗಂಗಾಳ ಹುಟ್ಟಿದ ದಿನ. ಹೊನ್ನೇಕೆರೆಯಲ್ಲಿ ಇದ್ದಾಗ ಹುಟ್ಟಿದ ದಿನ ಎಂಬುದು ಇದೆಯಾ ಎಂಬಂತೆ ದಾಟಿ ಹೋಗಿಬಿಡುತ್ತಿತ್ತು. ಆದರೆ ಸ್ತ್ರೀ ಮುಕ್ತಿ ಸಂಘಟನೆಗೆ ಬಂದ ಮೇಲೆಯೇ ಗಂಗಾ ಈ ಹುಟ್ಟಿದ ದಿನವನ್ನು ಏನೋ something special ಎಂಬಂತೆ ಕಾಣತೊಡಗಿದ್ದಳು. ಸಾಕಷ್ಟು ಕ್ರಿಶ್ಚಿಯನ್ನರಿದ್ದ ಈ ಸಂಘಟನೆಯಲ್ಲಿ ಒಬ್ಬೊಬ್ಬರ ಹುಟ್ಟಿದ ದಿನವನ್ನೂ ಬಹಳ ಸಂಭ್ರಮದಿಂದ ಆಚರಿಸಲಾಗುತ್ತಿತ್ತು. ಇದೆಲ್ಲ ಕಂಡಾಗ ಗಂಗಾಗೆ ಮೊದ ಮೊದಲು ದಿಗ್ಭ್ರಮೆಯಾಗುತ್ತಿತ್ತು. ಕೊನೆ ಕೊನೆಗೆ ಅದನ್ನು ಸಹಜ ಎಂಬಂತೆ ಆಕೆ ಕೂಡಾ ಪರಿಗಣಿಸತೊಡಗಿದ್ದಳು. ರಮೇಶನ ಮನೆಯಲ್ಲಿ ಹುಟ್ಟಿದ ದಿನಗಳನ್ನ ಸಂಭ್ರಮದಿಂದ ಆಚರಿಸುತ್ತಿದ್ದುದರಿಂದ ಈ ಸಲ ಗಂಗಾಳ ಹುಟ್ಟಿದ ದಿನ ಸಂಭ್ರಮದಿಂದ ಆಚರಿಸೋಣವೆಂದು ರಮೇಶನೇ ಒತ್ತಾಯ ಮಾಡಿದ್ದ. ತಾನೇ ಅಡಿಗೆ ಮಾಡುತ್ತೇನೆ ಎಂದು ರಮೇಶ ಸಂಭ್ರಮಪಟ್ಟಿದ್ದರಿಂದ ಗಂಗಾ ಸುಮ್ಮನಾಗಿದ್ದಳು. ಅವನೇ ಕೊಡಿಸಿದ ಪೈಜಾಮ, ಜುಬ್ಬಾ ಧರಿಸಿ ಸುಮಾರು 9.30ರ ಹೊತ್ತಿಗೆ ಇಂಡಿಯಾದಿಂದ ಬರುವ ಪೋಸ್ಟ್‌ಗಾಗಿ ಕಾಯುತ್ತಾ ಕುಳಿತಳು. ರಮೇಶ ಗಂಗಾಳ ಕೊಠಡಿಗೆ ಅಂಟಿಕೊಂಡಿದ್ದ ಅಡಿಗೆ ಮನೆಯಲ್ಲಿ ಮಟನ್ ಪಾತ್ರೆಯಲ್ಲಿ ಹಾಕಿ ಗ್ಯಾಸ್ ಮೇಲೆ ಇಡತೊಡಗಿದ್ದ. ಮಸಾಲೆಯ ವಾಸನೆ ಘಮ್ಮೆಂದು ಬರುತ್ತಿತ್ತು. ಗಂಗಾ 'ಪೋಸ್ಟ್' ಎಂದು ಹಾರಿ ಓಡಿದ್ದಳು. ಇಂಡಿಯಾದಿಂದ ಬರುವ ಪತ್ರಗಳು ಡೆನ್‌ಹಾಗ್‌ನಲ್ಲಿ ಗಂಗಾಳ ಜೀವಂತಿಕೆ ಕಾಯುತ್ತಿದ್ದರಿಂದ ನಿತ್ಯ ಪೋಸ್ಟ್ ಕಾಯುವುದು ಆಕೆಯ ದಿನಚರಿಯಾಗಿತ್ತು. ಪಾರ್ವತಿಯ ಹಸ್ತಾಕ್ಷರದ ಪತ್ರ. ಗಂಗಾಗೆ ಖುಷಿಯಾಯಿತು. ಗಂಗಾ ಡೆನ್‌ಹಾಗ್‌ಗೆ ಬಂದ ಮೇಲೆ ಪಾರ್ವತಿ ಹಲವಾರು ಪತ್ರ ಬರೆದಿದ್ದಳು. ಇತ್ತೀಚಿನ ಪತ್ರಗಳೆಲ್ಲ 'ಸ್ತ್ರೀ ಮುಕ್ತಿ' ಸಂಘಟನೆಯಲ್ಲಿ ನಡೆಯುತ್ತಿರುವ ಗಲಾಟೆಯ ಕುರಿತೇ ಇದ್ದವು. ಗಂಗಾ ಬೆಂಗಳೂರು ಬಿಡುವಾಗಲೇ ಸ್ತ್ರೀ ಮುಕ್ತಿ ಸಂಘಟನೆಯ ಒಟ್ಟು ರಚನೆಯ ಬಗ್ಗೆ ಬಿಸಿಯಾದ ಚರ್ಚೆಗಳು ನಡೆಯತೊಡಗಿದ್ದವು. ಸ್ತ್ರೀ ಮುಕ್ತಿ ಸಂಘಟನೆ ಈಗ ಒಂದು ಸಣ್ಣ ಸಂಸ್ಥೆಯಾಗಿ ಮಾತ್ರ ಉಳಿದಿರಲಿಲ್ಲ. ಪಾರ್ವತಿ ಕೆಲಸ ಮಾಡುತ್ತಿದ್ದ ಸಂಸ್ಥೆಯ ಭಾಗವಾಗಿ ಅಥವಾ ಘಟಕವಾಗಿ ಅದು ಉಳಿಯಲು ಸಾಧ್ಯವಿರಲಿಲ್ಲ. ಪಾರ್ವತಿ ಕೆಲಸ ಮಾಡುತ್ತಿದ್ದ ಸಂಸ್ಥೆಗೆ ಸಾಂಸ್ಥಿಕ ಸ್ವರೂಪವಿತ್ತು. ವಿದೇಶೀ ಹಣದ ನೆರವೂ ಇತ್ತು. ಸ್ತ್ರೀ ಮುಕ್ತಿ ಸಂಘಟನೆಯ ಕಾರ್ಯಗಳು ಪಾರ್ವತಿ ಕೆಲಸ ಮಾಡುತ್ತಿದ್ದ ಸಂಸ್ಥೆಯಿಂದಲೇ ಪ್ರಾರಂಭವಾಗಿದ್ದರೂ ಸಹ - ಐದಾರು ವರ್ಷಗಳ ಅವಧಿಯಲ್ಲಿ ಆ ಸಂಘಟನೆ ಬೆಳೆಯತೊಡಗಿತ್ತು. ಪಾರ್ವತಿಯ ಸಂಘಟನೆಗಳೊಳಗೆ ಕೆಲಸ ಮಾಡುತ್ತಿದ್ದ ಕಾರ್ಯಕರ್ತರಷ್ಟೇ ಸ್ತ್ರೀ ಮುಕ್ತಿ ಸಂಘಟನೆಯ ಕ್ರಿಯಾಶೀಲ ವ್ಯಕ್ತಿಗಳಾಗಿರಲಿಲ್ಲ. ಪಾರ್ವತಿಯ ಹಾಗೆ ಆ ಸಂಸ್ಥೆಯೊಳಗೆ ಕೆಲಸ ಮಾಡುತ್ತಿದ್ದ ಕಾರ್ಯಕರ್ತರು ಸಂಬಳ ತೆಗೆದುಕೊಳ್ಳುತ್ತಿದ್ದರು. ಆದರೆ ಹೀಗೇ ಸರ್ಕಾರಿ ಅಥವಾ ಇತರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಇತರರೂ ಕೂಡಾ ಸ್ವ-ಇಚ್ಛೆಯಿಂದ ಸ್ತ್ರೀ ಮುಕ್ತಿ ಸಂಘಟನೆಯ ಭಾಗವಾಗತೊಡಗಿದ್ದರು. ತಮ್ಮ ಬಿಡುವಿನ ವೇಳೆ, ರಜಾ ದಿನಗಳಲ್ಲಿ ಸ್ವ-ಇಚ್ಛೆಯಿಂದ ಸ್ತ್ರೀ ಮುಕ್ತಿ ಸಂಘಟನೆಯ ಕಾರ್ಯಗಳಲ್ಲಿ ಕ್ರಿಯಾಶೀಲರಾಗಿ ಓಡಾಡತೊಡಗಿದ್ದರು. ವೈಯಕ್ತಿಕ ಕೇಸಿನ ಹಂತದಿಂದ ಹಿಡಿದು ನಾಟಕ, ಹಾಡು ಇತ್ಯಾದಿ ಕಾರ್ಯಕ್ರಮಗಳಲ್ಲೂ ಸ್ವ-ಇಚ್ಛೆಯಿಂದ ಭಾಗವಹಿಸುತ್ತಿದ್ದುದುಂಟು. ಹಾಗೆ ನೋಡಿದರೆ ಗಂಗಾ-ಪಾರ್ವತಿ ಕೆಲಸ ಮಾಡುತ್ತಿದ್ದ ಸಂಸ್ಥೆಯಿಂದ ಹಣಕಾಸಿನ ನೆರವು ಆಶಿಸಿದವಳಲ್ಲ. ಪಾರ್ವತಿಯಿಂದಾಗಿ, ಹೊನ್ನೇಕೆರೆಯಲ್ಲಿದ್ದ ಅನುಭವಗಳಿಂದಾಗಿ ಆಕೆ ಸ್ತ್ರೀ ಮುಕ್ತಿ ಸಂಘಟನೆಯ ಕೆಲಸಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದುದುಂಟು. ವೆಂಕಟೇಶ್ ಪಾರ್ವತಿಯ ಆಫೀಸಿನಲ್ಲಿಯೇ ಇದ್ದುದರಿಂದ ಗಂಗಾ ಬಿಡುವಿನ ಹೆಚ್ಚು ಸಮಯವನ್ನು ಇಂತಹ ಚಟುವಟಿಕೆಗಳಲ್ಲಿಯೇ ಕಳೆದು ಬಿಡುತ್ತಿದ್ದಳು. ತನ್ನ ಓಡಾಟಕ್ಕೆ, ಸ್ತ್ರೀ ಮುಕ್ತಿ ಸಂಘಟನೆಯಲ್ಲಿ ನಾಟಕ,

ಇತ್ಯಾದಿಗಳಲ್ಲಿ ಭಾಗವಹಿಸುವುದಕ್ಕೆ ತಾನೇ ಹಣ ಹಾಕಿ ಭಾಗವಹಿಸುತ್ತಿದ್ದುದುಂಟು, ಓಡಾಡಿದ್ದುಂಟು. ಇದೇ ರೀತಿ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಸರೂ, ಟೆಲಿಫೋನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಸುಜಾತ, ಉಪನ್ಯಾಸಕಿಯಾಗಿದ್ದ ಅನೂ ಎಲ್ಲರೂ ತಮ್ಮ ತಮ್ಮದೇ ಹಂತದಲ್ಲಿ ಸ್ತ್ರೀ ಮುಕ್ತಿ ಸಂಘಟನೆಯ ಕ್ರಿಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು, ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿದ್ದುದುಂಟು. ತಮ್ಮ ಕೈಯಿಂದಲೇ ಬೀದಿ ನಾಟಕ, ಕೇಸ್‌ಗಾಗಿ, ಇತರ ಕಾರ್ಯಕ್ರಮಗಳಿಗಾಗಿ ಹಣ ಹಾಕಿಕೊಂಡು ಓಡಾಡಿದ್ದುಂಟು. ಸ್ತ್ರೀ ಮುಕ್ತಿ ಸಂಘಟನೆಯಿಂದ ತರುತ್ತಿದ್ದ ಪತ್ರಿಕೆಗೆ ಗಂಗಾ ಕೂಡಾ ಕೆಲಸ ಮಾಡುತ್ತಿದ್ದಳು. ಗಂಗಾ, ಅನೂ, ಸರೂ, ಶೀಲ ಇವರೆಲ್ಲರ ತಲೆಯ ಮೇಲೆ ಪತ್ರಿಕೆಯ ಜವಾಬ್ದಾರಿ ಬಿದ್ದಾಗ ಶ್ರದ್ಧೆಯಿಂದಲೇ ಪತ್ರಿಕೆಯ ಎಲ್ಲಾ ಕೆಲಸ ನಿರ್ವಹಿಸಿದ್ದುಂಟು. ಗಂಗಾ ತನ್ನ ಸಂಬಳದ ಎಷ್ಟೋ ಹಣ ಇಂತಹ ಚಟುವಟಿಕೆಗಳಿಗಾಗಿ ಖರ್ಚು ಮಾಡುತ್ತಿದ್ದುದುಂಟು. ಗಂಗಾಳ ಹಾಗೆಯೇ ಎಷ್ಟೋ ಜನ ಸ್ತ್ರೀ ಮುಕ್ತಿಯ ಹರವಿನಲ್ಲಿ ಬಂದವರು ಸಂಘಟನೆಗಾಗಿ ಶ್ರದ್ಧೆಯಿಂದಲೇ ದುಡಿಯುವವರು. ಪಾರ್ವತಿಯ ಹಾಗೆ ಪೂರ್ಣಾವಧಿಯನ್ನು ಈ ಸಂಸ್ಥೆಯಲ್ಲಿಯೇ ಕಳೆಯುವ, ಅದಕ್ಕಾಗಿ ಸಂಬಳ ತೆಗೆದುಕೊಳ್ಳುವ ಕಾರ್ಯಕರ್ತೆಯರು ಹಲವರಾದರೆ, ಸ್ತ್ರೀಮುಕ್ತಿ ಸಂಘಟನೆಗೆ ಗಂಗಾಳ ಹಾಗೆ ಬಂದು ಸ್ವ-ಇಚ್ಛೆಯಿಂದ ದುಡಿಯುವವರು ಇನ್ನೂ ಹಲವರು. ಈ ಸಂದರ್ಭದಲ್ಲಿ ಪಾರ್ವತಿ ಕೆಲಸ ಮಾಡುತ್ತಿದ್ದ ಅಭಿವೃದ್ಧಿ ಸಂಸ್ಥೆಯ ರಚನೆ ಮೀರಿ ಸ್ತ್ರೀ ಮುಕ್ತಿ ಸಂಘಟನೆ ಬೆಳೆಯತೊಡಗಿತ್ತು. ಅದರ ರಚನಾತ್ಮಕ ವ್ಯವಸ್ಥೆಯನ್ನೇ ಕುರಿತು ವಿಶ್ಲೇಷಿಸುವುದು ಅಗತ್ಯವಾಗಿತ್ತು. 'ಸ್ತ್ರೀ ಮುಕ್ತಿ' ಸಂಘಟನೆಯ ಕೆಲಸ ಕಾರ್ಯಗಳೆಲ್ಲವೂ ಪಾರ್ವತಿ ಕೆಲಸ ಮಾಡುತ್ತಿದ್ದ ಅಭಿವೃದ್ಧಿ ಸಂಸ್ಥೆಯ ನಿಯಂತ್ರಣದಲ್ಲಿ ಇರಬೇಕೇ ಅಥವಾ ಸ್ತ್ರೀ ಮುಕ್ತಿ ಸಂಘಟನೆಯ ಬೆಳವಣಿಗೆಯ ಹಂತದಲ್ಲಿ ಅದರ ರಚನಾತ್ಮಕ ಹರವು ಬೇರೆಯಾಗಿಯೇ ಇರಬೇಕೇ ಎಂಬಂತಹ ಪ್ರಶ್ನೆಗಳು ತಲೆದೋರಲಾರಂಭಿಸಿದ್ದವು. ಈ ಚರ್ಚೆಗಳು ಗಂಗಾ ಬೆಂಗಳೂರು ಬಿಡುವ ಮುಂಚೆಯೇ ಪ್ರಾರಂಭವಾಗಿದ್ದವು. ಈ ಬಗ್ಗೆ ವಿವರವಾಗಿ ಕಾಗದ ಬರೆಯುತ್ತಿದ್ದವರು ಅನೂ ಹಾಗೂ ಪಾರ್ವತಿ. ಸ್ತ್ರೀ ಮುಕ್ತಿ ಸಂಘಟನೆಯ ಸದಸ್ಯರು ಕೇವಲ ಪಾರ್ವತಿ ಕೆಲಸ ಮಾಡುವ ಅಭಿವೃದ್ಧಿ ಸಂಸ್ಥೆಗಷ್ಟೇ ಸೀಮಿತಗೊಂಡಿರಲಿಲ್ಲ. ಶ್ರದ್ಧೆಯಿಂದ, ಸಂಬಳವಿಲ್ಲದೇ ಕೆಲಸ ಮಾಡುವ ಮಹಿಳೆಯರೂ ಇದ್ದರು. ಮಹಿಳೆಯರ ಬಗ್ಗೆಗಿನ ಕಾಳಜಿಯಿಂದಾಗಿ ಮಾತ್ರ ಇವರು ಸ್ತ್ರೀ ಮುಕ್ತಿ ಸಂಘಟನೆಗೆ ಹತ್ತಿರವಾಗಿ, ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದರು. ಹೀಗೆ ಸಂಸ್ಥೆಯಿಂದ ಸಂಬಳ ತೆಗೆದುಕೊಳ್ಳದೇ ಸ್ತ್ರೀ ಮುಕ್ತಿ ಸಂಘಟನೆಗಾಗಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಾ ಹೋದಂತೆಲ್ಲ ಇಡಿಯ ಸ್ತ್ರೀ ಮುಕ್ತಿ ಸಂಘಟನೆಗೊಂದು ಹೊಸ ರೂಪ/ರಚನೆ ಕೊಡುವ ಅಗತ್ಯ ಇತ್ತು. ಇಂತಹದರ ಬಗ್ಗೆ ತಾನು ಕೆಲಸ ಮಾಡುತ್ತಿದ್ದ ಸಂಸ್ಥೆಯೊಳಗೆ ಪಾರ್ವತಿ ಪ್ರಶ್ನೆಗಳನ್ನು ಎತ್ತತೊಡಗಿದ್ದಳು. ತಾವು ಸಂಬಳ ತೆಗೆದುಕೊಳ್ಳುತ್ತಿರುವ ಸಂಸ್ಥೆಯಿಂದ ಸ್ತ್ರೀ ಮುಕ್ತಿ ಸಂಘಟನೆ ಸಂಪೂರ್ಣ ಬೇರೆಯಾಗಿ ಅದರ ಕಾರ್ಯ ಚಟುವಟಿಕೆಗಳು, ರೂಪ ರೇಷೆಗಳು, ರಚನೆ ಪೂರ್ಣ ಭಿನ್ನವಾಗಿರಬೇಕೆಂಬುದು ಪಾರ್ವತಿಯ ವಾದವಾಗಿತ್ತು. ಗಂಗಾ, ಅನೂ ಇನ್ನೂ ಅನೇಕರು ಇದನ್ನು ಒಪ್ಪುತ್ತಿದ್ದರು. ಆದರೆ ಆ ಅಭಿವೃದ್ಧಿ ಸಂಸ್ಥೆಗೆ ಇವು ಮೂಲಭೂತ ಪ್ರಶ್ನೆಗಳಾಗಿ ಪರಿಣಮಿಸಿದ್ದವು. 'ಸ್ತ್ರೀ ಮುಕ್ತಿ ಸಂಘಟನೆ'ಯನ್ನು ಆ ಸಂಸ್ಥೆಯವರೇ ಹುಟ್ಟುಹಾಕಿದ್ದರಿಂದ ಎಲ್ಲಾ ನಿರ್ಧಾರಗಳೂ, ಆ ಸಂಸ್ಥೆಯ ನಿಯಂತ್ರಣದೊಳಗೇ ಇರಬೇಕೆಂಬುದು ರೆನೆ, ರಾಗಿಣಿ, ಡಾಮಿನಿಕ್ ಇನ್ನಿತರರ ಅಭಿಪ್ರಾಯವಾಗಿತ್ತು. ಸಂಸ್ಥೆಯ ಉಗಮಕ್ಕೆ ಕಾರಣರಾದ ರೆನೆರವರ ಮಾತುಗಳಿಗೆ ಹೆಚ್ಚು ಬೆಲೆ ಇರುತ್ತಾದ್ದರಿಂದ ಇಂತಹ ವಿಚಾರದಲ್ಲಿ ಅವರನ್ನು ಒಪ್ಪಿಸುವುದು ಕಷ್ಟವಾಗುತ್ತಿತ್ತು. ಇಂತಹ ಚರ್ಚೆಯ ಬಗ್ಗೆ ಪಾರ್ವತಿ ಗಂಗಾಗೆ ವಿವರವಾಗಿ ಬರೆಯುತ್ತಿದ್ದಳು. ಸ್ತ್ರೀ

ಮುಕ್ತಿ ಸಂಘಟನೆಯ ರಚನೆಯ ಬಗ್ಗೆ ಎತ್ತಿದ ಮೂಲಭೂತ ಪ್ರಶ್ನೆಗಳಿಂದಾಗಿ, ವಾದ-ವಿವಾದಗಳಿಂದಾಗಿ ಆ ಅಭಿವೃದ್ಧಿ ಸಂಸ್ಥೆಯೊಳಗಡೆ ಹಾಗೂ ಸ್ತ್ರೀ ಮುಕ್ತಿ ಸಂಘಟನೆಯ ಒಳಗಡೆ ಇಂಗ್ಲೀಷ್/ಕನ್ನಡ ಬರುವವರು ಎಂಬ ಎರಡು ಗುಂಪುಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳತೊಡಗಿದ್ದವು, ವಿದೇಶೀ ಹಣದ ಅನುದಾನದ ಬಗ್ಗೆ ಪ್ರಶ್ನೆಗಳು, ಸಂಬಳ ತೆಗೆದುಕೊಳ್ಳುವವರು/ತೆಗೆದುಕೊಳ್ಳದವರು, ಸಂಸ್ಥೆಯ ಒಳಗಿನವರು, ಹೊರಗಿನಿಂದ ಸ್ತ್ರೀ ಮುಕ್ತಿ ಸಂಘಟನೆಯಲ್ಲಿ ಕೆಲಸ ಮಾಡುವವರು ಹೀಗೆ ಏನೇನೋ ಗೊಂದಲಗಳು, ದ್ವಂದ್ವಗಳು ಉಂಟಾಗತೊಡಗಿದ್ದವು. ಗಂಗಾಳಂತೆ ಹಲವಾರು ಮಹಿಳೆಯರು - ಸ್ತ್ರೀ ಮುಕ್ತಿ ಸಂಘಟನೆಯಲ್ಲಿ ಕ್ರಿಯಾಶೀಲರಾಗಿದ್ದವರು ಪಾರ್ವತಿಯ ಸಂಸ್ಥೆಯ ಕೆಲಸಗಾರರಾಗಿರಲಿಲ್ಲ. ಅವರಲ್ಲಿ ಚಳುವಳಿಯಲ್ಲಿನ ನಂಬಿಕೆ ಬಲವಾಗಬೇಕಿತ್ತು. ಶ್ರದ್ಧೆ ಹೆಚ್ಚಾಗಬೇಕಿತ್ತು. ಸ್ತ್ರೀ ಮುಕ್ತಿ ಸಂಘಟನೆ ತಮ್ಮದು ಎನಿಸಬೇಕಿತ್ತು. ಅಲ್ಲಿನ ನಿರ್ಧಾರ, ಕ್ರಿಯೆಗಳಿಗೆ ತಾವು ಜವಾಬ್ದಾರರು ಎನಿಸಬೇಕಿತ್ತು. ಇಂತಹ ಬಲವಾದ ನಂಬಿಕೆ ಮೂಡಲು ಸ್ತ್ರೀ ಮುಕ್ತಿ ಸಂಘಟನೆಯ ಪ್ರತ್ಯೇಕ ರಚನೆ ಅಗತ್ಯವಿತ್ತು. ಸಂಘಟನೆಯ ಸ್ವರೂಪ ಸಂಪೂರ್ಣವಾಗಿ ಭಿನ್ನವಾಗಬೇಕಿತ್ತು. ಪತ್ರಿಕೆಯ ಜವಾಬ್ದಾರಿಯಲ್ಲಿ ನಿರತರಾಗಿದ್ದ ಗಂಗಾ/ಪಾರ್ವತಿ/ಅನೂರವರ ಮಧ್ಯೆ ಇಂತಹ ಚರ್ಚೆಗಳು ನಡೆಯುತ್ತಿದ್ದವು. ಪತ್ರಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವವರ ನಡುವೆ ಲೇಖನಗಳು/ಸಂಪಾದಕೀಯ ಇತ್ಯಾದಿಗಳು ಚರ್ಚೆಯಾಗಬೇಕೆಂದು ಗಂಗಾ ಕೂಡಾ ವಾದಿಸುತ್ತಿದ್ದಳು. ಸ್ತ್ರೀ ಮುಕ್ತಿ ಸಂಘಟನೆಯ ಹರವು ಬೆಳೆದ ಹಾಗೆಲ್ಲಾ ಇಂತಹ ಗೊಂದಲಗಳು ಹೆಚ್ಚುತ್ತಾ ಹೋಗುತ್ತಿದ್ದವು. ತಮ್ಮ ಬಿಡುವಿನ ವೇಳೆಯಲ್ಲಿ ಪೂರ್ಣ ಶ್ರದ್ಧೆಯಿಂದ ಕೆಲಸ ಮಾಡುವ ಮಹಿಳೆಯರಿಗೆ ಸ್ತ್ರೀ ಮುಕ್ತಿ ಸಂಘಟನೆಯ ನಿರ್ಧಾರಗಳು ಸಂಸ್ಥೆಯ ನಿಯಂತ್ರಣದಲ್ಲಿ ಇರುವುದು ಬೇಕಿರಲಿಲ್ಲ. ಇಡಿಯ ಭಾರತದ ಸಂದರ್ಭದಲ್ಲಿ ನಡೆಯುತ್ತಿದ್ದ ಮಹಿಳಾ ಸ್ವಾಯತ್ತತೆಯ, ಸಂಘಟನೆಯ ಪ್ರಶ್ನೆಗಳೂ ಇದರಲ್ಲಿ ಅಡಕವಾಗಿದ್ದವು. ಈ ದೃಷ್ಟಿಯಿಂದ ಕ್ರಿಯಾಶೀಲರಾಗಿರುವ ಮಹಿಳೆಯರೇ ನಿರ್ಧರಿಸುವ/ಜವಾಬ್ದಾರಿ ಇರುವ ಒಂದು ರಚನಾತ್ಮಕ ಸ್ವರೂಪವನ್ನು ಸ್ತ್ರೀ ಮುಕ್ತಿ ಸಂಘಟನೆಗೆ ರೂಪಿಸಬೇಕೆಂಬುದು ಎಲ್ಲರ ವಾದದ ಹಿನ್ನೆಲೆಯಾಗಿತ್ತು. ರೆನೆ, ರಾಗಿಣಿ, ಡಾಮಿನಿಕ್, ಎಲಿಜಾ ಮುಂತಾದವರು ಪಾರ್ವತಿಯ ವಾದಗಳಿಗೆ ವಿರೋಧವಾಗಿದ್ದ ಸಂಸ್ಥೆಯ ಒಳಗಿನವರು. ಹೀಗೆ ನಡೆಯುತ್ತಿದ್ದ ಎಲ್ಲಾ ವಾದ-ವಿವಾದಗಳ ಬಗ್ಗೆ ಪಾರ್ವತಿ ವಿವರವಾಗಿ ಬರೆಯುತ್ತಿದ್ದಳು. ಹಣ, ಸವಲತ್ತುಗಳೊಡನೆ ತಳಕು ಹಾಕಿಕೊಂಡಿರುವ ವೈಚಾರಿಕತೆಯನ್ನು ಬಿಡಿಸಿ ನೋಡುವುದು ಅಗತ್ಯ ಎಂದು ನನಗೆನಿಸುತ್ತದೆ ಎಂದು ಪಾರ್ವತಿ ವಿವರಿಸಿದ್ದಳು. ಹೊನ್ನೇಕೆರೆಯಂತಹ ಊರಲ್ಲಿ ದುಡ್ಡು, ಕಾಸು, ಏನೂ ಸವಲತ್ತುಗಳಿಲ್ಲದೇ ತಾವು ಹುಟ್ಟುಹಾಕಿದ ಸಂಘಟನೆ ಇದಕ್ಕಿಂತ ಹೆಚ್ಚು ಅರ್ಥಪೂರ್ಣವಾಗಿರಲಿಲ್ಲವೇ ಎಂಬುದನ್ನೂ ಪಾರ್ವತಿ ಸೂಚಿಸಿದ್ದಳು. ಪಾರ್ವತಿಯ ಪತ್ರ ಓದುವಾಗಲೆಲ್ಲಾ ಗಂಗಾಗೆ ಗಾಬರಿಯಾಗುತ್ತಿತ್ತು, ಆತಂಕವಾಗುತ್ತಿತ್ತು. ಸ್ತ್ರೀ ಮುಕ್ತಿ ಸಂಘಟನೆಯ ಕೆಲಸ ಕಾರ್ಯಗಳಿಂದಾಗಿ ಗಂಗಾ ಕೂಡಾ ಪಾರ್ವತಿ ಕೆಲಸ ಮಾಡುತ್ತಿದ್ದ ಸಂಸ್ಥೆಗೆ ಹೆಚ್ಚು ಹತ್ತಿರವಾಗಿದ್ದಳು. ಹಾಗೆ ನೋಡಿದರೆ ಸ್ತ್ರೀ ಮುಕ್ತಿ ಸಂಘಟನೆ ಹಲವಾರು ಮಹಿಳೆಯರ ಜೀವನದ ಕೇಂದ್ರ ಬಿಂದುವೇ ಆಗಿತ್ತು. ಗಂಗಾ ಕೂಡಾ ಗಂಡು-ಹೆಣ್ಣಿನ ಸಂಬಂಧದ ನಡುವೆಯೇ absolute ಪ್ರೇಮ/ಪ್ರೀತಿ ಇದೆಯೆಂಬ ಭ್ರಮೆಯಿಂದ ಈಚೆ ಬರುವಾಗ ಸ್ತ್ರೀ ಮುಕ್ತಿ ಸಂಘಟನೆಯ ಕೆಲಸಗಳಲ್ಲಿ ತನ್ನನ್ನು ಪರಿಪೂರ್ಣವಾಗಿ ತೊಡಗಿಸಿಕೊಳ್ಳಲು ಪ್ರಯತ್ನಿಸಿದ್ದಳು. ನೊಂದು ಬರುವ ಮಹಿಳೆಯರ ದೀನತೆಯ ಒಳಗೆ ಇರುವ ಹೆಣ್ಣಿನ ಧ್ವನಿಯನ್ನು ಗ್ರಹಿಸಲು ಪ್ರಯತ್ನಿಸಿದ್ದಳು. ತನ್ನೆಲ್ಲ ಪ್ರಶ್ನೆಗಳಿಗೆ, ದ್ವಂದ್ವಗಳಿಗೆ ಸ್ತ್ರೀ ಮುಕ್ತಿ ಸಂಘಟನೆಯ ಚಟುವಟಿಕೆಗಳಲ್ಲಿ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಳು. ಈಗ ಪಾರ್ವತಿ ಈ ಪ್ರಶ್ನೆಗಳಿಂದಾಗಿ

ಆಕೆಯ ಕೆಲಸ ಬಿಡುವುದು, ಅಗತ್ಯ ಬಿದ್ದಲ್ಲಿ ಸ್ತ್ರೀ ಮುಕ್ತಿ ಸಂಘಟನೆಯನ್ನು ಬಿಡುವುದು ಅನಿವಾರ್ಯವಾಗುತ್ತಿತ್ತು. ಪಾರ್ವತಿ ಹಾಗೆ ನಿರ್ಧರಿಸಿದ್ದೇ ಆದಲ್ಲಿ ಗಂಗಾ ಕೂಡಾ ನಿರ್ಧರಿಸಬೇಕಾಗುತ್ತಿತ್ತು. ಏಕೆಂದರೆ ಈ ಪ್ರಶ್ನೆಗಳು ಗಂಗಾಳಿಗೂ ಇದ್ದವು. ಹಾಲೆಂಡಿಗೆ ಬರುವ ಮುಂಚೆ ಇಂತಹ ಪ್ರಶ್ನೆಗಳೂ ಕಾಡಿ ಆಗಾಗ್ಗೆ ಪಾರ್ವತಿಯ ಜೊತೆ ಮಾತನಾಡುತ್ತಿದ್ದುದೂ ಉಂಟು. ತಾನು ಬೆಂಗಳೂರಿನಲ್ಲಿಯೇ ಇದ್ದಿದ್ದರೆ ಈ ಪ್ರಶ್ನೆಗಳನ್ನು ಸ್ತ್ರೀ ಮುಕ್ತಿ ಸಂಘಟನೆಯ ಮುಂದೆ ಇಡುತ್ತಿರಲಿಲ್ಲವೇ ಎಂದು ಗಂಗಾ ಯೋಚಿಸುತ್ತಾಳೆ. ಪಾರ್ವತಿಯ ನಿರ್ಧಾರ ಈಗ ಗಂಗಾಳ ನಿರ್ಧಾರವೂ ಆಗಬೇಕಿತ್ತು. ಪಾರ್ವತಿಯ ಪತ್ರ ಕೈಯಲ್ಲಿ ಹಿಡಿದು ಗಂಗಾ ಇದೆಲ್ಲಾ ಯೋಚಿಸುತ್ತಾಳೆ. ಪಾರ್ವತಿಯ ಪತ್ರ ಒಡೆಯುವಾಗಲೇ ಆಕೆಗೆ ಆತಂಕವಾಗುತ್ತದೆ. ಈ ವಾದ-ವಿವಾದಗಳೆಲ್ಲ ಎಲ್ಲಿಗೆ ಮುಟ್ಟಿವೆಯೋ? ಪಾರ್ವತಿಯೊಬ್ಬಳೇ ಹೀಗೆಯೇ ವಾದಿಸುತ್ತಾ, ವಾದಿಸುತ್ತಾ ಇಡಿಯ ಸಮೂಹದಲ್ಲಿ ಒಂಟಿ ಎನಿಸಿಬಿಡುವುದಿಲ್ಲವೇ? ಆಕೆ ಸಧ್ಯಕ್ಕೆ ಸಂಸ್ಥೆಯಿಂದ ಸಿಗುವ ಸಂಬಳದ ಮೇಲೆಯೇ ಅವಲಂಬಿತಳಾಗಿದ್ದಾಳೆ. ಕೆಲಸ ಬಿಟ್ಟರೆ ಪಾರ್ವತಿ ಏನು ಮಾಡುತ್ತಾಳೆ? ಬಾಡಿಗೆ ಹೇಗೆ ಕೊಡುತ್ತಾಳೆ? ಇಡಿಯ ಬೆಂಗಳೂರಲ್ಲಿ ಪಾರ್ವತಿ ಒಂಟಿಯಾಗಿಬಿಡುತ್ತಾಳೆ ಎಂಬ ಕಲ್ಪನೆಯಿಂದಲೇ ಗಂಗಾ ಗಡ ಗಡ ನಡುಗುತ್ತಾಳೆ. ಇಂತಹ ಹಲವಾರು ವಿಚಾರಗಳೊಂದಿಗೇ ಗಂಗಾ ಪಾರ್ವತಿಯ ಕಾಗದ ಒಡೆಯುತ್ತಾಳೆ. ಓದುತ್ತಾ ಓದುತ್ತಾ ತಲೆ ತಿರುಗಿದ ಹಾಗೆ ಆಗಿ ಗಂಗಾ ಒಳಗೆ ಬಂದು ಮಂಚದ ಮೇಲೆ ಧಕ್ಕೆಂದು ಕುಕ್ಕರಿಸುತ್ತಾಳೆ. ಆಕೆಯ ಕಣ್ಣಲ್ಲಿ ದಳ ದಳ ನೀರು ಸುರಿಯಲು ಪ್ರಾರಂಭವಾಗುತ್ತದೆ. ನಂತರ ತಡೆಯಲಾರದೇ ಗಂಗಾ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸುತ್ತಾಳೆ. ಎಷ್ಟು ಹೊತ್ತಾದರೂ ಪೋಸ್ಟ್ ಇಸಿದುಕೊಂಡು ಅಡಿಗೆ ಮನೆಗೆ ಬರದ ಗಂಗಾಳನ್ನು ಹುಡುಕಿಕೊಂಡು ರಮೇಶ ರೂಮಿಗೆ ಬರುತ್ತಾನೆ. ಗಂಗಾ ಬೋರಲು ಬಿದ್ದು ಅಳುತ್ತಿದ್ದಾಳೆ. ರಮೇಶನಿಗೆ ಗಾಬರಿಯಾಗುತ್ತದೆ. 'ಗಂಗಾ', 'ಗಂಗಾ' ಎಂದು ಆಕೆಯನ್ನು ಜೋರಾಗಿ ಅಲುಗಿಸಿ ಮಾತನಾಡಿಸಲು ಪ್ರಯತ್ನಿಸುತ್ತಾನೆ. ಗಂಗಾ ಇನ್ನೂ ಜೋರಾಗಿ ಅಳಲು ಪ್ರಾರಂಭಿಸುತ್ತಾಳೆ. ರಮೇಶನಿಗೆ ದಿಗ್ಭ್ರಮೆಯಾಗುತ್ತದೆ. ಏನಾಯಿತು ಈ ಗಂಗಾಗೆ? ಗಂಗಾಳ ಪಕ್ಕದಲ್ಲಿ ಪಾರ್ವತಿಯ ಬರಹದ ಪತ್ರ, ಓದಿ ನೋಡಲು ರಮೇಶನಿಗೆ ಕನ್ನಡ ಬಾರದು. 'ಗಂಗಾ' ಎಂದು ಗಂಗಾಳ ತಲೆ ಸವರಿ ಮಾತನಾಡಿಸಲು ಪ್ರಯತ್ನಿಸುತ್ತಾನೆ. ಗಂಗಾ ಅಳುವುದನ್ನು ಬಿಟ್ಟರೆ ಬೇರೆ ಏನನ್ನೂ ಮಾತನಾಡುವುದಿಲ್ಲ. ಕೊನೆಗೆ ಆಕೆಗೆ ಸಮಾಧಾನವಾಗುವವರೆಗೆ ಅಳಲಿ ಎಂದು ರಮೇಶ ಸುಮ್ಮನೇ ಕುಳಿತು ಪತ್ರವನ್ನು ಕೈಯಲ್ಲಿ ತೆಗೆದುಕೊಳ್ಳುತ್ತಾನೆ. ಪತ್ರವನ್ನು ಆಚೆ-ಈಚೆ ಹೊರಳಿಸಿ ನೋಡುತ್ತಾನೆ. ಐದಾರು ಪುಟದ ಉದ್ದನೆಯ ಪತ್ರ. ಗಂಗಾ ಅಳುತ್ತಾ ಹಾಗೇ ಮಲಗಿಕೊಂಡುಬಿಟ್ಟಾಗ ರಮೇಶ ಎದ್ದು ಹೊರಗೆ ನಡೆಯುತ್ತಾನೆ. ಎಷ್ಟೋ ಹೊತ್ತಿನ ಮೇಲೆ ಗಂಗಾ ಈಚೆ ಬಂದು ಬಾಲ್ಕನಿಯಲ್ಲಿ ಕೂತ ರಮೇಶನನ್ನು ಮಾತನಾಡಿಸುತ್ತಾಳೆ. ಸೀದ ವಾಸನೆ ಎಲ್ಲೆಲ್ಲೂ. ರಮೇಶ್ ಧಕ್ಕೆಂದು ಅಡಿಗೆ ಮನೆಗೆ ಓಡುತ್ತಾನೆ. ಆತ ಗಂಗಾಳನ್ನು ಕೊಠಡಿಗೆ ಹುಡುಕಿಕೊಂಡು ಹೋದಾಗ ಎಣ್ಣೆ ಹಾಕಿ ಮಟನ್ ಪೀಸ್ ಹಾಕಿ ಗ್ಯಾಸ್ ಮೇಲೆ ಇಟ್ಟು ಹೋಗಿದ್ದ. ಗಂಗಾ ಅಳುವುದನ್ನು ನೋಡಿ ಎಲ್ಲಾ ಮರೆತುಬಿಟ್ಟಿದ್ದ. ಡಚ್ ಜನರು ರಮೇಶನಿಗೆ ಜೋರು ಮಾಡುವುದು ಗಂಗಾಳಿಗೆ ಕೇಳಿಸುತ್ತದೆ. ಗಂಗಾ ಹಾಗೆಯೇ ನಿರುಕಿಸುತ್ತಾಳೆ. ಯಾವುದೂ ಮನಸ್ಸಿನೊಳಕ್ಕೆ ಇಳಿಯುವುದಿಲ್ಲ. ಆ ಜನರು ಬಯ್ಯುವುದು ಕೂಡಾ ಆಕೆಯ ಮನಸ್ಸಿಗೆ ನಾಟುವುದಿಲ್ಲ. ರಮೇಶ್ ಜನರ ಜೊತೆಗೆ ಏನನ್ನೂ ಮಾತನಾಡುವುದಿಲ್ಲ. ಹಾಗೆಯೇ ವಾಪಸ್ಸು ಬರುತ್ತಾನೆ. ಗಂಗಾ ರಮೇಶನೊಟ್ಟಿಗೆ ಮಾತನಾಡಲು ಪ್ರಯತ್ನಿಸುತ್ತಾಳೆ. ಪಾರ್ವತಿ ಬರೆದ ಸುದ್ದಿಯನ್ನು ಎಲ್ಲಿಯೋ ದಿಗಂತದಲ್ಲಿ ದೃಷ್ಟಿ ನೆಟ್ಟು ಮಾತನಾಡತೊಡಗಿದಳು. ಇದ್ದಕ್ಕಿದ್ದ ಹಾಗೆ ಹೆಣವಾಗಿ ಹೋಗಿದ್ದರು ಸೇಸಿಯಮ್ಮ. ಗಂಗಾ ಸೇಸಿಯಮ್ಮನ

ಬಗ್ಗೆ ಆಗೀಗ್ಗೆ ರಮೇಶನಲ್ಲಿ ಹೇಳಿದ್ದರಿಂದ ಆತನಿಗೆ ಆಕೆಯ ಬಗ್ಗೆ ತಿಳಿದಿತ್ತು. ಈಗ ಇದ್ದಕ್ಕಿದ್ದ ಹಾಗೆ ಸೇಸಿಯಮ್ಮ ಸತ್ತದ್ದು ಹೇಗೆ? ಏನಾಯಿತು ಆಕೆಗೆ? ಸೇಸಿಯಮ್ಮನ ಸಾವು ಒಂದು ದೊಡ್ಡ ದುರಂತ ಎಂದು ಗಂಗಾ ಹೇಳತೊಡಗಿದ್ದಳು. ಅಷ್ಟೊಂದು ಭರವಸೆ, ಅಷ್ಟೊಂದು ಗಟ್ಟಿ ವ್ಯಕ್ತಿತ್ವದ ವ್ಯಕ್ತಿ ಎಂದುಕೊಂಡಿದ್ದ ಸೇಸಿಯಮ್ಮ ಗಂಡನ ನಾಟಕಕ್ಕೆ ಮರುಳಾಗಿ ವಿಷಾನಿಲಕ್ಕೆ ಪ್ರಾಣ ತೆತ್ತಿದ್ದರು. ಗಂಗಾ ಡೆನ್‌ಹಾಗ್‌ಗೆ ಬಂದು ಆಗಲೇ ಎಂಟು ತಿಂಗಳು ಕಳೆದಿತ್ತು. ಗಂಗಾ ಇಲ್ಲಿಗೆ ಬಂದ ಒಂದೆರಡು ತಿಂಗಳಲ್ಲಿ ಸೇಸಿಯಮ್ಮನ ಗಂಡ ಸೇಸಿಯಮ್ಮನನ್ನು ಹುಡುಕಿಕೊಂಡು ಬಂದಿರಬೇಕು ಎಂದು ಪಾರ್ವತಿ ಬರೆದಿದ್ದಳು. ಏನು ಮಾಟ, ಮಂತ್ರ ಮಾಡಿದನೋ? ಏನು ಮೋಡಿ ಹಾಕಿದನೋ? ಸೇಸಿಯಮ್ಮ ಆತ ಬಂದುದನ್ನಾಗಲೀ, ಆಕೆಯ ಜೊತೆ ವಾಸ ಮಾಡುತ್ತಿದ್ದುದನ್ನಾಗಲೀ ಸ್ತ್ರೀ ಮುಕ್ತಿ ಸಂಘಟನೆಯವರ ಬಳಿ ಹೇಳಲೇ ಇಲ್ಲವಂತೆ. ಆತ ಅದೇನು ಮರುಳು ಮಾಡಿದ್ದನೋ? ಅದೇನು ನಂಬಿಸಿದನೋ? ಮತ್ತೋರ್ವ ಹೆಂಡತಿಯನ್ನು ಬಿಟ್ಟುಬಿಡುವುದಾಗಿ ಭಾಷೆ ಕೊಟ್ಟಿರಬೇಕು. ತಾನು ತಪ್ಪು ಮಾಡಿದ್ದಕ್ಕೆ ಪಶ್ಚಾತ್ತಾಪ ಪಡುತ್ತಿದ್ದೇನೆ ಎಂದು ಗೋಗರೆದಿರಬೇಕು, ಒಮ್ಮೆ ಅವಕಾಶ ಕೊಟ್ಟರೆ ಆಕೆಯೇ ಸರ್ವಸ್ವ ಎಂದು ಬಾಳಿ-ಬದುಕುತ್ತೇನೆ ಎಂಬು ನಂಬಿಸಿರಬೇಕು. ಆದರೆ ಹತ್ತಾರು ವರ್ಷ-ಕಾಲ ಆತನ ವಿರುದ್ಧ ಕೋರ್ಟ್, ಕಛೇರಿ ಅಂತ ಓಡಾಡಿದುದು ಆತನಲ್ಲಿ ದ್ವೇಷದ ಉರಿಯನ್ನೇ ಹುಟ್ಟುಹಾಕಿರಬಹುದು ಎಂಬುದನ್ನು ಸೇಸಿಯಮ್ಮ ಮನಸಿನಲ್ಲೂ ಎಣಿಸಿರಲಿಲ್ಲ. ಆಕೆಯಲ್ಲಿ ಬತ್ತಿ ಹೋದ ಕಾಮದ ಆಸೆಗಳು ಛಲ್ಲೆಂದು ಚಿಮ್ಮಿರಬಹುದು. ನಿಜವಾಗಿಯೂ ಆತ ಪಶ್ಚಾತ್ತಾಪ ಪಟ್ಟು ಬಂದಿರಬಹುದು ಎಂದು ಆಕೆ ಎಣಿಸಿರಬಹುದು. ಆತನೊಡನೆ ಸುಂದರವಾಗಿ ಬದುಕಬಹುದು ಎಂದು ಒಡೆದು ಹೋದ ಕನಸುಗಳನ್ನು ಹೆಣೆಯಲು ಪ್ರಯತ್ನಿಸಿರಬಹುದು. ಹೋರಾಟದ ಬದುಕಿಗೆ, ಅದರ ಯಾಂತ್ರಿಕತೆಗೆ ಮುಕ್ತಾಯ ಹೇಳಲು ಬಯಸಿದ್ದರೋ ಏನೋ? ಒಡೆದು ಛಿದ್ರ ಛಿದ್ರವಾದ ಬದುಕನ್ನು ನಲವತ್ತನೇ ವಯಸ್ಸಿನಲ್ಲಿ ಕೂಡಿಸಿ ಬದುಕುತ್ತೇನೆಂದು ಆಕೆ ಹಟ ತೊಟ್ಟಿರಬೇಕು. ಮಕ್ಕಳೆಲ್ಲರ ಆಸೆಗೆ ವಿರುದ್ಧವಾಗಿ ಆತನಿಗೆ ಮನೆಯಲ್ಲಿ/ಮನದಲ್ಲಿ ಜಾಗ ಕೊಡಲು ನಿರ್ಧರಿಸಿರಬೇಕು. ಮಕ್ಕಳ ಜೊತೆ ವಿರೋಧ ಕಟ್ಟಿಕೊಂಡರು. ಸ್ತ್ರೀ-ಮುಕ್ತಿ ಸಂಘಟನೆಯವರು ತಪ್ಪು ತಿಳಿಯಬಾರದೆಂದು/ ಬಯ್ಯುತ್ತಾರೇನೋ ಎಂಬ ಹೆದರಿಕೆಯಿಂದ ಈ ವಿಚಾರವನ್ನು ಯಾರಲ್ಲಿಯೂ ಬಾಯಿ ಬಿಡಲಿಲ್ಲ. ಎರಡು ತಿಂಗಳು ಚಂದಾಗಿಯೇ ಸಂಸಾರ ಮಾಡಿದಂತೆ ನಟಿಸಿದ ವ್ಯಕ್ತಿ ಕೊನೆಗೆ ಆಕೆಯ ಕಾಯಿಲೆಯ ನೆಪದಲ್ಲಿ ಆಕೆಗೆ slow poison ಕೊಟ್ಟಿದ್ದ. ನಗದೇ, ನರಳದೇ ಸೇಸಿಯಮ್ಮ ಮಣ್ಣಾಗಿ ಹೋಗಿದ್ದರು. ಹತ್ತು ವರ್ಷ ಉಡಿಯಲ್ಲಿ ಕಟ್ಟಿಕೊಂಡು ದ್ವೇಷ ಬೆನ್ನಲ್ಲಿ ಸೂಚಿಯಾಗಿ, ವಿಷದ ಸೂಜಿಯಾಗಿ ಪರಿಣಮಿಸಿತ್ತು. ಸೇಸಿಯಮ್ಮನ ಚಿಕ್ಕ ಮಗಳು ತಾಯಿಯನ್ನು ಕೊಂದದ್ದು ತಂದೆಯೇ ಎಂದು ಪೋಲೀಸರಿಗೆ ಹೇಳಿಕೆ ನೀಡಿದ್ದಳು. ಇನ್ನೂ ಏನೇನೋ ವಿವರಗಳು ಪಾರ್ವತಿಯ ಪತ್ರದಲ್ಲಿ ಇದ್ದವು. ಯಾವಾಗಲೂ ಸರೂ-ಸೇಸಿಯಮ್ಮನನ್ನು ಕುರಿತು ಮಾತನಾಡುವಾಗ 'spirit' ಎನ್ನುತ್ತಿದ್ದಳು. ಹಾಗಿದ್ದ ವ್ಯಕ್ತಿ ಸೇಸಿಯಮ್ಮ ಇಂದು ಇಲ್ಲ. ಸೂಜಿಯ ವಿಷ ಮೈಯೆಲ್ಲಾ ಹರಡಿಕೊಂಡಿತ್ತು. ಯಾರ ಬದುಕಿನ ಸತ್ಯಗಳು ಏನೋ? ಹತ್ತು ವರುಷ ಹೋರಾಟ ನಡೆಸಿ ದ್ವೇಷವನ್ನು ಉಡಿಯಲ್ಲಿ ಕಟ್ಟಿಕೊಂಡ ಹೆಣ್ಣು ಒಂದು ಕ್ಷಣದಲ್ಲಿ ಕರಗಿ ನೀರಾದದ್ದು ಹೇಗೆ? ಕ್ಷಮೆ ಕೇಳಿ ಬಂದಾಕ್ಷಣದಲ್ಲಿ ಮತ್ತೆ ಬದುಕುವ ಕನಸು ಆಕೆಯಲ್ಲಿ ಚಿಗುರೊಡೆದಿರಬೇಕು. ಹೀಗೇ ಏನೇನೋ ಗೊಂದಲಗಳ ಬಗ್ಗೆ ಯೋಚಿಸಿದಾಗಲೆಲ್ಲಾ ಗಂಗಾಗೆ ದುಃಖ ಎನಿಸುತ್ತದೆ. ಸೇಸಿಯಮ್ಮನ ಹೋರಾಟದ ಹಂತದಲ್ಲಿಯೇ ಹೃದಯಾಂತರಾಳದಲ್ಲಿ ಆಕೆಗೆ ತಾನು ಒಂಟಿ ಎನ್ನಿಸಿರಬೇಕು. ಬೆಳೆಯುತ್ತಿರುವ ಮಕ್ಕಳ ತಾರುಣ್ಯದ ಕನಸುಗಳಲ್ಲಿ, ತಮ್ಮ ತಮ್ಮ ಬದುಕಿಗೆ ರೆಕ್ಕೆ-ಪುಕ್ಕ ಕಟ್ಟಿಕೊಳ್ಳಬೇಕೆನ್ನುವ ಅವರ ಬಯಕೆಗಳಲ್ಲಿ - ಸೇಸಿಯಮ್ಮ ಬದುಕನ್ನು ಹಿಂತಿರುಗಿ

ನೋಡಿರಬೇಕು. ಭಸ್ಮವಾಗಿ ಹೋದ ಬದುಕಿನ ಆಸೆಗಳು ಮತ್ತೆ ಕಣ್ಣೆದುರಿಗೆ ನರ್ತಿಸಿರಬೇಕು. ಆತ ಬಂದಾಕ್ಷಣ ಮತ್ತೆ ಬದುಕಲು ಯತ್ನಿಸಿರಬೇಕು. ಹೀಗೆಲ್ಲ ಯೋಚಿಸುವಾಗ ಇವೆಲ್ಲ ಬರಿಯ ಗೊಂದಲಗಳು ಎನಿಸುತ್ತದೆ ಗಂಗಾಗೆ. ಗಂಡು-ಹೆಣ್ಣಿನ ಸಂಬಂಧದ ಮಧ್ಯೆ ಇರುವ ಸಂಕೀರ್ಣತೆಗಳು ತನ್ನ ಅರಿವಿಗೆ ಮೀರಿದ್ದೇನೋ ಎಂದು ಗಂಗಾ ಆಲೋಚಿಸುತ್ತಾಳೆ. ಹೀಗೆ ಸೇಸಿಯಮ್ಮನ ಬಗ್ಗೆ ಮಾತ ಮಾತನಾಡುತ್ತಲೇ ಅಳುವ ಗಂಗಾಳನ್ನು ಹೇಗೆ ಸಮಾಧಾನಿಸಬೇಕು ಎಂದು ಅರ್ಥವಾಗದೇ ರಮೇಶ ಸುಮ್ಮನೇ ಕೂರುತ್ತಾನೆ. ಆಕೆಯ ಕೈಗಳನ್ನು ಹಿಡಿದು ಆಕೆಯ ಅಳುವನ್ನು ನಿಲ್ಲಿಸಲು ಪ್ರಯತ್ನಿಸುತ್ತಾನೆ. ಗಂಗಾಳಿಗೆ ಸಮಾಧಾನ ಹೇಳುವ ಸಾಮರ್ಥ್ಯ ತನ್ನಲಿಲ್ಲವೇನೋ ಎಂದು ಆತನಿಗೆ ಅನಿಸುತ್ತದೆ. ಬಾಗಿಲು ಬಡಿಯುವುದು ಕೇಳಿ ರಮೇಶ ಎದ್ದು 'ಎಸ್ ಕಮ್ ಇನ್' ಎಂದ. ಡಚ್ ಓನರ್ ಮತ್ತೆ ಬಂದಿದ್ದ. 'ಯಾಕೆ ಹೀಗೆ ಮಾಡಿದಿರಿ' ಎಂದು ಜೋರಾಗಿ ಮಾತು ಪ್ರಾರಂಭಿಸಿದವನು ಗಂಗಾಳತ್ತ ನೋಡಿದ. ಗಂಗಾಳ ಕೆಂಪಾದ ಕಣ್ಣು, ಕೈಯಲ್ಲಿದ್ದ ಕಾಗದ, ಕಪೋಲದ ಮೇಲಿದ್ದ ಕಣ್ಣೀರು ನೋಡಿ ಆತನಿಗೆ ಏನೆನಿಸಿತೋ ಅವನ ಏರು ಧ್ವನಿ ತಗ್ಗಿತ್ತು. ಬಂದವನು ಹಾಗೆಯೇ ಹೊರಟು ಹೋದ. ರಮೇಶನಿಗೆ ಕರಕಲಾಗಿ ಹೋದ ಮಟನ್ ಪೀಸ್‌ಗಳು, ಹೊಗೆ ಸುತ್ತಿಕೊಂಡಿದ್ದ ಅಡಿಗೆ ಮನೆಯ ನೆನಪಾಯಿತು. ಪಾಶ್ಚಿಮಾತ್ಯರು ಅಕ್ಕ-ಪಕ್ಕದಲ್ಲಿ ಒಬ್ಬರಿಗೂ ತೊಂದರೆ ಕೊಡದೇ ಬದುಕಬೇಕು ಎನ್ನುವ ನಾಗರೀಕತೆ ಇರುವ ಜನ. ಗಂಗಾ ಬೇರೆಯ ಸಂದರ್ಭದಲ್ಲಾಗಿದ್ದರೆ ಮನಸ್ಸಿಗೆ ಬಹಳ ನೋವು ಮಾಡಿಕೊಂಡುಬಿಡುತ್ತಿದ್ದಳು. ಆದರೆ ಸೇಸಿಯಮ್ಮನ ಸಾವಿನ ಸುದ್ದಿ ಆಕೆಯಲ್ಲಿದ್ದ ಸ್ವಾಭಿಮಾನ, ಅಹಂ ಎಲ್ಲವನ್ನೂ ಕೊಚ್ಚಿ ಹಾಕಿ ಬಿಟ್ಟಿತ್ತು. ರಮೇಶ ಮತ್ತೆ ಅಡಿಗೆ ಮನೆಗೆ ಹೋದ. ನಾಲ್ಕಾರು ಕೊಠಡಿಗಳಿಗೆ ಇದ್ದದ್ದು ಒಂದು ಕಾಮನ್ ಕಿಚನ್. ನಾಲ್ಕಾರು ಸ್ಟೋವ್, ಪಾತ್ರೆ ಇತ್ಯಾದಿ. ಎಲ್ಲರೂ ಅಲ್ಲಿ ಅಡಿಗೆ ಮಾಡುತ್ತಿದ್ದುದರಿಂದ ಒಬ್ಬರಿಗೂ ತೊಂದರೆಯಾಗದಂತೆ ಇರುವುದು ಅವಶ್ಯಕವಾಗಿತ್ತು. ರಮೇಶ ಅಡಿಗೆ ಮನೆ ಸ್ವಚ್ಛ ಮಾಡಿ ಪಾತ್ರೆಗೆ ಸೋಪು, ನೀರು ಹಾಕಿಟ್ಟು ಬಂದು ಆಮೇಲೆ ತೊಳೆಯುತ್ತೇನೆ ಎಂದ. ಗಂಗಾಳ ಹುಟ್ಟುಹಬ್ಬವನ್ನು ತಾವಿಬ್ಬರೇ ಸಂಭ್ರಮದಿಂದ ಆಚರಿಸಬೇಕೆಂಬುದು ಅವನ ಇಚ್ಛೆಯಾಗಿತ್ತು. ಈಗ ಆ ಬಗ್ಗೆಯೇ ಅವರಿಬ್ಬರು ಮರೆತು ಬಿಟ್ಟಂತಿತ್ತು. ಎಷ್ಟೋ ಹೊತ್ತಿನ ತನಕ ಸುಮ್ಮನೇ ಮಲಗಿದ ಗಂಗಾ, 'ರಮೇಶ್ ನಾನು ಸಮುದ್ರದ ಬಳಿ ಹೋಗಿ ಕೂರುತ್ತೇನೆ. ನನ್ನ ಮನಸ್ಸಿಗೆ ಸಮಾಧಾನವಾದ ಮೇಲೆ ಮತ್ತೆ ಬರುತ್ತೇನೆ' ಎಂದು ಸ್ವೆಟರ್, ಓವರ್ ಕೋಟ್ ಧರಿಸಿ ರೆಡಿಯಾದಾಗ ರಮೇಶ್ 'ನಾನೂ ನಿನ್ನ ಜೊತೆ ಬರುತ್ತೇನೆ ಗಂಗಾ' ಎಂದು ಸಿದ್ಧನಾದ. ಮಾತಿಲ್ಲದೇ ಇಬ್ಬರೂ ನಡೆದರು. ಹತ್ತು ನಿಮಿಷಗಳ ಹಾದಿಯಷ್ಟೇ. ಉಕ್ಕಿ ಬರುವ ತೆರೆಗಳನ್ನ, ಗಾಳೀಪಟ ಹಿಡಿದು ಓಡುವವರನ್ನ, ನಾಯಿ ಹಿಡಿದು ನಡೆಯುವವರನ್ನ ನೋಡುತ್ತಾ ಕಲ್ಪನೆಯಲ್ಲಿ ಕಾಣಿಸುತ್ತಿದ್ದ ಸೇಸಿಯಮ್ಮನ ಹೆಣವನ್ನು ಕಣ್ಣಿನಿಂದ, ಮನಸ್ಸಿನಿಂದ ಆಚೆ ದಬ್ಬಲು ಗಂಗಾ ಪ್ರಯತ್ನಿಸುತ್ತಿದ್ದಳು. ತೆರೆಗಳ ರಭಸಕ್ಕೆ ಕೊಚ್ಚಿ ಹೋಗುತ್ತಿದ್ದ ಮಳಲಿನಲ್ಲಿ ಏನೇನೋ ಭರವಸೆಗಳಿಗಾಗಿ ತಡಕಾಡುತ್ತಿದ್ದಳು. ತೆರೆಗಳ ರೌದ್ರತೆಯಲ್ಲಿ ಸಾವಿನ ದುರಂತವನ್ನು ಚಿಕ್ಕದಾಗಿಸಲು ಹೆಣಗುತ್ತಿದ್ದಳು. ರಮೇಶ ಮಾತನಾಡಿಸಲು ಪ್ರಯತ್ನಿಸದೇ ಸುಮ್ಮನೇ ಕುಳಿತಿದ್ದ. ಕೊನೆಗೆ ರಮೇಶ ಅಷ್ಟು ದೂರ ಹೋಗಿ ಕೇಕ್, ಪೆಟಾಟ್ಸ್, ಬ್ರೆಡ್ ಇತ್ಯಾದಿ ತಂದು 'ತಿನ್ನು ತಿನ್ನು' ಎಂದು ಒತ್ತಾಯಿಸಿದಾಗ ಗಂಗಾ ಅಷ್ಟಿಷ್ಟು ತಿನ್ನುತ್ತಾ ಕುಳಿತಳು. ಸೇಸಿಯಮ್ಮನ ಸಾವಿನ ಭೀಕರತೆಯಲ್ಲಿ ಇದ್ದಕ್ಕಿದ್ದ ಹಾಗೆ ಗಂಗಾಗೆ ರಮೇಶನ ಇರವು, ಸ್ನೇಹ ಬಹಳ ಬೆಚ್ಚಗೆ ಎನಿಸತೊಡಗಿತ್ತು. . . . . .

ರಮೇಶ್.....! ಹೀಗೇ..... ಅನ್ನಿಸಿದುದೆಲ್ಲಾ ಒಮ್ಮೊಮ್ಮೆ ದಕ್ಕುತ್ತಾ ಹೋದರೆ ಬದುಕಿನಲ್ಲಿ ಅಸಾಧ್ಯ ತೃಪ್ತಿ ಸಿಕ್ಕುಬಿಡುತ್ತದೆ ಎಂದು ಗಂಗಾ ಯೋಚಿಸುತ್ತಾಳೆ. ರಮೇಶ ಡೆನ್‌ಹಾಗ್‌ನಲ್ಲಿ ನಿತ್ಯ

ಜೀವನದಲ್ಲಿ ಹತ್ತಿರ, ಹತ್ತಿರ ಆಗುತ್ತಿದ್ದಾನೆ. ಈ ಹುಡುಗನ ಜೊತೆಯೇ ಜೀವನಪೂರ್ಣ ಬದುಕಲು ನಿರ್ಧರಿಸಿಬಿಟ್ಟರೆ ಹೇಗೆ? ಅವನು ತೋರಿಸುವ ಕಾಳಜಿ-Concernಗಳು ತಾಯಿಯ ಹೃದಯದ ಬೆಚ್ಚಗಿನ ನೆನಪನ್ನು ತರಿಸುತ್ತವೆ. ಗೆಳತಿಯರ ಆತ್ಮೀಯತೆಯನ್ನು ನೆನಪಿಸುತ್ತದೆ. ಆದರೂ ಅಂಟಿಕೊಂಡು ಬದುಕಲು ಭಯ. ಅಂಟಿಕೊಂಡು ಬದುಕುವ ಪ್ರವೃತ್ತಿಯೇ ತನ್ನದು? ಎಂದು ಗಂಗಾ ಒಮ್ಮೊಮ್ಮೆ ಯೋಚಿಸುತ್ತಾಳೆ. ತೀರಾ ಸಂಪ್ರದಾಯಸ್ಥ ಕುಟುಂಬದಿಂದ ಬಂದಿರುವ ರಮೇಶ ತನ್ನಲ್ಲಿಷ್ಟು ಆಕರ್ಷಿತನಾಗಿರುವುದಾದರೂ ಏಕೆ? ಅವನ ಜೊತೆ ಬದುಕು ನಡೆಸಲು ತನಗೆ ಸಾಧ್ಯವಾಗುತ್ತದೆಯೇ? ಯಾವಾಗಲೂ ರಮೇಶ ತನ್ನೊಡನೆ ಇರಲು ಬಯಸುತ್ತಾನೆ. ಅವನೊಡನಿದ್ದಾಗ ಮನಸ್ಸಿಗೆ ಕಿರಿ ಕಿರಿ ಅನ್ನಿಸುವುದಿಲ್ಲ. ಕಮಲಳ ಜೊತೆಗೋ, ಇನ್ನಾರದೋ ಜೊತೆಗೆ ಇದ್ದ ಹಾಗೆ ಅನ್ನಿಸುತ್ತದೆ. ಕೆಲವೊಮ್ಮೆ ಆತ 'ಹೋಗುತ್ತೇನೆ' ಎನ್ನುವಾಗ ಆತ ಹೋಗುವುದೇ ಬೇಡ ಅನ್ನಿಸುತ್ತದೆ. ಡೆನ್‌ಹಾಗ್‌ನ ಒಂಟಿತನದಲ್ಲಿ ಅವನ ಸಂಬಂಧ ತೀರಾ ಬೆಚ್ಚಗೆ ಅನಿಸುತ್ತದೆ. ಇನ್‌ಸ್ಟಿಟ್ಯೂಟ್‌ನಲ್ಲಿ ಕ್ಲಾಸ್ ಮುಗಿದಾಕ್ಷಣ ಅವನನ್ನು ಕಾಣಬೇಕು ಎಂದು ಮನಸ್ಸು ಹಾತೊರೆಯುತ್ತದೆ. ಆದರೂ ಆತನ ಸಂಪ್ರದಾಯಸ್ಥ ಮನಸ್ಸಿನ ಬಗ್ಗೆ, ಮನೆಯ ಬಗ್ಗೆ ಭಯ, ಹೆದರಿಕೆ. ಬದುಕಿಗೆ ಮುಗ್ಧತೆಯಿಂದ ತೆರೆದುಕೊಳ್ಳುವ ಈ ಹುಡುಗನಿಗೆ ತನ್ನ ಬದುಕಿನ ಲಯಗಳ ರಭಸವನ್ನು ತಡೆದುಕೊಳ್ಳುವ ಶಕ್ತಿ ಇದೆಯೇ? ಹೆಂಡತಿ, ಸೊಸೆ, ನಾದಿನಿ ಇಂತಹ ಸಂಬಂಧಗಳಿಗೆ ತಾನು ಎಷ್ಟರ ಮಟ್ಟಿಗೆ ತೆರೆದುಕೊಳ್ಳಬಲ್ಲೆ? ಇಂತಹ ಪ್ರಶ್ನೆಗಳು ಬಂದಾಗ ಗಂಗಾಳಿಗೆ ಅವಳ ಬಗ್ಗೆಯೇ ಅನುಮಾನ. ರಮೇಶ ತನ್ನ ತಾಯಿಯೊಡನೆ ಫೋನ್‌ನಲ್ಲಿ ಮಾತನಾಡುವಾಗ ಆಕೆಯೊಡನೆ ಮಾತನಾಡು ಎಂದು ಒತ್ತಾಯಿಸಿದ್ದ. ಆಗೆಲ್ಲಾ ಗಂಗಾ ಅಷ್ಟಾಗಿ ಆಸಕ್ತಿ ತೋರಿಸಿರಲಿಲ್ಲ. ಹೆಣ್ಣು-ಆಸ್ತಿ ಎಂಬ ಪರಿಕಲ್ಪನೆಯನ್ನು ಎತ್ತಿ ಹಿಡಿಯುವ ಕುಟುಂಬದ ಕಲ್ಪನೆಗೆ ವಿರುದ್ಧವಾಗಿ ಈಜಿ ಬದುಕ ನಡೆಸಬಯಸಿದವಳು ಗಂಗಾ. ಅಂಟಿಕೊಂಡು ಬದುಕುವ, ಕುಟುಂಬದ ಪರಿಧಿಯಲ್ಲಿ ಬದುಕಲು ತನಗೆ ಖಂಡಿತಾ ಸಾಧ್ಯವಾಗುವುದಿಲ್ಲ ಎಂದೆಲ್ಲಾ ಗಂಗಾ ಯೋಚಿಸುತ್ತಾಳೆ. ಹೀಗೆಲ್ಲಾ ಯೋಚಿಸುವಾಗ ರಮೇಶನನ್ನು ದೂರ ಸರಿಸಿಬಿಡಬೇಕು ಎನಿಸುತ್ತದೆ ಆಕೆಗೆ. ತನ್ನ ಬದುಕಿನ ಲಯ/ಗತಿಯೇ ಬೇರೆಯದು ಎನಿಸುತ್ತದೆ.

ಆದರೂ ಆಸೆ. ಎಲ್ಲಿಯೋ ಹೃದಯದ ಮಿಡಿತ. ಹೃದಯಕ್ಕೆ, ಮನಸ್ಸಿಗೆ ಹತ್ತಿರವಾದ ಸಂಬಂಧ. ಪ್ರಯತ್ನಿಸಿ ನೋಡಬಾರದೇಕೆ ಎನ್ನುವ ದುರಾಸೆ. ತನ್ನ ಅಲೆಮಾರಿ ಒಂಟಿತನದ ಬದುಕಿಗೆ ವಿದಾಯ ಹೇಳಿಬಿಟ್ಟರೆ? ತನ್ನತನದ 'ಅಹಂ' ಬಿಟ್ಟು ರಮೇಶನೊಡನೆ ಇಡಿಯ ಬದುಕನ್ನು ಕಳೆಯಲು ನಿರ್ಧರಿಸಿಬಿಟ್ಟರೆ?

ಹೀಗೇ ಗಂಗಾಳ ಮನಸ್ಸು ಹೊಯ್ದಾಡುತ್ತದೆ. ರಮೇಶನ ಬೆಚ್ಚನೆಯ ಸ್ನೇಹ, ಹೃದಯ ದೂರ ಸರಿಸಿಬಿಟ್ಟರೆ ತಾನು ಎಲ್ಲೂ ಇರದೇ ಅತಂತ್ರಳಾಗಿಬಿಡುತ್ತೇನೇನೋ ಎನ್ನುವ ಆತಂಕ. ಒಂಟಿತನದ ಭಯ. ತನ್ನ ಹಿಂದಿನ ಎಲ್ಲಾ ಸಂಬಂಧಗಳ ಬಗ್ಗೆ ಗಂಗಾ ಯೋಚಿಸಿ ನೋಡುತ್ತಾಳೆ. ನೆನಪಿಸಿದರೆ ಯಾರೂ ಅವಳಿಗೆ ಸೇರಿದವರಾಗಿರಲಿಲ್ಲ. ಯಾರೂ ಕೂಡಾ ಗಂಗಾ ತನಗೇ ಸೇರಿದವಳು ಎಂದು ಕೂಡಾ ಅಂದುಕೊಂಡಿರಲಿಲ್ಲ. ಆಕೆಯೆಷ್ಟು ಅವರನ್ನು ಬಳಸಿಕೊಂಡು ಬದುಕಿದಳೋ? ಅವರೆಷ್ಟು ಈಕೆಯನ್ನು ಬಳಸಿಕೊಂಡರೋ? ಯಾವ ಸಂಬಂಧಗಳೂ ಆಕೆಯಲ್ಲಿ ಬೇರು ಬಿಟ್ಟಿರಲಿಲ್ಲ. ಯಾವುವೂ ಹೃದಯಕ್ಕೆ ಅಂಟಿಕೊಂಡು ಅಲುಗಾಡಿಸಿರಲಿಲ್ಲ.

ರಮೇಶ ಚಿಕ್ಕ-ಪುಟ್ಟ ವಿಚಾರಗಳಲ್ಲಿ ತಲೆ ಕೆಡಿಸಿಕೊಳ್ಳುತ್ತಾನೆ. ಗಂಗಾ ನೊಂದುಕೊಂಡರೆ ಆಚೆ ಹೆಜ್ಜೆ ಇಡಲಾರ. 17-18 ವರುಷದಲ್ಲಿ ರವಿಯಿಂದ ಕಳೆದುಕೊಂಡ ಮುಗ್ಧತೆಯನ್ನು ರಮೇಶನಿಂದ

ಪಡೆಯಬೇಕು ಎನ್ನುವ ವಿಚಿತ್ರ ಆಸೆ ಗಂಗಾಳಲ್ಲಿ ಮೂಡುತ್ತದೆ. ರಮೇಶನ ಬದುಕಿನ ಲಯಗಳಿಗೆ ತಾನೇ ತೆರೆದುಕೊಂಡು ಬದುಕಿದರೆ - ಎಂಬ ವಿಚಿತ್ರ ಆಸೆಯೂ ಆಕೆಯಲ್ಲಿ ಮೂಡುತ್ತದೆ. ರಮೇಶ, ರೋಹಿಣಿ ಇಷ್ಟು ಆತ್ಮೀಯರಾಗಿರದಿದ್ದರೆ ತಾನು ಇಷ್ಟು ದಿನವೂ ಡೆನ್‌ಹಾಗ್‌ನಲ್ಲಿ ಇರುತ್ತಿರಲಿಲ್ಲವೇನೋ ಎಂದು ಗಂಗಾ ಯೋಚಿಸುತ್ತಾಳೆ. ಡೆನ್‌ಹಾಗ್‌ನಲ್ಲಿ ಕಳೆದಿರುವ ಎಂಟು ತಿಂಗಳಲ್ಲಿ ಆಕೆ ಆತ್ಮೀಯವಾಗಿ ದಿನಗಳನ್ನು ಕಳೆದುದೆಂದರೆ ರೋಹಿಣಿ ಹಾಗೂ ರಮೇಶರ ಆತ್ಮೀಯತೆಯಲ್ಲಿ. ಡೆನ್‌ಹಾಗ್‌ನಲ್ಲಿ sense of belongingness ಆಕೆಗೆ ಇದ್ದುದೇ ಇಲ್ಲ. ಆಕೆಗೆ ಏನಾಗುತ್ತದೆಯೆಂದು ಆಕೆಗೇ ತಿಳಿದಿರಲಿಲ್ಲ. ಭಾರತಕ್ಕೆ ವಾಪಸ್ಸು ಹೋಗಿಬಿಡಬೇಕು ಎಂದು ಯಾವಾಗಲೂ ಮನಸ್ಸು ತುಡಿಯುತ್ತಿತ್ತು. ಹೊನ್ನೇಕೆರೆಗೆ ಓಡಿ ಹೋಗಿ ತಾಯಿಯ ಹೊಟ್ಟೆಯಲ್ಲಿ ಹುದುಗಿಕೊಂಡು ಮುದುರಿ ಮಲಗಿಬಿಡಬೇಕು ಎನ್ನಿಸುತ್ತಿತ್ತು. ಡೆನ್‌ಹಾಗ್‌ಗೆ ಹೋದ ಒಂದೆರಡು ತಿಂಗಳು ಆಕೆಯ ಮನಸ್ಸು ಮುದುಡಿಕೊಂಡೇ ಇರುತ್ತಿತ್ತು. ಯಾಕೆ ಹೀಗೆ ಎಂದು ಗಂಗಾಳಿಗೇ ಅರ್ಥವಾಗುತ್ತಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಯಾರೊಟ್ಟಿಗಾದರೂ ಮಾತನಾಡುವಾಗ ಹಾ, ಹೂ ಎನ್ನುವುದರಲ್ಲಿಯೇ ಗಂಗಾ ಮಾತು ಮುಗಿಸಿಬಿಡುತ್ತಿದ್ದಳು. ನಾಲ್ಕು ಜನ ಗೆಳತಿಯರ ನಡುವೆಯೇ ತಾನು ಕುಳಿತಿದ್ದೇನೆ ಎನ್ನುವ ಸತ್ಯವನ್ನೇ ಮರೆತು ಒಬ್ಬಂಟಿಯಾಗಿ ಇದ್ದುಬಿಡುತ್ತಿದ್ದಳು. ಕೆಲವೊಮ್ಮೆ ಯಾರೂ ಜೊತೆಗಿರದೇ ತಾನೊಬ್ಬಳೇ ಇದ್ದುಬಿಡಬೇಕು ಅನ್ನಿಸುತ್ತಿತ್ತು. ಆಗೆಲ್ಲ ಸಮುದ್ರವೇ ಆಕೆಗೆ ಸಂಗಾತಿಯಾಗಿದ್ದುದು. ತಾಸುಗಟ್ಟಲೆ ಸುಮ್ಮನೇ ತೆರೆಗಳನ್ನು ವೀಕ್ಷಿಸುತ್ತಾ ಕುಳಿತುಬಿಡುತ್ತಿದ್ದಳು. ಅಥವಾ ಚಳಿಯಲ್ಲಿ ಮುದುರಿಕೊಂಡೇ ತಾಸುಗಟ್ಟಲೇ ಏನನ್ನಾದರೂ ಬರೆಯುತ್ತಾ ಕೂತುಬಿಡುವಳು. ತಾನು ಇತರ ಹುಡುಗಿಯರ ಹಾಗೆ ಸ್ಪಾಂಟೇನಿಯಸ್ ಅಲ್ಲವೇನೋ ಎಂಬ ಕೊರಗು ಆಕೆಗೆ. ಕುಮುದಿನಿ ನಗುತ್ತಾಳೆ ಅದೂ ಹೃದಯಪೂರ್ವಕವಾಗಿ. ಎಲ್ಲರೊಟ್ಟಿಗೆ ಹಾಸ್ಯ ಮಾಡುತ್ತಾಳೆ, ಬೆರೆಯುತ್ತಾಳೆ. ಗಂಗಾಳಿಗೆ ಯಾವುದೂ ಬೇಡವೆನಿಸುತ್ತದೆ. ತನ್ನೊಳಗೇ ತಾನಿದ್ದು ತನ್ನ ಅಂತರಂಗವನ್ನು ಕಂಡುಹಿಡಿಯಬೇಕು ಅನಿಸುತ್ತದೆ.

ಸೇಸಿಯಮ್ಮನ ಸಾವಿನಲ್ಲಿ ತಾನು ಇನ್ನಷ್ಟು ಜರ್ಝರಿತಳಾಗುತ್ತಿದ್ದೇನೆ ಎನ್ನುವ ಭಾವ ಗಂಗಾಳಲ್ಲಿ ಬಲವಾಗಿ ಮೂಡತೊಡಗುತ್ತದೆ. ನಗಬೇಕು ಎಂದರೆ ತನಗೆ ಸಾಧ್ಯವೇ ಆಗುವುದಿಲ್ಲವೇನೋ ಎನ್ನುವ ಅಳುಕು. ಬದುಕಿನ ಹೊಸ ಸಾಧ್ಯತೆಗಳ ಹುಡುಕಬೇಕು, ಹೊಸ ಸಾಧ್ಯತೆಗಳಲ್ಲಿ ಆಶಾವಾದಿಯಾಗಬೇಕು ಎಂದು ಏನೆಲ್ಲ ಅಂದುಕೊಳ್ಳುತ್ತಾಳೆ. ಆದರೆ ಮನಸ್ಸು ಮುದುಡಿಯೇ ಇರುತ್ತದೆ. ಕುಮುದಿನಿಯನ್ನು ಕಂಡಾಗ ಒಮ್ಮೊಮ್ಮೆ ಅಸೂಯೆ ಎನಿಸುತ್ತದೆ. ಪ್ರಜ್ಞಾಪೂರ್ವಕವಾಗಿ ಸಂತೋಷವಾಗಿರಬೇಕು ಎಂದುಕೊಳ್ಳುವುದೆಲ್ಲಾ ಮರತೇ ಹೋಗುತ್ತದೆ. ಕಣ್ಣುಗಳಲ್ಲಿ ಕಾಂತಿಯೇ ಇರುವುದಿಲ್ಲ. ಮುಖದ ತುಂಬಾ ಅದ್ಯಾವುದೋ ನೋವು. ನೋಡಿದವರೆಲ್ಲ 'ಏನು ಇಷ್ಟೊಂದು Depress ಆಗಿದೀಯ' ಎನ್ನುತ್ತಾರೆ. ಯಾಕೆ ತಾನು ಸಂತೋಷವಾಗಿರುವುದಿಲ್ಲ? ಯಾಕೆ ತನಗೆ ಮಾತನಾಡಬೇಕು ಅನ್ನಿಸುವುದಿಲ್ಲ? ಯಾಕೆ ಯಾವಾಗಲೂ ಮೌನದ ಆಸರೆ ಹೊತ್ತುಕೊಂಡೇ ಇರುತ್ತೇನೆ? ಹೀಗೆಲ್ಲ ಯೋಚಿಸುವಾಗ ತನ್ನ ಹೃದಯದಲ್ಲಿ ನಡೆಯುತ್ತಿರುವುದು ಏನು? ಎಂದು ಗಂಗಾ ತನಗೇ ಪ್ರಶ್ನೆ ಹಾಕಿಕೊಳ್ಳುತ್ತಾಳೆ. ಸೇಸಿಯಮ್ಮನ ಸಾವಿನ ಭೀಕರತೆಯನ್ನು ಎದೆಯಿಂದ ಕಿತ್ತುಹಾಕುವುದು ಅಷ್ಟು ಸುಲಭವಲ್ಲ ಎಂದು ಅಂದುಕೊಳ್ಳುತ್ತಾ ತನ್ನೊಳಗೇ ತಾನಿದ್ದು ಜೀರ್ಣಿಸಿಕೊಳ್ಳಬೇಕು ಎಂದುಕೊಳ್ಳುತ್ತಾಳೆ.

ಗಂಗಾಳ ನೋವನ್ನು ರಮೇಶ ಮೌನವಾಗಿದ್ದೇ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಅವನ ಬಗ್ಗೆ ಪ್ರೀತಿ ಎನಿಸುತ್ತದೆ. ಬಹಳ ಹಚ್ಚಿಕೊಂಡು ಓಡಾಡುತ್ತಾನೆ. ಹೆಣ್ಣು ಮಕ್ಕಳ ಕರುಳು ಅವನಿಗೆ.

ಗಂಗಾಳನ್ನು ಸಂತೋಷವಾಗಿರಿಸಲು ಸದಾ ಪ್ರಯತ್ನಿಸುತ್ತಾನೆ. ಇಂತಹ ಸಂಬಂಧದಲ್ಲಿಯೇ ಸಂಕೀರ್ಣತೆ ಮರೆತು ತಾನು ಸಂತೋಷವಾಗಿ ಇದ್ದುಬಿಡಬಹುದೇನೋ ಎಂದು ಗಂಗಾ ಯೋಚಿಸುತ್ತಾಳೆ. ಆಕೆ ಹೊನ್ನೇಕೆರೆಯಿಂದ ಶಿವಮೊಗ್ಗೆಗೆ, ಬೆಂಗಳೂರಿಗೆ ಬಂದಾಗ ನಿಧಾನಗತಿಯಲ್ಲಿ ಹೆಜ್ಜೆ ಇಟ್ಟು ಬದುಕಿಗೆ ಹೊಂದಿಕೊಂಡ ಹಾಗೆ ರಮೇಶ ಡೆನ್‌ಹಾಗ್‌ನ ಬದುಕಿಗೆ ಒಂದೊಂದೇ ಹೆಜ್ಜೆ ಇಟ್ಟು ನಿಧಾನವಾಗಿ ಹೊಂದಿಕೊಳ್ಳತೊಡಗಿದ್ದ. ಡೆನ್‌ಹಾಗ್‌ನ, ಪಾಶ್ಚಾತ್ಯ ಬದುಕಿನ ಥಮಕು, ಥಮಕುಗಳ ನಡುವೆ ತೂರಿ ಹೋಗಬಹುದಾಗಿದ್ದ ತನ್ನ ಬದುಕು ಗಂಗಾಳಿಂದಾಗಿ ಬೇರೊಂದು ದಿಕ್ಕಿಗೆ ತಿರುಗಿದೆ ಎಂದು ರಮೇಶ ಯಾವಾಗಲೂ ಗಂಗಾಳಿಗೆ ಹೇಳುತ್ತಿದ್ದ. ತನ್ನ ಚಿಕ್ಕ ವಯಸ್ಸಿನಲ್ಲಿ, ತಾರುಣ್ಯದಲ್ಲಿ ಮೂಲೆಯೊಂದರಲ್ಲಿ ಮನೆ ಮಾಡಿದ್ದ ವಿಚಾರವಂತಿಕೆಯ ಬದುಕಿಗೆ ತಾನು ತೆರೆದುಕೊಳ್ಳುವಲ್ಲಿ ಗಂಗಾಳ ಪ್ರೋತ್ಸಾಹ/ಸಹಕಾರವೇ ಕಾರಣವೆಂದು ರಮೇಶ ಗಂಗಾಳ ಹತ್ತಿರ ಯಾವಾಗಲೂ ಹೇಳುತ್ತಿದ್ದ. ಸೇಸಿಯಮ್ಮನ ಸಾವಿನ ನೋವು ಗಂಗಾಳ ಎದೆಯಲ್ಲಿ ಮಂಜುಗಡ್ಡೆಯಾಗಿದ್ದು ರಮೇಶನಿಗೆ ಅರಿವಿತ್ತು. ಹಾಲೆಂಡಿನ ಸುಂದರ ಪ್ರದೇಶಗಳಿಗೆ ಆಕೆಯನ್ನು ಕರೆದೊಯ್ಯುತ್ತಿದ್ದ. 'ವಿಂಡ್ ಮಿಲ್' ತೋರಿಸುತ್ತೇನೆ ಎಂದು ಚಿಕ್ಕ ಮಕ್ಕಳ ಉತ್ಸಾಹದಿಂದ ಹೊರಡಿಸುತ್ತಿದ್ದ. ಸಾಹಿತ್ಯದ ಬಗ್ಗೆ ಜೀವವನ್ನೇ ಇಟ್ಟುಕೊಂಡಂತಿದ್ದ ಗಂಗಾ ಇಷ್ಟಪಡುವಳೆಂದು ಶೇಕ್ಸ್‌ಪಿಯರ್ ನಾಟಕ/ಸಿನೆಮಾಗಳಿಗೆ ಕರೆದೊಯ್ಯುತ್ತಿದ್ದ. ಇಂತಹವುಗಳನ್ನು ಅಕ್ಕರೆಯಿಂದ/ಪ್ರೀತಿಯಿಂದ ಮಾಡುವ ರಮೇಶನನ್ನು ಕಂಡಾಗಲೆಲ್ಲಾ ಗಂಗಾಗೆ ತಾನು ಈ ಸಂಬಂಧದಲ್ಲಿ ಕರಗಿಯೇ ಹೋಗಿ ಬಿಡುತ್ತೇನೇನೋ ಎಂದು ಭಾವಿಸುತ್ತಿದ್ದಳು.

ಈ ನಡುವೆ ಗಂಗಾ-ರಮೇಶನ ಬಳಿ ಕುಳಿತು ತನ್ನ ಬದುಕನ್ನು ಹಂಚಿಕೊಳ್ಳಬೇಕು ಎಂದು ಗಂಭೀರವಾಗಿ ಆಲೋಚಿಸತೊಡಗಿದ್ದಳು. ಪ್ರೀತಿ/ಪ್ರೇಮದ ಮಜಲುಗಳಲ್ಲಿಯೇ ತಳಕು ಹಾಕಿಕೊಂಡ ರಮೇಶನ ಸಂಬಂಧ ದೈಹಿಕ ಸಂಬಂಧಕ್ಕೆ ಚಾಚಿಕೊಳ್ಳುವ ಮೊದಲು ತಾನೇನೆಂದು ಬಿಚ್ಚಿಡಬೇಕೆಂಬುದು ಆಕೆಗೆ ತೀವ್ರವಾಗಿ ಅನ್ನಿಸತೊಡಗಿತ್ತು. ಈ ಮಧ್ಯೆ ಇನ್‌ಸ್ಟಿಟ್ಯೂಟ್‌ಗೆ ಹದಿನೈದು ದಿನಗಳ ರಜೆ ಬಂದುದರಿಂದ ಗಂಗಾ ಜರ್ಮನಿಗೆ ಹೋಗಲು ಆಶಿಸಿದ್ದಳು. ಜರ್ಮನಿಯಲ್ಲಿ ಆಕೆಯ ಪರಿಚಯಸ್ಥರೊಬ್ಬರಿದ್ದರು. ಗಂಗಾ ಹಾಲೆಂಡಿಗೆ ಬಂದ ದಿನಗಳಲ್ಲಿ ಅವರಿಗೆ ಪತ್ರ ಬರೆದಿದ್ದಳು. ಆತ ಅದಕ್ಕೆ ಉತ್ತರಿಸಿದ್ದರೂ ಕೂಡಾ. ಅವರ ಆಹ್ವಾನದ ಮೇರೆಗೆ ಒಂದು ವಾರದ ಮಟ್ಟಿಗೆ ಗಂಗಾ ಜರ್ಮನಿಗೆ ಹೊರಟುನಿಂತಳು. ಹೋಗುವಾಗ ರಮೇಶನನ್ನೂ ಜೊತೆಗೆ ಕರೆದೊಯ್ಯುವ ಆಸೆ ಇತ್ತು ಗಂಗಾಗೆ. ಆದರೆ ತಾನು ಹೋಗುತ್ತಿರುವುದೇ ಇನ್ನೊಬ್ಬರಿಗೆ ಅತಿಥಿಯಾಗಿ. ರಮೇಶನನ್ನೂ ಹೇಗೆ ಕರೆದೊಯ್ಯುವುದು? ಹೀಗಾಗಿ ಗಂಗಾ ಒಂದು ವಾರದ ಮಟ್ಟಿಗೆ ಒಬ್ಬಳೇ ಜರ್ಮನಿಗೆ ಹೋದಳು. ಜರ್ಮನಿಗೆ ಕಾಲಿಟ್ಟಾಗ ಗಂಗಾಗೆ ಮಾರ್ಕ್ಸ್/ಹಿಟ್ಲರ್ ಇಬ್ಬರೂ ಒಟ್ಟೊಟ್ಟಿಗೇ ನೆನಪಾಗತೊಡಗಿದ್ದರು. ಗಂಗಾ ಹೋಗಬೇಕಾಗಿದ್ದು ಕಲೋನ್ ಎಂಬ ಪ್ರದೇಶಕ್ಕೆ. ಪಾಶ್ಚಿಮಾತ್ಯ ದೇಶಗಳಾವುವೂ ಭಾರತದ ಹಾಗೆ ಗಡಿ-ಬಿಡಿಯ ರಾಷ್ಟ್ರಗಳು ಎಂದು ಗಂಗಾಗೆ ಅನ್ನಿಸುತ್ತಿರಲಿಲ್ಲ. ಎಲ್ಲಿ ಇಳಿಯಬೇಕು/ಎಲ್ಲಿ ಹತ್ತಬೇಕು ಎನ್ನುವ ಗೊಂದಲಗಳು ಆಕೆಗೆ ಉಂಟಾಗುತ್ತಿರಲಿಲ್ಲ. ಮ್ಯಾಪ್ ಸಹಾಯದಿಂದಲೋ, ಪೋಲೀಸರ ಸಹಾಯದಿಂದಲೋ ಎಲ್ಲೆಂದರಲ್ಲಿ ಒಂಟಿಯಾಗಿಯೂ ಕೂಡಾ ಸರಾಗವಾಗಿ ತಿರುಗಾಡಿಬಿಡಬಹುದಿತ್ತು. ರೈಲಿನಲ್ಲಿ ಕುಳಿತು ಕಲೋನ್‌ಗೆ ಹೋಗುವಾಗ ಗಂಗಾ ಮತ್ತೆ ಮಾರ್ಕ್ಸ್/ಹಿಟ್ಲರ್ ನೆನಪಿಸಿಕೊಳ್ಳತೊಡಗಿದಳು. ಎಂತಹ contradiction ಎನ್ನಿಸಿತು. ಇಬ್ಬರೂ ಜರ್ಮನಿಯವರೇ. ಎಷ್ಟೊಂದು ತದ್ವಿರುದ್ಧ ideologyಗಳನ್ನು ಹುಟ್ಟು ಹಾಕಿದರು! ಜರ್ಮನಿ ಮಾರ್ಕ್ಸ್‌ನ ಕನಸನ್ನು ನನಸಾಗಿಸಲಿಲ್ಲ. ಗಂಗಾ ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಅಲ್ಲಿರುವವರು ವಿಚಿತ್ರವಾಗಿ ನೋಡುವರು, ಮುಖ ತಿರುಗಿಸಿಬಿಡುವರು. ರೈಲ್ವೇ ಸ್ಟೇಷನ್‌ನಲ್ಲಿ ಗಂಗಾ ಕಲೋನ್ ಬಗ್ಗೆ ವಿವರ ತಿಳಿಯಲು

ಸಹ ಪ್ರಯಾಣಿಕರ ಜೊತೆ ಇಂಗ್ಲೀಷ್‌ನಲ್ಲಿ ಮಾತನಾಡಲು ಪ್ರಯತ್ನಿಸಿದ್ದಳು. ಅವರು ತಕ್ಷಣ ಕೈಯಾಡಿಸಿ ಸುಮ್ಮನಾಗಿಬಿಟ್ಟಿದ್ದರು ಅಷ್ಟೇ. ಭಾಷೆಯಿಂದ ಹಿಡಿದು ಎಲ್ಲಾ ಸಾಂಸ್ಕೃತಿಕ, ರಾಜಕೀಯ ವಲಯಗಳಲ್ಲಿ ಜರ್ಮನ್ ರಕ್ತ ಹುಟ್ಟುಹಾಕಿದ್ದು ಹಿಟ್ಲರ್ ಇರಬಹುದೇ? ಅಥವಾ ಇದು ಈ ನೆಲದ ಸಂಸ್ಕೃತಿಯ ಬೇರುಗಳೇ ಎಂದು ಗಂಗಾ ಯೋಚಿಸುತ್ತಾಳೆ. ಜರ್ಮನಿಯ ರೈಲು-ರಸ್ತೆಗಳು ಡೆನ್‌ಹಾಗ್‌ನಷ್ಟು ಸುಂದರವಾಗಿಲ್ಲ ಎಂದು ಗಂಗಾಳಿಗೆ ಅನ್ನಿಸುತ್ತದೆ. ಸಾರಿಗೆಯ ಅವ್ಯವಸ್ಥೆ ಭಾರತದ ಬಸ್ಸುಗಳನ್ನು ನೆನಪಿಗೆ ತರಿಸುತ್ತದೆ. ಈ ನೆಲದಲ್ಲಿಯೇ ಮಾರ್ಕ್ಸ್ ಅಂತರ್‌ರಾಷ್ಟ್ರೀಯತೆಯ ಕನಸು ಕಂಡಿದ್ದನೇ? ಎಂದು ಗಂಗಾ ಯೋಚಿಸುತ್ತಾಳೆ. ಒಂದು ಕಡೆ ಹಿಟ್ಲರ್, ಇನ್ನೊಂದು ಕಡೆ ಮಾರ್ಕ್ಸ್. ಕೆಂಪು ಕೆಂಪಾಗಿ ಕಾಣಿಸುವ ಜರ್ಮನ್ನರ ರಕ್ತದಲ್ಲಿ ಯಾರ ರಕ್ತದ ಅಂಶ ಹೆಚ್ಚಾಗಿದೆಯೋ ಎಂಬ ಕುತೂಹಲ ಮತ್ತೆ ಮತ್ತೆ ಗಂಗಾಳಲ್ಲಿ ಕಾಡುತ್ತದೆ.

ಗಂಗಾ ಇತ್ತೀಚೆಗೆ ನೋಡಿದ ಸಿನೆಮಾ ಒಂದನ್ನು ಜ್ಞಾಪಿಸಿಕೊಳ್ಳುತ್ತಾಳೆ. ಜರ್ಮನಿಯ ಸಿನೆಮಾ. 'The beginning of the end'. ರ್‍ಯಾಡಿಕಲ್ ಫೆಮಿನಿಸಂ ಎತ್ತಿ ಹಿಡಿವ ಸಿನೆಮಾ. ಇಂತಹ ರ್‍ಯಾಡಿಕಲ್ ಫೆಮಿನಿಸ್ಟ್‌ರನ್ನು ಹುಟ್ಟುಹಾಕಿದ ಜರ್ಮನಿಯ ಸಂಸ್ಕೃತಿ ಯಾವ ಬಗೆಯದು ಎಂದು ಗಂಗಾ ಆಶ್ಚರ್ಯ ಪಡುತ್ತಾಳೆ.

ಫೆಮಿನಿಸ್ಟ್ ಸಿಂಬಲ್ ಕೂಡಾ ಈಗಾಗಲೇ ಮಾರ್ಕೆಟ್ ಗಳಿಸಿಕೊಳ್ಳತೊಡಗಿದೆ ಎಂದು ರಮೇಶ ಹೇಳುತ್ತಾನೆ. ಈ ಪಾಶ್ಚಿಮಾತ್ಯರು ಏಕೆ? ನಾವೂ ಸಹ ಹೇಗೆ ಎಂದರೆ ಬಾಟಲ್ ಮಾರುವವರನ್ನು ಹುಟ್ಟು ಹಾಕಿ ನಂತರ ಅವರ ಬಗ್ಗೆ ರೀಸರ್ಚ್ ಮಾಡುವುದು. ಪಾಶ್ಚಿಮಾತ್ಯ ಜಗತ್ತಿನಲ್ಲಿ ಯಾವುದೇ ideology ಜಾಗ್ರತೆಯಾಗಿ ಮಾರ್ಕೆಟ್‌ಗೆ ಇಳಿದುಬಿಡುತ್ತದೆ. ಜಾಹೀರಾತು ಜಗತ್ತೂ ಸಹ ಫೆಮಿನಿಸ್ಟ್ ಭಾಷೆ, ವಿಚಾರಧಾರೆಯನ್ನು ಬಳಸಿಕೊಂಡೇ ಫ್ರಿಜ್, ಕುಕ್ಕರ್, ವಾಷಿಂಗ್ ಮೆಷಿನ್ ಎಲ್ಲವನ್ನೂ ಮಾರುತ್ತದೆ. ಯಾವುದನ್ನೂ ಈ ಬಂಡವಾಳಶಾಹಿ ಜಗತ್ತು ಬಿಡುವುದಿಲ್ಲ. ಎಲ್ಲವನ್ನೂ ಹೈಜಾಕ್ ಮಾಡಿಬಿಡುತ್ತದೆ. ಕೊನೆ ಕೊನೆಗೆ ಯಾವ idealism ಅಥವಾ ideologyಗಳೂ Pure ಆಗಿ ಉಳಿಯುವುದಿಲ್ಲ. ಎಲ್ಲವೂ dogmatic ಆಗಿಬಿಡುತ್ತವೆ. ಅವಸರದಲ್ಲಿ ಓಡುವ ಪಾಶ್ಚಿಮಾತ್ಯ ಜಗತ್ತಿನಲ್ಲಿ ideologyಗಳು ಹುಟ್ಟುತ್ತವೆ, ಸಾಯುತ್ತವೆ. ಸತ್ತ ಯಾವುದೋ ವಿಚಾರ, ವಸ್ತು ಮೂರನೇ ಜಗತ್ತಿನಲ್ಲಿ ತಲೆ ಎತ್ತಿಕೊಂಡು ಮೆರೆಯುತ್ತವೆ.

ಕಲೋನ್‌ನಲ್ಲಿ ಇಳಿದಾಗ ರಾತ್ರಿ ಏಳು ಘಂಟೆ ಇರಬಹುದು. ಗಂಗಾಗೆ ಆತಂಕವಾಯಿತು. ತಾನು ಹೊರಡುವ ಘಳಿಗೆಯಲ್ಲಿ ರಂಜನ್‌ಗೆ ಫೋನ್ ಮಾಡಿ ಹೇಳಿದ್ದಳು. ರಮೇಶ ಮತ್ತೆ ಫೋನ್ ಮಾಡಿ ರಂಜನ್‌ಗೆ ತಿಳಿಸುವುದಾಗಿ ಹೇಳಿದ್ದ. ಹಾಗಾಗಿ ಭರವಸೆ. ಒಂದು ಪಕ್ಷ ರಂಜನ್ ಬರದೇ ಹೋದರೆ....? ರಂಜನ್‌ರನ್ನು ಮುಖತಃ ಭೇಟಿಯಾದದ್ದು ಏಳೆಂಟು-ವರ್ಷಗಳ ಹಿಂದೆ. ಶಿವಮೊಗ್ಗೆಯಲ್ಲಿದ್ದಾಗ ಮಾರ್ಕ್ಸಿಸ್ಟ್ ಲೆಕ್ಚರರ್ ನಾರಾಯಣ್ ಮನೆಯಲ್ಲಿ ಗಂಗಾ ರಂಜನ್ ಭೇಟಿಯಾದದ್ದು. ಹೊನ್ನೇಕೆರೆಯಲ್ಲಿ ತಾವು ಕೈಯಲ್ಲಿ ಬರೆದ 'ವಿವರ್ತ'ದ ಹಸ್ತ ಪ್ರತಿಯನ್ನು ಗಂಗಾ ರವಿಗೆ ನೀಡಿದ್ದಳು. ರವಿ ನಾರಾಯಣ್ ಮಾಸ್ತರ್‌ರಲ್ಲಿ ಕೊಟ್ಟಿದ್ದ. ಹೊನ್ನೇಕೆರೆಯಂತಹ ಊರಿನಲ್ಲಿ ಕುಳಿತು ಒಂದು ಗುಂಪಿನ ಹುಡುಗಿಯರು ಹೀಗೆ ಚರ್ಚಿಸಿ, ಬರಹಗಳನ್ನು ಕೈಯಲ್ಲಿ ಬರೆದು ಪುಸ್ತಕವನ್ನು ತಂದದ್ದು ಕಂಡು ರಂಜನ್‌ಗೆ ಆಶ್ಚರ್ಯ ಎನಿಸಿತ್ತು. ಗಂಗಾಳನ್ನು ಸಂಭ್ರಮದಿಂದ ಮಾತನಾಡಿಸಿದ್ದರು ರಂಜನ್. ಎಲ್ಲೋ ಹಳ್ಳಿಯ ಮೂಲೆಯಲ್ಲಿ ಕುಳಿತು 'ಸಿಮಾನ್ ದಿ ಬುವಾ' ಬಗ್ಗೆ ಕೂಡಾ ಚರ್ಚಿಸುವ ನಿಮ್ಮೆಲ್ಲರ ಬದುಕಿನ ಗ್ರಹಿಕೆ ಎಷ್ಟು

ಗಹನವಾದದ್ದು ಎಂದು ನುಡಿದಿದ್ದರು. ಆ ನಂತರ ನಾರಾಯಣ್ ಮನೆಯಲ್ಲಿಯೇ ನಡೆದ ಸಭೆಯಲ್ಲಿ ಗಂಗಾ ಕೂಡಾ ಭಾಗವಹಿಸಿದ್ದಳು. ಮಾರ್ಕ್ಸಿಸ್ಟ್ ಪಾರ್ಟಿಗಳ ಬಗ್ಗೆ, ಕರ್ನಾಟಕದ ರಾಜಕೀಯದ ಬಗ್ಗೆ ರಂಜನ್ ಮಾತನಾಡಿದ ನೆನಪು. ಆಗಷ್ಟೇ ಪ್ರಥಮ ಪಿ.ಯು.ಸಿ.ಯಿಂದ ದ್ವಿತೀಯ ಪಿ.ಯು.ಸಿ.ಗೆ ಕಾಲಿರಿಸಿದ ಗಂಗಾಗೆ ರಂಜನ್ ಹೇಳಿದ್ದನ್ನೆಲ್ಲ ಗ್ರಹಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ ರಂಜನ್ ಬಗ್ಗೆ ಒಂದು ಅಗಾಧವಾದ ಗೌರವ ಆಕೆಯಲ್ಲಿ ಮೂಡಿತ್ತು. ಈ ರಂಜನ್‌ನವರನ್ನು ಹುಡುಕಿಕೊಂಡೇ ಗಂಗಾ ಜರ್ಮನಿಯ ಕಲೋನ್‌ಗೆ ಬಂದದ್ದು. ಸ್ಟೇಷನ್‌ನಲ್ಲಿ ಸುತ್ತಲೂ ಕಣ್ಣಾಡಿಸಿದಳು. ಏಳೆಂಟು ವರುಷಗಳ ಹಿಂದೆ ನೋಡಿದ ರಂಜನ್‌ನವರನ್ನು ತಾನು ಗುರುತು ಹಿಡಿಯಬಲ್ಲೆನೇ ಎಂಬ ಅಳುಕೂ ಮನದಲ್ಲಿ ಕಾಣಿಸಿಕೊಳ್ಳದಿರಲಿಲ್ಲ. ರಂಜನ್ ಗಂಗಾಳ ಪತ್ರಕ್ಕೆ ಆತ್ಮೀಯವಾಗಿಯೇ ಉತ್ತರಿಸಿದ್ದರು. ಜರ್ಮನಿಯಲ್ಲಿ ಒಂದು ವಾರ ಇದ್ದು ಹೋಗು ಎಂದು ಆಹ್ವಾನಿಸಿದ್ದರು. ಮಾರ್ಕ್ಸ್‌ನ ಹುಟ್ಟೂರು ನೋಡಬೇಕು ಎಂಬ ಆಸೆಗೆ ಗಂಗಾ ಜರ್ಮನಿಗೆ ಹೋಗಲು ಇಷ್ಟಪಟ್ಟಿದ್ದಳು. ಜೊತೆಗೆ ಆರೇಳು ವರ್ಷಗಳಿಂದಲೂ ಜರ್ಮನಿಯಲ್ಲಿಯೇ ಇದ್ದುಬಿಟ್ಟಿದ್ದ ರಂಜನ್‌ರವರ ಬಗ್ಗೆ ಕುತೂಹಲ. ಯಾವಾಗಲೋ ಅವರು ಮಾತನಾಡಿದ ಅಸ್ಪಷ್ಟ ವಿಚಾರಗಳಲ್ಲಿ ಒಬ್ಬ ಆದರ್ಶವಾದಿಯಾಗಿ ಕಂಡಿದ್ದರು. ಭಾರತ ಬಿಟ್ಟು ಅದೆಷ್ಟು ವರ್ಷಗಳ ಕಾಲ ಇಲ್ಲಿಯೇ ಇದ್ದುಬಿಟ್ಟಿದ್ದಾರೆ ಎಂದು ಯೋಚಿಸುವಾಗ ರಂಜನ್ ಬಗ್ಗೆ ಆಶ್ಚರ್ಯವಾಗುತ್ತದೆ. ಹೇಗೆ sense of belongingness ಸಾಧ್ಯವಾಯಿತು ಅವರಿಗೆ? ರಮೇಶನಿಲ್ಲದಿದ್ದರೆ, ರೋಹಿಣಿ ಇಲ್ಲದಿದ್ದರೆ ಡೆನ್‌ಹಾಗ್‌ನಲ್ಲಿ ಎಂಟು ತಿಂಗಳ ಕಾಲ ನಿಲ್ಲಲು ತನಗೆ ಸಾಧ್ಯವಾಗುತ್ತಿತ್ತೇ?

'ಹಲೋ' ಎಂದಾಗ ಗಂಗಾ ಯೋಚಿಸುತ್ತಿದ್ದವಳು ಧ್ವನಿ ಬಂದ ದಿಕ್ಕಿಗೆ ತಿರುಗಿದಳು. ಗಡ್ಡಧಾರಿ ವ್ಯಕ್ತಿ. ಅಲ್ಲಿ ಇಲ್ಲಿ ಬಿಳಿಯ ಕೂದಲಿನ ಗಡ್ಡ. ದಢೂತಿ ಮೈಯಿ. ಭಾರತೀಯ ಬಣ್ಣ. ರಂಜನ್‌ರನ್ನು ಗುರುತಿಸುವುದು ಗಂಗಾಳಿಗೆ ಅಷ್ಟೇನೂ ಕಷ್ಟವಾಗಲಿಲ್ಲ. ಶಿವಮೊಗ್ಗೆಯಲ್ಲಿ ಗಂಗಾ ರಂಜನ್‌ರವರನ್ನು ನೋಡಿದ ಐದಾರು ತಿಂಗಳಲ್ಲಿಯೇ ಅವರು ಜರ್ಮನಿಗೆ ಹೊರಟು ಬಂದಿದ್ದರು. ರಂಜನ್ ಬಗ್ಗೆ ಪಾರ್ವತಿಯ ಆಫೀಸಿನಲ್ಲಿ ಎಲ್ಲರಿಗೂ ಗೊತ್ತಿತ್ತು. ಮಾರ್ಕ್ಸಿಸ್ಟ್ ವಲಯದಲ್ಲಿ ಹೆಚ್ಚು ಪರಿಚಯವಿದ್ದ ರಂಜನ್ ಬಗ್ಗೆ ಬೆಂಗಳೂರಿನಲ್ಲಿಯೂ ಗಂಗಾ ಕೇಳಿ ತಿಳಿದಿದ್ದಳು. ರಂಜನ್ ಆತ್ಮೀಯವಾಗಿಯೇ 'ಗುರುತು ಹಿಡಿಯಬಲ್ಲೆಯಾ ಗಂಗಾ' ಎಂದರು. ಗಂಗಾ 'ಓಹ್' ಎಂದು ನಕ್ಕಳು. ಇದ್ದಕ್ಕಿದ್ದ ಹಾಗೆಯೇ ರಂಜನ್‌ಗೆ ವಯಸ್ಸಾಗಿಬಿಟ್ಟಿದೆಯಲ್ಲ ಎಂಬ ಭಾವ ಆಕೆಯಲ್ಲಿ ಸುಳಿದು ಹೋಗದೇ ಇರಲಿಲ್ಲ. 'ಏನೂ ತೊಂದರೆ ಆಗಲಿಲ್ಲವಲ್ಲ ಗಂಗಾ' ಎಂದರು ಆತ. 'ಇಲ್ಲ' ಎನ್ನುತ್ತಲೇ ಗಂಗಾ, 'ನಾನು ನಿಮ್ಮನ್ನು ಶಿವಮೊಗ್ಗೆಯಲ್ಲಿ ನೋಡಿದ್ದು ಮಾತ್ರ. ಆದರೂ ಅಸ್ಪಷ್ಟ ಚಿತ್ರ ನೆನಪಿನಲ್ಲಿದೆ. ಈಗ ಬಹಳ ವಯಸ್ಸಾದವರ ಹಾಗೆ, ಬಳಲಿದವರ ಹಾಗೆ ಕಾಣುತ್ತೀರಿ ರಂಜನ್'ಎಂದಳು. 'ಆಗಲೇ ನಲವತ್ತರ ಗಡಿ ಮುಟ್ಟಿ ಮುಂದೆ ಸಾಗಿದ್ದೇನೆ' ಎಂದು ನಗುತ್ತಲೇ ಆತ್ಮೀಯವಾಗಿ ರಂಜನ್ ಗಂಗಾಳನ್ನು ಅವರ ಕೊಠಡಿಗೆ ಕರೆದೊಯ್ದರು.

ಗಂಗಾ ಒಂದು ವಾರದವರೆಗೆ ಜರ್ಮನಿಯಲ್ಲಿ ತಂಗಿದ್ದಳು. ಆ ಒಂದು ವಾರದಲ್ಲಿ ರಂಜನ್ ಬದುಕು ವಿದೇಶದಲ್ಲಿ ಹೇಗಿದೆ ಎಂಬುದಷ್ಟೇ ಅಲ್ಲ, ವಿದೇಶದಲ್ಲಿ ಬದುಕುವ ಭಾರತೀಯರ ಅಂತರಾಳದ ಬಗ್ಗೆಯೂ ಆಕೆಯ ಅರಿವಿಗೆ ಸ್ವಲ್ಪ ಸ್ವಲ್ಪ ಪರಿಚಯವಾದ ಹಾಗೆ ಅನ್ನಿಸತೊಡಗಿತ್ತು. ರಂಜನ್ ತಮ್ಮ ಇಡಿಯ ಬದುಕಿನಲ್ಲಿ ಬೌದ್ಧಿಕತೆ, ಜ್ಞಾನದ ಬಗ್ಗೆ ಎಂತಹ ಒಂದು ಅಂತರಂಗಿಕ ಒತ್ತಡ ಇತ್ತೆಂಬುದನ್ನು ಸುಮಾರು ಬಾರಿ ಗಂಗಾಳಲ್ಲಿ ಹೇಳಿದರು. ಜರ್ಮನಿಗೆ ಬರುವಲ್ಲಿಯೂ ಕೂಡಾ ಓದಬೇಕೆಂಬ ತಮ್ಮ ಜ್ಞಾನ ತೃಷೆಯೇ ಕಾರಣವಾದದ್ದು ಎಂದರು. ಮಾರ್ಕ್ಸ್‌ವಾದದ ವಿವಿಧ ಮಜಲುಗಳ ಬಗ್ಗೆ ಆಳವಾದ ಜ್ಞಾನದಾಹದ ಹಂಬಲವಿದ್ದ ರಂಜನ್‌ಗೆ ಆ ಜ್ಞಾನ ದಾಹದ ತೃಷೆಯೇ ಜರ್ಮನಿಗೆ ಬರಲು ಪ್ರೇರೇಪಿಸಿದ್ದು.

ಇಂಡಿಯಾ ಅಥವಾ ಕರ್ನಾಟಕದ ಹಾಗೆ ಇಲ್ಲಿ ಅಲ್ಪ ಸ್ವಲ್ಪ ಜ್ಞಾನ ಸಂಪಾದಿಸಿ 'ಇಂಟಲೆಕ್ಚುಯಲ್' ಎಂದು ಬೀಗುವ ಬೂಟಾಟಿಕೆಗಳು ಕಾಣುವುದಿಲ್ಲ ಎಂದು ರಂಜನ್ ಅಭಿಪ್ರಾಯಪಟ್ಟರು. ಬೆಂಗಳೂರಿನ ಬೌದ್ಧಿಕ ವಲಯದ ಹಲವಾರು ವ್ಯಕ್ತಿಗಳು ವೈಚಾರಿಕತೆಯ ಮಗ್ಗಲುಗಳ ಹಿಡಿದು ಬೂಟಾಟಿಕೆ ಆಡುವವರು ಎಂಬುದು ಗಂಗಾಗೂ ತಿಳಿದಿತ್ತು. ರಂಜನ್ ತಮಗೆ ಹಾಗೂ ಗಂಗಾಗೆ ಪರಿಚಯವಿರುವ ಕರ್ನಾಟಕದ ಸಾಹಿತಿಗಳ ಬಗ್ಗೆ, ಪತ್ರಿಕೆಗಳ ಬಗ್ಗೆ, ಮಾರ್ಕ್ಸಿಸ್ಟ್‌ಗಳ ಬಗ್ಗೆ, ರಾಜಕಾರಣಿಗಳ ಬಗ್ಗೆ, ಒಟ್ಟು ಸಂಸ್ಕೃತಿಯ ಬಗ್ಗೆ ಎಷ್ಟೋ ದಿನಗಳು ಗಂಗಾಳಲ್ಲಿ ಮಾತನಾಡಿದ್ದರು. ಇನ್ನೊಬ್ಬರನ್ನು ರಂಜಿಸಲಿಕ್ಕೆ ಬೇಕಾದ ವೈಚಾರಿಕತೆಯ ಬಗ್ಗೆ, ತಮ್ಮ ಅಸ್ತಿತ್ವದ ಪ್ರಶ್ನೆಗಾಗಿ ರೂಪಿಸಿಕೊಂಡ ವೈಚಾರಿಕತೆಯ ಬಗ್ಗೆ ತಮಗೆ ಈಗ ಸ್ವಲ್ಪವೂ ಗೌರವ ಉಳಿದಿಲ್ಲ ಎಂದರು. ಯಾವುದೇ ಜ್ಞಾನದಾಹ - ಬದುಕಿನ ಭಾಗವಾಗಿ ಬರದೇ ಹೋದರೆ ಅದು ಯಾವ Philosophyಯೇ ಆಗಲೀ ಬದುಕಿನ ಹೊರಮೈಯಲ್ಲಿ ಉಳಿದುಕೊಂಡುಬಿಡುತ್ತದೆಯೇ ಹೊರತು ಅಂತರಂಗದ ನಿಜವಾದ ದಾಹ ಆಗಿರುವುದಿಲ್ಲ ಎಂದರು. 'ಫೆಮಿನಿಸಂ' - ನಿನ್ನ ಬದುಕಿನ ಭಾಗ ಎಂದು ಹೇಳಿಕೊಳ್ಳುವ ನೀನೂ ಇಂತಹದರ ಬಗ್ಗೆ ಗಂಭೀರವಾಗಿ ಯೋಚಿಸಬೇಕು ಗಂಗಾ ಎಂಬ ಮಾತನ್ನು ರಂಜನ್ ಗಂಗಾಳಲ್ಲಿ ಹಲವಾರು ಬಾರಿ ಹೇಳಿದ್ದರು.

ರಂಜನ್ ಹಲವಾರು ಕಡೆ ಗಂಗಾಳನ್ನು ಕರೆದೊಯ್ದರು. ಹೀಗೊಮ್ಮೆ ಹಾಸ್ಟೆಲ್ ತರಹದ ಒಂದು ಕಡೆ ಕರೆದೊಯ್ಯುವಾಗ ಗಂಗಾ ರಂಜನ್‌ರವರನ್ನು 'ರಂಜನ್ ಹೀಗೇ ಏಳೆಂಟು ವರ್ಷ ಜರ್ಮನಿಯಲ್ಲಿ ಇದ್ದೀರಲ್ಲ, ಈ ಪರಿಸರದಲ್ಲಿ ನಿಮಗೆ ಒಂಟಿ ಎನಿಸಿದ್ದಿಲ್ಲವೇ? ಬೆಂಗಳೂರಿಗೆ ಬಂದು ನಮ್ಮವರೊಡನೆ, ನಮ್ಮ ಸಂಸ್ಕೃತಿಯೊಡನೆ ಇದ್ದು ಬಿಡಬೇಕು ಎಂದು ನಿಮಗೆ ತೀವ್ರವಾಗಿ ಅನ್ನಿಸುವುದಿಲ್ಲವೇ?' ಎಂದಳು. ರಂಜನ್ ಪ್ರಪಂಚದ ಯಾವುದೇ ಭಾಗದಲ್ಲಿದ್ದರೂ ತಮಗೆ sense of belongingnessನ ಕೊರತೆ ಕಾಣಿಸುವುದಿಲ್ಲ ಎಂದು ಹೇಳಿ ತಮ್ಮ ವೈಯಕ್ತಿಕ ಬದುಕನ್ನು ಗಂಗಾಳಲ್ಲಿ ಹಂಚಿಕೊಳ್ಳತೊಡಗಿದ್ದರು. ನಲವತ್ತು ವರ್ಷದ ಗಡಿ ದಾಟಿ ಮುಂದೆ ಹೆಜ್ಜೆ ಇಡುತ್ತಿರುವ ತಮಗೆ ಏನೇನೋ ದ್ವಂದ್ವಗಳು ತಮ್ಮಲ್ಲಿಯೇ ನಡೆಯುತ್ತಿರುವ ಬಗ್ಗೆ ಮಾತನಾಡಿದರು. ಈಗಾಗಲೇ ತಾವು ಎಲ್ಲಾದರೂ ಒಂದು ಕಡೆ settle ಆಗಬೇಕು ಎನ್ನುವ ಭಾವ ತಮ್ಮಲ್ಲಿ ಬಲವಾಗಿ ಬೇರೂರತೊಡಗಿದೆ ಎನ್ನುತ್ತಾರೆ. 'ಗಂಗಾ, ನನ್ನೆಲ್ಲ ಬದುಕಿನ ಅನುಭವದಿಂದ ನಿನಗೊಂದು ಮಾತು ಹೇಳುತ್ತೇನೆ. ಏನೆಂದರೂ ನಮ್ಮಂತವರು ಮದುವೆ, ಕೆಲಸ, ಒಂದು ಕಡೆ ಎಂದು ಮೂವತ್ತು ವರ್ಷದಲ್ಲಿ settle ಆಗಬೇಕು. ಹಾಗಿಲ್ಲದಿದ್ದಾಗ ಬದುಕಲ್ಲಿ ನೆಲೆ ಎನ್ನುವುದು ಸಿಕ್ಕುವುದೇ ಕಷ್ಟವಾಗಿಬಿಡುತ್ತದೆ. ನಿನಗೀಗ 26 ವರ್ಷ. ಇಂತಹ ಬದುಕಿನ ಸತ್ಯಗಳನ್ನು ನೀನು ತಿಳಿದುಕೊಂಡಿರಬೇಕು'. ಹೀಗೆಲ್ಲ ಮಾತನಾಡುವಾಗ ರಂಜನ್ ಆತ್ಮೀಯತೆಯಿಂದ, ವಿಶ್ವಾಸದಿಂದ ಮಾತನಾಡುವರು. 'ಬೆಂಗಳೂರಿಗೇ ಬಂದು ಅಲ್ಲಿಯೇ ನೀವು ಇದ್ದುಬಿಡಬಹುದಲ್ಲವೇ ರಂಜನ್' ಎಂದು ಗಂಗಾ ಹೇಳಿದ್ದಕ್ಕೆ ರಂಜನ್ ತಟಕ್ಕೆಂದು ಉತ್ತರಿಸಿದರು. 'ಈಗ ನಾನು ಬೆಂಗಳೂರಿಗೆ ಬರುತ್ತೇನೆ ಗಂಗಾ, ಅಲ್ಲಿ ನನಗೆ, ನನ್ನ ಬದುಕಿಗೆ ಆಧಾರವಾಗಿ ಏನೂ ಇಲ್ಲ. ಕೆಲಸ ಬೇಕು, ನಾನು ಬಂದರೆ ನನಗೆ ಕೆಲಸ ಕೊಡುವವರು ಯಾರು? ಅಲ್ಲಿರುವಾಗಲೇ ಜಾತಿ ರಾಜಕೀಯದಿಂದಾಗಿ ವಿಶ್ವವಿದ್ಯಾನಿಲಯದಲ್ಲಿ ಸಿಗುವ ಕೆಲಸವೂ ಸಿಗಲಿಲ್ಲ. ಈಗ ಈ ವಯಸ್ಸಿನಲ್ಲಿ ಎಲ್ಲಿ ಕೆಲಸ ಹುಡುಕುವುದು? ಕೆಲಸ ಇಲ್ಲದೇ ಇನ್ನೊಬ್ಬರ ಮೇಲೆ ಅವಲಂಬಿಸಿರಲು ಅಲ್ಲಿಗೆ ಬರಬೇಕೇ? ಮದುವೆಯಾದರೆ ಆಕೆಯನ್ನು ಸಾಕಬೇಕು. ಇಲ್ಲ ಕೆಲಸದಲ್ಲಿರುವ ಹುಡುಗಿಯ ನೋಡಿ, ನಾನು ಅವಳಿಗೆ ಹೊರೆಯಾಗಬೇಕು. ಇದೆಲ್ಲ ಯಾಕೆ? ಹೇಗೋ ಇಲ್ಲಿ ಜೀವನ ಸಾಗುತ್ತಿದೆ. ಆದರೆ ಗಂಗಾ ಈ ಜರ್ಮನಿಯ citizenship ಕೂಡಾ ನನಗೆ ಸಿಕ್ಕಿಲ್ಲ. ಇಲ್ಲಿಯೇ ಮದುವೆಯಾದರೆ ಇಲ್ಲಿಯ citizenship ಸಿಗಬಹುದು. ಆದರೆ ಅದೂ ಕೂಡಾ

ಬಂಧನವಾಗಿಬಿಡಬಹುದು, ತಾತ್ಕಾಲಿಕವಾದುದಾಗಿಬಿಡಬಹುದು ಎಂದು ಆಲೋಚಿಸುತ್ತಿದ್ದೇನೆ'. ಹೀಗೆಲ್ಲ ರಂಜನ್ ಮಾತನಾಡುವಾಗ ಗಂಗಾ ರಂಜನ್‌ರ ಹೃದಯದ ನೋವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ. 'ಮೂವತ್ತು ವಯಸ್ಸಿಗೇ settle ಆಗಿಬಿಡು ಗಂಗಾ' ಎಂದು ರಂಜನ್ ಹೇಳಿದ ಮಾತುಗಳ ಹಿಂದಿನ ಗಂಭೀರತೆ ಆಕೆಗೆ ತಟ್ಟತೊಡಗುತ್ತದೆ.

ರಂಜನ್ ಅವರ ಗೆಳತಿ ಅನಲ್ ಚೋಹಾಲ್ ಮನೆಗೆ ಕರೆದೊಯ್ದರು. ಜರ್ಮನಿಯಲ್ಲಿ ಸ್ವಲ್ಪ ಹೆಸರು ಮಾಡಿದ ಒಬ್ಬ ದೊಡ್ಡ ಪೇಯಿಂಟರ್ ಆಕೆ. ರಂಜನ್ ವಯಸ್ಸಿನವರೇ. ಗಂಗಾಗೆ ಆಕೆ ತಮ್ಮ ಪೇಯಿಂಟಿಂಗ್ ಎಲ್ಲಾ ತೋರಿಸಿದರು. ಎಲ್ಲಾ ಒಂದು ಕೋಣೆಯಲ್ಲಿ ನೀಟಾಗಿ ಜೋಡಿಸಿದ್ದರು. ಆಕೆಯ ಆ ಕೋಣೆಯಲ್ಲಿರುವವರೆಗೂ ಅದೊಂದು ಅದ್ಭುತ ಪ್ರಪಂಚದಂತೆ ಕಂಡಿತ್ತು ಗಂಗಾಗೆ. ಯಾವುದೋ ಕಲಾ ಜಗತ್ತಿನಲ್ಲಿ ತನ್ನನ್ನೇ ಮರೆತಂತೆ. ಮಹಿಳಾ ಬದುಕಿನ ಆಯಾಮಗಳನ್ನೇ ಪೇಯಿಂಟಿಂಗ್ಸ್‌ನಲ್ಲಿ ಕಂಡ ಗಂಗಾ ಅನಲ್ ಚೋಹಾಲ್ ಬಗ್ಗೆಯೇ ಬರುವಾಗ ಯೋಚಿಸತೊಡಗಿದ್ದಳು. ಆಕೆಯೊಬ್ಬ ಡೈವೋರ್ಸಿ. ಆಕೆಯ ಅಂತರಂಗದ ಸತ್ಯಗಳನ್ನೆಲ್ಲೋ ಆಕೆಯ ಪೇಯಿಂಟಿಂಗ್ಸ್‌ನಲ್ಲಿ, ಚಿತ್ರಿಸಿದ ಮುಖಗಳಲ್ಲಿ, ಮುಖಗಳಲ್ಲಿ ಮೂಡಿದ ಗೆರೆಗಳಲ್ಲಿ, ಗೆರೆಗಳಲ್ಲಿ ಮೂಡಿದ ಚುಕ್ಕೆಗಳಲ್ಲಿ, ಕಣ್ಣುಗಳ ತೇವದಲ್ಲಿ ಕಂಡ ಹಾಗೆ ಭಾಸವಾಗಿತ್ತು ಗಂಗಾಗೆ. ಎಲ್ಲವನ್ನೂ, ತನ್ನಂತರಂಗದ ನೋವುಗಳನ್ನೆಲ್ಲ ಅನಲ್ ಚೋಹಾಲ್ ಕಲೆಯಲ್ಲಿ ಗೆಲ್ಲಬಯಸಿದ್ದಳೇನೋ? ಆಕೆಗೆ ಏನನ್ನಿಸಿರಬಹುದು? ನೋವು ಕೊಟ್ಟ ಬದುಕು ಹೆಚ್ಚೆನಿಸಿ ಕಂಡಿರಬಹುದಾ? ಅಥವಾ ನೋವನ್ನೆಲ್ಲ ಜೀರ್ಣಿಸಿಕೊಂಡ ಕಲೆಯ ಗೆರೆಗಳು, ಬಣ್ಣಗಳು, ಚುಕ್ಕೆಗಳು, ಅದ್ಭುತವೆನಿಸಿರಬಹುದೇ? ಬದುಕಿನ ಅಪಕ್ವತೆ-ಕಲೆಯಲ್ಲಿ ಪರಿಪೂರ್ಣತೆ ಮೂಡಿಸಿರಬಹುದೇ? ಬದುಕು ಆಕೆಯ ಕಲೆಯನ್ನು ಗೆದ್ದಿರುವುದೋ? ಅಥವಾ ಕಲೆ ಆಕೆಯ ಬದುಕನ್ನು ಗೆದ್ದಿರುವುದೋ?

ರಂಜನ್ ಅನಲ್ ಚೋಹಾಲ್ ಬಗ್ಗೆ ವಿವರಿಸುತ್ತಲೇ ನಡೆದಿದ್ದರು. ಗಂಗಾಳ ಮನದಲ್ಲಿ ಏನೇನೋ ಯೋಚನೆಗಳು. ಆತ ಹೇಳಿದ್ದನ್ನು ಆಕೆ ಪೂರ್ತಿಯಾಗಿ ಕೇಳಿಸಿಕೊಂಡಳೋ ಇಲ್ಲವೋ? ಬರಿಯ ಹೂಗುಟ್ಟುತ್ತಿದ್ದಳು ಮಾತ್ರ. ಡೈವೋರ್ಸ್ ಆದ ಮೇಲೆ ಅನಲ್ ಪೂರ್ತಿಯಾಗಿ ಪೇಯಿಂಟಿಂಗ್‌ಗೆ ತಮ್ಮನ್ನು ಅರ್ಪಿಸಿಕೊಂಡುದನ್ನು, ಆಕೆಯ ಬದುಕಿನ ದಿನಚರಿಯ ಬಗ್ಗೆ ರಂಜನ್ ಈಗ ಹೇಳುತ್ತಿದ್ದುದನ್ನು ಗಂಗಾ ಕೇಳಿಸಿಕೊಳ್ಳತೊಡಗಿದ್ದಳು. ಅನಲ್ ಚೋಹಾಲ್ ಅಸ್ತಿತ್ವ ಇರುವುದೇ ಈಗ ಪೇಯಿಂಟಿಂಗ್ಸ್‌ನಲ್ಲಿ. ಆಕೆ ತಿಂಗಳುಗಟ್ಟಲೇ ಎಲ್ಲಿಗೂ ಹೋಗದೇ ಚಿತ್ರಿಸುವುದರಲ್ಲೇ ಮಗ್ನಳಾಗಿಬಿಡುತ್ತಾಳೆ. ಜೊತೆಗೆ ಸಂಬಂಧಬಟ್ಟ ವಲಯದಲ್ಲಿ ಆಗೀಗ ಸಂಚರಿಸಿ ಓದುತ್ತಾಳೆ. ಅನಲ್ ಚೋಹಾಲ್ ತಮ್ಮ ಬಗ್ಗೆ ಆಸಕ್ತಿ ತೋರುವುದನ್ನೂ ರಂಜನ್ ಹೇಳಿದರು. ಸಂಬಂಧ ಬೆಚ್ಚಗೆ ಎನಿಸುತ್ತದೆ. ಆದರೆ ಯಾವುದೂ ಹತ್ತಿರ ಎನಿಸುವುದಿಲ್ಲ ಎಂತಲೂ ನುಡಿದರು. ಹಣ ಇಲ್ಲದಾಗ ಇಲ್ಲಿ ಯಾವ ಸಂಬಂಧಗಳೂ ಹುಡುಕಿಕೊಂಡು ಬರುವುದಿಲ್ಲ. ಆದರೆ ಈಗ ತಮಗೆ ಒಂದು ರೀತಿಯ ಸಂಪಾದನೆ ಇದೆ, ಸಂಬಂಧಗಳು ಹುಡುಕಿಕೊಂಡು ಬರುತ್ತವೆ ಎಂದು ರಂಜನ್ ನುಡಿದಾಗ ಅವರ ಮಾತಿನಲ್ಲಿನ ನೋವು ಗಂಗಾಳಿಗೆ ತಟ್ಟುತ್ತದೆ. ಆದರೂ ಆಕೆಯ ಮನಸ್ಸಿನಲ್ಲಿ ಅನಲ್ ಜೋಹಾಲ್ ಕಲೆಯಿಂದ ಬದುಕನ್ನು ಗೆದ್ದರೋ, ಬದುಕಿನಿಂದ ಕಲೆಯನ್ನು ಪರಿಪೂರ್ಣವಾಗಿಸಿದರೋ ಎಂಬ ಪ್ರಶ್ನೆ ಕುತೂಹಲವಾಗಿ ಕಾಡತೊಡಗುತ್ತದೆ.

ಒಂದು ವಾರದ ಕಾಲವೂ ರಂಜನ್ ಗಂಗಾಳನ್ನು ಹಲವಾರು ಕಡೆ ಕರೆದುಕೊಂಡು ಹೋಗಿದ್ದರು. ಮಾರ್ಕ್ಸ್‌ನ ಹುಟ್ಟಿದ ಸ್ಥಳ ನೋಡಲು ಹೋದಾಗ ಗಂಗಾ ಪುಲಕಿತಳಾಗಿದ್ದಳು. ಇಡಿಯ ಬಂಡವಾಳಶಾಹಿ ಜಗತ್ತಿನ ಬದುಕಿನ ಗ್ರಹಿಕೆಯನ್ನು ಬುಡಮೇಲಾಗಿಸಿದ ವ್ಯಕ್ತಿಯೊಬ್ಬ ಜರ್ಮನಿಯ ಮೂಲೆಯೊಂದರಲ್ಲಿ

ಜನಿಸಿದ್ದ. ಅವನ ಇರುವು, ಬದುಕು, ಬರಹ, ಇಡಿಯ ಪ್ರಪಂಚದ ನಂಬಿಕೆಗಳಿಗೆ ವಿರುದ್ಧವಾದ ನಂಬಿಕೆಗಳ, ಅರ್ಥಗಳ, ವ್ಯಾಖ್ಯಾನಗಳ ನೀಡಿತ್ತು. ಮಾರ್ಕ್ಸ್‌ನ ನಿತ್ಯ ಬದುಕು ಹೇಗಿದ್ದೀತು ಎಂಬ ಕುತೂಹಲ ಗಂಗಾಗೆ ಕಾಡದಿರಲಿಲ್ಲ.

ಸಾಹಿತ್ಯ, ರಾಜಕಾರಣ, ಸಂಸ್ಕೃತಿ, ಮಾರ್ಕ್ಸ್‌ವಾದ, ಗಾಂಧೀವಾದ ಇವೆಲ್ಲ ಚರ್ಚೆಗಳ ನಡುವೆಯೂ ರಂಜನ್ ಹೆಚ್ಚು ಮಾತನಾಡಿದ್ದು ನೆಲೆ ಇಲ್ಲದ ಬದುಕಿನ ಬಗ್ಗೆಯೇ. ಇಪ್ಪತ್ತಾರನೆಯ ವರ್ಷಕ್ಕೆ ಕಾಲಿಟ್ಟಿದ್ದ ಗಂಗಾಗೆ ರಂಜನ್‌ರವರ ಕನವರಿಕೆಗಳು ಆಕೆಯಲ್ಲಿಯೇ ತಾಕಲಾಟ ಹುಟ್ಟಿಸಿದ್ದವು. ನಲವತ್ತು ವಯಸ್ಸಿನಲ್ಲಿ ಬದುಕು ಏನೇನೋ ಅಶಾಂತಿಗಳನ್ನು ಹುಟ್ಟುಹಾಕಿಬಿಡುತ್ತದೆಯೇನೋ ಎಂಬ ಸತ್ಯವೊಂದು ರಂಜನ್‌ರವರ ಬದುಕಲ್ಲಿ ಆಕೆಗೆ ಅರ್ಥವಾಗತೊಡಗಿತ್ತು. ಬದುಕನ್ನು ಕೇವಲ ತಾರುಣ್ಯದ ಕೋಪ, ರೋಷ, ದ್ವೇಷ, ಪ್ರೀತಿ, ಕಾಮ ಇಷ್ಟರಿಂದಲೇ ನೋಡುವುದು ಕ್ರಮೇಣ ಅಸಾಧ್ಯವಾಗುತ್ತದೆ ಎಂಬ ಅರಿವು ಆಕೆಯಲ್ಲಿ ತೀವ್ರವಾಗತೊಡಗಿದ್ದು ರಂಜನ್‌ರವರನ್ನು ಭೇಟಿಯಾದ ಮೇಲೆಯೇ. ಬದುಕಿನ ವಿಭಿನ್ನ ಘಟ್ಟಗಳು ವಿಭಿನ್ನ ಆಲೋಚನೆಗಳನ್ನು ಹುಟ್ಟುಹಾಕುತ್ತವೆಯೇನೋ? ರಂಜನ್ 40ನೆಯ ವಯಸ್ಸಿನಲ್ಲಿ ಬದುಕಿನ ನೆಲೆಯೇ ತಮಗೆ ಮುಖ್ಯ ಎನ್ನುತ್ತಿದ್ದಾರೆ. ಜರ್ಮನಿಯನ್ನು ಬಿಡುವಾಗ ಗಂಗಾಳ ಮನಸ್ಸಿನಲ್ಲಿ ತುಂಬಿಕೊಂಡುದೆಲ್ಲಾ ರಂಜನ್‌ನಲ್ಲಿ ಒಡಮೂಡಿದ್ದ ವಿಷಾದವೇ. ತನ್ನ ಅಲೆಮಾರಿ ಬದುಕಿಗೂ ವಿದಾಯ ಹೇಳಿಬಿಡಬೇಕು ಎಂಬ ಬಲವಾದ ಆಲೋಚನೆಯೊಂದು ಗಂಗಾಳಲ್ಲಿ ಬಲವಾಗಿ ಮೂಡತೊಡಗಿತ್ತು. Sense of belongingness ಬಗ್ಗೆಯೇ ಯೋಚಿಸುತ್ತಾ ಗಂಗಾ ಮರಳಿ ಡೆನ್‌ಹಾಗ್‌ಗೆ ಬಂದಳು. ಕಲೋನ್‌ನಲ್ಲಿ ಟ್ರೈನ್ ಹತ್ತಿಸಿದ ರಂಜನ್ 'ಕಾಗದ ಬರೆಯುತ್ತಿರು ಗಂಗಾ' ಎಂದು ಆತ್ಮೀಯವಾಗಿ ಭುಜ ತಟ್ಟಿ ಬೀಳ್ಕೊಟ್ಟುದು ಗಂಗಾಳ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿತ್ತು.

* * * * *

ಡೆನ್‌ಹಾಗ್‌ಗೆ ವಾಪಸ್ಸು ಬಂದ ಮೇಲೆ ರಜದ ಉಳಿದ ದಿನಗಳನ್ನು ಸಮುದ್ರದ ತೀರದಲ್ಲಿ ಕುಳಿತು ಕಳೆಯತೊಡಗಿದ್ದಳು. ಕೆಲವು ಸಲ ಏನಾದರೂ ಬರೆಯುತ್ತಾ, ಕೆಲವು ಸಲ ತೆರೆಗಳನ್ನು ನೋಡುತ್ತಾ ಕೂರುವುದೇ ಆಕೆಗೆ ಒಂದು ಆನಂದದ ಸಂಗತಿಯಾಗಿತ್ತು. ಕೆಲವೊಮ್ಮೆ ರಮೇಶ ಕೂಡಾ ಆಕೆಯೊಟ್ಟಿಗಿರುತ್ತಿದ್ದ. ರಮೇಶ ತನ್ನ ಬಾಲ್ಯದ ಬದುಕು, ಕಾಲೇಜು ಇತ್ಯಾದಿ ವಿಚಾರಗಳನ್ನು ತಂದೆ ತನ್ನನ್ನು ಹೆಣ್ಣು ಮಗುವಿನ ಹಾಗೆ ಸಂರಕ್ಷಿತವಾಗಿ ಬೆಳೆಸಿದುದನ್ನು ಎಷ್ಟೋ ಬಾರಿ ಗಂಗಾಳ ಮುಂದೆ ಹೇಳುತ್ತಿದ್ದ. ಸಮುದ್ರದ ತೆರೆಗಳಲ್ಲಿ ರಮೇಶನ ಬಾಲ್ಯದ ನೆನಪುಗಳು ಸುರುಳಿ ಬಿಚ್ಚಿಕೊಂಡಂತೆ ಅನಿಸುತ್ತದೆ ಗಂಗಾಗೆ.

ಹೊಳೆಯಲ್ಲಿ ಸತ್ತ ಅಣ್ಣನ ಮಗಳು ಸಾಧನ ಸಮುದ್ರದಲ್ಲಿ ಕತೆಯಾಗಿ ಮೂಡಿ ಬರುತ್ತಾಳೆ ಎಂಬ ನೆನಪು ಬಂದಾಗ ಇಡಿಯ ಸಮುದ್ರ ಸಾವಿನ ನೃತ್ಯ ತಾಂಡವವಾಡಿದ ಹಾಗೆ ಭೀಕರವಾಗಿ ಕಾಣುತ್ತದೆ ಗಂಗಾಗೆ. ಹೊನ್ನೇಕೆರೆಯ ತಮ್ಮ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ಕೂಲಿಯಾಳು ಬಂಗಾರಿ ಹೇಳಿದ ಮಾತುಗಳೂ ಗಂಗಾಗೆ ಜ್ಞಾಪಕಕ್ಕೆ ಬರುತ್ತವೆ. 'ಅಮ್ಮಾವ್ರೆ ವಿಮಾನ ಹೆಂಗಿರ್‍ತದೆ? ಅದಕ್ಕೆ ಮೆಟ್ಲು ಇರ್‍ತಾವ್ರಾ' ನೀವು ಮ್ಯಾಲ ಹ್ಯಾಗ್ ಹೋಗ್ತೀರಿ? ಹೆದ್ರಿಕೆ ಆಗಾಲ್ಲೇನ್ರಾ?'. ಸಮುದ್ರದ ತೆರೆಗಳಲ್ಲಿ, ತಾವಾಗಿಯೇ ತೆರೆದುಕೊಳ್ಳುವ ಟ್ರೈನ್, ಬಸ್ಸಿನ ಬಾಗಿಲುಗಳಲ್ಲಿ, ಹೀಗೆ ಎಲ್ಲೆಂದರಲ್ಲಿ ಒಮ್ಮೊಮ್ಮೆ ಧಕ್ಕೆಂದು ಗಂಗಾಗೆ ಜ್ಞಾಪಕಕ್ಕೆ ಬರುತ್ತವೆ. ನೆನಪಿನಾಳದ ಸಂಗತಿಗಳು ಎಲ್ಲೆಲ್ಲಿಯೋ ಹೆಣಿಕೆ ಹಾಕಿಕೊಂಡುಬಿಡುತ್ತವೆ. ಸತ್ತ

ಸಾಧನಾ ಸಮುದ್ರದಲ್ಲಿ ಕತೆಯಾಗಿ ಮೂಡಿ ಬರುವುದು, ಆಕೆಯ ಮಾತುಗಳು ತೆರೆಗಳಲ್ಲಿ ಸಂಗೀತವಾಗಿ ಮೂಡುವುದು, ಬಂಗಾರಿಯ ಮುಖ ಗುಂಡಿ ಒತ್ತಿದರೆ ಕಾಫಿ ಉಗುಳುವ ಮೆಷಿನ್‌ಗಳಲ್ಲಿ ಕಾಣಿಸಿಕೊಂಡು ಬಿಡುವುದು, ಪರದೇಶದಲ್ಲಿ ಮದುವೆಯಾಗದೆಯೇ ಮಕ್ಕಳಾಗಿಬಿಡ್ತಾವಂತೆ, ಹುಷಾರಾಗಿರು ಎನ್ನುವ ತಾಯಿಯ ಮಾತುಗಳು ಗಂಗಾಳಲ್ಲಿ ನಗೆ ಬರಿಸುವ ಬದಲು ವಿಷಾದ ಹುಟ್ಟಿಸುತ್ತವೆ. ಮಧ್ಯ ರಾತ್ರಿ ಗಾಢ ನಿದ್ರೆಯಲ್ಲಿರುವಾಗಲೊಮ್ಮೊ ತಟ್ಟಿ ಎಬ್ಬಿಸುತ್ತವೆ. 'ಗಂಗತ್ತೇ' ಎಂದು ಓಡಿ ಬಂದು ತಬ್ಬಿಕೊಳ್ಳುತ್ತಿದ್ದ ಸಾಧನಾ 'ನಿನ್ನ ಸಮುದ್ರದ ತೆರೆಗಳಿಂದ ನಾನು ಬಂದಿದ್ದೇನೆ ಅತ್ತೇ, ನನಗಾಗಿ ಬರೆ' ಎನ್ನುತ್ತಾಳೆ. ಸತ್ತ ಸಾಧನಾ ಸಾವಿನರಮನೆಯಿಂದ ಬಂದು ಉಪ್ಪಿನ ನೀರಿನ ಮೇಲೆ ಬೀಡು ಬಿಟ್ಟಿದ್ದಾಳೆ. ಹೊನ್ನೇಕೆರೆಯ ಎಲ್ಲೋ ಮೂಲೆಯಲ್ಲಿರುವ ಬಂಗಾರಿ ವಿಮಾನದ ರೆಕ್ಕೆಗಳಲ್ಲಿ ತೆರೆದುಕೊಳ್ಳುತ್ತಾಳೆ. ಸಾವಿರಾರು ಮೈಲಿಗಳಿಂದಾಚೆ ಹುಷಾರು ಎಂದು ಬರೆಯುವ ತಾಯಿಯ ಧ್ವನಿ ಕಿವಿಯಲ್ಲಿ ಗುಯ್‌ಗುಡುತ್ತದೆ. ಬದುಕಿನ ಏನೇನೋ ಸತ್ಯಗಳು ಪ್ರಪಂಚದ ವರ್ತುಲದಲ್ಲಿ ಸಿಕ್ಕು ಸಿಕ್ಕಾಗಿ ಗಂಗಾಗೆ ಕಾಣಿಸಿಕೊಳ್ಳುತ್ತವೆ.

ಹೀಗೆಯೇ ಒಂದು ದಿನ ರಮೇಶ ಸಮುದ್ರದ ಬಳಿ ಇರುವ ಗಂಗಾಳನ್ನು ಹುಡುಕಿಕೊಂಡು ಬರುತ್ತಾನೆ. ಸಾಯಂಕಾಲ ಏಳರ ಹೊತ್ತಿಗೆ ಸೂರ್ಯ ಮೂಡಿ ಬರುವ ಸಮಯದ ತನಕ ಗಂಗಾ ರಮೇಶನಲ್ಲಿ ಮಾತನಾಡುತ್ತಲೇ ಕೂರುತ್ತಾಳೆ. ನಂತರ ಎದ್ದು ಗಂಗಾಳ ಕೊಠಡಿಯ ಬಳಿ ಇಬ್ಬರೂ ಹೆಜ್ಜೆ ಹಾಕುತ್ತಾರೆ. ರಾತ್ರಿ ಎಂಟು ಘಂಟೆಯ ಸಮಯ. ಬಾರ್‌ಗಳೊಳಗೆ ಅಲ್ಲಿ-ಇಲ್ಲಿ ಕೂತು ಕುಡಿಯುವ ಮಂದಿ ಬಿಟ್ಟರೆ ಇಡೀ ಡೆನ್‌ಹಾಗೇ ಶಾಂತವಾಗಿ ಮಲಗಿದ ರೀತಿ ಗಂಗಾಗೆ ಭಾಸವಾಗಿತ್ತು. ನಾಲ್ಕು ಐದು ಘಂಟೆಗೇ ಅಂಗಡಿ, ಆಫೀಸ್ ಎಲ್ಲಾ ಮುಚ್ಚಿಬಿಡುತ್ತವೆ. ಆರೇಳು ಘಂಟೆಗೇ ರಾತ್ರಿ ಊಟ ಮುಗಿಸಿಬಿಡುವ ಈ ಡಚ್ ಜೀವನದ ರೀತಿ ಆಕೆಗೆ ಕುತೂಹಲವಾಗಿ ಕಾಣಿಸುತ್ತದೆ. ರಾತ್ರಿ ಎಂಟು ಘಂಟೆಯೆಂದರೆ ಮಧ್ಯರಾತ್ರಿಯ ರೀತಿ ಇಲ್ಲಿ ಗಂಗಾಗೆ ಭಾಸವಾಗುತ್ತದೆ. 'ಗಂಗಾ, ನಿನ್ನ ಕೊಠಡಿಯಲ್ಲಿ ನಾನೇ ಅಡುಗೆ ಮಾಡುತ್ತೇನೆ' ಎಂದು ರಮೇಶ ಹೇಳಿದಾಗ ಗಂಗಾ ವಿರೋಧಿಸುವುದಿಲ್ಲ. 'ಬೆಳಿಗ್ಗೆಯೇ ಸಾಂಬಾರ್ ಮಾಡಿದ್ದೆ ರಮೇಶ್, ಬಿಸಿಯಾಗಿ ಅನ್ನ ಮಾಡಿಕೊಂಡರೆ ಇಬ್ಬರೂ ಊಟ ಮಾಡಬಹುದು' ಎನ್ನುತ್ತಾಳೆ. ರಮೇಶ ತನಗೆ ಏನನ್ನೋ ಹೇಳಲು ತವಕಿಸುತ್ತಿದ್ದಾನೆಂದು ಗಂಗಾಳಿಗೆ ಅನ್ನಿಸುತ್ತಿತ್ತು. ಆಕೆ ಜರ್ಮನಿಗೆ ಹೋದಾಗ ತಾನೆಷ್ಟು ಒಂಟಿಯಾಗಿ, ಪರದೇಶಿಯಾಗಿ ಒದ್ದಾಡಿದೆನೆಂಬು ರಮೇಶ ಗಂಗಾಳ ಬಳಿ ಹಲವಾರು ಬಾರಿ ಹೇಳಿದ್ದ. ಆತನ ಮನಸ್ಸಿನಲ್ಲಿ ಕೊರೆಯುತ್ತಿರುವುದೇನು ಎಂದು ಗಂಗಾ ಆಲೋಚಿಸತೊಡಗಿದ್ದಳು. ಚಳಿಗೆ ಇಬ್ಬರೂ ಒಬ್ಬರಿಗೊಬ್ಬರು ಆತುಕೊಂಡೇ ನಡೆಯತೊಡಗಿದ್ದರು. ಮೈಯಿನ ಬಿಸಿಗೆ ರಮೇಶನ ದೇಹ ಪುಲಕಿತಗೊಂಡಂತೆ ಗಂಗಾಳಿಗೂ ಮೈಯೆಲ್ಲಾ ನವಿರೇಳುವಂತೆ ಭಾಸವಾಗತೊಡಗಿತ್ತು. ಆ ಚಳಿಯಲ್ಲಿ ಮೈಯ ಬಿಸಿಗೆ ಆ ಕ್ಷಣವೇ ರಮೇಶನನ್ನು ಅಪ್ಪಿ ಮುದ್ದಿಡಬೇಕು ಎಂದು ತೀವ್ರವಾಗಿ ಆಕೆಗೆ ಅನ್ನಿಸತೊಡಗಿತ್ತು. ಗಂಗಾಳ ಕೊಠಡಿಗೆ ಬರುವವರೆಗೂ ಇಬ್ಬರೂ ಮಾತನಾಡಲಿಲ್ಲ. ಇಬ್ಬರೂ ಕೈ ಕೈ ಹಿಡಿದು ನಡೆದು ಬರುತ್ತಿದ್ದರು. ಒಬ್ಬರ ಮೈಯ ಶಾಖ ಇನ್ನೊಬ್ಬರಿಗೆ ತಟ್ಟುವಷ್ಟು ಕೈ ಬೆಚ್ಚಗಿದ್ದವು. ಕೊಠಡಿಗೆ ಬರುತ್ತಿದ್ದ ಹಾಗೆ ರಮೇಶ ಗಂಗಾಳನ್ನು ಬಿಗಿಯಾಗಿ ಅಪ್ಪಿ ಮುದ್ದಿಸತೊಡಗಿದ್ದ. ಗಂಗಾ ಎದುರು ಹೇಳಲಿಲ್ಲ. ಬಿಡಿಸಿಕೊಳ್ಳಲೂ ಪ್ರಯತ್ನಪಡಲಿಲ್ಲ. ರಮೇಶನ ಬೆಚ್ಚಗಿನ ಮನಸ್ಸಿನ ಹಾಗೆ ಬೆಚ್ಚಗಿನ ಮೈಯಲ್ಲಿ ಕರಗಿ ಹೋಗುವ ಆಸೆಯನ್ನು ಆಕೆ ಅದುಮಿ ಹಿಡಿಯಲೂ ಇಲ್ಲ. ಅವನ ಮುದ್ದಿಸುವಿಕೆಯಲ್ಲಿ ಅವನ ದೇಹದ ಪ್ರತಿಯೊಂದು ಭಾಗವನ್ನೂ ಗಂಗಾ ಫೀಲ್ ಮಾಡತೊಡಗಿದ್ದಳು. ರಮೇಶನನ್ನು ಮುದ್ದಿಸುವಾಗ ಆಕೆಯಲ್ಲಿದ್ದ ತೀವ್ರತೆ ಆಕೆಯನ್ನೇ ಬೆಚ್ಚಿಸಿಬಿಡುತ್ತದೆ. ಇಷ್ಟು ಭಾವಪರತೆಯಿಂದ,

ಉದ್ವಿಗ್ನಳಾಗಿ ಬಿಚ್ಚು ಮನಸ್ಸಿನಿಂದ ತಾನು ಯಾರನ್ನೂ ಮುದ್ದಿಸಿರಲಿಲ್ಲವೆಂದು ಆಕೆಗೆ ಅನ್ನಿಸತೊಡಗುತ್ತದೆ. ಆಗೆಲ್ಲಾ ಏನೋ ಹೆದರಿಕೆ/ಭಯ/ಆತಂಕ. ತನ್ನನ್ನು ತಾನೇ ಕಳೆದುಕೊಳ್ಳುತ್ತಿದ್ದೇನೇನೋ ಎನ್ನುವ ಅಳುಕು, ತಾನು ಅವರನ್ನೋ, ಅವರು ತನ್ನನ್ನೋ ಬಳಸಿಕೊಳ್ಳುತ್ತಿದ್ದಾರೇನೋ ಎನ್ನುವ ಪ್ರಜ್ಞೆ, ಆಕೆಯ ಬಗ್ಗೆ ಆಕೆಗೇ ಭರವಸೆಯಿರದ ಭಯವದು. ಆದರೆ ರಮೇಶನನ್ನು ಮನಸ್ಸಿನಾಳದಿಂದ ಮುದ್ದಿಸತೊಡಗಿದ್ದಳು ಗಂಗಾ. ಆತನ ಮುಖ, ಕೆನ್ನೆ, ತುಟಿಗಳನ್ನು ಫೀಲ್ ಮಾಡಲು ಆಕೆಗೆ ಸಾಧ್ಯವಾಗತೊಡಗಿತ್ತು. ಟಚ್‌ನಲ್ಲಿರುವ ವಿಶೇಷವಾದ ಮಾದಕತೆಯನ್ನು ಗಂಗಾ ರಮೇಶನಲ್ಲಿ ಗಮನಿಸಿದ್ದಳು. ಈ ತರಹ ಫೀಲ್ ಮಾಡಲು ಸಾಧ್ಯವಾಗದಿದ್ದುದೇ ತಾನು ಇತರ ಸಂಬಂಧಗಳಲ್ಲಿ ಕಂಡುಕೊಂಡ ಕೊರತೆಯಾಗಿತ್ತೇನೋ ಎಂದು ಇದ್ದಕ್ಕಿದ್ದ ಹಾಗೆಯೇ ಆಕೆಗೆ ಭಾಸವಾಗತೊಡಗಿತ್ತು. ಎಲ್ಲಾ ಸಂಬಂಧಗಳಲ್ಲೂ ಆಕೆಯೊಳಗಿನ ಭರವಸೆಯೇ ಆಕೆಗೆ ಇಲ್ಲವಾಗಿತ್ತು. ಆಕೆಯಲ್ಲಿಯೇ ಆಕೆಗೆ ಭರವಸೆ ಬೇಕಿತ್ತು. ಇನ್ನೊಂದು ದೇಹವನ್ನು ಫೀಲ್ ಮಾಡುವ ಭರವಸೆ, ಅಥವಾ ತನ್ನ ದೇಹವನ್ನು ತಾನೇ assert ಮಾಡಿಕೊಳ್ಳುವ ಭರವಸೆ. ರಮೇಶನ ಉದ್ವೇಗ, ಉನ್ಮಾದ ಎಲ್ಲವೂ ಗಂಗಾಳಿಗೆ ಅರ್ಥವಾಗತೊಡಗಿತ್ತು. ಬಿಡಿಸಿದ ಹಾಸಿಗೆಯ ಮೇಲೆ ಗಂಗಾಳನ್ನು ತಬ್ಬಿಕೊಂಡೇ ರಮೇಶ ಮಲಗಿದಾಗ ಗಂಗಾ ಮಾತನಾಡಲಿಲ್ಲ. ಮುಟ್ಟಾಗಿದ್ದ ಆರನೆಯ ದಿನ. ಈ ಅಂಶದಿಂದಾಗಿ ದೇಹದ ಬಗ್ಗೆ ಭಯ/ಆಂತಕಗಳೂ ಆಕೆಯಲ್ಲಿ ಇರಲಿಲ್ಲ. ರಮೇಶನ ಬೆತ್ತಲೆ ದೇಹದೊಟ್ಟಿಗೆ ಗಂಗಾ ತನ್ನದೇ ದೇಹ ಎನ್ನುವಷ್ಟರ ಮಟ್ಟಿಗೆ ಸಂಕೋಚ ತೊರೆದು ವರ್ತಿಸತೊಡಗಿದ್ದಳು. ಹಿಂದಿನ ಯಾವ ಸಂಬಂಧದಲ್ಲೂ ಇರದ ಬಿಚ್ಚು ಮನಸ್ಸು ಈಗ ಮುಕ್ತವಾಗಿದ್ದುದು ಆಕೆಗೇ ಗೋಚರವಾಗತೊಡಗಿತ್ತು. ಹಿಂದಿನ ಸಂಬಂಧಗಳಲ್ಲಿ ಗಂಗಾ ತನ್ನನ್ನು ಪರಿಪೂರ್ಣವಾಗಿ ತೊಡಗಿಸಿಕೊಂಡುದೇ ಇಲ್ಲ. ಆಕೆಯ ಮನದಾಳದಲ್ಲೆಲ್ಲೋ ನೆಲೆ ತಪ್ಪಿದ ಭಾವವಿರುತ್ತಿತ್ತು, ಅಲೆಮಾರಿತನ, ಒಂಟಿತನದ ಭಯ, ಯಾವುದೇ ಅಶಾಂತತೆ ಇರುತ್ತಿತ್ತು. ಆದರೆ ರಮೇಶನೊಟ್ಟಿಗೆ ಮನಸ್ಸು ಸ್ವತಂತ್ರವಾಗಿ ವರ್ತಿಸುತ್ತಿತ್ತು, ರಮೇಶನ ವ್ಯಕ್ತಿತ್ವದ ಚಹರೆ ಕೂಡಾ ಇದಕ್ಕೆ ಕಾರಣವಿರಬಹುದು ಎಂದು ಗಂಗಾ ಯೋಚಿಸುತ್ತಾಳೆ. ರಮೇಶ ಗಂಗಾಳಿಗಿಂತ ಒಂದೂ-ಒಂದೂವರೆ ವರ್ಷಕ್ಕೆ ಚಿಕ್ಕವನು. ಆಗಷ್ಟೇ ಇಪ್ಪತ್ನಾಲ್ಕನೆಯ ವರ್ಷಕ್ಕೆ ಕಾಲಿಟ್ಟವನು. ತಂದೆಯ ಅತೀ ಮುದ್ದಿನಲ್ಲಿಯೇ ಬೆಳೆದ ರಮೇಶ ಒಂದು ಹೆಣ್ಣಿನ ದೇಹವನ್ನು ಮುಟ್ಟುತ್ತಿದ್ದುದೇ ಅದೇ ಮೊದಲು. ಏಳೆಂಟು ತಿಂಗಳ ಅವಧಿಯಲ್ಲಿ ರಮೇಶ ಅವನೊಳಗೇ ಬೇರು ಬಿಟ್ಟ ತಂದೆಯ ಬಗೆಗಿನ ಭಯ, ಆತಂಕಗಳಿಂದ ಹೊರ ಬರಲು, ಸ್ವತಂತ್ರನಾಗಲು ಪ್ರಯತ್ನಿಸಿದುದೇ ಗಂಗಾಳ ವ್ಯಕ್ತಿತ್ವದ ಪ್ರಭಾವದಿಂದಾಗಿ. ಗಂಗಾ ರಭಸದ ಹುಡುಗಿ. ಆದರೂ ಅದೇ ಆಕೆಯ ಬಗೆಗಿನ ಆಕರ್ಷಣೆ ಕೂಡಾ. ತಪ್ಪಿಸಿಕೊಳ್ಳಬೇಕೆಂದರೂ ತಪ್ಪಿಸಿಕೊಳ್ಳಲಾಗದ ಸೆಳೆತ. ಉದ್ವೇಗ/ಉದ್ವಿಗ್ನಗಳಲ್ಲೂ ಗೆಳತಿಯ ರೀತಿ ರಮಿಸುವ ಗಂಗಾಳ ರೀತಿ ಹೆಣ್ಣಿನ ದೇಹದ ಬಗೆಗಿನ ಅವನ ಭಯವನ್ನು ಕಡಿಮೆ ಮಾಡಿತ್ತು. ಆದರೂ ಏನೋ ಭಯ/ಆತಂಕ. ಗಂಗಾ ಅವನಲ್ಲಿ ಉಂಟಾಗುತ್ತಿದ್ದ ಭಯ/ಉದ್ವೇಗದ ಭಾವನೆಗಳನ್ನು ಗುರುತಿಸುತ್ತಾಳೆ. ಆತನ ಭಯದಲ್ಲಿ, ಆತನ ಆತಂಕದಲ್ಲಿ ಆತನ ಒದ್ದಾಟವನ್ನು ರಮೇಶನ ದೇಹದ ಚಲನೆಗಳಲ್ಲಿ ಅರ್ಥಮಾಡಿಕೊಂಡ ಗಂಗಾ ಮೆಲ್ಲಗೆ ಪ್ರೋತ್ಸಾಹಿಸುತ್ತಾಳೆ. ನಿಧಾನವಾಗಿ, ನಿಧಾನವಾಗಿ ಎಂದು ರಮಿಸುತ್ತಾ ಸಂಭೋಗ ಕ್ರಿಯೆಗೆ ಪ್ರೋತ್ಸಾಹಿಸುತ್ತಾಳೆ. ಈ ರಮಿಸುವಿಕೆಯಲ್ಲಿ ಪೂರ್ಣ ಭರವಸೆ ಹೊಂದಿದ ರಮೇಶ ತನ್ನ ದೇಹದ ಮೇಲಿನ ಹತೋಟಿಯನ್ನು ಸಂಪೂರ್ಣವಾಗಿ ತನ್ನದಾಗಿಸಿಕೊಳ್ಳುತ್ತಾನೆ. ಮನಸ್ಸಿನ ಮೂಲೆಯಲ್ಲಿನ ಭಯ - ತಾಯಿಯ ಯೋನಿಯಿಂದ ಈ ಜಗತ್ತಿಗೆ ಬಂದ ತಾನು ಇನ್ನೊಂದು ಹೆಂಗಸಿನ ದೇಹದೊಳಗೆ ಪ್ರವೇಶಿಸಿ ಸೃಷ್ಟಿಕರ್ತನಾಗುವಲ್ಲಿನ ಹಂತದಲ್ಲಿದ್ದ ಹೆದರಿಕೆ, ಆತಂಕಗಳು ಮಾಯವಾಗಿ ಗಂಗಾಳ ದೇಹದ ಲಯಗಳಿಗೆ, ತನ್ನದೇ ದೇಹದ ಲಯಗಳಿಗೆ

ಸ್ಪಂದಿಸುತ್ತಾ ಅವನ ದೇಹದಲ್ಲಿ ಉಂಟಾದ ನೈಸರ್ಗಿಕ ಬದಲಾವಣೆಯಿಂದ ಗಂಗಾಳನ್ನು ಬೆರೆತಿದ್ದ. ಎಂತಹ ಅದ್ಭುತವಾದ ಸುಖ! ಗಂಗಾ ಕೂಡಾ ಅಷ್ಟು ದಿನ ಫೀಲ್ ಮಾಡಿರದಿದ್ದ ತನ್ನ ದೇಹದ ಲಯಗಳಿಗೆ ಸ್ಪಂದಿಸಿದ್ದಳು. ಅಷ್ಟು ಉನ್ಮಾದದಲ್ಲಿ, ಉದ್ವಿಗ್ನತೆಯಲ್ಲಿ ರಮೇಶ ಕಚ್ಚಿದ್ದ ತುಟಿ, ಮೊಲೆಗಳು ನೋಯುತ್ತಿರಲಿಲ್ಲ. ಹಿಂದೆ ಸಂಭೋಗದ ಕ್ರಿಯೆಯಲ್ಲಿ ತನ್ನ ಯೋನಿಯೊಳಗೆ ಯಾವಾಗಲೂ ನೋವಿನ ಲಯಗಳನ್ನೇ ಗುರುತಿಸುತ್ತಿದ್ದ ಗಂಗಾ ರಮೇಶನ ಬೆಚ್ಚಗಿನ ಸ್ನೇಹ/ಪ್ರೀತಿ/ಮುಗ್ಧತೆಯಲ್ಲಿ, ಆತನ ದೇಹದ ಬೆಚ್ಚಗಿನ ಲಯಗಳಲ್ಲಿ ಅಷ್ಟು ದಿನ ಕಾಣದಿದ್ದ ತನ್ನ ದೇಹದ ಸುಖವೊಂದನ್ನು ಆಕೆ ಕಂಡುಕೊಂಡಿದ್ದಳು. ಪ್ರಥಮ ಬಾರಿಗೆ ಆಕೆಯ ಮನಸ್ಸು, ದೇಹ ಎಲ್ಲವೂ ಒಟ್ಟಿಗೇ ಸ್ಪಂದಿಸಿದ ಹಾಗೆ ಆಕೆಗೆ ಭಾಸವಾಗತೊಡಗಿತ್ತು. ಮೈ ನರಗಳೆಲ್ಲ ಸಡಿಲವಾದ ಹಾಗೆ...... ತನ್ನ ದೇಹದ absorbing ಕ್ಷಣಗಳು ಜ್ಞಾಪಕಕ್ಕೆ ಬಂದು ಆಕೆಯ ಮನಸ್ಸು/ದೇಹ ಮತ್ತೆ ಉಲ್ಲಸಿತಗೊಂಡಿತ್ತು. ಆ absorbing ಕ್ಷಣಗಳ ಸುಖ ಆಕೆಗೆ ತಿಳಿದಿರಲಿಲ್ಲ. ಸ್ಪಂಜು ನೀರನ್ನು ಹೀರಿಕೊಳ್ಳುವ - ಏಕಕಾಲಿಕ ಸುಖ. ತೊಟ್ಟಿಕ್ಕುವ ನೀರನ್ನು ಸ್ಪಂಜು ಹೀರಿಕೊಳ್ಳುವ ನಿಮಿಷಗಳು, ಕ್ಷಣಗಳು. ತಾನು ಹೀಗೆ ಯಾವಾಗಲೂ ಫೀಲ್ ಮಾಡಿಯೇ ಇರಲಿಲ್ಲ ಎಂಬುದನ್ನು ಗಂಗಾ ರಮೇಶನಲ್ಲಿ ಬಾಯಿ ಬಿಟ್ಟು ಹೇಳಿದ್ದಳು. ಎಲ್ಲಾ ಸಂದರ್ಭದಲ್ಲೂ ನಿನಗೆ ಹೆಣ್ತನದ ಸಂಕೋಚಗಳೇ ಎಂದು ರಮೇಶನನ್ನು ಕೀಟಲೆ ಮಾಡಿ ನಕ್ಕಿದ್ದಳು. ಮ್ಯಾನ್‌ಹುಡ್ ಎಂಟರ್ ಆಗುವ ಮಾನಸಿಕ ಭಯಗಳನ್ನು ಕುರಿತು ರಮೇಶ ಮಾತನಾಡಿದ್ದ. ನಿನ್ನ ಸಮಾಧಾನ, ರಮಿಸುವಿಕೆ ನನ್ನ ಬಗ್ಗೆ ನನಗೆ ಭರವಸೆ ನೀಡುತ್ತದೆ ಗಂಗಾ ಎಂದು ಗಂಗಾಳ ಮುಖವನ್ನೆತ್ತಿ ಚುಂಬಿಸಿದ. ಆ ಚುಂಬನದಲ್ಲಿ ವಾತ್ಸಲ್ಯ, ಮಾಧುರ್ಯತೆ ಗಂಗಾಗೆ ಇಷ್ಟವಾಗಿತ್ತು. ಹಿಂದಿನ ಯಾವುದೇ ಸಂಬಂಧದಲ್ಲಿ ಮಲಗಿ ಎದ್ದರೆ ಯಾವುದೋ ನೋವು ದೇಹದಲ್ಲಿ ಸಂಚರಿಸಿದಂತಾಗಿ ಗಂಗಾ ತಿರುಗಿ ಮಲಗಿಬಿಡುತ್ತಿದ್ದಳು. ಅಮ್ಮನ ಮಡಿಲಿಗೆ ಹೋಗಿ ಅಪ್ಪಿ ಮಲಗಬಿಡಬೇಕು ಎಂದು ಎಣಿಸುತ್ತಿದ್ದಳು. ಅಥವಾ ಬಚ್ಚಲು ಮನೆಯಲ್ಲಿ ತನ್ನ ದೇಹದ ಉರಿಯನ್ನು ತಣ್ಣೀರಿಗೆ ಒಡ್ಡಿ ಮೈ/ಮನಸ್ಸು ಎಲ್ಲವನ್ನೂ ತಣ್ಣಗಾಗಿಸಿಕೊಂಡುಬಿಡುತ್ತಿದ್ದಳು. ರಮೇಶನೊಂದಿಗೆ ಇಷ್ಟೊಂದು ಮುಕ್ತತೆ ತನಗೆ ಬಂದದ್ದು ಹೇಗೆ? ಇಂಚು ಇಂಚಾಗಿ ಅವನಲ್ಲಿ ತನ್ನ ದೇಹದ ಲಯಗಳು ಸ್ಪಂದಿಸಿದ್ದಾದರೂ ಹೇಗೆ?

ರಮೇಶ 'ಸ್ವಲ್ಪ ಕಾಫಿ ಮಾಡಿ ತರುತ್ತೇನೆ' ಎಂದು ಬಾಗಿಲು ತೆರೆದು ಅಡಿಗೆ ಮನೆಯ ಕಡೆಗೆ ಹೆಜ್ಜೆ ಹಾಕಿದ. ಹಗುರಾದ ನಡಿಗೆ. ಮೈಯಲ್ಲೆಲ್ಲಾ ಹೊಸದಾದ ನವಿರತೆ ತುಂಬಿಕೊಂಡಂತೆ ನಡೆದು ಹೋದ ರಮೇಶನ ನಡಿಗೆಯಲ್ಲಿ ಮಾದಕತೆ ಇತ್ತು. ಸ್ವಲ್ಪ ಕುಡಿದು ನಡೆಯ ಹತ್ತಿದರೆ ಗಿಮ್ ಎನಿಸುವಂತ ಆಚೆ-ಈಚೆಯ ನಡುಗೆ. ಹೆಜ್ಜೆಯನ್ನು ಒಂದರ ಮೇಲೆ ಒಂದು ಇಟ್ಟಂತೆ ನಡೆದು ಹೋದ ರೀತಿ ಗಂಗಾಗೆ ಭಾಸವಾಗತೊಡಗಿತ್ತು. ಆತ ನಡೆದ ನಾಲ್ಕು ಹೆಜ್ಜೆಗಳಲ್ಲಿ ಅವನ ಮೈಯಿನ ಪುಳಕತೆ/ನವಿರತೆ, ಮಾದಕತೆ ಎಲ್ಲವನ್ನೂ ಗಮನಿಸಿದ್ದಳು ಗಂಗಾ. ಈ ದೇಹದ/ಮನಸ್ಸಿನ ಲಯಗಳಿಗೆ ಸ್ಪಂದಿಸುವ ಇವನ ಜೊತೆಯೇ ಇದ್ದುಬಿಡಬಾರದೇಕೆ, ಜೀವನಪೂರ್ತಿ ಇವನೊಟ್ಟಿಗೇ ಕಳೆದುಬಿಡಬಾರದೇಕೆ ಎನ್ನುವ ತೀವ್ರ ಆಲೋಚನೆಯೊಂದು ಆಕೆಯಲ್ಲಿ ಉಂಟಾಗುತ್ತದೆ. ಆದರೂ ತಾನು ಮಾಡಿದುದು ಸರಿಯೇ? ಅವನಲ್ಲಿ ಏನೂ ಮಾತನಾಡದೇ, ತನ್ನ ಜೀವನದ ಆಯಾಮಗಳ ಬಗ್ಗೆ ಪೂರ್ತಿಯಾಗಿ ಅರಿವಿರದ ರಮೇಶನನ್ನು ತಾನು ಹೀಗೆ ಪ್ರೀತಿಸುದುದು ಸರಿಯೇ? ರಮೇಶನ ಮನಸ್ಸಿನ ಮೇಲೇಕೆ? ಈಗ ಆತನ ದೇಹದ ಮೇಲೂ ಅಧಿಪತ್ಯ ಹೊಂದಿದ ತನ್ನ ಬಗ್ಗೆ, ತನ್ನ ಹಿಂದಿನ ಜೀವನದ ಹಳ್ಳವುಗಳ ಬಗ್ಗೆ ರಮೇಶನಿಗೆ ಏನೆನಿಸಿಬಿಡಬಹುದು?

ಗಂಗಾಳಿಗೆ ಒಮ್ಮೆ ಭಯವಾಗುತ್ತದೆ. ತನ್ನಲ್ಲಿ ಹದಿನೇಳು/ಹದಿನೆಂಟು ವರ್ಷದಲ್ಲಿದ್ದ ಮುಗ್ಧತೆಯನ್ನು ಗಂಗಾ ಈಗ ರಮೇಶನಲ್ಲಿ ಕಂಡಿದ್ದಳು. ಆಕೆಗರಿಯದ ಹಾಗೆ ಅಥವಾ ಅರಿತೂ ರಮೇಶನ ಮೇಲೆ ಒಂದು ಹಿಡಿತ ಸಾಧಿಸಿಬಿಟ್ಟಿದ್ದಳು. ರಮೇಶನಿಗೆ ಗಂಗಾಳ ಬಗ್ಗೆ ತಿಳಿಯದೆಂದಲ್ಲ. ಆಕೆಗೆ ತನ್ನ ಜೊತೆಗಿನ ಸಂಬಂಧ ಮೊದಲನೆಯದಲ್ಲ ಎಂಬಷ್ಟು ಸತ್ಯ ಮಾತ್ರ ಅವನಿಗೆ ತಿಳಿದಿರಬಹುದು. ಗಂಗಾ ತನ್ನದು ಅಲೆಮಾರಿ ಬದುಕು ಎಂದು ಹೇಳಿದರೂ ಆ ಬದುಕಿನ ಅಂಚು-ಇಂಚುಗಳು, ಮಗ್ಗಲುಗಳು ಆತನಿಗೆ ಅರ್ಥವಾಗುವುದಿಲ್ಲ. ಅವನಿಗೆ ಅರ್ಥವಾಗುವ ಹಾಗೆ ಬದುಕಿನ ಪದರು, ಪದರುಗಳನ್ನು ಆತನ ಮುಂದೆ ಬಿಚ್ಚಿಡಬೇಕು. ಆ ಬಿಚ್ಚಿಟ್ಟ ಬದುಕಿನಲ್ಲಿ ರಮೇಶನನ್ನು ಕೇಳಬೇಕು, “ಇದು ನನ್ನ ಬದುಕು. ರಮೇಶ ನನ್ನಂತವಳ ಜೊತೆ ಬಾಳು ಸಾಗಿಸಲಿಕ್ಕೆ ಆಗುತ್ತದೆಯಾ ಯೋಚಿಸಿ ನೋಡು, ಇದು ಎರೆಡು/ಮೂರು ವರ್ಷದ ಬದುಕಲ್ಲ. ಸಾವು ಮನೆಯ ಬಾಗಿಲು ತಟ್ಟುವವರೆಗೂ ಒಂದೇ ಮನೆಯೊಳಗೆ, ಒಂದೇ ಗೂಡಿನೊಳಗೆ ಬದುಕುವ ಬದುಕು. ಅಲೆಮಾರಿ ಬದುಕಿನ ಆತಂಕದ ಕ್ಷಣಗಳ ಇತಿಹಾಸ ನನ್ನ ಎದೆಯಾಳದಲ್ಲಿ ಎಲ್ಲಿಯೋ ಹೆಪ್ಪುಗಟ್ಟಿಬಿಟ್ಟಿದೆ, ಅಂಟಿಕೊಂಡು ಬದುಕುವ ನಂಬಿಕೆಯನ್ನೇ ನಾಶ ಮಾಡಿಕೊಂಡು - ಸರಳ ರೇಖೆಯಲ್ಲಿ ಕಾಮದ ಬದುಕನ್ನು ಇಟ್ಟು ಸಂಬಂಧಗಳ ಶೋಧಿಸುತ್ತಾ ಬಂದವಳು ನಾನು. ಬರೆದು, ಬರೆದು ಇಂತಹ ಕ್ಷಣಗಳನ್ನು, ಸತ್ಯಗಳನ್ನು ಜೀರ್ಣಿಸಿಕೊಳ್ಳಬೇಕೆಂಬ ಅರಿವಿರುವವಳು ನಾನು. ನಿನಗೆ ನನ್ನೊಟ್ಟಿಗೆ ಬದುಕಲು ಸಾಧ್ಯವಾಗುತ್ತದಾ ಎಂದು ಯೋಚಿಸಿ ನೋಡು”. ಹೀಗೆಲ್ಲ ಕೇಳಿದರೆ ರಮೇಶನ ಪ್ರತಿಕ್ರಿಯೆ ಹೇಗಿರಬಹುದು ಎಂದು ಗಂಗಾ ಕುತೂಹಲದಿಂದ ಯೋಚಿಸುತ್ತಾಳೆ.

ಒಟ್ಟಿಗೇ ಒಬ್ಬರೊಟ್ಟಿಗೇ ಸಂಸಾರ ಮಾಡಬೇಕೆಂಬ ಅಸ್ಪಷ್ಟ ಕಲ್ಪನೆಯನ್ನು ಗಂಗಾ ರವಿಯ ಸಂಬಂದಧಲ್ಲಿ ಕಂಡದ್ದೇನೊ ನಿಜ. ಆದರೆ ಹದಿನೇಳು-ಹದಿನೆಂಟರ ಹರೆಯದಲ್ಲಿಯೇ ಆ ಕಲ್ಪನೆಗಳೆಲ್ಲಾ ಚೂರು ಚೂರಾಗಿ ಹೋಗಿದ್ದವು. ರಮೇಶನಿಗೆ ತನ್ನ ಬದುಕಿನ ಸತ್ಯಗಳನ್ನು ಜೀರ್ಣಿಸಿಕೊಂಡು ತನ್ನೊಟ್ಟಿಗೆ ಬದುಕಲು ಸಾಧ್ಯವಾಗುತ್ತದೆಯೇ? ಸಾವಧಾನವಾಗಿ ಯೋಚಿಸಿ ನೋಡು ರಮೇಶ ಎಂದು ಹೇಳಬೇಕು ಅಂದುಕೊಳ್ಳುತ್ತಾಳೆ. ದೈಹಿಕ ಸಂಬಂಧ ಹೊಂದಿದ್ದೆ ಎಂಬ ಕಾರಣಕ್ಕೇ ಅಂಟಿಕೊಂಡು ಬದುಕುವ ನಿರ್ಧಾರ ಮಾಡಿ ಬದುಕೆಲ್ಲ ನರಕವಾಗುವುದು ಬೇಡ. ಈ ಸತ್ಯಗಳನ್ನು ರಮೇಶನಿಗೆ ಬಿಚ್ಚಿ ಬಿಚ್ಚಿ ಹೇಳಬೇಕು. ನಿನ್ನ ಕೈಯಲ್ಲಿ ಇವೆಲ್ಲ ಸತ್ಯಗಳನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತದೆಯೆಂದರೆ ಒಟ್ಟಿಗೇ ಬದುಕಲು ಪ್ರಯತ್ನಿಸೋಣ ಎನ್ನಬೇಕು. ಹೀಗೆಲ್ಲ ಗಂಗಾ ರಮೇಶನ ಬಗ್ಗೆಯೇ ಏನೇನೋ ಯೋಚಿಸುವಳು. ಎಲ್ಲವನ್ನು ಬಿಟ್ಟು ಇಂತಹ ಒಂದು ಮುಗ್ಧ ಸಂಬಂಧದಲ್ಲಿ ಸುಂದರವಾಗಿ ಬದುಕಿಬಿಡಬೇಕು ಎನ್ನುವ ಆಸೆ ಒಂದು ಕಡೆ. ಆದರೆ ಭಯ! ಅಂಟಿಕೊಂಡು ಬದುಕಬಲ್ಲೆನೇ? ರವಿ ಕಿತ್ತು ಹಾಕಿದ ನಂಬಿಕೆಯೊಂದನ್ನು ಕೂಡಿಸಬೇಕಿತ್ತು. ಒಡೆದು ಚೂರು ಚೂರಾದ ವಿಶ್ವಾಸದ ತಂತುಗಳನ್ನು ಜೋಡಿಸಿ ರಮೇಶನಲ್ಲಿ ಮಾತನಾಡಬೇಕಿತ್ತು. ರಮೇಶನಿಗೆ ಸಂಬಂಧದ ಪದರು ಪದರುಗಳನ್ನು ವಿವರಿಸಿ ಬದುಕಲು ಸಾಧ್ಯವೇ ಎಂದು ಕೇಳಬೇಕಿತ್ತು. ಗಂಗಾಗೆ ತನ್ನ ಬಗ್ಗೆ ತನಗೇ ಆಶ್ಚರ್ಯವಾಗುತ್ತದೆ. ಈ ತೀವ್ರತೆ ತನ್ನಲ್ಲಿ ಯಾಕೆ? ರಂಜನ್ ಮೂವತ್ತರೊಳಗೆ ನೆಲೆ ನಿಲ್ಲಬೇಕೆಂದು ಹೇಳಿದ ಸತ್ಯ ತನ್ನ ಹೃದಯದೊಳಗೆಲ್ಲಿಯೋ ಮನೆ ಮಾಡಿಬಿಟ್ಟಿದೆಯೇ ಎಂದು ಗಂಗಾ ಯೋಚಿಸುತ್ತಾಳೆ. ಅಲೆಮಾರಿ ಬದುಕಿನಲ್ಲಿ ತಾನೆಲ್ಲೂ ಯಾರಿಗೂ belong ಆಗಲಿಲ್ಲ ಎನ್ನುವ ಸತ್ಯ ತನ್ನೊಳಗೇ ಕೊರೆಯತೊಡಗಿದೆಯೇ? ಅಥವಾ ರಮೇಶನೊಟ್ಟಿಗೆ ದೇಹ ಸ್ಪಂದಿಸಿದ ರೀತಿಯಿಂದಾಗಿ ಆತನ ದೇಹ/ಮನಸ್ಸಿನ ಬಗ್ಗೆ ತನಗೆ ಪ್ರೀತಿಯೆನಿಸುತ್ತದೆಯೇ? ಯಾಕಾಗಿ ರಮೇಶನೊಟ್ಟಿಗೆ ಈ ತೀವ್ರತೆ? ಎಲ್ಲವನ್ನೂ ಆತನಲ್ಲಿ ಹೇಳಬೇಕು ಅನಿಸುತ್ತದೆ. ಸಂಬಂಧಗಳ ಬಗ್ಗೆ ಆಕೆ ಮಾತನಾಡುತ್ತಿದ್ದುದೇ ಕಡಿಮೆ. ಇನ್ನೊಬ್ಬರ ಬಗ್ಗೆ ಏನು ಅಭಿಪ್ರಾಯ ಮೂಡಿಸುವುದಕ್ಕೂ ಆಕೆ

ಇಷ್ಟಪಡುತ್ತಿರಲಿಲ್ಲ. ಸದೂ ಬಗ್ಗೆ ಕಮಲೆಯಲ್ಲಿ ಹೇಳಿದ್ದಳು ನಿಜ. ಹೇಳುವ ಅನಿವಾರ್ಯತೆಯಿಂದಾಗಿ ಹೇಳಿದ್ದಳು ಅಷ್ಟೇ. ಈಗ ರಮೇಶನ ಹತ್ತಿರ ಸಂಬಂಧಗಳನ್ನು ಪದರು ಪದರಾಗಿ ಬಿಚ್ಚಿ ಹೇಳಿಬಿಡಲೇ ಎಂದು ಗಂಗಾ ಯೋಚಿಸುತ್ತಾಳೆ. ಸಂಬಂಧವಿದೆ/ಇತ್ತು ಎಂದಾಗ ಆತನಿಗೆ ಏನೂ ಅನ್ನಿಸದಿರಬಹುದು. ಆದರೆ ಪ್ರತಿ ಸಂಬಂಧದ inner details ಬಿಚ್ಚಿ ಇಟ್ಟರೆ? ಈಗಷ್ಟೇ manhoodಗೆ enter ಆಗುತ್ತಿದ್ದೇನೆ, ಆ ಆತಂಕಗಳನ್ನು ನಿನ್ನಿಂದಾಗಿ ಕಳೆದುಕೊಳ್ಳುತ್ತಿದ್ದೇನೆ ಎಂದು ಹೇಳುವ ರಮೇಶ ಈ ಎಲ್ಲಾ ಸಂಬಂಧಗಳ ವಿವರಗಳಿಗೆ ಹೇಗೆ ಪ್ರತಿಕ್ರಿಯಿಸಬಹುದು? ಆತನ ಸಂಪ್ರದಾಯಸ್ಥ ಮನಸ್ಸು ಇಂತಹ ಗೊಂದಲಗಳ ಗೊಡವೆ ತನಗೇಕೆ ಎಂದು ವಿದಾಯ ಹೇಳಿಬಿಡಬಹುದೇ? ಹೀಗೆಲ್ಲ ಯೋಚಿಸುತ್ತಿರುವಾಗಲೇ ರಮೇಶ ಕಾಫಿ ಹಿಡಿದುಕೊಂಡು ಬಂದ. ಕಾಫಿ ತೆಗೆದುಕೊಳ್ಳುವಾಗ ಗಂಗಾ ಪ್ರೀತಿಯಿಂದ ರಮೇಶನ ಕಡೆಗೆ ನೋಡುತ್ತಾಳೆ.

* * * * *

ರಮೇಶನ ಕೊಠಡಿಗೆ ಮರುದಿನ ಗಂಗಾ ಹುಡುಕಿಕೊಂಡು ಹೋದಳು. Electrical Warmingನಲ್ಲಿ ರಮೇಶ ಬೆಂಕಿ ಕಾಯಿಸಿಕೊಳ್ಳುತ್ತಾ ಕುಳಿತುಕೊಂಡಿದ್ದ. 'ಏನು ರಮೇಶ್, ಬೆಚ್ಚಗೆ ಮನೆಯ ಒಳಗೇ ಕುಳಿತುಬಿಟ್ಟಿದ್ದೀಯಲ್ಲ' ಎಂದು ಹೇಳಿದಾಗ ರಮೇಶ ಗಲಿಬಿಲಿಯಾಗಿ ಮೇಲೆದ್ದ. ಗಂಗಾ ಪ್ರಥಮ ಬಾರಿಗೆ ಆತನ ಕೊಠಡಿಗೆ ಹೋಗಿದ್ದು. ಮನೆಯ ಸಾಮಾನೆಲ್ಲಾ ಚೆಲ್ಲಾ-ಪಿಲ್ಲಿಯಾಗಿ ಬಿದ್ದಿತ್ತು. ರಮೇಶ ಒಂದೊಂದನ್ನೇ ಮೇಲೆತ್ತಿಡತೊಡಗಿದಾಗ ಗಂಗಾ, 'ಪರವಾಗಿಲ್ಲ ಬಿಡು ರಮೇಶ್, ಗಂಡು ಮಕ್ಕಳಿಗೆ ಮನೆ ಅನ್ನೋ Concept ಇರೋದೇ ಇಲ್ಲ, ಏಕೆಂದರೆ ಅದು/ಅದರ ಕೆಲಸ ಅವರಿಗೆ ಸೇರಿದ್ದಲ್ಲ ಎನ್ನುವುದೇ ಅವರ ಭಾವನೆ. ಮನೇಲಿರೋ ಅಕ್ಕ-ತಂಗಿಯರೋ, ಅಥವಾ ಹೆಂಡತಿಯರೋ ಆ ಕೆಲಸ ಮಾಡಬೇಕು, ಅದು ಅವರಿಗೆ ಸಂಬಂಧಪಟ್ಟದ್ದು ಎಂದು ಭಾವಿಸುವವರೇ ಹೆಚ್ಚು. ಅದಕ್ಕೆ ನೀನೇನೂ ಹೊರತಲ್ಲ'. ಹೀಗೆ ಆಕೆ ನುಡಿದಾಗ ರಮೇಶನಿಗೆ ಪಿಚ್ಚೆನಿಸುತ್ತದೆ. ಗಂಗಾ ಹೇಳಿದ್ದೂ ನಿಜ ಅನಿಸುತ್ತದೆ. ಅಮ್ಮನ/ಅಕ್ಕಂದಿರ ಜೊತೆ ಕೆಲಸ ಮಾಡಿದ ಅನುಭವವಿತ್ತೇ ಹೊರತು ಈ ಎಲ್ಲಾ ಕೆಲಸಗಳ ಜವಾಬ್ದಾರಿ ತನಗೂ ಸೇರಿದ್ದು ಎನ್ನುವ ಪರಿಕಲ್ಪನೆ ಆತನಲ್ಲಿ ಬೆಳೆದೇ ಇರಲಿಲ್ಲ. ಅವನು ಪೆಚ್ಚಾದುದನ್ನು ಗಂಗಾ ಗಮನಿಸಿದ್ದಳು. ಬೇರೆ ಕಡೆ ಮಾತು ತಿರುಗಿಸಲು ಗಂಗಾ ಪ್ರಯತ್ನಿಸಿದಳು. ನೇರವಾಗಿ ರಮೇಶನನ್ನೇ ನೋಡುತ್ತಾ, 'ರಮೇಶ್ ನನ್ನ ಜೊತೆ ಜೀವಮಾನ ಪೂರ್ತಿ ಬದುಕೋಕೆ ಸಾಧ್ಯ ಅಂತ ನಿನಗೆ ಅನ್ನುತ್ತಾ?' ರಮೇಶನಿಗೆ ಕಕ್ಕಾವಿಕ್ಕಿಯಾಗುತ್ತದೆ. ಯಾವ ತರಹದ ಪ್ರಶ್ನೆ ಇದು? Man-hood enter ಆದ ಶಾಕ್‌ನಿಂದಲೇ ತಾನಿನ್ನೂ ಈಚೆ ಬಂದಿಲ್ಲ. ಹುಡುಗಿಯರ ಜೊತೆ ಮದುವೆಗೆ ಮುಂಚೆ ಸಂಬಂಧ ಎಣಿಸಿದ ಹುಡುಗನೇ ತಾನಲ್ಲ. ಆದರೂ ಗಂಗಾಳ ಬೆಚ್ಚನೆಯ ಸ್ನೇಹ/ಪ್ರೇಮದಲ್ಲಿ ತಾನು ಕರಗಿ ಹೋಗುತ್ತಿದ್ದೇನೆ ಎಂದು ಆತನಿಗೆ ಹಲವಾರು ಬಾರಿ ಅನ್ನಿಸಿದುದುಂಟು. ಹೆಣ್ಣು-ಗಂಡಿನ ಪ್ರೇಮದಲ್ಲಿ ಇಷ್ಟೊಂದು ಸುಂದರತೆ ಅಡಗಿದೆ ಎಂದು ರಮೇಶನಿಗೆ ಅರ್ಥವಾದದ್ದೇ ಗಂಗಾಳ ಸಂಬಂಧದಲ್ಲಿ. ಗಂಗಾ ತಾನು ಕಂಡ ಹುಡುಗಿಯರಿಗಿಂತ ಭಿನ್ನಳಾದವಳು ಎಂಬುದು ಗಂಗಾಳ ಪರಿಚಯದ ಸಂದರ್ಭದಲ್ಲಿಯೇ ರಮೇಶನಿಗೆ ಅನ್ನಿಸಿದ್ದುಂಟು. ತನ್ನಲ್ಲಿಲ್ಲದ ಗಂಡುತನಗಳನ್ನು ಗಂಗಾಳಲ್ಲಿ ಕಂಡಿದ್ದ ರಮೇಶ ರೋಮಾಂಚನಗೊಂಡಿದ್ದ, ಆಶ್ಚರ್ಯಗೊಂಡಿದ್ದ, ಗೌರವಿಸಿದ್ದ. ಅವನ ಅಕ್ಕ-ತಂಗಿಯರಾಗಲೀ, ಅವನು ಕಂಡಿದ್ದ ಅವನ ತರಗತಿಯ ಹುಡುಗಿಯರಾಗಲೀ ಒಂದು ಸಂಪ್ರದಾಯಸ್ಥ ಚೌಕಟ್ಟಿನವರು. ಅದೇ ಚೌಕಟ್ಟಿನೊಳಗೆ ಅಕ್ಕ-ತಂಗಿಯರೊಂದಿಗೆ ಬೆಳೆದ ಹುಡುಗ ರಮೇಶ. ಹೀಗೆ ಮದುವೆಯಿಲ್ಲದೇ

ಒಬ್ಬ ಹುಡುಗಿಯೊಟ್ಟಿಗೆ ಮಲಗಿದ ಅಂಶವನ್ನೇ ಜೀರ್ಣಿಸಿಕೊಳ್ಳಲು ಅವನಿಗೆ ದಿನಗಳು ಬೇಕಿತ್ತು. ತನ್ನಲ್ಲಿದ್ದ ಪ್ರೀತಿ-ಪ್ರೇಮವನ್ನು ಉಕ್ಕಿಸಿ ಹರಿಸಿದವಳೇ ಗಂಗಾ. 'ತನ್ನೊಳಗೆ ಬಾ' ಎಂದು ಬಿಚ್ಚು ಮಾತುಗಳಿಂದ ಆಹ್ವಾನಿಸಿದ ಗಂಗಾಳ ನುಡಿಯಿಂದ ರಮೇಶ ಬೆವತು ಹೋಗಿದ್ದ. ಸಂಭೋಗದ ಬಗ್ಗೆ ಇದ್ದ ಅಸ್ಪಷ್ಟ ಕಲ್ಪನೆಗಳು. ಗಂಗಾಳ ಬಿಚ್ಚು ನುಡಿಯಲ್ಲಿ ಮಾನಸಿಕ ಸಮತೋಲನವೇ ಆಯ ತಪ್ಪಿದ್ದುಂಟು. ಗಂಗಾ ಮುದ್ದಿಸಿ, ರಮಿಸಿ, ನಿಧಾನಗತಿಯಲ್ಲಿ ಮಾತನಾಡಿ ತನ್ನನ್ನು ಪ್ರೋತ್ಸಾಹಿಸಿದ್ದಳು. 'Oh, Come on Ramesh' ಎಂದು ಕೆನ್ನೆ, ಕಿವಿಗಳೆಲ್ಲ ಚಿವುಟಿ ತನ್ನಲ್ಲಿನ ಸಂಕೋಚ ಹೋಗಲಾಡಿಸಿದ್ದಳು. ಗಂಗಾಳ ಈ ಮುದ್ದಿಸುವಿಕೆ, ರಮಿಸುವಿಕೆ ಇಲ್ಲದಿದ್ದರೆ, ತಾನು ಗಂಗಾಳ ಕಣ್ಣುಗಳನ್ನು ನೇರವಾಗಿ ಎದುರಿಸುವ ಶಕ್ತಿ ಪಡೆದಿರುತ್ತಿದ್ದನೇ ಎಂದು ರಮೇಶನಿಗೆ ಅನುಮಾನವಾಗುತ್ತದೆ. ಗಂಗಾ ಎಷ್ಟೊಂದು ಅದ್ಭುತ ವ್ಯಕ್ತಿ ಎಂಬ ಬೆರಗೊಂದು ಅವನಲ್ಲಿ ಮೂಡುತ್ತದೆ. ಎಷ್ಟೊಂದು ಸರಳವಾಗಿ, ಬಿಚ್ಚು ಮನಸ್ಸಿನಿಂದ ತನ್ನಲ್ಲಿದ್ದ ಬಿಗುಮಾನ, ಭಯ, ಆತಂಕ ಇಂತಹವುಗಳನ್ನು ಗಂಗಾ ದೂರ ಸರಿಸಿದ್ದಳು. ಇವೆಲ್ಲ ನೆನಪಿಗೆ ಬಂದಾಗ ರಮೇಶ ತನ್ನ ಪಾಡಿಗೆ ತಾನೇ ನಕ್ಕ. ಗಂಗಾ ಅವನ ನಗುವನ್ನು ಗಮನಿಸಿದಳು. 'ರಮೇಶ, ನಾನು ಕೇಳುತ್ತಿರುವ ಪ್ರಶ್ನೆ ನನ್ನ ಜೀವನದ ಪ್ರಶ್ನೆ. ನಿನಗೆ ನನ್ನ ಬಗ್ಗೆ ಏನೂ ಕೂಡಾ ಗೊತ್ತಿಲ್ಲ. ಹೀಗೆ ಬೆತ್ತಲೆಯಾಗುವ ಹಂತವೇ ದೊಡ್ಡ ಕ್ರಾಂತಿಕಾರಿ ಸಂಬಂಧ ಎಂದು ನಿನಗೆ ಅನ್ನಿಸಬಹುದು. ಈ ಕ್ಷಣಕ್ಕೆ ಇದೆಲ್ಲ ರೋಚಕವಾಗಿ ಕೂಡಾ ನಿನಗೆ ಕಾಣಿಸಬಹುದು. ಆದರೆ ನನ್ನ ಜೀವನದ ಪ್ರಶ್ನೆಗಳು ಇಲ್ಲಿಗೇ ನಿಲ್ಲುವುದಿಲ್ಲ'. ಹೀಗೆಂದು ಹೇಳಿ ಗಂಗಾ ಮಾತನ್ನೇ ನಿಲ್ಲಿಸಿದಳು. ಡೆನ್‌ಹಾಗ್‌ನ ರಸ್ತೆ ರಸ್ತೆಗಳಲ್ಲಿ, ಬೀಚ್‌ಗಳಲ್ಲಿ, ಬಸ್ ಸ್ಟಾಪ್‌ಗಳಲ್ಲಿ ಅಲ್ಲಲ್ಲಿಯೇ ಮುದ್ದಿಸುವ ಗಂಡು-ಹೆಣ್ಣುಗಳನ್ನು ರಮೇಶ ಕಂಡಿದ್ದ. ಗಂಡು-ಹೆಣ್ಣಿನ ಸಂಬಂಧದ ಒಳಸುಳಿಗಳನ್ನು ಇಲ್ಲಿನ ಆತನ ಗೆಳೆಯರನೇಕರು ಬಿಚ್ಚು ನುಡಿಯಿಂದ ಮಾತನಾಡಿದುದುಂಟು. ಈ ಸಂದರ್ಭದಲ್ಲಿ ಗಂಗಾ ಹೇಳುವುದನ್ನು ಜೀರ್ಣಿಸಿಕೊಳ್ಳುವುದಕ್ಕೆ ರಮೇಶನಿಗೆ ಅಷ್ಟು ಕಷ್ಟವಾಗಿರಲಿಲ್ಲ. ಇಂತಹ ಬಿಚ್ಚು ನುಡಿಗಳನ್ನು ಸ್ವೀಕರಿಸುವ ಒಂದು ಪ್ರಬುದ್ಧತೆಯನ್ನು ಈ ಸಮಾಜದ ಎದುರು ಆತ ಪಡೆದುಕೊಂಡಿದ್ದ. ಗಂಗಾಳ ಗಂಭೀರ ಮುಖ, ಗಂಭೀರವಾಗಿ ಮಾತನಾಡುವುದನ್ನು ಗಮನಿಸಿದ ರಮೇಶನಿಗೆ ಏಕೋ ಇದ್ದಕ್ಕಿದ್ದ ಹಾಗೆ ತಾಯಿ/ತಂದೆಯ ನೆನಪಾಗುತ್ತದೆ. ತಾನು ಹೀಗೆ ಮುಕ್ತವಾಗಿ ಒಬ್ಬ ಹುಡುಗಿಯೊಟ್ಟಿಗೆ ಇದ್ದೇನೆ ಎಂದು ಹೇಳುವ ಧೈರ್ಯವಾದರೂ ತನಗಿದೆಯೇ? ಗಂಗಾ ಎಲ್ಲವನ್ನೂ ನೇರವಾಗಿ ಹೇಳಬಲ್ಲ ಧೈರ್ಯ ಇರುವ ಹುಡುಗಿ. ಆದರೆ ತಾನು? ಗಂಗಾಳನ್ನು ಬೆತ್ತಲೆಯಾಗಿ ಸೇರುವಾಗ ಈ ಪ್ರಶ್ನೆಗಳು ತಲೆಗೇ ಬಂದಿರಲಿಲ್ಲ. ತಾರುಣ್ಯದ ಬಿಸಿಯಲ್ಲಿ ಗಂಗಾಳ ಸನಿಹ ಬೆಚ್ಚಗಾಗಿತ್ತು, ತಲೆಯ ಪ್ರಶ್ನೆ, ಗೊಂದಲಗಳಿಗೆ ಅವಕಾಶವಿಲ್ಲದಷ್ಟು ಮೈ ಕಾದು ಕೆಂಡವಾಗಿತ್ತು. ಗಂಗಾಳ ರಮಿಸುವಿಕೆ, ಮುದ್ದಿಸುವಿಕೆಗೆ ಹೃದಯದ ಒಳಗೆಲ್ಲೋ ಆಕೆಯ ಬಗ್ಗೆ ಪ್ರೀತಿ/ಒಲವು ಅಚ್ಚಳಿಯದೇ ಮುದ್ರೆಯೊತ್ತಿದಂತೆ ನಿಂತುಬಿಟ್ಟಿತ್ತು. ಈಗ ಗಂಗಾ ಜೀವನದ ಪ್ರಶ್ನೆ ಎತ್ತುತ್ತಿದ್ದಾಳೆ. Life long Commit ಆಗಿ ಬದುಕುವುದು ಸಾಧ್ಯವೇ? ಎನ್ನುತ್ತಿದ್ದಾಳೆ. ಗಂಗಾಳೊಟ್ಟಿಗೆ ಬದುಕಲು ಸಾಧ್ಯವಿಲ್ಲವೆ? ರಮೇಶನಿಗೆ ಏನೂ ಅರ್ಥವಾಗುವುದಿಲ್ಲ. ಇದರ ಗಂಭೀರ ಪದರುಗಳನ್ನು ಆತ ಬಿಚ್ಚಿನೋಡಬೇಕಿತ್ತು. ಗಂಗಾ ಆದರ್ಶ ಪ್ರಪಂಚದ ಸತ್ಯಗಳ ಬೆನ್ನಿಗೆ ಜೋತುಬಿದ್ದಿರುವ ಹುಡುಗಿ. ಗಂಗಾಳ ಭೇಟಿಯಾಗುವವರೆಗೂ ರಮೇಶ ಹಿಡಿದುಕೊಂಡಿದ್ದ ಸತ್ಯಗಳೆಲ್ಲ ಪ್ರಾಪಂಚಿಕ, ಲೌಕಿಕ ಜಗತ್ತಿನ ಸತ್ಯಗಳೇ. ಗಂಗಾ ಆದರ್ಶದ ಬದುಕಿನ ಲಯವೊಂದನ್ನು ಅರಸಿಯೇ ಈ ಹಾಲೆಂಡಿನ ಜಗತ್ತಿಗೆ ಮುಖ ಮಾಡಿದವಳು. ಆದರೆ ತಾನು ವಿದೇಶಕ್ಕೆ ಬಂದುದು ಈ ಜಗತ್ತಿನ ಆಕರ್ಷಣೆಯಿಂದ, ಪ್ರಾಪಂಚಿಕ ಮೋಹಗಳಿಂದ. ಹಾಲೆಂಡಿಗೆ ಕಾಲಿಟ್ಟಾಗ ಆತ ಮೊಟ್ಟ ಮೊದಲು ಕಣ್ಣಾಡಿಸಿದುದೇ ಕಂಪ್ಯೂಟರ್ ಕಡೆಗೆ, ಎಲೆಕ್ಟ್ರಾನಿಕ್ಸ್ ಜಗತ್ತಿನ ಕಡೆಗೆ. ಗಂಗಾ

ಭೇಟಿಯಾಗಿರದಿದ್ದರೆ ತನ್ನ ಬದುಕಿನ ದಿಕ್ಕೇ ಬೇರೆಯಾಗಿರುತ್ತಿತ್ತು ಎಂದು ರಮೇಶ ಯೋಚಿಸುತ್ತಾನೆ. ಎಲ್ಲಾ ಮಧ್ಯಮ ವರ್ಗದವರ ಹಾಗೇ ತನ್ನ ಕನಸುಗಳೂ ಕೂಡಾ. ಆ ಕನಸುಗಳು ಮಾದಕತೆ, ರೋಚಕತೆ, ದುಡ್ಡು ಇಂತಹವುಗಳೊಂದಿಗೇ ತಳಕು ಹಾಕಿಕೊಂಡಿರುತ್ತಿತ್ತು. ಟಕ್ ಎಂದು ಮಧ್ಯ ಕಾಣಿಸಿಕೊಂಡವಳು ಗಂಗಾ. ಈ ಆರೇಳು ತಿಂಗಳಲ್ಲಿ ಪಶ್ಚಿಮದ ವ್ಯಾಮೋಹಕ್ಕೆ, ಲೌಕಿಕ ಪ್ರಪಂಚಕ್ಕೆ ಅಂಟಿಕೊಳ್ಳದೇ ಜೀವನ ಸಾಗಿಸುತ್ತಿದ್ದ, ಸಮುದ್ರದ ತೀರದಲ್ಲಿ ಎಲ್ಲಿಯೋ ಕುಳಿತು ಬರೆಯುತ್ತಾ, ಬರೆಯುತ್ತಾ ತನ್ನನ್ನೇ ಮರೆತುಬಿಡುವ ಗಂಗಾ-ರಮೇಶನ ಕಣ್ಣಿಗೆ ತಪಸ್ವಿನಿಯಂತೆ ಕಾಣಿಸಿಕೊಂಡಿದ್ದಳು. ಆಕೆಯ ಗಂಡುತನ-ಅವನನ್ನು ಬೆರಗಾಗಿಸಿತ್ತು. ಬೆಚ್ಚನೆಯ ಸ್ನೇಹದ ಗಂಗಾ ಬೆಚ್ಚನೆಯ ಭಾವನೆಗಳಲ್ಲಿ ಬೆತ್ತಲೆಯಾಗಿ ತನ್ನೊಂದಿಗೆ ಬೆರೆತಿದ್ದಾಳೆ, ಲೈಂಗಿಕ ಸುಖದ ಲೋಕದಲ್ಲಿ ತನಗಿದ್ದ ನಾಚಿಕೆ/ಸಂಕೋಚ ತೊರೆದು ರಮಿಸಿದ್ದಾಳೆ. ಇದೇ ಗಂಗಾ ಈಗ ಬದುಕಿನ ಪ್ರಶ್ನೆ ಎತ್ತುತ್ತಿದ್ದಾಳೆ. 'ಜೀವನಪೂರ್ತಿ ತನ್ನೊಟ್ಟಿಗೆ ಬದುಕುವುದು ಸಾಧ್ಯವೇ?' ಎಂದು ಪ್ರಶ್ನೆಯೊಂದನ್ನು ಎದುರಿಗಿಟ್ಟು ಗಂಭೀರವಾಗಿ ಕುಳಿತಿದ್ದಾಳೆ. 'ಯಾಕೆ ಸಾಧ್ಯವಿಲ್ಲ?' ಎಂದು ನೇರವಾಗಿ ಹೇಳಿಬಿಡಬೇಕು ಎನಿಸುತ್ತದೆ ರಮೇಶನಿಗೆ. ಗಂಗಾಳೊಡನೆ ಬೆತ್ತಲೆಯಾಗಿರುವಾಗ, ಆಕೆಯನ್ನು ಸಂಭೋಗಿಸುವಾಗ ಇವೆಲ್ಲ ಯೋಚಿಸಿರದಿದ್ದರೂ ಗಂಗಾ ತನ್ನ ಮೈಯಿನ, ಮನಸ್ಸಿನ ಅಂಗ ಎಂದೇ ಆತನಿಗೆ ಅನ್ನಿಸತೊಡಗಿತ್ತು. ತನ್ನ ಬದುಕಿನ ಲಯಗಳಿಗೆ ಮೀರಿದ ಬೌದ್ಧಿಕತೆ ಗಂಗಾಳದು ಎಂದು ರಮೇಶನಿಗೆ ಯಾವಾಗಲೂ ಅನ್ನಿಸಿದ್ದುಂಟು. ತಾನೇ ಈ ಪ್ರಶ್ನೆಯನ್ನು ಅವಳಲ್ಲಿ ಕೇಳಬೇಕು. ತನ್ನೊಟ್ಟಿಗೆ ಅಂಟಿಕೊಂಡು ಬದುಕಲು ಗಂಗಾಳಿಗೆ ಸಾಧ್ಯವಾಗುತ್ತದೆಯೇ? ಎಂದು ಈಗ ಗಂಗಾ ಪ್ರಶ್ನೆ ಕೇಳುತ್ತಿದ್ದಾಳೆ. ಏನೆಂದು ಹೇಳುವುದು? ರಮೇಶ ಮೌನವಾಗಿ ಗಂಗಾಳನ್ನು ನೋಡುತ್ತಾನೆ. ಗಂಗಾಳ ಮುಖದಲ್ಲಿ ಅವ್ಯಕ್ತವಾದ ನೋವಿನ ಅಲೆಯೊಂದು ಹರಿದಾಡಿದುದು ಕಂಡುಬರುತ್ತದೆ. ಏನೆಂದು ಹೇಳುವುದೆಂದು ತಿಳಿಯದೇ ರಮೇಶನಿಗೆ ಒಂದು ಕ್ಷಣ ಗಲಿಬಿಲಿಯಾಗುತ್ತದೆ. ಹೀಗೆ ಗಂಗಾ ನೇರವಾಗಿ ಕೇಳಿದರೆ ಏನು ಹೇಳುವುದು? ಗಂಗಾಳಷ್ಟು ಸ್ಪಷ್ಟವಾದ ನೆಲೆಯಲ್ಲಿ ಯೋಚಿಸಲು ತನಗೆ ಬರುವುದಿಲ್ಲ. ಹಲವಾರು ವಿಚಾರಗಳ ತೀರ್ಮಾನಗಳಲ್ಲಿ ಗಂಗಾಳಿಗೇ ಅಂಟಿಕೊಂಡುಬಿಡುವುದನ್ನು ರಮೇಶ ಇಷ್ಟಪಡುತ್ತಿದ್ದ. ಇದಕ್ಕೆ ಗಂಗಾ ಯಾವಾಗಲೂ ಬಯ್ಯುತ್ತಿದ್ದಳು. 'ನಿನ್ನ ಅಪ್ಪ/ನಿನ್ನ ಎಂ.ಡಿ. ನಿನ್ನ ಸ್ವಂತಿಕೆ/ಸ್ವಂತ ವಿಚಾರಗಳನ್ನು ಕೈಯಿಂದ ಕಸಿದುಕೊಂಡುಬಿಟ್ಟಿದ್ದಾರೆ. ಏಕೆ ಪ್ರತಿಯೊಂದು ವಿಚಾರಕ್ಕೂ ನನ್ನ ಬದುಕಿನ ಚೌಕಟ್ಟಿನೊಳಗೇ ನಿರ್ಧರಿಸಲು ಪ್ರಯತ್ನಿಸುತ್ತೀ? ನೀನೇ ಯೋಚಿಸು. ನಿನಗೆ ಸರಿಯೆನಿಸಿದರೆ ಮಾಡು, ಇಲ್ಲದಿದ್ದರೆ ಬಿಡು,' ಹೀಗೆ ಅನೇಕ ಸಂದರ್ಭಗಳಲ್ಲಿ ಗಂಗಾ ಬಯ್ಯುತ್ತಿದ್ದುದುಂಟು. ನಿನ್ನ ವ್ಯಕ್ತಿತ್ವ ನಿನ್ನದು, ನನ್ನದಲ್ಲ ಎಂದು ಹಠಮಾಡಿ ಗಲಾಟೆ ಮಾಡುತ್ತಿದ್ದಳು. ಆಕೆಯಿಂದ ಬಿಡಿಸಿಕೊಂಡು ತೀರ್ಮಾನ ತೆಗೆದುಕೊಳ್ಳುವುದು ಆತನಿಗೆ ಅನಿವಾರ್ಯವಾಗುತ್ತಿತ್ತು. ಅವಲಂಬನೆಯನ್ನು ಗಂಗಾ ಎಂದೂ ಪ್ರೋತ್ಸಾಹಿಸಿದವಳಲ್ಲ. ಈಗ ಮುಖ್ಯ ಪ್ರಶ್ನೆ ಕೇಳುತ್ತಿದ್ದಾಳೆ. 'ಜೀವಮಾನ ಪೂರ್ತಿ ನನ್ನೊಟ್ಟಿಗೆ ಬದುಕಲು ಸಾಧ್ಯವೇ?' ರಮೇಶನಿಗೆ ಏನು ಹೇಳಬೇಕೆಂಬುದೇ ತಿಳಿಯುವುದಿಲ್ಲ. 'ಬದುಕೋಣ' - ಎಂದು ಗಂಗಾ ಹೇಳಿದ್ದರೆ ತಾನು ಸರಳವಾಗಿ 'ಹೂ' ಎಂದುಬಿಡಬಹುದಿತ್ತು. 'ಬದುಕಲು ಸಾಧ್ಯವೇ?' ಎಂದು ಗಂಗಾ ಕೇಳುತ್ತಿದ್ದಾಳೆ. ಏನೆಂದು ಹೇಳುವುದು? ಕೊನೆಗೆ ರಮೇಶ ಹೇಳುತ್ತಾನೆ, 'ಅದನ್ನು ನೀನು ಹೇಳಬೇಕು ಗಂಗಾ, ನನಗೆ ನಿನ್ನೊಡನೆ ಬದುಕಲು ಸಾಧ್ಯವಾಗುತ್ತಾ ಎಂಬ ಪ್ರಶ್ನೆಗಿಂತ ನಿನಗೆ ನನ್ನೊಡನೆ ಬದುಕಲು ಸಾಧ್ಯವಾಗುತ್ತದಾ ಎನ್ನುವ ಪ್ರಶ್ನೆ ಮುಖ್ಯವಾಗುತ್ತದೆ. ಏಕೆಂದರೆ ವಿಶಾಲವಾದ ಹರವಿನಲ್ಲಿ ಜೀವನ ಕಂಡವಳು ನೀನು. ಬದುಕಿನ ಬಗೆಗೆ ಸ್ಪಷ್ಟ ಆಲೋಚನೆಗಳಿರುವುದು ನಿನಗೆ. ಈ ಪ್ರಶ್ನೆಯನ್ನು ನಾನೇ ನಿನಗೆ ಕೇಳಬೇಕಾಗುತ್ತದೆ'. ಗಂಗಾ ರಮೇಶನನ್ನು ಸುಮ್ಮನೇ ನಿರುಕಿಸಿದಳು. ತನ್ನ ಪ್ರಶ್ನೆಯನ್ನು ತನಗೇ ತಿರುಗಿಸಿ ಕೇಳುವ ರಮೇಶನಿಗೆ

ತನ್ನ ಜೀವನದ, ತನ್ನ ಸಂಬಂಧದ ಪದರು/ಪದರುಗಳನ್ನು ಆತನೆದುರಿಗೆ ಬಿಚ್ಚಿಡಬೇಕು ಎನಿಸುತ್ತದೆ. ಮತ್ತೆ ರಮೇಶ ಹೇಳುತ್ತಾನೆ, 'ನೀನು ಜರ್ಮನಿಗೆ ಹೋದ ಒಂದು ವಾರ ನಾನೆಷ್ಟು ನೋವು ಅನುಭವಿಸಿರುವೆನೆಂದು ನನಗೇ ಗೊತ್ತು. ಹಾಲೆಂಡಿನಿಂದ ಭಾರತಕ್ಕೆ ಹೋಗಿಬಿಡಲು ಯೋಚಿಸಿಬಿಟ್ಟಿದ್ದೆ. ಯಾರೂ ಇಲ್ಲದೇ ನಾನು ಒಂಟಿ ಎನ್ನಿಸಿ ನನ್ನೊಳಗೇ ನಾನು ಅತ್ತುಕೊಂಡಿದ್ದೇನೆ. ಗಂಗಾ ನಿಜವಾಗಲೂ ಹೇಳುತ್ತಿದ್ದೇನೆ, ಆಗಲೇ ನನಗೆ ಅರ್ಥವಾಗಿದ್ದು ನೀನೆಷ್ಟು ನನ್ನ ಬದುಕಿನ ಭಾಗವಾಗಿದ್ದೀಯ ಎಂದು! ಈ ಡೆನ್‌ಹಾಗ್‌ನಲ್ಲಿ ನನ್ನ ಬದುಕಿನ ಭಾಗವೇ ನೀನು. ನನ್ನ ಬದುಕಿನ ಕೇಂದ್ರ ಬಿಂದು ನೀನು! ನಿನ್ನ ಬೆಚ್ಚಗಿನ ಸ್ನೇಹ/ಮಮತೆ/ಪ್ರೇಮ ಇಲ್ಲಿಯವರೆಗೆ ನನ್ನನ್ನು ಒಬ್ಬ ವ್ಯಕ್ತಿಯನ್ನಾಗಿಯಾದರೂ ಕಾಯ್ದಿರಿಸಿದೆ. ಇಲ್ಲದಿದ್ದರೆ ನಾನೊಬ್ಬ ಚೂರು ಚೂರಾದ ವ್ಯಕ್ತಿಯಾಗಿಬಿಡುತ್ತಿದ್ದೆ ಎನಿಸುತ್ತದೆ. ನೀನು ಜರ್ಮನಿಯಿಂದ ತಿರುಗಿ ಬರುವವರೆಗೆ ನಾನ್ಹೇಗೆ ಕಾಲ ಕಳೆದೆನೋ ನನಗೇ ಗೊತ್ತಿಲ್ಲ. ನೀನು ವಾಪಸ್ಸು ಬಂದಾಗ ನನ್ನ ಹೃದಯ ತುಂಬಿ ಬಂದಿತ್ತು. ನೀನು ಬರುವ ದಿನ ನಿನಗಾಗಿ ಅಡಿಗೆ ಮಾಡಿಟ್ಟು ಸ್ಟೇಷನ್‌ನಲ್ಲಿ ಕಾದಿದ್ದು ನೆನಪಿಲ್ಲವೇ?'.

ಗಂಗಾ ತಲೆಯಾಡಿಸಿದಳು. ಗಂಗಾ ಜರ್ಮನಿಯಿಂದ ಬಂದ ದಿನ ರಮೇಶ ಆಕೆ ಇಳಿಯುವ ಸ್ಥಳದಲ್ಲಿಯೇ ಕಾಯುತ್ತಾ ನಿಂತಿದ್ದ. ಗಂಗಾಳ ಕೊಠಡಿಯ ಬೀಗದ ಕೈ ಆತನಲ್ಲಿಯೇ ಇದ್ದುದರಿಂದ ಆಕೆಯ ಕೊಠಡಿಯಲ್ಲಿ ಅಡಿಗೆ ಮಾಡಿ ಇರಿಸಿದ್ದ. ಇವೆಲ್ಲ ನೆನಪಿಗೆ ಬಂದಾಗ ಗಂಗಾ ಒಂದು ಕ್ಷಣ ಮೌನ ತಳೆದಳು. ಆನಂತರ ನಿಧಾನವಾಗಿ ಒಂದೊಂದೇ ಮಾತುಗಳನ್ನು ರಮೇಶನ ಮುಖ ನೋಡುತ್ತಾ ನುಡಿಯತೊಡಗಿದಳು.

'ಇದಲ್ಲ ರಮೇಶ್, ನಿನಗೆ ನನ್ನ ಜೀವನದ ಪೂರ್ತಿ ವಿವರಗಳೇ ಗೊತ್ತಿಲ್ಲ. ಒಬ್ಬರೊಟ್ಟಿಗೆ ಅಂಟಿಕೊಂಡು ಬದುಕುವ ನನ್ನ ವಿಶ್ವಾಸ/ನಂಬಿಕೆಗಳೆಲ್ಲ ನನ್ನ ಹದಿನೇಳು, ಹದಿನೆಂಟು ವಯಸ್ಸಿನಲ್ಲಿಯೇ ಚೂರು ಚೂರಾಗಿ ಹೋದವು. ಒಡೆದು ಹೋದ ನಂಬಿಕೆ, ವಿಶ್ವಾಸ ಎಲ್ಲವನ್ನೂ ಈಗ ಮತ್ತೆ ಒಂದುಗೂಡಿಸಿ ಬದುಕಬೇಕು. ಬದುಕಲು ಸಾಧ್ಯವಾ? ಎಂಬ ಪ್ರಶ್ನೆಯನ್ನು ನಿನಗೆ ಕೇಳುತ್ತಿದ್ದೇನೆ. ಈ ಪ್ರಶ್ನೆಯನ್ನು ನನಗೆ ನಾನೇ ಕೇಳಿಕೊಳ್ಳಬೇಕಾಗಿದೆ'. ಹೀಗೆಂದು ಹೇಳುವಾಗ ಗಂಗಾಳ ಕಣ್ಣಲ್ಲಿ ನೀರು ತುಂಬಿಕೊಳ್ಳತೊಡಗುತ್ತದೆ. ನೀರು ತುಂಬಿದ ಕಣ್ಣುಗಳಲ್ಲಿ ಗಂಗಾ ರವಿಯ ಸಂಬಂಧದ ಬಗ್ಗೆ ರಮೇಶನಲ್ಲಿ ಹೇಳುತ್ತಾ ಹೋಗುತ್ತಾಳೆ. ರವಿಯ ಸಂಬಂಧದಲ್ಲಿ ತನಗಿದ್ದ ಮುಗ್ಧತೆಯನ್ನೇ ಈಗ ತಾನು ರಮೇಶನಲ್ಲಿಯೂ ಕಾಣುತ್ತಿರುವುದು ಎಂದು ಹೇಳಿದ ಗಂಗಾ ಯಾವುದೇ ಸಂಬಂಧ ಮುಗ್ಧತೆಯ ಮೇಲೆ ಅಡ್ಡಾ-ದಿಡ್ಡಿ ಗೆರೆಗಳನ್ನು ಎಳೆಯಬಾರದು ಎಂಬ ಆಶಯದಿಂದಲೇ ಈ ವಿವರಗಳನ್ನು ನಿನ್ನ ಮುಂದೆ ಬಿಚ್ಚಿಡುತ್ತಿದ್ದೇನೆ ಎಂದಳು. 'ರವಿಯ ಸಂದರ್ಭದಲ್ಲಿ, ಜಾಗದಲ್ಲಿ ನಾನು ನಿಂತು ನಿನ್ನ ಮುಗ್ಧತೆಯ ಮೇಲೆ ಸಂಕೀರ್ಣ ಗೆರೆ ಎಳೆದು ನಿನ್ನ ಬದುಕನ್ನೇ ನಾನು ಅಲ್ಲಾಡಿಸಿಬಿಡಬಾರದು, ನಿನ್ನ ಆತಂಕ/ಆಶ್ಚರ್ಯ/ಮುಗ್ಧತೆಗಳಲ್ಲಿ ನಾನು ಹೊನ್ನೇಕೆರೆ ಬಿಟ್ಟು ಶಿವಮೊಗ್ಗ, ಮೈಸೂರು, ಬೆಂಗಳೂರಿಗೆ ಬಂದಾಗ ನಾನಿದ್ದ ಸ್ಥಿತಿಯನ್ನೇ ನೆನಪಿಸುತ್ತದೆ. ರವಿ ನನ್ನ ವ್ಯಕ್ತಿತ್ವವನ್ನೇ ಪೂರ್ತಿಯಾಗಿ shatter ಮಾಡಿದಂತಹ ವ್ಯಕ್ತಿ. ಬೆತ್ತಲೆಯಾಗಿಯೂ ಸಂಭೋಗದಂತಹ ಸಂಬಂಧಕ್ಕೆ ಒಪ್ಪಿಕೊಳ್ಳಲಾಗದಂತಹ ಆತಂಕ. ಆತ ನನ್ನ ಮನಸ್ಸಿನ ಮೇಲೆ ಎಳೆದ ಸಂಕೀರ್ಣ ಗೆರೆಗಳು ನನ್ನ ಇಡಿಯ ಬದುಕಿನ ಚಾಲನೆಯನ್ನೇ ಬೇರೆಯತ್ತ ತಿರುಗಿಸಿತು. ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಗೊತ್ತಿಲ್ಲ ರಮೇಶ್, ಬಾಲುವಿನ ಸಂಬಂಧದಲ್ಲಿ ಅಲೆಮಾರಿತನವನ್ನು ಒಪ್ಪಿಕೊಂಡೇ ಮುಂದುವರೆದದ್ದು ನಾನು. ಬೆತ್ತಲೆಯಾಗಿ ನಿಂತ ನನ್ನೆದುರು ಬಾಲು ಪರದಾಡಿದ್ದು/ಅಳುಕು ಪಟ್ಟದ್ದು ಎಲ್ಲದೂ ಕಣ್ಣ ಮುಂದೆಯೇ

ಇದೆ. ಬಾಲುವಿನ ಸಂಬಂಧದಲ್ಲಿ ಇದ್ದಕ್ಕಿದ್ದ ಹಾಗೆ ಗಂಡಸರ ಮಾನಸಿಕ ಸ್ಥಿತಿಯ ಒತ್ತಡಗಳು, ಬಹುಶಃ ಫ್ಯೂಡಲ್ ವ್ಯವಸ್ಥೆ ಅವರ ಮನಸ್ಸೊಳಗೇ ತಮಗೆ ಸೇರದ್ದನ್ನು ಮುಟ್ಟಬಾರದು ಎಂಬಂತೆ ಹುಟ್ಟುಹಾಕಿದ ಒಳ್ಳೆಯತನಗಳು, ಪುರುಷತ್ವದ ಹಿರಿಮೆಯ ಬಗ್ಗೆ ಈ ಸಮಾಜ ಬೆಳೆಸಿದ Prejudiceಗಳು ನನಗೆ ಅರ್ಥವಾಗಿದೆ. ಸದಾನ ಸಂಬಂಧ ಸಾಧನಾಳ ಸಾವಿನ ಜೊತೆಗೆ ತಳಕು ಹಾಕಿಕೊಂಡಿತ್ತು. ಜೊತೆಗೆ ಜೀರ್ಣಿಸಿಕೊಳ್ಳಲಾಗದ ವೆಂಕಟೇಶನ ಹೆಂಡತಿ ರೋಜಾಳ ಪ್ರಶ್ನೆಗಳನ್ನು ಸದೂನ ಸಂಬಂಧದಲ್ಲಿ ಜೀರ್ಣಿಸಿಕೊಳ್ಳಲು ಪ್ರಯತ್ನ ಪಟ್ಟೆನೇನೋ? ಯಾವ ಸಂಬಂಧದಲ್ಲೂ ತನ್ನ ದೇಹ ಪ್ರತಿಕ್ರಿಯಿಸಲಿಲ್ಲ. ಮನಸ್ಸು ಮುದುಡಿಕೊಂಡ ಹಾಗೇ ದೇಹವೂ ಮುದುಡಿಕೊಂಡ ಅನುಭವ. ಇದು ತನ್ನ ಮನಸ್ಸಿನ ಮಿತಿಯಾಗಿತ್ತೋ, ದೇಹದ ಮಿತಿಯಾಗಿತ್ತೋ ತನಗೇ ಅರ್ಥವಾಗುವುದಿಲ್ಲ. ಲೈಂಗಿಕ ಸುಖದ ಬಯಕೆಗಳಿಗಾಗಿಯೇ ಈ ಸಂಬಂಧಗಳಲ್ಲಿ ತೊಡಗಿಕೊಂಡೆನೇ ಎಂದರೆ ತನ್ನ ದೇಹದ ಲಯಗಳು ತುಡಿದದ್ದೇ ನನಗೆ ಗೊತ್ತಿಲ್ಲ. ಒಂದು ಸಂಬಂಧದಲ್ಲಿ ನೆಲೆ ನಿಂತು ಕಾಣಲಾಗದ ಸತ್ಯಗಳನ್ನು ಹಲವಾರು ಸಂಬಂಧಗಳ ಜೀವಂತಿಕೆಯಲ್ಲಿ ಕಾಣಲು ಬಯಸಿದ್ದ ತಾನು ಕಂಡುಕೊಂಡ ಸತ್ಯಗಳಾದರೂ ಏನು? ಈ ಹಂತದಲ್ಲಿ ಮುಖಾಮುಖಿಯಾಗಿದ್ದು ಒಂಟಿತನ, ನೀರಸ, ನಿರಾಸೆ. ಇದರಿಂದ ಬಿಡಿಸಿಕೊಳ್ಳಲೆಂದೇ ಈ ಕೋರ್ಸ್‌ಗೆ ನಾನು ಬಂದದ್ದು. ರಮೇಶ್, ಪ್ರತಿಯೊಂದು ಸಂಬಂಧದಲ್ಲಿಯೂ ಸಹ ಒಂದೊಂದು ಸತ್ಯ ಕುರಿತು ಹೇಳಬಹುದೇ ಹೊರತು ಒಟ್ಟಾಗಿ ಇದೇ ಸತ್ಯ, ಸಂಬಂಧಗಳೇ ಹೀಗೆ ಎನ್ನಲು ನನಗೆ ಸಾಧ್ಯವಾಗುವುದಿಲ್ಲ. ನಾನೇನು ಶೋಧಿಸಿದೆನೋ, ನಾನೇನು ಕಂಡುಕೊಂಡೆನೋ ಅದು ನನಗೇ ಸಂಕೀರ್ಣವಾಗಿಬಿಟ್ಟಿದೆ. ಈ ಬಗ್ಗೆ ನನಗೆ ಯಾವ regrets ಕೂಡಾ ಇಲ್ಲ. ನಾನು ತಪ್ಪು ಮಾಡಿದೆ ಎಂದಾಗಲೀ ಅಥವಾ ಅಯ್ಯೋ ಹೀಗಾಗಬಾರದಿತ್ತು ಎಂದಾಗಲೀ ನಾನು ಯೋಚಿಸಿಯೇ ಇಲ್ಲ. ಹೀಗೆ ಅಲೆಮಾರಿಯಾಗಿದ್ದ ನನಗೆ ಅಂಟಿಕೊಂಡು ಬದುಕಲು ಸಾಧ್ಯವೇ ಎಂಬುದು ನನಗೇ ಪ್ರಶ್ನೆ. ಅಥವಾ ನನ್ನಂಥವಳೊಟ್ಟಿಗೆ ಬದುಕು ಪೂರ್ಣ ಬದುಕಲು ಯಾರಿಗಾದರೂ ಸಾಧ್ಯವಾಗುತ್ತದೆಯೇ ಎಂಬುದೂ ಕೂಡಾ ಇನ್ನೊಂದು ಪ್ರಶ್ನೆ. ಈ ಎಲ್ಲಾ ಗೊಂದಲಗಳ ನಡುವೆಯೇ ಬದುಕಿನ ಸಾಧ್ಯತೆಯನ್ನು ನಿನ್ನೊಂದಿಗೆ ಅರಸುತ್ತಿದ್ದೇನೆ ರಮೇಶ್. ನನ್ನ ಬದುಕಿನ ಪರಿಚಯ ನಿನಗಿರಬೇಕು, ವಿವರಗಳೂ ನಿನಗೆ ಗೊತ್ತಿರಬೇಕು. ಏಕೆಂದರೆ ಗಂಗಾಳ ವ್ಯಕ್ತಿತ್ವದ ಮುಖಗಳೇ ನನಗೆ ಗೊತ್ತಿರಲಿಲ್ಲ ಎಂದು ನಿನಗೆ ಅನ್ನಿಸಬಾರದು. ಇದನ್ನೆಲ್ಲ ಹೇಳದೇ ಗಂಗಾ ನನಗೆ ಮೋಸ ಮಾಡಿಬಿಟ್ಟಳು ಎಂದೂ ಕೂಡಾ ನಿನಗೆ ಅನ್ನಿಸಬಾರದು, ಒಟ್ಟಿಗೆ ಬದುಕೋಣ ಎಂದರೆ ನನ್ನ ಪರಿಪೂರ್ಣ ಮನಸ್ಸಿನಿಂದ ಬದುಕುವುದಕ್ಕೆ ಪ್ರಯತ್ನಿಸುತ್ತೇನೆ. ನನ್ನ ಬದುಕಿನಲ್ಲಿ ಕೆಲಸದ ಸ್ವಾತಂತ್ರ್ಯಕ್ಕಾಗಲೀ ಬರವಣಿಗೆಗೆ, ನನ್ನ ಓಡಾಟಕ್ಕಾಗಲೀ ಇವು ತೊಂದರೆ ತರಬಾರದು ಅಷ್ಟೇ. ಇಂತಹ ವಿಚಾರಗಳಲ್ಲಿ ನಾನು ಅತ್ಯಂತ ಸ್ವಾವಲಂಬಿ. ಕೌಟುಂಬಿಕ ಚೌಕಟ್ಟಿನಲ್ಲಿ ನನ್ನ ವ್ಯಕ್ತಿತ್ವ ನಶಿಸಬಾರದು ಅಷ್ಟೇ. ಅಂಟಿಕೊಳ್ಳುವ ಬದುಕಿನಲ್ಲಿ ಇರುವ ಒಪ್ಪಂದಗಳಿಗೆ ನನ್ನ ಮನಸ್ಸು ಇಂದು ಸಿದ್ಧವಾಗಿದೆ. ಇದೆಲ್ಲ ನೀನು ಯೋಚಿಸಬೇಕು ರಮೇಶ್', ಹೀಗೆ ನಿರಂತರವಾಗಿ ಮಾತನಾಡುವಾಗ ಗಂಗಾ ರಮೇಶನನ್ನೇ ನಿರುಕಿಸುತ್ತಿದ್ದಳು. ರಮೇಶ ಏನನ್ನೋ ಗಾಢವಾಗಿ ಯೋಚಿಸುವಂತೆ ಕಾಣತೊಡಗಿತ್ತು. ಇದೆಲ್ಲ ರಮೇಶನಿಗೆ ದೊಡ್ಡ ಶಾಕ್ ಎನ್ನಿಸಿರಬೇಕು ಎನಿಸುತ್ತದೆ ಗಂಗಾಗೆ. ಗಂಗಾ ಹೇಳಿದುದನ್ನು ಜೀರ್ಣಿಸಿಕೊಳ್ಳಲು ರಮೇಶ ಪ್ರಯತ್ನಪಡತೊಡಗಿದ್ದನು. ಹಾಲೆಂಡ್ ಈಗ ವಿಚಿತ್ರವಾಗಿ ಕಾಣತೊಡಗಿತ್ತು ರಮೇಶನಿಗೆ. ಅದಕ್ಕಿಂತಲೂ ವಿಚಿತ್ರವಾಗಿ ಕಂಡದ್ದು ಗಂಗಾ. ಭಾರತದ ಯಾವುದೋ ಹಳ್ಳಿಗಾಡಿನಿಂದ ಬಂದ ಹುಡುಗಿ ಪಶ್ಚಿಮದ ಪಟ್ಟಣವೊಂದರಲ್ಲಿ ಕುಳಿತು ಏನೇನೋ ಸತ್ಯಗಳನ್ನು ಕುರಿತು ಮಾತನಾಡುತ್ತಾಳೆ. ಸಾಮಾನ್ಯರಿಗೆ ಶಾಕ್ ಉಂಟುಮಾಡಬಹುದಾದ ಸತ್ಯಗಳು. ಈ ಪುಟ್ಟ ಹುಡುಗಿಯ ತಲೆಯಲ್ಲಿ ಅಡಗಿರುವ ಸತ್ಯಗಳು ಇನ್ನೂ

ಏನೇನೋ ಎಂದು ರಮೇಶನಿಗೆ ಆಶ್ಚರ್ಯವಾಗುತ್ತದೆ. ತನಗೆ ಏನೆನಿಸುತ್ತದೆ ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳಲು ರಮೇಶ ಪ್ರಯತ್ನಿಸಿದ. ಯಾರ ಬಗ್ಗೆಯೂ ಕೋಪ/ತಾಪವಿಲ್ಲದೇ ಮಾತನಾಡುವ ಗಂಗಾಳ ಬಗ್ಗೆ ಒಂದು ರೀತಿಯ ವೇದನೆ ಎನಿಸುತ್ತದೆ. ಗಂಗಾ ಈಗಲೂ ಅಥಾರಿಟೇಟಿವ್ ಆಗಿ ಒಟ್ಟಿಗೆ ಬದುಕೋಣ ಎಂದರೆ ತಾನು ಸಿದ್ಧ. ಗಂಗಾ ಏನಾಗಿದ್ದಳೋ ತಾನು ಕಂಡವನಲ್ಲ. ಆಕೆ ಹೀಗೆ, ಹೀಗೆ ಎಂದು ಬಿಡಿಸಿ ಹೇಳಿದರೂ ತನ್ನ ಮನಸ್ಸಿನಲ್ಲಿರುವುದು ತಾನು ಕಂಡ ಗಂಗಾ ಮಾತ್ರ. ಅದೇ ಬೆಚ್ಚನೆಯ ಸ್ನೇಹದ ಬೆಚ್ಚನೆ ಮಮತೆಯ ಗಂಗಾ. ಅದೇ ಗಂಡುತನಗಳನ್ನು ಹೊಂದಿದ ಗಂಗಾ. ಈಗಲೂ ತಾನು ಗಂಗಾಳಿಗೆ ಶರಣಾಗುವುದು ಈ ಗುಣಗಳಿಗಾಗಿಯೇ. ಎದುರಿಗಿರುವ ಗಂಗಾ ಮಾತ್ರ ತನಗೆ ಅರ್ಥವಾಗುವುದು. ರಮೇಶ-ಗಂಗಾರ ನಡುವೆ ಅಗಾಧ ಮೌನ ಮೂಡಿದಾಗ ಇಬ್ಬರಿಗೂ ಮುಜುಗರವಾಗುತ್ತದೆ. ಏನನ್ನಾದರೂ ಮಾತನಾಡುವ ಜವಾಬ್ದಾರಿಯಿಂದ ರಮೇಶನೇ ಮಾತನಾಡಬೇಕಿತ್ತು. ರಮೇಶನಿಗೆ ಏನು ಮಾತನಾಡಿದರೆ ಸೂಕ್ತವಾದೀತು ಎಂಬುದು ಹೊಳೆಯಲೇ ಇಲ್ಲ. ಗಂಗಾ ಮಾತನಾಡುವಂತೆ ರಮೇಶನನ್ನು ಒತ್ತಾಯಿಸಲೂ ಇಲ್ಲ. ಆಕೆಯ ಮನಸ್ಸಿಗೆ ಒಂದು ರೀತಿಯ ಸಮಾಧಾನವೆನಿಸಿತ್ತು. ಏನಾದರೂ ಈಗಿನ ಆಯ್ಕೆ ರಮೇಶನದು. ನಿರ್ಧಾರ ಕೂಡಾ ಅವನದೇ. ಈ ಇಡಿಯ ಸಂದರ್ಭದಲ್ಲಿ ರಮೇಶನಿಗೆ ನೋವಾಗಬಾರದು, ಆತನ ಇಡಿಯಾಗಿರುವ ಮುಗ್ಧ ಮನಸ್ಸೊಂದನ್ನು ತಾನು ಹುಡಿ ಹುಡಿಯಾಗಿಸಬಾರದು, ಆತನ ಮನಸ್ಸಿನ ಮೇಲೆ ಅಡ್ಡಾ-ದಿಡ್ಡಿ ಗೆರೆಗಳನ್ನು ಎಳೆಯಬಾರದು ಎಂಬ ಕಾರಣಕ್ಕಾಗಿಯೇ ಈ ಎಲ್ಲದನ್ನೂ ಹೇಳಲು ಗಂಗಾ ಇಷ್ಟಪಟ್ಟಿದ್ದಳು. ಯಾವುದೋ ಮ್ಯಾಗ್‌ಜೈನ್ ತಿರುವುತ್ತಾ ಕುಳಿತ ಗಂಗಾ ಕೊನೆಗೆ 'ನಾನು ಸ್ವಲ್ಪ ಹೊತ್ತು ಮಲಗಿಬಿಡುತ್ತೇನೆ ರಮೇಶ್' ಎಂದು ಹೇಳಿ ಮಲಗಿಬಿಟ್ಟಳು. ಮನಸ್ಸಿನ ಭಾರ ಕಡಿಮೆಯಾದುದಕ್ಕೋ, ಹೃದಯದ ಭಾರ ತಗ್ಗಿದಂತೆ ಅನ್ನಿಸಿದುದಕ್ಕೋ ಆಕೆ ಹೊರಳಿ ನಿದ್ರೆ ಮಾಡತೊಡಗಿದಾಗ ರಮೇಶನಿಗೆ ಹಾಯ್ ಎನಿಸುತ್ತದೆ. ಆಗಲೇ ಎರಡು ಘಂಟೆಯಾಗತೊಡಗಿತ್ತು. ಗಂಗಾ ಊಟವನ್ನೇ ಮಾಡಿಲ್ಲವಲ್ಲ ಎನ್ನಿಸಿದಾಗ ಹೋಟೆಲ್‌ನಿಂದ ಕಟ್ಟಿಸಿಕೊಂಡು ಬರೋಣವೆಂದು ಆತ ಮೇಲೆ ಎದ್ದನು. ಯಾಕೋ ಗಂಗಾಳೊಬ್ಬಳನ್ನೇ ಬಿಟ್ಟು ಹೋಟೆಲ್‌ಗೆ ಹೋಗಲು ಬೇಸರವೆನಿಸಿ ಮತ್ತೆ ಕುಳಿತುಕೊಂಡನು. ಫ್ರಿಜ್‌ನಲ್ಲಿ ಮೊಸರು ಇತ್ತು. ಅನ್ನ/ಸಾರು ಮಾಡಿಬಿಟ್ಟರೆ ಹೇಗೆ ಎಂದು ಯೋಚಿಸಿ ಅಕ್ಕಿ ತೊಳೆದು ಅನ್ನಕ್ಕೆ ಇಟ್ಟನು. ಏನು ಸಾರು ಮಾಡಿದರೆ ಗಂಗಾಗೆ ಇಷ್ಟವಾಗಬಹುದು ಎಂದು ಒಂದು ಕ್ಷಣ ಯೋಚಿಸಿದ. ಬೇಳೆ, ಟೊಮ್ಯಾಟೋ ಹಾಕಿ ಸಾರಿಗೆ ಇರಿಸಿದ. ಗಂಗಾಳಿಗೆ ಚಿಕನ್ ಪೀಸ್ ಇಷ್ಟ ಎಂದು ಆ ಅಂಗಡಿಯಲ್ಲಿ ಬಿಸಿಬಿಸಿಯಾಗಿ ಬೇಯಿಸುತ್ತಿದ್ದ ಚಿಕನ್ ಪೀಸ್ ತಂದಿಟ್ಟ. ಗಂಗಾ ಎದ್ದ ಮೇಲೆ ಊಟ ಮಾಡುವುದೆಂದು ನಿರ್ಧರಿಸಿ ಪೇಪರ್ ಓದುತ್ತಾ ಕುಳಿತ. ಇಷ್ಟು ಹೊತ್ತು ಆತಂಕದಿಂದ, ಉದ್ವೇಗದಿಂದ ಮಾತನಾಡುತ್ತಾ ಇದ್ದ ಗಂಗಾ ಎಷ್ಟು ಹಾಯಾಗಿ ಮಲಗಿದ್ದಾಳೆ ಎಂಬುದನ್ನು ಗಮನಿಸುವಾಗ ಆತನಿಗೆ ಆಶ್ಚರ್ಯ ಅನ್ನಿಸುತ್ತದೆ. ಚಿಕನ್ ಪೀಸ್‌ಗಳು ಆರಿಹೋಗುತ್ತವೆ ಎಂಬ ಕಾರಣಕ್ಕಾಗಿಯೂ ಆಕೆಯನ್ನು ಎಬ್ಬಿಸಬೇಕು ಎಂದು ಆತನಿಗೆ ಅನ್ನಿಸಲಿಲ್ಲ. ಮತ್ತೆ ಬಿಸಿ ಮಾಡಿದರಾಯಿತು ಎಂದುಕೊಂಡ. ಪೇಪರ್ ಎದುರಿಗೆ ಹಿಡಿದುಕೊಂಡರೂ ಗಂಗಾ ಆಡಿದ ಮಾತುಗಳ ಸುತ್ತವೇ ರಮೇಶನ ಮನಸ್ಸು ಗಿರಿಕಿ ಹೊಡೆಯುತ್ತಿತ್ತು. ಗಂಗಾ ತನ್ನ ಬೌದ್ಧಿಕತೆಗೆ, ವೈಚಾರಿಕತೆಗೆ ಮೀರಿದವಳು. ತಾನು ಗಂಗಾ ಹೇಳಿದ್ದನೆಲ್ಲ ತಂದೆ-ತಾಯಿಯರ ಬಳಿ ಹೇಳಲು ಸಾಧ್ಯವೇ? ಇದೆಲ್ಲ ಅವರ ಬಳಿ ಹೇಳಿದರೆ ಗಂಗಾಳನ್ನು ತಾನು ಮದುವೆಯಾಗಲು ಅವರು ಒಪ್ಪುವರೇ? ಅಮ್ಮ-ಅಪ್ಪ-ತಂಗಿಯರೊಡನೆ ಅಷ್ಟೊಂದು ಆತ್ಮೀಯವಾಗಿ ಬೆಳೆದ ತಾನು ಎಲ್ಲಾ ಸಂಬಂಧಗಳನ್ನು ಕಡಿದುಕೊಂಡೇ ಗಂಗಾಳ ಜೊತೆಗೆ ಜೀವನ ನಡೆಸಬೇಕಾಗುತ್ತದೆ. ತನಗೆ ಇದು ಸಾಧ್ಯವಾಗುತ್ತದೆಯೇ? ಗಂಗಾ ಸಂಪ್ರದಾಯಸ್ಥ ಮದುವೆಗೆ ಒಪ್ಪುವಳೇ? ತಾಳಿ-ಗೀಳಿ ಕಟ್ಟಿಸಿಕೋ ಎಂದರೆ ಗಂಗಾ ನಕ್ಕೇಬಿಡುತ್ತಾಳೆ. ಇವೆಲ್ಲವನ್ನು

ಅರಗಿಸಿಕೊಳ್ಳಲು ತನಗೇ ಸಮಯ ಬೇಕು. ಇಂತಹ ವಿಚಾರಗಳನ್ನು ಸಂಪ್ರದಾಯಬದ್ಧವಾಗಿ ಬೆಳೆದ ತನ್ನ ಅಪ್ಪ-ಅಮ್ಮನಿಗೆ ಹೇಳಿದರೆ ಸಾಕು ಉರಿದು ಬೀಳುತ್ತಾರೆ ಅಷ್ಟೇ! ಗಂಗಾಳನ್ನು ಕಣ್ಣೆತ್ತಿ ಕೂಡಾ ನೋಡುವುದಿಲ್ಲ ಅವರು. ಜಾತಿಯಿಂದ ಪ್ರಾರಂಭವಾಗುವ ಅವರ ಸಮಸ್ಯೆ ತಾಳಿಯಿಲ್ಲದ ಮದುವೆ ಎಂಬಂತಹ ವಿಚಾರ ಕೇಳಿದರೆ ಸಾಕು - ಮುಖ ತಿರುಗಿಸಿಬಿಡುತ್ತಾರೆ ಅಷ್ಟೇ! ತಾನು ಗಂಗಾಳೊಟ್ಟಿಗೆ ಬದುಕು ಪ್ರಾರಂಭಿಸುತ್ತೇನೆ ಎಂದು ಅವರಿಗೆ ಹೇಗೆ ಹೇಳುವುದು? 'ಸೊಸೆ' ಎನ್ನುವಂತಹ ಕಲ್ಪನೆಯನ್ನು ಈಗಿರುವ ವ್ಯವಸ್ಥೆಯ ಹಂತದಲ್ಲಿ ಒಪ್ಪಿಕೊಂಡು ಬದುಕುವ ಹುಡುಗಿಯೇ ಅಲ್ಲ ಗಂಗಾ. ಒಂದು ವೇಳೆ ಗಂಗಾಳನ್ನೇ ದೂರ ಸರಿಸಿಬಿಟ್ಟರೆ? ಈ ಆಲೋಚನೆಯಿಂದಲೇ ರಮೇಶನ ಕಣ್ಣಲ್ಲಿ ನೀರು ಬರುತ್ತದೆ. ಇಷ್ಟೊಂದು ದಿನ ಪರಾವಲಂಬಿತನದ ಮನಸ್ಸು ಹೊಂದಿದ ತನ್ನ ಮನಸ್ಸು, ಬದುಕಿನ ಭಾವನೆಗಳನ್ನು ತಿದ್ದಿ, ಭರವಸೆಗಳನ್ನು ತುಂಬಿದವಳೇ ಗಂಗಾ. ಅವಳೇನಾಗಿದ್ದಳೋ ಅದು ಮುಖ್ಯವಲ್ಲ ತನಗೆ. ತನಗೆ ದಕ್ಕಿದ ಗಂಗಾಳಷ್ಟೇ ತನಗೆ ಮುಖ್ಯ. ಭಾರತಕ್ಕೆ ಮರಳಿದ ಮೇಲಿನ ಯೋಚನೆಗಳು ಈಗೇಕೆ? ಗಂಗಾ ಜರ್ಮನಿಗೆ ಹೋದಾಗ ತನಗೆಷ್ಟು ಒಂಟಿ ಅನ್ನಿಸಿರಲಿಲ್ಲ? ಜೀವನದ ಉತ್ಸಾಹವನ್ನೇ ಗಂಗಾ ಜರ್ಮನಿಗೆ ಕಿತ್ತುಕೊಂಡು ಹೋದ ಹಾಗೆ ಆತನಿಗೆ ಅನ್ನಿಸಿತ್ತು. ಗಂಗಾ ತನ್ನ ಜೊತೆ ಬದುಕಲು ನಿರ್ಧರಿಸಿದರೆ ಅದು ತನ್ನ ಅದೃಷ್ಟ ಎಂದೇ ಹೇಳಬೇಕು. ಇಂತಹವುಗಳನ್ನೆಲ್ಲ ಮಾತನಾಡಿ ಸ್ಪಷ್ಟ ಮಾಡುವುದು ಹೇಗೆ? ಗಂಗಾ ಮಾತನಾಡಿದ್ದಳು. ತನ್ನ ಮುಗ್ಧತೆಯ ಮೇಲೆ ವಿಚಿತ್ರಗೆರೆ ಗೀಚಬಾರದೆಂಬ ಜವಾಬ್ದಾರಿಯಿಂದ ಮಾತನಾಡಿದ್ದಳು. ತನಗೆ ಉತ್ತರದ ಜವಾಬ್ದಾರಿ ಹೊರಿಸಿ ಮಲಗಿದ್ದಾಳೆ. ಇಂತಹವುದಕ್ಕೆಲ್ಲ ಸ್ಪಷ್ಟ ಉತ್ತರ ಹೇಗೆ ಕೊಡುವುದು? 'ಗಂಗಾ ನೀನು ನನಗೆ ಬೇಕು' - ಎಂದು ಗಂಗಾಗೆ ಬಾಯಿಬಿಟ್ಟು ಹೇಗೆ ಹೇಳುವುದು? ನಿನ್ನ ವ್ಯಕ್ತಿತ್ವದ ಭಾಗವಾಗಿಯೇ ನಾನು ಜೀವನವೆಲ್ಲ ಬೆಳೆಯಬೇಕಾಗಿದೆ ಎಂದು ಆಕೆಗೆ ಹೇಗೆ ನಂಬಿಸಲಿ? ಈ ಎಲ್ಲಾ ಯೋಚನೆಗಳಿಗೆ ಮುಕ್ತಾಯ ಹಾಡುವವನಂತೆ ರಮೇಶ್ ಟೇಪ್‌ರೆಕಾರ್ಡರ್ ಆನ್ ಮಾಡಿದ. ಹಾಡು ಕೇಳುತ್ತಾ ಟೇಬಲ್‌ಗೆ ತಲೆಯಾನಿಸಿದ ರಮೇಶ್ ಯಾವಾಗ ನಿದ್ದೆ ಮಾಡಿದನೆಂಬುದು ಆತನಿಗೇ ತಿಳಿಯಲಿಲ್ಲ. ಆತನಿಗೆ ಎಚ್ಚರವಾದಾಗ ಸಾಯಂಕಾಲ ಐದು ಘಂಟೆ. ಗಂಗಾ ಮಲಗಿಯೇ ಇದ್ದಳು. ರಮೇಶ ಮಾಡಿಟ್ಟ ಅಡಿಗೆಯ ಬಿಸಿಯೆಲ್ಲಾ ಆರಿಹೋಗಿತ್ತು. ರಮೇಶ ಎಲ್ಲವನ್ನೂ ಬಿಸಿ ಮಾಡಿ 'ಗಂಗಾ' ಎಂದು ನಿಧಾನವಾಗಿ ಕೂಗಿದ. ಗಂಗಾ ಕಣ್ತೆರೆದಳು. ಕೆಂಪು-ಕೆಂಪಾಗಿದ್ದ ಕಣ್ಣುಗಳಲ್ಲಿ ರಮೇಶ ಮಂಜು ಮಂಜಾಗಿ ಕಂಡ. ಪಕ್ಕಕ್ಕೆ ನಿಂತ ರಮೇಶನ ಕೈ ಹಿಡಿದಳು ಗಂಗಾ. ಬೆಚ್ಚನೆಯ ಕೈಗಳು. ನಿಧಾನವಾಗಿ ರಮೇಶ ಗಂಗಾಳ ಎದೆಯ ಮೇಲೊರಗಿದ. ಮಾತನಾಡಲಾಗದಿದ್ದ ಎಷ್ಟೋ ಅಂಶಗಳನ್ನು ರಮೇಶ ತನ್ನ ದೇಹದ ಬೆಚ್ಚನೆಯ ಲಯಗಳಲ್ಲಿ ಗಂಗಾಳಿಗೆ ಸ್ಪಷ್ಟಪಡಿಸಲು ಪ್ರಯತ್ನಿಸಿದ್ದ.

* * * * *

ಅದೊಂದು ದಿನ ಗಂಗಾ ಮತ್ತು ರಮೇಶ್ ಆಮ್‌ಸ್ಟರ್‌ಡಮ್‌ಗೆ ಹೊರಟು ನಿಂತಿದ್ದರು. ಆಮ್‌ಸ್ಟರ್‌ಡಮ್ ಗಂಗಾ ಪ್ರೀತಿಸಿದ ಮತ್ತೊಂದು ನಗರ. ಮೇಲ್‌ನೋಟಕ್ಕೆ ಡೆನ್‌ಹಾಗ್‌ನಂತೆ ಕಂಡರೂ ಒಳಗೆ ಹೋಗುತ್ತಾ ಹೋದಂತೆ ಬೆಂಗಳೂರಿನ ಕಲಾಸಿಪಾಳ್ಯಂನಂತೆ ಕೊಳಕಾದ ರಸ್ತೆ, ಗಲ್ಲಿಗಳೂ ಕಂಡು ಬಂದಾಗ ಗಂಗಾ ನಡುಗಿದ್ದಳು. ಗಲ್ಲಿಗಳಲ್ಲಿ ಕಿತ್ತಾಡುವ ಜನ, ಬಡತನದ ಬೇಗೆಯಲ್ಲಿ ದಾರಿಯಲ್ಲಿ ನೃತ್ಯ ಮಾಡುವವರು, ಗಲ್ಲಿಗಳಲ್ಲಿ ಜಗಳ ಆಡುವವರು, ಮಾದಕ ವಸ್ತುಗಳನ್ನು ಸೇವಿಸಿ ದಾರಿಯಲ್ಲಿ ತೂರಾಡುವವರ ಮಧ್ಯೆ ಬದುಕಿನ ಮತ್ತೊಂದು ಮುಖವನ್ನು ಗಂಗಾ ಕಂಡದ್ದುಂಟು. ಆಮ್‌ಸ್ಟರ್‌ಡಮ್‌ಗೆ ಗಂಗಾ ಹೋದದ್ದು ಪ್ರಥಮ ಬಾರಿ ಏನೂ ಅಲ್ಲ. ಹೀಗೆಯೇ ತನ್ನ ಮಹಿಳಾ ಅಧ್ಯಯನದ ಭಾಗವಾಗಿ

ಗಂಗಾ ಅಲ್ಲಿಗೆ ಒಂದು ಗುಂಪು ಮಹಿಳೆಯರೊಟ್ಟಿಗೆ ಹೋದುದುಂಟು. ಅದು ರೆಡ್‌ಲೈಟ್ ಏರಿಯಾ. ಅಲ್ಲಿ ಕೆಂಪು-ಕೆಂಪು ನಿಯಾನ್ ಬಲ್ಬುಗಳಿಂದ ರಂಗು ರಂಗಾದ ರಸ್ತೆಗಳು ಕಣ್ಣು ಕುಕ್ಕುತ್ತಿದ್ದವು. ಗಂಗಾಳೊಟ್ಟಿಗಿದ್ದ ಗೆಳತಿಯರು 'ಅಲ್ಲಿ ನೋಡು' - ಎಂದು ಬೇರೆಯ ಕಡೆ ಗಂಗಾಳ ಗಮನ ಸೆಳೆದಿದ್ದರು. ಕೆಂಪು ದೀಪದ ಕೆಳಗೆ ಪುಟ್ಟದಾದ ಅಚ್ಚುಕಟ್ಟಾದ ಗಾಜಿನ ಮನೆ. ವರಾಂಡದಲ್ಲಿ ನಿಂತ ಹೆಂಗಸು ಸಿಗರೇಟು ಸೇದುತ್ತಾ ನಿಂತಿದ್ದಳು. ಮುಚ್ಚಿರುವ ಗಾಜಿನ ಬಾಗಿಲಿನಿಂದ ಆಕೆ ಎತ್ತಲೋ ದೃಷ್ಟಿ ಹಾಯಿಸುತ್ತಿರುವುದು ಗಂಗಾಗೆ ಕಂಡಿತ್ತು. ಆ ಪ್ರದೇಶದಲ್ಲಿ ಎಲ್ಲೆಲ್ಲಿಯೂ free sex shopಗಳು ಇರುವುದನ್ನು ಗಂಗಾ ಆನಂತರ ಕಂಡಿದ್ದಳು. ಹೀಗೆಯೇ ಗೆಳತಿಯರೊಟ್ಟಿಗೆ ನಡೆದಾಗ ಇಬ್ಬರು ಹೆಂಗಸರು ಕೇವಲ ಬ್ರೆಸಿಯರ್, ಚಡ್ಡಿಗಳಲ್ಲಿ ಮಾತ್ರ ನಿಂತುಕೊಂಡು ಮೇಕಪ್ ಮಾಡಿಕೊಳ್ಳತೊಡಗಿದ್ದರು. ಇದ್ದಕ್ಕಿದ್ದ ಹಾಗೆ ಗಂಗಾಳ ಮನಸ್ಸು ಒಳಸರಿಯತೊಡಗಿತ್ತು. ಆಮ್‌ಸ್ಟರ್‌ಡಮ್‌ನ ಸಂಪತ್ತು ಹೀಗೇ ಈ ಮಹಿಳೆಯರ ಬಿಳಿಯ ದೇಹಗಳ ಕೊಳ್ಳೆ ಹೊಡೆದು ಹುಟ್ಟಿಕೊಂಡಿರಬಹುದೇ ಎಂಬ ವಿಚಿತ್ರವಾದ ಅನಿಸಿಕೆಯೊಂದು ಆಕೆಯಲ್ಲಿ ಸುಳಿದು ಹೋಗಿತ್ತು. ಕ್ಯಾಪಿಟಲಿಸಂ ದೇಹಗಳನ್ನು ತುಂಡು ತುಂಡಾಗಿಸಿ ಮಾರಾಟಕ್ಕಿಡುತ್ತದೆ. ಇಲ್ಲಿ ಇಡಿಯಾದದ್ದು ಏನೂ ಅಂದರೆ ಮನಸ್ಸು, ದೇಹಗಳೂ ಕೂಡಾ ಸಿಕ್ಕುವುದಿಲ್ಲವೇನೋ ಎನ್ನುವ ವಿಚಿತ್ರ ದಿಗಿಲು. ಹೀಗೆಯೇ ಸುಳಿದಾಡುವ ಹಲವಾರು ರೀತಿಯ ಗಂಡಸರನ್ನು ಗಂಗಾ ಅಲ್ಲಿ ಕಂಡಿದ್ದಳು. ಮಾರ್ಕೆಟ್‌ನಲ್ಲಿ ಮೀನು ಕೊಳ್ಳುವ ಹಾಗೆ ಓಡಾಡುತ್ತಾರೆ. ಆಗಷ್ಟೇ ಆತನೊಡನೆ ಮಲಗಿ ಎದ್ದಿರಬಹುದಾದ ಹೆಂಗಸೋರ್ವಳು ಬಾಗಿಲಲ್ಲಿ ಆತನನ್ನು ಬೀಳ್ಕೊಟ್ಟು ಮತ್ತೆ ಮೇಕಪ್ ಮಾಡುತ್ತಾ ಕೂರುತ್ತಾಳೆ. ಆಮ್‌ಸ್ಟರ್‌ಡಮ್‌ನ ಜೊತೆ ಗಂಗಾಳ ನೆನಪಿನಲ್ಲಿ ತೆಕ್ಕೆ ಹಾಕಿಕೊಂಡದ್ದು ಕಮುವಿನ ಸಾಹಿತ್ಯದ ಬಾರ್....... ಈಗ ಅದರ ಬದಲು ದೇಹ ತೆರೆದುಕೊಂಡು, ಮೊಲೆ, ಅಂಡು ಕುಣಿಸಿಕೊಂಡು, ನಿಯಾನ್ ಕೆಂಪು ದೀಪಗಳ ಬೆಳಕಿನಲ್ಲಿ ಕುಣಿಯುವ ಹೆಂಗಸರು ಗಂಗಾಗೆ ನೆನಪಾಗುತ್ತಾರೆ. ಹೀಗೆಯೇ ಗಂಗಾ ಏನೇನೋ ಯೋಚಿಸುತ್ತಾ ನಿಂತಿರುವಾಗ ಗಂಗಾಳ ಗೆಳತಿಯರು ಅಲ್ಲಿಯೇ ಒಂದು ಫೋಟೋ ತೆಗೆಯುವ ಕಾರ್ಯಕ್ರಮದಲ್ಲಿ ನಿರತರಾಗಿದ್ದರು. ಗಂಗಾ ಗಾಜಿನ ಬಾಗಿಲುಗಳೊಳಗೆ ವ್ಯವಹರಿಸುತ್ತಿದ್ದ ಹೆಂಗಸೋರ್ವಳನ್ನು ನೋಡುತ್ತಲೇ ಇದ್ದಳು. ಚೋಟುದ್ದದ ಚಡ್ಡಿ, ಬ್ರಾ ಬಿಟ್ಟರೆ ಆಕೆಯ ಮೈ ಮೇಲೆ ಇನ್ನೇನೂ ಕೂಡಾ ಕಾಣಿಸುತ್ತಿರಲಿಲ್ಲ. ಕೆಲವು ಸಲ ಅದು ಹೆಂಗಸೋ, ಬೊಂಬೆಯೋ ಎನ್ನುವ ಅನುಮಾನ ಬರುವ ಹಾಗೆ ಕಾಣಿಸುತ್ತಿತ್ತು. ಆಕೆ ಕೈ-ಕಾಲು ಚಲಿಸಿ ವ್ಯವಹಾರ ಮಾಡುವಾಗ ಮಾತ್ರ ಜೀವಂತ ವ್ಯಕ್ತಿಯ ರೀತಿ ಅನ್ನಿಸಿತು. ಹೀಗೆಯೇ ಗಮನಿಸುತ್ತಾ ನಿಂತಿದ್ದ ಗಂಗಾಗೆ ತಮ್ಮ ಪಕ್ಕದಲ್ಲಿಯೇ ಗಲಾಟೆಯಾಗುವುದು ಅರಿವಿಗೆ ಬಂದದ್ದು ಎಷ್ಟೋ ಸಮಯದ ನಂತರ. ಫೋಟೋ ತೆಗೆಯುವ ಜಾಗದಲ್ಲಿ ಸಾಕಷ್ಟು ಗಂಡಸರು ಸೇರಿಕೊಂಡಿದ್ದರು. ಮಧ್ಯ ವಯಸ್ಸಿನ ಗಂಡಸೊಬ್ಬ ಗಂಗಾಳ ಕಡೆಗೆ ನೋಡಿ ಕಣ್ಣು ಹೊಡೆದ. ಗಂಗಾ ಸರಕ್ಕೆಂದು ಮಹಿಳೆಯರ ಗುಂಪಿನ ಒಳಕ್ಕೆ ಸೇರಿಕೊಂಡುಬಿಟ್ಟಿದ್ದಳು. ಆ ಗಂಡಸರು ಈ ಫೋಟೋ ಕಾರ್ಯಕ್ರಮದ ಬಗ್ಗೆ ಕುತೂಹಲ ತೋರುತ್ತಿದ್ದರು. ಇಬ್ಬರು ಮಹಿಳೆಯರು ಸಿಗರೇಟು ಸೇದುತ್ತಾ ತಮ್ಮೊಳಗೇ ಏನನ್ನೋ ಚರ್ಚೆ ಮಾಡುತ್ತಿದ್ದರು. ನಂತರ ಫೋಟೋ ತೆಗೆಯುವುದನ್ನು ನಿಲ್ಲಿಸಿ ಎಂದು ತಮ್ಮೊಟ್ಟಿಗೆ ಜಗಳ ಪ್ರಾರಂಭಿಸಿದರು. ಈ ಸ್ಟ್ರೀಟ್‌ನಲ್ಲಿ ಯಾಕೆ ಫೋಟೋ ತೆಗೆಯುತ್ತೀರಿ? ನೀವು ಹೀಗೆ ಸಿನೆಮಾ ಮಾಡಿ ಹಣ ಗಳಿಸುತ್ತೀರಿ. ನಮಗೇನು ಸಿಗುತ್ತದೆ, ಹೊರಟು ಹೋಗಿ ಎಂದು ಕೂಗಿದ್ದರು. ತಮ್ಮೊಡನಿದ್ದ ಡಚ್ ಹೆಂಗಸರು ಕೊನೆಗೆ ಬೇಡ ಎಂದು ಅಲ್ಲಿಂದ ಹೊರಟು ಬಂದಿದ್ದರು. ಈಗ ಆಮ್‌ಸ್ಟರ್‌ಡಮ್ ಎಂದರೆ ಗಂಗಾಗೆ ನಿಯಾನ್ ದೀಪದ ಬೆಳಕು, ಚಡ್ಡಿ-ಬ್ರಾ ಧರಿಸಿ ಮೇಕಪ್

ಮಾಡುವ, ಕಣ್ಣು-ಅಂಡು, ಮೊಲೆ ಕುಣಿಸುತ್ತಾ ಕರೆಯುವ ಬಿಳಿಯ ಹೆಂಗಸರ ಜೊತೆ ತೆಕ್ಕೆ ಹಾಕಿಕೊಂಡುಬಿಟ್ಟಿದೆ. ರಮೇಶನೊಟ್ಟಿಗೆ ಆಮ್‌ಸ್ಟರ್‌ಡಮ್‌ನ ಮೂಲೆ ಮೂಲೆ ತಿರುಗಿದ ಗಂಗಾ ಕೊನೆಗೆ ರೆಡ್‌ಲೈಟ್ ಏರಿಯ ತೋರಿಸುತ್ತೇನೆ ಬಾ ಎಂದು ರಮೇಶನನ್ನು ಕರೆದಳು. ರಮೇಶ ಹಿಂಜರಿದ. 'ಯಾಕಾಗಿ ಅಲ್ಲಿಗೆ ಹೋಗಬೇಕು?' ಎಂದ. 'ಬದುಕಿಗೆ ನಾನಾ ಮುಖಗಳಿವೆ ಎಂದು ಗೊತ್ತಿದ್ದರೆ ತಪ್ಪಿಲ್ಲ ಬಾ' ಎಂದು ಗಂಗಾ ರಮೇಶನ ಕೈ ಹಿಡಿದು ಜಗ್ಗಿದಳು. ಬೀಚ್‌ಗಳಲ್ಲಿ ತಿರುಗುವಾಗ ಮಂಜುಗಡ್ಡೆಯ ಮಧ್ಯೆ ತಲೆಯೆತ್ತಿ ನಿಂತ ಸೌಧಗಳು, ಕಿವಿಗೆ ತಂಪನ್ನೀಯುವ ತಂಪಾದ ಮುಖದ ಸಂಗೀತದ ಮುಖಗಳಿಗಿಂತ ಆಮ್‌ಸ್ಟರ್‌ಡಮ್‌ಗೆ ಬೇರೆಯದೇ ಆದ ಮುಖವೊಂದಿದೆ ಬಾ ಎಂದು ಮತ್ತೆ ರಮೇಶನ ಕೈ ಹಿಡಿದು ಎಳೆದಳು. ರಮೇಶನ ಸಂಕೋಚ, ಹಿಂಜರಿತ ಇಂತಹವುಗಳು ಭಾರತವನ್ನ, ಭಾರತದ ಹೆಂಗಸರನ್ನ ರಕ್ಷಿಸುವಂತಹ ಗುಣಗಳಾಗಿಬಿಡಬಹುದು ಎನ್ನುವ ಭಾವನೆಯೊಂದು ಗಂಗಾಳಲ್ಲಿ ಮೂಡಿ ಮಾಯವಾಯಿತು. ಮಧ್ಯ ವಯಸ್ಸಿನ ಗಂಡಸರು ಚಿಕ್ಕ ಹುಡುಗರನ್ನು ಜೀವನಕ್ಕೆ ಪರಿಚಯಿಸುವ ರೀತಿಯಲ್ಲಿ ತಾನು ರಮೇಶನನ್ನು ಕರೆದೊಯ್ಯುತ್ತಿದ್ದೇನೇನೋ ಎಂಬ ಭಾವನೆಯೂ ಆಕೆಯಲ್ಲಿ ಸುಳಿಯದಿರಲಿಲ್ಲ. ಸುಮಾರು ಸಂಜೆ ಏಳರ ಸಮಯದಲ್ಲಿ ಗಂಗಾ-ರಮೇಶ್ ಆ ಪ್ರದೇಶದಲ್ಲಿ ಓಡಾಡತೊಡಗಿದ್ದರು. ಅದೇ ನಿಯಾನ್ ಬೆಳಕುಗಳು, ಸಂಭೋಗದ ಚಿತ್ರಗಳು, ಗೋರ್ ಎನ್ನುವ ಸಂಗೀತ, ಬಾಗಿಲುಗಳಲ್ಲಿ ನಡೆಯುವ ವ್ಯವಹಾರ, ಚಡ್ಡಿ, ಬ್ರಾ ಧರಿಸಿ ಮೈ ಕುಣಿಸುತ್ತಾ ನಿಂತ ಹೆಂಗಸರು, ಅಲ್ಲಿ-ಇಲ್ಲಿ ನಡೆಯುವ ಪೋಲೀಸರು, ಬಗಲಿಗೆ ಬಗಲು ಸೇರಿಸಿ ಗುಂಪುಗಳಲ್ಲಿ ನಡೆಯುತ್ತಾ ವ್ಯವಹಾರ ಮಾಡುವ ಗಂಡಸರು - ಕಾಮದ ರಾಜಕೀಯ-ಬಂಡವಾಳಶಾಹಿ ವ್ಯವಸ್ಥೆಯ ಅನಿವಾರ್ಯ ಭಾಗವೆಂಬಂತೆ ನೆಲೆ ನಿಂತಿರುವುದನ್ನು ಕಂಡಾಗ ಗಂಗಾಗೆ ಭಯ ಆಗುತ್ತದೆ. ಇಂತಹ ಆಲೋಚನೆಗಳು ಗಂಗಾಳನ್ನು ಆವರಿಸಿಕೊಳ್ಳುತ್ತಿರುವಾಗಲೇ 'ಹೋಗೋಣ ಬಾ' ಎಂದು ರಮೇಶ ಆಕೆಯನ್ನು ಎಳೆಯತೊಡಗಿದ. 'ಈ ಜಗತ್ತಿಗೆ ನನ್ನನ್ನು ಏಕೆ ಕರೆ ತಂದೆ?' ಎಂದ. ಆತನ ಧ್ವನಿಯಲ್ಲಿರುವ ವೇದನೆಯನ್ನು ಗಂಗಾ ಗುರುತಿಸಿದ್ದಳು. 'ಮತ್ತೊಬ್ಬಳೇ ಈ ಕಡೆಗೆ ಬರುವ ಸಾಹಸ ಮಾಡಬೇಡ ಗಂಗಾ' ಎಂದ. 'ಅಲ್ಲಿ ನೋಡು' ಎಂದು ಬೊಜ್ಜು ಮೈಯಿನ ಹೆಂಗಸೋರ್ವಳು ಮೈ ಕುಣಿಸುತ್ತಾ ನಿಂತುದನ್ನು ತೋರಿಸಲು ರಮೇಶನಿಗೆ ಕೈ ಎಳೆದರೆ ಆತ ತಿರುಗಿ ನೋಡಲಿಲ್ಲ. 'ನೀನು ನೋಡು, ನನಗೆ ಈ ಲೋಕವೇ ಬೇಡ' ಎಂದ. 'ಈ ಪ್ರದೇಶದಿಂದ ಆಚೆ ಹೋಗೋಣ ಬಾ' ಎಂದು ಅವಸರಿಸತೊಡಗಿದ್ದ. 'ನನಗೆ ಬೇಡದ ಜಗತ್ತು ಇದು, ಏಕೆ ತೋರಿಸಲು ಕರೆತಂದಿ?' ಎಂದ. 'ಇದೆಲ್ಲ ನೋಡಿದರೆ ಮದುವೆಯಾಗದೇ ಇರುವ ನನ್ನ ಅಕ್ಕ-ತಂಗಿಯರು ನೆನಪಾಗುತ್ತಾರೆ' ಎಂದ. ಅಷ್ಟೊಂದು ಹೊತ್ತು ಉಲ್ಲಾಸದಿಂದ ಫಕ್ಕನೇ ನಕ್ಕು ಮಾತನಾಡುತ್ತಿದ್ದ ರಮೇಶನ ಉತ್ಸಾಹವೆಲ್ಲಾ ಬತ್ತಿ ಹೋಗಿತ್ತು. ವಾಪಸ್ಸು ಹೋಗುವಾಗ ಆತ ಏನನ್ನೂ ಮಾತನಾಡದೇ ನಡೆಯುತ್ತಿದ್ದ. ಗಂಗಾಳ ಕೈಯನ್ನು ಬಿಗಿಯಾಗಿ ಹಿಡಿದು ನಡೆಯುತ್ತಿದ್ದ. ಆ ಬಿಗಿಯ ಹಿಡಿತದಲ್ಲಿ ತುಂಬಿದ್ದ ಭಯ/ಆತಂಕಗಳನ್ನು ಗಂಗಾ ಅರಿಯತೊಡಗಿದ್ದಳು. ರಮೇಶ ನಗುವುದನ್ನೇ ಮರೆತ ರೀತಿ ನಡೆಯತೊಡಗಿದ್ದ. ಆ ಕಡೆ-ಈ ಕಡೆ ನೋಡದೇ ನೇರವಾಗಿ ನಡೆಯತೊಡಗಿದ್ದ. ರಮೇಶನ ಬಗ್ಗೆ ಇದ್ದಕ್ಕಿದ್ದ ಹಾಗೆ ಅಗಾಧವಾದ ಗೌರವವೊಂದು ಗಂಗಾಳಲ್ಲಿ ಮೂಡತೊಡಗಿತ್ತು.

* * * *

ಯಥಾಪ್ರಕಾರ ಗಂಗಾ ತನ್ನ ಓದು, ಅಧ್ಯಯನ, ಸಂಶೋಧನೆಗಾಗಿ ತನ್ನ ಸಮಯ ಕಳೆಯತೊಡಗಿದ್ದಳು. ರೋಹಿಣಿಯ ಗೈಡೆನ್ಸ್‌ನಲ್ಲಿ ಭಾರತದ ಕಾರ್ಮಿಕ ಹಾಗೂ ಸ್ವಾಯತ್ತ ಮಹಿಳಾ ಚಳುವಳಿಯ ಕುರಿತಾದ ವಿಚಾರವಾಗಿ ಸಂಶೋಧನೆ ನಡೆಸುತ್ತಿದ್ದಳು. ರೋಹಿಣಿಯೊಡನೆ ಕೂತು

ಮಾತನಾಡುವುದೇ ಗಂಗಾಗೆ ಒಂದು ಅದ್ಭುತ ಅನುಭವ ಎನ್ನಿಸುತ್ತಿತ್ತು. ರೋಹಿಣಿ ಸ್ಪಷ್ಟವಾದ ವೈಚಾರಿಕ ನೆಲೆಯಲ್ಲಿ ಮಾತನಾಡುತ್ತಿದ್ದರು. ಆಕೆಗೆ ಚಳುವಳಿಯೊಡನೆ ಕೆಲಸ ಮಾಡಿದ ಅನುಭವವಿತ್ತು. ವೈಯಕ್ತಿಕ ಜೀವನದಲ್ಲಿ ನೋವಿನ ಅಲೆಗಳೂ ಸಾಕಷ್ಟಿದ್ದವು. ಹಾಗಾಗಿ ರೋಹಿಣಿ ತೀರಾ ಹತ್ತಿರದವರು ಎನ್ನುವಂತಹ ಭಾವನೆಯೊಂದು ಗಂಗಾಳಲ್ಲಿ ಸುಳಿಯುತ್ತಿತ್ತು. ಗಂಗಾ ರೋಹಿಣಿಯ ಮನೆಯಲ್ಲಿ ಕಳೆದ ದಿನಗಳು, ಮಾತನಾಡಿದ ವಿಚಾರಗಳು ಕೇವಲ ಆಕೆಯ ಚಳುವಳಿಯ ಅಧ್ಯಯನಕ್ಕೆ ಮಾತ್ರ ಸಂಬಂಧ ಪಟ್ಟುದಾಗಿರಲಿಲ್ಲ. ಗಂಗಾ ರೋಹಿಣಿಯೊಡನೆ ಎಷ್ಟೋ ವೈಯಕ್ತಿಕ ವಿಚಾರ ಮಾತನಾಡುವಳು. ರಮೇಶನ ಬಗ್ಗೆ ಹೇಳುವಳು. ವಿದ್ಯುತ್ ಅಲಂಕಾರಗಳಿಗೆ, ನಿಯಾನ್ ದೀಪಗಳಿಗೆ, ಸೂಟು, ಬೂಟು, ಟೈ ಎಂದು ಪಶ್ಚಿಮದ ಜಗತ್ತಿಗೆ ಮುಖ ಮಾಡಿದ ಹುಡುಗ ಒಮ್ಮಿಂದೊಮ್ಮೆಗೇ ಆ ಜಗತ್ತಿಗೆ ಹೇಗೆ ಮುಖ ತಿರುಗಿಸುತ್ತಿದ್ದಾನೆ ಎಂಬುದನ್ನು ವಿವರಿಸುವಳು. ಆಮ್‌ಸ್ಟರ್‌ಡಮ್‌ನ ರೆಡ್‌ಲೈಟ್ ಏರಿಯಾದಲ್ಲಿ ಘಾಸಿಗೊಂಡಿದ್ದ ರಮೇಶನ ಹೃದಯದ ಬಗ್ಗೆ ಮಾತನಾಡುವಳು. ಹೀಗೆಲ್ಲ ಮಾತನಾಡುವಾಗ ರೋಹಿಣಿ 'ಗಂಗಾ ನಿನ್ನದು ಲೇಖಕಿಯ ಮನಸ್ಸು. ನಿನಗೆ ನಿಜವಾಗಲೂ ಲೇಖಕಿಯಾಗುವ ಅದ್ಭುತ ಶಕ್ತಿಯಿದೆ, ಮನಸ್ಸಿದೆ. ಚಳುವಳಿಯ ಏರು/ಪೇರು, ಮನುಷ್ಯನ ಒಳತೋಟಿ, ದ್ವಂದ್ವಗಳನ್ನು ಹಿಡಿಯುವ ಗ್ರಹಿಕೆ ನಿನಗೆ ಇದೆ. ಭಾರತಕ್ಕೆ ಮರಳಿದ ಮೇಲೆ ಕೇವಲ ಚಳುವಳಿಯ ಕ್ರಿಯೆಗಳಲ್ಲಿಯೇ ತೊಡಗಿಬಿಡಬೇಡ. ಕೂತು ಬರೆಯುವ ಕ್ರಿಯೆ ಕೂಡ ಒಂದು ಕೊಡುಗೆಯೇ' ಎನ್ನುವರು. ಹೀಗೆ ರೋಹಿಣಿ ಗಂಗಾಗೆ ಹಲವಾರು ಬಾರಿ ಹೇಳಿರಬಹುದು. ಪ್ರತಿ ಸಲ ಭೇಟಿಯಾದಾಗಲೂ ರೋಹಿಣಿ ಈ ಮಾತು ಹೇಳುತ್ತಿದ್ದುದು ಗಂಗಾಗೆ ವಿಚಿತ್ರ ಅನ್ನಿಸುತ್ತಿದ್ದರೂ ಆಕೆ ಹೇಳುವುದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದಳು. ಉಳಿದಂತೆ ಗಂಗಾ ರಮೇಶನೊಟ್ಟಿಗೆ ಲೈಬ್ರರಿಗಳಿಗೆ ಹೋಗುವುದು, ರೋಹಿಣಿಯೊಡನೆ ಚರ್ಚಿಸುವುದು, ಇನ್ನಾರಾದರೂ ಗೆಳತಿಯರ ಕೊಠಡಿಗಳಿಗೆ ಹೋಗುವುದು ಹೀಗೆ ಸಮಯ ಕಳೆಯತೊಡಗಿದ್ದಳು. ಈಗ ರಮೇಶ ತನ್ನ ಕೊಠಡಿ ಬಿಟ್ಟುಬಿಟ್ಟಿದ್ದ. ಗಂಗಾ/ರಮೇಶ ಈಗ ಒಂದೇ ಕೊಠಡಿಯಲ್ಲಿ ವಾಸಿಸತೊಡಗಿದ್ದರು. ಇಬ್ಬರೂ ಒಟ್ಟಿಗೆ ಇರತೊಡಗಿದ್ದರಿಂದ ಅಡಿಗೆ ಸಾಮಾನು ಕೊಳ್ಳುವುದು, ದೈನಂದಿನ ಕಾರ್ಯಕ್ರಮ organise ಮಾಡುವುದು ಸುಲಭ ಎನಿಸತೊಡಗಿತ್ತು. ಲೈಬ್ರರಿ ಸುತ್ತುವುದು, ಕಂಪ್ಯೂಟರ್‌ನಲ್ಲಿ ಕೆಲಸ ಮಾಡುವುದು ಹೀಗೆ ಜೊತೆ ಜೊತೆಯಾಗಿ ಕೆಲಸ ಮಾಡುವ ಹಂತದಲ್ಲಿ ರಮೇಶ ಬಹಳ ವರ್ಷದ ಸ್ನೇಹಿತನ ಹಾಗೆ ಎಂದು ಗಂಗಾಗೆ ಅನಿಸತೊಡಗಿತ್ತು. ಎಲ್ಲೋ ಹೃದಯದ ಆಳದಲ್ಲಿ ಜೀವನದಲ್ಲಿ ತಾನೊಂದು ನೆಲೆ ನಿಂತಿದ್ದೇನೆ ಎನ್ನುವ ಭಾವನೆ ಗಂಗಾಳಿಗೆ ಬರತೊಡಗಿತ್ತು. ಮನಸ್ಸಿನ ಆತಂಕಗಳು, ಅಲೆಮಾರಿ ಬದುಕಿನ ಹೆದರಿಕೆಗಳು ಕಡಿಮೆಯಾದ ಹಾಗೆ ಆಕೆಗೆ ಭಾಸವಾಗುತ್ತಿತ್ತು. ಶಾಂತವಾಗಿ, ಸ್ಥಿರ ಮನಸ್ಸಿನಿಂದ ಅಧ್ಯಯನದ ಕಡೆಗೆ ಮನಸ್ಸು ಹೊರಳಿಸುವುದಕ್ಕೆ ಆಕೆಗೆ ಸಾಧ್ಯವಾಗತೊಡಗಿತ್ತು. ಭಾರತದ ಮಹಿಳಾ ಚಳುವಳಿಯ ತಾತ್ವಿಕ ಚೌಕಟ್ಟನ್ನು ಶೋಧಿಸಿ ಓದುವ, ಬರೆಯುವ ವಿಚಾರಗಳು ಆಕೆಯ ಅಂತರಂಗದ ತುಮುಲಗಳಿಗೆ/ ಆತಂಕಗಳಿಗೆಲ್ಲೋ ಹತ್ತಿರವಾಗುತ್ತಿದ್ದುದರಿಂದ ಓದು, ಬರಹಗಳನ್ನು ಆಕೆಗೆ ತನ್ನ ಜೀವನದ ಭಾಗವಾಗಿಯೇ ನೋಡಲು ಸಾಧ್ಯವಾಗುತ್ತಿತ್ತು. ಬೆಳಗಿನಿಂದ ಸಂಜೆಯವರೆಗೆ ಕೆಲವೊಮ್ಮೆ ಓದು, ಬರಹಗಳಲ್ಲಿಯೇ ತಲೆ ಹುದುಗಿಸಿಕೊಂಡುಬಿಡುವಳು.

ಅದೊಂದು ದಿನ ಹೀಗೆಯೇ ಗಂಗಾ ಬೆಳಿಗ್ಗೆಯೇ ರಮೇಶನೊಟ್ಟಿಗೆ ಲೈಬ್ರರಿಯೊಂದಕ್ಕೆ ಹೊರಟು ನಿಂತಿದ್ದಳು. ಹೊರಡುವ ಸಮಯದಲ್ಲಿ ಪೋಸ್ಟ್ ಬಂದುದನ್ನು ಕೈಯಲ್ಲಿ ಹಿಡಿದು ಗಂಗಾ ಟ್ರ್ಯಾಮ್ ಹತ್ತಿದ್ದಳು. ಪಾರ್ವತಿಯ ಕೈ ಬರಹ. ಪಾರ್ವತಿ ಆಗಾಗ್ಗೆ ಕಾಗದ ಬರೆಯುತ್ತಲೇ ಇದ್ದಳು. ಸ್ತ್ರೀ ಮುಕ್ತಿ ಸಂಘಟನೆಯಲ್ಲಿ ತಾನ್ಹೇಗೆ ಒಂಟಿತನವನ್ನು ಅನುಭವಿಸುತ್ತಿದ್ದೇನೆ ಎಂಬುದನ್ನು ಹಿಂದಿನ ಪತ್ರದಲ್ಲಿ

ಬರೆದಿದ್ದಳು. ಬಹುಶಃ ಗಂಗಾ ಜೊತೆಗಿದ್ದಿದ್ದರೆ ಅಷ್ಟೊಂದು ತೀವ್ರವಾದ ಅನಾಥಪ್ರಜ್ಞೆ ಕಾಡುತ್ತಿರಲಿಲ್ಲವೇನೋ ಎಂದು ತನ್ನ ಭಾವನೆ ಹಂಚಿಕೊಂಡಿದ್ದಳು. ಈಗ ಪಾರ್ವತಿ ಬರೆದ ಪತ್ರ ಉದ್ದವಾಗಿತ್ತು. ಗಂಗಾ ಟ್ರ್ಯಾಮ್‌ನಲ್ಲಿ ಹತ್ತಿದಾಗ ಪತ್ರ ಒಡೆದಳು. ಆರೇಳು ಪುಟಗಳ ಪತ್ರ. ಪತ್ರದ ಪ್ರಾರಂಭದಲ್ಲಿಯೇ 'ಗಂಗಾ ನಾನು ಬರೆಯುವ ವಿಚಾರ ಓದಿ ಬೇಸರ ಪಡಬೇಡ' ಎಂದು ಪಾರ್ವತಿ ಬರೆದಿದ್ದಳು. ಆಕೆ ಕೆಲಸ ಮಾಡುತ್ತಿದ್ದ ಸಂಸ್ಥೆಗೆ ರಾಜೀನಾಮೆ ನೀಡಿದ್ದಳು. ಸಂಸ್ಥೆಯ ಕೆಲಸಕ್ಕೆ ರಾಜೀನಾಮೆ ನೀಡಿದ ಮೇಲೂ ಸ್ತ್ರೀ ಮುಕ್ತಿ ಸಂಘಟನೆಯಲ್ಲಿ ಮಾತ್ರ ಇದ್ದುಕೊಂಡು, ಸಂಸ್ಥೆಯಿಂದ ಸಂಬಳ ಪಡೆಯದೇ ಕೆಲಸ ಮುಂದುವರಿಸಬೇಕೆಂಬ ತನ್ನ ಆಲೋಚನೆಯನ್ನು ಸಂಸ್ಥೆಯ ರೆನೆ, ರಾಗಿಣಿ, ಡಾಮಿನಿಕ್ ಹೇಗೆ ಮೊಟಕುಗೊಳಿಸಿದರು ಎಂಬುದನ್ನು ಪಾರ್ವತಿ ವಿವರಿಸಿದ್ದಳು. ಪಾರ್ವತಿಯ ಪತ್ರ ಹೀಗಿತ್ತು. "ನಾನು ಸಂಸ್ಥೆಯನ್ನು ಬಿಟ್ಟ ಮೇಲೆ ಸಂಸ್ಥೆಯೊಳಗೆ ಹಾಗೂ ಸ್ತ್ರೀ ಮುಕ್ತಿ ಸಂಘಟನೆಯಲ್ಲಿ ಹಲವಾರು ಸಭೆಗಳು ನಡೆದವು. ಈ ಸಂದರ್ಭದಲ್ಲಿ ಗಂಗಾ ನೀನು ಬೆಂಗಳೂರಿನಲ್ಲಿ ಇದ್ದಿದ್ದರೆ ಪ್ರಾಯಶಃ ನಾವು ಒಟ್ಟಾಗಿ ಸ್ತ್ರೀ ಮುಕ್ತಿ ಸಂಘಟನೆಯ ಭಿನ್ನವಾದ ರಚನೆಗೆ ಹೆಚ್ಚು ಶಕ್ತಿಯುತವಾಗಿ ಹೋರಾಡಬಹುದಿತ್ತು. ಆದರೆ ನಡೆದ ವಿಚಾರಗಳಲ್ಲಿ ರಾಜೀನಾಮೆ ಕೊಡುವುದು ಅನಿವಾರ್ಯವಾಗಿಬಿಟ್ಟಿದೆ. ಒಂದು ತಿಂಗಳ ಕಾಲ ರಾಜೀನಾಮೆ ವಾಪಸ್ಸು ತೆಗೆದುಕೊಳ್ಳುವಂತೆ ಬೇರೆ ಬೇರೆ ರೂಪದಲ್ಲಿ, ಬೇರೆ ಬೇರೆಯವರಿಂದ ಒತ್ತಾಯಿಸತೊಡಗಿದ್ದರು. ಆದರೆ ರಾಜೀನಾಮೆಯ ವಿಚಾರದಲ್ಲಿ ಖಂಡಿತವಾದ ನಿಲುವು ತೆಗೆದುಕೊಂಡ ನಂತರದಲ್ಲಿ ಸಮಸ್ಯೆಯ ಸ್ವರೂಪ ಸಂಕೀರ್ಣ ರೂಪ ತಾಳಿದೆ. ಇಡಿಯ ಹೋರಾಟ ಸಣ್ಣತನ, ಕ್ಷುದ್ರತನಕ್ಕಿಳಿದುಬಿಟ್ಟಿದೆ. ಇದು ಕನ್ನಡ ಬರುವವರ/ಇಂಗ್ಲೀಷ್ ಬರುವವರ ಮಧ್ಯದ ಹೋರಾಟವಾಗಿ ಕಾಣಿಸಿಕೊಂಡುಬಿಟ್ಟಿದೆ. ನಾವು ತರುತ್ತಿದ್ದ ಕನ್ನಡ ಪತ್ರಿಕೆಯ ಸುತ್ತ ಮಾತ್ರ ಸಾಕಷ್ಟು ಸಮಸ್ಯೆಗಳು ಹೆಣೆದುಕೊಳ್ಳತೊಡಗಿವೆ. ಸ್ತ್ರೀ ಮುಕ್ತಿ ಸಂಘಟನೆಯ ಸ್ವಾಯತ್ತತೆಯ ಪ್ರಶ್ನೆ, ಅದು ವಿದೇಶೀ ಅನುದಾನ ಪಡೆದ ಸಂಸ್ಥೆಗೆ ಅಂಟಿಕೊಂಡಿರುವ ರೀತಿ, ಅವರೆಡರ ಸಂಬಂಧ, - ಇಂತಹ ಪ್ರಶ್ನೆಗಳನ್ನು ಮುಕ್ತವಾಗಿ ಚರ್ಚಿಸಲು ಯಾರೂ ಸಿದ್ಧರಿಲ್ಲ. ಅವರೆಲ್ಲರ ಒಟ್ಟು ಅಭಿಪ್ರಾಯ ಇಷ್ಟು. ಕನ್ನಡ ಪತ್ರಿಕೆ ಪ್ರಾರಂಭವಾದದ್ದು ಸಂಸ್ಥೆಯ ಒಳಗೇ ಆದ್ದರಿಂದ - ಅದು ಸಂಸ್ಥೆಯ ವ್ಯಾಪ್ತಿಯಲ್ಲಿಯೇ ಇರಬೇಕೆಂಬುದು ಅವರ ವಾದ. ಪತ್ರಿಕೆ ಹಾಗೂ ಇತರ ಚಟುವಟಿಕೆ ಸಂಸ್ಥೆಯ ಒಳಗಿನವರಿಂದ, ಸಂಸ್ಥೆಯ ಹಣದ ಸಹಾಯದಿಂದ ನಡೆದಿರುವುದು ನಿಜವಾದರೂ, ಈಗ ಎಲ್ಲಾ ಚಟುವಟಿಕೆಗಳಲ್ಲಿ ಕೆಲಸ ಮಾಡುವವರು, ಚಳುವಳಿಯ ಬೆನ್ನಲುಬಾಗಿ ಹೊರಗಿನವರು - ಅಂದರೆ ಸಂಸ್ಥೆಗೆ ಸೇರದವರೂ ಇರುವುದರಿಂದ ಸ್ತ್ರೀ ಮುಕ್ತಿ ಸಂಘಟನೆಯ ಬಗ್ಗೆ, ರಚನೆಯ ಬಗ್ಗೆ, ಸ್ವಾಯತ್ತತೆಯ ಕುರಿತು ಮಾತನಾಡಲೇಬೇಕೆಂಬುದು ನನ್ನ ಅಭಿಪ್ರಾಯ ಎಂದೆ. ಸ್ತ್ರೀ ಮುಕ್ತಿ ಸಂಘಟನೆಯ ಸ್ವರೂಪ, ರಚನೆ ಪೂರ್ಣವಾಗಿ ಭಿನ್ನವಾಗಬೇಕು. ಇಡಿಯ ವೇದಿಕೆಯ ರಚನಾತ್ಮಕ ಬದಲಾವಣೆ ಚರ್ಚಿಸುವುದಾದಲ್ಲಿ ಕನ್ನಡ ಪತ್ರಿಕೆಯ ಬಗ್ಗೆಯೂ ಚರ್ಚಿಸಬಹುದು. ಕನ್ನಡ ಪತ್ರಿಕೆಯಲ್ಲಿ, ಮಹಿಳಾ ಪತ್ರಿಕೆಯಲ್ಲಿ ಕೆಲಸ ಮಾಡುವವರು ಸ್ವರೂಪ, ರಚನಾತ್ಮಕ ಪ್ರಶ್ನೆಗಳನ್ನು ಎತ್ತುವರೆಂದರೆ ಅದು ಪತ್ರಿಕೆಯ ಸ್ವಾಯತ್ತತೆಗೆ ಸಂಬಂಧಿಸಿದ ಪ್ರಶ್ನೆ ಮಾತ್ರವಲ್ಲ. ಇಡಿಯ ಸಂಘಟನೆಗೆ, ಚಳುವಳಿಗೆ ಸಂಬಂಧಿಸಿದ ಪ್ರಶ್ನೆ. ವಿದೇಶೀ ಅನುದಾನ ನೀಡುವ ಸಂಸ್ಥೆಗೆ ಪತ್ರಿಕೆಯ ಬಗ್ಗೆಯಾಗಲೀ, ಅಥವಾ ಸ್ತ್ರೀ ಮುಕ್ತಿ ಸಂಘಟನೆಯ ಇತರ ಚಟುವಟಿಕೆಗಳ ಬಗ್ಗೆಯಾಗಲೀ ವರದಿ ಸಲ್ಲಿಸುವುದಾದಲ್ಲಿ, ಇದರಲ್ಲಿ ತೊಡಗಿಕೊಂಡಿರುವ ಪ್ರತಿಯೊಬ್ಬರಿಗೂ ಈ ಬಗ್ಗೆ ತಿಳಿಸಬೇಕು. ಅವರು ಪೂರ್ಣಾವಧಿಯ ಕೆಲಸಗಾರರಲ್ಲದಿದ್ದರೂ, ಎಷ್ಟೊಂದು ಬದ್ಧತೆಯಿಂದ, ಕಾಳಜಿಯಿಂದ ಈ ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಹಾಗಾಗಿ ಅಭಿವೃದ್ಧಿ ಸಂಸ್ಥೆಯ ಬಗ್ಗೆ ವರದಿ ಸಲ್ಲಿಸುವಾಗ

ಎಲ್ಲರಿಗೂ ಈ ವರದಿಯ ವಿಚಾರ ತಿಳಿಯಪಡಿಸಬೇಕು. ಹೀಗೆನ್ನುವ ನನ್ನ ನಿಲುವಿನಿಂದಲೇ ಗಲಾಟೆ ಪ್ರಾರಂಭವಾದದ್ದು. ಸಂಸ್ಥೆಯಿಂದ ಹೋಗುವ ವರದಿಗಳನ್ನೆಲ್ಲಾ ಪತ್ರಿಕೆಯ ಬಳಗದವರಲ್ಲಿ ಯಾಕೆ ಮಂಡಿಸಬೇಕು? ಹೀಗೆಯೇ ಪ್ರಾರಂಭವಾದ ಗಲಾಟೆಗಳು. ಸಂಸ್ಥೆಗೆ ಸೇರದೇ, ಪೂರ್ಣಾವಧಿ ಕೆಲಸಗಾರರಾಗಿರದೇ, ತಮ್ಮ ಬದ್ಧತೆಗಳಿಂದಾಗಿ ಮಾತ್ರ ಕೆಲಸ ಮಾಡುವವರಿಗೆ ನಿರ್ಧಾರದ ಹಕ್ಕು ಇಲ್ಲವೇ? ಅವರಿಗೆ ವರದಿಯ ಬಗ್ಗೆ ತಿಳಿಯುವ ಹಕ್ಕೇ ಇಲ್ಲವೆಂದ ಮೇಲೆ ಅವರ ನಿರ್ಧಾರದ ಪ್ರಶ್ನೆಯೇ ಬರುವುದಿಲ್ಲ. ಹಾಗಿದ್ದರೆ ಕೊನೆಯದಾಗಿ ನಿರ್ಧಾರಗಳು ಯಾರ ಕೈಯಲ್ಲಿ ಇರುತ್ತವೆ? ಸ್ವಾಯತ್ತತೆ ಎಂದರೇನು? ಇಂತಹ ಸಮಸ್ಯೆಗಳು ಎದುರಾದಾಗ 'ಸ್ತ್ರೀ ಮುಕ್ತಿ ಸಂಘಟನೆ'ಯ ಬಗ್ಗೆಯೇ ಪ್ರಶ್ನೆಗಳು ಏಳುತ್ತವೆ. ರೆನೆ, ರಾಗಿಣಿ, ರೋಜಾ, ಡಾಮಿನಿಕ್ ಮುಂತಾದವರು ಸ್ತ್ರೀ ಮುಕ್ತಿ ಸಂಘಟನೆಯಲ್ಲಿ, - ಅಭಿವೃದ್ಧಿ ಸಂಸ್ಥೆಗೆ ಸಂಬಂಧಪಟ್ಟ ಪೂರ್ಣಾವಧಿಯ ಕೆಲಸಗಾರರೇ ಇಲ್ಲದಿದ್ದರೆ ಸ್ತ್ರೀ ಮುಕ್ತಿ ಸಂಘಟನೆ ಅಷ್ಟೊಂದು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಾರೆ. ಆದರೆ ಮಹಿಳಾ ಪತ್ರಿಕೆ 'ಸ್ತ್ರೀ ಮುಕ್ತಿ'ಯಲ್ಲಾಗಲೀ ಅಥವಾ ಇತರ ಚಟುವಟಿಕೆಗಳಲ್ಲಿ ಸಂಸ್ಥೆಗೆ ಸೇರಿರದ ಹಲವಾರು ಮಂದಿ ಇರುವರು. ಪತ್ರಿಕೆಯೊಳಗಡೆಯೇ ಶಶಿ/ಅನು/ಗಂಗಾ/ಸರೂ ಎಲ್ಲರೂ ಕೆಲಸ ಮಾಡುತ್ತಾರೆ. ಇಂತಹ ಪ್ರಶ್ನೆಗಳು ಪ್ರಾರಂಭವಾದ ಮೇಲೆ ಸಂಸ್ಥೆಯ ನೆರವಿಲ್ಲದ ಹಾಗೆಯೇ ನಾಲ್ಕು ಸಂಚಿಕೆ ತಂದದ್ದಾಗಿದೆ. ಈ ಎಲ್ಲಾ ಪ್ರಶ್ನೆಗಳಿಗೆ ಕ್ಷುದ್ರತೆ, ಸಣ್ಣತನಗಳಷ್ಟೇ ಕಾರಣವೇ? ಇದರ ಹಿಂದೆ ಯಾವುದೇ ತಾತ್ವಿಕ ನೆಲೆ ಇಲ್ಲವೇ? ಸ್ವಾಯತ್ತತೆಯ ಪ್ರಶ್ನೆ, ನಿರ್ಧಾರದ ಪ್ರಶ್ನೆ ಇಂತಹ ಪ್ರಶ್ನೆಗಳು ಇದರಲ್ಲಿ ಅಡಕವಾಗಿಲ್ಲವೇ? ಯಾವುದೇ ಚಳುವಳಿಯನ್ನು ಒಂದು ಸಂಸ್ಥೆಗಾಗಲೀ, ಒಂದು ಸಾಂಸ್ಥಿಕ ರೂಪದಲ್ಲಿಯಾಗಲೀ ಹಿಡಿದಿಡಲು ಸಾಧ್ಯವೇ? ಚಳುವಳಿ ಯಾರೊಬ್ಬರ ಸ್ವತ್ತೂ ಅಲ್ಲ, ಯಾರೊಬ್ಬರೂ ಅದನ್ನು ಹಿಡಿತದಲ್ಲಿಟ್ಟುಕೊಳ್ಳುವುದೂ ಸಾಧ್ಯವಿಲ್ಲ. ಇಂತಹ ಪ್ರಶ್ನೆಗಳ ಸುತ್ತವೇ ಹಲವಾರು ಸಭೆಗಳಾದವು. ಹಲವಾರು ಗೊಂದಲಗಳು ಎಲ್ಲರಲ್ಲಿ ಕಾಣಿಸಿಕೊಂಡವು. ನಾನು ಪ್ರತಿಯೊಂದು ಸಭೆಯಲ್ಲಿಯೂ ಮಾತನಾಡುವ ಜವಾಬ್ದಾರಿಯಿಂದಾಗಿ ಮಾತನಾಡಿದೆ. ಮೂಲಭೂತವಾಗಿ ನಾನು ಮಾತನಾಡಿದ್ದು ಪೂರ್ಣಾವಧಿಯ ಸದಸ್ಯರು ಸಂಸ್ಥೆಯಿಂದ ಸಂಬಳ, ಟ್ರ್ಯಾವೆಲ್ ಇತರ ಎಲ್ಲಾ ಸವಲತ್ತೂ ಪಡೆಯುವ ಬಗ್ಗೆ. ಈ ತರಹೆಯ ಸವಲತ್ತುಗಳಿಲ್ಲದೆಯೇ ಕೇವಲ ತಮ್ಮ ಬದ್ಧತೆ/ಕಾಳಜಿಯಿಂದ ಕೆಲಸ ಮಾಡುವ ಇತರರ ಬಗ್ಗೆ. ಹೊರಗಡೆ ಮಾತನಾಡುವಾಗ 'ಸ್ತ್ರೀ ಮುಕ್ತಿ ಸಂಘಟನೆ' - ಸ್ವಾಯತ್ತ ಸಂಸ್ಥೆ ಎಂದು ಹೇಳುವುದು, ಆದರೆ ನಿರ್ಧಾರಗಳಿಗೆ ಬಂದಾಗ ತಾವು ಸಂಬಳ ಪಡೆಯುವ ಸಂಸ್ಥೆಯತ್ತ ನೋಡುವುದು. ಹೀಗಿರುವ ದ್ವಂದ್ವಗಳಿಂದ ಹೊಸದಾಗಿ ಚಳುವಳಿಗೆ ಬರುವ ಮಹಿಳೆಯರಿಂದ ಯಾವ ರೀತಿಯ ಕಮಿಟ್‌ಮೆಂಟ್ ನೀವು ನಿರೀಕ್ಷಿಸುತ್ತೀರಿ? ಅವರಿಗೆ ಪೂರ್ಣವಾದ ಜವಾಬ್ದಾರಿಯ ಸ್ವಾತಂತ್ರ್ಯವಿದೆಯೇ? ನಿರ್ಧರಿಸುವ ಹಕ್ಕು ಇದೆಯೇ? ಕಲೆಕ್ಟೀವ್ ಎನ್ನುವ ಪದದ ಅರ್ಥವೇನು? ಎಲ್ಲಾ ಚಟುವಟಿಕೆಗಳಿಗೂ ಸಂಸ್ಥೆಯೇ ಜವಾಬ್ದಾರಿ ಎಂದು ಹೇಳಿ. ಅಥವಾ ಸ್ತ್ರೀ ಮುಕ್ತಿ ಸಂಘಟನೆ ಸ್ವಾಯತ್ತವಾದುದು ಎನ್ನುವುದಾದಲ್ಲಿ ಕೆಲಸ ಮಾಡುವ, ಬದ್ಧರಾಗಿರುವ ಎಲ್ಲಾ ಮಹಿಳೆಯರಿಗೂ ನಿರ್ಧಾರ, ಜವಾಬ್ದಾರಿಯ ಹಕ್ಕು ನೀಡಿ. ಜವಾಬ್ದಾರಿ ಹಂಚುವಾಗ ಸ್ತ್ರೀ ಮುಕ್ತಿ ಸಂಘಟನೆ ಸ್ವಾಯತ್ತವಾದುದು ಎಂದು ಹೇಳುವ ನೀವು ನಿರ್ಧಾರಗಳಿಗೆ ಬಂದಾಗ, ಕ್ರೂಸಿಯಲ್ ಆಗಿರುವ ನಿರ್ಧಾರಗಳಿಗೆ ಬಂದಾಗ ಮಾತ್ರ ಸಂಸ್ಥೆಯೊಳಗಡೆಯ ರಚನೆಗಳತ್ತ ನೋಡುತ್ತೀರಿ. ಹೀಗಿರುವ ದ್ವಂದ್ವದ ರಚನೆಗಳಲ್ಲಿ ಚಳುವಳಿ ಬೆಳೆಯಲು ಹೇಗೆ ಸಾಧ್ಯ? ಹೀಗಾಗಿ ಪತ್ರಿಕೆಯ ಹಿನ್ನೆಲೆಯಲ್ಲಿಯೇ ಸ್ತ್ರೀ ಮುಕ್ತಿ ಸಂಘಟನೆ ಪೂರ್ಣವಾಗಿ ಈ ಸಂಸ್ಥೆಯಿಂದ ಬೇರೆಯಾಗಿರಲೇಬೇಕೆಂಬ ಬೇಡಿಕೆಯನ್ನು ನಾನು ಇತ್ತೆ. ಈ ಹಂತದಲ್ಲಿ ಅನೇಕ ಕಟು ವಿಮರ್ಶೆಗಳನ್ನು ನಾನು ಕೇಳಿದ್ದೇನೆ ಗಂಗಾ. ಪತ್ರಿಕೆಯನ್ನು ನಾನು ಸ್ವಂತಕ್ಕೆ ಮಾಡಿಕೊಳ್ಳುತ್ತಿದ್ದೇನೆಂದೂ, ಕಲೆಕ್ಟೀವ್‌ನಲ್ಲಿ

ಕೆಲಸ ಮಾಡಲಾಗದ ಕೆಲವು ವ್ಯಕ್ತಿಗಳ ಹುನ್ನಾರವಿದೆಂದೂ ಟೀಕೆಗಳು ಮೂಡಿ ಬಂದವು. ಕನ್ನಡ ಬರುವವರು/ ಇಂಗ್ಲೀಷ್ ಬರುವವರು ಎಂಬ ಅರ್ಥದಲ್ಲಿ ಭಾಷೆಯ ಜಿಜ್ಞಾಸೆಯಾಗಿ ತೆಗೆದುಕೊಂಡವರು ಕೆಲವರು. ಮೂಲಭೂತವಾಗಿ ಸ್ತ್ರೀ ಮುಕ್ತಿ ಸಂಘಟನೆಯ ಇಡಿಯ ರಚನೆಯ ಬಗ್ಗೆ ಮಾತನಾಡದೇ ಕೇವಲ ಪತ್ರಿಕೆಯ ಬಗ್ಗೆಯಷ್ಟೇ ಎಲ್ಲರೂ ಮಾತನಾಡತೊಡಗಿದ್ದರು. ಅನು-ಪತ್ರಿಕೆ ಸಂಸ್ಥೆಯ ಭಾಗವೇ ಆಗುವುದಾದರೆ ನಾನು ಪತ್ರಿಕೆಯಲ್ಲಿ ಕೆಲಸ ಮಾಡುವುದಿಲ್ಲ ಎಂದರು. ಶಶಿ-ನಾನು ಪತ್ರಿಕೆಯ ಭಾಗವಾಗಿರುವುದರಿಂದ - ಸಂಸ್ಥೆ ನನಗೆ ಮುಖ್ಯವಾಗುವುದಿಲ್ಲ ಎಂದಳು. ಹಾಗಾಗಿ ಹೊಸ ಪತ್ರಿಕೆಯೊಂದನ್ನು ತರುವ ನಿರ್ಧಾರ ಮಾಡಿದ್ದೇವೆ. ಸ್ತ್ರೀ ಮುಕ್ತಿ ಸಂಘಟನೆಗೆ ನಾವೆಲ್ಲ ಒಟ್ಟಾಗಿ ರಾಜೀನಾಮೆ ನೀಡಿದ್ದೇವೆ. ಹಣದ ಪ್ರಭಾವದಿಂದ ಒಂದು ಸಂಸ್ಥೆ ಇಡಿಯ ಚಳುವಳಿಯ ಭಾಗವಾಗಿರುವವರನ್ನೆಲ್ಲ ಹೇಗೆ ನಿಯಂತ್ರಿಸಲು ಪ್ರಯತ್ನಿಸುತ್ತಿದೆ ಎಂದು ನೋಡಿದಾಗ ನನಗೆ ನಮ್ಮ ಹೊನ್ನೇಕೆರೆಯ ಚಟುವಟಿಕೆಗಳು ಜ್ಞಾಪಕಕ್ಕೆ ಬರುತ್ತವೆ. ಆ ಐದಾರು ವರ್ಷಗಳಲ್ಲಿ ನಾವು ಕೈ ಬರಹದಲ್ಲಿ ತರುತ್ತಿದ್ದ ಪತ್ರಿಕೆ, ಆಡಿದ್ದ ನಾಟಕಗಳು, ಧರಣಿಗಳು, ರ್‍ಯಾಲಿಗಳು ಎಷ್ಟು ಅರ್ಥಪೂರ್ಣ ಎಂದು ನನಗೆ ಅನ್ನಿಸುತ್ತದೆ. ಗಂಗಾ ನಾನು ಕೆಲಸ ಬಿಟ್ಟಿದ್ದೇನೆ. ಮುಂದಿನ ಬದುಕು ಹೇಗೆ ಎಂದು ಆಲೋಚಿಸಿಲ್ಲ. ಆದರೆ ಹೊನ್ನೇಕೆರೆಯಲ್ಲಿ ಇದ್ದ ಹಾಗೆ ಏನೂ ಇಲ್ಲದೇ ಬರಿಗೈಯಲ್ಲಿ ಇಂದು ಪತ್ರಿಕೆ ಪ್ರಾರಂಭಿಸಿದ್ದೇವೆ. ನೀನು ನಮ್ಮೊಡನೆ ಯಾವಾಗಲೂ ಇರುತ್ತೀಯ ಎನ್ನುವ ನಂಬಿಕೆ/ಭರವಸೆ ಕೂಡಾ ನನ್ನನ್ನು ಇಡಿಯಾಗಿ ಕಾಯುತ್ತಿದೆ. ಜೊತೆಗೆ ಅನು, ಸರೂ. ಹೊನ್ನೇಕೆರೆಯಂತಹ ಹಳ್ಳಿಯಲ್ಲಿ ಎಲ್ಲದಕ್ಕೂ ಹೊಡೆದಾಡಿ ಏನಾದರೂ ಮಾಡಬೇಕೆಂದು ಯೋಚಿಸುತ್ತಿದ್ದೆವಲ್ಲ - ಹಾಗೆಯೇ ಬೆಂಗಳೂರಿನಂತಹ ಊರಿನಲ್ಲಿಯೂ ಮಾಡಬೇಕೆಂದು ನನಗೆ ಅನ್ನಿಸುತ್ತದೆ. ದೂರದಲ್ಲಿರುವ ನಿನಗೆ ಇದೆಲ್ಲ ಹೇಗೆ ತೋರುತ್ತದೆಯೋ ಗೊತ್ತಿಲ್ಲ ಗಂಗಾ, ಈ ಇಡಿಯ ಸಂದರ್ಭದಲ್ಲಿ ನನಗೆ ಹೊನ್ನೇಕೆರೆ ಹಾಗೂ ಅಲ್ಲಿದ್ದ 'ಗೆಳತಿಯರ ಬಳಗ'ದ ನೆನಪು ತೀವ್ರವಾಗಿ ಬಾಧಿಸತೊಡಗಿದೆ. ನೀನು ಬೆಂಗಳೂರಿಗೆ ಮರಳಿ ಬಂದ ಮೇಲೆ ನಾವು ಇನ್ನಷ್ಟು ಅರ್ಥಪೂರ್ಣವಾಗಿ ಕೆಲಸ ಮಾಡಬಹುದಾಗಿದೆ. - ಇಷ್ಟನ್ನು ಬರೆದು ನಿಲ್ಲಿಸಿದ್ದಳು ಪಾರ್ವತಿ. ಹೊಸದಾಗಿ ಪ್ರಾರಂಭಿಸಿದ ಪತ್ರಿಕೆಯ ಬಗ್ಗೆ ಅನೇಕ ಕನಸುಗಳನ್ನು ಇಟ್ಟುಕೊಂಡು ಬರೆದಿದ್ದಳು. ಪತ್ರದಲ್ಲಿ ಒಂದು ರೀತಿಯ ಪಾರ್ವತಿಯ ವೇದನೆಯ ಧ್ವನಿ ಗಂಗಾಗೆ ಕಂಡುಬಂತು. ಗಂಗಾಗೆ ಒಮ್ಮಿಂದೊಮ್ಮೆಲೇ ಈ ಪತ್ರದಲ್ಲಿನ ವಿವರಗಳಿಂದ ಸಾಕಷ್ಟು ದಿಗ್ಭ್ರಮೆಯಾಯಿತು. ಬೆಂಗಳೂರಿನಂತಹ ಊರಿನಲ್ಲಿ ಕೆಲಸ ಬಿಟ್ಟು ಪಾರ್ವತಿ ಜೀವನಕ್ಕೆ ಏನು ಮಾಡುತ್ತಾಳೆ? ಹಣದ ಸ್ತರಗಳೇ ಇಲ್ಲದಿದ್ದರೆ - ನೆಲೆ ಇರದೇ ಹೊನ್ನೇಕೆರೆಯಿಂದ ಬಂದ ಪಾರ್ವತಿಯಂತಹ ಹುಡುಗಿ ಮನೆ ಬಾಡಿಗೆ ಕಟ್ಟುವುದಾದರೂ ಹೇಗೆ? ನಿತ್ಯದ ಬದುಕನ್ನು ಪಾರ್ವತಿ ಹೇಗೆ ನಿಭಾಯಿಸುತ್ತಾಳೆ? ಪಾರ್ವತಿ ಈ ಯಾವುದನ್ನೂ ಬರೆದಿರಲಿಲ್ಲ. ಕಾಗದದ ತುಂಬೆಲ್ಲ ಆಕೆ ಬರೆದುದು ಸ್ತ್ರೀ ಮುಕ್ತಿ ಸಂಘಟನೆ ಹಾಗೂ ಸಂಘಟನೆಯ ಸಂಬಂಧ ಕುರಿತಾಗಿ. ಒಂದು ಆದರ್ಶದ ಅಮಲಿನಿಂದ ಪ್ರಾರಂಭವಾದ ಚಳುವಳಿ ಹೇಗೆ ಹಣ ಹಾಗೂ ಇಂಗ್ಲೀಷ್ ಬಲ್ಲ ಜನರ ಸ್ವತ್ತಾಗಿಬಿಡುತ್ತದೆ ಎಂಬ ನೋವು ಇಡಿಯ ಪತ್ರದಲ್ಲಿ ತುಂಬಿಕೊಂಡಿತ್ತು. ಈ ಇಡಿಯ ಸಂದರ್ಭದಲ್ಲಿ ಪಾರ್ವತಿ ತನ್ನ ಬದುಕಿನ ಬಗ್ಗೆ, ತನ್ನ ನಿತ್ಯದ ಬವಣೆಯ ಬಗ್ಗೆ ಯೋಚಿಸಿದ ಹಾಗೆಯೇ ಇರಲಿಲ್ಲ. ಪಾರ್ವತಿ ಇರುವ ಮನೆಗೆ ಬಾಡಿಗೆ ಕಟ್ಟುವುದು ಹೇಗೆ? ನಿತ್ಯದ ಅಕ್ಕಿ-ಬೇಳೆ ಸಮಸ್ಯೆಗಳ ಕುರಿತು ಆಕೆ ಯೋಚಿಸಿದ್ದಾಳೆಯೇ? ಪಾರ್ವತಿಯ ಪತ್ರ ಓದಿ ಮುಗಿಸಿದಾಗ ಗಂಗಾಗೆ ಆ ಕ್ಷಣಕ್ಕೆ ಕಾಡಿದ್ದು ಸ್ತ್ರೀ ಮುಕ್ತಿ ಸಂಘಟನೆಯ ಪ್ರಶ್ನೆಯಲ್ಲ, ಪಾರ್ವತಿ ಕೆಲಸ ಮಾಡುತ್ತಿದ್ದ ಸಂಸ್ಥೆಯ ಪ್ರಶ್ನೆಯೂ ಅಲ್ಲ. ಆಕೆಗೆ ಗಾಢವಾಗಿ ಕಾಡಿದ್ದು ಪಾರ್ವತಿ ಬೆಂಗಳೂರಿನಲ್ಲಿ ಹೇಗೆ ಬದುಕುತ್ತಾಳೆ? ಆಕೆಯ ನಿರುದ್ಯೋಗದ ಪ್ರಶ್ನೆ. ಉದ್ಯೋಗವನ್ನೇ ಪಣವಾಗಿಟ್ಟುಕೊಂಡು ಚಳುವಳಿಯ ಬಗ್ಗೆ

ಆತಂಕಗೊಂಡ ಪಾರ್ವತಿಯ ಬಗ್ಗೆ ಒಮ್ಮೆ ಗೌರವ ಹುಟ್ಟಿದರೆ, ಒಮ್ಮೆ ಹೆದರಿಕೆಯಾಗುತ್ತದೆ ಗಂಗಾಗೆ. ಎಸ್. ಎಸ್. ಎಲ್. ಸಿ. ಮುಗಿಸಿ ಮನೆಯಲ್ಲಿ ತಪ್ಪು/ಕಪ್ಪು ಎಂದು ಹೀಯಾಳಿಸಿಕೊಂಡು ಬಂದ ಹುಡುಗಿಯೇ ಈಕೆ ಎಂದು ಒಮ್ಮೊಮ್ಮೆ ಅನಿಸುತ್ತದೆ. ಬೆಂಗಳೂರಿನಂತಹ ಊರಿನಲ್ಲಿ ಒಂಟಿಯಾಗಿ ನಿಂತು, ಕೈಯಲ್ಲಿ ಹಣಕಾಸು ಇಲ್ಲದೇ ಜೀವನದ ದಾರಿ ತಿಳಿದಿರದೇ ಪತ್ರಿಕೆಯೊಂದರ ಸಾಹಸಕ್ಕೆ ಕೈ ಹಾಕಿದ ಈ ಹುಡುಗಿಯ ಸಾಹಸಕ್ಕೆ ಮೆಚ್ಚಬೇಕೋ ಬೇಡವೋ ಅರ್ಥವಾಗಲಿಲ್ಲ ಗಂಗಾಗೆ. ಆ ಕ್ಷಣಕ್ಕೆ ಪಾರ್ವತಿಗೆ ತನ್ನ ವೈಯಕ್ತಿಕ ಬದುಕು, ಸ್ವಂತ ಬದುಕಿನ ಪರಿವೆಯೇ ಇದ್ದ ಹಾಗೆ ಇರಲಿಲ್ಲ. ಗಂಗಾ ಒಮ್ಮೆ ನಿಟ್ಟುಸಿರುಬಿಟ್ಟಳು. ಗಂಗಾ ಬೆಂಗಳೂರಿನಲ್ಲಿರುವಾಗ ಆಕೆಗೆ ಕೇಂದ್ರಬಿಂದುವಾದುದೇ ಸ್ತ್ರೀ ಮುಕ್ತಿ ಸಂಘಟನೆ. ಈಗ ಬೆಂಗಳೂರಿಗೆ ವಾಪಸ್ಸು ಹೋದ ಮೇಲೆ ಪತ್ರಿಕೆಯ ಸುತ್ತ ತಮ್ಮ ಬದುಕಿನ ಕೇಂದ್ರ ಬಿಂದು ರೂಪಿಸಿಕೊಳ್ಳಬೇಕು. ಸ್ತ್ರೀ ಮುಕ್ತಿ ಸಂಘಟನೆಯ ಸಂಬಂಧಗಳು ಇದ್ದಕ್ಕಿದ್ದ ಹಾಗೆ ಕಡಿದು ಹೋಗಿಬಿಟ್ಟವಲ್ಲ ಎಂದು ಯೋಚಿಸುವಾಗ ಗಂಗಾಗೆ ಆಶ್ಚರ್ಯವಾಗುತ್ತದೆ. ಹಣದ ಸ್ತರಗಳೊಡನೆ, ಒಂದು ಸಾಂಸ್ಥಿಕ ಸ್ವರೂಪದೊಡನೆ ಜಂಟಿ ಹಾಕಿಕೊಂಡ ಚಳುವಳಿಯೊಡನೆ ಬೆಸೆದುಕೊಂಡ ಸಂಬಂಧಗಳು ಇಷ್ಟೇ ಏನೋ ಅನ್ನಿಸಿದಾಗ ನೋವಿನ ಜೊತೆಗೆ ಗಂಗಾಗೆ ಪೆಚ್ಚಾಗುತ್ತದೆ. ಎಷ್ಟು ಬದ್ಧತೆಯಿಂದ ತಾನೂ ಕೂಡಾ ಸ್ತ್ರೀ ಮುಕ್ತಿ ಸಂಘಟನೆಯಲ್ಲಿ ಕೆಲಸ ಮಾಡಿರಲಿಲ್ಲ? ಈಗೆಲ್ಲ ಬರಿಯ ನೆನಪು. ನೆನಪುಗಳಾಗಿ ಉಳಿದುಬಿಡುತ್ತವೆ ಅಷ್ಟೇ!

ಗಂಗಾಳನ್ನು ಅಲುಗಾಡಿಸಿ ರಮೇಶ ಎಚ್ಚರಿಸಿದಾಗ ಟ್ರ್ಯಾಮ್‌ನಲ್ಲಿ ಇರುವುದನ್ನು ಗಂಗಾ ನೆನಪಿಸಿಕೊಂಡಳು. ಅವರು ಹೋಗಬೇಕಾದ ಲೈಬ್ರರಿ ಇದ್ದ ಸ್ಥಳ ತಲುಪಿಯಾಗಿತ್ತು. ಗಂಗಾ ಮೇಲೆ ಎದ್ದಳು. 7-8 ಪುಟಗಳ ಪಾರ್ವತಿಯ ಪತ್ರವನ್ನು ಹಾಗೆಯೇ ಬ್ಯಾಗಿನಲ್ಲಿ ತುರುಕಿದಳು. ರಮೇಶನಿಗೆ ಪಾರ್ವತಿ ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದನ್ನು ಮಾತ್ರ ಹೇಳಿದಳು. ಗಂಗಾಗೆ ಲೈಬ್ರರಿಯಲ್ಲಿ ಪುಸ್ತಕಗಳನ್ನು ಹುಡುಕುವ ತಾಳ್ಮೆಯಾಗಲೀ, ವ್ಯವಧಾನವಾಗಲೀ ಇದೆ ಎಂದು ಅನ್ನಿಸಲಿಲ್ಲ. ಹಾಗೆಂದು ರಮೇಶನಿಗೂ ಹೇಳಿದಳು. 'ರಮೇಶ್ ನನ್ನ ಮನಸ್ಸು ಯಾಕೋ ಸ್ಥಿಮಿತಕ್ಕೇ ಬರುತ್ತಿಲ್ಲ. ನೋಡು, ಆ ಕೊಳ ಇದೆಯಲ್ಲ, ಅಲ್ಲಿ ಒಂಟಿಯಾಗಿ ಕೂರಬೇಕು ಅನ್ನಿಸುತ್ತದೆ. ಅಲ್ಲಿ ಕೂತಿರುತ್ತೇನೆ. ನೀನು ಎಷ್ಟು ಹೊತ್ತಿಗಾದರೂ ಬಾ, ನೀನು ಹುಡುಕುವಾಗ ನನಗೆ ಈ ಕೆಲವು ಪುಸ್ತಕಗಳನ್ನು ಹುಡುಕಿ ತಂದರೆ ಸಾಕು' ಎಂದು ಪುಸ್ತಕಗಳ ಪಟ್ಟಿಯೊಂದನ್ನು ಆತನ ಕೈಯಲ್ಲಿ ಇತ್ತಳು. ಅವಳಿಗೆ ಒತ್ತಾಯ ಮಾಡುವ ಮನಸ್ಸಾಗಲಿಲ್ಲ ರಮೇಶನಿಗೆ. ಆತ ಲೈಬ್ರರಿಯೊಳಕ್ಕೆ ಹೋದ ಮೇಲೆ ಗಂಗಾ ಅಲ್ಲಿಯೇ ಪ್ರಶಾಂತವಾಗಿದ್ದ ಕೊಳದ ಬಳಿ ಕುಳಿತುಕೊಂಡಳು. ಏನೇನೋ ಯೋಚನೆಗಳು ಕಾಡತೊಡಗಿದವು. ಹೊನ್ನೇಕೆರೆಯಲ್ಲಿದ್ದ ಪಾರ್ವತಿಯ ನೆನಪು, ಬೆಂಗಳೂರಿನಲ್ಲಿ ಸ್ಲೀವ್‌ಲೆಸ್ ಬ್ಲೌಸ್‌ನಲ್ಲಿ ತನ್ನನ್ನು ಹಿಂದಿನಿಂದ ಗುದ್ದಿ ಮಾತನಾಡಿಸಿದ್ದ ಪಾರ್ವತಿಯ ನೆನಪು ಒಟ್ಟೊಟ್ಟಿಗೇ ಬರತೊಡಗಿದ್ದವು. ಹೀಗೆ ಆದರ್ಶಗಳ ಬೆನ್ನು ಹತ್ತಿ, ಅವುಗಳನ್ನೇ ನಂಬಿ ಹೊನ್ನೇಕೆರೆಯಂತಹ ಹಳ್ಳಿಯಿಂದ ಬಂದ ಪಾರ್ವತಿಗೆ ಬೆಂಗಳೂರು ನಗರ ನೀಡಿದ್ದಾದರೂ ಏನು? ಪಾರ್ವತಿಯ ಮಾನಸಿಕ ಬೆಳವಣಿಗೆಗೆ, ಭರವಸೆಗೆ ಕಾರಣವಾದ ಸಂಸ್ಥೆ ಇದ್ದಕ್ಕಿದ್ದ ಹಾಗೆ ಪಾರ್ವತಿಗೆ ವಿರೋಧವಾದದ್ದು ಹೇಗೆ? ಕಣ್ಣಿಗೆ ಬಣ್ಣ ಬಣ್ಣವಾಗಿ ಕಂಡ ಕಾಮನ ಬಿಲ್ಲುಗಳಲ್ಲಿ ಎಲ್ಲಿಯೋ ಬಿರುಕುಗಳು, ಮನಸ್ಸಿನ ಆದರ್ಶ ಪ್ರಪಂಚ - ಪ್ರಾಪಂಚಿಕ ಹಂತದಲ್ಲಿ ಮುಖಾಮುಖಿಯಾದಾಗ, ಮನಸ್ಸಿನ ಪ್ರಪಂಚದ ಸತ್ಯಗಳು ಅಷ್ಟೇ ಪರಿಶುದ್ಧತೆಯಿಂದ ವಾಸ್ತವಿಕ ಪ್ರಪಂಚದಲ್ಲಿ ಕಾಣಿಸಿಕೊಳ್ಳುವುದಿಲ್ಲವೋ ಏನೋ? ಮತ್ತೆ ಗಂಗಾ ಪಾರ್ವತಿಯ ಪತ್ರ ತೆಗೆದು ಓದಿದಳು. ಯಾಕೋ ಬಹಳ ದುಃಖವಾದಂತೆ ಅನ್ನಿಸಿತು. ಏನೇನೋ ಕನಸುಗಳ ಕಟ್ಟಿಕೊಂಡು ಆ ಕನಸುಗಳ ಪರಿಶುದ್ಧತೆಯನ್ನು ಪ್ರಾಪಂಚಿಕ ವ್ಯಾಪಾರದಲ್ಲಿ ಹುಡುಕುವುದು ಕಷ್ಟಕರ

ಅನ್ನಿಸತೊಡಗಿತು. ಸುಮಾರು ವರ್ಷಗಳಿಂದ ಸ್ತ್ರೀ ಮುಕ್ತಿ ಸಂಘಟನೆಯೊಂದಿಗೆ ಸಂಬಂಧ ಬೆಸೆದುಕೊಂಡಿದ್ದ ಪಾರ್ವತಿಗೂ ಸಂಬಂಧ ಕಡಿದುಕೊಳ್ಳುವುದು ಕಷ್ಟಕರವಾಗಿರಬೇಕೆಂದು ಗಂಗಾ ಯೋಚಿಸುತ್ತಾಳೆ. ಏನಾದರಾಗಲೀ ಬೆಂಗಳೂರಿಗೆ ಮರಳಿದ ಮೇಲೆ ಪಾರ್ವತಿ, ಅನೂ, ಸರೂರೊಟ್ಟಿಗೆ ಕೆಲಸ ಮಾಡುವುದು ಸರಿ ಎಂದುಕೊಂಡ ಗಂಗಾಗೆ ಹೊನ್ನೇಕೆರೆಯಂತಹ ಸಂಘಟನೆಯ ಲಯಗಳಿಗೆ ಪ್ರಯತ್ನಿಸಬೇಕು ಅನಿಸುತ್ತದೆ. ಹಣಕಾಸು ಇರುವ, ಇಂಗ್ಲೀಷ್ ಭಾಷೆಯ ಲಯಗಳಲ್ಲಿಯೇ ನಡೆದುಬಿಡುವ ಚಳುವಳಿಗೆ ನಮ್ಮಂಥವರು ಪರಕೀಯರಾಗಿಯೇ ಉಳಿದುಬಿಡುತ್ತೇವೆಯೋ ಏನೋ? ಈ ಸ್ತರಗಳಿಲ್ಲದೆಯೇ ಹುಟ್ಟಿಕೊಳ್ಳುವ ಚಳುವಳಿ ನಮ್ಮಂತಹ ನಾಲ್ಕಾರು ಜನರನ್ನಾದರೂ ಹತ್ತಿರಕ್ಕೆ ತರಬಹುದೇನೋ ಎಂದು ಯೋಚಿಸಿದಾಗ ಗಂಗಾಳಿಗೆ ನಿರಾಳ ಎನಿಸುತ್ತದೆ.

* * * *

ಗಂಗಾಳ ಕೋರ್ಸ್ ಮುಗಿಯುವುದಕ್ಕೆ ಇನ್ನು ಕೆಲವೇ ತಿಂಗಳುಗಳು ಉಳಿದಿದ್ದವು. ಗಂಗಾ 'ಡೆನ್‌ಹಾಗ್'ನಲ್ಲಿ ಇದ್ದು ಈಗಾಗಲೇ ಒಂದೂವರೆ ವರ್ಷ ಕಳೆದು ಹೋಗಿತ್ತು. ಇನ್ನು ನಾಲ್ಕೈದು ತಿಂಗಳುಗಳಲ್ಲಿ ಆಕೆಯ ಥೀಸಿಸ್ ಕೂಡಾ ಮುಗಿದುಬಿಡುವುದಿತ್ತು. ಹಾಗಾಗಿ ಗಂಗಾಳ ಗಮನವೆಲ್ಲ ಓದುವುದರ ಬಗ್ಗೆ ಹೆಚ್ಚು ಹೆಚ್ಚಾಗಿತ್ತು. ಗಂಗಾ-ರಮೇಶರ ಜೀವನದಲ್ಲಿ ಏರು-ಪೇರುಗಳೇ ಕಂಡುಬರುತ್ತಿರಲಿಲ್ಲ. ಈ ಅಧ್ಯಯನದ ಪರಿಸರದಲ್ಲಿ ರಮೇಶ್ ಕೂಡಾ ಸಾಕಷ್ಟು ಬೌದ್ಧಿಕವಾಗಿ ಬೆಳೆಯತೊಡಗಿದ್ದ. ಒಂದು ವರುಷದ ಹಿಂದೆ ತಾನು ಹೇಗಿದ್ದೆ? ಎಂಬುದನ್ನು ನೆನಸಿಕೊಂಡು ಒಮ್ಮೊಮ್ಮೆ ಅವನೇ ನಕ್ಕು ಬಿಡುತ್ತಿದ್ದ. ಗಂಗಾಳ ಬದುಕಿನ ಲಯಗಳಲ್ಲಿ ತನ್ನ ಬದುಕಿನ ಲಯಗಳನ್ನು ಕಂಡುಕೊಳ್ಳಲು ಬಯಸಿದ ರಮೇಶ ಆಕೆಯ ಬೌದ್ಧಿಕ ಬದುಕಿನ ಸ್ತರದತ್ತ ಒಂದೊಂದೇ ಹೆಜ್ಜೆ ಇಡತೊಡಗಿದ್ದ. ಗಂಗಾ ತನ್ನ ಅಧ್ಯಯನದಲ್ಲಿ ತೊಡಗಿದ ಹಾಗೆ ಅವನಿಗೂ ಅಧ್ಯಯನದಲ್ಲಿ ತೊಡಗುವ ತೀವ್ರತೆ ಇತ್ತು. ಭಾರತೀಯ ಅಸಂಘಟಿತ ಕಾರ್ಮಿಕರ ಬಗ್ಗೆ ರಮೇಶ್ ಆಳವಾಗಿ ಅಧ್ಯಯನ ನಡೆಸತೊಡಗಿದ್ದ. ಲೈಬ್ರರಿಗೆ, ಟೈಪ್ ಮಾಡಲು, ಕಂಪ್ಯೂಟರ್‌ನಲ್ಲಿ ಕೆಲಸ ಮಾಡಲು ಇಬ್ಬರೂ ಒಟ್ಟೊಟ್ಟಿಗೇ ಹೋಗುತ್ತಿದ್ದರಿಂದ ದಿನವೆಲ್ಲ ಹೆಚ್ಚೂ-ಕಡಿಮೆ ಒಟ್ಟಿಗೇ ಕಳೆಯುತ್ತಿದ್ದರು. ಅತಿ ಸರಳವಾಗಿ ಬದುಕುವ ರಮೇಶನೊಡನೆ ಬದುಕುವುದು ಸಾಧ್ಯ ಎನ್ನುವಂತಹ ನಂಬಿಕೆಗಳು ಗಂಗಾಳಿಗೆ ನಿಧಾನವಾಗಿ ಬರತೊಡಗಿದ್ದವು. ಹಾಗೆಯೇ ಗಂಗಾ ತನ್ನ ವ್ಯಕ್ತಿತ್ವದ ಭಾಗ ಎಂಬಂತೆ ರಮೇಶ್ ಕೂಡಾ ಭಾವಿಸತೊಡಗಿದ್ದ. ಹೀಗೆಯೇ ಲೈಬ್ರರಿಯೊಂದರಲ್ಲಿ ಕುಳಿತು ಓದುವುದಕ್ಕೆಂದು ಗಂಗಾ/ರಮೇಶ್ ಒಟ್ಟಾಗಿಯೇ ಕೊಠಡಿ ಬಿಟ್ಟರು. ಹೊರಗಡೆ ಸ್ವಲ್ಪ ಸ್ವಲ್ಪ ಮಂಜು ಸುರಿಯುತ್ತಿದ್ದುದರಿಂದ ತಲೆಗೆ ಕ್ಯಾಪ್ ಹಾಕಿಕೊ ಎಂದು ರಮೇಶ ಗಂಗಾಳನ್ನು ಒತ್ತಾಯಿಸಿದ್ದ. 'ಅಯ್ ಪರವಾಗಿಲ್ಲ ಬಾ ರಮೇಶ್' ಎಂದು ಗಂಗಾ ಹೊರಗೆ ಕಾಲಿಟ್ಟುಬಿಟ್ಟಿದ್ದಳು. ಸ್ವಲ್ಪ ಜಾಸ್ತಿ ಮಂಜು ಸುರಿಯುತ್ತಿರುವುದನ್ನು ರಮೇಶ ಜ್ಞಾಪಿಸಿದಾಗಲೂ ಗಂಗಾ ನಿರ್ಲಕ್ಷ್ಯಿಸಿಯೇ ಹೊರಟಿದ್ದಳು. ರಮೇಶ ತನ್ನ ತಲೆಗೆ ಕ್ಯಾಪ್ ಹಾಕಿಕೊಂಡು ಬಂದ. ಲೈಬ್ರರಿಯಲ್ಲಿ ಕೂತು ಕೆಲಸ ಮಾಡಿ ಮುಗಿಸುವವರೆಗೆ ಗಂಗಾಳಿಗೆ ಏನೂ ಅನ್ನಿಸಲಿಲ್ಲ. ಆದರೆ ಸಾಯಂಕಾಲದ ಅಷ್ಟು ಹೊತ್ತಿಗೆ ಗಂಗಾಳಿಗೆ ಚಳಿ-ಜ್ವರ ಎನ್ನುವಂತೆ ಭಾಸವಾಗತೊಡಗಿತ್ತು. ಬರುವಾಗ ಗಂಗಾ ನಡುಗುವುದನ್ನು ರಮೇಶ ಗಮನಿಸಿದ. 'ನೀನು ತಲೆಹರಟೆ, ಹೇಳಿದ ಮಾತನ್ನೇ ಕೇಳುವುದಿಲ್ಲ' ಎಂದು ತನ್ನ ತಲೆಯ ಮೇಲಿದ್ದ ಕ್ಯಾಪನ್ನು ಆಕೆಗೆ ನೀಡಿದ. ಗಂಗಾ ಮಾತನಾಡದೇ ತಲೆಯಲ್ಲಿ ಧರಿಸಿಕೊಂಡಿದ್ದಳು. ಕೊಠಡಿ ತಲುಪುವ ವೇಳೆಗಾಗಲೇ ಗಂಗಾಳಿಗೆ ಜ್ವರ ಜಾಸ್ತಿ ಆಗಿತ್ತು. ಗಂಗಾ ಹೀಗೆ ಮಲಗಿದ್ದು ಮೊದಲ ಬಾರಿಗೆ. ರಮೇಶ್ ಆಕೆಯ ಮೇಲೆ ಎರಡು ಮೂರು ಬೆಡ್‌ಶೀಟ್ ಹೊದಿಸಿದ್ದರೂ ಆಕೆಗೆ ಚಳಿ ಕಡಿಮೆ ಆಗಿರಲಿಲ್ಲ. ಆದಿನ ಗಂಗಾ ಊಟ ಸೇರದೇ ಹಾಗೆಯೇ

ಮಲಗಿಬಿಟ್ಟಿದ್ದಳು. ನಿದ್ರೆಯನ್ನೂ ಮಾಡಿರಲಿಲ್ಲ. ಬೆಳಗಿನ ಜಾವ ಎರೆಡರ ಹೊತ್ತಿಗೆ ಎದ್ದು ಕುಳಿತಳು. ಮೈ ಬೆಂಕಿಯಂತೆ ಸುಡು ಸುಡು ಎಂದ ಹಾಗೆ ಗಂಗಾ ನೋವಿನಿಂದ ನರಳತೊಡಗಿದ್ದಳು. ಅಷ್ಟು ಹೊತ್ತಿಗೆ ಯಾವ ಡಾಕ್ಟರ್ ಕರೆಯುವುದೆಂದು ರಮೇಶನಿಗೆ ಅರ್ಥವಾಗಲಿಲ್ಲ. ಗಂಗಾ ಬೆಡ್ ಬಿಟ್ಟು ನೆಲದ ಮೇಲೆಯೇ ಮಲಗುತ್ತೇನೆ ಎಂದು ಹಟ ಮಾಡತೊಡಗಿದ್ದಳು. ಅವಳ ಮೈಯಲ್ಲಿ ಅಷ್ಟೊಂದು ಜ್ವರ ಇತ್ತು. ಗಂಗಾ ನೋವಿಗೆ ಒದ್ದಾಡುವುದನ್ನು ಕಂಡಾಗ ರಮೇಶನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಪಕ್ಕದ ಕೋಣೆಯಲ್ಲಿದ್ದ ಆಕೆಯ ಗೆಳತಿಯರು - ಥೈಲ್ಯಾಂಡ್ ಹಾಗೂ ಫಿಲಿಪೈನ್ಸ್ ಹುಡುಗಿಯರನ್ನು ರಮೇಶ ಕರೆತಂದಿದ್ದ. ಥೈಲ್ಯಾಂಡ್ ಹುಡುಗಿ 'ನನ್ನ ಹತ್ತಿರ ಔಷಧಿ ಇದೆ' ಎಂದು ತಂದುಕೊಟ್ಟಳು. ಗಂಗಾ ಆ ಔಷಧಿ ಕುಡಿದು ಸ್ವಲ್ಪ ಹೊತ್ತಿಗೆ ನಿದ್ರಿಸಿದಾಗ ರಮೇಶ ನಿಟ್ಟುಸಿರುಬಿಟ್ಟಿದ್ದ. ಗಂಗಾಳನ್ನು ಹೀಗೆ ಅಸಹಾಯಕಳನ್ನಾಗಿ ರಮೇಶ ಕಂಡದ್ದೇ ಈ ಸಂದರ್ಭದಲ್ಲಿ. ಮರುದಿನ ಗಂಗಾಗೆ ಜ್ವರ ಇರದಿದ್ದರೂ ಆಕೆ ಊಟ ಮಾಡಿರಲಿಲ್ಲ. ಎರೆಡು-ಮೂರು ಬಾರಿ ವಾಂತಿ ಮಾಡಿಕೊಂಡಿದ್ದಳು. ಊಟ ನೋಡಿದರೇ ವಾಂತಿ ಬರುವಂತಾಗುತ್ತಿತ್ತು. ಗಂಗಾಗೆ ಇದು ಕೇವಲ ಜ್ವರವೇ ಎಂದು ಅನುಮಾನ ಬರತೊಡಗಿತ್ತು. ಮತ್ತೆ ಎಣಿಸಿದ ದಿನಗಳಲ್ಲಿ ಹೊರಗಾಗದಿದ್ದಾಗ ಆಕೆಗೆ ಗಾಬರಿಯಾಗತೊಡಗಿತ್ತು. ಈ ಕುಟುಂಬ ಯೋಜನೆಯ ಕ್ರಮಗಳನ್ನೇ ನಂಬುವ ಹಾಗಿಲ್ಲ. ನಿರೋಧ್ ಬಳಸದೇ ತಾನು ರಮೇಶ್ ಒಟ್ಟಿಗೆ ಮಲಗಿದವರೇ ಅಲ್ಲ. ಅಥವಾ 'ಸೇಫ್ ಪೀರಿಯಡ್' ಅಂದುಕೊಳ್ಳುವ ದಿನಗಳೂ ಕೈ ಕೊಟ್ಟುಬಿಡುತ್ತವೆಯೇನೋ ಎಂಬ ತನ್ನ ಅನುಮಾನವನ್ನು ಗಂಗಾ-ರಮೇಶನಲ್ಲಿ ತೋಡಿಕೊಂಡಿದ್ದಳು. ರಮೇಶನಿಗೆ ಗಾಬರಿಯಾಗಿತ್ತು. ಓದುವುದು, ಬರೆಯುವುದು ಸಾಕಷ್ಟಿತ್ತು. ಗಂಗಾಗೂ ತೊಂದರೆಯಾಗುತ್ತದೆ. ಗಂಗಾ ವಾರಗಟ್ಟಲೇ ಊಟ ಸೇರದೇ ವಾಂತಿ ಮಾಡತೊಡಗಿದಾಗ ರಮೇಶನಿಗೆ ಇನ್ನೂ ಆತಂಕ ಹೆಚ್ಚಾಗತೊಡಗಿತ್ತು. ಅವಳು ಏನನ್ನು ತಿನ್ನಲು ಬಯಸುತ್ತಾಳೋ ಅಂತಹುದನ್ನೇ ರಮೇಶ ಆಕೆಗೆ ತಂದುಕೊಡುತ್ತಿದ್ದ. ಗಂಗಾ ರಮೇಶನಿಗೆ, "ಏನು ಮಾಡೋಣ ರಮೇಶ್, ಮಗುವನ್ನು ಕರೆದುಕೊಂಡು ಇಂಡಿಯಾಕ್ಕೆ ವಾಪಸ್ಸು ಹೋಗುವುದೇ?" ಎಂದು ತಮಾಷೆ ಮಾಡುತ್ತಿದ್ದಳು. ಹೀಗೆ ತಮಾಷೆ ಮಾಡುತ್ತಿದ್ದರೂ ಆಕೆಗೆ ಒಳಗೊಳಗೇ ಭಯ ಇತ್ತು. ತಮ್ಮಿಬ್ಬರ ಬದುಕೇ ನಿಶ್ಚಿತವಲ್ಲ. ಗಂಗಾ ಕೆಲಸಕ್ಕೆ ಸುಮ್ಮನೇ ಒಂದು ರಜಾ ಹಾಕಿ ಬಂದಿದ್ದಳು ಅಷ್ಟೇ. ಆದರೆ ಆ ಕೆಲಸ ಇರುತ್ತದೆ ಎನ್ನುವ ಗ್ಯಾರಂಟಿ ಕೂಡಾ ಇಲ್ಲ. ರಮೇಶ ಕೆಲಸ ಮಾಡುತ್ತಿದ್ದುದು ಖಾಸಗಿ ಸಂಸ್ಥೆಯಲ್ಲ. ಈಗಿನ ಆತನ ಬೆಳವಣಿಗೆಯಲ್ಲಿ ರಮೇಶ ಆ ಕೆಲಸದಲ್ಲಿಯೇ ಮುಂದುವರೆಯಬಹುದೆಂಬ ನಂಬಿಕೆಯೂ ಇರಲಿಲ್ಲ. ಪಾರ್ವತಿ ಕೆಲಸಕ್ಕೆ ರಾಜೀನಾಮೆ ನೀಡಿದ್ದಾಳೆ. ಬೆಂಗಳೂರು ಬಿಡುವಾಗ ಗಂಗಾ ಇದ್ದುದು ಪಾರ್ವತಿಯ ಜೊತೆಗೇ. ಈಗ ಆಕೆ ಅದೇ ಮನೆಯಲ್ಲಿಯೇ ಇದ್ದಾಳೆ. ತಾನು/ರಮೇಶ ಬೆಂಗಳೂರಿಗೆ ಹೋದ ಕೂಡಲೇ ಎಲ್ಲಿ ಇರುವುದು? ಇಂತಹ ಪ್ರಶ್ನೆಗಳನ್ನೆಲ್ಲ ರಮೇಶ-ಗಂಗಾ ಯೋಚಿಸಿಯೇ ಇರಲಿಲ್ಲ. ಈಗ ಮಗುವಿನ ಸಂದರ್ಭದಲ್ಲಿ ಇಂತಹ ಪ್ರಶ್ನೆಗಳೆಲ್ಲ ಅನಿವಾರ್ಯವಾಗಿ ಚರ್ಚೆಗೆ ಬಂದಿದ್ದವು. ಇಂತಹ ಪ್ರಶ್ನೆಗಳ ಹಿನ್ನೆಲೆಯಲ್ಲಿ ಅಬಾರ್ಷನ್ ಮಾಡಿಸುವುದೇ ಉತ್ತಮ ಎಂದು ಇಬ್ಬರೂ ಆಲೋಚಿಸಿದರು. ಅಧ್ಯಯನದ ಕೊನೆಯ ಭಾಗವಾದ ಥೀಸಿಸ್ ಮುಗಿಸಲೇಬೇಕಿತ್ತು. ಈ ಎಲ್ಲಾ ಕೆಲಸಗಳ ಒತ್ತಡದಲ್ಲಿ ಮಗು ಒಂದು ಹೊರೆಯಾಗಬಹುದು ಎಂದು ಎಣಿಸಿದ್ದರಿಂದ ಇಬ್ಬರೂ ಡಾಕ್ಟರ್ ಒಬ್ಬರನ್ನು ಹುಡುಕಿಕೊಂಡು ಹೋದರು. ಅಷ್ಟು ಪಾಶ್ ಆದ ಆಸ್ಪತ್ರೆ ನೋಡಿದಾಗ ಗಂಗಾಗೆ ತಾನು ಬೆಂಗಳೂರಿನಲ್ಲಿ ಮೂಲೆಯೊಂದರ ಆಸ್ಪತ್ರೆಗೆ ಹೋದದ್ದು ನೆನಪಾಗಿತ್ತು. ಎಷ್ಟು ಅಜಗಜಾಂತರ ಎಂದುಕೊಂಡಳು. ಡಾಕ್ಟರ್ 'ಎಸ್' ಎಂದಾಗ ಗಂಗಾ/ರಮೇಶ್ ಇಬ್ಬರೂ ಡಾಕ್ಟರ್ ಮುಂದೆ ನಿಂತಿದ್ದರು. ಗಂಗಾ ತಾನು ಗರ್ಭಿಣಿ ಇರಬಹುದು, ಹಾಗಾಗಿ ಅಬಾರ್ಷನ್ ಮಾಡಿಸಿಕೊಳ್ಳಲಿಕ್ಕೆ ಬಂದಿದ್ದೇನೆಂದು ನುಡಿದಳು. ಡಾಕ್ಟರ್ ನಕ್ಕರು.

‘ಯಾಕೆ ಮಗು ಬೇಡವೇ?’ ಎಂದರು. ಅದಕ್ಕೆ ರಮೇಶ ‘ಬೇಕು ಡಾಕ್ಟರ್, ಆದರೆ ಈಗಲ್ಲ, ನಾವಿಬ್ಬರೂ ಅಧ್ಯಯನದಲ್ಲಿ ತೊಡಗಿಕೊಂಡವರು. ನಮಗೆ ಕೆಲಸದ ಒತ್ತಡಗಳು ಬಹಳ. ಹಾಗಾಗಿ ಮಗುವಿನ ಬಗ್ಗೆ ನಿಧಾನವಾಗಿ ನಿರ್ಧರಿಸುತ್ತೇವೆ’. ಡಾಕ್ಟರ್ ಗಂಗಾಳತ್ತ ನೋಡಿ ನುಡಿದರು. ‘ಪ್ರತಿ ಸಲ ದೇಹದಿಂದ ರಕ್ತ ಹೋಗಲು ಬಿಡುವುದು ಒಳ್ಳೆಯದಲ್ಲ. ನೀವು ಮಗುವನ್ನು ಕೊಂದು ಪಾಪ ಮಾಡುತ್ತೀರಿ, It is a great sin you know’. ಡಾಕ್ಟರ್ ಹೀಗೆ ನುಡಿದಾಗ ಗಂಗಾಗೆ ಆಶ್ಚರ್ಯವಾಯಿತು. ಇದ್ಯಾವ ಪಾಪ ಪ್ರಜ್ಞೆ ಎಂಬುದು ಆಕೆಗೆ ಅರ್ಥವಾಗಲು ಬಹಳ ಸಮಯ ಬೇಕಾಗಿತ್ತು. ಮಾತು ಮಾತಿಗೆ ಪಾಪ-ಪುಣ್ಯದ ಬಗ್ಗೆ ಮಾತನಾಡುವ ಭಾರತ ನಾಡಿನಲ್ಲಿಯೇ ಡಾಕ್ಟರ್ ಕುಟುಂಬ ಯೋಜನೆಯ ಬಗ್ಗೆಯೇ ಪ್ರತಿಯೊಬ್ಬರಿಗೂ ಹೇಳುತ್ತಾರೆ. ಅಬಾರ್ಷನ್‌ನಂತಹ ಸಂದರ್ಭದಲ್ಲಿ ಸುಮಾರು ಆಸ್ಪತ್ರೆಗಳಲ್ಲಿ ಕೆಟ್ಟದ್ದಾಗಿ ವರ್ತಿಸುತ್ತಾರೆ ಕೂಡಾ. ಆದರೆ ಇದು ಪಾಪ/ಪುಣ್ಯ ಎಂದು ಡಾಕ್ಟರ್ ಮಾತನಾಡುವುದಿಲ್ಲ. ಈ ಡಾಕ್ಟರ್ ಎಷ್ಟೋ ಹೊತ್ತಿನವರೆಗೆ ರಮೇಶ/ಗಂಗಾರಿಗೆ ಮಗುವನ್ನು ತೆಗೆಸದಿರುವಂತೆ ಒಪ್ಪಿಸಲು ಪ್ರಯತ್ನಿಸಿದರು. “ಖಂಡಿತವಾಗಿಯೂ ನೀವು ತಪ್ಪು ಮಾಡುತ್ತಿದ್ದೀರಿ. ನೀವು ಚಿಕ್ಕವರೇ ಹೀಗೆ. ಹೀಗೆ ಮಗುವನ್ನು ಕೊಲ್ಲುವುದು ನಿಮ್ಮ ಆರೋಗ್ಯಕ್ಕೆ, ಮನಸ್ಸಿಗೆ, ಹಾಗೂ ದೇಹಕ್ಕೂ ಒಳ್ಳೆಯದಲ್ಲ”. ಹೀಗೆಲ್ಲಾ ಡಾಕ್ಟರ್ ನುಡಿಯುವಾಗ ಜನಸಂಖ್ಯೆ ಕಡಿಮೆ ಹೊಂದಿರುವ ಹಾಲೆಂಡಿನ ಸಂದರ್ಭದಲ್ಲಿ ಬಹುಶಃ ಅವರು ಗರ್ಭಪಾತವನ್ನು ಪ್ರೋತ್ಸಾಹಿಸುವುದಿಲ್ಲವೇನೋ ಎಂದು ಗಂಗಾಗೆ ಅನ್ನಿಸತೊಡಗಿತ್ತು. ಜನಸಂಖ್ಯೆ ಹೆಚ್ಚಿಸಲು ಬೇಕಾದ ಸ್ಟೇಟ್‌ನ ಸ್ಟ್ರಾಟಜಿಗಳಲ್ಲಿ ಇದೂ ಒಂದಾಗಿರಬಹುದು ಎಂದು ಗಂಗಾಗೆ ಅನ್ನಿಸತೊಡಗಿತ್ತು. ಗರ್ಭಪಾತಕ್ಕೆಂದು ಬಂದವರಿಗೆ ಇವರು ಇದು ತಪ್ಪು, ಪಾಪ, ಆರೋಗ್ಯಕ್ಕೆ ಒಳ್ಳೆಯದಲ್ಲವೆಂದೇ ನುಡಿಯುತ್ತಾರೆ. ಗಂಗಾ ಸುಮಾರು ಹೊತ್ತಿನವರೆಗೆ ಅವರ ಮಾತಿನ ಲಯಗಳಲ್ಲಿ ಅಲ್ಲಿನ ರಾಜಕೀಯದ ನೆಲೆಗಳನ್ನು ಗ್ರಹಿಸಲು ಪ್ರಯತ್ನಿಸುತ್ತಿದ್ದವಳು ಕೊನೆಗೆ ಇದ್ದಕ್ಕಿದ್ದ ಹಾಗೆ ‘ಡಾಕ್ಟರ್ ಸಧ್ಯಕ್ಕೆ ನಮ್ಮ ನಿತ್ಯದ ಒತ್ತಡಗಳ ಕಡೆಗೆ ನಾವು ಗಮನ ಕೊಡಬೇಕಾಗಿದೆ, ಹಾಗಾಗಿ ಅಬಾರ್ಷನ್ ಮಾಡಿಬಿಡಿ’ ಎಂದಳು. ಡಾಕ್ಟರ್ ಸ್ವಲ್ಪ ಹತಾಶೆಯಿಂದಲೇ ನುಡಿದರು, ‘It is my duty to advice you not to go in for abortion. But still if you want to go ahead that is your choice’. ತಾನೋರ್ವ ಬಿಳಿಯ ಡಾಕ್ಟರ್, ಇವರನ್ನು ಸುಲಭವಾಗಿ ಗರ್ಭಪಾತ ಮಾಡದಿರುವಂತೆ ಒಪ್ಪಿಸಬಲ್ಲೆ ಎಂಬ ಅವರ ವಿಶ್ವಾಸಕ್ಕೆ ಪೆಟ್ಟು ಬಿದ್ದಂತಿತ್ತು ಅವರ ಪ್ರತಿಕ್ರಿಯೆ. ‘ಸರಿ’ ಎಂದು ಗಂಗಾಳನ್ನು ಪರೀಕ್ಷಿಸಲು ಕರೆದರು. ಹೊರಗಡೆ ಹೆಜ್ಜೆ ಇಡಲು ಸಿದ್ಧನಾದ ರಮೇಶನಿಗೆ “All right you can be here” ಎಂದರು. ಬೆಂಗಳೂರಿನ ಡಾಕ್ಟರ್ ರೀತಿ ಯೋನಿಯೊಳಗೆ ರಬ್ಬರ್ ಹೊಂದಿದ ಕೈ ತೂರಿಸುವ ಬದಲು ಒಂದು ಚಿಕ್ಕದಾದ ಉಪಕರಣದಿಂದ ಪರೀಕ್ಷಿಸಿದ ಅವರು ‘ನೀವು ಊಹೆ ಮಾಡಿದ್ದು ಸರಿ, ನೀವು ಗರ್ಭಿಣಿ’ ಎಂದರು. ರಮೇಶನ ಕಡೆ ತಿರುಗಿ ‘ನಿಮ್ಮ ನಿರ್ಧಾರ ಬದಲಿಸುವುದಿಲ್ಲವೇ?’ ಎಂದರು. ರಮೇಶ ಗಂಗಾಳ ಕಡೆಗೆ ನೋಡಿದ. ಗಂಗಾ ನಕ್ಕು ‘ಇಲ್ಲ ಡಾಕ್ಟರ್’ ಎಂದು ಮಾತ್ರ ನುಡಿದು ಸುಮ್ಮನಾದಳು. ಕೊನೆಗೆ ಡಾಕ್ಟರ್ ಚೀಟಿಯೊಂದನ್ನು ರಮೇಶನ ಕೈಗೆ ನೀಡಿದರು. ಅಬಾರ್ಷನ್ ಫೀಸ್ ಬಗ್ಗೆ ಗಂಗಾ/ರಮೇಶ ಯೋಚಿಸಬೇಕಾಗಿಯೇ ಇರಲಿಲ್ಲ. ಅಲ್ಲಿ ಈ ಎಲ್ಲಾ ಮೆಡಿಕಲ್ ಖರ್ಚುಗಳನ್ನು ಸರ್ಕಾರವೇ ವಹಿಸಿಕೊಳ್ಳುತ್ತಿದ್ದುದರಿಂದ ಅವರಿಗೆ ಆ ಬಗ್ಗೆ ಆತಂಕವಿರಲಿಲ್ಲ. ಐದಾರು ತಿಂಗಳುಗಳೊಳಗೆ ಥೀಸಿಸ್ ಮುಗಿಸುವ ಬಗ್ಗೆಯೇ ಅವರಿಬ್ಬರ ಯೋಚನೆ. ರಮೇಶ ಆಕೆಯನ್ನು ಸಮಾಧಾನ ಪಡಿಸಿದ್ದ. ಆಕೆ ಕುಳಿತು ಬರೆದುದನ್ನೆಲ್ಲ ತಾನು ಕಂಪ್ಯೂಟರ್‌ನಲ್ಲಿ ದಾಖಲು ಮಾಡುತ್ತೇನೆ ಎಂದು ಹೇಳಿ ಆಕೆ ಸಾಧ್ಯವಾದಷ್ಟು ವಿಶ್ರಾಂತಿ ತೆಗೆದುಕೊಳ್ಳಬಹುದು ಎಂದು ಆಶ್ವಾಸನೆ ಇತ್ತ. ಗಂಗಾಳನ್ನು ಒಂದು ಕೊಠಡಿಯಿಂದ ಇನ್ನೊಂದು

ಕೊಠಡಿಗೆ ವರ್ಗಾಯಿಸಲಾಯಿತು. ಅರ್ಧ ಘಂಟೆಯಲ್ಲಿ ಅಬಾರ್ಷನ್ ಮುಗಿದು ಹೋಗಿತ್ತು. ಗಂಗಾಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದ್ದರಿಂದ ರಮೇಶ ಊಟ ತಂದುಕೊಡುತ್ತೇನೆಂದು ಹೇಳಿ ಹೋದ. ಆಕೆಗೆ ಇಷ್ಟವಾದ ಚಿಕನ್ ರೈಸ್‌ನೊಡನೆ ಒಂದಿಷ್ಟು ಹಣ್ಣು ತಂದು ಗಂಗಾಳಿಗಿತ್ತ. ಸಾಯಂಕಾಲ ಇಬ್ಬರೂ ಹೊರಗಡೆ ಬಂದಾಗ ವಿಶಾಲವಾದ ಬಯಲಿನಲ್ಲಿನ ಮರದ ಕೆಳಗೆ ಸ್ವಲ್ಪ ಹೊತ್ತು ಕುಳಿತುಕೊಂಡರು. ಗಂಗಾ ತನ್ನ ಮನಸ್ಸಿಗೆ ಏನೆನಿಸುತ್ತದೆ ಎಂಬುದನ್ನು ಯೋಚಿಸುತ್ತಾ ಕುಳಿತುಕೊಂಡಳು. ಬೆಂಗಳೂರಿನಲ್ಲಿ ತಾನು ಗರ್ಭಿಣಿ ಎಂಬ ಭ್ರಮೆಯಲ್ಲಿ ಒದ್ದಾಡಿದ್ದನ್ನು, ಹೈದರಾಬಾದ್‌ನಲ್ಲಿ ಸರೋಜನ್ ಜೊತೆ ಕುಳಿತು ತಾನು ಈ ಬಗ್ಗೆ ಮಾತನಾಡಿದ್ದನ್ನು ಜ್ಞಾಪಿಸಿಕೊಂಡು ಗಂಗಾ ರಮೇಶನ ಹತ್ತಿರ ಹೇಳಿದಳು. ಈಗ ಅಬಾರ್ಷನ್ ಮಾಡಿಸುವ ಬದಲು ಮಗು ಆಗಿದ್ದರೆ, ಆ ಮಗು ತಮ್ಮಿಬ್ಬರ ನಡುವೆ ಕೊಂಡಿಯಾಗಿ ಇರುತ್ತಿತ್ತೇನೋ ಎಂಬ ವಿಚಿತ್ರ ಅನಿಸಿಕೆ ತನ್ನ ಮನಸ್ಸಿಗೆ ಆಗಾಗ್ಗೆ ಬರುತ್ತಿತ್ತು ಎಂದು ನುಡಿದಳು. ರಮೇಶನಿಗೂ ಹಾಗೆಯೇ ಅನ್ನಿಸಿದ್ದುಂಟು. ತನ್ನ ಹಾಗೂ ಗಂಗಾಳ ಮಧ್ಯೆ ಕೊಂಡಿಯಾಗಿ, ತಮ್ಮ ವ್ಯಕ್ತಿತ್ವದ ಭಾಗವಾಗಿ ಮಗು ಇದ್ದಿದ್ದರೆ ಭಾರತಕ್ಕೆ ಮರಳಿದಾಗ ತಮ್ಮ ಜೀವನಕ್ಕೊಂದು ಆ ಮಗು ಕೇಂದ್ರಬಿಂದುವಾಗುತ್ತಿತ್ತೇನೋ? ಆದರೆ ನಿತ್ಯದ ಕಿರಿಕಿರಿಗಳು? ಸಧ್ಯಕ್ಕೆ ಓದುವ, ಬರೆಯುವ ಕೆಲಸದ ಒತ್ತಡಗಳು, ಬೆಂಗಳೂರಿನಲ್ಲಿ ಕೆಲಸದ ಭದ್ರತೆ ಇಲ್ಲದಿರುವುದು ಇಂತಹದರಲ್ಲಿ ಮಗುವಾದರೆ ಜವಾಬ್ದಾರಿಗಳನ್ನು ಹೇಗೆ ನಿಭಾಯಿಸುವುದು? ಗಂಗಾ ಖಂಡಿತವಾಗಿಯೂ ಕಿರಿ ಕಿರಿ ಮಾಡಿಕೊಳ್ಳುತ್ತಾಳೆ. ರಮೇಶ ಹೇಳುತ್ತಾನೆ, "ಗಂಗಾ ನಮ್ಮ ಬದುಕೇ ಇನ್ನೂ ಸ್ಪಷ್ಟವಾಗಿ ರೂಪುಗೊಂಡಿಲ್ಲ. ಸಧ್ಯಕ್ಕೆ ನಮ್ಮ ಅಧ್ಯಯನ ಮುಗಿಸೋಣ, ಬೆಂಗಳೂರಿಗೆ ವಾಪಸ್ಸು ಹೋಗೋಣ, ನಂತರ ನಮ್ಮ ಬದುಕು, ಬದುಕಿನ ಕೇಂದ್ರ ಬಿಂದುಗಳ ಬಗ್ಗೆ ಯೋಚಿಸೋಣ, ಈಗ ಯೋಚಿಸಿ ಫಲವೇನು?". ನಂತರ ಗಂಗಾ/ರಮೇಶ ಟ್ರ್ಯಾಮ್ ಸ್ಟೇಷನ್‌ನವರೆಗೂ ನಡೆದೇ ಹೊರಟರು.

ಹತ್ತು ದಿನದವರೆಗೆ ಗಂಗಾ ಏನು ಕೆಲಸ ಮಾಡಲಿಕ್ಕೂ ರಮೇಶ ಬಿಡುತ್ತಿರಲಿಲ್ಲ. ಆಕೆಗೆ ಸೇರಬಹುದಾದ ಪದಾರ್ಥಗಳನ್ನೇ ಹೋಟೆಲ್‌ನಿಂದ ತಂದುಕೊಡುತ್ತಿದ್ದನು. ಇಲ್ಲದಿದ್ದರೆ ತಿಳಿಯ ಸಾರು ಮಾಡಿ ಅನ್ನ ಮಾಡಿಡುತ್ತಿದ್ದ. ಈ ಹತ್ತು ದಿನಗಳಲ್ಲಿ ಗಂಗಾ ತನ್ನ ಅಧ್ಯಯನ ಸಂಸ್ಥೆಗಾಗಲೀ, ರೋಹಿಣಿಯ ಮನೆಗಾಗಲೀ ಹೋಗಿರಲಿಲ್ಲ. ಆಕೆ ಬರೆದುದನ್ನು ಕಂಪ್ಯೂಟರ್‌ನಲ್ಲಿ ದಾಖಲಿಸುವ ಕೆಲಸವನ್ನೂ ರಮೇಶನೇ ಮಾಡುತ್ತಿದ್ದ. ಹೀಗೆ ಮನೆ/ಆಚೆಯ ಕೆಲಸಗಳನ್ನು ಮುತುವರ್ಜಿಯಿಂದಲೇ ನೋಡಿಕೊಳ್ಳುತ್ತಿದ್ದ ರಮೇಶನ ಬಗ್ಗೆ ಗಂಗಾಗೆ ಪ್ರೀತಿಯ ಜೊತೆಗೆ ನಿಧಾನವಾಗಿ ಗೌರವವೂ ಮೂಡತೊಡಗಿತ್ತು. ರಮೇಶನಿಗೆ ಗಂಗಾ ತನ್ನ ಜೀವನದ ಭಾಗ ಎನಿಸುವ ಹಾಗೆ ಗಂಗಾಗೆ ಕೂಡಾ ರಮೇಶ ತನ್ನ ಜೀವನದ ಭಾಗ ಎನಿಸತೊಡಗಿತ್ತು. ರಮೇಶ ತೋರಿಸುತ್ತಿದ್ದ ಪ್ರೀತಿಯಲ್ಲಿ ತಂದೆಯ ಕೇರ್ ಇತ್ತು, ತಾಯಿಯ ಬೆಚ್ಚನೆಯ ಹೃದಯವಿತ್ತು. ನಿತ್ಯದ ಬದುಕಿನಲ್ಲಿ ರಮೇಶನೊಡನೆ ಬದುಕುವುದು ಕಷ್ಟವಾಗಲಾರದೇನೋ ಎನ್ನುವ ಭರವಸೆ ಗಂಗಾಳಲ್ಲಿ ಮೂಡತೊಡಗಿದಾಗ ಆಕೆ ಸಮಾಧಾನದಿಂದ ನಿಟ್ಟುಸಿರುಬಿಟ್ಟಳು.

* * * *

ಡೆನ್‌ಹಾಗ್‌ನಲ್ಲಿ ತಮ್ಮ ಕಾನ್‌ವೊಕೇಶನ್ ಮುಗಿದ ಮರುದಿನವೇ ಗಂಗಾ/ರಮೇಶ್ ಭಾರತಕ್ಕೆ ಹೊರಟು ನಿಂತಾಗ ರೋಹಿಣಿ ತುಂಬು ಹೃದಯದಿಂದ ಬೀಳ್ಕೊಟ್ಟರು. ಎಲ್ಲಾ ಗೆಳತಿಯರೂ ತಮ್ಮ ತಮ್ಮ ದೇಶಗಳಿಗೆ ಹೊರಟುಬಿಡುವ ಸಂಭ್ರಮದಲ್ಲಿದ್ದುದರಿಂದ ಕಾನ್‌ವೊಕೇಶನ್ ಮುಗಿದ ಮರುದಿನವೇ ಒಬ್ಬರಿಗೊಬ್ಬರು ಹೃದಯಪೂರ್ವಕವಾಗಿ ಬೀಳ್ಕೊಟ್ಟಿದ್ದರು. ಕುಮುದಿನಿ/ಕಮಲಮ್ ಮತ್ತೆ ಎಂದಾದರೂ

ಸಿಕ್ಕೇ ಸಿಗುತ್ತೇವೆ ಎಂಬ ಭರವಸೆ ವ್ಯಕ್ತಪಡಿಸಿದ್ದರು. ಹಿಂದಿನ ದಿನ ರೋಹಿಣಿಯ ಮನೆಯಲ್ಲಿ ಊಟ ಮಾಡುವಾಗ Keep your strength, and keep writing ಎಂಬ ಎರಡು ಶಬ್ದಗಳ ಮೂಲಕ ರೋಹಿಣಿ ಆತ್ಮೀಯವಾಗಿ ಬೀಳ್ಕೊಟ್ಟಿದ್ದರು. 'ರೋಹಿಣಿ ನೀವು ಭಾರತಕ್ಕೆ ವಾಪಸ್ಸು ಬಂದು ಬಿಡಿ, ಅದ್ಹೇಗೆ ಇಂತಹ ಅಪರಿಚಿತ ಊರಿನಲ್ಲಿ ಕುಳಿತು ಬದುಕಿನ ಬೇರುಗಳನ್ನು ಹುಡುಕುತ್ತೀರಿ, ನನಗಂತೂ ಅರ್ಥವಾಗುವುದಿಲ್ಲ' ಎಂದು ಗಂಗಾ ರೋಹಿಣಿಯ ಕೈ ಹಿಡಿದು ಹೇಳಿದ್ದಳು. ರೋಹಿಣಿ ತಲೆಯಲ್ಲಾಡಿಸಿದ್ದರು. 'ಇಲ್ಲಿ ಒಂದು ಒಳ್ಳೆಯ ಕೆಲಸವಾದರೂ ಇದೆ. ಇಂಡಿಯಾಕ್ಕೆ ಬಂದು ಸದ್ಯಕ್ಕೆ ಏನು ಮಾಡುವುದು ಗಂಗಾ' ಎಂದು ರೋಹಿಣಿ ಹೇಳಿದಾಗ ಅವರ ಮಾತಿನಲ್ಲಿ ರಂಜನ್‌ರವರ ಅಸಹಾಯಕತೆ ಅಡಕವಾಗಿದೆಯೇನೋ ಎಂದು ಗಂಗಾಗೆ ಅನ್ನಿಸತೊಡಗಿತ್ತು. ಭಾರತದಿಂದ ಇನ್‌ಸ್ಟಿಟ್ಯೂಟ್‌ಗೆ ಬಂದ ಇಬ್ಬರು ಗೆಳತಿಯರು ಅಲ್ಲಿಯೇ ಇದ್ದುಬಿಡಲು ನಿರ್ಧರಿಸಿ ಕೆಲಸಕ್ಕೆ ಪ್ರಯತ್ನಿಸುತ್ತಿದ್ದರು. ಬದುಕಿನಲ್ಲಿ ಬೇರುಗಳೇ ಇಲ್ಲದೇ ಈ ಜನ ಅದ್ಹೇಗೆ ಅಲೆಮಾರಿಗಳ ತರಹ ಇಲ್ಲಿ ಬದುಕುತ್ತಾರೋ ಎಂದು ಗಂಗಾಗೆ ಆಶ್ಚರ್ಯವಾಗುತ್ತಿತ್ತು. ಡೆನ್‌ಹಾಗ್ ಬಿಡುವ ದಿನ ಮಧ್ಯಾಹ್ನದ ಸಮಯದಲ್ಲಿ flight ಇದ್ದುದರಿಂದ ಬೆಳಿಗ್ಗೆ ಬೆಳಿಗ್ಗೆ ಗಂಗಾ ತನ್ನ ಪ್ರೀತಿಯ ಸಮುದ್ರದ ಬಳಿಗೆ ಓಡಿ ಹೋಗಿದ್ದಳು. ಸಮುದ್ರದ ಮಧ್ಯದಲ್ಲಿ ಪ್ರಯಾಣ ಮಾಡಿ ಬಂದುದರಿಂದ ಈಗ ಡೆನ್‌ಹಾಗ್‌ನ ಸಮುದ್ರ ಗಂಗಾಳ ಕಣ್ಣಿಗೆ ಹೊಸದಾಗಿ ಕಾಣಿಸತೊಡಗಿತ್ತು. ಹಾಲೆಂಡಿಗೆ ಬಂದಾಗಿನಿಂದ ತನ್ನ ದುಃಖ/ದುಮ್ಮಾನ/ಸಂಕೋಚ ಎಲ್ಲವನ್ನೂ ಹಂಚಿಕೊಂಡ ಸಮುದ್ರದತ್ತ ನೋಡುವಾಗ ಗಂಗಾಗೆ ರೋಚಕತೆಯಿಂದ ಮೈ ಅದುರಿತ್ತು. ಈ ಸಮುದ್ರ, ಸಮುದ್ರದ ಅಲೆಗಳು ತನ್ನ ಮನಸಿನಾಳದಲ್ಲಿ ಕೊನೆಯವರೆಗೆ ತನ್ನ ಒಂದು strength ಆಗಿಯೇ ಉಳಿಯಲಿ ಎಂಬಂತೆ ಆಕೆ ತನ್ನ ಕಣ್ಣುಗಳು ವೀಕ್ಷಿಸಲು ಸಾಧ್ಯವಾಗುವಷ್ಟು ಮಟ್ಟಿಗಿನ ದೂರದವರೆಗೆ ಸಮುದ್ರವನ್ನು ವೀಕ್ಷಿಸಿದ್ದಳು. ತನ್ನೊಳಗಿನದನ್ನು ಬರೆಯಬೇಕು, ಬರೆದು ಜೀರ್ಣಿಸಿಕೊಂಡೇ ತನ್ನೆಲ್ಲ ಅನುಭವಗಳಿಗೆ ಒಂದು ಧ್ವನಿ ಕೊಡಬೇಕು ಹೀಗೇ ಏನೇನೋ ಯೋಚಿಸಿ ಕೊನೆಯದಾಗಿ ಬರೆಯಲು ಪ್ರಾರಂಭಿಸಿದಾಗ ಗಂಗಾಗೆ ನೆನಪಾದದ್ದು ಗಾಂಧಿಯ ಚಿತ್ರವೇ. ಸಮುದ್ರದ ಅಲೆಗಳಲ್ಲಿ ತೇಲಿ ಬರುವಂತೆ ಕಾಣುವ ಗಾಂಧಿಯ ಚಿತ್ರಣದಲ್ಲಿ ಏನೇನೋ ಯೋಚಿಸುತ್ತಾ ಬರೆಯುತ್ತಾ ಕುಳಿತಾಗ ಗಂಗಾ ಬರೆದದ್ದು ತಾನು ಹಿಂದೆಂದೋ ಬರೆದ ಸಾಲುಗಳನ್ನೇ

ಗಾಂಧಿ ದೊಡ್ಡ ಮನುಷ್ಯ
ಆಹಾರದ ಮೂಲದಲ್ಲಿ
ಕಾಮದ ಮೂಲದಲ್ಲಿ
ಹಣದ ಮೂಲದಲ್ಲಿ
ಹಿಂಸೆಯ ಬೇರುಗಳನ್ನು ಕಂಡಿದ್ದ
ಕ್ಯಾಪಿಟಲಿಸಂನ ಮುಖಗಳನ್ನು ಕಂಡಿದ್ದ

* * * *

ಭಾಗ - ೫

ಎಲ್ಲೋ ದೂರದಲ್ಲಿ ಶಬ್ದ. ಅದರ ಮಧ್ಯೆ ಕಾಣುವುದು ಸಮುದ್ರದಂತಹ ದೊಡ್ಡ ನದಿ. ಯಾವುದೋ ರಾಗದಂತೆ ಹಾಡಿ ಬರುವ ಜುಳು, ಜುಳು ನೀರಿನ ಮಧ್ಯೆ ಏನೋ ತೇಲಿ ಬರುವ ಹಾಗೆ. ಎಲ್ಲಾ ಅಸ್ಪಷ್ಟ. ಎಲ್ಲಾ ಅಸ್ಪಷ್ಟ. ಕಣ್ಣೊರಸಿ ನೋಡಿದರೂ ಯಾವುದೂ ಸ್ಪಷ್ಟವಾಗಿ ಕಾಣಿಸಲಾರದು. ತಿಕ್ಕಿ ತಿಕ್ಕಿ ಕೆಂಪಾದ ಆಕೆಯ ಕಣ್ಣುಗಳಿಗೆ ಕಾಣುವುದು ಗುಂಡಗಿನ ಚಿತ್ರ. ಯಾವ ಚಿತ್ರವೆಂದು ಆಕೆ ಕುತೂಹಲದಿಂದ ವೀಕ್ಷಿಸುತ್ತಾಳೆ. ಯಾವುದೂ ಗೊತ್ತಾಗುವುದಿಲ್ಲ.

ಬೆಳಿಗ್ಗೆ ಎದ್ದಾಗ ಮತ್ತೆ ಮತ್ತೆ ತನ್ನ ಕನಸನ್ನು ಕುರಿತು ಗಂಗಾ ಯೋಚಿಸುತ್ತಾಳೆ. ತಾನು ಕನಸಿನಲ್ಲಿ ಕಂಡ ಚಿತ್ರ ಯಾವುದು? ಕಂಡು ಬಂದ ಮುದ್ದು ಮುಖದಲ್ಲಿ ಹೆಣ್ಣು ಕಳೆಯಿತ್ತೋ, ಗಂಡು-ಕಳೆಯಿತ್ತೋ? ಸಮುದ್ರದಂತೆ ಕಾಣುವ ಮಹಾಸಾಗರದಲ್ಲಿ ಕಾಣುವ ಚಿತ್ರ. ಕನಸಿನಲ್ಲಿ ಮಗು ಬಂದರೆ ಹುಟ್ಟುವ ಮಗು ಯಾವುದು? ಹಾಗೆಂದು ಪಕ್ಕದಲ್ಲಿ ಮಲಗಿರುವ ರಮೇಶನನ್ನು ಕೇಳಿದರೆ, ಕನಸನ್ನು ವಿವರಿಸಿದರೆ "ಮತ್ತೆ ನಾಲ್ಕೈದು ಮಾಸದಲ್ಲಿ ಆ ಚಿತ್ರವೇ ಹೊರಗೆ ಬಂದು ಬಿಡುತ್ತದೆ. ಅಷ್ಟೇನು ಅವಸರ" ಎನ್ನುತ್ತಾನೆ. 'ಯಾವುದು ಹುಟ್ಟಿದರೂ ಸರಿ, ಸರಿಯಾಗಿ ಹುಟ್ಟಿದರೆ ಯಾವ ಮಗುವಾದರೆ ಏನು?'. ಹೀಗೆ ರಮೇಶ ಹೇಳಿದಾಗ ಮಗುವಿನ ಬಗ್ಗೆ ಅನ್‌ರೊಮ್ಯಾಂಟಿಕ್ ಆಗಿರುವ ರಮೇಶನನ್ನು ನೋಡಿ ಗಂಗಾಗೆ ಸಿಟ್ಟು ಬರುತ್ತದೆ. ತಾನು ಈಗ ಮಗು ಪಡೆಯಲಿಚ್ಛಿಸುತ್ತಿರುವುದು - ತನಗೆ ನಿಜವಾಗಿಯೂ ಮಗು ಬೇಕೆಂದೇ, ಅಥವಾ ರಮೇಶ ಹಾಗೂ ತನ್ನ ಮಧ್ಯೆ ಕೇಂದ್ರ ಬಿಂದುವೊಂದನ್ನು ಉಳಿಸಿಕೊಳ್ಳಲೆಂದೇ ಎಂಬುದು ಗಂಗಾಗೆ ಇನ್ನೂ ಅನುಮಾನ.

ಗಂಗಾ ಡೆನ್‌ಹಾಗ್‌ನಿಂದ ಮರಳಿದ ಮೇಲೆ ಯಥಾಪ್ರಕಾರ ತನ್ನ ಕಾಲೇಜ್ ಕೆಲಸಕ್ಕೇ ಸೇರಿಕೊಂಡಿದ್ದಳು. ರಮೇಶ ಸ್ವಲ್ಪ ದಿನ ಅವನ ಕೊಠಡಿಯಲ್ಲಿಯೇ ಇದ್ದ. ಪಾರ್ವತಿ ತನ್ನ ಬದುಕನ್ನು ರೂಪಿಸಿಕೊಳ್ಳಲು ಓರ್ವ ಸಂಗಾತಿಯನ್ನು ಆಯ್ಕೆ ಮಾಡಿಕೊಂಡು ಆತನೊಟ್ಟಿಗೆ ಬೇರೆ ಮನೆಯಲ್ಲಿ ವಾಸಿಸಲು ಪ್ರಾರಂಭಿಸಿದ್ದರಿಂದ ಗಂಗಾ ಮೊದಲು ತಾವಿದ್ದ ಮನೆಯಲ್ಲಿಯೇ ಇರಲು ಪ್ರಾರಂಭಿಸಿದ್ದಳು. ಗಂಗಾ ಕೂಡಾ ಈಗ ಸ್ತ್ರೀ ಮುಕ್ತಿ ಸಂಘಟನೆಗೆ ಹೋಗುತ್ತಿರಲಿಲ್ಲ. ಮೊದಲು ಇಡಿಯ ಬದುಕನ್ನೇ ಸ್ತ್ರೀ ಮುಕ್ತಿ ಸಂಘಟನೆಯ ಕೇಂದ್ರ ಬಿಂದುವಿನಲ್ಲಿ ತೊಡಗಿಸಿಕೊಂಡು ಕಾರ್ಯಶೀಲರಾಗಿದ್ದರಿಂದ ಈಗ ಒಮ್ಮೊಮ್ಮೆ ನಿತ್ಯದ ಬದುಕು ಖಾಲಿ ಖಾಲಿಯಾಗಿ ಕಾಣಿಸುತ್ತಿತ್ತು. ಪಾರ್ವತಿಯಂತೆ ಗಂಗಾಳೂ ಕೂಡಾ ಸರೂ, ಅನೂ ಇತರರ ಜೊತೆ ಬಿಡುವಿನ ಸಂದರ್ಭದಲ್ಲಿ ಪತ್ರಿಕೆಯ ಲೇಖನ/ಹಣ ಇತ್ಯಾದಿ ವಿಚಾರಗಳಲ್ಲಿ ಗಂಭೀರವಾಗಿ ತೊಡಗುವಳು. ಸ್ತ್ರೀ ಮುಕ್ತಿ ಸಂಘಟನೆಯನ್ನು ಬಿಡುವ ನಿರ್ಧಾರವನ್ನು ಗಂಗಾ - ಒಂದು ಮೀಟಿಂಗ್ ಕರೆದು ರೆನೆ, ರಾಗಿಣಿ, ಡಾಮಿನಿಕ್ ಇತರರ ಜೊತೆ ಚರ್ಚಿಸಿ ತಿಳಿಸಿದ್ದಳು. ಪಾರ್ವತಿ

ಎತ್ತಿಬಿಟ್ಟ ಪ್ರಶ್ನೆಗಳನ್ನೇ ಗಂಗಾ ಮತ್ತೆ ಎತ್ತಿದ್ದಳು. ಸ್ತ್ರೀ ಮುಕ್ತಿ ಸಂಘಟನೆಗಾಗಿ ಕೇವಲ ಬದ್ಧತೆಯಿಂದ ಕೆಲಸ ಮಾಡುವ ನಮ್ಮಂತಹರ ಪಾತ್ರವನ್ನು ನೀವೇ ನಿರ್ಧರಿಸಿಬಿಡುವ ಒಂದು ಸಾಂಸ್ಥಿಕ ಸ್ವರೂಪವನ್ನು ನೀವು ಹುಟ್ಟು ಹಾಕುತ್ತಿದ್ದೀರಿ ಎಂದು ಗಂಗಾ ನುಡಿದಿದ್ದಳು. ಪತ್ರಿಕೆ, ನಾಟಕ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ವೈಯಕ್ತಿಕ ಕೇಸ್‌ಗಳನ್ನು ನಿಭಾಯಿಸುವುದರಲ್ಲಿ ತಾವೂ ಕೂಡಾ ತಮ್ಮನ್ನು ತೊಡಗಿಸಿಕೊಂಡಿರಲಿಲ್ಲವೇ? ತಮ್ಮ ಕಾಳಜಿಗೆ, ಬದ್ಧತೆಗೆ ಅಕೌಂಟಬಿಲಿಟಿ ಇಲ್ಲವೇ? ಸ್ತ್ರೀ ಮುಕ್ತಿ ಸಂಘಟನೆ ಸ್ವಾಯತ್ತ ಸಂಸ್ಥೆ ಎನ್ನುವುದಾದಲ್ಲಿ ಹಣಕಾಸು/ನಿರ್ಧಾರ ಇಂತಹ ವಿಚಾರಗಳಲ್ಲಿ ನಿರ್ಧಾರಗಳನ್ನು, ಹಿಡಿತವನ್ನು, ಅಧಿಕಾರವನ್ನು ಅದರೊಳಗೆ ಕೆಲಸ ಮಾಡುವವರೇ ಹೊಂದಿರಬೇಕು. ಹಣಕಾಸು ಪಡೆಯುವ ನಿಮ್ಮ ಸಂಸ್ಥೆ ಹಣಕಾಸಿನಿಂದ ಇಡಿಯ ಚಳುವಳಿಯನ್ನು, ವ್ಯಕ್ತಿಗಳನ್ನ ನಿಯಂತ್ರಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನೂ ಗಂಗಾ ಹೇಳಿದಳು. ದುಡ್ಡು ಇಲ್ಲದೇ ಚಳುವಳಿ ಕಟ್ಟಲು ಸಾಧ್ಯವಿಲ್ಲ ಎನ್ನುವ ನಂಬಿಕೆ ನಿಮ್ಮದು. ಆ ನಂಬಿಕೆ ನಿಮ್ಮದಾದರೆ, ಆ ನಂಬಿಕೆಯಲ್ಲಿಯೇ ನೀವು ಕೆಲಸ ಮಾಡಿ. ಆದರೆ ಹೊನ್ನೇಕೆರೆಯಂತಹ ಊರಿನಲ್ಲಿ 15-16 ಜನ ಬರಿಗೈಯಲ್ಲಿ ಕೆಲಸ ಮಾಡಿದ ಅನುಭವ ನಮಗಿದೆ. ಅಂತಹ ಸಂಘಟನೆಯಲ್ಲಿ ದುಡ್ಡು ಮುಖ್ಯವಾಗುವುದಿಲ್ಲ. ಕೆಲಸ ಮಾಡುವಾಗಲೂ ಒಬ್ಬರ ಮೇಲೆ ಇನ್ನೊಬ್ಬರು ಅವಲಂಬಿತರಾಗುವುದು ಅನಿವಾರ್ಯವಾಗುತ್ತದೆ. ಹೀಗಾಗಿ ತಾನೂ ಸ್ತ್ರೀ ಮುಕ್ತಿ ಸಂಘಟನೆಯನ್ನು ಬಿಡುತ್ತಿದ್ದೇನೆ ಎಂಬ ತನ್ನ ನಿಲುವನ್ನು ಸ್ಪಷ್ಟಪಡಿಸಿ ಬಂದಿದ್ದಳು ಗಂಗಾ. ಅಲ್ಲಿಗೆ ಅಷ್ಟು ವರ್ಷಗಳವರೆಗೆ ಸ್ತ್ರೀ ಮುಕ್ತಿ ಸಂಘಟನೆಯೊಂದಿಗೆ ಇಟ್ಟುಕೊಂಡಿದ್ದ ಸಂಬಂಧ ಮುರಿದು ಬಿದ್ದಿತ್ತು.

ರಮೇಶನ ಮನೆಯಲ್ಲಿ ಗಂಗಾಳನ್ನೇನೋ ಇಷ್ಟಪಟ್ಟಿರಲಿಲ್ಲ. ಹೆಣ್ಣು ಮಗುವಿನಂತೆ ಬೆಳೆಸಿದ ರಮೇಶನನ್ನು ಪೂರ್ಣವಾಗಿ ಹಾಳು ಮಾಡಿದವಳೇ ಗಂಗಾ ಎಂದೇ ಅವರ ಅಭಿಪ್ರಾಯವಾಗಿತ್ತು. ಮನೆಯಲ್ಲಿ ಈ ಬಗ್ಗೆ ಘರ್ಷಣೆಗಳಾದಾಗ ರಮೇಶ ಬಹಳಷ್ಟು ದಿನ ಗೊಂದಲಕ್ಕೊಳಗಾದದ್ದು ಗಂಗಾಗೆ ಅರ್ಥವಾಗಿತ್ತು. ಆ ಸಂದರ್ಭ ರಮೇಶನ ಜೀವನದಲ್ಲಿ ಒಂದು ಸಂಕ್ರಮಣ ಕಾಲವೇ ಆಗಿತ್ತು. ತಂದೆ-ತಾಯಿ ಅಥವಾ ಗಂಗಾ ಎಂಬೆರೆಡು ಆಯ್ಕೆಗಳು ರಮೇಶನ ಜೀವನದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿದ್ದವು. ರಮೇಶ ಕೆಲಸ ಮಾಡುತ್ತಿದ್ದ ಸಂಸ್ಥೆಯ ಎಂ.ಡಿ ಗಂಗಾ/ರಮೇಶರ ಸಂಬಂಧಕ್ಕೆ ವಿರುದ್ಧವಾಗಿ ರಮೇಶನ ತಂದೆ/ತಾಯಿಗಳೊಡನೆ ಶಾಮೀಲಾಗಿ ಆಟವಾಡಿಸತೊಡಗಿದ್ದರಿಂದ ರಮೇಶ ಅಲ್ಲಿ ಕೆಲಸ ಬಿಟ್ಟು ಬೇರೆ ಕಡೆ ಕೆಲಸಕ್ಕೆ ಸೇರಿಕೊಂಡಿದ್ದ. ಮದುವೆಯ ಬಗ್ಗೆ, ಸಂಬಂಧಗಳ ಬಗ್ಗೆ ಕ್ರಾಂತಿಕಾರಿಯಾಗಿ ಮಾತನಾಡುವ ಗಂಗಾ, ರಮೇಶನಂತಹ ಹುಡುಗನನ್ನು ಬೀದಿಯಲ್ಲಿ ನಿಲ್ಲಿಸಿಬಿಡುತ್ತಾಳೆ ಎಂದು ರಮೇಶನ ಅಪ್ಪ-ಅಮ್ಮನ ಆದಿಯಾಗಿ ಅವನ ಹತ್ತಿರದವರೆಲ್ಲ ಹೇಳುತ್ತಿದ್ದುದರಿಂದ ರಮೇಶನ ಮನಸ್ಸು ಅಲ್ಲೋಲ-ಕಲ್ಲೋಲವಾಗತೊಡಗಿತ್ತು. ಡೆನ್‌ಹಾಗ್‌ನಂತಹ ಪರಿಸರದಲ್ಲಿ ಇದ್ದುದು ಗಂಗಾ/ರಮೇಶ ಮಾತ್ರ. ಇಲ್ಲಿ ತನ್ನ ತಂದೆ-ತಾಯಿ, ಮದುವೆಯಾಗದ ಅಕ್ಕ-ತಂಗಿಯರೊಡನೆ ತನ್ನ ಹಾಗೂ ಗಂಗಾಳ ಪ್ರಶ್ನೆಗಳು ತಗಲಿ ಹಾಕಿಕೊಂಡಿವೆ ಎನಿಸಿದಾಗ ರಮೇಶನ ಮನಸ್ಸು ಅತ್ತ-ಇತ್ತ ಎನಿಸತೊಡಗಿತ್ತು. ಸ್ವಲ್ಪ ದಿನ ಗಂಗಾಳನ್ನು ಬೆಂಗಳೂರಿನಲ್ಲಿಯೇ ಬಿಟ್ಟು ರಮೇಶ ಒಂದು ವಾರದ ಕಾಲ ತನ್ನೂರಿಗೆ ಹೋಗಿದ್ದ. ಮಾತನಾಡದೇ ಮೌನವಾಗಿ ಇದ್ದುಬಿಡುವ ತಂದೆ-ತಾಯಿಯರೊಂದಿಗೆ ಆತ ಮಾತನಾಡುವುದಾದರೂ ಏನನ್ನು? ರಮೇಶ ಸುಮಾರು ದಿನ ಹಿಂತಿರುಗಿ ಬರದಿದ್ದಾಗ ಗಂಗಾಗೆ ಗಾಭರಿಯೆನಿಸಿತ್ತು. ಅಜ್ಞಾನಿಗೆ ಕಾಮವನ್ನು ಕಲಿಸುವಷ್ಟು ಸುಲಭವಾಗಿ ಪ್ರೇಮ ಕಲಿಸಲು ಸಾಧ್ಯವಿಲ್ಲವೇನೋ ಎಂಬಂತಹ ವಿಚಾರಗಳೂ ಗಂಗಾಳ ಮನಸ್ಸಿನಲ್ಲಿ ಸುಳಿದು ಹೋಗದೇ ಇರಲಿಲ್ಲ. ರಮೇಶನ ಜೊತೆಗೆಯೇ ಬದುಕಿನ ಕಲ್ಪನೆಗಳನ್ನು ಹೆಣೆದುಕೊಂಡಿದ್ದ

ಗಂಗಾಳಿಗೆ ತನ್ನ ಸ್ಥಿತಿ ಎಷ್ಟು ಅತಂತ್ರ ಎನ್ನುವ ಭಾವನೆ ಬರತೊಡಗಿತ್ತು. ಈ ಯೋಚನೆ, ದಿಗಿಲುಗಳಲ್ಲಿ ಒಂದು ವಾರ ಕಾಲ ಜ್ವರ ಬಂದು ಇತ್ತ ಪ್ರಾಪಂಚಿಕ ಅರಿವಿಲ್ಲದೇ ಗಂಗಾ ಮಲಗಿಬಿಟ್ಟಿದ್ದಳು.

ರಮೇಶನಂತೂ ಮನೆಯಲ್ಲಿ ತಂದೆ/ತಾಯಿ, ಆತನ ಎಂ.ಡಿ. ಏನೆಂದರೂ ತಾನು ಗಂಗಾಳೊಂದಿಗೇ ಬದುಕುವುದು ಎಂದು ಹಟ ಹಿಡಿದಿದ್ದ. ಆ ಎರೆಡು ವರ್ಷದಲ್ಲಿ ಗಂಗಾ ರಮೇಶನ ಜೀವನದ ಭಾಗವಾಗಿಬಿಟ್ಟಿದ್ದಳು. ಈ ಹದಿನೈದು ದಿನಗಳಲ್ಲಿ ಗಂಗಾಳಿಗೆ ಏನನ್ನೂ ಹೇಳದೇ ಹೇಡಿಯಂತೆ ಊರಿನಲ್ಲಿಯೇ ಠಿಕಾಣಿ ಹೂಡಿರುವ ಆತನ ಮನಸ್ಸಿನ ಬಗ್ಗೆ ಆತನಿಗೇ ಹಿಂಜರಿತ. ಬೆಂಗಳೂರೇ ಬಿಟ್ಟು ಬರುವಂತೆ ಆತನ ತಂದೆ-ತಾಯಿ ಆಗ್ರಹ ಮಾಡಿದ್ದರು. ತಂದೆ/ತಾಯಿಗೆ ವಿರುದ್ಧವಾಗಿ ಗಂಗಾಳನ್ನು ಮದುವೆಯಾಗುವುದಾದರೆ ತಮ್ಮ ಕಾರ್ಖಾನೆಗೆ ಕೆಲಸಕ್ಕೆ ಮರಳುವ ಯೋಚನೆಯನ್ನೇ ಬಿಡಬೇಕೆಂದು ಆತನ ಎಂ.ಡಿ. ಖಡಾಖಂಡಿತವಾಗಿ ನುಡಿದಿದ್ದರು. ಈ ಎಲ್ಲಾ ಘರ್ಷಣೆಗಳ ಹಂತದಲ್ಲಿ ರಮೇಶ ಹದಿನೈದು ದಿನ ಊರಲ್ಲಿಯೇ ಇದ್ದುಬಿಟ್ಟಿದ್ದ. ಆದರೆ ಗಂಗಾಳಿಗೆ ಹೇಳದೇ ತಾನು ಹೀಗೆ ನಿಂತದ್ದು ಸರಿಯಲ್ಲವೇನೋ ಎಂಬ ಪ್ರಶ್ನೆಯೊಂದು ರಮೇಶನನ್ನು ಬಲವಾಗಿ ಬಾಧಿಸತೊಡಗಿತ್ತು.

ಗಂಗಾ ಜ್ವರ ಬಿದ್ದು ಈ ಪ್ರಾಪಂಚಿಕ ಅರಿವು ಇಲ್ಲದೇ ಇರುವಂತಹ ಸ್ಥಿತಿಯಲ್ಲಿ ಗಂಗಾಳ ತಾಯಿ ಪ್ರಥಮ ಬಾರಿಗೆ ಬೆಂಗಳೂರಿಗೆ ಬಂದಿದ್ದರು. ಬಿ.ಪಿ. ಹಾಗೂ ಶುಗರ್‌ನಿಂದ ಬಳಲುತ್ತಿದ್ದ ತಾಯಿ ಬೆಂಗಳೂರಿಗೆ ಬಂದಾಗ ಗಂಗಾಗೆ ಸ್ವಲ್ಪ ಉಸಿರಾಡುವ ಹಾಗೆ ಆಗಿತ್ತು. ರಮೇಶನಿಲ್ಲದ ಬದುಕನ್ನು ಯೋಚಿಸುವುದೂ ಗಂಗಾಗೆ ಒಮ್ಮೊಮ್ಮೆ ಅಸಾಧ್ಯ ಎನ್ನಿಸತೊಡಗಿತ್ತು. ತಮ್ಮಿಬ್ಬರ ಮಧ್ಯೆ ಗಂಡು-ಹೆಣ್ಣಿನ ಪ್ರೀತಿಗೆ ಮೀರಿದ ಸ್ನೇಹದ ಸಂಬಂಧವೊಂದು ಏರ್ಪಟ್ಟಿತ್ತು. ಅದು ಹೆಣ್ಣು-ಹೆಣ್ಣಿನ ಮಧ್ಯೆ ಅಥವಾ ಗಂಡು-ಗಂಡಿನ ಮಧ್ಯೆ ಇರುವ ಸ್ನೇಹದ ರೀತಿಯದು. ಇದ್ದಕ್ಕಿದ್ದ ಹಾಗೆ ಹೋದ ರಮೇಶ ಹದಿನೈದು ದಿನ ಊರಿನಿಂದ ಮರಳದೇ ಇದ್ದಾಗ ಗಂಗಾ ಕಂಗಾಲಾಗಿದ್ದಳು. ರಮೇಶನಂತಹ ವ್ಯಕ್ತಿಗೆ ಸ್ನೇಹ/ಪ್ರೇಮಗಳ ತೀವ್ರತೆಯನ್ನು ಕಲಿಸುವುದೂ ಕಷ್ಟವೇನೋ ಎಂಬ ಯೋಚನೆಗಳು ಆಕೆಯನ್ನು ಬಾಧಿಸತೊಡಗಿದ್ದವು. ಈಗ ಒಂಟಿಯಾಗಿ ನಿಂತು ಬದುಕಿನ ಪ್ರಶ್ನೆಗಳನ್ನು ಎದುರಿಸುವುದು ಹೇಗೆ ಎಂದು ಗಂಗಾ ಆಲೋಚಿಸತೊಡಗಿದ್ದಳು. ತಾಯಿ ಈಗ ಗಂಗಾಳ ಜೊತೆಯಲ್ಲಿ ಇದ್ದುದರಿಂದ ಗಂಗಾಳಿಗೆ ನಿತ್ಯ ಜೀವನದಲ್ಲಿ ಒಂದು ರೀತಿಯ ಸೌಹಾರ್ದತೆ ಇತ್ತು. ತಾಯಿಯ ಅಜ್ಞಾನ/ಮುಗ್ಧತೆಯಲ್ಲಿ ಗಂಗಾ ಬದುಕಿನ ನೋವನ್ನು, ಒಂಟಿತನವನ್ನು ಮರೆಯಲು ಪ್ರಯತ್ನಿಸುತ್ತಿದ್ದಳು. ಬೆಳಿಗ್ಗೆ ಗಂಗಾ ಎದ್ದು ಕೆಲಸಕ್ಕೆ ಹೋಗುವ ವೇಳೆಗಾಗಲೇ ತಾಯಿ ಗಂಗಾಳಿಗೆ ತಿಂಡಿ ಮಾಡಿ ಕೊಡುವರು. ಆ ವಯಸ್ಸಿನಲ್ಲಿ ತಾಯಿ ತನಗಾಗಿ ಒದ್ದಾಡುವುದನ್ನು ಕಂಡಾಗ ಗಂಗಾಳಿಗೆ ಸ್ವಲ್ಪ ಕಷ್ಟವೇ ಆಗುತ್ತಿತ್ತು. ಗಂಗಾ ತಾಯಿಗಾಗಿ ಪ್ರೀತಿಯಿಂದ ಒಂದು ಉಂಗುರವನ್ನು ತಂದುಕೊಟ್ಟಾಗ ತಾಯಿ ಕಣ್ಣೀರು ಹಾಕಿಕೊಂಡು 'ತನಗೇಕೆ ಇದು, ಉದುರಿ ಹೋಗುವ ಜೀವಕ್ಕೆ' ಎಂದಿದ್ದಳು. 'ನೀನು ಚೆನ್ನಾಗಿರಬೇಕು ಗಂಗಾ' ಎಂದು ಮತ್ತೊಮ್ಮೆ ಜೋರಾಗಿ ಅಳತೊಡಗಿದ್ದಳು. ಯಾವುದನ್ನು ತಾಯಿಗೆಂದು ಕೊಟ್ಟರೂ 'ತನಗೇಕೆ?' ಎಂದು ಗಂಗಾಳಿಗೋ, ಅಣ್ಣನಿಗೋ ಕೊಟ್ಟುಬಿಡುವಳು. ರಮೇಶ ಬೆಂಗಳೂರಿನಲ್ಲಿ ಇಲ್ಲದಿರುವ ದಿನಗಳನ್ನು ತಾಯಿಯ ಸಾನಿಧ್ಯದಲ್ಲಿ ಗಂಗಾ ಹೆಚ್ಚು-ಹೆಚ್ಚಾಗಿ ಸಮಯ ಕಳೆಯತೊಡಗಿದ್ದಳು. ಬಿಡುವಿನ ಸಮಯದಲ್ಲಿ ಪಾರ್ವತಿ, ಅನು, ಸರೂರೊಂದಿಗೆ ಪತ್ರಿಕೆಯ ಕೆಲಸದೊಂದಿಗೆ ತೊಡಗಿಸಿಕೊಳ್ಳುವಳು.

ಗಂಗಾ ಕೆಲಸಕ್ಕೆಂದು ಕಾಲೇಜಿಗೆ ಹೋದ ಒಂದು ದಿನ ರಮೇಶ ಆಕೆಗಾಗಿ ಅಲ್ಲಿ ಕಾಯುತ್ತಿದ್ದುದು ನೋಡಿ ಗಂಗಾಳಿಗೆ ಆಶ್ಚರ್ಯವಾಗುತ್ತದೆ. 'ಏನು ರಮೇಶ್ ಬೆಂಗಳೂರಿನಲ್ಲಿ ನನ್ನ ಇರುವನ್ನೇ

ಮರೆತುಬಿಟ್ಟಿದ್ದೆ ಎಂದುಕೊಂಡಿದ್ದೆ' ಎಂದಳು. ರಮೇಶ ನಿಧಾನವಾಗಿ ನಕ್ಕು "ಗಂಗಾ ಹದಿನೈದು ದಿನ ನಾನ್ಹೇಗೆ ಕಳೆದೆ ಎಂಬುದು ನನಗೇ ಗೊತ್ತಿಲ್ಲ, ರಕ್ತ ಸಂಬಂಧ/ಪ್ರೀತಿ ಸಂಬಂಧದ ಮಧ್ಯದ ಆಯ್ಕೆ ಎಷ್ಟು ಕಷ್ಟ ಎಂದು ಈಗಲೇ ನನಗೆ ಅರ್ಥವಾದದ್ದು" ಊರಿನಲ್ಲಿ ನಡೆದುದನ್ನೆಲ್ಲ ಹೇಳುವಾಗ ರಮೇಶನ ಧ್ವನಿ ನಡಗುತ್ತಿತ್ತು. "ನನ್ನ ತಾಯಿಯ ಬಗ್ಗೆಯೂ ನನಗೆ ಕಾಳಜಿ. ಅವರ ಭಾವೋದ್ವೇಗ ನೋಡಿದರೆ ಒಮ್ಮೊಮ್ಮೆ ಅಲ್ಲಿಯೇ ಇದ್ದು ಬಿಡೋಣ ಅನಿಸುತ್ತೆ. ಆದರೆ ನಿನ್ನನ್ನು ಬಿಟ್ಟು ಬದುಕುವುದೂ ಕಷ್ಟ. ಗೊತ್ತಿಲ್ಲ, ನಿನಗೆ ನನ್ನ ಬಗ್ಗೆ ಏನೆನಿಸುತ್ತದೆಯೋ, ಆದರೆ ನೀನು ನನ್ನ ವ್ಯಕ್ತಿತ್ವದ ಭಾಗ ಎಂದೇ ನನಗೆ ಅನ್ನಿಸುವುದು. ಬಹುಶಃ ಅರ್ಥಪೂರ್ಣವಾಗಿ ಬದುಕುವುದೆಂದರೆ ನಿನ್ನ ಜೊತೆ ಬದುಕಬೇಕಷ್ಟೇ ಗಂಗಾ" ಎಂದ. ಗಂಗಾಳಿಗೂ ಕಣ್ಣಲ್ಲಿ ನೀರು ಬಂತು. ರಮೇಶನಿಲ್ಲದೇ ಬದುಕನ್ನು ಹೇಗೆ ಪ್ರಾರಂಭಿಸುವುದೆಂದು ತಾನೂ ಈ ಹದಿನೈದು ದಿನಗಳಲ್ಲಿ ಯೋಚಿಸುತ್ತಿರಲಿಲ್ಲವೇ? ಹಾಗೆಂದು ಆಕೆ ರಮೇಶನಲ್ಲಿ ಹೇಳಿದಳು ಕೂಡಾ. ಹಾಲೆಂಡಿನಲ್ಲಿ ಇಂತಹ ಒತ್ತಡಗಳ ತೀವ್ರತೆ ಇಬ್ಬರಿಗೂ ಅರ್ಥವಾಗಿರಲಿಲ್ಲ. ಗಂಗಾಗೆ ಈಗ ಇಂತಹ ಒತ್ತಡಗಳೇನೂ ಇರಲಿಲ್ಲ. ಮೊದಲಿನಿಂದಲೂ ಮನೆಯಲ್ಲಿ ವಿರೋಧಿಸಿಕೊಂಡೇ ಬೆಳೆದ ಗಂಗಾಗೆ ರಮೇಶನೊಟ್ಟಿಗೆ ಬದುಕುವ ವಿಚಾರದಲ್ಲಿ ಮನೆಯವರನ್ನು ಎದುರಿಸುವ ಪ್ರಶ್ನೆಯೇ ಇರಲಿಲ್ಲ. ಅಪ್ಪ-ಅಣ್ಣ ಹೆಣ್ಣು ಮಗಳ ಆಸೆಯನ್ನು ಬಿಟ್ಟುಬಿಟ್ಟಿದ್ದರು. ಅಣ್ಣನಿಗೆ ಮದುವೆಯ ಖರ್ಚು ಇಲ್ಲವಾಯಿತು ಅನ್ನಿಸಿದರೂ ಅವಮಾನಕ್ಕಾಗಿ ಸ್ವಲ್ಪ ದಿನ ಕೊರಗುತ್ತಾನೆ. ಅಷ್ಟು ಬಿಟ್ಟರೆ ಗಂಗಾಳಿಗೇನು ಹೇಳುವುದು/ಕೇಳುವುದು ಅಂತಹ ದೊಡ್ಡ ಸಮಸ್ಯೆಯಾಗಿರಲಿಲ್ಲ. ಬೆಂಗಳೂರಿನಲ್ಲಿಯೇ ಇರುವ ತಾಯಿ ಈ ವಿಚಾರವನ್ನು ಹೇಳಿದರೆ ಸಂತೋಷಪಟ್ಟುಕೊಳ್ಳುತ್ತಾಳೆ. ಆಗಲೇ 26-27 ವರ್ಷಕ್ಕೆ ಕಾಲಿಡುತ್ತಿರುವ ಗಂಗಾನಂತಹ ಹಟಮಾರಿ ಹೆಣ್ಣು ಮದುವೆಯಾಗದೇ ಉಳಿದುಬಿಡುತ್ತಾಳೇನೋ ಎಂಬಂತಹ ಕೊರಗಿನಲ್ಲಿಯೇ ಒದ್ದಾಡುವ ಅಮ್ಮನಿಗೆ ತಾನು ರಮೇಶನೊಟ್ಟಿಗೆ ಬದುಕಲು ನಿರ್ಧರಿಸಿದ್ದೇನೆ ಎಂಬುದೇ ಅತ್ಯಂತ ಸಂತೋಷದ ವಿಚಾರವಾಗಿಬಿಡುತ್ತದೆ.

ರಮೇಶನ ಸ್ಥಿತಿಯಾದರೆ ಅಷ್ಟು ಸುಲಭವಾಗಿರಲಿಲ್ಲ. ಡೆನ್‌ಹಾಗ್‌ನಲ್ಲಿ ಇರುವಾಗ ಈ ಸಂದರ್ಭದಲ್ಲಿ ಆಕೆಯ ಬದುಕಿನ ಪ್ರತಿಯೊಂದೂ ಅಂಚು/ಇಂಚು ತಿಳಿದ ಅವನಿಗೆ ಗಂಗಾಳ ಜೊತೆ ಬದುಕುವುದು ಅಸಾಧ್ಯ ಎನ್ನಿಸಿರಲಿಲ್ಲ. ಆದರೆ ಬೆಂಗಳೂರಿನಲ್ಲಿ ತಂದೆ/ತಾಯಿಯ ಮೌಲ್ಯಗಳ ಎದುರು, ಅಕ್ಕ-ತಂಗಿಯರ ಮದುವೆಯ ಪ್ರಶ್ನೆಗಳೊಂದಿಗೆ ತಳುಕು ಹಾಕಿಕೊಂಡಿರುವ ತನ್ನ ಹಾಗೂ ಗಂಗಾಳ ಸಂಬಂಧವನ್ನು ಈ ಎಲ್ಲದರಿಂದ ಬೇರ್ಪಡಿಸಿ ನೋಡುವುದು ಡೆನ್‌ಹಾಗ್‌ನಲ್ಲಿ ಇದ್ದಷ್ಟು ಸುಲಭವಾಗಿರಲಿಲ್ಲ. ರಮೇಶನ ತಂದೆ ಬೆಂಗಳೂರಿಗೆ ಬಂದಾಗಲೊಮ್ಮೆ ಗಂಗಾಳನ್ನು ಭೇಟಿಯಾಗಿದ್ದರು. ರಮೇಶನನ್ನು ಮಾತನಾಡಿಸಬೇಡ, ಭೆಟ್ಟಿಯಾಗಬೇಡ ಎಂದು ಖಾರವಾಗಿಯೇ ನುಡಿದಿದ್ದರು. ಗಂಗಾ ಇದಾವುದನ್ನು ಮನಸ್ಸಿಗೇ ಹಚ್ಚಿಕೊಂಡಿರಲಿಲ್ಲ. ಮೌಲ್ಯಗಳ ಸಂಘರ್ಷದಲ್ಲಿ ಇವೆಲ್ಲ ಸಹಜ ಎನ್ನುವಂತೆ ಸ್ವೀಕರಿಸಿದ್ದಳು. ಆದರೆ ಹದಿನೈದು ದಿನಗಳ ಕಾಲ ಏನನ್ನೂ ಹೇಳದೇ ರಮೇಶ ಕಣ್ಮರೆಯಾದಾಗ ಬದುಕಿನ ದೋಣಿಯನ್ನು ಪುನರಾರಂಭಿಸುವುದು ಹೇಗೆ ಎಂಬ ಆಲೋಚನೆಗಳು ಆಕೆಯನ್ನು ದಿಕ್ಕುಗೆಡಿಸುತ್ತಿದ್ದವು. ಅಲೆಮಾರಿ ಬದುಕಿನಲ್ಲಿ ಕಂಡ ಸುಖಕ್ಕಿಂತ ನೋವೇ ಜಾಸ್ತಿ. ಅಲೆಮಾರಿ ಬದುಕಿನ ಲಯಗಳಲ್ಲಿ ಬದುಕನ್ನು ಶಾಂತವಾಗಿ ಕೂಡಿಸಿಕೊಳ್ಳಲು ಸಾಧ್ಯವೇ ಎನಿಸತೊಡಗಿತ್ತು ಗಂಗಾಗೆ. ಎರಡು ವರ್ಷ ಓದು/ಬರಹ, ಮುಗ್ಧ ರಮೇಶನೊಟ್ಟಿಗಿನ ಬದುಕು ಡೆನ್‌ಹಾಗ್‌ನಲ್ಲಿ ಸುಂದರವಾಗಿಯೇ ಕಂಡಿತ್ತು. ಸ್ಕಾಲರ್‌ಷಿಪ್ ಸಿಗುತ್ತಿದ್ದರಿಂದ ಹಣದ ಸ್ತರಗಳಲ್ಲಿಯೇ ಬದುಕು ಸುಲಭವಾಗಿ ನಡೆದು ಹೋಗುತ್ತಿತ್ತು. ಈಗ ಬೆಂಗಳೂರಿನಲ್ಲಿ ಹಾಗಲ್ಲ. ಮೌಲ್ಯಗಳ ಸಂಘರ್ಷಗಳ ಜೊತೆಗೆ ಹಣಕಾಸಿನ ಸಮಸ್ಯೆಗಳೂ ತಳುಕು

ಹಾಕಿಕೊಂಡಿದ್ದವು. ನಿತ್ಯದ ಸಮಸ್ಯೆಗಳೇ ಗಂಗಾಳಿಗೆ ಒಮ್ಮೊಮ್ಮೆ ಅಗಾಧವಾಗಿ ಕಾಣಿಸುತ್ತಿದ್ದವು. ದಿನ ನಿತ್ಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಒಮ್ಮೊಮ್ಮೆ ಒದ್ದಾಡಿಬಿಡುವಂತಾಗುತ್ತಿತ್ತು. ರಮೇಶನಿಲ್ಲದ ಆತಂಕದಲ್ಲಿ ಬದುಕನ್ನು ಹೇಗೆ ಮತ್ತೆ ಒಂದುಗೂಡಿಸಿಕೊಂಡು ಬದುಕಬೇಕು ಎಂಬ ಗೊಂದಲ. ಜೀವನದ ಕೇಂದ್ರ ಬಿಂದುವಿಗಾಗಿ ತಡಕಾಡುವ ಸಂದರ್ಭ. ಒಮ್ಮೊಮ್ಮೆ ರಮೇಶನನ್ನು ಪೂರ್ತಿಯಾಗಿ ಮರೆತು ಬಿಡಬೇಕು ಎಂದು ಆಲೋಚಿಸುವಳು. ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ. ಇದ್ದಕ್ಕಿದ್ದ ಹಾಗೆ ತಾನು ಕಣ್ಮರೆಯಾದರೆ ಗಂಗಾ ಏನು ಅಂದುಕೊಂಡಾಳು, ಹೇಗೆ ಸಹಿಸಿಕೊಂಡಾಳು ಎಂಬ ಆಲೋಚನೆಗಳೂ ಕೂಡಾ ಅವನಿಗೆ ಬರಲಿಲ್ಲವೇ ಎಂದು ಕೆಲವೊಮ್ಮೆ ಆಕೆಗೆ ಆಶ್ಚರ್ಯವಾಗಿತ್ತು. ರಮೇಶನನ್ನು ಕಾಲೇಜಿನ ಆವರಣದಲ್ಲಿ ಭೇಟಿಯಾದಾಗ ಗಂಗಾ ಇದೇ ಮಾತೇ ಹೇಳಿದಳು, "ರಮೇಶ್, ನೀನು ಇದ್ದಕ್ಕಿದ್ದ ಹಾಗೆ ಕಣ್ಮರೆಯಾದಾಗ ಅಂದುಕೊಂಡೆ ಬಹುಶಃ ಮೂರ್ಖನಿಗೆ ಕಾಮವನ್ನು ಕಲಿಸುವಷ್ಟು ಸುಲಭವಾಗಿ ಪ್ರೀತಿ/ಪ್ರೇಮವನ್ನು ಕಲಿಸಲು ಸಾಧ್ಯವಿಲ್ಲವೇನೋ ಎಂದು!". ರಮೇಶ ನೋವಿನಿಂದ ನಕ್ಕ. "ಭಾರತೀಯ ಕುಟುಂಬದ ಸಂದರ್ಭದಲ್ಲಿ ಹಿರಿಯ ಮಗನಾಗಿ ನಿರ್ವಹಿಸಬೇಕಾದ ಜವಾಬ್ದಾರಿಯ ಹೊರೆಗಳು ಬಹುಶಃ ನಿನಗೆ ಗೊತ್ತಿಲ್ಲ ಗಂಗಾ. ಸಂಪ್ರದಾಯಸ್ಥ ಕುಟುಂಬದ ಹೊರೆಗಳೊಳಗೆ ಇರದ ನಿನಗೆ ನನ್ನ ಮದುವೆಯಾಗದ ಅಕ್ಕ-ತಂಗಿಯರ ಸಮಸ್ಯೆ ಎಷ್ಟು ಗಂಭೀರವಾದುದೆಂದು ಅರ್ಥವಾಗುವುದೋ ಇಲ್ಲವೋ? ನಮ್ಮ ಅಮ್ಮನಿಗೆ ಏನೇನೋ ಇರುತ್ತದೆ. ಹೆಣ್ಣು ಕೊಟ್ಟು ಹೆಣ್ಣು ತರೋ ಪದ್ಧತಿ. ಅದು ನಿನಗೂ ಗೊತ್ತು. ನನ್ನ ತಂಗಿ ಓರ್ವಳಿಗೆ ಹಾಗೆ ಮದುವೆ ಮಾಡಿಬಿಡಬಹುದು ಎಂದು ನನ್ನ ಅಮ್ಮ ಯೋಚಿಸಿರಬಹುದು. ಈಗ ಜಾತಿಯವಳಲ್ಲದ ಹುಡುಗಿಯ ಜೊತೆ ಮದುವೆಯೂ ಆಗದೇ ಸಂಸಾರ ಮಾಡುತ್ತೇನೆ ಎಂದರೆ ಅದು ಅವರಿಗೆ ಜೀರ್ಣಿಸಿಕೊಳ್ಳಲೂ ಆಗದ ಸತ್ಯ". ರಮೇಶ ಇದೆಲ್ಲ ನುಡಿಯುವಾಗ ಗಂಗಾ ಸುಮ್ಮನೇ ರಮೇಶನನ್ನು ನೋಡುತ್ತಿದ್ದಳು ಮಾತ್ರ. ಅವನ ಕಣ್ಣಂಚಿನಲ್ಲಿ ಕಣ್ಣೀರು ತುಂಬಿಕೊಂಡಿತ್ತು. ಗಂಗಾ/ರಮೇಶ ಸ್ವಲ್ಪ ಹೊತ್ತು ಇಬ್ಬರೂ ಮಾತನಾಡಲಿಲ್ಲ. ಕೊನೆಗೆ ಮಾತನಾಡುವ ಜವಾಬ್ದಾರಿಯಿಂದ ಗಂಗಾಳೇ ಮಾತನಾಡತೊಡಗಿದಳು, "ಹೇಳು, ರಮೇಶ್, ನಾನೇನು ಮಾಡಬೇಕು? ಒಬ್ಬರ ಜೊತೆ ಇಡಿಯಾಗಿ ಜೀವನದಲ್ಲಿ ಬದುಕುತ್ತೇನೆ ಎಂಬ ನಂಬಿಕೆ, ವಿಶ್ವಾಸಗಳನ್ನೇ ಕಳೆದುಕೊಂಡವಳು ನಾನು. ಡೆನ್‌ಹಾಗ್‌ನಲ್ಲಿ ನಿನ್ನ ಜೊತೆ ಬದುಕಲು ಪ್ರಾರಂಭಿಸಿದ ಮೇಲೆ ಮತ್ತೆ ಹೀಗೆ ಸುಂದರವಾಗಿ ಬದುಕಬೇಕೆಂಬ ಕಲ್ಪನೆ, ವಿಶ್ವಾಸಗಳನ್ನು ಎದೆಯಲ್ಲಿ ತುಂಬಿಕೊಂಡೆ. ಬದುಕಿನ ವೈಚಾರಿಕ ಲಯಗಳಲ್ಲಿ ಅಲ್ಲ, ಮುಗ್ಧ ವಿಶ್ವಾಸದ ಸಂಬಂಧವೊಂದರಲ್ಲಿ ನಾನು ಸುಖವಾಗಿ ಬದುಕಬಲ್ಲೆನೇನೋ ಎಂಬಂತಹ ಆತ್ಮವಿಶ್ವಾಸವೊಂದು ನನ್ನಲ್ಲಿಯೇ ಮೂಡಿ ಬರತೊಡಗಿತ್ತು. ಆ ಭರವಸೆ ನನ್ನ ಅಲೆಮಾರಿ ಬದುಕಿಗೆ ಮುಕ್ತಾಯ ಹಾಡುವುದೂ ಆಗಿತ್ತು. ಆದರೆ ಈಗ ನಿನಗೆ ಹಲವಾರು ಕೌಟುಂಬಿಕ ಸಮಸ್ಯೆಗಳಿವೆ. ಮದುವೆಯಾಗದ ಅಕ್ಕ-ತಂಗಿಯರ ಸಮಸ್ಯೆಗಳಿವೆ. ಬಹುಶಃ ಯುರೋಪ್ ರಾಷ್ಟ್ರವೊಂದರ ಜೀವನ ಮೌಲ್ಯಗಳಲ್ಲಿ ನನ್ನನ್ನು ಒಪ್ಪಿಕೊಳ್ಳುವುದು, ನನ್ನಂತಹ ಅಲೆಮಾರಿಯೊಂದಿಗೆ ಜೀವನ ರೂಢಿಸಿಕೊಳ್ಳುವುದು ನಿನಗೆ ಸುಲಭ ಎನ್ನಿಸಿರಬೇಕು. ಆದರೆ ಈಗ ನಿನಗೆ ಒತ್ತಡಗಳಿವೆ. ರಕ್ತ ಹಂಚಿಕೊಂಡ ಅಕ್ಕ ತಂಗಿಯರಿದ್ದಾರೆ. ಹೆಣ್ಣು ಮಗುವಿನ ತರಹ ಸಂರಕ್ಷಿತವಾಗಿ ಬೆಳೆಸಿದ ನಿನ್ನ ತಂದೆ-ತಾಯಿಗಳಿದ್ದಾರೆ. ಈಗ ನೀನು ನಿರ್ಧರಿಸಬೇಕು. ಗಂಗಾಳ ಮೈ ಮುಟ್ಟಿಬಿಟ್ಟಿದ್ದೇನೆ, ಆಕೆಯ ಜೊತೆ ಮದುವೆ ಮಾತನಾಡಿದ್ದೇನೆ, ಮಲಗಿ ಸುಖಿಸಿದ್ದೇನೆ ಎಂಬಂತಹ guilt ಅವೆಲ್ಲ ಬೇಡ. ಜೀವನವನ್ನ ಕೈಗೆ ತೆಗೆದುಕೊಳ್ಳುವುದನ್ನು ಈ 27 ವಯಸ್ಸಿಗಾಗಲೇ ನಾನು ಕಲಿತಿದ್ದೇನೆ, ಈಗ ನೀನು ನಿರ್ಧಾರ ಮಾಡಬೇಕು ರಮೇಶ್" ಎನ್ನುತ್ತಾಳೆ. ರಮೇಶ ನಿರ್ಧರಿಸಿಯೇ ಮನೆ ಬಿಟ್ಟು ಆಗಿತ್ತು. ಗಂಗಾಳಿಲ್ಲದೇ ತನ್ನ ಜೀವನದ ಖಾಲಿತನ ತುಂಬಲಾರದೇನೋ ಎಂದು ಆತನಿಗೆ ಅನ್ನಿಸುತ್ತಿತ್ತು. ಮತ್ತೆ ಹೊರಳಿ ನೋಡುವ ಪ್ರಶ್ನೆಯೇ ಇರಲಿಲ್ಲ. ಆತ ಎಲ್ಲರಿಗೂ ಹೇಳಿಯೇ ಮನೆ

ಬಿಟ್ಟಿದ್ದ. ತಾಯಿ ಬೋರಲು ಬಿದ್ದು ಅತ್ತಿದ್ದಳು. ನಿನ್ನನ್ನು ಬೆಳೆಸಿ, ದೊಡ್ಡವನನ್ನಾಗಿ ಮಾಡಿದ್ದಕ್ಕೆ ಸರಿಯಾದ ಪ್ರತಿಫಲ ಕೊಡುತ್ತಿದ್ದೀ ಎಂದಿದ್ದಳು. ಮದುವೆಯಾಗದ ನಿನ್ನ ಅಕ್ಕ-ತಂಗಿಯರ ಮುಖ ನೋಡು ಎಂದಿದ್ದರು. 'ಮನೆಗೆ ಹಿರಿಯ ಮಗನಾದ ನೀನು ಹೀಗೆ ಮದುವೆಯಿಲ್ಲದೇ ಯಾರೊಂದಿಗೋ ಬಾಳುತ್ತೇನೆ ಎಂದು ಹೊರಟರೆ ನಿನ್ನ ಜೊತೆ ಹುಟ್ಟಿದವರನ್ನು ಬೀದಿ ಸೂಳೆಯರನ್ನಾಗಿ ಮಾಡಿಬಿಡು' ಎಂದಿದ್ದರು. ರಮೇಶ ಹೊರಟು ನಿಂತವನು ತಾಸು ಹೊತ್ತು ಕುಳಿತುಕೊಂಡು ಅಮ್ಮನನ್ನೇ ನೋಡುತ್ತಾ ನಿಂತಿದ್ದ. ಬೋರೆಂದು ಅಳುವ ಆಕೆಯ ಹಣೆಯಲ್ಲಿ ತೇಲಿ ಹೋಗುತ್ತಿದ್ದ ಕುಂಕುಮ ನೋಡುತ್ತಿದ್ದ. ಸದ್ದಿಲ್ಲದೇ ಮುಸು-ಮುಸು ಎನ್ನುತ್ತಾ ಆಚೀಚೆ ಓಡಾಡುತ್ತಿದ್ದ ಅಕ್ಕ-ತಂಗಿಯರನ್ನು ನೋಡುತ್ತಿದ್ದ. ಎಲ್ಲಾ ಖಾಲಿ ಖಾಲಿ ಎನ್ನಿಸತೊಡಗಿತ್ತು. ಹೀಗೆ ಎಷ್ಟು ಹೊತ್ತು ಕುಳಿತನೋ, ಎಷ್ಟು ಹೊತ್ತು ಅಮ್ಮ ಅತ್ತಿದ್ದಳೋ? ಅಮ್ಮನ ಅಳು ಕಡಿಮೆಯಾದ ಮೇಲೆ ಹೊರಟು ಬಂದಿದ್ದ. ಮನೆಯಿಂದ ಕಾಲೆತ್ತಿ ಆಚೆ ಇಡುವಾಗ ಈ ಮನೆಯ ಋಣ ಅಂದಿಗೆ ಮುಗಿದಿತ್ತೇನೋ ಎನ್ನಿಸತೊಡಗಿತ್ತು. ಪ್ರೀತಿಯಿಂದ ಸಾಕಿ, ಸಲಹಿದ್ದ ಅಮ್ಮ/ಅಪ್ಪನಿಗೆ ತಾನೇನು ಮಾಡುತ್ತಿದ್ದೇನೆ ಎಂಬ ಪಾಪಪ್ರಜ್ಞೆ ಕಾಡಿತ್ತು. ಪ್ರೇಮ ಎನ್ನುವುದು ಸ್ವಾತಂತ್ರ್ಯವನ್ನು ಕಸಿದುಕೊಂಡುಬಿಟ್ಟು ಇನ್ನೊಬ್ಬರಿಗೆ ಎಷ್ಟು ಕ್ರೂರವಾಗಿ ಕಾಣಿಸಿಬಿಡುತ್ತದೆ ಎಂದು ಯೋಚಿಸತೊಡಗಿದ್ದ. ಪ್ರೇಮ ಎನ್ನುವುದು ಇಷ್ಟೊಂದು ಬಿಗುಡದ ಸನ್ನಿವೇಶಕ್ಕೆ, ಬಂಧನಗಳೆಲ್ಲವನ್ನೂ ಕತ್ತರಿಸಿ ಒಂಟಿಯಾಗಿರುವ ಏಕಾಂಗಿತನಕ್ಕೆ ದೂಡಿಬಿಡುತ್ತದೆ ಎಂಬ ತೀವ್ರತರನಾದ ಸತ್ಯ ತನಗೆ ಗೊತ್ತಿದ್ದರೆ ತಾನು ಗಂಗಾಳನ್ನು ಪ್ರೇಮಿಸುತ್ತಿದ್ದೆನೇ? ಎನಿಸತೊಡಗುತ್ತದೆ. ಪ್ರೇಮ ಎನ್ನುವುದು ಎಲ್ಲಾ ಬಂಧನಗಳನ್ನು ಕಳಚಿ ಹಾಕಿಬಿಡುವಂತಹದಾಗಿಬಿಟ್ಟರೆ ತಂದೆ-ತಾಯಿಯ ಬಗ್ಗೆ ತನಗೆ ಪ್ರೇಮವಿಲ್ಲವೇ? ಗಂಗಾಳ ಬಗ್ಗೆಗಿನ ಲೈಂಗಿಕ ಆಕರ್ಷಣೆಗಾಗಿಯೇ ತಾನೆಲ್ಲವನ್ನೂ ತೊರೆದು ಹೋಗುತ್ತಿರುವುದೇ? ಅಮ್ಮ/ಅಪ್ಪನ ಇಷ್ಟದಂತೆ ತಾನು ಬೇರೆ ಹುಡುಗಿಯನ್ನು ಮದುವೆಯಾಗಿಬಿಟ್ಟರೆ ಗಂಗಾಳನ್ನು ಮರೆತು ಬಿಡಬಲ್ಲೆನೇ? ಈ ಯೋಚನೆಯೇ ರಮೇಶನ ಕಣ್ಣಲ್ಲಿ ನೀರು ತರಿಸಿತ್ತು. ಗಂಗಾ ತನ್ನ ಜೀವನದ ಅವಿಭಾಜ್ಯ ಅಂಗ ಎಂದುಕೊಂಡವನಿಗೆ ಗಂಗಾಳನ್ನು ಬಿಟ್ಟು ಬಾಳುವ ಮಾತೇ ಇರಲಿಲ್ಲ. ಎರಡು ವರ್ಷ ಒಬ್ಬರಿಗೊಬ್ಬರು ಅಂಟಿಕೊಂಡು ಬದುಕಿದ್ದೇವೆ, ಯುರೋಪಿನ ಅನೇಕ ಪ್ರದೇಶಗಳನ್ನು ಒಟ್ಟಾಗಿ ಸುತ್ತಿದ್ದೇವೆ, ಅಂತಹ ನೆನಪುಗಳು ರಮೇಶನಲ್ಲಿ ನೋವನ್ನು ತರಿಸುತ್ತಿದ್ದವು. ಕೊನೆಗೆ ಆತ ನಿರ್ಧಾರ ಮಾಡಿ ಹೊರಟು ಬಂದಿದ್ದ. ತಾಯಿಯ ರೋಧನ ಕಿವಿಯಲ್ಲಿ ಮೊರೆಯಿಡುತ್ತಿದ್ದ ಹಾಗೆಯೇ ಗಂಗಾಳ ಸ್ನೇಹಕ್ಕೆ ಅರಸಿ ಬಂದಿದ್ದ. ಗಂಗಾಳಿಲ್ಲದ ಬಾಳು ಶೂನ್ಯವಾಗುತ್ತದೆ ಎಂದು ಹೆದರಿ ಓಡಿಬಂದಿದ್ದ. ಏನೇನೋ ಆಕರ್ಷಣೆ ಗಂಗಾಳ ವ್ಯಕ್ತಿತ್ವದಲ್ಲಿ ತುಂಬಿಕೊಂಡಿದೆ ಎಂದು ಬಲವಾಗಿ ಆತನಿಗೆ ಅನ್ನಿಸತೊಡಗಿತ್ತು. ಡೆನ್‌ಹಾಗ್‌ನಲ್ಲಿ ಇರುವಾಗ ಮೊದಲ ದಿನಗಳಲ್ಲಿ ಗಂಗಾಳನ್ನು ನೋಡಲು ಹೇಗೆ ಓಡಿ ಬರುತ್ತಿದ್ದನೋ ಹಾಗೆಯೇ ಓಡಿ ಬಂದಿದ್ದ. ಬೆಂಗಳೂರಿಗೆ ಬಂದು ಗಂಗಾಳನ್ನು ಹುಡುಕಿಕೊಂಡು ಮನೆಗೆ ಹೋದಾಗ ಆಕೆಯ ತಾಯಿಯನ್ನು ನೋಡಿ ಆತನಿಗೆ ಸಮಾಧಾನವಾಗಿತ್ತು. ತಾನು ಬಿಟ್ಟು ಹೋದ ಹದಿನೈದು ದಿನಗಳನ್ನು ಗಂಗಾ ಒಂಟಿಯಾಗಿ ಕಳೆಯಲಿಲ್ಲ. ಆಕೆಯ ಬೆಚ್ಚನೆಯ ಸಂಬಂಧವೊಂದು ಆಕೆಯ ಒಡಲಲ್ಲಿ ಇತ್ತು ಎಂಬುದೇ ಅವನ ದುಗುಡ/ದುಮ್ಮಾನ ಕಡಿಮೆ ಮಾಡಿತ್ತು. ಗಂಗಾಳ ತಾಯಿ ಗಂಗಾಳಿಗೆ ಹುಷಾರಿಲ್ಲದ ವೇಳೆಯೇ ತಾವು ಬಂದದ್ದು ಎಂದು ಹೇಳಿದ ಮೇಲಂತೂ ರಮೇಶನಿಗೆ ಅಲ್ಲಿ ಕೂರಲೂ ಸಾಧ್ಯವಾಗಿರಲಿಲ್ಲ. ಹಾಗಾಗಿ ತಕ್ಷಣವೇ ಗಂಗಾಳನ್ನು ಹುಡುಕಿಕೊಂಡು ಕಾಲೇಜಿಗೆ ಹೊರಟು ಬಂದಿದ್ದ.

ಇಂತಹ ನೆನಪುಗಳನ್ನು ಕೆದಕುತ್ತಾ ಹೋದ ಹಾಗೆ ಮಾನಸಿಕ ವೇದನೆಯೇ ಹೆಚ್ಚಾಗುತ್ತಾ ಹೋಗುತ್ತದೆಯೇನೋ ಎಂದು ಅನ್ನಿಸತೊಡಗಿದಾಗ 'ಗಂಗಾ ಮನೆಗೆ ಹೋಗೋಣವೇ?' ಎಂದು ರಮೇಶ

ನುಡಿಯುತ್ತಾನೆ. 'ಸ್ವಲ್ಪ ನಿಂತಿರು ರಮೇಶ್ ಈಗ ಬಂದುಬಿಡುತ್ತೇನೆ' ಎಂದು ಕೊನೆಯಲ್ಲಿ ಇರುವ ಕ್ಲಾಸ್ ಒಂದನ್ನು ಇನ್ನೊಬ್ಬರಿಗೆ adjust ಮಾಡಿ ರಮೇಶನೊಟ್ಟಿಗೆ ಹೊರಟು ನಿಂತಿದ್ದಳು. ದಾರಿಯಲ್ಲಿಯೇ ರಮೇಶನಿಗೆ ಆಕೆಯನ್ನು ಅಪ್ಪಿ ಮುದ್ದಿಸಬೇಕು, ಹದಿನೈದು ದಿನಗಳಲ್ಲಿ ಆಕೆಯ ಹಾಗೂ ತನ್ನ ಮನಸ್ಸಿನಲ್ಲಿ ಮನೆಮಾಡಿದ ಆತಂಕ/ದುಗುಡವನ್ನೆಲ್ಲಾ ಬೆಚ್ಚನೆಯ ಅಪ್ಪುಗೆಯಲ್ಲಿ ಕರಗಿಸಿಬಿಡಬೇಕು ಅನ್ನಿಸುತ್ತಿತ್ತು. ತಮ್ಮಿರ್ವರ ನಡುವೆ ಮಂಜುಗಟ್ಟಿದ ತೆರೆಯೊಂದು ಕರಗುವುದು ತಮ್ಮ ದೇಹಗಳ ಬಿಸಿಯಲ್ಲಿಯೇ ಎಂದು ತೀವ್ರವಾಗಿ ಅನ್ನಿಸತೊಡಗಿದಾಗ ರಮೇಶ ಗಂಗಾಳ ಕೈಯನ್ನು ಬಲವಾಗಿ ಹಿಡಿದಿದ್ದ. ಮೈ ಬೆಚ್ಚಗೆ ಸುಡುವ ಹಾಗೆ ಅನ್ನಿಸತೊಡಗಿತ್ತು. ಗಂಗಾ ಕೈ ಸೆಳೆದುಕೊಂಡಳು. ಬಸ್‌ಸ್ಟ್ಯಾಂಡಿನಲ್ಲಿ ತನ್ನ ವಿದ್ಯಾರ್ಥಿನಿ/ ವಿದ್ಯಾರ್ಥಿಗಳು ಯಾರಾದರೂ ಇದ್ದಾರೆಯೇ ಎಂದೊಮ್ಮೆ ಕಣ್ಣಾಡಿಸಿದಳು. ಗಂಗಾಳ ಮನೆ ಚಿಕ್ಕದು. ಅವರ ತಾಯಿ ಬೇರೆ ಇದ್ದಾರೆ. ತನ್ನ ಕೊಠಡಿಗೆ ಊರಿನಿಂದ ಯಾರಾದರೂ ಹುಡುಕಿಕೊಂಡು ಬರಬಹುದು. ಇದ್ದಕ್ಕಿದ್ದ ಹಾಗೆ ರಮೇಶ, 'ಗಂಗಾ ಒಂದೆರಡು ದಿನ ರಜೆ ಹಾಕು, ನಾವಿಬ್ಬರೇ ಎಲ್ಲಿಗಾದರೂ ಹೋಗಿ ಬರೋಣ' ಎಂದ. ಗಂಗಾಳಿಗೂ ರಮೇಶನೊಟ್ಟಿಗೆ ಎಲ್ಲಿಗಾದರೂ ಹೋಗಿಬಿಡಬೇಕು ಎನ್ನಿಸತೊಡಗಿತ್ತು. ರಮೇಶನ ಸಲಹೆಗೆ ಆಕೆ ತಕ್ಷಣವೇ ಒಪ್ಪಿಕೊಂಡಳು. 'ತಲಕಾವೇರಿಗೆ ಹೋಗೋಣವೇ' ಎಂದು ಗಂಗಾ ಸಲಹಿಸಿದಾಗ ರಮೇಶ ಒಪ್ಪಿಕೊಂಡಿದ್ದ. ಗಂಗಾಳ ಬಳಿಯಾಗಲೀ, ರಮೇಶನ ಬಳಿಯಾಗಲೀ ಒಂದು ಐನೂರು ರೂ. ಕೂಡಾ ಇರದಿದ್ದ ಕಾರಣ ಗಂಗಾ ಕಾಲೇಜಿಗೆ ಮರುದಿನ ರಜೆ ಹಾಕಿ, ತನ್ನ ಕಲೀಗ್ಸ್ ಹತ್ತಿರ ಐದು ನೂರು ರೂಪಾಯಿ ಇಸಿದುಕೊಂಡು ಬರುವುದಾಗಿ ಹೇಳಿದಳು. ಮರುದಿನ ರಾತ್ರಿ ಎಂಟು ಘಂಟೆಯ ವೇಳೆಗೆ ಬಸ್‌ಸ್ಟ್ಯಾಂಡ್ ಹತ್ತಿರ ಗಂಗಾಳಿಗಾಗಿ ಕಾಯುವುದಾಗಿ ರಮೇಶ ಹೇಳಿದ. ತನ್ನ ಕೊಠಡಿಗೆ ಬರಬೇಡ ಎಂದು ಗಂಗಾಗೆ ಹೇಳುವುದನ್ನೂ ರಮೇಶ ಮರೆಯಲಿಲ್ಲ. ಗಂಗಾ ತನ್ನ ಮನೆಯವರ ಜೊತೆ ಘರ್ಷಣೆ ಮಾಡಿಕೊಳ್ಳುವುದು ರಮೇಶನಿಗೆ ಇಷ್ಟವಿರಲಿಲ್ಲ. ಆಕೆ ತನ್ನ ಕೊಠಡಿಗೆ ಬಂದರೆ ಯಾರಾದರೂ ಬಂದೇ ಬರುತ್ತಾರೆ. ಗಂಗಾ ಸೀದಾ-ಸಾದಾ ಮಾತನಾಡಿಯೇಬಿಡುತ್ತಾಳೆ. ಇಲ್ಲದಿದ್ದರೆ ಅವರೇ ಗಂಗಾಳಿಗೆ ಕಠೋರವಾಗಿ ಏನನ್ನಾದರೂ ಹೇಳಿಬಿಡುತ್ತಾರೆ. ಗಂಗಾಳ ಮನಸ್ಸಿಗೂ ನೋವು. ಅಂತಹ ಸನ್ನಿವೇಶ ಬರುವುದೇ ಬೇಡವೆಂದು ರಮೇಶ ತನ್ನ ಕೊಠಡಿಯತ್ತ ಬರಬೇಡ ಎಂದು ಗಂಗಾಳಿಗೆ ಹೇಳಿದ್ದು. ಮತ್ತೆ ಸಧ್ಯಕ್ಕೆ ಆಫೀಸಿಗೂ ಫೋನ್ ಮಾಡಬೇಡವೆಂದು ಹೇಳಿ ಮರುದಿನ ಎಂಟು ಘಂಟೆಗೆ ಆಕೆಗಾಗಿ ಬಸ್‌ಸ್ಟ್ಯಾಂಡಿನಲ್ಲಿ ಕಾಯುವುದಾಗಿ ಹೇಳಿದ. ರಮೇಶ್-ಗಂಗಾ ಗಂಗಾಳ ಮನೆ ತಲುಪುವವರೆಗೂ ಹೀಗೇ ಏನೇನೋ ಮಾತನಾಡುತ್ತಾ ನಡೆದಿದ್ದರು. ಗಂಗಾಳನ್ನು ಮನೆಯಲ್ಲಿ ಬಿಟ್ಟು, ಗಂಗಾಳ ತಾಯಿ ಕೊಟ್ಟ ಕಾಫಿ/ಅವಲಕ್ಕಿ ತಿಂದು ರಮೇಶ ಮರುದಿನ ಸಿಗುವುದಾಗಿ ಹೇಳಿ ಅಲ್ಲಿಂದ ಹೊರಟು ಹೋಗಿದ್ದ.

* * * * *

ಗಂಗಾಗೆ ಪದೇ ಪದೇ ಅದೇ ಕನಸು ಬೀಳುತ್ತಿದೆ. ಜುಳು ಜುಳು ಹರಿಯುವ ನೀರು, ಸಮುದ್ರದಂತೆ ಕಾಣುವ ವಿಶಾಲವಾದ ನದಿ. ಕಲ್ಯಾಣಿ ರಾಗದಲ್ಲಿ ಯಾವುದೋ ಲಾಲಿತ್ಯ. ಜುಳು ಜುಳು ಹರಿದು ಬರುವ ನೀರಿನ ಮಧ್ಯೆ ಏನೋ ಹರಿದು ಬರುವ ಹಾಗೆ. ಎಲ್ಲಾ ಅಸ್ಪಷ್ಟ. ತಿಕ್ಕಿದ ಕೆಂಪು ಕಣ್ಣುಗಳಲ್ಲಿ ಕಾಣುವುದು ದುಂಡನೆಯ ಚಿತ್ರ. ಆ ಚಿತ್ರ ಯಾವುದಿರಬಹುದೆಂದು ಯಥಾಪ್ರಕಾರ ಕುತೂಹಲದಿಂದ ನಿರೀಕ್ಷಿಸುತ್ತಾಳೆ. ಯಾವುದೂ ಕಾಣುವುದಿಲ್ಲ. ಐದು ತಿಂಗಳಲ್ಲಿ ಏನೇನೋ ಅನ್ನಿಸುತ್ತದೆ. ಪ್ರತಿ ದಿನ ರಮೇಶನನ್ನು ಕನಸಿನ ಬಗ್ಗೆ ಗೋಳಾಡಿಸುತ್ತಾಳೆ ಗಂಗಾ. ಅವನದು ಪ್ರತಿ ದಿನ ಅದೇ ರಾಗ. ಯಾವುದೋ ಮಗು. ಸರಿಯಾಗಿ ಹುಟ್ಟಿದರೆ ಸಾಕು. ಗಂಗಾಳ ಹಾಗೆ ಪಟ್ಟಾಗಿ ಹೆಣ್ಣು ಮಗುವೇ ಬೇಕು ಎಂದು ಹೇಳುವವನಲ್ಲ ರಮೇಶ.

ಯಾವುದೋ ಒಂದು ಸರಿಯಾಗಿ ಹುಟ್ಟಿದರೆ ಸಾಕು. ಇದ್ದಕ್ಕಿದ್ದ ಹಾಗೆ ಗಂಗಾಗೆ ಹೊಟ್ಟೆಯಲ್ಲಿ ಹೊರಳಾಡುವ ಮಗುವಿನ ಚಲನೆ ಗೊತ್ತಾಗುತ್ತದೆ. ಆ ಕಡೆಯಿಂದ ಈ ಕಡೆಗೆ ನೀರಿನಲ್ಲಿ ಈಜುವ ಅನುಭವ. ಆ ಕಡೆಯಿಂದ ಈ ಕಡೆ ಮಗು ಅಡ್ಡಾಗುವ ಅನುಭವದಲ್ಲಿ ಗಂಗಾಗೆ ಮೈಯೆಲ್ಲ ಪುಳಕಿತಗೊಂಡಂತೆ ಅನಿಸತೊಡಗುತ್ತದೆ. ಗರ್ಭಕೋಶದ ನೀರಿನಲ್ಲಿ ಮಗು ಈಜುವ, ಗುದ್ದುವ ಅನುಭವದಲ್ಲಿ ಗಂಗಾ ಒಮ್ಮೊಮ್ಮೆ ತನ್ನನ್ನು ತಾನೇ ಮರೆಯುತ್ತಾಳೆ. ಬಸ್‌ಸ್ಟ್ಯಾಂಡ್‌ನಲ್ಲಿ ಕುಳಿತಿರುವಾಗ ಹೀಗೆ ದುಡುಮ್ ಎಂದು ಹೊಟ್ಟೆಯಲ್ಲಿ ಈಜುವ ಮಗುವಿಗೆ ಕೇಳಿಸುತ್ತದೆಯೇನೋ ಎಂಬಂತೆ "ನಿಧಾನವಾಗಿ ಈಜು ಮಗಳೇ' ಎನ್ನುತ್ತಾಳೆ. ತನಗೇ ಗೊತ್ತಿಲ್ಲದ ಹಾಗೆ 'ಏಯ್' ಎನ್ನುತ್ತಾಳೆ. 'ಒಳ್ಳೇ ಪುಟಾಣಿ ಆದೆಯಲ್ಲ ನೀನು' ಎನ್ನುತ್ತಾಳೆ. ಬೆಳಿಗ್ಗೆ ಎದ್ದು ಗಂಗಾ ಬಸ್ಸುಗಳಿಗೆ ಓಡುವುದೇ ಜಾಸ್ತಿ. ಓಡುವಾಗ 'ಅಯ್ಯೋ, ನನ್ನನ್ನು ಕ್ಷಮಿಸು ಕಂದಾ' ಎನ್ನುತ್ತಲೇ ಓಡುತ್ತಾಳೆ. ಹೊಟ್ಟೆಯಲ್ಲಿರುವ ತನ್ನ ಮಗುವಿಗೆ ನೋವಾಗುತ್ತದೆಯೇ ಎನ್ನುವ ಹಾಗೆ ಹೊಟ್ಟೆಯ ಅಡಿಭಾಗವನ್ನು ಒಂದು ಕೈಯಲ್ಲಿ ಭದ್ರವಾಗಿ ಹಿಡಿದು ಓಡುತ್ತಾಳೆ. ಎಂತಹ ವ್ಯವಸ್ಥೆ ಇದು ಎನ್ನಿಸುತ್ತದೆ. ಒಂದು ಬಸ್ಸು ತಪ್ಪಿದರೆ ಇನ್ನೊಂದು ಬಸ್ಸಿನಲ್ಲಿ ಹೋದರಾಯಿತು ಎನ್ನುವ ಹಾಗೆ ಕೂಡಾ ಇಲ್ಲ. ಚೈನಿನ ಎಳೆ ಇದ್ದ ಹಾಗೆ. ಒಂದು ಬಸ್ಸು ತಪ್ಪಿದರೆ ಆ ದಿನ ಕೆಲಸಕ್ಕೇ ರಾಜೀನಾಮೆ. ಓಡಿ ಬಸ್ಸು ಹತ್ತಿದ ಗಂಗಾಗೆ ಆ ಬಸ್ಸಿನಲ್ಲಿ ಜಾಗವೇ ಸಿಗುವುದಿಲ್ಲ. ಗಂಗಾಳ ಹೊಟ್ಟೆ ಚಿಕ್ಕದಾಗಿ ಇರುವುದರಿಂದ ಪರವಾಗಿಲ್ಲ. ಪಕ್ಕಕ್ಕೆ ನಿಂತಿರುವವರಿಗೆ ಒತ್ತರಿಸುವುದಿಲ್ಲ. ಜನರ ನೂಕು ನುಗ್ಗಲಿನಲ್ಲಿ ಹೊಟ್ಟೆಯ ಬಗ್ಗೆ ಯಾರಿಗೆ ಗಮನ? ಇಳಿಯುವ, ಹತ್ತುವ, ಓಡುವ ಗಮನಗಳಷ್ಟೇ. ಒಬ್ಬ ಇಳಿಯುವ ಅವಸರದಲ್ಲಿ ಗಂಗಾಳ ಹೊಟ್ಟೆಗೆ ಮೊಣಕೈಯಿಂದ ತಿವಿದುಕೊಂಡೇ ತೆರಳಿದಾಗ ಗಂಗಾಳಿಗೆ ನೋವೆನಿಸುತ್ತದೆ. 'ಹಾಯ್' ಎಂದು ಸಣ್ಣದಾಗಿ ಕಿರುಚುತ್ತಾಳೆ. 'ಮಗು, ನಾನೇನು ಮಾಡಲಿ, ಇದೇ ಗೋಳು, ನೀನು ನನ್ನನ್ನು ಅರ್ಥಮಾಡಿಕೊಳ್ಳಬೇಕು. ಈ ರಶ್‌ನಲ್ಲಿಯೇ ನಿನ್ನನ್ನು ತೂರಿಸಿಕೊಂಡು ಹೋಗುತ್ತಿದ್ದೇನೆ. ಪುಟಾಣಿ ಕಂದಮ್ಮ, ಕ್ಷಮಿಸಿಬಿಡು' ಎನ್ನುತ್ತಾಳೆ. ಆ ಪುಟ್ಟ ಮಗು ಯಾರನ್ನು ಕ್ಷಮಿಸಬೇಕು ಎಂದೊಮ್ಮೆ ಅವಳಿಗೇ ಆಶ್ಚರ್ಯವಾಗುತ್ತದೆ. ತನ್ನನ್ನೋ, ತಳ್ಳಿಕೊಂಡು ಹೋಗುವವರನ್ನೋ, ಓಡುವ ಜನರನ್ನೋ, ಸರಿಯಾಗಿ ಸಾರಿಗೆ ವ್ಯವಸ್ಥೆ ಮಾಡಲಾಗದ ಸರ್ಕಾರವನ್ನೋ ಅಥವಾ ದುಡ್ಡಿಲ್ಲದ ತಮ್ಮಂತಹ ಮಧ್ಯಮವರ್ಗದವರನ್ನೋ? ಗಂಗಾಳಿಗೇ ಗೊಂದಲವಾಗುತ್ತದೆ. ಆಕೆ ಮಗುವಿಗೆ ಹೇಳುವ ಹಾಗೆ ಗುಟ್ಟಾಗಿ ಏನೇನೋ ಹೇಳುತ್ತಾಳೆ. ಸರಿಯಾಗಿ ಊಟ ಮಾಡುವಾಗ, 'ಹಾಯ್ ಪುಟಾಣಿ, ಸರಿಯಾಗಿ ತಿಂದುಬಿಡು' ಎನ್ನುತ್ತಾಳೆ. ಗಂಗಾ ಗೊಣಗುವುದನ್ನು ಕೇಳಿಸಿಕೊಳ್ಳುವ ತಾಯಿ 'ಏನೇ, ಅದು' ಎಂದರೆ 'ಏನಿಲ್ಲಮ್ಮ' ಎಂದು ಗಂಗಾ ಸುಮ್ಮನಾಗಿಬಿಡುತ್ತಾಳೆ.

ಕಷ್ಟದ ದಿನಗಳು. ರಮೇಶ ದುಡಿಯುವ ಹಣ ತಂದೆ-ತಾಯಿಗೆ ಕಳಿಸುತ್ತಿದ್ದ. ಗಂಗಾಳಿಗೂ ಕೊಡುತ್ತಿದ್ದುದುಂಟು. ರಮೇಶನ ಮನೆಯ, ಮನಸ್ಸಿನ ಗೊಂದಲ ಅರ್ಥ ಮಾಡಿಕೊಂಡ ಗಂಗಾ ರಮೇಶ ಕೊಟ್ಟಷ್ಟು ಇಸಿದುಕೊಂಡು ಸುಮ್ಮನಾಗಿಬಿಡುವಳು. ಮನೆ ಬಾಡಿಗೆ, ಓಡಾಟ ಎನ್ನುವುದಕ್ಕೇ ಎಲ್ಲಾ ಹಣ ಖರ್ಚಾಗಿಬಿಡುತ್ತಿತ್ತು. ತಾಯಿ ಬೇರೆ ಜೊತೆಯಲ್ಲಿ. ತಾಯಿ ತಾಸುಗಟ್ಟಲೇ ನ್ಯಾಯ ಬೆಲೆಯ ಅಂಗಡಿಯ ಮುಂದೆ ನಿಂತು ಸಾಮಾನು ತಂದಿಡುವಳು. ಗಂಗಾಗೆ ಕಷ್ಟ ಆಗುತ್ತದೆ ಎಂದು ರಮೇಶನೇ ರಜ ಹಾಕಿ ಸೀಮೆ ಎಣ್ಣೆಗೆ ಕ್ಯೂ ನಿಲ್ಲುತ್ತಿದ್ದುದುಂಟು. ತಾಯಿ ಎಣ್ಣೆ ತರಲೂ ಕಷ್ಟವಾದಂತಹ ದಿನಗಳಲ್ಲಿ ಎಣ್ಣೆಯಿಲ್ಲದ ಒಣ ಚಪಾತಿಯನ್ನೇ ಮಾಡುವಳು. ಬೆಳಿಗ್ಗೆ ಆರು ಘಂಟೆಗೆ ಚಪಾತಿ ತಿಂದು ಡಬ್ಬದಲ್ಲಿ ತುಂಬಿಸಿಕೊಂಡು ಓಡುವಳು ಗಂಗಾ. ಒಮ್ಮೊಮ್ಮೆ ತಾಯಿಯ ಬಗ್ಗೆ ಅಗಾಧ ಗೌರವ/ಆದರ ಮೂಡುತ್ತದೆ ಗಂಗಾಗೆ. ಎಷ್ಟೊಂದು ಸುಲಭವಾಗಿ ತನ್ನ ಹಾಗೂ ರಮೇಶನ ಸಂಬಂಧವನ್ನು ಒಪ್ಪಿಕೊಂಡುಬಿಟ್ಟಿದ್ದಳು ತಾಯಿ.

ರೆಜಿಸ್ಟರ್ ಮಾಡಿಸುವಾಗ ಸಹಿ ಹಾಕಿದ್ದಳೂ ಕೂಡಾ. ಆಕೆ ಏನನ್ನೂ ಮಾತನಾಡಿರಲಿಲ್ಲ. ರಮೇಶ ಗಂಗಾ ಸುಖವಾಗಿದ್ದರೆ ಸಾಕು ಎಂದು ಅಪೇಕ್ಷೆ ಪಟ್ಟವಳು ತಾಯಿ. ತಾನು ಸಾಯುವ ಮುಂಚೆ ಗಂಗಾ ಸುಖವಾಗಿ ಸಂಸಾರ ಮಾಡುವುದನ್ನು ನೋಡಿದರೆ ಸಾಕು ಎನಿಸುತ್ತಿತ್ತು ಆಕೆಗೆ. ಊರಿನಲ್ಲಿ ಅಷ್ಟೊಂದು ದೊಡ್ಡ ಮನೆಯಲ್ಲಿ ಇದ್ದ ತಾಯಿ ಊಟ/ತಿಂಡಿಯ ವಿಚಾರಕ್ಕೆ ಗೊಣಗದೇ ಪುಟಾಣಿ ಮನೆಯಲ್ಲಿ ಸುಖವಾಗಿಯೇ ಇದ್ದು ಬಿಟ್ಟಿದ್ದಳು. ಗಂಗಾ/ರಮೇಶ ರಿಜಿಸ್ಟರ್ ಮಾಡಿಸುವ ವಿಚಾರ ಬರೆದಾಗ ತಂದೆ ಬಂದು ಜಾತಿ ಬಿಟ್ಟು ಜಾತಿಯಲ್ಲಿ ಮದುವೆಯಾಗುವ ಆಕೆಗೆ ತಾನೇನು ಕೊಡಲಾರೆ ಎಂದು ತಾಯಿಯ ಮುಂದೆ ಗಟ್ಟಿಯಾಗಿಯೇ ಬಯ್ದು ಹೋಗಿದ್ದ. ತಾಯಿ ಇದ್ಯಾವುದನ್ನು ಮನಸ್ಸಿಗೇ ಹಚ್ಚಿಕೊಂಡಿರಲಿಲ್ಲ. ಹೊನ್ನೇಕೆರೆಗೆ ಹೋಗಿದ್ದರೆ, ಅಲ್ಲಿಯೇ ಗಂಗಾ ಬದುಕುವುದಾದರೆ ಆ ಜಾತಿ, ಈ ಜಾತಿ ಅಂದು ಜನ ಮಾತನಾಡುವರೋ ಏನೋ? ಬೆಂಗಳೂರಿನ ಈ ಮೂಲೆಯಲ್ಲಿ ಕೇಳುವವರು ಯಾರು? ಗಂಗಾ ಬೆಂಗಳೂರು ಬಿಟ್ಟು ಹೊನ್ನೇಕೆರೆಗೆ ಹೋಗಿರುವವಳೂ ಅಲ್ಲ, ಅಣ್ಣ ಶಂಕರನನ್ನು ನೋಡಲಿಕ್ಕೆ ಹೋದಾಳು ಅಷ್ಟೇ! ಅವಳ/ಹೊನ್ನೇಕೆರೆಯ ಸಂಬಂಧ ಎಷ್ಟು ದಿನ ಇದ್ದಾತು? ತಾನಿರುವವರೆಗೆ. ಗಂಗಾ ಊರಿಗೆ ಹೆಚ್ಚು ಹೋಗುತ್ತಿದ್ದುದೇ ಸತ್ತು ಹೋದ ಸಾಧನಗಾಗಿ ಹಾಗೂ ತಾಯಿಗಾಗಿ. ಅಂಗನವಾಡಿಯ ಯೂನಿಯನ್ ಈಗ ಅಷ್ಟು ಕ್ರಿಯಾಶೀಲವಾಗಿ ಇರಲಿಲ್ಲ. ಯೂನಿಯನ್ ಚಟುವಟಿಕೆಯಲ್ಲಿ ತೊಡಗಿದಷ್ಟೂ ಮೇಲಧಿಕಾರಿಗಳಿಂದ ಹಾಗೂ ಸ್ಥಳೀಯರಿಂದ ಕಿರುಕುಳಗಳಿಗೆ ಒಳಗಾಗುತ್ತಿದ್ದ ಅವರು ಒಬ್ಬೊಬ್ಬರೇ ನೆಪ ಹೇಳಿ ಯೂನಿಯನ್‌ನಿಂದ ಈಚೆ ಬರತೊಡಗಿದ್ದರು. ಈ ವ್ಯವಸ್ಥೆಯಲ್ಲಿ ಏನೂ ಬದಲಾಗದು ಎನ್ನುವ ನಿರಾಸೆಯೂ ಎಲ್ಲರಲ್ಲಿಯೂ ಮೂಡತೊಡಗಿತ್ತು. ಹೊನ್ನೇಕೆರೆಯ ಸಂಘಟನೆಯಲ್ಲಿ ಇದ್ದ ಗೆಳತಿಯರೆಲ್ಲ ಉದ್ಯೋಗ ಅರಸಿಯೋ, ಮದುವೆಯಾಗಿಯೋ ಚದುರಿ ಹೋಗಿದ್ದರು. ಹಾಗಾಗಿ ಗಂಗಾಗೆ ಹೊನ್ನೇಕೆರೆಗೆ ಹೋಗಬೇಕಾದ ಬೇರುಗಳೇ ಇಲ್ಲವೇನೋ ಎಂದು ತಾಯಿಗೂ ಅನ್ನಿಸಿತ್ತು. ತೇಲಿ ಹೋದ ಸಾಧನಾಳ ಜೊತೆ ಹೊನ್ನೇಕೆರೆಯ ಜೊತೆಗಿನ ತನ್ನ ಸಂಬಂಧವನ್ನು ಹೆಚ್ಚೂ ಕಡಿಮೆ ಕಡಿದುಕೊಂಡುಬಿಟ್ಟಿದ್ದಳು ಗಂಗಾ. ಬೆಂಗಳೂರಿನಲ್ಲಿಯೇ ಇದ್ದುಬಿಡುವ ಗಂಗಾ ಹೇಗೋ ಸುಖವಾಗಿ ಇದ್ದರೆ ಸಾಕು ಎನ್ನುವ ಮನಸ್ಸು ತಾಯಿಯದು. ಹಾಗಾಗಿಯೇ ಗಂಗಾ ರಿಜಿಸ್ಟರ್ ಮಾಡಿಸುವಾಗ ತಾಯಿ ಸಂತೋಷವಾಗಿಯೇ ಸಹಿ ಮಾಡಿದ್ದರು. ರಮೇಶ ತನ್ನ ಮಗ ಶಂಕರನ ಹಾಗೆ ಒರಟು ಎಂದು ಆಕೆಗೆ ಅನ್ನಿಸಿರಲಿಲ್ಲ. ಅಷ್ಟೊಂದು ಸೂಕ್ಷ್ಮವಾಗಿ ಇರುವ ಹುಡುಗನೊಡನೆ ಗಂಗಾ ಚೆನ್ನಾಗಿಯೇ ಬಾಳಿಯಾಳು ಎನ್ನುವ ನಂಬಿಕೆ ಆಕೆಗೆ. ರಿಜಿಸ್ಟ್ರೇಷನ್‌ಗೆ ಎಂದು ಹೋಗುವಾಗ ತಮ್ಮ ಹಳೆಯ ಒಡವೆಯೊಂದನ್ನು ಮಾರಿ ಗಂಗಾಗೆ ಓಲೆ-ಜುಮುಕಿ ಕೊಡಿಸಿದ್ದರು. ಒಂದು ರೇಷ್ಮೆ ಸೀರೆ ತಗೋ ಎಂದೂ ಕೂಡಾ ಹೇಳಿದ್ದರು. ತಾನೆಲ್ಲಿಗೆ ರೇಷ್ಮೆ ಸೀರೆ ಉಟ್ಟುಕೊಂಡು ಹೋಗಲಿ? ಎಂದು ಗಂಗಾ ನಕ್ಕುಬಿಟ್ಟಿದ್ದಳು. ಸಂತೋಷವಾಗಿಯೇ ಗಂಗಾಳ ಜೊತೆ ಹೋದ ತಾಯಿಗೆ ಆಕೆ ಬರೀ ಏಳು ರೂಪಾಯಿ ಕೊಟ್ಟು ರಿಜಿಸ್ಟ್ರೇಷನ್ ಮಾಡಿಸಿದಾಗ ದುಃಖ ಒತ್ತರಿಸಿ ಬಂದಿತ್ತು. ಎದೆಯಲ್ಲಿ ಏನೇನೋ ಉರಿ ಉರಿಯಾದ ಹಾಗೆ. ಇರುವ ಒಬ್ಬ ಮಗಳ ಮದುವೆಯನ್ನು ಮನೆ ಬಾಗಿಲಲ್ಲಿ ಮಾಡಬೇಕಿತ್ತು. ಸಾವಿರಾರು ಜನ ಊಟ ಮಾಡಿ ಗಂಗಾ-ರಮೇಶರನ್ನು ಆಶೀರ್ವದಿಸಬೇಕಿತ್ತು. ಆದರೆ ಗಂಗಾ ಅನಾಥೆಯ ತರಹ ಮದುವೆಯಾದದ್ದು ಎನಿಸಿಬಿಟ್ಟಾಗ ತಾಯಿ ಮೂಕವಾಗಿ ನಿಂತುಬಿಟ್ಟಿದ್ದರು. ಬೇಡ ಬೇಡವೆಂದರೂ ಅವರ ಕಣ್ಣಿನಲ್ಲಿ ನೀರು ಕೋಡಿ ಹರಿದಿತ್ತು. ಗಂಗಾ ತಾಯಿಯ ಸ್ಥಿತಿಯನ್ನು ಗಮನಿಸಿದ್ದಳು. ದೊಡ್ಡ ಹೋಟೆಲ್ ಒಂದರಲ್ಲಿ ಊಟ ಕೊಡಿಸಿದಾಗಲೂ ತಾಯಿ ಮೂಕ ವೇದನೆಯಿಂದ ಈಚೆ ಬಂದಿದ್ದಾಳೆ ಎನಿಸಿರಲಿಲ್ಲ ಗಂಗಾಗೆ. ಕಣ್ಣೀರು ಸುರಿಸಿಕೊಂಡೇ ಊಟ ಮಾಡಿದ್ದಳು ತಾಯಿ. ಸೊರ ಸೊರ ಎಂದು ಮೂಗೊರೆಸಿಕೊಂಡು, ಕಣ್ಣೊರಸಿಕೊಂಡು ಊಟ ಮಾಡಿದ ತಾಯಿಯನ್ನು ನೋಡಿದಾಗ ವೇದನೆಯಾಗಿತ್ತು ಗಂಗಾಗೆ.

ಗಂಗಾಳ ಬಸಿರನ್ನು ಗಂಗಾಳಿಗಿಂತಲೂ ಹೆಚ್ಚು ಆನಂದಿಸಿದವಳು ತಾಯಿಯೇ. ಇದ್ದ ಸಾಮಾನುಗಳಲ್ಲಿಯೇ ಗಂಗಾಳಿಗೆ ಏನೇನೋ ಮಾಡಿ ಬಡಿಸಲು ಪ್ರಯತ್ನಿಸುವಳು. ಗಂಗಾ ಬೆಳಿಗ್ಗೆ ಕಾಲೇಜಿಗೆ ಹೋಗುವಾಗ ಆಕೆಯನ್ನು ಉಪವಾಸ ಕಳಿಸಿದುದೇ ಇಲ್ಲ. ನಿತ್ಯ ಚಪಾತಿ ಮಾಡುವಳು. ಮನೆಯಲ್ಲಿ ಎಣ್ಣೆ ಕೂಡಾ ಇರುತ್ತಿರಲಿಲ್ಲ. ಒಣ ಒಣ ಚಪಾತಿ ತಿಂದು ಹೋಗುವ ಗಂಗಾಳನ್ನು ನೋಡಿದಾಗಲೆಲ್ಲಾ ತಾಯಿಗೆ ಸಂಕಟವಾಗುತ್ತಿತ್ತು. ಅದೇ ಚಪಾತಿಯ ಡಬ್ಬ ನೀಡುವಾಗ, 'ಕೈ ಬಿಚ್ಚು ಖರ್ಚು ಮಾಡಿ ಹೊರಗೆ ಏನಾದರೂ ತಿನ್ನು, ಬಾಯಿ ಕಟ್ಟಬೇಡ' ಎನ್ನುವಳು. ಗಂಗಾ ಹೊರಗೆ ಖರ್ಚು ಮಾಡಲಾರಳು ಎಂಬ ಸತ್ಯ ಆಕೆಗೆ ಗೊತ್ತಿತ್ತು. ಗಂಗಾಳ ಪರಿಸ್ಥಿತಿ ನೋಡಿದಾಗಲೆಲ್ಲಾ ತಾಯಿಗೆ ಹೃದಯ ಹಿಂಡಿ ಬರುವ ಹಾಗೆ ಆಗುತ್ತಿತ್ತು. ಇರುವ ಒಬ್ಬ ಹೆಣ್ಣು ಮಗುವಿಗೆ ಹೀಗೆ ಕಷ್ಟದ ದಿನಗಳಲ್ಲಿ ದೂರ ತಳ್ಳಿಬಿಟ್ಟ ಗಂಗಾಳ ತಂದೆ, ಅಣ್ಣನ ಬಗ್ಗೆ ತಾಯಿಗೆ ಕೋಪ ಬರುತ್ತಿತ್ತು. ಆ ಕೋಪದಲ್ಲಿ ತಾಯಿ ಊರಿಗೆ ಬರೆದ ಪತ್ರಗಳೆಷ್ಟೋ? ಗಂಗಾ ಬಸಿರಿ. ಹೊಟ್ಟೆಗಿಲ್ಲದೇ ಒಣಗುತ್ತಾಳೆ. ಸ್ವಲ್ಪ ಅಕ್ಕಿ, ಕಾಯಿ ಇತ್ಯಾದಿ ತೆಗೆದುಕೊಂಡು ಬಾ ಎಂದು ಮಗ ಶಂಕರನಿಗೆ ಪತ್ರ ಬರೆಯುವಳು. ಅಕ್ಕ-ಪಕ್ಕದ ಮನೆಯವರು ಏನಾದರೂ ಸಿಹಿ ತಿಂಡಿ ನೀಡಿದರೆ ಎತ್ತಿಟ್ಟು ಗಂಗಾಗೆ ಕೊಡುವಳು. ಇಷ್ಟೊಂದು ದುಡ್ಡು-ಕಾಸಿನ ತೊಂದರೆಯ ಮಧ್ಯವೂ ಗಂಗಾಗೆ ತಾಯಿಯ ಬೆಚ್ಚನೆಯ ಸಂಬಂಧದಿಂದಾಗಿ ಮನಸ್ಸು ಶಾಂತವಾಗಿ ಇರುವುದನ್ನು ಬಯಸುತ್ತಿತ್ತು.

ಗಂಗಾಳಿಗೆ ಎಂಟು ತಿಂಗಳು ನಡೆಯುವಾಗಲೂ ಹೊಟ್ಟೆ ಚಿಕ್ಕದಾಗಿಯೇ ಇದ್ದುದರಿಂದ ತಾಯಿಯಾದಿಯಾಗಿ ಎಲ್ಲರೂ ಆಕೆಗೆ ಹುಟ್ಟುವ ಮಗು ಗಂಡು ಮಗುವೆಂದೇ ವಾದಿಸುತ್ತಿದ್ದರು. ಹೆಣ್ಣು ಮಗುವೇ ಆಗುವುದೆಂದು ಹಟ ಹಿಡಿದು ವಾದಿಸುವ, ಹೆಣ್ಣು ಮಗುವಿನ ಬಗ್ಗೆ ಅಗಾಧ ಆಸೆ ಹೊತ್ತ ಗಂಗಾಳನ್ನು ಆಕೆಯ ಸಹೋದ್ಯೋಗಿಗಳು ತಮಾಷೆ ಮಾಡುವರು. 'ಗಂಗಾ ಅದೆಲ್ಲ ಇಲ್ಲ, ನೋಡು, ಬೇಕಾದರೆ ಬೆಟ್ಸ್ ಕಟ್ಟುತ್ತೇನೆ, ನಿನಗೆ ಹುಟ್ಟುವುದು ಗಂಡು ಮಗುವೇ' ಎಂದು ಸಹೋದ್ಯೋಗಿ ಒಬ್ಬಳು ಬೆಟ್ಸ್ ಕಟ್ಟಲು ಬಂದಾಗ ಗಂಗಾಳಿಗೆ ನಿರಾಸೆಯೇ ಆಗುತ್ತಿತ್ತು. ಬಹುಶಃ ಹೆರುವುದು ಒಂದೇ ಮಗು. ಹಾಗೆಂದು ರಮೇಶನಲ್ಲಿ ಹೇಳಿದ್ದಳು ಕೂಡಾ. ಒಂದು ಮಗುವನ್ನು ಬೆಳೆಸಲು ತಮ್ಮ ಕೈಯಲ್ಲಿ ಸಾಧ್ಯವಾಗಬಹುದು. ಹುಟ್ಟುವ ಒಂದು ಮಗು ಗಂಡಾಗಿಬಿಟ್ಟರೆ ಹೇಗಪ್ಪಾ? ಎಂದು ಯೋಚಿಸಿದಾಗಲೆಲ್ಲಾ ನೋವಾಗುತ್ತಿತ್ತು. ರಮೇಶ ನಕ್ಕುಬಿಡುವನು. ಯಾವ ಮಗುವಾದರೂ - ಅದನ್ನೇ ಹೆಣ್ಣು-ಗಂಡು ಎಂದು ಬೆಳೆಸಿಬಿಡೋಣ ಎಂದು ಗಂಗಾಗೆ ಲಲ್ಲೆಗರೆದು ಹೇಳಿ ಆಕೆಯ ಆಂತಕವನ್ನು ಕಡಿಮೆ ಮಾಡಲು ಪ್ರಯತ್ನಿಸುವನು. ತನ್ನ-ರಮೇಶನ ಕರುಳ ಸಂಬಂಧ ಹಂಚಿಕೊಂಡ ಒಂದು ಹೆಣ್ಣು ಮಗುವಾದರೆ ಸಾಕಪ್ಪಾ ಎನಿಸುತ್ತಿತ್ತು ಗಂಗಾಗೆ. ಹೀಗೆಲ್ಲ ಯೋಚಿಸುವಾಗ ತನ್ನ ಹೊಟ್ಟೆಯನ್ನು ಮೃದುವಾಗಿ ಸವರಿಕೊಳ್ಳುವಳು. 'ಕಂದಾ ಇಷ್ಟೆಲ್ಲಾ ಕಷ್ಟಗಳ ಮಧ್ಯೆ - ಕನಸುಗಳ ಮಧ್ಯೆ ನೀನು ಹುಟ್ತಾ ಇದೀಯ, ನನ್ನ ಹೃದಯ ಹಂಚಿಕೊಳ್ಳುವ ಹೆಣ್ಣು ಮಗುವಾಗಿಯೇ ಈ ಲೋಕಕ್ಕೆ ಬಾ' ಎನ್ನುವಳು. ಎಳೆನೀರು ಕುಡಿಯಲು ತನ್ನಲ್ಲಿ ದುಡ್ಡಿಲ್ಲದೇ ಹೋದಾಗ ಗಂಗಾ ಸಹೋದ್ಯೋಗಿಗಳ ಜೊತೆ ಸುಳ್ಳು ಹೇಳಿಬಿಡುವಳು. ತನಗೆ ಹೊಟ್ಟೆ ಭಾರವೆನಿಸುತ್ತದೆ ಬೇಡ ಎಂದುಬಿಡುವಳು. ಜೊತೆಯಲ್ಲಿ ಹೊಟ್ಟೆಯಲ್ಲಿನ ಕಂದನಿಗೆ 'ಸಾರಿ ಕಂದ, ಒಂದು ಎಳೆನೀರು ಕುಡಿಯಲೂ ಸಾಧ್ಯವಾಗದ ಸ್ಥಿತಿ ನನ್ನದು' ಎಂದು ನಿಧಾನವಾಗಿ ಹೇಳಿಬಿಡುವಳು. ಕೊಬ್ಬರಿಯನ್ನಾದರೂ ತಿನ್ನು ಎಂದು ಗೆಳತಿಯರು ನುಡಿದರೆ ಕಾಸಿಲ್ಲದೇ ಸಿಕ್ಕಿದ್ದು ಎನ್ನುವ ಪಾಪಪ್ರಜ್ಞೆ ಕಾಡಿದರೂ ತಿನ್ನುವ ಆಸೆಗೆ ತಿಂದುಬಿಡುವಳು. ಇಂತಹ ಸಂದರ್ಭದಲ್ಲಿ ಗಂಗಾಗೆ ಒಮ್ಮೆ ತನ್ನ ಮೇಲೆ ಸಿಟ್ಟು, ಇನ್ನೊಮ್ಮೆ ರಮೇಶನ ಮೇಲೆ, ಮಗದೊಮ್ಮೆ ತನ್ನ ಮನೆಯವರ ಮೇಲೆ.

ತಾಯಿಗೆ ಗಂಗಾಳ ಹೆರಿಗೆಯನ್ನು ಸಂಭ್ರಮದಿಂದ ಮಾಡಬೇಕೆಂಬಾಸೆ. ಆಕೆ ಹೆತ್ತ ಎಷ್ಟೋ ಮಕ್ಕಳು ಸತ್ತು ಕೊನೆಗೆ ಗಂಗಾ/ಶಂಕರ ಇಬ್ಬರೇ ಉಳಿದದ್ದು. ತನ್ನ ತಾಯಿ ಮಾಡಿದುದನ್ನೆಲ್ಲಾ ನೆನಸಿಕೊಂಡು ಆಕೆ ಗಂಗಾಗೆ ಹೇಳುವಳು. ಮೆಣಸಿನ ರಸ/ಜೀರಿಗೆ ರಸ/ಕಾಯಿಪತ್ರೆ ಇತ್ಯಾದಿಗಳೆಲ್ಲ ಹೆರಿಗೆಯಾದ ಮೇಲೆ ಮೈಯನ್ನು ಗಟ್ಟಿಯಾಗಿಸುತ್ತದೆ ಎಂದಿದ್ದಳು. ಗಂಗಾ ನಕ್ಕು ತಮಾಷೆ ಮಾಡುವಳು. 'ಅಮ್ಮಾ ಆ ಹೆರಿಗೆಯೆಲ್ಲಾ ನೀವು 5-6 ಮಕ್ಕಳನ್ನು ಹಡೆಯುವ ಕಾಲಕ್ಕೇ ಮುಗಿದು ಹೋಯಿತು. ಈಗ ನಾನು ಹಡೆಯುವುದು ಒಂದು ಮಗುವನ್ನು. ಡಾಕ್ಟರ್ ಎಲ್ಲಾ ಚೆನ್ನಾಗಿ ತಿನ್ನಿರಿ, ನೀರು ಚೆನ್ನಾಗಿ ಕುಡಿಯಿರಿ' ಎನ್ನುತ್ತಾರೆ. ನಿಮ್ಮ ಹಾಗೆ ಗಾಳಿ, ಬೆಳಕಿರದ ಕತ್ತಲೆಯ ಕೋಣೆಯಲ್ಲಿ ಕುಳಿತು, ಮೈ ತುಂಬಾ ಕಂಬಳಿ ಹೊದ್ದುಕೊಂಡು ನೀರು ಕೂಡಾ ಕುಡಿಯದೇ ಇರುವ ಕಾಲ ಇದಲ್ಲವಲ್ಲ' ಎನ್ನುವಳು. ಆಗೆಲ್ಲಾ ತಾಯಿಗೆ ಸಿಟ್ಟು ಬರುತ್ತಿದ್ದುದುಂಟು. ಎಲ್ಲದರಲ್ಲಿಯೂ ಗಂಗಾ ಹಟವಾದಿ ಎನಿಸುತ್ತದೆ. ಒಂದು ಮಗುವಿನ ತಾಯಿಯಾಗುವಾಗಲೂ ಈಕೆ ಹಟವನ್ನು ಬಿಡಲಾರಳಲ್ಲ ಎನಿಸುತ್ತದೆ. ಏನೀಗ? ಸ್ವಲ್ಪ ಜೀರಿಗೆ ರಸ/ ಮೆಣಸಿನ ರಸ, ಕಾಯಿಪತ್ರೆ ತಿಂದರೆ ಏನಾಗಿಬಿಡುತ್ತದೆ? ತಾಯಿ ಬೇಸರದಿಂದ ಮೌನವಾಗಿರುವುದನ್ನು ನೋಡಿದಾಗ ಗಂಗಾ ತಾಯಿಯನ್ನು ರಮಿಸುತ್ತಾಳೆ. 'ನೀನು ಹೇಳಿದ ಹಾಗೆಯೇ ಆಗಲಿ' ಎಂದು ಆಕೆಯ ಮನಸ್ಸಿನ ಸಂತೋಷಕ್ಕಾಗಿ ರಮೇಶನೊಟ್ಟಿಗೆ ಹೋಗಿ ಅವರು ಹೇಳಿದ ಸಾಮಾನುಗಳನ್ನೆಲ್ಲ ತಂದಿಡುತ್ತಾಳೆ. 'ಪಾಪು ನಿನ್ನ ಅಜ್ಜಿಯ ಸಂಭ್ರಮ ನೋಡು, ಅವರು ಇರುವುದಕ್ಕೆ ನೀನು ಗೆದ್ದೆ ಮಗಳೇ' ಎನ್ನುತ್ತಾಳೆ.

ಗಂಗಾ ಹೆರಿಗೆಯ ಬಗ್ಗೆಗಿನ ಹಲವಾರು ಪುಸ್ತಕಗಳನ್ನು ಓದುವಳು. 'ಮಗು ಹೇಗೆ ಹುಟ್ಟುತ್ತದೆ? ಹೆರಿಗೆ ನೋವು ಹೇಗೆ ಇರುತ್ತದೆ?' ಎಂದು ತಾಯಿಯನ್ನು ಪದೇ ಪದೇ ಕೇಳುವಳು. 'ನೋವು ಪ್ರಾರಂಭವಾದಾಗ ಹೇಗೆ ಗೊತ್ತಾಗುತ್ತದೆ' ಎನ್ನುವಳು. ಗಂಗಾ ಹೀಗೆ ಪದೇ ಪದೇ ಆಕೆಯ ತಾಯಿಯನ್ನು ಕೇಳುವಾಗಲೆಲ್ಲಾ ರಮೇಶ ತಮಾಷೆ ಮಾಡುತ್ತಿದ್ದ. 'ನೋವು ಬಂದು ಮಗುವನ್ನು ಹೆತ್ತ ಮೇಲೆಯೇ ಗೊತ್ತಾಗುತ್ತದೆ ಬಿಡು ಗಂಗಾ' ಎನ್ನುವನು. ದಿನಗಳು ಹತ್ತಿರ ಬಂದ ಹಾಗೆ ಗಂಗಾಗೆ ಆತಂಕ ಹೆಚ್ಚಾಗುವ ಬದಲು ತಾನು ಹೇಗೆ ಇದೆಲ್ಲವನ್ನೂ ಉದ್ವೇಗರಹಿತ ಮನಸ್ಸಿನಿಂದ ಸ್ವೀಕರಿಸಬೇಕು ಎನ್ನುವುದರ ಕಡೆಗೇ ಮನಸ್ಸು ಓಡುತ್ತದೆ. ಯುಗಾದಿಯ ಮರುದಿನ ತಾಯಿ ಹೇಳಿದ್ದ ಹೆರಿಗೆ ನೋವಿನ ಲಕ್ಷಣಗಳು ಒಂದೊಂದೇ ಗಂಗಾಳಲ್ಲಿ ಕಾಣಿಸಿಕೊಳ್ಳತೊಡಗಿದ್ದವು. ಸಣ್ಣದಾಗಿ ಪ್ರಾರಂಭವಾದ ಸೊಂಟ ನೋವು ಕಿಬ್ಬೊಟ್ಟೆಯಲ್ಲಿ ಕಾಣಿಸಿಕೊಂಡು ರಾತ್ರಿಯೆಲ್ಲಾ ಮಲಗಲು ಅಸಾಧ್ಯವೆನಿಸುವಷ್ಟು ನೋವು. ಗಂಗಾ ಕುಳಿತೇ ಕಾಲ ಕಳೆಯತೊಡಗಿದ್ದಳು. ತಾಯಿ ನಿದ್ರೆ ಮಾಡತೊಡಗಿದ್ದಳು. ತಾಯಿಯನ್ನು ನಿದ್ರೆಯಿಂದ ಎಚ್ಚರಿಸುವ ಮನಸ್ಸಾಗಲಿಲ್ಲ ಗಂಗಾಳಿಗೆ. ತಾನೇ ಎದ್ದು ನಿಂಬೆ ಹುಳಿ ನೀರು ಕುಡಿದಳು. ನೋವು ಹೆಚ್ಚು ಮಾಡಲು ಏನು ಮಾಡಬೇಕು ಎಂಬುದನ್ನು ತಾಯಿ ಕೊಟ್ಟ ವಿವರ ಹಾಗೂ ತಾನು ಓದಿದ ಪುಸ್ತಕಗಳಿಂದ ಜ್ಞಾಪಿಸಿಕೊಳ್ಳತೊಡಗಿದಳು. ಬಾಗಿಲು ತೆರೆದು ಹೊರಗೆ ತಣ್ಣನೆಯ ಗಾಳಿಯಲ್ಲಿ ಅತ್ತಿಂದಿತ್ತ ಓಡಾಡುವಳು. ಮತ್ತೆ ಮತ್ತೆ ನಿಂಬೆ ಹಣ್ಣಿನ ಹುಳಿ ನೀರನ್ನು ಕುಡಿಯುವಳು. ನೋವೇ ಜಾಸ್ತಿ ಬರಲಿಲ್ಲವೆಂದಾಗ ಪ್ರೈವೇಟ್ ಹಾಸ್ಪಿಟಲ್‌ನಲ್ಲಿ ಸಿಸೇರಿಯನ್ ಮಾಡುವ ಭಯ. ಬೆಳಗಿನ ತನಕ ಗಂಗಾ ಹೀಗೆ ಓಡಾಡಿಕೊಂಡು ನಿಂಬೆ ಹುಳಿ ನೀರು, ಜೀರಿಗೆ ರಸದ ನೀರು ಕುಡಿದುಕೊಂಡೇ ಇದ್ದುಬಿಟ್ಟಳು. ತಾಯಿಗೆ ಎಚ್ಚರವಾದಾಗ ಗಂಗಾಳ ಸ್ಥಿತಿ ನೋಡಿ ಗಾಭರಿಗೊಂಡರು. ಆಕೆಯ ಕೆಂಪಾಗಿದ್ದ ಕಣ್ಣುಗಳು, ಅತ್ತಿಂದಿತ್ತ ಸೊಂಟ ಹಿಡಿದು ಆಕೆ ಓಡಾಡುವ ಸ್ಥಿತಿ ನೋಡಿ ಅವರಿಗೆ ಒಂದು ರೀತಿಯ ದಿಗಿಲು ಪ್ರಾರಂಭವಾಗಿತ್ತು. ರಮೇಶ ಊರಲ್ಲಿಲ್ಲದುದು ಬೇರೆ, ಅವರ ಆತಂಕಕ್ಕೆ ಇನ್ನಷ್ಟು ಕಾರಣವಾಗಿತ್ತು. 'ಬೇಗ ತಿಂಡಿ ಮಾಡುತ್ತೇನೆ, ತಿಂದು ಬಿಡು - ಹೆರಿಗೆಯಾದ ಮೇಲೆ ಏನೂ ತಿನ್ನುವ ಹಾಗೆ ಇಲ್ಲ, ಕಟ್ಟು ನಿಟ್ಟಾಗಿ ಪಥ್ಯ ಮಾಡಬೇಕು'

ಎಂದು ತಾಯಿ ಅವಸರಿಸತೊಡಗಿದ್ದರು. ಗಂಗಾ, 'ಪರವಾಗಿಲ್ಲಮ್ಮ, ನಿಧಾನವಾಗಿಯೇ ಮಾಡು', ಎಂದು ಹೇಳಿದರೂ ತಾಯಿ ಅವಸರಿಸತೊಡಗಿದ್ದರು. ರಮೇಶ ಊರಲ್ಲಿ ಇದ್ದಿದ್ದರೆ ಚೆನ್ನಾಗಿತ್ತು ಎಂದು ಆಕೆಗೆ ಅನ್ನಿಸತೊಡಗಿತ್ತು. ಆ ದಿನ ಬೆಳಿಗ್ಗೆ ಬೆಳಿಗ್ಗೆಯೇ ಪಾರ್ವತಿ ಗಂಗಾಳನ್ನು ನೋಡಲು ಬಂದಿದ್ದಳು. ತಾಯಿಗೆ ಅಪಾರ ಸಂತೋಷವಾಯಿತು. ಹೊನ್ನೇಕೆರೆಯ ಹುಡುಗಿ. ಅದೇ ಆತ್ಮೀಯತೆ, ಅದೇ ಸೊಗಸು. ಸಧ್ಯ ನೆರವಿಗೆ ಈಗ ಪಾರ್ವತಿ ಇದ್ದಾಳಲ್ಲ ಎನ್ನುವ ಧೈರ್ಯ. ತಾಯಿಯ ಗಾಭರಿ ನೋಡಿ ಗಂಗಾ/ ಪಾರ್ವತಿ ಇಬ್ಬರೂ ಸಮಾಧಾನ ಹೇಳಿದರು. ಆಸ್ಪತ್ರೆಗೆ ಹೋಗೋಣ ಎಂದರೆ ಗಂಗಾಳೇ ಬೇಡ ಎಂದು ತಡೆದಳು. ಇನ್ನೊಂದು ದಿನ ನೋವು ಸರಿಯಾಗಿ ಕಾಣಿಸಿಕೊಂಡು ನೋವು ತೀವ್ರವಾದಾಗ ಹೋದರೆ ಸರಿ ಎಂದು ಗಂಗಾ ಸೊಂಟ ಹಿಡಿದುಕೊಂಡೇ ಹೇಳಿದಳು. ತಾಯಿ ಸಿಟ್ಟು ಮಾಡಿಕೊಂಡರು. 'ನೆತ್ತಿ ನೀರು ಒಡೆದು ಬಿಟ್ಟರೆ - ಮಗು ಈಚೆ ಬಂದೇ ಬಿಡುತ್ತದೆ. ನೀನು ಎಲ್ಲದಕ್ಕೂ ಹಟ ಮಾಡುತ್ತೀಯ' ಎಂದು ತಾಯಿ ಮತ್ತೆ ಮುನಿಸಿಕೊಂಡರು. 'ನೆತ್ತಿ ನೀರು ಒಡೆದು ಹೊರ ಬರುವ ಮಗು' - ತಾಯಿಯ ಅಭಿವ್ಯಕ್ತಿ ಗಂಗಾಗೆ ಆತ್ಮೀಯ ಎನಿಸುತ್ತದೆ. ಗರ್ಭಕೋಶದ ಚೀಲ ಒಡೆದೇ ಮಗು ಈಚೆ ಬರಬೇಕು. ಅದರ ನೆತ್ತಿಯ ಭಾಗವೇ ಮೊದಲು ಯೋನಿಯಲ್ಲಿ ಕಾಣಿಸಿಕೊಳ್ಳುವುದು. ಗರ್ಭಚೀಲದ ತುದಿಯಲ್ಲಿ ಮಗುವಿನ ತಲೆ ಇರುವುದರಿಂದ ತಾಯಿ 'ನೆತ್ತಿ ನೀರು ಒಡೆದೇ ಮಗು ಈಚೆ ಬರುತ್ತದೆ' ಎನ್ನುತ್ತಾಳೆ. ಯೋನಿಯ ಅಷ್ಟು ಚಿಕ್ಕದಾದ ಭಾಗದಿಂದ ಮಗು ಹೇಗೆ ಬರುತ್ತದೆ? ಗಂಗಾಗೆ ಇದೆಲ್ಲ ಸೋಜಿಗ ಎನಿಸುತ್ತದೆ. ಹೆರಿಗೆ ನೋವು ಎಂದರೆ ಇನ್ನೊಮ್ಮೆ ಹುಟ್ಟಿ ಬಂದ ಹಾಗೆ ಎನ್ನುವ ತಾಯಿಯ ಹಾಗೂ ಸಹೋದ್ಯೋಗಿಯ ಮಾತು ಜ್ಞಾಪಕಕ್ಕೆ ಬರುತ್ತದೆ. ಮನಸ್ಸನ್ನು ಸ್ಥಿರವಾಗಿ ಇಟ್ಟುಕೊಳ್ಳಲು ಚಿತ್ರ ಸಮೇತವಾಗಿರುವ ಹೆರಿಗೆಯ ಬಗ್ಗೆಗಿನ ವಿವರಗಳನ್ನು ಪುಸ್ತಕದಲ್ಲಿ ಮತ್ತೆ ಮತ್ತೆ ಓದುತ್ತಾಳೆ. ಗಂಗಾಳ ತಾಯಿಯ ಆತಂಕವನ್ನು ನೋಡಿ ಪಾರ್ವತಿ ಆ ದಿನ ಗಂಗಾಳ ಮನೆಯಲ್ಲಿಯೇ ಉಳಿದುಬಿಟ್ಟಿದ್ದಳು. ಮರುದಿನ ಕೂಡಾ ಗಂಗಾ ಆಸ್ಪತ್ರೆಗೆ ಹೋಗಲು ಒಪ್ಪದೇ ಹಟ ಮಾಡಿದಳು. ಹಿಂದಿನ ದಿನಕ್ಕಿಂತ ನೋವು ಜಾಸ್ತಿಯಾಗಿದೆ ಎನಿಸತೊಡಗಿತ್ತು ಗಂಗಾಗ. ಆದರೂ ಯೋನಿಯಲ್ಲಿ ರಕ್ತ ಕಾಣಿಸಿಕೊಂಡಿಲ್ಲ. ನಂತರವೇ ಹೋದರಾಯಿತು ಎಂದು ಗಂಗಾ ಭಾನುವಾರದಂದು ಮನೆಯಲ್ಲಿಯೇ ಉಳಿದುಬಿಟ್ಟಳು. ಪಾರ್ವತಿ ಅಂದೂ ಕೂಡಾ ಮನೆಗೆ ಹೋಗದೇ ಗಂಗಾಳ ಮನೆಯಲ್ಲಿಯೇ ಉಳಿದುಬಿಟ್ಟಿದ್ದಳು. ಮರುದಿನ ತಾಯಿ ಏಳುವಷ್ಟರಲ್ಲಿಯೇ ಗಂಗಾ ಆಲೂಗಡ್ಡೆ ಪಲ್ಯ, ಚಟ್ನಿ, ದೋಸೆ ಮಾಡಿಟ್ಟುಬಿಟ್ಟಿದ್ದಳು. ತಾನು ಎದ್ದು ಮಾಡುತ್ತಿರಲಿಲ್ಲವೇ ಎಂದು ತಾಯಿ ಸಿಟ್ಟು ಮಾಡಿದ್ದಳು. 'ನಿದ್ದೆ ಬರದೇ ತಾನು ಸುಮ್ಮನೇ ಓಡಾಡಿಕೊಂಡು ಮಾಡುವುದಾದರೂ ಏನಿತ್ತು?' ಎಂದು ಗಂಗಾ ತಾಯಿಯನ್ನು ಸಮಾಧಾನಪಡಿಸಿದ್ದಳು. ಏಳು ಘಂಟೆಯ ಸುಮಾರಿಗೆ ಯೋನಿಯಲ್ಲಿ ರಕ್ತ ಕಾಣಿಸಿಕೊಂಡಾಗ ಗಂಗಾ ಪಾರ್ವತಿ/ತಾಯಿಯ ಬಳಿ ಆಸ್ಪತ್ರೆಗೆ ಹೋಗೋಣವೆಂದಳು. ತಾಯಿಗೆ ಇನ್ನೂ ಆತಂಕ/ಗಾಭರಿ ಹೆಚ್ಚಾಯಿತು. ಅಷ್ಟೊಂದು ಪಲ್ಯ/ಚಟ್ನಿ ಮಾಡಿದ್ದಾಳೆ. ತಿನ್ನದೇ ಹೋದರೆ ಹೆರಿಗೆಯ ನಂತರ ಗಂಗಾ ಕಟ್ಟುನಿಟ್ಟಾಗಿ ಉಪವಾಸ ಮಾಡಬೇಕು. ಏನೇನನ್ನೂ ತಿನ್ನುವ ಹಾಗೆಯೇ ಇಲ್ಲ. ತಾಯಿ ಚಡಪಡಿಸಿ ಗಂಗಾಳಿಗಾಗಿ ಬಿಸಿ ಬಿಸಿ ದೋಸೆ ಮಾಡಲು ಪ್ರಾರಂಭಿಸಿದರು. ಗಂಗಾ ನಿಧಾನವಾಗಿಯೇ ಸ್ನಾನ ಮಾಡಿ ಒಂದು ಹಳೆಯ ಸೀರೆ ಉಟ್ಟುಕೊಂಡು ಸಿದ್ಧಳಾದಳು. ದೋಸೆ/ಪಲ್ಯ/ ಚಟ್ನಿಯನ್ನು ಒಂದು ದೊಡ್ಡ ತಟ್ಟೆಯಲ್ಲಿ ಹಾಕಿ ತಾಯಿ ತಿನ್ನು ತಿನ್ನು ಎಂದಳು. ಗಂಗಾ ಒಂದೇ ಒಂದು ದೋಸೆ ತಿಂದು 'ಸಾಕು, ಸಾಕು' ಎಂದು ಎದ್ದುಬಿಟ್ಟಾಗ ತಾಯಿ ಕಣ್ಣಲ್ಲಿ ನೀರು ಹಾಕಿಕೊಂಡಳು. ನಂತರ ಜೋರಾಗಿಯೇ ಅಳತೊಡಗಿದಳು. 'ಗಂಗಾ ಯಾವಾಗಲೂ ನಿನ್ನದೇ ಹಟ. ಈ ದಿನ ಕೂಡಾ ನೀನು ಹಟ ಮಾಡಬೇಕೇ? ಹೆರಿಗೆಯಾಗುವಾಗ ನಿನಗೆ ಶಕ್ತಿಯಾದರೂ ಇರಬೇಡವೇ? ಇನ್ನೊಂದು ಜನ್ಮ ಹುಟ್ಟಿ ಬಂದ

ಹಾಗೆ ಆಗುತ್ತದೆ. ಆಮೇಲೆ ಏನೂ ತಿನ್ನೋದಕ್ಕೂ ಆಗೋದಿಲ್ಲ, ತಿನ್ನು, ತಿನ್ನು' ಎಂದು ಹೇಳುತ್ತಾ ತಾಯಿ ಮತ್ತಷ್ಟು ಜೋರಾಗಿಯೇ ಅಳತೊಡಗಿದ ಮೇಲೆ ಗಂಗಾ ತಾಯಿ ತಟ್ಟೆಗೆ ಹಾಕಿದ ನಾಲ್ಕು ದೋಸೆಯನ್ನೂ ಕಷ್ಟಪಟ್ಟು ತಿಂದು ಎದ್ದಳು. ಹೊಟ್ಟೆ ಭಾರ ಎನಿಸತೊಡಗಿತ್ತು. ನಂತರ ಪಾರ್ವತಿ/ ಗಂಗಾ/ತಾಯಿ ಆಸ್ಪತ್ರೆಗೆ ಹೊರಟು ನಿಂತರು. ಗಂಗಾ ಆಸ್ಪತ್ರೆಗೆ ಹೋಗಲು ಬೇಕಾಗುವ ಸಾಮಾನುಗಳನ್ನು ಮೊದಲೇ ಜೋಡಿಸಿಟ್ಟಿದ್ದರಿಂದ ಯಾವುದನ್ನೂ ಮತ್ತೆ ಮತ್ತೆ ಜೋಡಿಸಬೇಕಿರಲಿಲ್ಲ. ಯಾವುದಕ್ಕೂ ತರಾತುರಿಯಿರಲಿಲ್ಲ. ನಿಧಾನವಾಗಿಯೇ ಹೊರಟರು. ಅಷ್ಟು ದೂರದ ತನಕ ಆಟೋ ಸಿಗದ ಕಾರಣ ಇಪ್ಪತ್ತು ನಿಮಿಷ ನಡೆದೇ ಹೊರಟರು. ತಾಯಿ ಚಡಪಡಿಸತೊಡಗಿದ್ದಳು. 'ನೆತ್ತಿಯ ನೀರು ಒಡೆದರೆ ಕಷ್ಟ, ದೇವರೇ ಗಂಗಾಗೆ ಒಳ್ಳೆಯದನ್ನು ಮಾಡು' ಎಂದು ಊರಿನ ದೇವರಿಗೆ ಹರಕೆ ಕಟ್ಟಿಕೊಳ್ಳತೊಡಗಿದ್ದಳು. ಆಟೋ ಸಿಕ್ಕಾಗ ತಾಯಿ ನಿಟ್ಟುಸಿರುಬಿಟ್ಟಿದ್ದಳು. 'ದೇವರೇ ಗಂಗಾಗೆ ಒಳ್ಳೆಯದನ್ನು ಮಾಡು' ಎಂದು ಆಟೋದ ಒಳಗಡೆ ತಾಯಿ ಪದೇ ಪದೇ ಹೇಳುವಳು. ಮಾತು ಮಾತಿಗೆ ನಿಟ್ಟುಸಿರುಗೈಯುವಳು. ಗಂಗಾ ಆಸ್ಪತ್ರೆ ತಲುಪಿದಾಗ ಬೆಳಗಿನ 10.30 ಸಮಯವಿರಬಹುದು. ಲೇಡೀ ಡಾಕ್ಟರ್ ಪರೀಕ್ಷೆ ಮಾಡಲು ಒಳಗೆ ಕರೆದುಕೊಂಡು ಹೋದರು. ಗ್ಲೌಸ್ ಹಾಕಿದ ಕೈಯನ್ನು ಯೋನಿಯೊಳಗೆ ತೂರಿಸಿದರು. ಅಸಾಧ್ಯ ನೋವಿಗೆ ಗಂಗಾಗೆ ಕಿರುಚಬೇಕು ಎನಿಸಿದರೂ ತುಟಿಯನ್ನು ಕಚ್ಚಿ ಹಿಡಿದಳು. ಕಾಮ/ಸೃಷ್ಟಿಯ ಸಂಗಮ ಸ್ಥಳವಾದ ಯೋನಿಯನ್ನು ಡಾಕ್ಟರ್/ನರ್ಸ್ ಎಲ್ಲರೆದುರಿಗೆ ಮುಕ್ತವಾಗಿ ತೆರೆದಿಡಬೇಕಿತ್ತು. ಇಂತಹ ಸಂದರ್ಭಗಳಿಗೆ ಮಹಿಳೆಯರು ಮಾನಸಿಕವಾಗಿ ಸಿದ್ಧಗೊಂಡಿರುತ್ತಾರೆಯೇ ಎಂದು ಗಂಗಾ ಆಲೋಚಿಸತೊಡಗುತ್ತಾಳೆ. ಉಚ್ಚೆ ಹೊಯ್ಯುವುದು, ಋತುಮತಿಯಾಗುವುದು ಇಂತಹ ಸಂದರ್ಭಗಳಲ್ಲಿ ಅಪಾರ ನಾಚಿಕೆ/ಸಂಕೋಚ ಬೆಳೆಸುವ ಈ ಸಂಪ್ರದಾಯ ಬದ್ಧತೆಯಲ್ಲಿ ಹೆರಿಗೆಯ ಸಮಯದಲ್ಲಿ ಗಂಡು ಅಥವಾ ಹೆಣ್ಣು ಡಾಕ್ಟರ್ ಮುಂದೆ ಕಾಲಗಲಿಸಿ ಮಲಗಬೇಕಾದ ಸ್ಥಿತಿಯಲ್ಲಿ ಸಾಮಾನ್ಯ ಸ್ತ್ರೀಯರಿಗೆ ಏನೆನಿಸುತ್ತದೆ? ಗಂಗಾಳ ಮನಸ್ಸು ಇದ್ದಕ್ಕಿದ್ದ ಹಾಗೆಯೇ ಮುದುಡತೊಡಗಿತ್ತು. ಡಾಕ್ಟರ್ ಇನ್ನೆರಡು-ಮೂರು ಘಂಟೆಗಳಲ್ಲಿ ನಿಮಗೆ ಮಗುವಾಗಿಬಿಡುತ್ತದೆ ಎನ್ನುತ್ತಾರೆ. ಮೂರು ದಿನಗಳಿಂದ ತಾನು ಉಳಿಸಿಕೊಂಡಿದ್ದ ಮಾನಸಿಕ ಚಿತ್ತತೆ ಒಮ್ಮಿಂದೊಮ್ಮೆಲೇ ಕಳೆದುಕೊಂಡ ಹಾಗೆ ಗಂಗಾಗೆ ಭಾಸವಾಗತೊಡಗುತ್ತದೆ. ಇಡಿಯ ಹೆರಿಗೆಯ ಸಂದರ್ಭ ತನ್ನ ಹಿಡಿತದಲ್ಲಿ, ತನ್ನ ಕೈಯಲ್ಲಿಯೇ ಇರಬೇಕೆಂಬುದಾಗಿ ಗಂಗಾ ಮನೆಯಲ್ಲಿ ಇದ್ದಾಗ ಎಣಿಸಿದ್ದಳು. ಆದರೆ ಈಗ ದೇಹವನ್ನು, ಹೆಂಗಸು ನಿರ್ಲಜ್ಜೆಯಿಂದಲೇ ಇಟ್ಟುಕೊಳ್ಳಬೇಕಾದ ದೇಹದ ಭಾಗವನ್ನು ಡಾಕ್ಟರ್, ನರ್ಸ್‌ಗಳ ಕೈಗೆ ನೀಡಿಯಾಗಿತ್ತು. ಡಾಕ್ಟರ್ ಹೋದ ನಂತರ ಸಿಸ್ಟರ್ ಬಂದು ಮಲಗಲು ಹೇಳಿ ಯೋನಿಯ ಮೇಲಿದ್ದ ಕೂದಲನ್ನು ಹೆರೆಯತೊಡಗಿದಳು. ದಟ್ಟವಾದ ಕೂದಲುಗಳ ಮಧ್ಯೆ ಹುದುಗಿ ಹೋಗಿದ್ದ ಯೋನಿಯ ಭಾಗ ಈಗ ಬೋಳುಗುಂಡು ತಲೆ ಹಾಗೆ, ಬತ್ತಿ ಹೋದ ಬಜ್ಜಿಯ ತರಹ ಕಾಣಿಸುತ್ತಿತ್ತು. ಯಾವ ಭಾವನೆಯೂ ಇಲ್ಲದೇ ಮರದ ಕೊರಡಿನ ತರಹ ಮಲಗಿ ಗಂಗಾ ನರ್ಸ್ ಕೂದಲು ಹೆರೆಯುವುದನ್ನು, ಅವಳ ಭಾವನೆಗಳನ್ನು ಕಲ್ಪಿಸಲು ಪ್ರಯತ್ನಿಸತೊಡಗಿದಳು. ತಾನು ಇದಕ್ಕೆಲ್ಲ ಒಂದು ರೀತಿ ಮಾನಸಿಕವಾಗಿ ಸಿದ್ಧವಾಗಿ ಬರಬೇಕಿತ್ತು ಎಂದು ಆಕೆಗೆ ಅನ್ನಿಸತೊಡಗಿತ್ತು. ಗಂಗಾಗೆ ಅನಸ್ಥೇಷಿಯಾ ಕೊಡುವ ಸಲುವಾಗಿ ಆಸ್ಪತ್ರೆಯ ಬಟ್ಟೆಗಳನ್ನು ಹಾಕಿಕೊಳ್ಳಲು ಹೇಳಿದ ಮೇಲೆ ಗಂಗಾ ಸಿದ್ಧಳಾಗಿ ಹಾಸಿಗೆಯ ಮೇಲೆ ಮಲಗಿದಳು. ಗಂಗಾಗೆ ನೋವು ಜಾಸ್ತಿಯಾದ ಹಾಗೆ ಅನ್ನಿಸತೊಡಗಿತ್ತು. ಹಾಸಿಗೆಯ ಮೇಲೆ ನೋವಿನಿಂದ ಒದ್ದಾಡತೊಡಗಿದ ಗಂಗಾಳಿಗೆ ತಾಯಿ 'ದೋಸೆ ತಿನ್ನು, ತಿನ್ನು' ಎಂದು ಬಾಕ್ಸನ್ನು ಗಂಗಾಳ ಎದುರಿಗೆ ಹಿಡಿದಿದ್ದಳು. 'ಮಗೂನ ಹೆರೋಕಾದರೂ ಶಕ್ತಿ ಬೇಡವೇ, ತಿನ್ನು ತಿನ್ನು' ಎಂದು ಗಂಗಾಳನ್ನು ತಾಯಿ

ಮತ್ತೆ ಮತ್ತೆ ಪೀಡಿಸತೊಡಗಿದ್ದಳು. ಗಂಗಾ ಸಿಟ್ಟಿನಿಂದ ಬೇಡ ಎಂದು ತಲೆ ಅಲ್ಲಾಡಿಸಿದ್ದಳು ಅಷ್ಟೇ! ಅನಸ್ಥೇಷಿಯಾ ಕೊಟ್ಟ ಮೇಲೆ ಗಂಗಾ ಮೇಲಿಂದ ಮೇಲೆ ವಾಂತಿ ಮಾಡಿಕೊಳ್ಳತೊಡಗಿದ್ದಳು. ನೋವು ಜಾಸ್ತಿಯಾಗಲೆಂದು ಗ್ಲುಕೋಸ್ ಕೊಟ್ಟ ಮೇಲಂತೂ ಗಂಗಾಳಿಗೆ ಕ್ಷಣ ಕ್ಷಣಕ್ಕೆ ಸೊಂಟ ನೋವು ಜಾಸ್ತಿಯಾಗತೊಡಗಿತ್ತು. ಹೊಟ್ಟೆಯ ಕೆಳಗೆ ಕೆಳಗೆ ಮಗು ಸರಿಯುತ್ತಿರುವ ಅನುಭವ. 10, 15 ನಿಮಿಷಗಳಿಗೊಮ್ಮೆ ನರ್ಸ್ ಬಂದು ಯೋನಿಯ ಒಳಗೆ ಕೈ ತೂರುವಳು. ಅದೇನನ್ನೋ ಹಚ್ಚುವಳು. ಮಗು ಈಚೆ ಬರಲು ಯೋನಿಯ ಬಾಯಿ ಇನ್ನಷ್ಟು ದೊಡ್ಡದಾಗಬೇಕು ಎಂದು ಹೇಳುತ್ತಾ ನಡೆಯುವಳು. ದೇಹದ ನಿಯಮದ ಬಗ್ಗೆಯೇ ಗಂಗಾಗೆ ಇದ್ದಕ್ಕಿದ್ದ ಹಾಗೆ ಆಶ್ಚರ್ಯವಾಗುತ್ತದೆ. ಕಾಮಕ್ಕೆ ಕೇಂದ್ರವಾಗುವ ಬಿಂದು ಸೃಷ್ಟಿಗೆ ಅನುಕೂಲವಾಗಿ ತೆರೆದುಕೊಳ್ಳುತ್ತದೆ. ನರ್ಸ್ ಬಂದು ಯೋನಿಯೊಳಗೆ ಕೈ ತೂರಿಸಿದಾಗಲೆಲ್ಲಾ ಗಂಗಾಳಿಗೆ ನೋವಿಗೆ ಕಿರುಚಬೇಕು ಅನಿಸುತ್ತದೆ. ಕಿರುಚುವುದಕ್ಕೆ ಸಂಕೋಚವಾಗಿ ಕಿರುಚುತ್ತಿರಲಿಲ್ಲ ಅಷ್ಟೇ. ಎಷ್ಟೊಂದು ಆಕ್‌ವರ್ಡ್ ಎನಿಸುತ್ತದೆ. ಡಾಕ್ಟರ್ಸ್ ಬರುತ್ತಾರೆ, ನರ್ಸ್ ಬರುತ್ತಾರೆ, ಯೋನಿಯೊಳಗೆ ಕೈ ತೂರಿಸುತ್ತಾರೆ, ಹೋಗುತ್ತಾರೆ. ಜೀವನಪೂರ್ತಿ ನಾಚಿಕೆ/ಅವಮಾನಗಳನ್ನೇ ಕಲಿತ ಹೆಂಗಸಿನ ದೇಹ, ಮನಸ್ಸು ಇಂತಹ ಸಂದರ್ಭಗಳನ್ನು ಹೇಗೆ ಎದುರಿಸುತ್ತದೆ? ಉಚ್ಚೆ ಹೊಯ್ಯುವ ಕ್ರಿಯೆಗೇ ಅವರು/ಇವರು ಎಂದು ಸಂಕೋಚಪಟ್ಟುಕೊಳ್ಳುವ ಹೆಂಗಸರು ಯೋನಿಯನ್ನು ಎಲ್ಲರೆದುರೂ ತೆರೆದಿಡುವ ಸಂದರ್ಭ ಬಂದಾಗ ಸಂಪ್ರದಾಯಸ್ಥ ಹೆಂಗಸರು ಇದೆಲ್ಲ ಹೇಗೆ ಸ್ವೀಕರಿಸುತ್ತಾರೆ? ನೋವಿನ ಮಧ್ಯೆ ಇವೆಲ್ಲ ಜ್ಞಾಪಕಕ್ಕೆ ಬಂದಾಗ ಗಂಗಾಗೆ ನೋವು ಇನ್ನಷ್ಟು ಜಾಸ್ತಿ ಆದ ಹಾಗೆ ಅನ್ನಿಸುತ್ತದೆ. ಇದ್ದಕ್ಕಿದ್ದ ಹಾಗೆ ಹೊಟ್ಟೆಯ ಮೇಲ್ಭಾಗದಿಂದ ಕೆಳಭಾಗಕ್ಕೆ ಏನೋ ದುಮುಕಿದ ಹಾಗೆ. ನೆತ್ತಿ ನೀರೊಡೆಯುವುದು ಎಂದು ತಾಯಿ ಹೇಳುತ್ತಿದ್ದುದು ಗಂಗಾಗೆ ಜ್ಞಾಪಕಕ್ಕೆ ಬರುತ್ತದೆ. ಯೋನಿಯೊಳಗಿನಿಂದ ನೀರು ತರಹ ಸುರಿಯಲು ಪ್ರಾರಂಭಿಸಿದಮೇಲೆ ಅಲ್ಲಿಯತನಕ ಕಿರುಚಬಾರದೆಂದು ಗಟ್ಟಿಯಾಗಿ ನಿರ್ಧರಿಸಿದ್ದ ಗಂಗಾ ಅಮ್ಮಾ, ಅಮ್ಮಾ ಎಂದು ಜೋರಾಗಿ ಕಿರುಚತೊಡಗಿದಳು. 'ಪಾಪು ನಿಧಾನ' ಎಂದು ತನ್ನೊಳಗೇ ಗೊಣಗಿಕೊಳ್ಳುವಳು. ಗರ್ಭಕೋಶದ ಚೀಲ ಒಡೆದು ಬರತೊಡಗಿದ್ದ ಹೊಟ್ಟೆಯೊಳಗಿನ ಕಂದನನ್ನು ಕೆಳಭಾಗದಲ್ಲಿ ಗಂಗಾ ಫೀಲ್ ಮಾಡತೊಡಗಿದ್ದಳು. ನೆತ್ತಿ ನೀರೊಡೆದು ಕಂದ ಈಚೆ ಬರಲು ಪ್ರಯತ್ನಿಸುತ್ತಿರುವ ಹಾಗೆಯೇ ಗಂಗಾ ಮಲಗಿದ್ದ ಹಾಸಿಗೆಯೆಲ್ಲಾ ರಕ್ತ-ನೀರು ಆಗತೊಡಗಿತ್ತು. ನರ್ಸ್ ಅವಸರಿಸಿ ಆಕೆಯನ್ನು ಸ್ಟ್ರೆಚರ್ ಮೇಲೆ ಹಾಕಿಕೊಂಡು ಲೇಬರ್‌ವಾರ್ಡ್‌ಗೆ ಕರೆದುಕೊಂಡು ಹೋದಳು. Labour Ward! ತನ್ನ ಚೀರಾಟದ ನಡುವೆಯೂ ಈ Labour-pain, Labour ward ಎನ್ನುವ ಪದಗಳು ಹೇಗೆ ಬಳಕೆಗೆ ಬಂದಿರಬಹುದು? ಈ ಅಭಿವ್ಯಕ್ತಿಗಳು ಹೇಗೆ ಹುಟ್ಟಿಕೊಂಡಿರಬಹುದು ಎಂದು ಕುತೂಹಲವಾಗುತ್ತದೆ. Labour ಬಗ್ಗೆ ಅಷ್ಟೆಲ್ಲಾ ಮಾತನಾಡಿದ ಮಾರ್ಕ್ಸ್, ಲೇಬರ್ ಪೇಯಿನ್ ಬಗ್ಗೆಯಾಗಲೀ, reproduction ಬಗ್ಗೆಯಾಗಲೀ ಮಾತನಾಡಲೇ ಇಲ್ಲ. ಶ್ರಮಕ್ಕೆ ಅಷ್ಟೊಂದು ಮೌಲ್ಯವನ್ನು ರೂಢಿಸಿಕೊಟ್ಟ ಮಾರ್ಕ್ಸ್‌ಗೆ, labour alienation ಸಮಸ್ಯೆ ಕುರಿತು ಮಾತನಾಡಿದ ಮಾರ್ಕ್ಸ್‌ಗೆ ಈ labour-pain, ಸೃಷ್ಟಿಕ್ರಿಯೆಯ ನಂತರದ ಹೆಣ್ಣಿನ ಚಟುವಟಿಕೆ, ಶ್ರಮಗಳು ಗಮನಕ್ಕೇ ಬರಲಿಲ್ಲವೇ? Reproductivityಯ ಜೊತೆಗೆ ತಳುಕು ಹಾಕಿಕೊಂಡ ಹೆಣ್ಣಿನ ಸಮಸ್ಯೆಗಳು ಕಾರ್ಮಿಕ ಸಂಘಟನೆಯ ರಕ್ತ ಕ್ರಾಂತಿ ಆದ ಮೇಲೆ ಬಗೆ ಹರಿದುಬಿಡುತ್ತವೆ ಎಂದಿದ್ದ. ದುಡಿಯುವ ಕೈಗಳಿಗೆ ಶಕ್ತಿ ಬಂದಾಗ, ಆ ಅಧಿಕಾರದಲ್ಲಿ ಹೆಣ್ಣಿನ ಸಮಸ್ಯೆಗಳೂ ಬಗೆಹರಿದುಬಿಡುತ್ತವೆ ಎಂದು ಕನಸು ಕಾಣುವುದು ಮಾರ್ಕ್ಸ್‌ಗೆ ಸುಲಭವಾಗಿತ್ತೋ ಏನೋ? ಲೇಬರ್ ವಾರ್ಡ್‌ನಲ್ಲಿಡಾಕ್ಟರ್ಸ್ ಆ ಕಡೆ-ಈ ಕಡೆ ಓಡಾಡತೊಡಗಿದ್ದರು. ನರ್ಸ್ ಚಾಕು/ಕತ್ತರಿ ರೆಡಿ ಮಾಡಿ ಇಡತೊಡಗಿದ್ದಳು. ಗಂಗಾ ಕಿರುಚಬಾರದೆಂದು

ಹಲ್ಲು ಕಚ್ಚಿ ಹಿಡಿಯತೊಡಗಿದ್ದರೂ ನೋವಿಗೆ ಧ್ವನಿ ಕಿತ್ತುಕೊಂಡು ಬರತೊಡಗಿತ್ತು. ಆಕೆ ಅಮ್ಮ/ ಅಮ್ಮಾ ಎಂದು ಕಿರುಚತೊಡಗಿದ್ದಳು. ಹೆಣ್ಣು ಹೊರಗೆ ದುಡಿದು ದುಡ್ಡು ಗಳಿಸುವ ಶ್ರಮಶಕ್ತಿಯನ್ನು ಮಾತ್ರ ಮಾರ್ಕ್ಸ್ ಲೆಕ್ಕಕ್ಕೆ ತೆಗೆದುಕೊಂಡಿದ್ದ. ಮನೆಗೆಲಸ, ಮಗು ಹೆರುವ/ಸಾಕುವ ಜವಾಬ್ದಾರಿ! 'ಅಯ್ಯೋ' ಎಂದು ಗಂಗಾ ನೋವಿಗೆ ಜೋರಾಗಿಯೇ ಕಿರುಚತೊಡಗಿದ್ದಳು. ಹೊಟ್ಟೆಯೊಳಗಿನ ಕಂದ ಈ ಲೋಕಕ್ಕೆ ಬರಲು ಹವಣಿಸುತ್ತಿದ್ದ ಹಾಗೆಯೇ ಗಂಗಾಳ ನೋವು ತಾರಕಕ್ಕೇರಿತ್ತು. ಗಂಗಾ ಮತ್ತೆ ಮತ್ತೆ ಕಿರುಚತೊಡಗಿದ್ದಳು. ಮನಸ್ಸನ್ನು ಸ್ಥಿರವಾಗಿ ಇಟ್ಟುಕೊಳ್ಳಬೇಕು, ಸ್ಥಿಮಿತ ಕಳೆದುಕೊಳ್ಳಬಾರದು, ತನ್ನ ಹೆರಿಗೆಯನ್ನು ತನ್ನ ಹತೋಟಿಯಲ್ಲಿಯೇ ಇಟ್ಟುಕೊಳ್ಳಬೇಕು ಎಂದು ಯೋಚಿಸಿ-ನಿರ್ಧರಿಸಿದವುಗಳೆಲ್ಲ ಗಾಳಿಗೆ ತೂರಿ ಹೋಗಿದ್ದವು. ಹೆರಿಗೆ ಈಗ ಡಾಕ್ಟರ್ಸ್/ನರ್ಸ್‌ಗಳ ಕೈಯಲ್ಲಿತ್ತು. ಅವರ ಕೈಯಲ್ಲಿ ಮಗುವನ್ನು ಹೆರುವ ರೋಗಿಯಾಗಿದ್ದಳು ಗಂಗಾ! ಡಾಕ್ಟರ್ ಮುಕ್ಕು, ಮುಕ್ಕು ಎನ್ನುತ್ತಿದ್ದರು. ಗಂಗಾ ಮೇಲಿಂದ ಕೆಳಗೆ ಮಗುವನ್ನು ತಳ್ಳಲು ದೇಹವನ್ನು ಹಿಂಜಿ/ಮುಂಜಿ ಪ್ರಯತ್ನಿಸುತ್ತಲೇ ಇದ್ದಳು. ಆಕೆಯ ನರಳಾಟ ಜಾಸ್ತಿಯಾಗುತ್ತಲೇ ಇತ್ತು. ಇಷ್ಟು ಮಾತ್ರ ಕಾಣಿಸಿಕೊಂಡ ಮಗುವಿನ ತಲೆಯನ್ನು ಎಳೆಯಲು ಡಾಕ್ಟರ್ಸ್ ಪ್ರಯತ್ನಿಸುತ್ತಿದ್ದುದು ಗಂಗಾಳ ಅನುಭವಕ್ಕೆ ಬರುತ್ತದೆ. ಬಹುಶಃ ಬೆಳಗಿನಿಂದ ಸಂಜೆಯತನಕ ಬೆವರು ಸುರಿಸಿ ದುಡಿಯುವ ದೇಹದ ಶ್ರಮಕ್ಕೆ ಹೋಲಿಸಿ ಇದನ್ನು ಲೇಬರ್ ಪೇಯಿನ್ ಎಂದು ಹೇಳಿರಬಹುದೇ ಎಂದು ಗಂಗಾ ಮತ್ತೆ ಯೋಚಿಸತೊಡಗುತ್ತಾಳೆ. ತಲೆ ಕಾಣಿಸಿಕೊಂಡಿದೆ. 'ಏನು ಮಗು' ಎನ್ನುತ್ತಾಳೆ. ಅವರೇನು ಉತ್ತರ ಕೊಡರು. 'ಗಂಗಾ body relax ಮಾಡಿ ಮುಕ್ಕಬೇಕು' ಎಂದು ಡಾಕ್ಟರ್ ಮತ್ತೆ ಮತ್ತೆ ಹೇಳುತ್ತಾರೆ. ಬಾಡಿ ರಿಲ್ಯಾಕ್ಸ್ ಮಾಡಬಹುದು, ಮನಸ್ಸು? ಮತ್ತೆ ಮತ್ತೆ ಗಂಗಾ ಮುಕ್ಕುತ್ತಾಳೆ. ರಕ್ತ ಬಸಿಯುತ್ತಲೇ ಇದೆ. ಮುಕ್ಕುತ್ತಲೇ ತನ್ನ ದೇಹ/ಮಗುವಿನ ನೋವಿನ ಲಯಗಳಲ್ಲಿ ಮೂಡುವ ಅನಾಥ ಪ್ರಜ್ಞೆ, - ಮಾರ್ಕ್ಸ್ ಹೇಳಿದ labour alienationಗೆ ಹತ್ತಿರವಾದುದೇ ಎಂದು ಆಲೋಚಿಸತೊಡಗುತ್ತಾಳೆ. ಹೆಣ್ಣಿನ ಈ ದೇಹದ ಪರಕೀಯತೆ, ಆ ಕ್ಷಣದ ಪರಕೀಯತೆ ಮಾರ್ಕ್ಸ್‌ಗೆ ಹೊಳೆಯಲಿಲ್ಲವೋ ಏನೋ? ಮಾರ್ಕ್ಸ್‌ನ ದಾರ್ಶನಿಕತೆಯಲ್ಲಿ ಇದ್ದುದು ಗಂಡು ಅನುಭವದ ಲಯಗಳೇನೋ ಎಂದು ಯೋಚಿಸುತ್ತಿದ್ದ ಹಾಗೆ ಟಕ್ ಎಂದು ಡಾಕ್ಟರ್ ಮಗುವಿನ ತಲೆಯನ್ನು ಈಚೆ ಎಳೆದುಬಿಟ್ಟಿದ್ದಾರೆ. ಮಗುವಿನ ತಲೆ ಮಾತ್ರ ಯೋನಿಯ ಹೊರಗೆ ಇದೆ. ತಲೆ ಹಿಡಿದು ಮಗುವಿನ ದೇಹವನ್ನು ಈಚೆ ಎಳೆಯಲು ಪ್ರಯತ್ನಿಸುತ್ತಿದ್ದಾರೆ. 'Ganga you have to Co-operate' ಎನ್ನುತ್ತಾರೆ. ಗಂಗಾ ಜೋರಾಗಿಯೇ ಮುಕ್ಕುತ್ತಾಳೆ. ದಡಕ್ಕನೇ ಮಗು ಕೆಳಕ್ಕೆ ಬೀಳುತ್ತದೆ. ಜೋರಾಗಿ ಮುಕ್ಕಿ ಮುಕ್ಕಿ ಆದ ಆಯಾಸಕ್ಕೆ ಗಂಗಾಗೆ ತ್ರಾಣವೇ ಇಲ್ಲದಂತಾಗುತ್ತದೆ. ಅತ್ತ-ಇತ್ತ ಕತ್ತು ತಿರುಗಿಸಲೂ ಸಾಧ್ಯವಾಗದೇ ಅತ್ಯಂತ ಕ್ಷೀಣವಾದ ಧ್ವನಿಯಲ್ಲಿ 'ಏನು ಮಗು?' ಎನ್ನುತ್ತಾಳೆ. ಬ್ಯುಸಿಯಾಗಿರುವ ಡಾಕ್ಟರ್‌ಗೆ ಆಕೆಯ ಮಾತುಗಳು ಕೇಳಿಸುವುದಿಲ್ಲ. ಗಂಗಾ ಅತ್ತ-ಇತ್ತ ಕಣ್ಣು ಹೊರಳಿಸಲು ಪ್ರಯತ್ನಿಸುತ್ತಾಳೆ, ಸಾಧ್ಯವಾಗುವುದಿಲ್ಲ. ತೆರೆ ಬಂದು ದುಬುಕ್ಕನೇ ಇಳಿದಾದ ಮೇಲೆ ಸಮುದ್ರ ಶಾಂತವಾಗುವ ಹಾಗೆ, ಮಗು ಜಾರಿದ ತಕ್ಷಣ ನೋವು/ಸಂಕಟ ಎಲ್ಲಾ ಕಡಿಮೆಯಾದಂತಾಗಿ ಇದ್ದಕ್ಕಿದ್ದ ಹಾಗೆ ಎಲ್ಲಾ ಬರಿದು, ಬರಿದು ಎನಿಸತೊಡಗುತ್ತದೆ. ಮತ್ತೆ ಗಂಗಾ 'ಏನು ಮಗು' ಎಂದು ವಿಚಾರಿಸಬೇಕು ಎನ್ನುವಾಗಲೇ ಸಿಸ್ಟರ್ ತೊಳೆದು ತಂದ ಮಗುವನ್ನು ಗಂಗಾಳ ಎದುರಿಗೆ ಹಿಡಿಯುತ್ತಾಳೆ. ಬಿಳಿಯ ಬಟ್ಟೆ ಸುತ್ತಿದ ಮಗು ಗಂಡೋ-ಹೆಣ್ಣೋ ಎಂದು ತಿಳಿಯುವುದಿಲ್ಲ. 'ಏನು ಮಗು?' ಎನ್ನುತ್ತಾಳೆ. 'ಹೆಣ್ಣು-ಮಗು' - ಸಿಸ್ಟರ್ ಗಂಗಾಗೆ ನೋವಾಗಬಹುದೆಂದು ನಿಧಾನವಾಗಿಯೇ ಹೇಳುತ್ತಾರೆ, ಗಂಗಾ ತನಗರಿವಿಲ್ಲದ ಹಾಗೆಯೇ, ಎಲ್ಲಿಂದಲೋ ಯಾವುದೋ ಶಕ್ತಿ ತನ್ನಲ್ಲಿ ಸೇರಿಕೊಂಡ ಹಾಗೆ ಜೋರಾಗಿ 'Thank you doctor,

Thank you sister' ಎನ್ನುತ್ತಾಳೆ. ಡಾಕ್ಟರ್ ಅವಳು ಅಷ್ಟು ಜೋರಾಗಿ ಹೇಳಿದುದು ಕೇಳಿ ಗಾಭರಿಯಿಂದ ಹತ್ತಿರ ಬರುತ್ತಾರೆ. 'What Ganga?' ಎಂದು ಡಾಕ್ಟರ್ ಗಾಭರಿಯಿಂದ ಕೇಳಿದರೆ ಗಂಗಾ ಸುಮ್ಮನೇ ನಗುತ್ತಾಳೆ. 'Nothing doctor' ಎನ್ನುತ್ತಾಳೆ. 'ವಿಚಿತ್ರ ಹೆಂಗಸು' ಎಂದುಕೊಂಡು ಡಾಕ್ಟರ್ ಅಲ್ಲಿಂದ ಹೊರಟು ಹೋಗುತ್ತಾರೆ. ಗಂಗಾಗೆ ಸಂತೋಷ ಎದೆ ತುಂಬಿ ಬರುತ್ತದೆ. ಆ ಸಂತೋಷಕ್ಕೆ, ನೆಮ್ಮದಿಗೆ, ಆಯಾಸವೆಲ್ಲ ಕರಗಿ ಕಣ್ಣುಗಳು ನಿಧಾನವಾಗಿ ಮುಚ್ಚಿಕೊಳ್ಳತೊಡಗುತ್ತವೆ. ಬಸಿರ ಪೂರ್ತಿ ತನ್ನ ಜೊತೆ ಸಂವೇದಿಸಿದ ಕುಡಿ ಈಗ ಹೆಣ್ಣು ಕುಡಿಯಾಗಿ ತನ್ನ ಎದೆ ಭಾರ ಹಂಚಿಕೊಳ್ಳಲು ಜೀವನ ಪೂರ್ತಿ ತನ್ನ ಜೊತೆ ಇರುತ್ತದೆ ಎಂಬ ನೆಮ್ಮದಿ ಆಕೆಯ ಎದೆಯನ್ನು ತುಂಬಿಕೊಳ್ಳುವಾಗಲೇ ಆಕೆಗೆ ನಿದ್ದೆಯ ಜೋಮು ಹಿಡಿದಂತಾಗುತ್ತದೆ. ನರ್ಸ್ ಆಕೆಯನ್ನು ಸ್ಟ್ರೆಚರ್ ಮೇಲೆ ಕೋಣೆಯ ಹಾಸಿಗೆಯ ಮೇಲೆ ತಂದು ಹಾಕಿದಾಗ ಗಂಗಾ ನೆಮ್ಮದಿಯಿಂದ ಕಣ್ಣು ಮುಚ್ಚಿ ಮಲಗಿಬಿಡುತ್ತಾಳೆ.

* * * *

ಗಂಗಾಳ ಬದುಕು ಮಗು ಮಿತಾಳಿಂದಾಗಿ ಬೇರೆ ಬೇರೆಯ ಚಹರೆಗಳನ್ನೇ ಪಡೆದುಕೊಳ್ಳತೊಡಗಿತ್ತು. ಅಲ್ಲಿಯತನಕ ರಮೇಶ-ಗಂಗಾ ಒಟ್ಟಿಗೇ ಇರುತ್ತಿದ್ದರೂ, ಗಂಗಾಳ ತಾಯಿ ಜೊತೆಯಲ್ಲಿ ಇರುತ್ತಿದ್ದರಿಂದ ರಮೇಶ ತನ್ನ ತಂದೆ-ತಾಯಿಗಳ ಸಂಬಂಧ ರಿಪೇರಿ ಮಾಡಿಕೊಳ್ಳಲು ಓಡಾಡತೊಡಗಿದ್ದ. ಆತ ಮೊದಲು ಕೆಲಸ ಮಾಡುತ್ತಿದ್ದ ಕಾರ್ಖಾನೆ ಬಿಟ್ಟು ಈಗ ಬೇರೊಂದು ಸಂಸ್ಥೆಯಲ್ಲಿ ಪರಿಸರಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುತ್ತಿದ್ದ. ಪ್ರಾರಂಭದ ವರ್ಷದಲ್ಲಿ ರಮೇಶ-ಗಂಗಾ ಗಮನವೆಲ್ಲಾ ಮಗುವಿಗೆ ಬೇಕಾದ ಅಗತ್ಯದ ಸಾಮಾನುಗಳೆಲ್ಲ ಕೊಳ್ಳುವುದೇ ಆಗಿತ್ತು. ಮಿತಾ ಹುಟ್ಟುವ ಮೊದಲು ಗಂಗಾ-ರಮೇಶ ಮನೆಗೆ ಇಂತಹ ಸಾಮಾನು ಬೇಕೇ ಬೇಕು ಎಂದುಕೊಂಡುದೇ ಇಲ್ಲ. ಆದರೆ ಈಗ ಮಿತಾಳ ಬದುಕಿನ ಸುತ್ತ ಅವರಿಬ್ಬರು ಬದುಕು ತೊಡಗಿಸಿಕೊಳ್ಳತೊಡಗಿದ್ದರು. ಮಂಚ/ಸೊಳ್ಳೆ ಪರದೆಯಂತಹ ಚಿಕ್ಕ-ಪುಟ್ಟ ಸಂಗತಿಗಳಿಂದ ಹಿಡಿದು ಮನೆಯಲ್ಲಿ ಅಡಿಗೆ-ತಿಂಡಿಯ ಬಗ್ಗೆಯೂ ಮಿತಾಳಿಗಾಗಿ ಯೋಚಿಸುವುದಿತ್ತು. ತಮ್ಮ ಮೇಲೆ ಅವಲಂಬಿತವಾಗಿರುವ ಆ ಎಳೆಯ ಜೀವವನ್ನು ಬೆಳೆಸುವ ಜವಾಬ್ದಾರಿ ತಮ್ಮದು ಎನ್ನುವ ಬೆಚ್ಚನೆಯ ಭಾವನೆಗಳು ಇಬ್ಬರಿಗೂ ಇತ್ತು. ಮಗು ಮಿತಾಳಿಗೆ ವರುಷವಾಗುವಷ್ಟರಲ್ಲಿ ಗಂಗಾ/ರಮೇಶ ಕೌಟುಂಬಿಕ ವ್ಯಕ್ತಿಗಳಾಗಿ ಪರಿವರ್ತನೆ ಹೊಂದುವುದು ಅನಿವಾರ್ಯ ಸ್ಥಿತಿಯಾಗತೊಡಗಿತ್ತು. ಗಂಡ/ಹೆಂಡತಿ/ಮಗು ಎನ್ನುವಂತಹ ಕಲ್ಪನೆಗಳು ಗಂಗಾ/ರಮೇಶರ ಮಧ್ಯದಲ್ಲಿ ಸ್ಪಷ್ಟವಾಗಿ ಮೂಡತೊಡಗಿದುದೇ ಮಿತಾಳಿಂದಾಗಿ. ರಮೇಶ ಮೊದಲಿನ ಹಾಗೆ ಮನೆಗೆ ಬರದೇ ಇರುತ್ತಿರಲಿಲ್ಲ. ದುಡಿಯುವುದನ್ನು ಪೂರ್ತಾ ತನ್ನ ಮನೆಗೆ ಕಳಿಸುವುದಾಗಲೀ ಅಥವಾ ಖರ್ಚು ಮಾಡುವುದಾಗಲೀ ಮಾಡುತ್ತಿರಲಿಲ್ಲ. ಮಗುವಿನ ಅವಶ್ಯಕತೆಗಳಿಗೆ ಇಬ್ಬರೂ ಗಮನ ಕೊಡುವುದು ಅಗತ್ಯ ಎಂಬುದನ್ನು ರಮೇಶ್ ಕೂಡಾ ಫೀಲ್ ಮಾಡತೊಡಗಿದ್ದ. ಅವನು ತನ್ನ ಕೊಠಡಿಯನ್ನು ಬಿಟ್ಟು ಗಂಗಾಳೊಟ್ಟಿಗೇ ಇರುವುದಕ್ಕೆ ಕೂಡಾ ಆಲೋಚಿಸತೊಡಗಿದ್ದ. ತನ್ನ ಮನೆಯವರು ಬಂದರೆ ಎನ್ನುವ ಆಲೋಚನೆ ಅವನನ್ನು ಬಾಧಿಸುತ್ತಿತ್ತು. ಮಗುವಿಗೆ ವರುಷವಾದರೂ ಮಿತಾಳ ಸಂಗತಿಯನ್ನು ಆತನ ತಂದೆ-ತಾಯಿಗೆ ತಿಳಿಸಿರಲಿಲ್ಲ. ತಿಳಿಸುವ ಅವಶ್ಯಕತೆ ಇದೆಯೇ ಎಂದು ಒಮ್ಮೊಮ್ಮೆ ಆತನಿಗೆ ಅನ್ನಿಸುತ್ತಿತ್ತು. ರಮೇಶ ಆತನ ಮನೆಗೆ ಹೋಗಿ ಬರುತ್ತಿದ್ದುದುಂಟು. ಮಗುವಿನ ಸಂಗತಿಯನ್ನಾಗಲೀ, ಗಂಗಾಳೊಟ್ಟಿಗೆ ಬದುಕುವುದನ್ನಾಗಲೀ ಆತ ಮನೆಯಲ್ಲಿ ಬಾಯಿ ಬಿಟ್ಟವನೇ ಅಲ್ಲ. ಅವರೂ ಬಾಯಿ ಬಿಟ್ಟು ಕೇಳಿದವರೂ ಅಲ್ಲ. ಅವರಿಗೆ ಗೊತ್ತಿರಬಹುದು ಎಂದು ರಮೇಶ, ಹೇಗೋ ಮಗ ಅನ್ನೋದಕ್ಕೆ ಮನೆಗೆ ಬರ್‍ತಾನೆ, ಹೇಗೋ, ಎಲ್ಲಿಯೋ ಬದುಕಿಕೊಳ್ಳಲಿ ಎಂದು ಆತನ ಮನೆಯವರು. ಒಂದು ರೀತಿಯ ಮೌನ ಅವರೀರ್ವರ ನಡುವೆ ಮನೆ ಮಾಡಿಬಿಟ್ಟಿತ್ತು. ರಮೇಶನಿಗೆ ಅಂತಹ

tensionsಗಳೇನೂ ಈಗ ಇರಲಿಲ್ಲ. ಗಂಗಾ-ರಮೇಶ್ ಇಬ್ಬರೂ ಕೆಲಸದಲ್ಲಿ settle ಆದ್ದರಿಂದ ಮಗು ಹುಟ್ಟುವವರೆಗೆ ಇದ್ದ ಆರ್ಥಿಕ ಒತ್ತಡಗಳೂ ಈಗ ಅಷ್ಟಾಗಿ ಕಾಣಿಸುತ್ತಿರಲಿಲ್ಲ. ಒಂದು ವರುಷದವರೆಗೆ ಮಗು ಮಿತಾ ಬೆಳೆದದ್ದು ಅಜ್ಜಿಯ ಮಡಿಲಲ್ಲಿಯೇ. ಹಾಗಾಗಿ ಮಗುವನ್ನು ಬೆಳೆಸುವ ಕಷ್ಟದ ಬಿಸಿ ಇಬ್ಬರಿಗೂ ತಟ್ಟಿರಲಿಲ್ಲ. ಆದರೆ ಮಿತಾ ಅಜ್ಜಿಯ ಮಡಿಲಲ್ಲಿ ಬೆಳೆಯುವ ಅದೃಷ್ಟ ಪಡೆದುಕೊಳ್ಳಲಿಲ್ಲವೋ ಎಂಬಂತೆ ಒಂದು ದಿನ ಇದ್ದಕ್ಕಿದ್ದ ಹಾಗೆ ಗಂಗಾಳ ತಾಯಿಗೆ ಬಿ.ಪಿ. ಹೆಚ್ಚಾಗಿ ಆಕೆ ಆಸ್ಪತ್ರೆ ಸೇರಿದ್ದರು. ಆಕೆಗೆ ಸಣ್ಣದಾಗಿ ಹೃದಯಾಘಾತವಾಗಿತ್ತು. ತಾಯಿ ಚೇತರಿಸಿಕೊಂಡಳೇನೋ ನಿಜ. ಆ ಸಂದರ್ಭದಲ್ಲಿ ರಮೇಶ ತಾಯಿಗೆ ತೋರಿಸಿದ ಪ್ರೀತಿ/ಆಸರೆಗಳಿಂದ ಗಂಗಾಳ ಹೃದಯ ತುಂಬಿ ಬಂದಿತ್ತು. ಗಂಗಾ ಬೆಳಿಗ್ಗೆ ಬೆಳಿಗ್ಗೆಯೇ ಕೆಲಸಕ್ಕೆ ಹೋಗಬೇಕಾಗುತ್ತಿದ್ದರಿಂದ ರಮೇಶನೇ ಅಡಿಗೆ ಮಾಡಿ ತಾಯಿಗೆ ಕೊಟ್ಟು ಆಫೀಸಿಗೆ ಹೋಗುತ್ತಿದ್ದ. ಬಿಡುವಿನ ಸಮಯದಲ್ಲಿ ಆಸ್ಪತ್ರೆಯಲ್ಲಿ ತಾಯಿಯ ಪಕ್ಕವೇ ಕುಳಿತಿರುತ್ತಿದ್ದ. ಮನೆಯಲ್ಲಿದ್ದ ಮಿತಾಳನ್ನು ಪಾರ್ವತಿ ಎಷ್ಟೋ ಬಾರಿ ಬಂದು ನೋಡಿಕೊಳ್ಳುತ್ತಿದ್ದುದುಂಟು. ಪಾರ್ವತಿಯ ಬಗ್ಗೆಯೂ ಗಂಗಾಗೆ ಕೃತಜ್ಞತೆ ಮೂಡಿ ಬರುತ್ತಿತ್ತು. ತಾಯಿ ಆಸ್ಪತ್ರೆ ಬಿಡುವಾಗ ತಾಯಿಗೆ ಬೆಡ್ ರೆಸ್ಟ್ ಅಗತ್ಯ ಎಂದು ಹೇಳಿದಾಗ ಗಂಗಾಗೆ ಯೋಚನೆಯಾಗತೊಡಗಿತ್ತು. ತಾಯಿಯನ್ನು ಊರಿಗೆ ಕಳಿಸಿಬಿಡುವುದು ಅನಿವಾರ್ಯವಾಗಿತ್ತು. ಹೊನ್ನೇಕೆರೆಯಲ್ಲಾದರೆ ಉಮಾ ಹೊತ್ತು-ಹೊತ್ತಿಗೆ ಊಟ-ತಿಂಡಿಯ ಬಗ್ಗೆ ನಿಗಾ ಕೊಡುತ್ತಾಳೆ. ಆದರೆ ಇಲ್ಲಿ ತಾನು ಕೆಲಸ ಮಾಡಿಕೊಂಡು ತಾಯಿಯನ್ನು ಅಷ್ಟು ಚೆನ್ನಾಗಿ ನೋಡಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಗಂಗಾಳಿಗೆ ಮನದಟ್ಟಾಗಿತ್ತು. ಮನೆಯಲ್ಲಿರುವ ತಾಯಿಯನ್ನು ಮಿತಾ ಸುಮ್ಮನೇ ಬಿಡುತ್ತಾಳೆಯೇ? ಹೋಗಿ ಹೋಗಿ ಅವರ ಮೇಲೆಯೇ ಬಿದ್ದು ಬಿಡುತ್ತಾಳೆ, ಪೀಡಿಸುತ್ತಾಳೆ. ಹೀಗಾಗಿ ಗಂಗಾ ತಾಯಿಯನ್ನು ಹೊನ್ನೇಕೆರೆಗೆ ಹೋಗಿ ಇರಲು ಒತ್ತಾಯಿಸಿದ್ದಳು. ಇಷ್ಟವಿಲ್ಲದೇ ಗಂಗಾಳ ಒತ್ತಾಯಕ್ಕಾಗಿ ಹೊರಟು ನಿಂತಿದ್ದರು ತಾಯಿ. ತಾಯಿ ಹೊರಟು ನಿಂತಾಗ ಗಂಗಾಳ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಮತ್ತೆ ಬರುತ್ತಾಳೋ ಇಲ್ಲವೋ? ತನ್ನ ಕಷ್ಟದ ಎರಡು ವರ್ಷ ಕಾಲವೂ ತಾಯಿ ತನ್ನ ಜೊತೆಯಲ್ಲಿ ಕಳೆದ ಒಂದೊಂದು ದಿನಗಳೂ ಗಂಗಾಳಿಗೆ ನೆನಪಿಗೆ ಬರತೊಡಗಿದ್ದವು. ಹೊನ್ನೇಕೆರೆಯಲ್ಲಿ ಹಂಡೆಗಟ್ಟಲೆ ನೀರು ಸ್ನಾನ ಮಾಡುತ್ತಿದ್ದ ತಾಯಿ ಈಗ ಬಕೆಟ್ ನೀರಿನಲ್ಲಿ ಸುಮ್ಮನಾಗಿಬಿಡುವಳು. ಕರೆಂಟ್ ಸ್ಟೋವ್ ನೋಡಿರದಿದ್ದ ತಾಯಿ ಕೈ ಸುಟ್ಟುಕೊಂಡು ಅದರಲ್ಲೇ ಅಡಿಗೆ ಮಾಡಿದ್ದಳು. ಮಿತಾ ಹುಟ್ಟಿದಾಗ ಬಟ್ಟೆ ಒಗೆಯಲಿಕ್ಕೆ ಕೆಲಸದವರ್‍ಯಾರಾದರೂ ಬಂದಾರು ಎಂದರೆ ಅದಕ್ಕೂ ತಾಯಿ ವಾದಿಸಿದ್ದಳು. ತನಗೇನಾಗಿದೆ? ತಾನೇ ಮಾಡುತ್ತೇನೆ ಎಂದಿದ್ದಳು. ಎಲ್ಲಾ ಕೆಲಸ ತಾನೇ ಮಾಡುತ್ತೇನೆ ಎಂಬುದೇ ತಾಯಿಯ ಹಟ. ಗಂಗಾಳಿಗೆ ಕಷ್ಟ, ತಿನ್ನದೇ, ಉಣ್ಣದೇ ಬಾಯಿ ಕಟ್ಟುತ್ತಾಳೆ. ಹಲ್ಲು ಕಚ್ಚಿ ಹಿಡಿದು ನೋವನ್ನು ನುಂಗಿಕೊಂಡುಬಿಡುತ್ತಾಳೆ. ಆಕೆಯ ಹತ್ತಿರ ಹೆಚ್ಚು ಖರ್ಚು ಮಾಡಿಸಬಾರದು ಎನ್ನುವುದು ಆಕೆಯ ಆಸೆ. ಇದೆಲ್ಲ ನೆನಸಿಕೊಂಡು ತಾಯಿಯಿಂದ ಅಗಲುವಾಗ ಗಂಗಾ ಅತ್ತಿದ್ದಳು. ಮಿತಾ ಅಜ್ಜಿ-ಅಜ್ಜಿ ಎನ್ನುತ್ತಾ ಹಿಂದೆ ಓಡಾಡುತ್ತಿದ್ದವಳು ಅಜ್ಜಿ ಹೋಗುವಾಗ ಅತ್ತು ರಂಪ ಮಾಡಿದ್ದಳು. 28-29 ವರುಷ ಬೆಳ್ಳಗಿದ್ದ ಸಂಬಂಧವೊಂದರಿಂದ ದೂರವಾಗುವುದು ಕಷ್ಟವಾದರೂ ತಾಯಿಗಾಗಿಯೇ ಆ ಕೆಲಸ ಮಾಡಬೇಕಿತ್ತು. ತಾಯಿಗೆ ಏನೆನಿಸಿತ್ತೋ? ಬಿಕ್ಕಿ ಬಿಕ್ಕಿ ಅತ್ತಿದ್ದಳು. 'ಬೇಗನೇ ಒಂದು ಮನೆ ಕಟ್ಟಿಸಿಕೊಳ್ಳಿ, ಬೆಂಗಳೂರಿನಲ್ಲಿ ಬಾಡಿಗೆ ಕೊಡುವುದೇ ಕಷ್ಟದ ಕೆಲಸ' ಎಂದಿದ್ದಳು. ಗಂಗಾಳ ತಂದೆಯ ಹತ್ತಿರ ಮಾತನಾಡಿ ದುಡ್ಡು ಕೊಡಿಸುವುದಾಗಿ ಕೂಡಾ ಹೇಳಿದ್ದಳು. ಕೊನೆಯದಾಗಿ ತಾಯಿಗೆ ಗುಡ್ ಬೈ ಹೇಳುವಾಗ ಗಂಗಾಳ ಕಣ್ಣಲ್ಲಿ ನೀರು ಕೋಡಿಯಾಗಿ ಹರಿದಿತ್ತು.

* * * *

25 ಜನವರಿ, 1992. ವರ್ಷದ ಪ್ರಾರಂಭ ಗಂಗಾಳಿಗೆ ತಾಯಿಯ ಸಾವಿನಿಂದ ಆರಂಭವಾಗಿತ್ತು. ಗಂಗಾಳ ಕ್ರಿಯೆಗಳಿಗೆ, ಸಂತೋಷಗಳಿಗೆ ಅರ್ಥ ಹಚ್ಚಿ ಮೆರಗು, ಬೆರಗು ಸಂಭ್ರಮ ಪಡುತ್ತಿದ್ದ ಗಂಗಾಳ ತಾಯಿ ಇನ್ನಿರಲಿಲ್ಲ. ನಡೆದಾಡುವ ರಸ್ತೆಗಳಲ್ಲಿ, ಚಲಿಸುವ ಬಸ್ಸುಗಳಲ್ಲಿ, ಕಾಡುವ ಮಗಳು ಮಿತಾಳ ಮುಖದಲ್ಲಿ, ಒಂಟಿಯಾಗಿ ಕುಳಿತುಕೊಂಡಾಗ ತಬ್ಬಲಿಯಂತೆ ಅನ್ನಿಸಿ ಗಂಗಾಳ ಕಣ್ಣಲ್ಲಿ ನೀರು ಬರುತ್ತದೆ. ಬದುಕಿನ ಒಂದು ಘಟ್ಟ ಮುಗಿದಂತೆ ಅನ್ನಿಸಿ, ಗಂಗಾಳಿಗೆ ತೀರಾ ವಯಸ್ಸಾಗಿದೆ ಎನ್ನಿಸತೊಡಗಿದೆ. ತಾಯಿ ಹಾಡುತ್ತಿದ್ದ ಹಾಡುಗಳು, ಆಕೆಯ ಕಿವಿಯಲ್ಲಿ ಗುಯ್‌ಗುಡುತ್ತವೆ. ನಾಸ್ತಿಕಳಾದ ಗಂಗಾಗೆ ತಾಯಿ ದೇವರು ಕುರಿತು ಹಾಡಿದ್ದು, ಮದುವೆ, ಸಂಭ್ರಮಗಳಿಗಾಗಿ ಹಾಡುತ್ತಿದ್ದ ಹಾಡುಗಳು ಆತ್ಮೀಯವಾಗಿ ತಾಯಿಯ ಇರುವನ್ನು ಗಂಗಾಳಲ್ಲಿ ಭದ್ರಪಡಿಸುವ ಸಾಧನಗಳಾಗಿವೆ. ಆಕೆ ಧರಿಸುತ್ತಿದ್ದ ಓಲೆಗಳು ಈಗ ಗಂಗಾಳ ಜೊತೆಗಾತಿಯಾಗಿವೆ. ತಾಯಿಯ ಹೆಣದ ಮೇಲಿದ್ದ ಸೀರೆ ಗಂಗಾಳ ಒಡಲು-ಮಡಿಲುಗಳಲ್ಲಿ ಜೋಪಾನವಾಗಿದೆ. ಕಳೆದು ಹೋದದ್ದನ್ನು ವಸ್ತುಗಳ ಪ್ರತಿ ಬಿಂಬದಲ್ಲಿ ಪಡೆದುಕೊಳ್ಳುತ್ತಿದ್ದೇನೆಂಬ ಹುಚ್ಚು......ಭ್ರಮೆ........ ಗಂಗಾಳಿಗೆ.

ಅಲಂಕರಿಸಿದ ಹೆಣ ಆಕೆಯ ಕಣ್ಣುಗಳಲ್ಲಿ ಹಸಿರು, ಹಸಿರಾಗಿದೆ. ಮಲಗಿಸಿದ ತಣ್ಣನೆಯ ಶವದ ಮೇಲೆ ಮೊನ್ನೆ ಮೊನ್ನೆಯವರೆಗೆ ಕೈ ಹಾಕಿ ತಬ್ಬಿ ಮಲಗಿದ ಹಾಗೆ ಮಲಗಿ ಅತ್ತಿದ್ದಾಳೆ ಗಂಗಾ. ಆದರೂ ತಾಯಿಯನ್ನು ಕಿತ್ತೊಗೆಯಲು ಆಕೆಗೆ ಸಾಧ್ಯವಾಗುತ್ತಿಲ್ಲ. ಅಲ್ಲಿ ಎಲ್ಲೋ ಕಟ್ಟೆಯ ಮೇಲೆ ಕುಳಿತ ಹಾಗೆ, ಇಲ್ಲಿ ಎಲ್ಲಿಯೋ ಕಂಭಕ್ಕೆ ಒರಗಿ ನಿಂತಂತೆ, ಕಂಬಳಿ ಹೊದೆದು ಕುರ್ಚಿಯ ಮೇಲೆ ಕಾಲಾಡಿಸುತ್ತಾ ಕೂತಂತೆ, ಹಪ್ಪಳದ ಚೂರು ಅಗಿಯುತ್ತಾ ಕಾಫಿ ಕುಡಿದಂತೆ..... ಹೀಗೇ ಏನೇನೋ ಭ್ರಮೆಗಳು......

26ರ ಜನವರಿ 1992 ಗಣರಾಜ್ಯ ದಿನೋತ್ಸವ. ಮಕ್ಕಳ ಜೈ ಜೈಕಾರ ರಸ್ತೆಯಲ್ಲಿ ಕೇಳಿಸತೊಡಗಿದೆ. ಆ ಜೈ ಜೈಕಾರ ಗಂಗಾಳ ಕಿವಿಗೆ ವಿಕಾರ. ಗಂಡು-ಹೆಣ್ಣಿನ ಸಮಾನತೆಯ ಬರಹ ಭಾರತದ ಸಂವಿಧಾನದಲ್ಲಿ ಮೂಡಿ ಬಂದ ದಿನ. ತಾಯಿಯ ಬೆತ್ತಲೆ ಮೈಗೆ ಸ್ನಾನ ಮಾಡಿಸಿ 'ಅಹಾ, ಶುಕ್ರವಾರ ಮುತ್ತೈದೆ ಸಾವು' ಎನ್ನುವ ಮುತ್ತೈದೆಯರು. 'ಹಾಸಿಗೆ ಹಿಡಿಯಲಿಲ್ಲ, ನರಳಲಿಲ್ಲ, ಪುಣ್ಯದ ಸಾವು' ಎನ್ನುವವರು, ಮಧ್ಯೆ ಮಧ್ಯೆ ಮಕ್ಕಳ ಮೆರವಣಿಗೆ, ಕೂಗು ಸಂಭ್ರಮ. ಇಡೀ ಹೊನ್ನೇಕೆರೆಯ ಮನೆಯೇ ಗಂಗಾಳ ಕಣ್ಣೆದುರು ಎದ್ದು ನಿಂತಂತೆ; ಕಂಬ ಕಂಬಗಳು ಆಕೆಯ ಹುಚ್ಚು ಪ್ರೀತಿಯನ್ನು ಹೊದೆದು ನಿಂತಂತೆ. ಮನೆ ಕಟ್ಟಿದ, ಬದುಕ ಕಟ್ಟಿದ ತಾಯಿ ಛಿದ್ರ ಛಿದ್ರವಾದಂತೆ....... ಅಣ್ಣ, ತಂಗಿ ಎಲ್ಲರ ಬದುಕ ಬೆಸೆದ ಹೃದಯ ಒಡೆದು ಚೂರು ಚೂರಾದಂತೆ....

ಬಾಗಿಲ ಹೊಸಿಲುಗಳಿಗೆ, ಬಾಗಿಲುಗಳಿಗೆ ಮಲ್ಲಿಗೆ ತೋರಣ ಕಟ್ಟುತ್ತಿದ್ದ ತಾಯಿ ಇನ್ನಿಲ್ಲ ಎನಿಸುತ್ತದೆ ಗಂಗಾಗೆ. ಹುಚ್ಚು ಪ್ರೀತಿಯಲಿ ಕೆಟ್ಟ ಕೆಟ್ಟ ಮಾತು ಬಯ್ದು ನೀರೆರೆಯುತ್ತಿದ್ದ ತಾಯಿ ಇನ್ನಿಲ್ಲ. ತಿನ್ನು, ತಿನ್ನು ಎಂದು ಒತ್ತಾಯ ಮಾಡಿ ತಿನ್ನಿಸುವ ತಾಯಿ ಇನ್ನಿಲ್ಲ. ತಾಯಿ ಇಲ್ಲದ ತವರಿಗೆ ಹೋಗುವುದು ಸಹ ಜೀವವಿರದ ಕರಕಲು ಗೂಡಿಗೆ ಜೀವಂತ ಶವದಂತೆ ಹೋಗುವುದಾಗಿರುತ್ತದೆಯೋ ಏನೋ ಎಂದು ಗಂಗಾ ಯೋಚಿಸುತ್ತಾಳೆ.

ಗಂಗಾಳ ತಾಯಿಯ ಗಂಟು ಒಂದು ದೊಡ್ಡ ಟ್ರಂಕು. ಅದನ್ನು ಭದ್ರವಾಗಿ ಬೀಗ ಹಾಕಿಟ್ಟು ಆಗೀಗ ತೆಗೆದು ನೋಡುತ್ತಾ ಜೋಪಾನವಾಗಿ ಆಕೆ ಕಾದಿಟ್ಟುದಾದರೂ ಏನನ್ನು? ಚಿಕ್ಕ ಹುಡುಗಿಯಾಗಿದ್ದಾಗ ಗಂಗಾ ಧರಿಸುತ್ತಿದ್ದ ಟೆರಿಕಾಟ್ ಬ್ಲೌಸ್, ತಾಯಿಯ ಹಳೆಯ ಹರಕಲು ಸೀರೆ, ಹರಕಲು ಅಂಗಿ,

ಒಂದಷ್ಟು ಲೋಟ, ಒಂದಷ್ಟು ತಟ್ಟೆ. ಬೆಂಗಳೂರು ಬಿಟ್ಟು ಹೋದಾಗ ಗಂಗಾ ಒಂದು ದಿನದ ಮಟ್ಟಿಗೆ ಹೊನ್ನೇಕೆರೆಗೆ ಹೋದಾಗ ಗಂಗಾಳ ತಾಯಿ ಒಂದು ಕರಿಮಣಿ ಸರ ಹಾಕಿಕೊಂಡು ತಾಳಿಯ ಬಂಗಾರದ ಸರ ಗಂಗಾಗೇ ಕೊಟ್ಟುಬಿಟ್ಟಿದ್ದರು. 'ನಾನು ಸತ್ತ ಮೇಲೆ ಇದು ನಿನಗೇ ಸೇರಬೇಕು. ಸಾಯಬೇಕಾದರೆ ನೀನು ನನ್ನ ಹತ್ತಿರ ಇರೋದಿಲ್ಲ ತಗೋ' ಎಂದಿದ್ದಳು. ಸಾವಿನ ಮನೆ ಹೊಕ್ಕರೆ ಸಾಕು, ತನಗೆ ಸಾವು ಬರೋದಿಲ್ಲ ಎನ್ನುವ ತಾಯಿಯ ಮಾತಿಗೆ ಗಂಗಾ ಆಗಾಗ್ಗೆ ನಗುತ್ತಿದ್ದಳು. ತಾಯಿಯಂತಹ ಹಟದ ಹೆಣ್ಣು ಸಾವಿನ ಕೈಗೆ ಸುಲಭವಾಗಿ ದಕ್ಕುವವಳಲ್ಲ ಎನ್ನಿಸುವಂತಹ ಕ್ಷಣಗಳಲ್ಲಿಯೇ ಆಕೆ ಎಲ್ಲಾ ನಿಮ್ಮದೆನ್ನುತ್ತಾ, ಇಲ್ಲಿ ತನಗೇನೂ ಸಂಬಂಧವಿಲ್ಲವೆನ್ನುತ್ತಾ ಹೊರಟೇ ಹೋಗಿ ಬಿಟ್ಟಳು. ಆಡಿರದ ಮಾತುಗಳೆಷ್ಟೋ ಗಂಗಾಳ ಹೊಟ್ಟೆಯಲ್ಲಿ ತಣ್ಣಗಾಗಿವೆ. ಕಾಡುತ್ತಿದ್ದ ಪ್ರಶ್ನೆಗಳೆಷ್ಟೋ ಬೆಂದು ಕರಕಲಾಗಿವೆ. ಸಾಯುವ ಘಳಿಗೆಯಲ್ಲಿ ಹೆಸರಿಡಿದು ಕೂಗಿ ಸತ್ತ ತಾಯಿಯ ಧ್ವನಿ ನಾನೂರು ಮೈಲಿ ದಾಟಿ ಬೆಂಗಳೂರಿನ ಅರಗಿನ ಮನೆಯಲ್ಲಿ ಕೂತ ಗಂಗಾಳ ಹೃದಯ ತಟ್ಟಲಿಲ್ಲ ಎಂಬ ನೋವು ಆಕೆಯ ಉಳಿದ ಬದುಕಿಗೆ ಅಂಟಿದ 'ಬುತ್ತಿಗಂಟು'.

ಋಣ ಹರಿದುಕೊಳ್ಳಲೆಂದೇ ಹಳ್ಳಿ ಬಿಟ್ಟಿರದ ತಾಯಿ ಬೆಂಗಳೂರಿನ ಗೂಡಿನ ಮನೆಯಲ್ಲಿ ಎರಡು ವರ್ಷ ಗಂಗಾಳ ಜೊತೆ ಸಂತೋಷವಾಗಿಯೇ ಇದ್ದಳೇನೋ ಎನಿಸುತ್ತದೆ ಗಂಗಾಗೆ. ಆಸ್ಪತ್ರೆಯಲ್ಲಿ ಜನಿಸಿದ ಮಿತಾಳಿಗಾಗಿ ಬಸ್ಸಿಡಿದು ಓಡಾಡಿದ್ದಳು. ಮೆಣಸಿನ ರಸ, ಜೀರಿಗೆ ರಸ ಇತ್ಯಾದಿ ಮಾಡಿ ತಿನ್ನು, ತಿನ್ನು ಎಂದಿದ್ದಳು. "ಬಾ, ಬಾ ಗುಬ್ಬಿಮರಿ, ತರುವೇನು ಕಡಲೆಪುರಿ" ಎಂದು ಹಾಡುತ್ತಾ ಗಂಗಾಳ ಮಗಳಿಗೆ ಗುಟುಕು ಉಣಿಸಿ ಜೋಲಿ ಹಾಡಿದ್ದಳು. ಈಗ ಆಕೆ ಇಲ್ಲ, ಗಂಗಾಳಿಗೆ ಇರುವುದು ನೆನಪು ಮಾತ್ರ.

ಬದುಕ ಬೆಚ್ಚಗಾಗಿಸುವ ಹೃದಯ ಇನ್ನಿಲ್ಲ ಎನಿಸುತ್ತದೆ ಗಂಗಾಗೆ. ಮನಸ್ಸು ಚುಚ್ಚುತ್ತದೆ. ಸದಾ ಚುಚ್ಚುವ ನೆನಪುಗಳಿವೆ. ಹೆಣ ಎಳೆದು ಗುಣಿಯಲ್ಲಿ ಕೂರಿಸಿ ಮಣ್ಣು ಮುಚ್ಚುವಾಗ ವಿಕಾರವಾಗಿ ಕಂಡಿದ್ದ ತಾಯಿಯ ಮುಖದ ಜ್ಞಾಪಕದಲ್ಲಿ ಊಟ ಸೇರುವುದಿಲ್ಲ ಗಂಗಾಗೆ. ಅಲ್ಲಿಯೇ ಮಾತನಾಡುತ್ತಾ ಕುಳಿತ ಜನರ ಮಧ್ಯದಲ್ಲಿ ಸಂಬಂಧಿಕರ ಆರು ವರ್ಷದ ಹುಡುಗಿಯೋರ್ವಳು ಗೊಣಗುತ್ತಿದ್ದುದು ಗಂಗಾಗೆ ನೆನಪಿಗೆ ಬರುತ್ತದೆ...... "ಇಬ್ಬರಾ ಋಣ ತೀರಿತೆಂದು ತಬ್ಬಿಕೊಂಡಿತು ಕಂದನಾ........". ಗಂಗಾಳ ಕಣ್ಣಲ್ಲಿ ನೀರಾಡುತ್ತದೆ.

ಗಂಗಾಗೆ ಸಮಾಧಾನವಾಗುವುದಿಲ್ಲ. ಎಲ್ಲಾ ಬರಿದು......... ಬರಿದು....... ಎನಿಸುತ್ತದೆ. "ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ....." ಎನ್ನುವ ಎಷ್ಟೋ ತತ್ವಜ್ಞಾನದ ಮಾತುಗಳಲ್ಲಿ ಮನಸ್ಸಿನ ಅಸ್ಥಿರತೆಗೊಂದು ತೆರೆ ಎಳೆಯಲು ಗಂಗಾ ಪ್ರಯತ್ನಿಸುತ್ತಾಳೆ. ಸಾಧ್ಯವಾಗುವುದಿಲ್ಲ. ಆಕೆಗೆ 'ಗುಡ್ ಬೈ ಗುಡ್ ಬೈ ಪಾರ್ಟಿಂಗ್ ಈಸ್ ಸಚ್ ಎ ಸ್ವೀಟ್ ಸಾರೋ' ಎಂದು ಹೇಳಬೇಕೆನಿಸುತ್ತದೆ. ಶಬ್ದಗಳು ಗಂಗಾಳ ಕೊರಳಿನಿಂದ ಗಟ್ಟಿಯಾಗಿ ಈಚೆ ಬರುವುದಿಲ್ಲ.

* * * *

ತಾಯಿಯ ಸಾವಿನಲ್ಲಿ ಸಾಕಷ್ಟು ಜರ್ಝರಿತಳಾಗಿದ್ದಳು ಗಂಗಾ. ಸಾಧನಾಳ ಸಾವು ಅವಳ 22-23 ವರುಷದಲ್ಲಿ ಅವಳ ಇಡಿಯ ವ್ಯಕ್ತಿತ್ವದ ಎನರ್ಜಿಯನ್ನೇ ಕೊಂದುಹಾಕಿಬಿಟ್ಟಿತ್ತು. ಈಗ ತಾಯಿಯ ಸಾವು. ಚೇತರಿಸಿಕೊಳ್ಳುವುದಕ್ಕೆ ಬಹಳಷ್ಟು ದಿನಗಳೇ ಹಿಡಿದವು ಗಂಗಾಗೆ. ರಮೇಶನನ್ನು ತಬ್ಬಿಕೊಂಡು

ಅಳುವವಳು. ಮಗು ಮಿತಾಳನ್ನು ಹಿಡಿದುಕೊಂಡು ಅಳುವವಳು. ಆದರೂ ತಾಯಿಯ ಸಾವ ಬೇರು ಕಿತ್ತೆಸೆಯುವುದು ಕಷ್ಟ ಎನಿಸುತ್ತಿತ್ತು. ದಿನಗಳು ಉರುಳಿದ ಹಾಗೆ ಬೆನ್ನ ಹಿಂದೆ ಸಾವಿನ ಮನೆ ಎಲ್ಲಿ ಕಾದು ಕುಳಿತಿದೆಯೋ ಎನ್ನುವ ಭಯ. ಮಗಳು ಎರೆಡು ವರುಷಕ್ಕೆ ಕಾಲಿಡುತ್ತಿದ್ದಳು. ತಾಯಿಯ ಸಾವಿನ ನಂತರ ಮಗುವಿನ ಜವಾಬ್ದಾರಿ ಸಂಪೂರ್ಣವಾಗಿ ಗಂಗಾಳ ಮೇಲೆಯೇ ಬೀಳತೊಡಗಿತ್ತು. ರಮೇಶ ಕೆಲಸದ ಸಲುವಾಗಿ ಬೇರೆ ಬೇರೆ ಊರುಗಳಿಗೆ ಹೆಚ್ಚು ಹೆಚ್ಚಾಗಿ ಹೋಗಬೇಕಿತ್ತು. ತಾಯಿಯ ಸಾವಿನ ನಂತರ ಬೆಂಗಳೂರಿಗೆ ಬಂದ ಮೇಲೆ ರಮೇಶನಿಗೆ ಸ್ವಲ್ಪ ದಿನಗಳು ಮಾತ್ರ ಗಂಗಾಳೊಟ್ಟಿಗೆ ಕಳೆಯಲು ಸಾಧ್ಯವಾಗಿತ್ತು. ಆತ ಕೆಲಸಕ್ಕಾಗಿ ತಿಂಗಳಲ್ಲಿ 8-10 ದಿನ, ಕೆಲವೊಮ್ಮೆ 15 ದಿನಗಳ ಕಾಲ ಮನೆಯಿಂದ ಹೊರಗಡೆಯೇ ಕಳೆಯಬೇಕಾದ ಪ್ರಸಂಗ ಹೆಚ್ಚಾಗಿತ್ತು. ಹಾಗಾಗಿ ಗಂಗಾಳ ಮೇಲೆಯೇ ಕ್ರಮೇಣವಾಗಿ ಸಂಸಾರದ ಹೊರೆಗಳು ಬೀಳತೊಡಗಿದ್ದವು. ಹೀಗೆ ಹದಿನೈದು ದಿನ ಮನೆಯಿಂದ ಹೊರಗೇ ಕಳೆಯಬೇಕಾದ ಸಂದರ್ಭದಲ್ಲಿ ರಮೇಶನಿಗೂ ಪಾಪಪ್ರಜ್ಞೆ ಕಾಡುತ್ತಿದ್ದುದುಂಟು. ಆದರೆ ಕೈ ತುಂಬ ಸಂಬಳ. ಆತನಿಗೆ ಫೀಲ್ಡ್‌ನಲ್ಲಿ ಕೆಲಸ ಮಾಡುವುದು ಇಷ್ಟವಾಗುತ್ತಿತ್ತು ಕೂಡಾ. ಕೆಲಸದಲ್ಲಿ ತೊಡಗಿಸಿಕೊಂಡಿರುವ ಕ್ಷಣಗಳಲ್ಲಿ ಮನೆಯ ಯೋಚನೆ ಅಷ್ಟಾಗಿ ಆತನನ್ನು ಬಾಧಿಸುತ್ತಿರಲಿಲ್ಲ. ಆದರೆ ಕೆಲಸ ಇಲ್ಲದ ಕ್ಷಣದಲ್ಲಿ, ಫ್ರೆಂಡ್ಸ್ ಜೊತೆ ಕುಳಿತು ಸಾಯಂಕಾಲ ಹರಟುವ ಸಮಯದಲ್ಲಿ ಇದ್ದಕ್ಕಿದ್ದಂತೆ ಗಂಗಾ ಹಾಗೂ ಮಿತಾಳ ಜ್ಞಾಪಕವಾಗಿಬಿಟ್ಟರೆ ಅವನು ಮೌನವಾಗಿಬಿಡುತ್ತಿದ್ದ. ಮನಸ್ಸೆಲ್ಲಾ ಗಂಗಾ/ಮಿತಾ ಏನೇನು ಮಾಡುತ್ತಿರಬಹುದು ಎನ್ನುವುದರ ಸುತ್ತವೇ ತಿರುಗತೊಡಗುತ್ತಿತ್ತು. ಗಂಗಾ ಮಗುವನ್ನು ರೆಡಿ ಮಾಡಿ ಕ್ರೆಷ್ ಒಂದರಲ್ಲಿ ಬಿಟ್ಟು ಆ ನಂತರ ಕೆಲಸಕ್ಕೆ ಹೋಗಬೇಕಾಗಿತ್ತು. ಕೆಲಸ ಮುಗಿದ ತಕ್ಷಣವೇ ಮಗುವನ್ನು ಕರೆದುಕೊಂಡು ಮನೆಗೆ ಬರಬೇಕಿತ್ತು. ತನಗೆಲ್ಲಿಗೂ ಹೋಗುವುದಕ್ಕೂ ಸಾಧ್ಯವಾಗುತ್ತಿಲ್ಲ ಎಂದು ಗಂಗಾ ಗೊಣಗುವುದು ರಮೇಶನಿಗೂ ತಿಳಿದಿತ್ತು. ನಾಟಕ, ಸಾಹಿತ್ಯದ ಚಟುವಟಿಕೆಗಳು, ಮಹಿಳಾ ಸಭೆಗಳು ಎಂದೆಲ್ಲಾ ಓಡಾಡಿಕೊಂಡಿದ್ದ ಗಂಗಾಳಿಗೆ ಮಗು ಮಿತಾಳಿಂದಾಗಿ ಮನೆಗೆ ಅಂಟಿಕೊಳ್ಳುವುದು ಅನಿವಾರ್ಯವಾಗುತ್ತಿದೆಯೇನೋ ಎಂದು ರಮೇಶನಿಗೂ ಅನ್ನಿಸತೊಡಗಿತ್ತು. ಕ್ಲಾಸ್ ಮುಗಿದ ತಕ್ಷಣ ಒಂಟಿಯಾಗಿರುವ ಮಿತಾಳನ್ನು ನೆನಸಿಕೊಂಡು ಓಡಿ ಬರುವಳು. ಎರೆಡು ವರ್ಷದ ಮಿತಾ ತನ್ನ-ಗಂಗಾಳನ್ನಲ್ಲದೇ ಇನ್ಯಾರ ಮೇಲೆ ಅವಲಂಬಿತಳಾಗಿರುತ್ತಾಳೆ? ಬಿಟ್ಟವರ ಮನೆಯಲ್ಲಿ ಆಕೆಯ ಊಟ-ತಿಂಡಿಯ ಬಗ್ಗೆ ಕಾಳಜಿ ವಹಿಸುತ್ತಾರೆ ಎಂದು ಹೇಗೆ ನಂಬುವುದು? ಹೀಗೆಲ್ಲ ಯೋಚಿಸಿದಾಗ ಕಾಡುವ ಪಾಪಪ್ರಜ್ಞೆಯಲ್ಲಿ ಗಂಗಾ ಮನೆಗೆ ಓಡಿ ಬರುವಳು. ತಾಯಿಯಿರುವಾಗ ಮಿತಾಳನ್ನು ಬೆಳೆಸುವುದು ಗಂಗಾಗೆ ಕಷ್ಟವಾಗಿಯೇ ಕಂಡಿರಲಿಲ್ಲ. ತಾಯಿ ಮನೆಯಲ್ಲಿ ಇದ್ದಾರೆ ಎಂದಾಗ ಭರವಸೆ, ಧೈರ್ಯದಲ್ಲಿ ಎಲ್ಲಾ ಕೆಲಸ ಮುಗಿಸಿ ಬರುವಳು. ಎಲ್ಲಿಯೋ meeting. ಯಾವುದೋ ಕೇಸ್‌ಗಾಗಿ ಹೆಂಗಸರ ಜೊತೆ ಹೋಗುವುದು, ಪತ್ರಿಕೆಯ ಕೆಲಸಕ್ಕೆಂದು ಹೋಗುವುದು, ನಾಟಕ, ಸಾಹಿತ್ಯ, ಚರ್ಚೆ ಇತ್ಯಾದಿ. ಮಗು ಮಿತಾ ತನ್ನನ್ನು ಬಂಧಿಸುತ್ತಿದ್ದಾಳೆ ಎನ್ನುವ ಭಾವನೆಯೇ ಗಂಗಾಳಿಗೆ ಬಂದಿರಲಿಲ್ಲ. ಆದರೆ ಈಗ ಹಾಗೆ ಆಗುತ್ತಿರಲಿಲ್ಲ. ಎಲ್ಲಿಯಾದರೂ ಹೋಗಬೇಕೆಂದರೆ ಕಾಲೇಜಿಂದ ಬಂದು ಅಡಿಗೆ ಇತ್ಯಾದಿ ಮಾಡಿ, ಮಗುವಿಗೆ ತಿನ್ನಿಸಿ, ರೆಡಿ ಮಾಡಿಕೊಂಡು ಕರೆದುಕೊಂಡು ಹೊರಡಬೇಕಿತ್ತು. ರಾತ್ರಿ ಒಂದು ಸಮಯ ತಡವಾಗಿಬಿಟ್ಟರೆ? ಮರುದಿನದ ದೈನಂದಿನ ಚಟುವಟಿಕೆಗಳು ವ್ಯತ್ಯಾಸಗೊಳ್ಳುತ್ತವೆ. ಬೆಳಿಗ್ಗೆಗೆ ಟಿಫನ್ ಏನು? ಇಂತಹ ಯೋಚನೆಗಳು ಬಾಧಿಸತೊಡಗಿದರೆ ಹೇಗೆ ಉತ್ತರ ಕಂಡುಕೊಳ್ಳುವುದು ಎಂದು ಗಂಗಾ ಆಲೋಚಿಸುವಳು. ಕಾಲೇಜಿಂದ ಬರುವಾಗಲೇ ಕಾಲೆಳೆದುಕೊಂಡು ಉಸ್ಸೆಂದು ಬರುವ ಗಂಗಾಗೆ ಮತ್ತೆ ಮಿತಾಳನ್ನು ಹೊತ್ತುಕೊಂಡು ತಿರುಗಬೇಕಾಗುತ್ತದೆ ಎನ್ನಿಸಿದಾಗ ರಗಳೆ ಎನ್ನಿಸಿ ಎಲ್ಲಿಗೂ ಹೋಗದೇ

ಸುಮ್ಮನಾಗಿಬಿಡುವಳು. ಮಗು/ಮನೆಯ ಜವಾಬ್ದಾರಿ ಹೆಚ್ಚು ಹೆಚ್ಚಾಗಿ ತನ್ನ ಮೇಲೆಯೇ ಬೀಳತೊಡಗಿದಾಗ ಗಂಗಾಗೆ ಬದುಕು ಕ್ರಮೇಣವಾಗಿ ಯಾಂತ್ರಿಕ ಅನ್ನಿಸತೊಡಗಿತ್ತು. ಹೊರಗಡೆಯಂತೂ ಹೆಚ್ಚು ಸುತ್ತಲಿಕ್ಕೆ ಆಗುವುದಿಲ್ಲ. ಹೇಗಿದ್ದರೂ ಮನೆಯ ಹತ್ತಿರವೇ ಇರುತ್ತೇನೆ. ತಾಯಿ ಹೇಳಿದ ಹಾಗೆ ಮನೆಯನ್ನಾದರೂ ಕಟ್ಟಿಸಲು ಪ್ರಯತ್ನಿಸೋಣವೇ ಎಂದು ರಮೇಶನಲ್ಲಿ ಕೇಳಿದಳು. ಒಂದು ಚಿಕ್ಕ ಮನೆಯೆಂದರೆ ಬಾಡಿಗೆ ಕೊಡುವುದಾದರೂ ತಪ್ಪುತ್ತದೆ ಎನ್ನುವುದು ಇಬ್ಬರಿಗೂ ಅನ್ನಿಸಿದ ವಿಚಾರ. ಇದಕ್ಕಾಗಿಯೇ ಗಂಗಾ 80,000 ಚೀಟಿಯೊಂದನ್ನು ಹಾಕಿದಳು. ಅದು ರಮೇಶ ಹಾಗೂ ಗಂಗಾ ಇಬ್ಬರೂ ಹೊಟ್ಟೆ-ಬಟ್ಟೆ ಕಟ್ಟಿ ಮಾಡತೊಡಗಿದ್ದರು. ಬಿಡುವಾದಾಗಲೆಲ್ಲಾ ನಿಂತು ಕೆಲಸ ನೋಡಿಕೊಳ್ಳುವುದಾಗಿ ರಮೇಶ ಹೇಳುತ್ತಿದ್ದ. ಆದರೆ ಗಂಗಾಳ ತಲೆಯ ಮೇಲೆಯೇ ಜವಾಬ್ದಾರಿ ಹೆಚ್ಚಾಗಿ ಬೀಳುತ್ತದೆ ಎಂಬುದನ್ನೂ ಕೂಡಾ ಆತ ಜ್ಞಾಪಿಸಿದ್ದ. ತನಗಿರುವ ಕೆಲಸದ ಒತ್ತಡದಲ್ಲಿ ಮನೆ ಕಟ್ಟಿಸುವುದಕ್ಕೆಂದು ಓಡಾಡುವುದಕ್ಕೆ ತನಗೆ ಸಾಧ್ಯವಾಗುವುದಿಲ್ಲವೇನೋ ಎಂಬ ಆತಂಕವನ್ನೂ ವ್ಯಕ್ತಪಡಿಸಿದ್ದ. ಗಂಗಾಳ ಅಣ್ಣ ಶಂಕರನಿಗೇನಾದರೂ ಬಿಡುವಾಗುತ್ತದೆಯೇ ಎಂದು ವಿಚಾರಿಸಿ ನೋಡು ಎಂದಿದ್ದ. ಹೆಚ್ಚು ಕಡಿಮೆ ಮನೆಯಲ್ಲಿಯೇ ಇರಬೇಕಾದ ಸಂದರ್ಭ. ಮಗು ಮಿತಾಳನ್ನು ನೋಡಿಕೊಳ್ಳುವುದರ ಜೊತೆಗೆ ಒಂದು ಪುಟ್ಟ ಮನೆ ಕಟ್ಟಿಸುವುದಕ್ಕೆ ಸಮಯ ಹಾಕಬಹುದೇನೋ ಎಂಬ ಯೋಚನೆ ಗಂಗಾಳನ್ನು ತೀವ್ರವಾಗಿ ಕಾಡತೊಡಗಿತ್ತು. ಪಾರ್ವತಿ ಕೆಲಸ ಬಿಟ್ಟ ಸಮಯದಲ್ಲಿ ಬಾಡಿಗೆ ಕೊಡಲಾಗದೇ ಕಂಗಾಲಾಗಿದ್ದ ದಿನಗಳು ಗಂಗಾಗೆ ಜ್ಞಾಪಕಕ್ಕೆ ಬರುತ್ತವೆ. ಅದೇ ಏಕೆ? ಮಿತಾ ಹೊಟ್ಟೆಯಲ್ಲಿ ಇರುವಾಗ ರಮೇಶನಿಗೆ ಸರಿಯಾದ ಕೆಲಸವಿಲ್ಲದೇ, ತನಗೆ ಸರಿಯಾದ ಸಂಬಳವಿಲ್ಲದೇ ಅರೆ ಹೊಟ್ಟೆ ಇದ್ದುದೂ ಗಂಗಾಗೆ ನೆನಪಿದೆ. ತಲೆಯ ಮೇಲೆ ನಮ್ಮದು ಎನ್ನುವ ಸೂರಿದ್ದರೆ ಹೊಟ್ಟೆ ಕಟ್ಟಿಯಾದರೂ ಬದುಕಿಬಿಡಬಹುದು. ಬಾಡಿಗೆದಾರ ಬಂದು ನಿಂತರೆ ಮರ್ಯಾದೆಗೆ ಅಂಜಿ ಗಿಂಜುವ ರೀತಿಯಾದರೂ ತಪ್ಪುತ್ತದೆ ಎನಿಸುತ್ತಿತ್ತು ಗಂಗಾಗೆ. ಜೊತೆಗೆ ತನ್ನಲ್ಲಿರುವ ಪುಸ್ತಕಗಳನ್ನು ಕಾಪಾಡಬೇಕು ಎನಿಸುತ್ತಿತ್ತು. ಅವರಿದ್ದ ಬಾಡಿಗೆ ಮನೆಯಲ್ಲಿ ಪುಸ್ತಕ ಇಟ್ಟುಕೊಳ್ಳುವುದಕ್ಕೇ ಸಾಧ್ಯವಾಗುತ್ತಿರಲಿಲ್ಲ. ಪ್ರತಿ ಸಲ ಮನೆ Shift ಮಾಡುವಾಗಲೂ ಮನೆಯ ಪಾತ್ರ-ಪಡಗಗಳಿಗಿಂತಲೂ ಪುಸ್ತಕಗಳನ್ನು ಸಾಗಿಸುವುದೇ ಒಂದು ದೊಡ್ಡ ಕಷ್ಟವಾಗಿ ಕಾಣಿಸುತ್ತಿತ್ತು. ಹಾಗಾಗಿ ಒಂದು ಪುಟಾಣಿ ಮನೆ ಕಟ್ಟಿಸಿಕೊಂಡು ಬಿಟ್ಟರೆ..... ಎನ್ನುವ ಯೋಚನೆ ಗಂಗಾಳನ್ನು ಅಧಿಕವಾಗಿ ಬಾಧಿಸತೊಡಗಿತ್ತು. ತಾಯಿ ಸತ್ತ ಮೇಲೆ ಅಣ್ಣ ಶಂಕರ, ಅತ್ತಿಗೆ ಉಮಾ ಜೊತೆಗೆ ತಂದೆ ಕೂಡಾ ಗಂಗಾಳಿಗೆ ವಿಶೇಷವಾಗಿ ಪ್ರೀತಿ-ಆದರ ತೋರಿಸತೊಡಗಿದ್ದರು. ಮನೆಯ ಹೆಣ್ಣು ಮಗಳು ನೊಂದುಕೊಳ್ಳಬಾರದು ಎನ್ನುವ ವಿಚಾರ ಅಣ್ಣನಿಗಿಂತ ಹೆಚ್ಚಾಗಿ ಉಮಾ ಹೇಳತೊಡಗಿದ್ದಳು. ಉಮಾ/ಶಂಕರ್ ಮಗ ವಿನಯ್ ಈಗಾಗಲೇ ಏಳೆಂಟು ವರುಷದ ಹುಡುಗನಾಗಿದ್ದ. ಮಿತಾಳನ್ನು ನೋಡಿದಾಗಲೆಲ್ಲಾ ಉಮಾಗೆ ಹೊಳೆಯಲ್ಲಿ ತೇಲಿ ಹೋದ ಸಾಧನಾಳ ಜ್ಞಾಪಕವಾಗುತ್ತಿತ್ತು. ಉಮಾಳನ್ನು ಮಿತಾ 'ಅತ್ತೆ' ಎಂದು ತಬ್ಬಿ ಹಿಡಿದಾಗಲೆಲ್ಲಾ ಸತ್ತ ಸಾಧನ 'ಅಮ್ಮಾ' ಎಂದ ಹಾಗೆ ಉಮಾಳಿಗೆ ಅನ್ನಿಸುತ್ತಿತ್ತು. ಉಮಾಳೇ ಶಂಕರನಿಗೆ ಒತ್ತಾಯ ಮಾಡುವಳು. ಮನೆಯ ಹೆಣ್ಣು ಮಗಳು ಉಸೂರೆನ್ನಬಾರದು ಎನ್ನುವಳು. ಎಲ್ಲಾ ಇರುವ ಗಂಗಾ ಬೆಂಗಳೂರಿನಲ್ಲಿ ಏನೂ ಇಲ್ಲದವಳ ಹಾಗೆ, ಯಾರೂ ಇಲ್ಲದವರ ಹಾಗೆ ಇರಬಾರದು ಎನ್ನುವಳು. ಹಾಗಾಗಿ ಶಂಕರ ಕೂಡಾ ಬದಲಾಗತೊಡಗಿದ್ದ. ರಮೇಶನ ಸೌಮ್ಯ ಸ್ವಭಾವದಿಂದ ತಂದೆ/ಅಣ್ಣ/ಉಮಾ ಎಲ್ಲರಿಗೂ ಇಷ್ಟವಾಗತೊಡಗಿದ್ದ. ಗಂಗಾ ಮನೆ ಕಟ್ಟಿಸುವ ಯೋಚನೆ ಇದೆ ಎಂದಾಗ ಸಂತೋಷಪಟ್ಟುಕೊಂಡವರು ಉಮಾ/ಶಂಕರ್. ತಾಯಿ ಸತ್ತ ಮೇಲೆ ಗಂಗಾಳನ್ನು ವಿಚಾರಿಸಿಕೊಳ್ಳ ಬೇಕಾದವರು ತಾವೇ ಎನ್ನುವ ಜವಾಬ್ದಾರಿಯನ್ನು ಅವರೂ ಫೀಲ್ ಮಾಡತೊಡಗಿದ್ದರು. ತಂದೆಗೆ ಹೇಳಿ

ಶಂಕರನೇ ಆಕೆಯ ಹೆಸರಿಗೆ ಮಾಡಬೇಕಾಗಿದ್ದ ತೋಟ ಮಾರಿ ದುಡ್ಡು ಕೊಡುವುದಾಗಿ ಹೇಳಿದ್ದ. ಆದರಿಂದ ಸೈಟ್‌ಗೆ ಹಾಗೂ ಮನೆ ಕಟ್ಟಿಸಲಿಕ್ಕೆ ಅರ್ಧ ಹಣವಾದರೂ ಆಗುತ್ತದೆ ಎಂದು ಭರವಸೆ ಇತ್ತಿದ್ದ. ಗಂಗಾಳಿಗೆ ಆಕೆಯ ತಾಯಿ ಇಟ್ಟು ಹೋದ ಬಂಗಾರವನ್ನೆಲ್ಲ ಕೊಟ್ಟುಬಿಟ್ಟಿದ್ದ. ಬಂಗಾರವನ್ನು ಬ್ಯಾಂಕಿನಲ್ಲಿ ಇಟ್ಟು ಅಣ್ಣ ಕೊಡುವ ಹಣ, ಚೀಟಿಯ ಹಣದಿಂದ ಮನೆ ಕಟ್ಟಿಸಿ ಮುಗಿಸಬಹುದಾಗಿ ಗಂಗಾ ಯೋಚಿಸತೊಡಗಿದ್ದಳು. ಹೀಗೆಯೇ ಮನೆ ಕಟ್ಟಿಸುವ ಯೋಚನೆಯಿಂದ ತಾನೊಂದು ವ್ಯಾವಹಾರಿಕ ಪ್ರಪಂಚಕ್ಕೆ ಕಾಲಿಡುತ್ತಿದ್ದೇನೆ ಎಂದು ಗಂಗಾಗೆ ಕ್ರಮೇಣವಾಗಿ ಅನ್ನಿಸತೊಡಗಿತ್ತು. ಕಟ್ಟಿಸುವ ಮನೆಯಲ್ಲಿ ಪುಸ್ತಕಗಳನ್ನು ಇಡುವುದಕ್ಕೆ shelf ಒಂದನ್ನು ಚೆನ್ನಾಗಿ ಕಟ್ಟಿಸಬೇಕು ಎಂದು ಯಾವಾಗಲೂ ನುಡಿಯುವಳು. ರಮೇಶ, 'ನೀನು ಮನೆಯನ್ನು ಇರಲಿಕ್ಕಾಗಿ ಕಟ್ಟಿಸಿಕೊಳ್ಳುವುದೋ ಅಥವಾ ಪುಸ್ತಕಗಳನ್ನು ನೀಟಾಗಿ ಜೋಡಿಸಿಕೊಳ್ಳಲು ಕಟ್ಟಿಕೊಳ್ಳುವುದೋ' ಎಂದು ಯಾವಾಗಲೂ ತಮಾಷೆ ಮಾಡುವನು. ಮನೆ ಎಂದರೆ ಪುಸ್ತಕಗಳನ್ನು ಇಟ್ಟುಕೊಳ್ಳುವ ಕಲ್ಪನೆಯೇ ನನ್ನದು ಎಂಬ ಮಾತನ್ನು ಗಂಗಾ ಕೂಡಾ ಯಾವಾಗಲೂ ಹೇಳುವಳು.

ಚೀಟಿಯಿಂದ 80 ಸಾವಿರ ಸಿಕ್ಕಾಗ ಗಂಗಾ ತನ್ನ ಪೂರ್ತಿ ಗಮನವನ್ನು ಮನೆ ಕಟ್ಟಿಸುವ ವಿಚಾರದತ್ತ ಹರಿಸತೊಡಗಿದ್ದಳು. ಮನೆ ಕಟ್ಟಿಸುವ ಕೆಲಸಕ್ಕೆ ತೊಡಗಿಸಿಕೊಳ್ಳತೊಡಗಿದಾಗ ಈ ವ್ಯಾವಹಾರಿಕ ಪ್ರಪಂಚದಲ್ಲಿ ವ್ಯವಹರಿಸುವುದಕ್ಕೆ ತನ್ನಿಂದ ಸಾಧ್ಯವಾಗುವುದಿಲ್ಲವೇನೋ ಎಂಬ ಸತ್ಯ ಕ್ರಮೇಣವಾಗಿ ಗಂಗಾಳಿಗೆ ಅರಿವಾಗತೊಡಗಿತ್ತು. ಎಲ್ಲಾ ವ್ಯವಹಾರದ ಸಂಬಂಧಗಳು..... ಸಿಮೆಂಟ್, ಮರ, ಕಿಟಕಿ, ಬಾಗಿಲು, ಜಲ್ಲಿ, ಮರಳು, ಇಟ್ಟಿಗೆ...... ಗಂಗಾಗೆ ಇದ್ದಕ್ಕಿದ್ದ .ಹಾಗೆ ತಾನೋರ್ವ ಮಧ್ಯಮ ವರ್ಗದ ಅಪ್ಪಟ ಗೃಹಿಣಿಯಾಗತೊಡಗಿರುವೆನೇನೋ ಎನ್ನುವ ವಿಚಾರವೊಂದು ಜೊತೆ ಜೊತೆಗೆಯೇ ಬೆಳೆಯತೊಡಗಿತ್ತು. ಕಾಲೇಜ್, ಮಿತಾ, ತಪ್ಪಿದರೆ ಮರಳು, ಸಿಮೆಂಟ್, ಜಲ್ಲಿ ಲೆಕ್ಕ. ಹೊನ್ನೇಕೆರೆಯಲ್ಲಿ ಮರದ ಹರಾಜಿನ ಬಗ್ಗೆ ಶಂಕರ ಪತ್ರ ಬರೆದಾಗ ಗಂಗಾ ಹೊನ್ನೇಕೆರೆಗೂ ಹೋಗಿದ್ದಳು. ಮರ ಹರಾಜು ಮಾಡುವ ಸ್ಥಳದಲ್ಲಿ ಸಾವಿರಾರು ಜನ. ಹೊನ್ನೇಕೆರೆಯಲ್ಲಿ ಈ ರೀತಿಯ ವ್ಯಾವಹಾರಿಕ ಪ್ರಪಂಚ ಗಂಗಾ ಪ್ರವೇಶಿಸಿದ್ದು ಇದೇ ಮೊದಲು. ಬೆಳಿಗ್ಗೆ 8 ಘಂಟೆಗೇ ಶಂಕರ ಗಂಗಾಳನ್ನು ಹರಾಜು ನಡೆಯುವ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದ. ಹತ್ತಾರು ಕಾರುಗಳು, ಮೋಟರ್ ಸೈಕಲ್, ಸ್ಕೂಟರ್‌ಗಳು, 'ಗಂಗಾ ಇಲ್ಲಿಯವರ ವ್ಯವಹಾರ ಲಕ್ಷದ ಮೇಲೆಯೇ ಇರುತ್ತವೆ' ಎಂದು ಶಂಕರ ನುಡಿದಾಗ ಗಂಗಾಗೆ ಗಾಭರಿಯೇ ಆಗಿತ್ತು. ಇಷ್ಟು ಜನರ ಮಧ್ಯೆ ಹರಾಜಿಗೆ ಕೂಗುವುದು ಹೇಗೆ? ಎನ್ನುವ ಭಾವನೆಯೊಂದಿಗೆ ಇಂತಹ ಶ್ರೀಮಂತರ ಮಧ್ಯದ ವ್ಯವಹಾರದಲ್ಲಿ ತಾನೋರ್ವ ಪುಟಗೋಸಿ ಎನ್ನುವ ಭಾವನೆ ಗಂಗಾಳಲ್ಲಿ ಮೂಡಿ ಬರತೊಡಗಿತ್ತು. ಅಣ್ಣ ಸ್ವಲ್ಪ ಹೊತ್ತು ಅಲ್ಲಿದ್ದು ಆನಂತರ ಹೊರಟು ಹೋಗಿದ್ದ. ಗಂಗಾ ಒಬ್ಬಳೇ ಇರುತ್ತಾಳೆಂದು ಆಕೆಯ ಅಪ್ಪ ಶಲ್ಯ ಹಾಕಿಕೊಂಡು ಬಂದಿದ್ದರು. ಅಪ್ಪ ಬಂದಾಕ್ಷಣ ಗಂಗಾ ಉದ್ವೇಗದಿಂದ ಹೇಳಿದ್ದಳು, "ಅಪ್ಪಾ ನಾನು ಅಬ್ಬಬ್ಬ ಎಂದರೆ ಇಪ್ಪತ್ತರಿಂದ ಮೂವತ್ತು ಸಾವಿರದವರೆಗೆ ಮಾತ್ರ ಕರೆಯಬಹುದು. ಅದೂ ಕೂಡಾ ಹೆಚ್ಚೇ! ಆದರೆ ಇಲ್ಲಿರುವವರೆಲ್ಲ ಕಾರು, ಮೋಟರ್ ಸೈಕಲ್‌ಗಳಲ್ಲಿ ಬಂದವರು. ಬಹುಶಃ ಇವರ ವ್ಯವಹಾರದಲ್ಲಿ ಲಕ್ಷಾಂತರ ರೂಪಾಯಿಗಳು ಇರಬಹುದು. ಇವರೆಲ್ಲರ ಮಧ್ಯೆ ನಿಂತು ತಾನು ಹರಾಜಿನಲ್ಲಿ ಕೂಗುವುದಾದರೂ ಸಾಧ್ಯವೇ?". ಅದು ಪೂರ್ತಿ ಗಂಡಸರ ವ್ಯವಹಾರದ ಹಾಗೆಯೇ ಗಂಗಾಳಿಗೆ ಕಾಣಿಸುತ್ತಿತ್ತು. ಗಂಗಾಳನ್ನು ಬಿಟ್ಟರೆ ಆ ಹರಾಜು ಮಾಡುವ ಜಾಗದಲ್ಲಿ ಬೇರೆ ಯಾರೂ ಹೆಂಗಸರೇ ಇರಲಿಲ್ಲ. ಈ ಗಂಡಸರ ಪ್ರಪಂಚದಲ್ಲಿ ಹೇಗೆ ವ್ಯವಹರಿಸುವುದು ಎನ್ನುವ ದಿಗಿಲು ಗಂಗಾಗೆ. ಆದರೂ ಅಪ್ಪ "ನೋಡೋಣ ಗಂಗಾ" ಎಂದಿದ್ದರು. ಗಂಗಾ ಅಲ್ಲಿದ್ದ ಸುಮಾರು ಜನರಿಗೆ ಪರಿಚಯವಿದ್ದಳು.

ಗೆಳತಿಯರ ಬಳಗದಲ್ಲಿದ್ದು, ನಂತರ ಓದಿಕೊಂಡು, ಒಬ್ಬಳೇ ಹೋಗಿ ಬೆಂಗಳೂರಿನಂತಹ ಊರಿನಲ್ಲಿ ಕೆಲಸ ಗಿಟ್ಟಿಸಿಕೊಂಡು ಲೆಕ್ಚರ್ ಆಗಿರುವ ಗಂಗಾಳ ಸಾಮರ್ಥ್ಯದ ಬಗ್ಗೆ ಅವರಿಗೂ ಆದರ/ಅಸೂಯೆ. ಬೇರೆ ಜಾತಿಯ ಹುಡುಗನನ್ನು ಮದುವೆಯಾದರೂ ಚೆನ್ನಾಗಿಯೇ ಇದ್ದಾಳೆ. ಈಗ ಮನೆ ಬೇರೆ ಬೆಂಗಳೂರಿನಲ್ಲಿ ಕಟ್ಟಿಸಲು ಓಡಾಡತೊಡಗಿದ್ದಾಳೆ. ಹೀಗಾಗಿ ಅಲ್ಲಿರುವವರು ಅಪ್ಪನೊಡನೆ ಮಾತನಾಡುತ್ತಲೇ ಗಂಗಾಳನ್ನು ಪ್ರಶಂಶೆ ಮಾಡುವರು. ತಂದೆಗೆ ಒಂದು ರೀತಿ ಹೆಮ್ಮೆ ಎನಿಸತೊಡಗಿತ್ತು. ಗಂಗಾ ಹರಾಜು ಮುಗಿಯುವ ತನಕ ಅಲ್ಲಿಯೇ ಇರಬೇಕೆಂದು ತಂದೆಯೇ ಅಪೇಕ್ಷೆ ಪಟ್ಟಿದ್ದರು. ಮಗುವಿನ ತಾಯಿಯಾದ ಗಂಗಾ ತಂದೆಯ ಕಣ್ಣಿಗೆ ಏಕೆ, ಇತರರ ಕಣ್ಣಿನಲ್ಲಿಯೂ ಬರಿಯ ಸಾಮಾನ್ಯ ಹೆಂಗಸಾಗಿ ಕಂಡಿರಲಿಲ್ಲ. ವಿದೇಶಕ್ಕೆ ಒಬ್ಬಳೇ ಹೋಗಿ ಬಂದಿದ್ದಾಳೆ. ಬೆಂಗಳೂರಿನಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಾಳೆ. ಹಾಗಾಗಿ ಅಪ್ಪನಿಗೆ ಒಂದು ರೀತಿಯ ಗತ್ತು. ಮಗಳನ್ನು ತಾವಾಗಿಯೇ ಕೆಲಸಕ್ಕೆ ಸೇರಿಸದಿದ್ದರೂ ಮಗಳು ಗಂಗಾ ಗಂಡು ಮಗುವಿನ ತರಹ ಬೆಂಗಳೂರಿನಲ್ಲಿ ಇದ್ದುಕೊಂಡು ದುಡಿಯುತ್ತಿದ್ದಾಳೆ. ಇದು ಹೊನ್ನೇಕೆರೆಯಲ್ಲಿದ್ದ ತಂದೆಗೆ ಗೌರವದ ವಿಚಾರವಾಗಿತ್ತು. ಹಾಗಾಗಿ ಹರಾಜು ಮಾಡುವ ಪ್ರದೇಶದಲ್ಲಿ, ಅಷ್ಟೊಂದು ಜನ ಪರಿಚಯಸ್ಥರ ಮಧ್ಯೆ ಗಂಗಾಳ ಜೊತೆ ಓಡಾಡುವುದು ಅಪ್ಪನಿಗೇನೂ ಅಷ್ಟು ಮುಜುಗರದ ಸಂಗತಿಯಾಗಿರಲಿಲ್ಲ. ಅಲ್ಲಿದ್ದವರೆಲ್ಲಾ ಗಂಡಸರು. ಗಂಗಾ ಒಬ್ಬಳೇ. ಹಾಗಾಗಿ ಆಕೆ ಹರಾಜಿನಲ್ಲಿ ಕೂಗಿದರೆ ಯಾರೂ ಬೆಲೆ ಏರಿಸಲಾರರು ಎಂಬುದು ಅಪ್ಪನ ಅನಿಸಿಕೆ. ಹಾಗಾಗಿ ಗಂಗಾಳ ಆತಂಕ/ಉದ್ವೇಗಗಳಿಗೆಲ್ಲ ಅಪ್ಪನೇ ಸಮಾಧಾನ ಹೇಳುವರು. ನಕ್ಕು ಮಾತನಾಡಿಸುವವರಿಗೆಲ್ಲ 'ಬೆಂಗಳೂರಿನಲ್ಲಿ ಗಂಗಾ ಮನೆ ಕಟ್ಟಿಸುತ್ತಾಳೆ. ಮರದ ಖರೀದಿಗೆ ಇಲ್ಲಿಗೆ ಬಂದಿದ್ದಾಳೆ' ಎನ್ನುವರು. ಗಂಗಾ ಬೆಂಗಳೂರಿನಲ್ಲಿ ಮನೆ ಕಟ್ಟಿಸುತ್ತಾಳೆ ಎಂಬ ಅಂಶವೇ ಗಂಗಾಳ ಬಗ್ಗೆಗಿನ ಅವರ ಮಮತೆಯನ್ನು ಹೆಚ್ಚು ಮಾಡಿತ್ತು. ಗಂಗಾ ತಾವಂದುಕೊಂಡ ಹಾಗೆ ಉಡಾಫೆಯ ಹುಡುಗಿಯಲ್ಲ. ಆಕೆಗೆ ಜವಾಬ್ದಾರಿಯ ಅರಿವಿದೆ ಎಂದು ಆಗಾಗ್ಗೆ ಅವರಿಗೆ ಅನ್ನಿಸತೊಡಗಿತ್ತು. ರಮೇಶನನ್ನು ಮದುವೆಯಾದ ಸಂದರ್ಭದಲ್ಲಿ ಅವರು ಹೋಗಿರಲಿಲ್ಲ ನಿಜ. ಇದ್ದ ಒಬ್ಬ ಮಗಳು ಬೇರೆ ಜಾತಿಯವರನ್ನು ಮದುವೆ ಮಾಡಿಕೊಂಡು ಮುಖಕ್ಕೆ ಮಸಿ ಬಳಿದಳು ಎನಿಸಿತ್ತು. ಆದರೆ ಮಗು ಮಿತಾಳ ಜೊತೆಗೆ ರಮೇಶ ಗಂಗಾಳ ತಾಯಿ ಸತ್ತಾಗ ಹೊನ್ನೇಕೆರೆಗೆ ಬಂದಿದ್ದ. ರಮೇಶನನ್ನು ತಂದೆ ಕಂಡುದೇ ಆಗ. ಆತನ ಪ್ರೀತಿ/ವಿನಯ ನೋಡಿ ತಂದೆ ಏಕೆ? ಶಂಕರನೂ ಕೂಡಾ ಆತನನ್ನು ಇಷ್ಟಪಟ್ಟಿದ್ದ. ಈಗ ಮೊದಲಿನ ತರಹ ಗಂಗಾಳ ಮೇಲೆ ದ್ವೇಷ ಇರಲಿಲ್ಲ ತಂದೆಗೆ. ತಂದೆ/ತಾಯಿಯ ಬಗ್ಗೆ ಗೌರವ, ಮೋಹಗಳನ್ನು ಬಿಟ್ಟಿರುವ ಗಂಗಾ ಕೇವಲ ಸ್ವತಂತ್ರವಾಗಿರಲು ಬಯಸಿದ ಹಕ್ಕಿ ಎಂಬುದಾಗಿಯೇ ತಂದೆ ತಿಳಿದಿದ್ದುದು. ಆದರೆ ತಾಯಿಯ ಹೆಣವನ್ನು ತಬ್ಬಿಕೊಂಡು ಅತ್ತ ಗಂಗಾ ಶವಸಂಸ್ಕಾರಕ್ಕೆಂದು ತಂದೆ/ಅಣ್ಣನ ಕೈಯಲ್ಲಿ ಹಣವನ್ನು ಇಟ್ಟಿದ್ದಳು. ಅನಾಥೆಯಂತೆ ನಿಂತಲ್ಲೇ ನಿಂತು ಬಿಡುತ್ತಿದ್ದ ಗಂಗಾಳನ್ನು ಕಂಡಾಗ ಸಂಬಂಧಿಕರೆಲ್ಲಾ ಮೂಗಿನ ಮೇಲೆ ಬೆರಳಿರಿಸಿದ್ದರು. ಮನೆಯವರನ್ನು ವಿರೋಧಿಸಿ ಓದಿದ, ಬೇರೆ ಜಾತಿಯವರನ್ನು ಮದುವೆಯಾದ ಗಂಗಾ ತಾಯಿಯ ಸಾವಿಗೆ ಸ್ಪಂದಿಸಿದ ರೀತಿಯು ಅವರ್‍ಯಾರೂ ನಿರೀಕ್ಷಿಸಿದ್ದಲ್ಲ. ಏನೋ ಬಂದು ಹೋಗುತ್ತಾಳೆ ಎಂದು ಎಣಿಸಿದ್ದಕ್ಕಿಂತ ಭಿನ್ನವಾಗಿ ಗಂಗಾ ಕಂಡಿದ್ದಳು. ಶವಸಂಸ್ಕಾರ ಮಾಡಿದ ತಕ್ಷಣವೇ ಊರಿಗೆ ಹೊರಟು ಹೋಗಿದ್ದರೂ ಹನ್ನೊಂದನೇ ದಿನದ ತಿಥಿಗೆಂದು ಮತ್ತೆ ಬಂದಿದ್ದಳು. ಅತ್ತಿಗೆ ಉಮಾಗೆ ಏನೋ ಕೆಲಸ ಮಾಡಿ ಕೊಡುವಳು. ಬಿಡುವಾದಾಗಲೆಲ್ಲಾ ತಾಯಿ ನಿಲ್ಲುವ ಸ್ಥಳದಲ್ಲೋ, ಕೂರುವ ಸ್ಥಳದಲ್ಲೋ, ಮಲಗುವ ಸ್ಥಳದಲ್ಲೋ ತಾಸುಗಟ್ಟಲೇ ಮಾತನಾಡದೇ ಕುಳಿತುಬಿಡುವಳು. ಯಾರ್‍ಯಾದರೂ ಮಾತನಾಡಿಸಿದರೆ ಹಾ ಹೂ ಎನ್ನುವಳು ಅಷ್ಟೇ! ಅಜ್ಜಿಯ ತಣ್ಣನೆಯ ಶವವನ್ನು ಕಂಡಿದ್ದ, ಹಾಗೂ ಆಕೆಯನ್ನು ಮಣ್ಣಿಗೆ ಹಾಕುವುದನ್ನು

ಕಂಡಿದ್ದ ಮಿತಾ 'ಅಜ್ಜಮ್ಮ ಎಲ್ಲಿ ಎಲ್ಲಿ' ಎಂದು ಗೋಳಾಡಿಸುವಳು. 'ಮಣ್ಣಲ್ಲಿ ಹಾಕಿದ ಅಜ್ಜಮ್ಮ ಯಾವಾಗ ಎದ್ದು ಬರುತ್ತಾರೆ?" ಎನ್ನುವಳು. 'ಮಣ್ಣಲ್ಲಿ ಮಲಗಿದ ಆಕೆಗೆ ಹಸಿವೆಯಾಗುವುದಿಲ್ಲವೇ' ಎನ್ನುವಳು. ಕರುಳ ಕುಡಿ ಕತ್ತರಿಸಿಕೊಂಡು ಹುಟ್ಟಿದ ಮಗುವಿಗೆ ತಾನು ಕತ್ತರಿಸಿಕೊಂಡು ಹುಟ್ಟಿದ ಕರುಳಬಳ್ಳಿ ಇನ್ನಿಲ್ಲ ಎಂದು ಹೇಗೆ ಹೇಳಲಿ ಎಂದು ಗಂಗಾ ಯೋಚಿಸುತ್ತಾಳೆ. ಮಿತಾ ಕೇಳುವ ಪ್ರಶ್ನೆಗಳಲ್ಲಿ ಗಂಗಾಳ ಸಾವಿನ ಭೀಕರತೆ ಇನ್ನಷ್ಟು ದಟ್ಟವಾಗುತ್ತದೆ. ತಂದೆ ಇದನ್ನೆಲ್ಲಾ ನೋಡಿದ್ದರು. ಗಂಗಾಳನ್ನು ಹೀಗೆ ಕಾಡುವ ಮಿತಾಳನ್ನು ರಮೇಶ ಅಲ್ಲಿಂದ ಕರೆದೊಯ್ದುಬಿಡುತ್ತಿದ್ದ. ತಾಸುಗಟ್ಟಲೇ ಗಂಗಾಳ ಪಾಡಿಗೇ ಅವಳಿದ್ದುಬಿಡಲು ಅನುವು ಮಾಡಿಕೊಡುತ್ತಿದ್ದ. ಇದನ್ನೆಲ್ಲಾ ಕಂಡಿದ್ದ ಅಪ್ಪನಿಗೆ ರಮೇಶನ ಬಗ್ಗೆ ಗೌರವ/ಆದರ/ಪ್ರೀತಿ ಮೂಡತೊಡಗಿದ್ದವು. 'ಏನೋ ಹೇಗೋ ಗಂಗಾ ಸುಖವಾಗಿದ್ದರೆ ಸಾಕು' ಎಂಬಂತಹ ಮನಸ್ಥಿತಿಯನ್ನು ತಲುಪಿದ್ದರು ತಂದೆ. ಈ ರೀತಿ ಗಂಗಾ/ರಮೇಶರ ಬಗ್ಗೆ ಬೆಳೆದ ಆದರದಿಂದಾಗಿಯೇ ಅಪ್ಪ/ಶಂಕರ ಗಂಗಾ ಮನೆ ಕಟ್ಟಿಸುವ ಮಾತೆತ್ತಿದಾಗ ಸಹಾಯ ಮಾಡಲು ಮುಂದೆ ಬಂದದ್ದು. ಆಕೆಯನ್ನು ಹೊನ್ನೇಕೆರೆಗೆ ಹರಾಜಿಗೆ ಬರಲು ಬರೆದಿದ್ದು.

ಹರಾಜು ಪ್ರಾರಂಭವಾಗುವ 10-30ರ ವೇಳೆಗೆ ಇನ್ನಷ್ಟು ಜನ ಸೇರಲಾರಂಭಿಸಿದ್ದರು. 'ಈ ಸಲ ಒಳ್ಳೆಯ ಟೀಕ್ ಮರ ಹರಾಜಿಗೆ ಬಂದಿರುವುದರಿಂದ ಬೇರೆ ಬೇರೆ ಕಡೆಯಿಂದ ಬಹಳಷ್ಟು ಜನ ಬಂದಿದ್ದಾರೆ' ಎಂದು ಅಪ್ಪ ಹೇಳಿದ್ದರು. ಮೊದಲಿದ್ದ ಭಯ ಸ್ವಲ್ಪ ಕಡಿಮೆಯಾಗಿದ್ದರೂ ಗಂಗಾಳಲ್ಲಿ ದಿಗಿಲಿನ್ನೂ ಕಡಿಮೆಯಾಗಿರಲಿಲ್ಲ. ಹಾಗೂ ಹೀಗೂ 30 ಸಾವಿರ ರೂ. ಜೋಡಿಸಿ ತಕ್ಷಣ ಮರಕ್ಕೆಂದು ಕೊಡಬಹುದು. ಅಷ್ಟೊಂದು ಕಡಿಮೆ ಹಣ ಇಟ್ಟುಕೊಂಡು ಈ ಲಕ್ಷಾಂತರ ರೂಪಾಯಿ ವ್ಯವಹಾರದ ಜನರೊಡನೆ ಹೇಗೆ ಸ್ಪರ್ಧಿಸುವುದು ಎನ್ನುವ ಆತಂಕಗಳೇ ಆಕೆಯನ್ನು ಹೆಚ್ಚಾಗಿ ಕಾಡತೊಡಗಿದ್ದವು. ಹರಾಜು ಮಾಡುವ ಸ್ಥಳದ ಸುತ್ತ ಹಾಕಿದ ದಿಮ್ಮಿಗಳನ್ನು ಗಂಗಾ ನೋಡತೊಡಗಿದ್ದಳು. ಅಪ್ಪ ಮರದ ಬಾಗಿಲಿಗೆ ಬರುವಂತಹ ತುಂಡುಗಳನ್ನು ಅಲ್ಲಲ್ಲಿ ತೋರಿಸತೊಡಗಿದ್ದರು. ಒಂದು ಅಗಲವಾದ ಹಾಗೂ ದೊಡ್ಡದಾದ ಮರದ ತುಂಡೊಂದನ್ನು ಗಂಗಾಳಿಗೆ ತೋರಿಸಿ ಅಪ್ಪ ಹೇಳಿದರು, "ಇಲ್ಲಿಯೇ ಇರು ಗಂಗಾ, ಈ ಮರ ಹರಾಜಿಗೆ ಬಂದಾಗ ಇದನ್ನು ಕೂಗಬಹುದು" ಎಂದರು. ಗಂಗಾ 'ಸರಿ' ಅಂದಳು. ಅದೇ ಮರ ಹರಾಜಿಗೆ ಬಂದಾಗ 8 ಸಾವಿರದಿಂದ ಪ್ರಾರಂಭವಾಗಿ ಹನ್ನೆರಡು ಸಾವಿರಕ್ಕೆ ಏರುವವರೆಗೆ ಗಂಗಾಗೆ ಬಾಯಿಯೇ ಬರಲಿಲ್ಲ. ಹೇಗೆ ಕೂಗುವುದು? ಸಂಕೋಚ. ಅಷ್ಟೆಲ್ಲ ಜನರ ಮಧ್ಯೆ ಬಾಯಿ ಬಿಡಬೇಕು. 12,000 ಎನ್ನಬೇಕು. ಹೀಗೆಯೇ ಸಂಕೋಚ ಪಡುತ್ತಾ ಸುಮ್ಮನಿದ್ದಳು. ಆದರೆ ತಾನು ಸುಮ್ಮನೇ ಇದ್ದರೆ ಇನ್ನು ಮರ ಕೊಳ್ಳುವುದಕ್ಕೆ ಸಾಧ್ಯವೇ ಆಗುವುದಿಲ್ಲವೆಂದು ಕೊನೆಗೆ 12,000 ಎಂದು ಕೂಗಿದಳು. ಯಾರೋ ಐದುನೂರು ಏರಿಸಿದರು. ಮತ್ಯಾರೋ "ಏಯ್ ಬಿಡ್ರಪ್ಪೋ, ನಮ್ಮೂರ ಹೆಣ್ಣು ಮಗಳು, ಮನೆ ಕಟ್ಸಾಕಂತೆ ಬಿಡ್ರಪ್ಪೋ" ಎಂದದ್ದು ಗಂಗಾಳ ಕಿವಿಗೆ ಬಿತ್ತು. ಹಾಗಾಗಿ 13,000 ಎಂದು ಗಂಗಾ ಕೂಗಿದಾಕ್ಷಣ ಯಾರೂ ಮತ್ತೆ ಕೂಗಿರಲಿಲ್ಲ. 13,000 ಆ ಮರ ಸಿಕ್ಕಿತ್ತು. ಇಷ್ಟೆಲ್ಲ ಕೂಗುವಾಗ ಗಂಗಾಗೆ ಎದೆ ಬೆವತು ಹೋಗಿತ್ತು. ಅಪ್ಪ ಜೊತೆಗಿದ್ದರೂ ಈ ಗಂಡಸರ ಪ್ರಪಂಚದ ವ್ಯವಹಾರದ ಸ್ಪರ್ಧೆ ಗಂಗಾಳನ್ನು ಹೇಗೋ ಹೇಗೋ ಮಾಡಿತ್ತು. ತಾನು ಹೆಣ್ಣು ಮಗಳು ಎಂಬ ಕಾರಣಕ್ಕಾಗಿ ಕೂಗುವುದನ್ನು ನಿಲ್ಲಿಸಿದ್ದರು ಅವರು. ಸ್ವಲ್ಪ ಹೊತ್ತು ಅಪ್ಪನ ಜೊತೆಗೆ ಅಲ್ಲಿಯೇ ತಿರುಗಾಡುತ್ತಿದ್ದ ಗಂಗಾಳ ಮನಸ್ಸಲ್ಲಿ ಏನೇನೋ ಯೋಚನೆಗಳು.

ಶಂಕರ ಬೆಂಗಳೂರಿಗೆ ಬಂದು ತನ್ನ ಜೊತೆ ಇದ್ದುದರಿಂದ ಮನೆ ಕಟ್ಟಿಸುವ ಕೆಲಸ ಗಂಗಾಳಿಗೆ ಅಷ್ಟೇನೂ ಕಷ್ಟವಾಗಿ ಕಂಡಿರಲಿಲ್ಲ. ಬೆಂಗಳೂರಿನ ಹೊರಭಾಗದಲ್ಲಿ ಕೈಗೆಟುಕುವ ರೇಟಿನಲ್ಲಿ ಸಿಕ್ಕ

ಜಾಗದಲ್ಲಿ ಕಟ್ಟುವ ಪುಟಾಣಿ ಮನೆ ತಮ್ಮದು. ಕಡಿಮೆ ಖರ್ಚಿನಲ್ಲಿಯೇ ಮುಗಿಸಿಬಿಡಬಹುದೆಂದು ಗಂಗಾ-ರಮೇಶ ಇಬ್ಬರೂ ಎಣಿಸಿದ್ದರು. ರಮೇಶ ಬಿಡುವಿನ ವೇಳೆಯಲ್ಲಿ ಶಂಕರನಿಗೆ ಬೆಂಬಲವಾಗಿ ನಿಲ್ಲುವನು. ರಮೇಶ ಊರಲ್ಲಿ ಇಲ್ಲದಿರುವಾಗ ಮನೆ ಕೆಲಸಕ್ಕೆ ತಕ್ಷಣ ತಕ್ಷಣ ದುಡ್ಡು ಹೊಂದಿಸುವ ಕೆಲಸ ಗಂಗಾಳ ಮೇಲೆಯೇ ಬೀಳುತ್ತಿತ್ತು. ಕೆಲವು ಸಮಯದಲ್ಲಂತೂ ಪರದಾಡುವ ಹಾಗೆ ಆಗಿಬಿಡುತ್ತಿತ್ತು. ಈ ಸಂದರ್ಭದಲ್ಲಿ ಬ್ಯಾಂಕೊಂದರಲ್ಲಿ ಕೆಲಸ ಮಾಡುತ್ತಿದ್ದ ಸರೂ ಸಾಕಷ್ಟು ಸಹಾಯ ಮಾಡಿದ್ದಳು. ತಾಯಿಯ ಒಡವೆಯನ್ನೆಲ್ಲ ಆಕೆಯ ಬ್ಯಾಂಕಿನಲ್ಲಿಯೇ ಇಟ್ಟು ಹಲವಾರು ಬಾರಿ ಸಾಲ ಕೊಡಿಸಿದ್ದಳು. ಗಂಗಾಳ ಹೆಸರಿನಲ್ಲಿ ಇಟ್ಟರೆ ಬಡ್ಡಿಯ ದರ ಜಾಸ್ತಿ ಆಗುತ್ತದೆ ಎಂದು ಹೇಳಿ ತನ್ನ ಹೆಸರಿನಲ್ಲಿಯೇ ಒಡವೆಯೆಲ್ಲಾ ಇಟ್ಟು ಸಾಲ ಕೊಡಿಸುತ್ತಿದ್ದಳು. ಸರೂ ಬ್ಯಾಂಕ್‌ನಲ್ಲಿ ಇದ್ದುದರಿಂದ ಗಂಗಾಳಿಗೆ ಸಾಲ ಸಿಕ್ಕುವುದು ಸುಲಭವಾಗುತ್ತಿತ್ತು. ಸರೂ ಇಲ್ಲದ ದಿನಗಳಲ್ಲಿ ಮ್ಯಾನೇಜರ್ ನೋಡಿದರೆ 'ಆವಾಗ ಬನ್ನಿ, ಈವಾಗ ಬನ್ನಿ' ಎಂದು ಗಂಗಾಳನ್ನು ಸತಾಯಿಸಿಬಿಡುತ್ತಿದ್ದರು. ಆದರೆ ಸರೂ ಇದ್ದರೆ ಆಕೆಯ ಕೈಯಲ್ಲಿ ಒಡವೆಯ ಪ್ಯಾಕೆಟ್ ಇಟ್ಟರೆ ಸಾಕು, ಅವಳೇ ಶೆಟ್ಟರ ಹತ್ತಿರ ಹೋಗುವುದರಿಂದ ಹಿಡಿದು ಫಾರಂ ತುಂಬುವವರೆಗೆ ಎಲ್ಲಾ ಕೆಲಸ ಮುಗಿಸಿ, ಇಂತ ದಿನ ಬಂದು ಸಹಿ ಹಾಕಿ ಹಣ ತೆಗೆದುಕೊಂಡು ಹೋಗು ಎಂದು ಗಂಗಾಗೆ ಹೇಳುತ್ತಿದ್ದಳು. ಹೋಗಿ ಹಣ ತರುವುದು, ಸಹಿ ಮಾಡಿ ಬರುವುದು ಅಷ್ಟೇ ಗಂಗಾಳ ಕೆಲಸವಾಗಿರುತ್ತಿತ್ತು. ಎಲ್ಲಾ ಜವಾಬ್ದಾರಿ ವಹಿಸಿಕೊಂಡು ಸರೂ ಕೆಲಸ ಮುಗಿಸಿ ಕೊಡುತ್ತಿದ್ದಳು. ಸರೂ ಬ್ಯಾಂಕಿನಲ್ಲಿ ಇರುವುದರಿಂದ ತಮ್ಮಲ್ಲಿ ಎಷ್ಟೊಂದು ಜನಕ್ಕೆ ಅನುಕೂಲವಾಗುತ್ತಿದೆಯೆಂದು ಗಂಗಾ ಯಾವಾಗಲೂ ಯೋಚಿಸುತ್ತಿದ್ದಳು. ಸಾಲ ಕೊಡಿಸುವ ಸಾಧ್ಯತೆಗಳಿದ್ದಲ್ಲಿ ಸರೂ ಎಂದೂ ಹಿಂದೇಟು ಹೊಡೆದವಳಲ್ಲ. ವ್ಯಾವಹಾರಿಕ ಪ್ರಪಂಚದಲ್ಲಿದ್ದುಕೊಂಡೇ ಹೇಗೆ ಜನರಿಗೆ ಅನುಕೂಲ ಮಾಡಬಹುದು ಎಂಬುದನ್ನು ಸರೂ ಯಾವಾಗಲೂ ಯೋಚಿಸುತ್ತಿದ್ದಳು. ಎಷ್ಟೋ ಜನಕ್ಕೆ ಬ್ಯಾಂಕ್‌ಗಳಲ್ಲಿರುವ ಸವಲತ್ತುಗಳೇ ಗೊತ್ತಿರುವುದಿಲ್ಲ ಎಂದು ತಿಳಿದು ಬರುವ ಜನರೊಡನೆ ಬಿಡಿಸಿ ಬಿಡಿಸಿ ಹೇಳುವಳು. ಈ ಸ್ಕೀಮ್ ಅಥವಾ ಆ ಸ್ಕೀಮ್ ನಿಮಗೆ ಉಪಯೋಗವಾಗಬಹುದು ಎಂದು ಅವರಿಗೆ ಸಲಹೆ ನೀಡುವಳು. ಗಂಗಾಗಷ್ಟೇ ಅಲ್ಲ, ಆಕೆಯ ಪರಿಚಯದವರಿಗೆಲ್ಲ ಸರೂ ಬ್ಯಾಂಕ್ ಮೂಲಕ ಸಿಗಬಹುದಾದ ಸೌಲಭ್ಯ ಒದಗಿಸಿಕೊಟ್ಟಿದ್ದಳು. ಬ್ಯಾಂಕ್‌ನಲ್ಲಿ ವ್ಯವಹರಿಸುವ ಎಷ್ಟೋ ಜನ ಅಪರಿಚಿತರಿಗೆ ಕೂಡಾ ತನ್ನ ಕೈಲಾದುದನ್ನು ಮಾಡುವಳು. ಆ ಬ್ಯಾಂಕಿಗೆ ಬರುವ ಪ್ರತಿಯೊಬ್ಬರೊಡನೆ ವ್ಯವಹರಿಸುವಾಗಲೂ ಬೆಚ್ಚನೆಯ ಹೃದಯದಿಂದ ವರ್ತಿಸುವಳು. ಹೀಗಾಗಿ ಗಂಗಾಳಿಗೆ ಮಾತ್ರವಲ್ಲ, ಅನೇಕ ಸ್ನೇಹಿತ/ಸ್ನೇಹಿತೆಯರಿಗೆ, ಬ್ಯಾಂಕಿಗೆ ಬಂದು ಹೋಗುವ ಅಪರಿಚಿತರಿಗೆ ಸರೂ ಆತ್ಮೀಯಳಾಗಿಯೇ ಕಾಣಿಸುತ್ತಿದ್ದಳು. ಗಂಗಾ ಒಂದೆರಡು ಬಾರಿ ಸರೂಳನ್ನು ಹುಡುಕಿಕೊಂಡು ಹೋದ ದಿನಗಳಲ್ಲಿ ಸರೂ ಬ್ಯಾಂಕಿನಲ್ಲಿ ಕಾಣಿಸಿರಲಿಲ್ಲ. ಗುಲ್ಬರ್ಗಾಕ್ಕೆ ಸ್ನೇಹಿತೆಯೋರ್ವಳ ಮನೆಗೆ ಹೋಗಿದ್ದು ಗಂಗಾಗೆ ತಿಳಿದಿತ್ತು. ಆಕೆ ಮರಳಿ ಬಂದಿರಬಹುದು ಎಂದು ಗಂಗಾ ಆಕೆಯನ್ನು ಹುಡುಕಿಕೊಂಡು ಬ್ಯಾಂಕಿಗೆ ಎರಡು ಮೂರು ಬಾರಿ ಹೋದಳು. ಆಗಲೂ ಸರೂ ಸಿಗಲಿಲ್ಲ. ಒಂದು ವಾರ ಬಿಟ್ಟುಕೊಂಡು ಮತ್ತೆ ಬ್ಯಾಂಕಿಗೆ ಹೋದಾಗಲೂ ಸರೂ ಸಿಕ್ಕಿರಲಿಲ್ಲ. ಮನೆಗೆ ಹುಡುಕಿಕೊಂಡು ಹೋದರೆ ಮನೆ ಬೀಗ ಹಾಕಿತ್ತು. ಬ್ಯಾಂಕಿನಲ್ಲಿ ಜವಾನನಾದಿಯಾಗಿ ಯಾರೂ ಕೂಡಾ ಸರಿಯಾಗಿ ಉತ್ತರಿಸಿರಲಿಲ್ಲ. ಆಕೆ ರಜೆಯಲ್ಲಿದ್ದಾರೆ ಎಂಬ ಅಸಹನೆಯ ಮಾತುಗಳಷ್ಟೇ ಕೇಳಿಬಂದಿದ್ದವು. ಯಾಕೋ ಗಂಗಾಳಿಗೆ ಮುಜುಗರವಾಗತೊಡಗಿತ್ತು.

* * * *

'Wither is fled the visionary gleam
where is it now the glory and the dream?'

ಕನಸುಗಳ ಕಣ್ಣಲ್ಲಿ ಇಟ್ಟುಕೊಂಡು, ಬಣ್ಣ ಬಣ್ಣದ ಮಿಡಿಯಂತಹ ಲಂಗಗಳ ತುಂಬ ಕಾಮನಬಿಲ್ಲಿನ ಕಿರಣಗಳ ಹಿಡಿಯುವ ಅಗಾಧ ಆಶಯ ಹೊತ್ತ ಸರೂಳ ಜೀವನದಲ್ಲಿ ಆದ ಘಟನೆ ಆಕಸ್ಮಿಕ. ವ್ಯವಹಾರಿಕ ಪ್ರಪಂಚದಲ್ಲಿ ಭಾವನೆಗಳಿಗೆ ಸ್ಥಾನವಿಲ್ಲ. ಅಲ್ಲಿರುವುದು ಕೇವಲ ವ್ಯವಹಾರ. ಭಾವನೆಗಳ ಬಗ್ಗೆ ವ್ಯಾವಹಾರಿಕ ಪ್ರಪಂಚದಲ್ಲಿ ಮಾತನಾಡುವುದು ಅಸಂಬದ್ಧ, ಹುಚ್ಚುತನ ಎನಿಸಿಬಿಡುತ್ತದೆ. ವ್ಯಾವಹಾರಿಕ ಪ್ರಪಂಚದಲ್ಲಿ ವ್ಯವಹಾರದಲ್ಲಿ ಭಾವೋದ್ವೇಗದ ಅಥವಾ ಭಾವೋದ್ವೇಗದ ವ್ಯಕ್ತಿಯಾಗಿಯೇ ಹೊರಗಡೆಯ ಪ್ರಪಂಚಕ್ಕೆ ತನ್ನನ್ನು ಹಾತೊರೆದು ತೆರೆದುಕೊಂಡ ಈಕೆಯ ಬದುಕಿನ ಪುಟಗಳ ಮೇಲೆ ಅಡ್ಡಾ-ದಿಡ್ಡಿಯಾಗಿ ಸಂಕೀರ್ಣ ರೇಖೆಗಳನ್ನು ಎಳೆದ ಘಟನೆಯನ್ನು ಸರೂ ಕನಸು-ಮನಸಿನಲ್ಲೂ ಎಣಿಸಿರಲಿಕ್ಕಿಲ್ಲ. ಹೀಗೇ ಇದ್ದಕ್ಕಿದ್ದಂತೆ ಅದೊಂದು ಬೆಳಗು. ಮಾಮೂಲಿಯಾಗಿ ಮನೆಯಲ್ಲಿ ಕೆಲಸ ಮುಗಿಸಿ ಬ್ಯಾಂಕ್‌ನ ಕಟ್ಟೆ ಹತ್ತಿದಾಗ ದಿಢೀರನೇ ಆಕೆಯ ಮುಖಕ್ಕೆ ರಾಚಿದ್ದು ಸಸ್‌ಪೆನ್‌ಷನ್ ಆರ್ಡರ್‌ನ ಪ್ರತಿ. ಏನು? ಎತ್ತ ಎಂಬುದರಲ್ಲಾಗಲೇ ಮಿಂಚಿನಂತೆ ನಡೆದು ಹೋದ ಘಟನೆ ಆಕೆಯನ್ನು ಅವಾಕ್ಕಾಗಿಸಿತ್ತು, ದಿಗ್ಭ್ರಮೆಗೊಳಿಸಿತ್ತು. ಸರೂ ಕಕ್ಕಾವಿಕ್ಕಿಯಾಗಿದ್ದಳು. ಆದಾಗ್ಗೆ ಗೆಳತಿಯ ಮನೆಯಿಂದ ಪ್ರೇಮ/ಮಮತೆಗಳನ್ನು ಹೃದಯದೊಳಗೆ ತುಂಬಿಸಿಕೊಂಡು ಬಂದ ಸರೂಗೆ ಇದೆಲ್ಲಾ ಆಕಸ್ಮಿಕ. ಸುಧಾರಿಸಿಕೊಳ್ಳಲು ಸಮಯವೇ ಹಿಡಿದಿತ್ತು. ವ್ಯವಹಾರಿಕ ಜಗತ್ತಿನಲ್ಲಿ ನಂಬುಗೆಗೆ ಸ್ಥಾನವಿಲ್ಲ ಎಂದು ಅರಿಯದ ಸತ್ಯ ಸರೂಳ ಬಾಳಿಗೆ ದುರ್ವಿಧಿಯಾಗಿ ಕೈ ಚಾಚಿಕೊಂಡು ಬಂದಿತ್ತು. ಭಾವನೆಗಳ ಮೇಲೆ, ಭಾವನೆಯ ಲಯಗಳ ಮೇಲೆ ಬದುಕಿನ ಬೆಚ್ಚಗಿನ ಸಂಬಂಧಕ್ಕಾಗಿ ತಡಕಾಡುವ ಸರೂಗೆ ವ್ಯಾವಹಾರಿಕ ಪ್ರಪಂಚದ ಕ್ರೂರ ಮುಖದ ಅರಿವಾದದ್ದು ಈ ರೀತಿಯ 'ಬ್ಯಾಡ್ ಲಕ್' ಆಕೆಯನ್ನು ಅರಸಿಕೊಂಡು ಬಂದಾಗ. ಇದು ನನ್ನ ಮನಸ್ಸಿನ ಸತ್ಯ, ಹೀಗೆ ನನಗೆ ಅನ್ನಿಸುವುದು, ನನ್ನ ಭಾವನೆಗಳ ತಳಹದಿಯ ಮೇಲೆಯೇ ನಾನು ನನ್ನ ಬದುಕನ್ನು ಕಟ್ಟಲು ಪ್ರಯತ್ನಿಸುತ್ತೇನೆ ಎಂದು ಎಲ್ಲರನ್ನೂ ನಂಬಿಬಿಡುವ ಸರೂಳ ಬದುಕಿನಲ್ಲಿ ಈ ಎಲ್ಲಾ ನಂಬಿಕೆಯನ್ನೂ ಛಿದ್ರ ಛಿದ್ರ ಮಾಡುವ ಘಟನೆ ನಡೆಯಬಾರದಿತ್ತೇನೋ ಎಂದು ಗಂಗಾ ಬಹಳ ಸಲ ಯೋಚಿಸುತ್ತಾಳೆ. ಸರೂಳೇನು? ಸರೂಳಂತಹ ಸಂದರ್ಭದಲ್ಲಿ ತಾವು ಇದ್ದಿದ್ದರೆ ತಾವೂ ಹಾಗೆಯೇ ಇರುತ್ತಿರಲಿಲ್ಲವೇ? ಯಾರಿಗೆ ಗೊತ್ತು? ನಾವು ಬರೆಯುವ ಅಂಕಿಗಳ ಹಿಂದೆ-ಮುಂದೆ ಇನ್ಯಾರೋ ಇನ್ಯಾವುದೋ ಅಂಕಿಗಳ ಇಟ್ಟು, ಬರಿಯ ಅಂಕಿಗಳ ಮೂಲಕವೇ ನಮ್ಮ ಬದುಕಿಗೆ ಸೊನ್ನೆ ಸುತ್ತಿ ಬಿಡುತ್ತಾರೆ ಎಂದು? ಮಗ್ಗಿಯ ಮೂಲಕವೇ ತಮ್ಮ ಜೊತೆ ಆಟವಾಡುತ್ತಾರೆಂದು ಸರೂ ಕನಸು ಮನಸಿನಲ್ಲಿ ಕೂಡಾ ಎಣಿಸಿರಲಿಕ್ಕಿಲ್ಲ. ಸರೂ ಗೆಳತಿಯೋರ್ವಳ ಮನೆಯಲ್ಲಿ ಇದ್ದಾಳೆ ಎಂದು ತಿಳಿದ ಮೇಲೆ ಗಂಗಾ ಸರೂಳನ್ನು ಹುಡುಕಿಕೊಂಡು ಗೆಳತಿಯ ಮನೆಗೆ ಹೋಗಿದ್ದಳು. ಸರೂ ಕೆಲಸದಿಂದ ಸಸ್ಪೆಂಡ್ ಆಗಿ ನಂತರ ಬಂಧಿಸಲ್ಪಟ್ಟಿದ್ದಾಳೆ ಎನ್ನುವ ದಿಗ್ಭ್ರಮೆಯ ಸಂಗತಿಯನ್ನು ಆ ಗೆಳತಿಯೇ ಹೇಳಿದ್ದು. ಸಸ್‌ಪೆನ್‌ಷನ್ ಆರ್ಡರ್ ತೆಗೆದುಕೊಂಡ ಮೇಲೆ ಸರೂ ನೇರವಾಗಿ ಮನೆಗೆ ಹೋಗದೇ ತಂದೆಗಾಗಿ ಹುಡುಕಾಡಿದ್ದಳು. ತಂದೆ ಇರುವ ಜಾಗದಲ್ಲೆಲ್ಲಾ ಕಾದು ನಿಂತಿದ್ದಳು. ದುರದೃಷ್ಟಕ್ಕೆ ಆ ರಾತ್ರಿ ತಂದೆ ಸಿಕ್ಕಿರಲಿಲ್ಲ. ಪೋಲೀಸ್ ನಿತ್ಯ ಬಂದು ಪೋಲೀಸ್ ಸ್ಟೇಷನ್‌ನಲ್ಲಿ ಸಹಿ ಮಾಡಬೇಕೆಂದು ಹೇಳಿದ್ದ. ರಾತ್ರಿಯೆಲ್ಲಾ ತಂದೆಯನ್ನು ಹುಡುಕಿ ಓಡಾಡಿ ಮನೆಗೆ ಬಂದಿದ್ದಳು. ಆತ್ಮೀಯ ಗೆಳೆಯನೊಬ್ಬ ಬರುತ್ತಾನೆಂದು ಮೈಯೆಲ್ಲಾ ಕಣ್ಣಾಗಿ ಕುಳಿತಿದ್ದರೂ ಯಾವ ವಿಧಿ ಆತ ಬಂದರೂ ಆಕೆಯ ಕಣ್ಣಿಗೆ ಬೀಳದಂತೆ ಮಾಡಿತ್ತೋ? ಗೆಳತಿ ಎಲ್ಲಿಗೂ ಹೋಗಬಾರದಂತೆ ಎಂದು ಫೋನಿಸಿದ ಸುದ್ದಿ ಆಕೆಯ ಕಿವಿ ತಲುಪುವ ಮೊದಲೇ ಮರುದಿನ ಸರೂ ಮನೆ

ಬಿಟ್ಟಾಗಿತ್ತು. ಆಕೆ ಹಿಂದೆ-ಮುಂದೆ ಯೋಚಿಸಿರಲಿಲ್ಲ. ತಾನೇನೂ ತಪ್ಪು ಮಾಡಿಲ್ಲವಲ್ಲ, ಏನಾಗಿ ಬಿಡುತ್ತದೆ? ಎನ್ನುವ ಮೊಂಡು ಧೈರ್ಯ. ಸತ್ಯಕ್ಕೆ ಜಯ ಲಭಿಸಿಯೇ ಲಭಿಸುತ್ತದೆ ಎಂದು ಹೃದಯದ ಒಳಗೆಲ್ಲೋ ಹುದುಗಿದ ವಿಶ್ವಾಸ. ತನ್ನದೇನು ತಪ್ಪಿದೆ? ಎನ್ನುವ ವ್ಯಾವಹಾರಿಕ ಪ್ರಪಂಚ ಅರಿಯದ ಮುಗ್ಧತೆ. ಸರೂ ಸಸ್‌ಪೆನ್‌ಷನ್ ಆರ್ಡರ್ ತೆಗೆದುಕೊಂಡ ಮೇಲೆ ಸಹಿ ಮಾಡುವುದಕ್ಕೆಂದು ನೇರವಾಗಿ ಪೋಲೀಸ್ ಸ್ಟೇಷನ್‌ಗೆ ಹೊರಟು ಹೋಗಿದ್ದಳು. ಸಸ್‌ಪೆನ್‌ಷನ್ ಆರ್ಡರ್ ತೆಗೆದುಕೊಂಡ ತಕ್ಷಣ ಪೋಲೀಸ್ ಸ್ಟೇಷನ್‌ಗೆ ಹೋದದ್ದು - ತಪ್ಪೊಪ್ಪಿಗೆಗಾಗಿ ಹೋದಂತೆ ಎನ್ನಿಸಿಬಿಟ್ಟಿತೋ ಏನೋ? ತಾನು ತಪ್ಪು ಮಾಡಿಲ್ಲವಲ್ಲ, ಯಾವ ಕಾನೂನು ಏನು ಮಾಡಿ ಬಿಡುತ್ತದೆ ಎಂದು ಧೈರ್ಯವಾಗಿ ಪೋಲೀಸ್ ಠಾಣೆಯಲ್ಲಿ ಕಾಲಿಟ್ಟಿದ್ದಳು. ಆ ಪೋಲೀಸ್ ಠಾಣೆಯಲ್ಲಿ ರೆಜಿಸ್ಟರ್‌ನಲ್ಲಿ ಬರೆದುದನ್ನು ಕಾಪಿ ಮಾಡುವಂತೆ ಹೇಳಿದಾಗ ಮುಗ್ಧವಾಗಿ ಕಾಪಿ ಮಾಡುತ್ತಲೇ ಕುಳಿತಿದ್ದಳು. ತನ್ನ ಸುತ್ತ ಏನು ನಡೆಯುತ್ತದೆ ಎನ್ನುವ ಅರಿವೇ ಆಕೆಗೆ ಇದ್ದಂತೆ ಇರಲಿಲ್ಲ. ಫೋನಿಸಿದ್ದ ಗೆಳತಿ ದೌಡಾಯಿಸಿ ಆ ಪೋಲೀಸ್ ಠಾಣೆಗೆ ಹೋಗಿದ್ದಳು. ಪೋಲಿಸ್ ಠಾಣೆಯೊಳಗೆ ಬರೆಯುತ್ತಾ ಕುಳಿತಿದ್ದ ಸರೂವನ್ನು ಕಂಡು 'ಏನು ಮಾಡುತಿದ್ದೀಯ?' ಏಳು' ಎಂದು ಮಾತನಾಡುವಾಗಲೇ ಪೋಲಿಸ್ ಬಂದದ್ದು ಕಂಡು ಸುಮ್ಮನಾಗಿದ್ದಳು. ಈಚೆ ಬಂದಾಗ ತಂದೆಯನ್ನು ಕಂಡ ಸರೂಗೆ ನಿಧಿ ನೋಡಿದ ಹಾಗೆ ಅನಿಸಿತ್ತು. ಅಪ್ಪ ತನ್ನನ್ನು ಮನೆಗೆ ಕರೆದೊಯ್ಯುತ್ತಾರೆ, ಎಲ್ಲಿಯೋ ಪೋಲೀಸರ ಈ ವ್ಯೂಹದಿಂದ ತನ್ನನ್ನು ಕರೆದೊಯ್ಯುತ್ತಾರೆ ಎಂದು ಸರೂ ಎಣಿಸುವಾಗಲೇ ಪೋಲೀಸ್‌ನವರು 'ನಡಿಯಮ್ಮ; ನಡಿಯಮ್ಮಾ' ಎಂದು ವ್ಯಾನ್ ತೋರಿಸುತ್ತಿದ್ದರು. ಆಗಲೂ 'ನಮ್ಮ ಮನೆ ಹತ್ತಿರ, ನಡದೇ ಹೋಗ್ತೀನಿ ಸಾರ್' ಎಂದು ಮುಗ್ಧವಾಗಿ ನುಡಿದ ಸರೂ ತಂದೆಯ ಕಡೆ ನೋಡಿದ್ದಳು. ತಂದೆ ಅಸಹಾಯಕರಾಗಿ ಆಕೆಯ ಕಡೆಗೆ ನೋಡಿದ್ದರು. 'ನಿನ್ನ ತಲೆಯ ಮೇಲೆ ನೀನೇ ಬಂಡೆ ಎಳೆದುಕೊಂಡೆ ಹೋಗು, ಪೋಲೀಸರು arrest ಮಾಡಿ ನಿನ್ನನ್ನು ಕರೆದುಕೊಂಡು ಹೋಗುತ್ತಿದ್ದಾರೆ' ಸರೂಗೆ ದಿಗ್ಭ್ರಮೆ! ಠಾಣೆಗೆ ಬಂದು ಸಹಿ ಮಾಡಬೇಕಾಗುತ್ತದೆ ಎಂದು ಪೋಲೀಸ್ ಹೇಳಿರಲಿಲ್ಲವೇ? ಹಾಗಾಗಿ ಪ್ರಾಮಾಣಿಕತೆಯಿಂದಲೇ ತಾನು ಇಲ್ಲಿಯವರೆಗೆ ಬಂದಿರಲಿಲ್ಲವೇ? ಆ ಸನ್ನಿವೇಶದಲ್ಲೂ ಸರೂಳ ವ್ಯಕ್ತಿತ್ವ ಹುಡಿ ಹುಡಿಯಾಗದಂತೆ ಕಾಪಾಡಿದ್ದಿದ್ದರೆ ಬಹುಶಃ ಪ್ರಾಮಾಣಿಕತೆ, ಆದರ್ಶಗಳ ಬಗ್ಗೆ ಆಕೆಗಿದ್ದ ನಂಬಿಕೆ/ವಿಶ್ವಾಸ. ಸಸ್‌ಪೆನ್‌ಷನ್ ಆರ್ಡರ್ ತೆಗೆದುಕೊಂಡಾಕ್ಷಣ ಬೇಲ್ ತೆಗೆದುಕೊಳ್ಳಬೇಕು ಎಂಬ ವ್ಯವಹಾರ/ಕಾನೂನಿನ ಬಗ್ಗೆಯೇ ಮುಗ್ಧವಾಗಿರುವ ಸರೂ ಇನ್ನು ಬ್ಯಾಂಕಿನಲ್ಲಿ ಕೋಟ್ಯಾಂತರ ರೂಪಾಯಿ ದುರ್ವ್ಯವಹಾರ ತನ್ನ ಹಿಂದೆ ನಡೆದಿದೆ ಎಂಬುದನ್ನು ಹೇಗೆ ತೆಗೆದುಕೊಂಡಾಳು? ತಮ್ಮ ಬೆನ್ನ ಹಿಂದೆ ಬ್ಯಾಂಕಿನಲ್ಲಿ ನಡೆದಿರುವ ಕೋಟ್ಯಾಂತರ ರೂಪಾಯಿ ಅವ್ಯವಹಾರ, ಪ್ರಾಪಂಚಿಕ ವ್ಯವಹಾರದ ಮೋಸ/ತಗಾದೆಗಳಿಗೆ ತಪ್ಪು ಮಾಡದ ತಾವೆಲ್ಲರೂ ಭಾಗಿಗಳಾಗಲೇ ಬೇಕಾಗಿದೆ ಎಂಬಷ್ಟು ವಿವರದ ಅರಿವು ಸರೂಗೆ ಸ್ಪಷ್ಟವಾಗುವ ಮೊದಲೇ ಸರೂಳನ್ನು ಬಂಧಿಸಲಾಗಿತ್ತು. ಜೊತೆಗೆ ರಿಮ್ಯಾಂಡ್ ಹೋಂಗೆ ಕೂಡಾ ಕಳಿಸಲಾಗಿತ್ತು. 'ರಿಮ್ಯಾಂಡ್ ಹೋಂ'ನಲ್ಲಿ ವ್ಯಾನ್‌ನಲ್ಲಿದ್ದ ಪೋಲೀಸ್ ತಿನ್ನು ತಿನ್ನು ಎಂದು ಒತ್ತಾಯಿಸಿದ್ದ ಬ್ರೆಡ್‌ನ್ನು ಸರು ಕಣ್ಣೆತ್ತಿಯೂ ನೋಡಿರಲಿಲ್ಲ. 'ನೀನು ಒಳ್ಳೆ ಮನೆ ಹುಡುಗಿ ತರಹ ಕಾಣ್ತೀಯ, ನಾವು ಕರೆದುಕೊಂಡು ಹೋಗೋ ಜಾಗದಲ್ಲಿ ನೀನು ಏನೂ ತಿನ್ನಲ್ಲ' ಎಂದು ಆತ ಬ್ರೆಡ್‌ನ್ನು ಬ್ಯಾಗೊಳಗೆ ತೂರಿಸಿದ್ದ. ಕಲಾಸಿಪಾಳ್ಯಂನ ಸೂಳೆಯರೆಲ್ಲ ಬೆತ್ತಲೆ, ಅರೆ ಬೆತ್ತಲೆಯಾಗಿ ತನ್ನನ್ನು ಮಿಕಿ ಮಿಕಿ ನೋಡಿದಾಗ ಸರೂಳ ಜೀವಶಕ್ತಿಯೆಲ್ಲಾ ಕುಂದಿ ಹೋಗಿತ್ತು. ಬ್ಯಾಂಕಿನಲ್ಲಿ ಆಗಿ ಹೋದ ಒಂದೊಂದೇ ಘಟನೆಗಳು ಈಗ ಅವಳ ಸುತ್ತ ಸುತ್ತ ತೊಡಗಿದ್ದವು. ತಾನೇನು ಅಂಕೆ/ಸಂಖ್ಯೆ ಬರೆದಿದ್ದನೋ? ಅದರ ಹಿಂದೆ ಮ್ಯಾನೇಜರ್, ಕ್ಯಾಷಿಯರ್ ಇನ್ನೇನು ಸೇರಿಸಿದರೋ? ಬ್ಯಾಂಕನ್ನು ಬರಿದಾಗಿಸುವುದಿರಲಿ, ಬ್ಯಾಂಕ್‌ನಲ್ಲಿ ಕೆಲಸ ಮಾಡುವ

ಪ್ರತಿಯೊಬ್ಬರನ್ನೂ ಬೀದಿಗೆ ತಂದಿದ್ದರು. ಈ ಕಲಾಸಿಪಾಳ್ಯಂನ ಸೂಳೆಯರು ತಮ್ಮ ದೇಹ ಮಾತ್ರ ಮಾರಿಕೊಂಡು ಬದುಕುತ್ತಾರೆ. ಆ ಮಟ್ಟಿಗೆ ಅವರು ಪ್ರಾಮಾಣಿಕರೇ. ಆದರೆ ತಮ್ಮ ಮ್ಯಾನೇಜರ್ ಹಾಗೂ ಕ್ಯಾಷಿಯರ್? ದೇಹ/ಮನಸ್ಸು ಎರಡೂ ಮಾರಿಕೊಂಡು ಕೋಟ್ಯಾಂತರ ರೂಪಾಯಿ ನುಂಗಿ ತಮ್ಮಂಥ ಪಾಪದವರನ್ನೆಲ್ಲ ಎತ್ತಿ ಸಮುದ್ರಕ್ಕೆಸೆದಿದ್ದಾರೆ. ತಾನು ಕಂಡೇ ಇರದ ಜಗತ್ತಿಗೆ ನೂಕಲ್ಪಟ್ಟಾಗ ಸರೂ ದಿಗ್ಭ್ರಮೆಯಿಂದ ಸುತ್ತ ನೋಡಿದ್ದಳು. ಅಲ್ಲಿರುವವರೆಲ್ಲಾ ಸುತ್ತ ನೆರೆಯುತ್ತಾರೆ. 'ಎಲ್ಲಿ ಸಿಕ್ಕಿ ಹಾಕಿಕೊಂಡೆ?' ಎಂದು ವಿಚಾರಿಸಿದಾಗ ಸರೂ ಭಯದಿಂದ ನಡುಗಿದ್ದಳು. 'ಒಳಕ್ಕೆ ಹೋದ ಮೇಲೆ ಸಿಕ್ಕಿ ಹಾಕಿಕೊಂಡ್ಯಾ, ಮೊದಲೇನಾ?' ಎಂದೊಬ್ಬಳು ಕೇಳಿದಾಗ ಅರ್ಥವಾಗದೇ ಮಿಕಿ ಮಿಕಿ ನೋಡಿದ್ದಳು, ತನ್ನ ಪ್ರಪಂಚದ ಸತ್ಯಗಳೇನು? ಇವರ ಪ್ರಪಂಚದ ಸತ್ಯಗಳೇನು? ಯಾವ ನೆಲೆಯಲ್ಲಿ ನಿಂತು ಈ ಜಗತ್ತು ನೋಡಬೇಕು? ಮೈಯಿನಲ್ಲಿ ಮಣ ಮಣ ಕೊಳೆ ತುಂಬಿಕೊಂಡಿರೋ ಇವರ ಮೈಯನ್ನೆಲ್ಲಾ ಸೋಪು ಹಾಕಿ ಉಜ್ಜಬೇಕು ಎನ್ನುವ ಬಯಕೆಯೊಂದು ಆಕೆಯಲ್ಲಿ ಹರಿದು ಹೋಗುತ್ತದೆ. ಹೇನುಗಳು ತಪ ತಪ ಎನ್ನುತ್ತವೆ. ಎಲ್ಲ ಬಾಚಿ ಗೀರಬೇಕು ಅನಿಸುತ್ತದೆ. ಗಿರಾಕಿಯೊಬ್ಬ ಕೊಡಿಸಿದ ಪಲಾವ್ ತಿನ್ನುವ ಮೊದಲೇ ತಾನು ಸಿಕ್ಕಿ ಹಾಕಿಕೊಂಡೆ ಎನ್ನುವವಳಿಗೆ ಸಣ್ಣಕ್ಕಿಯಲ್ಲಿ ಮಾಡಿದ ಪಲಾವ್ ಮಾಡಿ ಬಡಿಸಬೇಕು ಎನಿಸುತ್ತದೆ. ಸರೂ ತಮ್ಮ ತರಹದ ಗಿರಾಕಿಯಲ್ಲ ಎನಿಸಿದಾಗ ಮತ್ತೊಬ್ಬಳು ತಾನು ಕಳ್ಳತನ ಗಿಳ್ಳತನ ಮಾಡೋರಲ್ಲ ಎನ್ನುತ್ತಾಳೆ. ಸರೂಗೆ ಪಿಚ್ ಅನಿಸುತ್ತದೆ. ಮೈ-ಮಾರಿಕೊಂಡು ಬದುಕುವ ಇವರಿಗೆ ಆ ನಿಯತ್ತುಗಳಾದರೂ ಇವೆ. ತನ್ನ ಬದುಕನ್ನೇ ತಿರುಗು-ಮುರುಗಾಗಿಸಿದವರಿಗೆ? ಸರೂ ಊಟದ ತಟ್ಟೆಯತ್ತ ಕಣ್ಣಾಡಿಸಲಿಲ್ಲ. ಸುಮ್ಮನೇ ಮಂಡಿಗೆ ತಲೆಯೂರಿ ಕುಳಿತುಬಿಟ್ಟಿದ್ದಳು. ನಿದ್ರೆ? ಒಂದು ದಿನದ ಅಂತರದಲ್ಲಿ ಜೀವನದಲ್ಲೆಷ್ಟು ವ್ಯತ್ಯಾಸ? ಅಲ್ಲಿದ್ದವರೆಲ್ಲ ಕ್ಷಣ ಕ್ಷಣಗಳ ಅಂತರದಲ್ಲಿ ಈಕೆ ಗಿರಾಕಿಯಲ್ಲ ಎಂಬುದನ್ನು ಅರಿಯತೊಡಗಿದಂತೆ ನಯವಾಗತೊಡಗಿದ್ದರು. ಮೂತ್ರ ವಿಸರ್ಜನೆಗೆಂದು ಹೇಳಿದಾಗ ಕರೆದೊಯ್ದಿದ್ದರು. ಅವರಲ್ಲೊಬ್ಬಾಕೆ ಮಲಗಲು ಜಾಗ ತೋರಿಸಿದ್ದಳು. ಸುಮ್ಮ ಸುಮ್ಮನೆ ಸರೂವನ್ನು ಕೆದುಕುವವರಿಗೆ 'ಬಿಡ್ರೇ ಆಕೀನಾ' ಅಂತ ಗದರಿಸಿದವಳೂ ಇದ್ದು. ಇದೆಲ್ಲಾ ನಡೆದದ್ದು ಸುಳ್ಳು ಎನ್ನುವ ಮನಸ್ಸು, ಸತ್ಯ ಎನ್ನುವ ವಾಸ್ತವ, ಸತ್ಯ/ಸುಳ್ಳು ವಾಸ್ತವ ಎಲ್ಲಾ ಭ್ರಮೆ, ಗೋಜಲು, ಇದೆಲ್ಲಾ ಕನಸು, ಕನಸೇ. ಹಿಂದಿನ ದಿನ ಮಾಮೂಲಿಯಾಗಿ ಎದ್ದು, ಸಿದ್ಧಳಾಗಿ ಬ್ಯಾಂಕಿಗೆ ಹೋಗಿದ್ದಳು. ಈ ದಿನ ಇಲ್ಲಿ - ಇವರ ಮಧ್ಯೆ ಒಂದೇ ದಿನದ ಅಂತರದಲ್ಲಿ ಎರಡು ಭಿನ್ನ ಜಗತ್ತುಗಳ ಮಧ್ಯೆ ತಾನು ನಿಂತಿದ್ದೇನೆ. ಇವರೆಲ್ಲರ ಮಧ್ಯೆ 'ತಾನು ಯಾರು?' ಎಂಬ ಪ್ರಶ್ನೆ ತೀವ್ರವಾಗಿ ಕಾಡತೊಡಗಿದಾಗ ಆಕೆಯ ಜಂಘಾಬಲವೇ ಉಡುಗಿ ಹೋಗ ತೊಡಗಿತ್ತು. 'ತಾನು ಯಾರು?' ಎಂಬ ತಾತ್ವಿಕ ವಿಚಾರದ ನಡುವೆ ವ್ಯಾವಹಾರಿಕ ಪ್ರಪಂಚದ, ಭಾವನೆಗಳೇ ಇಲ್ಲದ ಪ್ರಪಂಚದ ಕ್ರೂರತನ ಆಕೆಯಲ್ಲಿ ಎದ್ದು ಕಾಣಿಸತೊಡಗಿದ ಹಾಗೆಲ್ಲ ಆಕೆಯ ಮೈಯಲ್ಲಿ ನಡುಕ ಹುಟ್ಟತೊಡಗಿತ್ತು. ತನ್ನೆಲ್ಲಾ ಆದರ್ಶ, ಅಂತರಾಳವನ್ನೇ ಸುಳ್ಳು ಮಾಡಿಬಿಡುವ ಈ ವ್ಯಾವಹಾರಿಕ ಪ್ರಪಂಚಕ್ಕೆ ಧಿಕ್ಕಾರವಿರಲಿ, ಶಾಪವಿರಲಿ ಎಂದು ಕೂಗಿ ಹೇಳಬೇಕೆನ್ನುವಷ್ಟು ಸಿಟ್ಟು ಸರೂಗೆ ಬರತೊಡಗಿತ್ತು. ಹಣ ತಿಂದು ತೇಗಿದವರು ಯಾರೋ? ಈ ಪಾಪದ ಕೂಪದಲ್ಲಿ ಬಿದ್ದು ಸಾಯುವವರು ತಮ್ಮಂತಹ ಪಾಪದವರು ಎಂದೆಲ್ಲಾ ನೆನಪಿಸಿಕೊಳ್ಳುವಾಗ ಉದ್ವೇಗದ ಜೊತೆಗೆ ಆವೇಶವೂ ಮೈಯಲ್ಲಿ ಸೇರಿಕೊಳ್ಳತೊಡಗಿತ್ತು. ಬೀದಿಯಲ್ಲಿ ನಿಲ್ಲಿಸಿ ಚಪ್ಪಲಿಯಿಂದ ಹೊಡೆದು, ಕ್ಯಾಕರಿಸಿ ಉಗುಳಿ, ಕತ್ತು ಹಿಸುಕಿ ಸಾಯಿಸಿಬಿಡಬೇಕೆಂಬ ಆವೇಶ. ತನ್ನ ಅನ್ನ ತಾನೇ ದುಡಿದು, ಸಂಪಾದಿಸಿ ತಿನ್ನಬೇಕು ಎನ್ನುವ ತನ್ನ ಆದರ್ಶ, ಧ್ಯೇಯದ ಸ್ವಾತಂತ್ರ್ಯವನ್ನೇ ಕಸಿದುಕೊಂಡುಬಿಟ್ಟರು ಪಿಶಾಚಿಗಳು ಎಂದು ಏನೇನೋ ಬಡಬಡಿಸತೊಡಗಿದ್ದಳು. ಮೂಲೆಯೊಂದರಲ್ಲಿ ಕುಳಿತು ಕತ್ತಲೆ ಕೋಣೆಯ ಮೇಲ್ಭಾಗದ ಕಂಡಿಯಲ್ಲಿ ನಕ್ಷತ್ರಗಳೇನಾದರೂ

ಕಾಣಬಹುದೇನೋ ಎಂದು ನೋಡಿದರೆ ಸರೂಗೆ ಕಾಣಿಸುವುದೆಲ್ಲಾ ಅಮಾವಾಸ್ಯೆಯ ನೆರಳೇ. ತಾನ್ಯೇಕೆ ಹೀಗಾದೆ? ಎದೆ ತುಂಬಿ ಪ್ರೀತಿಸುವ ಅಪ್ಪ ಇಲ್ಲವೇ? ಕಣ್ಣೀರಿಗೆ ಕಣ್ಣೀರಾಗಿ ಕರಗುವ ಗೆಳತಿ/ಗೆಳೆಯರಿಲ್ಲವೇ? ತಾನ್ಯೇಕೆ ಹೀಗೆ ಯಾರೂ ಇಲ್ಲದವರಂತೆ ದಿಕ್ಕಿಲ್ಲದ ಅನಾಥೆಯಂತೆ, ತಬ್ಬಲಿಯಂತೆ ಕತ್ತಲ ಮೂಲೆಯಲ್ಲಿ ಕುಳಿತಿದ್ದೇನೆ? ಯಾವ ದುರ್ವಿಧಿ ತನ್ನನ್ನು ಅರಸಿಕೊಂಡು ಬಂತು? ಪೋಲೀಸರ ರಾಜಕೀಯ ಚಕ್ರದಲ್ಲಿ ತಾನು ಸಿಲುಕಿ ಹಾಕಿಕೊಂಡದ್ದು ಏಕೆ? ಯಾರಿಗೆ ತಾನು ಕೇಡು ಬಯಸಿದ್ದೆ? ಇದು ಪ್ರಾರಂಭವಷ್ಟೇ. ಈ ಪೋಲೀಸ್ ರಾಜಕೀಯ ಇನ್ನು ಎಲ್ಲೆಲ್ಲಿಗೆ ತನ್ನನ್ನು ಕರೆದೊಯ್ಯುತ್ತದೆಯೋ? ಇದ್ದಕ್ಕಿದ್ದ ಹಾಗೆ ಈ ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಈ ಗಂಡಸರ ವ್ಯವಹಾರದ ಪ್ರಪಂಚದಲ್ಲಿ ತಾನೊಂದು 'ಪಪೆಟ್' ಮಾತ್ರ ಎನಿಸುತ್ತದೆ. ಪಪೆಟ್ ಹಿಡಿದು ಎಷ್ಟೋ ಜನರ, ಮಕ್ಕಳು ಹೆಂಗಸರ ಸ್ಥಿತಿಯನ್ನು ವಿವರಿಸಿ, ಗೊಂಬೆಗಳ ಕುಣಿಸಿ ನಕ್ಕಿದ್ದ, ಗಂಭೀರವಾಗಿ ವಿವರಿಸಿದ್ದ ತಾನೇ ಇಂದು ಬ್ಯಾಂಕ್ ಅಧಿಕಾರಿಗಳ, ಪೋಲೀಸ್ ಅಧಿಕಾರಿಗಳ ರಾಜಕೀಯದಲ್ಲಿ ಒಂದು ಗೊಂಬೆ. ಗೊಂಬೆಗಳಿಗೆ ಸೂತ್ರಧಾರಿಯಾಗಿದ್ದ ತಾನು ಇಂದು ಯಾವನೋ ಕೈಯಲ್ಲಿ, ಯಾವುದೋ ರಾಜಕೀಯದ ಸೂತ್ರಧಾರಿಗಳ ಕೈಯಲ್ಲಿ ಬೊಂಬೆ ಮಾತ್ರ. ನಮ್ಮ ಜೀವನಕ್ಕೆ ನಾವೇ ಸೂತ್ರಧಾರಿಗಳಾಗಿರಬೇಕು ಎಂದು ಪ್ರತಿಯೊಂದು 'ಪಪೆಟ್ ಶೋ'ನಲ್ಲಿ ಮಾತಿನ ಮೊದಲಲ್ಲಿ ಹೇಳುತ್ತಿದ್ದ ತಾನು ಇಂದು ಏನಾಗಿದ್ದೇನೆ? ಕೋಟ್ಯಾಂತರ ರೂಪಾಯಿ - ಎಣಿಸುವುದಿರಲಿ, ಕೋಟಿಯ ಮುಂದೆ ಎಷ್ಟು ಸೊನ್ನೆಗಳು ಬಂದಾವು ಎಂದು ತಲೆ ಕೆಡಿಸಿಕೊಂಡ ಹುಡುಗಿಯೇ ತಾನಲ್ಲ! ಸೊನ್ನೆಗಳ ಎಣಿಸಲೇ ಬೇಸರವಿರುವ ತನಗೆ ಕೋಟ್ಯಾಂತರ ರೂಪಾಯಿ ವ್ಯವಹಾರದ ಮಜಲುಗಳಾದರೂ ತಿಳಿದೀತೆ? ಬಾಡಿಗೆ ಕೊಟ್ಟುಕೊಂಡು, ನೆಮ್ಮದಿಯಿಂದ ಉಂಡು, ಮಲಗುವ ತನ್ನ ನೆಮ್ಮದಿ, ಬದುಕಿನ ಹಕ್ಕನ್ನೂ ಈ ಸಮಾಜ ನನ್ನಿಂದ ಹೇಗೆ ಕಸಿದುಕೊಂಡುಬಿಟ್ಟಿತು? ಏನು-ಎತ್ತ ಎನ್ನುವುದರಲ್ಲೇ ಸಸ್‌ಪೆನ್‌ಷನ್ ಆರ್ಡರ್. ತಕ್ಷಣ ಜಾಮೀನು ತೆಗೆದುಕೊಳ್ಳಬೇಕೆಂಬ ಸತ್ಯ ಕೂಡಾ ತನಗೆ ತಿಳಿಯದು.

ಬ್ಯಾಂಕಿನಲ್ಲಿ ಕೆಲಸ ಸಿಕ್ಕ ದಿನ, ಬ್ಯಾಂಕಿಗೆ ಹೊರಟಾಗ ತಂದೆಯ ಕಾಲಿಗೆರಗಿ ನಮಸ್ಕರಿಸಿದ್ದು ಸರೂಗೆ ನೆನಪಿದೆ. 'ಇನ್ನೊಬ್ಬರ ಬದುಕುವ ಹಕ್ಕಿಗೆ, ಹಣಕ್ಕೆ ಮೋಸ ಮಾಡಬಾರದಮ್ಮ! ನಾನು ಯಾವ Black Mark ಇಲ್ಲದೇ ಬದುಕಿದ್ದೇನೆ. ನೀನೂ ಹಾಗೇ ಇರಬೇಕಮ್ಮ' ಎಂದಿದ್ದರು ತಂದೆ. ಎದೆಯಾಳದಲ್ಲಿ ಹೊಕ್ಕಿದ್ದವು ಮಾತುಗಳು. ಯಾರಿಗೂ ಮೋಸ ಮಾಡಬಾರದು, ಅನ್ನ ಕೊಡುವ ಉದ್ಯೋಗ, ಪ್ರಾಮಾಣಿಕವಾಗಿ ಇರಬೇಕು. ಈ ವಾಕ್ಯಗಳು ಬರಿಯ ಮಾತಿನ ವಾಕ್ಯಗಳಾಗಿರಲಿಲ್ಲ. ಸರೂಳ ಹೃದಯದ ವಾಕ್ಯಗಳಾಗಿದ್ದವು. ತಾನು ನಂಬಿದ್ದ ಪ್ರಾಮಾಣಿಕ ಮೌಲ್ಯಗಳಿಗೆ ತನಗೆ ಸಿಕ್ಕ ಬೆಲೆಯಾದರೂ ಏನು? ವಿಶ್ವಾಸ/ಪ್ರೀತಿಗಳನ್ನು ವ್ಯಾವಹಾರಿಕ ಪ್ರಪಂಚದಲ್ಲಿ ತೊಡಗಿಸಲು ಸಾಧ್ಯ, ಇವು ವ್ಯಾವಹಾರಿಕ ಪ್ರಪಂಚದಲ್ಲಿಯೂ ಹುದುಗಿರುತ್ತವೆ ಎಂದು ತಾನು ನಂಬಿದ್ದೆಲ್ಲಾ ಭ್ರಮೆಯೇ? ಹೀಗೆ ನಂಬಿದ್ದ ತಾನೋರ್ವ ಪಾಪದ ಹುಡುಗಿಯೇ? ತಾನು ಬರೆದ ಅಂಕೆಗಳ ಹಿಂದೆ-ಮುಂದೆ ಇನ್ನ್ಯಾರಾದರೂ ಅಂಕೆ ಬರೆದು ತನ್ನ ಬದುಕಿನ ಹಕ್ಕಿಗೇ ಕತ್ತರಿ ಹಾಕುತ್ತಾರೆ ಎಂದು ಎಂದಾದರೂ ಅರಿತಿದ್ದೇನೇ ನಾನು? ಹಾಗಿದ್ದರೆ ವಿಶ್ವಾಸ/ಪ್ರೀತಿ/ನಂಬಿಕೆ ಇವುಗಳೆಲ್ಲಾ ಈ ವ್ಯಾವಹಾರಿಕ ಪ್ರಪಂಚದಲ್ಲಿ ಲೆಕ್ಕಕ್ಕಿರದ ಮೌಲ್ಯಗಳೇ? ದೇವರೇ ನನ್ನ ಬಾಳಿನಲ್ಲಿ ಹೀಗೇಕೆ ಆಟವಾಡಿದೆ? ಯಾರಿಗೆ ಎರಡೆಣಿಸಿದ್ದೆ ನಾನು? ಯಾರಿಗೆ ದ್ರೋಹ ಬಗೆದಿದ್ದೆ? ಬಿಳಿಯ ಸೀರೆ ಉಟ್ಟುಕೊಂಡು, ನೆರೆ ಹೊರೆಯವರಿಗೆಲ್ಲಾ ದೊಡ್ಡಕ್ಕನಂತೆ ನಿಂತ ತಾಯಿ, ನಿತ್ಯ ಆಶ್ರಮಕ್ಕೆ ಹೋಗಿ ಬರುತ್ತಿದ್ದ ತಾಯಿಯ ಜೀವನದಿಂದ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ತಾನು ಕಲಿತದ್ದೆಲ್ಲಾ ಈ ಪ್ರಪಂಚದಲ್ಲಿ ಉಪಯೋಗಕ್ಕೆ ಬರದಂತಹುಗಳೇ? ತಾಯಿಯ ಸರಳ ಜೀವನ, ವಿಶ್ವಾಸ, ಪ್ರೀತಿ, ನಂಬಿಕೆ,

ತಂದೆಯ ಆದರ್ಶ, ಪ್ರಾಮಾಣಿಕ ಮಾತುಗಳನ್ನು ಎದೆಯಲ್ಲಿ ತುಂಬಿಕೊಂಡ ತನಗೆ ಸಿಕ್ಕಿದ್ದಾದರೂ ಏನು? ಕತ್ತಲ ಕೋಣೆಯಲ್ಲಿ ಕೂತುಕೊಂಡು ಎಲ್ಲಿಯೋ ಮಿಕಿ ಮಿಕಿ ನೋಡುತ್ತೇನೆ, ಬಡ ಬಡಿಸುತ್ತೇನೆ, 'ತಾನು ಯಾರು?' ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದೇನೆ. ಬ್ಯಾಂಕಿನ ಅಂಕಿ ಅಂಶಗಳು ಮರೆತು ಹೋಗುತ್ತಲೇ ನೆನಪಿಗೆ ಬರುವುದು ಜೀಪಿನಲ್ಲಿ ಕರೆದುಕೊಂಡು ಬಂದ ಪೋಲೀಸ್, ಪೋಲೀಸ್ ರಾಜಕೀಯ, ಬ್ಯಾಂಕ್ ವ್ಯವಹಾರ, ರಿಮ್ಯಾಂಡ್ ಹೋಂ, ಕತ್ತಲೆಯಲ್ಲಿ ದಿಟ್ಟಿಸಿದರೂ ಕಾಣಿಸದೇ ಹೋದ ನಕ್ಷತ್ರಗಳು - ಇವೆಲ್ಲದರ ನಡುವೆ 'ತಾನು ಯಾರು?' ಎಂಬ ಪ್ರಶ್ನೆಗೆ ಉತ್ತರ ಜಟಿಲವಾಗುತ್ತಾ ಹೋಗುತ್ತದೆಯೇನೋ ಎಂದು ಯೋಚಿಸುತ್ತಾ ಕುಳಿತುಕೊಳ್ಳುತ್ತಾಳೆ ಸರೂ.

ಗೆಳತಿಯ ಮನೆಯಲ್ಲಿ ತಿಳಿದ ಸರೂಳ ಬದುಕಿನ ಆಟ ಗಂಗಾಳನ್ನು ಗರಬಡಿಸಿತ್ತು. ಒಬ್ಬರ ಬದುಕನ್ನೇ ಶಾಟರ್ ಮಾಡಿಬಿಡುವ, ಕಬಳಿಸಿ ಹಾಕಿಬಿಡುವ ಬದುಕಿನ ಸಂದರ್ಭ. ಜಾಮೀನು ತಕ್ಷಣವೇ ಅವರ ತಂದೆ ಕೊಟ್ಟದ್ದರಿಂದ ಸರೂ ರಿಮ್ಯಾಂಡ್ ಹೋಂನಿಂದ ಈಚೆ ಬಂದಿದ್ದಳು. ಸರೂ ಆಗಲೇ ಅರ್ಧ ಜರ್ಝರಿತಳಾಗಿ ಗಂಗಾಳ ಕಣ್ಣಿಗೆ ಕಂಡಿದ್ದಳು. ಆದರೂ ದಿನ ಕಳೆದಂತೆ ನಿಧಾನವಾಗಿ ಸರೂ ಸನ್ನಿವೇಶವನ್ನು ಎದುರಿಸುವಲ್ಲಿ, ಅದನ್ನು ಪೂರ್ತಾ ಕೈಗೆ ತೆಗೆದುಕೊಳ್ಳುತ್ತಾ ಹೋದ ರೀತಿಯಲ್ಲಿ ಗಂಗಾ ಆಶ್ಚರ್ಯಪಟ್ಟಿದ್ದಳು. ಭಾವನಾತ್ಮಕತೆಯ ವ್ಯಕ್ತಿತ್ವದ ಒಳಗೇ ಅಡಕವಾಗಿರುವ strengthಗಳ ಬಗ್ಗೆಯೂ ಗಂಗಾಗೆ ಒಮ್ಮೊಮ್ಮೆ ಆಶ್ಚರ್ಯವೆನಿಸುತ್ತಿತ್ತು. ತಾನಾಗಿದ್ದರೆ ಕಂಬಳಿ ಹೊದ್ದು ಮಲಗಿಯೇ ಬಿಡುತ್ತಿದ್ದೆನೇನೋ ಎಂದು ಗಂಗಾ ಯಾವಾಗಲೂ ಯೋಚಿಸುತ್ತಿದ್ದಳು. ಪ್ರಾರಂಭದ ದಿನಗಳಲ್ಲಿ ಶಾಕ್‌ನಿಂದಾಗಿ ಜರ್ಝರಿತಳಾದರೂ ಒಂದೊಂದೇ ದಿನ ಕಳೆದಂತೆ ತನ್ನೊಳಗಿನ strengthಗಳನ್ನು ಮರಳಿ ಪಡೆಯುವುದು ಆಕೆಗೇ ಅವಶ್ಯಕವಾಗಿತ್ತು.

ಒಂಟಿಯಾಗಿದ್ದೇ ಚೇತರಿಸಿಕೊಳ್ಳಲು ಹಲವಾರು ಬಾರಿ ಪ್ರಯತ್ನಿಸುವಳು. ಆಕೆಯ ಮನೆಯಿಂದ ದೂರವಿದ್ದ ಗಂಗೇನಹಳ್ಳಿಯ ನಿರ್ಜನ ಬೀದಿಯಲ್ಲಿ ಒಬ್ಬಳೇ ನಡೆದೂ, ನಡೆದೂ, ನಡೆದಿರುವ ಭೀಕರ ಘಟನೆಯನ್ನು ಅರಗಿಸಿಕೊಳ್ಳಲು ಪ್ರಯತ್ನಿಸುವಳು. ಮನೆಯಲ್ಲಿಯೇ ಇದ್ದು ನೀಟಾಗಿ ಅಡಿಗೆ/ತಿಂಡಿ ಮಾಡಿ ಅಪ್ಪನಿಗೆ ಪ್ರೀತಿಯಿಂದ ಬಡಿಸಿ, ನೆಮ್ಮದಿಯಿಂದ ಮಲಗಿ ಬಿಡುವುದರಿಂದ ಜೀರ್ಣಿಸಿಕೊಳ್ಳಲು ಪ್ರಯತ್ನಿಸುವಳು. ವ್ಯಾವಹಾರಿಕ ಜಗತ್ತಿನಲ್ಲಿ ನಂಬಿಕೆಗೆ/ವಿಶ್ವಾಸಕ್ಕೆ/ಪ್ರೀತಿಗೆ ಸ್ಥಾನ/ಅವಕಾಶ ಇಲ್ಲವೆಂಬ ಸತ್ಯ ಅಷ್ಟು ಭೀಕರವಾಗಿ ಅವಳ ಜೀವನದಲ್ಲಿ ರಾಚಿದ್ದರೂ ತಾನು ತನ್ನಲ್ಲಿರುವ ನಂಬಿಕೆ/ವಿಶ್ವಾಸ/ ಪ್ರಾಮಾಣಿಕತೆಯ ಮೌಲ್ಯಗಳನ್ನು ಕಳೆದುಕೊಳ್ಳಬಾರದೆಂದು ಗಟ್ಟಿಯಾಗಿ ಹೇಳಿಕೊಳ್ಳುವಳು. ಬೇಸರವಾದರೆ ಕವನ ಬರೆಯುವಳು. ತನ್ನೊಳಗಿನದನ್ನು ಅಭಿವ್ಯಕ್ತಿಸುತ್ತಾ ಭೀಕರ ಸತ್ಯಗಳನ್ನು ನಂಬಬಾರದು ಎಂದು ಡೈರಿಯಲ್ಲಿ ಬರೆದಿಟ್ಟುಕೊಳ್ಳುವಳು. ಎಲ್ಲಾ ಗೆಳತಿಯರು ಸೇರಿ ತರುತ್ತಿದ್ದ ಮಹಿಳಾ ಪತ್ರಿಕೆಗೆ ಈ ಎಲ್ಲಾ ಘರ್ಷಣೆಯ ಮಧ್ಯವೂ ಕೆಲಸ ಮಾಡುವಳು. ಪತ್ರಿಕೆಗೆ ಹಣ ಎತ್ತುವ ಕೆಲಸದಿಂದ ಬರೆಯುವ, ಓಡಾಡುವ, ಜನರನ್ನು ಸಂಪರ್ಕಿಸುವುದನ್ನೂ ಮಾಡುವಳು. ಪ್ರಕಟವಾಗುತ್ತಿದ್ದ ಅವಳ ಕವನಗಳಿಗೆ - 'ಇತ್ತೀಚಿಗೆ ನೀನು ಚೆನ್ನಾಗಿ ಕವನ ಬರೆಯುತ್ತಿದ್ದೀಯ' ಎಂದು ಅವಳ ಗೆಳತಿಯರೇ ಸುಮಾರು ಜನ ಹೇಳಿದ್ದರು. ಓದುಗರ ಪತ್ರಗಳೇನಕವು ಈ ಅಭಿಪ್ರಾಯವನ್ನೇ ಹೊತ್ತು ತಂದಿದ್ದವು. ಪತ್ರಿಕೆಗೆ ಹಣ ಎತ್ತಲು ಸಾಧ್ಯವಾಗದಿರುವಾಗ ಕೈಯಲ್ಲಿರುವ ಅಲ್ಪ-ಸ್ವಲ್ಪ ಹಣವನ್ನೇ ಹಾಕಿ ಅಕ್ಕಿ, ಬೇಳೆ, ಎಣ್ಣೆಗೆ ಎಂದು ಕೈಯಲ್ಲಿ ಕಾಸಿಲ್ಲದೇ ಒದ್ದಾಡುವಳು. ಹೀಗೆ ಬದುಕಿನಲ್ಲಿ ನಿತ್ಯ ನಿತ್ಯ ತಾಕತ್ತು ಪಡೆದುಕೊಳ್ಳುತ್ತಲೇ ಬಂಡವಾಳಶಾಹಿ ಪ್ರಪಂಚ, ಪಿತೃ ಪ್ರಾಧಾನ್ಯತೆಯ ಚಹರೆಗಳೊಂದಿಗೆ ತನ್ನಲ್ಲಿ ಮೂಡಿಸುತ್ತಿದ್ದ

ಅಸಹಾಯಕತೆಗಳನ್ನು ಗೆಲ್ಲಲು ಪ್ರಯತ್ನಿಸುವಳು. ಮ್ಯಾನೇಜರ್, ಕ್ಯಾಷಿಯರ್‌ರಂತವರು ತಿಂದುಹಾಕಿಬಿಟ್ಟ ತನ್ನ ಆತ್ಮಶಕ್ತಿಯನ್ನು ಮತ್ತೊಮ್ಮೆ ಪಡೆದುಕೊಳ್ಳಲು ಪ್ರಯತ್ನಿಸುವಳು. ಆದರೂ ಕೋರ್ಟು/ಕಛೇರಿ/ಪೋಲೀಸ್ ಸ್ಟೇಷನ್/ಲಾಯರ್ ಇಂತಹ ಸಮಸ್ಯೆಗಳು ರಾಜಕೀಯ ರೂಪ ಪಡೆದುಕೊಂಡು ಸರಪಳಿ/ಸರಪಳಿಯಾಗಿ ಸುತ್ತಿಕೊಂಡಾಗ ಮನಸ್ಸು ಒಡೆದು ಒಡೆದು ಛಿದ್ರವಾದಂತೆ ಕಾಹಿಲೆ ಬಿದ್ದುಬಿಡುವಳು. ಹೀಗೆ ಸರೂ ಕಾಯಿಲೆ ಬೀಳುತ್ತಿದ್ದುದು ಎಷ್ಟೋ ಸಲ. ಅದು ಅವಳ ದೇಹಕ್ಕೆ ಸಂಬಂಧ ಪಡುವುದಕ್ಕಿಂತ ಹೆಚ್ಚಾಗಿ ಮನಸ್ಸಿಗೇ ಸಂಬಂಧಪಟ್ಟದ್ದೆಂದು ಗಂಗಾ ಯಾವಾಗಲೂ ಅಂದುಕೊಳ್ಳುವಳು. ಈ ರೀತಿಯ ಮಾನಸಿಕ/ದೈಹಿಕ ಕಾಯಿಲೆ ಸರೂಳ ಗಟ್ಟಿತನವನ್ನು ಆಗಾಗ್ಗೆ ಕರಗಿಸಿಬಿಡುತ್ತಿದ್ದವು. ಮೈ ಪೂರ್ತಿ ಬಸವಳಿದ ಹಾಗೆ ದೈಹಿಕವಾಗಿ ತೀರಾ ದುರ್ಬಲಳಾಗಿ ಹಾಸಿಗೆ ಹಿಡಿದುಬಿಡುವಳು. ತನಗೆ ಏನೂ ಬೇಡ ಎನ್ನುವಳು. ಸುಮ್ಮ ಸುಮ್ಮನೇ ಎಲ್ಲರ ಮೇಲೆ ರೇಗುವಳು. ಅಪ್ಪ ಅವರಿವರನ್ನು ಹಿಡಿದು ಆ ಇಳಿ ವಯಸ್ಸಿನಲ್ಲಿ ಓಡಾಡುವುದನ್ನು ಕಂಡು ಸರೂಗೆ ಕುತ್ತಿಗೆಗೆ ಬಂದ ಹಾಗೆ ಆಗುತ್ತಿತ್ತು. ಆಕೆಯ ಉದ್ಯೋಗಕ್ಕೆ ಕತ್ತರಿ ಹಾಕಿ, ಆಕೆಯ ಅನ್ನದ ಹಕ್ಕನ್ನು, ಆಕೆಯ ಬದುಕುವ ಹಕ್ಕನ್ನು ಕಸಿದುಕೊಂಡವರನ್ನು ಸುಮ್ಮನೇ ಬಿಡುವುದಿಲ್ಲ ಎಂಬ ಛಲದಿಂದ ಎಂಬಂತೆ ಓಡಾಡುತ್ತಿದ್ದರು. ಮಗಳು ಹುಷಾರಿಲ್ಲದೇ ಬೋರೆಂದು ಮಲಗಿ ಬಿಟ್ಟಾಗಲೆಲ್ಲಾ ಅಪ್ಪನಿಗೆ ಬೇಸರವಾಗುತ್ತಿದ್ದುದುಂಟು. ಆತನ ಪ್ರೀತಿ/ವಿಶ್ವಾಸದ ಮುಂದೆ ತನ್ನ ವ್ಯಕ್ತಿತ್ವ/ಅಹಂಕಾರದ ಧಿಮಾಕು ಮೂರು ಕಾಸಿನದೇನೋ ಎಂದು ಒಮ್ಮೊಮ್ಮೆ ಆಕೆಗೆ ಅನಿಸಿಬಿಡುತ್ತಿತ್ತು. ವಯಸ್ಸಿನ/ಮುಪ್ಪಿನ ಲೆಕ್ಕವನ್ನೂ ಮರೆತು ಸರೂಗೆ ಒಳ್ಳೆಯದಾಗಬೇಕೆಂದು ಓಡಾಡುವ, ಅವರಿವರನ್ನು ಭೇಟಿಯಾಗುವ ಮೂರು ಹೊತ್ತು ಅದೇ ಯೋಚನೆಯಲ್ಲಿಯೇ ಕಾಲ ಕಳೆಯುವ ಅಪ್ಪನ ಮುಂದೆ ತಾನೊಂದು ಕ್ಷುದ್ರ ಜಂತುವೇನೋ ಎಂಬ ಭಾವನೆ ಸರೂಳಲ್ಲಿ ಸುಳಿಯದಿರಲಿಲ್ಲ. ಸುಂದರವಾಗಿ ರಂಗೋಲಿ ಬಿಡುತ್ತಿದ್ದ ತಾಯಿಯಾದರೂ ಇದ್ದಿದ್ದರೆ ಆಕೆಯ ಮಡಿಲಲ್ಲಿ ಅತ್ತು ಎಲ್ಲವನ್ನೂ ಸಮಾಧಾನಿಸಿಕೊಳ್ಳಬಹುದಿತ್ತೇನೋ ಎನ್ನುವ ಕೊರಗು ಸರೂಳನ್ನು ಕಾಡಿದ್ದೂ ಈ ಸಂದರ್ಭಗಳಲ್ಲಿಯೇ. ರಂಗೋಲಿಯ ಎಳೆಗಳಲ್ಲಿ ಈಗ ತಾಯಿಯ ಪ್ರತಿಬಿಂಬವನ್ನು ಕಾಣುತ್ತಿದ್ದ ಸರೂ ತಾಯಿಯ ಬದುಕಿನಲ್ಲಿ ಸರಳವಾಗಿ ಹಾಸುಹೊಕ್ಕಿದ್ದ ನಂಬಿಕೆ/ಪ್ರೀತಿ/ವಿಶ್ವಾಸದಂತಹ ಎಳೆಗಳು ತನ್ನಿಂದ ದೂರವಾಗದಿರಲಿ ಎಂದುಕೊಳ್ಳುವಳು.

ಗಂಗಾ ಸರೂವನ್ನು ಈ ಸಂದರ್ಭದಲ್ಲಿ ಹತ್ತಿರದಿಂದ ಕಂಡಿದ್ದಳು. ಆಕೆಯ ಬದುಕಿನ ಸತ್ಯಗಳಲ್ಲಿ ಗಂಗಾಗೆ ಅನೇಕ ಪ್ರಶ್ನೆಗಳು ಕಾಡತೊಡಗಿದ್ದವು. ಬದುಕು ಈ ಸಮಾಜದಲ್ಲಿ ಹೇಗೆ? ಎನ್ನುವ ಭೀಕರ ವೇದನೆಯೊಂದು ಮನದಾಳದಲ್ಲಿ ಮೂಡತೊಡಗಿತ್ತು. ನಾವು ಪ್ರಾಮಾಣಿಕವಾಗಿದ್ದೇವೆ ಎನ್ನುವುದೂ ಕೂಡಾ ನಮ್ಮ ಕೈಲಿ ಇರುವುದಿಲ್ಲ. ನಮ್ಮ ಬದುಕಿನ ಮೌಲ್ಯಗಳು, ಪ್ರಾಮಾಣಿಕತೆ, ವಿಶ್ವಾಸ/ನಂಬಿಕೆಗಳೂ ಕೂಡಾ ಇತರರ ಕೈಯಲ್ಲಿ ಆಟದ ಗೊಂಬೆಗಳಾಗಿಬಿಡುತ್ತವೆ. ಸರು ಮಾತನಾಡುವುದನ್ನು ಹಲವಾರು ಬಾರಿ ಗಂಗಾ ಕೇಳಿಸಿಕೊಂಡಿದ್ದಾಳೆ. ಆಕೆ ನಿಟ್ಟುಸಿರುಗೈಯುವುದನ್ನು, ಸಿಟ್ಟು ಮಾಡುವುದನ್ನು, ಕಾಯಿಲೆ ಬಿದ್ದುದನ್ನು, ಆವೇಶದಿಂದ ಮಾತನಾಡುವುದನ್ನು - ಇವೆಲ್ಲ ನೋಡಿದಾಗ ಆಕೆಗೆ ಭಯವಾಗುತ್ತಿತ್ತು. ಈ ವ್ಯಾವಹಾರಿಕ ಪ್ರಪಂಚದ ಒಂದೊಂದೇ ಎಳೆಗಳು ಬಿಡಿ ಬಿಡಿಯಾಗಿ ಬಿಚ್ಚಿಕೊಂಡಂತೆ ಅನ್ನಿಸತೊಡಗಿದ್ದವು. ಮನೆ ಕಟ್ಟಿಸುವ ಹಂತದಲ್ಲಿ ಸಿಮೆಂಟ್, ಇಟ್ಟಿಗೆ, ಕಬ್ಬಿಣ, ಮರ, ಜಲ್ಲಿ ಪ್ರತಿಯೊಂದು ಸಂದರ್ಭದಲ್ಲಿಯೂ ಗಂಗಾ ಗಂಡಸರ ನಡುವೆಯೇ ವ್ಯವಹರಿಸಬೇಕಿತ್ತು. ಈ ವ್ಯವಹಾರದಲ್ಲಿ ತಮ್ಮ ಭಾವಸಾತ್ಮಕತೆ ಕೆಲಸ ಮಾಡಲಾರದು ಎಂಬುದು ಆಕೆಗೆ ಕ್ರಮೇಣ ಅರ್ಥವಾಗತೊಡಗಿತ್ತು. ಶಂಕರ ತನ್ನ ಜೊತೆ ಇರದಿದ್ದರೆ ಮನೆ ಕಟ್ಟಿಸುವ ಇಡಿಯ ಸಂದರ್ಭದಲ್ಲಿ ತಾನೊಬ್ಬ ಸ್ಟುಪಿಡ್ ಹೆಂಗಸು ಎನ್ನುವ ಹಾಗೆ ಸುತ್ತಮುತ್ತಲಿನವರು ವ್ಯವಹರಿಸುತ್ತಿದ್ದರೋ ಏನೋ? ಹಾಗಿದೆ ಪ್ರಪಂಚದ ಸತ್ಯಗಳು. ಶಂಕರ ಮಧ್ಯೆ ಇದ್ದು ತನಗೆ

ಸಹಾಯವೆಸಗಿದ್ದ. ತಾಯಿಯ ಸಾವಿನ ಅಂಚಿನಲ್ಲಿ ಶಂಕರ ಕರಗಿ ಹೋಗಿದ್ದ. ಗಂಗಾ ತಮ್ಮ ಮನೆಯ ಹೆಣ್ಣು ಮಗು, ತಾನಲ್ಲದೇ ಆಕೆಗೆ ಬೆನ್ನಲ್ಲಿ ಬಿದ್ದವರ್‍ಯಾರಿದ್ದಾರೆ ಎನ್ನುವ ಭಾವ. ತಾಯಿಯ ಆಸೆಯಂತೆ ಗಂಗಾಳ ಮನೆ ಕಟ್ಟಿಸುವುದು, ಗಂಗಾ ಪೂರ್ತಿಯಾಗಿ ಬಾಳಿ ಬದುಕಬೇಕಾದ ಸೂರಿಗೆ ತಾನೇ ಆಸರೆಯಾಗಿ ನಿಲ್ಲುವುದು ತನ್ನ ಕರ್ತವ್ಯ ಎನ್ನುವ ಜವಾಬ್ದಾರಿ ಮನೋಭಾವ ಅವನಲ್ಲಿ ಹೆಚ್ಚು ಹೆಚ್ಚಾಗಿ ಮೂಡತೊಡಗಿತ್ತು. ವ್ಯಾವಹಾರಿಕ ಪ್ರಪಂಚದಲ್ಲಿ ಕಾಲಿಡಬೇಕೆಂದರೆ ಪ್ರಾಪಂಚಿಕ ಸತ್ಯಗಳು ತಮ್ಮ ಭಾವನಾತ್ಮಕ ಅಥವಾ ಮಾನಸಿಕ ಪ್ರಪಂಚದ ಸತ್ಯಗಳೊಡನೆ ತಾಳೆಯಾಗುವುದಿಲ್ಲ ಎನ್ನುವ ಭಾವ ಗಂಗಾಳಲ್ಲಿ ಅಗಾಧವಾಗಿ ಮೂಡತೊಡಗಿತ್ತು. ಸರೂಳ ಸಂದರ್ಭ ಇಂತಹ ಭಾವನೆಗಳನ್ನು ತೀವ್ರವಾಗಿಸುವುದರ ಜೊತೆಗೆ ವಿಚಿತ್ರವಾದ ದಿಗಿಲು, ಭಯ, ಆತಂಕಗಳು ಗಂಗಾಳಲ್ಲಿ ಮೂಡುತ್ತಾ ಹೋಗತೊಡಗಿದ್ದವು. ಎಲ್ಲಾ ಇದ್ದು ಏನೂ ಇಲ್ಲದವರಂತೆ ಥಕ್ಕನೇ ಒಂದು ದಿನ ಅನಾಥವಾಗಿ ಬೀದಿಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಎಷ್ಟು ಭೀಕರವಾದದ್ದು ಎಂದು ಗಂಗಾ ಯೋಚಿಸತೊಡಗಿದ್ದಳು. ಇಂತಹ ದಿಗಿಲು, ಆತಂಕ, ಭಯಗಳಲ್ಲಿ ಸಾವಿನ ಭಯ, ಅಮ್ಮನ ತಣ್ಣನೆಯ ದೇಹದ ಲಯಗಳು ಗಂಗಾಳನ್ನು ಇನ್ನಷ್ಟು ಬೆಚ್ಚಿಸುತ್ತಿದ್ದವು.

* * * *

ಭಾಗ - ೬

ಗಂಗಾ ಮಧುನೊಟ್ಟಿಗೆ ಹಂಚಿಕೊಂಡ ಜೀವನದ ಭಾಗದಿಂದ ಮಧು ಪುಲಕಿತನಾಗಿದ್ದ. ವ್ಯಾವಹಾರಿಕ ಪ್ರಪಂಚದಲ್ಲಿ ಇದ್ದುಕೊಂಡು ಭಾವನಾತ್ಮಕತೆಯ, ಮನಸ್ಸಿನಾಳದ ಸತ್ಯದ ಹರವುಗಳನ್ನು ಹುಡುಕುವ ಮೇಡಂ ಮನಸ್ಸಿನೊಳಗೆ, ಜೀವನದೊಳಗೆ ಅಡಗಿರುವ ಸತ್ಯ/ಭಾವನೆಗಳನ್ನು ನೋಡಿದರೆ ಒಮ್ಮೊಮ್ಮೆ ಮಧುಗೆ ದಿಗ್ಭ್ರಮೆಯಾಗುತ್ತಿತ್ತು. ಗಂಗಾ ಆತನಿಗೆ ಪರಿಚಯವಿದ್ದುದು ಮೇಡಂ ಆಗಿ ಮಾತ್ರ. ಯಾರೂ ಇರದ ಬೆಂಗಳೂರಿನಂತಹ ಊರಿನಲ್ಲಿ ಗಂಗಾ ತೋರಿಸುವ ವಿಶ್ವಾಸಕ್ಕೆ ಆತ ಋಣಿಯಾಗಿದ್ದ. ಅವರು ನೀಡುವ ಊಟ/ತಿಂಡಿ/ಕಾಫಿ/ವಿಶ್ವಾಸ ಇಂತಹ ಋಣಗಳನ್ನು ಹೇಗೆ ತೀರಿಸುವುದು ಎಂದು ಯಾವಾಗಲೂ ಆಲೋಚಿಸುತ್ತಿದ್ದ. ಗಂಗಾಳ ಬದುಕನ್ನು ಅವರಾಗಿಯೇ ಬಂದು ಹಂಚಿಕೊಂಡದ್ದನ್ನು ನೆನಸಿಕೊಂಡರೆ ಈಗಲೂ ಆತನಿಗೆ ರೋಮಾಂಚನವಾಗುತ್ತದೆ. ಆತನ ಬದುಕಲ್ಲಿ ಆತ ಕಂಡದ್ದು ಇಷ್ಟೇ - ಬಡತನ, ಸಾಗಿಸಲಾಗದ ವಿದ್ಯಾಭ್ಯಾಸ, ಒಂಟಿತನ, ಬರಡುತನ - ಈಗ ಕೆಲಸ. ಗಂಗಾ ಮೇಡಂ ಬದುಕಿನ ಹರವುಗಳು ಎಷ್ಟು ಎಂದು ಆಲೋಚಿಸುವಾಗಲೆಲ್ಲಾ ಅವರ ಬಗ್ಗೆ ಆತನಿಗೆ ಅಗಾಧವಾದ ಪ್ರೀತಿ ಎನಿಸುತ್ತದೆ. ಇಷ್ಟು ದಿನ ಏನನ್ನೂ ಹೇಳಿರದ ಗಂಗಾ ಮಧು ಮಂಗಳೂರಿಗೆ ವರ್ಗವಾಗಿ ಹೊರಟು ಹೋಗುತ್ತಾನೆ ಎಂದು ಗೊತ್ತಾದಾಗ ಬದುಕಿನ ಎಲ್ಲವನ್ನೂ ಹಂಚಿಕೊಂಡಿದ್ದರು. ತಾಯಿಯ ಸಾವು, ಜೀರ್ಣಿಸಿಕೊಳ್ಳಲಾಗದ ಸಾಧನಾಳ ಸಾವು, ಮನಸ್ಸಿನೊಳಗೇ ಬೇಯುವ ವ್ಯಾವಹಾರಿಕ ಪ್ರಪಂಚದ ಸತ್ಯಗಳು - ಹೀಗೆ ಗಂಗಾ ಮಾತನಾಡುತ್ತಾ ಹೋಗುವಾಗ ಅವರೊಳಗೆ ಮಡುಗಟ್ಟಿದ ನೋವಿನ ಸೆಲೆಗಳನ್ನು ಮಧು ನಿಧಾನವಾಗಿ feel ಮಾಡತೊಡಗಿದ್ದ. ವ್ಯಾವಹಾರಿಕ ಪ್ರಪಂಚದ ಮೂಲೆಯೊಂದರಲ್ಲಿ ಕುಳಿತು ಮನಸ್ಸಿನ ಪ್ರಪಂಚ ಅಗೆದೂ ಅಗೆದೂ ಅಲ್ಲಿಯ ಸತ್ಯಗಳನ್ನು ಹುಡುಕುವ ಗಂಗಾರ ಸ್ವಭಾವ ಎಷ್ಟೊಂದು ಬೆಚ್ಚಗೆ ಅನಿಸುತ್ತದೆ. ಗಂಗಾ ಧಿಡೀರನೆ ಬಂದು ಒಮ್ಮಿಂದೊಮ್ಮೆಗೆ ಸಮುದ್ರಕ್ಕೆ ಅಲೆಗಳು ಬಂದಂತೆ ಗಂಟೆಗಟ್ಟಲೇ ಕುಳಿತು ತಮ್ಮ ಬದುಕನ್ನು ಹಂಚಿಕೊಂಡುಬಿಟ್ಟಿದ್ದರು. 'ಮಧು ನೀವು ಇಲ್ಲಿಂದ ಹೋಗಿಬಿಡುತ್ತೀರ, ರಮೇಶ ಮನೆಯಲ್ಲಿ ಇರುವುದೇ ಕಡಿಮೆಯಾಗಿಬಿಟ್ಟಿದೆ. ಅವನ ಹಾಗೆ ಬೆಚ್ಚನೆಯ ಸ್ವಭಾವ ನಿಮ್ಮದು. ನನ್ನ ಯಾಂತ್ರಿಕ ಬದುಕಿನಲ್ಲಿ ಹರುಷ/ಆನಂದ ಕಂಡುಕೊಳ್ಳುತ್ತಿರುವುದೇ ನಿಮ್ಮ ಸಂಬಂಧದಿಂದ. ಈಗ ನೀವೂ ಹೊರಟು ಹೋಗಿಬಿಡುತ್ತೀರಿ. ಬದುಕಿನ ಕ್ಷಣಗಳು ಖಾಲಿ ಖಾಲಿ ಎನಿಸುತ್ತವೆ. ಹಾಗಾಗಿ ನೀವು ಹೊರಟು ಹೋಗುವ ಮುಂಚೆ ನಿಮ್ಮೊಟ್ಟಿಗೆ ನನ್ನ ಬದುಕನ್ನು ಹಂಚಿಕೊಂಡಿದ್ದೇನೆ'. ಹೀಗೆ ದಢಾ ಬಡ ಎಂದು ಹೇಳಿ ತಾಸುಗಟ್ಟಲೇ ಎಲ್ಲಿಯೋ ಕುಳಿತು, ಯಾರದೋ ಜತೆ ಮಾತನಾಡುವಂತೆ ಮಾತನಾಡಿ ಮನಸ್ಸನ್ನು ಹಗುರ ಮಾಡಿಕೊಂಡು ಗಂಗಾ ಹೊರಟು ಹೋಗಿದ್ದರು. ಗಂಗಾ ಮನಸ್ಸು ಹಗುರವಾಯಿತೋ ಏನೋ ಗೊತ್ತಿಲ್ಲ. ಅವರ ಎದುರಿಗೆ ತಾನಿದ್ದೆ ಮಾತ್ರ. ಅವರು ಯಾರೊಟ್ಟಿಗೆ ಮಾತನಾಡುತ್ತಿದ್ದರೋ, ವಿಶಾಲವಾದ ಸಮುದ್ರದ ಎದುರು ಕುಳಿತು ತಮಗೆ ತಾವೇ ಮಾತನಾಡಿಕೊಂಡಂತೆ. ಮನಸ್ಸು ಖಾಲಿ ಖಾಲಿಯಾದಂತೆ ಗಂಗಾ ಹೊರಟು ಹೋಗಿದ್ದರು. ಆದರೆ ತನ್ನ ಮನಸ್ಸು ಮಾತ್ರ ತುಂಬಿಕೊಂಡಂತೆ

ಅನಿಸುತ್ತದೆ. ತಾನು ಹೊರಟು ಹೋಗುತ್ತೇನೆ ಎಂಬ ದಿನದ ನಿರೀಕ್ಷೆಯಲ್ಲಿ ಮಧು ಬಹಳ ಉದ್ವೇಗದಿಂದಲೇ ಕಾಲ ಕಳೆಯತೊಡಗಿದ್ದ. ಗಂಗಾ ತನಗೆ ಯಾವ ಜನ್ಮದ ಸಂಬಂಧವೋ ಎನ್ನಿಸತೊಡಗಿತ್ತು. ಈಗ ಇದ್ದಕ್ಕಿದ್ದಂತೆ ಎಲ್ಲಾ ಬಿಟ್ಟು ಮಂಗಳೂರಿಗೆ ಹೊರಟು ಹೋದರೆ ಇಷ್ಟೊಂದು ವಿಶ್ವಾಸ/ಪ್ರೀತಿ ತೋರಿಸುವವರು ಯಾರು? ಗಂಗಾರ ಸ್ನೇಹದಿಂದಾಗಿ ಮಧು ಮನಸ್ಸಿನ ಮೂಲೆಯೊಂದರಲ್ಲಿ ಅಡಗಿದ್ದ ತನ್ನ ವ್ಯಕ್ತಿತ್ವದ ಕೀಳರಿಮೆಯೊಂದನ್ನು ನಿಧಾನವಾಗಿ ಕಳೆದುಕೊಳ್ಳತೊಡಗಿದ್ದ. ಅದು ಅವನ ಅಂತರಂಗದ ಮೂಲೆಯಲ್ಲಿ ಅಡಗಿದ್ದ/ಹುದುಗಿದ್ದ ನೋವು. ಗಂಗಾ ಮಧುವನ್ನು ಯಾವಾಗಲೂ ಕಪ್ಪು ಶಿಲೆಯ ತರಹ, ಸುಂದರವಾಗಿ ಕಡೆಯಲ್ಪಟ್ಟಿದ್ದೀರಿ ಎನ್ನುವರು. ಗಂಗಾ ಯಾಕೆ ಸುಮಾರು ಬಾರಿ, ಎಲ್ಲರ ಮುಂದೆ ಸಹ ಈ ಮಾತು ಹೇಳುತ್ತಾರೆಂದು ಮಧುಗೆ ಅರಿವಿತ್ತು. ತಾನು ಕಪ್ಪು ಎಂಬ ಭಾವನೆಯಿಂದ ಒಳಗೊಳಗೇ ನೊಂದು, ಯಾರಿಗೂ ತೋರಿಸಿಕೊಳ್ಳಲಾಗದೇ ಅಡಕವಾಗಿರುವ ಅಗಾಧವಾದ ಕೀಳರಿಮೆಯೊಂದನ್ನು ಗಂಗಾ ಯಾವಾಗಲೂ ತಮಾಷೆ ಮಾಡಿ ಹೋಗಲಾಡಿಸಲು ಪ್ರಯತ್ನಿಸುತ್ತಿದ್ದರು. ಒಂದು ದಿನ ಲೋಹಿಯ ಮನುಷ್ಯರ ಬಣ್ಣದ ಬಗ್ಗೆ, ಕಪ್ಪು ಬಣ್ಣದ ಬಗ್ಗೆ ವಿಶೇಷವಾಗಿ ಬರೆದ ಲೇಖನವೊಂದನ್ನು ಓದಿ ಹೇಳಿದರು. ಕಪ್ಪಿಗೂ-ಮನುಷ್ಯನ ಸೌಂದರ್ಯಕ್ಕೂ ಸಂಬಂಧವಿಲ್ಲ. ಮನುಷ್ಯನ ಸೌಂದರ್ಯ ಅಡಗಿರುವುದು ಆತನ ಮಾನಸಿಕ ಸತ್ಯಗಳಲ್ಲಿ ಎನ್ನುವರು. ಮಧುಗೆ ಗಂಗಾ ಮಾತಿನ ನಡುವೆ ಇಂತಹ ಮಾತುಗಳನ್ನು ಯಾಕೆ ಆಡುತ್ತಿರುತ್ತಾರೆ ಎಂಬುದು ಅರ್ಥವಾಗುತ್ತಿತ್ತು. ಮಧುನ ಆತ್ಮದ ಒಳಗಡೆ ಎಲ್ಲೋ ಅಪಮಾನಿತವಾದ ಭಾವವಿದೆ. ಎಲ್ಲರೂ ತನ್ನನ್ನು ತಿರಸ್ಕರಿಸುತ್ತಾರೆ ಎಂಬ ತಾರುಣ್ಯದ ಸೂಕ್ಷ್ಮದ ಕೆಳಗೆ ಅಡಗಿರುವ ನೋವುಗಳಿವೆ. ತನ್ನ ಬಣ್ಣದಿಂದಾಗಿ ಪ್ರೀತಿ/ಪ್ರೇಮದಂತಹ ಸುಂದರ ಕನಸುಗಳು ತನ್ನ ಪಾಲಿಗೆ ಕನಸುಗಳೇನೋ ಎಂಬ ಅಗಾಧವಾದ ನೋವಿದೆ. ಇದು ಗಂಗಾರ ಅರಿವಿಗೆ ಬಂದಿದೆ ಎಂದು ಗೊತ್ತಾದಾಗಲೆಲ್ಲಾ ಮಧುವಿಗೆ ನೋವಾಗುತ್ತಿತ್ತು. ತನ್ನ ವ್ಯಕ್ತಿತ್ವದಲ್ಲಿ, ತನ್ನೊಳಗಿನ ಅಂತರಾಳದ ಸತ್ಯಗಳು, ತಾನು ಯಾವುವುಗಳನ್ನು ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸುವೆನೋ ಅಂತಹವುಗಳನ್ನೆಲ್ಲಾ ಗಂಗಾ ಶೋಧಿಸಿ, ಶೋಧಿಸಿ, ಹೆಕ್ಕಿ ಹೆಕ್ಕಿ ತೆಗೆದುಬಿಡುತ್ತಾರೆ ಎನಿಸಿದಾಗಲೆಲ್ಲಾ ಆತನಿಗೆ ಹೆದರಿಕೆ ಆಗುತ್ತಿತ್ತು. ಈಗ ಹೇಗಿದ್ದರೂ ತಾನು ಮಂಗಳೂರಿಗೆ ಹೊರಟು ಹೋಗುತ್ತಿದ್ದೇನೆ. ಹೋಗಿಬಿಟ್ಟರೆ ಏನು? ಆತ್ಮೀಯತೆಯ ಅನೇಕ ತಂತುಗಳು ಅಂತರಾಳದ ಸತ್ಯಗಳನ್ನು ಬಿಚ್ಚಿ ಬಯಲು ಮಾಡಿಬಿಡುತ್ತವೆ ಎನ್ನಿಸಿದರೆ ಮಧು ಅದಕ್ಕೆ ಅವಕಾಶ ಮಾಡಿ ಕೊಡುವವನಲ್ಲ. ದೂರ ಹೋದರೆ ತನ್ನೊಳಗೇ ತಾನಿದ್ದುಬಿಡಬಹುದು. ಇನ್ನೊಬ್ಬರಿಗೆ ಗೊತ್ತಾಗುತ್ತವೆ ಎಂದಾಗಲೆಲ್ಲಾ ಉಂಟಾಗುವ ಗೊಂದಲಗಳು ಯಾಕೆ ಎಂದು ಮಧು ಯೋಚಿಸುವನು. ಬೆಂಗಳೂರಿನಿಂದ ಮಂಗಳೂರಿಗೆ ವರ್ಗವಾದದ್ದು ಒಂದು ರೀತಿಯಿಂದ ಅವನಿಗೆ ಸಂತೋಷವೇ. ಗಂಗಾ ಮಧ್ಯ ಇರದಿದ್ದರೆ ಆತ ಎಂದೋ ರಿಲೀವ್ ಮಾಡಿಸಿಕೊಂಡು ಹೊರಟು ಹೋಗಿಬಿಡುತ್ತಿದ್ದ. ಒಮ್ಮೊಮ್ಮೆ ಗಂಗಾರ ಪ್ರೀತಿ-ವಿಶ್ವಾಸ ಅವನನ್ನು ಕಟ್ಟಿ ಹಾಕಿಬಿಡುತ್ತಿತ್ತು. ಆದರೆ ಒಮ್ಮೊಮ್ಮೆ ಅವರ ಅತಿಯಾದ ಆತ್ಮೀಯತೆ ತನ್ನ ದೌರ್ಬಲ್ಯಗಳನ್ನೆಲ್ಲಾ ಬಿಚ್ಚಿಟ್ಟುಬಿಡಬಹುದೇನೋ ಎಂಬ ಹೆದರಿಕೆ, ಅಳುಕು. ಇವೆರಡರ ಮಧ್ಯೆ ಗಂಗಾರ ಪ್ರೀತಿ-ವಿಶ್ವಾಸವೇ ಆತನನ್ನು ಹೆಚ್ಚಾಗಿ ಎಳೆಯುತ್ತಿತ್ತು. ಗಂಗಾರ ಬದುಕಿನ ಹರವುಗಳು ಅವನ ಪ್ರಜ್ಞೆ ಮೀರಿದುದಾಗಿತ್ತು. ಗಂಗಾ-ರಮೇಶನ ಇರುವನ್ನು ಹಂಬಲಿಸುವುದನ್ನು ಕಂಡಾಗಲೆಲ್ಲಾ ಆತನಿಗೆ ಅವರಿಬ್ಬರ ಬಗ್ಗೆ ಅಸೂಯೆಯಾಗುತ್ತಿತ್ತು. ಗಂಗಾರ ಬದುಕಿನ ಘಟನೆಗಳು ಕಣ್ಣ ಮುಂದೆ ಕಟ್ಟಿದ ಹಾಗೆ ಎನಿಸುತ್ತಿತ್ತು. ಗಂಗಾ ತಮ್ಮ ಬದುಕಿನ ಭಾಗವನ್ನು ಹಂಚಿಕೊಂಡ ಮೇಲೆಯೇ ಗಂಗಾ-ರಮೇಶರ ಸಂಬಂಧದ ಬಗ್ಗೆ ಇನ್ನಷ್ಟು ಅಸೂಯೆ ಎನ್ನಿಸತೊಡಗಿತ್ತು. ಏನಾದರಾಗಲೀ ತಾನು ಇಲ್ಲಿರುವುದಕ್ಕಿಂತ ಮಂಗಳೂರಿಗೆ ಹೋಗಿಬಿಡುವುದೇ ವಾಸಿ ಎಂದು ಮಧು ಬಲವಾಗಿ ಯೋಚಿಸತೊಡಗಿದ್ದ. ಹಾಗಾಗಿಯೇ ಗಂಗಾರ ಹೊಸ

ಮನೆಗೆ ದೀಪದ ವ್ಯವಸ್ಥೆ ಮಾಡುವುದಕ್ಕಾಗಿ ತನ್ನೆಲ್ಲಾ ಕೆಲಸ ಬಿಟ್ಟುಕೊಂಡು ಓಡಾಡತೊಡಗಿದ್ದ. ಗಂಗಾರ ಮನೆಗೆ ಎನ್.ಓ.ಸಿ. ಸಿಕ್ಕಾಗ ಗಂಗಾ-ರಮೇಶರಿಗಿಂತ ಅಧಿಕವಾಗಿ ಸಂತೋಷ ಪಟ್ಟುಕೊಂಡವನು ಮಧುವೇ. ಏನೋ ಮೇಡಂ ತನ್ನಲ್ಲಿಟ್ಟಿರುವ ಪ್ರೀತಿ-ವಿಶ್ವಾಸದ ಋಣ ತೀರಿಸಿಯೇ ಹೋಗುತ್ತಿದ್ದೇನೆ ಎಂಬ ಭಾವ ಅದು. ಗಂಗಾಗೂ ತುಂಬಾ ಸಂತೋಷವಾಗಿತ್ತು. ಆ ಒಂದು ತಿಂಗಳಲ್ಲಿ ಮಧು ತನ್ನ ಕೆಲಸ ಕಾರ್ಯಗಳನ್ನೆಲ್ಲಾ ಬದಿಗೊತ್ತಿ, ರಜೆ ಹಾಕಿ ಗಂಗಾರ ಮನೆಯ ದೀಪದ ವ್ಯವಸ್ಥೆಗಾಗಿ ಓಡಾಡಿದ್ದ. ಎನ್.ಓ.ಸಿ. ತಂದುಕೊಟ್ಟ ಮೇಲೆ ಮಧು 'ಮೇಡಂ ಇನ್ನೂ ಒಂದು ವಾರ ನನಗೆ ನನ್ನದೇ ಕೆಲಸವಿದೆ. ಈ ವಾರದಲ್ಲಿ ನಿಮ್ಮ ಮನೆಗೆ ಕಂಬ/ಕರೆಂಟ್ ಇತ್ಯಾದಿ ಕೆಲಸ ಮಾಡಿ ಮುಗಿಸಿಬಿಡುತ್ತೇನೆ. ಆನಂತರ ನಾನು ಮಂಗಳೂರಿಗೆ ಹೋಗುವುದಕ್ಕೆ ಓಡಾಡಬೇಕು' ಎಂದ. ನಂತರದ ವಾರದಲ್ಲಿ ಮಧು ಗಂಗಾರ ಮನೆಯಲ್ಲಿ ದೀಪದ ವ್ಯವಸ್ಥೆ ಮುಗಿಯುವ ತನಕ ಅಲ್ಲಿಯೇ ಓಡಾಡಿಕೊಂಡು ಇದ್ದ. ಕಂಬಗಳನ್ನು ತರಿಸಿ, ವೈಯರ್‌ಗಳನ್ನು ಜೋಡಿಸಿ, ಅವರ ಮನೆಯಲ್ಲಿ ಜಗ್ ಎಂದು ದೀಪ ಉರಿಯುವವರೆಗೂ ಮಧು ಗಂಗಾ-ರಮೇಶರ ಮನೆಯವರಂತೆಯೇ ಕೆಲಸ ಮಾಡಿದ್ದ. ಮನೆಗೆ ಮೊದಲ ಬಾರಿ ದೀಪ ಹಾಕಿದಾಗ ಗಂಗಾರ ಕಣ್ಣಂಚಿನಲ್ಲಿ ಕಂಡ ನೀರು ಅವನ ಹೃದಯವನ್ನೇ ಅಲುಗಾಡಿಸಿತ್ತು. ಈ ವ್ಯವಸ್ಥೆಯ ಬಗ್ಗೆ ಗಂಗಾರ ಹಾಗೆ ಆತನಿಗೂ ಒಂದು ರೀತಿಯ ಸಿಟ್ಟು ಮೂಡತೊಡಗಿತ್ತು. ನಿತ್ಯ ಜೀವನದ ಅವಶ್ಯಕತೆಗಳಲ್ಲಿ ಒಂದಾದ ದೀಪದ ವ್ಯವಸ್ಥೆಗೆ ಕೂಡಾ ತಮ್ಮ ಡಿಪಾರ್ಟ್‌ಮೆಂಟ್‌ನವರು ಎಷ್ಟೊಂದು ಕ್ರೂರಿಗಳಾಗಿ ಬಿಡುತ್ತಾರಲ್ಲ ಎಂಬ ನೋವು ಆತನ ಹೃದಯದಲ್ಲಿ ಆಳವಾಗಿ ಒಡಮೂಡತೊಡಗಿತ್ತು. ಗಂಗಾನಂತಹ ವಿದ್ಯಾವಂತರಿಗೆ, ವ್ಯವಸ್ಥೆಯ ಒಳ ಸುಳಿಗಳನ್ನು ಗ್ರಹಿಸಬಲ್ಲವರಿಗೇ ಹೀಗಾದರೆ ಹೊಟ್ಟೆಗೆ ಗತಿಯಿಲ್ಲದ, ಕೂಲಿನಾಲಿ ಮಾಡಿ ಬದುಕುವ ಜನರ ಮನೆಗಳಲ್ಲಿ/ಗುಡಿಸಲುಗಳಿಗೆ ದೀಪದ ವ್ಯವಸ್ಥೆ ಕನಸೇನೋ ಎನಿಸತೊಡಗಿತ್ತು. ಹೆಜ್ಜೆ ಹೆಜ್ಜೆಗೂ ದುಡ್ಡು-ಕಾಸು ಎಂದು ಓಡಾಡುವ ತಮ್ಮ ಡಿಪಾರ್ಟ್‌ಮೆಂಟ್‌ನವರು ಜನರಿಗೆ ಅವಶ್ಯವಾಗಿರುವ ವಿದ್ಯುಚ್ಛಕ್ತಿಯನ್ನೇ ಮಂಗ-ಮಾಯ ಮಾಡಿಬಿಡುತ್ತಾರಲ್ಲ ಎಂದೆನಿಸಿದಾಗ ಆತನಿಗೆ ನೋವಾಗುತ್ತದೆ. ಗಂಗಾ ಅಮಾಯಕರೇನಲ್ಲ. ಬದುಕಲ್ಲಿ ಎಂತೆಂತಹ ಆಯಾಮಗಳಿಗೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಅಂತಹವರೇ ತನ್ನ ಕಣ್ಣ ಮುಂದೆಯೇ ತನ್ನ ಡಿಪಾರ್ಟ್‌ಮೆಂಟ್‌ನ ಎಷ್ಟೋ ಅಧಿಕಾರಿಗಳ ಮುಂದೆ ಕಣ್ಣಲ್ಲಿ ನೀರು ತುಂಬಿಕೊಂಡು ಮಾತನಾಡಿದ್ದಾರೆ, ರೇಗಾಡಿದ್ದಾರೆ, ಜಗಳವಾಡಿದ್ದಾರೆ. ಆಗೆಲ್ಲಾ ಮಧುಗೆ ಕೆಟ್ಟೆನಿಸುತ್ತಿತ್ತು. ಹೀಗೆ ನಿತ್ಯದ ಅವಶ್ಯಕತೆಯನ್ನೇ ನೇರವಾಗಿ ತಮ್ಮ ಜನರಿಗೆ ಕೊಡಲಾರದ ತಮ್ಮ ವ್ಯವಸ್ಥೆ ಎಷ್ಟು ಕ್ರೂರವಾದದ್ದು ಎನಿಸುತ್ತಿತ್ತು. ಇಷ್ಟೊಂದು ಜಟಿಲವಾದ ವ್ಯವಸ್ಥೆಯೊಳಗೆ ಏನೂ ಮಾಡಲಾಗದ ಅವನ ಅಸಹಾಯಕತೆಗೆ ಅವನಿಗೇ ಸಿಟ್ಟು ಬರುತ್ತಿತ್ತು. ಸಾವಿರಾರು ರೀತಿಯ ಗೋಲ್‌ಮಾಲ್ ತಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ನಡೆಯುವುದನ್ನು ಮಧು ಗಮನಿಸಿದ್ದ. ಟೈಪ್ಸೆಟ್ಟಿಂಗ್ ಮಿಷಿನ್ ಇಟ್ಟುಕೊಂಡ ಎಷ್ಟೋ ಮಂದಿ ಸಾವಿರಾರು ರೂಪಾಯಿ ಎ.ಇ.ಗೆ ಇತ್ತು ಬಾಯಿ ಮುಚ್ಚಿಸಿಬಿಡುವರು. ಮೀಟರ್ ಬಿಲ್ ಜಾಸ್ತಿಯಾದರೆ ಮೀಟರ್‌ಗಳನ್ನೇ ತಿರುಗಿಸಿಬಿಡುವರು. ಏನೇನೋ estimate ಮಾಡಿ ಅದರಲ್ಲೇ ಸಾವಿರಾರು ರೂಪಾಯಿ ಹೊಡೆಯುವರು. ಸದ್ದಿಲ್ಲದೇ ನಡೆಯುವ ವ್ಯಾಪಾರ. ತಮ್ಮದೊಂದು 'ಮನಸ್ಸೇ' ಕಾಣೆಯಾಗಿರುವ ಜಗತ್ತು ಎಂದು ಯಾವಾಗಲೂ ಆತನಿಗೆ ಅನ್ನಿಸುತ್ತಿತ್ತು. ದುಡ್ಡಿನ ಮೂಲಕವೇ ಕಂಬಗಳು ನಿಲ್ಲುವುದು, ವೈರುಗಳು ಓಡಾಡುವುದು, ಮೀಟರ್‌ಗಳು ಹೇಗೆ ಬೇಕೆಂದರೆ ಹಾಗೆ ಓಡುವುದು. ಕಳಚಿ ಹೋದ ಸಣ್ಣ ವೈಯರ್ ಒಂದನ್ನು ಜೋಡಿಸಲು ಕಂಬ ಹತ್ತುವ ಲೈನ್‌ಮ್ಯಾನ್ ಕೂಡಾ ದುಡ್ಡಿನ ಮುಖವನ್ನೇ ನೋಡಿ ಹತ್ತುತ್ತಾನೆ. ಇಂತಹ ವ್ಯವಸ್ಥೆಯಲ್ಲಿ ಗಂಗಾನಂತವರು ಮನಸ್ಸು/ಭಾವನೆ/ಅಂತರಂಗದ ನಂಟಿನ ಜೊತೆ ವ್ಯವಹಾರ ಮಾಡುತ್ತೇನೆ ಎಂದರೆ ಅದು ನಗೆಪಾಟಲಿನ ವಸ್ತುವಾಗುತ್ತದೆ ಅಷ್ಟೇ.

ಗಂಗಾನಂತವರು ನಂಬಿರುವ ಆದರ್ಶಗಳನ್ನು ಇಲ್ಲಿ ಹರಾಜಿಗೆ ಹಾಕಿದರೆ ಕವಡೆ ನಾಣ್ಯವೂ ಸಿಕ್ಕಲಾರದು. ನಂಬಿಕೆ/ವಿಶ್ವಾಸ/ಪ್ರಾಮಾಣಿಕತೆ ಇಂತಹವುಗಳ ಜೊತೆ ವ್ಯವಹರಿಸುವುದಕ್ಕೆ ಯಾರಿಗೂ ವ್ಯವಧಾನವೂ ಇಲ್ಲ, ಸಮಯವೂ ಇಲ್ಲ. ಮಧುಗೆ ಸಾಹಿತ್ಯದ ಬಗ್ಗೆ ಒಲವಿತ್ತು. ಆತ ಬರೆಯುವ ಭಾಷೆ, ಅವನ ಅಕ್ಷರದ ಹಾಗೆ ಅದ್ಭುತ ಎಂದು ಆತನ ಗೆಳೆಯರೇ ಹೇಳುವರು. ಪ್ರತಿ ನಿತ್ಯ ದಿನಚರಿ ಬರೆಯುವ ಹವ್ಯಾಸ, ಹುಚ್ಚು ಮಧುವಿನದು. ತನ್ನ ಜೀವನದ ಬಹುಭಾಗದ ಸತ್ಯಗಳನ್ನು, ಅಂತರಂಗದ ನೋವು/ನಲಿವುಗಳನ್ನು ಹಂಚಿಕೊಳ್ಳುತ್ತಿದ್ದುದೇ ತನ್ನ ಡೈರಿಯ ಮುಖಾಂತರ. ತಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಎದುರು ಎದುರಿಗೆ ಮಾತನಾಡಲಾಗದುದನ್ನು ಆತ ತನ್ನ ಡೈರಿಯ ಮುಖಾಂತರ ಮಾತನಾಡುತ್ತಿದ್ದ. ದಿನ ನಿತ್ಯ ಡಿಪಾರ್ಟ್‌ಮೆಂಟ್‌ನಲ್ಲಿ ನಡೆಯುವ ಗೋಲ್‌ಮಾಲ್‌ಗಳು ಆತನ ಮನಸ್ಸನ್ನು ಹಿಗ್ಗಾಮುಗ್ಗಿಯಾಗಿಸುತ್ತಿದ್ದವು. ದೀಪದ ವ್ಯವಸ್ಥೆಗಾಗಿ ಬಂದು ಗೋಗರೆಯುವ ಅಮಾಯಕರು/ಮೂರು ದಿನ ಆಯಿತು, ಕರೆಂಟ್ ಇಲ್ಲ ಎಂದು ಬರುವ ಸಾಮಾನ್ಯ ಜನರು, ಕಂಬ ಬಿದ್ದು ಹೋಗಿದೆ ರಿಪೇರಿ ಮಾಡ ಬನ್ನಿ ಎಂದು ಹಿಂದೆಯೇ ಸುತ್ತುವವರು, ಮೀಟರ್ ಸರಿ ಇಲ್ಲ ಎನ್ನುವ ಜನ. ಹೀಗೆ ಜನ ಹಲವಾರು ಬಾರಿ ಕರೆಂಟ್ ಆಫೀಸಿಗೆ ಎಡತಾಕುತ್ತಲೇ ಇರುತ್ತಾರೆ. ಬಿದ್ದ ಕಂಬವೊಂದನ್ನು ಎತ್ತುವುದರಲ್ಲಿ ಹತ್ತು ನಿಮಿಷ ತಡವಾದುದಕೆ ಬಲಿಯಾದ ಮಗುವಿನ ದೃಶ್ಯವೊಂದು ಅವನ ಎದೆಯಲ್ಲಿ ಮಂಜುಗಡ್ಡೆಯಾಗಿ ಕರಗದೆ ಉಳಿದಿದೆ. ಜನರಿಗೆ ಸಹಾಯಿಸಲು ಪರದಾಡುವ ಮಧುವಿನ ಅವಾಂತರಕ್ಕೆ ಅವನ ಎ.ಇ. ಕೂಡಾ ನಗುವರು. 'ನೀನು ಖಂಡಿತಾ ಉದ್ಧಾರ ಆಗುವುದಿಲ್ಲ, ಬದುಕುವ ರೀತಿಯೇ ಗೊತ್ತಿಲ್ಲದ ಹುಡುಗ ನೀನು' ಎನ್ನುವರು. 'ಇಂತಹ ಡಿಪಾರ್ಟ್‌ಮೆಂಟ್‌ನಲ್ಲಿ ಇರಲಿಕ್ಕೇ ನೀನು ಲಾಯಕ್ಕಲ್ಲ. ಸರಾಗವಾಗಿ ದುಡಿಯಬಹುದಾದ ಕಾಲದಲ್ಲಿ ಕಣ್ಣು ಮುಚ್ಚಿಕೊಳ್ಳುತ್ತಿರುವೆ. ಇದಕ್ಕಾಗಿ ನೀನು ಪಶ್ಚಾತ್ತಾಪ ಪಡಲೇಬೇಕಾಗುತ್ತದೆ' ಎನ್ನುತ್ತಾ ಪಾಪದ ಹುಡುಗ ಎಂಬಂತೆ ಕನಿಕರ ತೋರಿಸುವರು. ಮಧುಗೆ ಆಗೆಲ್ಲಾ ಕೆಟ್ಟೆನಿಸುತ್ತದೆ. ತನಗಾಗಿ ಈ ಕೆಲಸ ಎಲ್ಲಿ ಕಾದು ಕುಳಿತಿತ್ತೋ ಎಂದು ಒಮ್ಮೊಮ್ಮೆ ಅವನಿಗೆ ಬೇಸರವಾಗುವುದು. ತಾನು ಓದು ಮುಂದುವರಿಸಿದ್ದರೆ ತನ್ನ ಜೀವನವನ್ನು ಬೇರೆಯ ರೀತಿಯೇ ರೂಪಿಸಿಕೊಳ್ಳಬಹುದಾಗಿತ್ತೇನೋ? ಎಂಬ ಆಲೋಚನೆ ಬಂದಾಗಲೆಲ್ಲಾ ಅವನ ಹೃದಯದ ಒಳಗೇ ನೋವಾಗುತ್ತದೆ.

ಮೀಟರ್ ರೀಡಿಂಗ್‌ಗೆಂದು ಹೋದಾಗ ಮಧು ಬಹಳಷ್ಟು ಅನುಭವಗಳಲ್ಲಿ ಅನೇಕ ಸತ್ಯಗಳನ್ನು ಎದುರಿಸಿದ್ದ. ಮೀಟರ್ ರೀಡಿಂಗೇ ತಿರುಗಿಸಿಟ್ಟುಬಿಡುವುದು, ಮಿಷನ್ ಹೊಂದಿರುವ ವರ್ಕ್‌ಶಾಪ್, ಫ್ಯಾಕ್ಟರಿ ಇತ್ಯಾದಿಗಳ ಬಿಲ್ ನೋಡಿದಾಗ ಮಧುಗೆ ಮೊದಮೊದಲು ಆಶ್ಚರ್ಯವಾಗಿಬಿಡುವುದು. ಪರೀಕ್ಷೆ ಮಾಡುವುದಕ್ಕೆಂದೇ ಆತ ನಿಗದಿತ ಸಮಯಕ್ಕಿಂತ ಮುಂಚೆ ಮೀಟರ್ ರೀಡಿಂಗ್‌ಗೆ ಹೋಗುವನು. ಮೀಟರ್‌ನಲ್ಲಿ ಓಡಿರುವ ನಂಬರ್ ಗುರುತು ಹಾಕಿಕೊಂಡು ಬರುವನು. ಮತ್ತೆ ಬಿಲ್ ಕೊಡಲು ಹೋಗಿ ನೋಡಿದಾಗ ಗುರುತು ಹಾಕಿಕೊಂಡದ್ದಕ್ಕಿಂತ ಮೀಟರ್ ರೀಡಿಂಗ್ ಎಷ್ಟೋ ಹಿಂದೆ ಓಡಿರುವುದು ಗಮನಿಸಿ ಬಿಲ್ ಕೊಡದೇ ಬರುವನು. ಇಂತಹದುನ್ನೆಲ್ಲಾ ಎ.ಇ.ಯವರ ನೋಟೀಸ್‌ಗೆ ತಂದರೆ ಅವರು ನಕ್ಕು ಬಿಡುವರು. 'ಏನು ಮಧು ಇದೆಲ್ಲಾ ಅಲ್ಲಲ್ಲೇ adjust ಮಾಡಿಕೊಂಡುಬಿಡಿ' ಎನ್ನುವರು. 'ನೀವ್ಯಾಕೆ ಎಲ್ಲದಕ್ಕೂ bother ಮಾಡುತ್ತೀರಿ, ಲಾಸ್ ನಿಮಗಲ್ಲವಲ್ಲ, ಡಿಪಾರ್ಟ್‌ಮೆಂಟ್‌ಗೆ ತಾನೇ' ಎನ್ನುವರು. ಬದುಕಿನಲ್ಲಿ ನಿಷ್ಠೆಯಿಂದ ಇರಬೇಕೆನ್ನುವ ಮಧುವಿನ ಆದರ್ಶಗಳೆಲ್ಲಾ ಗಾಳಿಗೆ ತೂರಿ ಹೋಗಿಬಿಡುತ್ತಿದ್ದವು. ಇಂತಹವುಗಳನ್ನೆಲ್ಲ ಮಧು ಗಂಗಾಳ ಬಳಿ ಹೇಳುತ್ತಿದ್ದ. 'ಪ್ರಾಮಾಣಿಕವಾಗಿ ಇರಬೇಕು ಅನ್ನುತ್ತೀರಲ್ಲ ಮೇಡಂ ನಮ್ಮಂತವರು ಇಂತಹ ಕಡೆ ಹೇಗೆ ಪ್ರಾಮಾಣಿಕವಾಗಿ ಉಳಿಯುವುದು? ಇಲ್ಲಿ ನಾನೊಬ್ಬ

ಸಾಮಾನ್ಯ ಪೋಲೀಸ್ ಪೇದೆಯ ತರಹ. ಸಬ್ ಇನ್ಸ್‌ಪೆಕ್ಟರ್ರೇ ಲೂಸ್ ಬಿಡುವ ಒಂದು ವ್ಯವಸ್ಥೆಯಲ್ಲಿ ಒಬ್ಬ ಮಾಮೂಲಿ ಪೇದೆಯ ಮಾತಿಗೆ ಏನು ಬೆಲೆ ಇರುತ್ತದೆ?' ಎನ್ನುವನು. ಇಂತಹದರ ಮಧ್ಯೆ ತಾನು ಮಾತನಾಡುವುದೇ ಧೈರಿಯ ಮೂಲಕ ಎನ್ನುವನು.

ಮಂಗಳೂರಿಗೆ ಮಧುಗೆ ವರ್ಗಾವಣೆಯಾದ್ದು ಆಪರೇಟರ್ ಆಗಿ. ಅಲ್ಲಿ ಆತನಿಗೆ ಇಲ್ಲಿಯ ತರಹೆಯ ಸಿಕ್ಕುಗಳು ಇರಲಿಲ್ಲ. ಶಿಫ್ಟ್ ಮೇಲೆ ಆಪರೇಟರ್ ಆಗಿ ಕೆಲಸ ಮಾಡಿದರೆ ಅವನ ಕೆಲಸ ಮುಗಿದು ಬಿಡುತ್ತಿತ್ತು. ಹಾಗಾಗಿ ಮಧು ಇಲ್ಲಿಯ ತರಹೆಯ ಒತ್ತಡಗಳಿಗೆ ಸಿಕ್ಕಿಹಾಕಿಕೊಳ್ಳುವ ಅಗತ್ಯವಿರಲಿಲ್ಲ. ಈ ದೃಷ್ಟಿಯಿಂದಾಗಿಯೇ ರಿಲೀವ್ ಮಾಡಿಸಿಕೊಂಡು ಮಂಗಳೂರಿಗೆ ಹೋಗಲು ಮಧು ಹೆಚ್ಚು ಹೆಚ್ಚು ಓಡಾಡತೊಡಗಿದ್ದ. ಈಗ ಗಂಗಾರ ಮನೆಗೆ ದೀಪದ ವ್ಯವಸ್ಥೆ ಕೂಡಾ ಮುಗಿಸಿಬಿಟ್ಟುದುದರಿಂದ ಮಧುಗೆ ಯಾವ ರೀತಿಯ ಹಿಂಜರಿಕೆ ಕೂಡಾ ಇರಲಿಲ್ಲ. ಆತನ ಸ್ಥಾನಕ್ಕೆ ಮತ್ತೊಬ್ಬರು ಬರದೇ ಹೋದುದರಿಂದ ಎ.ಇ. ಆತನನ್ನು ರಿಲೀವ್ ಮಾಡಲು ಒಪ್ಪುತ್ತಿರಲಿಲ್ಲ. ಇದಕ್ಕಾಗಿ ಮಧು ಅಲ್ಲಿ-ಇಲ್ಲಿ ಎಂದು ಮೇಲಿನ ಆಫೀಸರ್ಸ್ ಹುಡುಕಿಕೊಂಡು ಬೆಂಗಳೂರಲ್ಲಿ ಅನೇಕ ಆಫೀಸ್‌ಗಳನ್ನು ಸುತ್ತತೊಡಗಿದ್ದ.

* * * *

ಪರಿಸರದ ಬಗ್ಗೆ ಕೆಲಸ ಮಾಡುತ್ತಾ ಮಾಡುತ್ತಾ ರಮೇಶನಿಗೆ ಕೆಲಸದ ಗೀಳು ಅಂಟಿಕೊಳ್ಳತೊಡಗಿತ್ತು. ಈಗ ಸ್ವಂತ ಮನೆಯೂ ಆದ್ದರಿಂದ ಒಂದು ರೀತಿಯ ನೆಮ್ಮದಿಯ ನೆಲೆ ಕೂಡಾ ಮನದಲ್ಲಿ ಮನೆ ಮಾಡಿತ್ತು. ಆತ ಕೆಲಸ ಮಾಡುತ್ತಿದ್ದ ಅಭಿವೃದ್ಧಿ ಸಂಸ್ಥೆಗೆ ರಮೇಶ್ ಹೆಚ್ಚು ಕಮಿಟ್ ಆಗಿ ಕೆಲಸ ಮಾಡುತ್ತಿದ್ದ. ಹೆಚ್ಚು Field study ಇರುತ್ತಿದ್ದುದರಿಂದ ತಿಂಗಳಲ್ಲಿ 10-15ದಿನ ಮನೆಯಿಂದ ಆಚೆ ಕಾಲ ಕಳೆಯುವುದು ರಮೇಶನಿಗೆ ಅನಿವಾರ್ಯವಾಗುತ್ತಿತ್ತು. ಕ್ಷಾಮ ಪೀಡಿತ ಪ್ರದೇಶಗಳಲ್ಲಿ ರಮೇಶ ಹೆಚ್ಚಾಗಿ ಕೆಲಸ ಮಾಡುತ್ತಿದ್ದ. ಈ ನಾಲ್ಕೈದು ವರ್ಷಗಳಲ್ಲಿ ರಮೇಶನ ವ್ಯಕ್ತಿತ್ವ ನಿಧಾನವಾಗಿ ಬೆಳೆಯತೊಡಗಿದ್ದನ್ನು ಗಂಗಾ ಗಮನಿಸತೊಡಗಿದ್ದಳು. ಮಗು ಮಿತಾ ರಮೇಶನಿಗಿಂತ ಹೆಚ್ಚಾಗಿ ಗಂಗಾಳ ಬಳಿಯೇ ಇರುತ್ತಿದ್ದುದರಿಂದ ಅವಳಿಗೇ ಹೆಚ್ಚು ಅಂಟಿಕೊಂಡು ಬೆಳೆಯತೊಡಗಿದ್ದಳು. ಎದ್ದ ಕ್ಷಣದಲ್ಲಿ 'ಅಮ್ಮಾ, ಅಮ್ಮಾ' ಎಂದು ದುಂಬಾಲು ಬೀಳುವಳು. ಆಗೆಲ್ಲಾ ರಮೇಶನಿಗೆ ಬೇಸರವಾಗುತ್ತಿತ್ತು. ಮಿತಾ ತನಗಾಗಿ ಹಂಬಲಿಸಬೇಕು ಎನ್ನುವ ವಿಚಿತ್ರ ಭಾವನೆಯೊಂದು ಆತನಲ್ಲಿ ಮೂಡಿ ಮಾಯವಾಗದೇ ಇರುತ್ತಿರಲಿಲ್ಲ. ಗಂಗಾ/ಮಿತಾಳನ್ನು ಬಿಟ್ಟರೆ ತನಗೆ ಯಾರು? ಎನ್ನುವ ಪ್ರಶ್ನೆ ಕಾಡಿದಾಗಲೆಲ್ಲಾ ಇರುವ ದಿನಗಳಲ್ಲಿ ಮಿತಾಳೊಡನೆ ಆತ್ಮೀಯವಾಗಿ ದಿನ ಕಳೆಯಲು ಪ್ರಯತ್ನಿಸುವನು. ಕೆಲಸಕ್ಕಾಗಿ ತಾನು ಹೊರಗಡೆ ಹೆಚ್ಚು, ಹೆಚ್ಚು ದಿನಗಳನ್ನು ಕಳೆಯುತ್ತಾ ಹೋದಂತೆ ಸಂಸಾರದ ಜವಾಬ್ದಾರಿಯನ್ನೆಲ್ಲಾ ನಿಭಾಯಿಸುವ ಗಂಗಾಳನ್ನು ಕಂಡಾಗ ರಮೇಶನಿಗೆ ಬೇಸರವಾಗುತ್ತಿತ್ತು. ಗಂಗಾಗೂ ಈ ಬಗ್ಗೆ ಬೇಸರವಾಗುತ್ತಾ ಹೋಗುತ್ತದೆಯೆಂಬ ಅರಿವು ಆತನಿಗೆ ಇಲ್ಲದೇ ಇರಲಿಲ್ಲ. ಆತನ ಕೆಲಸದ Nature ಆ ರೀತಿಯದು. ಕೈ ತುಂಬ ಸಂಬಳ ಜೊತೆಗೆ ಫೀಲ್ಡ್ ಸ್ಟಡಿಗಾಗಿ, ಅಲ್ಲಿನ ಜನರಿಗೆ ಟ್ರೈನಿಂಗ್ ಕೊಡುವುದಕ್ಕಾಗಿ ಹಲವು ಕಾರ್ಯಕ್ರಮ ಹಾಕಿಕೊಳ್ಳುವುದು ಆತನಿಗೆ ಅನಿವಾರ್ಯದ ಅಗತ್ಯವಾಗಿರುತ್ತಿತ್ತು. ಮನೆ ಬಿಟ್ಟು 10-15 ದಿನ ಆಚೆ ಹೋಗುವಾಗಲೆಲ್ಲಾ ಒಂದು ರೀತಿಯ ಪಾಪಪ್ರಜ್ಞೆ ಆತನಿಗೆ. ಹೀಗೆ ಹೋಗುವ ಮುಂಚೆಯೇ ಮನೆಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನೂ ತಂದು ಇಟ್ಟುಬಿಡುತ್ತಿದ್ದ. ಗಂಗಾ ಏನು ಕೆಲಸ ಹೇಳಿದರೂ ಪ್ರೀತಿಯಿಂದ ಮಾಡಿಬಿಡುತ್ತಿದ್ದ. ಆದರೂ ಇದು ಒಂದೆರಡು ತಿಂಗಳ ಕೆಲಸವಾಗಿರಲಿಲ್ಲ. ಮೂರು ವರ್ಷದಿಂದ ಹೀಗೆಯೇ ನಡೆದುಕೊಂಡು ಬಂದಿದೆ. ಇತ್ತೀಚಿನ ದಿನಗಳಲ್ಲಿ ರಮೇಶನಿಗೂ ಒಮ್ಮೊಮ್ಮೆ

ಬೇಸರವಾಗುತ್ತಿತ್ತು. ಆತನ ವ್ಯಕ್ತಿತ್ವ ಬೆಳೆದ ಹಾಗೆಲ್ಲಾ ಸಂಸ್ಥೆಯಲ್ಲಿ ಆತನ ಜವಾಬ್ದಾರಿಗಳೂ ಒಂದೊಂದಾಗಿ ಜಾಸ್ತಿಯಾಗತೊಡಗಿದ್ದವು. ಪರಿಸರಕ್ಕೆ ಸಂಬಂಧಿಸಿದ ಸೆಮಿನಾರ್ ಒಂದರಲ್ಲಿ ದೆಹಲಿಗೆ ಹೋಗಿದ್ದ ರಮೇಶ್ ಒಂದು ಪೇಪರ್ ಕೂಡಾ Present ಮಾಡಿದ್ದ. ಹೈದರಾಬಾದ್‌ನ ಕಾರ್ಯಕ್ರಮವೊಂದಕ್ಕೆ ರಿಸೋರ್ಸ್ ಪರ್ಸನ್ ಕೂಡಾ ಆಗಿ ಹೋಗಿದ್ದ. ತಾವು ಸಂಸ್ಥೆಯಿಂದ ತರುತ್ತಿದ್ದ ಪತ್ರಿಕೆಯೊಂದಕ್ಕೆ ಕ್ರಮೇಣವಾಗಿ ತನ್ನ ಅನುಭವಗಳನ್ನು ಆಧರಿಸಿ ಲೇಖನಗಳನ್ನು ಬರೆಯತೊಡಗಿದ್ದ. ರಮೇಶ ಹೀಗೆ ಒಬ್ಬ ವ್ಯಕ್ತಿಯಾಗಿ ರೂಪುಗೊಳ್ಳುತ್ತಾ ಹೋಗುವ ತನ್ನ ವ್ಯಕ್ತಿತ್ವದಿಂದಲೇ ಹಿಂತಿರುಗಿ ನೋಡಿದರೆ ಅವನಿಗೇ ಆಶ್ಚರ್ಯವಾಗುತ್ತಿತ್ತು. ಹಾಲೆಂಡಿಗೆ ಹೋಗುವಾಗ ತಾನು ಹೋಗಿದ್ದು ಮುದುಡಿಕೊಂಡ ಮನುಷ್ಯನ ಹಾಗೆ. ಎಲ್ಲಾ ಮಧ್ಯಮ ವರ್ಗದವರ ಹಾಗೆಯೇ ರಮೇಶನ ಕನಸುಗಳು ತಳಕು ಹಾಕಿಕೊಂಡದ್ದು ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್ ಜಗತ್ತಿನಲ್ಲಿ. ಆದರೆ ಗಂಗಾಳ ಸಹವಾಸದಲ್ಲಿ ಆತ ಹಾಲೆಂಡಿನಲ್ಲಿ ಕಂಡ ಜಗತ್ತೇ ಬೇರೆ. ಗಂಗಾ ಬರಿಯ ಪ್ರೇಯಸಿಯಾಗಿ ಮಾತ್ರ ಆತನ ಜೀವನದಲ್ಲಿ ಪ್ರವೇಶಿಸಿರಲಿಲ್ಲ. ಆಕೆಯ ವ್ಯಕ್ತಿತ್ವದ ಗಂಡುತನಗಳು, ಗಟ್ಟಿತನಗಳು ರಮೇಶನ ಬದುಕಿಗೆ ಆದರ್ಶವಾಗುತ್ತಾ ಹೋಗಿದ್ದವು. ಗಂಗಾಳನ್ನು ಬಾಳ ಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳುವಲ್ಲಿ ರಮೇಶ ಬರಿಯ ಗಂಗಾಳನ್ನು ಮಾತ್ರ ಪಡೆದುಕೊಂಡಿರಲಿಲ್ಲ. ಗಂಗಾಳ ಜೊತೆಗೆ ಬದುಕಿನ ಮತ್ತೊಂದು ಮುಖಕ್ಕೆ ಹೆಜ್ಜೆ ಇಟ್ಟಿದ್ದ. ದುಡಿಯುವ ವರ್ಗದ ಪರಿಕಲ್ಪನೆಯ ಚೌಕಟ್ಟಿನಲ್ಲಿ ಬದುಕು ನೋಡುವ ಒಂದು ಜೀವನ ದೃಷ್ಟಿ ಬೆಳೆಯತೊಡಗಿತ್ತು. ಪರಿಸರದ ಬಗ್ಗೆ ಕೆಲಸ ಮಾಡುತ್ತಾ, ಮಾಡುತ್ತಾ ಕೃಷಿ ಕಾರ್ಮಿಕರ ಜೊತೆ, ಭೂಮಿ ಇಲ್ಲದ ಜನರ ಜೊತೆ, ಅವರ ಬಾಳಿನ ಜೊತೆ ತನ್ನನ್ನು ಗುರುತಿಸಿಕೊಳ್ಳುವ ಒಂದು ಬದುಕಿನ ಪರಿಕಲ್ಪನೆ ಅವನಲ್ಲಿ ಬೆಳೆಯತೊಡಗಿತ್ತು. ಗಂಗಾಳಿಂದಾಗಿ ಜೆಂಡರ್ ಬಗ್ಗೆಗಿನ ಒಂದು ಪರಿಕಲ್ಪನೆ ಕೂಡಾ ಆತನಲ್ಲಿ ಇತ್ತು. ಇಂತಹ ಬದುಕಿನ ಮೂಲಕ ತನ್ನ ವ್ಯಕ್ತಿತ್ವದ ಇಂಟೆಗ್ರಿಟಿ ಬೆಳೆಯತೊಡಗಿದೆ ಎಂದು ರಮೇಶನಿಗೆ ಅನ್ನಿಸತೊಡಗಿತ್ತು. ಆ ಇಂಟೆಗ್ರೇಟೆಡ್ ವ್ಯಕ್ತಿತ್ವದಲ್ಲಿ ಗಂಗಾ ಅವನೊಳಗಿನ ವ್ಯಕ್ತಿಯಾಗಿದ್ದಳು, ಆದರ್ಶವಾಗಿದ್ದಳು, ಕೇಂದ್ರಬಿಂದುವಾಗಿದ್ದಳು. ತನ್ನ ಮೂವತ್ತೊಂದನೆಯ ವಯಸ್ಸಿನಲ್ಲಿ ತನ್ನ 24-25 ವರ್ಷದ ಬದುಕಿನತ್ತ ತಿರುಗಿ ನೋಡಿದರೆ ಅವನಿಗೆ ನಗು ಬರುತ್ತಿತ್ತು. ಅವಲಂಬಿತ ಬದುಕಿನಲ್ಲಿ ಸೆಲ್ಫ್ ಕಾನ್ಫಿಡೆನ್ಸ್ ಎನ್ನುವುದೊಂದು ಮೂಲಭೂತವಾಗಿ ಅವನಲ್ಲಿ ಬೆಳೆದೇ ಇರಲಿಲ್ಲ. ಮೊದಲೊಂದು ಕಡೆ ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಯ ಎಂ.ಡಿ.ಯನ್ನು ದೇವರಂತೆ ಆತ ಪೂಜಿಸುತ್ತಿದ್ದ. He is an absolute power in my life ಎಂಬುದು ಅವನ ಭಾವನೆಯಾಗಿತ್ತು. ಈಗ ನೆನೆಸಿಕೊಂಡರೆ ಅವನಿಗೆ ನಗು ಬರುತ್ತದೆ. ಗಂಗಾ ಕೂಡಾ ನಗುತ್ತಾಳೆ. ಅಲ್ಲಿ ಎಲ್ಲಿಯೂ ತಾನು ಒಬ್ಬ ವ್ಯಕ್ತಿಯಾಗಿ ರೂಪುಗೊಳ್ಳಲೇ ಇಲ್ಲವೇನೋ ಎಂದು ಅನಿಸುತ್ತದೆ ಆತನಿಗೆ. ಪ್ರತಿಯೊಂದರಲ್ಲೂ ತಾನು ತಂದೆಗೆ ಅಂಟಿಕೊಳ್ಳುತ್ತಿದ್ದ ರೀತಿ, ನಂತರ ತಂದೆಯ ಸ್ಥಾನದಲ್ಲಿ ಎಂ.ಡಿ.ಯನ್ನು ನಿಲ್ಲಿಸಿ - ಅವರಿಗೆ ಅಂಟಿಕೊಳ್ಳುತ್ತಿದ್ದ ರೀತಿ, ಹಾಲೆಂಡಿನಲ್ಲಿ ಎಲೆಕ್ಟ್ರಾನಿಕ್ಸ್ ಜಗತ್ತಿನ ಜೊತೆ ಗುರುತಿಸಿಕೊಳ್ಳಲು ಡ್ಯಾನ್ಸ್ ಕಲಿಯಲು ಪ್ರಯತ್ನಿಸಿದ್ದು, ಬಾರ್‌ನಲ್ಲಿ ಕುಳಿತು ಸರ್ವ್ ಮಾಡುತ್ತಿದ್ದ ಬಿಳಿಯ ಹೆಂಗಸನ್ನು ಭಯ ಮಿಶ್ರಿತ ಕುತೂಹಲದಿಂದ ನಿರೀಕ್ಷಿಸಿದ್ದು - ತನ್ನ ವ್ಯಕ್ತಿತ್ವದ ಹರವುಗಳನ್ನು ಕುರಿತು ರಮೇಶ ಮತ್ತೆ ಮತ್ತೆ ಯೋಚಿಸುತ್ತಾನೆ. ಗಂಗಾ ತನ್ನ ಬಾಳಿನಲ್ಲಿ ಪ್ರವೇಶಿಸಿರದಿದ್ದರೆ ತಾನೇನಾಗಿರುತ್ತಿದ್ದೆ? ಯಾವುದೋ ಶ್ರೀಮಂತ ಹುಡುಗಿಯ ಕೈಹಿಡಿದು ಈ ಪ್ರಾಪಂಚಿಕ ವ್ಯವಹಾರದ ಜಗತ್ತಿನಲ್ಲಿ ಪೂರ್ತಿಯಾಗಿಯೇ ತನ್ನನ್ನು ತೊಡಗಿಸಿಕೊಂಡು ಬಿಡುತ್ತಿದ್ದೆನೇನೋ ಅನ್ನಿಸುತ್ತದೆ. ಭಾರತಕ್ಕೆ ಮರಳಿ ಬಂದಾಗ ಗಂಗಾ/ತನ್ನ ಮಧ್ಯೆ ಮನೆಯವರ ಪ್ರವೇಶದಿಂದ ಮೂಡಿದ್ದ ಬಿರುಕಿನ ಕ್ರೈಸಿಸ್‌ನಲ್ಲಿ ಸ್ವತಂತ್ರವಾಗಿ ನಿರ್ಧರಿಸಿ ತಾನ್ಹೇಗೆ ಈಚೆ ಬಂದೆ

ಎಂಬುದನ್ನು ನೆನೆಸಿಕೊಂಡಾಗ ಅವನ ವ್ಯಕ್ತಿತ್ವದ ಬಗ್ಗೆ ಅವನಿಗೇ ಸಂತೋಷವಾಗುತ್ತದೆ. ಈ ಐದು ವರ್ಷಗಳಲ್ಲಿ ಮಿತ/ಗಂಗಾರೊಡನೆ ಕಳೆದ ಬದುಕು ಸುಂದರವಾಗಿಯೇ ಇದೆ ಆತನಿಗೆ. ಆಗೀಗ ಗಂಗಾ ಗೊಣಗಿದಾಗ ಆಗುವ ಚಿಕ್ಕ-ಪುಟ್ಟ ರಗಳೆಯನ್ನು ಬಿಟ್ಟರೆ ಅವರೀರ್ವರ ನಡುವೆ ಅಷ್ಟರ ಮಟ್ಟಿಗೆ ಜಗಳವಾಗಿದ್ದೇ ಕಡಿಮೆ. ಗಂಗಾ ಇಷ್ಟು ಸಿಟ್ಟು ಮಾಡಿಕೊಂಡರೂ ಆತ ಕೆಲಸಕ್ಕೆ ಹೋಗದೇ ವಾಪಸ್ಸು ಬಂದುಬಿಡುತ್ತಿದ್ದ. ಅಥವಾ ಎರಡು ತಾಸು ತನ್ನಷ್ಟಕ್ಕೆ ತಾನೇ ಒಂಟಿಯಾಗಿ ಇದ್ದು ತಾನೆಲ್ಲಿ ತಪ್ಪು ಮಾಡಿದೆ ಎಂದು ಯೋಚಿಸುತ್ತಿದ್ದ. ಇತ್ತೀಚಿನ ದಿನಗಳಲ್ಲಿ ಗಂಗಾ 'Now a days you take me for granted' ಎನ್ನುವಳು. 'I am becoming a full time housewife' ಎನ್ನುವಳು. 'ನಿನ್ನ ಕೆಲಸದ Natureನಿಂದಾಗಿ ಇಡಿಯ ಸಂಸಾರದ ಜವಾಬ್ದಾರಿಯ ಹೊರೆ ನನ್ನ ಮೇಲೆ ಬಿದ್ದಿದೆ' ಎನ್ನುವಳು. 'I am already dead in a way' ಎಂದು ಗೊಣಗುವಳು. ಕೂತು ಏನಾದರೂ ಬರೆಯಲು ಪ್ರಯತ್ನಿಸಿದರೆ ಮನಸ್ಸಿನಲ್ಲಿ ಶಬ್ದಗಳೂ ಮೂಡದೇ ಒಂಟಿ ಎನ್ನಿಸಿ ಮನಸ್ಸೆಲ್ಲಾ ಖಾಲಿ ಖಾಲಿ ಎನಿಸಿಬಿಡುತ್ತದೆ ಎನ್ನುವಳು. ಒಬ್ಬನೇ ಕೂತು ಗಂಗಾ ಹೇಳುವುದನ್ನೆಲ್ಲಾ ನೆನೆಸಿಕೊಂಡರೆ ಗಂಗಾಗೆ ಹಾಗೆ ಅನ್ನಿಸುವುದು ಸಹಜವೇನೋ ಎನಿಸುತ್ತಿತ್ತು. ಆಗೆಲ್ಲಾ ಅವನಿಗೆ ಕಾಡುತ್ತಿದ್ದುದು ಪಾಪ ಪ್ರಜ್ಞೆಯೇ. ತನ್ನ ವ್ಯಕ್ತಿತ್ವದ ಹರವುಗಳು ಬೆಳೆಯುತ್ತಾ ಹೋದ ಹಾಗೆಲ್ಲಾ, ಸಂಸಾರದ ಜವಾಬ್ದಾರಿ ಹೊರುವ ಗಂಗಾಳ ವ್ಯಕ್ತಿತ್ವದ ಹರವುಗಳು ನಶಿಸುತ್ತಾ ಹೋಗುತ್ತಿವೆ ಎನ್ನಿಸಿದಾಗ ಆಕೆಯ ಗೊಣಗಾಟ ಅವನಿಗೆ ಅರ್ಥವಾಗುತ್ತದೆ. ಆಕೆಯ ವ್ಯಕ್ತಿತ್ವದ ಒಳಗೆಲ್ಲೋ ನೋವು ಮಡುಗಟ್ಟುತ್ತಿದೆ ಎನ್ನುವುದು ಆತನ ಅರಿವಿಗೆ ಬರತೊಡಗಿತ್ತು. ತಾನು ತಿಂಗಳಲ್ಲಿ ಹತ್ತು/ಹದಿನೈದು ದಿನಗಳು ಕೆಲಸಕ್ಕೆಂದು ಹೊರಟು ಹೋದರೆ ಬಹುಶಃ ಗಂಗಾಳಿಗೆ ಮಗು/ಮನೆ/ಕೆಲಸ ಎಂದು ಬಿಟ್ಟರೆ ಬೇರೆ ಇನ್ನೇನನ್ನೂ ಮಾಡಲಿಕ್ಕೆ ಆಗುತ್ತಿರಲಿಲ್ಲ. ಹಾಗಾಗಿ ಮನೆಯಲ್ಲಿ ಇರುವಾಗಲೆಲ್ಲಾ ಅನೇಕಾನೇಕ ಜವಾಬ್ದಾರಿಗಳನ್ನು ತನ್ನ ಮೇಲೆ ಹೇರಿಕೊಳ್ಳಲು ರಮೇಶ ಪ್ರಯತ್ನಿಸುತ್ತಿದ್ದ. ಗಂಗಾಳಿಗೆ ಅವಳ ಬರಹದ ಕೆಲಸ, ಪತ್ರಿಕೆಯ ಕೆಲಸ, ಸಾಹಿತ್ಯದ ಸಭೆಗಳಿಗೆ ಹೋಗುವುದು ಇಂತಹ ಕೆಲಸಗಳಿಗೆ ತೊಡಗಿಸಿಕೊಳ್ಳಲು ಅನುವು ಮಾಡಿಕೊಡುತ್ತಿದ್ದ. ಆದರೆ ಅದು ಸಾಧ್ಯವಾಗುತ್ತಿದ್ದುದು ಅವನು ಮನೆಯಲ್ಲಿ ಇದ್ದಾಗ ಮಾತ್ರ. ಹೊರಗಡೆ ಕೆಲಸದ ಒತ್ತಡಗಳು ಜಾಸ್ತಿಯಾದಾಗ ಮನೆಯ ಕಡೆಯ ಜವಾಬ್ದಾರಿಗಳೆಲ್ಲಾ ಆಕೆಯ ಮೇಲೆಯೇ. ಸಂಸಾರದ ಜವಾಬ್ದಾರಿ ನಿಭಾಯಿಸುವ ಅವನ ನಿರ್ಧಾರಗಳು ಎಲ್ಲಿಯೋ ಮಾಯವಾಗಿಬಿಡುತ್ತಿದ್ದವು. ಹದಿನೈದು ದಿನ ಆಚೆ ಕೆಲಸ ಮಾಡಿ ಬಂದರೆ ಹಗಲೂ-ರಾತ್ರಿ ಬಸ್ಸುಗಳಲ್ಲಿನ ಪ್ರಯಾಣ, ಜನರೊಂದಿಗೆ ಮಾತು-ಕತೆ, ಮೀಟಿಂಗ್, ಟ್ರೈನಿಂಗ್, ವರ್ಕ್‌ಶಾಪ್ ಇಂತಹ ಕೆಲಸಗಳಿಂದಾಗಿ ಆತನಿಗೇ ಮಾನಸಿಕ/ದೈಹಿಕ ನೆಮ್ಮದಿ ಬೇಕು ಎನಿಸುತ್ತಿತ್ತು. ಮಲಗಿದಲ್ಲಿಯೇ ಮಲಗಿದ್ದು ಕಾಲ ಕಳೆಯಬೇಕು ಎನಿಸುತ್ತಿತ್ತು. ಗಂಗಾ/ಮಿತಾ ಬಿಟ್ಟರೆ ಮನೆಗೆ ಯಾರು ಬರುವುದು ಹಿತ ಕೊಡುತ್ತಿರಲಿಲ್ಲ. ರಮೇಶ ದಿನಗಟ್ಟಲೇ ಮಲಗಿಬಿಟ್ಟರೆ ಗಂಗಾ ಕಿರಿ ಕಿರಿ ಮಾಡುವಳು. ತಾನು ಮನೆ ಬಿಟ್ಟು ಹದಿನೈದು ದಿನ ಆಚೆ ಇರಬೇಕಾದ ಕೆಲಸ ಮಾಡುವುದಾಗಿದ್ದರೆ - ಕೆಲಸ ಮಾಡಲು ತನಗೆ ಸಾಧ್ಯವಾಗುತ್ತಿತ್ತೇ? ಸಾಧ್ಯವಾಗಿದ್ದರೂ ಮನೆಗೆ ಬಂದಾಗ ಹೀಗೆ ಮಲಗುವ ಸವಲತ್ತುಗಳಾದರೂ ಇರುತ್ತಿತ್ತೇ? ಅವರೂ-ಇವರೂ ಬಯ್ಯುತ್ತಾರೆ ಎಂದಲ್ಲ - ಆದರೆ ತಮ್ಮದೇ ಪಾಪ ಪ್ರಜ್ಞೆ. ಅಯ್ಯೋ ಹದಿನೈದು ದಿನ ಆಚೆಯೇ ಕಳೆದುಬಿಟ್ಟಿದ್ದೇನಲ್ಲ, ಮಗು/ಮನೆ/ಕೆಲಸ ಅಂತ ಓಡಾಡಿದ್ದಾರಲ್ಲ ಎನ್ನುವ ಕುಟುಕು, ಮಾನಸಿಕ ನೋವು ಹೆಚ್ಚಾಗಿ ಮೂರೂ ಹೊತ್ತು ಕೆಲಸ ಮಾಡಿಕೊಂಡೇ ಇದ್ದು ಬಿಡುತ್ತಿದ್ದಳೋ ಏನೋ? ಹೆಂಗಸರ ಪ್ರಜ್ಞೆಯೇ ಹಾಗೆಯೇನೋ ಎಂದು ಗಂಗಾಳಿಗೆ ಅನ್ನಿಸುತ್ತಿತ್ತು. ಇನ್ನೊಬ್ಬರಿಗೆ ಕಷ್ಟವಾಯಿತಲ್ಲ, ನಾವು ಇನ್ನೊಬ್ಬರ ಮೇಲೆ ಕೆಲಸ ಹೊರಿಸಿ, ಒಬ್ಬ ವ್ಯಕ್ತಿಯ ಮೇಲೆಯೇ

ಎಲ್ಲಾ ಜವಾಬ್ದಾರಿ ಹಾಕಿಬಿಟ್ಟರೆ ಖಂಡಿತಾ ಆ ವ್ಯಕ್ತಿಗೆ ಬೇಸರವಾಗುತ್ತದೆ. ರಮೇಶ ಮಲಗಿ ಬಿಟ್ಟಾಗಲೆಲ್ಲಾ ಗಂಗಾ ಗೊಣಗುವಳು. 'You take me for granted' ಎನ್ನುವಳು. ಹೆಂಗಸರ ಪ್ರಶ್ನೆಯೇ ಬೇರೆ ಎನ್ನುವಳು. 'ನಾನೇನಾದರೂ ಹೀಗೆ ಹತ್ತೂ ಹದಿನೈದು ದಿನ ಹೋದರೆ ಅಯ್ಯೋ ಮಗು, ಮನೆ ನೋಡಲಿಲ್ಲವಲ್ಲಾ ಎನ್ನುವ ಪಾಪಪ್ರಜ್ಞೆಯಲ್ಲಿಯೇ ಎಲ್ಲಾ ಕೆಲಸ ಮಾಡಿಬಿಡುವೆ' ಎನ್ನುವಳು. 'ತನಗೆ ಒಪ್ಪಂದ ಎನ್ನುವುದು ಎಷ್ಟೊಂದು ಅನಿವಾರ್ಯವಾಗುತ್ತಿದೆ' ಎನ್ನುವಳು. ಸೂಕ್ಷ್ಮಮತಿಯುಳ್ಳ ರಮೇಶನಿಗೆ ಇದೆಲ್ಲಾ ಅರ್ಥವಾಗುತ್ತಿರಲಿಲ್ಲ ಎಂದಲ್ಲ. ಆದರೂ ಮನಸ್ಸು/ದೇಹ ದಣಿದರೆ, ಮನೆ ಎಂದು ಬಂದರೆ ಎರಡು ದಿನ ಏನೂ tension ಇಲ್ಲದೇ ಹಾಯಾಗಿ ಮಲಗಿಬಿಡುವ ಎನಿಸಿಬಿಡುತ್ತಿತ್ತು. ಗಂಗಾಳ ಪ್ರಕಾರ ಈ ಯೋಚನೆಯೇ ತಪ್ಪೇನೋ? ಗಂಗಾಳಿಗೆ ತನ್ನ ಮಾನಸಿಕ, ದೈಹಿಕ ನೋವುಗಳು ಅರ್ಥವಾಗುವುದೇ ಇಲ್ಲವೇ? ನಿದ್ರೆ, ವಿಶ್ರಾಂತಿಗಳಿಲ್ಲದೇ ಕಳೆಯುವ ತನ್ನ ಜೀವನದ ಭಾಗ ಆಕೆಗೆ ಅರ್ಥವಾಗುವುದೇ ಇಲ್ಲವೇ? ಇಂತಹ ಸಂದರ್ಭಗಳಲ್ಲಿ ರಮೇಶನಿಗೆ ಸಿಟ್ಟು ಬರುತ್ತಿದ್ದುದೂ ಉಂಟು. ಆಗೆಲ್ಲಾ ಗಂಗಾ, 'ರಮೇಶ ನಾನು bargain ಮಾಡುತ್ತಿಲ್ಲ. ಆದರೆ ನನಗೆ ನನ್ನದೇ ಎನ್ನುವ ಸಮಯವೇ ಸಿಕ್ಕುವುದಿಲ್ಲ. ಹಾಗಾಗಿ ಬೇಸರ ಎನಿಸುತ್ತದೆ ಅಷ್ಟೇ. ನೀನು ಬಂದು ಮಲಗಿಬಿಟ್ಟರೆ ನನಗೆ ಅಸೂಯೆ ಎನಿಸುತ್ತದೆ. ಯಾಕೆಂದರೆ ನೀನು ಹದಿನೈದು ದಿನ ಇರುವುದಿಲ್ಲ. ಇದ್ದಾಗ ಮಾತ್ರದಲ್ಲಿ ಕೆಲಸ ಮಾಡುತ್ತೀ. ರೇಷನ್ ತಂದಿಡುವುದು ಇತ್ಯಾದಿ, ಇತ್ಯಾದಿ. ಆದರೆ ನಿತ್ಯದ ಕೆಲಸಗಳು? ಈ ಕೆಲಸಗಳನ್ನೇ ಮಾಡಿ, ಮಾಡಿ, ರಗಳೆ ಎನಿಸಿದಾಗ ನಿನ್ನನ್ನು ನೋಡಿದರೆ, ನೀನು ಮಲಗಿರುವುದನ್ನು ನೋಡಿದರೆ ಅಸೂಯೆ ಅಲ್ಲದೇ ಪ್ರೀತಿ ಹುಟ್ಟುವುದಿಲ್ಲ, ರಮೇಶ್' ಎನ್ನುವಳು. ರಮೇಶನಿಗೆ ಅವಳ frustration ಅರ್ಥವಾಗುವುದಿಲ್ಲ ಎಂದಲ್ಲ. ಮನಸ್ಸಲ್ಲಿ ಪಾಪಪ್ರಜ್ಞೆ ಕಾಡಿದರೆ ಎದ್ದು ಕೆಲಸಕ್ಕೆ ತೊಡಗಿಬಿಡುತ್ತಾನೆ. ಅಡಿಗೆಯ ಪೂರ್ಣ ಜವಾಬ್ದಾರಿಯಿಂದ ಹಿಡಿದು ಮಿತಾಳ ಸ್ನಾನದವರೆಗೆ ಎಲ್ಲಾ ಕೆಲಸ ಅವನೇ ಮಾಡಿ ಮುಗಿಸಿಬಿಡುತ್ತಾನೆ. ತನ್ನ ವ್ಯಕ್ತಿತ್ವ ಬೆಳೆಯುತ್ತಾ ಹೋದ ಹಾಗೆ ಮನೆಗೇ, ಮನೆಯ ಜವಾಬ್ದಾರಿಗೇ ಅಂಟಿಕೊಳ್ಳಬೇಕಾದ ಅಸಹಾಯಕತೆಯಿಂದ ಗಂಗಾಳಲ್ಲಿ ಆಕೆಯ ವ್ಯಕ್ತಿತ್ವ ನಶಿಸುವ ಬಗ್ಗೆ ಒಂದು ರೀತಿಯ ಅಸೂಯೆ ಹುಟ್ಟುತ್ತಿರುವುದು ನಿಜವೇನೋ ಎಂದು ರಮೇಶನಿಗೆ ಅನ್ನಿಸುತ್ತದೆ. ತಾನು ಕೆಲಸ, ಕೆಲಸ ಎಂದು ಹಲವಾರು ಜನರನ್ನು ಭೇಟಿಯಾಗುತ್ತೇನೆ. ಹಲವಾರು ಪ್ರದೇಶಗಳನ್ನು ಸುತ್ತುತ್ತೇನೆ. ಗಂಗಾ ಎರಡು ಅಥವಾ ಮೂರು ಘಂಟೆ ಪಾಠ ಮುಗಿದಾಕ್ಷಣ ಮನೆಗೆ ಓಡಿ ಬರುತ್ತಾಳೆ. ಉಸಿರಿಲ್ಲದ ಹಾಗೆ ಮತ್ತೆ ಮನೆಗೆಲಸಕ್ಕೆ ತನ್ನನ್ನು ರೂಢಿಸಿಕೊಳ್ಳಲೇಬೇಕು ಎನ್ನುತ್ತಾಳೆ. ಇಂತಹವುಗಳೆಲ್ಲ ಆಕೆಯಲ್ಲಿ ಅಸಹಾಯಕತೆ ಹುಟ್ಟಿಸುವುದರ ಜೊತೆಗೆ ಅಸೂಯೆ ಕೂಡಾ ಹುಟ್ಟಿಸಿಬಿಡುತ್ತವೆಯೇನೋ ಎಂದು ಯೋಚಿಸುವಾಗಲೆಲ್ಲಾ ತಾನು ತನ್ನ ಕೆಲಸ ಹಾಗೂ ಕುಟುಂಬದ ಮಧ್ಯ balance ಮಾಡುವುದು ಅಗತ್ಯ ಎನಿಸುತ್ತದೆ. ಆದರೂ ಕೆಲಸ/ಹಣ ಎನ್ನುವುದು ಜೀವನದಲ್ಲಿ ಎಷ್ಟೊಂದು ಬಗೆಯ ಒಪ್ಪಂದಗಳನ್ನು ಹುಟ್ಟುಹಾಕುತ್ತಾ ಹೋಗಬಹುದು ಎಂದು ಗಂಗಾಳ ರೀತಿಯೇ ಆತನೂ ಯೋಚಿಸುತ್ತಾನೆ. ಗಂಗಾ ಹೇಳುವ ರೀತಿಯೇ I should not take her for granted ಎನಿಸುತ್ತದೆ. ಹಾಗೆ ನಿರ್ಧರಿಸಿ ಆದರಂತೇ ಎಂಟು ದಿನ ನಡೆಯುತ್ತಾನೆ. ಮತ್ತೆ ಟೂರ್‌ಗೆ ಹೋಗಿ ಬಂದಾಗ ಆತನ ಲೆಕ್ಕಾಚಾರವೆಲ್ಲಾ ತಲೆಕೆಳಗಾಗುತ್ತದೆ. ಮೈ-ಕೈ ನೋವಿಗೆ ಮಲಗಿದಲ್ಲಿಂದ ಏಳುವುದೇ ಬೇಡ ಎನಿಸುತ್ತದೆ. ಬಂಡವಾಳಶಾಹಿತ್ವ ವ್ಯವಸ್ಥೆ ಕುಟುಂಬದ ಮಧ್ಯೆ ಹುಟ್ಟು ಹಾಕುವ ಬಿರುಕುಗಳನ್ನು ರಮೇಶ್ ಶಾಂತವಾಗಿ ಕುಳಿತುಕೊಂಡು ಯೋಚಿಸಲು ಪ್ರಯತ್ನಿಸುತ್ತಾನೆ. ಪರಿಸರದ ಬಗ್ಗೆ ರಮೇಶ ಮಾತನಾಡುವಾಗಲೆಲ್ಲಾ ಗಂಗಾ ಅನೇಕ ಬಾರಿ ತಮಾಷೆ ಮಾಡಿ ನಗುತ್ತಾಳೆ. 'ಅದೇನು drought hit areaಕ್ಕೆ ಹೋಗಿ ಕೆಲಸ ಮಾಡುತ್ತೀಯ? ನಮ್ಮ ಮನೆಯಲ್ಲಿಯೇ ಕ್ಷಾಮ ಇದೆ ಎಂಬುದನ್ನು

ನೀನು ಗಮನಿಸಿಕೊಳ್ಳುವುದೇ ಇಲ್ಲ. ಮನೆಯ ಮುಂದೆ ಇರುವ ತೋಟದ ಬಗ್ಗೆಯೇ ನೀನು ಯೋಚಿಸುವುದಿಲ್ಲ. ಅಂದರೆ ಮನೆಯಿಂದಲೇ ಪ್ರಾರಂಭವಾಗದ ನಿನ್ನ Commitment ಹೊರಗಡೆ ಅಂದರೆ ವಿಶಾಲವಾದ ಜಗತ್ತಿನಲ್ಲಿ ಮಾತ್ರ ನಿಜ ಆಗುವಂತಹದೇ' ಎಂದು ನಗು ನಗುತ್ತಲೇ ಹೇಳುತ್ತಾಳೆ. ಆಕೆ ಬರಿಯ ತಮಾಷೆ ಮಾಡುತ್ತಿಲ್ಲ ಎಂಬುದು ಆತನಿಗೂ ಗೊತ್ತು. ತೋಟದ ಬಗ್ಗೆ ಆಕೆ ಹೇಳುವುದು ನಿಜ. ಮನೆಯ ಮುಂದಿನ ಗಿಡ-ಮರಗಳ ಬಗ್ಗೆಯೇ ತನಗೆ ಲಕ್ಷ್ಯವಿಲ್ಲ. ಆಕೆ ಅಷ್ಟೇ ಮಾತನಾಡುತ್ತಿದ್ದಾಳೆ ಎಂದು ಕೂಡಾ ಆತನಿಗೆ ಅನ್ನಿಸುವುದಿಲ್ಲ. ಓಡುವ ತನ್ನ ಬದುಕಿನಲ್ಲಿ ಹಾಗೂ ಗಂಗಾಳ ಬದುಕಿನಲ್ಲಿ ಒಬ್ಬರ ಮೈಯನ್ನೊಬ್ಬರು ಪ್ರೀತಿಯಿಂದ ಮುದ್ದಿಸುವ ಘಳಿಗೆಗಳ ಕೊರತೆಯೂ ಉಂಟಾದಂತೆ ಭಾಸವಾಗುತ್ತಿತ್ತು. ರಮೇಶನಿಗೆ ಕೆಲಸದ ಭರಾಟೆ, ಗುಂಗು ಎಷ್ಟು ಹತ್ತಿಕೊಂಡುಬಿಟ್ಟಿತ್ತೆಂದರೆ ಗಂಗಾಳನ್ನು ಮುದ್ದಿಸುವಾಗಲೂ ಎಲ್ಲಿಯೋ ಅದೇ ಗುಂಗು. ಮೂರು-ನಾಲ್ಕು ವರ್ಷಗಳ ಹಿಂದೆ ರಮಿಸುವ, ಪ್ರೀತಿಸುವ ರಮೇಶನ ಪ್ರೀತಿಯಲ್ಲಿ ಗಂಗಾ ಸಂಪೂರ್ಣವಾಗಿ ತನ್ನನ್ನೇ ಮರೆತುಬಿಡುವಳು. ಆಕೆಯನ್ನೇ ಮರೆಸುವಷ್ಟಿದ್ದ ಪ್ರೀತಿಯ ಗುಂಗು ಈಗ ಕ್ರಮೇಣವಾಗಿ ರಮೇಶನಲ್ಲಿ ಕೆಲಸದ ಗುಂಗಾಗತೊಡಗಿತ್ತು. ಆತನ ದೇಹದ ಬಯಕೆಗಾಗಿ, ಒತ್ತಡಕ್ಕಾಗಿ ಮಾತ್ರ ಮಲಗುವಂತೆ ಮಲಗಿ, ಸುಖಿಸಿ ಸುಮ್ಮನಾಗಿಬಿಡುತ್ತಿದ್ದ. ಇಂತಹ ಹಲವಾರು ಸಂದರ್ಭಗಳಲ್ಲಿ ಗಂಗಾಳ ಬೇಸರವನ್ನು ಅವಳ ಮುಖದಲ್ಲಿ ಗಮನಿಸಿಕೊಂಡಿದ್ದ ರಮೇಶ. ಗಮನಿಸಿಕೊಂಡಿದ್ದನ್ನು ಕೂತು ಆಲೋಚಿಸುವಷ್ಟು, ಆಲೋಚಿಸಿದ್ದನ್ನು ಕಾರ್ಯರೂಪಕ್ಕೆ ತರುವಷ್ಟು ಸಮಯ/ಸಂದರ್ಭಗಳು ಆತನಿಗೆ ಒದಗಿ ಬರುತ್ತಿರಲಿಲ್ಲ. 'ಮನೆಯಲ್ಲಿಯೇ drought ಇದೆ - ಅದರ ಬಗ್ಗೆ ರಾಯರಿಗೆ, ಚಿಕ್ಕ ಸಾಹೇಬರಿಗೆ ಚಿಂತೆಯೇ ಇಲ್ಲದಷ್ಟು ಕೆಲಸಕ್ಕೆ ಅಂಟಿಕೊಂಡರೆ ಹೇಗೆ?' - ಎಂದು ಗಂಗಾ ತಮಾಷೆ ಮಾಡುವಳು. ಹಾಗೆ ಗಂಗಾ ತಮಾಷೆ ಮಾಡಿದಾಗಲೆಲ್ಲಾ ರಮೇಶನಿಗೆ ಅರ್ಥವಾಗುವುದಿಲ್ಲ ಎಂದಲ್ಲ. ಆ ಪಾಪಪ್ರಜ್ಞೆಯೂ ಆತನಲ್ಲಿ ಕಾಡಿದಾಗ ಒಂಟಿಯಾಗಿದ್ದು ನರಳುವನು. ತನ್ನ ಬದುಕು/ಕುಟುಂಬದ ಮಧ್ಯೆ balance ಮಾಡುವುದನ್ನು ಕಲಿಯಬೇಕು ಎಂದು ಯೋಚಿಸುವನು. ತಾನು ಕೆಲಸ, ಕೆಲಸ ಎಂದು ಮೂರೂ ಹೊತ್ತು ಕೆಲಸಕ್ಕೇ ಅಂಟಿಕೊಳ್ಳುವ ಬಗೆಯಿಂದ ಗಂಗಾ ಹಾಗೂ ತನ್ನ ಮಧ್ಯೆ ಬಿರುಕು ಬರಬಹುದೇನೋ ಎಂಬ ಹೆದರಿಕೆ ಉಂಟಾಗುತ್ತಿತ್ತು ಅವನಿಗೆ. ಒಂದಷ್ಟು ದಿನ ರಜೆ ಹಾಕಿ ಗಂಗಾ ಹಾಗೂ ಮಗುವಿನ ಜೊತೆ ಇದ್ದುಬಿಡಬೇಕು ಎಂದು ಯೋಚಿಸುವನು. ಮನೆಯ ಬಗ್ಗೆ ಗಮನ ವಹಿಸಬೇಕು ಎಂದುಕೊಳ್ಳುವನು. ಗಂಗಾ ಹಾಗೂ ಮಗುವಿನ ಜೊತೆ ಎಲ್ಲಿಗಾದರೂ ಟೂರ್ ಹೋಗಬೇಕು ಎಂದು ನಿರ್ಧರಿಸುವನು. ಬಿಡುವಿಲ್ಲದ ತನ್ನ ಕೆಲಸಗಳಲ್ಲಿ ಗಂಗಾಳ ಆಪ್ತ ಸುಖಗಳ ಬಗ್ಗೆ ಕೂಡಾ ಯೋಚಿಸುವಷ್ಟು, ಸಮಯ ವ್ಯಯಿಸುವಷ್ಟು ವ್ಯವಧಾನ ತನಗಿಲ್ಲವಾಗಿದೆಯೇನೋ ಎಂದು ತನ್ನೊಳಗೇ ಕೊರಗುವನು. ತಾನು ಕುಟುಂಬದ ವಿಚಾರದಲ್ಲಿ, ಗಂಗಾಳ ಬದುಕಿನ ವಿಚಾರದಲ್ಲಿ ಬಹಳಷ್ಟು insensitive ಆಗುತ್ತಿರುವೆನೇನೋ ಎಂಬ ಭಯ ಆತನಿಗೇ ಉಂಟಾಗುವುದು. ಆ ಭಯ ಒಂದು ರೀತಿಯ ಆತಂಕವಾಗಿ ಅವನನ್ನು ಇತ್ತೀಚಿನ ದಿನಗಳಲ್ಲಿ ಗಾಢವಾಗಿ ಕಾಡತೊಡಗಿತ್ತು. ಕೆಲಸದ ಮೇಲೆ tour, workshop, training ಎಂದು ಆಚೆ ಕಡೆ ಹೋದಾಗ ಅವನ ಮನಸ್ಸು ಮೊದಲಿನ ಹಾಗೆ ಹಿಡಿತದಲ್ಲಿಯೇ ಇರುತ್ತಿರಲಿಲ್ಲ. ಏನೋ ಗೊಂದಲ, ಏನೋ ಆಂತರಿಕ ಭಯ. ಗಂಗಾ ಯಾವಾಗಲೂ ಹೇಳುವ ಮಾತು ಆತನಿಗೆ ನೆನಪಾಗುತ್ತದೆ. ನಮ್ಮ ಬದುಕನ್ನು ನಮ್ಮ ಕೈಯಲ್ಲೇ ಇಟ್ಟುಕೊಂಡಿರಬೇಕು, ನಮ್ಮ ಕಡಿವಾಣಕ್ಕೆ ತೆಗೆದುಕೊಳ್ಳಬೇಕು. ರಮೇಶ ಕೂಡಾ ತನ್ನ ಬದುಕನ್ನು ತಾನೇ ಕೈಗೆ ತೆಗೆದುಕೊಳ್ಳಬೇಕು, ತನ್ನ ಕೆಲಸ ಹಾಗೂ ಸಂಸಾರದ ಮಧ್ಯೆ ಒಂದು balance ಕಾಪಾಡಿಕೊಳ್ಳಬೇಕು ಎಂದು ಗಟ್ಟಿಯಾಗಿ ನಿರ್ಧರಿಸತೊಡಗಿದಾಗ ಈ ದಿಕ್ಕಿನತ್ತ ಅವನ ಆಲೋಚನೆಗಳು ಬಲವಾಗಿ ಹಮ್ಮಿಕೊಳ್ಳತೊಡಗುತ್ತವೆ.

* * * *

ಮನೆಗೆ ಕರೆಂಟ್ ಕೊಡಿಸಿದ ಹಲವಾರು ದಿನಗಳ ಕಾಲ ಮಧು ಗಂಗಾಳ ಮನೆಯ ಕಡೆ ಸುಳಿಯಲೇ ಇಲ್ಲ. ಆಗೆಲ್ಲಾ ಗಂಗಾ ಆಶ್ಚರ್ಯ ಪಡುವಳು. ಏನಾಯಿತು ಈ ಹುಡುಗನಿಗೆ, ಎಂದುಕೊಳ್ಳುವಳು. ಮೇಡಂ ಮನೆಗೆ ಕರೆಂಟ್ ಕೊಡಿಸಿದ ಮೇಲೆ ತಾನು ಅವರ ಋಣ ತೀರಿಸಿದ್ದೇನೆ ಎನ್ನುವ ಭಾವ ಮಧುವಿನಲ್ಲಿ ಮೂಡಿರಬೇಕು ಅನಿಸುತ್ತದೆ ಗಂಗಾಗೆ. ಮಧು ತಾನು ರಿಲೀವ್ ಮಾಡಿಸಿಕೊಳ್ಳುವುದಕ್ಕಾಗಿ ಓಡಾಡುತ್ತಿದ್ದೇನೆ ಎಂದು ಹೇಳಿ ಹೋದವನು ಸುಮಾರು ದಿನಗಳ ಕಾಲ ಗಂಗಾಳ ಮನೆಯ ಕಡೆ ಸುಳಿದಿರಲೇ ಇಲ್ಲ. ಹೀಗೇ ಎಲ್ಲಿಯಾದರೂ ಸಿಕ್ಕಾಗ 'ಹಲೋ ಮೇಡಂ' ಎನ್ನುವನು. 'ಕಾಫಿ ಕುಡಿಯುವಿರಾ' ಎನ್ನುವನು. ಬಿಸಿಲಿದ್ದರೆ ಅಥವಾ ಮಳೆ ಇದ್ದರೆ 'ಮನೆಗೆ ಬೈಕಿನಲ್ಲಿ ಬಿಡಲೇ' ಎನ್ನುವನು. ಇಷ್ಟು ಬಿಟ್ಟರೆ ಸಂಪೂರ್ಣ ಅಪರಿಚಿತನಂತೆ ಮಧು ವರ್ತಿಸತೊಡಗಿದ್ದ. 'ಯಾಕೆ ಮಧು ಮನೆಯ ಕಡೆ ಬರುವುದಿಲ್ಲ' ಎಂದರೆ 'ನಾನು ರಿಲೀವ್ ಮಾಡಿಸಿಕೊಂಡು ಹೋಗುವುದಕ್ಕೋಸ್ಕರ ಓಡಾಡುತ್ತಿದ್ದೇನೆ. ಹಾಗಾಗಿ ಎಲ್ಲಿಗೂ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ' ಎನ್ನುವನು. ಆದರೂ ಮಧು ಸುಳ್ಳು ಹೇಳುತ್ತಿದ್ದಾನೆ ಎಂದು ಗಂಗಾಗೆ ಅನ್ನಿಸುತ್ತಿತ್ತು. ತನ್ನಿಂದ ಏನನ್ನೋ ಮುಚ್ಚಿಡಲು ಬಯಸುತ್ತಿದ್ದಾನೆ ಎಂಬ ಅನುಮಾನವೂ ಆಕೆಯಲ್ಲಿ ಆಗೀಗ ಸುಳಿಯದಿರಲಿಲ್ಲ. ಮಧು ಅಪರಿಚಿತನಂತೆ ವರ್ತಿಸುವುದನ್ನು ಕಂಡಾಗಲೆಲ್ಲಾ ಬೇಸರ ಎನಿಸುತ್ತಿತ್ತು. ಮತ್ತೊಮ್ಮೆ ಮಧು ಸಿಕ್ಕಾಗ 'ನಿಮಗೆ ನನ್ನ ಮನದ ಆಳದ ಮಾತುಗಳನ್ನೇನೋ ಹೇಳಬೇಕು. ನಾನು ಮಂಗಳೂರಿಗೆ ಹೋಗುವಾಗ ಹೇಳಿ ಹೋಗುತ್ತೇನೆ' ಎಂದಿದ್ದ. ಗಂಗಾ ಜೋರಾಗಿ ನಕ್ಕಿದ್ದಳು. 'ಅಂತೂ ಮಂಗಳೂರಿಗೆ ಹೋಗುವುದರೊಳಗೆ ಮನೆಗೆ ಬರುತ್ತೀರಿ' ಎಂದು ತಮಾಷೆ ಮಾಡಿದ್ದಳು. ಮಧುವನ್ನು ನೋಡಿದಾಗಲೆಲ್ಲಾ ಗಂಗಾಗೆ ರಮೇಶನ ಸಂಬಂಧದ ಪ್ರಾರಂಭದ ದಿನಗಳ ವ್ಯಕ್ತಿತ್ವ ನೆನಪಿಗೆ ಬರುತ್ತಿತ್ತು. ರಮೇಶನ ತರಹವೇ ಮಧುವೂ ಸಂಕೋಚದ ವ್ಯಕ್ತಿಯಾಗಿದ್ದ, ಯಾವಾಗಲೂ ಒಂದು ರೀತಿ ಮುದುಡಿಕೊಂಡಂತೆ ಒಮ್ಮೊಮ್ಮೆ ಕಾಣಿಸುತ್ತಿದ್ದ. ಗೆಳೆಯರೊಟ್ಟಿಗಿದ್ದೂ ಇಲ್ಲದವರಂತೆ ಒಮ್ಮೊಮ್ಮೆ ಇದ್ದುಬಿಡುತ್ತಿದ್ದ. ಇಲ್ಲ ಚೆಸ್ ಆಡುತ್ತಾ ತಾಸುಗಟ್ಟಲೇ ಕುಳಿತುಬಿಡುವನು. ಚೆಸ್ ಆಡುವಾಗ ಮಾತ್ರ ತನ್ನ ಮನಸ್ಸು, ವ್ಯಕ್ತಿತ್ವ ಎರಡನ್ನೂ ಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವನು. 'ಚೆಸ್ ಆಟದಲ್ಲಿ ತಾನು ರಾಜನನ್ನು ಮಾತ್ರ ಬಿಟ್ಟುಕೊಡುವುದಿಲ್ಲ. ಹಾಗೆ ಬಿಟ್ಟುಕೊಟ್ಟರೆ ತನ್ನ ವ್ಯಕ್ತಿತ್ವವನ್ನೇ ಬಿಟ್ಟುಕೊಟ್ಟಂತೆ ಅನ್ನಿಸಿಬಿಡುವುದು' ಎನ್ನುವನು. ಹೀಗೇ ಏನೇನೋ ಮಾತನಾಡುವ ಮಧು-ಇದ್ದಕ್ಕಿದ್ದಂತೆ ತನ್ನ ತಾಯಿಯ ಬಗ್ಗೆ ಮಾತನಾಡುವನು. ಚಿಕ್ಕ ಹುಡುಗನಾಗಿರುವಾಗ ತನಗೆ ನೀಟಾಗಿ ಡ್ರೆಸ್ ಮಾಡಿ, ಮುಂಗುರುಳು ತಿದ್ದಿ 'ಹುಷಾರು ಅಪ್ಪೀ' ಎನ್ನುವಾಗ ಇರುತ್ತಿದ್ದ ಸೌಂದರ್ಯದ ಮಾಧುರ್ಯ ಇಂದು ಎಲ್ಲಿದೆ ಮೇಡಂ ಎನ್ನುವನು. ಯಾವಾಗಲೂ ಲೆಕ್ಕಗಳು, ಲಂಚ - ಹಣ ಎನ್ನುವ ತನ್ನ ಡಿಪಾರ್ಟ್‌ಮೆಂಟ್‌ನಲ್ಲಿ ತನ್ನ ಮಾನಸಿಕ ವ್ಯವಹಾರಕ್ಕೆ ಸ್ಥಾನವೇ ಇಲ್ಲ ಎನ್ನುವನು. ಹೀಗೆ ಮಾತನಾಡುತ್ತಾ ಬಡತನದ ದಿನಗಳನ್ನು ನೆನಸಿಕೊಂಡರೆ - ಆ ದಿನಗಳು ನೆನಪಿಗೆ ಬರದಂತೆ ತಾನು ಈಗ ಡ್ರೆಸ್ ಟ್ರಿಮ್ ಆಗಿ ಮಾಡುವೆನು ಎನ್ನುವನು. ತನ್ನ ಮುಜುಗರ, ಬಡತನದ ಕ್ರೂರತೆ ಮರೆಯಲೆಂದೇ ತಾನು ಬೊಂಬಾಟ್ ಆಗಿ, ಗ್ರ್ಯಾಂಡ್ ಆಗಿ ಬದುಕಬೇಕೆಂದು ಯೋಚಿಸುವುದು ಎನ್ನುವನು. ತಾನೇನು ಎನ್ನುವುದು ಹೊರಗಿನವರಿಗೆ ಗೊತ್ತಾಗಬಾರದು, ಹೊರಗಿನವರಿಗೇಕೆ? ಅನೇಕ ಸಲ ನಾನೇನು ಅನ್ನುವುದು, ನನ್ನ ಅತ್ಯಂತ ಒಳಗಿನ ಮನಸ್ಸಿನ ನೋವುಗಳು ನನಗೇ ಗೊತ್ತಾಗಬಾರದು - ಹಾಗಿರಲಿಕ್ಕೆ ನಾನು ಪ್ರಯತ್ನ ಪಡುತ್ತೇನೆ ಎನ್ನುತ್ತಾನೆ. ಅವನು ಹೇಳುವ ಮಾತಿನಿಂದ ಎರಡು ಅಂಶಗಳನ್ನು ಗಂಗಾ ಗುರುತಿಸಿದ್ದಳು. ಒಂದು ಚಿಕ್ಕ ವಯಸ್ಸಿನಲ್ಲಿ ಅನುಭವಿಸಿದ ಬಡತನದ ಕಾರ್ಪಣ್ಯಗಳು, ಎರಡನೆಯದು ತಾನು ಕಪ್ಪು ಎಂದು ವ್ಯಕ್ತಿತ್ವವನ್ನೆಲ್ಲಾ ಹಬ್ಬಿಕೊಂಡ ನೋವು. ಈ ಬಗ್ಗೆ ಯಾರಾದರೂ ಚೂರು ಮಾತನಾಡಿದರೂ ಆತನ ಕಣ್ಣಂಚಿನಲ್ಲಿ ನೀರು

ತುಂಬಿಕೊಳ್ಳುವುದನ್ನು ಗಂಗಾ ಗಮನಿಸಿದ್ದಳು. ಹೀಗೇ ಏನಾದರೂ ಮಾತಾಡಿಕೊಂಡೋ, ನಕ್ಕುಕೊಂಡೋ, ಹಾಸ್ಯ ಮಾಡುತ್ತಾ ಜೋರು ಜೋರಾಗಿ ನಗುತ್ತಿದ್ದ ಮಧು ಮನೆಗೆ ಬರದೇ ಇರುವ ದಿನಗಳಲ್ಲಿ ಗಂಗಾಳಿಗೆ ಬೇಸರವಾಗುತ್ತಿತ್ತು. ತಾಯಿಯ ತಣ್ಣನೆಯ ದೇಹದ ಸ್ಪರ್ಶದ ನೋವು, ತನ್ನ ಕಳೆದು ಹೋದ ವ್ಯಕ್ತಿತ್ವ, ತಾನು ಕಳೆದುಕೊಳ್ಳುತ್ತಿರುವ ರಮೇಶನ ಮುಗ್ಧ ವ್ಯಕ್ತಿತ್ವದ ಭಾಗವೊಂದನ್ನು ತಾನು ಮಧುವಿನ ಸಂಬಂಧದಲ್ಲಿ ಪಡೆಯುತ್ತಿರುವೆನೇನೋ ಎಂದು ಗಂಗಾಗೆ ಯಾವಾಗಲೂ ಅನ್ನಿಸುತ್ತಿತ್ತು. ಜಡ್ಡುಗಟ್ಟಿ ಹೋಗುತ್ತಿದ್ದ ಮನಸ್ಸಿಗೆ ಚೈತನ್ಯವೊಂದು ಬೇಕಿತ್ತು. ಸಾಯುತ್ತಿರುವ ಮನಸ್ಸಿಗೆ ಬರವಣಿಗೆಯ ಆಸರೆ ಬೇಕಿತ್ತು. ಬರವಣಿಗೆಗಾಗಿ ಭಾವನೆಗಳು ಬೇಕಿತ್ತು. ಭಾವನೆಗಳಿಗಾಗಿ ಜೀವಂತ ಬದುಕು ಬೇಕಿತ್ತು. ಕುಟುಂಬಕ್ಕೇ ಅಂಟಿಕೊಂಡುಬಿಡುತ್ತಿದ್ದೇನೆ, ಬರೆಯಲಿಕ್ಕೆ ಕುಳಿತರೆ ಕೈಯೇ ಓಡುವುದಿಲ್ಲ, ಮನಸ್ಸಿನ ತುಂಬಾ ಖಾಲಿ ಖಾಲಿ. ಶಬ್ದಗಳಿಗೆ ತಡಕಾಡಬೇಕು. ಹೀಗೆಲ್ಲಾ ಅನ್ನಿಸುವಾಗ ಭಾವನೆಗಳ ಹೊತ್ತುಕೊಂಡು, ಬದುಕಿನ ಆಸೆಯ ಕಟ್ಟುತ್ತಿದ್ದ ಮಧುವಿನ ಭಾವನೆಗಳು ತನ್ನಲ್ಲಿ ಎಲ್ಲಿಯೋ ಚೈತನ್ಯ ಉಕ್ಕಿಸುತ್ತವೆಯೇನೋ ಅನ್ನಿಸುತ್ತದೆ. ರಮೇಶನಿಲ್ಲದ ದಿನಗಳ ಬರಡುತನ, ಒಂಟಿತನವನ್ನು ನೀಗಿಸುತ್ತಿದ್ದವು. ತಾನು ಹೊರುತ್ತಿರುವ ಸಂಸಾರದ ಭಾರದ ನಡುವೆ ಚೈತನ್ಯದ ಚಿಲುಮೆಯಾಗಿ ಮಧು ಸುಳಿದಾಡತೊಡಗಿದ್ದ. ಮಂಗಳೂರಿಗೆ ಮಧು ಹೊರಟು ಹೋಗಿಬಿಡುತ್ತಾನೆ ಎನ್ನುವ ಸಂದರ್ಭದಲ್ಲಿ ಗಂಗಾ ಮನಬಿಚ್ಚಿ ಮಧುವಿನೊಂದಿಗೆ ಮಾತನಾಡಿದ್ದಳು. ಬದುಕಿನ ಭಾಗವನ್ನು ಆತ್ಮೀಯವಾಗಿ ಅವನಲ್ಲಿ ಹಂಚಿಕೊಂಡಿದ್ದಳು. ಬದುಕಿನಲ್ಲಿ ಆತ್ಮೀಯ ತಂತುವೊಂದನ್ನು ರೂಢಿಸಿಕೊಳ್ಳಲು ಪ್ರಯತ್ನಿಸಿದ್ದಳು. ಆದರೆ ಕರೆಂಟ್ ಕೊಡಿಸಿದ ಮೇಲೆ ಇದ್ದಕ್ಕಿದ್ದ ಹಾಗೆ ಮಧು ಮನೆಗೆ ಬರುವುದನ್ನು ಕಡಿಮೆ ಮಾಡತೊಡಗಿದ್ದ. ಇದ್ದಕ್ಕಿದ್ದ ಹಾಗೆ ಅಪರಿಚಿತನಂತೆ ವರ್ತಿಸತೊಡಗಿದ್ದ. ದಾರಿಯಲ್ಲಿ ಸಿಕ್ಕಾಗ ಆತ್ಮೀಯನಂತೆ, ಹತ್ತಿರದವನಂತೆ ಮಾತನಾಡಿ ನಂತರ ಪರಿಚಯವೇ ಇಲ್ಲದವನ ಹಾಗೆ ಹೊರಟು ಹೋಗುವನು. ಮಧು ವಿಚಿತ್ರ ಮನಸ್ಸಿನ ವ್ಯಕ್ತಿ ಎಂದು ಗಂಗಾಗೆ ಅನ್ನಿಸತೊಡಗಿತ್ತು.

ಎಷ್ಟೋ ದಿನಗಳ ನಂತರ ಒಂದು ಸಂಜೆ ಮಧು ಮನೆಗೆ ಬಂದಾಗ ಗಂಗಾಗೆ ಸಂತೋಷವಾಗಿತ್ತು. 'ಏನು ಮಧು ಕೊನೆಗೂ ಮೇಡಂ ಮನೆ ಜ್ಞಾಪಕಕ್ಕೆ ಬಂತೇ' ಎಂದಳು. ಮಧು ನಕ್ಕ 'ನಾನು ಇಲ್ಲಿಗೆ ಬರುವುದಿಲ್ಲ ಅಷ್ಟೇ, ಆದರೆ ನನ್ನ ಮನಸ್ಸೆಲ್ಲಾ ಇಲ್ಲಿಯೇ ಇರುತ್ತದೆ' ಎಂದ. ಮಧುವಿನ ಕೈಯಲ್ಲಿ ಅವನ ಡೈರಿ ಇತ್ತು. 'ಅದೇನು ಮಧು ನೀವು ಕೈಯಲ್ಲಿ ಡೈರಿ ಹಿಡಿದುಕೊಂಡೇ ಓಡಾಡುತ್ತೀರಾ' ಎಂದಳು. 'ಹಾಗೇನಿಲ್ಲ ಮೇಡಂ, ಮನಸ್ಸಿಗೆ ಬೇಸರವಾದುದರಿಂದ ಇದನ್ನು ಹಿಡಿದುಕೊಂಡೇ ಓಡಾಡುತ್ತಿದ್ದೇನೆ. ಹೀಗೇ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬನೇ ಕುಳಿತು ಬೇಸರವಾದರೆ, ಅಥವಾ ಮನಸ್ಸಿಗೆ ನೋವಾದರೆ ಬರೆದದ್ದನ್ನೇ ಓದುತ್ತೇನೆ ಅಥವಾ ಏನಾದರೂ ಕೂತು ಬರೆಯುತ್ತೇನೆ' ಎಂದ. 'ನಾನು ನನ್ನ ಮನಸ್ಸಿನಲ್ಲಿರುವ ಸತ್ಯಗಳನ್ನು ಇಲ್ಲಿ ಬರೆಯುತ್ತಾ ಹೋಗುತ್ತೇನೆ. ಯಾವಾಗ ಈ ವ್ಯವಹಾರ ಪ್ರಪಂಚದಲ್ಲಿ ನನಗೆ ಮಾತನಾಡಲು ಸಾಧ್ಯವಾಗುವುದಿಲ್ಲವೋ, ಸಾಧ್ಯವಾಗುವುದಿಲ್ಲ ಎನಿಸತೊಡಗುತ್ತದೆಯೋ ಆಗೆಲ್ಲಾ ನಾನು ಈ ಡೈರಿಯ ಮುಖಾಂತರ ಮಾತನಾಡುತ್ತೇನೆ. ಇದರಲ್ಲಿ ನನ್ನ ಸಾವಿರ ಮಾತುಗಳಿವೆ, ಸಾವಿರ ನೋವುಗಳಿವೆ. ಸಾವಿರ ಸಂತೋಷದ ಕ್ಷಣಗಳಿವೆ. ನನ್ನ ಬದುಕಿನಲ್ಲಿ ಇದೊಂದು ಆಸ್ತಿ ನನಗೆ' ಎಂದ ಮಧು. ಮಂಗಳೂರಿಗೆ ರಿಲೀವ್ ಆಗುವ ವಿಚಾರದಲ್ಲಿ ಓಡಾಡಿ ಓಡಾಡಿ ತನಗಾಗುತ್ತಿರುವ ಬೇಸರ ವ್ಯಕ್ತಪಡಿಸಿದ. ಅವನು ಹಣ ಕೊಟ್ಟು ರಿಲೀವ್ ಮಾಡಿಸಿಕೊಳ್ಳಲೂ ಕೂಡಾ ತಯಾರಾಗಿದ್ದ. ಮಧು ಟ್ರಾನ್ಸ್‌ಫರ್ ಪ್ರಯತ್ನಪಟ್ಟು ಮಾಡಿಸಿಕೊಂಡವನಲ್ಲ. ಸುಮ್ಮನೇ ಒಂದು ಕಾಗದದಲ್ಲಿ ಬರೆದು ಬಿಸಾಡಿದ್ದ ಅಷ್ಟೇ. ಅವನಿಗೆ ಅದೃಷ್ಟವೋ ಎಂಬಂತೆ ಟ್ರಾನ್ಸ್‌ಫರ್ ಆಗಿತ್ತು. ಒಂದು ರೀತಿಯ ಪ್ರಮೋಶನ್ ಕೂಡಾ ಅದು. ಕೋಣೆಯಲ್ಲಿ

ಕುಳಿತು ಆಪರೇಟರ್ ಕೆಲಸ ಮಾಡಿದರೆ ಮುಗಿಯಿತು. ಮಧು ಎಡಬಿಡದೇ ಓಡಾಡಿದ್ದ. ಆದರೆ ಎ.ಇ.ಯಿಂದ ಹಿಡಿದು ಯಾರೂ ಕೂಡಾ ಅವನ ಮಾತನ್ನೇ ಕಿವಿಯ ಮೇಲೆ ಹಾಕಿಕೊಂಡಿರಲಿಲ್ಲ. ಮಧುವಿನ ಸ್ಥಾನಕ್ಕೆ ಯಾರೊ ಬರದೇ ಹೋದುದು ಅವರಿಗೆ ದೊಡ್ಡ ತಲೆನೋವಾಗಿತ್ತು. ಜೊತೆಗೆ ಮಧು ನೀಟಾಗಿ ಕೆಲಸ ಮಾಡುವ ಹುಡುಗ. ಎಸ್ಟಿಮೇಟ್‌ಗಳನ್ನು ಎಷ್ಟೋ ಜನ ತನ್ನ ಮೇಲಾಧಿಕಾರಿಗಳಿಗಿಂತಲೂ ಸುಂದರವಾಗಿ ಮಾಡುವನು. ಯಾವಾಗಲೂ ಹಾಸ್ಯ ಮಾಡುವ ಅವನ ಪ್ರವೃತ್ತಿಯಿಂದಾಗಿ ಆಫೀಸಿನ ಸರ್ಕಲ್‌ನಲ್ಲಿ ತುಂಬಾ ಜನರಿಗೆ ಹತ್ತಿರದವನೂ ಆಗಿದ್ದನು. ದುಡ್ಡಿಲ್ಲವೆಂದರೆ ಮಧುವಿನ ಜೇಬಿಗೆ ಕೈ ಬಿಡಬಹುದು ಎಂಬುದು ಅಲ್ಲಿರುವವರಿಗೆಲ್ಲಾ ತಿಳಿದ ಸತ್ಯ. ದಿಲ್‌ದಾರ್‌ನಂತೆ ಮಧು ಇದ್ದುಬಿಡುತ್ತಿದ್ದ. ಕಾಫಿ, ಟಿಫನ್‌ಗೆಂದು ಹೋದರೆ ಬೇರೆಯವರು ಬಿಲ್‌ಗೆ ಕೈ ಹಾಕುವ ಮೊದಲೇ ಹೋಟೆಲ್‌ನವನ ಹತ್ತಿರ ದುಡ್ಡು ಕೊಟ್ಟು ಇಳಿದು ಬಂದುಬಿಡುವನು. 'ಇಸ್ಪೀಟ್‌ನಲ್ಲಿ ನಿಸ್ಸೀಮ ಮಧು' ಎನ್ನುವವರೆಲ್ಲಾ ಅವನು ಗೆದ್ದ ಹಣದಿಂದಲೇ ಪಾರ್ಟಿ ಗಿಟ್ಟಿಸಿ ನಡೆದುಬಿಡುವರು. ಅವನ ಕೆಲಸದ ಶ್ರದ್ಧೆ, ಪ್ರಾಮಾಣಿಕತೆ ಕಂಡು ನಕ್ಕವರೂ ಕೂಡಾ ಆತನ ಹಾಸ್ಯದ ಮಾತುಗಳಿಗೆ, ಸರಳ ವ್ಯಕ್ತಿತ್ವಕ್ಕೆ ಆ ಕ್ಷಣಕ್ಕೆ ಹತ್ತಿರವೆನ್ನಿಸಿ ಬೆಚ್ಚಗೆ ಎನಿಸಿಬಿಡುತ್ತಿದ್ದರು. ಅದೃಷ್ಟವೋ, ದುರ್ವಿಧಿಯೋ ತನ್ನನ್ನು ಮಂಗಳೂರಿಗೆ ರಿಲೀವ್ ಮಾಡುತ್ತಿಲ್ಲ ಎಂಬುದನ್ನು ಮಧು ಬೇಸರದಿಂದಲೇ ಹೇಳಿದ. 'ಈ ಎಲ್ಲ ಬೇಸರಗಳಿಂದ ಮನಸ್ಸು ಕುಗ್ಗಿ ಹೋಗಿ ಇರುವ ಜೀವನದ ಚೈತನ್ಯವೆಲ್ಲಾ ಬತ್ತಿ ಹೋದಂತೆ ನನಗೆ ಕಾಣಿಸುತ್ತಿದೆ. ಹಾಗಾಗಿಯೇ ನಿಮ್ಮನ್ನು ಹುಡುಕಿ ಬಂದೆ' ಎಂದ ಮಧು. ಗಂಗಾ ಕಾಫಿ ಮಾಡಿ ತರುತ್ತೇನೆ ಎಂದು ಒಳಗೆ ಎದ್ದು ಹೋದಳು. ಮಿತಾ ಸ್ಕೂಲಿನಿಂದ ಬಂದುದರಿಂದ ಮಧು ಮಿತಾಳ ಜೊತೆ ತಮಾಷೆಯಾಗಿ ಆಟ ಆಡಲಿಕ್ಕೆ ಪ್ರಾರಂಭಿಸಿದ್ದ. ಮಿತಾ ಸರಳವಾಗಿ ಮಧುವಿನೊಟ್ಟಿಗೆ ಹೊಂದಿಕೊಂಡುಬಿಟ್ಟಿದ್ದಳು. 'ಮಧು ಅಂಕಲ್' - ಎಂದು ಅವನ ತೊಡೆಯ ಮೇಲೆ ಹತ್ತಿ ತಲೆಯೆಲ್ಲೆಲ್ಲಾ ಕೈಯಾಡಿಸುವಳು. ಎಷ್ಟೋ ಹೊತ್ತಿನತನಕ ಮಧು ಮಿತಾಳೊಂದಿಗೆ ಮಗುವಾಗಿ ಆಟವಾಡತೊಡಗಿದ್ದ. ಗಂಗಾ ಕಾಫಿ ಮಾಡಿ ತಂದುಕೊಟ್ಟವಳು ಅಡಿಗೆಗೆ ಇಡಲೆಂದು ಹೊರಟು ಹೋದಳು. ಯಾರೋ ಲೈನ್ ಮ್ಯಾನ್ ಮಧುವನ್ನು ಹುಡುಕಿಕೊಂಡು ಬಂದುದರಿಂದ ಅವಸರದಲ್ಲಿ ಮಿತಾಳನ್ನು ತೊಡೆಯ ಮೇಲಿಂದ ಇಳಿಸಿ, ಕಾಫಿ ಕುಡಿದು 'ನಾನು ಬರುತ್ತೇನೆ ಮೇಡಂ, ಕೆಲಸ ಇದೆ' ಎಂದು ಕೂಗಿ ಹೇಳಿ ಗಂಗಾಳ ಪ್ರತಿಕ್ರಿಯೆಗೂ ಕಾಯದೇ ತರಾತುರಿಯಲ್ಲಿ ಹೊರಟು ಹೋಗಿದ್ದ. ಮಿತಾಳೊಂದಿಗೆ ಆಟ ಆಡುವಾಗ ಕೆಳಗಿಟ್ಟಿದ್ದ ಡೈರಿಯನ್ನು ಅಲ್ಲಿಯೇ ಮರೆತು ಇಟ್ಟು ಮಧು ಹೊರಟು ಹೋಗಿದ್ದ. ಮಿತಾ ಡೈರಿಯೊಡನೆ ಆಟ ಆಡುವುದನ್ನು ಗಂಗಾ ಗಮನಿಸಿರಲೇ ಇಲ್ಲ. ಅಡಿಗೆ ಮುಗಿಸಬೇಕಿತ್ತು. ಮರುದಿನದ ಕಾಲೇಜಿಗೆ ತಯಾರಿ ನಡೆಸಬೇಕಿತ್ತು. ಹಾಗಾಗಿ ಸುಮ್ಮನೇ ಆಟ ಆಡಿಕೊಂಡಿದ್ದ ಮಿತಾಳನ್ನು ಆಕೆ ಗಮನಿಸಿಯೇ ಇರಲಿಲ್ಲ. ಮಿತಾ ಡೈರಿಯ ಜೊತೆ ಆಟ ಆಡುತ್ತಾ, ಆಡುತ್ತಾ ಎರಡು ಮೂರು ಹಾಳೆ ಕಿತ್ತು ಗಂಗಾಳ ಹತ್ತಿರ ತಂದಾಗಲೇ ಗಂಗಾ ಅವುಗಳನ್ನು ಗಮನಿಸಿದ್ದು. ಗಂಗಾಗೆ ಶಾಕ್ ಆಗಿತ್ತು. ಮಧು ಡೈರಿಯನ್ನು ತನ್ನ ವ್ಯಕ್ತಿತ್ವದ ಭಾಗವಾಗಿ ಪ್ರೀತಿಸುತ್ತಿದ್ದ. ಡೈರಿಯನ್ನು ಎಂದೂ ಆತ ಮರೆತು ಹೋದುದೇ ಇಲ್ಲ. ಈಗ ಅದು ಮಿತಾಳ ಕೈಗೆ ಸಿಕ್ಕಿಬಿಟ್ಟಿತ್ತು. ಮಿತಾಗೆ ಅದು ಆಟದ ವಸ್ತುವಾಗಿ ಕಂಡಿತ್ತು. ಎರಡು-ಮೂರು ಹಾಳೆ ಹರಿದು ಗಂಗಾಳಿಗೆ ತೋರಿಸತೊಡಗಿದ್ದಳು. ಮಿತಾಳಿಗೆ ಎರಡು ಏಟು ಬಿಗಿದು ಹರಿದುಹೋದ ಹಾಳೆಗಳನ್ನು ಕೈಯಲ್ಲಿ ಹಿಡಿದ ಗಂಗಾ ಡೈರಿಯನ್ನು ಆಕೆಯ ಕೈಗೆ ಸಿಗದ ಹಾಗೆ ಮೇಲೆ ಇಟ್ಟು, ಕೈಯಲ್ಲಿದ್ದ ಹಾಳೆಗಳ ಕಡೆಗೆ ಕಣ್ಣೋಡಿಸಿದಳು. ಎರಡೂ ಹಾಳೆಗಳಲ್ಲಿ ಇತ್ತೀಚಿನ ದಿನಾಂಕಗಳಿದ್ದವು. ಮಿತಾ ಹರಿದದ್ದರಿಂದ ಆತ ಕೋಪಗೊಳ್ಳಬಹುದೇನೋ ಎಂಬ ಆತಂಕಕ್ಕೆ ಹಾಗೂ ಕುತೂಹಲಕ್ಕಾಗಿ ಕೂಡಾ ಗಂಗಾ ಹಾಳೆಗಳ ಮೇಲೆ ಕಣ್ಣೋಡಿಸಿದ್ದಳು. ಅಕ್ಷರಗಳ

ಮೇಲೆ ಕಣ್ಣಾಡಿಸುತ್ತಾ ಹೋದ ಹಾಗೆ ಗಂಗಾಗೆ ದಿಗ್ಭ್ರಮೆ. ಸುಂದರವಾದ ಅಕ್ಷರಗಳನ್ನು ಮಧು ಬರೆಯಬಲ್ಲ ಎಂಬುದನ್ನು ಅರಿತಿದ್ದಳೇ ಹೊರತು ಅಷ್ಟು ಸುಂದರವಾಗಿ ಭಾವನೆಗಳನ್ನು ಹಿಡಿಯಬಲ್ಲ ಎಂಬುದನ್ನಲ್ಲ. ಜೋರಾಗಿ ನಕ್ಕು ಮಾತನಾಡುವ ಮಧು ಒಳಮನಸ್ಸಿನ ಹುಡುಗ ಎಂಬುದು ಗಂಗಾಗೆ ತಿಳಿದಿದ್ದ ವಿಷಯವೇ. ಮಂಗಳೂರಿಗೆ ಹೋಗುವಾಗ ಹೇಳುತ್ತೇನೆ, ಹೇಳುತ್ತೇನೆ ಎಂದು ಮಧು ಹೇಳುತ್ತಿದ್ದುದನ್ನೇನೋ ಬರೆದಂತಿತ್ತು. ಗಂಗಾಗೆ ತಕ್ಷಣವೇ ಗಮನ ಹೋದುದು ಭಾಷೆಯ ಕಡೆಗೆ. ಮಧು ಅಷ್ಟೊಂದು ಅದ್ಭುತವಾಗಿ, ಭಾಷೆಯಲ್ಲಿ ಮನಸ್ಸನ್ನು ಹಿಡಿಯಬಲ್ಲ ಎಂಬುದು ಗೊತ್ತಾದುದೇ ಈ ಹಾಳೆಗಳಿಂದಾಗಿ. ಮಂಗಳೂರಿಗೆ ಹೋಗುವಾಗ ಕೊನೆಯದಾಗಿ ಮೇಡಂಗೆ ಹೇಳಬೇಕಾದ ತನ್ನ ಒಳಮನಸ್ಸಿನ ಸತ್ಯವೇನು? ಎಂದು ಏನೋ ಪ್ರಾರಂಭವಾದ ಸಾಲುಗಳು. ಹೀಗೆಯೇ ಮನಸ್ಸಿಟ್ಟು ಓದುತ್ತಾ ಹೋದ ಹಾಗೆ ಗಂಗಾಳಲ್ಲಿ ನಡುಕ ಪ್ರಾರಂಭವಾಗಿತ್ತು. ಅದು ಹೆದರಿಕೆಯಿಂದ ಪ್ರಾರಂಭವಾದದ್ದೋ, ರೋಮಾಂಚನದಿಂದ ಪ್ರಾರಂಭವಾದದ್ದೋ ಆಕೆಗೇ ತಿಳಿಯಲಿಲ್ಲ. ಇದ್ದಕ್ಕಿದ್ದ ಹಾಗೆ ಜಲಪಾತದ ಧಾರೆಯೊಂದು ಕಣ್ಣೆದುರಿಗೆ ಹರಿದಂತೆ. ಮಧು ನೇರವಾಗಿ ಏನನ್ನೂ ಬರೆದಿರಲಿಲ್ಲ. ತನ್ನ ಮನಸ್ಸಿಗೆ ಏನೆನಿಸುತ್ತದೆ? ತನ್ನ ಮನಸ್ಸಿನೊಳಗಿನ ಸತ್ಯಗಳೇನು ಎಂದು ಬರೆದಿದ್ದ. ಅಕ್ಷರಗಳಲ್ಲಿ ಉದ್ವೇಗವಿತ್ತು, ನಕ್ಕು-ತಣ್ಣಗೆ ಹೋಗಿ ಬಿಡುವ ಮಧುವಿನ ಅಕ್ಷರಗಳಲ್ಲಿ ಕಾವಿತ್ತು. ಗಂಗಾ ಹಾಳೆಗಳನ್ನೆಲ್ಲ ತುಂಡು ತುಂಡಾಗಿ ಹರಿಯತೊಡಗಿದ್ದಳು. ಹಾಗೆಯೇ ಎಷ್ಟೋ ಹೊತ್ತು ಕುಳಿತವಳು ಮತ್ತೆ ಆ ತುಂಡು ತುಂಡು ಕಾಗದಗಳನ್ನು ಜೋಡಿಸುತ್ತಾ ಹೋದಳು. 'ನಾನು ಮೇಡಂ ಮನೆಗೆ ಇತ್ತೀಚೆಗೆ ಹೋಗದೇ ತಪ್ಪಿಸಿಕೊಳ್ಳುತ್ತಿರುವುದೇ ತನ್ನ ಮನಸ್ಸಿನೊಳಗಿನ ಆಘಾತದ ವಿಚಾರಗಳಿಂದಾಗಿ. ಮೇಡಂ ಮನಸ್ಸಿನೊಳಗಿದನ್ನೆಲ್ಲ ಪರಮಾಣು ಬಾಂಬು ಸಿಡಿಸುವ ಹಾಗೆ ಸಿಡಿಸಿಬಿಡುತ್ತಾರೆ. ತನ್ನೊಳಗಿನ ಪರಮಾಣು ಸಿಡಿದು ಹೋಗುತ್ತವೆ. ಹಾಗಾಗಿ ಮನಸ್ಸಿನೊಳಗಿನ ಸತ್ಯಗಳು ಸ್ಫೋಟಗೊಳ್ಳುವ ಮೊದಲೇ ಅವರಿಂದ ದೂರ ಸರಿಯಬೇಕು. ಮಂಗಳೂರಿಗೆ ಹೊರಟು ಹೋಗಿಬಿಡಬೇಕು. ಇದೆಲ್ಲ ಹೇಳಿ ಹೊರಟು ಹೋಗಬೇಕು..... ಇದು ತನ್ನ ಮನಸ್ಸು. ಸರಿಯೋ, ತಪ್ಪೋ? ಆದರೂ ಅವರ ಆಗಮನ/ನಿರ್ಗಮನಕ್ಕೆ ಮನಸ್ಸು ಹಾತೊರೆಯುತ್ತದೆ. ಋತುಮತಿಯಾದ ಹುಡುಗಿಯೋರ್ವಳು ನಾಚಿ ನೀರಾಗುವಂತೆ ಮನಸ್ಸು, ಮೈ ಬೆವರುತ್ತದೆ. ಇದೆಲ್ಲ ಅವರಿಗೆ ಗೊತ್ತಾಗಬಾರದು. ಗೊತ್ತಾಗುವ ಮುಂಚೆ ಅವರಿಂದ ದೂರ ಆಗಬೇಕು....... ಹೀಗೇ ಏನೇನೋ ಗಂಗಾಳಿಗೆ ತಲೆ ತಿರುಗಿದ ಹಾಗೆ ಆಗಿತ್ತು. ಒಂದು ಕ್ಷಣ ಮೈಯೆಲ್ಲ ಬೆವತ ಅನುಭವ. ಗೋಡೆಗೆ ಒರಗಿ ಹರಿದುಹೋದ ಕಾಗದದ ಚೂರುಗಳನ್ನೇ ನೋಡುತ್ತಾಳೆ. ಮುಂದೆ ಓದುವುದಕ್ಕೂ ಪ್ರಯತ್ನಿಸುವುದಿಲ್ಲ. ಮಿತಾ ಅಮ್ಮನನ್ನೇ ತದೇಕಚಿತ್ತದಿಂದ ನೋಡುತ್ತಾಳೆ. ಎತ್ತಲೋ ದೃಷ್ಟಿ ಹರಿಸಿರುವ ತಾಯಿ. ತನ್ನನ್ನು ಹೊಡೆಯುತ್ತಾಳೇನೋ ಎಂದು ನಿರೀಕ್ಷಿಸಿದ್ದ ಮಿತಾಗೆ ತಾಯಿ ಈ ಲೋಕದಲ್ಲಿಯೇ ಇಲ್ಲದವಳಂತೆ ನಿಂತುಬಿಟ್ಟುದನ್ನು ಕಂಡು ಹೆದರಿಕೆಯಾಗುತ್ತದೆ. ಹರಿದು ಬಿದ್ದ ಕಾಗದದ ಚೂರುಗಳನ್ನೆಲ್ಲಾ ಮಿತಾ ಆರಿಸಿ ಎತ್ತುತ್ತಾಳೆ. ಎಲ್ಲವನ್ನೂ ಎತ್ತಿಕೊಂಡು ತನ್ನ ಪುಟ್ಟ ಕೈಗಳಿಂದ ಮುದ್ದೆ ಮಾಡಿ ಹೊರಗೆ ಎಸೆಯುತ್ತಾಳೆ. ಅಮ್ಮ ಈಗ ಬಯ್ಯಲಾರಳು ಎನಿಸುತ್ತದೆ. ಅಲ್ಲಿ-ಇಲ್ಲಿ ಬಿದ್ದಿರುವ ಕಸವನ್ನೂ ಎತ್ತಿ ಹೊರಗೆ ಬಿಸಾಕುತ್ತಾಳೆ. ತಾನು ಈಗ ಎಲ್ಲವನ್ನೂ ಎತ್ತಿ ಚೊಕ್ಕಟ ಮಾಡಿದುದರಿಂದ ತಾಯಿ ಬಯ್ಯಲಾರಳು ಎನಿಸುತ್ತದೆ. ಅಲ್ಲಿಯೇ ಟೇಬಲ್‌ನ ಮೇಲೆ ಕೂತ ತಾಯಿಯನ್ನು ತುದಿ ಬೆರಳಿನಿಂದ ಮುಟ್ಟುತ್ತಾಳೆ. ಗಂಗಾ ತಿರುಗಿ ನೋಡದಿದ್ದಾಗ ಆಕೆಗೆ ಕೋಪ ಬಂದಿರಬಹುದೆಂದು ನಿಧಾನವಾಗಿ ತೊಡೆಯ ಮೇಲೇರಿ ಕೂರುತ್ತಾಳೆ. ಆಗಲೂ ತಾಯಿ ಪ್ರತಿಕ್ರಿಯಿಸದಿದ್ದಾಗ ಆಕೆಯ ತೊಡೆಯ ಮೇಲೆ ಅಂಗಾತ ಮಲಗಿ ಅಮ್ಮನ ಮೋರೆ ಹಿಡಿಯುತ್ತಾಳೆ. ಗಂಗಾ ಮಿತಾಳ ಕಡೆಗೆ ತಿರುಗುತ್ತಾಳೆ. ಆಕೆಯ ಕಣ್ಣಲ್ಲಿ ನೀರು ತುಂಬಿಕೊಂಡಿರುವುದು ಮಿತಾಳಿಗೆ

ಕಾಣಿಸುತ್ತದೆ. ಆಕೆಯ ಮನಸ್ಸಿಗೆ ನೋವಾಗುತ್ತದೆ. ಇನ್ನೊಂದು ಸಾರಿ ಹೀಗೆಲ್ಲಾ ಹಾಳೆ ಹರಿಯಬಾರದು ಎನಿಸುತ್ತದೆ. 'ಅಮ್ಮ ಸಾರಿ ಅಮ್ಮಾ, ಇನ್ನೊಮ್ಮೆ ಹೀಗೆ ಹರಿಯೋಲ್ಲ, ಅಮ್ಮಾ ಚೂರು ಚೂರು ಕಾಗದಗಳನ್ನೆಲ್ಲಾ ಮುದ್ದೆ ಮಾಡಿ ನಾನೇ ಹೊರಗೆ ಎಸೆದೆ. ಅಮ್ಮಾ, ನಿಜವಾಗಲೂ ಸಾರಿ ಅಮ್ಮಾ' ಎನ್ನುತ್ತಾಳೆ. ಗಂಗಾ ಮಾತನಾಡದೇ ಮಗುವನ್ನು ಎದೆಗೆ ಅವಚಿಕೊಳ್ಳುತ್ತಾಳೆ.

ಬದುಕು/ಬದುಕಿನ ಕಡಿವಾಣ ಹೇಗೆ ಕೈ ಮೀರಿ ಹೋಗುತ್ತದೆ ಎಂದು ಗಂಗಾ ಯೋಚಿಸುತ್ತಾಳೆ. ಎಣಿಸಿರದಿದ್ದ ಘಟನೆಗಳೆಲ್ಲ ನಡೆದು ಕೆಲವು ಸಲ ದಿಕ್ಕು ಕೆಡಿಸುತ್ತವೆ, ಜೀವನವನ್ನು ಅಲ್ಲೋಲ-ಕಲ್ಲೋಲ ಮಾಡಿಬಿಡುತ್ತವೆ. ರಮೇಶನೊಟ್ಟಿಗೆ ಬದುಕು ಪ್ರಾರಂಭಿಸಿದ ಮೇಲೆ ಮತ್ತೆ ಜೀವನವನ್ನು ಹಿಂತಿರುಗಿ ನೋಡಬೇಕೆಂದು ಗಂಗಾಗೆ ಅನ್ನಿಸಿರಲಿಲ್ಲ. ಮಿತಾ, ಸೂಕ್ಷ್ಮ ಮನಸ್ಸಿನ ಗಂಡ, ಕೈ ತುಂಬ ಸಂಬಳ - ಗಂಗಾಗೆ ಸುಂದರವೆನಿಸಿತ್ತು. ಆದರೂ ಸಂಸಾರದ ಭಾರ ತನ್ನ ವ್ಯಕ್ತಿತ್ವ, ಬರವಣಿಗೆ, ಚೈತನ್ಯ ಎಲ್ಲವನ್ನೂ ಕೊಂದು ಬಿಡುತ್ತದೆ ಎನಿಸಿದಾಗ ಮಧು ಆಕಸ್ಮಿಕವಾಗಿ ಆಕೆಯ ಜೀವನದಲ್ಲಿ ಪ್ರವೇಶಿಸಿದ್ದ. ಭಾವನೆಗಳ ತುಂಬಿಕೊಂಡ ಚೈತನ್ಯವಾಗಿ ಕಂಡಿದ್ದ. ಗಂಗಾಳಲ್ಲಿ ಬರಿದಾದ ಮನಸ್ಸಿಗೆ ನಿಗೂಢಗಳ ಬೆನ್ನೇರಿ ಸವಾರಿ ಮಾಡುವ ಮಧು ಚೈತನ್ಯದ ಚಿಲುಮೆಯಾಗಿ ಕಂಡಿದ್ದ. ಗಂಗಾ ಆತನಲ್ಲಿ ಅರಸಿದ್ದಾದರೂ ಏನನ್ನು? ಕಳೆದು ಹೋಗುತ್ತಿದ್ದ ರಮೇಶನ ಸೆಲ್ಫ್, ಕಳೆದು ಹೋಗುತ್ತಿದ್ದ ತಾನು, ತನ್ನ ಮುಗ್ಧತೆ. ಮಣ್ಣಾಗಿ ಹೋಗಿದ್ದ ತಾಯಿಯ ಎದೆಯ ವಾತ್ಸಲ್ಯ. ಆದರೆ ತಮ್ಮಿಬ್ಬರ ವಿಶ್ವಾಸದಲ್ಲಿ ಇದ್ದದ್ದು ಮತ್ತೇನು? ಮಧುವಿನ ಡೈರಿಯ ಬರಹ ಓದಿದ ಮೇಲೆ ಗಂಗಾಳ ಮನಸ್ಸು ಸ್ಥಿಮಿತದಲ್ಲಿ ಉಳಿಯಲೇ ಇಲ್ಲ. ತಾನು ಮತ್ತೆ ಆ ದಿಕ್ಕಿನಲ್ಲಿ ಯೋಚಿಸುವುದೂ ತಪ್ಪೇನೋ ಎಂದು ಗಂಗಾಳಿಗೆ ಅನಿಸತೊಡಗಿತ್ತು. ರಮೇಶ ಹೆಣ್ಣುಗರಳಿನ ಹುಡುಗ. ಹುಡುಗಿಯರಂತೆ ತನ್ನನ್ನು ನಂಬಿ/ಪ್ರೀತಿಸಿ ಎಲ್ಲರಿಂದ ದೂರಾಗಿ ಬಂದಿದ್ದಾನೆ. ಗಂಗಾಳ ವ್ಯಕ್ತಿತ್ವದಿಂದ ತಾನು ಬೇರೆಯಲ್ಲ ಎಂದು ನಂಬಿಕೊಂಡಿರುವ ಹುಡುಗ ಆತ. ಹಾಗಾಗಿ ಎಲ್ಲದರಿಂದ ದೂರ ಉಳಿಯಬೇಕು. ಮಧು ಯಾಕೆ ಹೀಗೆ ತನ್ನ ಭಾವನೆಗಳನ್ನೆಲ್ಲಾ ಕಲಕಿಬಿಟ್ಟ. ತನ್ನ ಮನಸ್ಸೊಳಗಿನ ಮನಸ್ಸಿನಲ್ಲಿ ಏನಿತ್ತೋ? ಆದರೆ ಗಂಗಾ ಎಂದೂ ಅದನ್ನು ಕೆದಕಿದವಳಲ್ಲ. ಮಧುವಿನ ಸಾನಿಧ್ಯ ಹಿತವಾಗಿತ್ತು. ಆದರೆ ಈಗ ಅದಕ್ಕೆ ಮತ್ತೊಂದು ಬಗೆಯ ಬಣ್ಣ ಬಂದುಬಿಟ್ಟಿತ್ತು. ಒಮ್ಮೊಮ್ಮೆ ಮಧುವಿನ ಬಗ್ಗೆ ಸಿಟ್ಟು, ಒಮ್ಮೊಮ್ಮೆ ತನ್ನ ಬಗ್ಗೆ ಸಿಟ್ಟು, ಒಮ್ಮೊಮ್ಮೆ ರಮೇಶನ ಬಗ್ಗೆ ಸಿಟ್ಟು. ಗಂಗಾ ಮಧುವನ್ನು ಸಂಪೂರ್ಣವಾಗಿ ನಿರ್ಲಕ್ಷಿಸತೊಡಗಿದಳು. ತನ್ನ ಮನಸ್ಸನ್ನು ಹತೋಟಿಗೆ ತೆಗೆದುಕೊಳ್ಳುವುದು ಅಗತ್ಯ ಎಂದುಕೊಳ್ಳುವಳು. ಮಧುವಿಗೆ ಬಯ್ಯಬೇಕು ಎನಿಸುತ್ತಿತ್ತು. ನನ್ನ ವಿಶ್ವಾಸ/ಪ್ರೀತಿಗೆ ಏನೋ ಅರ್ಥ ಹಚ್ಚಿ ಮನಸ್ಸು ಕಲಕಿಬಿಟ್ಟಿರಿ ಮಧು ಎನ್ನಬೇಕು ಎನಿಸುತ್ತಿತ್ತು. ಆದರೆ ಅದು ಮಧು ಬಾಯಿ ಬಿಟ್ಟು ಹೇಳಿದ್ದಲ್ಲ, ಆತನ ಡೈರಿಯನ್ನು ಆಕಸ್ಮಿಕವಾಗಿ ತಾನು ಓದಿದ್ದು ಅಷ್ಟೇ! ಆತನ ಮನಸ್ಸು ಅರ್ಥವಾಗದಿದ್ದರೇ ಒಳ್ಳೆಯದಿತ್ತೆಂದು ಗಂಗಾ ಯೋಚಿಸುತ್ತಾಳೆ. ಮಧು ಮಂಗಳೂರಿಗೆ ಹೋಗಿಬಿಟ್ಟರೆ ತನ್ನ ಮನಸ್ಸು ಸ್ಥಿಮಿತಕ್ಕೆ ಬರುತ್ತದೆ ಎಂದುಕೊಳ್ಳುತ್ತಾಳೆ. ಮನಸ್ಸಿನಾಳದಲ್ಲೆಲ್ಲೋ ಅಸ್ಪಷ್ಟವಾಗಿದ್ದಿರಬಹುದಾದ ಭಾವನೆಯೊಂದಕ್ಕೆ ಸ್ಪಷ್ಟ ರೂಪ ಕೊಟ್ಟುಬಿಟ್ಟಿದ್ದ ಮಧು. ಗಂಗಾಳಿಗೆ ಮಧುವಿನ ಜೊತೆ ಮೊದಲಿನ ಹಾಗೆ ಇರುವುದು ಕಷ್ಟ ಎನಿಸತೊಡಗಿತ್ತು. ತಾನು ಮಧುವಿನ ಬಗ್ಗೆ ಹೀಗೆ ಯೋಚಿಸುವುದೇ ರಮೇಶನಿಗೆ ದ್ರೋಹ ಬಗೆದಂತೆ ಎನ್ನಿಸತೊಡಗಿತ್ತು. ಇದ್ದಕ್ಕಿದ್ದಂತೆ ರಮೇಶ ಎಲ್ಲವನ್ನೂ ಕಳೆದುಕೊಂಡ ಒಬ್ಬ ಭಿಕಾರಿಯಾಗಿ ಬಿಡುತ್ತಾನೇನೋ ಎನ್ನಿಸತೊಡಗಿತ್ತು. ಮಧುವನ್ನು ದೂರ ಸರಿಸಬೇಕು. ಅವನು ಮಂಗಳೂರಿಗೆ ಹೋಗಿಬಿಟ್ಟರೆ ತನ್ನ ಮನಸ್ಸಿನ ಅಲೆಗೊಂದು ಸ್ಥಿಮಿತ ಬರುತ್ತದೆಯೇನೋ ಎಂದು ಯೋಚಿಸತೊಡಗುತ್ತಾಳೆ. ಮಧುವನ್ನು ಈಗ ಉದ್ದೇಶಪೂರ್ವಕವಾಗಿಯೇ ಗಂಗಾ

ಭೇಟಿಯಾಗುವುದನ್ನು ತಪ್ಪಿಸತೊಡಗಿದ್ದಳು. ರಜೆಯ ದಿನಗಳಲ್ಲಿ ಮನೆಯಲ್ಲಿ ಇರುವುದನ್ನೂ ಕಡಿಮೆ ಮಾಡತೊಡಗಿದ್ದಳು. ದಾರಿಯಲ್ಲಿ ಹೀಗೆಯೇ ಮಧು ಸಿಕ್ಕ ಸಂದರ್ಭದಲ್ಲಿ "ನಿಮ್ಮ ಡೈರಿಯ ಎರಡು ಪುಟಗಳನ್ನು ಮಿತ ಹರಿದುಬಿಟ್ಟಳು. ಹಾಳೆಗಳು ಹರಿದರೆ ಸರಿ, ಆದರೆ ಸಂಬಂಧಗಳಲ್ಲಿ ಮನಸ್ಸು ಚೂರು ಚೂರಾಗದಂತೆ ನೋಡಿಕೊಳ್ಳಬೇಕು ಅಷ್ಟೇ" ಎಂದಿದ್ದಳು. ಮಧುವಿನ ಮುಖ ಚಿಕ್ಕದಾದುದನ್ನು ಗಂಗಾ ಗಮನಿಸಿದ್ದಳು. 'ಛೇ' ಎನಿಸಿತ್ತು ಮನಸ್ಸಿಗೆ. ಮಧು ಆ ಕ್ಷಣಕ್ಕೆ ಏನು ಯೋಚಿಸಿರಬಹುದು ಎಂದು ಗಂಗಾ ಆಲೋಚಿಸುತ್ತಾಳೆ. ತಾನು ಈ ಪ್ರಪಂಚದಲ್ಲಿ ಯಾರಿಗೂ ಬೇಡಾದವನು ಎಂದು? ಎಲ್ಲರೂ ಹೀಗೆಯೇ ತನ್ನನ್ನು ತಿರಸ್ಕರಿಸುತ್ತಾರೆ ಎಂದು...... ಹೀಗೇ ಇತ್ಯಾದಿ ಇತ್ಯಾದಿ. ಈ ಮಾತುಕತೆಯ ನಂತರ ಗಂಗಾ ಮಧುವನ್ನು ಸುಮಾರು ದಿನಗಳವರೆಗೆ ಭೇಟಿಯಾಗದೇ ಸುಮ್ಮನಾಗಿಬಿಟ್ಟಿದ್ದಳು. ತನ್ನ ಪ್ರೀತಿ/ಪ್ರೇಮದ ಅಲೆಮಾರಿ ಬದುಕಿನ ಪುಟಗಳನ್ನು ತಿರುವಿ ನೋಡಿದರೆ ತನಗೆ ಸಿಕ್ಕದ್ದೇನು? ಎನಿಸುತ್ತದೆ. ಮಧು ಮುಗ್ಧ ಹುಡುಗ. ರಮೇಶನಷ್ಟೇ ಮುಗ್ಧ. ಸ್ವಲ್ಪ ಪ್ರೀತಿ-ವಿಶ್ವಾಸಕ್ಕೆ ಕರಗಿಬಿಡುತ್ತಾನೆ. ತಾರುಣ್ಯದ ಕನಸುಗಳ ಕಣ್ಣಲ್ಲಿ ಇಟ್ಟುಕೊಂಡು ಭಾವನೆಗಳ ಮೇಲೆ ಬದುಕುವ ಹುಡುಗ. ಅವನಿಗೆ ತಾನು ಕೊಡಬಹುದಾದರೂ ಏನನ್ನು? ರಮೇಶನೊಟ್ಟಿಗೆ ಬೆಸೆದುಕೊಂಡಿರುವ ಜೀವನದಲ್ಲಿ ಮಿತಾ ಇದ್ದಾಳೆ. ತನ್ನ ವ್ಯಕ್ತಿತ್ವ/ಗಂಗಾಳ ವ್ಯಕ್ತಿತ್ವ ಬೇರೆಯಲ್ಲ ಎಂದುಕೊಂಡಿರುವ ರಮೇಶ ಭಿಕಾರಿಯಾಗಿಬಿಡುತ್ತಾನೆ. ಗಂಗಾ ಹೇಳಿದ್ದ ಮಾತಿಗೆ ಮಧು ಏನು ಅರ್ಥ ಹಚ್ಚಿದ್ದನೋ? ಹೇಗೆ ಅರ್ಥೈಸಿಕೊಂಡಿದ್ದನೋ? ತಾನು ಮಂಗಳೂರಿಗೆ ಹೋಗಲು ಬಲವಾಗಿ ಪ್ರಯತ್ನಿಸುತ್ತೇನೆ ಎಂದು ಕೊನೆಯದಾಗಿ ಹೇಳಿದ್ದ ಅಷ್ಟೇ! ಗಂಗಾ ಮಾತನಾಡದೇ ಸುಮ್ಮನಾಗಿಬಿಟ್ಟಿದ್ದಳು. ಸಮಯ ಸಿಕ್ಕಾಗಲೆಲ್ಲಾ ಒಂಟಿಯಾಗಿ ಕುಳಿತು ಯೋಚಿಸುವಳು. ಐದು ವರ್ಷದ ಮಗಳು ಮಿತಾ! ಕೆಲಸ/ಕೆಲಸ ಎಂದು ಮೂರೂ ಹೊತ್ತು ಸುತ್ತುವ ರಮೇಶ. ಈ ಎಲ್ಲದರ ಮಧ್ಯೆ ಚೈತನ್ಯದ ಚಿಲುಮೆಯಾಗಿ ಕಂಡಿದ್ದ ಮಧು. ಆತನೊಡನೆ ಹರಟೆ ಹೊಡೆದು ನಕ್ಕ ದಿನಗಳೆಷ್ಟೋ? ಆತನ ಆಫೀಸಿನ ಕತೆ ಕೇಳಿ ಆ ಪ್ರಪಂಚದ ಬಗ್ಗೆ ಯೋಚಿಸಿದ ದಿನಗಳೆಷ್ಟೋ? ಗಂಗಾ ಸುಮ್ಮನೇ ಕುಳಿತು ಮನಸ್ಸಿಗೆ ಬಂದದ್ದೆಲ್ಲಾ ಬರೆಯುವಳು. ತಾನು ಶಿವಮೊಗ್ಗೆಗೆ ಬಂದು ಬದುಕನ್ನು ಅರಸಿದ ರೀತಿಯಲ್ಲಿ ಮಧು ಕಣ್ಣಿಗೆ ಕಂಡಿದ್ದ. ಮಧುವನ್ನು ಪ್ರೀತಿಸಿಬಿಡಬಹುದು. ಆತನ ಬೆಚ್ಚನೆಯ ಭಾವನೆಗಳಲ್ಲಿ ಮತ್ತು ಪ್ರೇಮದ ತೀವ್ರತೆಯ ಕಡಲಲ್ಲಿ ಮುಳುಗಿಬಿಡಬಹುದು. ಆದರೆ ಅವನಿಗೆ ತಾನು ಕೊಡುವುದಾದರೂ ಏನನ್ನು? ದೈಹಿಕ ಸಂಬಂಧದ ಕೊನೆ ಕೊನೆಯ ತುದಿಗಳು ತನಗೆ ಅರ್ಥವಾಗಿಲ್ಲವೇ? ತನ್ನ ಜೀವನದ ಪುಟಗಳನ್ನು ತಿರುವಿ ನೋಡಿದಾಗ ತನ್ನ ಪರಧಿಯ ಸಂಬಂಧಗಳಲ್ಲಿ ತನ್ನ ಮುಗ್ಧತೆಯ ಮೇಲೆ ಗರೆ ಎಳೆದ ಸಂಬಂಧಗಳೇ ಹಲವು. ಯಾವುದೋ ನಿಗೂಢತೆ ಅರಸ ಹೊರಟ ದೈಹಿಕ ಸಂಬಂಧದ ಬೆಸುಗೆ ಎಲ್ಲಿಯವರೆಗೆ ಉಳಿದೀತು? ತಾನು ಮಧುವಿನೊಡನೆ ಪ್ರೀತಿ, ಪ್ರೇಮದಲ್ಲಿ ಮುಳುಗಿ ದೈಹಿಕ ಸಂಬಂಧದಲ್ಲಿ ತೊಡಗಿಕೊಂಡರೆ ಮಧುವಿಗೆ ಕೊಡುವುದಾದರೂ ಏನನ್ನು? ರಮೇಶನ ಸಂಬಂಧ ಕಡಿದುಕೊಂಡು ಬಾಳಲು ತನಗೆ ಸಾಧ್ಯವೇ? ಹಾಗೇನಾದರೂ ಆದರೆ ನೊಂದುಕೊಂಡೇ ಅರ್ಧ ಸತ್ತುಹೋಗುತ್ತೇನೆ ಎನಿಸಿದಾಗ ಗಂಗಾಳ ಕಣ್ಣಲ್ಲಿ ನೀರಾಡುತ್ತದೆ. ಡೈರಿಯನ್ನು ಮಧು ತಾನಾಗಿಯೇ ನೀಡಿರಲಿಲ್ಲ. ಆ ಡೈರಿಗಾಗಿ ಆತ ಮರಳಿ ಬಂದಾಗ ಆತ ಬಿಟ್ಟು ಹೋದ ಸ್ಥಳದಲ್ಲಿಯೇ ಡೈರಿಯೇನೋ ಇತ್ತು. ಅದರಲ್ಲಿ ಎರಡು ಪುಟ ಹರಿದಿರುವುದನ್ನು ಆತ ಗಮನಿಸಿದ್ದ. ಮಿತಾ ಹರಿದು ಮುದ್ದೆ ಮಾಡಿ ಬಿಸಾಕಿದಳು ಎಂದು ತಿಳಿದಾಗ ಆತನಿಗೆ ನೋವಾಗಿತ್ತು. ಅಷ್ಟೇ ಆಗಿದ್ದರೆ ಪರವಾಗಿಲ್ಲ. ಗಂಗಾ ಮನಸ್ಸು ಚೂರು ಚೂರಾಗದ ಹಾಗೆ ಕಾಯ್ದುಕೊಳ್ಳಬೇಕು ಎಂದಿದ್ದರು. ಆತನ ನೆಮ್ಮದಿ ಕಲಕಿ ಹೋಗಿತ್ತು. ಗಂಗಾರ ಕಣ್ಣಿಗೆ ತನ್ನ ಬರಹ ಬಿದ್ದಿದೆ ಎಂದು ಗೊತ್ತಾದ ಮೇಲೆ ಮಧು ಧರೆಗೇ ಇಳಿದೇ ಹೋಗಿದ್ದ.

ತಾನು ತಕ್ಷಣ ಮಂಗಳೂರಿಗೆ ಹೊರಟು ಹೋದರೆ ಒಳ್ಳೆಯದು ಎಂದುಕೊಂಡ. ಅದೂ ಸಾಧ್ಯವಾಗದಿದ್ದಾಗ ಮೈ ಪರಚಿಕೊಳ್ಳುವಂತಾಗುತ್ತಿತ್ತು ಆತನಿಗೆ. ಗಂಗಾ ಹೇಳಿದ ಮಾತಿನಿಂದ ಆತನ ಮನಸ್ಸು ಘಾಸಿಗೊಂಡಿತ್ತು. ಆತನ ಇಡಿಯ ವ್ಯಕ್ತಿತ್ವವನ್ನು ಇಷ್ಟು ಮಾಡಿ ಮೂಲೆಗೆ ಎಸೆದ ರೀತಿ ಅನಿಸಿತ್ತು ಆತನಿಗೆ. ಗಂಗಾರ ಭಾವನೆಯಲ್ಲಿ ತಾನೊಂದು ಕ್ಷುದ್ರ ಜಂತುವೇನೋ ಎಂಬ ಭಾವನೆ ಮನಸ್ಸಿನೊಳಕ್ಕೆ ಇಳಿದಾಗ ಮಧುಗೆ ಪ್ರಪಾತಕ್ಕೆ ತಳ್ಳಿದ ಅನುಭವವಾಗುತ್ತಿತ್ತು. ತಾನು ಹೀಗೆಲ್ಲಾ ಯೋಚಿಸುವುದು ತಪ್ಪಲ್ಲವೇ ಎಂದು ಮಧು ತನ್ನಷ್ಟಕ್ಕೆ ತಾನೇ ಯೋಚಿಸುತ್ತಾನೆ. ತಪ್ಪೋ, ಸರಿಯೋ? ಆದರೆ ತಾನೊಂದು ನಿರ್ಜೀವ ವಸ್ತು ಎಂಬಂತೆ ಗಂಗಾ ತನ್ನನ್ನು ನಿರ್ಲಕ್ಷಿಸತೊಡಗಿದ್ದಾರೆ ಎನಿಸಿದಾಗಲೆಲ್ಲಾ ಆತನ ಮನಸ್ಸಿಗೆ ಬಹಳ ಬೇಸರವಾಗುತ್ತದೆ, ನೋವಾಗುತ್ತದೆ. ಅವರು ಬೇಕೆಂದೇ ತನ್ನನ್ನು ಭೇಟಿಯಾಗುವುದನ್ನು ತಪ್ಪಿಸುತ್ತಿದ್ದಾರೆ ಎನಿಸಿದಾಗಲೆಲ್ಲಾ ಮನಸ್ಸಿಗೆ ಗೊಂದಲ, ಗೊಂದಲವಾಗುತ್ತದೆ. ಮಂಗಳೂರಿಗೆ ಹೋಗಿದ್ದರೆ ದೂರದಲ್ಲಿ ಕುಳಿತು ಯೋಚಿಸುವುದಕ್ಕಾದರೂ ಸಾಧ್ಯವಾಗುತ್ತಿತ್ತೇನೋ ಎನಿಸುತ್ತದೆ. ತಾನು ಬೇಕೆಂದೇ ಏನಾದರೂ ಅವರಿಗೆ ಹೇಳಿದ್ದೇನೇ? ತಾನು ಉದ್ದೇಶಪೂರ್ವಕವಾಗಿ ಡೈರಿಯನ್ನು ಬಿಟ್ಟು ಬಂದಿದ್ದೇನೇ? ತಾನು ಉದ್ದೇಶಪೂರ್ವಕವಾಗಿ ಹಾಗೆ ಮಾಡಿದೆನೆಂದು ಗಂಗಾ ಯೋಚಿಸುತ್ತಾರೆ ಎಂದು ಎಣಿಸಿದಾಗಲೆಲ್ಲಾ ಆತನಿಗೆ ಖೇದವಾಗುತ್ತದೆ. ತನಗೆ ಅತ್ಯಂತ ಆತ್ಮೀಯರಾಗಿದ್ದವರೆಂದರೆ ಗಂಗಾ ಮೇಡಂ ಒಬ್ಬರೇ. ಈಗ ಇದ್ದಕ್ಕಿದ್ದ ಹಾಗೆ ಅವರೇ ತನ್ನನ್ನು ಪ್ರಪಾತಕ್ಕೆ ತಳ್ಳುತ್ತಿದ್ದಾರೆ ಎನಿಸಿದಾಗ ಆತನಿಗೆ ಗಂಗಾರ ಬಗ್ಗೆ ಕೋಪ ಬರುತ್ತದೆ. ಜೊತೆಗೆ ತನ್ನ ಬಗ್ಗೆಯೇ ಕೋಪ ಬರುತ್ತದೆ. ಬೆಂಗಳೂರು ದರಿದ್ರ ಎನಿಸುತ್ತದೆ. ಎಲ್ಲಾ ಬಿಟ್ಟು ಮಂಗಳೂರಿಗೆ ಓಡಿ ಹೋಗಿಬಿಡಬೇಕು ಎನಿಸುತ್ತದೆ. ತನ್ನನ್ನು ರಿಲೀವ್ ಮಾಡದ ಆಫೀಸರ್ಸ್ ಮೇಲೆಲ್ಲಾ ಇದ್ದಕ್ಕಿದ್ದಂತೆ ಸಿಟ್ಟು ಬಂದು ರೇಗಾಡುವಂತಾಗುತ್ತದೆ. ಮಧುವಿನ ಮನಸ್ಸಿನೊಳಗೆ ಒಂದು ರೀತಿಯ ಅವಮಾನದ ಭಾವ ಮೂಡುತ್ತಾ ಹೋದ ಹಾಗೆಲ್ಲಾ ಗಂಗಾ ಮೇಡಂ ಕಣ್ಣಲ್ಲಿ ತಾನೊಂದು ಕ್ಷುದ್ರ ಜೀವಿಯಾಗಿಬಿಟ್ಟೆ ಎನ್ನುವ ನೋವಿನ ಗೂಡೊಂದು ಎದೆಯಲ್ಲಿ ಬಲವಾಗಿ ಬೆಳೆಯತೊಡಗುತ್ತದೆ.

ಗಂಗಾ ಮಧುವನ್ನು ನೋಡಿದಾಗಲೆಲ್ಲಾ ನಕ್ಕು ಮುಂದುವರಿಯುವಳೇ ಹೊರತು ಏನನ್ನೂ ಮಾತನಾಡಿಸುತ್ತಿರಲಿಲ್ಲ. ಕೆಲವೊಮ್ಮೆ ಗಮನಿಸಿದರೂ ಗಮನಿಸದಂತೆ ಹೋಗಿಬಿಡುವಳು. ಆಗೆಲ್ಲಾ ಮಧುವಿಗೆ ಅಪಾರ ನೋವಾಗುತ್ತಿತ್ತು. ತಾನೇನೋ ಕೊಲೆ ಅಥವಾ ಇನ್ನೂ ಘೋರ ಅಪರಾಧ ಮಾಡಿದವರ ಪಾಪಪ್ರಜ್ಞೆ ಮನದಲ್ಲಿ ಮೂಡುತ್ತಿತ್ತು. ಮತ್ತೊಂದು ದಿನ ಗಂಗಾ ಮಿತಾಳೊಡನೆ ನಡೆದು ಬರುತ್ತಿದ್ದಾಗ ಮಧು ಎದುರಿಗೇ ಸಿಕ್ಕಿದ್ದ. 'ಮಧು ಅಂಕಲ್' ಎಂದು ಮಿತಾ ಓಡಿ ಹೋಗಿ ಮಧುವನ್ನು ತಬ್ಬಿಕೊಂಡಾಗ ಗಂಗಾ ಸುಮ್ಮನೇ ನಿಂತುಬಿಟ್ಟಿದ್ದಳು. 'ಏನು ಮೇಡಂ, ಯಾಕೆ ಹೀಗೆ ಮಾಡುತ್ತೀರಿ?' ಎಂದಿದ್ದ ಮಧು. ಗಂಗಾ ಮಾತನಾಡಲಿಲ್ಲ. 'ನಿಮಗೊಂದು ಪದ್ಯ ಕೊಡಲಾ?' ಎಂದಿದ್ದಳು ಅಷ್ಟೇ. ಬ್ಯಾಗಿನಲ್ಲಿ ಎಷ್ಟೋ ದಿನಗಳ ಕಾಲ ಇಟ್ಟುಕೊಂಡಿದ್ದ ಪದ್ಯವೊಂದನ್ನು ಮಧುವಿನ ಕೈಯಲ್ಲಿ ಇಟ್ಟಳು. 'ಪದ್ಯ ಬರೆಯದೇ ಅನೇಕ ವರ್ಷಗಳೇ ಕಳೆದು ಹೋದವು, ಈಗ ಒಂದು ಪದ್ಯ ಬರೆದಿದ್ದೇನೆ, ಓದಿ ಮಧು' ಎಂದಳು. ಮಿತಾ ಚಾಕಲೇಟ್ ಇಸಿದುಕೊಂಡು ಗಂಗಾಳ ಹತ್ತಿರ ಬಂದಾಗ ಗಂಗಾ ಮಿತಾಳನ್ನು ಎತ್ತಿಕೊಂಡು ನಡೆದುಬಿಟ್ಟಿದ್ದಳು. ಆಕೆ ನಡೆದ ರೀತಿ ತನಗೇನೂ ಸಂಬಂಧವೇ ಇಲ್ಲ ಎನ್ನುವ ಹಾಗೆ ಇತ್ತು. ಯಾಕೋ ಮಧುವಿನ ಮನಸ್ಸಿನೊಳಗೆ ಅಸೂಯೆಯೊಂದು ಹೆಡೆಯಾಡತೊಡಗಿತ್ತು. ರಮೇಶನಿಗಾಗಿ ಹಂಬಲಿಸುವ ಗಂಗಾ ತನಗೇನೂ ಸಂಬಂಧವಿಲ್ಲದವರ ಹಾಗೆ ಹೊರಟು ಹೋದರು ಎನಿಸಿದಾಗ ಮನಸ್ಸಿನೊಳಗಡಗಿದ್ದ ತಿರಸ್ಕೃತ ಭಾವ ಮತ್ತೆ ಅವನಲ್ಲಿ ಹೆಡೆ ಎತ್ತತೊಡಗಿತ್ತು. ಇವನೊಂದು ಕ್ಷುದ್ರ ಜೀವಿ, ತನಗೆ ಏನೂ ಸಂಬಂಧವೇ ಇಲ್ಲದವರಂತೆ ವರ್ತಿಸುವ ಗಂಗಾ ಮೇಡಂ ತೋರಿಸಿದ ಭಾವದಿಂದಾಗಿ ತಾನೊಬ್ಬ ಅನಾಥ

ಎನ್ನುವ ಭಾವ ಗಟ್ಟಿಯಾಗಿ ಮಧುವಿನ ಮನಸ್ಸಿನಲ್ಲಿ ಮೂಡತೊಡಗಿತ್ತು. ಗಂಗಾ ಮೇಡಂ ತನ್ನೊಳಗೆ ಮೂಡಿಸಿದ್ದ ಆತ್ಮವಿಶ್ವಾಸವೊಂದು ಕರಗಿ ಹೋಗತೊಡಗಿದೆ ಎಂದು ಆತನಿಗೆ ಅನ್ನಿಸತೊಡಗಿತ್ತು. ಮಧು ಸೀದಾ ಮನೆಗೆ ನಡೆದಿದ್ದ. ಸ್ನಾನಕ್ಕೆಂದು ನೀರು ಹಾಕಿದ್ದ. ಸ್ನಾನ ಮಾಡಿದರೆ ಮೈಗೆ, ವಿಶೇಷವಾಗಿ ಮನಸ್ಸಿಗೆ ಹಿಡಿದ ಜಡ್ಡು ಹೋಗಿಬಿಡಬಹುದೇನೋ ಎನ್ನುವ ವಿಚಿತ್ರ ಭಾವನೆ. ನೀರು ಕಾದ ಮೇಲೆ ಯಾಕೋ ಸ್ನಾನ ಮಾಡುವ ಮನಸ್ಸೇ ಆಗಲಿಲ್ಲ. ಕೊಳೆಯಾದ ಅಂಗಿಯನ್ನು ಬದಲಿಸಬೇಕು ಅಂದುಕೊಂಡ. ಆದರೆ ಯಾಕೋ ಕುಳಿತಲ್ಲಿಂದ ಏಳುವ ಮನಸ್ಸೇ ಬರಲಿಲ್ಲ. ಉತ್ಸಾಹವೆಲ್ಲಾ ಅಡಗಿ ಹೋದ ಹಾಗೆ. ಇದ್ದಕ್ಕಿದ್ದ ಹಾಗೆ ತನಗೇನಾಯಿತು? ಎಂದು ಮಧುವಿಗೆ ಆಶ್ಚರ್ಯವಾಗಿತ್ತು. ಟ್ರಿಮ್ ಆಗಿ ಡ್ರೆಸ್ ಮಾಡಿಕೊಂಡು, ದೊಡ್ಡದಾಗಿ ನಕ್ಕು ಓಡಾಡುತ್ತಿದ್ದ ತನ್ನ ಉತ್ಸಾಹಕ್ಕೇನಾಯಿತು? ಹೇಳಿದ್ದರೇನು? ಎನ್ನುವ ಉದಾಸೀನ ಭಾವ. ಗಂಗಾ ಮೇಡಂ ಕೊಟ್ಟ ಪದ್ಯದ ನೆನಪಾಯಿತು. ಹೊರ ತಗೆದ.

ನನ್ನ ಪುಟ್ಟ ಹುಡುಗನಿಗೆ

ಹುಚ್ಚು ಹುಡುಗ
ರಂಗು ರಂಗಾದ ನಿನ್ನ ಕನಸುಗಳಿಗೆ
ರೆಕ್ಕೆ–ಪುಕ್ಕ ಹಚ್ಚಿ
ಹಾರಿ ಬಿಡಲಾರದ ಗೆಳತಿ ನಾನು.
ಅಂತರಾಳದ ಹಾಡಿನ
ಬಿಸಿ ತಟ್ಟಿದರೆ
ಉದ್ವೇಗ, ಉನ್ಮಾದದೊಡಲೊಳಗೆ
ಆತಂಕ/ಭಯ ಬೇರು ಬಿಟ್ಟ,
ಅನಾಥೆ ನಾನು!
ನಿನ್ನೆದೆಯ ಬಿಸಿಗೆ
ಮೈಯ ಕಾವಿಗೆ
ನಾನೆಂತು ಹಾಡಲಿ?
ಬದುಕಲ್ಲಿ ಕಳೆದುಕೊಳ್ಳಲಾರದೇ
ಪಡೆದುಕೊಳ್ಳುವ ಬಗೆಯೆಂತು? ಗೆಳೆಯಾ
ಅರಿತಿಲ್ಲ ನಾನು ಈ ಗುಟ್ಟ,
ನನ್ನೊಳಗೆ ನಿನ್ನ ಗುಬ್ಬಚ್ಚಿ ಮರಿಯಾಗಿ
ಅವಿತಿಟ್ಟುಕೊಂಡು
ಕಣ್ಣೊಳಗೆ ಕಣ್ಣಿಟ್ಟು
ನವಿಲುಗರಿಯ ಕಣ್ಣ
ಎಣಿಸುವುದು ಕಲಿಸಬಲ್ಲೆ ಮಾತ್ರ ನಾನು
ಹೇಳಲಾರದ / ಹಾಡಲಾರದ ಭಾವಗಳಿಗೆ
ಮನಸ್ಸು ಘಾಸಿಯಾದರೆ
ಹಾಡಲಾರದ / ಹಾರಲಾರದ

ರೆಕ್ಕೆ ಮುರಿದ ಹಕ್ಕಿ ನೀನಾಗಬಾರದೆಂಬ
ದುಗುಡ/ದುಮ್ಮಾನ
ನನ್ನ ಪುಟ್ಟ ಹುಡುಗ
ಹಾರಿ ! ಹಾಡಿ
ಜೊತೆಗೊಂಡ ಪುಟ್ಟ ಮರಿಯೊಡನೆ
ರಂಗು ರಂಗಾದ ಕನಸಿಗರ್ಥವ
ಹುಡುಕಿದರೆ
ಈ ಗೆಳತೀ
ಕುಳಿತಲ್ಲೇ ಹಾಡುತ್ತಾಳೆ
ನಿನಗೊಂದು ಪ್ರೇಮಗೀತೆ,
ಹೃದಯದೊಳಗಿನ ಭಾವಗೀತೆ

ಗಂಗಾ ಕೆಳಗೊಂದು ಮಾತು ಬರೆದಿದ್ದರು.

ನಿನ್ನ ಭಾವನೆಗಳ ತಳಹದಿಯ ಬದುಕಿನಲ್ಲಿ ನೀನೊಂದು ಚೇತನ ಮೂರ್ತಿಯಾಗಿ ಕಂಡೆ. ನನ್ನ ಬರವಣಿಗೆಯ ಕೇಂದ್ರಕ್ಕೊಂದು ಬಿಂದುವಾಗಿ ಕಂಡೆ. ಈ ರೀತಿಯ ನಿರ್ಮಲ ಪ್ರೀತಿ/ವಿಶ್ವಾಸ ನನ್ನಲ್ಲಿ ಕೊನೆಯವರೆಗೂ ಉಳಿದಿರುತ್ತದೆ. ಬರವಣಿಗೆಯಲ್ಲಿ ಪೂರ್ಣತೆ ಅರಸುವ ನನಗೆ ಬದುಕಿನೊಳಗಡೆ ಆ ಚೌಕಟ್ಟು ಇರುವುದಿಲ್ಲ ಅನಿಸುತ್ತದೆ. ನಿನ್ನ ಬದುಕು ಛಿದ್ರ-ಛಿದ್ರವಾಗದಿರಲು ನಮ್ಮಿಬ್ಬರ ವಿಶ್ವಾಸ ಚೇತನಪೂರ್ಣವಾಗಿದ್ದರೆ ಮಾತ್ರ ಸಾಕು.'

ವಿಶ್ವಾಸದಿಂದ ಗಂಗಾ

* * * * *

ಗಂಗಾಗೆ ಮಧುವಿನಿಂದ ಕಳಚಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಹಿಂದಿನ ರೀತಿಯ ಪ್ರೀತಿ/ವಿಶ್ವಾಸ ಆ ನಿರ್ಮಲತೆ ಉಳಿಸಿಕೊಳ್ಳಲು ಗಂಗಾ ಮಧುವಿಗೆ ಪತ್ರ ಬರೆದಿದ್ದಳು. ಮಧುವಿನ ಡೈರಿಯ ಸಾಲಿನಿಂದ ಕಲಕಿಹೋದ ಮನಸ್ಸನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಬರೆದಿದ್ದಳು. ತಮ್ಮಿರ್ವರ ನಡುವೆ ಆ ನಿರ್ಮಲತೆ ಉಳಿಯಲಿ ಎಂಬ ಬಯಕೆಯಿಂದ ಬರೆದಿದ್ದಳು. ಮಧುವಿನಿಂದ ತಪ್ಪಿಸಿಕೊಳ್ಳುವುದೇ ಇದಕ್ಕೆಲ್ಲ ಉತ್ತರವಲ್ಲ ಎಂಬುದು ಗಂಗಾಗೆ ಅರ್ಥವಾಗತೊಡಗಿತ್ತು. ಸಾಯಂಕಾಲದ ಹೊತ್ತುಗಳನ್ನು ಕನಸುಗಳ ಮಾತಿನಿಂದ, ನಗುವಿನಿಂದ, ಭಾವನೆಗಳಿಂದ ಚೈತನ್ಯಪೂರ್ಣವಾಗಿಸುತ್ತಿದ್ದ ಮಧುವಿನಿಂದ ಮುಖ ತಿರುಗಿಸುವುದು ಒಮ್ಮೊಮ್ಮೆ ಅಸಾಧ್ಯ ಎನಿಸುತ್ತಿತ್ತು. ನಿರ್ಮಲವಾದ ಪ್ರೀತಿ/ವಿಶ್ವಾಸಗಳು ಪ್ರೇಮಕ್ಕೆ ತಿರುಗಿದರೆ - ದೈಹಿಕ ಸುಖದ ಅಪೇಕ್ಷೆಯ ತೀವ್ರತೆಗೆ ತಿರುಗಿದರೆ ಪ್ರಾರಂಭದ ದಿನಗಳಲ್ಲಿ ಮಧುವಿನಲ್ಲಿ ಕಾಣುತ್ತಿದ್ದ ನಿರ್ಮಲತೆ ಹೊರಟು ಹೋಗಿ ಅಲ್ಲಿ ಇನ್ನೇನೋ ತಲೆ ಹಾಕುತ್ತದೆ ಎಂಬ ಸತ್ಯ ಆಕೆಯ ಮನಸ್ಸಿನ ಮೂಲೆಯಲ್ಲಿ ಎಲ್ಲಿಯೋ ಧ್ವನಿಸುತ್ತಿತ್ತು. ಮಧುವಿನೊಟ್ಟಿಗೆ ಮಲಗಿದ ಮರುಕ್ಷಣದಲ್ಲಿ ಅಲ್ಲಿದ್ದ ನಿಗೂಢತೆ ಮಾಯವಾಗಿ ಅಲ್ಲೊಂದು ಶೂನ್ಯ ಅನುಭವ ಮೂಡಬಹುದಿತ್ತು. ಈ ಅನುಭವ ಗಂಗಾಳಿಗೆ ಇದ್ದುದರಿಂದ ಆ ರೀತಿಯ ಸಂಬಂಧವೇ ಭಯಾನಕವಾಗಿ ಕಾಣಿಸುತ್ತಿತ್ತು. ಮಧು ಬರೆದ ಡೈರಿಯ ಸಾಲುಗಳನ್ನು ಓದಿದ ಮೇಲೆ ತಮ್ಮ ಸಂಬಂಧದಲ್ಲಿ ಮೊದಲಿನ ನಿರ್ಮಲತೆ ಉಳಿಯಲಾರದೇನೋ ಎನ್ನುವ ಭಾವವೂ ಗಂಗಾಳಲ್ಲಿ ಇಣುಕತೊಡಗಿತ್ತು. ನಿರ್ಮಲತೆ ಬರಿಯ ದೈಹಿಕವಾದದ್ದು ಅಲ್ಲ,

ಮಾನಸಿಕವಾದದ್ದೂ ಕೂಡಾ ಎಂದು ಗಂಗಾಳಿಗೆ ಭಾಸವಾಗತೊಡಗುತ್ತದೆ. ಮಧುವಿನ ಮನದಾಳದಲ್ಲಿ ಹೀಗೆ ಇದೆ ಎನ್ನುವುದೇ ಆಕೆಗೆ ಕಲುಷಿತ ಎನಿಸುತ್ತದೆ. ಮಧುವಿನ ಸಂಬಂಧದಲ್ಲಿ, ಆತನ ಭಾವನೆಗಳ ತೀವ್ರತೆಯಲ್ಲಿ, ತಾರುಣ್ಯದ ಕನಸುಗಳಲ್ಲಿ ತಾನು ಕಂಡದ್ದು, ಕಾಣ ಬಯಸಿದ್ದು ಏನೇನನ್ನೋ? ಕಳೆದು ಹೋದ ತನ್ನನ್ನು, ಕಳೆದು ಹೋಗುತ್ತಿದ್ದ ರಮೇಶನನ್ನು, ತಿರುಗಿ ಬರಲಾರದ ತಾಯಿಯ ಬೆಚ್ಚಗಿನ ಸ್ನೇಹವನ್ನು, ಸತ್ತು ಹೋದ ಬರವಣಿಗೆಗೆ ಚೈತನ್ಯ ತುಂಬಬಹುದಾದ ಸ್ಫೂರ್ತಿಯನ್ನು. ಗಂಗಾ ಬಯಸಿದ್ದು ಇಂತಹದೊಂದು ದಟ್ಟ ಅನುಭವವನ್ನು. ಆಕೆಯ ಗ್ರಹಿಕೆಯಲ್ಲಿ ಅದು ದೈಹಿಕ ಸುಖ ಮೀರಿದುದಾಗಿತ್ತು. ಮಧು ಧೈರಿಯ ಸಾಲುಗಳಿಂದ ಎಲ್ಲವನ್ನೂ ಕಲಕಿಬಿಟ್ಟಿದ್ದ. ಮನಸ್ಸಿನ ಕದ ತಟ್ಟಿ ಅಲ್ಲಿರುವುದು ಇನ್ನೇನೋ ನೋಡಿ ಎಂದಿದ್ದ. ಗಂಗಾಗೆ ಭಯವಾಗತೊಡಗಿತ್ತು. ತಾನು ಇಂತಹದನ್ನು ಅರಸಲಿಲ್ಲ ಎಂದು ಹೇಳುವುದು ಮನಸ್ಸಿನ ಮೇಲ್ಪದರಿನ ಸತ್ಯ ಮಾತ್ರವೇ? ಮನಸ್ಸಿನ ಕೆಳಪದರುಗಳನ್ನು ಕೆದಕಿ ನೋಡಿದರೆ ಇನ್ನೇನಾದರೂ ಸತ್ಯಗಳಿವೆಯೇ ಎಂದು ಯೋಚಿಸತೊಡಗಿದಾಗ ಆಕೆಯ ಬಗ್ಗೆಯೇ ಗೊಂದಲ ಉಂಟಾಗುತ್ತದೆ. ಮಧುವಿನ ಡೈರಿಯ ಸಾಲುಗಳಿಂದಾಗಿ ಆಕೆಯ ಇಡಿಯ ಬದುಕು ಆಕೆಯೆದುರಿಗೆ ಮತ್ತೆ ಕಾಣಿಸಿಕೊಂಡಿತ್ತು. ಮಧುವಿನ ಬಗ್ಗೆ ಯೋಚಿಸುವಾಗಲೆಲ್ಲಾ ಗಂಗಾಗೆ ಕೆಲವು ಸಲ ತನ್ನ ಬಗ್ಗೆ, ಕೆಲವು ಸಲ ಮಧುವಿನ ಬಗ್ಗೆ ಹುಚ್ಚು ಹುಚ್ಚಾಗಿ ಕೋಪ ಬರುತ್ತಿತ್ತು.

ಮಧುಗೆ ಕೊನೆಗೂ ಮಂಗಳೂರಿಗೆ ರಿಲೀವ್ ಆಗದೇ ಇದ್ದಾಗ ಆತ ತುಂಬಾ ಹತಾಶನಾಗಿದ್ದ. ತಾನು ಮಂಗಳೂರಿಗೆ ಹೋಗುವುದು ಒಳ್ಳೆಯದೆಂದು ಮೊದಲು ಬೇರೆ ಬೇರೆ ಕಾರಣಗಳಿಂದ ಯೋಚಿಸುತ್ತಿದ್ದ. ಆದರೆ ಈಗ ಮಂಗಳೂರಿಗೆ ಗಂಗಾಳ ಸಲುವಾಗಿಯೇ ಹೋಗಬೇಕು ಎನಿಸುತ್ತಿತ್ತು. ಗಂಗಾ ಮೇಡಂ ಕೂಡಾ ಇತರರಂತೆ ಎಂದು ಮಧುವಿಗೆ ಅನ್ನಿಸತೊಡಗಿತ್ತು. ಅನಾಥಪ್ರಜ್ಞೆಯೊಂದು ತೀವ್ರವಾಗಿ ಮೂಡತೊಡಗಿತ್ತು. ಗಂಗಾರ ಬಗ್ಗೆ ಇದ್ದ ವಿಶ್ವಾಸದ ಸ್ಥಳದಲ್ಲಿ ಈಗ ರೋಷ, ಕೋಪ ಮೂಡುತ್ತಿತ್ತು. ಈ ಕ್ಷಣದಲ್ಲಿ ಅವರಿಂದ ದೂರವಾಗಿ, ಹೇಳದೇ ದೂರವಾಗಿ ಅವರ ಮನಸ್ಸಿಗೆ ನೋವು ಉಂಟುಮಾಡಬೇಕು ಎನಿಸುತ್ತಿತ್ತು. ರಿಲೀವ್ ಮಾಡಿಸಿಕೊಂಡು ಗಂಗಾರಿಗೆ ಮುಖವನ್ನು ತೋರಿಸದೇ ಹೊರಟು ಹೋಗಬೇಕು, ಆ ಮೂಲಕ ಅವರ ಮನಸ್ಸಿಗೆ ನೋವುಂಟು ಮಾಡಬೇಕು ಎಂದು ಅವನಿಗೆ ಅನ್ನಿಸುತ್ತಿತ್ತು. ಹಾಗಾಗದಿದ್ದಾಗ ಆತ ಹತಾಶಗೊಂಡಿದ್ದ. ಆಫೀಸರ್ಸ್ ಮೇಲೆಲ್ಲಾ ಹುಚ್ಚುಚ್ಚಾಗಿ ರೇಗಾಡಿ ಜಗಳವಾಡತೊಡಗಿದ್ದ. ಕೆಲವು ಸಲ ಕೆದರಿದ ತಲೆಯಲ್ಲಿ, ಕೆಂಪಾದ ಕಣ್ಣುಗಳಲ್ಲಿ ಹೋಗಿ ಆಫೀಸರ್ಸ್‌ನೆಲ್ಲಾ ಹೆದರಿಸಿ ಬಂದಿದ್ದ ಮಧುವಿನ ನಡತೆಯ ಬಗ್ಗೆ ಹಲವಾರು ದೂರುಗಳು ಕೊಡಲ್ಪಡತೊಡಗಿದ್ದವು. ಅವನ ಮೇಲಧಿಕಾರಿಯವರೆಗೆ ಹಲವಾರು ದೂರುಗಳು ಹೋಗಿದ್ದರೂ ಅದಕ್ಕೆಲ್ಲ ಲೆಕ್ಕಿಸದವನಂತೆ ರಿಲೀವ್ ಮಾಡಿ ಎಂದು ಮಧು ಹಟ ಹಿಡಿಯತೊಡಗಿದ್ದ. ಮಧು ಸಂಪೂರ್ಣವಾಗಿ ತನ್ನ ಜೀವನದ balance ಕಳೆದುಕೊಳ್ಳತೊಡಗಿದ್ದ. ಡ್ರೆಸ್ ಮಾಡಲು ಇರುತ್ತಿದ್ದ ಉತ್ಸಾಹ ಈಗ ಹೊರಟು ಹೋಗಿತ್ತು. ಮಧು ಕುಡಿಯುವುದಕ್ಕೂ ಪ್ರಾರಂಭಿಸಿದ್ದ. ಕುಡಿಯುವುದರಿಂದ ಮಾತ್ರ ತನ್ನ ಜೀವನದ ಮೊದಲಿನ balance ಕಾಪಾಡಬಹುದೇನೋ ಎಂಬ ಭಾವನೆ. ಹೀಗೇ ಮಧು ಮೂರು ಹೊತ್ತು ಕುಡಿಯುವ ಅಭ್ಯಾಸಕ್ಕೆ ಬಲಿಯಾಗತೊಡಗಿದ್ದ. ಮನಸ್ಸಿನೊಳಗೆಲ್ಲೋ ತಾನೊಬ್ಬ ತಿರಸ್ಕೃತ ಎಂಬ ಭಾವನೆಯ ದಳ್ಳುರಿಯನ್ನು ಕುಡಿತದ ಮೂಲಕ ನಂದಿಸಲು ಮಧು ಪ್ರಯತ್ನಿಸತೊಡಗಿದ್ದನು.

ಗಂಗಾಳ ಕಣ್ಣಿಗೆ, ಕಿವಿಗೆ ಇವೆಲ್ಲ ಬೇಡ ಎಂದರೂ ಕಾಣಿಸುತ್ತಿದ್ದವು, ಕೇಳಿಸುತ್ತಿದ್ದವು. ಈ ಎಳೆಯ ಜನಾಂಗದ ಹುಡುಗರು ವ್ಯಕ್ತಿತ್ವದಲ್ಲಿ ಹುರಳಿಲ್ಲದವರೇನೋ, ಪೊಳ್ಳು ವ್ಯಕ್ತಿತ್ವದವರೇನೋ ಎಂದು

ಹಲವಾರು ಬಾರಿ ಅನ್ನಿಸತೊಡಗಿತ್ತು. ಬದುಕಿನ ಗಂಭೀರತೆಯನ್ನು ಇಂತಹವರಿಗೆ ಅರ್ಥ ಮಾಡಿಸುವುದು ಕಷ್ಟವೇನೋ ಎಂಬ ಭಾವವೂ ಆಕೆಯಲ್ಲಿ ಬಲವಾಗಿ ಮೂಡತೊಡಗಿತ್ತು. ಒಂದು ದಿನ ಗಂಗಾ ಮಿತಾಳೊಡನೆ ಬರುತ್ತಿರುವಾಗ ಮಧು ಮನೆಯ ಕಡೆಗೆ ಹೋಗುತ್ತಿದ್ದ. ಕೆದರಿದ ತಲೆ, ಶರಟು, ಮಾಸಿದ ಅಂಗಿ, ಅವನಿಗೆ ಮೈ ಮೇಲೆ ಪ್ರಜ್ಞೆಯೇ ಇಲ್ಲದವರ ಹಾಗೆ ನಡೆಯುತ್ತಿದ್ದ. ಸಾಯಂಕಾಲ ಸುಮಾರು ಏಳು ಘಂಟೆಯಾಗಿದ್ದಿರಬಹುದು. ಸಾಮಾನು ತರಲು ಮಿತಾಳೊಡನೆ ಹೋಗಿದ್ದ ಗಂಗಾ ಮಧುವನ್ನು ಆ ಅವಸ್ಥೆಯಲ್ಲಿ ಕಂಡಾಗ ದಿಗ್ಭ್ರಮೆಗೊಂಡಿದ್ದಳು. ಕೆನ್ನೆಗೆ ಬಾರಿಸಿ ಬುದ್ಧಿ ಹೇಳಿ ಆತನ ತಂದೆಗೊಂದು ಪತ್ರ ಬರೆಯಬೇಕು ಎಂದು ಆ ಕ್ಷಣಕ್ಕೆ ಅನ್ನಿಸಿತ್ತು. ತನ್ನ ವಿದ್ಯಾರ್ಥಿಯೊಬ್ಬ ಕುಡಿದು ಹಾಳಾಗುತ್ತಾನೆ, ಅದೂ ತನ್ನ ಸಲುವಾಗಿ ಎನ್ನುವ ವಿಚಾರ ತಲೆಯಲ್ಲಿ ಮೂಡಿದಾಗ ಆಕೆಗೆ ಸಂಕಟವಾಗುತ್ತದೆ. ಎಷ್ಟೋ ಹೊತ್ತಿನವರೆಗೆ ಮಧುವನ್ನು ನೋಡುತ್ತಾ ಗಂಗಾ ಅಲ್ಲಿಯೇ ನಿಂತುಬಿಟ್ಟಿದ್ದಳು. ಯಾಕೋ ಆಕೆಯ ಕಣ್ಣಲ್ಲಿ ಇದ್ದಕ್ಕಿದ್ದ ಹಾಗೆ ನೀರು ತುಂಬಿಕೊಂಡಿತ್ತು.

ಗಂಗಾ ನಂತರದ ದಿನಗಳಲ್ಲಿ ತನ್ನನ್ನು ಇಡಿಯಾಗಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದಳು. ಐದು ವರ್ಷದ ಮಗಳು ಮಿತಾ. ತನ್ನ ವ್ಯಕ್ತಿತ್ವದೊಳಗೆ ಬೆರೆತು ಹೋಗಿದ್ದೇನೆ ಎಂದುಕೊಂಡಿರುವ ರಮೇಶ. ಬಯಸಿದಷ್ಟು ಹಣ, ಹಾಗೆ ಸುಂದರವಾಗಿರುವ ಬದುಕೇ. ಆಕೆಗೆ ಕಾಡಿದ ಖಾಲಿತನದಲ್ಲಿ, ರಮೇಶನಿಲ್ಲದ ಬರಿದಾದ ಸಂದರ್ಭಗಳಲ್ಲಿ, ಕೆಲಸ, ಕೆಲಸ ಎಂದು ಬೇಕಾಗಿಯೋ, ಬೇಡಾಗಿಯೋ ಸಂಸಾರದ ಜವಾಬ್ದಾರಿ ಗಂಗಾಗೇ ಹೊರಿಸಿ ಕೆಲಸಕ್ಕೇ ಅಂಟಿಕೊಂಡುಬಿಡುವ ರಮೇಶನನ್ನು ಹುಡುಕುವ ಸಂದರ್ಭದಲ್ಲಿ ಒಂದು ಚೈತನ್ಯವನ್ನು ಗಂಗಾ ಮಧುವಿನಲ್ಲಿ ಅರಸಿದ್ದಳು. ಯಾಂತ್ರಿಕ ಬದುಕಿನಲ್ಲಿ ಸತ್ತು ಹೋಗುತ್ತಿರುವ ಬದುಕಿಗೆ/ ಬರವಣಿಗೆಗೆ ಸ್ಫೂರ್ತಿಯಾಗಿ ಬಂದಿದ್ದ ಮಧು. ಆದರೆ ಈಗ ತಾನು, ಮಗು, ರಮೇಶ ಚೂರು ಚೂರಾಗಿ ಬಿಡುತ್ತೇವೆ ಎನ್ನಿಸುವಾಗ ಗಂಗಾ-ತನ್ನ ಜೀವನವನ್ನು ತನ್ನ ಕೈಗೇ ತೆಗೆದುಕೊಳ್ಳಲು ನಿರ್ಧರಿಸಿದಳು. ಮಧುವನ್ನು ಕಣ್ಣಿನಿಂದ, ಮನಸ್ಸಿನಿಂದ ತೆಗೆದುಹಾಕಲು ಪ್ರಯತ್ನಿಸತೊಡಗಿದಳು. ಕೊನೆಗೆ ಆಕೆಯ ಮನಸ್ಸಿನಲ್ಲಿ ಉಳಿದುದು ಮಧು ಕುಡಿದು ತೂರಾಡಿಕೊಂಡು ಹೋಗುತ್ತಿದ್ದ ಚಿತ್ರ ಮಾತ್ರ. ಬೆಂಗಳೂರು ತನ್ನ ಮುಗ್ಧತೆಯನ್ನು ಕಸಿದುಕೊಂಡ ಹಾಗೆ ಮಧುವಿನ ಮುಗ್ಧತೆಯನ್ನು ಕಸಿದುಕೊಳ್ಳಬಾರದು, ಈತನ ನಿರ್ಮಲತೆಯಲ್ಲಿ ಸಂಕೀರ್ಣತೆ ಗೀಚಬಾರದು ಎಂದೆಲ್ಲಾ ಗಂಗಾಳ ಮನಸ್ಸಿಗೆ ಅನ್ನಿಸುತ್ತದೆ. ಹೀಗೆಲ್ಲಾ ಹೇಳಿದರೆ ಮಧುವಿಗೆ ಅರ್ಥವೇ ಆಗುವುದಿಲ್ಲ. ತಾನು ರಮೇಶನೊಂದಿಗೆ ಜೀವ ಬೆಸೆದುಕೊಂಡವಳು. ಇದಕ್ಕೆಲ್ಲಾ ಅವಕಾಶ ಕೊಡಬಾರದು ಎನ್ನಿಸಿದಾಗ ಗಂಗಾ ಏನೇ ಆದರೂ ಮಧುವನ್ನು ನೋಡಲೇಬಾರದೆಂದು ನಿರ್ಧರಿಸಿದಳು. ಇಲ್ಲ, ಮಧು ಅವನ ಪಾಡಿಗೆ ಅವನೇ ಸರಿ ಹೋಗಬೇಕು. ಬೇರೆ ಹುಡುಗಿಯರ ಸಂಬಂಧಗಳಲ್ಲಿ ಮಧು ಯಾವ ರೀತಿಯ rejection ಕಂಡನೋ? ಆದರೆ ತನ್ನದು ಆ ರೀತಿಯಲ್ಲ. ತನ್ನ ಪ್ರಶ್ನೆ ಗಂಡ-ಮಗುವಿನೊಂದಿಗೆ ಬೆಸೆದುಕೊಂಡಿದೆ. ಅದೂ ಅತ್ಯಂತ ಸುಂದರವಾಗಿಯೇ ಬೆಸೆದುಕೊಂಡಿದೆ. ಮಿತಾಳನ್ನಾಗಲೀ, ರಮೇಶನನ್ನಾಗಲೀ ಬಿಟ್ಟು ಸಂಬಂಧವಿಲ್ಲದವರಂತೆ ಹೋಗಿಬಿಡುವುದು ತನ್ನಿಂದ ಸಾಧ್ಯವೇ ಎಂದು ಗಂಗಾ ಯೋಚಿಸುತ್ತಾಳೆ. ತನಗೋಸ್ಕರವೇ ತಂದೆ/ತಾಯಿ ಎಲ್ಲರನ್ನೂ ಬಿಟ್ಟು ಬಂದ ರಮೇಶ ಬೀದಿಯಲ್ಲಿ ಭಿಕಾರಿಯಾಗಿಬಿಡುತ್ತಾನೆ ಎಂದು ಯೋಚಿಸುವಾಗ ಗಂಗಾಳ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತದೆ. ಗಂಗಾ ಮನಸ್ಸಿನಲ್ಲಿಯೇ ದೃಢ ನಿಶ್ಚಯ ಮಾಡಿಕೊಳ್ಳುತ್ತಾಳೆ. ಏನಾದರಾಗಲೀ ತಾನು ಮತ್ತೆ ಮಧುವನ್ನು ನೋಡಬಾರದು, ಮಾತನಾಡಿಸಬಾರದು. ಅದೊಂದು ಜೀವನದಲ್ಲಿ ಹೀಗೆಯೇ ಬಂದು ಹೋದ ಸಂಬಂಧ ಎಂದು ದೂರ ತಳ್ಳಿಬಿಡಬೇಕು. ಹೀಗೆ ನಿರ್ಧರಿಸಿದ ಮೇಲೆ ಸುಮಾರು ಒಂದು, ಒಂದೂವರೆ ತಿಂಗಳುಗಳ ಕಾಲ ಗಂಗಾ ಮಧುವನ್ನು ನೋಡಲೂ ಇಲ್ಲ, ನೋಡಲೂ ಪ್ರಯತ್ನಿಸಲೂ

ಇಲ್ಲ. ಅವನೆಲ್ಲಿರುತ್ತಾನೆ, ಏನು ಮಾಡುತ್ತಾನೆ ಎಂದು ಯೋಚಿಸುವುದನ್ನೂ ಕೂಡಾ ಮನಸ್ಸಿನಿಂದ ದೂರ ಸರಿಸಲು ಪ್ರಯತ್ನಿಸುವಳು. ಮನಸ್ಸಿನಲ್ಲಿ ನಡೆಯುವ ಗೊಂದಲಕ್ಕೆ ಮುಕ್ತಾಯ ಹಾಡಲು ರಮೇಶನ ಬಗ್ಗೆ ಹೆಚ್ಚು ಹೆಚ್ಚು ಕಾಳಜಿವಹಿಸಲು ಪ್ರಯತ್ನಿಸತೊಡಗಿದ್ದಳು. ತನ್ನ ಜೊತೆ ಹೆಚ್ಚು ಸಮಯ ಕಳೆಯುವಂತೆ ರಮೇಶನಿಗೆ ಒತ್ತಾಯಿಸುವಳು. ಮಿತಾಳೊಂದಿಗೆ ಆಡುವಳು. ಊರಿಗೆ ಹೋಗಿ ಅಣ್ಣ ಶಂಕರ, ಅತ್ತಿಗೆ ಉಮಾರ ಸನಿಹದಲ್ಲಿದ್ದು ಮನಸ್ಸಿನ ಗೊಂದಲಕ್ಕೆ ಮುಕ್ತಾಯ ಹಾಡಲು ಪ್ರಯತ್ನಿಸುವಳು. ಕಾಲೇಜಿನಲ್ಲಿ ತನ್ನನ್ನು ಹೆಚ್ಚು ಹೆಚ್ಚಾಗಿ ತೊಡಗಿಸಿಕೊಂಡು ಪಾಠ ಹೇಳುವಳು.

ಅದೊಂದು ಸುಂದರ ಸಂಜೆ. ರಮೇಶ ಕೆಲಸದ ಮೇಲೆ ಹೋಗಿ ಆಗಲೇ ಹದಿನೈದು ದಿನಗಳಾಗಿತ್ತು. ತಮ್ಮ ಮನೆಯ ಹೊಸ್ತಿಲಿನ ಮೇಲೆ ಮಧುವನ್ನು ಕಂಡಾಗ ಗಂಗಾಗೆ ದಿಗ್ಭ್ರಮೆ, ಆಶ್ಚರ್ಯ. ಮನೆಗೆ ಬರುವುದೇ ಇಲ್ಲವೇನೋ ಎಂದುಕೊಂಡಿದ್ದ ಮಧು ಮನೆಗೆ ಬಂದಿದ್ದ. ಅವನು ನೀಟಾಗಿ ಬಂದಿರುವುದನ್ನು ಗಮನಿಸಿದ ಗಂಗಾಗೆ ಸಂತೋಷವಾಗಿತ್ತು. ತನ್ನ ಹಾಗೆ ಮಧು ಕೂಡಾ ಬದುಕಿನ ಇಡಿಯ ಸಂದರ್ಭದಲ್ಲಿ ಚೂರು ಚೂರಾಗದಿರಲು ಪ್ರಯತ್ನಿಸಿರಬಹುದು ಎಂದುಕೊಂಡಳು. ಆ ಯೋಚನೆಯಿಂದಲೇ ಅವಳಿಗೆ ಖುಷಿಯಾಗುತ್ತದೆ. ಮನಸ್ಸು ಉಲ್ಲಸಿತಗೊಳ್ಳುತ್ತದೆ. ತನ್ನ ಭಾವನೆಗಳನ್ನು ಮಧು ಅರ್ಥಮಾಡಿಕೊಳ್ಳುವ ಮಟ್ಟಕ್ಕಿದ್ದಾನೆ ಎಂಬಂತಹ ಅರಿವೇ ಮಧುವಿನ ಬಗ್ಗೆ ಒಂದು ರೀತಿಯ ಗೌರವವನ್ನು ಆಕೆಯಲ್ಲಿ ಹುಟ್ಟುಹಾಕುತ್ತದೆ. ಮಧು ಎಷ್ಟೋ ಹೊತ್ತಿನವರೆಗೆ ಮಿತಾಳೊಂದಿಗೆ ಆಟವಾಡತೊಡಗಿದ್ದ. ಇದ್ದಕ್ಕಿದ್ದ ಹಾಗೆ ಜೋರಾಗಿ ಮಳೆ ಸುರಿಯಲುತೊಡಗಿದಾಗ ಮಧುಗೆ ಮನೆಗೆ ಹಿಂತಿರುಗಲು ತಕ್ಷಣವೇ ಸಾಧ್ಯವಾಗಲಿಲ್ಲ.

ಎಷ್ಟೋ ಹೊತ್ತಿನವರೆಗೆ ಸುರಿಯುತ್ತಿರುವ ಮಳೆಯನ್ನೇ ಮಿತಾ, ಮಧು ನೋಡುತ್ತಾ ನಿಂತಿದ್ದರು. ಯಾರೂ ಅಷ್ಟಾಗಿ ಮಾತನಾಡಿರಲಿಲ್ಲ. ಗಂಗಾಗೆ ಮಾತಿಗಿಂತ ಮೌನವೇ ಹೆಚ್ಚು ಪ್ರಿಯವಾಗಿ ಕಂಡಿತ್ತು. ಏನು ಮಾತನಾಡಿದರೂ ಯಾರ ಮನಸ್ಸಿಗೆ ನೋವಾಗುತ್ತದೋ ಎನ್ನುವ ಆತಂಕ. ಗಂಗಾ ಆಗಲೇ ಅಡಿಗೆ ಮಾಡಿ ಮುಗಿಸಿದ್ದಳು. ಮಗು ಮಿತಾ ಬೋರೆಂದು ಸುರಿಯುತ್ತಿದ್ದ ಮಳೆಯನ್ನು ನೋಡುತ್ತಲೇ ಹೋಂ ವರ್ಕ್ ಮಾಡಿ ಮುಗಿಸಿದಳು. ರಾತ್ರಿ ಎಂಟರ ಹೊತ್ತಿಗಾಗಲೇ ಆಕೆಯ ಕಣ್ಣುಗಳು ಎಳೆಯತೊಡಗಿದ್ದವು. ಮಿತಾಳಿಗೆ ಊಟ ಮಾಡಿಸೋಣವೆಂದು ಗಂಗಾ ಏಳುವಾಗಲೇ ಬೆಳಗುತ್ತಿದ್ದ ದೀಪ ಇದ್ದಕ್ಕಿದ್ದ ಹಾಗೆ ಮಳೆ-ಗಾಳಿಗೆ ಟಕ್ ಎಂದು ಆರಿ ಹೋಯಿತು. ಮಧು ಹೊರಗೆ ಸುರಿಯುತ್ತಿದ್ದ ಮಳೆಯನ್ನು ನೋಡುತ್ತಿದ್ದವನು ಸರಕ್ಕೆಂದು ಒಳಗೆ ಬಂದ. ಗಂಗಾ ಅಡಿಗೆ ಮನೆಗೆ ಹೋಗಲು ತಡವರಿಸಿ ಎದ್ದವಳು ಮಧುವಿನ ಕೈ ಆಕಸ್ಮಿಕವಾಗಿ ತಗಲಿ ಕತ್ತಲಲ್ಲಿ ದಿಗ್ಭ್ರಮೆಗೊಂಡಳು. ಏನು, ಎತ್ತ ಎನ್ನುವ ಮೊದಲೇ ಇಬ್ಬರ ಬೆಚ್ಚನೆಯ ಉಸಿರು, ಬೆಚ್ಚನೆಯ ಕೈಗಳು ಒಂದಾಗಿದ್ದವು. ಗಂಗಾ ಏನಾಯಿತು ಎಂದು ತಡವರಿಸುವ ಮೊದಲು ಅಥವಾ ಮಧು ದಿಗ್ಭ್ರಮೆಯಲ್ಲಿ ಹಿಂತೆಗೆಯುವ ಮೊದಲು ಒಬ್ಬರನ್ನೊಬ್ಬರು ಅಪ್ಪಿಕೊಂಡಿದ್ದರು. ಒಂದು ಸೆಕೆಂಡ್ ಮಾತ್ರ. ಗಂಗಾ ಆ ಅಪ್ಪುಗೆಯಲ್ಲಿ ತನ್ನನ್ನೇ ಒಂದು ಕ್ಷಣ ಮರೆತುಬಿಟ್ಟಿದ್ದಳು. ಮಧುವಿಗೆ ತಾರುಣ್ಯದಲ್ಲಿ ಕಾಣದ ಅಪ್ಪುಗೆ ಏನೋ ವಿಶೇಷವಾದುದನ್ನು ಅಪ್ಪಿ ಹಿಡಿಯುವಂತೆ ಅಪ್ಪಿ ಹಿಡಿದಿದ್ದ. ಮಧುವಿನ ಇಡಿಯ ಮೈ ಗಂಗಾಳ ಅಪ್ಪುಗೆಯಿಂದ ರೋಮಾಂಚನಗೊಂಡಿತ್ತು. ಮಧುವಿನ ಎದೆಗೊರಗಿದ ಗಂಗಾ ಮಧು ತುಟಿಗಳನ್ನು ತನ್ನ ತುಟಿಯ ಹತ್ತಿರ ತಂದಾಗ ಮಾತ್ರ ಧಡಕ್ಕನೇ ಹಿಂದೆ ಸರಿದುಬಿಟ್ಟಿದ್ದಳು. ಆ ಕ್ಷಣಕ್ಕೆ ತಾನೆಲ್ಲಿದ್ದೆ ಎಂಬುದನ್ನು ಮರೆಸಿದ್ದ ಬೆಚ್ಚನೆಯ ಅಪ್ಪುಗೆಯಿಂದ ವಾಸ್ತವಕ್ಕೆ ಬಂದಾಗ ಗಂಗಾಗೆ ನೆನಪಾದದ್ದು ರಮೇಶ್. ಒಂದು ಕ್ಷಣ ತನ್ನನ್ನು ತನ್ನ ಕೈಗೇ ತೆಗೆದುಕೊಳ್ಳಬೇಕಾಗಿತ್ತು

ಎನಿಸತೊಡಗಿತ್ತು ಆಕೆಗೆ. ಗಂಗಾ ಹಿಂದೆ ಸರಿದಾಕ್ಷಣ ಮಧು ಸುರಿಯುವ ಮಳೆಯಲ್ಲಿ ನೆನೆಯುತ್ತಲೇ ಮನೆಗೆ ಹೊರಟು ಹೋಗಿದ್ದ. ಅವನು ಪಾದಗಳನ್ನು ಒಂದೊಂದರ ಮೇಲೆ ಇಟ್ಟು ನಡೆದಂತೆ ಗಂಗಾಗೆ ಭಾಸವಾಗಿತ್ತು. ಕಿತ್ತು ಕಿತ್ತು ಇಡುವ ಹೆಜ್ಜೆಗಳಲ್ಲಿ ಭಾರವಾದ ನಡಿಗೆ ಇದ್ದ ಹಾಗೆ ಗಂಗಾಗೆ ಕಾಣಿಸುತ್ತಿತ್ತು. ಆ ಭಾರದ ನಡಿಗೆಯ ತುಂಬಾ ತಾರುಣ್ಯದ ಪ್ರೀತಿಯನ್ನು ತುಂಬಿಕೊಂಡು ನಡೆಯುತ್ತಿರುವನೇನೋ ಎಂದು ಗಂಗಾಗೆ ಅನ್ನಿಸತೊಡಗಿತ್ತು. ಮಾದಕತೆ ತುಂಬಿದ ನಡಿಗೆ. ಒಂದು ಕ್ಷಣದ ಅಪ್ಪುಗೆಯಿಂದ ಆಕೆಯ ದೇಹ/ಮನಸ್ಸೂ ಎರಡೂ ಭಾರವಾದ ಹಾಗೆ ಗಂಗಾಗೆ ಭಾಸವಾಗತೊಡಗಿತ್ತು. ಗಂಗಾ ಬಾಗಿಲು ಹಾಕಿ ಮಗುವಿಗೆ ಊಟ ಮಾಡಿಸಲು ನಡೆದಳು. ಮಿತಾ ಹಾಸಿಗೆಯಲ್ಲಿ ಆಗಲೇ ನಿದ್ದೆ ಮಾಡಿದ್ದಳು. ಆಕೆಯನ್ನು ಎಬ್ಬಿಸಿ ತೊಡೆಯ ಮೇಲೆ ಕೂರಿಸಿಕೊಂಡು ಮುದ್ದು ಮಾಡಿ ಎಬ್ಬಿಸುತ್ತಾ ನಿದ್ದೆಗಣ್ಣಿನಲ್ಲಿಯೇ ಊಟ ಮಾಡಿಸಿದಳು. ಅರ್ಧ ನಿದ್ದೆಯಲ್ಲಿಯೇ ಗಂಗಾ ಹೇಳುವ ಕತೆ ಕೇಳುತ್ತಾ ಊಟ ಮುಗಿಸಿ ಮಿತಾ ಮಲಗಿಬಿಟ್ಟಿದ್ದಳು.

ಮಿತಾ ಮಲಗಿದ ಮೇಲೆ ಗಂಗಾಳ ಮನಸ್ಸು ಮತ್ತೆ ಡೋಲಾಯಮಾನವಾಗತೊಡಗಿತ್ತು. ನಿರ್ಮಲತೆ ಹುಡುಕಿದ್ದ ಮಧುವಿನ ಸಂಬಂಧ ಎಲ್ಲಿ? ಬೆಚ್ಚಗೆ ಕ್ಷಣ ಕಾಲ ಇಡಿಯ ಪ್ರಪಂಚದ ಇರುವಿಕೆಯನ್ನೇ ಮರೆಸಿದ ಆ ಅಪ್ಪುಗೆ ಎಲ್ಲಿ? ಕೊನೆಗೆ ತನಗೆ ದಕ್ಕುವುದಾದರೂ ಏನು?

ಮಾದಕತೆ ತುಂಬಿಕೊಂಡ, ಪ್ರೀತಿಯ ಧಾರೆಯನ್ನು ಗಂಗಾಳ ಬೆಚ್ಚನೆಯ ಅಪ್ಪುಗೆಯಲ್ಲಿ ತುಂಬಿಕೊಂಡು ಹೋದ ಮಧುವಿನಲ್ಲಿ ಪ್ರೀತಿಯ ಮತ್ತು ತುಂಬಿಕೊಳ್ಳತೊಡಗಿತ್ತು. ಇಡಿಯ ಶರೀರವನ್ನು ನಡುಗಿಸುವ ಅನುಭವವಾಗಿ ಮನಸ್ಸು ರೋಮಾಂಚನಗೊಂಡಿತ್ತು. ಗಂಗಾಳ ಸಂಬಂಧದಲ್ಲಿ ಮೊದಲಿನ ಪ್ರೀತಿ-ವಿಶ್ವಾಸವನ್ನು ಉಳಿಸಿಕೊಳ್ಳಬೇಕು. ತಾನು ಮಾಡುತ್ತಿರುವುದು ತಪ್ಪು, ಮೊದಲಿನ ಹಾಗೆ ಗಂಗಾ-ಮೇಡಂ ಜೊತೆ ವಿಶ್ವಾಸದ ಸಂಬಂಧ establish ಮಾಡುವ ಉದ್ದೇಶದಿಂದ, ದೃಢ ನಿರ್ಧಾರದಿಂದ ಗಂಗಾಳ ಮನೆಗೆ ಹೋದವನು ಮಧು. ಮಗು ಮಿತಾಳ ಜೊತೆ ಆಟ ಆಡುತ್ತಾ ಎಲ್ಲ ಮರೆತುಬಿಟ್ಟಿದ್ದ, ಮಗುವಿನ ತರಹ. ಆ ಒಂದು ಕ್ಷಣ. ತಾನು ಹೋಗಲಿಕ್ಕೆ ಹೊರಟವನು. ಗಂಗಾ ದಢಕ್ಕೆಂದು ಎದ್ದು ಅಡಿಗೆ ಮನೆಯೊಳಗೆ ಹೊರಟವರು. ಕ್ಷಣದೊಳಗೆ ಒಬ್ಬರ ತೆಕ್ಕೆಯೊಳಗೆ ಒಬ್ಬರು. ಒಂದೆರಡು ಸೆಕೆಂಡ್‌ನಲ್ಲಿ ಗಂಗಾ ಹಿಂದೆ ಸರಿದಿದ್ದರು. ಮಧು ಉದ್ವೇಗದಿಂದ ಹತ್ತಿರ ತಂದ ತುಟಿಗಳನ್ನು ದೂರ ಸರಿಸಿ ಹಿಂದೆ ಸರಿದಿದ್ದರು. ಎರೆಡು ಕ್ಷಣಗಳ ಅಪ್ಪುಗೆಯಲ್ಲಿ ಗಂಗಾ ತನ್ನಲ್ಲಿ ಇಡಿಯಾಗಿದ್ದರು. ಒಂದು ಕ್ಷಣ ಅಷ್ಟೇ, ಮತ್ತೆ ದೂರ. ಮಧು ಅಲ್ಲಿಂದ ಹೊರಟು ಬಂದಿದ್ದ. ಅಂಗ, ಅಂಗ, ರೋಮ, ರೋಮಗಳಲ್ಲಿ ಚೈತನ್ಯದ ಬಿಸಿ. ಗಂಗಾರ ಬಿಸಿಯ ಉಸಿರು, ಬೆಚ್ಚಗಿನ ಮೈಯಿನ ಅಪ್ಪುಗೆ, ನೆನೆಸಿಕೊಂಡರೆ ಹುಚ್ಚು ಹಿಡಿಸುವಂತಹ ಅಪ್ಪುಗೆ. ಬಯಸಿ ಹೋಗಿದ್ದಲ್ಲ. ಅನಿರೀಕ್ಷಿತವಾದದ್ದು.

ಗಂಗಾ ತನ್ನನ್ನು ಭೇಟಿಯಾಗುವುದನ್ನು ನಿಲ್ಲಿಸಿದ ಮೇಲೆ, ಜೊತೆಗೆ ಅವರ ಪದ್ಯ ಓದಿದ ಮೇಲೆ ಮಧು ತನ್ನದೇ ತಪ್ಪಿರಬಹುದೆಂದು ಕ್ರಮೇಣವಾಗಿ ಯೋಚಿಸತೊಡಗಿದ್ದ. ಸುಂದರವಾಗಿರುವ ಗಂಗಾ/ ರಮೇಶ/ಮಿತಾ ಸಂಬಂಧದಲ್ಲಿ ತಾನು ಪ್ರವೇಶಿಸಬಾರದಿತ್ತು. ಡೈರಿಯ ತನ್ನ ಸಾಲುಗಳು ಗಂಗಾ ಮೇಡಂ ಕೈಗೆ ಸಿಗಬಾರದಿತ್ತು ಎಂದು ಮಧು ನಿಧಾನವಾಗಿ ಯೋಚಿಸತೊಡಗಿದ್ದ. ಮಂಗಳೂರಿಗೆ ಹೊರಟು ಹೋಗಲು ಗಂಭೀರವಾಗಿ ಮತ್ತೆ ಮತ್ತೆ ಪ್ರಯತ್ನಿಸಿದ್ದ. ಆಫೀಸರ್ಸ್ ಮುಂದೆ ಯದ್ವಾ-ತದ್ವಾ ಕೂಗಿ ಮೆಮೋ ತೆಗೆದುಕೊಂಡಿದ್ದ. ಮಧು ಹೀಗೆಯೇ ಎಲ್ಲಾ ಆಫೀಸರ್ಸ್ ಮುಂದೆ ಕೂಗುತ್ತಾ ಹೋದರೆ ಸಸ್ಪೆಂಡ್ ಆಗಿ ಹೋಗಿಬಿಡುತ್ತಾನೆಂದು ಅವನ ಆಫೀಸಿನ ಎ.ಇ ಹೇಳಿದ್ದರು. ಅಲ್ಲಿಯೇ ಇದ್ದು ಬದುಕಿನ ದೈನಂದಿತನಕ್ಕೆ

ಒಗ್ಗಲು ಮಧು ಪ್ರಯತ್ನಿಸುತ್ತಿದ್ದ. ಸುಮಾರು ತಿಂಗಳುಗಳ ಕಾಲ ಗಂಗಾ ತನ್ನನ್ನು ನೋಡುವುದನ್ನೇ ತಪ್ಪಿಸತೊಡಗಿದಾಗ ಅವನ ಮನಸ್ಸು/ದೇಹ ಎರಡರ ಮೇಲೂ ಹಿಡಿತವೇ ತಪ್ಪಿ ಹೋದಂತಾಗಿ ಕುಡಿತಕ್ಕೆ ಬಲಿಯಾಗತೊಡಗಿದ್ದ. ಹೀಗೇ ಎಷ್ಟೋ ತಿಂಗಳುಗಳು ಕಳೆದು ಹೋದುದು ಎಷ್ಟೋ ವರುಷಗಳೇ ಕಳೆದು ಹೋದ ಹಾಗೆ ಅವನಿಗೆ ಭಾಸವಾಗತೊಡಗಿತ್ತು. ಕುಡಿಯುತ್ತಾ ಕುಡಿಯುತ್ತಾ ತಾನು ಹೀಗೆಯೇ ನಾಶವಾಗಿಬಿಡುತ್ತೇನೆ ಎಂದು ಅವನಿಗೆ ತೀವ್ರವಾಗಿ ಅನ್ನಿಸತೊಡಗಿತ್ತು. ಕುಡಿದು ಸಾಯುವುದೇ ಮೇಲು ಎನ್ನಿಸಿದ್ದೂ ಉಂಟು. ತನ್ನ ಕಪ್ಪು ಬಣ್ಣವೇ ತನ್ನನ್ನು ಎಲ್ಲರಿಂದ ದೂರ ಮಾಡಿಸಿಬಿಡುತ್ತದೆ ಎನಿಸಿದಾಗಲೆಲ್ಲಾ ಒಮ್ಮೊಮ್ಮೆ ಆತನ ದೇಹದ ಬಗ್ಗೆ ಆತನಿಗೇ ಬೇಸರ. ಆದರೆ ಗಂಗಾ ಮೇಡಂರ ಯೋಚನೆ ಆ ನೆಲೆಯದ್ದಲ್ಲ ಎಂದೂ ಅವನಿಗೆ ಗೊತ್ತು. ತನ್ನಲ್ಲಿದ್ದ ಕೀಳರಿಮೆಯನ್ನು ನಕ್ಕು ನಗಿಸಿ ಹೋಗಲಾಡಿಸಿದವರೂ ಅವರೇ. ಹಾಗಾಗಿ ಅವರು ತನ್ನನ್ನು ತಿರಸ್ಕರಿಸಿದ್ದು ಆ ಹಂತದಲ್ಲಲ್ಲ ಎಂದು ಒಳಮನಸ್ಸು ನುಡಿದಾಗ ಆತನಿಗೆ ಸಮಾಧಾನವಾಗುತ್ತಿತ್ತು. ತಾನು ಅಂದುಕೊಂಡಂತೆ ತನ್ನನ್ನು ಕ್ಷುದ್ರ ಎಂದು ಅವರು ತಿರಸ್ಕರಿಸಿದ್ದಲ್ಲ. ಅವರ ಬದುಕು ಈಗಾಗಲೇ ರಮೇಶ/ಮಿತಾರೊಟ್ಟಿಗೆ ಬೆಸೆದುಕೊಂಡ ಬದುಕು. ತನ್ನ ತಾರುಣ್ಯದಲ್ಲಿ ತನ್ನ ಮುಗ್ಧತೆಯ ಮೇಲೆ ಗೆರೆಗಳು ಗೀರಿದಂತೆ ನಿನ್ನ ಬದುಕಿನಲ್ಲಿ ಹಾಗಾಗಬಾರದು ಎಂದು ಗಂಗಾ ಯಾವಾಗಲೂ ನುಡಿಯುತ್ತಾರೆ. ಗಂಗಾ ತನ್ನನ್ನು ಅಪ್ಪಿಕೊಂಡ ಕ್ಷಣದಲ್ಲಿ ಈ ಲೋಕವನ್ನೇ ಮರೆತಿದ್ದರು ಎಂದು ನೆನಪಾದಾಗ ಮಧುವಿನ ಮನಸ್ಸು ಉಲ್ಲಸಿತವಾಗುತ್ತದೆ. ಗಂಗಾರನ್ನು ತಾನು ಗೆಲ್ಲುತ್ತೇನೆ ಎಂಬ ಆರಂಭದ ಒಳಗಿನ ಆಸೆ ಎಲ್ಲೋ ಮೂಡುತ್ತದೆ. ಗೆಲ್ಲಲೇಬೇಕು ಎಂಬ ಹಟವೂ ಹೃದಯದ ಮೂಲೆಯಲ್ಲಿ ಎಲ್ಲಿಯೋ ಇಣುಕು ಹಾಕುತ್ತದೆ.

ಒಂದು ಸೆಕೆಂಡ್‌ನಲ್ಲಿ ಇಡಿಯ ಲೋಕವನ್ನೇ ಮರೆಸಿದ ಮಧುವಿನ ಅಪ್ಪುಗೆಯ ಮಾದಕತೆಯಲ್ಲಿ - ಗಂಗಾ ವೈಚಾರಿಕವಾಗಿ ನಿರ್ಧರಿಸಿದ್ದು ಈ ಎಲ್ಲದರಿಂದ ಹಿಂತೆಗೆಯಬೇಕೆಂದು. ತನ್ನ ಮನಸ್ಸನ್ನು ತನ್ನ ಕೈಗೇ ತೆಗೆದುಕೊಳ್ಳಬೇಕೆಂದು. ಆದರೆ ಎಲ್ಲವೂ ಗಾಳಿಯಲ್ಲಿ ತೂರಿದಂತೆ ಭಾಸವಾಗತೊಡಗುತ್ತದೆ. ಮಧುವಿಗೆ ತುಟಿಗಳನ್ನು ನೀಡಲು ನಿರಾಕರಿಸಿ, ಮೈಮರೆತ ಮರುಕ್ಷಣ ತನ್ನನ್ನು ಹಿಂದಕ್ಕೆ ಎಳೆದುಕೊಂಡಂತೆ ಮನಸ್ಸನ್ನು ಹಿಂದಕ್ಕೆ ಎಳೆದುಕೊಳ್ಳುತ್ತೇನೆ ಎಂದುಕೊಂಡಿದ್ದ ಗಂಗಾಳ ಮನಸ್ಸು ಕ್ರಮೇಣವಾಗಿ ಕಲುಷಿತಗೊಳ್ಳುತ್ತಾ ಹೋಗುತ್ತದೆ. ಈ ಇಡಿಯ ಸನ್ನಿವೇಶ ಮಧುವಿಗೆ ಆ ಕ್ಷಣಕ್ಕೆ ಸುಂದರವಾಗಿ ಕಂಡರೂ ಕೊನೆಗೆ ಅವನ ಪಾಲಿಗೆ ಅದು ಒಂದು ವಿಷಮಯ ಸನ್ನಿವೇಶವಾಗುತ್ತದೆ ಎಂಬುದನ್ನು ಗಂಗಾ ಮನಗಾಣುತ್ತಾಳೆ. ಗಂಗಾಳ ತುಟಿಯ ಮಾದಕತೆಗೆ ಮಧುವಿಗೆ ತನ್ನ ಜೀವನವನ್ನೇ ಕೊಡಬಲ್ಲೆ ಎಂಬಂತಹ ಹುಚ್ಚು ಅವನಲ್ಲಿ ತಾರಕಕ್ಕೆ ತಲುಪುತ್ತದೆ. ತನ್ನಲ್ಲಿರುವ ದ್ವಂದ್ವಗಳೊಡನೆಯೇ ಮಧುವಿನ ಬಿಗಿದ ತುಟಿಗಳಿಗೆ ತುಟಿ ನೀಡುತ್ತಾ ಹೋದ ಗಂಗಾಳಲ್ಲಿ ಅನೇಕ ಪ್ರಶ್ನೆಗಳು ಮೂಡುತ್ತಾ ಹೋಗುತ್ತವೆ.

ಸುಮಾರು ಒಂದು ವರುಷದ ಕಾಲ ತಾನೂ ಮಧುವನ್ನು ದೂರ ಮಾಡಿಬಿಡಬೇಕು ಎಂದು ಶತಪ್ರಯತ್ನ ಮಾಡಿದ್ದಳು. ಅದು ಗಂಗಾಳಿಗೆ ಮಾತ್ರ ತಿಳಿದಿತ್ತು. ಊರಿಗೆ ಹೋಗಿ ಸುಮಾರು ದಿನ ಇದ್ದು ಬಂದಿದ್ದಳು. ಯಾವಾಗಲೂ ಕೂತು ಏನಾದರೂ ಬರೆಯುವಳು. ಸಂಸಾರದ ಬಂಧನದಲ್ಲಿ ಬರೆಯುವುದನ್ನೇ ನಿಲ್ಲಿಸಿಬಿಟ್ಟಿದ್ದ ಗಂಗಾ ಡೈರಿ ಬರೆಯುವುದರಲ್ಲೋ, ಪದ್ಯ ಬರೆಯುವುದರಲ್ಲೋ ತನ್ನನ್ನು ತೊಡಗಿಸಿಕೊಳ್ಳಲು ಪ್ರಯತ್ನ ಪಡುವಳು. ಗಂಗಾ ಮಧುವಿಗೆ ತುಟಿಗಳನ್ನು ನೀಡಿದವಳೇ ಅಲ್ಲ. ಆದರೆ ಸನ್ನಿವೇಶ ಈಗ ಕೈ ಮೀರಿ ಹೋಗತೊಡಗಿತ್ತು. ಗಂಗಾ ನಿರ್ಮಲತೆ ಬಯಸುತ್ತಿದ್ದ ಮಧುವಿನ ಸಂಬಂಧದಲ್ಲಿ ಕಲುಷಿತಗೊಂಡ ಮನಸ್ಸನ್ನು ಹಿಡಿತಕ್ಕೆ ತೆಗೆದುಕೊಳ್ಳಬೇಕಿತ್ತು. ಅಂತಹ ಕಲುಷಿತ ಭಾವನೆಗಳನ್ನು ಮನಸ್ಸಿನಾಳದಿಂದ

ತೆಗೆದುಹಾಕಬೇಕಿತ್ತು. ಮಧುವಿನ ಸಂಬಂಧವನ್ನು ಒಂದು ಮೌಲ್ಯವಾಗಿ ಹೋರಾಡಿದರೆ ತನಗೆ ಸಿಕ್ಕುವುದೇನು? ಮಧುವಿಗೆ ಸಿಕ್ಕುವುದೇನು? ಹಾಗೆ ನೋಡಿದರೆ ರಮೇಶನೊಟ್ಟಿಗೆ ತಾನು ಕೋಪಗೊಳ್ಳುವ ಅಗತ್ಯವೇ ಇಲ್ಲ. ಮಧುವಿನ ಪ್ರೀತಿಗೆ/ವಿಶ್ವಾಸಕ್ಕೆ ತಾರುಣ್ಯದ ಹುಚ್ಚುತನವಿದೆ. ರಮೇಶನದು ಆ ತಾರುಣ್ಯ ಮೀರಿದ ಗಂಭೀರ, ಶಾಂತ ಪ್ರೀತಿ, ನಿಧಾನವಾಗಿ ಹರಿಯುವ ನೀರಿನ ಹಾಗೆ. ಸಮುದ್ರದ ಹಾಗೆ ಉಕ್ಕುವ ಮಧುವಿನ ಹುಚ್ಚುತನದ ಪ್ರೀತಿಯಲ್ಲ. ಮಧುವಿನ ಸಂಬಂಧದಲ್ಲಿ ಬೆಚ್ಚಗೆ ಕರಗಿದ ಮರುಕ್ಷಣ ತನಗೆ ಕಾಡುವುದು ಖಾಲಿತನವೇ ಎಂಬುದು ಗಂಗಾಗೆ ಗೊತ್ತು. ತಾನು ಬಯಸಿದ್ದ ನಿರ್ಮಲತೆ ಮಧುವಿನ ಸಂಬಂಧದಲ್ಲಿ ಉಳಿಯಲಿಲ್ಲವೆಂಬ ನೋವೂ ಗಂಗಾಳಲ್ಲಿ ಅಧಿಕವಾಗತೊಡಗಿತ್ತು. ಮಧುವನ್ನು ಮನಸ್ಸಿನಿಂದ ಕಿತ್ತೆಸೆಯಬೇಕು. ತಾನು ಮಧುವಿನ ಸಂಬಂಧದಲ್ಲಿ ಬಯಸಿದ್ದಾದರೂ ಏನನ್ನು? ಬದುಕಿನ ಹಿಂದಿನ ಪುಟಗಳನ್ನು ತಿರುವಿ ನೋಡಿದರೆ ಮತ್ತೆ ಮಧುವಿನೊಡನೆ ಸಂಬಂಧದ ಸಂಘರ್ಷ ಬೇಡ ಎನಿಸುತ್ತದೆ. ಬದುಕಿನ ಪುಟಗಳಲ್ಲಿನ ಗಂಡು-ಹೆಣ್ಣಿನ ಸಂಬಂಧದಲ್ಲಿ ತಾನು ಕಂಡದ್ದಾದರೂ ಏನನ್ನು? ಕಾಣಬಯಸಿದ್ದಾದರೂ ಏನನ್ನು? ರಮೇಶನ ವ್ಯಕ್ತಿತ್ವ ಛಿದ್ರ ಛಿದ್ರವಾಗಿ ಹೋಗುತ್ತದೆ. ಇದೆಲ್ಲವನ್ನು ರಮೇಶ ಅರಗಿಸಿಕೊಳ್ಳಬಲ್ಲನೇ? ಮತ್ತೆ ಹೇಗೆ ಮನಸ್ಸನ್ನು ಹಿಡಿತಕ್ಕೆ, ಸ್ಥಿಮಿತಕ್ಕೆ ತೆಗೆದುಕೊಳ್ಳುವುದು ಎಂದು ಗಂಗಾ ಯೋಚಿಸುವಳು. ಯಾರ ಹತ್ತಿರ ಹೇಳಿಕೊಳ್ಳುವುದು? ಸರೂನ ಹತ್ತಿರ ಹೇಳಿದರೆ ಹೇಗೆ? ಸರೂನ ಹತ್ತಿರ ಮಾತನಾಡಿದರೆ ಮನಸ್ಸಿಗೆ ಸಮಾಧಾನವಾಗಬಹುದೇನೋ? ಮನಸ್ಸನ್ನು ಯಥಾ ಪ್ರಕಾರ ಹಿಡಿತಕ್ಕೆ ತರಲು ಸಹಾಯವಾಗಬಹುದು. ರಮೇಶ, ತಾನು ಹಾಗೂ ಮಿತಾರ ನಡುವಿನ ಸಂಬಂಧವನ್ನು ಇಡಿಯಾಗಿಸಿಕೊಳ್ಳಲು ಸಾಧ್ಯವಾಗಬಹುದೇನೋ ಎನಿಸಿದಾಗ ಗಂಗಾ ಒಂದು ದಿನ ಸರೂವನ್ನು ಹುಡುಕಿಕೊಂಡು ಹೋಗುತ್ತಾಳೆ.

ಗಂಗಾ ಸರೂನ ಮನೆಗೆ ಹೋದಾಗ ಸರೂ ತಲೆ ತುಂಬಾ ರಗ್ಗು ಹೊಚ್ಚಿ ಮಲಗಿಬಿಟ್ಟಿದ್ದಳು. ರಗ್ಗು ಮುಖದ ತುಂಬಾ ಹೊದ್ದುಕೊಂಡರೆ ಮುಸುಕಿನೊಳಗೆ ಇಡಿಯ ವಾಸ್ತವದ ಘಟನೆಗಳನ್ನೆಲ್ಲಾ ಮರೆತುಬಿಡಬಹುದೇನೋ ಎಂಬ ರೀತಿಯಲ್ಲಿ ಮಲಗಿಬಿಟ್ಟಿದ್ದಳು. ಬೆಳಕಿನಲ್ಲೂ ಇಡಿಯಾಗಿ ಆವರಿಸುವ ಕತ್ತಲಿನ ಒಳಗೆ ಮೈಯೆಲ್ಲಾ ಬೆಚ್ಚಗೆ ಎನಿಸುವ ಹಾಗೆ ಆಕೆಗೆ ತನ್ನ ಮನಸ್ಸು ಕೂಡಾ ಬೆಚ್ಚಗೆ ಎನಿಸುತ್ತಿತ್ತು.

ಕೆಲವೊಮ್ಮೆ ಆಕೆಯ ಸೋಮಾರಿತನಕ್ಕೆ ಆಕೆಯೇ ಬೇಸರಪಟ್ಟುಕೊಂಡುದುಂಟು. ಕೆಲವು ಸಲ ಕೋರ್ಟು, ಕಛೇರಿ, ಈ ವಾಸ್ತವದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಾಗಲೆಲ್ಲಾ ಸುಮ್ಮನೇ ಅಡಿಗೆ ಮಾಡಿಕೊಂಡೋ, ಬಟ್ಟೆ ಒಗೆದುಕೊಂಡೋ, ಚಟ್ನಿ, ಉಪ್ಪಿನಕಾಯಿ ಎಂದು ಹಾಕಿಕೊಂಡೋ ಕಾಲ ಕಳೆದುಬಿಡುವಳು. ಹೊರಗೆಲ್ಲೂ ಹೋಗುತ್ತಿರಲಿಲ್ಲ. ಎಲ್ಲಿಗೂ ಹೋಗಬೇಕು ಎಂದೂ ಕೂಡಾ ಆಕೆಗೆ ಅನ್ನಿಸುತ್ತಿರಲಿಲ್ಲ. ಬದಲಾಗಿ ಏನೂ ಇಲ್ಲದ ರೀತಿಯಲ್ಲಿ ಹಾಯಾಗಿ ಮಲಗಿಬಿಡಬೇಕು ಎನ್ನಿಸಿಬಿಡುತ್ತಿತ್ತು. ಆ ದಿನವೂ ಕೂಡಾ ಸರೂ ಹಾಗೆಯೇ ತುಂಬಾ ಹೊದೆದು ಮಲಗಿಬಿಟ್ಟಿದ್ದಳು. ಗಂಗಾಗೆ ಸರೂ ಹಾಗೆ ಮಲಗಿರುವುದನ್ನು ಕಂಡಾಗಲೆಲ್ಲಾ ಬೇಸರವಾಗುತ್ತಿತ್ತು. ಇದ್ದಕ್ಕಿದ್ದ ಹಾಗೆ ಸರೂನಲ್ಲಿ ಇದ್ದ ಸ್ಪಿರಿಟ್, ಜೀವಂತಿಕೆ ಎಲ್ಲಾ ಕಳೆದು ಹೋಯಿತು ಎಂಬಂತೆ ಭಾಸವಾಗಿ ಬಹಳ ಬೇಸರವಾಗುತ್ತಿತ್ತು. ಗಂಗಾ ಬೆಲ್ ಬಾರಿಸಿದಾಗ ಸರೂ ಎದ್ದು ಬಂದಿದ್ದಳು. ಗಂಗಾ ಗಾಬರಿಯಾಗಿ ಬಂದಂತಿತ್ತು. ಗಂಗಾ ಪೇಪರ್ ವ್ಯಾಲ್ಯುಯೇಷನ್‌ಗೆ ಎಂದು ಹೋದವಳು ಬಿಡುವಿನಲ್ಲಿ ಸರೂವನ್ನು ಹುಡುಕಿಕೊಂಡು ಬಂದಿದ್ದಳು. ವ್ಯಾಲ್ಯುಯೇಷನ್‌ಗೆ ಹೋಗುವುದಕ್ಕೆ ನಿರ್ಧರಿಸಿದ್ದೂ ಮಧುವಿನ ಕಣ್ಣಿಗೆ ಬೀಳಬಾರದೆಂದೇ. ತಾನು ಮನೆಯಲ್ಲಿದ್ದರೆ ಮಧು ಮನೆಗೆ ಬರುತ್ತಾನೆ. ಆತನನ್ನು ತಪ್ಪಿಸುವುದಕ್ಕಾಗಿಯೇ ಗಂಗಾ ಏನಾದರೊಂದು

ಎಂಗೇಜ್‌ಮೆಂಟ್ ಹುಡುಕಿಕೊಳ್ಳುವಳು. ಈ ಪ್ರೇಮದ/ತುಟಿಯ ಮಾದಕತೆಯ ತೀವ್ರತೆಯ ಉರಿ ಆರಿದಾಗ ಸಿಕ್ಕುವುದು ಶೂನ್ಯ ಎಂಬುದು ಆಕೆಯ ಅರಿವಿಗೆ ಬಂದಿತ್ತು. ಮಧುವಿಗೆ ಇದನ್ನೆಲ್ಲ ಹೇಳಿದರೆ ಅರ್ಥವಾಗುವುದಿಲ್ಲ. ತಾರುಣ್ಯದ ಕನಸುಗಳು ಮೈ ತುಂಬ ತುಂಬಿಕೊಂಡಿರುವಾಗ ಆತನಿಗೆ ಕಾಣಿಸುತ್ತಿದ್ದುದು ಇಡಿಯ ಪ್ರಪಂಚದಲ್ಲಿ ಆತ ಹಾಗೂ ಗಂಗಾ ಮಾತ್ರ. ಗಂಗಾಗೆ ಆ ತೀವ್ರತೆ ನೋಡಿದಾಗಲೆಲ್ಲಾ ಭಯವಾಗುತ್ತಿತ್ತು. ರಮೇಶ/ಮಗು ತನ್ನ ವಲಯದಲ್ಲಿ ಇರುವವರು ಎಂಬುದನ್ನು ಮರೆಸುವ ಹುಚ್ಚುತನವನ್ನು ಮಧು ಪಡೆದುಕೊಂಡಿದ್ದ. ಮಧುವಿನ ಹುಚ್ಚುತನದ ಪ್ರೇಮ/ಕಾಮ ಮನಸ್ಸನ್ನು ಆವರಿಸಿದ್ದರೂ, ಆ ಕ್ಷಣಕ್ಕೆ ಮೈ ಬೆಚ್ಚಗೆ ಅನ್ನಿಸಿದ್ದರೂ - ನಿತ್ಯ ಕೂತುಕೊಂಡು ಆ ತೀವ್ರತೆಯಲ್ಲಿ ತನ್ನೆಲ್ಲಾ ಜೀವನದ ಭಾಗಗಳನ್ನು ಮತ್ತೆ ಮತ್ತೆ ಜ್ಞಾಪಿಸಿಕೊಂಡು ಬರೆಯುತ್ತಾ ಹೋಗುವಾಗಲೂ ಗಂಗಾಗೆ ಹೆದರಿಕೆಯಾಗತೊಡಗಿತ್ತು. ಬರವಣಿಗೆಯ ಪರಿಪೂರ್ಣತೆಯ ಹುಚ್ಚು - ಆ ಪರಿಪೂರ್ಣತೆಯ ಹುಚ್ಚಿನಲ್ಲಿ ಬದುಕನ್ನು ಛಿದ್ರ ಛಿದ್ರ ಮಾಡಿಕೊಳ್ಳುವುದು ತನ್ನ ಹುಚ್ಚುತನವೇ ಎಂದೊಮ್ಮೆ ಒಳಗೆಲ್ಲೋ ಹೆದರಿಕೆಯಾಗತೊಡಗಿತ್ತು. ಮಧುವಿನ ಸಂಬಂಧದಲ್ಲಿ ರಮೇಶನ ಕಳೆದು ಹೋದ ಸೆಲ್ಫ್ ಪಡೆದುಕೊಳ್ಳುವುದು, ತನ್ನ ಮುಗ್ಧತೆಯ ತೀವ್ರತೆ ಪಡೆದುಕೊಳ್ಳುವುದು ಇವೆಲ್ಲಾ ತನ್ನ ಬರವಣಿಗೆಗೆ ಚೈತನ್ಯ ನೀಡಿದವುಗಳು. ಆದರೆ ಬರವಣಿಗೆಯ ತೀವ್ರತೆ ತನ್ನ ಬದುಕಿನ ಛಿದ್ರತೆಯನ್ನೇ ಅಪೇಕ್ಷಿಸುತ್ತದೆ ಎನ್ನಿಸಿದಾಗ ಗಂಗಾಗೆ ಭಯವಾಗುತ್ತದೆ. ಜೀವನದ ಸುಂದರತೆ ಯಾವುದು? ಕಲೆಯ ಸುಂದರತೆ ಯಾವುದು? ಎಂಬ ಪ್ರಶ್ನೆ ಆಕೆಯಲ್ಲಿ ಅಗಾಧವಾಗಿ ಮೂಡುತ್ತಾ ಹೋಗುತ್ತದೆ. ಕಲೆಗಾಗಿ ತನ್ನ ಬದುಕನ್ನು ತಾನು ಮಾರಿಕೊಳ್ಳಲು ಸಿದ್ಧಳಾಗಿದ್ದೇನೆಯೇ ಎಂಬ ಪ್ರಶ್ನೆಯನ್ನು ಆಕೆಯೇ ಕೇಳಿಕೊಳ್ಳುತ್ತಾಳೆ. ಅಲೆಮಾರಿ ಜೀವನದ ತುಮುಲಗಳಿಗೆ/ಸಂಘರ್ಷಗಳಿಗೆ ಮನಸ್ಸು ಸಿಕ್ಕಿ ಹಾಕಿಕೊಂಡಾಗ ಮನಸ್ಸು ಯಾವಾಗಲೂ ತಹತಹಿಕೆಯಿಂದ ಕೂಡಿರುತ್ತಿತ್ತು. ಆದರೆ ಅಲೆಮಾರಿ ಬದುಕಿಗೆ ಮುಖ ತಿರುಗಿಸಿ ಸುಂದರವಾಗಿರುವ ಬದುಕಿನ ಕನಸು ಹೊತ್ತೇ ಗಂಗಾ ರಮೇಶನನ್ನು ಮದುವೆಯಾಗಿ ಜೀವನದಲ್ಲಿ ನೆಲೆ ನಿಲ್ಲಲು ಪ್ರಯತ್ನಿಸಿದ್ದು. ಜೀವನದಲ್ಲಿ ತನಗೇನು ಕೊರತೆಯಾಗಿತ್ತು? ಎಂದು ಗಂಗಾ ಯೋಚಿಸುತ್ತಾಳೆ. ಬಯಸಿದ್ದೆಲ್ಲಾ ಕೈಗೆ ಸಿಕ್ಕಿದುದರ ಕೆಳಗಡೆಯೇ ತಾನು ಸಾಯುತ್ತಿದ್ದೇನೆಂಬ ಭಾವ ಆಕೆಯಲ್ಲಿ ಬಲವಾಗಿ ಮೂಡುತ್ತಿತ್ತು. ಪ್ರೀತಿಸುವ ಗಂಡ, ಮುದ್ದಾದ ಮಗುವಿನ ಹಿಂದೆಯೇ ಅಂಟಿಕೊಂಡಿದ್ದ ಒಂಟಿತನ. ದೆವ್ವ ಹೊಕ್ಕ ಮನೆಯಲ್ಲಿನ ಒಂಟಿತನದ ರೀತಿಯದು. ಬದುಕಿನಲ್ಲಿ ಸುಂದರ ಕನಸುಗಳು, ಆಸೆಗಳ ಹೊತ್ತು ಕಾಲಿಡುತ್ತಿದ್ದ ಮಧು ಚೈತನ್ಯದ ಆಸರೆಯಾಗಿ ಬಂದಿದ್ದ. ಸಂಸಾರದ ಯಾಂತ್ರಿಕತೆಯಲ್ಲಿ ಸುಟ್ಟು ಕರಕಲಾಗತೊಡಗಿದ್ದ ಮನಸ್ಸಿನ ಚೈತನ್ಯಕ್ಕೆ ಆಸರೆಯಾಗಿ ಗಂಗಾಳ ಬಾಳಿನಲ್ಲಿ ಮಧು ಪ್ರವೇಶವಾಗಿದ್ದ. ನಿರ್ಮಲವಾದ ಸಂಬಂಧದಲ್ಲಿ ಚೈತನ್ಯಕ್ಕೆ, ಸತ್ತು ಹೋದ ಮನಸ್ಸಿನ ಭಾವನೆಗಳಿಗೆ, ಬರಹಗಳಿಗೆ ತಡಕಾಡುತ್ತೇನೆ ಎಂದುಕೊಂಡಿದ್ದ ಗಂಗಾಳ ನಂಬಿಕೆಗಳು ಆಕೆಗೇ ಕೈ ಕೊಟ್ಟಿದ್ದವು. ಮಧು ಪ್ರೇಮದ ಮೂರ್ತಿಯಾಗಿ ಗಂಗಾಳಲ್ಲಿ ಪ್ರೇಮವನ್ನು ಅರಸಿದ್ದ. ಹುಚ್ಚು ಪ್ರೇಮವನ್ನು, ಇಡಿಯ ಲೋಕದ ಆಗು-ಹೋಗುಗಳನ್ನು ಆ ಕ್ಷಣಕ್ಕೆ ಮರೆಸುವಂತಹ ಪ್ರೇಮದ ಮಾದಕತೆಯನ್ನು ಗಂಗಾಳ ತುಟಿಗಳಲ್ಲಿ, ಬೆಚ್ಚನೆಯ ಅಪ್ಪುಗೆಯಲ್ಲಿ ಕಂಡಿದ್ದ. ಆ ಹುಚ್ಚು ಈಗ ಅತಿರೇಖದ ಹುಚ್ಚಿಗೆ, ಮಾದಕತೆಗೆ ತಿರುಗಿ ಗಂಗಾಳೇ ಅವನಿಗೆ ಇಡಿಯ ಲೋಕವಾಗಿ ಕಾಣಿಸತೊಡಗಿದ್ದಳು. ಆ ಹುಚ್ಚುತನದಲ್ಲಿ ಅಧಿಕಾರದ ಅಂಶ ಇಣುಕಾಡತೊಡಗಿದಾಗ ಗಂಗಾಗೆ ಭಯವಾಗತೊಡಗಿತ್ತು. ರಮೇಶನ ಜೊತೆಗಿನ ಶಾಂತಮಯ ಜೀವನವನ್ನು ತನ್ನ ಕೈಗೇ ತೆಗೆದುಕೊಳ್ಳಬೇಕೆಂದು ಆಕೆಗೆ ತೀವ್ರವಾಗಿ ಅನ್ನಿಸತೊಡಗಿತ್ತು. ಹಾಗಾಗಿಯೇ ಆಕೆ ಸರೂವನ್ನು ಹುಡುಕಿಕೊಂಡು ಬಂದುದು. ಹೀಗೆ ಹುಚ್ಚು ಪ್ರೇಮದ ಪ್ರಪಂಚದಲ್ಲಿ ಹರಿದು ಹಂಚಿ ಹೋಗುವ ಬದುಕಿಗಿಂತ ಶಾಂತ ಸ್ವಭಾವ,

ಶಾಂತ ಬದುಕಿನ ಲಯುಗಳನ್ನು ಹೊಂದಿದ ರಮೇಶ-ಮಿತಾರೊಟ್ಟಿಗಿನ ಬದುಕೇ ಆಕೆಗೆ ಸುಂದರ ಎನಿಸತೊಡಗಿತ್ತು. ಹೀಗೆಯೇ ಮಧುವಿನ ಜೊತೆ ಸಂಬಂಧ ಮುಂದುವರಿಸುತ್ತಾ ಹೋದರೆ ತಾನು ಛಿದ್ರ ಛಿದ್ರವಾಗಿ ಹೋಗಿಬಿಡುತ್ತೇನೆ ಎನಿಸುವುದರ ಜೊತೆಗೆ, ಬೆಂಗಳೂರಿನ ವಾತಾವರಣದಲ್ಲಿ ಮಧುವನ್ನೂ ಹರಿದು ಹಂಚಿ ಹೋಗುವಂತೆ ಮಾಡುತ್ತೇನೇನೋ ಎಂಬ ಭಯವೂ ಗಂಗಾಳಲ್ಲಿ ಬಲವಾಗಿ ಕಾಡತೊಡಗಿತ್ತು.

ಇದನ್ನೇ ಸರೂಳ ಬಳಿ ಗಂಗಾ ಮುಕ್ತವಾಗಿ ಹಂಚಿಕೊಂಡಿದ್ದಳು. ರಮೇಶನ ಜೊತೆಗೆ ಕಳೆದ ಏಳು ವರುಷಗಳ ಜೀವನದಲ್ಲಿ ತಾನು ಅತ್ತ-ಇತ್ತ ನೋಡಿದವಳಲ್ಲ. ಆತನ ವಿಶ್ವಾಸಕ್ಕೆ ತಾನೆಲ್ಲೋ ಆಘಾತ ಬಗೆಯುತ್ತಿದ್ದೇನೆಂಬ ಪಾಪಪ್ರಜ್ಞೆ ಒಂದು ಕಡೆಯಾದರೆ, ಮಧುವಿನಂತಹ ಮುಗ್ಧ ವ್ಯಕ್ತಿತ್ವವನ್ನು ಪ್ರೇಮದ ಸುಳಿಯ ಹುಚ್ಚಿನಲ್ಲಿ - ಆತನ ಇಡಿ ಇಡಿಯಾಗಿರುವ ಮುಗ್ಧತೆ ರವಿಯ ಸಂಬಂಧದಲ್ಲಿ ತನ್ನ ಮೇಲೆ ಪರಿಣಾಮ ಬೀರಿದಂತೆ ಆತನ ಮೇಲೆ ಪರಿಣಾಮ ಬೀರಿಬಿಡಬಹುದು. ಅದಕ್ಕೆ ತಾನೇ ಕಾರಣಳಾಗುತ್ತೇನೆ ಎಂಬಂತಹ ಪಾಪಪ್ರಜ್ಞೆ. ಇಂತಹ ಹಲವಾರು ಸಂಗತಿಗಳನ್ನು ಗಂಗಾ ಸರೂಳ ಬಳಿ ಹಂಚಿಕೊಳ್ಳ ತೊಡಗಿದ್ದಳು. ಮಾತನಾಡುತ್ತಲೇ ಗಂಗಾಳ ಕಣ್ಣಲ್ಲಿ ನೀರು ಸುರಿಯತೊಡಗಿತ್ತು. ಸಂಸಾರದೊಳಗಿನ ಯಾಂತ್ರಿಕತೆ, ಜೀವನದ ಯಾಂತ್ರಿಕತೆ, ಅನಿವಾರ್ಯವಾಗಿ ಹುಟ್ಟು ಹಾಕಲ್ಪಡುವ ಒಪ್ಪಂದಗಳು - ಇಂತಹವುಗಳಲ್ಲಿ ಮನಸ್ಸಿನ ಎಳೆ ಜೀವಂತಿಕೆ ಹುಡುಕಲು ಏನೇನನ್ನೋ ಹುಡುಕುತ್ತದೆ. ಈ ಯಾಂತ್ರಿಕತೆಯ ಜೀವನದ ಗೊಂದಲಗಳನ್ನೆಲ್ಲ ಒಂದು ಕ್ಷಣ ಪ್ರೇಮದ ಪ್ರವಾಹ ಕೊಚ್ಚಿ ಹಾಕಿಬಿಡುತ್ತದೆ. ಆದರೆ ಅದು ಪ್ರವಾಹ. ಪ್ರವಾಹ ಇಳಿದು ತಣ್ಣಗಾಗುವಾಗ ಸುತ್ತಿ ಹಾಕಿಕೊಳ್ಳುವ ಪ್ರಶ್ನೆಗಳು ಅನೇಕ. ಉತ್ತರಿಸಲಾಗದ ಪ್ರಶ್ನೆಗಳು. ತಾನು ಬೆಂಗಳೂರಿಗೆ ಬಂದಾಗ ತನ್ನ ಅಲೆಮಾರಿ ಜೀವನ ತನಗೆ ಕಲಿಸಿದ್ದಾದರೂ ಏನನ್ನು? ಆದರೂ ಜೀವನದ ಅನೇಕ ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯುವ ಸಂದರ್ಭದಲ್ಲಿ ಏನೇನೋ ಬಗೆಯ ಗೋಜಲುಗಳು. ಜೀವನದಲ್ಲಿ ಜೀರ್ಣಿಸಿಕೊಳ್ಳಲಾಗದುದನ್ನು ಬರವಣಿಗೆಯಲ್ಲಿ ಜೀರ್ಣಿಸಿಕೊಳ್ಳಲು ಪ್ರಯತ್ನಿಸಿದುದುಂಟು. ತನ್ನ ವ್ಯಕ್ತಿತ್ವ ಎಲ್ಲಿಯೋ ಹರಿದು ಹಂಚಿ ಹೋಗುತ್ತದೆ ಎನ್ನಿಸತೊಡಗಿದಾಗ ಸಂಸಾರದ ಬಂಧನಕ್ಕೆ ಸಿಲುಕಿ ಹಾಕಿಕೊಂಡಿದ್ದಳು. ಸಂಸಾರದ ಬಂಧನ, ಯಾಂತ್ರಿಕತೆ ಕೂಡಾ ತನ್ನ ವ್ಯಕ್ತಿತ್ವ ನಶಿಸುತ್ತಿದೆ ಎನಿಸಿದಾಗ ಗಂಗಾಳಲ್ಲಿ ಒಂದು ರೀತಿಯ ದಿಗಿಲು ಪ್ರಾರಂಭವಾಗಿತ್ತು. ಕೂತು ಬರೆಯಲು ಪ್ರಾರಂಭಿಸಿದರೆ ಅಕ್ಷರಗಳು ಹೃದಯದೊಳಗಿಂದ ಮಾಡುತ್ತಲೇ ಇರಲಿಲ್ಲ. ಒಣ ಒಣ ಶಬ್ದಗಳು ಮಾತ್ರ ಪೇಪರ್ ಮೇಲೆ ಮೂಡುತ್ತಿವೆ ಎನ್ನಿಸಿದಾಗ ಬರೆದುದೆಲ್ಲವನ್ನೂ ಹರಿದು ಹಾಕಿಬಿಡುವಳು. ಕೌಟುಂಬಿಕ ಚೌಕಟ್ಟು ತನ್ನೆಲ್ಲಾ ವ್ಯಕ್ತಿತ್ವಕ್ಕೆ ಬರೆ ಹಾಕುತ್ತಿದೆ ಎನಿಸಿದಾಗ ಮಧುವಿನ ಸನಿಹ ಬೆಚ್ಚಗೆ ಎನಿಸಿತ್ತು. ಆತ ಚೈತನ್ಯದ ಚಿಲುಮೆಯಾಗಿ ಕಂಡಿದ್ದ. ತಾನು ಕಳೆದುಕೊಂಡಿದ್ದನ್ನೆಲ್ಲಾ ಮಧುವಿನ ಸನಿಹದಲ್ಲಿ ಪಡೆದುಕೊಳ್ಳುತ್ತಿದ್ದೇನೇನೋ ಎಂದೆನಿಸತೊಡಗಿತ್ತು. ಸತ್ತು ಹೋದ ಬರವಣಿಗೆ ಇದ್ದಕ್ಕಿದ್ದ ಹಾಗೆ ಪುಕ್ಕಗಳ ಕಟ್ಟಿಕೊಂಡು, ಭಾವನೆಗಳ ಹೊತ್ತುಕೊಂಡು ಹೃದಯದಾಳದಿಂದ ಅಕ್ಷರಗಳು ಮೂಡತೊಡಗಿವೆ ಎನಿಸತೊಡಗಿದಾಗ ಪುಲಕಿತಗೊಂಡಿದ್ದಳು. ಆದರೆ ಅದು ಅಲ್ಲಿಗೇ ನಿಲ್ಲಲಿಲ್ಲ. ಗಂಗಾ ಸರೂಳ ಬಳಿ ಈ ದುಗುಡವನ್ನೆಲ್ಲ ಹಂಚಿಕೊಳ್ಳುತ್ತಾ ಹೋದಳು. ಆ ಕ್ಷಣದಲ್ಲಿ ಇಡಿಯ ಮನಸ್ಸಿನ ಚೈತನ್ಯವನ್ನೇ ಬಡಿದೆಬ್ಬಿಸುವ ಈ ಅಲೆ ಎಷ್ಟು ದಿನ ಇರಬಹುದು ಎಂಬುದೂ ತನಗೇ ಅನುಮಾನ ಎನ್ನುತ್ತಾಳೆ.

ಗಂಗಾ ಹೇಳುವ ವಿಚಾರಗಳನ್ನು ಕೇಳುವಾಗ ಒಮ್ಮೆ ಸರೂಗೆ ಥ್ರಿಲ್ ಎನಿಸಿದ ಹಾಗೆ ಅನ್ನಿಸುತ್ತದೆ. ಹೀಗೆ ಸಂಸಾರದ ಚೌಕಟ್ಟಿನೊಳಗೆ ಇದ್ದು ಬದುಕಿನಲ್ಲಿ, ಅದೂ ತನ್ನ ಸುಂದರ ಬದುಕಿನಲ್ಲಿಯೇ ಗಂಗಾ ರಿಸ್ಕ್ ತೆಗೆದುಕೊಳ್ಳುತ್ತಿದ್ದಾಳಲ್ಲಾ ಎನಿಸತೊಡಗಿತ್ತು. ಆಕೆ ನಿಧಾನವಾಗಿ ಮಾತನಾಡತೊಡಗಿದ್ದಳು.

'ಭಾವನೆಗಳಿಗೇನು? ಎಲ್ಲೋ ನಮ್ಮ ಮನಸ್ಸಿನ ಮೂಲೆಯಲ್ಲಿ ಅಡಗಿರುವ ಭಾವನೆಗಳನ್ನು ಕೆದಕಿಕೊಂಡರೆ ಅವುಗಳನ್ನು ಎದುರಿಸುವ ಧೈರ್ಯ ನಮಗೇ ಇರುವುದಿಲ್ಲವೇನೋ? ಆದರೂ ನೀನು ಯೋಚಿಸಬೇಕು ಗಂಗಾ' ಎಂದಳು. "ಎಷ್ಟೋ ಜನರ ನಡುವೆ ಇದ್ದ ನಿನಗೆ ಮುಗ್ಧತೆ ಚೂರಾಗುವ, ಇಡಿಯಾದ ವ್ಯಕ್ತಿತ್ವ ಹುಡಿಯಾಗುವ ಬಗ್ಗೆ ಚೆನ್ನಾಗಿ ಗೊತ್ತು. ಈಗ ನಿನ್ನ ನಡುವೆ ಇರುವ ಇಬ್ಬರೂ ಅಂಥವರೇ. ರಮೇಶ್ ನಿನ್ನ ವ್ಯಕ್ತಿತ್ವದಲ್ಲಿ ಆದರ್ಶವನ್ನೇ ನಂಬಿ ನಿನ್ನ ವ್ಯಕ್ತಿತ್ವದಲ್ಲಿ ಭಾಗವಾಗಿ ಇರಲು ಬಯಸಿಬಂದ ಹುಡುಗ. ನಿನ್ನ-ರಮೇಶನ ಸಂಬಂಧದಲ್ಲಿ ನೀನು ಕಂಡ ಸುಂದರ ಮುಖಗಳೇ ಜಾಸ್ತಿ. ಒಂದು ಸಾಮಾನ್ಯ ಪರಿಸರದಿಂದ ಬಂದು ನಿನ್ನ ಜೊತೆ ಜೊತೆಯಾಗಿ ಬೆಳೆದುಕೊಂಡು ಬಂದ ಸಂಬಂಧ ಅದು. ನಿನ್ನ ಮಧುವಿನ ಸಂಬಂಧದಿಂದಾಗಿ ತನ್ನ ವ್ಯಕ್ತಿತ್ವವೇ ಚೂರಾದಂತೆ ರಮೇಶ ಛಿದ್ರ ಛಿದ್ರವಾಗಿ ಹೋಗುತ್ತಾನೆ. ಮಧು ಕಿರಿಯ ಹುಡುಗ. ನಿನಗಿಂತ ಆರೇಳು ವರ್ಷಕ್ಕೆ ಚಿಕ್ಕವನು. ಆತನಲ್ಲಿ ಇಡಿಯಾಗಿ ತುಂಬಿರುವುದು ಬರಿಯ ಮುಗ್ಧತೆ. ನಿನ್ನ ಬದುಕಿನ ಆಯಾಮಗಳೇನೂ ಆತನಿಗೆ ಕಾಣಿಸದು. ನೀನು, ರಮೇಶ, ಮಿತಾರ ಬದುಕಿನ ಅಗಾಧ ಪ್ರಶ್ನೆಗಳು ಆತನಿಗೆ ಪ್ರಶ್ನೆಗಳಾಗುವುದೇ ಇಲ್ಲ. ನೀನು ಇಡಿಯಾಗಿ ದಕ್ಕಬೇಕು ಎಂಬುದೇ ಆತನ ಪ್ರಶ್ನೆಯಾಗುತ್ತದೆ. ಈ ಇಡಿಯ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಇಡಿಯಾಗಿ ದಕ್ಕದೇ ಹೋಗುವ ಸಂದರ್ಭಗಳೇ ಬಹಳ. ರಮೇಶನ ಜೊತೆಗೆ ಬೆಳೆದು ಬಂದ ನೆನಪುಗಳಿವೆ. ಜೊತೆಗೆ ನಿಮ್ಮಿಬ್ಬರ ನಡುವೆ ಮಗು ಮಿತಾ ಇದ್ದಾಳೆ. ಬರವಣಿಗೆಯಲ್ಲಿ ನೀನು ಬಯಸುವ ಪರಿಪೂರ್ಣತೆ ಬದುಕಿನಲ್ಲಿ ದಕ್ಕಲಾರದು. ಇದೆಲ್ಲ ರಮೇಶನಲ್ಲಿ ಹೇಳಹೋಗಬೇಡ. ನೀನೇನೋ ತಪ್ಪು ಮಾಡಿದೆ ಎಂಬ ಭಾವವೂ ನಿನ್ನಲ್ಲಿ ಬೇಡ. ಏನೂ ನಡೆದಿಲ್ಲ ಎನ್ನುವ ಹಾಗೆ ಸುಮ್ಮನಾಗಿ ಬಿಡು. ಮಧುವನ್ನು ನೀನು ನಿರ್ಲಕ್ಷ್ಯ ಮಾಡುತ್ತಾ ಬಂದರೆ ಅವನೇ ಕ್ರಮೇಣ ಸರಿಹೋಗಿ ಬಿಡುತ್ತಾನೆ. ಸಂಸಾರದೊಳಗಿನ ಪ್ರಶ್ನೆ, ಮಗು, ರಮೇಶನ ವ್ಯಕ್ತಿತ್ವದ ಪ್ರಶ್ನೆಗಳು ಕುರಿತು ಹೇಳಿದರೂ ಆತನಿಗೆ ಅರ್ಥವಾಗದೇ ಹೋಗುವ ಸಂದರ್ಭಗಳೇ ಜಾಸ್ತಿ. ಹಾಗಾಗಿ ಸುಮ್ಮನಾಗಿ ಬಿಡು ಅಷ್ಟೇ. ನನಗೆ ಮಧುವಿನ ವ್ಯಕ್ತಿತ್ವ ಅರ್ಥವಾಗುತ್ತದೆ. ಆ ತರಹೆಯ ಮುಗ್ಧತೆ ಎಂತಹ ರೀತಿಯದೆಂದರೆ ಆ ಹುಚ್ಚು ಪ್ರೇಮದಲ್ಲಿ ಮಹಡಿಯಿಂದ ನೀನು ಹಾರಿಬಿಡು ಎಂದರೆ ಹಾರಿಬಿಡುವಷ್ಟು ತೀವ್ರನಾದದ್ದು. ಗಂಗಾ, ಬರವಣಿಗೆಯಲ್ಲಿ ಪರಿಪೂರ್ಣತೆ ಬಯಸಿ, ಬದುಕನ್ನು ಚೂರು ಚೂರು ಮಾಡಿಕೊಂಡು, ಚೂರು ಚೂರಾದ ಮುಖದಲ್ಲಿ ನಿನ್ನ ಮುಖ ನೋಡಿಕೊಳ್ಳಲು ಸಾಧ್ಯವೇ? ಇವು [illegible]ಗೆನ್ನಿಸುವ ಸಂಗತಿಗಳು. ಕೊನೆಯ ಆಯ್ಕೆ ನಿನ್ನದೇ. ಯೋಚಿಸಿ ನೋಡು. ಮಧುವಿಗೆ ಯೋಚಿಸು ಎಂದು ಹೇಳಬಹುದು. ಆದರೆ ನಿನ್ನ ಹಾಗೆ ಅವನು ಬದುಕ ಕಂಡವನಲ್ಲ. ನೀನೇ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಎಲ್ಲಿಯೂ ದಕ್ಕದವಳಾಗಿ ಹುಡಿ ಹುಡಿಯಾಗಿ ಹೋಗುವ ಬದಲು ನಿನ್ನ ಬದುಕನ್ನು ನೀನೇ ಕೈಗೆ ತೆಗೆದುಕೊಳ್ಳಬೇಕು. ಇದು ಯಾವಾಗಲೂ ನೀನೇ ಹೇಳುವ ಮಾತು. ಹಾಗೆ ಮಾಡದಿದ್ದರೆ ನೀನು ಚೂರು ಚೂರಾಗಿ ಹೋಗುತ್ತೀಯ ಎಂಬುದನ್ನು ಯೋಚಿಸು ಗಂಗಾ".

ಸರೂ ಉದ್ವೇಗದಿಂದಲೇ ಮಾತನಾಡುತ್ತಿದ್ದಳು. ಗಂಗಾಳ ಬದುಕಿನ ಬಗ್ಗೆ ಕಾಳಜಿ ಇಟ್ಟುಕೊಂಡು ಮಾತನಾಡಿದ್ದಳು. ಹೀಗೆ ಗಂಡು-ಹೆಣ್ಣಿನ ಸಂಬಂಧದಲ್ಲಿ ಏನನ್ನೋ ಹುಡುಕುತ್ತೇನೆ ಎನ್ನುವುದು ಏನನ್ನೂ ಕಾಣಿಸದಂತಹ ಶೂನ್ಯವಾಗಿಬಿಡುತ್ತದೆ ಎಂಬುದು ನಿನಗೇ ಗೊತ್ತು ಎನ್ನುತ್ತಾಳೆ. "ನಿನ್ನ ಮಾನಸಿಕ ಒತ್ತಡಗಳು ಈ ಮಟ್ಟಿಗೆ ನನಗೆ ಅರ್ಥವಾಗುತ್ತವೆ. ನಿತ್ಯದ ದೈನಂದಿನ ಜೀವನದಲ್ಲಿ ಕೌಟುಂಬಿಕ ಹೊರೆಗಳು ಜಾಸ್ತಿಯಾಗಿ ನಿನ್ನ ಮೇಲೆ ಬೀಳತೊಡಗಿದಾಗ ನಿನಗೆ ಗೊತ್ತಿಲ್ಲದ ಹಾಗೆ ರಮೇಶನ ಮೇಲೆ ಸಿಟ್ಟು ಬರುತ್ತದೆ. ನಿನ್ನೆಲ್ಲಾ ಯಾಂತ್ರಿಕ ಸ್ಥಿತಿಗೆ ಅವನೇ ಕಾರಣ ಎನಿಸುತ್ತದೆ. ನಿನಗೇನೂ ಮಾಡಲಾಗದೇ ಜೀವಂತ ಶವವಾಗುತ್ತಿದ್ದೇನೆ ಎಂದು ನಿನಗೆ ಅನ್ನಿಸತೊಡಗುತ್ತದೆ. ಆದರೆ ಈ ಜೀವಂತಿಕೆಯನ್ನು

ಮಧುವಿನಲ್ಲಿ ಕಂಡುಕೊಳ್ಳುತ್ತೇನೆ, ಕಂಡುಕೊಳ್ಳುತ್ತಿದ್ದೇನೆ ಎಂಬುದು ನಿನ್ನ ಭ್ರಮೆಯೇ. ಏಕೆಂದರೆ ಕಾಲಗರ್ಭದಲ್ಲಿ ಅದೂ ನೀರಸವೇ. ಈ ಕ್ಷಣಕ್ಕೆ ಕಾಣುವ ಸುಂದರತೆ ಅಲ್ಲಿಯೂ ಚೂರಾಗುತ್ತದೆ. ಬರವಣಿಗೆಯ ಚೈತನ್ಯ ಕಂಡುಕೊಂಡಿದ್ದರೆ ಗುಡ್ ಅಷ್ಟೇ. ಆದರೆ ಬರವಣಿಗೆಗೆಂದೇ ನೀನು ಬದುಕಿನಲ್ಲಿ ರಿಸ್ಕ್ ತೆಗೆದುಕೊಳ್ಳುವುದು ಬೇಡ. ಇದರ ಮೇಲೆ ಗಂಗಾ ನಿನಗನ್ನಿಸಿದ ಹಾಗೆ ಮಾಡು. ಏಕೆಂದರೆ ನಿನ್ನ ಬದುಕಿನ ಬಗ್ಗೆ ನಿನಗೇ ಇರಬಹುದಾದ, ಬರಬಹುದಾದ ವೈಚಾರಿಕ ತೀರ್ಮಾನವನ್ನು ಇನ್ನಾರೂ ಕೊಡಲಾರರು". ಇಷ್ಟೊಂದು ಮಾತಾಡಿದ ಮೇಲೆ ಗಂಗಾಳನ್ನು ಅವಳ ಪಾಡಿಗೇ ಬಿಟ್ಟು ಕಾಫಿ ಮಾಡಿಕೊಟ್ಟಳು. ಏನೂ ಮಾತನಾಡದೇ ಗರಬಡಿದ ಹಾಗೆ ಕುಳಿತ ಗಂಗಾಳನ್ನು ಕುರಿತು 'ಪ್ರವಾಹದಲ್ಲಿ ಕೊಚ್ಚಿ ಹೋದ ಹಾಗೆ ಇದೆ ನಿನ್ನ ಮುಖ' ಎಂದಳು. 'ಒಬ್ಬಳೇ ಕೂತು ಶಾಂತವಾಗಿ ಯೋಚಿಸು' ಎಂದಳು. ಬರವಣಿಗೆಯಲ್ಲಿ ಜೀರ್ಣಿಸಿಕೊಳ್ಳುವ ಶಕ್ತಿಯಿರುವ ನಿನಗೆ ನಾನೆಷ್ಟರ ಮಟ್ಟಿಗೆ ಹೇಳಬಲ್ಲೆ ಎಂದಳು. ಗಂಗಾಳ ಮನಸ್ಸಿಗೆ ಆ ಕ್ಷಣಕ್ಕೆ ನೆಮ್ಮದಿ ಅನ್ನಿಸಿತು. ಕಡ್ಡಿ ಮುರಿದ ಹಾಗೆ ಮಾತನಾಡಿ ಪಾಪದ ಹೊರೆ ಒಬ್ಬರ ಮೇಲೆ ಹೊರಿಸುವ ವ್ಯಕ್ತಿತ್ವ ಸರೂದಲ್ಲ. ಸರೂ ಹೇಳುವ ಮಾತುಗಳಿಂದ ಗಂಗಾಳಲ್ಲಿ ಒಂದು ರೀತಿಯ ಭರವಸೆಯೂ ಮೂಡುತ್ತದೆ. "ನೀನು ತಪ್ಪು ಮಾಡಿರುವೆ ಎಂಬ ಭಾವನೆಯನ್ನು ನೀನು ಇಟ್ಟುಕೊಳ್ಳಲೇಬೇಡ, ಈ ಸನ್ನಿವೇಶವನ್ನು ಇನ್ನಷ್ಟು ಗೊಂದಲ ಮಾಡಿಕೊಂಡರೆ ನೀನು ಬರೆಯುವ, ಗ್ರಹಿಸುವ ಶಕ್ತಿಯನ್ನೂ ಉಳಿಸಿಕೊಳ್ಳಲಾರದೇ ಇಡಿಯ ಬದುಕಿನಲ್ಲಿ ಛಿದ್ರ ಛಿದ್ರವಾಗಿಬಿಡುತ್ತೀಯೆ" ಎಂದು ಸರೂ ಹೇಳಿದ ಮಾತು ಕತೆ-ಬದುಕಿನ ಬಗ್ಗೆ ಗಂಗಾಳನ್ನು ಮತ್ತೆ ಚಿಂತನೆಗೀಡು ಮಾಡುತ್ತದೆ. ಮಧು ಕಲೆಯಲ್ಲಿ ಸೃಜನಾತ್ಮಕತೆಗೆ, ಜೀವಂತಿಕೆಗೆ ಮೂಡಿ ಬಂದವನು. ಅದು ಅಲ್ಲಿಗೇ ನಿಲ್ಲಲಿ. ಕಲೆಯಲ್ಲಿ ಪರಿಪೂರ್ಣತೆ ಸಾಧಿಸಿದ ಹಾಗೆ ಬದುಕಿನಲ್ಲಿ ಸಾಧಿಸುತ್ತೇನೆ ಎಂಬುದು ತನ್ನ ಹುಚ್ಚು ಭ್ರಮೆ ಇರಬಹುದು. ಸಾಧ್ಯವಾಗದ ಮಾತು. ಇಂತಹ ನಿರ್ಧಾರ ಮನಸ್ಸಿನಲ್ಲಿ ಮೂಡತೊಡಗಿದಾಗ ಮಧುವಿನಿಂದ ದೂರವಾಗುವುದೇ ಇದಕ್ಕೆಲ್ಲ ಉತ್ತರವಾದೀತು ಎಂದು ಗಂಗಾ ಬಲವಾಗಿ ಯೋಚಿಸತೊಡಗುತ್ತಾಳೆ. ರಮೇಶ, ತಾನು ಹಾಗೂ ಮಗು ಮಿತಾಳ ನಡುವಿನ integrity ಉಳಿಸಿಕೊಳ್ಳಲು ಸಾಧ್ಯವಾಗಬಹುದು ಎಂದು ಬಲವಾಗಿ ಯೋಚಿಸತೊಡಗಿದಾಗ ಮಧುವನ್ನು ಮನಸ್ಸಿನಿಂದ ಕಿತ್ತೆಸೆಯಲೇಬೇಕು ಎನ್ನುವ ನಿರ್ಧಾರಕ್ಕೆ ಗಂಗಾ ಬರುತ್ತಾಳೆ. ಈ ನಿರ್ಧಾರದಲ್ಲಿ ಗಂಗಾಳ ಮನಸ್ಸಿಗೆ ಒಂದು ರೀತಿಯ ಶಾಂತಿಯ ಅಲೆ ಬೀಸತೊಡಗಿದಾಗ ಸರೂವನ್ನು ಮತ್ತೊಮ್ಮೆ ನೋಡುತ್ತೇನೆ ಎಂದು ಹೇಳಿ ಅಲ್ಲಿಂದ ವ್ಯಾಲ್ಯುಯೇಷನ್ ಕ್ಯಾಂಪ್ ಕಡೆಗೆ ಆಟೋ ಹಿಡಿದು ಹೊರಳುತ್ತಾಳೆ.

* * * * *

ಮಧು ವಾಸ್ತವವನ್ನೇ ಮರೆಯುವಷ್ಟು ತನ್ನ ವ್ಯಕ್ತಿತ್ವದೊಳಗಿನ ವ್ಯಕ್ತಿಯಾಗಬಯಸುತ್ತಾನೆ ಎನ್ನಿಸತೊಡಗಿದಾಗ ಗಂಗಾ ಮರಳಿ ವಾಸ್ತವಕ್ಕೆ ಬರಬೇಕೆಂದುಕೊಳ್ಳುತ್ತಾಳೆ. ಗಂಗಾ ಮಧುವನ್ನು ಭೇಟ್ಟಿ ಮಾಡುವುದನ್ನು ತಪ್ಪಿಸಿದಷ್ಟೂ ಮಧುಗೆ ಆಕೆಯನ್ನು ನೋಡಲೇಬೇಕು, ಮಾತನಾಡಿಸಬೇಕೆಂಬ ಕಾತರಗಳು, ಕಾಳಜಿಗಳು ಹೆಚ್ಚಾಗತೊಡಗುತ್ತವೆ. ಇದನ್ನು ಗಮನಿಸುವಾಗಲೆಲ್ಲಾ ಗಂಗಾಗೆ ಹೆಚ್ಚು ಹೆಚ್ಚಾಗಿ ಭಯವಾಗತೊಡಗುತ್ತದೆ. ಮಗು/ತನ್ನ ಹಾಗೂ ರಮೇಶನ ಸಂಬಂಧವನ್ನು ಬಿಡಿಸಿ ಬಿಡಿಸಿ ಹೇಳಿದರೂ ಆ ವಾಸ್ತವ ಅಂಶ ಅವನ ತಲೆಯೊಳಗೆ ಹೋಗುವುದೇ ಇಲ್ಲ ಎನ್ನಿಸತೊಡಗಿದಾಗ ಗಂಗಾಗೆ ಕೆಲವು ಸಲ ಕೋಪ ಬಂದದ್ದುಂಟು, ಬೇಸರವಾಗಿದ್ದೂ ಕೂಡಾ ಉಂಟು. ಮಧುವಿನ ವ್ಯಕ್ತಿತ್ವದಲ್ಲಿ ಭರವಸೆ ತುಂಬ ಹೋಗಿ ತನ್ನ ವ್ಯಕ್ತಿತ್ವದ ಬಗ್ಗೆಗಿನ ಭರವಸೆಯನ್ನು ತಾನಾಗಿಯೇ ಕಳೆದುಕೊಳ್ಳುತ್ತಿದ್ದೇನೇನೋ ಎಂಬ

ಭಯ ಆಕೆಯಲ್ಲಿ ಆತಂಕವನ್ನು ಉಂಟುಮಾಡತೊಡಗಿತ್ತು. ಗಂಗಾಳಿಗೋಸ್ಕರವೇ ದಿನಗಟ್ಟಲೆ ಕಾಯುತ್ತಾ ಕೂತುಬಿಡುವ ಮಧು ಆಕಸ್ಮಾತ್ ಗಂಗಾ/ರಮೇಶನೊಡನೆ ನಕ್ಕುಕೊಂಡು ಮಾತನಾಡುತ್ತಾ ಹೋದರೆ ಮಂಕಾಗಿಬಿಡುವನು, ಬೇಸರಗೊಂಡು ಅದನ್ನು ವ್ಯಕ್ತಪಡಿಸಿಬಿಡುವನೂ ಕೂಡಾ. ಮಧುವಿನ ಸ್ವಭಾವದಲ್ಲಾಗುವ ಬದಲಾವಣೆಗಳಿಂದಾಗಿ ಗಂಗಾಗೆ ಹೆದರಿಕೆ/ಭಯ ಎರಡೂ ಒಟ್ಟಿಗೆ ಉಂಟಾಗಿಬಿಡುವುವು. ಸರೂ ಹೇಳಿದ ಹಾಗೆ ಈ ಇಡಿಯ ಸನ್ನಿವೇಶದಲ್ಲಿ ತನ್ನ ವ್ಯಕ್ತಿತ್ವ ಹುಡಿ ಹುಡಿಯಾಗಿ ತಾನು ಎಲ್ಲಿಯೂ ದಕ್ಕದವಳಾಗಿಬಿಡುತ್ತೇನೇನೋ ಎಂಬ ಆತಂಕ ಆಕೆಯಲ್ಲಿ ಉಂಟಾಗತೊಡಗುತ್ತದೆ. ಇದ್ದಕ್ಕಿದ್ದ ಹಾಗೆ ಗಂಗಾಗೆ ತಾನು ಯಾರು? ಎನ್ನಿಸತೊಡಗುತ್ತದೆ. ಅಲೆಮಾರಿ ಜೀವನದಲ್ಲಿ ಕಾಡತೊಡಗಿದ್ದ ಅಸ್ತಿತ್ವದ ಆತಂಕ/ಭಯಗಳೆರಡೂ ಆಕೆಯನ್ನು ಬಲವಾಗಿ ಕಾಡತೊಡಗಿದಾಗ ಆಕೆ ಮನಸಿನೊಳಗೇ ಕೊರಗತೊಡಗುತ್ತಾಳೆ.

ಈ ನಡುವೆ ಮಧುವಿನ ನಿರೀಕ್ಷೆಗಳಿಗೆ ನೋವು ಉಂಟುಮಾಡಬಾರದೆಂಬ ಸೂಕ್ಷ್ಮಕ್ಕೆ ಸ್ಪಂದಿಸುತ್ತಾ ಹೋದ ಹಾಗೆಯೇ ಗಂಗಾ ಮನಸಿನೊಳಗೇ ಕಾಡುವ ಪಾಪಪ್ರಜ್ಞೆಯಲ್ಲಿ ರಮೇಶನ ಬಗ್ಗೆ ಹೆಚ್ಚು ಹೆಚ್ಚು ಕಾಳಜಿ ವಹಿಸುತ್ತಾ ಹೋಗುತ್ತಾಳೆ. ರಮೇಶನ ಸ್ವಭಾವದಲ್ಲಿ ಆತನಿಗರಿವಿಲ್ಲದೇ ಆಗುತ್ತಿರುವ ಬದಲಾವಣೆ ಕೂಡಾ ಗಂಗಾಳಲ್ಲಿ ಅಚ್ಚರಿಯನ್ನುಂಟು ಮಾಡುತ್ತದೆ. ಈ ನಡುವೆ ಟೂರ್ ಹೋಗಿ ಬಂದಾಗಲೆಲ್ಲಾ ರಮೇಶ 'ನನಗೆ ಏನೋ ಹೆದರಿಕೆ/ಸಂಕಟ ಆಗತೊಡಗಿದೆ ನೀನು ನನ್ನಿಂದ ದೂರವಾಗಿಬಿಡುತ್ತೀಯ ಎಂಬ ದಿಗಿಲು ನನ್ನಲ್ಲಿ ಪ್ರಾರಂಭವಾಗಿ ಬಿಟ್ಟಿದೆ' ಎನ್ನುತ್ತಾನೆ. 'ಎಷ್ಟೋ ಜನ ನನ್ನ ಹತ್ತಿರದ ಗೆಳೆಯರ ಸಂಬಂಧಗಳು ಮುರಿದುಬೀಳುತ್ತಿವೆ. ಯಾಕೋ ಇದ್ದಕ್ಕಿದ್ದ ಹಾಗೆ ನನ್ನ ಮನಸ್ಸಿಗೂ ಆತಂಕ ಪ್ರಾರಂಭವಾಗಿದೆ' ಎನ್ನುವ ರಮೇಶ್ ನಿತ್ಯ ಕ್ರಮದ ಯಾವುದೋ ನೆಲೆಯಲ್ಲಿ ನಮ್ಮಿಬ್ಬರ ಬದುಕಿನ ಕೊಂಡಿ ತಪ್ಪುತ್ತಿದೆ ಎನ್ನಿಸತೊಡಗಿದೆ. ಎಲ್ಲಿ ಎಂದು ಅರ್ಥವಾಗುವುದಿಲ್ಲ ಎನ್ನುತ್ತಾನೆ. ಮನಃಶಾಂತಿಯೇ ಇಲ್ಲ ಎಂದು ಕೊರಗುವ ರಮೇಶ್ ಏನೋ ದುಗುಡ, ಏನೋ ಆತಂಕ. ಏನೋ ಸಂಕಟ ಎನ್ನುತ್ತಾನೆ. ಅದೂ ವಿಚಿತ್ರ ಸಂಕಟ. ಮಲಗಿರುವಾಗ ಧಗ್ಗನೇ ಎಚ್ಚರವಾಗುತ್ತದೆ. ಎಲ್ಲಿಯೋ ಅನಾಥ ಪ್ರಜ್ಞೆ, ನನ್ನ ತಾಯಿ ನನ್ನನ್ನು ವಾಪಸ್ಸು ಕರೆದ ಹಾಗೆ ಆಗುತ್ತದೆ ಎನ್ನುತ್ತಾನೆ. ಇಂತಹ ದುಗುಡಗಳನ್ನೆಲ್ಲಾ ಹೇಳುತ್ತಾ, ಹೇಳುತ್ತಾ ರಮೇಶ್ ಗಂಗಾಳನ್ನು ಅಪ್ಪಿ ಹಿಡಿಯುತ್ತಾನೆ. 'ಗಂಗಾ, ನಾನು ಅನಾಥ ಆಗುವುದಿಲ್ಲ ಅಲ್ವಾ? ಏನೋ ಅವ್ಯಕ್ತ ಭಯ, ನನ್ನ ಹೃದಯದ ಮೂಲೆಯಲ್ಲಿ ಎಲ್ಲಿಯೋ ಒಂದು ನೋವಿನ ಧ್ವನಿ. ಏನೆಂದು ವ್ಯಕ್ತಪಡಿಸಲಾರೆ, ಸದಾ ಆತಂಕ, ಭಯ. ಆದರ ತಪ್ಪಿದ ಭಯ.' ಹೀಗೇ ಮಾತನಾಡುತ್ತಾ ಹೋದಂತೆ ಗಂಗಾಗೆ ಭಯವಾಗುತ್ತದೆ. ರಮೇಶ ನಿಲ್ಲಿಸದೇ ಮಾತನಾಡುತ್ತಲೇ ಹೋಗುತ್ತಾನೆ. ನಾನು ನನ್ನ ಸಂಸಾರದಲ್ಲಿ ಬ್ಯಾಲೆನ್ಸ್ ಮಾಡುತ್ತಿಲ್ಲವೇನೋ? ನಿನ್ನನ್ನು ಸಂಸಾರದ ಕಪಿಮುಷ್ಟಿಯಲ್ಲಿ ಸಿಲುಕಿಸಿ ಬಹುಶಃ ನಿನ್ನಿಂದ ಎಲ್ಲಾ ಸವಲತ್ತುಗಳನ್ನು ನಾನು ಕಸಿದುಕೊಳ್ಳುತ್ತಿದ್ದೇನೇನೋ ಎನ್ನುವ ಭಯ. ಗಂಗಾ ನನಗನ್ನಿಸುತ್ತದೆ, ನಾನು ಈ ಬಗ್ಗೆ ಕುಳಿತು ಯೋಚಿಸಲೇಬೇಕು ಎಂದು! ಹೀಗೆ ಹಲವಾರು ಬಾರಿ ಏನೂ ಸಂದರ್ಭವಿಲ್ಲದೇ ಮಾತನಾಡುವ ರಮೇಶನನ್ನು ಕಂಡಾಗ ಗಂಗಾಗೆ ಅತೀವ ನೋವಾಗುತ್ತದೆ. ರಮೇಶ ಮಾತನಾಡುವಾಗಲೆಲ್ಲಾ ಹೃದಯದೊಳಗಿನ ಅವ್ಯಕ್ತ ನೆಲೆಯೊಂದರಿಂದ ಮಾತನಾಡುತ್ತಾನೇನೋ ಎಂಬಂತೆ ಆಕೆಗೆ ಗೋಚರವಾಗುತ್ತದೆ. ತನ್ನ/ಮಧುವಿನ ಮಧ್ಯದ ವ್ಯಾಮೋಹ, ತನ್ನ ಮನಸ್ಸಿನಲ್ಲಿ ನಡೆಯುವ ಗೊಂದಲ ಎಲ್ಲವೂ ಅವ್ಯಕ್ತವಾಗಿ ಆತನಿಗೆ ಅರ್ಥವಾಗತೊಡಗಿವೆಯೇನೋ ಎಂದು ಗಂಗಾಗೆ ಅನ್ನಿಸುತ್ತದೆ. ಏನೂ ಗೊತ್ತಿಲ್ಲದೇ ನನಗೆ ಅವ್ಯಕ್ತವಾಗಿ ಹೀಗೆನ್ನಿಸುತ್ತದೆ, ಹಾಗೆನ್ನಿಸುತ್ತದೆ ಎಂದು ಒದ್ದಾಡುವ ರಮೇಶನನ್ನು ಕಂಡಾಗ ಗಂಗಾ ಪಾಪಪ್ರಜ್ಞೆಯಿಂದ, ಸಂಕಟದಿಂದ ನರಳತೊಡಗುತ್ತಾಳೆ.

ಇಂತಹದೇ ಒಂದು ದಿನ. ರಮೇಶ ಅವೇ ಮಾತುಗಳನ್ನೇ ಆಡುತ್ತಾನೆ. ಅವ್ಯಕ್ತವಾಗಿ ಹೃದಯದ ನೆಲೆಯಲ್ಲೊಂದು ನೋವಿನ ಗೆರೆ. ಕೆಲಸ ಮಾಡಲಿಕ್ಕೆ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಾಗದಂತಹ ನೋವಿನ ನೆಲೆಯದು ಎಂದು ರಮೇಶ ಮಾತನಾಡುವಾಗ, ಸಂಕಟ ಪಡುವಾಗ ಗಂಗಾ ತನ್ನ ಮನಸ್ಸಿನಲ್ಲಿ ಆಗುವುದನ್ನು, ತಾನು, ಮಧು ಒಂದು ಕ್ಷಣ ಲೋಕ ಮರೆತು ಅಪ್ಪಿಕೊಂಡುದನ್ನು ಹೇಳಿಬಿಡಬೇಕೆಂದು ನಿರ್ಧರಿಸಿಬಿಡುತ್ತಾಳೆ. ಏನನ್ನೂ ಕಾಣದೇ, ಏನನ್ನೂ ನೋಡದೇ ಯಾವುದೋ ಅವ್ಯಕ್ತ ನೆಲೆಯಲ್ಲಿ ಹೀಗೆ ಸಂಕಟಪಡುವ ರಮೇಶನ ಒದ್ದಾಟಕ್ಕೂ ಒಂದು ಮುಕ್ತಾಯ ಹಾಡಿಬಿಡಬೇಕು ಎನಿಸುತ್ತದೆ ಆಕೆಗೆ. ಏನಾದರಾಗಲೀ ತನ್ನ ಮನಸ್ಸಿನ ಗೊಂದಲಗಳನ್ನು ರಮೇಶನಲ್ಲಿ ಹಂಚಿಕೊಂಡರೆ ಅವನಿಗೂ ಹಾಗೂ ತನಗೂ ಇರುವ ಮಧ್ಯದ ಅಂತರವನ್ನೂ ಕಡಿಮೆಗೊಳಿಸಬಹುದೇನೋ ಎಂಬ ಭಾವನೆಯಿಂದ 'ನಾನೊಂದು ವಿಚಾರ ನಿನಗೆ ಹೇಳುತ್ತೇನೆ ರಮೇಶ್' ಎಂದು ಪ್ರಾರಂಭಿಸುತ್ತಾಳೆ. ಗಂಗಾ ಹೇಳುವುದನ್ನು ಸಂಕ್ಷಿಪ್ತವಾಗಿಯೇ ಹೇಳಬೇಕೆಂದುಕೊಂಡರೂ ರಮೇಶನಿಗೆ ನೋವಾಗಬಾರದೆಂದು ಎಣಿಸಿ ಎಲ್ಲವನ್ನೂ ಬಿಡಿಸಿ, ಬಿಡಿಸಿ ಹೇಳಲು ಪ್ರಾರಂಭಿಸುತ್ತಾಳೆ. ಸರೂ ಹತ್ತಿರ ಹೇಳಿದ ದ್ವಂದ್ವಗಳನ್ನೂ ರಮೇಶನಲ್ಲಿ ಹೇಳುತ್ತಾಳೆ. ತಾನು ಈ ಸಂಸಾರದ ಗೊಂದಲದಲ್ಲಿ ಸುಟ್ಟು ಬೂದಿಯಾಗುತ್ತಿದ್ದೇನೆ ಎನಿಸಿದಾಗಲೆಲ್ಲಾ ತನ್ನ ಬರವಣಿಗೆಯ ಚೈತನ್ಯ ಕಳೆದುಕೊಳ್ಳುತ್ತಿದ್ದೇನೆಂಬ ಭಯ ತನಗೆ ಆವರಿಸಿಕೊಂಡುಬಿಟ್ಟಿದೆ ಎನ್ನುತ್ತಾಳೆ. ಇಷ್ಟು ವರ್ಷದ ಸಂಸಾರದಲ್ಲಿ ಒಮ್ಮೆಯೂ ಅತ್ತಿತ್ತ ಚಲಿಸದ ಮನಸ್ಸು, ಒಮ್ಮೆಯೂ ಅಸ್ಥಿರವಾಗದಿದ್ದ ಮನಸ್ಸು ಮಧುವಿನ ಸನಿಹದಲ್ಲಿ ಅಸ್ಥಿರವಾದದ್ದು ಏಕೆ ಎಂದು ತನಗೇ ಅರ್ಥವಾಗುವುದಿಲ್ಲ ಎಂದು ನುಡಿಯುತ್ತಾಳೆ. ರಮೇಶನ ವರ್ತನೆ ಗಂಗಾಗೆ ಒಂದು ಕ್ಷಣ ಶಾಕ್ ಎನಿಸುತ್ತದೆ. ಏನೂ ಮಾತನಾಡದೇ ಗಂಗಾ ಹೇಳುವುದನ್ನೆಲ್ಲಾ ಕೇಳಿಸಿಕೊಂಡ ರಮೇಶ ನನಗೆ ಹೀಗೇ ಅನ್ನಿಸಿದ ಅವ್ಯಕ್ತ ಭಾವನೆ, ಅದು ಸುಳ್ಳಲ್ಲ ಎನ್ನುತ್ತಾನೆ.

ನನ್ನ ಮನಸ್ಸಿನ ಮೂಲೆಯಲ್ಲಿ ಎಲ್ಲಿಯೋ ನನಗೆ ಇಂತಹದೇ ಒಂದು ಭಾವನೆ - ಆಗಾಗ ಕಾಡಿ ತನ್ನನ್ನು ಅಸ್ಥಿರನನ್ನಾಗಿಸುತ್ತಿತ್ತು ಎಂದು ರಮೇಶ ನುಡಿಯುತ್ತಾನೆ. ತನಗೆ ಹೃದಯದಾಳದಲ್ಲಿ ಅನ್ನಿಸಿದ್ದೆಲ್ಲವೂ ವಾಸ್ತವದಲ್ಲಿ ನಿಜವಾದದ್ದು ಎಂದು ರಮೇಶ್ ಬಿಕ್ಕಿ ಬಿಕ್ಕಿ ಅಳತೊಡಗಿದಾಗ ಗಂಗಾಳಿಗೆ ಕಕ್ಕಾವಿಕ್ಕಿಯಾಗುತ್ತದೆ. ಗಂಗಾ ಇದನ್ನು ನಿರೀಕ್ಷಿಸಿರಲಿಲ್ಲ. ಏನೆಂದರೆ ಕೊನೆಗೆ ರಮೇಶ ಬಯ್ಯಬಹುದು, ಕೋಪ ಮಾಡಿಕೊಂಡು ಅಷ್ಟು ದೂರ ಹೋಗಿಬಿಡಬಹುದು ಎಂದು ನಿರೀಕ್ಷಿಸಿದ್ದಳು. ಆದರೆ ಹಾಗಾಗಲಿಲ್ಲ. ರಮೇಶ ಬಯ್ಯುವುದಕ್ಕಿಂತ ಹೆಚ್ಚಾಗಿ ತಾನು ಬಿಟ್ಟು ಬಂದ ತಂದೆ-ತಾಯಿಯ ಬಗ್ಗೆ ಮಾತನಾಡತೊಡಗಿದ್ದ. ತಾನೇನನ್ನು ಬಯಸಿ ಗಂಗಾಳಿಗೋಸ್ಕರ ಎಲ್ಲವನ್ನೂ ಬಿಟ್ಟು ಬಂದೆ ಎಂದು ಜೋರಾಗಿ ಮತ್ತೆ ಅಳತೊಡಗಿದ್ದ. 'ನೀನೇನು ಪ್ರತಿಫಲ ಕೊಟ್ಟೆ ನನಗೆ' ಎಂದು ಹೇಳುತ್ತಾ ಅಳು ಅಳುತ್ತಲೇ ರಮೇಶ ತಮ್ಮಿಬ್ಬರ ನಡುವಿನ ಬಿರುಕಿಗೆ ಕಾರಣಗಳನ್ನು ಹುಡುಕತೊಡಗಿದ್ದ. ತಾನು ಸಂಸಾರದ ಬಗ್ಗೆ ಗಮನ ಕೊಡದುದರಿಂದ, ಎಲ್ಲಿಯೋ ತನ್ನ ಕೆಲಸ ಹಾಗೂ ಸಂಸಾರದ ನಡುವಿನ ಬ್ಯಾಲೆನ್ಸ್ ಕಾಪಾಡಿಕೊಳ್ಳುವಲ್ಲಿ ತಾನು ಸೋತು ಹೋದೆನೇನೋ, ಹಾಗಾಗಿಯೇ ಈ ಸಮಸ್ಯೆ ಉಂಟಾಯಿತೇನೋ ಎಂದು ರಮೇಶ ದೀರ್ಘವಾಗಿ ಯೋಚಿಸತೊಡಗಿದ್ದ. ಅಥವಾ ಹೀಗೆಯೇ ತನ್ನ ತಿರುಗಾಟ ಹಾಗೂ ಕೆಲಸದ ಭರಾಟೆಯಲ್ಲಿ ಗಂಗಾಳ ದೇಹದ ಬಯಕೆಗಳಿಗಾಗಲೀ ಅಥವಾ ಸಂಸಾರದ ಜವಾಬ್ದಾರಿಯಲ್ಲಿ ಆಕೆಯ ಒಳಗೇ ಬಲವಾಗಿ ಮೂಡಿಬರುತ್ತಿದ್ದ ಒಂಟಿತನಕ್ಕಾಗಲೀ ತಾನು ಅಷ್ಟು ಪ್ರಾಮುಖ್ಯತೆ ನೀಡಲಿಲ್ಲವೇನೋ ಎಂಬ ತನ್ನೊಳಗಿನ ಅಳುಕನ್ನೂ ರಮೇಶ ಗಂಗಾಳಲ್ಲಿ ಹೇಳಿಕೊಂಡಿದ್ದ. ಈ ಸಂಸಾರದ ಭಾರದ ಹೊರೆಯಲ್ಲಿ ಯಾಂತ್ರಿಕತೆಯಿಂದ ತಪ್ಪಿಸಿಕೊಳ್ಳುವುದಕ್ಕೆ ನಿನ್ನ ಮನಸ್ಸು ಹೀಗಾಯಿತೆ? ಅಥವಾ ಬರೆಯುವವರಿಗೆ/ಲೇಖಕಿಯರಿಗೆ ಈ ರೀತಿಯ

ಸಂಬಂಧಗಳು ಅನಿವಾರ್ಯವೇ? ಹೀಗೇ ಏನೇನೋ ವಿಚಾರಗಳನ್ನು ರಮೇಶ ಗಂಗಾಳಲ್ಲಿ ಸುದೀರ್ಘವಾಗಿ ಮಾತನಾಡತೊಡಗಿದ್ದ. ಮಿತ ಮಲಗಿ ಆಗಲೇ ಸುಮಾರು ಹೊತ್ತು ಆಗಿತ್ತು. ಆಕೆಯೊಳಗೇ ನಡೆಯುತ್ತಿದ್ದ ಗೊಂದಲದಲ್ಲಿ ಗಂಗಾಳಿಗೆ ಮೈ ಮನಸ್ಸು ಭಾರವೆನಿಸಿ ದುಃಖ ಉಕ್ಕಿ ಉಕ್ಕಿ ಬರತೊಡಗಿತ್ತು. ಸುಮ್ಮನೇ ರಮೇಶನನ್ನೇ ದಿಟ್ಟಿಸಿ ನೋಡುತ್ತಾ ಕುಳಿತಿದ್ದಳು. ರಮೇಶ ಗಂಗಾಳ ಮನಸ್ಸಿನ ಅಸ್ಥಿರತೆಗೆ ಕಾರಣ ಹುಡುಕುತ್ತಲೇ ಅಳುತ್ತಲೇ ಇದ್ದ. "ಗಂಗಾ ನಿನ್ನನ್ನು ಬೀದಿ ಭಿಕಾರಿ ಮಾಡಿಬಿಡುತ್ತಾಳೆ" ಎಂದು ತಂದೆ-ತಾಯಿ ಹೇಳಿದ ಮಾತನ್ನು ನೆನಪಿಸಿಕೊಳ್ಳತೊಡಗಿದ್ದ. "ಗಂಗಾ ನೀನು ಮಧುವನ್ನು ಮುದ್ದಿಸಿದೆ ಎಂಬುದು ಪ್ರಶ್ನೆಯಲ್ಲ, ನಿಮ್ಮಿಬ್ಬರ ದೈಹಿಕ ಸಂಬಂಧದ ಪ್ರಶ್ನೆಯೂ ಅಲ್ಲ. ಆದರೆ ನನ್ನೊಳಗೇ ಇಂಟೆಗ್ರೇಟ್ ಆಗಿದ್ದ ವ್ಯಕ್ತಿತ್ವವೊಂದು ನನ್ನಿಂದ ಮಾನಸಿಕವಾಗಿ, ದೈಹಿಕವಾಗಿ ದೂರವಾಗುತ್ತಿದೆ ಎಂಬುದೇ ನನ್ನ ಪ್ರಶ್ನೆ. ಈ ರೀತಿಯ ಅನುಮಾನಗಳು, ನೋವುಗಳು ಸುಮಾರು ದಿನಗಳಿಂದ ಅವ್ಯಕ್ತವಾಗಿ ನನ್ನನ್ನು ಕಾಡತೊಡಗಿದ್ದವು, ಘಾಸಿಗೊಳಿಸತೊಡಗಿದ್ದವು. ಟೂರ್ ಮೇಲೆ ಹೋದಾಗಲೆಲ್ಲಾ ಮಲಗಿರುವಾಗ ಇದ್ದಕ್ಕಿದ್ದಂತೆಯೇ ಎಚ್ಚರವಾಗಿ ನನ್ನ ಪಾಡಿಗೆ ನಾನೇ ಕೂತು ಅತ್ತಿದ್ದೇನೆ."

ರಮೇಶ ಹೀಗೆಯೇ ಎಷ್ಟೋ ಹೊತ್ತಿನ ತನಕ ಮಾತನಾಡುತ್ತಿದ್ದನೋ? ಕೆಲವು ಬಾರಿ ಎಚ್ಚರ, ನಿದ್ರೆ, ಅರೆ ನಿದ್ರೆಯಲ್ಲಿರುವವರ ತರಹ ಮಾತನಾಡತೊಡಗಿದ್ದ. ಹಾಲೆಂಡಿನಲ್ಲಿ ತಮ್ಮೀರ್ವರ ಪರಿಚಯದ ದಿನಗಳನ್ನು ನೆನಪಿಸಿಕೊಳ್ಳತೊಡಗಿದ್ದ. ಕೆಲಸ ಹಾಗೂ ಸಂಸಾರದ ನಡುವೆ ಬ್ಯಾಲೆನ್ಸ್ ಸಾಧಿಸಲು ಕೊನೆಗೂ ತನಗೆ ಸಾಧ್ಯವೇ ಆಗಲಿಲ್ಲವಲ್ಲ ಎಂದು ಪರಿತಪಿಸತೊಡಗಿದ್ದ. ರಮೇಶ ಹೇಳುವುದನ್ನೆಲ್ಲಾ ಮೂಕವಾಗಿ ಕೇಳಿಸಿಕೊಳ್ಳುತ್ತಿದ್ದ ಗಂಗಾ ನಿಧಾನವಾಗಿ ರಮೇಶನ ಕೈಗಳನ್ನು ತನ್ನ ಕೈಯಲ್ಲಿ ಹಿಡಿದು ಮಾತನಾಡತೊಡಗಿದ್ದಳು. ಮಧುವಿನ ಸಂಬಂಧ ಒಂದು ಕ್ಷಣ, ಘಳಿಗೆ ತನಗೆ ಚೈತನ್ಯದ ಚಿಲುಮೆಯಾಗಿ ಕಂಡಿರಬಹುದು ಅಷ್ಟೇ. ಆದರೆ ಅದರಿಂದ ತಾನು ಕೊಚ್ಚಿ ಹೋಗಲಾರೆ. ಮತ್ತೆ ಮಗು/ರಮೇಶ ಹಾಗೂ ತನ್ನ ನಡುವೆ ಸುಂದರತೆಯ ಎಳೆಯನ್ನು ಕಡಿದುಹಾಕುವ ಶಕ್ತಿ, ಸಾಧ್ಯತೆಯನ್ನು ಮಧುವಿನ ಸಂಬಂಧ ಖಂಡಿತಾ ಹೊಂದಿಲ್ಲ ಎಂಬುದನ್ನು ಗಂಗಾ ಎಷ್ಟು ಬಾರಿ ಹೇಳಿದರೂ ರಮೇಶನಿಗೆ ಸಮಾಧಾನವೇ ಆಗಲಾರದು. ವ್ಯಕ್ತಿತ್ವದ ಇಂಟೆಗ್ರಿಟಿ, ಜೀವನದ ಸೌಂದರ್ಯ ಚೂರು ಚೂರಾಗಿದೆಯೆಂದೇ ರಮೇಶ ಮತ್ತೆ ಮತ್ತೆ ಮಾತನಾಡತೊಡಗಿದ್ದ. ಹಿಮಾಲಯ ಪರ್ವತದಲ್ಲಿ ಕುಳಿತರೂ ಮನಸ್ಸಿನೊಳಗೆ ಬೆಚ್ಚಗಿನ ಭಾವನೆ ಮೂಡಿಸುತ್ತಿದ್ದ ಗಂಗಾಳ ಮನಸ್ಸು ಇಂದು ಇನ್ನೊಬ್ಬರ ಪಾಲಾಗಿದೆ ಎಂಬುದೇ ರಮೇಶನ ಮುಂದಿದ್ದ ಪ್ರಶ್ನೆಯಾಗಿತ್ತು. ತಾನು ತನ್ನ ಮನಸ್ಸಿಗೆ ಸಮಾಧಾನ ಹೇಳುವ, ಅಥವಾ ಹಿಡಿತದಲ್ಲಿ ಇಟ್ಟುಕೊಳ್ಳುವ ಶಕ್ತಿ ಹೊಂದಿದ್ದೇನೆಯೇ ಎಂಬುದನ್ನು ತನ್ನೊಳಗೇ ತಾನೇ ಹೋರಾಡಿ ನೋಡಬೇಕಾಗಿದೆಯೇನೋ? ಹೋದಲ್ಲಿ/ಬಂದಲ್ಲಿ ತಾನು ಮತ್ತೆ ಗಂಗಾಳನ್ನು ಎಂದಿಗೂ ಎದೆಯಲ್ಲಿ ತುಂಬಿಕೊಂಡಿರಲಿಕ್ಕೆ ಸಾಧ್ಯವಾಗುತ್ತದೆಯೇ? ತಾನು ಗಂಗಾಳ ಜೊತೆ ಬದುಕಲು ನಿರ್ಧರಿಸುವಾಗಲೇ ಗಂಗಾಳ ಬದುಕಿಗೆ ಒಂದು ಚರಿತ್ರೆ ಇತ್ತು. ಹಲವು ಸಂಬಂಧಗಳಲ್ಲಿ ಪ್ರೇಮವನ್ನೋ, ಕಾಮವನ್ನೋ, ವ್ಯಕ್ತಿತ್ವದ ಹರವುಗಳನ್ನೋ, ಸೃಜನಶೀಲತೆಯ ನೋವುಗಳನ್ನೋ ಹುಡುಕಿದ ಹುಡುಗಿ ಗಂಗಾ ಎಂದು ಆತನಿಗೆ ತಿಳಿದಿತ್ತು. ಆದರೆ ಗಂಗಾ ಆಗ ತನ್ನಲ್ಲಿಲ್ಲದ ಗಂಡುತನದ ಪ್ರತೀಕವಾಗಿ ಕಂಡಿದ್ದಳು. ಆತನ ಆರಾಧನೆಯ ಮೂರ್ತಿಯಾಗಿದ್ದಳು. ಹೀಗೆ ಸಂಬಂಧಗಳ ಹುಡುಕಾಟದಲ್ಲಿ ಆಕೆಗಿದ್ದ ತೀವ್ರತೆಯ ಎಳೆಯೇ ರಮೇಶನಿಗೆ ದೊಡ್ಡ ಆಕರ್ಷಣೆಯಾಗಿತ್ತು. ಅನೇಕ ಸಂಬಂಧಗಳಲ್ಲಿ ಏನನ್ನೋ ಕಾಣಲು ಬಯಸಿದ್ದ ಗಂಗಾ, ಬೌದ್ಧಿಕವಾಗಿ ತನಗಿಂತ ಎತ್ತರದಲ್ಲಿದ್ದ ಗಂಗಾ ತನ್ನ ಜೊತೆ ಬಾಳಲು ತೀರ್ಮಾನಿಸುದುದೇ ಆತನ

ವ್ಯಕ್ತಿತ್ವಕ್ಕೊಂದು ಹಿರಿಮೆ ಎನ್ನಿಸತೊಡಗಿತ್ತು. ಗಂಗಾ ಆಕೆಯ ಅಲೆಮಾರಿ ಜೀವನಕ್ಕೊಂದು ಮುಕ್ತಾಯ ಹಾಡುವ ಆಸೆ ತೋರಿದ್ದಳು. ನಿನ್ನಂತಹ ಮುಗ್ಧ, ಸಾಮಾನ್ಯ ಬದುಕಿನೊಡನೆ ತನ್ನನ್ನೇ ಬಂಧಿಸಿಕೊಂಡು ಬದುಕಿಬಿಡುತ್ತೇನೆ ಎಂದು ನಂಬಿದ್ದಳು. ಏಳು ವರ್ಷದ ಸಂಸಾರದಲ್ಲಿ ಗಂಗಾ ಎಂದಾದರೂ ತನ್ನಿಂದ ಬೇರೆಯಾದ ವ್ಯಕ್ತಿ, ಜೀವ ಎಂದು ತನಗನ್ನಿಸಿದ್ದುಂಟೇ?

ಗಂಗಾ ಮಾತನಾಡುತ್ತಲೇ ಇದ್ದಳು. ಮಧುವಿನ ಸಂಬಂಧದಲ್ಲಿ ತಾನು ಹುಡುಕಿದ್ದು ಕಾಮವನ್ನಲ್ಲ. ಜೀವಂತಿಕೆ. ನಿತ್ಯ ಜೀವನದಲ್ಲಿ ಮಾಸಿ ಹೋಗಿದ್ದ ಜೀವಂತಿಕೆ, ಬರೆಯಲಾಗದೇ ಜೀವಂತ ಶವವಾಗಿದ್ದ ತನಗೆ ಬೇಕಿದ್ದ ಹೃದಯದ ಜೀವಂತಿಕೆ. ತಾನು ಕಾಣ ಬಯಸಿದ್ದು ಕಳೆದು ಹೋಗಿದ್ದ ತನ್ನ ಸೆಲ್ಫ್ ಹಾಗೂ ಕಳೆದು ಹೋಗುತ್ತಿದ್ದ ರಮೇಶನ ಸೆಲ್ಫ್‌ನ್ನು. ಇದೆಲ್ಲ ತಾನು ಪಡೆದುಕೊಳ್ಳಲು ಬಯಸಿದ್ದು ಮಧುವಿನಲ್ಲಿ ಇರಬಹುದು! ಆದರೆ ಅದೂ ಕೂಡಾ ಮರೀಚಿಕೆ. ಭ್ರಮೆಯೇ ಇರಬಹುದು, ರಮೇಶ್ ಶಾಂತವಾಗಿದ್ದ, ಸುಂದರವಾಗಿದ್ದ ತಮ್ಮಿಬ್ಬರ ಬದುಕಿನ, ವ್ಯಕ್ತಿತ್ವದ ಸುಂದರತೆ ಕಾಪಾಡಿಕೊಳ್ಳಲೋಸ್ಕರವೇ ನಿನ್ನ ಜೊತೆ ಮನ ಬಿಚ್ಚಿ ಮಾತನಾಡುತ್ತಿದ್ದೇನೆ. ಮಧುವಿನಿಂದ ದೂರವಾಗಬೇಕು, ಮಾನಸಿಕವಾಗಿ ಆ ಬಗ್ಗೆ ಗಟ್ಟಿಯಾಗಬೇಕು ಎನ್ನುವ ಪ್ರಯತ್ನದಲ್ಲಿಯೇ ತನ್ನೆಲ್ಲ ಒಳಗುಗಳನ್ನು, ದ್ವಂದ್ವಗಳನ್ನು ಆತನಲ್ಲಿ ಹೇಳಿಕೊಳ್ಳತೊಡಗಿದ್ದೇನೆ ಎಂದಳು. ರಮೇಶನಿಗೆ ದುಃಖದ ನಡುವೆ, ಭಯದ ನಡುವೆ, ತಾನೆಲ್ಲಿಯೋ - ಯಾರ ನಡುವೆಯೋ ಕಳೆದು ಹೋಗುತ್ತಿದ್ದೇನೆ ಎನ್ನುವುದರ ನಡುವೆಯೇ ಸಂಬಂಧಗಳ ಸಂದರ್ಭದಲ್ಲಿ ತಾನು ಅರಿಯದಿದ್ದುದು, ತನಗೆ ಮೀರಿದ ನಿಗೂಢಗಳು ಇನ್ನೇನೋ ಇವೆಯೇನೋ ಎನ್ನಿಸತೊಡಗಿತ್ತು. ತನ್ನ ಅಳುವಿನಿಂದ, ಸಣ್ಣ ಮಾತುಗಳಿಂದ ಗಂಗಾಳನ್ನು ನೋಯಿಸುವುದರಿಂದ - ಆಕೆಯನ್ನು ಪಡೆದುಕೊಳ್ಳುವುದಕ್ಕಿಂತ ತಾನು ಕಳೆದುಕೊಳ್ಳುವುದೇ ಜಾಸ್ತಿಯೇನೋ ಎಂದು ಅನ್ನಿಸತೊಡಗಿತ್ತು. ಗಂಡ, ಮಗು, ಮನೆ ಇಂತಹ ಲೌಕಿಕ ಸುಖಗಳಲ್ಲಿಯಷ್ಟೇ ತೃಪ್ತಿ ಪಡೆಯುವ ಹೆಣ್ಣು ಗಂಗಾ ಅಲ್ಲವೇನೋ? ಆಕೆಯ ಮನಸ್ಸಿಗೆ ಬರವಣಿಗೆಯ ಮುದ ಬೇಕು, ಮುದಕ್ಕಾಗಿ ಇರುವ ಮುದ ಅಲ್ಲ ಅದು. ಸುಖಗಳ ಒಳಗೇ ಏನೋ ಸತ್ಯಗಳ, ಮನುಷ್ಯ ಜೀವನದ ಸತ್ಯಗಳ ಅನ್ವೇಷಣೆಗೆ ತೊಡಗುತ್ತಾಳೆ. ಆಕೆಯ ಮನಸ್ಸಿನ ಸತ್ಯದ ಪದರುಗಳು ಯಾಕೋ ಮನಸ್ಸಿನಿಂದ ಈಚೆ ಬರುವುದಿಲ್ಲ ಎನ್ನಿಸುವಾಗ ಅದರ ಬೆನ್ನೇರಿ ಹೋಗಿ ಹುಡುಕತೊಡಗುತ್ತಾಳೆ. ತಾಯಿಯ ಸಾವಿನಲ್ಲಿ, ತಾನು ಮನೆಯಲ್ಲಿ ಇರಲಾರದ ದಿನಗಳಲ್ಲಿ, ದಿನ ನಿತ್ಯದ ಸಂಸಾರದ ಯಾಂತ್ರಿಕತೆಯಲ್ಲಿ ಇನ್ನೇನೋ ಜೀವಂತಿಕೆ ಬಯಸಿ ಒಂದು ಕ್ಷಣ ಅತ್ತ-ಇತ್ತ ತುಯ್ದಾಡಿರಬಹುದು. ತನ್ನದೇ ಪ್ರತಿಬಿಂಬವಾಗಿ ಕಂಡ ಮಧು ಆಕೆಗೆ ಚೆಲುಮೆಯ ಚೈತನ್ಯವಾಗಿ ಕಂಡಿರಬಹುದು. ಆ ಕ್ಷಣದಲ್ಲಿ ಮನುಷ್ಯ ಜೀವನದಲ್ಲಿ ಇನ್ನೇನೋ ಸತ್ಯಗಳಿವೆ ಎನಿಸಿರಬಹುದು. ಅಥವಾ ಮೂರೂ ಹೊತ್ತು ಕೆಲಸ, ಸಂಸಾರ, ಬಸ್ಸು, ಓಡಾಟಗಳ ಯಾಂತ್ರಿಕತೆಯಲ್ಲಿ - ಮಧುವಿನ ಪ್ರೇಮದಲ್ಲಿ ಒಂದು ಕ್ಷಣ ಕೊಚ್ಚಿ ಹೋಗಿರಬಹುದು. ತಾಯಿಯ ಸಾವಿನಿಂದ, ಬದುಕಿನ ಯಾಂತ್ರಿಕತೆಯಿಂದ, ಸಂಸಾರದಲ್ಲಿ ನಲುಗಿ ಹೋಗುತ್ತಿರುವ ತನ್ನನ್ನು, ತನ್ನ ವ್ಯಕ್ತಿತ್ವವನ್ನು ಮತ್ತೆ ವಾಪಸ್ಸು ಬದುಕಿಸಿಕೊಳ್ಳಲಿಕ್ಕೆ ಪ್ರಯತ್ನ ಪಟ್ಟಿರಬಹುದು. ಹೀಗೆಲ್ಲಾ ಯೋಚಿಸುತ್ತಾ ಕುಳಿತ ರಮೇಶ ಗಂಗಾ ಆಡುತ್ತಿರುವ ಮಾತುಗಳತ್ತ ಗಮನವಿಟ್ಟು ಕೇಳುತ್ತಾನೆ.

'ಇದರಲ್ಲಿ ನಿನಗೆ ಮೋಸ ಮಾಡಬೇಕೆಂಬುದು ನನ್ನ ಉದ್ದೇಶವಾಗಿರಲಿಲ್ಲ ರಮೇಶ್, ಮಧುವಿಗೆ ನನ್ನ ಮನಸ್ಸು ಹತ್ತಿರವಾದಷ್ಟೂ ನಿನ್ನನ್ನು ಎಲ್ಲಿ ಕಳೆದುಕೊಂಡುಬಿಡುತ್ತೇನೋ ಎಂದು ಒದ್ದಾಡಿದ್ದೇನೆ. ಈ ಒದ್ದಾಟದಲ್ಲಿ ಏಳು ವರ್ಷ ಕಾಲ ಪ್ರವಾಹದ ಹಾಗೆ ಕೊಚ್ಚಿ ಹೋಗದ, ಶಾಂತವಾಗಿ ನೀರಿನಂತೆ ಹರಿದ ನಿನ್ನ ಜೊತೆಗಿನ ಬದುಕು ನನಗೆ ಆತ್ಮೀಯ ಎನಿಸಿದ ಘಳಿಗೆಯಲ್ಲಿಯೇ ನಾನು ಮಧುವಿನಿಂದ

ದೂರವಾಗಬೇಕು ಎಂದು ಎಣಿಸಿದ್ದು. ಈ ನಿರ್ಧಾರದ ಹಂತದಲ್ಲಿಯೇ ಇಂದು ನಿನ್ನ ಜೊತೆ ಕುಳಿತು ಮಾತನಾಡಲು ನನಗೆ ಸಾಧ್ಯವಾಗತೊಡಗಿದೆ. ಕ್ಷಣದಲ್ಲಿ ಮಧುವಿನ ಸಂಬಂಧ ಜೀವಂತಿಕೆ ನೀಡಿದ್ದು ನಿಜವಾದರೂ - ಭಾವನೆಗಳಲ್ಲಿ ಪ್ರವಾಹದ ಹಾಗೆ ಕೊಚ್ಚಿ ಹೋಗಬಹುದಾದ ಸಂಬಂಧ ಅದು. ರಭಸವಾಗಿ ಕಳಚಿ ಹೋಗಬಹುದಾದ ಸಂಬಂಧ ಅದು. ರಮೇಶ್ ಇದನ್ನೆಲ್ಲ ನಿನಗೆ ಅರ್ಥ ಮಾಡಿಸಬೇಕೆಂಬುದು ನನ್ನ ಹಟವಲ್ಲ. ನನ್ನ ಮನಸ್ಸಿನಲ್ಲಿ ನಡೆಯುವ ಗೊಂದಲಗಳನ್ನೆಲ್ಲ ನಿನಗೆ ಹೇಳಬೇಕು ಎಂಬ ಆಸೆ ಅಷ್ಟೇ!'

ಹೀಗೇ ಮಾತನಾಡುತ್ತಾ, ಮಾತನಾಡುತ್ತಾ ಗಂಗಾಳ ಕಣ್ಣಲ್ಲಿ ನೀರು ಸುರಿಯತೊಡಗುತ್ತದೆ. ತಾನು ಯೋಚಿಸುವುದರ ನಡುವೆಯೇ ಗಂಗಾ ಏನು ಹೇಳುತ್ತಿದ್ದಾಳೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ರಮೇಶ ಪ್ರಯತ್ನಿಸುತ್ತಾನೆ. ಆಕೆ ಹೇಳುವುದನ್ನೆಲ್ಲಾ ಕೇಳಿಸಿಕೊಳ್ಳುವಾಗ ನಿಧಾನವಾಗಿ, ನಿಧಾನವಾಗಿ ಒಂದೊಂದೇ ಮೆಟ್ಟಿಲು ಏರುವಂತೆ ಅವನ ಮನಸ್ಸಿಗೆ ಸಮಾಧಾನವಾಗತೊಡಗುತ್ತದೆ. ತನ್ನ ಮನಸ್ಸನ್ನು ಮತ್ತೆ ತನ್ನ ವಶಕ್ಕೇ ತೆಗೆದುಕೊಳ್ಳಬಲ್ಲೆ ಎಂಬ ವಿಶ್ವಾಸದ ಕಿಡಿಯೊಂದು - ಅವನೊಳಗೆಯೋ ಎಲ್ಲಿಯೋ ಮೂಡುತ್ತದೆ: ಗಂಗಾ ತನ್ನನ್ನು ತಳ್ಳಿ ಓಡಿ ಹೋಗಿಬಿಡುವಂತಹ ಕೆಟ್ಟ ಹೆಂಗಸಲ್ಲ ಎನಿಸುತ್ತದೆ. ಆಕೆಯ ಗೊಂದಲಗಳ ಒಳಗೆಯೇ ಗಂಗಾ ಆತನಿಗೆ ನಿಜವಾದ ವ್ಯಕ್ತಿಯಾಗಿ ಕಾಣಿಸತೊಡಗುತ್ತಾಳೆ. ಯಾವುದನ್ನೂ ಬಚ್ಚಿಟ್ಟುಕೊಳ್ಳದೇ - ಎಲ್ಲದನ್ನೂ ಬಿಚ್ಚಿ ನುಡಿಯುವ ಗಂಗಾಳ ಬಗ್ಗೆ ಪ್ರೀತಿ ಎನಿಸುತ್ತದೆ. ಗಂಗಾಳ ಮೇಲಿರುವ ಪ್ರೀತಿಗೆ ತಾನು ಹೇಗಿದ್ದರೂ ಗಂಗಾಳನ್ನು ಒಪ್ಪಿಕೊಂಡುಬಿಡುವೆನೇನೋ ಎಂದು ಆತನಿಗೆ ಅನ್ನಿಸುತ್ತದೆ. ತಾನು ಅರ್ಥ ಮಾಡಿಕೊಳ್ಳಲಾರದ ನಿಗೂಢ ವ್ಯಕ್ತಿತ್ವವೊಂದು ಗಂಗಾಳಿಗಿದೆಯೇನೋ ಎಂದು ಆತನಿಗೆ ಮತ್ತೆ ಅನ್ನಿಸತೊಡಗುತ್ತದೆ. ಅಷ್ಟೆಲ್ಲಾ ಹೊತ್ತು ಅತ್ತು, ಕರೆದು ರಂಪ ಮಾಡಿದುದಕ್ಕೆ ಅವನಿಗೇ ಅವನ ಬಗ್ಗೆ ಒಂದು ಕ್ಷಣ ಮುಜುಗರವಾಗುತ್ತದೆ. ಗಂಗಾಳ ಮುಂದೆ ತಾನು ತುಂಬ ಚಿಕ್ಕವನಾಗಿ ಬಿಟ್ಟೇನೇನೋ ಎನ್ನುವ ಕೊರಗೊಂದು ಮೂಲೆಯಲ್ಲಿ ಕಾಣಿಸಿಕೊಳ್ಳತೊಡಗುತ್ತದೆ.

ಸೂರ್ಯನ ಕಿರಣ ಕಿಟಕಿಯಿಂದ ತೂರಿ ಬಂದಾಗ ಗಂಗಾ ಕಿಟಕಿಯ ಎರಡೂ ಬಾಗಿಲನ್ನೂ ದೊಡ್ಡದಾಗಿ ತೆರೆಯುತ್ತಾಳೆ. ತಣ್ಣಗೆ ಬೀಸಿ ಬಂದ ಗಾಳಿ ಕಣ್ಣುಗಳಿಗೆ ತಂಪೆನಿಸುತ್ತದೆ. ರಮೇಶ ಈಗ ವಾಸ್ತವದ ಪರಿಧಿಯಲ್ಲಿ ಮಾತನಾಡತೊಡಗುತ್ತಾನೆ.

'ಇದೊಂದು ಚಿಕ್ಕ ಘಟನೆ. ನಮ್ಮಿಬ್ಬರ ಬದುಕನ್ನು ಮತ್ತೊಮ್ಮೆ ಕುರಿತು ಅವಲೋಕಿಸುವುದಕ್ಕೆ ಇದು ಕಾರಣವಾಗಬೇಕು ಅಷ್ಟೇ ಗಂಗಾ! ಬಹುಶಃ ನೀನು ಹಂಚಿಕೊಂಡ ಸಂಗತಿಗಳಲ್ಲಿ ಸತ್ಯವಿದೆ. ಎಲ್ಲಿಯೋ ಸಂಸಾರದೊಳಗೆ ಸಿಕ್ಕಿ ಹಾಕಿಕೊಂಡಿದ್ದೇನೆಂಬ ಭಯ ನಿನ್ನನ್ನು ವಿಚಿತ್ರವಾಗಿ ಕಾಡುತ್ತಿರಬಹುದು. ಇನ್ನೆಲ್ಲಿಯೋ ಇನ್ನೇನನ್ನೋ ಕಂಡುಕೊಳ್ಳುವ ನಿನ್ನ ಬಯಕೆ ನನಗೆ ಅರ್ಥವಾಗುತ್ತದೆ. ನಾವು ಕುಳಿತು ಮತ್ತೆ ಬದುಕನ್ನು ನೋಡೋಣ, ಮತ್ತೆ ಕುಳಿತು ಬದುಕಿನ ಬಗ್ಗೆ ಮಾತನಾಡೋಣ, ನನ್ನ ಬದುಕಿನ ಮಿತಿಗಳೂ ನಿನ್ನ ಹುಡುಕಾಟಗಳಿಗೆ ಕಾರಣವಾಗಿರಬಹುದು. ಇವೆಲ್ಲಾ ಕುರಿತು ಮತ್ತೆ ಮಾತನಾಡೋಣ'.

ಇಷ್ಟು ಶಾಂತವಾಗಿ ಮಾತನಾಡಿದ ಮೇಲೆ ರಮೇಶ ಗಂಗಾಳ ತೊಡೆಯ ಮೇಲೆ ತಲೆಯಿಟ್ಟು ಮಲಗಿದ. ಮಲಗಿದ ಹಲವಾರು ಕ್ಷಣಗಳಲ್ಲಿಯೇ ಆತ ಶಾಂತವಾಗಿ ನಿದ್ರೆ ಮಾಡತೊಡಗಿದ್ದ.

ಶಾಂತವಾಗಿ ಮಲಗಿದ ರಮೇಶ ನಿದ್ರೆ ಮಾಡುವುದನ್ನು ಕಂಡು ಗಂಗಾಗೆ ಆಶ್ಚರ್ಯವಾಯಿತು.

ಇಷ್ಟು ಹೊತ್ತಿನ ತನಕ ಅತ್ತು, ಕರೆದು, ರಂಪ ಮಾಡಿ, ಸಣ್ಣ ಮಕ್ಕಳ ತರಹ ಹಟ ಮಾಡಿ, ಕೆಲವು ಮಾತುಗಳಲ್ಲಿ ಬೆರಗು ತೋರಿಸಿದ ಹುಡುಗ ಈತನೇ ಎನ್ನುವಷ್ಟು ಗಂಗಾಗೆ ಬೆರಗಾಗತೊಡಗಿತ್ತು. ಈ ಗೊಂದಲಗಳಿಗೆಲ್ಲ ಮುಕ್ತಾಯ ಹಾಡಿಬಿಡಬೇಕು, ಮಧುವಿಗೆ ಕೊನೆಯದಾಗಿ ಗುಡ್ ಬೈ ಹೇಳಿಬಿಡಬೇಕು ಎಂದು ಗಂಗಾ ಮನದಲ್ಲಿಯೇ ನಿಶ್ಚಯಿಸಿದಳು. ರಮೇಶನ ನಿದ್ರೆಗೆ ಭಂಗ ಬಾರದಂತೆ ಮಂಚದ ಮಧ್ಯದಲ್ಲಿ ಕುಳಿತ ಗಂಗಾ ಒಂದು ಕ್ಷಣ ಹಿಂದಕ್ಕೆ ಒರಗಿ ನಿಧಾನವಾಗಿ ಸರಿದು ಗೋಡೆಗೆ ತಲೆಯಾನಿಸಿದಳು. ಪಕ್ಕದಲ್ಲಿ ಮಲಗಿರುವ ಮಿತಾ ಸದ್ದಿಲ್ಲದೇ ನಿದ್ದೆ ಮಾಡುತ್ತಿದ್ದಾಳೆ. ಕೊನೆಗೆ ತೊಡೆಯ ಮೇಲೆ ಮಲಗಿದ ರಮೇಶ ಕೂಡಾ ಗೊರಕೆ ಹೊಡೆಯುವುದನ್ನು ಕಂಡಾಗ ಗಂಗಾಗೆ ಅಸೂಯೆ ಎನ್ನಿಸುತ್ತದೆ. ಹಾಗೇ ಗೋಡೆಗೆ ಒರಗಿ ಕಣ್ಣು ಮುಚ್ಚುತ್ತಾಳೆ.

ಒಂದು ಕ್ಷಣ - ನಡೆದು ಹೋದದ್ದನ್ನೆಲ್ಲಾ ನೆನಸಿಕೊಂಡರೆ ಗಂಗಾಳಿಗೆ ಮೈ ನಡುಗುತ್ತದೆ. ಇದೆಲ್ಲಾ ನಡೆದದ್ದು ಹೇಗೆ? ರಮೇಶನ ಹತ್ತಿರ ರಾತ್ರಿ ಸುಮಾರು 11 ಘಂಟೆಯಿಂದ ಬೆಳಿಗ್ಗೆ ಐದು ಘಂಟೆಯವರೆಗೆ ಮಾತನಾಡಿದ್ದಳು. ಆತ ಅತ್ತೂ, ಕರೆದು, ಗಂಗಾ ಕೂಡಾ ಅತ್ತು, ಕೊನೆಗೆ ಆ ಅಳುವಿನಲ್ಲಿ ಒಬ್ಬರಿಗೊಬ್ಬರು ಹತ್ತಿರವಾದಂತೆ, ಆತ್ಮೀಯರಾದಂತೆ ಇಬ್ಬರಿಗೂ ಭಾಸವಾಗತೊಡಗಿತ್ತು. ಗಂಗಾಳ ಬದುಕಿನ ಇನ್ನೊಂದು ಮುಖದ ಹರವನ್ನು ತಾನು ಗಮನಿಸಲಿಲ್ಲವೇನೋ ಎಂಬ ಅಳುಕು ರಮೇಶನಲ್ಲಿ ಮೂಡಿದ್ದರೆ, ರಮೇಶನ ಕೆಲಸದ ಒತ್ತಡಗಳು, ಅವನ ಕೆಲಸದ ನಡುವಿನ ಒಂಟಿತನ, ಸಂಸಾರ ಹಾಗೂ ಕೆಲಸದ ನಡುವೆ Balance ಮಾಡಲಾರದ, ಶಾಂತಿಯುತ ಜೀವನ ನಡೆಸಲಾರದ ಅವನ ಒದ್ದಾಟವನ್ನು ತಾನು ಗಮನಿಸಲಿಲ್ಲವೇನೋ ಎಂಬ ಅಳುಕು ಗಂಗಾಳ ಮನಸ್ಸಿನಲ್ಲಿಯೂ ಮೂಡತೊಡಗಿತ್ತು. ದೂರ ದೂರವಾದವರು ಎಲ್ಲಿಯೋ ಹತ್ತಿರವಾದಂತೆ ಇಬ್ಬರಿಗೂ ಭಾಸವಾಗತೊಡಗಿತ್ತು.

ಬೆಳಿಗ್ಗೆ ಏಳುವಾಗ ರಮೇಶನ ಮನಸ್ಸು ಪೂರ್ತಿಯಾಗಿ ಸ್ಥಿಮಿತಕ್ಕೆ ಬರತೊಡಗಿತ್ತು. ಏನೋ ಆಗಬಾರದ್ದು ಆಗಿ ಹೋಗಿದೆ, ತಲೆಯ ಮೇಲೆ ಆಕಾಶ ಕಳಚಿ ಬಿದ್ದಿದೆ ಎಂಬಂತಹ ಆಘಾತ ನಿಧಾನವಾಗಿ ಮಂಜಿನಂತೆ ಕರಗಿ ಅಲ್ಲಿ ಮತ್ತೊಂದು ಆಶಾಕಿರಣ ಅವನಲ್ಲಿ ಮೂಡತೊಡಗಿತ್ತು. ತಮ್ಮಿಬ್ಬರ ಬದುಕನ್ನು ಮತ್ತೊಮ್ಮೆ ಕುಳಿತು ಶಾಂತವಾಗಿ ಅವಲೋಕಿಸಬೇಕೆಂಬ ದೃಢ ನಿರ್ಧಾರ ರಮೇಶನಲ್ಲಿ ಮೂಡತೊಡಗಿತ್ತು. ಒಬ್ಬರಿಗೊಬ್ಬರು ಸ್ಪೇಸ್ ಕೊಟ್ಟು ಬದುಕಬೇಕೆಂಬ, ಹಾಗಾಗದಿದ್ದಲ್ಲಿ ಬದುಕು ಸುಗಮವಾಗಲಾರದು ಎನ್ನುವ ಸತ್ಯ ಆತನಲ್ಲಿ ಮೂಡತೊಡಗಿತ್ತು. ಹೀಗೆಯೇ ಗಂಗಾ ಮತ್ತು ರಮೇಶ್ ಒಬ್ಬರಿಗೊಬ್ಬರು ಹತ್ತಿರವಾದಂತೆ, ಆತ್ಮೀಯರಾದವರಂತೆ ಫೀಲ್ ಮಾಡತೊಡಗಿದ್ದರು.

ಆ ದಿನವೇ ಗಂಗಾ ಮಧುವಿನ ಮನೆಗೆ ಹುಡುಕಿಕೊಂಡು ಕೂಡಾ ಹೋಗಿದ್ದಳು. ರಮೇಶನಲ್ಲಿ ತಾನು ಹಂಚಿಕೊಂಡ ವಿಚಾರ, ಇಂತಹ ದ್ವಂದ್ವಗಳಿಂದ ದೂರವಾಗಬೇಕೆಂಬ ತನ್ನ ವಿಚಾರ, ಬದುಕು ಛಿದ್ರ ಛಿದ್ರಗೊಳಿಸಿಕೊಳ್ಳಲಾಗದ ಇವೆಲ್ಲವನ್ನೂ ವಿವರವಾಗಿಯೇ ಮಧುವಿನಲ್ಲಿ ನುಡಿದಳು. ಮಧು ಸಂಬಂಧದ ಇಂತಹ ಸ್ವರೂಪಗಳನ್ನಾಗಲೀ, ಸಂಕೀರ್ಣತೆಗಳನ್ನಾಗಲೀ ಕಂಡವನೇ ಅಲ್ಲ. ಗಂಗಾ ರಮೇಶನಲ್ಲಿ ಹಂಚಿಕೊಂಡುದುದರಿಂದ ರಮೇಶ ಈ ಪ್ರಪಂಚದಲ್ಲಿ ತನ್ನನ್ನು ಇನ್ನಿಲ್ಲದಷ್ಟು ದ್ವೇಷಿಸುತ್ತಾನೆ ಎಂಬುದು ಮಾತ್ರ ಅವನಲ್ಲಿ ಬಲವಾಗಿ ಉಳಿದ ಭಾವನೆಯಾಗಿತ್ತು. "ನೀವು ನನ್ನೊಡನೆ, ನನ್ನ ಜೀವನದಲ್ಲಿ ಬರುತ್ತೀರಿ ಎಂದು ಎಣಿಸಿರಲಿಲ್ಲ ಮೇಡಂ. ಹೀಗೇ ಆಕಸ್ಮಿಕವಾಗಿ ಬಂದಿರಿ. ಒಂದು ಪಕ್ಷ ನನ್ನೊಡನೆ ಎಲ್ಲರ ಸಂಬಂಧ ಕಿತ್ತುಕೊಂಡು ಬದುಕುತ್ತೇನೆ ಎಂದು ನೀವು ಬಂದರೂ ಸುಖವಾಗಿರಲಾರಿರಿ ಎಂಬ ಅಂಶ ನನಗ ಗೊತ್ತು, ಮಿತಾ, ರಮೇಶ ಹಾಗೂ ನಿಮ್ಮ ನಡುವೆ ಒಂದು ಬಾಂಧವ್ಯ ಇದೆ. ನೀವು ನನ್ನೊಡನೆ

ಕಳೆದ ಸಮಯದಲ್ಲಿ ಮಾತನಾಡಿರುವುದು ಹೆಚ್ಚಾಗಿ ರಮೇಶನನ್ನು ಕುರಿತೇ. ಹಾಗಾಗಿ ಈಗ ನೀವು ಹೇಳುತ್ತಿರುವುದು ನನಗೆ ದಿಗ್ಭ್ರಮೆ ಹುಟ್ಟಿಸುವುದಿಲ್ಲ. ನಾನು ಇದನ್ನು ನಿರೀಕ್ಷಿಸಿಯೇ ಇದ್ದೆ. ನೀವು ಎಷ್ಟು ಆಕಸ್ಮಿಕವಾಗಿ ಬಂದಿರೋ ಅಷ್ಟೇ ಆಕಸ್ಮಿಕವಾಗಿ ದೂರ ಸರಿಯುವ ವ್ಯಕ್ತಿತ್ವ ಎಂಬುದೂ ನನಗೆ ಗೊತ್ತಿತ್ತು. ಆದರೆ ನೀವು ಈಗ ರಮೇಶ್‌ರವರ ಬಳಿ ಹೇಳಿಬಿಟ್ಟಿರುವಿರಿ. ನಿಮ್ಮಿಬ್ಬರ ನಡುವೆ ಅದೇನು ಆಘಾತ ಕಾದಿದೆಯೋ ಎಂಬುದಷ್ಟೇ ನನ್ನ ಯಾತನೆ. ಈಗ ನನಗೆ ಒಂದು ರೀತಿಯ ಭಯ, ನಿಮ್ಮಿಬ್ಬರ ಸಂಬಂಧದ ಮಧ್ಯೆ ನಾನು ಅಡ್ಡಿ ಬರುವುದಿಲ್ಲ, ಬರಲಾರೆ. ಬಹುಶಃ ನೀವು ಹೇಳಿದ ಹಾಗೆ ಇದೇ ಕೊನೆಯ ಬಾರಿ ನಿಮ್ಮನ್ನು ಭೇಟಿಯಾಗುತ್ತಿರುವುದು. ನೀವು ಸುಖವಾಗಿರುವುದೇ ನನಗೆ ಮುಖ್ಯ. ನೀವು ಹೇಳಿದ ಹಾಗೆ ನಮ್ಮಿಬ್ಬರ ಮಧ್ಯೆ ಅಪ್ಪುಗೆ, ಮುದ್ದಿಸುವ ಸಂದರ್ಭ ತಪ್ಪಿಸಿದ್ದರೆ ಎಲ್ಲಿಯೋ ಒಂದು ನಿರ್ಮಲ ಸಂಬಂಧ ಉಳಿಯಬಹುದಿತ್ತು. ಮನಸ್ಸಿಗೆ ಹತ್ತಿರವಾಗುವ, ಹಿತವಾಗುವ ಸಂಬಂಧವೇ ಉಳಿದುಕೊಳ್ಳಲು ಸಾಧ್ಯವಾಗುತ್ತಿತ್ತು. ನಾನೂ ಕೂಡಾ ಬೇಸರವಾದಾಗಲೆಲ್ಲಾ ಯಾವ ಅಳುಕೂ ಇಲ್ಲದೇ ನಿಮ್ಮ ಹಾಗೂ ರಮೇಶ್ ಜೊತೆ ಕುಳಿತು ಹರಟೆ ಹೊಡೆಯಬಹುದಿತ್ತು. ಆದರೆ ಈಗ ಎಲ್ಲೆಲ್ಲೂ ಅನುಮಾನಗಳೇ ತಾಂಡವವಾಡುತ್ತಿವೆ. ನಿಮ್ಮ ಹಾಗೂ ನನ್ನ ವರ್ತನೆಗೆ ಅರ್ಥಗಳು ಬೇರೆ ಬೇರೆಯಾಗಿಬಿಡುತ್ತವೆ. ರೈಟ್ ಮೇಡಂ, ನನ್ನಲ್ಲಿ ನೀವು ತುಂಬಿದ ವಿಶ್ವಾಸ, ಪ್ರೀತಿ, ಹೆಚ್ಚಾಗಿ ನನ್ನಲ್ಲಿದ್ದ ಕೀಳರಿಮೆಯೊಂದನ್ನು ತೊಲಗಿಸಲು ನೀವಾಗಿಯೇ ನಿಮ್ಮನ್ನು ಒತ್ತಾಯಪೂರ್ವಕವಾಗಿ ನನ್ನ ಸಂಬಂಧದಲ್ಲಿ ತಗಲುಹಾಕಿಕೊಂಡ ಸಂದರ್ಭ ಎಲ್ಲದಕ್ಕೂ ನಾನು ಋಣಿ. ನೀವು, ರಮೇಶ್ ಹಾಗೂ ಮಿತಾರ ನಡುವಿನ ಹಿಂದಿನ ಸುಂದರ ಸಂಬಂಧ ಹಾಗೆಯೇ ಉಳಿಯಲಿ."

ಹೀಗೇ ಮಧು ನಿರಂತರವಾಗಿ ಮಾತನಾಡುತ್ತಲೇ ಇದ್ದ. 'ನಿಮ್ಮ ಅಪ್ಪುಗೆ, ಮೌನಕ್ಕಿಂತ ಮುಖ್ಯವಾಗಿ ನಿಮ್ಮ ವಿಶ್ವಾಸದ ವ್ಯಕ್ತಿತ್ವವೊಂದು ನನ್ನ ಒಡಲಿನಲ್ಲಿದೆ. ಅದು ಹುಟ್ಟು ಹಾಕಿದ ಭರವಸೆ ಅಪಾರ. ಅದು ಹೃದಯದ ಮೂಲೆಯೊಂದರಲ್ಲಿ ಗಟ್ಟಿಯಾಗಿ ಮನೆ ಮಾಡಿಕೊಂಡು ನನ್ನ ಜೀವನದಲ್ಲಿ ಒಂದು ಭರವಸೆಯ ಚುಕ್ಕಿಯಾಗುತ್ತದೆ. ಅಷ್ಟು ಸಾಕು. ನೀವು, ರಮೇಶ, ಮಿತಾರ ಬದುಕು ನನ್ನ ಕಣ್ಣೆದುರಿಗೇ ಛಿದ್ರವಾದರೆ ಆ ಪಾಪದ ಪ್ರಜ್ಞೆಯಲ್ಲಿಯೇ ನರಳಿ ನಾನು ಸತ್ತು ಹೋಗಬೇಕಾಗುತ್ತದೆ.' ಹೀಗೆಲ್ಲಾ ಭಾವೋದ್ವೇಗದಿಂದ ಮಾತನಾಡುವ ಮಧುವಿನ ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಯತೊಡಗುತ್ತದೆ. 'ನೀವು ಈಗಾಗಲೇ ನನ್ನಿಂದ ತಪ್ಪಿಸಿಕೊಳ್ಳತೊಡಗಿದ್ದ ಸತ್ಯ ನನಗೆ ಗೊತ್ತು. ನೀವು ನನ್ನನ್ನು ಭೇಟಿಯಾಗದೇ ಬಹಳ ಸಮಯವೇ ಕಳೆದು ಹೋಯಿತು. ಆದರೂ ಎಲ್ಲೋ ಒಂದು ದಿನ ನೀವು ಕಾಣುವಿರಿ, ಸಿಕ್ಕುವಿರಿ ಎಂಬ ಭರವಸೆ ನನ್ನಲ್ಲಿ ಏನೇನೋ ಉತ್ಸಾಹ ಹುಟ್ಟುಹಾಕಿತ್ತು. ಆದರೆ ಈಗ ಫೈನಲ್ ಎಂಬ ಘಟ್ಟ ತಲುಪಿದ್ದೀರಿ. ಇನ್ನು ಏನು ನಡೆಯದಿದ್ದರೂ ಅನುಮಾನಗಳ ಸುಳಿಯಲ್ಲಿ ಎಲ್ಲವೂ ಅಪಾರ್ಥವಾಗುತ್ತವೆ. ರೈಟ್ ಮೇಡಂ' ಎಂದು ಮಧು ಮಾತಿಗೆ ಬ್ರೇಕ್ ಹಾಕಿದ್ದ. ಗಂಗಾರ ಮುಂದೆ ಅತ್ತು ಅವರ ಕಣ್ಣಲ್ಲಿ ಸಣ್ಣವನಾಗಿ ಕಾಣುವುದಕ್ಕೆ ಅವನಿಗೆ ಇಷ್ಟ ಇರಲಿಲ್ಲ. ಎಲ್ಲಾ ಭಾವನೆಗಳಿಗೂ ಬ್ರೇಕ್ ಹಾಕುವವನಂತೆ 'ರೈಟ್ ಮೇಡಂ' ಎಂದು ಸರಕ್ಕನೇ ಎದ್ದಿದ್ದ. ಗಂಗಾಗೆ ಹೋಗಿ ಎಂದು ಹೇಳುವ ಚಿಹ್ನೆಯೂ ಅದಾಗಿತ್ತು. ಬದುಕಿನಲ್ಲಿ ದಕ್ಕುವುದಿಷ್ಟೇ ಎಂಬ ನಿರ್ಲಿಪ್ತ ಭಾವನೆಯಲ್ಲಿ ಬದುಕಬೇಕು ಎಂದು ಗಂಗಾ ಯಾವಾಗಲೂ ನುಡಿಯುತ್ತಿದ್ದರು. ನಮ್ಮ ಬದುಕನ್ನು ನಮ್ಮ ಹಿಡಿತದಲ್ಲಿಯೇ ಇಟ್ಟುಕೊಳ್ಳಬೇಕು ಎನ್ನುತ್ತಿದ್ದರು. ಬಹುಶಃ ಮಧು ಇದನ್ನೇ ಪಾಲಿಸಿದ್ದ. ಭಾವೋದ್ವೇಗದಿಂದ ಮಧು ಏನೇನನ್ನೋ ಮಾತನಾಡಿದ್ದ. ಏನೇನೋ ಮಾತನಾಡುತ್ತಿದ್ದೇನೇನೋ ಎಂದು ಆತನಿಗೇ ಅನ್ನಿಸತೊಡಗಿತ್ತು. ಮೊದಲೇ ಏನೇನೋ ಗೊಂದಲಗಳಲ್ಲಿ ನರಳುವ ಮೇಡಂಗೆ ಇನ್ನೇನೂ ತಾನು ಹೇಳಬಾರದು ಎನ್ನುವ ಸಂದರ್ಭದಲ್ಲಿ 'ರೈಟ್ ಮೇಡಂ' ಎಂದು

ಬ್ರೇಕ್ ಹಾಕಲು ಪ್ರಯತ್ನಿಸಿದ್ದ. ತನ್ನೆಲ್ಲಾ ಭಾವನೆಗಳಿಗೆ ಆತ ಕಡಿವಾಣ ಹಾಕಿ ಗಂಗಾಳನ್ನು ಕಳುಹಿಸಲು ಆತ ಬಳಸಿದ ಪದಗಳೇ 'ರೈಟ್ ಮೇಡಂ' ಎಂಬುದು.

ಗಂಗಾ ನೇರವಾಗಿ ಹಿಂತಿರುಗಿ ನೋಡದೇ ಎದ್ದು ಬಂದಿದ್ದಳು. ವಾಪಸ್ಸು ಮರಳುವಾಗ ಆಕೆಯ ಮನಸ್ಸು ಶಾಂತವಾಗಿತ್ತೋ, ಗೊಂದಲಗಳ ಸುಳಿಯಲ್ಲಿ ಸಿಲುಕಿತ್ತೋ ಆಕೆಗೇ ಅರ್ಥವಾಗಿರಲಿಲ್ಲ. ಆದರೆ ಈಗ ಇಡಿಯ ಸನ್ನಿವೇಶಕ್ಕೆ ಒಂದು ಉತ್ತರ ಬೇಕಿತ್ತು. ಆ ಉತ್ತರವನ್ನು ಮಧುವನ್ನು ತನ್ನ ಜೀವನದ ವಲಯದಿಂದ ಸಂಪೂರ್ಣವಾಗಿ ಆಚೆ ತಳ್ಳುವುದರಿಂದಲೇ ಕಂಡುಕೊಳ್ಳಲು ಪ್ರಯತ್ನಿಸಿದ್ದಳು. ಇಡಿಯ ಗೊಂದಲಗಳಿಗೆ ಮುಕ್ತಾಯ ಹಾಡಿ ಬದುಕು ಛಿದ್ರವಾಗಿರದಂತೆ ಕಾಪಾಡಿಕೊಳ್ಳಲು ಈ ಮೂಲಕ ಆಕೆ ಪ್ರಯತ್ನಿಸಿದ್ದಳು. ಕೆಲವು ಪ್ರಶ್ನೆಗಳಿಗೆ ಉತ್ತರ ಹುಡುಕಲು ಸಾಧ್ಯವೇ ಇಲ್ಲ, ಅವು ಅಷ್ಟು ಸಂಕೀರ್ಣವಾಗಿರುತ್ತವೆ ಎಂದು ನಂಬಿದ್ದ ಗಂಗಾ ಈಗ ತನ್ನ ಜೀವನದ ಸಂಕೀರ್ಣ ಸಂದರ್ಭದಲ್ಲಿ ಮಧುವನ್ನು ಪೂರ್ತಿಯಾಗಿ ಆಚೆ ದಬ್ಬುವುದರಿಂದ ತನ್ನ ಜೀವನದ ಶಾಂತಿಗೆ, ತನ್ನ ವ್ಯಕ್ತಿತ್ವದ integrityಗೆ ಉತ್ತರ ಸಿಗುತ್ತದೆ ಎಂದು ಆಶಿಸಿದ್ದಳು. ಛಿದ್ರ, ಛಿದ್ರವಾಗಬಹುದಾದ ತನ್ನ, ಮಿತಾ ಹಾಗೂ ರಮೇಶರ ಬದುಕು ಇಡಿಯಾಗಿರಬಹುದೆಂದು ಬಯಸಿದ್ದಳು. ರಮೇಶ ಹಾಗೂ ಮಧು ಇಬ್ಬರಲ್ಲಿಯೂ ಮನ ಬಿಚ್ಚಿ ಮಾತನಾಡಿದುದರಿಂದ ಗಂಗಾಳ ಮನಸ್ಸು ಈಗ ಸ್ಥಿಮಿತಕ್ಕೆ ಬರತೊಡಗಿತ್ತು. ಮಧುವಿನ ಮನೆಯಿಂದ ಮನೆಗೆ ಮರಳಿದ ಮೇಲೆ ಗಂಗಾ ಶಾಂತವಾಗಿ ಮಲಗಿ ನಿದ್ರೆ ಮಾಡಿದ್ದಳು. ಆ ಒಂದು ವರ್ಷದ ಅವಧಿಯಲ್ಲಿ ತಾನು ಅಷ್ಟೊಂದು ಶಾಂತವಾಗಿ ನಿದ್ರಿಸಿಯೇ ಇರಲಿಲ್ಲವೇನೋ ಎಂದು ಗಂಗಾಗೆ ಎಚ್ಚರವಾದಾಗ ಅನ್ನಿಸತೊಡಗಿತ್ತು.

ಆದರೆ ಅಂತಹ ನಿದ್ರೆಯನ್ನೆಲ್ಲಾ ಬಿರುಗಾಳಿ ಬೀಸಿ ಕಸಿದುಕೊಂಡು ಹೋಗುತ್ತದೆ ಎಂದು ಗಂಗಾ ಎಣಿಸಿರಲಿಲ್ಲ. ರಾತ್ರಿಯಾಗುವುದರಲ್ಲಿ ಅಲೆ ಜೋರಾಗಿ ಬೀಸಿತ್ತು. ಬೆಳಿಗ್ಗೆ ಎದ್ದು ಶಾಂತವಾದ ಮನಸ್ಸಿನಿಂದ ಕೆಲಸಕ್ಕೆ ಹೋಗಿದ್ದ ರಮೇಶ ಮರುದಿನ ಬೆಳಿಗ್ಗೆ ಬಂದಿದ್ದ. ಆ ದಿನ ಆತ ಕೆಲಸಕ್ಕೇ ಹೋಗಿರಲಿಲ್ಲ. ಹೊನ್ನೇಕೆರೆಗೆ ಹೋಗಿ ಅಣ್ಣ ಶಂಕರನೊಟ್ಟಿಗೆ ಮಾತನಾಡಿ ಬರಲು ಹೋಗಿದ್ದ. ಅಷ್ಟೊಂದು ಶಾಂತವಾಗಿ ಕಾರಣಗಳನ್ನು ಹುಡುಕಿ ತನ್ನದೂ ಎಲ್ಲಿಯೋ ತಪ್ಪಿರಬಹುದೇನೋ, balance ಕಾಪಾಡಲು ತನಗೆ ಸಾಧ್ಯವಾಗಲಿಲ್ಲವೇನೋ ಎಂದು ಯೋಚಿಸಿದ್ದ ರಮೇಶನ ಮನದ ಒಂದು ಹೆಣ್ಣು ಮನಸ್ಸು ಮರುದಿನದ ಹೊತ್ತಿಗೆ ಗಂಡಿನ ಕಠಿಣ ಮನಸ್ಸಾಗಿ ಹೋಗಿತ್ತು. ರಮೇಶನಿಗೆ ಯಾರ ಹತ್ತಿರವಾದರೂ ಕೂತು ಮಾತನಾಡಿದರೆ ಮನಸ್ಸಿಗೆ ಪೂರ್ತಾ ಸಮಾಧಾನವಾಗಬಹುದೆಂದು ಆತ ಅಣ್ಣ ಶಂಕರನನ್ನು ಆಯ್ಕೆ ಮಾಡಿಕೊಂಡಿದ್ದ. ಹೊನ್ನೇಕೆರೆಗೆ ಹೋಗಿದ್ದ. ಶಂಕರ ಗಂಗಾಳನ್ನು ಕ್ಷಮಿಸುವುದಕ್ಕೆ ಸಾಧ್ಯವೇ ಇಲ್ಲ ಎಂದನಂತೆ. 'ನೀವು ನಿಮ್ಮ ಹೆಂಡತಿ ಎಂದು ಆಕೆಯನ್ನು ಕ್ಷಮಿಸಬಹುದು. ಆದರೆ ಒಬ್ಬ ಅಣ್ಣನಾಗಿ ನಾನು ಆಕೆಯನ್ನು ಕ್ಷಮಿಸಲಾರೆ. ಆಕೆ ಒಬ್ಬ Anti-feminist. ಅಂದು ಗಂಗಾ ಕೆಲವು intellectuals ಹಿಂದೆ ಓಡಾಡಿದ್ದಳು ಎಂಬ ಸತ್ಯ ನನಗೆ ಗೊತ್ತು. ಇಂದು ನಿಮ್ಮಂತಹ ಪಾಪದ ಹುಡುಗರ ಜೊತೆ ಆಟವಾಡುತ್ತಿದ್ದಾಳೆ ಅಷ್ಟೇ. ಆಕೆಗೆ ಸರಿಯಾದ ಬುದ್ಧಿ ಕಲಿಸಬೇಕು. We should teach her a lesson. Ramesh, you have really made a wrong choice. ಮತ್ತೆ ಗಂಗಾಳ ಜೊತೆ ಬದುಕುವುದೇ ಆದರೆ ಹೀಗೆ ಹೆಣಗುತ್ತಲೇ ಬದುಕಬೇಕು. ನಿಮಗೆ ನನ್ನ Moral Support ಇದ್ದೇ ಇರುತ್ತೇ ರಮೇಶ್'. ರಮೇಶ್ ಗಂಗಾಳೊಡನೆ ಮಾತನಾಡಿದ ರೀತಿಯಲ್ಲಿ ಶಂಕರ ಮಾತನಾಡಿದ್ದ ರೀತಿ ಗಂಗಾಗೆ ಅರ್ಥವಾಗಿತ್ತು. ರಮೇಶ ಶಂಕರನೊಡನೆ ಏನೇನು ಮಾತನಾಡಿರಬಹುದು ಎಂದು ಗಂಗಾ ಊಹಿಸತೊಡಗುತ್ತಾಳೆ. ಮಧುವಿನಿಂದ ತಾನು ದೂರವಾಗಬೇಕು, ಎಲ್ಲಾ ಗೊಂದಲಗಳಿಗೆ ಮುಕ್ತಾಯ

ಹಾಡಿಬಿಡಬೇಕು ಎನ್ನುವ ಸಂಘರ್ಷದಲ್ಲಿ ರಮೇಶನ ಬಗೆಗಿದ್ದ ಸೂಕ್ಷ್ಮ ಭಾವನೆಗಳು, ಒಲವಿನ ಭಾವನೆಗಳೆಲ್ಲಾ ಯಾಕೋ ಇದ್ದಕ್ಕಿದ್ದ ಹಾಗೆ ಕಲ್ಲಾದಂತೆ ಗಂಗಾಳಿಗೆ ಭಾಸವಾಗತೊಡಗುತ್ತದೆ. ಬೆಳಿಗ್ಗೆ ಅಷ್ಟೊಂದು ಶಾಂತವಾಗಿ ನಿದ್ರೆ ಮಾಡಿದ್ದ ರಮೇಶನ ನಿದ್ರೆಯನ್ನೆಲ್ಲಾ ಶಂಕರನ ಜೊತೆಗಿನ ಮಾತುಕತೆಯು ಗಾಳಿಗೆ ತೂರಿ ಹಾಕಿತ್ತು. ಈ ಮಾತು-ಕತೆಯ ನಂತರದಲ್ಲಿ ರಮೇಶನಿಗೆ ತಾನು ಪಾಪದ ಹುಡುಗನಾಗಿ ಉಳಿಯಬಾರದು ಅನ್ನಿಸಿರಬೇಕು. ಆತನಲ್ಲಿಲ್ಲದ ಅಥವಾ ಹೃದಯದ ಒಳಗೆ ಎಲ್ಲೋ ಅಡಗಿದ್ದಿರ ಬಹುದಾದ ಗಂಡಸಿನ ಹಮ್ಮುಗಳನ್ನು ಶಂಕರನ ಮಾತು-ಕತೆ ಕೆಣಕಿಬಿಟ್ಟ ಹಾಗಿನ ರೋಷದಿಂದ ರಮೇಶ ಮಾತನಾಡತೊಡಗಿದ್ದ. 'ನಿಮ್ಮ ಹಾಗೆ Soft ಆಗಿ Deal ಮಾಡಬಾರದು, ಸ್ವಲ್ಪ ಆಕೆಗೆ ಬುದ್ಧಿ ಕಲಿಸಬೇಕು' ಎಂದು ಶಂಕರ ಅಂದಿದ್ದ ಮಾತುಗಳು ಅವನಿಗೆ ಎಲ್ಲೋ ಮನಸ್ಸಿನಾಳದಲ್ಲಿ ಸೂಜಿ ಹಾಕಿ ಚುಚ್ಚಿದಂತೆ ಅಂಟಿಕೊಂಡುಬಿಟ್ಟಿದ್ದವು. ಇಂತಹ ಸಂದರ್ಭದಲ್ಲಿ ಮೆದುವಾಗಿರಬಾರದು, ಮೆದುವಾಗಿದ್ದರೆ ಹೆಣ್ಣಿಗನಂತೆ ಆಗಿಬಿಡುತ್ತದೆ, ಇಡಿಯ ಸನ್ನಿವೇಶವನ್ನು ಕೈಗೆ ತೆಗೆದುಕೊಳ್ಳುವುದೆಂದರೆ ಹೆಚ್ಚು ಬಲಿಷ್ಠನಾಗಿ ವರ್ತಿಸಬೇಕು. ಆ ಬಲಿಷ್ಠತೆಗೆ ಬೇಕಿರುವುದು ಗಂಡುಮನಸ್ಸು - ಹೀಗೇ ಏನೇನೋ ಆಲೋಚನೆಗಳು ರಮೇಶನಿಗೆ ಕಾಡಿರಬೇಕು. ಬೆಳಿಗ್ಗೆ ಗಂಗಾಳೊಡನೆ ಮಾತನಾಡುವಾಗ ಇದ್ದಿದ್ದ ಸೂಕ್ಷ್ಮತೆ ಎಲ್ಲಿಯೋ ಗಾಳಿಗೆ ತೂರಿ ಹೋದಂತೆ ಆತನಿಗೆ ಅನ್ನಿಸತೊಡಗಿತ್ತು. ಮಧುವಿನ ಜೊತೆ ತಾನು ಆಡಿದ ಮಾತುಗಳನ್ನು ಗಂಗಾ ರಮೇಶನಲ್ಲಿ ಹೇಳಿದಾಗ ಅದನ್ನು ಅರಗಿಸಿಕೊಳ್ಳುವ ಶಕ್ತಿಯನ್ನು ರಮೇಶ ಕಳೆದುಕೊಂಡಿದ್ದ. ಮಧುವಿನ ಜೊತೆ ಗುಡ್ ಬೈ ಹೇಳಿ ಬಂದುದಾಗಿ ಗಂಗಾ ನುಡಿದಾಗ ರಮೇಶ ಪಟಾರ್ ಎಂದು ಆಕೆಯ ಕೆನ್ನೆಗೆ ಹೊಡೆದಿದ್ದ. Male Power use ಮಾಡುವುದರಿಂದ ಮಾತ್ರ ತಾನು ಇಡಿಯ ಸಂದರ್ಭವನ್ನು ತನ್ನ ಕೈಗೆ ತೆಗೆದುಕೊಳ್ಳಲು ಸಾಧ್ಯ ಎಂಬುದನ್ನು ರಮೇಶ ಕಂಡುಕೊಳ್ಳತೊಡಗಿದ್ದನೋ ಏನೋ? Male Power ಚಲಾಯಿಸಬೇಕು ಎನ್ನುವ ಸತ್ಯ ಆತನ ಮನಸ್ಸಿನೊಳಗೆ ಇಣುಕಿದೆ ಎಂಬುದು ಅರಿವಾಗತೊಡಗಿದ ಮೇಲೆ ಗಂಗಾಳಿಗೆ ನೋವಾಗತೊಡಗಿತ್ತು. ಮನಸ್ಸಿನ ಆಳದಲ್ಲಿ ದ್ವೇಷದ ಕಿಡಿಯೊಂದು ಹತ್ತಿಕೊಂಡು ಉರಿಯತೊಡಗಿದೆಯೇನೋ ಎಂದು ಆಕೆಗೇ ಎಲ್ಲೋ ಭಾಸವಾಗತೊಡಗಿತ್ತು. ಇದ್ದಕ್ಕಿದ್ದ ಹಾಗೆ ಇಡಿಯ ಸಂದರ್ಭದಲ್ಲಿ ರಮೇಶ ತನ್ನಿಂದ ಬಹಳ ದೂರವಾದ ಹಾಗೆ ಗಂಗಾಗೆ ಅನ್ನಿಸತೊಡಗಿತ್ತು. ಇಡಿಯ ಸನ್ನಿವೇಶದ ಮೇಲೆ ಹಿಡಿತ ಸಾಧಿಸಲು ಶಂಕರ ಪ್ರಯತ್ನಿಸಿದ್ದನು. ಗಂಗಾ/ರಮೇಶ ತಮ್ಮೀರ್ವರ ನಡುವಿನ sex ಬದುಕಿನ ಆಯಾಮವನ್ನೂ ಕುರಿತು ಮಾತನಾಡಿದ್ದರು. ಒಬ್ಬರು ಹೆಚ್ಚು ಮಾತನಾಡಿದರೆ ಇನ್ನೊಬ್ಬರಿಗೆ ಎಲ್ಲಿ ನೋವಾಗುತ್ತದೆಯೋ ಎಂಬ ಸೂಕ್ಷ್ಮದಲ್ಲಿ ಮಾತನಾಡಿದ್ದರು. ಗಂಗಾಳನ್ನು, ಮಗುವನ್ನು ಬಿಟ್ಟು, ಹಲವಾರು ದಿನ ತಾನು ದೂರ ಹೋಗುವುದು, ಕೆಲಸದಲ್ಲಿನ ತನ್ನ ಒತ್ತಡಗಳು, ಮಾನಸಿಕ ಒತ್ತಡಗಳಲ್ಲಿ ತನ್ನ ಲೈಂಗಿಕ ತೃಪ್ತಿಯ ಬಗ್ಗೆ ಕೊಟ್ಟ ಗಮನವನ್ನು ಗಂಗಾಳ ಕಡೆಗೆ ಕೊಡಲಿಲ್ಲವೇನೋ? ಎಂದು ಹಿಂದಿನ ದಿನ ಅಳುಕಿನಲ್ಲಿ ಮಾತನಾಡಿದ್ದ ರಮೇಶನ ಮನಸ್ಸಿನಲ್ಲಿ ಈಗ ಅಳುಕು ಅಥವಾ ಇನ್ನಾವ ಪ್ರಜ್ಞೆಯೂ ಮನೆ ಮಾಡಿರಲಿಲ್ಲ. ಗಂಗಾ ಮಹಾ ದ್ರೋಹಿಯಂತೆ, ಪಾತಕಿಯಂತೆ ಆತನ ಕಣ್ಣಿಗೆ ಕಂಡಿದ್ದಳು.

ರಮೇಶ ಹೊಡೆದ ಮೇಲೆ ಗಂಗಾ ಆ ದಿನ ಮಾತನಾಡಿಯೇ ಇರಲಿಲ್ಲ. ಏನು ಮಾತನಾಡಿದರೂ ಯಾವ ಅಪಾರ್ಥಕ್ಕೆ ದಾರಿ ಮಾಡಿಕೊಡುವುದೋ ಎಂಬ ಭಯ. ರಮೇಶ, ಗಂಗಾರ ನಡುವೆ ಭಯದ ವಾತಾವರಣವೊಂದನ್ನು ಸೃಷ್ಟಿಸುವಲ್ಲಿ ಶಂಕರ ನೆಪವಾಗಿದ್ದನು. ಆ ಭಯದ ವಾತಾವರಣದಲ್ಲಿ ಗಂಗಾಗೆ ಏನು ಮಾತನಾಡುವುದಕ್ಕೂ ಭಯ.

ರಮೇಶ್ ಬೆಳಿಗ್ಗೆ ಯಥಾ ಪ್ರಕಾರ ಆಫೀಸಿಗೆ ಹೊರಟು ನಿಂತಿದ್ದ. ಗಂಗಾಳಿಗೆ ಹೊಡೆದ ಮೇಲೆ ಅವನ ಮನಸ್ಥಿತಿ ಇನ್ನೂ ಕೆಟ್ಟು ಹೋದಂತೆ ಅವನಿಗೇ ಭಾಸವಾಗತೊಡಗಿತ್ತು. ಆಫೀಸಿಗೆ ಹೋಗುತ್ತೇನೆ ಎಂದು ಹೇಳಿದವನು ಆಫೀಸಿಗೆ ಹೋದನೋ, ಇಲ್ಲವೋ ಎಂಬುದು ಗಂಗಾಳಿಗೆ ತಿಳಿಯಲಿಲ್ಲ. ಗಂಗಾ ಮಿತಾಳನ್ನು ಸ್ಕೂಲಿಗೆ ಕಳಿಸಿಯಾದ ಮೇಲೆ ಒಬ್ಬಳೇ ಹಾಸಿಗೆಯಲ್ಲಿ ಮಲಗಿ ಯೋಚಿಸತೊಡಗಿದ್ದಳು. ರಮೇಶ ಶಂಕರನನ್ನು ಅರಸಿ ಹೋಗಿ ಮಾತನಾಡಿದ್ದ. ಶಂಕರನ ಹತ್ತಿರ ರಮೇಶ ಏನೆಲ್ಲಾ ಮಾತನಾಡಿರಬಹುದು ಎಂದು ಗಂಗಾ ಯೋಚಿಸುತ್ತಾಳೆ. ತನ್ನ ಭಯ/ಆತಂಕ ಕುರಿತು ಮಾತನಾಡಿರಬಹುದು/ ಇಡಿಯ ಸನ್ನಿವೇಶದಲ್ಲಿ ತಾನೊಬ್ಬ ಭಿಕಾರಿಯಾಗಿಬಿಡುತ್ತೇನೇನೋ ಎಂಬ ತನ್ನ ಅಳುಕನ್ನು ತೋಡಿಕೊಂಡಿರಬಹುದು. ತಾನೊಬ್ಬ ಅಸಹಾಯಕನಾಗುತ್ತಿದ್ದೇನೆ ಎಂಬ ತನ್ನ ತುಮುಲ ತೋಡಿಕೊಂಡಿರಬಹುದು.

ಇಡಿಯ ಸನ್ನಿವೇಶಕ್ಕೆ ಶಂಕರ ತನ್ನ ಮಾತು-ಕತೆಗಳಿಂದ ಬೇರೆಯಾದ ತಿರುವೊಂದನ್ನು ಕೊಟ್ಟು ಬಿಟ್ಟಿದ್ದನು. ಮೃದುತನ, ಸೂಕ್ಷ್ಮತೆಗಳು ಇಂತಹ ಸಮಸ್ಯೆಗಳನ್ನು ಬಗೆಹರಿಸಲಾರವು ಎಂಬುದು ಆತನ ತೀರ್ಮಾನಗಳಾಗಿರಬಹುದು. ಇಡಿಯ ದಿನ ರಾತ್ರಿ ಸೂಕ್ಷ್ಮತೆಯ ನೆಲೆಯಲ್ಲಿ ಮಾತನಾಡಿದ್ದ ರಮೇಶ ಇದ್ದಕ್ಕಿದ್ದ ಹಾಗೆ ಕಲ್ಲಾಗಿ ವರ್ತಿಸತೊಡಗಿದ್ದ. ಸೂಕ್ಷ್ಮತೆಯ ನೆಲೆಗಳೇ ಇಲ್ಲದ ಹಾಗೆ ಕಠಿಣವಾಗತೊಡಗಿದ್ದ. ಗಂಗಾಳಿಗೆ ಹೊಡೆಯುವುದರ ಮೂಲಕ ಇಡಿಯ ಸನ್ನಿವೇಶವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಯೋಚಿಸಿದ್ದ. ಗಂಗಾಳಿಗೆ ಹೊಡೆದ ಮೇಲೆ ರಮೇಶನಿಗೆ ಏನೆನ್ನಿಸಿತ್ತೋ? ರಾತ್ರಿಯೆಲ್ಲಾ ಮತ್ತೆ ಮಾತನಾಡಿಯೇ ಇರಲಿಲ್ಲ. ಬೆಳಿಗ್ಗೆ ಬೇಗ ಎದ್ದು ಗಂಗಾ ಕೆಲಸಕ್ಕೆ ಹೋಗುತ್ತಾಳೋ ಏನೋ ಎಂದು ಬಾಯ್ಲರ್ ಸ್ವಿಚ್ ಹಾಕಿದ್ದ. ಆಕೆ ಎಷ್ಟು ಹೊತ್ತಾದರೂ ಏಳದಿದ್ದಾಗ 'ಗಂಗಾ ಕಾಲೇಜಿಗೆ ಹೋಗಲ್ವ?' ಎಂದು ವಿಚಾರಿಸಿದ್ದ. ಗಂಗಾ ಸುಮ್ಮನೇ ಮಲಗಿದ್ದಳು. ಉತ್ತರ ಕೊಡುವ ಗೋಜಿಗೇ ಹೋಗಿರಲಿಲ್ಲ. ಉತ್ತರಿಸು ಎಂದು ಆತನೂ ಒತ್ತಾಯಿಸಲಿಲ್ಲ. ಮಿತಾಳಿಗಾಗಿ ಗಂಗಾ ಚಪಾತಿ ಮಾಡತೊಡಗಿದಾಗ ಆತನೇ ಚಪಾತಿ ಬೇಯಿಸತೊಡಗಿದ್ದ. ಯಾಕೋ ಇದ್ದಕ್ಕಿದ್ದ ಹಾಗೆ ತಾನು ಗಂಗಾಳನ್ನು ವಾಪಸ್ಸು ಪಡೆದುಕೊಳ್ಳಲಾರೆನೇನೋ ಎಂಬ ಅಳುಕು ಅವನಲ್ಲಿ ಪ್ರಾರಂಭವಾಗಿತ್ತು. ತಾನು ಒರಟಾಗಿದ್ದು, ಹೊಡೆದದ್ದು ತಪ್ಪೇನೋ ಎಂಬ ಪಾಪಪ್ರಜ್ಞೆ ಆತನಲ್ಲಿ ದೀರ್ಘವಾಗಿ ಮೂಡತೊಡಗಿತ್ತು. ತಾನೂ ತಿಂಡಿಯನ್ನು ಡಬ್ಬದಲ್ಲಿ ತೆಗೆದುಕೊಂಡು ಹೋಗುತ್ತೇನೆ ಎಂದು ಗಂಗಾಳಲ್ಲಿ ಹೇಳಿ ಹೊರಟಿದ್ದ. ಆಫೀಸಿಗೆ ಹೋಗಲೇಬೇಕು ಎಂದೇನೂ ಆತನಿಗೆ ಅನ್ನಿಸಿರಲಿಲ್ಲ.' ಆದರೂ ಒಬ್ಬನೇ ಎಲ್ಲಾದರೂ ಸುತ್ತಿದರೆ, ಕೂತುಕೊಂಡರೆ ತನ್ನ ಮನಸ್ಸಿಗೇ ಸಮಾಧಾನವಾಗಬಹುದೇನೋ ಎನ್ನಿಸಿ ಹೊರಟುಹೋಗಿದ್ದ. ರಮೇಶ ಹೋದ ಮೇಲೆ ಮಿತಾಳನ್ನು ಸ್ಕೂಲಿಗೆ ಕಳಿಸಿ ಗಂಗಾ ಹಾಸಿಗೆಯಲ್ಲಿ ಬಿದ್ದುಕೊಂಡಳು.

ತೆರೆದ ಬಾಗಿಲಿನಿಂದ ಶಂಕರ ಬಿರಬಿರನೇ ಒಳಗೆ ಬಂದನು. ಶಂಕರ ಅದೇಕೆ, ಅದೇಗೆ ತನ್ನ ಮೇಲೆ ಅಧಿಕಾರ ಸ್ಥಾಪಿಸಿದನೋ? ಆ ಯಜಮಾನಿಕೆಯ ಗತ್ತು ಆತನಿಗೆ ಎಲ್ಲಿಂದ ಬಂತು ಎಂಬುದನ್ನೇ ಆಕೆ ಆಲೋಚಿಸಲಾರಳು. ಶಂಕರ ಹೊನ್ನೇಕೆರೆಯಿಂದ ಬಂದು ಎದುರಿಗೆ ನಿಂತಿದ್ದ. ರಮೇಶ ತನ್ನೊಡನೆ ಮಾತನಾಡಿದುದಾಗಿ ಹೇಳಿದ. ಗಂಗಾಳ ಉಪನ್ಯಾಸಕ ವೃತ್ತಿಗೇ ಆಕೆ ಮಾಡಿದ್ದು ಅಗೌರವ ತರುವಂತಹದ್ದು ಎಂದ. ನೀನು ಎಂತಹ ಉಪನ್ಯಾಸಕಿ, ಆತ ಎಂತಹ ವಿದ್ಯಾರ್ಥಿ ಎಂದು ಹೀಯಾಳಿಸಿದನು. ನೀನು ಮಾಡುತ್ತಿರುವ ಕೆಲಸ ನಿನಗಷ್ಟೇ ತೃಪ್ತಿ ಕೊಡಬೇಕು ಎಂದನು.

ಗಂಗಾ ಮೊದ ಮೊದಲು ಮಾತನಾಡಲೇ ಇಲ್ಲ. ಕೊನೆಗೆ ಶಂಕರನನ್ನು ನೇರವಾಗಿ ಎದುರಿಸಿ 'ಇದೆಲ್ಲಾ ನಿನಗ್ಯಾಕೆ?' ಎಂದು ಗಂಗಾ ಕೇಳಿದ್ದಳು. 'ನಾನು, ರಮೇಶ್ ಬಗೆಹರಿಸಿಕೊಳ್ಳಬೇಕಾದ ಸಮಸ್ಯೆಯ ನಡುವೆ

ನೀನೊಂದು ಸಮಸ್ಯೆಯಾಗಿ ಯಾಕೆ ಪ್ರವೇಶಿಸುತ್ತಿರುವೆಯೆಂದೇ ನನಗೆ ಅರ್ಥವಾಗುವುದಿಲ್ಲ' ಎಂದಳು. ಶಂಕರ ಮಧ್ಯ ಬಾಯಿ ಹಾಕಿ ಮಾತನಾಡಿದ್ದ, "ನನಗೆ ಸಂಬಂಧವಿದೆಯೆಂದೇ ನಾನು ಮಾತನಾಡುತ್ತಿದ್ದೇನೆ ಗಂಗಾ, ನೀನು ನನ್ನ ತಂಗಿ. ನೀನು ಮತ್ತು ರಮೇಶ ಚೆನ್ನಾಗಿರುವುದು ನನಗೆ ಬೇಕು, ನಿಮ್ಮಿಬ್ಬರ ಮಧ್ಯೆ ಮಧು ಆಟವಾಡಿದ್ದಾನೆ. ನಿಮ್ಮಿಬ್ಬರ ಮಧ್ಯೆ ಬಿರುಕು ಉಂಟಾಗಿರುವುದು ನನಗೆ ನೋವಾಗುತ್ತದೆ".

ಗಂಗಾ ಬಹಳ ಹೊತ್ತಿನವರೆಗೆ ಏನನ್ನೂ ಮಾತನಾಡಲಿಲ್ಲ. ಮಾತನಾಡಿದರೆ ಏನೋ ಅಸಂಬದ್ಧ ಎನ್ನುವ ಹಾಗೆ ಆಕೆಗೇ ಅನ್ನಿಸತೊಡಗಿತ್ತು. 'ನಾನಿರುವುದೇ ಹೀಗೆ, ನೀವೆಲ್ಲಾ ಏನು ಮಾಡಬಲ್ಲಿರಿ?' ಎಂದಳು. ಶಂಕರನಿಗೆ ಸಾಕಷ್ಟು ಸಿಟ್ಟು ಬಂದಂತಿತ್ತು. 'ಹೌದು ಗಂಗಾ ಏನೋ ಅಷ್ಟು, ಇಷ್ಟು ಬರೆದು ಪ್ರಕಟಿಸಿದುದಕ್ಕೇ ಇಷ್ಟು ಕೊಬ್ಬು ನಿನಗೆ, ಇನ್ನೇನಾದರೂ ದೊಡ್ಡ ಬರಹಗಾರ್ತಿಯೇ ಆಗಿಬಿಟ್ಟಿದ್ದರೆ ನಿನ್ನನ್ನು ಹಿಡಿಯುವವರೇ ಯಾರೂ ಇರುತ್ತಿರಲಿಲ್ಲ, ಮಹಾ ಸೃಜನಶೀಲತೆ ನಿನ್ನದು, ರಮೇಶನಂತಹ ಪಾಪದ ಹುಡುಗರಿಗೆ ಇಂತಹದೇನೇನೋ ಹೇಳಿ ನಂಬಿಸಿಬಿಡಬಹುದು ನೀನು. ಕೊನೆಗೆ ನಿನ್ನ ಆಶಯಗಳೆಲ್ಲ ಹುಡುಗರ ಜೊತೆ ಮಲಗಿಬಿಡುವುದೇ ಆಗಿಬಿಡುತ್ತದೆ. ರಮೇಶನಂತಹ ಪಾಪದವರು ಯಾಕೆ ಬಲಿಯಾಗಬೇಕು ಇದಕ್ಕೆ? ರಮೇಶ ತಂದೆ-ತಾಯಿಯರಿಂದ ದೂರವಾಗಿ ನಿನ್ನಲ್ಲಿ ಅರಸಿದ್ದಾದರೂ ಏನನ್ನು? ನೀನು ಅವರಿಗೆ ಕೊಟ್ಟಿದ್ದಾದರೂ ಏನು? ನೀನು ಮಾಡುತ್ತಿರುವುದು ಸರಿ ಇಲ್ಲ ಗಂಗಾ. ನಾನು ಮಧುವಿನಲ್ಲಿಯೇ ಹೋಗಿ ಮಾತನಾಡುತ್ತೇನೆ. ನಿನಗೆ ಹೇಳಿ ಏನು ಪ್ರಯೋಜನ? ನಿನ್ನಂತಹವಳ ಜೊತೆ ಬದುಕಲು ನಿರ್ಧರಿಸಿದ್ದು ರಮೇಶನ ತಪ್ಪು'. ಶಂಕರ ಹೀಗೇ ಏನೇನನ್ನೋ ಮಾತನಾಡುತ್ತಲೇ ಇದ್ದನು. ಇಡಿಯ ಸಂದರ್ಭವನ್ನು ನಿಭಾಯಿಸುವ ಜವಾಬ್ದಾರಿ ತನ್ನದು ಎಂಬಂತಹ ಭಾವನೆಯಲ್ಲಿ ಶಂಕರ ಮಾತನಾಡತೊಡಗಿದ್ದನು. ಗಂಗಾ ಶಂಕರನ ಕಣ್ಣಲ್ಲಿ ಮಹಾ ಪಾಪಿಷ್ಠೆಯಾಗಿದ್ದಳು. ಆತ ನಿರಂತರವಾಗಿ ಮಾತನಾಡುತ್ತಲೇ ಹೋದಾಗ ಗಂಗಾಗೆ ಸಿಟ್ಟು ಬರತೊಡಗಿತ್ತು. ಗಂಗಾ ಒಬ್ಬ teenager ಎಂಬ ರೀತಿಯಲ್ಲಿ ರಮೇಶ ಹಾಗೂ ಶಂಕರ ವರ್ತಿಸತೊಡಗಿದ್ದರು. ಅವರ ಕಣ್ಣಲ್ಲಿ ತಪ್ಪು ಮಾಡಿದ ಚಿಕ್ಕ ಹುಡುಗಿ ಸಿಕ್ಕಿಹಾಕಿಕೊಂಡ ಹಾಗೆ ಗಂಗಾಗೆ ಭಾಸವಾಗತೊಡಗಿತ್ತು. ಇಷ್ಟೆಲ್ಲಾ ರಾದ್ಧಾಂತ ಆಗುತ್ತದೆ ಎಂದು ಗೊತ್ತಾಗಿದ್ದರೆ ರಮೇಶನ ಹತ್ತಿರ ಹೇಳದೆಯೇ ತಾನು ಮಧುವಿನಿಂದ ದೂರವಾಗಿಬಿಡಬಹುದಿತ್ತು ಎಂದು ಗಂಗಾ ಒಂದು ಕ್ಷಣ ಆಲೋಚಿಸಿದ್ದಳು. ಶಂಕರ ಮಾತನಾಡುವ ರೀತಿ ಗಂಗಾಳಲ್ಲಿ ಹೆಚ್ಚು ಹೆಚ್ಚು ಕೋಪ ಬರಿಸತೊಡಗಿತ್ತು. ಶಂಕರನ ಕೈಯಲ್ಲಿ ಗಂಗಾಳ ಬದುಕಿನ ಪೂರ್ತಾ ಕಡಿವಾಣ ಸಿಕ್ಕು ಹೋಗಿತ್ತು. ಆ ರೀತಿಯಲ್ಲಿ ಆತ ಮಾತನಾಡತೊಡಗಿದ್ದನು. ಗಂಗಾಗೆ ಈಗ ಮಧುವಿನಿಂದ ವಿಮುಖಳಾಗಬೇಕು ಎನ್ನುವ ಹಟಕ್ಕಿಂತ ಹೆಚ್ಚಾಗಿ ಮನೆ/ಮಗು/ಗಂಡ ಎಲ್ಲರನ್ನು ತೊರೆದು ಓಡಿ ಹೋಗಬೇಕು ಎಂದು ತೀವ್ರವಾಗಿ ಅನ್ನಿಸತೊಡಗಿತ್ತು. ಕೊನೆಯದಾಗಿ ಸಹಿಸಿಕೊಳ್ಳಲಾಗದೇ ಗಂಗಾ ಧಡಕ್ಕನೇ ಎದ್ದಳು. 'ನಾನು ಈ ಮಗು, ಮನೆ, ರಮೇಶ ಎಲ್ಲರನ್ನೂ ಬಿಟ್ಟು ಹೋಗಿಬಿಡುತ್ತೇನೆ. ನನಗೆ ಇದ್ಯಾವುದೂ ಬೇಡ, ನೀವೆಲ್ಲ ಏನು ಮಾಡುತ್ತೀರಿ?' ಎಂದು ಮನೆಯ ಬೀಗ ಹಿಡಿದು ಹೊರಗೆ ಬಂದಳು. ಏನು? ಎತ್ತ? ಎಂದು ಶಂಕರ ಕೇಳುವ ಮೊದಲೇ ಬಾಗಿಲಿಗೆ ಬೀಗ ಹಾಕಿ ಗಂಗಾ ಸರಸರನೇ ಎಲ್ಲಿಗೆ ಎನ್ನದೇ ನಡೆಯತೊಡಗಿದ್ದಳು. ಅವಳ ನಡಿಗೆಯಲ್ಲಿ ಎಲ್ಲಿಗೋ ಓಡಿ ಹೋಗುತ್ತೇನೆ ಎಂಬ ರೀತಿಯ ಅವಸರದ ನಡಿಗೆ ಇತ್ತು. ಇಪ್ಪತ್ತು ನಿಮಿಷ ನಡೆದಾದ ಮೇಲೆ ಗಂಗಾ ಒಂದು ಕ್ಷಣ ಹಾಗೆಯೇ ನಿಂತಳು. ತಾನೆಲ್ಲಿಗೆ ಹೊರಟಿದ್ದೇನೆ ಎಂಬುದು ಅವಳಿಗೇ ತಿಳಿದಿರಲಿಲ್ಲ. ಮಳೆ ಬೇರೆ ನಿಧಾನವಾಗಿ ಸುರಿಯಲು ಆರಂಭಿಸಿತ್ತು. ಆ ಮಳೆಯಲ್ಲಿ ನೆನೆ ನೆನೆದುಕೊಂಡೇ ಆಕೆ ನಡೆಯುತ್ತಲೇ ಇದ್ದಳು. ಮನಸ್ಸು ಉದ್ವೇಗದ ಸುಳಿಗೆ ಸಿಕ್ಕಿ

ಹಾಕಿಕೊಂಡಿತ್ತು. ಮನೆಗೆ ಮರಳಿ ಹೋಗಲೇಬಾರದು ಎಂದು ಗಂಗಾ ತೀರ್ಮಾನಿಸಿದ್ದಳು. ಆದರೆ ತಾನು ಹೋಗುವುದಾದರೂ ಎಲ್ಲಿಗೆ? ಬಸ್ ಸ್ಟ್ಯಾಂಡಿನಲ್ಲಿ ಸುಮ್ಮನೇ ಕುಳಿತಳು. ಮನಸ್ಸಿಗೆ ಏನೋ ಉದ್ವೇಗ, ಏನೋ ಹುಚ್ಚು ಆವೇಶ. ಎಲ್ಲಿಗಾದರೂ ದೂರ ಹೋಗಿಬಿಡಬೇಕು. ತಿರುಗಿ ಬರಲಾರದ ಹಾಗೆ ಹೊರಟು ಬಿಡಬೇಕು. ಆದರೆ ಹೋಗುವುದಾದರೂ ಎಲ್ಲಿಗೆ? ಗಂಗಾ ಅಲ್ಲಿ ಎಷ್ಟೋ ಹೊತ್ತು ಹಾಗೆಯೇ ಕೂತುಕೊಂಡಿದ್ದಳು. ಎಷ್ಟೋ ಬಸ್ ಬಂದವು, ಹೋದವು. ಗಂಗಾಳಿಗೆ ಮೈ ಮೇಲೆ ಎಚ್ಚರವಿಲ್ಲದ ಹಾಗೆಯೇ ಕುಳಿತುಬಿಟ್ಟಿದ್ದಳು. ಹಾಕಿಕೊಂಡಿದ್ದು ಒಂದು ನೈಟಿ ಮಾತ್ರ. ತಲೆ ಕೂಡಾ ಬಾಚಿರಲಿಲ್ಲ. ಗಂಗಾ ಹಾಗೆಯೇ ಎಷ್ಟೋ ಹೊತ್ತಿನ ತನಕ ಕುಳಿತೇ ಇದ್ದಳು. ಎಷ್ಟೋ ಜನ ವಿದ್ಯಾರ್ಥಿಗಳು/ ವಿದ್ಯಾರ್ಥಿನಿಯರು, ಪರಿಚಯಸ್ಥರು 'ಹಲೋ' ಎಂದಿದ್ದೂ ಕೂಡಾ ಆಕೆಯ ಕಿವಿಗೆ ಬಿದ್ದಂತಿರಲಿಲ್ಲ. ಮಳೆ ಇನ್ನೂ ಜೋರಾಗಿ ಸುರಿಯತೊಡಗಿತ್ತು. ಗಂಗಾಗೆ ತಾನು ಯಾರೂ ಇಲ್ಲದ ಅನಾಥೆ ಎಂಬ ಪ್ರಜ್ಞೆ ಬಲವಾಗಿ ಕಾಡತೊಡಗಿತ್ತು. ಮುಖ ಗರಬಡಿದವರ ಹಾಗೆ, ಬಸ್ ಸ್ಟ್ಯಾಂಡಿನಲ್ಲಿ ಇದ್ದೂ ಇಲ್ಲದವರ ಹಾಗೆ ಕುಳಿತೇ ಬಿಟ್ಟಿದ್ದಳು.

'ಅಮ್ಮಾ', 'ಅಮ್ಮಾ' ಎಂಬ ಶಬ್ದ ಗಂಗಾಳ ಕಿವಿಗೆ ಬಿದ್ದದ್ದು ಮಿತಾ ಬಂದು ಗಂಗಾಳನ್ನು ತಬ್ಬಿಕೊಂಡಾಗಲೇ. ರೈನ್ ಕೋಟ್ ಹಾಕಿಕೊಂಡು ಸ್ಕೂಲಿನಿಂದ ಆಯಾಳ ಜೊತೆ ನಡೆದು ಬರುತ್ತಿದ್ದ ಮಿತಾ ಆಕಸ್ಮಾತ್ ಆಗಿ ತಾಯಿ ಬಸ್‌ಸ್ಟ್ಯಾಂಡಿನಲ್ಲಿ ಕುಳಿತಿದ್ದನ್ನು ನೋಡಿದ್ದಳು. ಆಯಾ ಕರೆಯುತ್ತಿದ್ದರೂ ಗಮನಿಸದ ಹಾಗೆ ಓಡಿ ಬಂದು ಗಂಗಾಳನ್ನು ತಬ್ಬಿಕೊಂಡಿದ್ದಳು. ಅಷ್ಟು ದೂರದಲ್ಲಿಯೇ ಆಕೆ ಅಮ್ಮ, ಅಮ್ಮ ಎಂದು ಕರೆಯುತ್ತಿದ್ದರೂ ಯಾವುದೋ ಪ್ರಪಂಚದಲ್ಲಿದ್ದ, ಅಥವಾ ಯಾವುದೇ ಪ್ರಪಂಚದಲ್ಲಿಯೂ ಇರದಿರದ ಗಂಗಾಳ ಕಿವಿಗೆ ಅದು ಬಿದ್ದಿರಲಿಲ್ಲ. ಮಿತಾ ಬಂದು ತಬ್ಬಿಕೊಂಡಾಗಲೇ ಗಂಗಾ ವಾಸ್ತವ ಪ್ರಪಂಚಕ್ಕೆ ಬಂದದ್ದು. ಮಿತಾಳನ್ನು ನೋಡಿ ಆಗಲೇ ಸಾಯಂಕಾಲ ನಾಲ್ಕು ಘಂಟೆ ಆಗಿರಬಹುದೆಂದು ಊಹಿಸಿದಳು. ಕೆದರಿದ ತಲೆ, ನೈಟಿ..... 'ಅಮ್ಮಾ, ಇಲ್ಲಿ ಯಾಕೆ ಹೀಗೆ ಕುಳಿತುಕೊಂಡು ಇದ್ದೀಯ?' ಮಿತಾ ಗಂಗಾಳನ್ನು ಅವುಚಿಕೊಂಡೇ ಕೇಳಿದ್ದಳು. ಅಮ್ಮ ಅಲ್ಲಿಯೇ ಸಿಕ್ಕದ್ದು - ಮಿತಾಳಿಗೆ ಇಡಿಯ ಪ್ರಪಂಚವೇ ಕೈಗೆ ಸಿಕ್ಕಷ್ಟು ಸಂತೋಷವಾಗಿಬಿಟ್ಟಿತ್ತು. ಸ್ಕೂಲಿನಿಂದ ಬರುವಾಗ ತಾಯಿ ದಾರಿಯಲ್ಲಿ ಸಿಗುತ್ತಿದ್ದುದೇ ಅಪರೂಪ. ಇಂದು ತಾಯಿ ಅರ್ಧ ದಾರಿಯಲ್ಲಿಯೇ ಸಿಕ್ಕಿಬಿಟ್ಟಿದ್ದಾರೆ. ಆಕೆ ಗಂಗಾಳನ್ನು ಅವುಚಿಕೊಂಡೇ ಇದ್ದಳು. ಆಕೆಯ ಮುಖ ಗಂಗಾಳ ಮುಖಕ್ಕೆ ಅವುಚಿಕೊಂಡಿತ್ತು. 'ಅಮ್ಮಾ, ಅಮ್ಮಾ' ಎನ್ನುತ್ತಾ ತನ್ನ ಸಂತೋಷಕ್ಕೆ ಮಿತಾ ಗಂಗಾಳ ಮುಖವನ್ನು ತನ್ನ ಮುಖದಿಂದ ಸವರುತ್ತಲೇ ಇದ್ದಳು. 'ಅಮ್ಮಾ, ಅಮ್ಮಾ ಇಲ್ಲಿ ಯಾಕೆ ಕೂತಿದೀಯಮ್ಮ' ಎಂದು ಪದೇ ಪದೇ ಮಿತಾ ಪೀಡಿಸತೊಡಗಿದಾಗ ಗಂಗಾ ಆಕೆಯನ್ನು ಕರೆದೊಯ್ಯಲಿಕ್ಕಾಗಿಯೇ ಬಂದಿದ್ದಾಗಿ ನುಡಿದಳು. ಮಳೆ ಬರುತ್ತಿದ್ದರಿಂದ ಅಲ್ಲಿಯೇ ಕುಳಿತುದಾಗಿ ನುಡಿದಳು. 'ಮಳೆ ನಿಂತ ಮೇಲೆ ಮನೆಗೆ ಹೋಗೋಣ, ಇಲ್ಲಿಯೇ ಕುಳಿತುಕೋ ಪುಟ್ಟಿ' ಎಂದಳು. ಆಯಾ ಆಗಲೇ ಹೊರಟು ಹೋಗಿದ್ದಳು. ಮಿತಾ 'ಅಮ್ಮಾ, ನಾನು ನೆನೆಯುವುದೇ ಇಲ್ಲ, ನನ್ನ ಹತ್ತಿರ ರೈನ್ ಕೋಟ್ ಇದೆ' ಎಂದಳು. 'ನನ್ನ ಹತ್ತಿರ ಇಲ್ವಲ್ಲ ಪುಟ್ಟು' ಎಂದ ಮೇಲೆ 'ಹೌದಲ್ವಾ, ಅಮ್ಮಾ' ಎಂದು ಕಡಲೆಕಾಯಿ ಮಾರುವವನತ್ತ ಕೈ ತೋರಿಸಿದಳು. 'ಸರಿ' ಎಂದು ಗಂಗಾ ಬೀಗದ ಕೈ ಇಟ್ಟುಕೊಂಡಿದ್ದ ಪರ್ಸ್ ತೆಗೆದಳು. ಕೇವಲ 10 ರೂ ಮಾತ್ರ ಇತ್ತು. ಕಡಲೆಕಾಯಿಯವನನ್ನು ಕರೆದು 2ರೂಗೆ ಕೊಡು ಎಂದಳು. ಮಿತಾ ರೈನ್ ಕೋಟ್‌ನ ಜೇಬಿನಲ್ಲಿ ಕಡಲೇಕಾಯಿ ತುಂಬಿಸಿಕೊಂಡು ಕಡಲೇಬೀಜ ಬಿಡಿಸಿ ತಿನ್ನತೊಡಗಿದಳು. ಗಂಗಾಗೆ ಈಗ ಮನಸ್ಸು ಮನೆಯ ಕಡೆಗೆ ಓಡಿತ್ತು. ಶಂಕರನ ಮಾತಿನಿಂದ ಬೇಸರವಾಗಿ ಎಲ್ಲಿಗಾದರೂ ಓಡಿ ಹೋಗಿಬಿಡಬೇಕು ಎಂದು ಹೊರಟವಳು ಗಂಗಾ. ಮಿತಾ,

ರಮೇಶ, ಶಂಕರ ಯಾರೂ ಬೇಡ ಎಂದೆನಿಸಿತ್ತು ಮನಸ್ಸಿಗೆ. ಐದಾರು ಬಸ್ಸುಗಳು ಆಕೆಯ ಕಣ್ಣ ಮುಂದೆಯೇ ಹಾಸಿ ಹೋಗಿದ್ದರೂ ಎಲ್ಲಿಗೆ ಹೋಗಬೇಕೆಂಬುದನ್ನು ನಿರ್ಧರಿಸಲಾಗದೇ ಹಾಗೆಯೇ ಕುಳಿತಿದ್ದಳು. ಬೆಳಿಗ್ಗೆ ಇದ್ದಕ್ಕಿದ್ದಂತೆಯೇ ಹೊರಟು ಬಂದಿದ್ದರಿಂದ ಅಡಿಗೆಯ ಬಗ್ಗೆ ಆಕೆ ಯೋಚಿಸಿಯೇ ಇರಲಿಲ್ಲ. ಮಿತಾ ಊಟ ಮಾಡಬೇಕು. ಮನೆಗೆ ಹೋದಾಕ್ಷಣ 'ಹಸಿವು' ಎನ್ನುತ್ತಾಳೆ. ಗಂಗಾಗೆ ಆ ಕ್ಷಣಕ್ಕೆ ಎಲ್ಲವೂ ಮರೆತುಹೋದ ಹಾಗೆ ಅನ್ನಿಸತೊಡಗಿತ್ತು. ಮನೆಯಲ್ಲಿ ತರಕಾರಿ ಏನೂ ಇರಲಿಲ್ಲ. ಟೊಮ್ಯಾಟೋ ಮಾತ್ರ ಇರುವುದು. ಅದನ್ನೇ ಬೇಳೆಗೆ ಹಾಕಿ ಕುಕ್ಕರ್‌ನಲ್ಲಿ ಇಟ್ಟುಬಿಡಬಹುದು. ಆದರೂ ಅಡಿಗೆ ಆಗುವುದಕ್ಕೆ ಅರ್ಧ ಘಂಟೆಯಾದರೂ ಬೇಕು. ಗಂಗಾ ಒಂದು ಕ್ಷಣ ಏನು ಮಾಡುವುದೆಂದು ಆಲೋಚಿಸಿದಳು. ಬೇಗ ಮನೆಗೆ ಹೋದರೆ ಬೇಗ ಅಡಿಗೆ ಮಾಡಿ ಮಗುವಿಗೆ ಬಡಿಸಬಹುದು ಎನ್ನಿಸತೊಡಗಿತು. ಗಂಗಾ ತಕ್ಷಣ ಎದ್ದು ನಿಂತಳು. 'ಹೋಗೋಣ ಬಾ ಪುಟ್ಟಿ' ಎಂದಳು. 'ಅಮ್ಮಾ, ಮಳೆ ಇನ್ನೂ ಜೋರಾಗಿದೆ, ನೀನು ತೊಯ್ದುಬಿಡುತ್ತೀಯ' ಎಂದು ಕೈ ಚಾಚಿ ಮಳೆ ನೀರನ್ನು ಹಿಡಿಯುತ್ತಾ ನುಡಿದಿದ್ದಳು ಮಿತಾ. 'ಇರಲಿ ಬಾ ಪುಟ್ಟಿ' ಎಂದು ಗಂಗಾ ಮಿತಾಳ ಕೈ ಹಿಡಿದು ಹೊರಟಳು. ದಾರಿಯಲ್ಲಿದ್ದ ಬೇಕರಿಯಲ್ಲಿ ಬ್ರೆಡ್ ತೆಗೆದುಕೊಂಡಳು. ಹೀಗೇ ಮಗುವಿನ ಕೈ ಹಿಡಿದು ಮನೆಯತ್ತ ಹೆಜ್ಜೆ ಹಾಕುವಾಗ ದಾರಿಯಲ್ಲಿ ಶಂಕರ ಮಧುವಿನ ಮನೆಯ ಕಡೆಯಿಂದ ಬರುವುದು ಕಂಡಾಗ ಗಂಗಾಗೆ ಶಾಕ್ ಆಯಿತು. ಶಂಕರ ಬರಿಯ ರಮೇಶ್ ಹಾಗೂ ತನ್ನ ಮಧ್ಯೆ ಮಾತ್ರ ಸಂಧಾನ ನಡೆಸುತ್ತಿಲ್ಲ. ಈಗ ಮಧುವಿನ ಮಧ್ಯವೂ ಇನ್ನೇನೋ ಸಂಧಾನ ನಡೆಸಲು ಪ್ರಯತ್ನಿಸುತ್ತಿದ್ದಾನೆ, ಅವನ ಮನೆ ಹುಡುಕಿಕೊಂಡು ಹೋಗಿದ್ದಾನೆ ಎನ್ನಿಸಿದಾಗ ಗಂಗಾಗೆ ಒಂದು ಕ್ಷಣ ತಲೆ ತಿರುಗಿದ ಹಾಗೆ ಆಗಿತ್ತು. ಮಗುವನ್ನು ಗಟ್ಟಿಯಾಗಿ ಹಿಡಿದುಕೊಂಡೇ ಗಂಗಾ ಮನೆಗೆ ಬಂದಿದ್ದಳು. ಮಗುವಿಗೆ ಬ್ರೆಡ್, ಜಾಮ್ ಹಚ್ಚಿಕೊಟ್ಟ ಮೇಲೆ ಅಡಿಗೆಯ ಉಸಾಬರಿಗೇ ಹೋಗಲಿಲ್ಲ. ತಾನೂ ಕೂಡಾ ಬೆಳಿಗ್ಗೆಯಿಂದ ಏನೂ ತಿಂದಿಲ್ಲ ಎಂಬ ಅಂಶ ಕೂಡಾ ಗಂಗಾಳ ಗಮನಕ್ಕೆ ಬಂದಿರಲಿಲ್ಲ. ಮಿತಾ ಬ್ರೆಡ್-ಜಾಮ್ ತಿನ್ನುತ್ತಲೇ ಡ್ರಾಯಿಂಗ್ ಬರೆಯಲು ಪ್ರಾರಂಭಿಸಿದಾಗ ಗಂಗಾಗೆ ಒಂದು ಕ್ಷಣ ನಿರಾಳ ಎನ್ನಿಸಿತು. ಚಳಿಗೆ ನಡುಗುತ್ತಿರುವ ಮಗಳಿಗೆ ಒಂದು ಲೋಟ ಕಾಫಿ ಮಾಡಿಕೊಟ್ಟು ತಾನೂ ಕುಡಿದಳು. ಅಡಿಗೆ ಮಾಡಲು ಬೇಸರವೆನಿಸಿ ಹಾಗೆಯೇ ಹಾಸಿಗೆಯ ಮೇಲೆ ಒರಗಿದಳು. ಡ್ರಾಯಿಂಗ್ ಬರೆಯುವುದರಲ್ಲಿ ತಲ್ಲೀನಳಾಗಿ ಹೋಗಿದ್ದ ಮಿತಾ ತಾಯಿಯ ಕಡೆಗೆ ಗಮನವನ್ನೇ ಕೊಡಲಿಲ್ಲ. ಗಂಗಾ ಹಾಗೆಯೇ ದಿಂಬಿನ ಮೇಲೆ ಒರಗಿದಳು. ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಯತೊಡಗಿತ್ತು. ತನ್ನ ಬದುಕಿನ ಇಡಿಯ ಯಜಮಾನಿಕೆಯನ್ನು ಶಂಕರನ ಕೈಯಲ್ಲಿ ಕೊಡುವಷ್ಟು ಬಾಂಧವ್ಯದ ನಂಟು ತಮ್ಮೀರ್ವರ ನಡುವೆ ಇರಬಾರದಿತ್ತು ಎಂದು ಗಂಗಾಳಿಗೆ ಅನ್ನಿಸತೊಡಗಿತ್ತು. ತಮ್ಮೀರ್ವರ ನಡುವೆ ಇರಬೇಕಾದ distance ಒಂದನ್ನು ಇಟ್ಟುಕೊಳ್ಳುವುದರಲ್ಲಿ ತಾನು ಸೋತು ಹೋದೆನೇನೋ ಎಂಬ ವಿಚಾರ ಆಕೆಯ ಒಳಮನಸ್ಸಿನಲ್ಲಿ ಕುದಿಯತೊಡಗಿತ್ತು. ಮಧುವನ್ನು ದೂರ ಸರಿಸಿ ಸುಮ್ಮನಾಗಿಬಿಡುವ ಹಾಗೂ ಇಡಿಯ ಸನ್ನಿವೇಶವನ್ನು ಕೈಗೆ ತೆಗೆದುಕೊಂಡುಬಿಡುವ ಗಂಗಾಳ ನಿರ್ಧಾರವೆಲ್ಲಾ ಗಾಳಿಗೆ ತೂರಿ ಹೋದಂತೆ ಆಗಿತ್ತು. ಶಂಕರ ಮಧುವಿನ ಮನೆಯ ಕಡೆಯಿಂದ ಬಂದದ್ದನ್ನು ಗಮನಿಸಿದ ಗಂಗಾಳ ಮನಸ್ಸೆಲ್ಲಾ ಕದಡಿ ಹೋಗಿತ್ತು. ಮಧು ಶಾಂತವಾಗಿ ಹಿಂದೆ ಸರಿಯಲು ಉದ್ದೇಶಿಸಿದ್ದ. ಆ ಇಡಿಯ ಸಂದರ್ಭದಲ್ಲಿ ಮೇಡಂ ಬಲಿಪಶುಯಾಗುತ್ತಾರೆ ಎಂದು ತಿಳಿದ ಮೇಲೆ ಗಂಗಾಳಿಂದ ಪೂರ್ಣವಾಗಿ ದೂರ ಇರಬೇಕೆಂದು ಆತ ಆಶಿಸಿದ್ದ. ಗಂಗಾ-ರಮೇಶರ ಹತ್ತಿರ ಎಲ್ಲವನ್ನೂ ಹೇಳಿದ ಮೇಲೆ ಇನ್ನು ಏನೂ ಇಲ್ಲದಿರುವ ಕ್ರಿಯೆಗಳಿಗೂ ಏನಾದರೂ ಅಪಾರ್ಥ ಹಚ್ಚಬಹುದು ಎಂದೂ ಅವನಿಗೆ ಅನ್ನಿಸಿತ್ತು. ತನ್ನಿಂದಾಗಿ, ತನ್ನ ಸ್ವಾರ್ಥಕ್ಕಾಗಿ ಸುಂದರವಾಗಿರುವ ಗಂಗಾ/ರಮೇಶ್/ಮಿತಾರ ನಡುವಿನ ಸಂಬಂಧ ಹಾಳಾಗುವುದು ಮಧುವಿಗೆ

ಇಷ್ಟವಿರಲಿಲ್ಲ. ಹಾಗಾಗಿ ಗಂಗಾಳಿಂದ ದೂರ ಸರಿಯಬೇಕೆಂದು ಆತ ತಕ್ಷಣವೇ ನಿರ್ಧರಿಸಿದ್ದ. ಸಂದರ್ಭ ಇನ್ನಷ್ಟು ಸಂಕೀರ್ಣವಾಗುವ ಮೊದಲು ಗಂಗಾಳಿಂದ ದೂರ ಸರಿಯುವುದು ಎಲ್ಲದಕ್ಕೂ ಉತ್ತರವಾಗಬಹುದೆಂದು ಆಶಿಸಿದ್ದ. ಆದರೆ ಶಂಕರ ಮಧುವಿನ ಮನೆಯ ಕಡೆಯಿಂದ ಬರುವುದನ್ನು ಕಂಡ ಮೇಲೆ ಗಂಗಾಳ ಮನಸ್ಸಿಗೆ ತಡೆಯದಾಯಿತು. ಮರುದಿನವೂ ಗಂಗಾ ಕಾಲೇಜಿಗೆ ಹೋಗಲಿಲ್ಲ. ಬದಲಾಗಿ ಮಧುವಿನ ಮನೆಗೆ ಹೋಗುವುದು ಎಂದು ನಿರ್ಧರಿಸಿದಳು. ರಾತ್ರಿ ರಮೇಶ ಗಂಗಾಳ ಹತ್ತಿರ ಕೂತು ಮಾತನಾಡಲು ಪ್ರಯತ್ನಿಸಿದ್ದ. ಗಂಗಾಳಿಗೆ ಹೊಡೆದುದರ ಬಗ್ಗೆ ಎಲ್ಲಿಯೋ ಪಾಪಪ್ರಜ್ಞೆ ಆತನಲ್ಲಿ ಕಾಡತೊಡಗಿತ್ತು. ಶಂಕರನ ಹತ್ತಿರ ಹೋಗಿ ಮಾತನಾಡಿದ್ದು ತಪ್ಪಾಗಿ ಹೋಯಿತೇನೋ ಎಂದು ಆತನಿಗೆ ಅನ್ನಿಸತೊಡಗಿತ್ತು. ಗಂಗಾ ತನ್ನೊಳಗೇ ಗೊಂದಲವಿದೆ ಎನ್ನುವುದನ್ನು ಬಾಯಿಬಿಟ್ಟೇ ಹೇಳಿದ್ದಳು. ಮಧುವಿನಿಂದ ದೂರವಾಗುವ ಆಶಯವನ್ನು ವ್ಯಕ್ತಪಡಿಸಿದಳು. ತಮ್ಮ ಮೂವರ ನಡುವಿನ integrity ಕಾಪಾಡುವುದು ಅಗತ್ಯ ಎಂದು ಹೇಳಿದ್ದಳು. ಇಷ್ಟಾದ ಮೇಲೂ ತಾನು ಕಲ್ಲಿನಂತೆ ವರ್ತಿಸಿದ್ದು ಸರಿಯಲ್ಲವೇನೋ ಎಂದು ಆತನಿಗೆ ಅನ್ನಿಸತೊಡಗಿತ್ತು. ಇಡಿಯ ಸಂದರ್ಭವನ್ನು ಗಂಡಸಿನಂತೆ ಎದುರಿಸಬೇಕೆಂಬುದು ಶಂಕರ ಕಲಿಸಿದ ಸತ್ಯ. ಪರೋಕ್ಷವಾಗಿ ಶಂಕರನಿಂದ ಕಲಿತ ಸತ್ಯದಿಂದ ಗಂಗಾಳನ್ನು, ಗಂಗಾಳ ಮನಸ್ಸನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವುದು ಸಾಧ್ಯವಿಲ್ಲವೇನೋ ಎಂದು ಅನ್ನಿಸಿದ ಮರುಕ್ಷಣದಲ್ಲಿ ರಮೇಶ ಮತ್ತೆ ತನ್ನ Original Selfಗೇ ಕೈ ಹಾಕಿ ನೋಡಲು ಪ್ರಯತ್ನಿಸಿದ್ದ. 'Let us look back and see our life again' ಎನ್ನುವ ಧೋರಣೆಯನ್ನು ರಮೇಶ ನಿಧಾನವಾಗಿ ತಾಳ ತೊಡಗಿದ್ದ. ತನ್ನೆಲ್ಲ ಭಾವನೆಗಳನ್ನು ತನ್ನ ಕೈಗೇ ತೆಗೆದುಕೊಳ್ಳಲು ರಮೇಶ ನಿಧಾನವಾಗಿ ಪ್ರಯತ್ನಿಸತೊಡಗಿದ್ದ. ಹಾಗೆಯೇ ತನ್ನ ಮನಸ್ಸಿಗನ್ನಿಸುವುದನ್ನು ತಾನೇ ಗಂಗಾಳ ಹತ್ತಿರ ಕುಳಿತು ಮಾತನಾಡಿ ತೀರ್ಮಾನಿಸಿಕೊಳ್ಳಬೇಕು, ಸಮರ್ಥಿಸಿಕೊಳ್ಳಬೇಕು ಎಂದು ಅನ್ನಿಸತೊಡಗಿತ್ತು. ಹಾಗಾಗಿ ಎರೆಡು ದಿನದ ಹಂತದಲ್ಲಿ ತನ್ನೊಳಗೇ ತಾನಿದ್ದು ಯೋಚಿಸತೊಡಗಿದ್ದ. ತನ್ನ ಮನಸ್ಸಿನೊಳಗಿರುವುದನ್ನು ತಾನೇ ಗಂಗಾಳ ಹತ್ತಿರ ಕುಳಿತು ಮಾತಾಡಿ ಸಮರ್ಥಿಸಿಕೊಳ್ಳಬೇಕೆಂದು ಆತನಿಗೆ ಅನ್ನಿಸತೊಡಗಿತ್ತು. ಯಾರೂ ಇಲ್ಲದೇ ತಾನೊಬ್ಬನೇ ಈ ಸಂಬಂಧವನ್ನು ನಿಭಾಯಿಸುವುದು ಹೇಗೆ ಎನ್ನುವುದು ಆತನ ಎದುರಿಗಿದ್ದ ಪ್ರಶ್ನೆಯಾಗಿತ್ತು. ಗಂಗಾಳನ್ನು ಕಳೆದುಕೊಳ್ಳುವುದನ್ನು ಆತ ಕನಸು-ಮನಸಿನಲ್ಲಿಯೂ ಎಣಿಸಲಾರ. ಹಾಗಾಗಿ ಹೇಗೆ ಮುಂದಿನ ಬದುಕು ರೂಪಿಸುವುದು, ಹೇಗೆ ತನ್ನ ಸಂಸಾರದಲ್ಲಿ ಒಂದು ರೀತಿಯ integrity ತರುವುದು, ಹೇಗೆ ಮೊದಲಿದ್ದ ಸುಂದರತೆ ತರುವುದು ಎನ್ನುವುದೇ ಆತನ ಯೋಚನೆಯಾಗಿತ್ತು. ಗಂಗಾ ಈಗ ರಮೇಶನ ಬಗ್ಗೆ ಯೋಚಿಸುವುದಕ್ಕಿಂತ ಹೆಚ್ಚಾಗಿ ಮಧುವಿನ ಬಗ್ಗೆಯೇ ಯೋಚಿಸತೊಡಗಿದ್ದಳು. ಶಂಕರ ಏನು ಹೇಳಿರಬಹುದು? ಮಧುವಿನ ಹತ್ತಿರ ಏನನ್ನು ಮಾತನಾಡಿರಬಹುದು? ಇಂತಹ ಸಂದರ್ಭಗಳನ್ನೇ ಎದುರಿಸದ ಮಧು ಇದನ್ನು ಹೇಗೆ ಎದುರಿಸಿರಬಹುದು? ಶಂಕರ ಸಾವಧಾನದಿಂದ ಮಾತನಾಡುವುದಿಲ್ಲ. ಅವನ ಕೋಪ ಅವನ ಕೈಯಲ್ಲೇ ಇರುವುದಿಲ್ಲ. ಘಾಸಿಯಾಗುವಂತಹ ಮಾತುಗಳನ್ನೇ ಆತ ಆಡುವುದು. ನಿಧಾನವಾಗಿ ಬಿಡಿಸಿ ಮಾತನಾಡುವ ಜಾಯಮಾನ ಆತನದ್ದಲ್ಲ. ಅಲ್ಲಿ ಹೋಗಿ ಜೋರಾಗಿ ಮಾತನಾಡಿರುತ್ತಾನೆ. ಇವೆಲ್ಲ ಯೋಚಿಸಿದಾಗ ಗಂಗಾಗೆ ತಲೆ ತಿರುಗಿದ ಹಾಗೆ ಆಗುತ್ತದೆ. ಮಹಾ ಪಾಪಿಷ್ಠರು ಎನ್ನುವ ರೀತಿಯೇ ಆತ ಮಾತನಾಡುವುದು. ಆತನ ಮಾತುಗಳಿಂದ ಚೇತರಿಸಿಕೊಳ್ಳುವುದಕ್ಕೆ ಬಹಳ ಸಮಯವೇ ಬೇಕಾಗುತ್ತದೆ. ರಮೇಶ/ಮಿತಾ ಹೊರಟು ಹೋದ ಮೇಲೆ ಗಂಗಾ ಮಧುವಿನ ಮನೆಯತ್ತ ನಡೆದಳು. ಹೋಗಲೇ ಬಾರದೆಂದು, ಮಧುವನ್ನು ಮತ್ತೆ ಭೇಟಿಯಾಗಲೇಬಾರದೆಂದು ಗಂಗಾ ನಿರ್ಧರಿಸಿದ್ದಳು. ಮಧುವೇ ಹೇಳಿದ್ದು - ಏನೂ ಇಲ್ಲದ ಕಡೆಯೂ ಅನುಮಾನಗಳು, ಅಪಾರ್ಥಗಳೇ

ಹುಟ್ಟಿಕೊಳ್ಳುವುದು ಹೆಚ್ಚು ಎಂದು. ಇಷ್ಟೆಲ್ಲ ಜೀವನ ಕಂಡಿರುವ ತನಗೇ ಶಂಕರನ ಮಾತುಗಳನ್ನು ಅರಗಿಸಿಕೊಳ್ಳುವುದು ಕಷ್ಟ. ಇನ್ನು ಮಧು? ಒಂದು ಕ್ಷಣ ಮಧುವನ್ನು ನೋಡಿಬಿಡೋಣವೆಂದು ಆತನ ಮನೆಯ ಕಡೆಗೆ ಹೊರಟಳು. ಮಧುವಿನ ಮನೆಯ ಬಾಗಿಲು ಹಾಕಿತ್ತು. ಎಷ್ಟು ಹೊತ್ತು ಬಾಗಿಲು ತಟ್ಟಿದರೂ ಮಧು ಹೊರಗೇ ಬರಲಿಲ್ಲ. ಅವನು ಇಲ್ಲವೇನೋ ಎಂದುಕೊಂಡು ಗಂಗಾ ಎಷ್ಟೋ ಹೊತ್ತಿನವರೆಗೆ ಅಲ್ಲಿಯೇ ನಿಂತಿದ್ದಳು. ಎಷ್ಟೋ ಹೊತ್ತಿನ ನಂತರ ಮಧು ಬಾಗಿಲು ತೆರೆದ. ಅವನ ಕಣ್ಣುಗಳು ಕೆಂಪಾಗಿದ್ದವು. ಚೆನ್ನಾಗಿ ಕುಡಿದು ಮಲಗಿದ್ದನೇನೋ ಎಂದು ಗಂಗಾಗೆ ಅನುಮಾನವಾಯಿತು. ಮತ್ತೊಂದು ಕೋಣೆಯೊಳಗೆ ರಮ್ ಬಾಟಲೆಲ್ಲಾ ಅಲ್ಲಿ-ಇಲ್ಲಿ ಬಿದ್ದಿದ್ದವು. ಹಾಸಿಗೆ ದಿಕ್ಕಾಪಾಲಾಗಿತ್ತು. ಪಾತ್ರೆಗಳೆಲ್ಲ ಅಲ್ಲಿ-ಇಲ್ಲಿ ಬಿದ್ದಿದ್ದವು. ಮಧು ಒಳಗೆ ಬನ್ನಿ ಎನ್ನಲಿಲ್ಲ. ಕುಳಿತುಕೊಳ್ಳಿ ಎನ್ನಲಿಲ್ಲ. ಆತನ ಪಾಡಿಗೆ ತಲೆಗೆ ಕೈಕೊಟ್ಟು ಕುಳಿತುಕೊಂಡ. ಅವನ ಮುಖದ ಮೇಲೆ ಹೆಣದ ಕಳೆ ಕಾಣಿಸತೊಡಗಿತ್ತು. ಗಂಗಾರ ಅಪ್ಪುಗೆಯಲ್ಲಿ ಇಡಿಯ ಲೋಕವನ್ನೇ ಮರೆಯುವ ಒಂದು ಕ್ಷಣದ ಉನ್ಮಾದ ಅವನ ಎದೆಯಲ್ಲಿ, ಹೃದಯದಲ್ಲಿ ಪ್ರೇಮವಾಗಿ, ಆನಂದವಾಗಿ ಹೆಪ್ಪುಗಟ್ಟಿತ್ತು. ಅದೆಲ್ಲಾ ಕರಗಿ ಹೋಗುವಂತಹ ಚೂರು ಚೂರಾಗುವಂತಹ ಮಾತುಗಳನ್ನು ಶಂಕರ ಆಡಿದ್ದ. 'ಅವರ ಸಂಸಾರದಲ್ಲಿ ಹುಳಿ ಹಿಂಡಲಿಕ್ಕೆಂದೇ ನೀವು ಬಂದದ್ದು, ಅವರ ಮನೆಗೆ ದೀಪದ ವ್ಯವಸ್ಥೆ ಮಾಡುವ ನೆಪದಲ್ಲಿ ರಮೇಶನ ಬೆನ್ನಿಗೆ ಚೂರಿ ಹಾಕಲು ನೀವು ಪ್ರಯತ್ನಿಸಿದ್ದೀರಿ, ಇತ್ಯಾದಿ'. ಮಧು ಅದೆಲ್ಲಾ ಆಕಸ್ಮಿಕ ಎಂದು ಹೇಳಲು ಪ್ರಯತ್ನಿಸಿದ್ದೆಲ್ಲ ಶಂಕರನ ಎದುರು ವ್ಯರ್ಥವಾಗಿತ್ತು. "ನೀವು ದೀಪದ ನೆಪದಲ್ಲಿ ಎಂದು ಹೇಳಬೇಡಿ, ಅವರ ಮನೆಗೆ ದೀಪದ ವ್ಯವಸ್ಥೆ ಮಾಡುವಾಗ ನನ್ನಲ್ಲಿ ಎಂತಹ ಭಾವನೆಗಳೂ ಇರಲಿಲ್ಲ" ಎಂದು ಮಧು ಹೇಳಲು ಪ್ರಯತ್ನಿಸಿದಷ್ಟು ಶಂಕರ ಮಧುವನ್ನು ನಂಬಲು ಸಿದ್ಧನಿರಲಿಲ್ಲ. "ನಾಳೆ ನಿಮಗೆ ಮದುವೆಯಾದರೆ ನಿಮ್ಮ ಹೆಂಡತಿಯನ್ನು ಬೇರೆಯವರ ಬಳಿ ಮಲಗಲು ಕಳಿಸುತ್ತೀರಾ?" ಎನ್ನುತ್ತಾನೆ. "ನೀವು ಇಲ್ಲಿದ್ದರೆ ಇದು ಗಂಗಾ-ರಮೇಶರ ಮಧ್ಯೆ ಬಿರುಕುಂಟು ಮಾಡುತ್ತದೆ. ಹಾಗಾಗಿ ನೀವು ಜಾಗ ಖಾಲಿ ಮಾಡಲೇಬೇಕು" ಇವೆಲ್ಲ ಮಧುವಿನ ಕಿವಿಗೆ ಕಾದ ಎಣ್ಣೆ ಹೊಯ್ದ ಹಾಗೆ ಎನಿಸಿತ್ತು. ಮಧು ಅಪಾಲಜಿಟಿಕ್ ಆಗಿ ತಾನು ಗಂಗಾರವರನ್ನು ಅಪ್ಪಿದ ದಿನಾಂಕ ಸಹ ಹೇಳಿ - ಅಷ್ಟು ಬಿಟ್ಟರೆ ತಮ್ಮಿಬ್ಬರ ಮಧ್ಯದ ಸಂಬಂಧ ತೀವ್ರವಾದುದಲ್ಲ ಎಂದ. ಅದೂ ಕೂಡಾ ಆಕಸ್ಮಿಕ. ಹೀಗೆ ಸತ್ಯವನ್ನೇ ಹೇಳಿ ಮಧು ಶಂಕರನನ್ನು ಸಮಾಧಾನ ಮಾಡಲು ಪ್ರಯತ್ನಿಸಿದ್ದನು. ಆದರೆ ಶಂಕರ ಆತನಿಗೆ ಮಾತನಾಡುವ ಅವಕಾಶವನ್ನೇ ಕೊಟ್ಟಿರಲಿಲ್ಲ. ತಾನೇ ಹೆಚ್ಚು ಮಾತನಾಡಿದ್ದನು. 'ಗಂಗಾ ನಿಮ್ಮಂತಹ ಎಷ್ಟೋ ಜನ ಹುಡುಗರನ್ನು ಬೀದಿಯಲ್ಲಿ ಬಿಸಾಕಿದ್ದಾಳೆ, ಇವತ್ತು ರಮೇಶನಿಗೆ ಮೋಸ ಮಾಡಿದರೆ, ನಾಳೆ ನಿಮಗೂ ಮೋಸ ಮಾಡುತ್ತಾಳೆ. ನೀವಿಬ್ಬರು ಏನು ಮಾಡಬೇಕೆಂದಿದ್ದೀರಿ?' ಯಾಕೋ ಮಧುವಿಗೆ ಶಂಕರನ ಮಾತುಗಳು ವಿಪರೀತ ಎನ್ನಿಸತೊಡಗಿತ್ತು. ದೈಹಿಕವಾಗಿ ತನ್ನನ್ನು ಮುಟ್ಟಿದ ಕ್ಷಣದಿಂದ ಗಂಗಾ ತನಗೆ ಹತ್ತಿರವಾಗಲು ಪ್ರಯತ್ನಿಸಿರಲಿಲ್ಲ. ತನ್ನಿಂದ ದೂರವಾಗಲು ಬಯಸಿದ್ದೇ ಹೆಚ್ಚು. ಹಾಗಾಗಿ ನೀವಿಬ್ಬರೂ ಏನು ಮಾಡಬೇಕೆಂದಿದ್ದೀರಿ ಎಂದು ಶಂಕರ ಕೇಳಿದಾಗ ತಾನೇನು ಹೇಳಬಹುದಿತ್ತು? ಗಂಗಾ ಮಧುವಿಗೆ ಗುಡ್‌ಬೈ ಹೇಳಲು ನಿರ್ಧರಿಸಿ ಅನೇಕ ದಿನಗಳೇ ಕಳೆದು ಹೋಗಿದ್ದವು. ಅದನ್ನು ಶಂಕರ ನಂಬುವುದೇ ಇಲ್ಲ. ಗಂಗಾಳನ್ನು ಗಂಗಾ ಅಥವಾ ಮಧುವಿನ ಸಂಬಂಧದಲ್ಲಿ ಮಾತ್ರ ನೋಡಿರಲಿಲ್ಲ. ಗಂಗಾಗೆ ಒಂದು ಚರಿತ್ರೆಯಿದೆ. ಆ ಚರಿತ್ರೆಯಲ್ಲಿ ಸಾಕಷ್ಟು ಹುಡುಗರು ಬಂದು ಹೋಗಿದ್ದಾರೆ. ಶಂಕರ ಬಲ್ಲ ಗಂಗಾಳ ಚರಿತ್ರೆ ಮಧುವಿಗೆ ಗೊತ್ತಿದ್ದಾದರೂ ಅವನ ಅರ್ಥದಲ್ಲಿ ಗಂಗಾ ಅವನಿಗೆ ದಕ್ಕಿದಷ್ಟು ಮಾತ್ರ ನಿಜವಾದ್ದು ಆಗಿತ್ತು. ಇಂದು ಗಂಗಾ ಆತ್ಮೀಯ ಎನಿಸಿದರೂ ರಮೇಶ/ಮಿತಾ/ಗಂಗಾರ ನಡುವಿನ integrity ಹಾಳು

ಮಾಡಬಾರದೆಂದು ಆತ ಅವರಿಂದ ದೂರ ಸರಿಯಲು ಪ್ರಯತ್ನಿಸಿದ್ದ. ಇದೆಲ್ಲ ಶಂಕರ ಶಾಂತವಾಗಿ ಕೇಳಿದ್ದರೆ ಆತನಿಗೂ ಒಂದು ಕ್ಷಣ ಇರಬಹುದೇನೋ ಎನ್ನಿಸಿಬಿಡುತ್ತಿತ್ತೋ ಏನೋ? ಆದರೆ ರಮೇಶ ಕಳೆದುಕೊಂಡುದಕ್ಕಿಂತ ಹೆಚ್ಚಾಗಿ ಮನಃಶ್ಯಾಂತಿಯನ್ನು ಶಂಕರ ಕಳೆದುಕೊಳ್ಳತೊಡಗಿದ್ದನು. ಮಧು ಇದೆಲ್ಲಾ ಹೇಳುವಾಗ ಜೋರಾಗಿಯೇ ಅಳತೊಡಗಿದ್ದ. ಸಂಬಂಧಗಳಲ್ಲಿನ ಇಂತಹ ಸಿಕ್ಕುಗಳ ಪರಿಚಯ ತನಗೆ ಇಲ್ಲವೇ ಇಲ್ಲ ಎಂದ. "ಮೇಡಂ, ಮತ್ತೆ ನೀವು ನನ್ನನ್ನು ಹುಡುಕಿಕೊಂಡು ಬರಬಾರದಿತ್ತು. ಇದು ಯಾರಿಗೂ ಒಳ್ಳೆಯದಲ್ಲ" ಎಂದ. 'ನೀವ್ಯಾಕೆ ಇಲ್ಲಿಗೆ ಬರಹೋದಿರಿ?' ಎಂದ. ಮತ್ತೆ ಮಧು ತನ್ನ ತಂದೆ-ತಾಯಿಯ ಬಗ್ಗೆ ಮಾತನಾಡತೊಡಗಿದ್ದ. ಆಗೀಗ ಮಾತ್ರ ತಾನು ನೋಡಿದ ಶಂಕರ ಹಾಗೆ ಬಯ್ಯುತ್ತಿದ್ದರೆ ಬೆಂಗಳೂರಿನಲ್ಲಿ ತಾನೊಬ್ಬ ದಿಕ್ಕಿಲ್ಲದ ಅನಾಥ ಎಂಬ ಭಾವನೆ ಬರತೊಡಗಿದೆ ಎಂದ. "ಶಂಕರ ಬಯ್ದಿರುವ ಶಬ್ದಗಳಿಗೆ ಮನಸ್ಸು ತಣ್ಣಗಾಗುವ ಬದಲು ರೋಷ ಉಕ್ಕುವಂತೆ ಅನಿಸುತ್ತದೆ. ನೀವೇನಾದರೂ ಮದುವೆಯಾಗದೇ ಒಂಟಿಯಾಗಿದ್ದಿದ್ದರೆ ಖಂಡಿತಾ ಯಾರಿಗೂ ಅಂಜದೇ ಈಗಿಂದೀಗಲೇ ಹೋಗಿ ಮದುವೆ ಮಾಡಿಕೊಳ್ಳುತ್ತಿದ್ದೆ. ಆದರೆ ಈಗ ಹಾಗಲ್ಲ. ನಿಮಗೆ ಹಿಂದಕ್ಕೆ ತಿರುಗಿದರೆ ಪ್ರೀತಿಸುವ ರಮೇಶ-ಮಿತಾ ಇಬ್ಬರೂ ಇದ್ದಾರೆ. ನನ್ನ ಬದುಕಿನಲ್ಲಿ ಈಗ ಕುಳಿತು ಸಮಾಧಾನ ಪಡೆಯಬೇಕೆಂದರೆ ಯಾರೂ ಇಲ್ಲ. ನಾನೊಬ್ಬ ಅನಾಥ ಮೇಡಂ" ಎಂದು ಮಧು ಜೋರಾಗಿಯೇ ಅಳಲು ಪ್ರಯತ್ನಿಸಿದಾಗ ಗಂಗಾ ಸುಮ್ಮನೇ ಕುಳಿತಿದ್ದಳು. ಶಂಕರನ ಸ್ವಭಾವದ ಬಗ್ಗೆ ಇದ್ದಕ್ಕಿದ್ದ ಹಾಗೆ ಸಿಟ್ಟು ಬಂತು. ಎಲ್ಲವನ್ನೂ ಕಲಕಿಬಿಡಬೇಕು, ಕಲಕದಿದ್ದರೆ, ಕಲಕಿ ಅಲ್ಲಿ ಅಲೆ ಎಬ್ಬಿಸದಿದ್ದರೆ ಆತನಿಗೆ ಸಮಾಧಾನವೇ ಆಗುತ್ತಿರಲಿಲ್ಲ. ಅವರವರಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಅವರವರೇ ಬಗೆಹರಿಸಿಕೊಳ್ಳುವ ಮೊದಲು ಶಂಕರನ ಅಧಿಕಾರವಾಣಿ ಅಲ್ಲಿ ಇರುತ್ತದೆ. ಯಾಕೋ ಗಂಗಾಗೆ ಶಂಕರನ ಬಗ್ಗೆ ಬಹಳ ಸಿಟ್ಟು ಬರತೊಡಗುತ್ತದೆ. ರಮೇಶ ಪಾಪದ ಹುಡುಗ, ಆತನಿಗೆ ಗೊತ್ತಾಗುವುದಿಲ್ಲ, ಆದ್ದರಿಂದ ಇದೆಲ್ಲ ಸರಿ ಮಾಡುವ ಜವಾಬ್ದಾರಿ ತನ್ನದು ಎನ್ನುವ ಕಳಕಳಿಯಲ್ಲಿ ಆತನಲ್ಲಿ ಇದ್ದುದು ಪ್ರೀತಿಯೋ/ದ್ವೇಷವೋ ಗಂಗಾಳಿಗೇ ಅರ್ಥವಾಗುವುದಿಲ್ಲ. ಭಯದ ವಾತಾವರಣ ಉಂಟುಮಾಡುವ ಮೂಲಕ ಇಡಿಯ ಸಂದರ್ಭವನ್ನು ಕೈಗೆ ತೆಗೆದುಕೊಳ್ಳಬೇಕು ಎನ್ನುವ ಹಟ ಆತನದು. ರಮೇಶನಿಗೆ ಆ ಭಯ ಹುಟ್ಟಿಸಲಿಕ್ಕೆ ಸಾಧ್ಯವಿಲ್ಲವೇನೋ ಎಂಬಂತೆ ಶಂಕರ ತನ್ನ ಪಾತ್ರವನ್ನು ತಾನೇ ಮುಖ್ಯವಾಗಿಸಿಕೊಂಡಿದ್ದನು. ಮಧುವಿನಲ್ಲಿ ಭಯ ಹುಟ್ಟಿಸುವ ಮೂಲಕ, ಗಂಗಾಳಲ್ಲಿ ಭಯ ಹುಟ್ಟಿಸುವ ಮೂಲಕ, ಕೊನೆಗೆ ರಮೇಶನಲ್ಲಿಯೂ ಭಯ ಹುಟ್ಟಿಸುವ ಮೂಲಕ - ಒಬ್ಬರಿಗೊಬ್ಬರು ಕುಳಿತು ಮಾತನಾಡಲಾಗದಂತಹ, ಅಂತರಂಗದ ಕಡೆ ನೋಡಿಕೊಳ್ಳಲಾಗದಂತಹ ಒಂದು ಭಯ ಮಿಶ್ರಿತ ವಾತಾವರಣ ಹುಟ್ಟುಹಾಕಿಬಿಟ್ಟಿದ್ದ. ಇಲ್ಲಿ ನಮ್ಮ ಮನಸ್ಸುಗಳನ್ನು ನಾವೇ ಕೆದಕಿ, ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಗಳಿಗೆ ಅವಕಾಶವಿಲ್ಲ. ಇದು ಸರಿ/ಇದು ತಪ್ಪು ಎನ್ನುವುದು ಆತನಿಗೆ ಗೊತ್ತಿತ್ತು. ಉತ್ತರಗಳೂ ಆತನಿಗೆ ಗೊತ್ತು. ಏರಿದ ಧ್ವನಿಯಲ್ಲಿ ಮಾತನಾಡುವ ಆತನಿಗೆ ತಾನು ಹೇಳುತ್ತಿರುವುದು ನೂರಕ್ಕೆ ನೂರು ಪಾಲು ಸತ್ಯ ಎಂದು ಅನಿಸುತ್ತದೆ. ಅದು ಒಂದು ಸ್ವಚ್ಛ ಮೌಲ್ಯ ಎಂದುಕೊಂಡೇ ಮಾತನಾಡುತ್ತಿರುತ್ತಾನೆ. ಹೀಗೂ ಇರಬಹುದೂ ಎಂಬ ಅನುಮಾನಗಳಿಗೆ ಅಲ್ಲಿ ಆಸ್ಪದವೇ ಇಲ್ಲ. ಅವನಿಗೆ ತಾನು ಗ್ರಹಿಸಿದ್ದು, ತಾನು ಅಂದುಕೊಂಡದ್ದೇ ಸತ್ಯದ ಪರಮಾವಧಿ ಎನಿಸುತ್ತದೆ. ಗಂಗಾ ಹೀಗೆಲ್ಲಾ ಯೋಚಿಸುತ್ತಾ ಕುಳಿತಿದ್ದಾಗ ಮಧು ಏನೇನೋ ಹೇಳುತ್ತಲೇ ಇದ್ದ.

'ನೋಡಿ ಮೇಡಂ ಈಗ ನಿಮ್ಮ ಹತ್ತಿರ ಹೇಳಿಕೊಂಡದ್ದಕ್ಕೆ, ಅತ್ತದ್ದಕ್ಕೆ ಎಷ್ಟೋ ಸಮಾಧಾನವಾಯಿತು. ನಾನು ನಿನ್ನೆ ಸಾಯಂಕಾಲದಿಂದ ನಾನಾಗಿಯೇ ಉಳಿದಿಲ್ಲ. ವಿಷ ಕುಡಿದು ಸತ್ತು ಒಂದು ಕ್ಷಣ ಎಲ್ಲರ ಮೇಲೆ ಛಲ ತೋರಿಸಿಬಿಡಬೇಕು ಎಂಬ ಯೋಚನೆಯೂ ಬರದಿರಲಿಲ್ಲ. ನಿನ್ನೆ ರಾತ್ರಿ ಎಷ್ಟು ಕುಡಿದೆ?

ಹೇಗೆ ಮಲಗಿದೆ ಎಂಬ ಪ್ರಜ್ಞೆಯೇ ನನಗಿಲ್ಲ. ನಿನ್ನೆ ನಾನು ತಿಂಡಿ ತಿಂದೆನೋ ಇಲ್ಲವೋ ಎಂಬುದೇ ನನಗೆ ತಿಳಿಯದು. ನಿಮಗೆ ನಾನು ಮತ್ತೆ ಚಿರಋಣಿಯಾಗಿರಬೇಕು. ನನ್ನ Original Self ಮತ್ತೆ ಪಡೆದುಕೊಳ್ಳುತ್ತಿದ್ದೇನೆ. ನಿನ್ನೆ ಶಂಕರರ ಮಾತುಗಳಿಂದಾಗಿ ನೀವು ತುಂಬಿದ್ದ ವಿಶ್ವಾಸ, ಪ್ರೇಮ, ಎಲ್ಲವೂ ಕೊಚ್ಚಿ ಹೋದಂತೆ ಎನಿಸಿತ್ತು. ಆದರೆ ಈಗ ಹಾಗೆ ಅನ್ನಿಸುವುದಿಲ್ಲ. ಹೃದಯದ ಮೂಲೆಯಲ್ಲಿ ಎಲ್ಲೋ ಶಾಶ್ವತವಾಗಿ ಅವು ನನ್ನ ವ್ಯಕ್ತಿತ್ವದ ಭಾಗವಾಗಿ ಉಳಿದುಕೊಂಡಿವೆ. ಈ ಎಲ್ಲಾ ರಗಳೆಗಳ ಮಧ್ಯ ನೀವು ಇಲ್ಲಿಗೆ ಬಂದದ್ದು ಎಷ್ಟು ರಿಸ್ಕ್ ಎಂಬುದು ನನಗೆ ಗೊತ್ತು. ರಮೇಶ್ ಗೊತ್ತಾದರೆ ನಿಮ್ಮನ್ನು ತುಚ್ಛೀಕರಿಸಿಬಿಡುತ್ತಾರೆ. ಶಂಕರ್‌ಗೆ ಗೊತ್ತಾದರೆ ಇನ್ನಾವುದೋ ಶಬ್ದಗಳು ಅವರ ಬಾಯಿಂದ ಬರುತ್ತವೆ, ಇಂದು ನೀವು ಬರದೇ ಹೋಗಿದ್ದರೆ ನಾನು ಮನುಷ್ಯನಾಗಿಯೇ ಉಳಿಯುತ್ತಿರಲಿಲ್ಲ. ರೈಟ್ ಮೇಡಂ" ಎನ್ನುತ್ತಾ ಮಧು ಮುಖ ತೊಳೆದು ಬಂದ. "ಇಲ್ಲ ಮೇಡಂ, ಜೀವನದಲ್ಲಿ ನಾನು ಕಲಿತ ಪಾಠ ಇದು, ಬದುಕಿನ ಹಲವಾರು ಮುಖಗಳ ಗೋಜಲು, ಗೋಜಲು ಸಂಬಂಧ ನನಗೆ ಪರಿಚಯವಾದುದೇ ಈಗ. ಈ ಅನುಭವ, ನೀವು ತೋರಿಸಿದ ಪ್ರೀತಿ/ವಿಶ್ವಾಸ ನನ್ನ ಎದೆಯ ಮರೆಯಲ್ಲಿ ಎಲ್ಲಿಯೋ ಉಳಿದುಬಿಟ್ಟಿರುತ್ತದೆ. ಇನ್ನು ನೀವು ಹೋಗಿ ಬನ್ನಿ" ಎಂದ. 'ರೈಟ್ ಮೇಡಂ' ಎಂದು ಮಧು ಮತ್ತೆ ಹೇಳಿ ತಲೆ ಬಾಚಲು ತಿರುಗಿದಾಗ ಗಂಗಾ ಅಲ್ಲಿಂದ ಎದ್ದು ಬಂದಿದ್ದಳು. ಸಿಕ್ಕು-ಸಿಕ್ಕಾದ ಬದುಕಿನಲ್ಲಿ ಅಧಿಕಾರವಾಣಿಯಲ್ಲಿಯೇ ಉತ್ತರ ಹುಡುಕುವ ಶಂಕರನ ಬಗ್ಗೆ ಯೋಚಿಸುತ್ತಾ ಗಂಗಾ ಮನೆಗೆ ಬಂದಿದ್ದಳು.

* * * *

ಮಧು ಸದ್ದಿಲ್ಲದ ಹಾಗೆ ಇಡಿಯ ಸಂದರ್ಭದಿಂದ ಕಣ್ಮರೆಯಾಗಿದ್ದ. ಗಂಗಾಗೆ ಬಹಳ ನೋವಾದದ್ದು ಇದರಿಂದಲೇ. ಶಂಕರ ನೇರವಾಗಿ ಮಧುವನ್ನು ಒಬ್ಬ ವ್ಯಕ್ತಿಯೇ ಅಲ್ಲವೆಂಬಂತೆ ತುಚ್ಛೀಕರಿಸಿದ್ದನು. ರಮೇಶ ನೇರವಾಗಿ ಮಧುವಿನೊಡನೆ ಕುಳಿತು ಮಾತನಾಡಲೇ ಇಷ್ಟಪಟ್ಟಿರಲಿಲ್ಲ. ಇಡಿಯ ಸಂದರ್ಭದಿಂದ ಇದ್ದಕ್ಕಿದ್ದ ಹಾಗೆ ಮನೆ ಖಾಲಿ ಮಾಡಿ ಮಧು ಕಣ್ಮರೆಯಾದಾಗ ಗಂಗಾಗೆ ಗಲಿಬಿಲಿಯಾಗಿತ್ತು. ಹೀಗೆ ಕೂತು ಬರೆದು, ಮರೆಯಲಾಗದುದನ್ನು ಜೀರ್ಣಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಎಲ್ಲಿರುವನೋ ಎಂಬ ಗಾಬರಿ ಕಾಡಿದರೆ ಬರೆಯುವಾಗಲೆಲ್ಲಾ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿತ್ತು. ಮಿತಾ ಆಗೆಲ್ಲಾ ಕಣ್ಣೀರು ಒರೆಸುವಳು. ಕುಡಿಯಮ್ಮ ಎಂಥು ನೀರು ತಂದು ಕುಡಿಸುವಳು. ಕಣ್ಣೀರು ಬರೆಯುವ ಅಕ್ಷರಗಳನ್ನು ಅಳಿಸುತ್ತದೆ. ಆದರೆ ರಮೇಶನ ಮನಸ್ಸಿನಲ್ಲಿರುವುದನ್ನು, ಸಂಶಯದ ಬೀಜವನ್ನು ಕಿತ್ತು ಹಾಕುತ್ತದೆಯೇ? ಮಧುವನ್ನು ದೈಹಿಕವಾಗಿ ದೂರ ಸರಿಸಿದಷ್ಟು ಸುಲಭವಾಗಿ ಮನಸಿನಿಂದ ದೂರ ತಳ್ಳಬಹುದೇ ಇತ್ಯಾದಿ ಸಂಗತಿಗಳನ್ನು ಕುರಿತು ಗಂಗಾ ಯೋಚಿಸುತ್ತಾಳೆ. ತಮ್ಮ ನಡುವಿನ ಸಂಶಯದ ಬೀಜವನ್ನು ಅಳಿಸುವುದು ಯಾವುದು ಎಂಬ ಪ್ರಶ್ನೆ ಆಕೆಯಲ್ಲಿ ಕೊರೆಯುತ್ತಾ ಹೋಗುತ್ತದೆ. ಗಂಗಾ ಹೀಗೇ ಏನೇನೋ ಅನ್ನಿಸುವುದನ್ನೆಲ್ಲಾ, ಮನಸ್ಸಿದ್ದಾಗಲೆಲ್ಲಾ ಬರೆಯುತ್ತಾ ಹೋಗುತ್ತಾಳೆ. ಮಧು ಆತಂಕದ ಸ್ಥಿತಿಯಲ್ಲಿ ಬಿಟ್ಟುಹೋಗಿದ್ದ. ರಮೇಶ ನಿತ್ಯದ ಬದುಕಿನಲ್ಲಿ ಆತಂಕ ವ್ಯಕ್ತಪಡಿಸುತ್ತಿದ್ದ. ಈ ಆತಂಕಗಳೇ ಗಂಗಾಳ ಬರವಣಿಗೆಗೆ ಚೈತನ್ಯ ನೀಡತೊಡಗಿದ್ದವು. ಕಾಲೇಜ್, ಕೆಲಸ, ಮಗು ಮಿತಾಳ ನಡುವೆ - ಬಿಡುವು ಮಾಡಿಕೊಂಡು ಗಂಗಾ ಬರವಣಿಗೆಯಲ್ಲಿ ತನ್ನನ್ನು ತೀವ್ರವಾಗಿ ತೊಡಗಿಸಿಕೊಳ್ಳುತ್ತಾಳೆ. ಏಳೆಂಟು ವರ್ಷಗಳಲ್ಲಿ ಒಳಗೆಲ್ಲೋ ಹುದುಗಿ ಹೋಗಿದ್ದ ಬರವಣಿಗೆಯ ಚೈತನ್ಯ ಗಂಗಾಳಿಗೆ ದಕ್ಕಿದ ಹಾಗೆ ಅನ್ನಿಸತೊಡಗುತ್ತದೆ. ಸಂಸಾರದ ಯಾಂತ್ರಿಕತೆಯಲ್ಲಿ ಬತ್ತಿ ಹೋಗಿದ್ದ ಬರವಣಿಗೆಯ ಚೈತನ್ಯ ಈಗ ಮತ್ತೆ ಚಿಗುರತೊಡಗಿದಾಗ ಗಂಗಾ ಬದುಕಿನ ಪರಿಪೂರ್ಣತೆ ಹುಡುಕಲು ಪ್ರಯತ್ನಿಸುತ್ತಾಳೆ. ಬರವಣಿಗೆಯ

ಪೂರ್ಣತೆ ಬದುಕಿನಲ್ಲಿ ಎಂದೂ ದಕ್ಕುವುದಿಲ್ಲ ಎಂದು ಯಾವಾಗಲೂ ಮಧುಗೆ ಹೇಳುತ್ತಿದ್ದ ಮಾತು ಆಕೆಗೇ ಜ್ಞಾಪಕಕ್ಕೇ ಬರುತ್ತದೆ. ಗಂಗಾ ಬರವಣಿಗೆಯಲ್ಲಿ ತಲ್ಲೀನಳಾಗಿ ಹೋಗುತ್ತಾ ಹೋದ ಹಾಗೆ ರಮೇಶನಲ್ಲಿ ಬದುಕಿನ ಬಗ್ಗೆ ಒಂದು ರೀತಿಯ ನಿರ್ಲಿಪ್ತತೆ ಮೂಡುತ್ತಾ ಹೋಗುತ್ತದೆ. ಶಂಕರನ ಹತ್ತಿರ ಹೇಳಿಕೊಂಡ ಮರುಕ್ಷಣದಲ್ಲಿ ಗಂಗಾಳನ್ನು ಹೊಡೆದು ಮಣಿಸಲು ಪ್ರಯತ್ನಿಸಿದ್ದ ರಮೇಶನಿಗೆ ಅವನ ಮನಸ್ಸಿನ ಮೇಲೆ ಅವನ ಹಿಡಿತವೇ ತಪ್ಪಿ ಹೋದಂತೆ ಅನ್ನಿಸಿತ್ತು. ಯಾರ ಹತ್ತಿರ ಕುಳಿತು ಮಾತನಾಡಿದರೆ ಮನಸ್ಸಿಗೆ ಸಮಾಧಾನ ಸಿಗಬಹುದು ಎಂಬುದನ್ನು ಅವನು ಯೋಚಿಸುತ್ತಲೇ ಇದ್ದ. ಇಂತಹ ಒಂದು ದಿನದಲ್ಲಿ ರಮೇಶ ಕೆಲಸದ ಮೇಲೆ ಬೇರೆ ಊರಿಗೆ ಹೋಗಬೇಕಾಗಿ ಬಂದಾಗ ಗಂಗಾಗೆ ಮನೆ ಭಿಕೋ ಎನಿಸಿತ್ತು. ರಮೇಶನಿಲ್ಲದ ಮನೆಯಲ್ಲಿ ಗಾಳಿ ಸೋಂಕಿದಂತೆ ಭಾಸವಾಗತೊಡಗಿತ್ತು. ಯಾರೂ ಇಲ್ಲದ ಅನಾಥೆ ತಾನು ಎಂಬ ಭಾವನೆ ಬಲವಾಗಿ ಬೆಳೆಯತೊಡಗಿತ್ತು. ಹಾಗಾಗಿ ಕಲ್ಕತ್ತಗೆ ಹೋಗಿದ್ದ ರಮೇಶನ ವಿಳಾಸಕ್ಕೆ ಒಂದು ದೀರ್ಘವಾದ ಪತ್ರವನ್ನು ಬರೆದಳು. ಅದರಲ್ಲಿ ತಮ್ಮ ಸಂಬಂಧ ಪ್ರಾರಂಭದ ದಿನಗಳಿಂದ ಹಿಡಿದು ಏಳು ವರ್ಷಗಳ ಬದುಕನ್ನು ಒಮ್ಮೆ ಅವಲೋಕಿಸಲು ಪ್ರಯತ್ನಿಸಿದ್ದಳು. ತನ್ನ ಹಾಗೂ ಮಧುವಿನ ಮಧ್ಯದ ಘಟನೆ ತನ್ನ ಹಾಗೂ ರಮೇಶನ ಬದುಕನ್ನು ಇನ್ನಷ್ಟು ಹತ್ತಿರ ತರಬೇಕೇ ಹೊರತು ದೂರ ಮಾಡಬಾರದು ಎಂದು ಏನೋ ಬರೆದಿದ್ದಳು. ಯಾಕೋ ತಾನು ಪೂರ್ಣ ಆತಂಕದ ಸ್ಥಿತಿಯಲ್ಲಿ ಇರುವುದರಿಂದ 'ನಾನು ಯಾರು?' ಎಂಬ ಪ್ರಶ್ನೆ ತಗಲಿಹಾಕಿಕೊಂಡುಬಿಟ್ಟು ತನ್ನ ಮನಸ್ಸನ್ನು ಆಘಾತಗೊಳಿಸತೊಡಗಿದೆ. ಹೀಗೆಯೇ ಏನೇನೋ ಬರೆದಿದ್ದಳು. "ನಾನು ಯಾರು? ಲೇಖಕಿಯಾಗಿ ಅಸ್ತಿತ್ವ ಬಯಸುವ ಗಂಗಾಳೇ? ಮಿತಾಗೆ ಒಳ್ಳೆಯ ತಾಯಿಯಾಗ ಬಯಸುವ ಗಂಗಾಳೇ? ರಮೇಶನಿಗೆ ಬದ್ಧ ಪತ್ನಿಯಾಗ ಬಯಸುವ ಗಂಗಾಳೇ? ಅಥವಾ ಇದ್ಯಾವುದೂ ಅಲ್ಲದ ಬರಿಯ ಸಂಸಾರಸ್ಥ ಗಂಗಾಳೇ? ಇಂತಹ ಪ್ರಶ್ನೆಗಳಲ್ಲಿ, ಸಿಕ್ಕು ಸಿಕ್ಕುಗಳಲ್ಲಿ ನಾನು ಕಂಡ ಪ್ರಶ್ನೆಗಳು ಅಸಂಗತ ಎನ್ನಿಸುತ್ತವೆ. ಒಬ್ಬರ ನಡುವೆ ಒಬ್ಬರು ಸಮಗ್ರತ್ವ ಸಾಧಿಸುತ್ತೇವೆ ಎಂಬ ಪ್ರಶ್ನೆಗಳು ಅಸಂಗತ ಎನ್ನಿಸಿಬಿಡುತ್ತವೆ. ನನ್ನ-ನಿನ್ನ ನಡುವೆ ಜೀವನದ ಪ್ರಾರಂಭದಲ್ಲಿದ್ದ ಚೈತನ್ಯ ಎಲ್ಲಿ ಬತ್ತಿ ಹೋಯಿತು? ಯಾಕೋ ಈ ಸಂದರ್ಭದಲ್ಲಿ ನೀನೂ ಇಲ್ಲದೇ ಇರುವುದರಿಂದ ಮನಸ್ಸು ಒಂಟಿ ಎನಿಸುತ್ತದೆ. ಕುಳಿತು ಬರೆಯುವ ಕ್ರಿಯೆಯ ತಲ್ಲೀನತೆ ಕೂಡಾ ಒಮ್ಮೊಮ್ಮೆ ಎಳೆ ತಪ್ಪಿ ಹೋದಾಗ ಬದುಕಿನ ಬಗ್ಗೆಯೇ ಅನೇಕ ಪ್ರಶ್ನೆಗಳು ಮೂಡುತ್ತವೆ. ಮಧುವಿನಲ್ಲಿಯೂ ಹುಡುಕಿದ್ದು ನಿನ್ನ ಮೊದಲಿನ ಸೆಲ್ಫನ್ನೇ. ಈಗಲೂ ನೀನಿಲ್ಲದಿರುವಾಗ ಹುಡುಕುತ್ತಿರುವುದೂ ನಿನ್ನ ಸೆಲ್ಫನ್ನೇ" ಹೀಗೆ ಗಂಗಾ ಏನೇನನ್ನೋ ಬರೆದಿದ್ದಳು. ಮನಸ್ಸಿಗೆ ಸಮಾಧಾನ ವಾಗಲೆಂದು ಆ ಕಾಗದವನ್ನು ರಮೇಶನಿಗೆ ಪೋಸ್ಟ್ ಮಾಡಿದ್ದಳು. ತಮ್ಮಿಬ್ಬರ ನಡುವಿನ ಕಂದರವೊಂದು ಮುಚ್ಚಿಕೊಂಡು ತಾವಿಬ್ಬರೂ ಮತ್ತೆ ಬದುಕನ್ನು ಚೈತನ್ಯಪೂರ್ಣವಾಗಿ, ಸುಂದರವಾಗಿಸಬೇಕೆಂಬ ಆಶಯವೂ ಇದರಲ್ಲಿ ಅಡಕವಾಗಿತ್ತು. ಹೀಗೆ ಭಾವನೆಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುವ ಮೂಲಕ, ತಮ್ಮನ್ನು ತಾವು ಇಡಿಯಾಗಿ ಬಿಚ್ಚಿಕೊಳ್ಳುವ ಮೂಲಕ ಮತ್ತೆ ಈ ಸಂದರ್ಭದಲ್ಲಿ ಹತ್ತಿರವಾಗಬಹುದೇನೋ ಎಂಬ ಆಶಯದಲ್ಲಿ ಗಂಗಾ ಈ ಪತ್ರವನ್ನು ಬರೆದಿದ್ದಳು. ಒಬ್ಬಳೇ ಕೂತು ಸತ್ಯಗಳನ್ನು ಅರಗಿಸಿಕೊಳ್ಳಲಾರದೇ ಬರೆದಿದ್ದಳು. ಇದರಲ್ಲಿ ರಮೇಶನಿಗೆ ನೋವಾಗುವಂತಹದು ಏನಿಲ್ಲವೆಂದೇ ಗಂಗಾ ಭಾವಿಸಿದ್ದಳು. ಆದರೆ ಕಾಗದ ತಲುಪಿದ ಮರುದಿನವೇ ಇನ್ನೈದು ದಿನಗಳ ಕಾರ್ಯಕ್ರಮವನ್ನು ರದ್ದುಪಡಿಸಿ ರಮೇಶ್ ಮನೆಗೆ ಬಂದಿದ್ದ. ಆತ ಮನೆಗೆ ಬಂದಾಗ ರಾತ್ರಿ ಎರಡು ಘಂಟೆ. ಎಲ್ಲೆಲ್ಲಿಯೂ ಬಸ್ ಸಿಗದೇ ಯಾವುದ್ಯಾವುದೋ ಟೆಂಪೋ, ವ್ಯಾನ್ ಹಿಡಿದು ಆತ ಮನೆಗೆ ಬಂದಿದ್ದ. ಬಾಗಿಲು ತಟ್ಟಿದ ಶಬ್ದಕ್ಕೆ ಗಂಗಾಗೆ ಗಾಬರಿಯಾಗಿತ್ತು. ಆಕೆ ಧಡಕ್ಕೆಂದು ಎದ್ದು ಕುಳಿತಿದ್ದಳು.

ತಕ್ಷಣ ಬಾಗಿಲು ತೆರೆಯಲಿಲ್ಲ. ಯಾರು? ಯಾರು? ಎಂದಳು. ರಮೇಶ ಕುಡಿದ ಧ್ವನಿಯ ಮತ್ತಿನಲ್ಲಿ 'ನಾನು' ಎಂದ. ಗಂಗಾಳಿಗೆ ತಕ್ಷಣ ರಮೇಶನ ಧ್ವನಿ ಗುರುತಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಸುಮ್ಮನೇ ಹಾಸಿಗೆಯ ಮೇಲೆ ಮಲಗಿದಳು. ರಮೇಶ ಸ್ವಲ್ಪ ಅಸಹನೆಯಿಂದಲೇ ಬಾಗಿಲು ತಟ್ಟತೊಡಗಿದ್ದ. ಮತ್ತೆ ಗಂಗಾ 'ಯಾರು? ಯಾರು?' ಎಂದು ಎದ್ದು ಕುಳಿತಳು. ರಮೇಶನ ಧ್ವನಿ ಗುರುತಿಸಿದ ಮೇಲೆ ಎದ್ದು ನಿಧಾನವಾಗಿ ಬಾಗಿಲು ತೆರೆದಳು. ರಮೇಶನ ಸ್ಥಿತಿ ನೋಡಿ ಗಂಗಾಳಿಗೆ ಇದ್ದಕ್ಕಿದ್ದ ಹಾಗೆ ಗಾಬರಿಯಾಯಿತು. ಹಾಗೆಯೇ ಆಕೆಗೆ ಭಯವೂ ಆಗತೊಡಗಿತ್ತು. ಆತ ಹಾಕಿಕೊಂಡಿದ್ದ ಅಂಗಿ ಅಸ್ತವ್ಯಸ್ತವಾಗಿತ್ತು. ಅಂಗಿಯ ಗುಂಡಿಗಳೆಲ್ಲವೂ ಬಿಚ್ಚಿಕೊಂಡಿದ್ದವು. ತಲೆ ಕೂದಲೆಲ್ಲಾ ಕೆದರಿತ್ತು. ಕತ್ತಲಲ್ಲೂ ಕೆಂಪಗೆ ಕಾಣುತ್ತಿದ್ದ ಕಣ್ಣುಗಳನ್ನು ನೋಡಿ ಗಂಗಾಗೆ ಗಾಭರಿ/ಭಯ ಎರಡೂ ಒಟ್ಟೊಟ್ಟಿಗೇ ಆಗಿತ್ತು. ಆತನ ತಲೆ ಎರ್ರಾಬಿರ್ರಿಯಾದಂತೆ ಆತನ ಮನಸ್ಸೂ ಎರ್ರಾಬಿರ್ರಿಯಾಗಿದೆ ಎಂಬುದು ಗಂಗಾಳ ಗ್ರಹಿಕೆಗೆ ಬಂದಿತ್ತು. ಹೀಗೇಕೆ ಎಂದು ಗಂಗಾಗೆ ಒಂದು ಕ್ಷಣ ದಿಗ್ಭ್ರಮೆಯಾಗುತ್ತದೆ. ಮಧು ಕಾಣಿಸದೇ ಹಲವಾರು ದಿನಗಳೇ ಕಳೆದು ಹೋಗಿವೆ.

ಶಂಕರ ಹೇಳದೇ ಊರಿಗೆ ಹೊರಟು ಹೋದವನು ಮತ್ತೆ ಬಂದಿರಲಿಲ್ಲ, ಪತ್ರವನ್ನೂ ಬರೆದಿರಲಿಲ್ಲ. ರಮೇಶನ ಮನಸ್ಸು ಅವನ ಹಿಡಿತಕ್ಕೆ ಬರುತ್ತಿದೆ ಎಂದು ಒಂದು ಕ್ಷಣ ಅನ್ನಿಸಿದರೆ ಇನ್ನೊಂದು ಕ್ಷಣ ಈ ಮನುಷ್ಯ ಹೀಗೇಕೆ ಅನುಮಾನಗಳ ಸುಳಿಯಲ್ಲಿ ಹುಚ್ಚನಾಗಿಬಿಡುತ್ತಾನೆ ಎಂಬ ಆತಂಕ ಗಂಗಾಳಿಗೆ ಕಾಡಿದ್ದಿದೆ. ರಮೇಶ್ ಒಳಗೆ ಬಂದು ಬ್ಯಾಗ್ ಬಿಸಾಕುತ್ತಾನೆ. "ಊಟಕ್ಕೆ ಏನೂ ಇಲ್ವಲ್ಲ ರಮೇಶ್, ನೀನು ಬರ್‍ತೀಯ ಅಂತ ನನಗೆ ಗೊತ್ತಿರಲಿಲ್ಲ" ಎಂದು ಗಂಗಾ ನಿಧಾನವಾಗಿ ಹೇಳುತ್ತಾಳೆ. ರಮೇಶ ಮಾತನಾಡುವುದಿಲ್ಲ. ಕುರ್ಚಿಯ ಮೇಲೆ ಕುಳಿತು ಟೇಬಲ್‌ಗೆ ತಲೆಯಾಡಿಸುತ್ತಾನೆ. ಇದ್ದಕ್ಕಿದ್ದ ಹಾಗೆ ಜೋರಾಗಿ ಅಳಲು ಪ್ರಾರಂಭಿಸುತ್ತಾನೆ. ಗಂಗಾ ಕಕ್ಕಾ-ವಿಕ್ಕಿಯಾಗುತ್ತಾಳೆ. ರಮೇಶನ ಪಕ್ಕದಲ್ಲಿಯೇ ಕುರ್ಚಿಯೊಂದನ್ನು ಎಳೆದುಕೊಂಡು ಕೂರುತ್ತಾಳೆ. ಮತ್ತೆ ಮೇಲೆದ್ದು ಅಕ್ಕಿ ತೊಳೆದು ಅನ್ನಕ್ಕೆ ಇಡುತ್ತಾಳೆ. ತಿಳಿ ಸಾರಿನಲ್ಲಿ ಕಲಸಿ ತಿಂದರೆ ಆದೀತು ಎಂದು ಎಣಿಸುತ್ತಾಳೆ. ಆತ್ಮೀಯವಾಗಿದ್ದ ಮಧು ಕಣ್ಣಿಗೆ ಕಾಣಿಸಿಕೊಳ್ಳದೇ ದೂರವಾಗಿದ್ದ. ಕಣ್ಣೆದುರಿಗಿದ್ದ ಪ್ರೀತಿಯ ಜೀವ ಹೀಗೆ ಅನುಮಾನದ ಲೋಕದಲ್ಲಿಯೇ ಸಿಕ್ಕಿಹಾಕಿಕೊಂಡು ಹುಚ್ಚು ಲೋಕಕ್ಕೆ ತಿರುಗುತ್ತಿದೆ ಎನಿಸಿದಾಗ ಗಂಗಾಗೆ ಗಾಭರಿಯಾಗುತ್ತದೆ. ರಮೇಶ ಬಿಕ್ಕಿ ಬಿಕ್ಕಿ ಅಳತೊಡಗಿದಾಗ ಗಂಗಾ ಅವನ ತಲೆಯ ಕೂದಲಿನಲ್ಲಿ ಕೈಯಾಡಿಸುತ್ತಾಳೆ. ತಾನು ಬರೆದ ಪತ್ರದಲ್ಲಿ ನೋವಾಗುವಂತಹದು ಏನಿತ್ತು ಎಂದು ಪ್ರತಿ ಸಾಲನ್ನೂ ಜ್ಞಾಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಏನೇನೂ ನೆನಪಾಗುವುದಿಲ್ಲ. ಮನೆಯೆಲ್ಲಾ ಬಣ ಬಣ ಎನಿಸುತ್ತದೆ. ಮನಸ್ಸು ಖಾಲಿ ಖಾಲಿ ಎನ್ನಿಸಿ, ಮನಸ್ಸು, ಮನೆಗೆಲ್ಲಾ ದೆವ್ವ ಹೊಕ್ಕಂತೆ ಅನ್ನಿಸತೊಡಗುತ್ತದೆ. ಇದೇ ರೀತಿ ರಮೇಶನಿಲ್ಲದಾಗ ಅನಿಸಿದ್ದನ್ನು ಕೂತು ಅವನಿಗೆ ಪತ್ರ ಬರೆದಿದ್ದಳು. ಅವನಿಗೆ ಹತ್ತಿರವಾಗಬೇಕೆಂದು, ತನ್ನ ಮನಸ್ಸನ್ನು ಅವನ ಜೊತೆ ಹಂಚಿಕೊಳ್ಳಬೇಕು ಎಂಬಂತಹ ಆಶಯದಲ್ಲಿ ಬರೆದ ಪತ್ರ ಅದು. ಏಕಾಂಗಿತನ ಕಾಡಿದ್ದು. ತಾಯಿಯ ಸಾವನ್ನು, ಆಕೆಯ ತಣ್ಣಗಿನ ದೇಹವನ್ನು ಎದೆಯಾಳದಿಂದ ಕಿತ್ತು ತೆಗೆಯಲಾಗದ ಏಕಾಂಗಿತನ, ರಾತ್ರಿ ರಾತ್ರಿಯಲ್ಲಿ ಮಣ್ಣಲ್ಲಿ ಕೂರಿಸಿದ ತಾಯಿಯ ಮುಖದ ಜೊತೆಗೆ ಅಂಟಿಕೊಂಡ ಭಯ. ಏಕಾಂಗಿತನದ ಜೊತೆಗೆ ಕಾಡಿದ ಭಯದಲ್ಲಿ ಗಂಗಾ ರಮೇಶನಿಗೆ ಕುಳಿತು ಪತ್ರ ಬರೆದಿದ್ದಳು. ಕುಳಿತು ಬರೆಯುವ, ಬರವಣಿಗೆಯಲ್ಲಿ ಒಳಗಿನದೆಲ್ಲವನ್ನೂ ಅರಗಿಸಿಕೊಳ್ಳುತ್ತಿದ್ದೇನೆಂಬ ಚೈತನ್ಯದ ಭಾವನೆಯೂ ಕರಗಿ ಹೋಗಿತ್ತು. ಬರವಣಿಗೆಯ ತನ್ಮಯತೆಯಲ್ಲಿಯೂ ತೊಡಗಿಸಿಕೊಳ್ಳಲಾರದ ಒಂಟಿತನ, ಭಯ. ಗಂಗಾ ತನ್ನ ಮನಸ್ಸಿಗೆ ಅನ್ನಿಸಿದುದೆಲ್ಲವನ್ನೂ ಬರೆದಿದ್ದಳು. ಕುಳಿತಲ್ಲಿ ಕೂರಲಾರದ, ನಿಂತಲ್ಲಿ ನಿಲ್ಲಲಾರದ

ತನ್ನ ಮನಸ್ಸಿನ ಚಡಪಡಿಕೆಯನ್ನು ಕುರಿತು ಬರೆದಿದ್ದಳು. ರಮೇಶ ಹಾಗೂ ತನ್ನ ಪ್ರಾರಂಭದ ಜೀವನದ ಬಗ್ಗೆ ಬರೆದಿದ್ದಳು. ಆ ಕಳಕಳಿ, ಕಾತರಗಳು ಇಂದೆಲ್ಲಿ ಕಾಣೆಯಾಗಿ ಹೋದವೋ ಎಂದು ಕೊರಗಿದ್ದಳು. ಹೀಗೇ ಏನೇನೋ ಬರೆದ ಗಂಗಾಳ ಪತ್ರದಲ್ಲಿ ರಮೇಶನನ್ನು ಬಯ್ಯುವ ಹಂಬಲವೇನೂ ಕಂಡಿರಲಿಲ್ಲ. ಆದರೆ ರಮೇಶನ ಬಿಡುವಿರಲಾರದ ದಿನಚರಿ, ಕೆಲಸಗಳು ಎಲ್ಲಿಯೋ ತನ್ನನ್ನು ಸಂಸಾರದ ಬಂಧನದಲ್ಲಿ ಸಿಲುಕಿಸಿದ್ದು, ತಾನು ಈ ಹಂತದಲ್ಲಿ ಒಂಟಿತನವನ್ನು ಫೀಲ್ ಮಾಡುತ್ತಿದ್ದೇನೇನೋ ಎಂದೇನೋ ವಿವರಣೆ ಕೊಡಲು ಪ್ರಯತ್ನಿಸಿದ್ದಳು. ಆ ವಿವರಣೆಯ ಭಾಗಗಳೇ ರಮೇಶನ ಮನಸ್ಸಿಗೆ ನೆಟ್ಟಿರಬೇಕು. ಗಂಗಾಳ ಬದುಕು ಅವಾಂತರಗೊಳ್ಳುವುದಕ್ಕೆ ತಾನೇ ಕಾರಣವೇನೋ ಎಂಬ ಪಾಪಪ್ರಜ್ಞೆ ರಮೇಶನಿಗೆ ಕಾಡಿರಬೇಕು. ರಮೇಶ ಜೋರು ಜೋರಾಗಿಯೇ ಅಳತೊಡಗಿದ್ದ. ರಮೇಶನ ತಲೆಯಲ್ಲಿ ಕೈಯಾಡಿಸುತ್ತಾ ನಿಂತಿದ್ದ ಗಂಗಾಗೆ ಕೊನೆಯದಾಗಿ ರಮೇಶ "Ganga, I have decided to leave my job" ಎಂದ. ಗಂಗಾಗೆ ಶಾಕ್ ಆಗುತ್ತದೆ. ನಾವೇನೋ ಎಣಿಸುತ್ತೇವೆ, ಅದು ಇನ್ನೇನೋ ಪರಿಣಾಮ ಬೀರುತ್ತದೆ ಎನಿಸುತ್ತದೆ. ಒಂದು ಸಮಸ್ಯೆಯ ಒಂದು ಅಂಚು ಬಿಡಿಸಹೋದರೆ ಇನ್ನೊಂದು ಸಮಸ್ಯೆ ತಾನಾಗಿಯೇ ಹುಟ್ಟಿಕೊಳ್ಳುತ್ತದೆ. ಸಮಸ್ಯೆಗೆ ಒಂದೇ ಮಗ್ಗಲಿದ್ದರೆ ಬಿಡಿಸಬಹುದು. ಒಂದು ಸಮಸ್ಯೆಗೆ ನಾನಾ ಮುಖಗಳಿರುತ್ತವೆ. ಈ ಸತ್ಯ ರಮೇಶನಿಗೆ ಅರ್ಥವಾಗಬೇಕು. ಕೆಲಸ ಬಿಡುವುದರ ಮೂಲಕ ಸಧ್ಯಕ್ಕೆ ತಮ್ಮೀರ್ವರ ನಡುವಿನ ಅಂತರಕ್ಕೆ ಒಂದು ತೆರೆ ಎಳೆಯಬಹುದು. ಆದರೆ ಕೆಲಸವಿಲ್ಲದೇ ರಮೇಶ ಏನು ಮಾಡುತ್ತಾನೆ? ಸಧ್ಯಕ್ಕೆ ಒಂದು ಸಮಸ್ಯೆ ಬಗೆಹರಿಸಿದೆ ಎನ್ನಿಸಬಹುದು. ಆದರೆ ಮನೆಯಲ್ಲಿಯೇ ಕುಳಿತು ನಿರುದ್ಯೋಗಿಯಾದರೆ? ಆ ಮನಸ್ಥಿತಿ ಇನ್ನೂ ಹೆಚ್ಚಿನ ಕಷ್ಟದಲ್ಲವೇ? ಕೆಲಸ ಸಿಗುವುದು ಈಗಿನ ಪರಿಸ್ಥಿತಿಯಲ್ಲಿ ಅಷ್ಟು ಸುಲಭವೇ? ಹಾಗೆಂದೇ ತಾವೆಲ್ಲಾ ಒಪ್ಪಂದಗಳಿಗೆ ತಲೆಬಾಗುವುದಲ್ಲವೇ? ಅನಿವಾರ್ಯತೆ, ದುಡ್ಡಿನ ಅಗತ್ಯ ಬದುಕಿನಲ್ಲಿ ಯಾವುದ್ಯಾವುದೋ ಒಪ್ಪಂದಗಳಿಗೆ ತಳ್ಳುತ್ತದೆ. ರಮೇಶ ಕೆಲಸ, ಕೆಲಸ ಎಂದು ಸಂಸಾರದ ಜವಾಬ್ದಾರಿಗಳನ್ನೆಲ್ಲಾ ತನ್ನ ಮೇಲೆ ಹೇರುವುದು ಅನಿವಾರ್ಯವಾದಾಗ ಗಂಗಾ ಒಪ್ಪಿಕೊಂಡಿದ್ದಳು. ಅನಿವಾರ್ಯವಾಗಿ ಒಪ್ಪಂದಗಳಿಗೆ ತಲೆ ಬಾಗಿದ್ದಳು. ಕೆಲಸ, ಕೆಲಸ ಎಂದು ಮನೆಯ ಹೊರಗೇ ಸಮಯ ಕಳೆಯುವ, ಸಂಸಾರದ ಜವಾಬ್ದಾರಿಯನ್ನೆಲ್ಲಾ ತನ್ನ ಮೇಲೆ ಹೇರಿದ ರಮೇಶನನ್ನು ಪ್ರಶ್ನಿಸದವಳಾಗಿದ್ದಳು. ಈಗ ರಮೇಶ ತನ್ನ ಕೆಲಸವನ್ನು ಬಿಡುತ್ತೇನೆ ಎನ್ನುತ್ತಾನೆ. ಆತನ ಸಂಸ್ಥೆಯಿಂದ ಆತನನ್ನು ಅಮೇರಿಕಾಕ್ಕೆ ಕಳಿಸುವ ಸಿದ್ಧತೆಗಳು ನಡೆಯುತ್ತಿವೆ. ಪರಿಸರದ ಬಗ್ಗೆ ಕಾಳಜಿಯಿಂದ ಕೆಲಸ ಮಾಡುವ ರಮೇಶನಿಗೆ ಅವನದೇ ಒಂದು ವಲಯವಿದೆ. ಆ ವಲಯದಲ್ಲಿ ಆತನಿಗೆ ಅಸ್ತಿತ್ವವಿದೆ. ಆತನ ಹಲವಾರು ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅವನ ವ್ಯಕ್ತಿತ್ವದ ಹುಡುಕಾಟಕ್ಕೊಂದು ಕೇಂದ್ರ ಬಿಂದು, ಅದರ ಪರಿಪೂರ್ಣತೆಗೆ ತಡಕಾಡುವ ಸಂದರ್ಭದಲ್ಲಿ ಅವನಿಗೆ ಒಂದು ತರಹೆಯ ನೆಮ್ಮದಿ ಸಿಕ್ಕಿದೆ. ಈ ಕುರಿತಾದ ವಿಶೇಷ ಅಧ್ಯಯನಕ್ಕೆಂದು, ಪೇಪರ್ ಒಂದನ್ನು Submit ಮಾಡಲಿಕ್ಕೆಂದೇ ರಮೇಶ್ ತಿಂಗಳೊಪ್ಪತ್ತಿನಲ್ಲಿ ಅಮೇರಿಕಾಕ್ಕೆ ಹೋಗಬೇಕಾಗಿದ್ದಿದೆ. ಆದರೆ ರಮೇಶ ಈ ಕ್ಷಣ ತಾನು ಕೆಲಸ ಬಿಡುತ್ತೇನೆ ಅನ್ನುತ್ತಾನೆ. ಏನೋ ನನ್ನ ವ್ಯಕ್ತಿತ್ವದ ತಡಕಾಟದಲ್ಲಿ ನಿನ್ನನ್ನು, ನಿನ್ನ ವ್ಯಕ್ತಿತ್ವವನ್ನು ಮೊಟಕುಗೊಳಿಸಿಬಿಟ್ಟೆನೇನೋ ಎಂಬ ಪಾಪ ಪ್ರಜ್ಞೆ ತನ್ನಲ್ಲಿ ಅಗಾಧವಾಗಿ ಕಾಡತೊಡಗಿದೆ ಎನ್ನುತ್ತಾನೆ. ಈಗೆಲ್ಲಾ ಹಿಂದಿನ ದಿನಗಳನ್ನು ನೆನೆಸಿಕೊಳ್ಳಲಿಕ್ಕೂ ಭಯವಾಗುತ್ತದೆ ಅನ್ನುತ್ತಾನೆ. 'ಗಂಗಾ ತನ್ನ ಬದುಕಿಗೆ ಒಂದು ಅರ್ಥ ಹುಡುಕಲು ಪ್ರಾರಂಭಿಸಿದ್ದೇ ನಿನ್ನನ್ನು ಭೇಟಿಯಾದ ನಂತರದ ದಿನಗಳಿಂದ. ನನ್ನ ತಂದೆಯ ನೆರಳಲ್ಲಿ ಹೆಣ್ಣಾಗಿ ಬೆಳೆದವನು ನಾನು! ಹಾಗಾಗಿ ನೀನು ಆಗಾಗ್ಗೆ ಹೇಳುವ ಹೆಣ್ತನದ ನಾಚಿಕೆ, ಸಂಕೋಚಗಳು ನನ್ನಲ್ಲಿ ನನಗೆ ಗೊತ್ತಿಲ್ಲದ ಹಾಗೆಯೇ ಬೆಳೆದುಕೊಂಡು ಬಂದವು. ಬಹುಶಃ ನಿನ್ನ ವ್ಯಕ್ತಿತ್ವದ ಸಾನಿಧ್ಯದಲ್ಲಿಯೇ

ನಾನು-ನನ್ನದೊಂದು ವ್ಯಕ್ತಿತ್ವ ರೂಪಿಸುವುದನ್ನು ಕಲಿತೆ. ನನ್ನ ತಂದೆಯಿಂದ ಬೇರೆಯಾದ ವ್ಯಕ್ತಿತ್ವ ನನಗಿದೆ ಎಂದು ಗುರುತಿಸಿಕೊಂಡೆ. ತಂದೆಯ ಎದುರು ನಿಂತು ಮಾತನಾಡಲಾರದ ನಾನು ಅವರೆಲ್ಲರೆದುರಿಗೇ ಈಚೆ ಬಂದು ನಿನ್ನ ಜೊತೆ ಬದುಕ ರೂಪಿಸಿಕೊಂಡೆ. ಹೀಗೆ ಕೆಲಸ, ಕೆಲಸ ಎಂದು ಆಚೆ ಇರುವ ಸಂದರ್ಭದಲ್ಲಿ ನನಗೆ ಪಾಪಪ್ರಜ್ಞೆ ಕಾಡಿರಲಿಲ್ಲ ಎಂದಲ್ಲ. ಎಲ್ಲೋ ಗಂಗಾ ನನ್ನಿಂದ ದೂರ ಆಗುತ್ತಿದ್ದಾಳೆ, ಗಂಗಾ, ಮಗು ಮಿತಾರ ನಡುವೆ ತಾನು ದಿನನಿತ್ಯದ ಆತ್ಮೀಯತೆಯನ್ನು ಹಂಚಿಕೊಳ್ಳಲಾಗಲಿಲ್ಲ ಎಂಬ ನೋವು ಸದಾ ನನ್ನ ಕಾಡಿದ್ದಿದೆ. ಗಂಗಾ, ಈ ಇಡಿಯ ಸಂದರ್ಭದಲ್ಲಿ ನೀನು ನಿನ್ನೊಬ್ಬಳನ್ನು ಅನಾಥೆ ಎಂದುಕೊಳ್ಳುತ್ತೀಯ. ಆದರೆ ಇಡಿಯ ಸಂದರ್ಭ ಅವಲೋಕಿಸಿದರೆ ನನಗೆ ನಾವಿಬ್ಬರೂ ಅನಾಥರು ಎನಿಸುತ್ತದೆ. ಹೀಗೆ ಮೂರೂ ಹೊತ್ತು ತಿರುಗಾಡುವ, ಮನೆಯ ಜವಾಬ್ದಾರಿಗಳನ್ನೇ ಹಂಚಿಕೊಳ್ಳಲಾಗದ, ಮಗು ಹಾಗೂ ನಿನ್ನೊಡನೆ ಸಮಯ ಕಳೆಯಲಾಗದ, ನನಗೆ ನನ್ನದೇ ಸಮಯ ಎಂದಿರಲಾರದ ಇಂತಹ ಕೆಲಸದಿಂದ ಹಣ ಸಿಗುತ್ತೇ ನಿಜ. ನನ್ನ ವ್ಯಕ್ತಿತ್ವದ ತಡಕಾಟಕ್ಕೂ ಸ್ಪೇಸ್ ಕೊಡಬಹುದು. ಆದರ ಆ ಹಣ ಮನಃಶ್ಶಾಂತಿ ಕೊಡಲಾರದು ಎನ್ನಿಸಿದಲ್ಲಿ ಇಂತಹ ಹಣ ದುಡಿದೇನು ಪ್ರಯೋಜನ? ಏನಕ್ಕಾಗಿ ದುಡಿಯುವುದು? ಏನಕ್ಕಾಗಿ ಈ ಕೆಲಸ ಎಂಬ ಶೂನ್ಯ ಭಾವನೆಯೊಂದು ನನ್ನ ಎದೆಯಾಂತರಾಳದಲ್ಲಿ ಮೂಡತೊಡಗಿದೆ. ನಿನ್ನ ಪತ್ರ ನನ್ನ ಇಡಿಯ ವ್ಯಕ್ತಿತ್ವವನ್ನೇ ಅಲುಗಾಡಿಸಿದ ಅನುಭವವಾಯಿತು ನನಗೆ. ನಿನ್ನ ಪತ್ರ ಕೈಗೆ ಸಿಕ್ಕಾಗಿನಿಂದ ನಿಂತಲ್ಲಿ ನಿಲ್ಲದೇ, ಕೂತಲ್ಲಿ ಕೂರಲಾಗದೆ, ಮಲಗಿದರೆ ಕಣ್ಣು ಮುಚ್ಚಲಾರದೇ ಓಡಿ ಬಂದಿದ್ದೇನೆ. ಅಲ್ಲಿ Workshopನಲ್ಲಿ ಕುಳಿತು ಏನು ಮಾತನಾಡಿದೆನೋ ನನಗೇ ತಿಳಿಯದು. ಪ್ಲೀಸ್ ಗಂಗಾ ಈ ಕೆಲಸ ಮಾಡುವುದು ನನ್ನಿಂದ ಸಾಧ್ಯವಿಲ್ಲ. ಇಡಿಯ ಪ್ರಪಂಚದಲ್ಲಿ ನನಗೆ ಯಾರೂ ಇಲ್ಲ ಅನಿಸತೊಡಗಿದೆ. ನೀನು ನನ್ನ ಬದುಕಿನ ಕೇಂದ್ರ ಬಿಂದು. ಆ ಬಿಂದುವೇ ಒಡೆದು ಚೂರು ಚೂರಾದರೆ ನನ್ನ ಹೃದಯ, ಬದುಕು ಎಲ್ಲವೂ ಒಡೆದು ಚೂರು ಚೂರಾಗುತ್ತದೆ. ನನಗೆ ಅಮೇರಿಕಾಕ್ಕೆ ಹೋಗಿ ಸಾಧಿಸುವುದು ಏನೂ ಇಲ್ಲ. ಹಾಲೆಂಡಿನಲ್ಲಿ ನಾವಿಬ್ಬರೂ ಒಟ್ಟಿಗಿದ್ದು ಸಮುದ್ರದ ತೆರೆಗಳ ಶಬ್ದ ಕೇಳಿದವರು. ನಮ್ಮ ಮನಸ್ಸಿನ ಎಲ್ಲಾ ಗೊಂದಲ, ಭಾವನೆಗಳಿಗೆ ಸಮುದ್ರದ ತೆರೆಗಳಲ್ಲಿ ಧ್ವನಿ ಕಂಡುಕೊಂಡವರು. ಈಗ ನೀನಿಲ್ಲದೇ ಅಮೇರಿಕಾದಲ್ಲಿ ನನಗೆ ಬರಡು ಎನಿಸುತ್ತದೆ. ಎಲ್ಲರಿಗೂ ಅದೊಂದು ಅವಕಾಶ ಎಂಬಂತೇ ಕಾಣುತ್ತದೆ. ಆದರೆ ನೀನಿಲ್ಲದೇ ಇರೋ ಇಂತಹ ಅವಕಾಶಗಳು ನನಗೆ ಬೇಡ ಎನಿಸುತ್ತದೆ. ನಿನ್ನ ವ್ಯಕ್ತಿತ್ವ ಮುದುಡಿಸಿ, ನಿನ್ನ ವ್ಯಕ್ತಿತ್ವದ ಸಮಾಧಿಯ ಮೇಲೆ ನಾನು ಇಂತಹ ಅವಕಾಶಗಳನ್ನು ಪಡೆದುಕೊಂಡೆನೇನೋ ಎಂಬ ಪಾಪಪ್ರಜ್ಞೆ ಕಾಡಿದರೆ ನನ್ನ ಮನಸ್ಸು ಸ್ಥಿಮಿತದಲ್ಲಿಯೇ ಉಳಿಯುವುದಿಲ್ಲ. ಗಂಗಾ, ಬಹುಶಃ ನಿನ್ನ ಅಂತರಂಗವನ್ನು ನೀನು ಕೆದಕಿಕೊಂಡು ನೋಡಿದರೆ ಈ ಒಂದು ಮಗ್ಗುಲಿನ ಅಸೂಯೆಯೂ ನಿನ್ನಲ್ಲಿ ಮನೆ ಮಾಡಿದ್ದಿರಬಹುದು. ನಿನ್ನ ವ್ಯಕ್ತಿತ್ವ ಕಮರಿಸಿದ ಬಗ್ಗೆ ನಿನ್ನೊಳಗೇ ಎಲ್ಲೋ ಸಿಟ್ಟು ಮನೆ ಮಾಡಿಕೊಂಡಿದೆ. ಹಾಗಾಗಿ ನಾನು ಹೊರಗೆ ಕಾಲ ಕಳೆಯುತ್ತಾ ಹೋದ ಹಾಗೆಲ್ಲಾ ನಿನಗೆ ಅನಾಥೆ ಎನಿಸುತ್ತದೆ. ಜೊತೆಗೆ ಅವಕಾಶಗಳ ಮೆಟ್ಟಿಲೇರಿ ಬೆಳೆಯುತ್ತಾ ಹೋಗುವ ನನ್ನ ಬಗ್ಗೆ ಅಸೂಯೆ ಹುಟ್ಟುತ್ತಾ ಹೋಗುತ್ತದೆ. ಇವೆಲ್ಲಾ ನಿನ್ನ ಸೂಕ್ಷ್ಮವಾದ ಮನಸ್ಸಿಗೆ ಅಗಾಧವಾಗಿ ಪೆಟ್ಟು ನೀಡುತ್ತಾ ಹೋದ ಹಾಗೆ ಛಿದ್ರ ಛಿದ್ರವಾಗಿ ಹೋಗುತ್ತಿದ್ದೇನೆ ಎನ್ನುವ ಮನಸ್ಥಿತಿ ನಿನ್ನಲ್ಲಿ ಮೂಡುತ್ತಾ ಹೋಗುತ್ತದೆ. ಹೀಗೆ ಮಾನಸಿಕವಾಗಿ ಛಿದ್ರವಾಗಿ ಹೋಗದಿರಲಿಕ್ಕಾಗಿ, ನಿನ್ನೊಳಗಿನ Sanity ಉಳಿಸಿಕೊಳ್ಳುವುದಕ್ಕಾಗಿ ಇನ್ನೇನೋ ಚಾನಲ್ಸ್‌ಗಳನ್ನು ನೀನು ಹುಡುಕುತ್ತೀಯ. ಮಧುವಿನ ಜೊತೆಗಿನ ಸಂಬಂಧ ಇಂತಹ ಸಂದರ್ಭಗಳಲ್ಲಿ ಮೂಡಿ ಬಂದುದು. ಏಳೆಂಟು ವರ್ಷ ನಿನ್ನೊಡನೆ ಬದುಕಿದ ನಾನು ಶಂಕರನ ಹಾಗೆ ಯೋಚಿಸಲಾರೆ. ಹುಡುಗರ ಜೊತೆ ಮಲಗುವುದೇ ನಿನ್ನ ಅಂತಿಮ ಗುರಿ ಎಂದು ಶಂಕರ

ಹೇಳುತ್ತಾನೆ. ಆದರೆ ನಿನ್ನ ಬಗ್ಗೆಗಿನ ನನ್ನ ಗ್ರಹಿಕೆ ಅದಲ್ಲ. ನನ್ನ ಹಾಗೂ ನಿನ್ನ ನಡುವೆ ಪರೋಕ್ಷವಾಗಿ ಮೂಡಿರುವ ಭಾವನೆಗಳೆಲ್ಲಾ ಇದಕ್ಕೆ ಕಾರಣವಿರಬಹುದು. ಸತ್ತು ಹೋಗುತ್ತಿದೆ ನಿನ್ನ ಬರವಣಿಗೆ ಎಂಬ ನಿನ್ನ ಆತಂಕ ಇರಬಹುದು. ಕೊನೆಗೆ ಒಬ್ಬ housewife ಆಗಿ ಉಳಿಯುತ್ತಿದ್ದೇನೆ ಎಂಬ ನಿನ್ನ ಆತಂಕ. ಹೀಗೇ ಏನೇನೋ ನಿನ್ನ ಅಂತರಂಗದ ಆತಂಕಗಳು ನಿನ್ನಲ್ಲಿ ಹೊಸ ಅವಕಾಶವೊಂದಕ್ಕೆ ಎದುರು ನೋಡುವಂತೆ ಮಾಡಿರಬಹುದು. ಸಾಂಸ್ಕೃತಿಕ ವಾತಾವರಣದಲ್ಲಿ ನಿನ್ನನ್ನು ನೀನು ತೊಡಗಿಸಿಕೊಳ್ಳಲಾರದ, ಓಡಾಡಲಾರದ, ಏನೂ ಮಾಡಲಾಗದ ನಿನಗೆ-ಮಧು ಹಾಗೂ ನಿನ್ನ ನಡುವಿನ ಸಂಬಂಧ ಒಂದು ಚೈತನ್ಯದ ಸಂಕೇತವಾಗಿ ಕಂಡಿರಬಹುದು. ಹೀಗೆಲ್ಲಾ ಯೋಚಿಸುತ್ತಾ ಹೋಗುವಾಗ ಗಂಗಾ ನನಗೆ ನಿನ್ನ ಬಗ್ಗೆ ಸಿಟ್ಟು ಬರುವುದಿಲ್ಲ. ನನ್ನ ಬಗ್ಗೆಯೇ ನನಗೆ ಸಿಟ್ಟು ಬರುತ್ತದೆ. ನನ್ನ ಕೆಲಸದ Nature ಬಗ್ಗೆ ಸಿಟ್ಟು ಬರುತ್ತದೆ. ಬಂಡವಾಳಶಾಹಿ ಸಮಾಜ ಹುಟ್ಟು ಹಾಕುವ ಆಯ್ಕೆಗಳ ಬಗ್ಗೆ ಸಿಟ್ಟು ಬರುತ್ತದೆ. ಆದರೆ ಹೀಗೆಯೇ ಮುಂದುವರೆದರೆ ನಾವಿಬ್ಬರೂ ತೀರಾ ಬೇರೆ ಬೇರೆಯೇ ವ್ಯಕ್ತಿಗಳಾಗಿ ಅನಾಥರಾಗಿ ಬಿಡುತ್ತೇವೆ. ಈ ಭಯ ನನ್ನನ್ನು ಕಾಡುತ್ತದೆ. ನನ್ನ ವ್ಯಕ್ತಿತ್ವದಲ್ಲಿ ಒಂದಾಗಿದ್ದ ವ್ಯಕ್ತಿಯೊಂದು ಇಂದು ದೂರವಾಗುತ್ತಿದೆ ಎಂಬ ಆತಂಕವೇ ನನಗೆ ಹೆಚ್ಚು. ಗಂಗಾ ಇದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಲಾರೆ. ಈ ಇಡಿಯ ಸಂದರ್ಭ ನಿಭಾಯಿಸುವ ಜವಾಬ್ದಾರಿ ಇರುವುದು ನನ್ನ ಮೇಲೆ. ನನ್ನ, ನಿನ್ನ ಹಾಗೂ ಮಿತಾಳ ಬದುಕನ್ನು ಮತ್ತೆ ಸರಿಪಡಿಸಿಕೊಳ್ಳಬೇಕಾದವನು ನಾನೇ. ಈಗ ಈ ಜವಾಬ್ದಾರಿಯನ್ನು ನಾನು ತಳ್ಳಿದರೆ ಖಂಡಿತಾ ನನ್ನ, ನಿನ್ನ ಹಾಗೂ ಮಿತಾಳ ನಡುವಿನ ಇಂಟಿಗ್ರಿಟಿಯನ್ನು ಮತ್ತೆ ಒಂದುಗೂಡಿಸಲು ಸಾಧ್ಯವಾಗುವುದಿಲ್ಲ. ನೀನು ಏನೇ ಹೇಳಿದರೂ ಈ ಕೆಲಸದಲ್ಲಿ ಮತ್ತೆ ನಾನು ಮುಂದುವರೆಯಲಾರೆ. ಹಾಗೆಂದು ನಿನಗೆ ಭಾರವಾಗಿ ಮನೆಯಲ್ಲಿ ಕೂತುಕೊಳ್ಳಲಾರೆ. ಗಳಿಸುವ ಜವಾಬ್ದಾರಿ, ಕೆಲಸದ ಜವಾಬ್ದಾರಿಯನ್ನು ನಾನು ನಿಭಾಯಿಸುತ್ತೇನೆ. ನಿನ್ನ ಕಾರಣದಿಂದ ಈ ಆಯ್ಕೆ ಎಂದು ನಾನು ಅಂದುಕೊಳ್ಳುವುದೇ ಇಲ್ಲ. ನೀನು ನೆಪ ಮಾತ್ರ. ನನ್ನ ಬದುಕನ್ನು ನನ್ನ ಕೈಗೆ ತೆಗೆದುಕೊಳ್ಳಲಿಕ್ಕೆ ಎಂದೇ ಯೋಚಿಸುತ್ತಿದ್ದೇನೆ......."

ಹೀಗೆ ರಮೇಶ ಎಷ್ಟು ಹೊತ್ತು ಮಾತನಾಡಿದನೋ ಗಂಗಾಳಿಗೆ ಅರಿವಿಲ್ಲ. ರಮೇಶನಿಗೆ ಬದುಕಿನ ಬಗ್ಗೆ ಇರುವ ಆಳವಾದ ಗ್ರಹಿಕೆಗಳ ಬಗ್ಗೆ ಆಕೆಗೇ ಆಶ್ಚರ್ಯವಾಗತೊಡಗಿತ್ತು. ರಮೇಶ್ ಎಷ್ಟು ಪೊಯೆಟಿಕ್ ಆಗಿ, ಭಾವನಾತ್ಮಕವಾಗಿ ಮಾತನಾಡಬಲ್ಲ ಎಂಬುದು ಗಂಗಾಗೆ ಅರ್ಥವಾದದ್ದೇ ಈ ಸನ್ನಿವೇಶದಲ್ಲಿ. ರಮೇಶ ಮಾತನಾಡುತ್ತಲೇ ಇದ್ದ. ಮಧ್ಯೆ ಮಧ್ಯೆ ಅವನ ಕಣ್ಣಲ್ಲಿ ಧಾರಾಕಾರವಾಗಿ ನೀರು ಹರಿಯತೊಡಗಿತ್ತು. ಅಳುವನ್ನು ತಡೆಯಲಿಕ್ಕೇ ಎಂಬಂತೆ ನಿರಂತರವಾಗಿ ಸಿಗರೇಟ್ ಸೇದತೊಡಗಿದ್ದ. ಬಿಸಾಕಿದ ಸಿಗರೇಟು ತುಂಡುಗಳ ನಡುವೆ ಆಗಾಗ್ಗೆ ಅಳುತ್ತಾ ಮಾತನಾಡುವ ರಮೇಶನನ್ನು ಕಂಡು ಗಂಗಾಗೆ ಮೈಯಲ್ಲಿ ಒಂದು ಕ್ಷಣ ನಡುಕ ಉಂಟಾಗಿತ್ತು. ತಾನು ಇವರೆಲ್ಲರ ಬಾಳಿನ ನಡುವೆ ಹೇಗೆ ಒಂದು ಪ್ರಶ್ನೆಯಾಗಿಬಿಟ್ಟೆನಲ್ಲ ಎಂಬಂತಹ ದುಗುಡ ಆಕೆಯೊಳಗೆ ಮನೆ ಮಾಡತೊಡಗಿತ್ತು. ಬೌದ್ಧಿಕತೆಯ ಸೋಂಕಿಲ್ಲದ ಒಬ್ಬ ಸಾಧಾರಣ ಗೃಹಿಣಿಯಾಗಬಹುದಾದ ಹುಡುಗಿಯೋರ್ವಳನ್ನು ಮದುವೆಯಾಗಿದ್ದರೆ ರಮೇಶ ಸುಖವಾಗಿ ಬದುಕಿಬಿಡುತ್ತಿದ್ದನೇನೋ ಎಂಬ ಅಂಶ ಗಂಗಾಳ ಮನಸ್ಸಿನಲ್ಲಿ ಸುಳಿದು ಹೋಗದೇ ಇರಲಿಲ್ಲ. ರಮೇಶ ಮಾತನಾಡುತ್ತಲೇ ಇದ್ದ. 'ಈಗಾಗಲೇ ನಾನು ನನ್ನ ಕಲೀಗ್ಸ್ ಹತ್ತಿರ ಕೆಲಸ ಬಿಡುವ ವಿಚಾರ ಹೇಳಿದ್ದೇನೆ. ನೀನು ಮತ್ತೆ ತಲೆ ಹಾಕಿ ತಲೆ ಹರಟೆ ಮಾಡಬೇಡ' ಎಂದ. ಗಂಗಾ ಮತ್ತೆ ಮತ್ತೆ 'ಈ ಕುರಿತು ನಿಧಾನವಾಗಿ ಯೋಚಿಸು ರಮೇಶ್' ಎಂದಳು. 'ಹೀಗೆ ದಢಕ್ಕೆಂದು ತೆಗೆದುಕೊಳ್ಳುವ ನಿರ್ಧಾರಗಳು ನಿನ್ನನ್ನೆಲ್ಲಿಗೂ ಒಯ್ಯುವುದಿಲ್ಲ' ಎಂದಳು. ರಮೇಶನಿಗೆ ಸಿಟ್ಟು ಬಂದಿತ್ತು "Shut up your mouth Ganga, you don't have any right to control me, I know what

to do and I take my decision to settle my life in a way I like and you like". ರಮೇಶ್ ಸಿಟ್ಟಿನಿಂದ ಎದ್ದು ನಿಂತ. ಗಂಗಾ ಕೂಡಾ ಮೇಲೆ ಎದ್ದಳು. ಆಗಲೇ ಬೆಳಗಾಗುತ್ತಾ ಬಂದಿತ್ತು. ರಮೇಶ್ ಮಿತಾಳ ಪಕ್ಕದಲ್ಲಿ ಮಲಗಿಕೊಂಡ. ಶಾಂತವಾಗಿ ಮಲಗಿ ನಿದ್ರಿಸುತ್ತಿರುವ ಮಿತಾಳನ್ನು ಕಂಡಾಗ ಗಂಗಾಗೆ ಅಸೂಯೆ ಎನ್ನಿಸತೊಡಗಿತ್ತು. ಟೇಬಲ್ ಮೇಲೆ ತಲೆಯೂರಿ ಗಂಗಾ ಯೋಚಿಸ ತೊಡಗಿದ್ದಳು. ಮಧುವಿನೊಂದಿಗೆ ಪ್ರಾರಂಭವಾಗಿ ತಳಕು ಹಾಕಿಕೊಂಡ ಪ್ರಶ್ನೆಗಳು ಮಧುವಿನೊಟ್ಟಿಗೆ ಹೋಗಿರಲಿಲ್ಲ. ಇನ್ನು ಎಲ್ಲೆಲ್ಲಿಗೆ ತನ್ನ ಬದುಕು lead ಆಗುತ್ತದೆಯೋ ಎನ್ನುವ ಆತಂಕ ಗಂಗಾಳಲ್ಲಿ ಕಾಡತೊಡಗಿತ್ತು.

* * * *

ಮತ್ತೆ ಯಥಾಪ್ರಕಾರ ಗಂಗಾ ಕಾಲೇಜು, ಮನೆ, ಮಗು ಬರವಣಿಗೆಯಲ್ಲಿ ಕಾಲ ಕಳೆಯತೊಡಗಿದ್ದಳು. ಮಧು ಬರವಣಿಗೆಯ ಚೈತನ್ಯ ಬಿಟ್ಟು ಹೋಗಿದ್ದ. ಖಾಲಿ ಖಾಲಿಯಾಗಿದ್ದ ಗಂಗಾಳ ಮನಸ್ಸು ಈಗ ಯಾವಾಗಲೂ ತುಂಬಿಕೊಂಡಂತೆ ಭಾಸವಾಗತೊಡಗಿತ್ತು. ಗಂಗಾ ಕೆಲಸ ಬಿಡಬೇಡವೆಂದು ಬಹಳ ಸಾರಿ ಹೇಳಿದ್ದಕ್ಕಾಗಿಯೋ ಅಥವಾ ಅವನ ಮನಸ್ಸಿಗೇ ಅನ್ನಿಸಿಯೋ ರಮೇಶ ಕೆಲಸ ಬಿಟ್ಟಿರಲಿಲ್ಲ. ಆತ ಹೊರಗಡೆ ಊರುಗಳಿಗೆ ಹೋದುದೂ ಕಡಿಮೆ. ಆದರೂ ರಮೇಶನ ಮನಸ್ಸು ಸ್ಥಿಮಿತದಲ್ಲಿಲ್ಲ ಎಂದೇ ಗಂಗಾಗೆ ಅನ್ನಿಸುತ್ತಿತ್ತು. ಮೊದಲಿನ ಉತ್ಸಾಹವೆಲ್ಲಾ ಅವನಲ್ಲಿ ಜರ್‍ರನೇ ಇಳಿದು ಹೋಗಿತ್ತು. ಏನೋ ಯಾಂತ್ರಿಕವೆಂಬಂತೆ ಆತ ಕೆಲಸಕ್ಕೆ ಹೋಗಿ ಬರುತ್ತಿದ್ದ. ಬದುಕಿಗೆ ಹಣ ಹೆಚ್ಚೋ, ನೆಮ್ಮದಿ ಹೆಚ್ಚೋ ಎಂಬಂತಹ ದ್ವಂದ್ವಗಳು ಅವನಿಗೇ ಕಾಡತೊಡಗಿದ್ದವು. ರಮೇಶ ಯಾವಾಗಲೂ ಎಲ್ಲಿಯೋ ಕಳೆದು ಹೋದವನಂತೆ, ಏನನ್ನೋ ಕಳೆದುಕೊಂಡವನಂತೆ, ಏನೋ ದಿಕ್ಕಿಲ್ಲದವನಂತೆ ಕುಳಿತುಕೊಳ್ಳುವುದನ್ನು ನೋಡಿದಾಗ ಗಂಗಾಗೆ ಕಷ್ಟವಾಗುತ್ತಿತ್ತು. ಅವನಿಗೆ ಈಗ ಯಾರ ಮೇಲೂ ವಿಶ್ವಾಸವಿದ್ದಂತೆ ಅನ್ನಿಸುತ್ತಿರಲಿಲ್ಲ. ಯಾರನ್ನೂ ನಂಬುವವನಂತೆ ಆತ ಕಾಣುತ್ತಿರಲಿಲ್ಲ. ಯಾರ ಜೊತೆ ಕುಳಿತು ಮಾತನಾಡಿದರೂ ಅವನಿಗೆ ಸಮಾಧಾನ ಸಿಕ್ಕಂತೆ ಅನಿಸುತ್ತಿರಲಿಲ್ಲ. ಒಬ್ಬನೇ ಕೂತು ಎಲ್ಲವನ್ನೂ ಜೀರ್ಣಿಸಿಕೊಳ್ಳುವ ಸ್ವಭಾವವೂ ಆತನದ್ದಲ್ಲ. ಗಂಗಾ ಒಬ್ಬಳೇ ಕೂತು ಬರೆಯುವುದನ್ನು ಕಂಡಾಗ ಆತನಿಗೆ ಅಸೂಯೆ ಅನ್ನಿಸುತ್ತಿತ್ತು. ಹೀಗೇ ಒಬ್ಬಳೇ ಕೂತು ಏನೇನೋ ಬರೆಯುತ್ತಲೇ ಗಂಗಾ ಎಲ್ಲವನ್ನೂ ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಪಡೆಯುತ್ತಾಳೆ ಎನಿಸುತ್ತದೆ. ಗಂಗಾ ಯಾವಾಗಲೂ ರಮೇಶನಿಗೆ ಹೇಳುತ್ತಿದ್ದಳು. ಹೀಗೇ ಏನೇನೋ ದ್ವಂದ್ವಗಳಿಂದ, ಸಮಸ್ಯೆಗಳಿಂದ ಒದ್ದಾಡುತ್ತೀಯಲ್ಲ, ಕುಳಿತು ಡೈರಿಯನ್ನಾದರೂ ಬರಿ, ಏನೋ ಮನಸ್ಸಿನಲ್ಲಿರುವುದನ್ನು ಬರೆಯುತ್ತಾ ಹೋದರೆ ಮನಸ್ಸಿಗೆ ಸಮಾಧಾನ ಸಿಕ್ಕಬಹುದು ಎನ್ನುತ್ತಾಳೆ. ರಮೇಶ ಅದನ್ನು ಪ್ರಯತ್ನಿಸುತ್ತಾನೆ. ಯಾಕೋ ಕೂತುಕೊಂಡು ಬರೆಯಲು ಪೆನ್ನು ಹಿಡಿದರೆ ಏನನ್ನೂ ಬರೆಯಲು ಸಾಧ್ಯವಿಲ್ಲ ಎನಿಸುತ್ತದೆ. ಬರವಣಿಗೆಯ ಮೂಲಕ ಬದುಕಿನ ಸತ್ಯಗಳನ್ನು ಗಂಗಾ ಜೀರ್ಣಿಸಿಕೊಳ್ಳುವ ಹಾಗೆ ತನಗೆ ಸಾಧ್ಯವಾಗುವುದಿಲ್ಲವೇನೋ ಎನಿಸುತ್ತದೆ. ಗಂಗಾ ಆತಂಕದ ಸ್ಥಿತಿಯಲ್ಲಿಯೇ ಕುಳಿತು ಬರೆಯುತ್ತಾಳೆ. ಬರೆಯುವುದರಲ್ಲಿಯೇ ಪೂರ್ತಾ ತನ್ಮಯಳಾಗಿ ಬಿಡುತ್ತಾಳೆ. ಆದರೆ ತನಗೆ ಅದು ಸಾಧ್ಯವಾಗುವುದಿಲ್ಲ. ಆತಂಕದ ಸ್ಥಿತಿ ತನ್ನಲ್ಲಿ ಹೆದರಿಕೆಯನ್ನು ಹುಟ್ಟು ಹಾಕುತ್ತದೆ. ಅಗಾಧವಾಗಿರುವ ಅನಾಥಪ್ರಜ್ಞೆಯನ್ನು ಹುಟ್ಟುಹಾಕುತ್ತದೆ. ಮನಸ್ಸು ಸ್ಥಿಮಿತದಲ್ಲಿಯೇ ಉಳಿಯುವುದಿಲ್ಲ. ಹೀಗೆಲ್ಲಾ ಅನ್ನಿಸುವಾಗ ತನ್ನ ಜೀವನದ ಕ್ರಮ ದಾರಿ ತಪ್ಪಿ ಹೋಗುತ್ತಿದೆ ಎಂದು ರಮೇಶನಿಗೆ ಭಾಸವಾಗುತ್ತದೆ. ಹೀಗೆಯೇ ಗಂಗಾ ಒಂದು ದಿನ ರಮೇಶನಿಗೆ "ರಮೇಶ್ ನಿನಗೆ ತೀರಾ ಆತ್ಮೀಯರು ಅಥವಾ ಹತ್ತಿರದವರು ಎನ್ನುವ ಯಾರಾದರೊಡನೆ ಕುಳಿತು ಮಾತನಾಡು. ಬಹುಶಃ

ಇನ್ನೊಬ್ಬರೊಡನೆ ಹಂಚಿಕೊಳ್ಳದೇ ನಿನ್ನ ಮನಸ್ಸಿಗೆ ನೆಮ್ಮದಿ ಸಿಗಲಾರದು. ಹಂಚಿಕೊಳ್ಳುವುದರಿಂದ ನಿನ್ನ ಮನಸ್ಸು ಹಗುರವಾಗಬಹುದು' ಹಾಗೆಂದು ರಮೇಶನಿಗೂ ಅನ್ನಿಸತೊಡಗಿತ್ತು. ತಾನು ಕೆಲಸ ಮಾಡುವ ಸಂಸ್ಥೆಯ ನಿರ್ದೇಶಕರೊಂದಿಗೇ ಕುಳಿತು ಮಾತನಾಡಬೇಕೆಂದು ಯೋಚಿಸುತ್ತಾನೆ. ದೂರದಲ್ಲಿ ನಿಂತು ನೋಡುವ ಅವರಿಗೆ ತನ್ನ ಸಮಸ್ಯೆಯ ಬೇರೆ ಬೇರೆ ಮುಖಗಳು ಅರ್ಥವಾಗಬಹುದು ಅನಿಸುತ್ತದೆ. ಮನಃಶ್ಶಾಸ್ತ್ರ ಓದಿದ ಅವರಿಗೆ ತನ್ನ ಸಮಸ್ಯೆಯ ಸುಳಿಗಳು ಅರ್ಥವಾದಾವು ಎನಿಸುತ್ತದೆ. ಜೊತೆಗೆ ತಾನು ಸ್ವಲ್ಪ ದಿನಗಳಲ್ಲಿ ಕೆಲಸ ಬಿಡುವ ವಿಚಾರವನ್ನೂ ರಮೇಶ ಅವರಿಗೆ ವಿವರಿಸಿ ಹೇಳಬೇಕಿತ್ತು. ಅಮೇರಿಕಾಕ್ಕೆ ಹೋಗದಿರುವ ತನ್ನ ನಿರ್ಧಾರವನ್ನೂ ಜಾಗ್ರತೆಯಾಗಿ ತಿಳಿಸಬೇಕಿತ್ತು. ತಿಂಗಳೊಪ್ಪತ್ತಲ್ಲಿ ಆತ ಅಮೇರಿಕಾಕ್ಕೆ ಹೋಗಬೇಕಿತ್ತು. ಪಾಸ್‌ಪೋರ್ಟ್ ಆದಿಯಾಗಿ ಎಲ್ಲವೂ ಸಿದ್ಧವಾಗಿದೆ. ರಮೇಶನ ಪ್ರಯಾಣಕ್ಕಾಗಿ ಎಲ್ಲರಕ್ಕಿಂತ ಹೆಚ್ಚು ಸಂತೋಷಪಟ್ಟವರು ಅವನ ನಿರ್ದೇಶಕರೇ. ಅವರ ಬಳಿ ತಾನು ಅಮೇರಿಕಾಕ್ಕೆ ಹೋಗಲಾರೆ ಎಂದು ಹೇಳುವುದು ರಮೇಶನಿಗೆ ಕಷ್ಟವಾಗುತ್ತದೆ. ಯಾಕೆ? ಎನ್ನುವಂತಹ ಗಂಭೀರವಾದ ಪ್ರಶ್ನೆಗಳನ್ನು ಆತ ಎದುರಿಸಬೇಕಾಗುತ್ತದೆ. ಹಾಗಾಗಿ ಅವರ ಹತ್ತಿರವೇ ತನ್ನ ಮನದಾಳದ ಸಮಸ್ಯೆಯನ್ನು ಹಂಚಿಕೊಳ್ಳುವುದೆಂದು ರಮೇಶ್ ನಿರ್ಧರಿಸಿದ. ಗಂಗಾ ಹೇಳಿದ ಹಾಗೆ ಮನಬಿಚ್ಚಿ ಇನ್ನೊಬ್ಬರ ಹತ್ತಿರ ಮಾತನಾಡಿದರೆ ಮನಃಶ್ಶಾಂತಿಯೂ ಸಿಗಬಹುದು, ಜೊತೆಗೆ ಅಮೇರಿಕಾಕ್ಕೆ ಹೋಗುವ ಮನಃಸ್ಥಿತಿಯಲ್ಲಿ ತಾನಿಲ್ಲ ಎನ್ನುವುದೂ ಅವರಿಗೆ ಅರ್ಥವಾಗಬಹುದು. ಹೀಗಾಗಿ ತನ್ನ ನಿರ್ದೇಶಕ ಶಾಂತಾರಾಂರೊಟ್ಟಿಗೇ ಮಾತನಾಡುವುದೆಂದು ರಮೇಶ್ ನಿರ್ಧರಿಸಿದ. ಹಾಗೆಂದು ಗಂಗಾಳ ಬಳಿಯೂ ಹೇಳಿದ. ಗಂಗಾ 'ಸರಿ' ಎಂದಳು. ಹೀಗೆ ಗಂಗಾಳೊಟ್ಟಿಗೆ ಹೇಳಿದ ಎಷ್ಟೋ ದಿನಗಳವರೆಗೂ ಆತ ನಿರ್ದೇಶಕರ ಹತ್ತಿರ ಮಾತನಾಡುವ ಪ್ರಯತ್ನವನ್ನೇ ಮಾಡಲಿಲ್ಲ. ಕುಳಿತುಕೊಂಡು ಯೋಚಿಸಿದರೆ ತಾನೇ ಇದನ್ನೆಲ್ಲ ಜೀರ್ಣಿಸಿಕೊಳ್ಳಬಲ್ಲೆನೇ ಎಂದು ಪ್ರಯತ್ನಿಸಿದ. ಕಬ್ಬನ್ ಪಾರ್ಕ್‌ನಲ್ಲಿ ಒಬ್ಬನೇ ಕುಳಿತು, ಅಲಸೂರು ಕೆರೆಯ ಬಳಿ ಒಬ್ಬನೇ ಸುತ್ತಾಡಿ ಯೋಚಿಸಿದ. ತಾನು ಮಾಡುತ್ತಿರುವುದು ಸರಿಯೇ? ತಾನು ಅಮೇರಿಕಾಕ್ಕೆ ಹೋಗದಿರುವ ನಿರ್ಧಾರ ಮಾಡಿದುದು ಸರಿಯೇ? ತನ್ನ ಮನಸ್ಸಿಗೆ ಅಲ್ಲದಿದ್ದರೂ, ತನ್ನ ಜೀವನಕ್ಕೊಂದು ಕೇಂದ್ರ ಬಿಂದು ತಂದುಕೊಟ್ಟ ತನ್ನ ಕೆಲಸವನ್ನು ಬಿಡುವ ನಿರ್ಧಾರ ಸರಿಯೆ? ಹಣದ ಸ್ತರದಲ್ಲಿ ನೆಮ್ಮದಿಯಿಂದಿರುವ ಬದುಕಿನಲ್ಲಿ ಉಂಟಾಗುವ ಏರಿಳಿತಗಳು ತನ್ನ ಬದುಕನ್ನು ಇನ್ನಷ್ಟು Wretched ಮಾಡಲಾರವೇ? ಈಗ ನೆಮ್ಮದಿ ಬೇಕು ಅನಿಸುತ್ತದೆ. ಕೊನೆಗೆ ಹಣ ಇಲ್ಲದಿರುವ ವಿಚಾರವೇ ತನ್ನ ಇಡಿಯ ನೆಮ್ಮದಿ ಕಸಿದುಕೊಳ್ಳುವ ಸಮಸ್ಯೆಯಾಗಿ ಬಿಟ್ಟರೆ? ಹೀಗೇ ಏನೇನೋ ಆತಂಕಗಳು.

ಹೀಗೆಯೇ ಒಂದು ದಿನ ಸಹಜವಾಗಿ ಎಂಬಂತೆ ಶಾಂತಾರಾಂರೊಡನೆ ಕುಳಿತು ಆಫೀಸಿನಲ್ಲಿ ಊಟ ಮಾಡುವಾಗ ರಮೇಶ ಅವರೊಡನೆ ಮಾತಿಗೆ ಪ್ರಾರಂಭಿಸಿದ. ಮಾತಿನ ನಡುವೆ ನಿಮ್ಮ ಹತ್ತಿರ ನನ್ನ ಕೆಲವೊಂದು ವೈಯಕ್ತಿಕ ವಿಚಾರ ಹಂಚಿಕೊಳ್ಳಲಿಕ್ಕಿದೆ ಎಂದ. ರಮೇಶನಲ್ಲಿ ಇತ್ತೀಚೆಗೆ ಆಗುತ್ತಿರುವ ಬದಲಾವಣೆಗಳನ್ನು ಅವರು ಗಮನಿಸಿದ್ದರೂ ಕೂಡಾ. ಮಧ್ಯಾಹ್ನದ ಊಟದ ಸಮಯದಲ್ಲಿ ಎಲ್ಲರೊಡನೆ ನಕ್ಕು ಬೆರೆಯುತ್ತಿದ್ದ ರಮೇಶ್ ಈಗ ಲಂಚ್ ಟೈಮ್ ಎಂದರೆ ಆಫೀಸಿನಲ್ಲಿಯೇ ಇರುತ್ತಿರಲಿಲ್ಲ. ಏನಾದರೂ ನೆಪ ಹೇಳಿ ಹೊರಗಡೆ ಹೋಗಿಬಿಡುತ್ತಿದ್ದ. ಯಾರಿಗೂ ಮಾತಿಗೇ ಸಿಗುತ್ತಿರಲಿಲ್ಲ. ಆಕಸ್ಮಾತ್ ಒಟ್ಟಿಗೇ ಇದ್ದರೂ ಕೂಡಾ ಎಲ್ಲೋ ಕಳೆದು ಹೋದವನಂತೆ ಕುಳಿತು ತಿನ್ನುತ್ತಿದ್ದ. ಮೊದಲಿನ ಹಾಗೆ ಮುಖದಲ್ಲಿ, ಮಾತಿನಲ್ಲಿ ಉತ್ಸಾಹವೇ ಇರುತ್ತಿರಲಿಲ್ಲ. ಒತ್ತಾಯಿಸಿ ಏನಾದರೂ ಕೇಳಿದರೆ ಹುಷಾರಿಲ್ಲ ಎಂದು ನೆಪ ಹೇಳಿಬಿಡುವ. ಪ್ರೋಗ್ರಾಂಗಳಿಗೆ ಹೋಗಬೇಕಾಗಿ ಬಂದರೆ ಏನಾದರೂ ನೆಪ ಹೇಳಿ ತಪ್ಪಿಸಿಕೊಂಡುಬಿಡುತ್ತಿದ್ದ. ಅಷ್ಟೊಂದು ಲವಲವಿಕೆ, ಉತ್ಸಾಹದಿಂದ ಕೆಲಸ ಮಾಡುತ್ತಿದ್ದ ರಮೇಶ್

ಹೀಗೆ ತಪ್ಪಿಸಿಕೊಂಡವನಂತೆ, ಕಳೆದು ಹೋದವನಂತೆ ವರ್ತಿಸುವುದನ್ನು ಕಂಡಾಗಲೆಲ್ಲಾ ಶಾಂತಾರಾಂ ಕೂಡಾ ಆಶ್ಚರ್ಯಪಟ್ಟಿದ್ದರು. ಈತ ಮನಸ್ಸಿನಲ್ಲಿ ಏನನ್ನೋ ಇಟ್ಟುಕೊಂಡು ಕೊರಗುತ್ತಾನೆ ಎನಿಸತೊಡಗಿತ್ತು. ಆತನೇ ಏನೂ ಹೇಳದುದರಿಂದ ಕೇಳಲು ಸಂಕೋಚವಾಗಿ ಅವರೂ ಸುಮ್ಮನಿದ್ದರು. ಈ ದಿನ ರಮೇಶನೇ ತಾನಾಗಿಯೇ ವೈಯಕ್ತಿಕ ವಿಚಾರಗಳನ್ನು ಮಾತನಾಡಬೇಕು ಎನ್ನುತ್ತಿದ್ದಾನೆ. ಆತನಿಗಾಗಿ ಶಾಂತಾರಾಂ ತಮ್ಮ ಮಧ್ಯಾಹ್ನದ ಅನೇಕ ಕಾರ್ಯಕ್ರಮಗಳೆಲ್ಲವನ್ನೂ ಕ್ಯಾನ್ಸಲ್ ಮಾಡಿದರು. ರಮೇಶ್ ಶಾಂತಾರಾಂ ಕೊಠಡಿಯಲ್ಲಿ ಒಂಟಿಯಾಗಿ ಕುಳಿತು ಮಾತಿಗೆ ಆರಂಭಿಸಿದ. ಗಂಗಾನ ಜೊತೆ ತನ್ನ ಬದುಕು ಪ್ರಾರಂಭಿಸಿದ್ದು, ತಂದೆ-ತಾಯಿಯರನ್ನು ಬಿಟ್ಟು ಬಂದದ್ದು, ಕೆಲಸದ ಸಂದರ್ಭದಲ್ಲಿ ಕುಟುಂಬ/ಕೆಲಸದ ನಡುವೆ balance ಮಾಡಲು ಸಾಧ್ಯವಾಗದುದು, ಸಂಸಾರದ ಜವಾಬ್ದಾರಿ ಗಂಗಾ ನಿಭಾಯಿಸುವುದು ಇತ್ಯಾದಿ. ನಿತ್ಯದ ಸಂಸಾರದ ಜವಾಬ್ದಾರಿಯನ್ನು ಹೊರಲು ಸಾಧ್ಯವಾಗದೇ ಇರುವ ಸ್ಥಿತಿ ಬದುಕಿನಲ್ಲಿ ಅನೇಕ ತರಹದ ದ್ವಂದ್ವಗಳನ್ನು ಹುಟ್ಟುಹಾಕುತ್ತದೆ. ಏಳೆಂಟು ವರ್ಷದ ತಮ್ಮೀರ್ವರ ಬದುಕಿನಲ್ಲಿ ಹಿಂತಿರುಗಿ ನೋಡದೇ ಬದುಕಿದ ಗಂಗಾಳ ಬದುಕಿನಲ್ಲಿ, ಮನಸ್ಸಿನಲ್ಲಿ ಮಧು ಪ್ರವೇಶಿಸಿದ್ದಾನೆ. ಗಂಗಾಳ ಮಾತಿನಲ್ಲಿಯೇ ಹೇಳುವುದಾದರೆ ಮಧು ಗಂಗಾಳ ಜೀವನದ ಚೈತನ್ಯವಾಗಿ ಪ್ರವೇಶಿಸಿದ್ದಾನೆ. ತನ್ನ ಜೊತೆ ಬದುಕುವುದಕ್ಕೆ ಪ್ರಾರಂಭಿಸುವ ಮುಂಚೆ ಗಂಗಾಗೆ ಬೇರೆ ಸಂಬಂಧಗಳು ಇತ್ತು ಎಂಬ ಸತ್ಯ ತನಗೂ ಗೊತ್ತು. ಆದರೆ ಅದು ಆಕೆಯ ಅಲೆಮಾರಿ ಜೀವನದ ಒಂದು ಮುಖ. ಅದು ತನಗೆ ಈಗ ಮುಖ್ಯವಲ್ಲ. ಆದರೆ ಈ ಏಳೆಂಟು ವರ್ಷದಲ್ಲಿ ತನ್ನ ಜೀವದೊಂದಿಗೆ ಬೆಸೆದುಕೊಂಡಿದ್ದ ಗಂಗಾ ತನ್ನಿಂದ ದೂರವಾಗುತ್ತಿದ್ದಾಳೆ. ಆಕೆಯ ಮನಸ್ಸಿನಲ್ಲಿ ಬಿರುಕೊಂದು ಮೂಡತೊಡಗಿದೆ. ಆ ಬಿರುಕಿನ ಸಂದಿಗಳಲ್ಲಿ ತಾನು ಬದುಕುವುದು ಸಾಧ್ಯವೇ? ತನ್ನ ವ್ಯಕ್ತಿತ್ವ, ಕೆಲಸ, ಬದುಕು, ಎಲ್ಲದಕ್ಕೂ ಕೇಂದ್ರ ಬಿಂದುವಾಗಿದ್ದವಳೇ ಗಂಗಾ. ಆದರೆ ಈಗ ಆಕೆಯ ಮನಸ್ಸು ಎಲ್ಲೋ ಒಡೆದು ಹೋಗಿದೆ ಎಂಬ ಅಳುಕಿನಲ್ಲಿ ತನ್ನ ಮನಸ್ಸೆಲ್ಲಾ ಅಸ್ಥಿರವಾಗುತ್ತಿದೆ. ತಾನೇನು ಮಾಡಲು ಸಾಧ್ಯ? ಗಂಗಾ ಇಂತಹ ಮಾನಸಿಕ ವೇದನೆಯನ್ನು ತನಗೇಕೆ ನೀಡಿದಳೋ? ಈಗ ಗಂಗಾ ಮಧುವನ್ನು ದೂರ ಮಾಡಿದ್ದೇನೆ ಎನ್ನುತ್ತಾಳೆ. ಯಾರ ಹೆದರಿಕೆಗೋ, ಭಯಕ್ಕೋ, ಪಾಪಪ್ರಜ್ಞೆಗೋ ದೂರ ಸರಿಸಿರಬಹುದು. ಆದರೆ ಇದು ಮನಸ್ಸಿನ ಪ್ರಶ್ನೆ. ಇಡಿ ಇಡಿಯಾಗಿ ತನ್ನ ವ್ಯಕ್ತಿತ್ವದೊಳಗೆ ಒಂದಾಗಿದ್ದ ಗಂಗಾಳ ಮನಸ್ಸು, ವ್ಯಕ್ತಿತ್ವ ಇಂದು ಹುಡಿಯಾಗಿದೆ. ಈ ಆತಂಕದಲ್ಲಿ ತನ್ನ ಮನಸ್ಸೇ ತನ್ನ ಹಿಡಿತಕ್ಕೆ ಸಿಗುತ್ತಿಲ್ಲ - ಇತ್ಯಾದಿಯಾಗಿ ಹೇಳುವಾಗ ರಮೇಶನ ಕಣ್ಣಲ್ಲಿ ನೀರಾಡುತ್ತಿದ್ದವು. ಆತನ ನಿರ್ದೇಶಕರಿಗೆ ಒಂದು ಕ್ಷಣ ಶಾಕ್ ಎನಿಸಿತು. ಗಂಗಾ ರಮೇಶರ ಸಂಬಂಧ ಶಾಂತಾರಾಂ ಕಂಡ ಹಾಗೆ ಒಂದು ಒಳ್ಳೆಯ ಸಂಬಂಧ ಎಂದೇ ಅನಿಸಿತ್ತು. ತನ್ನ ಹೆಂಡತಿ ಫೆಮಿನಿಸ್ಟ್ ಎಂಬುದನ್ನು ತುಂಬಾ ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಿದ್ದ, ಎಷ್ಟೋ ಸಲ ಲಂಚ್ ಸಮಯದಲ್ಲಿ ತಾನು ಮಾಡಿದ ಅಡಿಗೆಯ ಬಗ್ಗೆ ತಾನೇ ತಮಾಷೆ ಮಾಡಿ ರಮೇಶ ಮಾತನಾಡುತ್ತಿದ್ದನು. ಶಾಂತಾರಾಂ ರಮೇಶ್ ಮನೆಗೂ ಹೋಗಿದ್ದುಂಟು. ಮನೆ ಗೃಹಪ್ರವೇಶದ ಸಮಯದಲ್ಲಿ ರಮೇಶ್ ಆಫೀಸಿನವರನ್ನೆಲ್ಲಾ ಮನೆಗೆ ಕರೆದದ್ದುಂಟು. ಆಗೆಲ್ಲಾ ಗಂಗಾ/ರಮೇಶ್ ಲವಲವಿಕೆಯಿಂದ ಮಾತನಾಡುವುದನ್ನು/ನಗುವುದನ್ನು ಕಂಡಿದ್ದರು. ಗಂಗಾ ಬಗ್ಗೆ ಮಾತನಾಡುವಾಗಲೆಲ್ಲಾ ರಮೇಶ ಗಂಗಾ ತನ್ನ ಜೀವನದ ಕೇಂದ್ರ ಬಿಂದು ಎನ್ನುವ ರೀತಿಯಲ್ಲಿಯೇ ಮಾತನಾಡುತ್ತಿದ್ದುದು. ಆಕೆ ತನ್ನ ವ್ಯಕ್ತಿತ್ವದ ಭಾಗ ಎನ್ನುವ ಹೆಮ್ಮೆ ಯಾವಾಗಲೂ ಆತನಲ್ಲಿ ಮನೆಮಾಡಿಕೊಂಡಿರುತ್ತಿತ್ತು. ಇಂದು ಆ ಹೆಮ್ಮೆಗೆ ಒಂದು ದೊಡ್ಡ ಬರೆ ಬಿದ್ದಂತಾಗಿದೆ. ಆ ಹೆಮ್ಮೆಯಿಂದ ತುಂಬಿಕೊಂಡಿರುತ್ತಿದ್ದ ಮನಸ್ಸು ಈಗ ಖಾಲಿ ಖಾಲಿಯಾಗಿದೆ, ಬರಿದಾಗಿದೆ. ಆ ಬರಿದಾದ ಮನಸ್ಸನ್ನು ಎದುರಿಸಲು ರಮೇಶನಿಗೇ ಕಷ್ಟವಾಗುತ್ತದೆ. ತಾನು ನಂಬಿದ್ದೆಲ್ಲಾ ಒಂದು ಭ್ರಾಂತಿ ಎನ್ನುವ ರೀತಿ ಅವನಿಗೇ

ದಿಗ್ಭ್ರಮೆಯಾಗಿದೆ. ತಾನು ನಂಬಿದ್ದ ಸತ್ಯಗಳೇ ಪರಮ ಸತ್ಯಗಳಲ್ಲ, ಅವುಗಳಿಗೆ ಇನ್ನೊಂದು ಮುಖ ಇದೆ ಎನ್ನುವ ಕಠೋರ ಸತ್ಯವನ್ನು ಅವನಿಂದು ಎದುರಿಸಬೇಕಾಗಿದೆ. ಗಂಗಾ ತನ್ನ ಜೀವನದ ಭಾಗವಾಗಿದ್ದಾಳೆ, ಆಗಿದ್ದಳು ಎನ್ನುವ ಸತ್ಯವನ್ನು ಆಚೀಚೆ ಅಲುಗಾಡಿಸಿದಂತಹ ಅನುಭವ. ರಮೇಶನ ಇಡಿಯ ವ್ಯಕ್ತಿತ್ವವನ್ನೇ ಅಲುಗಾಡಿಸಿಬಿಡುತ್ತಿದೆ. ರಮೇಶನ ಕಣ್ಣಲ್ಲಿ ನೀರು ತುಂಬಿಕೊಂಡಿರುವುದನ್ನು ಕಂಡಾಗ ಶಾಂತಾರಾಂರವರಿಗೆ ಕೆಡುಕೆನಿಸುತ್ತದೆ. ತಾನೆಲ್ಲಿ ತಪ್ಪು ಮಾಡಿದೆ? ಎಂದು ಚಿಕ್ಕ ಹುಡುಗನ ರೀತಿ ಆತ ಕೇಳಿಕೊಳ್ಳುವುದನ್ನು ನೋಡಿದಾಗ ಅವರಿಗೆ ಆತನ ಬಗ್ಗೆ ಪ್ರೀತಿಯೆನಿಸುತ್ತದೆ. ಇದೆಲ್ಲ ರಮೇಶ ಹೇಳುವ ಆಯಾಮಗಳು. ಗಂಗಾ ಈ ಬಗ್ಗೆ ಏನು ಹೇಳುತ್ತಾಳೆ? ಗಂಗಾ/ರಮೇಶರ ಒಟ್ಟಿಗೇ ಕುಳಿತು ಮಾತನಾಡಿದರೆ ಹೆಚ್ಚು ಸೂಕ್ತವೇನೋ ಎಂದು ಅವರಿಗೆ ಅನ್ನಿಸಿ ರಮೇಶನಲ್ಲಿ ಹೇಳುತ್ತಾರೆ, "ರಮೇಶ್, ಗಂಗಾ ಕರೆದರೆ ಕುಳಿತು ಮಾತನಾಡಲಿಕ್ಕೆ ಬರುತ್ತಾರಲ್ಲವೇ? ನಾವು ಮೂರು ಜನ ಒಟ್ಟಿಗೇ ಕುಳಿತು ಮಾತನಾಡಿದರೆ ನಿಮ್ಮ ಮನಸ್ಸಿಗೂ ಸಮಾಧಾನವಾಗಬಹುದು. ಗಂಗಾರ ಮನಸ್ಸನ್ನು ತಿಳಿಯದೇ ನಿಮ್ಮ ಮಾತಿನ ಮೇಲೆ ನಾನು ಏನನ್ನು ಹೇಳಿದರೂ ತಪ್ಪಾಗಿಬಿಡುತ್ತದೆ. ಹಾಗಾಗಿ 'If she does not mind to come over, can you please bring her over here?" ರಮೇಶ ಒಪ್ಪಿಕೊಂಡ. ಗಂಗಾಳೇ ಈ ವಿಚಾರವನ್ನು ಹೇಳಿದವಳು. ಈಗ ಮೂರೂ ಜನ ಒಟ್ಟಿಗೇ ಕುಳಿತು ಮಾತನಾಡೋಣ ಎಂದರೆ ಗಂಗಾ ಖಂಡಿತಾ ಇಲ್ಲ ಎನ್ನುವುದಿಲ್ಲ. ಹೀಗೆಲ್ಲಾ ಯೋಚಿಸಿಯೇ ರಮೇಶ 'ಆಗಲಿ' ಎಂದಿದ್ದ. ಮರುದಿನ ಬರುವುದಾಗಿ ಹೇಳಿ ರಮೇಶ ಹೊರಟು ಬಂದಿದ್ದ. ಗಂಗಾ ಬದಲಿ ಏನನ್ನೂ ಹೇಳಲಿಲ್ಲ. ಬಹುಶಃ ರಮೇಶನ ನಿರ್ದೇಶಕರ ಜೊತೆ ಕುಳಿತು ಮಾತನಾಡಿದರೆ ಅವನಿಗೆ ಸಮಾಧಾನವಾಗಬಹುದೆಂದು ಯೋಚಿಸಿದಳು. ಕೂತಲ್ಲಿ, ನಿಂತಲ್ಲಿ ಮಂಕಾಗಿರುವ ರಮೇಶನಿಗೆ ಪ್ರಿಯವಾಗಬಹುದು ಎಂಬ ಕಾರಣಕ್ಕಾಗಿ ಗಂಗಾ ರಮೇಶನೊಟ್ಟಿಗೆ ಹೋದಳು. ಇವರೀರ್ವರು ಹೋಗುವ ಮುಂಚೆಯೇ ಶಾಂತಾರಾಂ ಇವರಿಗೋಸ್ಕರ ಕಾಯುತ್ತಾ ಕುಳಿತಿದ್ದರು. ವಿಷ್ ಮಾಡಿ ಕುಳಿತ ಬಳಿಕ ಸುಮಾರು ಸಮಯದವರೆಗೆ ಯಾರೂ ಮಾತನಾಡಲಿಲ್ಲ. ಇದ್ದಕ್ಕಿದ್ದ ಹಾಗೆ ಗಂಗಾಗೆ ಮುಜುಗರವಾಗತೊಡಗಿತ್ತು. ಕೊನೆಗೆ ಅಸಹನೀಯವಾದ ಮೌನವನ್ನು ಮುರಿದು ಗಂಗಾಳೇ ಮಾತಿಗೆ ಪ್ರಾರಂಭಿಸಿದಳು. "ಸಾರ್, ನಿಮ್ಮ ಹತ್ತಿರ ಮಾತನಾಡುವುದರಿಂದ ರಮೇಶನ ಮನಸ್ಸಿಗೆ ನೆಮ್ಮದಿ ಸಿಗಬಹುದು ಎಂದು ಆಶಿಸಿದ್ದೇನೆ. ಯಾಕೆಂದರೆ ಇನ್ನೊಬ್ಬರ ಹತ್ತಿರ ಮಾತನಾಡಿ ಸತ್ಯಗಳನ್ನು ಎದುರಿಸುವ ಸ್ವಭಾವ ನನ್ನದಲ್ಲ. ಬರವಣಿಗೆಯಲ್ಲಿ ಮಾತ್ರ ನಾನು ಅಂತರಂಗದ ಮಾತುಗಳನ್ನು ಆಡುತ್ತೇನೆ. ಅಂತರಂಗದ ಕಠೋರ ಸತ್ಯಗಳನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗುವುದೇ ನನ್ನ ಬರವಣಿಗೆಯಲ್ಲಿ. ಆದರೆ ರಮೇಶನ ಮನಸ್ಸು ಇನ್ನೊಬ್ಬರಲ್ಲಿ ಮಾತನಾಡುವುದರ ಮೂಲಕ ಎಲ್ಲಿಯೋ ನೆಮ್ಮದಿ, ಶಾಂತಿ ಕಂಡುಕೊಳ್ಳುತ್ತದೆ. ಬಹುಶಃ ನಿಮಗೆ ಈಗಾಗಲೇ ರಮೇಶ, ಮಧು ಮತ್ತು ನನ್ನ ಬಗ್ಗೆ ನಿಮ್ಮಲ್ಲಿ ಹೇಳಿರಬಹುದು". ಗಂಗಾ ಹೀಗೇ ಏನೋ ಮುಂದುವರಿಸುವವಳಿದ್ದಳು. ಶಾಂತಾರಾಂ ಮಧ್ಯೆ ತಡೆದರು. 'ನನಗೆ ಗೊತ್ತು, I Know, it is just a passing relationship, ರಮೇಶ ಬಹುಶಃ ಇನ್ನು ಕೆಲವು ವರ್ಷಗಳ ನಂತರ ಹಿಂತಿರುಗಿ ನೋಡಿದರೆ "ಅಯ್ಯೋ ಇಷ್ಟೊಂದು ಸಣ್ಣ ವಿಚಾರಕ್ಕೆ ನಾನು ಇಷ್ಟೊಂದು ಅವಾಂತರ ಮಾಡಿದೆನೇ" ಎಂದು ಅವನಿಗೇ ಅನ್ನಿಸಬಹುದು. ಆದರೆ ಈಗಿನ ಸಧ್ಯದ ಪರಿಸ್ಥಿತಿಯಲ್ಲಿ ಆತನ ಮನಸ್ಸಿನಲ್ಲಿ ಇದೊಂದು ದೊಡ್ಡ ಬಿರುಕು ಎನಿಸುತ್ತದೆ. ಆತನ ಮನಸ್ಸಿನಲ್ಲಿ ವ್ಯಕ್ತಿತ್ವದ ಭಾಗವಾಗಿ ಆತನಲ್ಲಿ ನೀವು ರೂಪುಗೊಂಡಿದ್ದೀರಿ. ಈಗ ನಿಮ್ಮ ಮನಸ್ಸು ಎಲ್ಲಿಯೋ ಹರಿಯುತ್ತದೆ - ಎಂಬ ಸತ್ಯವನ್ನು ನೀವೇ ಹೇಳಿಕೊಂಡಾಗ ಆ ಸತ್ಯವನ್ನು ಎದುರಿಸುವ ಧೈರ್ಯ ಇಂದು ರಮೇಶನಲ್ಲಿ ಇಲ್ಲವಾಗಿದೆ. ಬಹುಶಃ ನಮ್ಮ ಸುತ್ತ ಮುತ್ತ ಇರುವ ಸಾಂಪ್ರದಾಯಿಕ ಸಮಾಜದಲ್ಲಿ ಹೀಗೆ

ಒಬ್ಬ ಗಂಡಿನೊಡನೆ ಮುಕ್ತವಾಗಿ ಮಾತನಾಡುವುದೂ ಕಷ್ಟವಾಗಬಹುದು. ರಮೇಶನ ಮನಸ್ಸು ಎರೆಡರ ನಡುವಿನದು. ಹೆಂಡತಿಯನ್ನು ವ್ಯಕ್ತಿತ್ವದ ಭಾಗವಾಗಿ ಒಂದು ಮನಸ್ಸು ನೋಡಿದರೆ ಇನ್ನೊಂದು ಮನಸ್ಸು ಆಕೆಯ ವ್ಯಕ್ತಿತ್ವದ ಆಯಾಮಗಳನ್ನು ಗುರುತಿಸುವುದು. ಹೀಗೆ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಾಂಸ್ಕೃತಿಕ ಸ್ವರೂಪಗಳಲ್ಲಿ ಅಥವಾ ಹಾಲೆಂಡಿನಲ್ಲಿ ಸಿಕ್ಕ exposureನಿಂದಾಗಿ ಆತನ ಮನಸ್ಸು ನೀವು ಹೇಳುವುದನ್ನು, ನಿಮ್ಮ ಮನಸ್ಸಿನ ಗೊಂದಲವನ್ನು, ನಿಮ್ಮ ಹಾಗೂ ಮಧುವಿನ ಮಧ್ಯದ ಸಂಬಂಧವನ್ನು ಕೂತು ಕೇಳುವ ಸಾಧ್ಯತೆ ಹೊಂದಿದೆ. ಆದರೆ ನಮ್ಮೆಲ್ಲರ ಒಳಗೆ ಇನ್ನೊಂದು ಬಲವಾದ ಮನಸ್ಸಿದೆ. ಅದು ವ್ಯಕ್ತಿತ್ವದ ಭಾಗವಾಗಿರುವ ಮನಸ್ಸು. ರಮೇಶ ನಿಮ್ಮನ್ನಷ್ಟೇ ಅವನಿಗೆ Commit ಆಗುವಂತೆ ಡಿಮ್ಯಾಂಡ್ ಮಾಡುವುದಿಲ್ಲ. ಅವನೂ ಕೂಡಾ ನಿಮಗೇ ಕಮಿಟ್ ಆಗುವ ಮಾತನ್ನು ಆಡುತ್ತಾನೆ. ಬಹುಶಃ ನೀವೇ ನಿಂತು ಆಲೋಚಿಸಿ ನೋಡಿದರೂ ಬಹುಶಃ ಅವನ ದ್ವಂದ್ವ ನಿಮಗೆ ಸರಿ ಎನ್ನಿಸಬಹುದು''. ಶಾಂತಾರಾಂ ಮಾತು ನಿಲ್ಲಿಸಿ ಗಂಗಾಳ ಮುಖ ನೋಡಿದಾಗ ಗಂಗಾ 'ಅದು ಸರಿ' ಎಂದಳು. ಆತನ ದ್ವಂದ್ವ ತನಗೂ ಅರಿವಿದೆ. ಹಾಗಾಗಿ ರಮೇಶನ ಕೋಪವನ್ನು, ಆತನ ದ್ವಂದ್ವಗಳನ್ನು ಒಂದು ರೀತಿಯ ನಿರ್ವಿಕಾರ ಭಾವದಲ್ಲಿ ಸ್ವೀಕರಿಸಲಿಕ್ಕೆ ತನಗೆ ಸಾಧ್ಯವಾಗುತ್ತಿದೆಯೇನೋ ಎಂಬ ವಿಚಾರವನ್ನೂ ಹೇಳಿದಳು. ಮಧುವಿನ ಜೊತೆ ತಾನು ಮುಕ್ತವಾಗಿ ತೆರೆದುಕೊಂಡಿದ್ದರೂ ಅದು ಒಂದು ಕ್ಷಣದಲ್ಲಿ ಮಾತ್ರ. ರಮೇಶನ ಸ್ವಭಾವದ, ವ್ಯಕ್ತಿತ್ವದ ಚಹರೆ ಆತನಲ್ಲಿ ಕಂಡು ಒಂದು ಕ್ಷಣ ಮುಗ್ಧಳಾಗಿರಬಹುದು. ಒಂಟಿತನದ ಆತಂಕವನ್ನು ಆತನಲ್ಲಿ ಕಳೆದುಕೊಳ್ಳಲು ಇಷ್ಟಪಟ್ಟಿರಬಹುದು. ಅಥವಾ ಒಂದು ಕ್ಷಣ ಕಾಮದ ಸೆಳೆತ ಕೂಡಾ ಆ ಕ್ಷಣದಲ್ಲಿ ತಮ್ಮೀರ್ವರ ಮಧ್ಯದ ಗಡಿಯನ್ನು ದಾಟಿಸಿರಬಹುದು. ಆದರೆ ಆ ಕ್ಷಣದಲ್ಲಿ, ಬೆಚ್ಚಗಿನ ಸಂಬಂಧದ ಮಧ್ಯೆ ಗಡಿ ದಾಟಿದ ಕ್ಷಣದಿಂದಲೂ ತನ್ನಲ್ಲಿ ಒಂದು ರೀತಿಯ ದ್ವಂದ್ವ ಇದೆ. ರಮೇಶನ ಮುಗ್ಧತೆಗೆ, ನಂಬಿಕೆಗೆ ತಾನೆಲ್ಲೋ ದ್ರೋಹ ಬಗೆಯುತ್ತಿದ್ದೇನೆಂಬ ಅಳುಕು. ಹಾಗಾಗಿಯೇ ರಮೇಶನ ಬಳಿ ಇಂತಹ ವಿಚಾರಗಳನ್ನು ಹೇಳಲಿಕ್ಕೆ ತನಗೆ ಸಾಧ್ಯವಾಯಿತೋ ಏನೋ?....... ಹೀಗೆಲ್ಲಾ ಮಾತನಾಡುತ್ತಾ ಹೋಗುವಾಗ ಗಂಗಾ ಅಳುತ್ತಿದ್ದಳು. ಮಾತನಾಡುತ್ತಾ, ಮಾತನಾಡುತ್ತಾ ಹೋಗುವಾಗ ಯಾಕೋ ಗಂಗಾಗೆ ಇದ್ದಕ್ಕಿದ್ದ ಹಾಗೆ ರಮೇಶನ ಮೇಲೆ ಕೋಪ ಬರತೊಡಗಿತ್ತು. ಯಾಕೆ ತನ್ನ ಮನದಾಳದ ಸಂಗತಿಗಳನ್ನು, ತನ್ನ ಅಂತರಂಗದ ಸತ್ಯಗಳನ್ನು ರಮೇಶ ಎಲ್ಲರೆದುರಿಗೆ ಹಂಚಿಕೊಂಡು ಬಿಡುವಂತೆ ಮಾಡಿ ಬಿಡುತ್ತಾನೆ ಎಂಬ ಕೋಪವದು. ಆ ಕ್ಷಣದಲ್ಲಿ ಆಕೆಗೆ ರಮೇಶನ ವ್ಯಕ್ತಿತ್ವದ ಬಗ್ಗೆಯೇ ಬೇಸರ ಎನ್ನಿಸತೊಡಗಿತ್ತು. ಎಲ್ಲದಕ್ಕೂ ಇನ್ನೊಬ್ಬರು ಬೇಕು, ಆತನೇ ಇಂತಹ ಸಂಗತಿಗಳನ್ನು ಅರ್ಥಮಾಡಿಕೊಳ್ಳಲಾರ, ಜೀರ್ಣಿಸಿಕೊಳ್ಳಲಾರ, ಅರಗಿಸಿಕೊಳ್ಳಲಾರ. ಇಂತಹ ಕ್ರೂಷಿಯಲ್ ಆಗಿರುವ ಕ್ಷಣದಲ್ಲಿ ಇನ್ನೊಬ್ಬರ ಮೇಲೆ ಅವಲಂಬನೆ, ಇನ್ನೊಬ್ಬರ ಮೇಲೆ ಒತ್ತಾಸೆ. ಇನ್ನೊಬ್ಬರ ಮಾತುಗಳಿಂದ ಸಮಾಧಾನ. ಹೀಗೇ ಏನೇನೋ ಅನ್ನಿಸುತ್ತಿರುವಾಗಲೇ ಗಂಗಾ ಶಾಂತಾರಾಂರೊಡನೆ ಮಾತನಾಡುತ್ತಲೇ ಇದ್ದಳು. ಇದೇನು ಒಳ್ಳೇ ತಪ್ಪೊಪ್ಪಿಗೆಯ ಸೆಷನ್ ತರಹ ಆಯಿತಲ್ಲ ಎಂಬ ಭಾವನೆಯೂ ಕೂಡಾ ಆಕೆಯಲ್ಲಿ ಸುಳಿಯದಿರಲಿಲ್ಲ. ತನಗೆ ಇಂತಹ ಸಂದರ್ಭಗಳೇ ಬರುತ್ತಿರಲಿಲ್ಲ. ರಮೇಶ ಇಂತಹ ಸಂದರ್ಭಕ್ಕೆಲ್ಲ ತನ್ನನ್ನು ಒಡ್ಡುತ್ತಿದ್ದಾನೆ ಎನ್ನಿಸಿದಾಗ ಆಕೆಗೆ ಕೋಪ ಹೆಚ್ಚಾಗ ತೊಡಗಿತ್ತು. ಚರ್ಚಿಗೆ ಹೋಗಿ ಕನ್‌ಫೆಷನ್ ಮಾಡಿಕೊಳ್ಳುವ ರೀತಿ ತಾನು ಕನ್‌ಫೆಷನ್ ಮಾಡಿಕೊಳ್ಳುತ್ತಿದ್ದೇನೆ ಎನ್ನುವ ಪ್ರಶ್ನೆ ಆಕೆಯಲ್ಲಿ ಹೆಚ್ಚಾಗತೊಡಗಿತ್ತು.

ಹೀಗೆಲ್ಲಾ ಯೋಚಿಸುತ್ತಿದ್ದ ಗಂಗಾ ಮಾತನಾಡುವುದನ್ನು ಬಿಟ್ಟು ಶಾಂತಾರಾಂ ಹೇಳುವುದನ್ನೇ ಕೇಳಿಸಿಕೊಳ್ಳತೊಡಗಿದ್ದಳು. ಶಾಂತಾರಾಂ ಏನನ್ನೋ ಮಾತನಾಡುತ್ತಲೇ ಇದ್ದರು. ೮೩ ಎಷ್ಟು

ಕೇಳಿಸಿಕೊಂಡಳೋ ಆಕೆಗೇ ತಿಳಿಯದು. ಆದರೆ ಈಗ ರಮೇಶ ಮಾತನಾಡತೊಡಗಿದ್ದ. ಎಷ್ಟೊಂದು ಆದರ್ಶದ ವಿಷನ್‌ನಲ್ಲಿ ತಾನು ಗಂಗಾಳನ್ನು ಮದುವೆಯಾದೆ, ಗಂಗಾಳ ಜೊತೆಗಿನ ಜೀವನ ತನ್ನ ಜೀವನದ ಒಂದು ಭಾಗದ ಪ್ರಶ್ನೆಯಾಗಿ ಮಾತ್ರ ಉಳಿದಿಲ್ಲ. ಇಡಿಯ ವ್ಯಕ್ತಿತ್ವದ ಕೇಂದ್ರ ಬಿಂದುವೇ ಗಂಗಾ. ಹಾಗಾಗಿ ಯಾವ ಕಾರಣಕ್ಕಾಗಿಯಾದರೂ ಆಗಲೀ ಗಂಗಾಳ ಮನಸ್ಸು ತನ್ನಿಂದ ದೂರ ಸರಿದಿದೆ ಎಂದರೆ ತಮ್ಮಿರ್ವರ ನಡುವೆ ಬಿರುಕು ಉಂಟಾಗಿದೆ ಎಂದೇ ಅರ್ಥ. ಅಂತಹ ಬಿರುಕು ತನ್ನ ಇಡಿಯ ವ್ಯಕ್ತಿತ್ವವನ್ನೇ ಅಲುಗಾಡಿಸಿದೆ. ಇಡಿಯ ವ್ಯಕ್ತಿತ್ವದ ಅಂಚನ್ನೇ ತಂದೆಯ ಮಡಿಲಲ್ಲಿ ಇಟ್ಟು ಸಂಕೋಚದಿಂದ ಬೆಳೆದ ಹುಡುಗ ತಾನು. ಇಂತಹ ವ್ಯಕ್ತಿತ್ವವನ್ನು ಗಂಗಾಳ ಕೈಯಲ್ಲಿ ಇಟ್ಟು ತನ್ನ ಇಡಿಯ ವ್ಯಕ್ತಿತ್ವವನ್ನು ಸ್ವತಂತ್ರ್ಯವಾಗಿ ಬೆಳೆಯಲು ಅವಕಾಶ ಮಾಡಿಕೊಟ್ಟವಳೇ ಗಂಗಾ. ಇದ್ದಕ್ಕಿದ್ದ ಹಾಗೆ ಮೂವತ್ತರ ಮಧ್ಯ ವಯಸ್ಸಿನಲ್ಲಿ ಗಂಗಾ ತನ್ನನ್ನು ಬಿಟ್ಟು ಬಿಡುತ್ತಾಳೆ, ತನ್ನಿಂದ ದೂರ ಸರಿಯುತ್ತಾಳೆ ಎಂದರೆ ಆಯ್ಕೆಯೇ ಇಲ್ಲದ ಸನ್ನಿವೇಶದಲ್ಲಿ ತಾನು ನಿಂತುಬಿಟ್ಟಿದ್ದೇನೆ ಎನಿಸುತ್ತದೆ. ಗಂಗಾಳ ದೃಷ್ಟಿಯಲ್ಲಿ ಇದೊಂದು ಕ್ಷುಲ್ಲಕ. ಚಿಕ್ಕ ವಿಚಾರವಾಗಿರಬಹುದು. ಆದರೆ ತನ್ನ ಜೀವನದಲ್ಲಿ ಇದು ತನ್ನ ಇಡಿಯ ವ್ಯಕ್ತಿತ್ವವನ್ನೇ ಅಲುಗಾಡಿಸುತ್ತಿರುವ ಘಟನೆ. ಹೀಗೆಲ್ಲಾ ಹೇಳುವಾಗ ರಮೇಶನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಅಷ್ಟು ಮಾತನಾಡಿ ಮುಖ ತಿರುಗಿಸಿ ಅವನು ಸುಮ್ಮನಾಗಿಬಿಟ್ಟ. ಮತ್ತೆ ಮುಜುಗರದ ವಾತಾವರಣ ಸೃಷ್ಟಿಯಾಗಿತ್ತು. ಗಂಗಾ ಈಗ ಆ ಮೌನವನ್ನು ಒಡೆಯಲೂ ಇಚ್ಛಿಸಲಿಲ್ಲ. ಯಾರಾದರೂ ಮಾತನಾಡಲಿ ಎಂದು ಸುಮ್ಮನಾಗಿಬಿಟ್ಟಿದ್ದಳು. ಶಾಂತಾರಾಂರವರೇ ಮಾತನಾಡುತ್ತಿದ್ದರು. ಇಂತಹ ಸಮಯಗಳಲ್ಲೇ ಸಂಬಂಧದ ಹಲವಾರು ಮುಖಗಳು ಪರಿಚಯವಾಗುವುದು ಎಂದರು. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲಿಕ್ಕೆ, ಆತ್ಮೀಯತೆಯ ಅಂಚು-ಇಂಚುಗಳನ್ನು ಅಳೆಯಲಿಕ್ಕೆ ಇಂತಹ ಸಂದರ್ಭಗಳು ಸಾಕಷ್ಟು ಉಪಯುಕ್ತವಾಗುತ್ತವೆ ಎಂದು ನುಡಿದರು. ಗಂಗಾ ಮತ್ತೆ ಮಾತನಾಡಲಿಕ್ಕೆ ಪ್ರಾರಂಭಿಸಿದಳು. ರಮೇಶನ ಗೊಂದಲಗಳು ತನಗೆ ಅರ್ಥವಾಗುತ್ತವೆ ಎಂಬುದನ್ನು ಮತ್ತೆ ಮತ್ತೆ ನುಡಿದಳು. ಇಂತಹ ಸನ್ನಿವೇಶದಲ್ಲಿ ಆತನಿಗೆ ಅನೇಕ ಆಯ್ಕೆಗಳಿವೆ. ಮಧುವಿನ ಸಂಬಂಧಕ್ಕೆ ತಾನು ಯಾವಾಗಲೋ ಗುಡ್‌ಬೈ ಹೇಳಿಯಾಯಿತು. ಹಾಗೆ ಹೇಳುವುದನ್ನು ರಮೇಶ್ ನಂಬಬೇಕು. ಏಕೆಂದರೆ ನಂಬಿಕೆಯೊಂದರಿಂದಲೇ ಮತ್ತೆ ತಮ್ಮಿರ್ವರ ನಡುವೆ ಏನಾದರೂ ಅರ್ಥಪೂರ್ಣ ಸಂಬಂಧ ಸಾಧ್ಯ. ಹಾಗೆ ನಂಬಲು ಸಾಧ್ಯವಾಗದಿದ್ದರೆ he has to decide what he really wants. ಏಕೆಂದರೆ ನನ್ನ ಮನಸ್ಸು ತೆರೆದಿಟ್ಟ ಪುಸ್ತಕ. ನಿನಗೆ ಬೇಕೆಂದರೆ You have to keep it. ಬೇಡ ಎನ್ನಿಸಿದರೆ ದೂರ ಸರಿಯುವುದಕ್ಕೆ ಬೇಕಾಗುವ ಎಲ್ಲಾ ಸ್ವಾತಂತ್ರ್ಯ, ನಿರ್ಧಾರ ರಮೇಶನದೇ. ಆದರೆ ಯಾವುದೇ ನಿರ್ಧಾರದಲ್ಲೂ ಒಂದು ಗಟ್ಟಿತನವಿರಬೇಕು. ದೂರ ಸರಿಯಬೇಕಾದರೆ dignified ಆಗಿ ದೂರ ಸರಿಯುವ ಗಟ್ಟಿತನ. ಅಥವಾ ಇದೆಲ್ಲಾ ಮೀರಿಯೂ ತನ್ನ ಸಂಬಂಧ ಉಳಿಯಬೇಕೆಂದರೆ Ramesh has to give space. ಸಂಬಂಧಗಳಲ್ಲಿ ಹೀಗೆ ರಿಸ್ಕ್ ತೆಗೆದುಕೊಳ್ಳಬಾರದೋ ಏನೋ? ರಮೇಶನ ನಂಬಿಕೆಯಲ್ಲಿ ಬಿರುಕು ತರಬಾರದಿತ್ತೇನೋ. But it has happened. ಮಧುವಿನಿಂದ ದೂರ ಸರಿಯುವ ನಿರ್ಧಾರ - ಯಾರೂ ತನಗೆ ಫೋರ್ಸ್ ಮಾಡಿದ್ದಲ್ಲ. ಭಯಕ್ಕಾಗಲೀ ಅಥವಾ ಕಾಡುವ ಪಾಪಪ್ರಜ್ಞೆಯ ಭಾವಕ್ಕಾಗಲೀ ತೆಗೆದುಕೊಂಡ ನಿರ್ಧಾರವಲ್ಲ. ಅದರಿಂದ ತಾನೇನು ಅರಸುತ್ತಿದ್ದೇನೆ ಎಂಬ ಪ್ರಶ್ನೆ ತನಗೇ ಕಾಡುತ್ತದೆ. ಆತ ತನ್ನ ಸೃಜನಶೀಲ ಬರವಣಿಗೆಯ ಸ್ಫೂರ್ತಿಯಾಗಿ, ಸ್ಫೂರ್ತಿಯ ಭಾಗವಾಗಿ ಬಂದಿದ್ದರೆ ಅದು ಅಲ್ಲಿಗೆ ಕೊನೆ ಅಷ್ಟೇ. ಇಷ್ಟಕ್ಕೂ ಮಧುವೇನೋ ಇಂದು ನಮ್ಮ ಮಧ್ಯೆ ನಿಂತಿಲ್ಲ. ರಮೇಶ್ ಹಾಗೂ ತನ್ನ ನಡುವಿನ ದ್ವಂದ್ವಗಳ ಹೇಳಿಕೊಂಡ ದಿನವೇ, ಶಂಕರ ಅವನ ಜೊತೆ ಮಾತನಾಡಿದ ದಿನವೇ ಆತ ತಮ್ಮಿರ್ವರ ಜೀವನದಿಂದ ದೂರವಾಗಿದ್ದಾನೆ. ಈಗ

ರಮೇಶ-ನನ್ನ ನಡುವಿರುವುದು ಮಧುವಲ್ಲ. ಆ ಸಂಬಂಧದಿಂದ ಉಂಟಾದ ಬಿರುಕು ಮನಸ್ಸುಗಳು, ವೈಷಮ್ಯಗಳು, ಅನುಮಾನಗಳು. Now Ramesh has to decide. It is finally left to his choice. ಈಗ ಗಂಗಾ ಮಾತನಾಡುವಾಗ ಅಳುತ್ತಿರಲಿಲ್ಲ. ಆಕೆಯ ಮನಸ್ಸು ಸಂಪೂರ್ಣವಾಗಿ ಆಕೆಯ ಹಿಡಿತದಲ್ಲಿಯೇ ಇತ್ತು. ಮೂರನೆಯ ವ್ಯಕ್ತಿಯ ಜೊತೆಗೆ ಮಾತಿಗೆ ಆರಂಭಿಸಿಯಾಗಿತ್ತು. ಗಂಗಾ ಮಾತನಾಡಲೇಬೇಕಿತ್ತು. ಮಾತನಾಡುವ ಜವಾಬ್ದಾರಿಯಿಂದಲೇ ಗಂಗಾ ಮಾತನಾಡತೊಡಗಿದ್ದಳು. ರಮೇಶ ಈಗ ನಿಧಾನವಾಗಿ ಮಾತನಾಡತೊಡಗಿದ್ದ. ತಾನು ಅಮೇರಿಕಾಕ್ಕೆ ಹೋಗುವುದು ಇಂತಹ ಸನ್ನಿವೇಶದಲ್ಲಿ ಸಾಧ್ಯವೇ ಇಲ್ಲವೆಂದು. ಇದು ತನ್ನ ಬದುಕಿನ ಪ್ರಶ್ನೆ. ತನ್ನ ಮನಸ್ಸಿನ ಪ್ರಶ್ನೆ. ಅಮೇರಿಕಾಕ್ಕೆ ಹೋಗುವುದೊಂದು ಒಳ್ಳೆಯ ಅವಕಾಶ ಏಕೆ ಬಿಡಬೇಕು ಎನ್ನುವ ಮನಸ್ಸು ತನ್ನದಲ್ಲ. ತನ್ನ ಸಂತೋಷದ ಕೇಂದ್ರ ಬಿಂದುವೇ ಗಂಗಾ/ಮಿತಾ. ಇಂತಹ ಬಿರುಕೊಡೆದ ಮನಸ್ಸಿನಿಂದ ತಾನು ಅಮೇರಿಕಾಕ್ಕೆ ಹೋಗಲಾರೆ. ಹೋದರೂ ಅಲ್ಲಿರುವುದಕ್ಕೂ ತನಗೆ ಸಾಧ್ಯವಾಗುವುದಿಲ್ಲ. ಹಾಗಾಗಿ ತಾನು ಹೋಗದಿರುವುದಕ್ಕೆ ಬೇಸರ ಮಾಡಬಾರದೆಂದು ರಮೇಶ್ ಶಾಂತಾರಾಂರವರಲ್ಲಿ ಹೇಳುತ್ತಿದ್ದ. ಶಾಂತಾರಾಂಗೆ ಒಂದು ಕ್ಷಣ ದಂಗಾಗಿರಬೇಕು. ಎಂತಹ ಮನಸ್ಸು ಈ ಹುಡುಗನದು ಎನ್ನಿಸಿರಬೇಕು. ಅವಕಾಶ ಸಿಕ್ಕರೆ ಕಾಲಂಚಿನ ತುದಿಯಲ್ಲಿ ಎಲ್ಲವನ್ನೂ ದೂಡಿ ಹೋಗುವವರಿರುವಾಗ - ತನ್ನ ಹಾಗೂ ಗಂಗಾನ ಮಧ್ಯದ ಸಂಬಂಧದ ಸಮತೋಲನಕ್ಕೆ ಈ ಹುಡುಗ ಎಲ್ಲವನ್ನೂ ಒದ್ದು ಇಲ್ಲಿಯೇ ಇರುತ್ತೇನೆ ಅನ್ನುತ್ತಾನೆ. ತನಗೆ ತನ್ನ ಹೆಂಡತಿ/ಮಗು ಮುಖ್ಯ ಎನ್ನುತ್ತಾನೆ. ಇನ್ನೇನು ಆಮಿಷಗಳೂ ಆತನನ್ನು ಇಲ್ಲಿಂದ ಹಿಂತಿರುಗಿಸಲಾರವು. ಶಾಂತಾರಾಂಗೆ ಒಂದು ಕ್ಷಣ ರಮೇಶನ ಬಗ್ಗೆ ಹೆಮ್ಮೆ ಎನಿಸಿತು. ಒಳಗಿನಾಳದ ಮನಸ್ಸುಗಳಲ್ಲಿ ಇಂತಹ ಹುಡುಗರು ಎಷ್ಟೊಂದು Naivity ಕಾದುಕೊಂಡಿರುತ್ತಾರೆ ಎಂದೂ ಕೂಡಾ ಅನ್ನಿಸದಿರಲಿಲ್ಲ. ಗಂಗಾ ಈಗ ಮಾತನಾಡತೊಡಗಿದ್ದಳು. ರಮೇಶ್ ತನಗಾಗಿ ಎಂಬಂತೆ ಈ ಅವಕಾಶವನ್ನು ಬಿಟ್ಟುಕೊಡುತ್ತಿದ್ದಾನೆ. ಮುಂದೆ ಎಂದಾದರೊಂದು ದಿನ ಆತನಿಗೆ ಈ ಬಗ್ಗೆ ಕಾಡದೇ ಇರುವುದಿಲ್ಲ. I have done a great sacrifice ಎನ್ನುವ ಭಾವ ಅವನಲ್ಲಿ ಹೋಗದೇ ಇರಬಹುದು. ಮತ್ತೆ ಗಂಗಾ ಹೇಳುತ್ತಿದ್ದಳು. ಇದು ನಂಬಿಕೆಯ ಪ್ರಶ್ನೆ. ಅಮೇರಿಕಾಕ್ಕೆ ಹೋಗದೇ ಉಳಿಯುವುದರಿಂದ ಇನ್ನ್ಯಾರನ್ನೋ ಗೆಲ್ಲಬಹುದು ಎಂಬುದು ಸರಿಯಲ್ಲ. ರಮೇಶ್ ಹೋಗಬೇಕೆಂದು ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡಿದ್ದವನು. ಹೋಗಲು ಸಾಕಷ್ಟು ಉತ್ಸಾಹವಿದ್ದ ಹುಡುಗ. ಹಾಗಾಗಿ ತನಗೋಸ್ಕರ ಈ trip ಬಿಟ್ಟು ಬಿಡುವುದು ಸರಿಯಲ್ಲವೆಂದು ಗಂಗಾ ವಾದಿಸತೊಡಗಿದ್ದಳು. ಆದರೆ ರಮೇಶ್ ಸುತರಾಂ ಒಪ್ಪಲಿಲ್ಲ.' ನೀನು ಹೇಗಾದರೂ ಇದನ್ನು ಗ್ರಹಿಸು, ಆದರೆ ಹೋಗುವುದಕ್ಕೆ ನನಗೆ ಕಿಂಚಿತ್ತೂ ಇಷ್ಟವಿಲ್ಲ. ಹೋದರೂ ಓದುವ, ಬರೆಯುವ, Workshopನಲ್ಲಿ ಭಾಗಿಯಾಗುವ ಮನಸ್ಸೂ ತನಗೆ ಇರುವುದಿಲ್ಲ. ಹಾಗಾಗಿ ಹೋಗುವ ಅಗತ್ಯವಾದರೂ ಇದೆಯೇ? ಗಂಗಾ, ನಿನಗಾಗಿ ಎಂದು ಅಲ್ಲ. ಹಾಗೆಂದು ನಾನು ಅಂದುಕೊಳ್ಳುವುದೇ ಇಲ್ಲ. ನನ್ನ ಬದುಕಿಗಾಗಿ, ನನ್ನ ಬದುಕಿನ integrityಗಾಗಿಯೇ ನಾನು ಅಮೇರಿಕಾಕ್ಕೆ ಹೋಗಲಾರೆ. ಮತ್ತೆ ಈ ನಿರ್ಧಾರವನ್ನು ಯಾರೂ ಬದಲಾಯಿಸಲಾರರು. ಹೀಗೆಂದು ಹೇಳುವ ರಮೇಶನಲ್ಲಿ ಯಾವ ವಿಚಲಿತ ಭಾವವೂ ಇದ್ದ ಹಾಗೆ ಅನ್ನಿಸಲಿಲ್ಲ. ಶಾಂತಾರಾಂ ಕಾಫಿ ತರಲು ಹೇಳಿ ಕಾಫಿ ತರಿಸಿದರು. ಬಹುಶಃ ಸನ್ನಿವೇಶದ ಗಂಭೀರತೆಯನ್ನು ಹಗುರ ಮಾಡಲೇ ಎಂಬಂತೆ ಅವರು ಇತರ ಸಂಗತಿಗಳ ಬಗ್ಗೆ ಮಾತನಾಡಲು ಪ್ರಾರಂಭಿಸಿದರು. ಗಂಗಾಳ ಕಾಲೇಜ್, ಮಗು ಮಿತಾಳ ಬಗ್ಗೆ ಇತ್ಯಾದಿ. ತಮ್ಮ ಮಕ್ಕಳ ಬಗ್ಗೆ, ಹೆಂಡತಿಯ ಬಗ್ಗೆಯೂ ಮಾತನಾಡತೊಡಗಿದ್ದರು. ಗಂಗಾ ನನಗನ್ನಿಸುವುದಿಷ್ಟೇ. ಗಂಡ-ಹೆಂಡತಿ ಇಬ್ಬರಲ್ಲಿ ಒಬ್ಬರು ಕೇಂದ್ರ ಬಿಂದುವಾಗಿ ಕೆಲಸ ಮಾಡಿದರೆ ಇನ್ನೊಬ್ಬರು ಪೆರಿಫೆರಿಯಲ್ಲಿ ಕೆಲಸ ಮಾಡಬೇಕಾಗುತ್ತದೆ.

ಇಬ್ಬರೂ ಕೂಡಾ ಕೇಂದ್ರ ಬಿಂದುವೇ ಆಗುವುದಕ್ಕೆ ಸಾಧ್ಯವಿಲ್ಲ. ಒಬ್ಬರ ಚಟುವಟಿಕೆಗಳಿಗೆ ಪೂರಕವಾಗಿಯೇ ಇನ್ನೊಬ್ಬರು ಕೆಲಸ ಮಾಡಬೇಕಾಗುತ್ತದೆ. ಇದು ಅನಿವಾರ್ಯ ಕೂಡಾ. ಇಬ್ಬರೂ ಬದುಕಿನಲ್ಲಿ ಕೇಂದ್ರ ಬಿಂದುವೇ ಆಗಲು ಪ್ರಯತ್ನಿಸಿದಲ್ಲಿ ಘರ್ಷಣೆಗಳು, ಅಸಮಾಧಾನಗಳು, ವೈಷಮ್ಯಗಳು ಅನಿವಾರ್ಯ ಹಾಗೂ ಸಹಜವಾಗಿಬಿಡುತ್ತವೆ. ಹಾಗಾಗಿ ಕುಟುಂಬದಲ್ಲಿ ನಿಮ್ಮ ಪಾತ್ರಗಳ ಬಗ್ಗೆ ನೀವೆಯೇ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಗಂಗಾ ಮಾತನಾಡಲಿಲ್ಲ. ಇರುವ ಸಾಮಾಜಿಕ ಸಂದರ್ಭದಲ್ಲಿ ನೀವೇ ಯಾವಾಗಲೂ ಕೇಂದ್ರಬಿಂದುವಾಗಿರುವುದಕ್ಕೆ ಇಷ್ಟಪಡುತ್ತೀರಿ ಹಾಗೂ ಅದು ಸಹಜ ಎಂಬಂತೆ ಆಗಿಬಿಡುತ್ತದೆ ಎಂದು ಮನಸ್ಸಿನಲ್ಲಿಯೇ ಅಂದುಕೊಂಡಳು. ಕೊನೆಗೆ ಹೆಂಗಸರೇ ಅನಿವಾರ್ಯವಾಗಿ ಘೆರಿಫೆರಿಯಲ್ಲಿರುವ ಪಾತ್ರವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹೆಂಗಸರಿಗೆ ಅದು ಅನಿವಾರ್ಯ ಸತ್ಯವಾಗಿಬಿಡುತ್ತದೆ. ಈಗ ತನ್ನ ಬದುಕಿನಲ್ಲಿ ಆದದ್ದಾದರೂ ಏನು? ಗಂಗಾ ಇದನ್ನೆಲ್ಲ ಬಾಯಿ ಬಿಟ್ಟು ಹೇಳಲಿಲ್ಲ. ಮನಸ್ಸಿನಲ್ಲಿಯೇ ನೊಂದುಕೊಂಡು ಯೋಚಿಸತೊಡಗಿದ್ದಳು. ತಮ್ಮ ಬದುಕಿನಲ್ಲಿ ಸಂಸಾರ, ಮನೆ, ತಾಯ್ತನ ಒಂದು ಹೊರೆಯೇ ಆಗಿಬಿಡುತ್ತದೆ. ತಾಯ್ತನ-ಹಕ್ಕು ಸರಿ. ಹಕ್ಕಿನ ಜೊತೆ ಕರ್ತವ್ಯಗಳ ಪ್ರಶ್ನೆ ಬಂದಾಗ ತಾಯಿಯೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆಯ್ಕೆಯ ಪಾತ್ರ ತಂದೆಗೆ ಮುಖ್ಯವಾಗುವುದಿಲ್ಲ. ಸೆಂಟರ್, ಫೆರಿಫೆರಿ ಇಂತಹವುಗಳು ಇಂತಹ ಸಂದರ್ಭದಲ್ಲಿಯೇ ನಿರ್ಧರಿತವಾಗಿಬಿಡುತ್ತದೆ. ರಮೇಶನ ಬದುಕಿನಲ್ಲಿ ಕೇಂದ್ರ ಬಿಂದುವಾಗಿಯೇ ಪ್ರವೇಶಿಸಿದವಳು ತಾನು. ಕುಟುಂಬದ ಚೌಕಟ್ಟಿನಲ್ಲಿ, ಮಿತಾಳ ಆಗಮನದಲ್ಲಿ, ಕೆಲಸದ, ಗಳಿಕೆಯ ಅನಿವಾರ್ಯತೆಯಿಂದಾಗಿ ಆಯ್ಕೆಗಳನ್ನು ಮಾಡಿಕೊಳ್ಳುತ್ತಾ ಹೋದವಳು ತಾನೇ ಹೊರತು ರಮೇಶನಲ್ಲ. ಹೀಗೆಯೇ ಏನೇನೋ ಯೋಚಿಸುತ್ತಾ ಕುಳಿತ ಗಂಗಾ ಕೊನೆಗೆ ಪೂರ್ಣವಾಗಿ ಮೌನವಾಗಿಯೇ ಬಿಟ್ಟಳು. ಶಾಂತಾರಾಂ ಹೇಳುತ್ತಿದ್ದರು, 'If he does not want to go to America, that is his choice. He feels that he has to make a choice between America and his family. And if he wants to choose his family, that is fine with me. I have no problem'. ರಮೇಶನ ಮನಸ್ಸು ನಿಧಾನವಾಗಿ ಹಗುರವಾಗತೊಡಗಿತ್ತು. ಅವನು ಮನಸ್ಸು ಬಿಚ್ಚಿ ಮಾತನಾಡತೊಡಗಿದ್ದ. ಮಧ್ಯೆ ಮಧ್ಯೆ ಹಗುರವಾದ ಮನಸ್ಸಿನಿಂದ ನಕ್ಕೂ ಕೂಡಾ ಆತ ಮಾತನಾಡತೊಡಗಿದ್ದ. ಇಡಿಯ ಸನ್ನಿವೇಶ ಹಗುರವಾದಂತೆ ಗಂಗಾಗೆ ಭಾಸವಾಗತೊಡಗಿತ್ತು. ಈಗ ಸ್ವಲ್ಪ ಉಸಿರೆಳೆದುಕೊಂಡು ಮಾತನಾಡುವಂತಹ ವಾತಾವರಣ ಸೃಷ್ಟಿಯಾದುದರಿಂದ ಗಂಗಾ ಕೂಡಾ ನಕ್ಕು ಮಾತನಾಡತೊಡಗಿದ್ದಳು. ಈಗ ಶಾಂತಾರಾಂ ತಾವು ಕಟ್ಟುತ್ತಿರುವ ಮನೆಯ ಬಗ್ಗೆ, ರಮೇಶ್-ಗಂಗಾರವರ ಮನೆಯ ಬಗ್ಗೆ ಮಾತನಾಡತೊಡಗಿದ್ದರು. ಮಧ್ಯಮ ವರ್ಗದ ತಮ್ಮಂತವರು ಮನೆ ಕಟ್ಟುವುದೆಂದರೆ ಅದೂ ಸಾಲ ಇಲ್ಲದೇ ಮನೆ ಕಟ್ಟುವುದೆಂದರೆ ಬಹುಶಃ ನಿತ್ಯದ ಅಗತ್ಯದ ವಸ್ತುಗಳಲ್ಲಿಯೇ ಕಡಿತ ಮಾಡಬೇಕಾಗುತ್ತದೆ ಎಂದು ಗಂಗಾ ಹೇಳತೊಡಗಿದ್ದಳು. ತಿನ್ನುವ ಆಹಾರದಲ್ಲಿ, ಉಡುವ ಬಟ್ಟೆಯಲ್ಲಿ, ಮಗು ಕುಡಿಯುವ ಹಾಲಿನಲ್ಲಿಯೇ ಕಡಿತ ಮಾಡಬೇಕಾಗುತ್ತದೆ. ಕೊನೆಗೆ ಆರೋಗ್ಯದ ಬಗ್ಗೆ ಕೂಡಾ ಗಮನ ಕೊಡಲಾಗುವುದಿಲ್ಲ. ಹೀಗೆ ಬೇರೆ ಏನೇನೋ ವಿಷಯಗಳ ಕಡೆ ಮಾತು-ಕತೆ ಹರಿಯಲು ಪ್ರಾರಂಭಿಸಿದಾಗ ಗಂಗಾ ರಮೇಶನಿಗೆ 'ಹೋಗೋಣವೇ' ಎಂದು ಸೂಚಿಸಿದಳು. ಮಿತಾ ಸ್ಕೂಲ್‌ನಿಂದ ಬರುವ ಸಮಯವಾಗುತ್ತಿದೆ ಎಂಬ ಚಿಂತೆ ಆಕೆಯದು. ಹೇಗಿದ್ದರೂ ರಜೆ ಹಾಕಿ ಆಗಿದೆ. ಮಗುವಿಗೆ ಅಡಿಗೆಯನ್ನಾದರೂ ಮಾಡಬಹುದು ಎಂಬ ಯೋಚನೆ ಬಂದಾಕ್ಷಣ ಗಂಗಾ ಅವಸರಿಸತೊಡಗಿದಳು. ಮಿತಾ ಬಂದು ಕಾದುಕೊಂಡಿರುತ್ತಾಳೆ. ಆಕೆಗೆ ಊಟದ ವ್ಯವಸ್ಥೆ ಮಾಡುವವರು ಯಾರು? ಈ ಯೋಚನೆ ಬಂದಾಗ ರಮೇಶನನ್ನು ಇನ್ನಷ್ಟು ಅವಸರಿಸತೊಡಗಿದಳು. ಕೊನೆಗೆ ಗಂಗಾ-ರಮೇಶ್ ಎದ್ದು ಬರುವಾಗ

ಶಾಂತಾರಾಂ ಹೇಳಿದರು 'ಹೀಗೆ ಅತ್ಯಂತ ಅಂತರಂಗದ ಸಮಸ್ಯೆಗಳನ್ನು ಮೂರನೇ ವ್ಯಕ್ತಿಯ ಜೊತೆ ಕುಳಿತು ಮಾತನಾಡುವುದು ಎಷ್ಟು ಸರಿಯೋ ಗೊತ್ತಿಲ್ಲ, ರಮೇಶ ಇಷ್ಟಪಟ್ಟಿದ್ದಕ್ಕಾಗಿ ನಿಮ್ಮ ಜೊತೆ ಮಾತನಾಡುವುದಕ್ಕೆ ನಾನು ಒಪ್ಪಿಕೊಂಡೆ. ಆದರೆ ಯಾವುದೇ ಮೂರನೇ ವ್ಯಕ್ತಿಯ ಪ್ರವೇಶವೂ ಸಹ ನಿಮ್ಮಿಬ್ಬರ ಸಂಬಂಧವನ್ನು ಹಾಳು ಮಾಡಿಬಿಡುವ ಸಂಭವವೇ ಹೆಚ್ಚು. ಹಾಗಾಗಿ ನೀವು ನಿಮ್ಮಲ್ಲೇ ಚರ್ಚಿಸುವುದು, ಮಾತನಾಡುವುದು ಉತ್ತಮ. ಮೂರನೆಯ ವ್ಯಕ್ತಿಯ ಪ್ರವೇಶದಿಂದ ಇಡಿಯ ಸಂದರ್ಭ ಇನ್ನಾವುದೋ ಸ್ವರೂಪವನ್ನು ಪಡೆದುಕೊಳ್ಳುತ್ತದೆ'. ರಮೇಶನಿಗೆ ಇದು ಸರಿ ಎನಿಸಿರಬೇಕು. ಶಂಕರನ ಹತ್ತಿರ ತಾನೊಬ್ಬನೇ ಹೋಗಿ ಮಾತನಾಡಿದುದು ತಪ್ಪಾಯಿತೇನೋ? ಆತ ಗಂಗಾಳನ್ನು ಕಂಡದ್ದು ಹೇಗೋ? ಗಂಗಾನ ಹಿಂದಿನ ಇನ್ನಾವುದೋ ಬದುಕಿನೊಂದಿಗೆ ಬೆಸೆದುಕೊಂಡು ಇಡಿಯ ಸಂದರ್ಭದಲ್ಲಿ ಗಂಗಾಳನ್ನು ಆತ ಅರ್ಥೈಸುತ್ತಾನೆ. ಆದರೆ ತಾನು ಹಾಗಲ್ಲ. ತನಗೆ ದಕ್ಕಿದ ಗಂಗಾಳ ಮೂಲಕ ಮಾತ್ರ ಗಂಗಾಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ. ಮತ್ತೆ ಶಂಕರನ ಹತ್ತಿರ ಈ ಬಗ್ಗೆ ಮಾತನಾಡಬಾರದೆಂದೇ ರಮೇಶ ನಿರ್ಧರಿಸತೊಡಗಿದ್ದ. ಗಂಗಾ ಇಡಿಯ ಸಂದರ್ಭದಲ್ಲಿ ಕಠೋರವಾಗುತ್ತಾ ಹೋದುದೇ ಶಂಕರನ ಮಧ್ಯ ಪ್ರವೇಶದಿಂದಾಗಿ. ಕೊನೆಗೆ ಇದು ತನ್ನ ಹಾಗೂ ಗಂಗಾಳ ಬದುಕಿನ ಪ್ರಶ್ನೆಯಾಗಿ ಉಳಿಯಬೇಕೇ ವಿನಃ ಶಂಕರ ಅಥವ ಮಧುವಿನ ಬದುಕಾಗಿ ಅಲ್ಲ. ಹೀಗೆಂದು ಯೋಚಿಸುತ್ತಲೇ ರಮೇಶ ಮೌನವಾಗಿ ಬಿಟ್ಟಿದ್ದ. ಬಾಗಿಲ ತನಕ ಬೀಳ್ಕೊಡಲಿಕ್ಕೆ ಬಂದ ಶಾಂತಾರಾಂ ಕೊನೆಯದಾಗಿ ರಮೇಶನಿಗೆ ಹೇಳಿದರು, 'Okay Ramesh, She has done some mistake and you have pardoned it. You will never remember it. Suspicion is worse than anything else. You have just forgotten it, and never look back and again give space for suspicion. Forgetting and excusing are the only things that save our lives in crisis.

ಶಾಂತಾರಾಂ ಬರಿಯ ಶಾಂತಾರಾಂ ಅಲ್ಲ. ಅವರ ಪೂರ್ಣ ಹೆಸರು ಶಾಂತಾರಾಂ ಡಿಸೋಜ. ಕ್ರಿಶ್ಚಿಯಾನಿಟಿಯ ಮೂಲಭೂತ ತತ್ವಗಳನ್ನೇ ಅವರು ಎತ್ತಿ ಹೇಳುತ್ತಿದ್ದಾರೇನೋ ಎಂದು ಗಂಗಾಗೆ ಅನ್ನಿಸತೊಡಗಿತ್ತು. forgetting, excusing ಬಹುಶಃ ಆ ಧಾರ್ಮಿಕ ಹಿನ್ನೆಲೆಯಲ್ಲಿ ಬಂದ ಅಂಶಗಳೇ. ಧಾರ್ಮಿಕ ಅಂಶದ ಹಿನ್ನೆಲೆಯುಳ್ಳ ಈ ಹೇಳಿಕೆ ರಮೇಶನಿಗೆ ಇಷ್ಟವಾಯಿತೋ ಅಥವಾ ಅದರಿಂದ ಆತನಿಗೆ ಸಮಾಧಾನವಾಯಿತೋ ಗಂಗಾಳಿಗೆ ತಿಳಿಯದು. He just wanted to forget and pardon things. ಆತನ ಮನಸ್ಸಿನಲ್ಲಿ ಅವು ನಾಟಿ ಹೋಗಿದ್ದವು. ಸಂಶಯ ತಲೆಯನ್ನು ಕೊರೆದರೆ ಅದರಷ್ಟು ಪಾಪದ ಅಂಶ ಇನ್ನಾವುದೂ ಇಲ್ಲ ಎನಿಸಿರಬೇಕು. ಕ್ಷಣಗಳ ಹಿಂದೆ ಗಂಗಾಗೆ ತಾನು ಚರ್ಚಿನಲ್ಲಿ ಕನ್‌ಫೆಷನ್ ಮಾಡಿಕೊಳ್ಳುತ್ತಿದ್ದೇನೇನೋ ಎಂಬ ಭಾವ ಉಂಟಾಗಿತ್ತು. ಈಗ ಕೊನೆಯದಾಗಿ ಡೈರೆಕ್ಟರ್ ಹೇಳಿದ ಮಾತಿನಿಂದ ಗಂಗಾಗೆ ತಾನೊಬ್ಬ ಪಾಪಿ, ಈ ಪಾಪಿಯನ್ನು ಕ್ಷಮಿಸಿ, ಈ ಪಾಪವನ್ನು ಮರೆತುಬಿಡಿ ಎನ್ನುವಂತಹ ಪಾಪಪ್ರಜ್ಞೆಯನ್ನು ಆತ ಹುಟ್ಟಿಸಿಬಿಡುತ್ತಿದ್ದಾರೆ ಎಂದು ತೀವ್ರವಾಗಿ ಅನ್ನಿಸತೊಡಗಿತ್ತು. ಇಷ್ಟು ಸುಲಭವಾಗಿ ತನ್ನ ಪ್ರಶ್ನೆಗಳಿಗೆ ಉತ್ತರ ಸಿಕ್ಕುಬಿಡುತ್ತದೆಯೇ? ರಮೇಶನ ಅತ್ಯಂತ ಒಳಗಿನ ಧಾರ್ಮಿಕ ಮನಸ್ಸಿಗೆ ಈ ಒಂದು ಮಾತು ತೀವ್ರವಾಗಿ ನೆಟ್ಟಿರಬೇಕು. ಮರೆಯುವಿಕೆ/ಕ್ಷಮೆಯ ಇವೆರಡರ ಉದಾರತನದಲ್ಲಿ ಮತ್ತೆ ತಾನು-ಗಂಗಾ ಹಿಂದಿನ integrityಯನ್ನು ಪಡೆಯಬಹುದೇನೋ ಎಂದು ರಮೇಶನಿಗೆ ಅನ್ನಿಸಿದ್ದುಂಟು. ಎಲ್ಲಿಯೋ ಮನಸ್ಸಿನ ಮೂಲೆಯಲ್ಲೊಂದು ಆಸರೆಯ ಕೊಂಬೆ. ಇಡಿಯ ಜಟಿಲ ಸಂದರ್ಭಕ್ಕೆ ಇದೊಂದು ಉತ್ತರವಾಗಿ, ಅವನು ಇಷ್ಟಪಡುವ ಉತ್ತರವಾಗಿ ಅವನಿಗೆ

ಭಾಸವಾಗತೊಡಗಿತ್ತು. ದೇವರ ಗುಡಿಯಲ್ಲಿ ಒಂಟಿಯಾಗಿ ನೆಮ್ಮದಿ ಅರಸುವಂತಹ ಭಾವವೊಂದು ಅವನಲ್ಲಿ ಸುಳಿಯತೊಡಗಿತ್ತು. ಆದರೆ ಗಂಗಾಗೆ ಇದೆಲ್ಲ ವಿಚಿತ್ರ ಎನಿಸತೊಡಗಿತ್ತು. ಈ ಮರೆಯುವಿಕೆ/ಕ್ಷಮೆಗಳು ತನ್ನ ಜಟಿಲ ಸಮಸ್ಯೆಗಳಿಗೆ ಉತ್ತರವಾದಾವೇ? ಇದೊಂದು ವಿಡಂಬನೆಯಾಗಿ ಆಕೆಗೆ ಕಾಣಿಸತೊಡಗಿತ್ತು. ಮಧು ಬಿಟ್ಟು ಹೋದ ಸಮಸ್ಯೆಗಳು ಮಧುವಿನೊಂದಿಗೆ ಹೊರಟು ಹೋಗಿರಲಿಲ್ಲ. ಇನ್ನೇನನ್ನೋ ಶೋಧಿಸುವುದಕ್ಕೆ, ಇನ್ನೇನನ್ನೋ ಅರ್ಥೈಸುವುದಕ್ಕೆ, ಇನ್ನೇನನ್ನೋ ಗ್ರಹಿಸುವುದಕ್ಕೆ ಕಾರಣವಾಗಿದ್ದವು. ಮರಳಿ ಬರುವಾಗ ರಮೇಶ ಹರ್ಷಚಿತ್ತದಿಂದಿದ್ದ. ಮಾತನಾಡುತ್ತಲೇ ಇದ್ದ. ಗಂಗಾ ತೀರಾ ಅಂತರ್ಮುಖಿಯಾಗಿಬಿಟ್ಟಿದ್ದಳು. ಯಾಕೋ ಇದ್ದಕ್ಕಿದ್ದ ಹಾಗೆಯೇ ಆಕೆಯಲ್ಲಿ ಆಕೆಯ ಅಸ್ತಿತ್ವದ ಪ್ರಶ್ನೆಗಳು ಹುಟ್ಟತೊಡಗಿದ್ದವು. ಹಿಂದೆಂದೂ ಕಾಡಿರದಷ್ಟು ತೀವ್ರವಾಗಿ 'ನಾನು ಯಾರು?' ಎಂಬ ಪ್ರಶ್ನೆ ಆಕೆಯನ್ನು ಕಾಡತೊಡಗಿದಾಗ ಅದೇ ಆತಂಕದಲ್ಲಿ ಗಂಗಾ ರಮೇಶನೊಟ್ಟಿಗೆ ಹೆಜ್ಜೆ ಹಾಕುತ್ತಾ ಹೋಗುತ್ತಾಳೆ.

* * * *

There are many ways to read this sensitive and path breaking novel. At one level, 'Shiva-Ganga' is the story of a young woman, Ganga's struggle against the shackling forces of patriarchy and tradition in her native Honnekere; her long journey to a life of independence in the city: her quest for the truth about man-woman relations, for an understanding of the complex forces that have shaped her life and driven her mother to madness...

At another, more profound level, 'Shiva-Ganga' is both a product as well as a documentary of a revolutionary feminist consciousness. Through the lives of Ganga and her friends, the novel tells the truth about the lives of thousands of women; it illuminates with sensitivity and concern the issues facing the women's movement today; it throws up several critical questions, provoking us to think and more importantly to act towards building a more equitable and human world.

- *Neelanjana*

ಸ್ತ್ರೀಪರ ಚಳುವಳಿ, 'ಆಕೆ'ಯ ವೈಯಕ್ತಿಕ ಬದುಕು ಒಂದರೊಳಗೊಂದು ನಿರಂತರವಾಗಿ ಬೆಸೆದು ಹೋಗಿವೆ. ಅವು ಮೂರ್ತವೂ ಹೌದು, ಅಮೂರ್ತವೂ ಹೌದು ಎಂಬುದನ್ನು ಸೂಕ್ಷ್ಮಾತಿ ಸೂಕ್ಷ್ಮ ನೆಲೆಗಳಲ್ಲಿ ಶೋಧಿಸುವ ಪ್ರಯತ್ನ 'ಶಿವಗಂಗಾ'. ಕನ್ನಡದಲ್ಲಿ ಇದುವರೆಗೆ ಇಷ್ಟು ಮುಕ್ತವಾದ ಅಭಿವ್ಯಕ್ತಿ ಲೇಖಕಿಯರಿಂದ ಆದಂತಿಲ್ಲ. ಆ ಮಟ್ಟಿಗೆ ಉಸಿರುಗಟ್ಟಿವ ಸ್ಥಿತಿಗೆ ಇದೊಂದು ಬಿಡುಗಡೆ.

'ಶಿವಗಂಗಾ' ಎತ್ತುವ ಅನೇಕ ಪ್ರಶ್ನೆಗಳಿಗೆ ಮಡಿ-ಮುಜುಗರ ಬದಿಗಿಟ್ಟು, ಅಂತರಂಗವನ್ನು ಹೊಕ್ಕು ಶೋಧಿಸಿದಾಗ ಉತ್ತರಗಳು ಸಿಗಲೂ ಬಹುದು. ಚಂಪಾವತಿ ಅವರ ಈ ಪ್ರಯತ್ನ ಕೂಡಾ ಒಂದು ಅರ್ಥದಲ್ಲಿ ಹೋರಾಟವೇ. ಅವರಿಗೆ ನಮ್ಮ ಅಭಿನಂದನೆಗಳು.

- ಡಾ. ವಿಜಯಾ